START

START

START

START

START

MICRO FILMED
BY

KARNATAKA STATE
ARCHIVES

1992

MICRO FILMED
BY

KARNATAKA STATE
ARCHIVES

1992

ARS 38 App 90-91

"ಜಯಂತಿ" ಮಾಸ ಪತ್ರಿಕೆ
ಆಗಸ್ಟ್ 1945 ಪುಟ 61
ರಿಂದ ಮುಂದುವರಿಸಲಾಗಿದೆ.

ARS 38 App 90-91

"ಜಯಂತಿ" ಮಾಸ ಪತ್ರಿಕೆ
ಆಗಸ್ಟ್ 1945 ಪುಟ 61
ರಿಂದ ಮುಂದುವರಿಸಲಾಗಿದೆ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!
- ಮೊದಲನೆಯ ಸೌಲ್ಭ್ಯವಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೆ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಪಕ್ಕಿನ ಹಣ (Claim) ವನ್ನು ಪಟ್ಟಿಸಿರುವುದರಿಂದ, ಎಲ್ಲರ ನಂಬಿಗೆಗೂ ಪಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಬಯಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಂ. ಗೋವರ್ಧನರಾವ, ಮ್ಯಾನೇಜರ್

ತಲೆಗೂದಲು ಚೆನ್ನಾಗಿದ್ದರೆ ಜೆಲುವಿಗೊಂದು ಬೆಲೆ!

ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಟಾಗಿ ಇರಬೇಕು!

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯ ಕಣ್ಣು ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಜೆಲುವಿಕೆ ಇದ್ದರೂ ಅದು ವ್ಯರ್ಥವೆನಿಸುವುದು.

ಅದಕ್ಕಾಗಿಯೇ

ಮುಕುಲ

ದಿನದಿನವೂ ಉಪಯೋಗಿಸಿರಿ.

ಆಯುರ್ವೇದದ ತಜ್ಞರಿಂದ ರುಷ್ಟ ಕೊಬ್ಬರಿ ಎಣ್ಣೆಯಲ್ಲಿ ತಯಾರಿಸಲಾದ "ಮುಕುಲ" ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಜೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಹುಬ್ಬಳ್ಳಿ ಶಾಖೆ : ಸ್ಟೇಶನ್ ರೋಡು, ಹುಬ್ಬಳ್ಳಿ.

ಚಂದಾಂತಿ

ಸಂಪಾದಕ:
ಪಟಗೇರಿ ಕೃಷ್ಣಕರ್ಮಾ

ಸಂಪುಟ ೮] [ಸಂಚಿಕೆ ೩

—: ಈ ಸಂಚಿಕೆಯಲ್ಲಿ :—

ಭಾರತೀಯನ ದೃಷ್ಟಿ (ಕವನ) ೬೧
ಶ್ರೀ. ಕೆ. ಜಿನ್ನಬಸಪ್ಪ ಬಿ. ಎ. ಬೆಳಗಾಂವಿ
ಪ್ರಾರ್ಥನೆ (ಕವನ) ೬೪
'ಕೌಸಲ್ಯಾ ತನಯ' ಶಿವಮೊಗ್ಗ
ನೀನೇ ಮಂಗಳ (ಕವನ) ೬೪
ಶ್ರೀ. ಡಿ. ಎಸ್. ಕರ್ಕಿ ಎಂ. ಎ. ಬೆಳಗಾಂವಿ
ಮೂಡಲಾರದ ಕಣ್ಣು (ಏಕಾಂಕನಾಟಕ) ೬೫
ಪ್ರೊ. ರಂ. ಶ್ರೀ. ಮುಗಳಿ ಎಂ. ಎ., ಬಿ. ಟಿ. ಸಾಂಗ್ಲಿ
ಶಿವು, ಓ ಎನ್ನ ಗುರುದೇವ! (ಕವನಗಳು) ೭೧
'ರಾಘವ' 'ಅತ್ರೇಯ'
ಹೂವ್ವುವಲಯಗಳು (ಲಘುಪ್ರಬಂಧ) ೭೨
ಶ್ರೀ. ಸಚ್ಚಿದಾನಂದ ಶಿರೋಡಕರ. ಪುಣೆ
ಪ್ರಪಂಚದ ಪೇಟಿಗಳು ಯಾರ ಪದರಲ್ಲಿ? (ಆರ್ಥಿಕ ವಿಚಾರ) ೭೫
ಶ್ರೀ ವಾಳ್ವೇಕರ ಗುರುರಾಯರು ಬಿ. ಎ., ಎಲ್‌ಎಲ್. ಬಿ. ಮುಂಬಯಿ
ಅಳಿಯಾರು? (ಸಣ್ಣ ಕತೆ) ೮೧
ಶ್ರೀ. ಎಂ. ಸದಸಿಂತಮೂರ್ತಿ. ಸುಮುಕೂರು
ಚಿತ್ರ: ಸಂಪಾದಕೀಯ (೬೨), ಮಂಗನ ಮಧ್ಯಸ್ಥಿಕೆ (೬೩),
ವಿಜ್ಞಾನದ ವಿಚಿತ್ರ ಪ್ರಪಂಚ (೭೪), ಸಾಹಿತ್ಯ ವಿಹಾರ (೭೬),
ಸಾದರ ಸ್ವೀಕಾರ (ಕವರ್ ೩) ಪುಸ್ತಕ ವಿಮರ್ಶೆ (ಕವರ್ ೩)

ವರ್ಷಕ್ಕೆ ೧೫ಳಿಶಿ ಬೆಲೆ: ಆರಾಣೆ



ಸಾದರ ಸ್ವೀಕಾರ

೨೨. **ಶ್ರೀ ರುಕ್ಮಾಂಗದ ಮಹಾರಾಜರವರ ಚರಿತ್ರವು:** ಬರೆದವರು ಶ್ರೀಮಾನ್ ವ್ಯಂಕಟೇರ ಅಮೃತ ಉಪ್ಪಲದಿನ್ನಿ ಪೇನಶನರ್ ಮಾಸ್ಟರ್, ವಿಜಾಪುರ. ಲೇಖಕರೇ ಪ್ರಕಾಶಕರು. ಕ್ರೌ. ಆ. ೫೮ ಪುಟಗಳು; ಬೆಲೆ ೦-೬-೦.

ನಿಜಾಪುರದ ಆದಿಲಶಾಹಿಯ ಕೊನೆಯ ಕಾಲಖಂಡದಲ್ಲಿ ಬಾಳಿ ಬೆಳಗಿದ ರುಕ್ಮಿಣಿಪಂಡಿತರೆಂಬ ಮಹಾತ್ಮರ ಜೀವನ ಪರಿಚಯವಿದು. ಲೌಕಿಕ-ಪರಮಾರ್ಥಗಳೆಂಡರಲ್ಲಿಯೂ ಪಂಡಿತರದು ಮೇಲುಗೈ. ಸುಪ್ರಸಿದ್ಧ ವೈದ್ಯರು. ಸಂಸ್ಕೃತದಲ್ಲಿ ಗ್ರಂಥಗಳನ್ನೂ ಸಂಸ್ಕೃತ-ಕನ್ನಡದಲ್ಲಿ ಹಾಡು-ಪದ್ಯಗಳನ್ನೂ ರಚಿಸಿದ್ದಾರೆ. ಪ್ರಸ್ತುತ ಚರಿತ್ರ ಭಾವಿಕತನದಿಂದ ಬರೆದುದಾದುದರಿಂದ, ಹಲವು ಪವಾಡ ಕಥೆಗಳಿಂದ ಕೂಡಿಕೊಂಡಿದೆ. ಇಂದಿನ ವೈಜ್ಞಾನಿಕ ಯುಗದಲ್ಲಿ, ಮನುಷ್ಯರು ಮನುಷ್ಯರಾಗಿಯೆ ಬಾಳಿ ದೊಡ್ಡವರೆನಿಸಿಕೊಂಡುದನ್ನು ತಿಳುಸುವಂತಹ ಜೀವನಚರಿತ್ರಗಳ ಆವಶ್ಯಕತೆಯಿದೆ.

೨೩. **ಮುಂಬಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ೪೩ನೆಯ ವರ್ಷದ ವರದಿ.** ಡೆ. ಆ. ೩೬ ಪುಟಗಳು. ಆನರರಿ ಸೆಕ್ರೆಟರಿಗಳವರಿಂದ ಬಂದಿದೆ.

ಸಮಾಜ ಸಂಘಟನೆಗಾಗಿ ನಡೆದಿರುವ ಮುಂಬಯಿಯ ಕನ್ನಡಿಗರ ಸಂಸ್ಥೆಗಳಲ್ಲಿ ಮಾದರಿಯ ಹಿರಿಯ ಸಂಸ್ಥೆಯಿದು. ಒಂದೊಂದು ಜಾತಿಯವರೂ ಕನ್ನಡವನ್ನು ಒಂದುಗೂಡಿಸುವ ಗುರಿಯನ್ನಿರಿಸಿಕೊಂಡು, ತಂತಮ್ಮ ಸಂಘಟನೆಯನ್ನು— ಮೊಗವೀರರಂತೆ— ಮಾಡಿಕೊಳ್ಳುತ್ತ ಹೋದರೆ, ಕನ್ನಡಿಗರ ನಿಳಿಗೆಗಾಗಿ ಬಹಳ ದಾರಿಕಾಯಬೇಕಾಗಿಲ್ಲ.

೨೪. **ಕರ್ನಾಟಕ ಟೇಲರ್ಸ್ ಅಸೋಸಿಯೇಶನ್ ಧಾರವಾಡ** ಈ ಸಂಸ್ಥೆಯ ವಾರ್ಷಿಕವರದಿ ಕಾರ್ಯದರ್ಶಿಗಳು ಶ್ರೀಯುತರಾದ ಸಿ. ಡಿ. ಹಳಪೇಟಿ ಮತ್ತು ಕೆ ಬಿ. ನರೇಗಲ್ಲ ಇವರು. ಕ್ರೌ. ಆ ೮ ಪುಟಗಳು.

ಯುದ್ಧದ ಕಾಲ ನಮ್ಮಲ್ಲಿ ಹೊಸಜೀವನವನ್ನು ಮಾಡಿದ್ದರೆ, ಜನರಿಗೆ ಸಂಸ್ಥಾಜೀವನದ ಅನಿವಾರ್ಯತೆಯನ್ನು ತೋರಿಸಿಕೊಟ್ಟಿದ್ದು. ವ್ಯಕ್ತಿಯ ಕೂಗಿಗೆ ಕೇಳುವ ಕಿವಿಯೆ ಸಿಕ್ಕದಂತಾಗಲು, ಜನಸಾಮಾನ್ಯರು ಗುಂಪುಗೂಡಿ ಕಿರಿಚಿಕೊಳ್ಳಬೇಕಾಯಿತು. ಆದಕ್ಕಾಗಿಯೆ ಅಲ್ಲಲ್ಲಿ ಬೇರೆ ಬೇರೆ ವ್ಯಾಪಾರೋದ್ಯಮಗಾರರ ಸಂಸ್ಥೆಗಳು ನಾಡಿನಲ್ಲಿ ತಲೆಯೆತ್ತಿದುವು. ಪ್ರಸ್ತುತ ಸಂಸ್ಥೆಯೂ ಹೀಗೆಯೆ ಹೊರಟು ಮುಂದೆ ಬಂದುದು. ಒಂದು ವರ್ಷದಲ್ಲಿ ಹೊಲಿಗೆಯ ವ್ಯವಸಾಯಗಾರರ ಕೊರತೆಯನ್ನು ಕಳೆಯಲು ಎಷ್ಟೋ ಸಹಾಯಕ ಪಾಠಗಳನ್ನು ಹೊರಡಿಸಿದೆಯಲ್ಲದೆ, ಸಮಾಜದ ಕಷ್ಟನಿವಾರಣೆಯ ಕಾರ್ಯದಲ್ಲೂ ತನ್ನ 'ಅಳಿಲಭಕ್ತಿ'ಯ ಸೇವೆ ಸಲ್ಲಿಸಿದೆ. ಈ ಸಂಸ್ಥೆ ಬಹುಕಾಲ ಬಾಳಿ ನಾಡಕಟ್ಟಡಕ್ಕೆ ನೆರವಾಗಲಿ!

೨೫. **ಹುಣ್ಣಿಮೆಯ ರಾತ್ರಿ** (ಚಿಕ್ಕ ಕಾದಂಬರಿ) ಬರೆದವರು ಶ್ರೀಮಾನ್ 'ಧನ್ವಂತ' ಬೆಂಗಳೂರು ಅವರು. ಪ್ರಕಾಶಕರು ಮೇ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕನೇಟಿ, ಬೆಂಗಳೂರುನಗರ. ಕ್ರೌ. ೮ ೬೪ ಪುಟಗಳು. ಬೆಲೆ ೦-೧೨-೦.

ಮನೋಹರ ಗ್ರಂಥಮಾಲೆಯವರ ಪ್ರಶಂಸನೀಯ ಉಪಕ್ರಮ.

ಸಾಹಿತ್ಯನಿರ್ಮಾಣದ ವಿವಿಧ ವಿಭಾಗದ ಸ್ಪರ್ಧೆಗಳು.

೨೦೦೦ ರೂ. ಗಳಿಗೆ ಮಿಕ್ಕಿ ಬಹುಮಾನಗಳನ್ನಿರಿಸಿರುವರಲ್ಲದೆ
'ಸಾಹಿತ್ಯಾಲಂಕಾರ' ಎಂಬ ಸುವರ್ಣಪದಕದ
ವಿಶೇಷ ಮಾನವನ್ನೂ ಸಲ್ಲಿಸಲಿರುವರು.

ಏರ್ಪಡಿಸಿದ ಸ್ಪರ್ಧೆಗಳು

೧. ಕಾದಂಬರೀ ಲೇಖನ: ಎರಡು ಬಹುಮಾನಗಳು ೪೦೦,೨೦೦ ರೂಪಾಯಿಗಳವು. ೨. ನಾಟಕಲೇಖನ: ಎರಡು ಬಹುಮಾನಗಳು ೪೦೦, ೨೦೦ ರೂಪಾಯಿಗಳವು; ೩. ಸಣ್ಣ ಕತೆಯ ಲೇಖನ: ಮೂರು ಬಹುಮಾನಗಳು ೧೦೦,೫೦, ೩೫ ರೂ. ಗಳವು. ೪. ಏಕಾಂಕ ನಾಟಕ ಲೇಖನ: ಮೂರು ಬಹುಮಾನಗಳು ೧೦೦, ೫೦, ೩೫ ರೂ. ಗಳವು. ೫. ವ್ಯಕ್ತಿಚಿತ್ರ ಲೇಖನ: ಮೂವತ್ತೈದು ಬಹುಮಾನಗಳು, ಪ್ರತಿಯೊಂದು ೧೫ ರೂ. ಗಳದು. ೬. ಪ್ರಬಂಧ ಲೇಖನ: ಎರಡು ಬಹುಮಾನಗಳು ೭೦, ೫೦ ರೂ. ಗಳವು. ೭. ಕಾವ್ಯಲೇಖನ. ಒಂದು ಬಹುಮಾನ ೧೦೦ ರೂ. ಗಳದು.

ಎಲ್ಲ ಸ್ಪರ್ಧೆಗಳಲ್ಲಿಯೂ ಮೇಲ್ತರಗತಿಯಲ್ಲಿ ಬಂದು, ಒಟ್ಟಿನಲ್ಲಿ ನೊದಲನೆಯವರಾದವರಿಗೆ ಬಿಯಾ ಬಹುಮಾನಗಳಲ್ಲದೆ "ಸಾಹಿತ್ಯಾಲಂಕಾರ" ಬಿರುದಾಂಕಿತ ಸುವರ್ಣ ಪದಕವನ್ನು ಕೊಟ್ಟು ಗೌರವಿಸಲಾಗುವುದು. ತಾ. ೩೧-೩-೪೬ನೆಯ ದಿನವನ್ನು ಸ್ಪರ್ಧೆಯ ಅವಧಿಯ ಕೊನೆಯ ದಿನವಾಗಿದೆ. ವಿಶೇಷ ವಿವರಣೆ ಬೇಕಾದವರು 'ಮನೋಹರ ಗ್ರಂಥಮಾಲಾ, ಧಾರವಾಡ' ಇವರೊಂದಿಗೆ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು

ಕನ್ನಡನಾಡಿನ ಎಲ್ಲ ಹಿರಿಯ ಕಿರಿಯ ಸಾಹಿತ್ಯಿಕರೂ ಈ ಸ್ಪರ್ಧೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿಸಬೇಕಲ್ಲದೆ, ಸ್ಪರ್ಧೆಯ ನೆಪದಿಂದ ಸಾಹಿತ್ಯನಿರ್ಮಿತಿಯ ಕಾರ್ಯಮಾಡಿ, ಕನ್ನಡ ಸಾಹಿತ್ಯದ ವೈಭವವನ್ನು ಹೆಚ್ಚಿಸಬೇಕು. ಸಂ. ಜ.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣೆ ಅಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೪ | ೧೦ನೆಯ ಆಗಸ್ಟ್ ೧೯೪೫ | ಸಂಚಿಕೆ ೩

ಭಾರತೀಯನ ದೃಷ್ಟಿ!

ಶ್ರೀ. ಕೆ. ಚೆನ್ನಬಸಪ್ಪ, ಬಿ. ಎ ಬಳಗಾಂವಿ

೧

ವಿಜಯ ವಿಜಯ ವಿಜಯವಂತೆ,
ನಾಜಿ ಪತನವಾಯಿತಂತೆ
ದಾಸ್ಯದಿಂದ ಮುಕ್ತಿಯಂತೆ
ಜಗದ ನೆರೆಯು ಹರಿಯಿತಂತೆ
ದಾಸ್ಯವೆನಲು ಮೃತ್ಯುವಂತೆ
ಮಿಥ್ಯೆಯಳಿದು, ಸತ್ಯವುಳಿದು
ಜಗಕೆ ಶಾಂತಿ ದೊರೆಯಿತಂತೆ
ಎಂಥ ವಿಜಯವೊ—
ಇದು—ಎಂಥ ವಿಜಯವ್ಹೊ!

೨

ಜಗದ ಕುತ್ತ ನಿರಿದು,ಕೊಂದು
ಜಗಕೆ ಮುಕ್ತಿಯಿತ್ತೆವೆಂದು—
ನಾಲ್ಕು ಹತ್ತು ಕೋಟಿ ಜನರ
ದೊಡ್ಡದೊಂದು ನೆರೆಯೊಳಿಟ್ಟು—,
ನಾವು ಜಗದ ಮುಕ್ತಿಗಾಗಿ
ಕಾದು ಗೆದ್ದ ಸತ್ಯಸಂಧ-
ರೆಂದು ಲಜ್ಜೆ ಬಿಟ್ಟು ಕುಣಿವು-
ದೇನು ವಿಜಯವೊ?—
ಇದು—ಎಂಥ ವಿಜಯವ್ಹೊ!

೩

ನೇತ್ಯೆಯೊಬ್ಬ ಒಂದು ವಿಟನ
ಇದಿರ ಹೆಣ್ಣಿಗೂಲಿಯಂತೆ
ಹಿಡಿದು ತನ್ನ ಮನೆಯೊಳಿರಿಸಿ,
ಅವನೆ ತನ್ನ ಸ್ವಾಮಿಯೆನಲು
'ತಾನೆ ಸೀತೆ! ಸಾಧ್ವಿ!' ಎಂದು
'ಪಾತಿವ್ರತ್ಯ ಮೂರ್ತಿ!' ಎಂದು
ಕೂಗಿಕೊಳುವುದೆಂಥ ಸತ್ಯ?
ಅಂಥ ವಿಜಯವ್ಹೊ—
ಇದು-ಅಂಥ ವಿಜಯವ್ಹೊ!

೪

ನಾಜಿಪ್ರೇತ ದಹನವಿಲ್ಲ,
ಅಂತ್ಯಕ್ರಿಯೆಯು ಮುಗಿಯಲಿಲ್ಲ!
ನಾಜಿ ಉತ್ಕ ದೇಹ ತಳೆದು
ಜಗದಿ ಜನಿಸಿ ನಿಂತೆ ಇಹುದು!
ಬೇರೆ ನಾಮ-ರೂಪತಳೆದು!
ವಿಜಯ ವಿಜಯ ವಿಜಯವೆಂದು
ಕಿರುಚಿ ಕೂಗಿ ನೆಗೆವುದೊಂದು
ಎಂಥ ವಿಜಯವ್ಹೊ—
ಇದು—ಎಂಥ ವಿಜಯವ್ಹೊ!

೫

ವಿಜಯ ವಿಜಯ ವಿಜಯವೆಂದು
ಗಂಟಲರಿದು ಕೂಗಿಕೊಳಲು
ಮಿಥ್ಯೆಯಳಿದು ಸತ್ಯವುಳಿವ
ಗುರುತು ಎಂದು ತಿಳಿಯಲರಿದು!
ಒಬ್ಬ ಕಳ್ಳನಳಿದು ನುತ್ತೆ
ಒಬ್ಬ ಕಳ್ಳ ಜನಿಸಿದಂತೆ!
ಇವಕೆ ವಿಜಯ ವಿಜಯವೆನಲು
ಎಂಥ ವಿಜಯವ್ಹೊ—
ಇದು—ಎಂಥ ವಿಜಯವ್ಹೊ!

೬

ಇಂಥ ಆಟ ನಡೆಯದಿನ್ನು
ಸಾಕು ಮೋಸದಾಟವಿನ್ನು!
ನಿಮ್ಮ ನುದಿಗೆ ಮಾರುಹೋಗಿ
ಭಕ್ತಿಯಿಂದ ತಲೆಯ ಬಾಗಿ
ಮಣಿವ ದಾಸರಲ್ಲ ನಾವು!
ಇಂದೂ ನಾಳೆ ನಮ್ಮ ಕಾವು
ತಗುಲಿ; ನಿಮ್ಮ ಕೊಬ್ಬು ಕರಗಿ
ಜಗಕೆ ಶಾಂತಿ ದೊರೆವುದಂದೆ!
ವಿಜಯ ವಿಜಯವನ್ನು,—
ಮುಕ್ತಿ ಮುಕ್ತಿಯು!



ಕನ್ನಡನಾಡಿನ ಹಳ್ಳಿಗಳು

ಕನ್ನಡನಾಡು ಹೆಚ್ಚಾಗಿ ಹಳ್ಳಿಗಳಿಂದ ತುಂಬಿದ ದೇಶ. ಇಲ್ಲಿ ಪಟ್ಟಣಗಳಿಲ್ಲವೆಂದಿಲ್ಲ. ಇವೆಯಾದರೂ, ಬಹುಸಂಖ್ಯಾಕ ಪಟ್ಟಣಗಳ ಜನ-ಸಾಮಾನ್ಯರು ಹಳ್ಳಿಗರನ್ನಿಸಿಕೊಳ್ಳಲಿಕ್ಕೇ ತಕ್ಕವರಾಗಿರುವರು. ಸಾಮಾನ್ಯವಾಗಿ ಪಟ್ಟಣಗಳು ಎರಡು ರೀತಿಯಿಂದ ಬಳೆದುಬಂದಿರುವುದು. ಒಂದು ರಾಜಕೀಯ, ಎರಡನೆಯದು ವ್ಯಾಪಾರ-ಉದ್ಯಮ. ನಮ್ಮಲ್ಲಿಯ ಬಹಳ ಪಟ್ಟಣಗಳು ರಾಜಕೀಯ ಕಾರಣಕ್ಕಾಗಿಯೆ ಬಳೆದುಬಂದಿರುವುದು. ಅಲ್ಲಿಂದ ಸರಕಾರೀ ಕೋಟು-ಕಚೇರಿಗಳನ್ನು ಕಳೆದುಬಿಟ್ಟರೆ, ಉಳಿಯುವುದು ಬರಿ ಹಳ್ಳಿ. ವ್ಯಾಪಾರೋದ್ಯಮಗಳಿಗಾಗಿ ಬಳೆದ ನಗರಗಳು ನಮ್ಮಲ್ಲಿ ಒಂದು ಕೈಬೆರಳಿನಿಂದ ಎಣಿಸುವಷ್ಟು ಕೂಡ ಇಲ್ಲ. ಹಳ್ಳಿಗರ ಆಸಿಕ್ತ ವಸ್ತುಗಳನ್ನು ಬೇರೆ ಕಡೆಗೆ ಸಾಗಿಸಿ, ಅವರಿಗೆ ಪರದೇಶ ಪರಪ್ರಾಂತ್ಯಗಳ ಸಿದ್ಧವಸ್ತುಗಳನ್ನು ಪೂರಯಿಸಿ ಕೊಡುವ ದಳ್ಳಾಳಿಗಳಿಂದ ಕೂಡಿದ ಪೇಟೆಯೂರುಗಳು ಎಂದೂ ಪಟ್ಟಣಗಳೆನಿಸವು. ಏಕೆಂದರೆ ಅಲ್ಲಿ ಕೂಡ ಸಂಸ್ಕೃತಿಯ ದೃಷ್ಟಿಯಿಂದ ನೋಡಿದರೆ, ಹಳ್ಳಿಗತನವೇ ನೆಲೆ ನಿಂತಿರುವುದು. ಮುಖ್ಯ ರಾಜಧಾನಿಯ ನಗರಗಳೂ ಉದ್ಯಮ ಕೇಂದ್ರಗಳೂ ಸಮೃದ್ಧವಾದ ಪಟ್ಟಣಗಳು. ಪಟ್ಟಣದ ಸಂಸ್ಕೃತಿ ನೆಲಸಿರುವುದು ಇಂತಹ ನಗರಸತಿಗಳಲ್ಲಿ ಮಾತ್ರ. ಆದರೆ ಇಂತಹ ಜನವಸತಿಗಳು ನಮ್ಮಲ್ಲಿ ಎಷ್ಟು ಎಲ್ಲಿವೆ?

ಬ್ರಿಟಿಷ್ ಪೂರ್ವದ ನಮ್ಮ ಹಳ್ಳಿಗಳ ರೀತಿಯೇ ಬೇರೆಯಿತ್ತು. ಇಂದಿನ ಹಳ್ಳಿಗಳ ರೀತಿಯೆ ಬೇರೆಯಾಗಿದೆ. ಅಂದಿನ ಹಳ್ಳಿಗರು ಒಕ್ಕಲುತನ, ಮನೆಯ ಕೈಗಾರಿಕೆ ಎರಡನ್ನೂ ಸಮ್ಮಿಳಿತವಾಗಿ ನಡೆಯಿಸಿಕೊಂಡು ಸುಖದಿಂದ ಉಪಜೀವನ ಸಾಗಿಸುತ್ತಿದ್ದರು. ಇಂದಿನ ಹಳ್ಳಿಗರು ಒಕ್ಕಲುತನವೊಂದನ್ನೇ ಅವಲಂಬಿಸಿಕೊಂಡಿದ್ದು, ಅರೆಹೊಟ್ಟೆ ಬರಿಮೈಗಳಿಂದ ಬದುಕುತ್ತಿರುವರು. ಹಿಂದಿನ ನಗಂಗಳು ರಾಜಕೀಯ ರೀತಿಯಿಂದಲೆ ಬಳೆದುಬಂದಿರುವುದರಿಂದ, ಅಲ್ಲಿ ಇರುವವರೆಲ್ಲ ಸಂಬಳದಾಳುಗಳಾಗಿದ್ದರು. ಅವರಿಗೆ ಬೇಕಾಗುವ ಎಲ್ಲ ಪದಾರ್ಥಗಳ ಪೂರೈಕೆಯೂ ಹಳ್ಳಿಗಳಿಂದಲೆ ಆಗಬೇಕಾಗಿದ್ದುದರಿಂದ, ಹಳ್ಳಿಯ ಒಕ್ಕಲಿಗರ ಮತ್ತು ಉದ್ಯಮಗಾರರ ಆರ್ಥಿಕ ಪರಿಸ್ಥಿತಿ ತುಂಬ ಚೆನ್ನಾಗಿರುತ್ತಿದ್ದಿತು. ಆದರೆ ಇಂದಿನ ನಗರಗಳಿಗೆ ಹಳ್ಳಿಗರಿಂದ ಆಹಾರ ಪದಾರ್ಥ ಮಾತ್ರ ಬೇಕಾಗಿದೆ; ಉದ್ಯಮಗಾರರ ಶ್ರಮದ ಆವಶ್ಯಕತೆ ಸ್ವಲ್ಪವೂ ಇಲ್ಲ. ಅವರ ಪರಿಶ್ರಮದಿಂದ ಸಿದ್ಧವಾಗಿ ಸಿಕ್ಕುತ್ತಿದ್ದ ಜೀವನೋಪಯುಕ್ತ ಪದಾರ್ಥಗಳೂ ವಿಲಾಸದ ವಸ್ತುಗಳೂ ಅವರಿಗೆ ಈಗ ಪರದೇಶಗಳಿಂದ ಸಿಕ್ಕುತ್ತಲಿವೆ. ಇದರಿಂದ ಕೈಗಳಲ್ಲಿ ಉಂಟಾಗಿರುವ ದೊಡ್ಡದೊಂದು ತೊಂದರೆಯೆಂದರೆ, ಪರಂಪರೆಯಿಂದ ಬಂದ ಉದ್ಯಮಗಾರಿಕೆಯಿಂದ ಉಪಜೀವನಿಸುತ್ತ ಬಂದವರೆಲ್ಲರೂ ಕೆಲಸಗೇಡಿಗಳಾದುದು. ಹಳ್ಳಿಗರ ಮುಖ್ಯ ಉದ್ಯಮ ನೂಲುಸ್ರದು, ನೇಯುವುದು ಇದಕ್ಕೆ ಸಹಕಾರಿಗಳಾಗಿ ಕಂಬಾರ, ಬಡಿಗ, ಪಿಂಜಾರ, ಚಮ್ಮಾರ ಇವರೆಲ್ಲ ಬೇಕಾಗುತ್ತಿದ್ದರು. ನೂಲು-ಬಟ್ಟೆಗಳನ್ನು ಪರಪೇಟೆಗಳಿಗೆ ಸಾಗಿಸುವ ಚಿಕ್ಕಪುಟ್ಟ ವ್ಯಾಪಾರಿಗಳೂ ಅಲ್ಲಿ ಇರುತ್ತಿದ್ದರು. ಇಂದು ಅವರೆಲ್ಲರೂ ನಿರುದ್ಯೋಗಿಗಳು. ಆದುದರಿಂದ ಅವರಲ್ಲಿಯ ಹಲವರು ಹಳ್ಳಿಯ ಇನ್ನೊಂದು ಪ್ರಮುಖ ಉದ್ಯೋಗವಾದ ಒಕ್ಕಲುತನದ ಕಡೆಗೇ ತಿರುಗಿಕೊಂಡರು. ಒಕ್ಕಲಿಗರ ಸಂಖ್ಯೆ ಹೆಚ್ಚಾಯಿತೇನೋ ಸರಿ, ಆದರೆ ಹಳ್ಳಿಯಲ್ಲಿ ಹೊಲಗಳ ಸಂಖ್ಯೆ ಹೇಗೆ ಹೆಚ್ಚಾಗಬೇಕು? ಇನ್ನೊಂದು ವಿಶೇಷ ಸಂಗತಿಯೆಂದರೆ, ನಮ್ಮ ಹಳ್ಳಿಗಳಲ್ಲಿ ಸ್ವಂತದ ಹೊಲಗಳಿದ್ದ ಒಕ್ಕಲಿಗರ ಸಂಖ್ಯೆ ತೀರ ಕಡಿಮೆ. ಇದ್ದವರ ಸ್ವಲ್ಪ ಹೊಲಗಳೂ ಪಾಲುಗಾರಿಕೆಯ ಮೂಲಕ ಒಡೆದೊಡೆದು ತುಂಡುಗಳಾಗಿವೆ. ಅದುದರಿಂದ ಬೇರೆಯವರ ಹೊಲಗಳನ್ನು ನಗರದಿಯೇ ಬಹುಜನರು ಬಯಸಬೇಕು. ಒಕ್ಕಲಿಗರ ಸಂಖ್ಯೆ ಹೆಚ್ಚಾದಂತೆ ಗೇಣಿಯಿಂದ ಹೊಲ ಹಿಡಿಯುವವರಲ್ಲಿ ತೀಕ್ಷ್ಣ ಪೈಪೋಟಿಕ್ಕೆ ಮೊದಲಾಯಿತು. ಕನ್ನಡನಾಡಿನ ಬಹುಭಾಗದಲ್ಲಿ ಮಳೆಯು ಅನಿಯಮಿತತನವೇ ಬಹಳವಿರುವುದರಿಂದ, ಬೆಳೆಗೇದಾನುವುದು ಇದ್ದೇ ಇದೆ. ಆದರಲ್ಲಿ ಪರದೇಶದ ಪೇಟೆಗಳ ಪೈಪೋಟಿ ನಮ್ಮಲ್ಲಿಯ ಪೇಟೆಗಳ ದರ ಅವಲಂಬಿಸಿರುವುದರಿಂದ, ಬೆಳೆದ ಬೆಳೆಗೂ ಸರಿಯಾದ ಬೆಲೆ ಬಾರದೆ ಹೋಯಿತು. ಹೀಗಾಗಿ ಒಕ್ಕಲಿಗರು ಸಾಲಗಾರರಾಗಿ ಹೋದರು. ಪರಸ್ಪರರಲ್ಲಿಯ ಪೈಪೋಟಿ, ಸಾಲಗಾರಿಕೆಗಳಿಂದ ಇಂದು ಹಳ್ಳಿಗರು ನಿರ್ವಿಣ್ಣರಾಗಿದ್ದಾರೆ. ದಿಕ್ಕುಗೆಟ್ಟು ಹೋಗಿದ್ದಾರೆ.

ಎಲ್ಲರೂ ಸುಖ-ಶಾಂತಿಯಿಂದಿರುವಾಗ ಸ್ಪರ್ಧೆಗೆ ಮತ್ಸರಕ್ಕೆ — ಆಸ್ಪದವೇ ಇರುವುದಿಲ್ಲ. ಇರುವ ಸ್ವಲ್ಪ ಉಪಜೀವನದ ವಸ್ತುಗಳಿಗಾಗಿ ಎಲ್ಲರೂ ಪ್ರಯತ್ನಪಡತೊಡಗಿದರೆ ಮನಸ್ತಾಪಗಳುಂಟಾಗುವುದು ಸಹಜ. ತುಣುಕುರೊಟ್ಟಿಗಾಗಿ ಕಚ್ಚಾಡುವ ಹಿಂದುನಾಯಿಗಳ ಪಾಡು ಮನುಷ್ಯರದೂ ಆಗುವುದು ಸ್ವಾಭಾವಿಕ. ಆದುದರಿಂದಲೆ ಹಳ್ಳಿಗಳಲ್ಲಿ ಕಲಸಗಳು ಬಳೆಯತೊಡಗಿದುವು. ದಾಯಾದ ಕಲಸ, ಜಾತಿಕಲಸ, ಜಾತಿ-ಜಾತಿಗಳಲ್ಲಿಯ ಕಲಸ ಹೆಚ್ಚತೊಡಗಿದುವು. ನಿರುದ್ಯೋಗಿಗಳಿಗೆ ಬಂದು ಉದ್ಯೋಗ ಹೊಸತಾಗಿ ದೊರೆತಂತಾಯಿತು: ಕಲಸಗಳನ್ನು ಕೋರ್ಟಿಗೆ ಬಳೆದೊಯ್ದು ಸಕೀಲ ದಲಾಲಿ ಮಾಡುವುದು ಅಂಟಿಕ್ಕೆ ಬಿದ್ದ ಕ್ಷಿಪಣಿಗಳು ಸಮತೀಯಿಂದಂದ ಸಾಯುವಲಿ' ಎಂಬ ನ್ಯಾಯದಂತೆ, ಪರಸ್ಪರರ ಮೇಲೆ ಮುಯ್ಯಿ ತೀರಿಸಲು ತಮ್ಮ ಹಾಸಿಯನ್ನೂ ಲೆಕ್ಕಿಸದೆ ಕೋರ್ಟುಗಳ ದಾರಿ ಹಿಡಿಯತೊಡಗಿದರು. ಮೊದಲೇ ಸಾಲದ ಭಾರದಿಂದ ಬಗ್ಗಿದ ಒಕ್ಕಲಿಗರು, ಈ ಸ್ವಯಂಪ್ರೇರಿತವಾಗಿ ಇನ್ನಿಷ್ಟು ಆರ್ಥಿಕ ಸಂಕಟದಲ್ಲಿ ಬಿದ್ದರು. ಕೋರ್ಟು ಕಚೇರಿಗಳ ಮೂಲಕ ಪಟ್ಟಣಗಳಿಗೆ ಬರತೊಡಗಿದ ಹಳ್ಳಿಗರು ಪಟ್ಟಣಗರ ಬಿ-ಭಾಯಿಯ ಜೀವನಕ್ಕೆ ಮುರುಳಾದರು. ಅವರ ತಿಂಡಿ-ತಿನಿಸು, ಉಡುಗೆ ತೊಡುಗೆ, ಆಟ-ನೋಟಗಳಿಗೆ ತಮ್ಮ ಜೀವನವನ್ನು ಮಾರುಕೊಡಲಾರಂಭಿಸಿದರು. ಇದರಿಂದ ಹಳ್ಳಿಗರ ಆರ್ಥಿಕ ಸಂಕಟದ ಉರುಲು ಇನ್ನಿಷ್ಟು ಬಿಗಿಯಾಯಿತು. ಆದರಿಂದ ಮೇಲಕ್ಕೇಳುವ ಬಗೆಯೇ ಹಳ್ಳಿಗರಿಗೆ ತಿಳಿಯದಾಗಿದೆ. ಬಲ್ಲವರಿಗೆ ಅವನ್ನು ಮೇಲಕ್ಕೆತ್ತುವ ಸಹಾನುಭೂತಿ ಇಲ್ಲದಂತಾಗಿದೆ. ಹೀಗೆ ನಮ್ಮ ನಾಡಿನ ಜನರಲ್ಲಿ ಬಹುಸಂಖ್ಯಾಕರಾದ ಹಳ್ಳಿಗರು ಸೋತು ಸುಣ್ಣವಾಗಿ — ಬಳಲಿ ಬೆಂಡಾಗಿ — ಬಿದ್ದಿರುವಾಗ, ನಮ್ಮ ನಾಡಿನಲ್ಲಿ ಚೈತನ್ಯ ತುಂಬುವ ಬಗೆ ಹೇಗೆ? ಸ್ವಾತಂತ್ರ್ಯಾಪೇಕ್ಷಿಗಳಾದ ಕಾಂಗ್ರೆಸಿಗರೂ, ಏಕೀಕರಣಾಪೇಕ್ಷಿಗಳಾದ ಕನ್ನಡಾಭಿಮಾನಿಗಳೂ, ವ್ಯಾಪಿಕೋದ್ಯಮ ಬಳೆಯಿಸಬೇಕೆ ಬಂಡವಳಗಾರರೂ, ಸುಖ-ಶಾಂತಿಗಳನ್ನು ಬಯಸುವ ಸಮಸ್ಕೃತರೂ ಇಂದು ಹಳ್ಳಿಗಳ ಕಡೆಗೆ ಕಂದಿರೆಯುಜೇಕು. ಬಿದ್ದ ಹಳ್ಳಿಗರನ್ನು ಮೇಲೆತ್ತಿ ಆವರಲ್ಲಿ ಚೈತನ್ಯ ತುಂಬಿಸಬೇಕು. ಹಳ್ಳಿಗರ ಮಹಾಶಕ್ತಿಯ ಸಹಕಾರವಿಲ್ಲದೆ ಹೋದರೆ ಕನ್ನಡಿಗರಿಗೆ ಇಹವೂ ಇಲ್ಲ, ಪರವೂ ಇಲ್ಲವೆಂಬುದನ್ನು ಯಾರೂ ಮರೆಯಲಾಗದು.

— ಸಂಪಾದಕರು



೧. ಮುಂಗಕಾರಣ

ಸಿಮ್ಲಾ ಪರಿಷತ್ತು ಮುರಿದುಬಿದ್ದಕ್ಕೆ ಯಾರು ಕಾರಣರಾಗಿದ್ದಾರೆ ಎಂಬ ಪ್ರಶ್ನೆಯ ತೊಡಕು ಮುಂಗರಾಯನ ತಲೆ ಹಿಡಿದಿದೆ :—

೧. ವೈಸರಾಯ ಪೇವೆಲ್ :— 'ನಾನೇ ಕಾರಣ'

೨. ಅಧ್ಯಕ್ಷ ಆಝಾದ :— 'ಜಿನ್ನಾ ಕಾರಣ'

೩. ಮಾಸ್ಟರ್ ತಾರಾಸಿಂಗ್:— 'ಕಾಂಗ್ರೆಸ್ ಲೀಗಗಳು ಕಾರಣ'

೪. ಜನಾಬ ಜಿನ್ನಾ :— 'ಪಂಜಾಬದ ವಿಜಯ ತಿವಾನಾ ಕಾರಣ'

೫. ಪರಕೀಯರು :— ಹಿಂದುಸ್ತಾನದ ಜಾತಿಗಳು ಕಾರಣ'

೬. ಅವರಿವರು :— 'ಗಾಂಧಿ ಕಾರಣ' ಕೊನೆಯುವಾಗಿ.

೭. ಮಹರ್ಷಿ ಮುಂಗರಾಯ :— 'ರಾಜಕಾರಣ'

ಟೀಪು :— ಸಂಸ್ಕೃತಭಾಷೆಯ ಹಿಂದುಗಳು ಮೂವುದಕ್ಕೆ 'ವಿನಾಕಾರಣ' ಎನ್ನುವರೂ ಆದನ್ನು ಬೌದ್ಧಸ್ತಾನದ ಪಂಡಿತರು 'ಜಿನಾ ಕಾರಣ' ಎನ್ನುವರು. ಇದಿನ್ನೂ ವಾದಗ್ರಸ್ತವಾದ ವಿಷಯವಾದ್ದರಿಂದ ಮುಂಗರಾಯನು ಆವುಗಳನ್ನು ಅಧಿಕೃತವಾಗಿ ಆರೀತ 'ಕಿರಿಸು'ವುದಿಲ್ಲ.

೨. ಧಿಕ್‌ಕೃತ ಮುಂಗತನ

ಸಿಮ್ಲಾ ಪರಿಷತ್ತಿನ ವಿಷಯವಾಗಿ ಮುಂಗರಾಯನ ಸೃಷ್ಟೀಕರಣ ರಾಷ್ಟ್ರದ ದೃಷ್ಟಿಯಿಂದ ಅಗತ್ಯವಿದೆ ಎಂದು ಅಗ್ರಹದ ಸೂಚನೆಗಳು ಬಂದಮೇಲಿಂದ ಇದೀಗ ಮುಂಗರಾಯನು ಅಧಿಕೃತವಾಗಿ ಹೀಗೆ ಸೃಷ್ಟೀಕರಿಸುತ್ತಿದ್ದಾನೆ :—

'ಎಲ್ಲರಿಗೂ ಮುಂಚಿತವಾಗಿ ಮುಂಗರಾಯನಿಗೆ ವೈಸರಾಯರ ಕರೆ ಬಂದಿತು, ಸಮಕಾರಕ್ಕಾಗಿ ಹೆದರಿ ಬಂದಿಕು, ಸಿಮ್ಲಾದಲ್ಲಿ ಉನ್ನತ ಶಾಯೋಪಶಾಯಾಯುಕ್ತ ವೈಭವು ಮುಂಗರಾಯನ ತೀಲ — ಅನಾಸಧಾನವಾಗಿ ಕಾದಿರಿಸಲ್ಪಟ್ಟಿತು. ಅವರೆ ಮುಂಗರಾಯನು ಒಂದು ಮಾತನು ಖಂಡಿತಗೊಳಿಸಿದನು :— ಎಲ್ಲ ಮುಂಗಕೌನ್ಸಿಲರರನ್ನು ಅರಿಸುವ ಸರ್ವಾಧಿಕಾರ ಮುಂಗರಾಯನಿಗಿರಬೇಕೆಂದು. ಆದರೆ ಅವಸರದಲ್ಲಿ ತಂತಿ ಕಚೇರಿಯವರು 'ಎಲ್ಲ ಕೌನ್ಸಿಲರರು ಮುಂಗಗಳಾಗಿ ಆರಿಸುವ ಸರ್ವಾಧಿಕಾರ' ಮುಂತಾಗಿ ತಂತೀಕರಿಸಿದ್ದರಿಂದ ವೈಸರಾಯರು ಮುಂಗರಾಯನ ಬೇಡಿಕೆ ತಮ್ಮ ಅಧಿಕಾರವನ್ನು ಮೀರಿದ್ದೆಂದು ಆಮೆರಿಸಾಹೇಬರಿಗೆ ಸಾಗಿಸಿದರು. ಚುನಾವಣೆ ಮುಗಿವವರೆಗೆ ಇಂತಹ ಮಹತ್ವದ ತತ್ತ್ವದ ಮೇಲೆ ತಮ್ಮ ಅಭಿಪ್ರಾಯವನ್ನು ಕೊಡಲಾಗದೆಂದು ಅಮೆರಿಸಾಹೇಬರು ಹಿಂಜರಿದಿದ್ದರಿಂದ ಮುಂಗರಾಯನು ಪರಿಷತ್ತಿನಿಂದ ಆಲಿಸ್ತಾನಾಗಬೇಕಾಯಿತು. ಹೀಗಿರಲಾಗಿ ಸಿಮ್ಲಾದಲ್ಲಿ ನಡೆದದ್ದು ಅಧಿಕೃತ ಮುಂಗತನವಲ್ಲ ಎಂದು ಮುಂಗರಾಯನು ಮತ್ತೊಮ್ಮೆ ಸ್ಪಷ್ಟೀಕರಿಸುತ್ತಾನೆ.

೩. ಜಿಗಿವ ಜವಾಹರ ಜೈ!

'ನೆಲಮುಟ್ಟಿ ಕಾಲನ್ನು ಹಿಡಿಯುವುದು ದಾಸ್ಯ ಬುದ್ಧಿಯ ಚಿಹ್ನ' ಎಂದು ಜವಾಹರರು ಖಂಡಿಸುತ್ತಿರುವಾಗ ಯಾರೂ ಕಾಲನ್ನು ಮುಟ್ಟಲು ಬಾಗಲು ತಪ್ಪಿಸಬೇಕೆಂದು ಟಣ್ಣನೆ ಜಿಗಿದಾಗ ಈ ನವಜವಾನ ನೇತಾರರು ತಗ್ಗಿನಲ್ಲಿ ಬೀಳುತ್ತಿದ್ದರಂತೆ! ಹಹ! ಅಲ್ಲ—ಎಂದರೆ ಮುಂಗರಾಯನಿಗೆ ಅನಂದವಲ್ಲ— ಇಂತಹ ನೇತಾರರೂ ಜಿಗಿದು ಮುಂಗರಾಯನ ಅನುಕರಣ ಮಾಡಲು ಯತ್ನಿಸುವರಂದು. ಆದರೆ— ಜವಾಹರರಂತಹರೂ ದಿಕ್ಕುತಪ್ಪಿದರಲ್ಲ ಎಂದು— ಕನಿಕರದ ನಗೆ. 'ಹಿಂದಿದ್ದ ತಗ್ಗಿನಲ್ಲಿ' ಎಂದು ಜವಾಹರರು ಹೇಳಿದ್ದು, ಆದರೆ ನಿಜವಾಗಿ ಮುಂದೆ —ಕಣ್ಣು ಮುಂದೆಯೇ ಇದ್ದಿತು ಆ ತಗ್ಗು! 'ಬೀಳ. ಬಹುದಾಗಿತ್ತು' ಎಂದರು ಪಂಡಿತರು. ಆದರೆ ನಿಜವಾಗಿ ಬಿದ್ದೇಜಿಟ್ಟಿದ್ದರು ತಾವು ಎಂಬುದನ್ನರಿಯಲಿಲ್ಲ ಅವರು! 'ಸಿಮ್ಲಾದಲ್ಲಿ ಒಂದು ತಗ್ಗಿನಲ್ಲಿ' ಎಂದು ಭ್ರಾಂತಿ ಅವರದು. ನಿಜವಾಗಿ 'ಸಿಮ್ಲಾ ಎಂಬ ತಗ್ಗಿನಲ್ಲಿ' ಎಂದು ಹೇಳಬೇಕಾಗಿತ್ತು ಬುದ್ಧಿಗೆ ಭ್ರಾಂತಿಯಾಗಿದ್ದರೂ ಜಡಶರೀರ ಜಿಗಿಯಿತು. ತಂದೇ ಜವಾಹರರು ಪಾರಾದರು! ಬಾಂಧವರೆ, ಇನ್ನಾದರೂ ಎಚ್ಚರಾಗಿರಿ :—

ಜಿಗಿಯುವ ಬುದ್ಧಿಗೆ ಜೈ
ಝಿಂದಾಬಾದ್ ಮುಂಗೈ!

೪. ಮುಂಗರಾಯನ ಸಿಮ್ಲಾಯಾತ್ರೆ

ಮುಂಗರಾಯ ಸಿಮ್ಲಾ ಪರಿಷತ್ತಿನಿಂದ ಮುರಿಕೊಂಡ ನಂತರ ಪಂಜಾಬಿಗೆ ಹೊರಟ. ಬೀಳ್ಕೊಡಲು ಬಂದ ಮುಂಗಾನುಯಾಯಿಗಳು ಕೇಳಿದರು: "ಏನು ಸ್ವಲ್ಪಂ ಮಜಾತಿಸಂಭೂತಾ, ಮುಕ್ಕಟಿಪ್ಪಂದನಾಧಾ. ನೀನೀಗ ಯಾವ ನೋಟಾರಿನಿಂದ ಹೊರಡುವೆ? ಒಂದರ ಡೈವರನೂ ನಿನ ಜಾತಿಗೆ ಸೇರಿದವನಲ್ಲ. ಸಾಳ್ಳತ್ ಜಿನ್ನಾಸಾಹೇಬರೇ ಅನ್ಯ ಜಾತಿಯ ಡೈವರನ ಬಸ್ಸಿನಲ್ಲಿ ಕೂತುಹೋಗಲಿಕ್ಕೆ ಹೆದರಿ ನಡುಗಿದರೆಂದು ನೀವೆಲ್ಲ,ನೀನೇನು ಮಾಡುತ್ತೀ ನೋಡು! ನೀನು ಯಾವಾಗಲೂ ಒಂದು ಜಾತಿಯನ್ನು ಎತ್ತಿ ಮಾತಾನಾಡುವವನಲ್ಲ; ಮಾತೆತ್ತಿದರೆ ಜಾತಿವಾದಿಗಳನ್ನು ಬೈಯುವವನು! ಜಾತಿಗೆ ಸೇರದ ಡೈವರುಗಳು ಹಿಂದುಸ್ತಾನದಲ್ಲಿ ಇಲ್ಲವೇ ಇಲ್ಲ. ನಿನ್ನನ್ನು ಸುರಕ್ಷಿತವಾಗಿ ಕಳುಹುವ ಒಗೆ ಹೇಗೆ?" ಮುಂಗರಾಯ ಯಾವುದನ್ನೂ ಮಾತನಾಡದೆ, ಎಲ್ಲರೊಂದಿಗೆ ನೋಟರ್ ಸ್ಟಾಂಡಿಗೆ ಬಂದ. ಅಲ್ಲಿಯ ಮೋಟಾರುಗಳಲ್ಲಿಯೂ ಬೇರೆ ಬೇರೆ ಜಾತಿಗೆ ಸೇರಿದ ಡೈವರುಗಳೆಲ್ಲರೂ, ಮುಂಗರಾಯನನ್ನು ಕಂಡು 'ನನ್ನ ಗಾಡಿಯಲ್ಲಿ ಬಾ, ನನ್ನ ಗಾಡಿಯಲ್ಲಿ ಬಾ!' ಎಂದು ಗದ್ದಲವೆಬ್ಬಿಸಿದರು. ಈ ಗದ್ದಲವೇ ಒಂದು ಜಾತೀಯ ಜಗಳವಾಗಿ ಪರಿಣಮಿಸಬಹುದೆಂದು, ಮುಂಗರಾಯ ಸಿಮ್ಲಾದಿಂದ ತನ್ನ ಸಾಲ್ತ್ ಕಾಲಿನಿಂದ ನೆಗೆಯುತ್ತಲೇ ಹೊರಟಿದ್ದಾನೆ. ಪಾದಿಯಲ್ಲಿ ಳಳ್ಳಿ-ಪಳ್ಳಿಗೂ ಪಟ್ಟಣ-ಪಟ್ಟಣಕ್ಕೂ ಅವನ ಸ್ವಾಗತ ನಡೆದಿದೆ.

ಕಲಬುರ್ಗಿಯಲ್ಲಿ ನಮ್ಮ ಏಜೆಂಟರು

ಶ್ರೀ. ಕೃಷ್ಣರಾವ್,

C/o. ಶಾಂತಯ್ಯ ಸಟ್ಟಿಣಕರ,

ಸೂಪರ್ಡೆಂ. ಜಗತ್

ಗುಲಬುರ್ಗಾ

ಪ್ರಾರ್ಥನೆ

'ಕೌಸಲ್ಯಾತನಯ' ಶಿವಮೊಗ್ಗ

೧

ನಿನಗಾಗಿ ಕಾದಿಹೆನು ನಾನಿಲ್ಲಿ ನಿಂದಿಹೆನು,
ಬಾರೆನ್ನ ಮೊರೆಕೇಳ ದೊರೆಯೆ!
ನೀನಿತ್ತ ಬೆಳಕಿನಲಿ ನಾ ಮುಂದೆ ಸಾಗಿಹೆನು,
ಬಂದೆನ್ನ ನೀನಿಂದು ಪೊರೆಯೆ !

೨

ನಿನಗೆಂದು ಬಲು ಅಲೆದು ಪನವೆಲ್ಲ ತಿರಿ-ತಿರಿದು
ತಂದಿಹೆನು ತನಿವಣ್ಣ ದೊರೆಯೆ,
' ಬಂದಿಹನು ಬಲುಬಳಲಿ ' ಎಂದೆನುತ ಮೊಗತೋರು
ನಿನ್ನ ಬಳಿ ನಾನಿಂದು ಕರೆಯೆ.

೩

ಜಗವೆಲ್ಲ ನಾ ಬರ್ಲೆ ದಾಟಿಹೆನು ನಾ ಎಲ್ಲೆ
ಎಂದೆನುತ ದಿನದಿನವ ಕಳೆದೆ!
ಇಂದೆನಗೆ ಅರಿವಾಯ್ತು ಜಗವನ್ನು ಬಲ್ಲವನು
ನೀನೆಂದು ನಾನಿನ್ನ ತಿಳಿದೆ!

೪

ಮೂಡಣದ ಮನೆಯಿಂದ ಮುತ್ತಿನಾ ಚೆಂಡೊಂದು
ಥಳಥಳನೆ ಹೊಳೆಯುತ್ತ ಬಂದು,
ಜಗವನ್ನು ಬೆಳಗುತ್ತ ಜನವನ್ನು ಒಲಿಸುತ್ತ
ಮುಗಿಲಾಚೆ ಮುಳುಗಿಹುದು ಅಂದು.

೫

ಬಾರಯ್ಯ ಬಾ ತಂದೆ, ಬಾರವ್ವ ಬಾ ತಾಯಿ,
ಕರೆಯುವೆನು ನಿನ್ನನ್ನು ನಾನು;
ನೀ ಬಂದು ಎನ್ನೊಡನೆ ಬಹುಕಾಲ ಬಾಳುತ್ತ
ನೀಡಯ್ಯ ಜೀವನವ ಜೇನು !

೬

ನೀ ಬಂದು ಮನೆ ತುಂಬು, ಬೆಳಕಿತ್ತು ಮನ ತುಂಬು,
ಜಗವೆಲ್ಲ ತುಂಬಿಹುದು ಬಾರ !
ತುಂಬೆನ್ನ ಒಡಲನ್ನು, ನೀ ತುಂಬು ಕಡಲನ್ನು,
ತುಂಬುತ್ತ ಶಾಂತಿಯನು ತಾರ!

ನೀನೇ ಮಂಗಳ!

ಶ್ರೀ. ಡಿ. ಎಸ್. ಕಕ್ಕಿ ಎಂ. ಎ. ಬೆಳಗಾಂವಿ

೧

ಅಂಗನೆಯೆ ನೀ ಮಂಗಳಕೆ ಮನೆ,
ಮನೆಗೆ ನೀನೇ ಮಂಗಳ !
ನಿನ್ನ ಕಂಗಳ ಬೆಳಕನರಿಯದ
ಬದುಕು--ತೆಗೆ ತೆಗೆ—ತಂಗುಳ!

೨

ಹೊಮ್ಮಿ ಬಂದಿತು ಕರುಣೆಯೆಂಬುದು
ಮೊಪಲು ನಿನ್ನೆದ-ಬುಗ್ಗೆಯಿಂ ,
ಹೊತ್ತ ಮೊದಲಹ, ನಮ್ಮ ತೋಟಕೆ
ತಂದಿತದು ಹೊಸ ಸುಗ್ಗಿಯಂ !

೩

ಚಿಗುರಿಸುವೆ ನೀ ಬಾಳ ಬಳ್ಳಿಯ
ನೀನೆ ಜೀವಸ್ಫೂರ್ತಿದಯು ;
ಬೆಳಯಿಸುವೆಯವ ಬೇಸರಿಲ್ಲದೆ
ನೀನೆ ತಾಯ್ಮೆಯ ಮೂರ್ತಿಯು !

೪

ನಿನ್ನ ಜೋಗುಳದಿಂದಲೊಗೆಯಿತು
ಪ್ರಥಮ ಸೃಧಿಮೀ ಕಾವ್ಯವು;
ಅಂದಿನಿಂದವ ಮುಂದುನರಿದಿದೆ—
ಎಂದಿಗೂ ನವನವ್ಯನು!

೫

ಹೆಜ್ಜೆ ಚಿಲ್ಲಲು ನೃತ್ಯ, ಕೊರಳುಲಿ
ತೋರಲವೆ ಸಂಗೀತವು!
ಲಲಿತಕಲೆಗಳಿಗೆಲ್ಲ ನಿನ್ನಿಂ-
ದಲ್ಲವೇ ಲಾಲಿತ್ಯವು ?

೬

ನಿನ್ನ ಕಂಗಳ ಮಂಗಳಾರತಿ
ಬೆಳಗಲೌ ನಮ್ಮಿಳೆಯನು;
ಅಂತರಂಗದ ಅಮಲ ದೀಧ್ಮಿತಿ
ತೊಳಗಿ ತೊಳೆಯಲಿ ಕೊಳೆಯನು!

ಕೂಡಲಾರದ ಕಣ್ಣು*

(ಏಕಾಂಕ ನಾಟಕ)

ಪ್ರೊ. ರಂ. ಶ್ರೀ. ಮುಗಳಿ ಎಂ. ಎ., ಬಿ. ಟಿ. ಸಾಂಗಲಿ.

ಪಾತ್ರಗಳು :

ತಾರಾಬಾಯಿ :—	ಮನೆಯ ಯಜಮಾನನ ತಾಯಿ		
ಲಕ್ಷ್ಮಿಂಬಾಯಿ :—	,,	,,	ಹೆಂಡತಿ
ರಮಾಬಾಯಿ :—	,,	,,	ತಂಗಿ
ದ್ವಾರಕಾ :—	,,	,,	ಹೆಂಡತಿಯ ಗೆಳತಿ
ನೀಲಪ್ಪ :—			ಹಾಲಿನವಕ

[ಗುಮಾಸ್ತೆ ಗುರುರಾಯನ ಮನೆಯ ಪಡಸಾಲೆ. ಸಂಜೆಯ ಆರು ಘಂಟೆಯ ಹೊತ್ತು. ಗೋಡೆಯ ಹತ್ತಿರ ಒಂದು ಹೊಲಹೊಲಸು ಗಿಪಾರ ಹಾಸಿದೆ. ಅದರ ಮೇಲೆ ಗೋಡೆಗೆ ಒರಗಲಿನಂತೆ ನೀಸಿ ಮೂರು ಸಾಲು ಹಾಸಿಗೆ ಸುರುಳಿಗಳನ್ನಿಟ್ಟಿದೆ. ಖುರ್ಚಿ-ಟೇಬಲ್ಲುಗಳಿಲ್ಲ. ಗೋಡೆಯ ಮೇಲೆ ಒಂದೆರಡು ಫೋಟೊ, ಕ್ಯಾಲೆಂಡರು ಗೂಟಕ್ಕೆ ತೂಗುಬಿದ್ದಿವೆ. ಕಾಲೇಜ ವಿದ್ಯಾರ್ಥಿನಿಯಾದ ದ್ವಾರಕಾ ಮನೆಯೊಳಗೆ ಪ್ರವೇಶಿಸುತ್ತಾಳೆ.]

ದ್ವಾರಕಾ :— (ಪ್ರವೇಶಿಸುತ್ತ) ಶಾರೀ, ಶಾರದಾ, ಏಳು, ಸಿನೇಮಾಕ್ಕೆ ಹೊರಡೂ ಹೊತ್ತಾತು.... (ಸುತ್ತುನೋಡಿ) ಇಲ್ಲೆ ಯಾರದೂ ಸುಳಿವೇ ಇಲ್ಲ. ಒಳಗ ಇದ್ದಾಳೊ ಏನೊ, ಇನ್ನೂಮ್ಮೆರಡ ಕರೀತೀನಿ.... ಶಾರ.... (ಒಮ್ಮೆಲೆ ನೆನೆದು) ನಾ ಎಂಥಾ ಹುಚ್ಚಿ! ಅತ್ತೀಮನಿಗೆ ಬಂದು ನಮ್ಮ ಗೆಳತಿ ಶಾರದಾ ಈಗ ಲಕ್ಷ್ಮಿ—ಲಕ್ಷ್ಮಂಬಾಯಿಕ ಆಗ್ಯಾಳಲ್ಲ, ನಾ ಮತ್ತ ಮತ್ತ ಮರೀತೀನಿ. (ದನಿಯೇರಿಸಿ) ಏ ಲಕ್ಷ್ಮಂಬಾಯಿ, ಅಲ್ಲ ಲಕ್ಷ್ಮಂಬಾಯರಽ (ಯಾರೂ ಓ ಕೊಡದಿರಲು) ಹಲೋ ಮಿಸೆಸ್ ಗುಮಾಸ್ತೇ (ಎಂದು ಕಟ್ಟಿಸಿ ಕೂಗುತ್ತಾಳೆ.)

ಲಕ್ಷ್ಮಂಬಾಯಿ:— (ಒಳಗಿನಿಂದ ಪ್ರಶ್ನೆಲ್ಲ ಮುಖದಿಂದ ಧಾವಿಸಿ ಬಂದು ಯಾರು ಬೇಕು? ಅವರು ತಿರುಗಾಡಲಿಕ್ಕೆ ಹೋದರು ಇದೇ ಈಗ! (ತಲೆಯೆತ್ತಿ ದ್ವಾರಕೆಯನ್ನು ನೋಡಿ, ಪೆಚ್ಚಾಗಿ ತುಟಿ ಕಚ್ಚಿ ನಿಲ್ಲುವಳು)

ದ್ವಾರಕಾ :— ಹಿಂಗೇನು? (ಕುಚೇಷ್ಟೆಯ ದನಿಯಲ್ಲಿ) ಅವರಂದರ ಲಕ್ಷ್ಮಂಬಾಯರು, ಮಿಸೆಸ್ ಗುಮಾಸ್ತೆ?

ಲಕ್ಷ್ಮಂಬಾಯಿ :— ಗೊತ್ತಾತ ಬಿಡು, ನೀ ಬಂದೀದಿ. ನಾ ಯಾರೋ ಗಂಡಸರೂ ಅಂತ ಮಾಡಿದ್ದೆ.

ದ್ವಾ :— ಛೆಲೋ ಅವ. ಕಾಲೇಜಕ್ಕ ಹೋದ ಹಿಡಿದು ನಾ ಹಿಂಗ ಬ್ಯಾರೇ ಕಾಣೆಸತೀನೇನು ನಿನಗ? (ಇಬ್ಬರೂ ನಗುವರು) ಅಲ್ಲ, ಅವರು ಅಂದೆಲ್ಲ ಅವರ್ಯಾರು?

ಲ :— ಅವರು ಅಂದರ ಅವರು! ಗೊತ್ತಿಲ್ಲೇನು? ನೀನೂ ಒಳ್ಳೇ ಜಾಷ್ಟಿ ಮಾಡುವಾಕಿ ಬಿಡು!

ದ್ವಾ :— ಅಲ್ಲಾ ಶಾರೀ, ಮ್ಯಾಟ್ರಿಕ್‌ತನಕಾ ಇಂಗ್ಲೀಜಿ ಕಲಿತಿ ನಮ್ಮ ಜೋಡಿ; ಇನ್ನಾ ಯಜಮಾನರಿಗೆ ಸರ್ವನಾಮ ಹಚ್ಚೂಡೂನೂ ಬಿಡವೊಲ್ಲಿಯಲ್ಲ?

ಈ ನಾಟಕವನ್ನು ಅಭಿನಯಿಸುವವರು 'ಲೇಖಕರಿಗೆ ಮುಂಚಿತ ತಿಳಿಸಬೇಕು.

ಲ :— ಮ್ಯಾಟ್ರಿಕ್ ಆದರೇನು? ನಿನ್ನಂಗ ಕಾಲೇಜ ಬ್ಯಾರೇ ಕಾಣಲಿಲ್ಲ! ನೋಡು ದ್ವಾರಕಾ, ಎಷ್ಟು ಕಲಿತರೇನು, ಬಿಟ್ಟರೇನು; ಮದಿನೀ ಮಾಡಿಕೊಂಡಿಯೆಂದರ ಇವೆಲ್ಲಾ ತಾನು ತಿಳಿತಾವ!

ದ್ವಾರಕಾ :— ಆಗಿಹೋತು, ಮತ್ತೊಂದು ಸರ್ವನಾಮ. ಅಲ್ಲ, ಒಳಗೇನು ನಡಿಸಿದ್ದಿ? ಮತ್ತ ಯಾಕೋ ಮಾರೀಮ್ಯಾಲೆ ಕುಲುಕುಲು ನಗಿ ಸುಳಿದಾಡತದ ಈವತ್ತ?

ಲಕ್ಷ್ಮಂಬಾಯಿ :— ನಿನ್ನ ದಸಿಂದನ, ಚಹಾಮಾಡತಿದ್ದೆ. ಸಿನೇಮಾಕ್ಕ ನೀ ಕರೀಲಿಕ್ಕೆ ಒರತೀನಿ ಅಂತ ಹೇಳಿದ್ದಿಲ್ಲಕ?

ದ್ವಾ :— ಹಂಗಾರ ಸಿನೇಮಾಕ್ಕ ಈಗ ಬರುವಾಕಿ ಅನಬಾರದ? ಯಜಮಾನರ ಪರವಾನಿಗಿ ಸಿಕ್ಕಽದ ಕಾಣೆಸತದ. ಅದಕ್ಕಽ ಈ ಉಮೇದಿ ಹೌದಲ್ಲೊ?

ಲ:— ಪರವಾನಿಗಿ? (ಮುಖವರಳಿಸಿ) ಬರೇ ಪರವಾನಿಗಿ ಯಾಕ? ದ್ವಾರಕಾ, ಇಲ್ಲಿ ನೋಡು, ಯಾರಿಗೂ ಹೇಳಬ್ಯಾಡ. ಪಗಾರನು ನನ್ನ ಕೈಯಾಗ ಸಿಕ್ಕಽದ ಈವತ್ತ!

ದ್ವಾ :— ಹಿಂಗಽ? ಸ್ತ್ರೀಸ್ವಾತಂತ್ರ್ಯದ ದಿಗ್ವಿಜಯ ಆತು ಬಿಡು! ಇಂವ ಸಿನೇಮಾಕ್ಕ ಹೋಗಲಿಕ್ಕೇ ಬೇಕು. ಆದೆಂಗ ನಿನ್ನ ಕಡೆ ಕೊಟ್ಟರಽ ಶಾರೀ....ಎಂದೆಂದೂ ಕೊಡದೆ ಹೋದವರು? ದಿನಾ ಒಂದು ತಕರಾರ ಹೇಳತಿದ್ದಿ: 'ಅವ್ವನ ಮಾತು ಕೇಳತಾರ, ಮನಸಿಗೆ ಬಂಧಂಗ ಮಾಡತಾರ, ಈ ಮನ್ಯಾಗ ನಂದೇನೂ ನಡಿಯುದಿಲ್ಲ, ನಾ ತಿಪ್ಪ್ಯಾಗಿನ ಕಸ; ಹಂಗ ಹಿಂಗ' ಅಂತ! ಆದೆಂಗ ಕೊಟ್ಟರೂ ಅಂತೀನಿ!

ಲಕ್ಷ್ಮಿ :— ಹೆಂಗಂವರ, ಕೊಟ್ಟರು ಆತು. ಈವತ್ತ ನೋಡು ಫೈಲಾ ತಾರೀಖು, ಪಗಾರಾತಂತ. ಅದನ್ನ ತಗೊಂಡು ಕಚೇರಿಂದ ಬಂದ ಘಳಿಗ್ಗೆ 'ಅವ್ವ-ಎಲ್ಲಿ ಹೋಗ್ಯಾಳ!' ಅಂತ ಕೇಳಿದರು. ನಾ ಗಂಟುಸೂರಿ ಮಾಡಿ 'ಗುಡಿಗೆ ಪುರಾಣಕ್ಕ ಹೋಗಿದ್ದಾರು' ಅಂದೆ. 'ಹಂಗಾರ ಬಾ ಇಲ್ಲ' ಅಂತ ಹೇಳ್ಯಾಗ ಬ್ಯಾರೇ ಕರಮತ 'ಇಕಾ, ಈ ವಾರೇಟು ತಗೊ. ಇವತ್ತ ಪಗಾರಾತು, ಇದರಾಗ ಎಲ್ಲಾ ಆವ, ಇನ್ನ ಮ್ಯಾಲೆ ನಂಸಾರದ ಖರ್ಚು ನೀನೇ ನೋಡಿಕೊ, ಆತಿಲ್ಲೂ. ನಾ ಉಸಾಬರಿ ಮಾಡೂದಿಲ್ಲ!' ಅನಕೋತ ನನ್ನ ಕೈಯಾಗ ಇದನ್ನ ಕೊಟ್ಟರು. (ಉಡಿಯಲ್ಲಿದ್ದ ಪಾಕೀಟು ತೋರಿಸುತ್ತ) ಮತ್ತ 'ಅವ್ವನ ಮುಂದ ಮುಂದೀ ಮುಂದಹೇಳಿಗೀಳಿ' ಅಂದರು. 'ನಾಯಾಕ ಹೇಳಲಿ. ಹುಚ್ಚೇನು?' ಅಂದೆ.

ದ್ವಾ :— ಮತ್ತ ನನಗ ಹೇಳಿಬಿಟ್ಟೆಲ್ಲಾ ಮಹಾರಾಯಳ! ಇದೇನು ಹುಚ್ಚರದೋ ಶಾಣ್ಯಾರದೋ ಲಕ್ಷಣ ?

ಲಕ್ಷುಂ :— ನಿನಗ ಹೇಳಿದರೇನು ತಪ್ಪು ಬಿಡ ? ಅತ್ತೆವರಿಗೆ ಹೇಳತೀನಂತ ತಿಳಿದೀಯೇನು ? ಇನ್ನವರ ಮಾತು ಕೇಳತೀನಂತ ತಿಳಿದೀಯೇನು ?

ದ್ವಾ :— ಇನ್ಯಾಕ ಕೇಳೀ ? ನಿನಗ ಸ್ವರ್ಗ ಇನ್ನ ನಾಕೇ ಬಟ್ಟು! ಅಲ್ಲಾ, ಅದರಾಗ ಎಷ್ಟರೇ ರೂಪಾಯಿ ಅವ ತಗದು ಎಣಿಸಿ ನೋಡಲ್ಲಾ !

ಲಕ್ಷುಂ :— ನೋಡೋದೇನೇನೂ ಕಾರಣೆಲ್ಲ. ಇಷ್ಟು ವಿಶ್ವಾಸ ಇಲ್ಲೇನು ಅವರ ಮ್ಯಾಲೆ ? ಹಾದ್ಯಾಗೆಲ್ಲಾ ಶ್ಯರ ಉದ್ರೀ ಗಿದ್ರೀ ಅಂಗಡಿಯವರು ಛೆಟ್ಟಿ ಆದಾರು ಅಂತ, ಕಚೇರ್ಯಾಗ ಅಂಟುಪಚ್ಚಿ ಪಾಕೀಟು ಬಂದಮಾಡಿ ತಗೊಂಡು ಬಂದಾರ. ದ್ವಾರೀ, ಅವರ ಸ್ವಭಾವ ಎಷ್ಟು ಛೆಲೋದು ನೋಡು !

ದ್ವಾ :— (ಕುಸು ಅಣಕಿಸುವ ಧನಿಯಲ್ಲಿ) ಹೌದು ಶಾರಿ, ಭಂಗಾರ ವಂತಾದು ! ಬಂಗಾರದ ಬದಲೀ ನೋಟುಕೊಟ್ಟಾರ ಸರಕಾರಧಂಗ, ಅಷ್ಟೇ ಅಂತರ !

ಲಕ್ಷುಂ :— ಸರಕಾರ ? ದ್ವಾರಕಾ, ಇನ್ನನ್ಯಾಲ ಈ ಮನ್ಯಾಗ ನಾನs ಸರಕಾರ! ನನಗ ಭಾಳ ಸಂತೋಷ ಆಗೇದ. ಇಲ್ಲಿ ಕೂತು ಮಾತಾಡೋಣ ಬಾ. (ಕೈ ಹಿಡಿದುಕೊಂಡು ಹೋಗಿ ಗೂಡಾರದ ಮೇಲೆ ಕೂಡಿಸಿ ಹೋಗುವಳು.)

ದ್ವಾ :— (ಹಿಂದೆ ಮುಂದೆ ನೋಡುತ್ತ) ಅಲ್ಲಕ ಕೂಡತೀನಿ. ಮತ್ತ ನಿಮ್ಮ ಸ್ವಂತ ಕಾರಭಾರ—ಅಲ್ಲ ಸರಕಾರ–ಆತು ಈಗ. ನಿಮ್ಮ ಬಜೆಟ್‌ದಾಗ ಒಂದೆರಡು ಖುರ್ಚೀ ಮಾಡಿಸಲ್ಲ ಕೂಡಲಿಕ್ಕೆ !

ಲಕ್ಷುಂ :— ಯಾಕ ? ಕಾಲೇಜಕ್ಕ ಹೋದ ತೊಟ್ಟು ನೆಲದ ಮ್ಯಾಲ ಕೂಡೂದಿಲ್ಲೇನು ಈ ನೇಪ ? ಒಂದೊಂದು ವರ್ಷ ಮುಗಿಸಿ ಧಂಗ ಒಂದೊಂದು ಮೊಳ ಎತ್ತರ ಬೇಕೇನೊ ಆಸನ ? ಈಗಂತೂ ಮೂರನೇ ವರ್ಷ ಜ್ಯೂನಿಯರ್ ಬಿಯೆನಾಗ ಇದ್ದಿ. ಅಪ್ಪೆತ್ತರ ಖುರ್ಚಿ ಎಲ್ಲಿ ಮಾಡಿಸೂಣ ನಮ್ಮವ್ವಾ, ನಾವು ಬಡವರು !

ದ್ವಾ :— (ಸಂಕೋಚದಿಂದ ಕೂಡುವುದೆಂದು ಬಾಗಿ) ಹಂಗಲ್ಲs ಶಾರದಾ, ನನ್ನ ಸಲುವಾಗಿ ಹೇಳಲಿಲ್ಲ. ನಾ ಕೂಡತೀನಿ ಅತಿಬ್ಲೆ !

ಲಕ್ಷುಂ :— ಬ್ಯಾಡ ನಿಂದರು, ಖುರ್ಚೀ ಮಾಡಿಸೋಣ ಮುಂದ ಈಗ ಈ ಗಾದೀ ಸುರಳೀನs ಖುರ್ಚಿ ಮಾಡೂಣ ಬಾ ! (ಎಲಡಂ ಗ ದಿ ಸುರುಳಿ ಎತ್ತಿ ಇದಿಯ ಬದಿ ಎ ಇಟ್ಟ) ಕೂಡಿನ್ನ ! (ಇಬ್ಬರೂ ಸಗುತ್ತ ಇದಿದ ಬದಿಂಗಿ ಕೂಡುವರು)

ದ್ವಾ :— ಛೆಲೋ ಯುಕ್ತಿ ಹುಡಿಕೆದಿ ಬಿಡು. ಜೆನ್ನಿಲ್ಲದ ಖುರ್ಚಿ ಬೇಸ್ಯವ !

ಲಕ್ಷುಂ :— ದ್ವಾರಕಾ, ಸಂಸಾರ ಮಾಡೂ ಅನರಿಗೆ ಇವೆಲ್ಲಾ ಯುಕ್ತಿ ತಾನs ಹೊಳೀತಾವ. ಇನ್ನ ಮ್ಯಾಲ ನೋಡು, ಕೈ ಪತ್ತಿ ಹಿಡಿದು ಸಂಸಾರಮಾಡಿ, ಈ ಎಂಬತ್ತು ರೂಪಾಯಿದಾಗ ತಿಂಗಳಾ ಐವತ್ತು ಬ್ಯಾಂಕಿನಾಗ ಇಡತೀನಿ. ಅಂದರ ವರ್ಷಕ್ಕ ಎಷ್ಟಾವವು ? **ಆರುನೂರು ರೂಪಾಯಿ** ನೋಡಿದ್ಯಾ, ಆರುನೂರುರೂಪಾಯಿ ಆಗತಾವ. ಹಿಂಗ ಪತ್ತು ವರ್ಷದ ತನಕಾ ಇಟಗೋತ ಹೋದರ ಆರು ಸಾವಿರ ರೂಪಾಯಿ ಆಗತಾವ !

ದ್ವಾ :— (ಅಣಗಿಸುತ್ತ) ಹೂಂ, ಆರುಸಾವಿರ ರೂಪಾಯಿ ! ಹಿಂಗs ನೂರು ವರ್ಷ ಇಟಗೋತ ಹೋದರ ಅರವತ್ತು ಸಾವಿರ ರೂಪಾಯಿ ಆಗತಾವ—ಲಕ್ಷಾಧೀಶ ಆಗಲಿಕ್ಕೆ ನಾಲ್ವತ್ತೇ ಸಾವಿರ ಕಡಿಮೆ ಬೀಳತಾವೇಳು ! ಬಹುಶಃ ಅಷ್ಟೊತ್ತಿಗೆ ಬ್ಯಾಂಕಿನ ಬಡ್ಡಿಗಿಡ್ಡಿ ಕೂಡಿ ಲಕ್ಷಕ್ಕೇ ಬರಬಹುದು, ಏಲ್ಲಕ ?

ಲಕ್ಷುಂ :— ಸಾಕು ಬಿಡಕ ನಿನ್ನ ಅಣಕಾಟ; ನನಗ ತಿಳಿಯೂ ದಿಲ್ಲೇನು ? ಆದೇನೋ ಹೇಳತಾರ ಪಸಿಪಸೀ ಕೂಡಿದರ ಹಳ್ಳಂತ !

ದ್ವಾ :— ಅದು ಖರೆ. ಪಸೀಪಸೀಪಂಗ ಉದ್ದರಿ ಬೆಳಕೋಡ ಹೋಗಿ ಹಳ್ಳಕೂಡೀರಿ; ನೋಡಿಕೊ....ಅಂದೆ.

ಲಕ್ಷುಂ :— ಉದ್ದರಿ? ಹೆಂಗಸರು ಎಂದೆಂದೂ ಉದ್ದರೀ ಮಾಡೂದಿಲ್ಲ. ಅದೆಲ್ಲಾ ಗಂಡಸರದಕ ಕೆಟ್ಟ ಚಾಳಿ ! ಇದ್ದದ್ದರಾಗ ಚಟ್ನೀ ಭಕ್ಕರೀ ತಿಂದರಲಿಕ್ಕೆ ಬರೂದಿಲ್ಲೇನು ? ಈಗ ನೋಡು, ಹಬ್ಬಾ–ಹುಣ್ಣಿವಿ ಅನಕೋತ ಅತ್ತೆವರು ಹೇಳಿದಂಗ ಕುಣಿಯೋದು; ಹಾಳು ಮಾಡೋದು !

ದ್ವಾ :— ಹಂಗಾರ ಇನ್ನ ಅತ್ತೆವರಿಗೆ ಪಾಯಗೊಡೂದಿಲ್ಲ ಅನಬಾರದಕ ಲಕ್ಷ್ಮ್ಯಂಬಾಯರ ಸರಕಾರ !

ಲಕ್ಷುಂ :— ತೆರಸಿಲ್ಲದ ಖರ್ಚುಮಾಡಿದರ ನಾಯಾಕ ಹಾಯಗೊಡಲಿ ? ನಮ್ಮಳತ್ಯಾಗ ನಾವಿರಬೇಕು ! ನಾವು, ನಮ್ಮ ಮಕ್ಕಳು, ಅರಿವಿ, ಅಂಚಡಿ,—ಬೆಳ್ಳಿ ಬಂಗಾರ—ಕಾಣಲಿಲ್ಲ. (ಹಿಂದೆ ಮುಂದೆ ನೋಡಿ) ನೋಡು ದ್ವಾರಕಾ, ಈಗ ಪಯಿನ್ನಸ್ನ (ನಾದಿನಿಯನ್ನ)— ತಮ್ಮ ಮಗಳನ್ನ—ಅತ್ತೀಮನಿಯಿಂದ ಕರಸಿಕೊಂಡಾರ ತವರಮನಿಗೆ, ಅಭ್ಯಾಸಮಾಡಲಿಕ್ಕೆ. ಆಕಿಗೆ ಬೇಡಿದಾಗ ವೀರಾಗಬೇಕು, ಶ್ರೀಖಂಡಾಗ ಬೇಕು; ಮುಡಿದುಡುಡಿದು ನಮ್ಮ ಮೈಮಾತ್ರ ಖಂಡ ತಗೀಬೇಕು! ಮ್ಯಾಲ ನೋಡು, ಆಕಿಗೆ ಇಲಕಲ್ಲ ಸೀರಿ ಕೊಡಿಸು, ಮುತ್ತಿನ ಬಳಿ ಮಾಡಿಸು ಅಂತ ಗಂಟು ಬಿದ್ದಾರ. ನನಗ ಸಾಕಾಗಿ ಹೋಗೇದ ತಾಯಿ !

ದ್ವಾ :— ಹಿಂಗೇನು ? ಇನ್ನೆಂಗ ಮಾಡತಾರ ನಿನ್ನ ಯಜಮಾನರು ?

ಲಕ್ಷುಂ :— ಅವರೇನು ಮಾಡತಾರ....ಯಜಮಾನರೇನs ನನ್ನ ಕಡೆ ಬಂದ ಸ್ಯಾಲೆ ? ನಾ ಸೊಚ್ಚ ಮೇಳಿ ಬಿಡತೀನಿ, ಒಂದು ಪೈ ಕೊಡೂದಿಲ್ಲಂತ. 'ಗುಡ್ಡೆಧಂಗ ಸಾಲಕೂತಕದ, ಅದನ್ನ ಮೊದಲ ಮುಟ್ಟಿಸಜೇಕಾದರನs ಕಣ್ಣೀರು ಕಪಾಳಕ್ಕ ಬರತಾವ ' ಅಂತ !

ದ್ವಾ :— ಖರೇವಂಧರ ಇಷ್ಟು ನಾಲಾಗೇದೇನs ಶಾರಿ ?

ಲಕ್ಷುಂ — ಹುಚ್ಚೀ, ಕಾಲೇಜಕ್ಕೆ ಹೋದವರಿಗೆ ವ್ಯವಹಾರಜ್ಞಾನ ಇರೋದಿಲ್ಲ ಅಂತ ಅವಕ್ಕs ಅಂತಾರ ನೋಡು ! ಸುಳ್ಳೊಂದು ಸೂಟ್ಕೊಂದು ಹೇಳಬೇಕು !

ದ್ವಾ :— ಹಿಂಗs ? ಅಂಥಾ ವ್ಯವಹಾರಜ್ಞಾನ ಇನ್ನೂ ಕಲಿತ್ನಿ ಬಿಡು ತಾಯಿ ! ಅಲ್ಲ, ಪಯಿನ್ನ ಎಂದ ಹೋಗತಾಳ ?

ಲಕ್ಷ್ಮಿ :— ಆಕ್ಯಾಕ ಹೋಗತಾಳ ಹೋಗೂ ಅನ್ನೂತನಕಾ? ನಾನೂ ನೋಡೂ ತನಕಾ ನೋಡತೀನಿ. ಅಲ್ಲಿಂದ ಇನ್ನೊಂಮ ಏಳೆಂಟು ದಿನಕ್ಕ 'ಯಾರೋ ನಿಮ್ಮತ್ತೀಮನಿಯನರು ಬಂದಿದ್ದರು, ನಿಮ್ಮ ಮನ್ಯಾಗ ಯಾರಿಗೋ ಭಾಳ ಜಪ್ಡಾಗೇದಂತ, ನಾಳಿನ ಗಾಡಿಗೇ ಜರೂರ್ ಕಳಿಸಂತ ಹೇಳ್ಯಾರ' ಅಂತ ಹೇಳಿ ಹೊತ್ತುಹಾಕಿ ಬಿಡತೀನಿ!

ದ್ವಾ :— ಭಾಳ ಜಾಣಿ ಬಿಡು ನೀನು! ನಿನ್ನ ಮಾತಿನಾಗ ನಮ್ಮ ಸಿನೇಮಾ ಸುರು ಆಗಿ ಹೋಗಿದ್ದೀತು. ಈಗರ ಬರತೀಯಿಲ್ಲೋ? ಏಳು! (ಎದ್ದು ನಿಲ್ಲುವಳು)

ಲಕ್ಷ್ಮಿ :— ನಾಳೆ ಹೋಗೋಣೇಳಕ ಧ್ವಾರಕಾ! ನಾ ಕರಕೊಂಡು ಹೋಗತೀನಿ ಕೂಡಿವತ್ತ !

ದ್ವಾ :— ಆಕಗಿ ಹೋತು. ನೀ ಜೀನತನದ ಸಂಸಾರ ಮಾಡುವಾಕಿ ನೀ ಏನು ಕರಕೊಂಡು ಹೋಗತೀ....ನಾ ಏನು ಕಾಣತೀನಿ! ನಾ ಒಬ್ಬಾಕೆರಕ ಹೋಗತೀನಿ ಬಿಡವ್ವ !

ಲಕ್ಷ್ಮಿ :— (ಎದ್ದು ಕೈ ಹಿಡಿದು ಕೂಡಿಸಿ) ಕೂಡಕ. ಸಿನೇಮಾಕ್ಕ ಹೆಂಗಸರಿಗೆ ಹಿಡಿಯೋ ಖರ್ಚೂ ಅಷ್ಟಕ ಆದ. ಎರಡಾಣೆ, ಬಹಳಾದರ ನಾಕಾಣೆ. (ಖುಲಮಿಯಿಂದ ಕೂಡಿಸಿ) ಛಹಾಕಿಟ್ಟೀನಿ, ತಗೊಂಡು ತಿರುಗ್ಯಾಡಲಿಕ್ಕೆ ಹೋಗೋಣಂತ! ಇಲ್ಲಿ ನೋಡು, ಈ ಪುಣ್ಯಾತಗಿತ್ತಿ....

ದ್ವಾ :— ಯಾರು? ವಯನ್ನನೋ ಅತ್ತೊ್ಯ?

ಲ :— ಇಬ್ಬರೂ ಒಂದಕ ಅನ್ನು, ನಾ ಹೇಳೋದು—ಈ ಅತ್ತೆವರು 'ಮಗಾ ಮಗಾ' ಅಂತ ಎಷ್ಟರಕ ಗೊಂಬೀಕುಣಿಸಿಧಂಗ ಕುಣಿಸೋಮ? ಅದೇನೋ ಇವರಿಗೆ ಸಣ್ಣವರಿದ್ದಾಗ ಭಾಳ ಜೇರಾಗಿತ್ತಂತ, ಆಗ ಬೇಡಿಕೊಂಡಾರಂತ: ನುಗ್ಗೀಕೇರಿ ಹಣಮಪ್ಪಗ ನೇವಿದ್ಯಾಮಾಡಸಬೇಕು, ನೂರು ಮಂದಿಗೆ ಊಟಕ್ಕ ಹಾಕಬೇಕೂ ಅಂತ. ಈಗ ಒಂದೇ ಸವನೆ ಗಂಟು ಬಿದ್ದಾರ ಅವನ್ನ ಮಾಡಿಸು ಅಂತ. ಏನಾರಕ ನೆಗಡಿ ಕೆಮ್ಮು ಬಂದರಾತು, 'ನೀ ಹರಕೆ ನಡಿಸವೊಲ್ಲಿ ಅದಕ್ಕಕ ಪಗಲೆಲ್ಲಾ ಜಡ್ಡಿಗೆ ಬೀಳತಿ' ಅಂತಾರ ಅವರಿಗೆ ' ನಾ ಅರ ಎಲ್ಲಿ ಮಾಡಲಿಕ್ಕೆ ಬ್ಯಾಡಂತೀನಿ. ಆದರ ನೂರು ಮಂದಿಗೇ ಯಾಕ ಊಟಕ್ಕ ಹಾಕಬೇಕು?—ಅಂದರ ಕೇಳವ್ವೊಲ್ಲರು. ದಿನಾ ಅದರ ಕಾಲಾಗ ಲಗ್ಗಿಮುಗ್ಗಿ ಝುಗಳ!

ದ್ವಾ :— ತಿಳೀತು ಬಿಡು. ಅಲ್ಲ, ನಿಮ್ಮ ಮಾವಾ ಅವರು ಕೆಲಸ ಮಾಡತಾರಲ್ಲೇನು?

ಲ :— ಮಾಡಿದರೇನಾತು? ಅವರ ಪಗಾರ ಹಿಡಿಯೋ ಹಂಗಿಲ್ಲ, ಪೆಳ್ಳೀ ಸಾಲಿ ಮಾಸ್ತರು. ಹಳ್ಳ್ಯಾಗ ಆವರ್ನ ಬಿಟ್ಟು, ಅನುವು—ಆಪತ್ತು ನೋಡದೇ ಇವರು ಇಲ್ಲೇ ಒಂದು ಸೇರ್ಯಾರ ಮಗನ ಹತೀಲೆ; ನಮ್ಮ ತಲೀಮ್ಯಾಲೆ ಮೆಣಸರಿಲಿಕ್ಕೆ.... ಮತ್ತೇನವ?

ದ್ವಾ : ನೀ ಯಾಕ ಕೇಳತಿ ಇನ್ನ? ಅವರು ಮೆಣಸರವರ ನೀ ಖಾರಪುಡಿ ಅರಿ!

ಲ :— ಬಿಡತೀನೇನು? ಪಗಾರ ನನ್ನ ಕೈಯಾಗದ ಅಂತ ಹೇಳತೀನಿ. ಅಂದರ ತಾವಕ ಹಾದಿಗೆ ಬರತಾರ. ನನ್ನ ಹುಡುಗ ಮೋಹನ ಇನ್ನೂ ಬಂಗಾರವ ಉಡದಾರ ಕಂಡಿಲ್ಲ, ಜರದ ಟೊಪ್ಪಿಗಿ ಹಕ್ಕೊಂಡಿಲ್ಲ; ಸುಡಗಾಡ ನನಗ ಒಂದೆರಡು ಚೆಲ್ಲೋ ಜರದ ಸೀರಿ, ನಾಕೆಂಟು ಜರದ ಪೋಲ್ಕಾಗಳಿಲ್ಲ. ಎಲ್ಲಾ್ಯರ ಹೋದರ ಬಂದರ ಬೇಕೋ ಬ್ಯಾಡೋ? ತಿರಗಾಮುರಗಾ ಇನರ್ಶ್ಯ ಮೆರವಣಿಗಿ ನಡದವ!

ದ್ವಾ :—ಹೌದು ಮತ್ತ, ಇವೆಲ್ಲಾ ನೀ ಮೂವತ್ತು ರೂಪಾಯಿ ಧಾಗ ಮಾಡುವಾಕಿಯೇನು?

ಲ :— ಅದ್ಯಾಕಾದೀತು? ಮೊದಲ ಒಂದೆರಡು ತಿಂಗಳು ಬ್ಯಾಂಕಿನಾಗ ಸ್ವಲ್ಪಕ ಇಡತೀನಿ. ನನ್ನಾ್ಯರು ಕೇಳೂಅವರು? ಒಂದಿಷ್ಟು ಛಾಂದೀ ಕೊಂಡೀ ತಗೋಬೇಕು, ಅರವಿ ಅಂಜಡಿ ತಗೋಬೇಕು, ಮೋಪನಗ ಉಡದಾರ ಮಾಡಿಸಬೇಕು.... ... ಮೇಲೆ ನೋಡ್ತ ಎಣಿಕೆ ಹಾಕುವಳು.)

ದ್ವಾ :— ತೀರೀತು ಬಿಡವ್ವಾ; ಈಗ ನೂರಲ ಚಹಾ ಒಂದಿಷ್ಟು ತಗೋಬೇಕು!

ಲ :— (ಒಮ್ಮೆಲೆ ನೆನಪಾಗಿ ಚಿಟ್ಟನೆ ಎದ್ದು) ಹೌದು ನಡಿ. ಎಸರು ಬಂದಿದ್ದೀತು. ಒಳಗ ಹೋಗಿ ಚಹಾ ಕುಡಕೋತ ಮಾತಾಡೋಣು! (ಇಬ್ಬರೂ ಮನೆಯೊಳಕ್ಕೆ ಹೊರಡುವರು. ಅಷ್ಟರಲ್ಲಿ ಹಾಲಿನಾಕೆ ಹೊರಗಿನಿಂದ 'ಅಪ್ಪವರ' ಎಂದು ಕರೆಯುತ್ತ ಬರುವಳು.)

ಲ :— ಯಾರವರು? ಹಾಲಿನಾಕೇನು? ಯಾಕ ನೀಲವ್ವಾ?

ಹಾ :— ಅಪ್ಪವರು ಮನ್ಯಾಗಿದ್ದಾರೇನ್ರಿ?

ಲ :— ಎವಕ್ಕ?

ಹಾ :— ಪೈಲಾತಾರೀಕು ಈವತ್ತ. ಹಾಲಿನ ಲೆಕ್ಕಾ ಕೇಳೂಣಾಂತ ಬಂದಿದ್ದೆ.

ಲ:— ಅವರೆನಕ್ಕಬೇಕು? ಇನ್ನಮ್ಯಾಲೆ ನನ್ನಕ ಕೇಳು, ನಾನಕ ಕೊಡತೀನಿ!

ದ್ವಾ :— ಹೌದು ನೀಲವ್ವಾ, ಈವತ್ತಿನ ಹಿಡಿದು ಅವ್ವಾ ಅಷ್ಟೇ ಅಪ್ಪಾಅವರು!

ಹಾ :— (ನಗುತ್ತ) ಕ್ಷಾಂಗೇನರಿ? ನನಗೇನ ಶ್ಯಾಂವಿಕೆ ಬಿಡಿರಿ! ಬೇಸ್ಯಾತು. ಮತ್ತ ಐದ ರೂಪಾಯಿ ಆಗೇತಿ.

ಲ :— ಏನು ಐದುರೂಪಾಯ? ಅಧೆಂಗ ಅದು ಐದುರೂಪಾಯಿ? ಇನ್ನ ಹೇಳಿಧಂಗ ಕೊಡಲಿಕ್ಕೆ ಅವರಂತ ತಿಳಿದೀಯೇನು? ಎಲ್ಲಾ ಲೆಕ್ಕಾ ಹೇಳು ಬರಾಬರಿ!

ಹಾ :— ನಾಯಾಕ ಸುಳ್ಳಹೇಳಲೀರೀ.ಅವ್ವವರ! ಜನತ್ತ ಬೀರಿಗೆ ಎರಡು ಮೂವಾಯಿ ಹಾಲು, ಮತ್ತ ದಿನಾ ನಾಕು ಪಾವು.....

ಲ :— ಅವೆಲ್ಲಾ ಗೊತ್ತಿಲ್ಲ. ಸಂಜೀ ಹಾಲು ತಗೊಂಡು ಇನ್ನೊಂದು ಸ್ವಲ್ಪು ಬಿಟ್ಟು ಬಾ: ಆಗ ಲೆಕ್ಕಾಮಾಡಿ ನೋಟು ಬುರಿಸಿ ಕೊಡತೀನಿ!

ಹಾ :— ಕ್ಷಾಂಗಕ ಮಾಡತೀನಿ (ಹೋಗುತ್ತ) ಗಳಾನ ಕೊಡರೀ ಅವ್ವಾ, ಜಡಬಡಣಿ ಆಗೇತಿ (ಹೋಗುವಳು). (ಲಕ್ಷ್ಮಿ-ದ್ವಾರಕಾ ಇಬ್ಬರೂ ಒಳಗೆ ಹೋಗುವರು. ಹಾಲಿನಾಕೆ ಹಾಲಿನ ಪಾತ್ರೆಯಿಂದ ಹತ್ತಿಬುಟ್ಟಿ ಹಿಡಕೊಂಡು ತಾಂಬಾಯಿ ಮತ್ತು ದಮಾಜಾಯಿ ಬರುವರು.)

ರಮಾ :— ಅವ್ವಾ, ಈವತ್ತ ಪುರಾಣದಾಗ ಅಳಸೋಹಂಗ ಕತಿ-ಗಿತಿ ಹೇಳಿದರೇನು, ಕಣ್ಣೀರಿನ ಕಲೆ ಬಿದ್ದಾವ ಮಾರೀಮ್ಯಾಲೆ?

ತಾರಾಬಾಯಿ :— ಅಲ್ಲಽ ರಮಾ, ಇವು ಮುಕ್ಕದ ಕಣ್ಣೀರಲ್ಲ, ಸಂತೋಷದ ಕಣ್ಣೀರು!

ರ :— (ಆಶ್ಚರ್ಯದಿಂದ) ಸಂತೋಷದ್ದು? ಮಗನ ಮನ್ಯಾಗ ಕಾಲಿಟ್ಟ ಮ್ಯಾಲೆ ಈವತ್ತಽ ನೋಡು ನಿನಗ ಸಂತೋಷ ಆದ್ದು. ಅದ್ಯಾತಕ್ಕ ಸಂತೋಷದ್ದು?

ತಾ :— ರಮಾ, ಏನ ಹೇಳಲೆ, ಎಷ್ಟು ವರ್ಣನಾ ಮಾಡಲೆ ನನ್ನ ಮಗನ ಗುಣ? ಗುರುರಾಯ ಅಂದರ ಗುರುಗೋಳ ಹಂಗs ಇದ್ದಾನ ನೋಡು!

ರ :— ಇದೇನಽ ಅವ್ವಾ? ಹಗಲೆಲ್ಲಾ ಶ್ಯಾಪಿಸಿ ಕಲ್ಲೂಡಿಯುವಾಕಿ, ಈವತ್ತ ಹಿಂಗ್ಯಾಕ ವರ್ಣನಾ ಮಾಡತೀದಿ? ನನ್ನ ನಿನ್ನ ಕಂಡರ ಅಂವ, ಅವನ ಹೆಂಡತಿ ಅವರ ನೈ ದುಮು ದುಮು ಉರೀತಽದ.

ತಾ :— ಅದು ಸುಳ್ಳು ರಮಕ್ಕಾ. ಅವನ ಹೇಣ್ತಿ ಖೋಡಿ ಇದ್ದಾಳಂಬೂದು ಜಗತ್ತಿಗೇ ಜಾಹೀರವ. ಆದರ ಅವ ಮುತ್ತಿನಂಥಾ ಹುಡುಗ!

ರ :— ಮುತ್ತಿನಂಥಾ ಹುಡುಗ! ಅಲ್ಲ, ಅವ್ವಾ, ಪುರಾಣಕ್ಕ ಹೋಗೂ ಮುಂದ ಅಂವಗ ಬಾಯಿಗೆ ಬಂಧಂಗ ಬಯ್ದು 'ಕತ್ತಿ ಇದ್ದಾನ ಕತ್ತಿ!' ಅಂದೆಲ್ಲ?

ತಾ :— ನನ್ನ ತಪ್ಪಾತು. ರಮಾ, ಈಗಂವ ಬ್ಯಾರೇ ಮನಸ್ಯಾ ಆದ. ಹಳೇದೆಲ್ಲ ಹೋತು, ಹಾರಿಹೋತು!

ರ :— ಅದ್ಯಾಕ ಹಿಂಗಂತೀ? ಪುರಾಣೆಕ ಆಚಾರ್ರು ನಿನ್ನ ತಲ್ಯಾಗ ಏನಾರs ತುಂಬಿದರೋ ಏನು ಅಂತೀನಿ.

ತಾ :— ಯಾರೂ ಇಲ್ಲಕ್ಕಾ. ನಾನs ಮನಗಂಡೆ. ನೋದು ಪುರಾಣ ಬಿಟ್ಟಮ್ಯಾಲೆ ಒಬ್ಬಾಕೇ ಗುಡಿಯಿಂದ ಮನಿಗೆ ಬರತಿದ್ದೆ; ಅವ ಮನಿಯಿಂದ ತಿರಿಗ್ಯಾದಲಿಕ್ಕೆ ಹೊಂಟಿದ್ದ. ನಾ ಅವನ ಮಾರೀ ಸಹಿತ ನೋಡಲಿಲ್ಲ. ಅವನs ಹತೀಲೆ ಬಂದು, 'ಅವ್ವಾ' ಅಂತ ಭಕ್ತಿಯಿಂದ ಕರದು, 'ನೋಡು ಈವತ್ತ ಸೈಲಾ ತಾರೀಖು, ಪಗಾರಾತು, ಈ ಪಾಕೀಟಿನಾಗ ಎಲ್ಲಾ ಅದ, ನೀನs ಸಂಸಾರ ನೋಡಿಕೊ, ನಾ ಇನ್ನ ಉಸಾಬರಿ ಮಾಡೋದಿಲ್ಲ' ಅಂತ್ಹೇಳಿ ಹೊರಟು ಹೋಗಿ ಬಿಟ್ಟ. ಇದs ನೋಡು ಆ ಪಾಕೀಟು (ಕತ್ತೀ ಬುಟ್ಟಿಯೊಳಗಿಂದ ತಳದಲ್ಲಿ ಬಚ್ಚಿಟ್ಟ ಪಾಕೀಟನ್ನು ಎತ್ತಿ ತೋರಿಸುತ್ತಾಳೆ.)

ರ :— ಎಲ್ಲೆ ನೋಡೋಣ ಅವ್ವಾ! (ತಗೊಳ್ಳಲು ಹೋಗುವಳು)

ತಾ :— ಹೂ. ಹಿಡಿಬ್ಯಾಡ. ಹೋಗಹೋಗತಕ ಬಜಾಯಿಸಿ ಹೇಳಿದ: 'ಆಕೀ ಮುಂದ ಮತ್ತ ಮುಂದೀ ಮುಂದ ಹೇಳ್ಬ್ಯಾಡ, ಅವ್ವಾ' ಅಂತ.

ರ :— ಹೀಂಗ? ನನ್ನ ಮುಂದ ಹೇಳಿದೆಲ್ಲಾ!

ತಾ :— ನಿನಗೆ ಹೇಳಿದರೇನಾತು? ನೀ ಆಕೀನೂ ಅಲ್ಲ, ಮಂದಿನೂ ಅಲ್ಲ!

ರ :— ಹಂಗಾರ ಸ್ವಲ್ಪು ಹಿಡಿದು ನೋಡತೀನಿ (ಎತ್ತಿ ಸುತ್ತು ನೋಡಿ ಗಾಬರಿಯಿಂದ) ಅವ್ವಾ, ಇದರಾಗ ರೂಪಾಯಿ ರೊಕ್ಕಾ ಏನೂ ಕಾಣೂದಿಲ್ಲ. ಅಂವ ಏನೋ ಕುಚಾಷ್ಟಿ ಮಾಡಿರಬೇಕೇಳು!

ತಾ :— ಅದ್ಯಾಕಾದೀತು? ಅದರಾಗ ನೋಟ ಅವ ಎಲ್ಲಾ. ಈಗ ಬೇಕಂದರರ ಎಲ್ಲೆ ಸಿಗತಾವ ರೂಪಾಯಿ ರೊಕ್ಕ? ಎಲ್ಲಾ ಕಡೆ ನೋಟs ನೋಟು!

ರ :— ಇದ್ದೀತವ್ವಾ. ಕಚೇರ್ಯಾಗ ಬಂದೋಬಸ್ತ ಮಾಡೇ ತಗೊಂಡು ಬಂದಾನ. ಹರಿದು ನೋಡಲ್ಯಾ ಅವ್ವಾ?

ತಾ :— ಒಂದಿಷ್ಟು ಸುಮ್ಮಿರು ನೀನು. ಇಬ್ಬರs ಇದ್ದಾಗ ಒಳಗ ಹೋಗಿ ನೋಡೋಣ; ಈಗ ಆ ಸೆಟವಿ ಬಂದುಗಿಂದಾಳು!

ರ :— ಅಂಧಂಗ ವೈನಿ ಎಲ್ಲೆ ಹೋಗ್ಯಾಳೋ ಏನು?

ತಾ :— ಎಲ್ಲೇನು ಗೊತ್ತsನ ಅದ. ಅದೊಂದು ಟಿಸ್—ಪಿಸ್ ಅನಕೋತ ಸೊಟ್ಟ ಬೈತಲ ತಕ್ಕೊಂಡು, ಸೋಲ ಉಟಗೊಂಡು ಧುಬಲಿ ಬರತದಲ್ಲ, ಅದರ ಜೋಡಿ ಹೋಗಿದ್ದಾಳು ಹವಾ ತಿನ್ನಲಿಕ್ಕೆ! ತಿನ್ಲಿನ್ನ ಹವಾ, ಬರೇ ಹವಾ! ಪಗಾರೆಲ್ಲಾ ನನ್ನ ಕೈಯಾಗ ಸಿಕ್ಕೈತು, ಇನ್ನ ಮ್ಯಾಲೆ ಎಲ್ಲಾ ಕಾರಭಾರ ನನ್ನದು!

ರ :— ಹೌದು ಅವ್ವಾ, ಭಾಳ ಛೆಲೋ ಆತು ನೋಡು. ಆಕೆ ಘಟ್ಟ ಘಜೀತಿ ಮಾಡೂಣ. ಇಷ್ಟು ದಿವಸ ಗಂಡನ ಕೆವಿ ಚುಚ್ಚಿ-ಚುಚ್ಚಿ, ನಮ್ಮನ್ನ ಚಿಟುಕುಮುಳ್ಳಾದಿಸತಿದ್ದಳು. ಇನ್ನ ಮ್ಯಾಲೆ ಹೇಳಿದ ಕೆಲಸಾ ಮಾಡಿಕೋತ ಹಾಕಿದ್ದುಂಡು ಬೀಳಲಿ.

ತಾ :— ಝಕ್ಕಸ್ತsನ ಬೀಳತಾಳ. ಇನ್ಯಾರು ಕೇಳತಾರ ಆ ನಾಜೂಕು, ಆ ಜೌಲು, ಆ ಮುರಕ? ನಾಕಕ್ಷರ ಇಂಗ್ರೇಜಿ ಕಲಿತವ್ವಕ್ಕ ಎಷ್ಟದು ದಿಮಾಕ ಮಾಡೋದು? ನಾಕು ಮನಿ ಕಸಬಳಿದ ಘಳಿಗ್ಗೆ 'ಅಯ್ಯsನನ್ನ ಕಾಲು ಹರಿತಾವರೆ' ಅಂಬೂಮು, ನಾಕುಕೊಡ ನೀರು ಜಗ್ಗಿದರಾತು, 'ನನಗ ಬಟ್ಟೆ ಬಂತರೇ, ನನ್ನ ಹೊಟ್ಟೆ ಕಡಿತದರೆ' ಅಂಬೂದು!

ರ :— ಮತ್ತ ಆಕಿ ಬುಬ್ಬುಣಚಾರ ಕೇಳಿ ಇಂವ ಗುರಣ್ಣಾ ಹಾಸಿಗಿ ಹಾಸಿ ಕೊಡೋದೇನು, ತಲೀ ಒತ್ತೋದೇನು? ಎಲ್ಲಾ ಮಜಾನೇ! (ನಗುವಳು).

ತಾ :— ಇನ್ನೋದು ರಮಾ, ಇಂಥಾದೆಲ್ಲಾ ಬಗಿಹರಿಯೋದಿಲ್ಲ ಅಂತ ಹೇಳಿಬಿಡತೀನಿ. ಮನೀ ಸೂಸಿ ಅಂದ ಮ್ಯಾಲೆ ಮನದಣಿ ಮಡೀಬೇಕು. ನಾನು ಬಡಪರು, ನೀರಿನವರ್ನ ಅಡಗಿಯವರ್ನ ಇಟುಗೊಂಡರ ಎಲ್ಲಿ ಪೂರೈಸತದ? ಜತೀ ಕಡಿಂದs ಜಗ್ಗಿ ಕೆಲಸಾ ತಗೊಂಡು ಎಲ್ಲಾ ಖರ್ಚು ಕಡಿಸಿ ಮಾಡಿ, ಇಪ್ಪತ್ತು ರೂಪಾಯಿಣಾಗ ಸಂಸಾರ ಮಾಡತೀನಿ!

ರ :— ಬರಾಬರಿ. ಮತ್ತ ಉಳಿದ ಅರುವತ್ತು ಏನ್ ಮಾಡತೀ ಮತ್ತ?

ತಾ :— ಕೂಡಿಹಕ್ಕೋತಕ ಹೋಗಬೇಕು. ಅಂದರ ಸಂಸಾರ! ಮನ್ಯಾಗ ಒಂದು ತೃಣುಕು ಭಂಗಾರಿಲ್ಲ, ಹೆಣ್ಣುಮಕ್ಕಳಿಗೆ ಒಂದು ವಸ್ತ ಮಾಡಿಸಿಕೊಟ್ಟಿಲ್ಲ, ಒಂದು ಛೆಲೋ ಸೀರಿ ಕೊಟ್ಟಿಲ್ಲ...

ರ :— ಹೌದು ಅವ್ವಾ, ನನಗ ನೀ ಅಂಧಂಗ.....

ತಾ :— ಅದಕ ನಾ ಹೇಳೋದು. ನಿನಗೇನು ಬೇಕಾದ್ದು ಮಾಡ ತೀನಿ ಅತಿಲ್ಲೊ—? ಅಲ್ಲಿಂದ ಗುರಣ್ಣನ ಪೆಸಿಂದ ಅದೊಂದು ಹರಿಕಿ ಹೊತ್ತದ್ದು ಹಣನುಪ್ಪಂದು, ಅದನ್ನ ತೀರಿಸಬ್ಯಾಡಕ ? ಭಾಳ ಉಗ್ರ ದೇವರು!

ರ :— ಹೌದು ತಾಯಿ, ಅದಕ್ಕ ನೂರಿನ್ನೂರು ರೂಪಾಯಿ ಖರ್ಚು ಮಾಡಲಿಕ್ಕೇ ಬೇಕು ಪೊದಲು. ಆದರ ಅದನ್ನ ನಾ ಎಂದೆಂದಿಗೂ ಮಾಡಿಸಿಗೊಟ್ಟಾಕಿ ಅಲ್ಲ.... ಅಂತಿದ್ದಳ್ಳಲ್ಲ ಆ ಮಾದಾಯ್ತಿ !

ತಾ :—ಆಕೇನಂತಾಳ ? ಆಕೀದೇನ ನಡೀತಕದ ಇನ್ನ ? ಹುಡುಗ ಬುದ್ಧಿ, ದೇವರು ದಿಂಡರು ಅಂಪ್ರ ಅವಕ್ಕೇನು ತಿಳೀತಕದ ? ತಲಿಗೆ ಬಡಿಯೋ ತನಕಾ ಈ ವಿಷಯ ಗೊತ್ತಾಗುದಿಲ್ಲ !

ರ :— ಆದರ ಅವ್ವಾ, ನೀ ಏನಕ ಅನ್ನು, ನಾ ನಾಳ ನಮ್ಮನಿಗೆ ಹೋಗಿ ಬಿಡತೀನಿ !

ತಾ :—ಅದ್ಯಾಕ ಹುಚ್ಚೀ, (ಹತ್ತಿರ ಎಳೆದು ಬೆನ್ನಸೀಲಿಕ್ಕೆ ಯಾಡಿಸಿ) ಅತ್ತೀಮನ್ಯಾಗ ಎಷ್ಟು ದುಡಿಸಿಗೋತಾರೋ ಏನೋ, ಸೋತು ಸುಣ್ಣಾಗಿದಿ; ಮಾರೀಮಾಲಿನ ಕಳೀನ ಹೋಗೇದ. ನಿನಗ ಬೇಕಾದ್ದು ಮಾಡಿಸಿಕೊಂಡು ತಿಂದು ಆರಾಮ ಕಾಲ ಹಾಜಿಕೊಂಡು ನಾಕೊಪ್ಪತ್ತು ಕೂಪು ! ಒಂದಿಷ್ಟು ನಿನ್ನ ಪೈಯರ ಮಾಂಬಿದ್ದು ನೋದತೀನಿ !

ರ :— ಹಂಗಲ್ಲ ಅವ್ವಾ, ನೀ ಎಲ್ಲಾ ಅಕ್ಕರತಿಯಿಂದ ಮಾಡತಿ. ಆಕಿ ಲಕ್ಷುಂಬಾಯಿ ನನ್ನ ಕಂಡರ ಸಿಟ್ಟು ಸಿಟ್ಟು ಹಾಯತಾಳ, ಕೌ ಕೌ ಪರಕೋತಾಳ !

ತಾ :— ಆ ಹೊಯ್ಮಾಲಿನ್ನ ತಗೊಂಡೇನ ಮಾಡತೀ ? ತವರ ಮನಿಗೆ ಅಂದರ ನನ್ನ ಮನಿಗೆ ಬಂದೀದಿ, ಅಂದಮ್ಮಾಲಾತು. ಆ ಹಳ್ಳೀ ಕೊಂಪ್ಯಾಗ ಅವರ ಹತೀಲೆ ಬ್ಯಾಡಂತ ಇಲ್ಲೇ ಕರಿಸೀನಿ. ಬೇಕಾವಷ್ಟು ದಿನ ಇದ್ದು ಸುಖಬಡು ! ಇಷ್ಟು ದಿನಾ ಹೇಣ್ತೀ ಮಾತು ಕೇಳಿ ಗುರುರಾಯ ಹುಚ್ಚುಚ್ಚು ಬಡೀತಿದ್ದ; ಈವತ್ತ ದೇವರ ಅನುಗ್ರಾದಿಂದ ಅವಗ ಬುದ್ಧಿ ಬಂತು, ಆಕೆದೆಲ್ಲಾ ಹೊರಬಿತ್ತು. ಮನ್ಯಾಗ ಆದರ ಆಕಿಗೆ ತಿಳಿದೀತು ಅಂತ, ಹಾದ್ಯಾಗ ಭೆಟ್ಟ್ಯಾಗಿ ಇದನ್ನ ಕೊಟ್ಟು ಹೋದ. ಎಂಥಾ ವಿನೇಕಿ ಅಂವಿ ಗುರುರಾಯ !

ರ :— ಹೌದವ್ವಾ ಭಾಳ ವಿವೇಕಿ ! [ನೀಲವ್ವ ಹಾಲಿನ ಜೊಂಬು ತಗೊಂಡು ಬರುತ್ತಾಳೆ.]

ನೀ :— ಅವ್ವಾ ಅವರಕ, ಹಾಲ ಹಾಕಿಸಿಗೋರಿ !

ತಾ :— ಯಾಕ್ಯ ನೀಲವ್ವಾ, ಈವತ್ತ ಇಷ್ಟ್ಯಾಕ ಲಗೂ ತಂದೇ ಹಾಲು ?

ನೀ :— ಅವ್ವಾನವರು ಹೇಳಿದಾರ್ರಿ.

ತಾ :— ಯಾರವರು ಅವ್ವಾವರು....ನನ್ನೊರತು ?

ನೀ :— ನೀವಲ್ಲರಿ, ಲಕ್ಷುಂಬಾಯರು ಹೇಳಿದಾರು ಮತ್ತ....

ರ :— ತಿಳೀತಕ ಲಕ್ಷುಂಬಾಯರಂತ ! ಅವರದೇನು ನಡೀತಕದ ಈ ಮನ್ಯಾಗ ? ನಮ್ಮವ್ವಗ ಅವ್ವಾವರನ್ನು, ತೀರ್ತಿಲ್ಲೊ ?

ನೀ :— ನಮಗೇನು ಬಿಡರಿ. ಇಬ್ಬರೂ ಒಕಟ. ಪೊದಲೀಟ ಹಾಲ ತಗೊಂಡು ಹಾಲಿನ ಲೆಕ್ಕಾ ಕೊಡಂತ ಹೇಳರಿ....

ತಾ :— ಯಾರಿಗೆ ಹೇಳೂದು ? ನಾನಕ ಕೊಡೂ ಆಕಿ. ತಿಳೀತಿಲ್ಲೊ ? ಗುರುರಾಯನ್ನ ಕೇಳಬ್ಯಾಡ; ಹೆಚ್ಚು ಕಡಿನು ಲೆಕ್ಕಾ ಹೇಳಬ್ಯಾಡ. ನಾಳಿನ ಹಿಡದು ಎರಡು ಪಾವು ಹಾಲು ಸಾಕು, ಅಷ್ಟಕ ತಗೊಂಬಾ !

ನೀ :— ಇದೇಸ್ರಿ, ಅವ್ವಾ ನಿಮ್ಮಾತಕ ತಿಳೀನಲ್ಲಪು. ಆಗಾಳಿ ಬಂದಿದ್ನಿ; 'ನಾನಕ ಇನ್ನವರು, ನಾ ಲೆಕ್ಕಾ ಕೊಡತೀನಿ' ಅಂತ ಲಕ್ಷುಂಬಾಯರು ಅಂದರು. ಈಗ ನೀವಕ ಕೊಡತೀನಿ ಅಂತೀರಿ.

ತಾ :— ಹಾ ! ಏನು ಲಕ್ಷುಂಬಾಯಿ ನಾ ಕೊಡತೀನಿ ಅಂದಳಕ? ಅಧೈಂಗದು ? ತವರಮನಿಯಿಂದ ದುಡ್ಡುಗಿಡ್ಡು ತರಿಸ್ಯಾಕೋ ಏನು ಸುಡಗಾಡು ?

ರ :— ಇಲ್ಲೇನು ಅವ್ವಾ. ಡೌಲು ಬಡೀಲಿಕ್ಕೆ ಅಂದಿದ್ದಾಳು!

ನೀ :— ನಮಗ ಬಾಳ ಆದಜಣೆ ಐತಿ. ಯಾರಕ ಗಡಾನ ಕೊಡರಿ ಆತು. ಹಾಲ ತಗೋಳಿಕ್ಕೆ ಅವ್ವಾವರನ್ನ ಕರೀತೀನಿ. ಅವ್ವನವರಕ ಅಪ್ಪನವರಕ [ಗಟ್ಟಿಸಿ ಒದರುವಳು.]

ರ :— ಏನಿರು ಅವ್ವಾ, ನೈನೀ ಒಳಗ ಅಡಿಗೀಮನ್ಯಾಗ ಇದ್ದಾಳ ಕಾಣೆನತದ!

ನೀ :— ಹೌದರೀ ಬಾಯೇರು ಒಳಾಕ ಕೂತಾರ.

ತಾ :— ಇರವಳ್ಳಾ ಯಕ. ನಮಗೇನು ಮಾಡತಾಳ ?

[ಲಕ್ಷುಂಬಾಯಿ, ವ್ಯಾರಕಾ ಅಡಿಗೆಮನೆಯಿಂದ ಹೊರಗೆ ಬರುತ್ತಾಳೆ.]

ಲ :— ಬಂದೆ ನೀಲವ್ವಾ ಬಂದೆ. ಒಳಗತ್ತ ಅಡಿಗೀಮನ್ಯಾಗ ಮಾತಾಡಿಕೋತ ಕೂತಿದ್ವಿವಿ. ನೀ ಬಂದದ್ದಕ.... (ಎನ್ನುವಷ್ಟರಲ್ಲಿ ತಲೆಯೆತ್ತಿ ತಾರಾಬಾಯಿ ರಮಾಬಾಯಿಯರನ್ನು ನೋಡಿ) ಎಲಾ, ನೀವು ಯಾವಾಗ ಬಂದಿರಿ. ಪುರಾಣ ಬಿಟ್ಟಿತೇನು ?

ತಾ :— ಹೂಂ ಪುರಾಣ ಬಿಟ್ಟೈತು! ನಿಮ್ಮ ಹರಟೇ ಪುರಾಣ ಮುಗೀತಿಲ್ಲೊ ? ನಳಿನ್ನು, ಪಾಲು ಹಾಕಿಸಿಕೊಂಡು ಒಳಗಿಡು, ಸುಡಿ ಉಟಕೊಂಡು ಅಡಿಗ್ಗೆ ಕೂಡು !

ಲ :— ನೀವಂತೂ ಒಳಗ ನಡೀರಿ, ನಾ ಎಲ್ಲಾ ನೋಡಿಕೋತೀನಿ!

ತಾ :— ಎಷ್ಟದು ಅರಿಕ್ಷಾ ! ಹಂಗದು ಮಾತಾಡೂದು ಹಿರೇಮನಸ್ಯಾರಿಗೆ ?

ಲ :— ಹಿರೇಮನಸ್ಯಾರು, ಹಿರೇಮನಸ್ಯಾದು! ಹಗಲೆಲ್ಲಾ ಯಾರು ಕೇಳತಾರ? ವ್ಯಾರಕಾ. ಆ ಮಾಲಿನ ಭಾಂಡಿ ತಂದು ಒಂದಿಷ್ಟು ಹಾಲು ಪಾಕಿಸಿಕೊ! (ವ್ಯಾರಕಾ ಭಾಂಡಿ ತಂದು ಹಾಕಿಸಿಕೊಳ್ಳುವಳು).

ತಾ :— ಲಕ್ಷುಂಬಾಯಿ. ನಾಲಿಗೀ ಭಾಳ ಹರೀ ಬಿದತೀದಿ ? ಮನ್ಯಾಗ ಏನು ನಿಂದಕ ಎಲ್ಲಾ ಕಾರಭಾರಂತ ತಿಳಿದೀಯೇನು ?

ಲ :— ತಿಳಿಯೋದೇನು ? ನಂದು ಕಾರಭಾರ ಇನ್ನವ್ವಾಳೆ!

ರ :— ಅನ್ನಯ್ಯಾ, ಏನ ಧಿಟ್ಟೀ ತಾಯಿ ಈಕ!

ಲ :—ಹೌದವ್ವಾ, ನಿಮ್ಮಷ್ಟು ಸಮ್ಮಣ ನಮ್ಮಲ್ಲಿ ಸಂಗ ಬರಜೇಕು ?

ತಾ :— ನಾಕ ಸುನ್ಮಿರು ಲಕ್ಷ್ಮಂಬಾಯಿ !

ಲ :— ಸುಮ್ಮನಿರಲಿಕ್ಕೆ ನಾ ಏನು ನಿಮ್ಮ ಕೈಯಾಗಿನ ಗೊಂಬಿ ಅಲ್ಲ. ನೀಲವ್ವಾ, ನಿನ್ನ ಲಿಕ್ಕಾ ನಾಳೆ ಮುಂಜಾನೆ ತಗೊಂಡು ಹೋಗು. ನೋಟು ಮುರಿಸಿಡತೀನಿ! ತಿಳಿತಿಲ್ಲೊ ?

ತಾ :— ನೀ ಯಾರು ಆಕಿಗೆ ಕೊಡೂ ಆಕಿ ? ನಾ ಎಲ್ಲಾ ಕೇಳಿ ನಾಳೆ ಕೊಡತೀನಿ. ನಾಳೆ ಮದ್ಯಾನದಾಗ ಬಾರಕ ನೀಲವ್ವಾ, ಈಗ ಹೋಗು.

ನೀ :— (ದಿಕ್ಕೆಟ್ಟಂತಾಗಿ) ಅಯ್ಯಽ ಏನನ, ಇದೇನ ಪಂಚೀತಿ ಬಂತಂತೀನಿ! ಯಾರರ ಗಜಾನ ಕೊಡರೀ ಅಪ್ಪನವರ, ನಾಕೆ ಬರತೀನಿ! (ಹೊರಡುತ್ತ) ಲೆಕ್ಕ ಕೊಡೂವಕ್ಕೂ ಅತ್ತೀ ನೂಸೀ ತಂದೇನು ! (ಹೋಗುವಳು)

ತಾ :—ಏ ಲಕ್ಷ್ಮಂಬಾಯಿ, ಅಂವ ಮನಿಗೆ ಬರಲಿ, ನಿನ್ನ ಫಜೀತಿ ಮಾಡಿಸತೀನಿ. ಆ ಧುಬಲಿ ನೀನೂ ಒಂದಾಗಿ ಏರೀರ ಮಾನಾ ತಗೊಳಿಕ್ಕೆ ನಿಂತೀರಲ್ಲ ?

ದ್ಯಾ :— ನಾ ಏನ ಮಾಡೀನರಿ ತಾರಾಬಾಯರ, ಸುಮ್ಮನ ಮಾತಾಡಿಸಲಿಕ್ಕೆ ಬಂದಿದ್ನೆ.

ಲ :— ಆಕೀ ಸುತ್ಯಾಕ ನಿಮ್ಮ ಕಟ್ಟವಾತು ? ಮನಿಗೆ ಬರಲಿ, ನಾನೂ ಫಜೀತಿ ಮಾಡಿಸತೀನಿ. ಈಗೆಲ್ಲಾ ಅಧಿಕಾರ ನನ್ನ ಕಡೆ ಬಂದದ!

ತಾ :— ಅದೆಲ್ಲಾ ಸುಳ್ಳು, ನನ್ನ ಕಡೆ ಬಂದದ !

ಲ :— ಬರೇ ಬಾಯಿಲೆ ಅಂದರೇನಾತು? ಇಲ್ಲಿ ನೋಡಿರಿ ಪಗಾರನಕ ನನ್ನ ಕಡೆ ಕೊಟ್ಟಾರ! (ಉಡಿಯೊಳಗಿಂದ ಪಾಕೀಟು ಎತ್ತಿ ತೋರಿಸುವಳು).

ತಾ :— ಅದೆಲ್ಲಾ ಪೊಟ್ಟಿ ಮಾತು. ನನ್ನ ಕಡೆ ಕೊಟ್ಟಾನ ಗುರುರಾಯ, ಇಲ್ಲಿ ನೋಡು. (ಹತ್ತಿ ಬುಟ್ಟಿಯಿಂದ ಪಾಕೀಟು ಎತ್ತಿ ತೋರಿಸುವಳು.) [ಇಬ್ಬರೂ ಜಕಿತರಾಗಿ ಒಂದು ಕ್ಷಣ ಮಿಕಿಮಿಕಿ ನೋಡುವರು.]

ರ :— ಅವ್ವಾ, ಇಬ್ಬರಿಗೂ ಪೆಂಗ ಕೊಟ್ಟನಕ ಅಣ್ಣಾ?

ದ್ಯಾ :— ಶಾರೀ, ಇದೇನ ಚಮತ್ಕಾರಕ? ನಿನಗರ್ಥ ಅವರಿಗರ್ಥ ಕೊಟ್ಟಾರೋ ಏನು ? ನೀ ಒದಿದು ನೋಡೇ ಇಲ್ಲ!

ಲ :— ಹೌದು, ಬಡಿನಾಟ ಬ್ಯಾಡಂತ ಕೊಟ್ಟಿದ್ದರೂ ಕೊಟ್ಟಿದ್ದಾರು. ಅವರ ತಲಿ ಈಗ ರಿಕಾಣದಾಗ ಎಲ್ಲ್ಯದ ?

ತಾ :— ಅವಗೇನಾಗ್ಯೇದ ಧಾಡಿ, ನನ್ನ ಕಡೆ ಕಟ್ಟಿಸರ ಪಗಾರ ಕೊಟ್ಟಾನ; ನಿನ್ನ ಕಡೆ ಸುಳ್ಳ ಪಳ್ಳ ಕಾಗದ ಪುಡಿಕೆ ಕೊಟ್ಟಾನ !

ದ್ಯಾ :— ಶಾರಿ, ಒದದ ನೋಡೆರ ನೋಡು; ಏನರ ಅದ ಒಳಗ!

ಲ :— (ಒಡೆಯುತ್ತ) ನನಗ ಖಾತ್ರೀ ಅದ ಅದರಾಗ ನೋಟು ಇರಲಿಕ್ಕೇ ಬೇಕು ! (ಒಡೆದು ದಪ್ಪ ಕಾಗದದಲ್ಲಿ ಬರೆದ ಒಂದು ಪತ್ರವನ್ನು ಪೂರ್ತಿ ನೋಡಿ, ಒಳಗೆ ಹಣಕಿ ನೆಟ್ಟಗೆ ತಪಾಸ ಮಾಡಿ ನೋಡಿ, ನೋಟಿಲ್ಲದ್ದಕ್ಕೆ ಜೋಲುಮೋರೆಯಾಗಿ) ಇದರಾಗ ಕಾಗದೊಂದು ಅದ.

ರ :— ಪೆಂಗಾತು ಫಟ್ಟಫಜೀತಿ ಠಾಣೇಸರಕಾರದ್ದು !

ತಾ :— ನಾ ಹೇಳಿದ್ದಿಲ್ಲ ? ಅಂವ ಯಾರು, ನನ್ನ ಮಗ!

ಶೇಲಛಾ

ಎಂಟೇಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡಿ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ ! ಲಿವರ್, ಹೊಟ್ಟೆನೋವು, ಗುಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ ! ಕ್ವೈನ್ಯಾನ್ ಬದಲು ವೈದ್ಯ–ಡಾಕ್ಟರರು ದವಾಖಾನೆಗಳಲ್ಲಿ ಪಾಸರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧೫-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ದ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಪೂರ್ತಿ ಏಜಂಟರು ಬೇಕು

ಶೇಲಛಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಧೂಕಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ದ್ಯಾ — ನೀ ಯಾರ ಕೈಯಾಗೂ ಕೊಟ್ಟಿಲ್ಲ: ನೋಟೆದ್ದರ ಎಲ್ಲಿ ಹೋಗತಿದ್ದನ್ನ ?

ತಾ :— ಅದರಾಗೆಲ್ಲಿ ಬರಬೇಕು ನೋಟು ? ಇದರಾಗವ !

ರ :— ಅವ್ವಾ, ನೀ ಹೇಳೂದು ಖರೇ ಕಾಣಸ್ತದ. ಆದರೇನ ನೇನು ? ತೆಗೆದು ನೋಡೇ ಬಿಡೂಣ ? ಅಂದರ ಇವರ ಮಾರೀನ್ಯಾಗ ಹೊಡದಂಗಾಗತಾದ. (ಸಾಕಷ್ಟು ತೊಗೊಂಡು ಒಡೆದು, ಎಲ್ಲ ಕಡೆ ನೋಡುತ್ತ, ಒಂದು ದಪ್ಪ ಕಾಗದದಲ್ಲಿ ಬರೆದ ಪತ್ರವನ್ನು ಮಾತ್ರ ಕಂಡು ಪೆಚ್ಚಾಗಿ) ಇದರಾಗಿಲ್ಲೇ ಇಲ್ಲ !

ತಾ :— ಅಧೆಂಗ ಸಾಧ್ಯ ? ಇಲ್ಲಿ ತಾ ನೋಡೂಣ (ನೋಡಿ ಇಲ್ಲೆಂದು ನಿಸ್ಪೃಹಳಾಗುವಳು)

ಲ :—ಆತು, ನನಗಂತಿವ್ವಿ. ನಿಮ್ಮ ಮಾರಿಗೂ ಆರತೀ ಜೋಳ ಘಂಗಾತಕ ರಮಾಬಾಯರ ?

ರ :— ನನಗ್ಯಾಕಂತೀದಿ ? ಸಂದೇನು ಸಂಬಂಧ ? ನಿಮ್ಮ ನಗ ನೇನೊ, ನೀಪೇನೊ !

ತಾ : – ಏನು ಲುಚ್ಚಾ ಬಂದಾ ಗುರ್ತ್ಯಾ ? ಅಧೆಂಗ ಹೂದೀ ಹುಟ್ಟಗುಣ? ಕಡಿತನಕಾ ನುಗ್ಗಿ, ಕಡಿತನಕಾ ನೋಡ !

ದ್ಯಾ :— (ಕತ್ತ ಕಣ್ಣಟ್ಟು ನೋಡಿ) ಇದರಾಗ ಏನೋ ಬರವ ನೋಡು ಬಾ !

ಲ : ತಗೊಂಡೇನು ಮಾಡೂದು ತನ್ನ ? ನೀ ಬೇಕಾದ ಓದತಿವ್ವರ ಓದು ! (ಪ್ಯಾಕಿಟ್ ಒಡೆದೊಗದಂತೆ ರಮಾ ಪಾಪ. ಯು ಕಸ್ಪ ಪತ್ತರದ ಪಾಕೀಟಿನಲ್ಲಿಯ ಪತ್ರವನ್ನು ಆ ಸ್ಪಿನ್ಜಿ ಓದುತ್ತಾಳೆ.)

ತಾ :— ನಾಕ ಸುಮ್ಮಿರು ಲಕ್ಷ್ಮಂಬಾಯಿ !

ಲ :— ಸುಮ್ಮನಿರಲಿಕ್ಕೆ ನಾ ಏನು ನಿನ್ಮ ಕ್ಯೆಯಾಗಿನ ಗೊಂಬಿ ಆಲ್ಲ. ನೀಲವ್ವಾ, ನಿನ್ನ ಲೆಕ್ಕಾ ನಾಳೆ ಮುಂಜಾನೆ ತಗೊಂಡು ಹೋಗು. ನೋಟು ಸುರಿಸಿಡತೀನಿ! ತಿಳಿತಿಲ್ಲೊ ?

ತಾ :— ನೀ ಯಾರು ಆಕಿಗೆ ಕೊಡೂ ಆಕಿ ? ನಾ ಎಲ್ಲಾ ಕೇಳಿ ನಾಳೆ ಕೊಡತೀನಿ. ನಾಳೆ ಮದ್ಯಾನದಾಗ ಬಾರಕ ನೀಲವ್ವಾ, ಈಗ ಹೋಗು.

ನೀ :— (ಎದ್ದಿಟ್ಟಂತಾಗಿ) ಅಯ್ಯಕ ಶಿವನ, ಇದೇನ ಸಂಜೀತಿ ಬಂತಂತೀನಿ! ಯಾರರ ಗಡಾನ ಕೊಡರೀ ಅಪ್ಪಸರ, ನಾಕಿ ಬರತೀನಿ! (ಹೊರಡುತ್ತ) ಲೆಕ್ಕ ಕೊಡೂವಕ್ಕೂ ಚಿತ್ತೀ ಸೊಸೀ ತಂದೀನಕ ! (ಹೋಗುವಳು)

ತಾ :—ಏ ಲಕ್ಷ್ಮಂಬಾಯಿ. ಅಂವ ನುನಿಗೆ ಬರಲಿ, ನಿನ್ನ ಫಜೀತಿ ಮಾಡಿಸತೀನಿ. ಆ ಮೆಬಲಿ ನೀನೂ ಒಂದಾಗಿ ಏರೀರ ಮಾನಾ ತಗೊಳಿಕ್ಕೆ ನಿಂತೀರಲ್ಲ ?

ದ್ಯಾ :— ನಾ ಏನ ಮಾಡೀನರಿ ತಾರಾಬಾಯರ, ಸುಮ್ಮನಕ ಮಾತಾಡಿಸಲಿಕ್ಕೆ ಬಂದಿದ್ದೆ.

ಲ :— ಆದೇ ಸುತ್ಯಾಕ ನಿಮ್ಮ ಕೆಟ್ಟನಾತು ? ಮುನಿಗೆ ಬರಲಿ, ನಾನೂ ಫಜೀತಿ ಮಾಡಿಸತೀನಿ. ಈಗೆಲ್ಲಾ ಅಧಿಕಾರ ನನ್ನ ಕಡೆ ಐತಿ!

ತಾ :— ಆದೆಲ್ಲಾ ಸುಳ್ಳು, ನನ್ನ ಕಡೆ ಬಂದವ !

ಲ :— ಬರೇ ಬಾಯಿಲೆ ಅಂದರೇನಾತು? ಇಲ್ಲಿ ನೋಡಿರಿ ಪಗಾರನಕ ನನ್ನ ಕಡೆ ಕೊಟ್ಟಾರ! (ಉಡಿಯೊಳಗಿಂದ ನಾಕೇಟು ಎತ್ತ-ತೋರಿಸುವಳು).

ತಾ :— ಆದೆಲ್ಲಾ ಮೊಟ್ಟ ನಾತು. ನನ್ನ ಕಡೆ ಕೊಟ್ಟಾನ ಗುರುರಾಯ. ಇಲ್ಲಿ ನೋಡು. (ಹತ್ತಿರಬಂದು ಉಡಿಯಿಂದ ನಾಕೇಟು ಎತ್ತಿ ತೋರಿಸುವಳು.) [ಇಬ್ಬರೂ ಚಕಿತರಾಗಿ ಒಂದು ಕ್ಷಣ ನಿಃಶಬ್ದರಾಗಿ ನೋಡುವರು.]

ರ :— ಅಣ್ಣಾ, ಇಬ್ಬರಿಗೂ ಹೆಂಗ ಕೊಟ್ಟನಕ ಅಣ್ಣಾ?

ದ್ಯಾ :— ಶಾರೀ, ಇದೇನ ಚಮತ್ಕಾರಕ? ನಿನಗರ್ಧ ಅವರಿಗರ್ಧ ಕೊಟ್ಟಾರೋ ಏನು ? ನೀ ಒದಿದು ನೋದೇ ಇಲ್ಲ!

ಲ :— ಹೌದು, ಬಡಿಪಾಟ ಬ್ಯಾದಂತ ಕೊಟ್ಟಪ್ಪನೂ ಕೊಟ್ಟಿದ್ದಾರು. ಅವರ ತಲಿ ಈಗ ರಿಕಾಣದಾಗ ಎಲ್ಲ್ಯದ ?

ತಾ :— ಅವನೇನಾಗ್ಯೇವ ಧಾಡಿ, ನನ್ನ ಕಡೆ ಕಟ್ಟಿಸರಿ ಪಗಾರ ಕೊಟ್ಟಾನ; ನಿನ್ನ ಕಡೆ ಸುಳ್ಳೆ ಪಳ್ಳೆ, ಕಾಗದ ಪುಡಿಕೆ ಕೊಟ್ಟಾನ !

ದ್ಯಾ :— ಶಾರಿ, ಒದದ ನೋಡೆರ ನೋಡು; ಏನರ ತಪ್ಪ ಒಳಗ!

ಲ :— (ಒಣಮುತ್ತ) ನನಗ ಪಾತ್ರೀ ಅವ ಅದರಾಗ ನೋಟು ಇರಲಿಕ್ಕೇ ಬೇಕು ! (ಒಡದು ದಪ್ಪ ಕಾಗದದಲ್ಲಿ ಬರೆದ ಒಂದು ಪತ್ರವನ್ನು ಮಾತ್ರ ನೋಡಿ, ಒಳಗೆ ಹಣಕಿ ನೆಟ್ಟಗೆ ತಿರುಪಿ ನೋಡಿ, ನೋಟಲ್ಲದ್ದಕ್ಕೆ ಜೋಲುಮೋರೆಯಾಗಿ) ಇದರಾಗ ಕಾಗದೊಂದು ಅವ.

ರ :— ಹೆಂಗಾಮ ಫಜೀತಿ ರಾಣೀಸರಕಾರದ್ದು !

ತಾ :— ನಾ ಹೇಳಿದ್ದಿಲ್ಲ ? ಅಂವ ಯಾರು, ನನ್ನ ನುಗ!

ಶೀಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ ! ಲಿವರ್, ಹೊಟ್ಟೆನೋವು, ಪುಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ ! ಕ್ವೀನ್ಸಾನ್ ಬದಲು ವೈದ್ಯ—ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೮೦ಕ್ಕೆ ೧-೧೫-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ದ ನಾಡಿದವರಿಗೆ ೧೦೦೦ ರೂವಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು

ಶೀಲಧಾ ಕೆಮಿಕಲ್ ಕೆಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಧಾಕಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನರಾ

ದ್ಯಾ — ನೀ ಯಾರ ಕ್ಯೆಯಾಗೂ ಕೊಟ್ಟಿಲ್ಲ: ನೋಟಿದ್ದರ ಎಲ್ಲೆ ಹೋಗತಿದ್ದವ್ವ ?

ತಾ :— ಆದರಾಗೆಲ್ಲಿ ಬರಬೇಕು ನೋಟು ? ಇದರಾಗನ !

ರ :- ಅಣ್ಣಾ, ನೀ ಸುಮ್ಮಾದು ಏರೀ ಕಾಣಸ್ಯದ. ಆದರೇನು ನೇನು ? ತೆಗೆದು ನೋದೇ ಬಿಡೂಣ ? ಅಂದರ ಇವರ ನೂರೀನ್ಯಾಲೆ ಮೊದಲಾಗತಕದ. (ಪಾಕೆಟ್ ಅ ತೊಗೊಂದು ಒಜೆನು, ಎಲ್ಲ ಕಡೆ ನೋಡಿ ಹುಡುಕಿ, ಒಂದು ದಪ್ಪ ಕಾಗದವನ್ನ ಬರೆದ ಪತ್ರವನ್ನು ಮಾತ್ರ ಕಂಡು ಕೆಟ್ಟಾಗಿ) ಇನರಾಗಿಲ್ಲೇ ಇಲ್ಲ !

ತಾ :— ಇದೆಂಗಸ ನನಾ ? ಇಲ್ಲಿ ತಾ ನೋಡೂಣ (ನೋಡಿ ಇಲ್ಲೆಂದು ನಿಸ್ಕಲಳಾಗುವಳು)

ಲ :—ಆತಕ, ನನಗಂತಿಪ್ಪಿ ? ನಿಮ್ಮ ಮಾರಿಗೂ ಆರತೀ ಬೆಳಗಿ-ಘಂಗಾತಕ ರಮಾಬಾಯರ ?

ರ :— ನನಗ್ಯಾಕಂತೀದಿ ? ಸಂಬೇನು ಸಂಬಂಧ ? ನಿಮ್ಮ ನಗಾ-ಬೇನೂ, ನೀಬೇನೂ !

ತಾ : - ಏನು ಲುಚ್ಚಾ ಇಂವ ಗುರ್ತಾ ? ಅಲಂಗ ಹೋದೀತು ಹುಟ್ಟಗುಣ ? ಕಡಿತನಕಾ ಸುನ್ನ, ಕಡಿತನಕಾ ಸೋಸ !

ದ್ಯಾ :— (ಪತ್ರ ಕಣ್ಣಿಟ್ಟು ನೋಡಿ) ಇದರಾಗ ನಿನ್ನೂ ಬರದವ ನೋಡು ಶಾರ !

ಲ : - ಕಗೊಂಬೇನು ಮಾಡೂದು ತನ್ನ ? ನೀ ಬೇಕಾದರ ಓದಿಕೊಳ್ಳರ ಓದು ! (ದ್ಯಾರಕಾ ಏನೊಂದೂ ಗಮನಿಸದಂತೆ ತನ್ನ ಕಾಯಿ. ಯೂ ತನ್ನ ಪತ್ರದ ಪಾಕೇಟಿನದ್ದಿಯ ಪತ್ರವನ್ನು ನ ಸ್ಪರ್ಶಿಸಿ ಓದುತ್ತಾಳೆ.)

ದ್ವಾ:— (ಗಟ್ಟಿಸಿ ಪತ್ರವೋದುತ್ತ "ಈ ಮನ್ಯಾಗ ಹತ್ತರಿದ್ದೂ ಜಪ್ಪಂದರ **ಕೂಡಲಾರದ ಕಣ್ಣನ.** ಅವು ಇರೋತನಕ ಸುಖದಿಂದ ಸಂಸಾರ ಮಾಡೋದು ಸರ್ವಥಾ ಸಾಧ್ಯ ಇಲ್ಲ....ಅಂತ ನಾ ಮನ ಗಂಡಂಗಾತು. ಎರಡೂ ಕಡೆ ತೂಕ ಹಿಡಿಯೋದರಾಗ ನನ್ನ ತೂಕಾನಕ ತಪ್ಪಿ ಹೋತು, ತಲಿಯೆದ್ದು ಹುಚ್ಚು ಹಿಡಿಯೋದೊಂದಕ ಉಳಿದದ! ಇನ್ನ ಬಂದ ಪಗಾರೆಲ್ಲಾ ಯಾರಿಗರ ದಾನಧರ್ಮ ಮಾಡಿ, ನಾ ಸಂನ್ಯಾಸ ತಗೊಂಡು, ಎಲ್ಯಾರೆ ಅಡವೀಪಾಲಾಗಿ ಹೋಗಿಬಿಡತೀನಿ.

ಸೋತ ಸಂಸಾರಿ ಗುರುರಾಯ."

ರ:— ಅವ್ವಾ, ಈ ಪತ್ರದಾಗೂ ಅದೇ ಮಾತಕ ಬರದದ!

ತಾ:— (ಕಂರವುದ್ದಿ) ಏನ ಮಾಡಲೇ ನಾನು ಇವನ ವಾಗತ್ಯಾಪ ಮಾತಿಗೆ? ಸಂನ್ಯಾಸ ತಗೊತೀನಿ ಅಂತಾನಲ್ಲರೆ, ಎಲ್ಯಾರೆ ಅಡವೀ-ಪಾಲಾಗಿ ಹೋಗತೀನಿ ಅಂತಾನಲ್ಲರೆ, ಹೆಂಗ ಮಾಡಲೆ ?.... ..

ಲ:— ಹೆಂಗೇನು? (ಕೊರಳುದ್ದಿ) ಅವರು ಸಂನ್ಯಾಸ ತಗೋತಾರ, ನೀವು....ಕಾಶೀಯಾತ್ರಿಗೆ ಹೊರಡಿರಿ. ನಾ....ನಾ.... (ಕಣ್ಣಿಗ ಸೆರಗೊತ್ತಿ) ಎಲ್ಯಾರ ಕೆರೀ ಭಾವೀ ಬೀಳತೀನಿ!

ತಾ:— ಲಕ್ಷ್ಮಂಬಾಯಿ, (ಹತ್ತಿರ ಹೋಗಿ ಮೈದಡವಿ) ಹಂಗೆಲ್ಲಾ ಅಭದ್ರ ಆಡಬಾರದು! ಗಂಡಸರು ತ್ರಾಸಾತಿಗೊಂಡು ಹುಚ್ಚುಚ್ಚಾರ ಅಂತಾರಂತ ನಾವೂ ಹಂಗಸ ಮಾಡಬೇಕೇನು ? ಆದದ್ದಾತು ಮನಸ್ಸಿ-ನ್ಯಾಗಿನ ಮಂಡಿಗೀ ತಿಂದೆವಲ್ಲಾ ಇಬ್ಬರೂ....ಹೊಟ್ಟತುಂಬ ? ಇನ್ನ ಸಾಕು, ಇದ್ದಂಗ ಇರೋಣು!

ಲ:— ಏನು ಇದ್ದಂಗೋ ಏನೋ ಸುಡಗಾಡ! ನನ್ನ ಜೀವಕ್ಕ ನಾಕಾಗೇದ ತಾಯಿಾ (ತಲೆ ಹಿಡಿದು ನೆಲಕ್ಕೆ ಕೂಡರಬೀಳುವಳು).

(ದ್ವಾರಕಾ ಮತ್ತು ರಮಾಬಾಯಿ ಇವರ ಕೈಯಲ್ಲಿನ ಪತ್ರ ತಟ್ಟನೆ ನೆಲಕ್ಕೆ ಬೀಳುವುವು. ತಾರಾಬಾಯಿಯ ಕೈಯಲ್ಲಿ ಹತ್ತಿ ಬುಟ್ಟಿ ಸೊಟ್ಟಾಗಿ ಕೆಲವು ಬತ್ತಿಗಳು ನೆಲಕ್ಕುರುಳುವುವು. ಎಲ್ಲರ ದೃಷ್ಟಿ ಲಕ್ಷ್ಮಂಬಾಯಿಯು ಕಡೆ ಭಯಪೂರ್ಣವಾಗಿ ಧಾವಿಸುವುದು.)

[ತೆರೆ ಬೀಳುವುದು.]

ವಾಗ್ವಿಲಾಸ ಬುಕ್‌ಡಿಪೊ, ದುರ್ಗದಬೈಲು, ಹುಬ್ಬಳ್ಳಿ

ಇವರಲ್ಲಿ ದೊರೆಯುವ ಪುಸ್ತಕಗಳು

ಪೋಲೀಸಗಾಯಿಡು (ಕಲಕೋಟಿಕೃತ)	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೮—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦
ತರುಣ ಪತ್ನಿ	೦—೮—೦
ಕಲಿತರೆ ಹೀಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦ ೧೨—೦
ತತ್ವಲಾವಣಿ	೦—೪—೦

ಹಸಿವು

ಹಸಿವು ಹಸಿವೆಲ್ಲೆಲ್ಲು ಹಸಿವು ಹಸಿವು;
ಎಲ್ಲರನು ಆಡಸಿ ಪೀಡಿಸುತಿಹುದು ಹಸಿವು!
ರಾಷ್ಟ್ರನಾಯಕರಿಗೋ, ರಾಜ್ಯ ಗಳಿಕೆಯ ಹಸಿವು;
ಸೇನಾಧಿಪತಿಗಳಿಗೊ, ಸಮರಕೀರ್ತಿಯ ಹಸಿವು;
ವಣಿಕರಾಜರಿಗೆಲ್ಲ ಲಾಭಕೊಳ್ಳೆಯ ಹಸಿವು;
—ಅದರಿಂದ ಹಸಿವು ನಮಗೆ!
ಮಲಗಿದ್ದ ರಣಮಾರಿಯೆಚ್ಚತ್ತಳೆಂದೊ:
ನರಮಾಂಸ ನೆಣನೆತ್ತರುಣುವವಳ ಹಸಿವು
ತೀರಲಿಲ್ಲವಿನ್ನೂ;
ತಣಿಸಲವಳನ್ನ,
ಅವಳ ಪೂಜಾರಿಗಳು ಇಕ್ಕುತಿಹರಿಂದು
ಅವಳಿಗೌತಣವ;
ಅದಕಾಗೆ ಮಾಡುತಿಹರವರೆಲ್ಲ ಕೂಡಿ
ಮಂದಿ ಮಾರಣವ,
ನೆರಹಿ ರಣವ:
—ಅದರಿಂದ ನಮಗೆ ಹಸಿವು!
ಅವರ ಹಸಿವೆಮ್ಮ ಹಸಿವೆಲ್ಲಕ್ಕು ನಾವೆ ಬಲಿ ಕಟ್ಟಕಡೆಗೆ!
ಬರರವೇ ಇಳೆಬಾಳು, ಬರವೆ ಬಡವರ ಪಾಲು,
ಎಂದಿನಿಂದಿಲ್ಲಿವರೆಗೆ!

[ಮೇ ೧೯೪೪]

—ರಾಘವ.

ಓ ಎನ್ನ ಗುರುದೇವ!

'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ'
ಎಂದು ನುಡಿದನು ಅಂದು ಸಿಡಿಲನುಡಿ ಸರ್ವಜ್ಞ;
ಓ ಎನ್ನ ಗುರುದೇವ! ಈ ಮಾತ ನನೆಯುವರೆ
ನಾಳೆಯನು ಕಂಡ ಕವಿ ನಿನ್ನ ಕುರಿತಾಡಿದನೆ?

ಭಾವದಂತರ್ಮುಖತೆ ಹೂವಿನೊಲು ತಲೆಯೆತ್ತಿ
ನಗೆಬೀರಿ, ಸಂತಸವ ನಲಿ ಬೀರಿ, ಜಗದುಸಿರಿ-
ನೊಳು ಬೆರೆತು ಒಂದಾಗಿ, ಮುಂದಾಗಿ ನಾಳಿನೂ.
ಪೆಯ ನಾರಿ, ರವಿ ತೋರದಿಹ ನೋಟ ನೀಮುತಿಹೆ!

ರಸಿಕ ಲೋಕವನೆಲ್ಲ ಒಂದೆಡೆಗೆ ನಲೆತಂದು
ಭಾವಲೋಕದಿ ಅವರ ಕರೆದು ಓಲಾಡಿಸುವೆ;
ಬಾಳ ಕಟು-ಸಿಹಿಯಲ್ಲಿ ಸಹನೆ-ಸಂತಸವುಂಡು
ಕವನಿಸುವೆ, ಕಲೆಯ ಕುಂಚವಿ ಬರೆಮ ಜೀವನಕಳೆ!

ಕಲ್ಲನರಳಿಸಿ ಹೂವ ಮಾಡಿ ತೋರುವರುಂಟೆ!
ಸಿರಿ ನುಡಿಗೆ ಸೋಲದಿಹ ಕಲ್ಲಿನೆದೆಯವರುಂಟೆ?

—ಅತ್ರೇಯ

ಧೂಮ್ರವಲಯಗಳು

[ಲಘುಪ್ರಬಂಧ]

ಶ್ರೀ. ಸಚ್ಚಿದಾನಂದ ಶಿರೋಡಕರ, ಪುಣೆ

ಕೈಯಲ್ಲಿ ಕೆಲಸವಿಲ್ಲದಾಗ, ಕೈಕೊಂಡ ಕಾರ್ಯವು ಮುಗಿದಂತೆ ಎನಿಸಿದಾಗ, 'ಇನ್ನು ಸಾಕು, ಸುಖನಿದ್ದೆಯಲ್ಲಿ ಕಾಲ ಕಳೆಯುವ!' ಎಂದೆನಿಸಿದಾಗ, ವಿಚಾರಪಾತ್ರಗಳು ಮನೋರಂಗದಲ್ಲಿ ಪ್ರವೇಶಿಸಿ, ಅಜ್ಞಾನ-ಅನಾಸಕ್ತಿಗಳ ತೆರೆಯನ್ನು ಸರಿಸಿ, ಮೆಲ್ಲಮೆಲ್ಲಗೆ ತಮ್ಮ ಚಟುವಟಿಕೆಗಳನ್ನು ಆರಂಭಿಸಿ, ಕಾರ್ಯಕಲಾಪ ಮುಗಿಯಿತೆಂಬ ಮನೋವೃತ್ತಿಯಲ್ಲಿದ್ದ ಪನನ್ನು ಇನ್ನು ಮುಂದಿನ ಹಾಗೂ ಹೆಚ್ಚಿನ ಹಿರಿಮೆಯ ಕರ್ತವ್ಯಗಳ ಕಡೆಗೆ ಹೊರಡುವಂತೆ ಸೂಚಿಸುತ್ತವೆ, ಪ್ರೇರೇಪಿಸುತ್ತವೆ. ಮಂದವಾದ ಕ್ರಿಯಾಶಕ್ತಿಯು ಹಾಗೂ ಆತ್ಮಶಕ್ತಿಯು ವೇಗ (Momentum) ವನ್ನು ಹೆಚ್ಚಿಸಿ, ಕಾರ್ಯತತ್ಪರತೆಯನ್ನು ಪ್ರಜ್ವಲಿಸಿ, ಪ್ರಗತಿಶೀಲ ಪಾರಿಯಲ್ಲಿ ನಡೆದ ಯಶಸ್ಸೀ ಪ್ರವಾಸಕ್ಕೆ ಅವಶ್ಯವೆನಿಸುವ ಸಲಕರಣೆಗಳನ್ನೂ ಶಕ್ತಿ-ಸಾಮರ್ಥ್ಯಗಳನ್ನೂ ಪೂರಯಿಸುತ್ತವೆ. ಔದಾರ್ಯದಿಂದ ಸ್ಫೂರ್ತಿಗೊಂಡ ವಿಚಾರಗಳು– ಸತ್ಯ, ಸೌಂದರ್ಯ, ಪ್ರೇಮ, ದಯೆ, ಮಾಯೆ, ಮಾನವೀಯತೆ ಇವುಗಳಿಂದ ಪ್ರೇರೇಪಿತವಾದ ವಿಚಾರಗಳು– ಆದರ್ಶ ಪ್ರಗತಿಶೀಲರ ಪಾಹನಗಳು. ನಿಜವಾದ ಪ್ರಗತಿಶೀಲ ವಿಚಾರಸರಣಿಯಲ್ಲಾಗಲಿ, ಕಾರ್ಯದಲ್ಲಾಗಲಿ ಮಾನವೀಯತೆಯ ಬಗ್ಗೆ ಉಚ್ಚ ವಿಚಾರ ಬೇಕು, ಧ್ಯೇಯವಿರಬೇಕು, ಸಮಾನತ್ವವಿರಬೇಕು, ಸ್ವಾತಂತ್ರ್ಯವಿರಬೇಕು. ಆತ್ಮೀಯತೆಯ ಹೊನಲು ಅಬಾಧಿತವಾಗಿ ಶಾಂತವಾಗಿ ಪರುಷ-ವರುಷಗಳಿಂದಲೂ ಸಾಗರದಲ್ಲಿ ಹರಿಯುವ ನದಿಗಳಂತೆ ಹರಿಯುತ್ತಿರಬೇಕು. ಕಠಿನವಾದ ಈ ಗುರಿಯನ್ನು ಮುಟ್ಟುವುದರಲ್ಲಿ ನಡೆದ ಪ್ರಯತ್ನದಲ್ಲಿ ಕೂಡ ಸತ್ಯಾಂಶವಿದೆ. ಪ್ರಗತಿ ಇದೆ, ಹಿರಿಮೆ ಇದೆ, ಸುಸಂಸ್ಕೃತಿ ಇದೆ.

ಶಾಂತಿ ಪ್ರಗತಿಗಳು ಇಡಿ ಜಗತ್ತಿನ ಮುಂದಿದ್ದ ಗುರಿಗಳು. ಆದರೆ ತೋಳಕ್ಕೆ ಬೇಕಾಗುವ ಶಾಂತಿಯು ಬೇರೆ ಕುರಿಗಳಿಗೆ ಬೇಕಾಗುವ ನ್ಯಾಯದ ಶಾಂತಿಯು ಈ ಜಗತ್ತಿನಲ್ಲಿ ಇನ್ನು ವರೆಗೆ ನೆಲಸಿಸ್ಸು-ತಮ್ಮ ಕೈಕೆಳಗೆ, ತಾವು ಹೇಳಿದಂತೆ ಪಿಟ್ಟಿನ್ನುವೆ ಜಗತ್ತು ಇರಬೇಕೆಂಬುವ ಸಾಮ್ರಾಜ್ಯವಾದಿಗಳ ಮಂಜೂಲು. ಇದೇ ಅವರಿಗೆ ಬೇಕಾದ ಶಾಂತಿ ಆದರೆ ಇದು ನಿಜವಾದ ಶಾಂತಿಯಲ್ಲ! ಈ ಶಾಂತಿಯು ಇಲ್ಲದಿರುವ ವರೆಗೆ ಪ್ರಗತಿಯು ಸಾಧ್ಯವಿಲ್ಲ. ಎಂದಿನ ವರೆಗೆ ಜಗತ್ತಿನ ಸರ್ವರಾಷ್ಟ್ರಗಳಲ್ಲಿ ಸ್ವಾತಂತ್ರ್ಯದ ಧ್ವಜಗಳು ಹಕ್ಕಿಗಳಂತೆ ಗೆಲವು-ಗಗನದಲ್ಲಿ ಹಾರಾಡಲಾರವೊ, ಎಂದಿನ ವರೆಗೆ ರಾಷ್ಟ್ರವೀರರ ಮತ್ತು ರಾಷ್ಟ್ರದೇವತೆಯ ಜಯಜಯಕಾರ ಮಾಡುವ ಸ್ವಾತಂತ್ರ್ಯವು ಪ್ರತಿಯೊಬ್ಬ ಮಾನವನಿಗೆ ದೊರಲಾರದೊ, ಎಂದಿನ ವರೆಗೆ ನ್ಯಾಯಸಾಧ ಈ ಹಕ್ಕು ಅಪಸಂಬಂಧವೆಂದೆಣಿಸಲ್ಪಡುವುದೊ, ಎಂದಿನ ವರೆಗೆ ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯದ ಸಾಧಕರನ್ನು ಕೆರೆಮನೆಯಲ್ಲಿಟ್ಟು ಹಿಂಸಿಸುವಷ್ಟು ಪಶುಬುದ್ಧಿಯು ಕೆಲವು ಸಾಮ್ರಾಜ್ಯಗಳಲ್ಲಿರುವುದೋ ಅಂದಿನ ವರೆಗೆ ಜಗತ್ತಿಗೆ ಶಾಂತಿಯು ಲಭಿಸಲಾರದು—ಪ್ರಗತಿಪಥವು ಕಾಣಲಾರದು. ಅವುಗಳ ವೈಭವವು ಎಷ್ಟೇ ಹೃದಯಂಗಮವಾಗಿರಲಿ, ಹಿಂಸ್ರಪಶುಗಳ ದರ್ಜೆಗಿಳಿದ ಸಾಮ್ರಾಜ್ಯವಾದಿ ರಾಷ್ಟ್ರಗಳು ಪ್ರಗತಿ ಎಂಬ ಹೆಸರನ್ನು ಕೂಡ ಉಚ್ಚರಿಸಲು ಅಯೋಗ್ಯವಾಗಿವೆ. ಇತರ ದೇಶದವರನ್ನು ನರಿಯ ಕುಟಿಲತೆಯಿಂದ ಪಾರತಂತ್ರ್ಯದಲ್ಲಿ ಮುಳುಗಿಸಿ, ಅವರ ಕೈಕಾಲು-ಬಾಯಿಗಳನ್ನು ಬಿಗಿದು, ಅವರ ಉದ್ಯೋಗಗಳನ್ನು ನಷ್ಟಪಡಿಸಿ, ಅವರು ನ್ಯಾಯದಿಂದ ಗಳಿಸಿದ ಸಂಪತ್ತನ್ನು ಅನ್ಯಾಯದಿಂದ ಸುಲಿದು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು ಪ್ರಗತಿಯಲ್ಲ, ಸುಧಾರಣೆಯೂ ಅಲ್ಲ, ಪೌರುಷವೂ ಅಲ್ಲ. ಇಂತಹ ಪಶುವೃತ್ತಿಯು ಅವನತಿಯ ಮತ್ತು ರಕ್ಕಸತನದ ಸಂಕೇತ (Sign of barbarism).

ವಿಚಾರಗಳು ಕೇಳುತ್ತಲಿವೆ: ಪ್ರಗತಿ—ಆನಂದ—ಸಮೃದ್ಧಿ, ಸುಖ-ಶಾಂತಿ ಇವು ಒಂದೆರಡು ದೇಶದ ಸೊತ್ತುಗಳಾದುವೆಂದರೆ ಜಗತ್ತಿನ ಪ್ರಗತಿಯಾದಂತಾಯಿತೇ? ಜಗತ್ತಿನಲ್ಲಿ ಶಾಂತಿಯು ನೆಲೆಗೊಂಡಂತೆ ಆಯಿತೇ? ಒಂದೆರಡು ವಿಷಯಗಳಲ್ಲಿ ಮುಂದುವರಿದೆನೆಂದರೆ ಸರ್ವಾಂಗೀಣ ಪ್ರಗತಿಯನ್ನು ನಾವು ಸಾಧಿಸಿದಂತಾಯಿತೇ? ನ್ಯೂಯಾರ್ಕಿನಿಂದ ಇಪ್ಪತ್ತೆರಡು ಗಂಟೆಗಳಲ್ಲಿ ಮುಂಬೈಗೆ ವಿಮಾನ ಹಾರಿತೆಂದರೆ ಪ್ರಗತಿಯನ್ನು ಪಡೆದಂತಾಯಿತೆ? ಉಪ್ಪ ದೂರವೇಕೆ? ಸೂರ್ಯಾಸ್ತವಾಗದ ತಮ್ಮ ಸುಂದರ ಸಾಮ್ರಾಜ್ಯವನ್ನು ಅಬಾಧಿತವಾಗಿ ಸಾಗಿಸುವ ಹವ್ಯಾಸದಲ್ಲಿ, ಪ್ರಾಣ ಬಿಟ್ಟು ಸಾಹಾಯ್ಯ ಮಾಡಿದ ಬಗ್ಗೆ ಕೆಲವು ಹಿಂದೀ ಸೈನಿಕರಿಗೆ ಪದಕಗಳನ್ನು ಕೊಟ್ಟ ಪಾತ್ರಕ್ಕೆ ಹಿಂದುಸ್ತಾನದ ವಿಷಯಕ್ಕೆ ಬ್ರಿಟಿಷ ಧೋರಣೆಯಲ್ಲಿ ಒದಲಾವಣೆಯೇ? ಹಿಂದೀಯರ ನ್ಯಾಯಸಾಧ ಬೇಡಿಕೆಗಳ ಸುರಿಮಳೆಯನ್ನು, ತಮ್ಮ ತಲೆಯಲ್ಲಾಡಿಸಿ ಧಿಕ್ಕರಿಸಿದ ಚರ್ಚಿಲ್‌ರು ನಿಜವಾಗಿಯೂ ಇಂಗ್ಲೆಂಡಿನ ಉದ್ಧಾರವಾಪೇಕ್ಷಿಸುವರೇ? ಪ್ರಗತಿಯನ್ನು ಸಾಧಿಸುತ್ತಿರುವರೇ? ವಿಚಾರಗಳ ರಚಿಸಿದ ಈ ಬಿರುಗಾಳಿಯನ್ನು ಓಡಿಸಬೇಕೆಂದು ಅದೆಷ್ಟೊ ಸಲ ಯತ್ನಿಸುತ್ತೇನೆ. ಸಾಧ್ಯವಾಗುವುದೇ ಇಲ್ಲ. ವಿಚಾರಗಳು ಮುಗುಳುನಗೆ ನಗುತ್ತ ಮೆಲ್ಲಗೆ ಒಂದರಮೇಲೊಂದೊಂದು, ಒಂದು ತಮ್ಮ ಆರವಗಳನ್ನು ಕೇಳಿಸುತ್ತವೆ—ಬೇಸರಪಡಬೇಡ. ಗತ್ತು ವಿಶಾಲವಾಗಿದೆ—ಪ್ರಗತಿಶೀಲನ ಮನಸ್ಸು, ಕಾರ್ಯರಂಗ, ಚಿಂತನಕ್ಷೇತ್ರ ಇವು ವಿಶಾಲವಾಗಿರಬೇಕು. ವಿಶಾಲತೆಯು ಒಂದು ಸೌಂದರ್ಯದ ಹೆಗ್ಗುರುತು! ಸಾಮಾಜಿಕ ವ್ಯಕ್ತಿಯಾಗುವುದರಲ್ಲಿ ಮನುಷ್ಯತ್ವವಿದೆ. ಇಡೀ ಜಗತ್ತೇ ಒಂದು ಸಮಾಜವೆಂದು ತಿಳಿದುಕೊಂಡ ಸ್ವಕಾರ್ಯದಿಂದ ಬಿಡುವು ಸಿಕ್ಕಾಗೆಲ್ಲ ಒಮ್ಮೆ ವೇಳೆ ಸುಲಭವಾಗಿ ಸಿಕ್ಕಿದಿರಲು ಪ್ರಯತ್ನಪೂರ್ವಕವಾಗಿ ಬಿಡುವು ಮಾಡಿಕೊಂಡು ಸಮಸ್ಯೆಯನ್ನು ಸ್ವಾಗತಿಸು, ಸಾವು ಬರುವೆವು. ಸಾವು ಸುಲಭವಾರೆ ನಿನಗೆ ತೊಂದರೆ ಕೊಡಬಹುದು. ಆದರೆ ಮಗು, ನೆನಪಿನಲ್ಲಿಡು– Life is not a bed of roses (ಜೀವನವು ಹೂಮಾಲೆಯಲ್ಲ. The world is his who exerts himself (ಈ ಜಗತ್ತು ದುಡಿಯುವವನದಾಗಿದೆ). ಕಷ್ಟ-ನಷ್ಟಗಳ ಅನುಭವ, ತೊಂದರೆಗಳ ತಿಳಿವಳಿಕೆ ಇವುಗಳನ್ನು ಸಹಿಸಬೆ ಮುಂಬರು.

ಕನ್ನಡ ನಾಡಿನ ಅತ್ಯುತ್ತಮ, ಸುಸಂಸ್ಕೃತ
ಚಲಚ್ಚಿತ್ರಪತ್ರಿಕೆ

ನಾ ಕ್ಚ ತ್ರ

ಸಂಪಾದಕರು

ಶ್ರಿ. ಮಾ. ನಾ. ಚೌಡಪ್ಪ

೩೬ ಪುಟಿಗಳು : : ಮೂರಾಣೆ

ವಾರ್ಷಿಕ ಚಂದಾ
ಎರಡೂವರೆ ರೂಪಾಯಿ.

ಈಗ ಏಜೆಂಟರಿಲ್ಲದೆಡೆಗಳಲ್ಲೆಲ್ಲಾ ಏಜೆಂಟರು
ಬೇಕಾಗಿದ್ದಾರೆ.

——— ವಿವರಗಳಿಗೆ———

ಚಿತ್ರಾ ಏಜೆನ್ಸೀಸ್

೨ ಸುಲ್ತಾನ್‌ಪೇಟೆ : : ಬೆಂಗಳೂರು ನಗರ

ಸಮ ಸಾಧ್ಯವಿಲ್ಲ—ಪ್ರಯತ್ನದ ವಿನಾ ಪ್ರಕಾಶಮಾನವ್ಯಕ್ತಿಯಾಗುವುದು ಅಸಾಧ್ಯ. ಆದರ್ಶವ್ಯಕ್ತಿಯಾಗಲಾರೆ. ಏನೂ ಕಾರ್ಯ ಮಾಡದೆ ಮುಂದೆ ಬಂದು ಪರುಷಗಗನದಲ್ಲಿ ಹಾರಾಡುವುದು ಒಂದೇ ರಂಗದಲ್ಲಿ ಸಾಧ್ಯ. ಆ ರಂಗವೆಂದರೆ ಪ್ರೇಮರಂಗ.... ಕಾಮರಂಗ! ಈ ರಂಗಭೂಮಿಯಲ್ಲಿ ಕಣ್ಣುಗಳ ಕಾಂತಿ, ಮಾತಿನ ಮಾಧುರ್ಯ ವೈನುಣುಪು, ಮೋಗದ ಮೋಹನತೆ ಇವೇ ಬೇಕಾದುವುಗಳು. ಆದುದರಿಂದ ನಾವು ತೊಂದರೆ ಕೊಡುತ್ತೇವೆಂದು ನಾವು ಬಂದಾಗ ಕದ ಮುಚ್ಚಬೇಡ! "ಸುವರ್ಣವನ್ನು ಸುತ್ತಿಗೆಯಿಂದ ಹೊಡೆದರೆ ಅದರ ಕಾಂತಿಯು ಹೆಚ್ಚುತ್ತದೆ– ಚಂದನವನ್ನು ತಿಕ್ಕಿದರೆ ಸುವಾಸನೆಯು ಹೊರಹೊಮ್ಮುತ್ತದೆ. ನಿನ್ನ ಕಾರ್ಯ ಮುಗಿಯಿತೆಂದು ನೀನೆಂದಿಗೂ ನೆಮ್ಮದಿಯಾಗಿರಕೂಡದು. ಜಗತ್ತಿನ ಘಟನೆಗಳು ಅವ್ಯಾಹತವಾಗಿವೆ. ಪ್ರಗತಿಶೀಲ ಮನುಷ್ಯನ ಕಾರ್ಯಕ್ಕೆ ಅಂತ್ಯವಿರಬಾರದು! ನೋಡು! ಎಷ್ಟೋ ಸಾವಿರ ವರುಷಗಳಾದುವು. ಸಮುದ್ರದ ತೆರೆಗಳು ಒಂದೇಸವನೆ ದಂಡೆಗೆ ಅಪ್ಪಳಿಸುತ್ತಲಿವೆ ಗಾಳಿಯು ಬಿಡುವಿಲ್ಲದೆ ದಶದಿಕ್ಕುಗಳಲ್ಲಿ ಸಂಚರಿಸುತ್ತಲಿದೆ ನದಿಗಳು ಕರಿ. ಹರಿದು ಸಾಗರಕ್ಕೆ ನೀರನ್ನು ಪೂರಯಿಸುತ್ತವೆ. ನೀನೂ ಹೀಗೆಯೆ ಅವಿಶ್ರಾಂತ ಪರಿಶ್ರಮದಲ್ಲಿ ಆನಂದಿಸಬೇಕು. ಇಂದು ಇಂತಹ ಸ್ಫೂರ್ತಿಸ ನೀಯ ಶಕ್ತಿಯು ನಿನ್ನಲ್ಲಿಲ್ಲವೆಂದು ಕಂಡು ಒಂದು ವೇಳೆನಿಸುತ್ತದೆ. ಇದೇ ನಿನ್ನ ಇಂದಿನ ಸಣ್ಣ ಪುಟ್ಟ ಸೋಲುಗಳಿಗೆ ಕಾರಣ. ಆದರೆ ಹಿಂದೆ ನಿನ್ನಲ್ಲಿ ರಂಜಿಸುವ ಕರ್ತೃತ್ವದ ನೆನಪು ನಮ್ಮಲ್ಲಿ ಆಶಾವಾದವನ್ನು ಕಳುಹಿಸುತ್ತದೆ- ನಮಗೂ ಹೌದೆನಿಸುತ್ತದೆ. ಕಾರಣಾಂತರದಿಂದ ಇಂದು ಸ್ವಲ್ಪ ಹಿಂದೆ ಸರಿದ ನೀನು, ಹಿಂದಿನಂತೆ ಏಕೆ ಮುಂದೆಯೂ ಮುನ್ನುಗ್ಗಬಾರದು? ನಿನ್ನ ಕಾಲುಗಳು ಹಿಂದೆ ಸರಿದಿವೆ, ಅಡ್ಡಿಯಿಲ್ಲ; ಆದರೆ ಪ್ರಗತಿಪಥದಲ್ಲಿ ಯಶಸ್ವಿಯಾಗಿ ಮುನ್ನುಗ್ಗಬೇಕೆಂಬ ನಿಸ್ಸೀಮನಿಶ್ಚಯವು ಅದಮ್ಯನೀಯವಾಗಿರಲಿ. ಕೆಲವೊಮ್ಮೆ ಜೀವನದಲ್ಲಿ ಎದೆಯನ್ನಪ್ಪಳಿಸುವ ತೊಂದರೆಯ ತೆರೆಗಳಿಂದ ತಲ್ಲಣಗೊಳ್ಳಬೇಡ! ನಿನಗೆ ನಿಕಟವಾಗಿ ಸಂಬಂಧಿಸಿದ ಕಾರ್ಯಗಳು ಸಾಗಿರುವಾಗಲೇ ಜಗತ್ತಿನ ಕಡೆಗೂ ನಿನ್ನ ವಿಶಾಲದೃಷ್ಟಿಯನ್ನು ಹೆಚ್ಚಿಸಿರು– ಮನೆಯೊಳಗೇ ಕುಳಿತುಕೊಂಡಿರುವುದು ಎಷ್ಟರಮಟ್ಟಿಗೆ ಸಾಧ್ಯ? ಕೆಲವುಬಿಟ್ಟಿಗಾದರೂ ಜಗತ್ತಿನ ಸುಖವು ನಿನ್ನ ಸುಖ, ದುಃಖ ಜಗತ್ತಿನಲ್ಲಿ ನೀನೊಬ್ಬನೇ ಸುಖಿಯಾಗಿ ಬಾಳಬಾರದು; ಬಾಳಲಾರ!"

ಕೆಲವು ವರುಷಗಳ ಹಿಂದೆ ನನಗೆ ಸಂಬಂಧಿಸಿದ ಈ ವಿಚಾರಗಳು ಸುಳಿದಾಗೆಲ್ಲ, ಪುಸ್ತಕಗಳನ್ನು ತೆರೆದು ಮನದ ಬಾಗಿಲನ್ನು ಭದ್ರವಾಗಿ ಮುಚ್ಚಿ ಇವು ಒಳಗೆ ಬರಬಾರದೆಂದು ಹೋರಾಡುತ್ತಿದ್ದ ನಾನು, ಇಂದು ಇವು ಸಮಾಪಿಸಿದಾಗೆಲ್ಲ ಕಣ್ಮುಂದಿದ್ದ ಪುಸ್ತಕಗಳನ್ನು ಮುಚ್ಚಿ ನಾವರ ಸ್ವಾಗತವನ್ನು ನೀಡುತ್ತೇನೆ! ಅನಂತ! ಹರುಷದಿಂದ ಅವುಗಳೊಡನಾಡುತ್ತೇನೆ.

ಐವಾರು ವರುಷಗಳ ಭೀಕರ ಯುದ್ಧದ ತರುವಾಯ ಶಾಂತಿದೇವಿಯು ಆಗಮನದ ಚಿಹ್ನೆಗಳು ಕಂಡುಬರುತ್ತಿವೆ. ಈ ಆನಂದದ ಚಿಹ್ನವೆಂದು ಜಯಶಾಲಿಗಳು ಪರಾಜಿತರನ್ನು ಜೇನಂತೆ ಗೋರಿಗೆಳೆಯಲ್ಲಿಡಬೇಕೆಂದಿದ್ದಾರೆ. ಜಯಶೀಲರಿಗೆ ಬೇಕಾದದ್ದೆಲ್ಲ ಸಿಕ್ಕಿತು. ಶಾಂತಿ ಸ್ಥಾಪನೆಯಾದಂತಾಯಿತಂತೆ! ವಿಚಾರಗಳು ಇಂತಹ ಶಾಂತಿ ಸ್ಥಾಪನೆಗೆ ಬೆಂಬಲಕೊಡುವಷ್ಟು ವಿವೇಕಶೂನ್ಯರಾಗಿಲ್ಲ! ಮೂರನೆಯ ಮಹಾಯುದ್ಧದ ಬೀಜಗಳನ್ನು ಇಂದಿನ ಜಯಶಾಲಿ ರಾಷ್ಟ್ರಗಳು ಬಿತ್ತುತ್ತಲಿವೆಯೆಂದು ಅವರು ನ್ಯಾಯವಾಗಿ ಸಾರಿದ್ದಾರೆ. ಯುದ್ಧಾರಂಭದಲ್ಲಿ ತನ್ನ ಅಸ್ತಿತ್ವವು ಸಂಕಟದಲ್ಲಿದ್ದಾಗ ಸತ್ಯ, ನ್ಯಾಯ, ಸ್ವಾತಂತ್ರ್ಯಗಳಿಗಾಗಿ ಹೋರಾಡುತ್ತೇವೆಂದು ಉದ್ದುದ್ದ ಮಾತುಗಳಲ್ಲಿ ತಮ್ಮ ಗುರಿಯ ಹಿರಿಮೆಯ ರಾಗ ಎಳೆದ ರಾಷ್ಟ್ರಗಳು, ಇಂದು ಯುದ್ಧ ತನಗೆ ಅನುಕೂಲವಾಗುತ್ತ ನಡೆದಂತೆ, ತಮ್ಮ ಮನಸ್ಸಿನ ವಿಷಗಾಳಿಯನ್ನು ನಿರ್ಭೀತಿಯಿಂದ ಅಧಿಕಾರವಾಣಿಯಿಂದ ಸಾರುತ್ತಲಿವೆ. ಸ್ವಾರ್ಥ, ಸಾಮ್ರಾಜ್ಯಶಾಹಿ, ಅನ್ಯಾಯದ ವ್ಯಾಪಾರಶಾಹು ಇವುಗಳ ವಿರುದ್ಧವಾಗಿ ಖಂಡಿತವಾಗಿಯೂ ಇನ್ನೊಂದು ಯುದ್ಧವು ಸ್ವಲ್ಪಾವಧಿನುಲ್ಲಿಯೆ ಸಿಡಿದೇಳುವುದೆಂದು ಲೋಕಕ್ಕೆ ಎನಿಸುತ್ತಲಿದೆ. ಷೇಕ್ಸ್‌ಪಿಯರ್ (Shakespeare)! ಹೆಮ್ಲೆಟನ (Hamlet)! ಪಾತ್ರವನ್ನು ಸೃಷ್ಟಿಸಿದ ನಿನಗೆ ಧನ್ಯವಾದಗಳು! ನಿನ್ನ ದೇಶದ ಇಂದಿನ ರಾಜಕಾರಣಿಗಳು ಇಂದು ಹೆಮ್ಲೆಟನ ಪಾತ್ರವನ್ನು ವಹಿಸಿ ಮಾತ್ರ ಹೆಮ್ಲೆಟ್ ಕ್ರಿಯಾಶೂನ್ಯ ವಿಚಾರವಂತ! ಇಂಗ್ಲೆಂಡಿನ ರಾಜಕಾರಣಿಗಳೂ ಇದೇ ಪಟ್ಟಿಗೆ ಸೇರಿದ್ದಾರೆ. ಸ್ವಾತಂತ್ರ್ಯ, ಶಾಂತಿ, ಪ್ರಗತಿಗಳ ಬಗೆ ದೊಡ್ಡ ದೊಡ್ಡ ಉದ್ಗಾರಗಳನ್ನು ತೆಗೆದರು! ಕ್ರಿಯೆ ಮಾತ್ರ ಸಂಪೂರ್ಣವಿರುದ್ಧ ಚಿಹ್ನೆಗಳಲ್ಲ. ಪ್ರತಿಕೂಲ ಮಾರ್ಗವನ್ನೇ ಇವರು ಹಿಡಿದಿದ್ದಾರೆ. ಇನ್ನೊಂದು ಭೋಜನ ವಿಷಯ! ಪ್ರೇಮ ವೆಂದರೆ ಇದೇ ಅಲ್ಲವೇ? ಬ್ರಿಟಿಷ್ ಸ್ವಾತಂತ್ರ್ಯ ನೀತಿಯೆಂದರೆ ಬೇರೆ ಯಾವ ನೀತಿಯ ಮೇಲಿನ ಯುದ್ಧವಾದ ಪ್ರೇಮ! ನಿನ್ನ ಪ್ರಿಯತಮೆ

ಗಾಗಿ ಯುವಕನು ಸರ್ವಸ್ವವನ್ನೂ ಬಲಿಗೊಡಲು ಉದ್ಯುಕ್ತನಾಗುತ್ತಾನೆ, ಕಲ್ಲು-ಮುಳ್ಳುಗಳನ್ನೂ ಮೆಟ್ಟಿ, ಹೊಂಡ-ಕಂದರಗಳನ್ನೂ ದಾಟಿ ಅವಳನ್ನು ಚುಂಬಿಸುತ್ತಾನೆ, ಅವಳನ್ನು ತನಗಾಗಿ ದೊರೆಕಿಸುವುದಕ್ಕಾಗಿ ಕೊಲೆ-ಸುಲಿಗೆಗಳಲ್ಲಿ ಕೈಹಾಕುವುದು ಕೂಡ ತನ್ನ ಆದ್ಯ ಕರ್ತವ್ಯವೆನ್ನುತ್ತಾನೆ. ಆದರೆ ಇನ್ನಿತರರು ತನ್ನ ಪ್ರೇಯಸಿಯನ್ನು ಕಣ್ಣೆತ್ತಿ ನೋಡುವುದೂ ಅವನಿಗೆ ಸಹನವಾಗದು. ಬ್ರಿಟಿಷರು ತಮ್ಮ ಸ್ವಾತಂತ್ರ್ಯ, ಸ್ವಾಭಿಮಾನಗಳ ರಕ್ಷಣೆಗಾಗಿ ಬೇಕಾದ ಸ್ವಾರ್ಥತ್ಯಾಗ ಮಾಡಲು ಸಿದ್ಧರಾಗುತ್ತಾರೆ. ಈ ಯುದ್ಧದಲ್ಲಿ– ಸ್ವಾತಂತ್ರ್ಯ ರಕ್ಷಣೆಯ ಹೋರಾಟದಲ್ಲಿ ಅವರು ಧೈರ್ಯ, ಸ್ಥೈರ್ಯ, ಒಕ್ಕಟ್ಟಿನಿಂದ ಎದುರಿಸಿದ ಭೀಕರ ನರಕಯಾತನೆಗಳಿಗಾಗಿ ಅವರಿಗೆ ನನ್ನ ಧನ್ಯವಾದಗಳು! ಆದರೆ ದುರ್ದೈವ! ಬ್ರಿಟನ್ನಿನ ದುರ್ದೈವ! ಹಿಂದುಸ್ತಾನದ ದುರ್ಭಾಗ್ಯ! ಪ್ರಶಂಸನೀಯ ಚಿರಸ್ಮರಣೀಯ ಕಾರ್ಯದೊಡನೆ ಅಮರವಾದ ಕಲಂಕವೊಂದನ್ನು ಹಚ್ಚಿಕೊಂಡರು. ತಮ್ಮುಂತೆಯೆ ಸ್ವಾತಂತ್ರ್ಯಕ್ಕಾಗಿ—ಪ್ರಗತಿಗೆ ತಮ್ಮ ಏಳಿಗೆಗೆ ಅವಶ್ಯವಿದ್ದ ಸಾಧನೆಗಾಗಿ—ನ್ಯಾಯವಾದ ಸಭ್ಯರೀತಿಯಿಂದ ಅಹಿಂಸಾ ಶಸ್ತ್ರದೊಡನೆ ಹೋರಾಡುವ ಹಿಂದೀ ಕಾಂಗ್ರೆಸ್ ಸಂಸ್ಥೆಯನ್ನು ಹಿಂಸಾವೃತ್ತಿಯಿಂದ ಹತ್ತಿಕ್ಕಲು ಪ್ರಯತ್ನಿಸಿದರು! ಅನಿಯಮಿತ ಅವಧಿಯವರೆಗೆ ಜನತೆಯ ಧುರೀಣರನ್ನು ಬಂಧಿಸಿಟ್ಟರು. ಹಿಂದುಸ್ತಾನದ ವಿಷಯಕ್ಕೆ ಸುಳ್ಳು ಪ್ರಚಾರವನ್ನು ಅಮೇರಿಕೆಯಲ್ಲಿ ನಡೆಸಿದರು– ಇನ್ನೂ ನಡೆಸಿದ್ದಾರೆ. ಚರ್ಚಿಲ್ಲರ ಜಗತ್ತೆಂದರೆ ಬರೆ ಬಿಳಿಯ ಜನಾಂಗ! ಅವರ ಶಾಂತಿಯೆಂದರೆ ಬ್ರಿಟಿಷ್ ಸಾಮ್ರಾಜ್ಯವು ಅಮರವಾಗಿ ಮೆರೆಯಲು, ಬ್ರಿಟಿಷ್ ವ್ಯಾಪಾರೋದ್ಯೋಗಗಳು ಇತರ ರಾಷ್ಟ್ರಗಳ ಆರ್ಥಿಕ ಹಾನಿಯ ಮೇಲೆ ಕುಣಿಯಲು ಬೇಕಾಗುವ ವ್ಯವಸ್ಥೆ! ಸ್ಮಶಾನ ಶಾಂತಿ! ಇದೇ ಸಾಮ್ರಾಜ್ಯಶಾಹಿಗೆ ಬೇಕಾದ ಶಾಂತಿ! ಜಗತ್ತಿನ ಸುರಕ್ಷಿತತೆಗಾಗಿ ಅವಶ್ಯವೆಂದು ಸಾರಲ್ಪಡುವ ಸಾಮ್ರಾಜ್ಯದ ಒಂದು ಭಾಗವಾದ ಬಂಗಾಲದಲ್ಲಿ, ಒಂದೇ ವರುಷದಲ್ಲಿ ಅನ್ನವಿಲ್ಲದೆ ಹತ್ತು ಲಕ್ಷ ಜನರು ಇಂದಿನ ಸುಧಾರಿಸಿದ ಪರಿಸ್ಥಿತಿಯಲ್ಲಿ ಅಕಾಲಮರಣಕ್ಕೆ ತುತ್ತಾದರು– ಇನ್ನೂ ಸಾಯುತ್ತಲಿದ್ದಾರೆ. ಭಾರತದ ಮೂಲೆ ಮೂಲೆಗಳಲ್ಲಿ ಸಾವಿರಾರು ಜನರು ಅನ್ನ-ಬಟ್ಟೆಗಳಲ್ಲದೆ, ಔಷಧೋಪಚಾರಗಳಲ್ಲದೆ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ— ಕಷ್ಟದ ದವಡೆಯಲ್ಲಿ ಸಿಕ್ಕು ಹಿಟ್ಟಾಗುತ್ತಲಿದ್ದಾರೆ. ಅಜ್ಞಾನ, ದಾರಿದ್ರ್ಯ, ಅಶಾಂತಿಗಳಲ್ಲಿ ಭಾರತವು ಬೆಂದು ಹೋಗುತ್ತಲಿದೆ. ಇಂತಹ ದುರ್ದಶೆಯನ್ನು ಹತ್ತಿಕ್ಕಿ ಸುಖ, ಸಮೃದ್ಧಿ, ಶಾಂತತೆ, ಪ್ರಗತಿಗಳನ್ನು ತರಲು ರಾಷ್ಟ್ರೀಯ ಸರಕಾರವು ಅವಶ್ಯ! ಸ್ವಾತಂತ್ರ್ಯ ಅವಶ್ಯ! ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಯುದ್ಧ ಸಾಗಿದೆಯೆಂದು ಸಾರಿದವರು ಈ ಸ್ವಾತಂತ್ರ್ಯವನ್ನು, ನ್ಯಾಯದ ಈ ಬೇಡಿಕೆಯನ್ನು ಸ್ವಾರ್ಥದ ಮಬ್ಬಿನಲ್ಲಿ ಮಾನ್ಯಮಾಡುತ್ತಿಲ್ಲ! ಸ್ವಾಭಿಮಾನದ, ಸ್ವಾತಂತ್ರ್ಯದ ಹಾಗೂ ತಮ್ಮ ಸ್ವಾತಂತ್ರ್ಯ ಧುರೀಣರ ಜಯಜಯಕಾರ ಮಾಡುವುದೂ ಅಪರಾಧವಾಗಿದೆ. ಶಾಂತಿಸ್ಥಾಪಕರ ನೀತಿಯಿದು! ನಾಲ್ಕು ಕೋಟಿ ಜನರ ಮಿತಿಮೀರಿದ ವೈಭವಕ್ಕಾಗಿ, ನಲುವತ್ತು ಕೋಟಿ ಜನರನ್ನು ಅಜ್ಞಾನ, ದಾರಿದ್ರ್ಯ, ದಾಸ್ಯ, ಬರಗಾಲಗಳಲ್ಲಿ ನೂಕಿಡುವುದು ಶಾಂತಿಯ ಲಕ್ಷಣವೇ? ಸುಧಾರಣೆಯ ಚಿಹ್ನವೇ? ಪ್ರಗತಿಯ ಛಾಯೆಯೇ? ಜಗತ್ತಿನ ಉಳಿದ ರಾಷ್ಟ್ರಗಳು ತನ್ನ ಸ್ವಾಮಿತ್ವವನ್ನು ಒಪ್ಪಬೇಕು, ತನ್ನ ಲಾಭಕ್ಕಾಗಿ ತನ್ನೊಡನೆ ವ್ಯಾಪಾರ ಮಾಡಬೇಕು, ತನ್ನ ಉದ್ಯೋಗಗಳು ತಯಾರಿಸಿದ ವಸ್ತುಗಳನ್ನೇ ಕೊಳ್ಳಬೇಕು ಇವೆಲ್ಲ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಹೆಬ್ಬಯಕೆಗಳು. ಯಾವ ಸ್ವಾಭಿಮಾನಿ ರಾಷ್ಟ್ರವೂ ಇದಕ್ಕೊಪ್ಪಲಾರದು. ಮತ್ತು ಒಂದಾನೊಂದು ವೇಳೆ ಉಪಾಯವಿಲ್ಲದೆ ದಾಸ್ಯವನ್ನು ಸ್ವೀಕರಿಸಿದರೂ, ಪ್ರಸಂಗ ಬಂದಾಗ ತನ್ನ ಸ್ವಾತಂತ್ರ್ಯವನ್ನು ಪಡೆಯಲು ಯುದ್ಧ ಮಾಡುವುದು ಖಂಡಿತ. ಸಾಮ್ರಾಜ್ಯಶಾಹಿಯು ಇಂಥ ರಾಷ್ಟ್ರಗಳನ್ನು ಶಾಂತತಾ ವಿರೋಧಿಗಳೆಂದು ಸಂಬೋಧಿಸುತ್ತದೆ–ಆದರೆ ಇಂತಹ ಯುದ್ಧಗಳು ನ್ಯಾಯದ ಯುದ್ಧಗಳು! ಸಾಮ್ರಾಜ್ಯಗಳು ಇರುವವರೆಗೆ ಈ ಯುದ್ಧಗಳು ನಡೆಯುವವು, ನಡೆಯಲೇ ಬೇಕು! ನಮ್ಮಲ್ಲಿಯೂ ಸ್ವಾಭಿಮಾನವು ತಲೆಯೆತ್ತಿ ನಿಲ್ಲಲಾರಂಭಿಸಿರುವುದು, ಹಿಂದಿನ ನಮ್ಮ ವೈಭವದ ಅರಿವುಂಟಾಗಿರುವುದು, ಭವಿಷ್ಯಕ್ಕಾಗಿ ಹೋರಾಡುವ ಮಹತ್ತ್ವಾಕಾಂಕ್ಷೆಯು ಪ್ರಜ್ವಲಿಸುತ್ತಿರುವುದು ನಮ್ಮ ಮುಂದಿನ ಭಾಗ್ಯದ ಸಂಕೇತಗಳು!

ಆಶ್ಚರ್ಯ! ಜಗತ್ತಿನ ಲೋಕಸಂಖ್ಯೆಯ ನೂರಕ್ಕೆ ಇಪ್ಪತ್ತರಷ್ಟು ಭಾರತೀಯರು ದಾಸ್ಯದಲ್ಲಿರುವಾಗ, ಜಗತ್ತಿನ ಸ್ವಾತಂತ್ರ್ಯ-ಸಾಮ್ರಾಜ್ಯಶಾಹಿಗಳ ಹೆಚ್ಚುತ್ತಿರುವ ಬಲದೊಡನೆ ಲೋಕಶಾಹಿಯ ಸ್ಥಾಪನೆ! ಒಂದು ಕಡೆ ಹಿಂದುಸ್ತಾನದಲ್ಲಿ ಇದೀಗ ತಲೆ ಎತ್ತುತ್ತಿರುವ ವಿವಿಧ ಉದ್ಯೋಗಗಳನ್ನು ಹತ್ತಿಕ್ಕುವ ಪ್ರವೃತ್ತಿ; ಇನ್ನೊಂದು ಕಡೆ ಇಡೀ ಜಗತ್ತಿಗೆ ಆರ್ಥಿಕ ಸ್ವಾತಂತ್ರ್ಯ!

ನಮಗಿನ್ನೂ ಸ್ವಾತಂತ್ರ್ಯಯುದ್ಧಗಳಲ್ಲಿ ಜಯ ದೊರೆತಿಲ್ಲವಾದರೂ, ಸ್ವಾತಂತ್ರ್ಯದ ಮಹತ್ತ್ವ ಆವಶ್ಯತೆಗಳ ಪ್ರಕಾಶ ಪೂರ್ಣವಾಗಿ ನಮ್ಮ ಮೇಲೆ ಬಿದ್ದಿರುವ ಕಾರಣ, ಕಾರ್ಯಸಾಧಿಸುವ ವರೆಗೆ ನಾವು ಹೋರಾಡುವುದು ಖಂಡಿತ. ಅಹಿಂಸಾ ಹೋರಾಟವು ವಿಹಿತವಲ್ಲವೆಂದು ಪೂರ್ಣ ಮನಗಂಡರೆ, ಹಿಂಸಾಯುದ್ಧದಲ್ಲಿ ಒಂದಿಲ್ಲೊಂದು ದಿನ ಕೈಹಾಕುವುದು ಖಂಡಿತ; ಮಾನವನ ಮನಸ್ಸಿನ ಪ್ರವೃತ್ತಿಯನ್ನು ಬಂಧಿಸುವುದು ಯಾರಿಗೂ ಶಕ್ಯವಿಲ್ಲ. ದಾಸ್ಯದ ದವಡೆಯಲ್ಲಿ ಸಿಕ್ಕು ಕ್ಷೀಣರಾಗಿ ನಾವು ಜಾಣರಾಗಿದ್ದೇವೆ. ನಮ್ಮ ಆಕ್ರಂದನದಿಂದ ಮುಂಬರುವವರು ಇನ್ನಿಷ್ಟು ಅನುಭವಿಗಳಾಗುವರು. ನೆಪೋಲಿಯನ್ನ ಸೋಡನೆ ನಡೆದ ದೀರ್ಘಕಾಲದ ಯುದ್ಧದಿಂದ ಅನುಭವಿಸಿದ ಹಾನಿಯನ್ನು ತುಂಬಿಕೊಳ್ಳಲು ಬ್ರಿಟಿಷರು ನಮ್ಮ ಉದ್ಯೋಗಗಳನ್ನು ನಷ್ಟ ಪಡಿಸಿ, ತಮ್ಮ ಉದ್ಯೋಗಗಳನ್ನು ಹೆಚ್ಚಿಸಿಕೊಂಡರು. ತಮ್ಮ ಸರಕುಗಳು ವೇಗದಿಂದ ನಮ್ಮ ಹಳ್ಳಿ-ಹಳ್ಳಿಗೂ ಮುಟ್ಟಿ ಅಲ್ಲಿಯ ಸಣ್ಣ ಸಣ್ಣ ಉದ್ಯೋಗಗಳನ್ನೂ ನಿಲ್ಲಿಸಬೇಕೆಂದು ರೈಲನ್ನು ತಂದರು. "ಹಿಂದೀಯರ ಹಿತದ ಸಲುವಾಗಿಯೆ ಹಿಂದುಸ್ತಾನದ ರೈಲುಗಳಿವೆ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದೊಂದು ಪ್ರಮಾದ. ನಮ್ಮ ದೇಶದ ರೈಲುಗಳು ನಮಗೆ ಬೇಡವಾದ ಹಾಗೂ ನಮಗೆ ಜವಾಬ್ದಾರರಲ್ಲದ ಸರಕಾರದ ಸೈನ್ಯದ ಸೌಕರ್ಯಕ್ಕಾಗಿ ಮತ್ತು ಇಂಗ್ಲೆಂಡಿನ ವ್ಯಾಪಾರದ ಬೆಳೆವಣಿಗೆಗಾಗಿ, ನಮ್ಮ ಉದ್ಯೋಗಗಳ ನಾಶನಗಾಗಿ ಇದುವರೆಗೆ ಈ ಮೂರೂ ಕೆಲಸಗಳನ್ನು ಅವು ಯಶಸ್ವಿಯಾಗಿ ಸಾಧಿಸಿವೆ. ಬರೇ ಬೇಸಾಯದಿಂದ ನಮ್ಮ ಆರ್ಥಿಕ ಪ್ರಗತಿಯಾಗದೆಂದು ಅನುಭವದಿಂದ ನಾವು, ಸಾಪೇಕ್ಷ ಪ್ರಾಮುಖ್ಯರಂತೆ ಉದ್ಯೋಗಗಳನ್ನು ಆರಂಭಿಸಬೇಕೆಂದು

ವೈವೆ—ಕೆಲವು ರಂಗಗಳಲ್ಲಿ ಮುಂದುವರಿದಿದ್ದೇವೆ. ಶಾಂತಿಪ್ರಿಯ ಪ್ರಗತಿಪ್ರಿಯ ಇಂಗ್ಲಂಡು ನಮ್ಮ ಪ್ರಗತಿಶೀಲ ದಾರಿಯ ಮೇಲೆ ಕೋಟೆಗಳನ್ನು ಕಟ್ಟುತ್ತಲಿದೆ. ಇಂದಿನ ಯುದ್ಧಕಾಲದಲ್ಲಿ ಕೂಡ ನಮ್ಮ ಉದ್ಯೋಗಗಳಿಗೆ ಸಾಕಷ್ಟು ಬೆಂಬಲವು ಸಿಕ್ಕಲಿಲ್ಲ. ಯುದ್ಧಾರಂಭದಿಂದ ಎರಡು ವರುಷಗಳ ಅವಧಿಯಲ್ಲಿ ಸಾಮ್ರಾಜ್ಯಸರಕಾರವು ಬರೇ ಮುನ್ನೂರು ಕೋಟಿ ರೂಪಾಯಿ ಬೆಲೆ ಬಾಳುವ ಸರಕನ್ನು ಹಿಂದೀ ಕಾರಖಾನೆಗಳಿಂದ ಕೊಂಡಿತು. ಅದೇ ಅವಧಿಯಲ್ಲಿ ಹನ್ನೊಂದು ಸಾವಿರ ಕೋಟಿ ರೂಪಾಯಿಗಳ ಸರಕನ್ನು ಕಾನಡಾದ ಕಾರಖಾನೆಗಳಿಂದ ಕೊಂಡಿತು. ಇಂದಿನ ವರೆಗೂ ನಮ್ಮ ದೇಶದ ರೇಲ್ವೆಗಳು ವೇಶೀ ಕಂಪನಿಗಳಿಂದ ಸಲಕರಣೆಗಳನ್ನು ಕೊಳ್ಳದೆ ಪರದೇಶದಿಂದ ಕೊಳ್ಳುವುದು ನಮ್ಮ ಸರಕಾರದ (ಇಂಗ್ಲಂಡಿನ) ಪ್ರತಿಗಾಮಿ ಧೋರಣೆಯ ನಿದರ್ಶನವಾಗಿದೆ. ಈ ಯುದ್ಧದಲ್ಲಿ ಅನುಭವಿಸಿದ ಹಾನಿಯನ್ನು ತುಂಬಿಕೊಳ್ಳಲು, ಭಾರತೀಯರನ್ನು ಹಿಚುಕಬೇಕೆಂದಿದೇ ಸಾಮ್ರಾಜ್ಯಶಾಹಿ! ಇದೇ ಕಾರಣದಿಂದ ಸ್ವರಾಜ್ಯದ ಬೇಡಿಕೆ ಮನ್ನಿಸಲ್ಪಟ್ಟಿಲ್ಲ. ಆದರೆ ಇದು ನಮ್ಮ ಜೀವನ-ಮರಣದ ಸಮಸ್ಯೆಯಾಗಿದೆ—ಇಂಗ್ಲಂಡಿನ ಅಭಿವೃದ್ಧಿಗಾಗಿ ನಮ್ಮ ದೇಶದವರನ್ನು ನಿರುದ್ಯೋಗದಲ್ಲಿ, ಪಸಿವೆಯಲ್ಲಿ ನೂಕಲು ನಾವು ಸಿದ್ಧರಿಲ್ಲ. ಉಳಿದ ರಾಷ್ಟ್ರಗಳ ಜನರಂತೆ ನಮ್ಮ ಜನರೂ ನೆಮ್ಮದಿಯಲ್ಲಿರಬೇಕು—ಸುಸಂಸ್ಕೃತರಾಗಬೇಕು—ಸಾಕ್ಷರರಾಗಬೇಕು. ಈ ಇಚ್ಛೆಯು ಸಾಧಿಸಬೇಕಾದರೆ, ಆರ್ಥಿಕ ಪ್ರಗತಿಯನ್ನು ಭಾರತವು ಪಡೆಯಬೇಕಾದರೆ, ಬೇಸಾಯ ಮತ್ತು ಉದ್ಯೋಗಗಳ ಸುಂದರ ಸಮ್ಮಿಲನವು ಶಾಸ್ತ್ರೀಯ ರೀತಿಯಲ್ಲಿ ಮುಂದುವರಿಯಬೇಕು. ಜೀವನದ ನುಟ್ಟವನ್ನು ಏರಿಸಬೇಕೆಂಬ ಮಹತ್ತ್ವಾಕಾಂಕ್ಷೆ ನಮ್ಮ ಜನರಲ್ಲಿ ಬೆಳಗುತ್ತಿರಬೇಕು. ಇದನ್ನು ಸಾಧಿಸಲು ರಾಷ್ಟ್ರೀಯ ಸರಕಾರವನ್ನು ಪಡೆಯಬೇಕು, ಸ್ವಾತಂತ್ರ್ಯ ಗೆಲ್ಲಬೇಕು. ಜಗತ್ತಿನಲ್ಲಿ ನಮಗೊಂದು ನ್ಯಾಯದ ನುತ್ತು ಮಹತ್ತ್ವದ ಸ್ಥಾನವಿರಬೇಕು—ಜಗತ್ತಿನ ಶಾಂತಿ—ಜಗತ್ತಿನ ಸ್ವಾತಂತ್ರ್ಯ ಎಂದರೆ, ಭಾರತದ ಶಾಂತಿಸ್ವಾತಂತ್ರ್ಯಗಳಿಗೂ ಆದರಲ್ಲಿ ಸ್ಥಾನವಿರಬೇಕು. ವಿಜಯಿಗಳಾದ ರಾಷ್ಟ್ರಗಳು ವಿಜಯದ ಮದದಲ್ಲಿ ಭಾರತವನ್ನು ದಾಸ್ಯದಲ್ಲಿಯೆ ಇಟ್ಟರೆ, ಭಾರತೀಯರು ಅದನ್ನೆಂದಿಗೂ ಸಹಿಸರು. ಒಂದಾನೊಂದು ದಿನ ಅವರು ತಮ್ಮ ಒಳಜಗಳಗಳನ್ನು ಬದಿಗಿರಿಸಿ, ಸ್ವಾತಂತ್ರ್ಯಯುದ್ಧವನ್ನು ಸಾರುವುದು ಖಂಡಿತ. ಈ ಯುದ್ಧವು, ದಾಸ್ಯದಲ್ಲಿದ್ದು ಸ್ವಾತಂತ್ರ್ಯವನ್ನು ಬಯಸಿದ ಇತರ ರಾಷ್ಟ್ರಗಳು ಸಾರಿದ ಇಂತಹ ಯುದ್ಧಗಳು ಸಾಮ್ರಾಜ್ಯಶಾಹಿಗಳೆನ್ನುವಂತೆ ಶಾಂತತಾ ವಿರೋಧಿಗಳಲ್ಲ; ಇವು ಆದರ್ಶ ಶಾಂತತೆಯನ್ನು ಸ್ಥಾಪಿಸುವ ಯುದ್ಧಗಳು. ಜಗತ್ತಿನಲ್ಲಿ ದಾಸ್ಯವಿರುವ ವರೆಗೆ, ಸಾಮ್ರಾಜ್ಯಗಳಿರುವ ವರೆಗೆ ಇಂತಹ ಯುದ್ಧಗಳು ಸಾಗಲೇಬೇಕು ಮತ್ತು ಸಾಗುವುವು. ಇಂದು ನಡೆದಿರುವ ಯುದ್ಧಾನಂತರ ಬರುವ ವ್ಯವಸ್ಥೆಯಲ್ಲಿ, ವ್ಯವಸ್ಥೆಯ ನಂತರವೂ ದಾಸ್ಯಕ್ಕೆ ಆಸ್ಪದವಿದ್ದರೆ, ವರ್ಣದ್ವೇಷಕ್ಕೆ ಸ್ಥಾನವಿದ್ದರೆ, ಸಾಮ್ರಾಜ್ಯಶಾಹಿಗೆ ಅನುವಿದ್ದರೆ, ಸ್ವಾತಂತ್ರ್ಯಯುದ್ಧಗಳು ಮುಂಬರುವುವು. ಈ ಯುದ್ಧಗಳಲ್ಲಿ ಎಷ್ಟೆ ಹಾನಿಯಾಗಲಿ, ಎಷ್ಟೇ ಜನರು ಸಾಯಲಿ ದಾಸ್ಯದಲ್ಲಿದ್ದ ರಾಷ್ಟ್ರಗಳು ಸ್ವತಂತ್ರವಾಗುವವರೆಗೆ ಇವು ನಡೆಯಲೇಬೇಕು, ಮತ್ತು ನಡೆಯುವುವು.

ಇಂದಿನ ವರೆಗೆ ನಾವು ಸೋಲುತ್ತ ಬಂದಿದ್ದೇನೆ— ಸ್ವಾತಂತ್ರ್ಯ ದೊರೆಕಿಸುವ ಪ್ರಯತ್ನಗಳಲ್ಲಿ! ಆದರೆ ಸಮಾಧಾನದ ಸಂಗತಿಯೆಂದರೆ ನಮ್ಮ ರಾಷ್ಟ್ರೀಯತೆಯು ಸತ್ತಿಲ್ಲ, ನಮ್ಮ ನಿಶ್ಚಯವೂ ಇನ್ನಿಷ್ಟು ಬಲಗೊಂಡಿದೆ. ಕ್ರಮೇಣ ನಮ್ಮ ಪ್ರತೀಕಾರ ಶಕ್ತಿಯೂ ಹೆಚ್ಚುವುದು. ನಾವಿನ್ನು ಸಾಂಘಿಕ ಪ್ರಯತ್ನ ಮಾಡುತ್ತಲಿದ್ದೇವೆ, ತಾತ್ಕಾಲಿಕ ಅಪಯಶಸ್ಸಿಗೆ ಗುರಿಯಾದರೂ ಸಾಂಘಿಕಶಕ್ತಿಗೆ ಕೊನೆಯ ಜಯ ಖಂಡಿತ. ಗಾಯಗೊಂಡ ಸತ್ಯವು ಕೊನೆಗೆ ಗೆಲ್ಲುವುದು ಖಂಡಿತ. ಅಂದೇ ಜಗತ್ತಿನಲ್ಲಿ ಆದರ್ಶ ಸ್ವಾತಂತ್ರ್ಯ–ಶಾಂತಿಗಳು ನೆಲೆಗೊಳ್ಳುವುವು ಇಂಗ್ಲಂಡಿನ ಕವಿ ಮಿಲ್ಟನ್ ಹಾಡಿದ್ದಾನೆ:

" Virtue may be assailled but not hurt
Surprised by unjust force but never enthralles "

ಮೇಲಾಗಿ ನಮ್ಮ ಇಚ್ಛೆ, ಪುಹತ್ತ್ವಾಕಾಂಕ್ಷೆ ಪ್ರಯತ್ನಗಳಲ್ಲಿ ಸಾತ್ತ್ವಿಕತೆ ಇದೆ, ನ್ಯಾಯಕ್ಕಾಗಿ ನಾವು ಹೋರಾಡುತ್ತಲಿದ್ದೇವೆ; ಯಾರ ಕೇಡನ್ನೂ ನಾವು ಇಚ್ಛಿಸುತ್ತಿಲ್ಲ, ಯಾರ ಸೊತ್ತನ್ನೂ ಅಪಹರಿಸಬೇಕೆಂದಿಲ್ಲ. ಪುಹಾತ್ಮಾ ಎಬ್ರಹಾಂಲಿಂಕನ್ (Abraham-linkan) ಹೇಳಿರುವಂತೆ " With malice towards rone, with charity for all, with faith in the right as god gives us to see the right, let us strive on to finish the work we are in " ಎನ್ನುತ್ತ ನಾವು ಸಾಗಿದ್ದೇವೆ. ನ್ಯಾಯವು ನಯವನ್ನು ಅನುಭವಿಸುವುದು ಖಂಡಿತ.

ಹೊಣೆಯು ಮೇಲಕ್ಕೇರುತ್ತಲಿದೆ. ನನ್ನ ಮನಸ್ಸು ವಿಚಾರವಾಹನವನ್ನೇರಿ ಮೇಲೇರಲಿ! ಗಾಳಿಯು ಬೀಸುತ್ತಲಿದೆ, ದಶದಿಕ್ಕುಗಳಲ್ಲಿ ಸಂಚರಿಸುತ್ತಲಿದೆ. ನನ್ನ ಕಣ್ಣುಗಳೂ ವಿಶಾಲ ಜಗತ್ತಿನ ಕಡೆಗೆ ನೋಡುತ್ತಿರಲಿ! ನನ್ನ ಕಾರ್ಯರಂಗವು ದಿನದಿನಕ್ಕೆ ದೊಡ್ಡದಾಗುತ್ತ ನಡೆಯಲಿ. ಒಂದೆರಡು ವರುಷಗಳಿಂದ ಮಾನವತೆಯ ವಿಷಯದಲ್ಲಿ ನನ್ನಲ್ಲಿ ಮನೆಮಾಡುತ್ತಿರುವ ಮಮತೆಯು, ಮಾನವತೆಯ ಸಮಸ್ಯೆಗಳಲ್ಲಿ ಸೂಕ್ಷ್ಮವಾಗಿ ವಿಚಾರಿಸುವ ವಿಮರ್ಶಾಬುದ್ಧಿಯು ಮರಗಳಾಗಿ ಬೆಳೆದು, ತಮ್ಮ ಫಲಗಳನ್ನು ನಾಲ್ದೆಸೆಗಳಲ್ಲಿ ಹಂಚಲಿ. ಇಂದು ಇದು ಇಚ್ಛೆಯಾಗಿದ್ದರೆ ನಾಳೆಯದು ಮಹತ್ತ್ವಾಕಾಂಕ್ಷೆಯಾಗಿ ಪರಿಣಮಿಸಲಿ. ಇಡೀ ಜಗತ್ತಿನಲ್ಲಿ ಸ್ವಾತಂತ್ರ್ಯ, ಶಾಂತಿ, ಪ್ರಗತಿಗಳು ನಲಿದಾಡುವ ಸುದಿನಗಳು ಬೇಗನೆ ಬರಲಿ!

ಜಯಂತಿ ಕಾರ್ಯಾಲಯದಲ್ಲಿ ದೊರೆಯುವ ಪುಸ್ತಕಗಳು

ಗೀತಾಗಾಂಭೀರ್ಯ	೩	೦	೦
ನಗೆ (ರಸವಿಚಾರ)	೧	೮	೦
ಆಹ್ವಾನ (ಕವನಸಂಗ್ರಹ)	೧	೦	೦
ನಿರಾಹಾರ	೦	೧೫	೦
ಸುದರ್ಶನ (ಕಾದಂಬರಿ)	೧	೦	೦
ವಿರಹಿಣಿ (ಕವನಸಂಗ್ರಹ)	೦	೧೫	೦
ಕರ್ನಾಟಕ ಜನಜೀವನ	೧	೮	೦

ಪ್ರಪಂಚದ ಪೇಟೆಗಳು ಯಾರ ಪದರಲ್ಲಿ?

(ಆರ್ಥಿಕಲೋಕದ ಅವಲೋಕನ)

ಶ್ರೀ. ವಾಳವೇಕರ ಗುರುರಾಯರು, ಬಿ. ಎ., ಎಲ್‌ಎಲ್. ಬಿ. ಹುಬ್ಬಳ್ಳಿ

ಪ್ರಪಂಚದಲ್ಲಿ ಆದ ಆಧುನಿಕ ಯುದ್ಧಗಳು ಪೇಟೆಗಳನ್ನು ಕೈವಶಮಾಡಿಕೊಳ್ಳುವುದಕ್ಕಾಗಿಯೆ ಆಗಿವೆಯೆಂದು ಹೇಳಿದರೆ ಬಹಳ ತಪ್ಪಾಗಲಿಕ್ಕಿಲ್ಲ. ಯುದ್ಧದಲ್ಲಿ ತೊಡಗಿದ ರಾಷ್ಟ್ರಗಳಲ್ಲಿ ಉದ್ಯೋಗಗಳಲ್ಲಿ ಬಹಳ ಮುಂದರಿದ ರಾಷ್ಟ್ರಗಳಿವೆ. ಬ್ರಿಟನ್, ಜರ್ಮನಿ, ಜಪಾನ್, ಅಮೇರಿಕೆಗಳು ತಾವು ತಯಾರಿಸಿದ ಸರಕುಗಳಿಗೆ ಭೂಪೃಷ್ಠದ ಎಲ್ಲ ಭಾಗಗಳಲ್ಲಿಯೂ ಗಿರಾಕಿಗಳಿರಬೇಕೆಂದು ಯತ್ನಿಸುತ್ತವೆ. ಆದರೆ ಸದ್ಯದ ಮಹಾಯುದ್ಧ ಮುಗಿದ ಬಳಿಕ ಕೆಲವು ಕಾಲದ ತರುವಾಯವೂ ಪ್ರಪಂಚದ ಪೇಟೆಗಳಲ್ಲಿ ಸ್ವತಂತ್ರತೆಯಿಂದ ಸುಳಿದಾಡಲು ಜರ್ಮನಿ-ಜಪಾನುಗಳಿಗೆ ಅನುವು ದೊರತೀತೆಂದು ತೋರುವುದಿಲ್ಲ. ಆದರೂ ಜರ್ಮನಿಯು ಕೊನೆಯ ವರೆಗೆ ಹಿಂದುಳಿದ ರಾಷ್ಟ್ರವಾಗಿಯೆ ಖಾಲ ಕಳೆದೀತೆಂದು ಹೇಳಲಿಕ್ಕಾಗುವುದಿಲ್ಲ. ಹಿಂದಿನ ಮಹಾಯುದ್ಧದಲ್ಲಿ ಜರ್ಮನರ ಪೂರ್ವಜರು ಹೂಣರು (Huns) ಇದ್ದರೆಂದು ಸದ್ಯದ ಜರ್ಮನರು ಅವರ ವಂಶಜರನ್ನು ಹೀಯಾಳಿಸುವುದರಲ್ಲಿ ಬಂತು. ಹಾಗಿದ್ದರೆ ರೋಮನ್ ಸಾಮ್ರಾಜ್ಯವನ್ನು ಮಣ್ಣುಗೂಡಿಸಿದ ಮತ್ತು ಬ್ರಿಟಿಶ್ ಸಾಮ್ರಾಜ್ಯವನ್ನು ಮೂಲೆಗುಂಪುಮಾಡಿದ ಅಭಿಮಾನ ಅವರಿಗೆ ಯಾಕೆ ಇರಬಾರದು? ಕಳೆದ ಮಹಾಯುದ್ಧದ ಮೊದಲು ಲಂಡನ್ ಪೇಟೆಯನ್ನು ಸರಿಗಟ್ಟುವ ಬೇರೆ ಪೇಟೆ ಪ್ರಪಂಚದಲ್ಲಿ ಎಲ್ಲಿಯೂ ಇದ್ದಿಲ್ಲ. ಲಂಡನಿನ ಸ್ಟಾಕ್‌ಎಕ್ಸ್‌ಚೆಂಜಿಗೆ ಅಗ್ರಪೂಜೆಯ ಮಾನವಿದ್ದು, ಬ್ರಿಟನ್ನು ಸಾವುಕಾರ ರಾಷ್ಟ್ರ (Creditor nation) ವಾಗಿತ್ತು; ಉದ್ಯೋಗಗಳ ಕೇಂದ್ರವಾಗಿತ್ತು. ತಾನು 'ವರ್ಕ್‌ಶಾಪ್ ಆಫ್ ದಿ ವರ್ಲ್ಡ್' ಎಂಬ ಹೆಸ್ಮೆಯಿಂದ ಮೆರೆಯುತ್ತಿತ್ತು. ಜಾಗತಿಕ ಮೊದಲನೆಯ ಯುದ್ಧದಲ್ಲಿ ಜರ್ಮನರು ಸೋತರೂ, ಬ್ರಿಟನನ್ನು ಮೊದಲನೆಯ ಮಾನದ ಸ್ಥಾನದಿಂದ ಪದಚ್ಯುತ ಮಾಡಿವೆ ಬಿಡಲಿಲ್ಲ. ಸಾವುಕಾರನಿದ್ದವನನ್ನು ನಾಲಗಾರನನ್ನಾಗಿ ಮಾಡಿತು. ನ್ಯೂಯಾರ್ಕಿನ ಸ್ಟಾಕ್ ಎಕ್ಸ್‌ಚೆಂಜು, ಅಭಿಮಾನದ ಮೊದಲನೆಯ ಸ್ಥಾನವನ್ನು ಸಹಜವಾಗಿ ಸೆಳೆದುಕೊಂಡಿತು. ಪದಗುಗಳನ್ನು ಕಟ್ಟುವುದರಲ್ಲಿ ಹಾಗೂ ಪ್ರಪಂಚದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸರಕುಗಳನ್ನು ಒಕ್ಕೊಂಡು ಹೋಗುವುದರಲ್ಲಿ ಬ್ರಿಟಿಶರು ಎಲ್ಲ ರಾಷ್ಟ್ರಗಳಿಗಿಂತ ಮುಂದುವರಿದಿದ್ದರು. Britania rules the waves ಎಂಬ ಬಿರುದಾವಳಿಯನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಕಳೆದ ಮಹಾಯುದ್ಧದ ನಂತರ ಎಲ್ಲವೂ ಬಯಲಾಯಿತು. ಭಾರತದಂಥದಲ್ಲಿಯ ಬ್ರಿಟಿಶ್ ನೌಕರರು, ಬ್ರಿಟಿಶ್ ಕಂಪನಿಯ ಪ್ರವಾಸಿಕರ ಪದಗುಗಳಲ್ಲಿಯೆ ಹೆಚ್ಚು ಬಾಡಿಗೆ ಕೊಟ್ಟು ಹೋಗಬೇಕೆಂದು ಅಪ್ರತ್ಯಕ್ಷವಾಗಿ ಒತ್ತಾಯ ಮಾಡುವ ಪ್ರಸಂಗ ಬಂತು. ಇಟಲಿಯ ಪ್ರವಾಸಿಕರ ಪದಗುಗಳು ಕಡಿಮೆ ಬಾಡಿಗೆ ತಕ್ಕೊಂಡು ಪ್ರವಾಸಿಕರಿಗೆ ಎಲ್ಲ ಸುಖ-ಸೌಕರ್ಯಗಳನ್ನು ಪೂರಯಿಸತೊಡಗಿದುವು. ಜಲಪ್ರವಾಸಿಕರ ಪೆಸರುಗಳು ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತವೆ. ಭಾರತದಲ್ಲಿಯ ಬ್ರಿಟಿಶ್ ನೌಕರರಿಗೆ ಸ್ವದೇಶಕ್ಕೆ ಹೋಗಲಿಕ್ಕೆ ತಗಲುವ ವಚ್ಚ ಒಂದುಸ್ಥಾನದ ಬೊಕ್ಕಸದಿಂದ ದೊರೆಯುತ್ತದೆ. ಬ್ರಿಟಿಶ್ ಪಡಗುಗಳು ಬೇಡುವ ಪೆಚ್ಚಿನ ಬಾಡಿಗೆ ತಕ್ಕೊಂಡು, ಕಡಿಮೆ ಬಾಡಿಗೆ ಬೇಡುವ ಇಟಲಿಯ ಪಡಗುಗಳಲ್ಲಿ ಪ್ರವಾಸ ಮಾಡಿದ ಉದಾಹರಣೆಗಳು ಗೊತ್ತಾದುವಂತೆ. ಬ್ರಿಟಿಶ್ ಪಡಗುಗಳಲ್ಲಿ ಪ್ರವಾಸ ಮಾಡುವುದು ಬಹುಮಾನದ್ದೆಂಬ ತಿಳುವಳಿಕೆಯು ಹೋಯಿತು.

ವರ್ಸಾಯದ ಒಪ್ಪಂದದಲ್ಲಿ ಕಾಣಿಸಿದ ಕರಾರುಗಳನ್ನು ನೋಡಿದರೆ ಜರ್ಮನಿಯ ಅವನ್ಥೆಯು ಹಿಂದುಸ್ಥಾನದಲ್ಲಿಯ ಎರಡನೆಯ ಮೂರನೆಯ ತರಗತಿಯ ಸಂಸ್ಥಾನಕ್ಕೆ ಬಂದಂತಾಗಿತ್ತು. ಆದರೆ ಯುರೋಪಖಂಡದಲ್ಲಿ ಫ್ರಾನ್ಸಿನ ವರ್ಚಸ್ಸು ಹೆಚ್ಚಾಗಿ, ಆದು ತಮಗೆ ಬಾಧಕವಾದೀತೆಂದು ಬ್ರಿಟರಿಗೆ ಎನಿಸಿ, ಜರ್ಮನಿಯು ತಕ್ಕಮಟ್ಟಿಗೆ ಬಲವಾದ ರಾಷ್ಟ್ರವಾಗಿರುವುದು ಒಳಿತೆಂದನಿಸತೊಡಗಿತು. ಜರ್ಮನರು ಕೊಡಬೇಕೆಂದು ಒಪ್ಪಂದದಲ್ಲಿ ಕಾಣಿಸಿದ ಕಪ್ಪ-ಕಾಣಿಕೆಗಳನ್ನು— ಅವರು ಮನಸ್ಸು ಮಾಡಲು ಯತ್ನಿಸಿದ್ದರೂ—ಅವರಿಂದ ಕೊಡುವುವಾಗುತ್ತಿದ್ದಿಲ್ಲ. ಜರ್ಮನ್ ಸರಕುಗಳನ್ನು ತಕ್ಕೊಳ್ಳದಿದ್ದರೆ ಅವರು ಕೊಡಬೇಕಾದ ಹಣ ಅವರಿಗೆ ಎಲ್ಲಿಂದ ದೊರೆಯಬೇಕು? ಎಲ್ಲ ಸ್ವತಂತ್ರರಾಷ್ಟ್ರಗಳು ಜಕಾತಿಯ ಕೋಟೆ-ಕೊತ್ತಳಗಳನ್ನು ಕಟ್ಟಿಕೊಂಡಿದ್ದುವು. ಆದರಿಂದ ಈ ಕರಾರುಗಳ ಪುನರ್‌ವಿಚಾರಣೆಯಾಯಿತು. ಡಾವಿಸ ಪ್ಲ್ಯಾನ್, ಯಂಗ್ ಪ್ಲ್ಯಾನುಗಳು ಬಂದುವು. ಜರ್ಮನರಿಗೆ ಬೇಕಾದ ಒಂದಷ್ಟಲವು ದೊರೆಯತೊಡಗಿತು. ಅವರು ತಮ್ಮ ಸರಕುಗಳಿಗೆ ಗಿರಾಕಿಗಳನ್ನು ದೊರಕಿಸತೊಡಗಿದರು. ಬಹಳ ಪೆಸರುಪಡೆದರು. ಬ್ರಿಟಿಶರನ್ನು ನಾಲ್ಕು ವರ್ಷಗಳವರೆಗೆ ತೇಕಿಸಿದ ಜರ್ಮನರಿಗೆ, ಹಿಂದುಸ್ಥಾನದಲ್ಲಿಯ ಒಂದು ಸಣ್ಣ ಪಟ್ಟಣದಲ್ಲಿಯ ಸುಸಜ್ಜಿತವಾಲ್ಗೆ ಪಾಯಸ್ಸಗಳನ್ನು ಪೂರಯಿಸಲು ಆಸ್ಪದ ದೊರೆತಿತ್ತು. ಹೇಳಿ ಕೇಳಿದಂತೆ ಮಹಾಯುದ್ಧ ಮುಗಿದನಂತರ ಜರ್ಮನರ ಕೈಯಲ್ಲಿದ್ದ ವ್ಯಾಪಾರದ ತಿರುಗಿ ತವರಿಗೆ ಎಂದೂ ದೊರೆಯಲಿಕ್ಕಿಲ್ಲವೆಂದು ಹೇಳುವುದು ಧಾರ್ಷ್ಟ್ಯದ ಮಾತು.

ಜರ್ಮನಿ-ಜಪಾನುಗಳು ಅಗ್ಗದ ಮಾಲನ್ನು ಪೂರಯಿಸುವುದರಲ್ಲಿ ಮಿಗಿಲಾದುವುಗಳು. ಪ್ರವಂಚದ ಪೇಟೆಗಳಿಂದ ಇವೆರಡೂ ರಾಷ್ಟ್ರಗಳು ಇಲ್ಲದಂತಾಗುತ್ತವೆ. ಈ ಬಳಿಕ ಜಗದುವುಗಳಲ್ಲಿ ಫ್ರಾನ್ಸು ಬಲಹೀನವಾದೀತು; ಅದನ್ನು ಗಣನೆಗೆ ತಕ್ಕೊಳ್ಳುವ ಕಾರಣವಿಲ್ಲ. ಬಹಳ ಹೆಚ್ಚಾದರೆ ಅದಕ್ಕೆ ಅವರ ವಸಾಹತುಗಳ ಪೇಟೆಗಳನ್ನು ಬಿಟ್ಟುಕೊಡ-

ಬಹುದು. ರಷಿಯಾ ತನ್ನ ಔದ್ಯೋಗಿಕ ಉನ್ನತಿಯಲ್ಲಿ ತೊಡಗಿಕೊಂಡುಳಿಯುವುದು. ಹೆಚ್ಚಿನ ಹೊರಗಿನ ಪೇಟೆಗಳ ಗೊಡವೆಗೆ ಅದು ಹೋಗಲಿಕ್ಕಿಲ್ಲ. ಬ್ರಿಟನ್ ಮತ್ತು ಅಮೇರಿಕೆಗಳಿಗೆ ಪ್ರಪಂಚದಲ್ಲೆಲ್ಲ ಪಸರಿಸಲು ಬೇಕಾದವಷ್ಟು ಅನುವು ಇದೆ. ಇಬ್ಬರೂ ಕೂಡಿ ಜಗತ್ತಿನಲ್ಲಿಯ ಎಲ್ಲ ಸಾಧನ-ಸಾಮಗ್ರಿಯನ್ನು ತಕ್ಕೊಂಡು ಹೋಗಿ, ತಮ್ಮ್ ಕಾರಖಾನೆ-ಗಿರಣಿಗಳಲ್ಲಿ ಸಿದ್ಧವಾದ ಸರಕುಗಳನ್ನು ಪೂರಯಿಸುವ ಕೆಲಸವನ್ನು ಹಂಚಿಕೊಂಡರಾಯಿತೆಂಬುದು ಕೆಲವು ಬ್ರಿಟಿಶರ ವಿಚಾರ. ಅವರೆ ಹೀಗಾಗುವುದಕ್ಕೆ ಅನೇಕ ಎಡರು-ತೊಡರುಗಳಿವೆ.

ಈ ಎರಡೂ ರಾಷ್ಟ್ರಗಳು ಸಮಬಲ ರಾಷ್ಟ್ರಗಳಲ್ಲ. ಅಮೇರಿಕೆಯು ಸಾವುಕಾರನಾಗಿದೆ; ಬ್ರಿಟನ್ನು ನಾಲಗಾರನಾಗಿದೆ. ಉದ್ಯೋಗದಲ್ಲಿ ಅಮೇರಿಕೆಯು ಬಹಳ ಮುಂದುವರಿದಿದೆ. ಬ್ರಿಟನ್ನು ೧೯ನೆಯ ಶತಮಾನದ ಹಳೆಯ ಅಭಿಮಾನದ ಕತೆ ಹೇಳುತ್ತ ಕುಳಿತಿದೆ. ಲ್ಯಾಂಕೆಷಾಯರ್ ಮ್ಯಾಂಚಸ್ಟರಿನಲ್ಲಿಯ ಗಿರಣಿಗಳಲ್ಲಿಯು ಯಂತ್ರಗಳು ಯಾವ ಮಾದರಿಯವಿವೆಯೆಂಬುದನ್ನು, ಬ್ರಿಟನಿನಿಂದ ಅಮೇರಿಕೆಗೆ—ಅಲ್ಲಿಯ ನೂಲುವ ನೇಯುವ ಉದ್ಯೋಗವನ್ನು ನಿರೀಕ್ಷಿಸಲಿಕ್ಕೆ ಹೋದ ಕಮಿಶನಿನವರು ಜೆನ್ನಾಗಿ ವರ್ಣಿಸಿದ್ದಾರೆ: ೩೨ ಮಗ್ಗಗಳನ್ನು ಒಬ್ಬನೇ ಅಮೇರಿಕನ್ ನೇಕಾರನು ನಡೆಯಿಸಬಲ್ಲನು. ಬ್ರಿಟಿನಲ್ಲಿಯ ಗಿರಣಿಗಳಲ್ಲಿ, ೮-೧೦ ಮಗ್ಗಗಳಿಗಿಂತ ಹೆಚ್ಚಿನ ಮಗ್ಗಗಳು ಬ್ರಿಟನ್ ನೇಕಾರನಿಂದ ನಡೆಯಿಸಲು ಸಾಧ್ಯವಿಲ್ಲ. ಅಮೇರಿಕೆಗೆ ಸರದೇಶಗಳಿಂದ ತರುವ ಸಾಧನಸಾಮಗ್ರಿ ಬಹಳ ಕಡಿಮೆ ಇದೆ. ಎಂದು ತೊಳೆಯ ಹತ್ತಿ ಬೆಳೆಯುವ ಬ್ರಿಟಿಶರು ಪ್ರಪಂಚದ ಪೇಟೆಗಳಿಗೆಲ್ಲ ಸೂಲು ಹಾಗು ಬಟ್ಟೆಗಳನ್ನು ಪೂರಯಿಸುವ ಹವ್ಯಾಸವನ್ನು ಏಕೆ ತಾಳಬೇಕು? ಉತ್ತಮವಾದ ಹತ್ತಿ ಬೆಳೆಯುವ ದೇಶಗಳು ೭-೮ ಸಾವಿರ ಮೈಲು ದೂರವಿರುವ ಬ್ರಿಟಿನಿಗೆ ಹತ್ತಿಯನ್ನು ತಳಿಸಿ, ಬ್ರಿಟನ್ನಿನಲ್ಲಿಯ ಕೆಲಸಗಾರರಿಗೆ ತಮ್ಮ ದೇಶದಲ್ಲಿಯ ಕೆಲಸಗಾರರಿಗಿಂತ ಹೆಚ್ಚು ಕೂಲಿ ಕೊಟ್ಟು, ಬ್ರಿಟಿಶ್ ವಿಮಾ ಕಂಪನಿಗಳಿಗಾಗಿ ಪ್ರಿಮಿಯಮ್ ಪೂರಯಿಸಿ, ಬ್ರಿಟಿಶ್ ಬ್ಯಾಂಕುಗಳಿಗೆ ಹುಂಡಿ-ದಲಾಲಿ ಮುಂತಾದ್ದನ್ನು ಕೊಟ್ಟು, ತುಟ್ಟಿಯ ಮಾಲು ಯಾಕೆ ಕೊಳ್ಳಬೇಕು? ಅಮೇರಿಕೆಯು ಎಲ್ಲಕ್ಕೂ ಮಿಗಿಲಾದ ಹತ್ತಿಯನ್ನು ಬೆಳೆಯುವ ದೇಶವಿದೆ. ಸಿರಿವಂತಿಕೆಯಲ್ಲಿ ಅವರ ಪಟ್ಟಿಗೆ ಕುಳಿತುಕೊಳ್ಳುವ ಯೋಗ್ಯತೆ ಪ್ರಪಂಚದಲ್ಲಿ ಬೇರೆ ಯಾವ ರಾಷ್ಟ್ರಕ್ಕೂ ಇಲ್ಲ. ಭೌತಿಕಶಾಸ್ತ್ರದಲ್ಲಿ, ಯಂತ್ರಕಲೆಯಲ್ಲಿ ಬ್ರಿಟನನ್ನು ಹಿಂದೆ ಹಾಕಿದೆ. ಹಿಂದುಸ್ಥಾನದಲ್ಲಿ ಬಂದ ಅಮೇರಿಕೆಯ ಸೈನಿಕರ ಸಮವಸ್ತ್ರಗಳು ತಳತಳಿಸುತ್ತಿರುತ್ತವೆ. ಅವರು ಸೆಜ್ಜೆ ಮಾಡುವ ಹಣ, ಅವರು ಉಣ್ಣುವ ಊಟ, ಅವರು ತಿನ್ನುವ ತಿನಿಸು, ಅವರು ಕುಡಿಯುವ ಸುಣ್ಣ, ಅವರು ನಿತ್ಯ ಉಪಯೋಗಿಸುವ ಸಾಮಾನುಗಳನ್ನು ನೋಡಿ, ಬ್ರಿಟಿಶ್ ಸೈನಿಕರು ತಕರಾರು ಮಾಡಿದ್ದರಿಂದ ಅವರ ವಿಚಾರಣೆಗಾಗಿ ಒಬ್ಬ ದೊಡ್ಡ ಬ್ರಿಟಿಶ್ ಅಧಿಕಾರಿಯು ಹಿಂದುಸ್ಥಾನಕ್ಕೆ ಬಂದಿದ್ದನು.

ಬ್ರಿಟಿಶರಿಗೆ ಕಲ್ಲಿದ್ದಲಿ ಕಬ್ಬಿಣದ ಹೊರತು ಎಲ್ಲ ಸಾಧನ-ಸಾಮಗ್ರಿ ಪರದೇಶಗಳಿಂದ ಬರಬೇಕು. ಅಮೇರಿಕೆಯು ಬಹುಮಟ್ಟಿಗೆ ಸ್ವಾವಲಂಬಿಯಾಗಿದೆ. ಬ್ರಿಟಿನಲ್ಲಿ ಎಣ್ಣೆಯ ಕಣಿಗಳಿಲ್ಲ. ಪ್ರಪಂಚದಲ್ಲಿಯ ಎಣ್ಣೆಯ ಉತ್ಪತ್ತಿಯ ೧೦೦ಕ್ಕೆ ೬೦ರಷ್ಟು ಎಣ್ಣೆಯು ಅಮೇರಿಕೆಯ ಕಣಿಗಳಿಂದ ಹೊರಬೀಳುತ್ತದೆ. ಇದಲ್ಲದೆ ಇರಾಣ ಇರಾಕ್‌ಗಳಲ್ಲಿ—ಅಮೇರಿಕೆಯು ಧನಸಂಪನ್ನ ರಾಷ್ಟ್ರವಾದ್ದರಿಂದ—ಅದರ ವರ್ಚಸ್ಸು ಹೆಚ್ಚಾಗಿದೆ. ಯುದ್ಧಪೂರ್ವದ ರಾಷ್ಟ್ರಗಳಿಗೆ ಬೇಕಾದ ಯಂತ್ರಸಾಮಗ್ರಿಯನ್ನು ಹಾಗೂ ಅವರಿಗೆ ಅವಶ್ಯವಿರುವ ನಿತ್ಯೋಪಯೋಗದ ಒಡವೆಗಳನ್ನು ಕೊಟ್ಟು,ಅವರ ಎಣ್ಣೆಯ ವ್ಯಾಪಾರವನ್ನು ತಮ್ಮ ಅನುಮತಿಯಂತೆ ನಡೆಸಲು ಅವರನ್ನು ಒತ್ತಾಯಪಡಿಸಬಹುದು. ಅಲ್ಲಿಯ ಜನರನ್ನು ಬಂದೂಕು-ಬೇಯೊನೆಟ್ಟುಗಳಿಂದ ಬೆದರಿಸಿ, ಅಲ್ಲಿ ಮುಂದೆ ಬಹುಕಾಲದವರೆಗೆ ವ್ಯಾಪಾರ ಬೆಳೆಯಿಸುವುದು ಶಕ್ಯವಿಲ್ಲ.

ಬ್ರಿಟಿಶ್ ಸಾಮ್ರಾಜ್ಯದ ಭಾಗಗಳೇ ಬ್ರಿಟಿಶರ ಕೂಡ ಸ್ಪರ್ಧೆ ಮಾಡುವ ಸಂಭವ ಹೆಚ್ಚಿದೆ. ರೇಲ್ವೆಗಳಿಗೆ ಬೇಕಾದ ಸ್ಟೀಮ್ ಎಂಜಿನುಗಳನ್ನು ಕಾನಡಾ ಪೂರಯಿಸಲು ಪ್ರಾರಂಭಿಸಿದುದರಿಂದ ಹಾಗೂ ಆಸ್ಟ್ರೇಲಿಯಾ ಅವರ ಅನುಕರಣ ಮಾಡುವುದರಿಂದ ಭರತಖಂಡದಲ್ಲಿಯ ಬ್ರಿಟಿಶರ ಗಿರಾಕಿ ಕಡಿಮೆಯಾಗುವುದು. ತಮ್ಮ ಪಸಹಾತುಗಳಿಗೆ ಸಾಮ್ರಾಜ್ಯದ ಪೇಟೆಗಳನ್ನು ತಮಗಾಗಿ ಕಾದಿಡಬೇಕೆಂದು ಬ್ರಿಟನು ಹೇಳಿದರೆ ಅವರು ಕೇಳುವರೋ? ಯುದ್ಧಕಾಲದಲ್ಲಿ ಎಲ್ಲ ದೇಶಗಳಲ್ಲಿ ಕಾರಖಾನೆಗಳು ಹೆಚ್ಚಾಗಿವೆ. ಅವುಗಳಲ್ಲಿ ಸಿದ್ಧವಾಗುವ ಮಾಲಿಗೆ ಎಲ್ಲರಿಗೂ ಪೇಟೆಗಳು ಬೇಕು. ಸ್ವದೇಶದಲ್ಲಿಯ ಪೇಟೆಗಳಿಗೆ ಬೇಕಾಗುವ ಸರಕುಗಳನ್ನು ಮಾತ್ರ ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳು ಪೂರೈಸಿದರೂ ಕೂಡ, ಬ್ರಿಟಿಶರಿಗೆ ಅದರಿಂದ ಧಕ್ಕೆ ತಗಲುವ ಇರದು. ಹಿಂದುಸ್ತಾನದಲ್ಲಿ ರೇಲ್ವೆ ಎಂಜಿನುಗಳನ್ನು ತಯಾರಿಸಬೇಕೆಂಬ ಭಾರತೀಯರ ಬೇಡಿಕೆ ಬಹಳ ಹಳೆಯದಿದೆ. ಬ್ರಿಟಿಶರು ನೇಮಿಸಿದ ಕಮೀಶನ್ನಿನವರು ಸಹ ಹಿಂದೀ ಕಾರಖಾನೆಗಳಲ್ಲಿ ಎಂಜಿನ್ ತಯಾರಿಸಬೇಕೆಂದು ಸಿಫಾರಸು ಮಾಡಿದ್ದಾರೆ. ಈಗ ಟಾಟಾ ಕಂಪನಿಯ ಜಮಶೇದ್‌ಪುರದ ಕಾರಖಾನೆಯಲ್ಲಿ ಬಾಯಲರುಗಳು ತಯಾರಾಗುತ್ತವೆ. ಎಂದರೆ ಬ್ರಿಟಿನಿನಿಂದ ಭಾರತಕ್ಕೆ ಜ್ಞೇಕಾದ ಎಲ್ಲ ಬಾಯಲರುಗಳು ಮೊದಲಿನಂತೆ ಬರಲಾರವು. ಕಡಿಮೆ ಕಲ್ಲಿದ್ದಲಿ ಸುಟ್ಟು ಹೆಚ್ಚು ಉಗೆ ಉತ್ಪನ್ನ ಮಾಡುವ ಎಂಜಿನು ಬಾಯಿಲರುಗಳನ್ನು ತಯಾರಿಸುವ ದೇಶಕ್ಕೆ ಹೆಚ್ಚು ಗಿರಾಕಿಗಳು ದೊರೆಯುವುವು—ಆಸ್ಟ್ರೇಲಿಯದಲ್ಲಿ ಕಬ್ಬಿಣದ ಹಾಗೂ ಉಕ್ಕಿನ ಕಾರಖಾನೆಗಳು ಬಹಳ ಬೆಳೆದಿವೆ.

ಅಮೇರಿಕೆಗೆ ಜರ್ಮನ್ ಬಾಂಬುಗಳ ಧಕ್ಕೆ ತಾಗಿಲ್ಲ—ಬ್ರಿಟಿನ್ನಿಗೆ ಜರ್ಮನಿಯ ಬಾಂಬುಗಳು ತಂದೊಡ್ಡಿದ ತಾಪವು ಅಪಾರವಾಗಿದೆ. ಅನೇಕ ಪಟ್ಟಣಗಳು ಹಾಳಾಗಿವೆ. ವಾಸಮಾಡಿಕೊಂಡಿರಲಿಕ್ಕೆ ಮನೆಗಳಿಲ್ಲ. ಲಕ್ಷಾನುಧಿ ಮನೆಗಳು ಬಿದ್ದುಹೋಗಿವೆಯಲ್ಲದೆ ಕೆಲವು ಕಟ್ಟಡಗಳನ್ನು ಕೆಡವಿ ಪುನಃ ಕಟ್ಟುವ ಹೊರತಾಗಿ ಗತ್ಯಂತರವಿಲ್ಲದಂತಾಗಿದೆ. ಅವುಗಳಿಗೆ ಪ್ರತ್ಯೇಕ ಬಾಂಬಿನ ಹೊಡೆತ ಬೀಳದಿದ್ದರೂ ಬಲವಾದ ಧಕ್ಕೆ ತಗಲಿದ್ದುದರಿಂದ, ಅವುಗಳ ತಳಪಾಯಗಳು ಸಡಿಲಾಗಿವೆ. ಅನೇಕ ಕಾರಖಾನೆಗಳು ಧ್ವಂಸಮಾಡಲ್ಪಟ್ಟಿವೆ. ಇನ್ನುಗಳನ್ನು ಸರಿಪಡಿಸಿಕೊಳ್ಳಲು ಬಹಳ ಹಣ ವೆಚ್ಚಮಾಡಬೇಕು. ಕಳೆದ ೪-೫ ವರ್ಷಗಳಲ್ಲಿ ಬ್ರಿಟಿಶರಿಗೆ ಪರವೇಟೆಗಳಲ್ಲಿ ಕಾಲಿಡಲು ವಕ್ಕನಿವಿಲ್ಲ. ಯುದ್ಧ ಸಾಮಗ್ರಿಯನ್ನು ಪೂರಯಿಸುವುದರಲ್ಲಿ ಅವರ ಉತ್ಪಾದಕ ಬಲವೆಲ್ಲ ಖರ್ಚಾಗುತ್ತಿತ್ತು. ಅವರಿಗೆ ಕಳೆದ ಮೂರು ವರ್ಷಗಳಲ್ಲಿ

ಯುದ್ಧಕ್ಕೆ ಸಂಬಂಧವಿಲ್ಲದ (Non-Military) ಸರಕುಗಳನ್ನು ಅಮೇರಿಕೆಯು ಮೊದಲಿಗಿಂತ ಹೆಚ್ಚುಪ್ರಮಾಣದಿಂದ ಕಳಿಸಿದೆ. ಹಿಂದುಸ್ಥಾನಕ್ಕೆ ಅಮೇರಿಕೆಯಿಂದ ಬರುವ ಸರಕುಗಳು ಕಳೆದ ಮೂರುವರ್ಷಗಳಲ್ಲಿ ಹತ್ತು ಪಟ್ಟು ಹೆಚ್ಚಾಗಿವೆ. ಇವು ಸೈನ್ಯಕ್ಕೆ ಬೇಕಾದ ಸರಕುಗಳಲ್ಲ. ಹೀಗಾಗಲಿಕ್ಕೆ ಮುಖ್ಯ ಕಾರಣಗಳು ಎರಡು: ಜರ್ಮನರು ಹಗಲಿರುಳೂ ಎಡೆಬಿಡದೆ ನಡೆಯಿಸಿದ ಬಾಂಬುಹಲ್ಲೆಗಳು ಮತ್ತು ಬ್ರಿಟನ್ನಿನಲ್ಲಿಯ ಸಾಧನ ಸಾಮಗ್ರಿಯ ಅಭಾವ. ಹೊರಗಿನಿಂದಲೆ ಎಲ್ಲ ಸಾಧನ ಸಾಮಗ್ರಿ ಬ್ರಿಟನ್ನಿಗೆ ಬಂದ ಹೊರತು ಬ್ರಿಟನ್ನಿನ ಕಾರಖಾನೆಗಳು ನಡೆಯುವಂತಿಲ್ಲ. ಯುದ್ಧಮುಗಿದ ಬಳಿಕ ಕೂಡ ಈ ಅನನುಕೂಲತೆಯು ಬ್ರಿಟನ್ನಿಗೆ ಇದ್ದೇ ಇದೆ.

ಯುದ್ಧದ ಮೊದಲು ಬ್ರಿಟನ್ನಿಗೆ ಪರದೇಶಗಳಲ್ಲಿ ಅವರು ಬಿತ್ತಿದ ಬಂಡವಲವ ಬಡ್ಡಿ, ಡಿವ್ಹಿಡೆಂಡ್ ಮೊದಲಾದುವುಗಳು ಬರುತ್ತಿದ್ದುವು. ಈ ಹಣದಿಂದ ಅವರು, ಪರದೇಶಗಳಿಂದ ತಮಗೆ ಬೇಕಾದ ಸರಕುಗಳನ್ನು ಕೊಳ್ಳುತ್ತಿದ್ದರು. ಬ್ರಿಟನಿನ ಆಯಾತ ನಿರ್ಯಾತದ ಅಂಕೆಗಳನ್ನು ನಿರೀಕ್ಷಿಸಿದರೆ, ಆಯಾತವೆ ಹೆಚ್ಚಿದೆಯೆಂದು ಕಾಣುತ್ತದೆ. ಆದರೆ ಅದು ನಿಜವಾದ ವಸ್ತುಸ್ಥಿತಿ ಪ್ರದರ್ಶಕವಲ್ಲ. ಯುದ್ಧ ಪ್ರಾರಂಭವಾದ ನಂತರ, ಪರದೇಶಗಳಲ್ಲಿಯ ಬ್ರಿಟನಿನ ಬಂಡವಾಳವು ಅರ್ಧದಷ್ಟು ಈಗಾಗಲೆ ಕರಗಿ ಹೋಗಿದೆ. ಯುದ್ಧ ಇನ್ನೂ ಮುಗಿದಿಲ್ಲ. ಕೂಡಲೆ ಮುಗಿಯುವ ಭರವಸೆಯೂ ಇಲ್ಲ. ಮತ್ತು ವಿಚ್ಛವಾದ ಹಣದ ಲೆಕ್ಕಾಚಾರ ಆಗತಕ್ಕದ್ದಿದೆ. ಹಿಂದುಸ್ಥಾನಕ್ಕೆ ೧೫೦ಕೋಟಿ ರೂಪಾಯಿಗಳನ್ನು ಬ್ರಿಟನು ಕೊಡಬೇಕಾಗುತ್ತದೆ. "Export or die=" ನಿರ್ಯಾತವನ್ನು ಬೆಳಿಸಿರಿ ಇಲ್ಲವೆ ಮಡಿಯಿರಿ" ಎಂಬ ಕೂಗು ಬ್ರಿಟನಿನಲ್ಲಿ ಎದ್ದಿದೆ. ಯುದ್ಧದ ಮೊದಲಿಗಿಂತ ಯುದ್ಧದ ನಂತರ ಬ್ರಿಟನಿನ ನಿರ್ಗತವನ್ನು ೧೦೦ಕ್ಕೆ ೫೦ರಂತೆ ಹೆಚ್ಚಿಸಲೇಬೇಕೆಂದು ಅರ್ಥಸಚಿವರ ಅಭಿಪ್ರಾಯ. ಎಂದರೆ ಬ್ರಿಟನಿಗೆ ಯುದ್ಧದನಂತರ ಹೆಚ್ಚು ಪೇಟೆಗಳಿರಬೇಕು. ಅನೇಕ ದೇಶಗಳಲ್ಲಿ ಯುದ್ಧಸಾಮಗ್ರಿಯನ್ನು ತಯಾರಿಸಲು ಕಾರಖಾನೆಗಳು ಹೊರಟವೆ. ಗುಂಡು-ಮದ್ದುಗಳಿವೆ. ಯುದ್ಧಸಾಮಗ್ರಿಗಳು, ಹಡಗುಗಳು, ವಿಮಾನಗಳು, ಬಟ್ಟೆ, ಬೂಟು, ಸಿಮೆಂಟು ಮೊದಲಾದ ಅನೇಕ ಸರಕುಗಳು ಯುದ್ಧನಾಮಗ್ರಿಗಳಲ್ಲಿ ಸಮಾವೇಶವಾಗುತ್ತಿವೆ. ಇವುಗಳ ಉತ್ಪಾದನೆಯ ಕಾರಖಾನೆಗಳು ಬೆಳೆದಿವೆ- ಇದ್ದ ಕಾರಖಾನೆಗಳು ವಿಸ್ತಾರಗೊಂಡು, ಅವುಗಳ ಉತ್ಪಾದನೆ ಹೆಚ್ಚಾಗಿದೆ. ಅರ್ಥಾತ್ ಇಂತಹ ಸಾಮಾನುಗಳನ್ನು ಪರದೇಶಗಳಿಂದ ತರಿಸುವ ಅವಶ್ಯ ಉಳಿದಿಲ್ಲ. ಬಟ್ಟೆ, ಸೀಮೆಂಟು, ಸಕ್ಕರೆಯ ವಿಚಾರದಲ್ಲಿ ಹಿಂದುಸ್ಥಾನವು ಸ್ವಾವಲಂಬಿಯಾಗಿದೆ. ಹೀಗೆ ಬೇರೆ ಬೇರೆ ಸರಕುಗಳ ಅಂಕೆಗಳನ್ನೂ ಬೇರೆ ಬೇರೆ ಉದ್ಯೋಗಗಳ ಪರಿಸ್ಥಿತಿಯನ್ನೂ ಪರಿತೀಲಿಸಿದರೆ, ಪ್ರಪಂಚದ ಪೇಟೆಗಳು ಯಾರ ವಶರಿನಲ್ಲಿ ಬೀಳುತ್ತವೆಯೆಂಬುದನ್ನು ಹೇಳುವುದು ಕಠಿನವಾಗುತ್ತದೆ

ಅಮೇರಿಕೆಯ ಕಾರಖಾನೆಗಳು ಈಗಿನಂತೆ ನಡೆದರೆ (ಮತ್ತು ಹಾಗೆ ನಡೆಯಲೇಬೇಕೆಂದು ಅಮೇರಿಕನ್ ತಜ್ಞರ ಮತ) ಅಮೇರಿಕನರಿಗೆ ಯುದ್ಧದನಂತರ ಸಧ್ಯಕ್ಕಿಂತ ಇಮ್ಮಡಿ ಮಾಲು ಪರದೇಶಗಳಿಗೆ ಕಳಿಸಲೇ ಬೇಕಾಗುತ್ತದೆ. ಇಲ್ಲದಿದ್ದರೆ ಅವರ ಕೆಲಸಗಾರರು ಕೆಲಸಗೇಡಿಗಳಾಗುವರು. ಈಗ ಯುದ್ಧವಲ್ಲಿ ತೊಡಗಿದವರು ರಣಕ್ಷೇತ್ರ-



ಡೋಂಗರೆ ಬಾಲಾಮೃತ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಗಳಿಂದ ತಿರುಗಿ ಬಂದ ಬಳಿಕ ಅವರಿಗೆ ಕೆಲಸ ಕೊಡಬೇಕಲ್ಲವ? ಈ ಪ್ರಶ್ನೆ ಎಲ್ಲ ಯುಧ್ಯಮಾನ ರಾಷ್ಟ್ರಗಳನ್ನು ವಿಚಾರಕ್ಕೆ ಹಚ್ಚಿದೆ. ಹಿಂದುಸ್ಥಾನದಲ್ಲಿ ಕೂಡ ೧೦-೧೫ಲಕ್ಷ ಜನರನ್ನು ಉದ್ಯೋಗಗಳಲ್ಲಿ ತೊಡಕಿಸಬೇಕಾಗಿದೆ. ಅವರೆಲ್ಲರನ್ನೂ ಒಕ್ಕಲತನದಲ್ಲಿ ನೂಕಲಿಕ್ಕಾಗುವುದಿಲ್ಲ. ಹೊಸ ಕಾರಖಾನೆಗಳನ್ನು ಅವರಿಗಾಗಿ ನಿರ್ಮಿಸಲಿಕ್ಕೇ ಬೇಕು. ಎಂದರೆ ದೇಶದ ಉತ್ಪಾದಕಬಲ ಬೆಳೆಯಬೇಕು. ಆದು ಬೆಳೆದಂತೆ ಪರದೇಶದ ಆಯಾತಕ್ಕೆ ಧಕ್ಕೆ ತಗಲುತ್ತ ಹೋಗುತ್ತದೆ. ಪ್ರಪಂಚದ ಪೇಟೆಗಳನ್ನೆಲ್ಲ ಬ್ರಿಟನ್ ಅಮೇರಿಕೆಗಳಿರಡಕೆ, ಮೀಸಲಾಗಿ ಇಟ್ಟರೂ ಅವರಲ್ಲಿ ಸ್ಪರ್ಧೆ ತಪ್ಪದು; ಮತ್ತು ಜರ್ಮನ್-ಜಪಾನುಗಳು ಮಾಡಿದ ಹಾನಿಯನ್ನು ತುಂಬಿಕೊಡುವ ಕರಾರು ಅವರೆ ಯಾಗೂ ಕವ್ವ-ಕಾಣಿಕೆಗಳನ್ನು ಕೊಡುವುದಾದರೆ ಅವರು ನಗದು ಹಣ ಕೊಡುವುದು ಅಥವಾ ಬಂಗಾರ-ಬೆಳ್ಳಿ ಕೊಟ್ಟಾರೆಂದು ಹೇಳಲಿಕ್ಕಾಗುವುದಿಲ್ಲ. ಕೊಡುವುದು ರಕ್ಕಸಿಲ್ಲ. ಹಿಂದಿನ ಯುದ್ಧವಾದ ಬಳಿಕ ಆದ ಒಪ್ಪಂದದ ಕರಾರುಗಳಲ್ಲಿ ಕಾಣಿಸಿದಂತೆ ಪೈಲುದ್ದ ಅಂಕೆಗಳನ್ನು ಹಾಕಿ ಜನತೆಯನ್ನು ಮೋಸಗೊಳಿಸಬಾರದು ಮತ್ತು ಆತ್ಮವಂಚನೆ ಮಾಡಿಕೊಳ್ಳಬಾರದೆಂದು ರಶಿಯಾ ಹೇಳಿದೆ. ಜರ್ಮನಿ, ಜಪಾನುಗಳು, ಕೊಡಬೇಕಾದ ಹಣವನ್ನು ಸರಕುಗಳನ್ನು ಕೊಟ್ಟೇ ಮುಟ್ಟಿಸುವುವು. ಅವುಗಳ ಕಾರಖಾನೆಗಳಿಗೆ ಗಿರಣಿಗಳಿಗೆ ಬೀಗ ಹಾಕಿದ ಹೊರತು ಬ್ರಿಟನ್-ಅಮೇರಿಕೆಗಳಿರಡರಲ್ಲಿಯೆ ಪ್ರಪಂಚದ ಪೇಟೆಗಳ ಹಂಚಿಕೆ ಹೇಗಾಗಬೇಕು ?

ಅಮೇರಿಕೆಗೆ ಅನೇಕ ತರದ ಅನುಕೂಲತೆಗಳಿವೆ. ದಕ್ಷಿಣ ಅಮೇರಿಕೆಯ ಉದ್ಯೋಗ ವ್ಯಾಪಾರಗಳು ಅಮೇರಿಕೆಯ ಹೇಳಿಕೆಯಂತೆ ಸಾಗುವುವು. ಅಮೇರಿಕೆಯ ಬಲವು ಬೆಳೆಯುತ್ತಿದೆ ಬ್ರಿಟನ್ನಿನ ಬಲವು ಇಳಿಯುತ್ತಿದೆಯೆಂಬುದು ಎಲ್ಲರಿಗೆ ಗೊತ್ತಾದ ಸಂಗತಿ. **ಆರ್ಜೆಂಟಿನಾ**ವ ಗೋದಿಯ **ಬ್ರೆಝಿಲ್ಲಿನ** ಕಾಫಿಯ ವ್ಯಾವಾರ ಕೂಡ ಅಮೇರಿಕನ್ ಕೋಟ್ಯಧೀಶರ ಸ್ವಾಧೀನಕ್ಕೆ ಹೋಗಬಹುದು. ದಕ್ಷಿಣ ಅಮೇರಿಕೆಯ ಪೇಟೆಯೂ ಯುರೋಪಿಯನರಿಗೆ ದೊರೆಯುವ ಸಂಭವವಿಲ್ಲ ಯುರೋಪು ಬಹಳ ದೂರ. ಯುರೋಪು ಯುದ್ಧದಿಂದ ಹಣ್ಣಾಗಿದೆ. ದಕ್ಷಿಣ-ಉತ್ತರ-ಅಮೇರಿಕೆಗಳಿಗೆ ಯುರೋಪಿನ ಪೇಟೆಗಳೂ ಬೇಕಾಗಿವೆ. ಪ್ಯಾಸಿಫಿಕ್ ಮಹಾಸಾಗರದಲ್ಲಿಯ ಭೂಪ್ರದೇಶವನ್ನು ಅಮೇರಿಕನರು ಯಾರಿಗೂ ಬಿಟ್ಟುಕೊಡರು. ಅವರ ಸುರಕ್ಷತೆಗಾಗಿ ಅವುಗಳು ತಮ್ಮ ಆಳುಕಿನಲ್ಲಿರಲೇಬೇಕೆಂದು ಅವರ ಮನೀಷೆ. ಚೀನವು ತನ್ನ ಕಾಲ ಮೇಲೆ ತಾನು ನಿಲ್ಲಲು ಸಿದ್ಧವಾಗಿದ್ದರೂ, ಅಲ್ಲಿ ಯುರೋಪಿಯನರಿಗೆ ಕಾಲೂರಿ ನಿಲ್ಲಲು ಸ್ಥಳ ದೊರೆಯುವುದಿಲ್ಲ. ಚೀನಕ್ಕೆ ಬೇಕಾದ ಯಂತ್ರಸಾಮಗ್ರಿಯನ್ನು ಪೂರಯಿಸಲು ಅಮೇರಿಕೆಯಷ್ಟು ಅನುಕೂಲತೆಗಳು ಬ್ರಿಟನ್ನಿಗೆ ಇಲ್ಲ. ಅಮೇರಿಕೆಯಲ್ಲಿ ವಿಪುಲ ಬಂಡವಾಳವಿರುವುದರಿಂದ, ಚೀನದಲ್ಲಿಯ ಉದ್ಯೋಗಗಳಿಗೆ ಬೇಕಾದ ಬಂಡವಾಳವನ್ನು ಅಮೇರಿಕೆಯು ಸಹಜವಾಗಿ ಪೂರಯಿಸಿ, ಚೀನದಲ್ಲಿ ಸಿದ್ಧವಾಗುವ ಒಡವೆಗಳಿಗೆ ಬೇಕಾದ ಯಂತ್ರಸಾಮಗ್ರಿಯನ್ನು ತಮ್ಮ ಕಡೆಯಿಂದಲೇ ಕೊಳ್ಳಬೇಕೆಂಬ ಕರಾರು ಮಾಡಿಕೊಳ್ಳಬಹುದು. ಹತಾಶ ಜರ್ಮನಿ, ಬಲನಿಲ್ಲದ ಬ್ರಿಟನ್, ಕಳಿಗುಂದಿದ ಜಪಾನುಗಳಿಗೆ—ಚೀನದಲ್ಲಿ ಅಮೇರಿಕೆಗೆ ದೊರೆಯುವ ಆಸ್ಪದ— ಕೆಲವು ಕಾಲ ದೊರೆಯದು. ಚೀನವು ಮನೆಮುರುಕತನಕ್ಕೆ ಶರಣೆಂದು ಒಕ್ಕಟ್ಟಿನಿಂದ ತಮ್ಮ ದೇಶದ ಆರ್ಥಿಕ ಹಾಗೂ ಔದ್ಯೋಗಿಕ ಉನ್ನತಿಮಾಡಿಕೊಂಡಿದೆ. yallow danger ದ ಬಾಧೆ ಬಹು ಜನಾಂಗಗಳಿಗೆ ಬಡಿಯದೆ ಇರದು. ಚೀನೀ ಜನರು ಬಹಳ ಉದ್ಯೋಗಿಗಳು. ತೀರ ಅಲ್ಪ ವೆಚ್ಚದಿಂದ ಜೀನಿಸಬಲ್ಲರು. ಭೂಪೃಷ್ಠದ ಎಲ್ಲ ಭಾಗಗಳಲ್ಲಿ ಎಲ್ಲರಿಗಿಂತ ಕಡಿಮೆ ಕೂಲಿ ತಕ್ಕೊಂಡು ಎಲ್ಲರಿಗಿಂತ ಹೆಚ್ಚು ಕೆಲಸ ಮಾಡುವವರೆಂದು ಅವರ ಕೀರ್ತಿ ಇದೆ.

ಹೀಗಿದ್ದರೂ ಬ್ರಿಟಿಶರಿಗೆ ಸಾಮ್ರಾಜ್ಯದ ಮರಭಿಮಾನ ತಪ್ಪಿಲ್ಲ. ವರ್ಣದ್ವೇಷವು ಅಳಿದಿಲ್ಲ. ಆಫ್ರಿಕಾದಲ್ಲಿಯ ಮೂಲ ನಿವಾಸಿಗಳಿಗೆ ಪ್ರಜಾಪ್ರಭುತ್ವದ ಪಾಠ ಕಲಿಸುವ ಕೆಲಸವು ಇನ್ನೂ ಎಷ್ಟು ಶತಮಾನಗಳ ವರೆಗೆ ಸಾಗುವುದೋ ತಿಳಿಯದು. ಅಲ್ಲಿಯ ಹತ್ತಿ, ಕೋಕೋ, ಕೊಬ್ಬರಿ ಮೊದಲಾದುವುಗಳನ್ನು ತೀರ ಅಗ್ಗದ ಧಾರಣೆಯಿಂದ ಕೊಂಡು ಕೊಂಡು, ಬಟ್ಟೆ, ಸಕ್ಕರೆ ಮೊದಲಾದುವುಗಳನ್ನು ಹೆಚ್ಚಿನ ಬೆಲೆಗೆ ಮಾರುವ ವ್ಯಾವಾರವು ಅವ್ಯಾಹತ ನಡೆದಿದೆ. ಆಫ್ರಿಕದ ಪೇಟೆಗಳು ಯುರೋಪಿಯನರಿಗಾಗಿ ಕೊಟ್ಟುವಾಗಿದ್ದುವು. ಜರ್ಮನ್, ಫ್ರೆಂಚ್ ಬ್ರಿಟಿಶ್, ಪೋರ್ತುಗಾಲದಂತಹ ಸಣ್ಣ ಬಲಹೀನ ರಾಜ್ಯ ಸಹ— ಆಫ್ರಿಕದಲ್ಲಿಯ ಜನಾಂಗಗಳನ್ನು ಆಳುವ ನಿಸರ್ಗಸಿದ್ಧವಾದ ಹಕ್ಕು ಹೇಳುತ್ತಿವೆ. 'ಯುರೋಪಿಯರು ಉಷ್ಣಕಟಿಬಂಧದ ಭೂಭಾಗದಲ್ಲಿ ಬಳಲುತ್ತಿರುವುದು ಅಲ್ಲಿಯ ಜನರ ಸುಧಾರಣೆಗಾಗಿ, ಅವರ ಉದ್ಧಾರಕ್ಕಾಗಿ!' ಎಂದು ಬೇರೆ ಹೇಳಬೇಕಾಗಿಲ್ಲ! ಆಫ್ರಿಕಾದ ಕಪ್ಪು ಜನಾಂಗವನ್ನು ಶತಮಾನಗಳ ವರೆಗೆ ಪಾಶ್ಚಿಮಲ್ಲಿಟ್ಟ ಸುಧಾರಿಸಿದ ರಾಷ್ಟ್ರವಾದ ಅಮೇರಿಕೆಯು, ಯುರೋಪಿಯನರಿಗಿಂತ ಆಫ್ರಿಕಾದ ಸಂಬಂಧ ತನಗೆ ಹೆಚ್ಚಿದೆ.... ಅಲ್ಲಿಯ ವ್ಯಾಪಾರ ತಮ್ಮ ಸ್ವಾಧೀನದಲ್ಲಿರತಕ್ಕದ್ದು ನ್ಯಾಯವಾದದ್ದು—ಎಂದು ಸ್ಪಷ್ಟಪಡಿಸಹತ್ತಿದೆ. ಉತ್ತರ ಆಫ್ರಿಕೆಯಲ್ಲಿ ಇಜಿಪ್ಶಿಯನ್ನರು 'ತಮ್ಮ ಉತ್ತಮವಾದ ಹತ್ತಿಯ ಲಾಭ ತಮಗೇ ಉಳಿಯಬೇಕು, ಅದನ್ನು ಪರಕೀಯರ ಪಾಲಿನಲ್ಲಿ ಹಿಂದೆ ಹಾಕಿದ್ದು ಸಾಕು, ಮುಂದೆ ಹಾಗೆ ಮಾಡುವುದು ಯುಕ್ತವಲ್ಲ,' ಎಂದು ತಿಳಿಯಹತ್ತಿದ್ದಾರೆ. ಭಾರತೀಯರು ಕೂಡ ಯುಗಾಂಡಾ (Uganda) ಮೊದಲಾವ ಆಫ್ರಿಕದ ಭಾಗಗಳಲ್ಲಿ ಅಲ್ಪ ಸ್ವಲ್ಪ ಪ್ರಮಾಣದಿಂದ ವಸಾಹತು ಮಾಡಿಕೊಂಡು, ತಮ್ಮ ವ್ಯಾವಾರ ಬೆಳೆಯಿಸಹತ್ತಿದ್ದಾರೆ. ಅಲ್ಲಿ ಭಾರತೀಯರ ಜಿನ್ನು—ಪ್ರೆಸ್ಸುಗಳಿವೆ. ತಟ್ಟು ಬಟ್ಟೆ, ಮೊದಲಾದವುಗಳು ಆಫ್ರಿಕಾಕ್ಕೆ ಹೋಗುತ್ತವೆ. ಅರಿಸಿಣ, ಕೊಬ್ಬರಿ, ಮೊದಲಾದವುಗಳು ಹಿಂದುಸ್ತಾನಕ್ಕೆ ಬರುತ್ತವೆ. ಆದರೆ ಯಾವ ದೊಡ್ಡ ವ್ಯಾಪಾರವೂ ಭಾರತೀಯರ ಕೈಯಲ್ಲಿ ಇರಬಾರದೆಂದು ಯುರೋಪಿಯನರ ಯತ್ನ; ಆದರೂ ಗುಜರಾಥದ ಜನರು ಆಫ್ರಿಕೆಯಲ್ಲಿ ಸ್ಥಳಿಕರಾಗಿ ನಿಂತುಕೊಂಡು, ಯುರೋಪಿಯನರ ಕೂಡ ನಡೆಯಿಸಿದ ವ್ಯಾವಾರದ ಸ್ಪರ್ಧೆಯಲ್ಲಿ ಹಿಂದೆ ಬಿದ್ದಿಲ್ಲ. ಅಬಿಸೀನಿಯಾದಲ್ಲಿ 'ಹರಹರ' ಎಂಬ ಪಟ್ಟಣವಿದೆ. ಅಲ್ಲಿ ದೊಡ್ಡ ಸ್ಟೋರ್ ಇಟ್ಟು ವ್ಯಾವಾರ ಮಾಡಿದ ಮುಂಬಯಿ-

ಒಡನಾಡಿ

'ಆನಂದಿಕಂದ'ರ ಹೊಸ ಕವನಸಂಗ್ರಹ

ಇದೀಗ ಅಚ್ಚಾಗಿ ಬೆಳಕಿಗೆ ಬಂದಿದೆ!

"ಮುಂಬರಯುವ ಮುಗ್ಧಪ್ರಣಯದ ಆತುರ-ಕಾತರಗಳನ್ನೂ, ಏರುವರಯುವ ಕಾಮುಕ್ಯಣಯದ ರತಿ-ಹಾಸವಿಲಾಸಗಳನ್ನೂ, ತುಂಬುವರಯುವ ಅನುಭವಪ್ರಣಯದ ಸುಖ-ದುಃಖಗಳ ಉಯ್ಯಲೆಯಾಟವನ್ನೂ, ಇಳಿವರಯುವ ಪರಿಪಕ್ವಪ್ರಣಯದ ತತ್ತ್ವಜ್ಞತೆಯನ್ನೂ ಇಲ್ಲಿಯ ಕೃತಿಗಳಲ್ಲಿ ನೋಡಬಹುದು!"

ಹೊಸಕವನಗಳನ್ನು ವಿವಿಧರಾಗಗಳಲ್ಲಿ ಹಾಡಿಕೊಳ್ಳಬೇಕೆಂದು ಬಯಸುವವರು, ಅವಶ್ಯವಾಗಿ ಈ ಕವನ ಸಂಗ್ರಹದ ಸಹಕಾರ ಪಡೆಯಬೇಕು.

'ಬಾಳಿದು ಕನಸಲ್ಲ' 'ಬಂತು ಬಂತು ಮಾಗಿ!' 'ಜಯ ಜಯ ಫಾಲ್ಗುಣ!' 'ಹಚ್ಚ ದೀಪಾ ನಲ್ಲೆ!' ಮೊದಲಾದ ಜನಪ್ರಿಯ ಭಾವಗೀತಗಳು ಇದರಲ್ಲಿ ಸಂಗ್ರಹಗೊಂಡಿವೆ.

ಆಂದವಾದ ಮುದ್ರಣ, ಸುಂದರವಾದ ಕಟ್ಟು!

ಬೆಲೆ ಒಂದು ರೂಪಾಯಿ

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆಯಿರಿ!

ಯಲ್ಲಿಯ ವರ್ತಕರು, ಮುಂಬಯಿಯಲ್ಲಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವುದಕ್ಕಾಗಿ Harar Building ಕಟ್ಟಿದ್ದಾರೆ. ಕಳೆದ ಮಹಾಯುದ್ಧದ ನಂತರ ಆಫ್ರಿಕೆಯ ಪೇಟೆಗಳಲ್ಲಿ ಜಪಾನಿನ ಸರಕುಗಳು ಪ್ರವೇಶಿಸಿದುವು. ಅವುಗಳನ್ನು ದೂಡಿಹಾಕುವುದು ಯುರೋಪಿಯನರಿಗಾಗಲಿಲ್ಲ. ಇದಲ್ಲದೆ ಆಫ್ರಿಕೆಯ ಜನಾಂಗಗಳಲ್ಲಿ ಸಹ ಅಲ್ಪ-ಸ್ವಲ್ಪ ಜಾಗ್ರತಿಯಾಗಹತ್ತಿದೆ. ಹಿಂದಿನ ಯುದ್ಧವಾದ ಬಳಿಕ ಕುಶಾಗ್ರ-ಬುದ್ಧಿಯ ಜರ್ಮನ್ ಶಾಸ್ತ್ರಜ್ಞರು ಉದ್ಯೋಗಗಳಲ್ಲಿ ಹಿಂದುಳಿದ ದೇಶಗಳಿಗೆ ಹೋಗಿ, ಅಲ್ಲಿ ಉದ್ಯೋಗಗಳನ್ನು ಸ್ಥಾಪಿಸಲು ಸೂಚನೆ-ಸಲಹೆಗಳನ್ನು ಕೊಟ್ಟರು. ಜರ್ಮನಿಯಲ್ಲಿ ಅವರಿಗೆ ಸ್ಥಳ ದೊರೆಯದಿದ್ದರೆ ಅವರು ಆಫ್ರಿಕೆಯನ್ನು ನುಗ್ಗದೆ ಬಿಡರು. ಇರಾಣ, ಅಫಗಾಣಿಸ್ತಾನ, ತುರ್ಕಸ್ತಾನಗಳಲ್ಲಿ ಉದ್ಯೋಗಸ್ಥರು ಅವರ ಕುಶಲತೆಯನ್ನು ಅರಿತುಕೊಂಡಿದ್ದಾರೆ.

ಪರಿಸ್ಥಿತಿ ಬದಲಾಯಿಸಿದಂತೆ ಬ್ರಿಟಿಶ್ ಬಂಡವಳಗಾರರ ವಿಚಾರದಲ್ಲಿ ಬದಲಾವಣೆಗಳಾಗಿವೆ. ಕಪ್ಪು ಜನರು ಕಚ್ಚಾ ಮಾಲು ತಯಾರಿಸುವ ಆಚೆಗೆ ಹೋಗಬಾರದು. ಪತ್ತಿ ಬೆಳೆಯಬೇಕು, ಬಟ್ಟೆಗಾಗಿ ನೂಲಿಗಾಗಿ ಅದನ್ನು ಯುರೋಪೀಯ ದೇಶಗಳಿಗೆ ಕಳಿಸಬೇಕು. ಸೇಂಗಾ, ಅಗಸೆ ಮೊದಲಾದ ಎಣ್ಣೆಕಾಳುಗಳನ್ನು ಯುರೋಪಕ್ಕೆ ರಫ್ತು ಮಾಡಬೇಕು. ಅದರಿಂದ ತಯಾರಾದ ಜೇಕೆ ಜೇಕೆ ತರದ ಸಾಮಾನುಗಳನ್ನು ಕೊಳ್ಳಬೇಕು.... ಎಂಬ ಹಿಂದಿನ ವಿಚಾರ ಅಡಗಿದೆ. ಈಗ ಪೌರ್ವಾತ್ಯ ರಾಷ್ಟ್ರಗಳ ಬಂಡವಳಗಾರರನ್ನು ಕೂಡಿಸಿಕೊಂಡು ಆ ದೇಶದಲ್ಲಿಯೆ ಉದ್ಯೋಗಗಳನ್ನು ತೆಗೆಯುವ ವಿಚಾರ ನಡೆದಿದೆ. ಪೌರ್ವಾತ್ಯ ರಾಷ್ಟ್ರಗಳಲ್ಲಿ ಸಾಧನಸಾಮಗ್ರಿ ಸಮೀಪದಲ್ಲಿ ದೊರೆಯುತ್ತದೆ. ಪೇಟೆ ಕಾರಖಾನೆಯ ಬಾಗಲಲ್ಲಿ, ಕೂಲಿಯ ದರ ಕಡಿಮೆ, ಬಿಳಿಯ ಕೂಲಿಕಾರರಂತೆ ಹೆಚ್ಚಿನ ಸವಲತ್ತುಗಳನ್ನು ಕಪ್ಪುಕೂಲಿಕಾರರರು ಬೇಡುವುದಿಲ್ಲ ಮತ್ತು ಸ್ಥಾನಿಕ ಬಂಡವಾಳಗಾರರಿಗೆ ಒಂದು ತುಣುಕು ಕೊಟ್ಟರೆ ಅವರ ಬಾಯಿಗೆ ಬೀಗ ಹಾಕಿದಂತಾಗುತ್ತದೆ.... ಎಂಬ ವಿಚಾರ ತಲೆದೋರಹತ್ತಿದೆ. ಆದರೆ ಪರಕೀಯ ಬಂಡವಾಳ ಬೇಡ, ಅವರು ನಮಗೆ ಬಂಡವಾಳ ಕೊಡುವುದಾದರೆ ನಮ್ಮ ಕರಾರುಗಳಿಗನುಸರಿಸಿ ಕೊಡಲಿ! ಕಾರಖಾನೆಗಳ ಒಡೆತನ ಅವುಗಳ ಚಾಲಕತ್ವ ನಮ್ಮದಿರಬೇಕು, ನಮ್ಮ ಪೇಟೆಗಳು ನಮ್ಮ ಸ್ವಾಧೀನದಲ್ಲಿರಬೇಕು— ಎಂದು ಭಾರತೀಯರ ಅಭಿಪ್ರಾಯ.

ಎಲ್ಲಕ್ಕೂ ಮಹತ್ತ್ವದ ಪ್ರಶ್ನೆ ಎಂದರೆ, ಬಿಳಿಯ ಜನರ ಕಾರಖಾನೆಗಳ ಸರಕುಗಳಿಗೆ ಚಿರವಾಗಿ ಗಿರಾಕಿಗಳಾಗಿ ಉಳಿಯುವ ಕಪ್ಪು ಹಾಗು ಪೀತವರ್ಣದ ಜನಾಂಗಗಳಲ್ಲಿ, ಆ ಸರಕುಗಳನ್ನು ಕೊಳ್ಳುವ ಆರ್ಥಿಕ ಬಲವಿರಬೇಕಲ್ಲಾ? ಅವರ ಜೀವನದ ಮಟ್ಟವು (Standard of living) ಬೆಳೆಯಬೇಕು ಎಂದು ಹೇಳುವುದರಲ್ಲಿ ಬರುತ್ತದೆ. ಪಾಶ್ಚಾತ್ಯರ ಆರ್ಥಿಕ ಸತ್ತ್ವಪರಿಣಾವು ಸಂತರೆ ಅವರ ಸ್ಥಿತಿ ಸುಧಾರಿಸೀತು. ಒಂದು ಉದಾಹರಣೆಯನ್ನು ತಕ್ಕೊಳ್ಳುವಾ. ಬಟ್ಟೆಗಳಿಗೆ ಬೇಕಾದ ಸಾಬಾಣ, ನೈಗೆ ಹೆಚ್ಚಿಕೊಳ್ಳುವ ಸಾಬಾಣಗಳಿಗೆ ಗಿರಾಕಿ ಹೆಚ್ಚಾಗಬೇಕಾಗಿದೆಯೆನ್ನಿ. ಹೊಟ್ಟೆತುಂಬ ಅನ್ನ, ನೈತುಂಬ ಬಟ್ಟೆಗಳನ್ನು ದೊರಕಿಸುವ ಸಾಮರ್ಥ್ಯವೇ ಅವರಲ್ಲಿರದಿದ್ದರೆ ಅವರು ಸಾಬಾಣದ ಗೊಡವೆಗೆ ಏಕೆ ಹೋಪಾರು? ಸಾಬಾಣ ಕೊಳ್ಳಲು ಸಮರ್ಥರಿದ್ದವರಿಗೆ ದೇಶದಲ್ಲಿಯೆ ತಯಾರಾದ ಸಾಬಾಣಗಳ ಪೂರಯಿಕೆಯಾದರೆ, ಅವರ ಆರ್ಥಿಕ ಬಲ ಬೆಳೆದರೂ ಅದರ ಉಪಯೋಗ ಸ್ವಕೀಯರಿಗಾಗುವುದೇ ಹೊರತು ಪರಕೀಯರಿಗಾಗುವುದಿಲ್ಲ. ಹಿಂದುಸ್ಥಾನದಲ್ಲಿ ಸ್ವದೇಶೀ ಸಾಬಾಣಗಳ ಹೆಚ್ಚು ಖರ್ಚಾಗಹತ್ತಿವೆ: ಸಾಬಾಣದಿಂದ ಪರದೇಶಗಳಿಗೆ ಹೋಗುವ ಹಣ ದೇಶದಲ್ಲಿ ಉಳಿಯಲಿಕ್ಕೆ ಹತ್ತಿದ್ದರಿಂದ, ಅದರ ಉಪಯೋಗ ಬೇರೆ ಉದ್ಯೋಗಗಳನ್ನು ತೆಗೆಯುವುದಕ್ಕಾಗಿ ಆಗಹತ್ತಿದೆ. ಸ್ವದೇಶಿ ಭಾವನೆ ಬಲವಾಗಹತ್ತಿದ್ದರಿಂದ ಪರಕೀಯರು ಹಿಂದುಸ್ಥಾನದಲ್ಲಿ ಸಾಬಾಣದ ಕಾರಖಾನೆಯನ್ನು ಸ್ಥಾಪಿಸಿ "Made in India" ಎಂದು ತಮ್ಮ ಸಾಬಾಣ ಮಾರುತ್ತಿದ್ದಾರೆ. ಹೀಗಾದ್ದರಿಂದ ಸ್ವದೇಶಿ ಅಂದರೆ Indian Capital, Indian Management, Indian Labour ಇರಬೇಕೆಂದು ಹೇಳುವುದರಲ್ಲಿ ಬಂದು. ಸರ್ವನಾಶವಾಗುವ ಕಾಲಕ್ಕೆ ಅರ್ಧ ತ್ಯಜಿಸುವುದು ಒಳ್ಳೆಯದೆಂಬ ವಿಚಾರಕ್ಕೆ ಪಾಶ್ಚಾತ್ಯರು ಬಂದಿದ್ದಾರೆ. 'ನಿಮಗೆ ನಿತ್ಯ ಉಪಯೋಗದ ಸರಕುಗಳು ಜೇಡವಾದರೆ ಅವುಗಳನ್ನು ತಕ್ಕೊಳ್ಳಜೇಡಿ. ಆದರೆ ಅವುಗಳನ್ನು ತಯಾರಿಸುವ ಕಾರಖಾನೆಗಳಿಗೆ ಬೇಕಾದ ಯಂತ್ರಸಾಮಗ್ರಿಗಳನ್ನು ನಮ್ಮ ಕಡೆಯಿಂದಲೇ ಕೊಳ್ಳರಿ' ಎಂದು ಹೇಳಹತ್ತಿದ್ದಾರೆ. 'ಇಡಿ ಮೋಟಾರು ಕಟ್ಟಬೇಡಿ: ಅದರ ಭಾಗಗಳನ್ನು ನಮ್ಮ ಕಡೆಯಿಂದ ಕೊಂಡು ನಿಮ್ಮ ದೇಶದಲ್ಲಿ ಅವುಗಳನ್ನು ಹೊಂದಿಸಿ ಮೋಟಾರು ತಯಾರಿಸಿರಿ!' ಎಂದು ಉಪದೇಶ ಮಾಡುವುದರಲ್ಲಿ ಬರುತ್ತದೆ. ನಮ್ಮ ದೇಶದಲ್ಲಿ ಆಗತಕ್ಕ ಮೋಟಾರಿನ ಎಲ್ಲ ಭಾಗಗಳನ್ನೂ ನಾವು ಸಿದ್ಧಮಾಡುತ್ತೇನೆ, ನಮ್ಮಕ್ಕೆ ನಮ್ಮಿಂದ ಆಗದಂತಹವುಗಳನ್ನಷ್ಟೇ ಕೊಂಡುಕೊಳ್ಳುತ್ತೇವೆಂದು ಭಾರತೀಯರು ಹೇಳುತ್ತಿದ್ದಾರೆ. ಪಾಶ್ಚಾತ್ಯರ ಸ್ವಾಧೀನದಲ್ಲಿದ್ದ ಪೌರ್ವಾತ್ಯ ದೇಶದಲ್ಲಿಯ ಪೇಟೆಗಳಲ್ಲಿ ಈ ತರದ ಪರಿವರ್ತನೆಯಾಗಹತ್ತಿದೆ.

ಮಹಾಯುದ್ಧದಲ್ಲಿ ಅನೇಕ ಪಟ್ಟಣಗಳು ನಾಶವಾದುವು, ಎಷ್ಟೋ ಲಕ್ಷ ಜನರು ನುಸಿಪಾರು ಕಳಕೊಂಡರು, ಲಕ್ಷಾವಧಿ ಜನರು ಪ್ರಾಣಕ್ಕೆರವಾದರು. ಅಂಗವಿಹೀನರ ಸಂಖ್ಯೆಗೆ ಎಣೆಯಿಲ್ಲ. ಆದರೂ ಚಿತ್ತಶುದ್ಧಿಯಾಗಿಲ್ಲ, ಹೃದಯಪರಿವರ್ತನೆಯಾಗಿಲ್ಲ. ವ್ಯಾಪಾರದ ಜಹಮುಹಮಿಕೆಯಿಂದ ಮುಂದೆ ಮುಂದೆ ಹೊರಡುವ ಸಿದ್ಧತೆಯೇ ನಡೆದಂತಿದೆ. ಹೆಚ್ಚು ಪೇಟೆಗಳು ತಮ್ಮ ಸ್ವಾಧೀನದಲ್ಲಿರುವುದಕ್ಕಾಗಿ ಯತ್ನ ನಡೆದಿದೆ. ಬ್ರಿಟಿಸಿಗೆ ಹೋದ ಯುದ್ಧದ ಮೊದಲು ಇದ್ದ ಸ್ಥಾನ ದೊರೆಯದು. ಈ ಯುದ್ಧದ ಮೊದಲು ಇದ್ದ ಅದರ ವರ್ಚಸ್ಸು ಅವಕ್ಕೆ ಇರದು. ಪ್ರಪಂಚದ ಪೇಟೆಗಳಲ್ಲಿ ಜರ್ಮನಿಗೇ ಅಗ್ರಸ್ಥಾನ ದೊರೆಯದೆ ಇರದು.

ನರೇಗಲ್ಲ (ರೋಣ) ದಲ್ಲಿ ನಮ್ಮ ಏಜಂಟರು

ಬಸೆಟ್ಟೆಪ್ಪ ಬಸಪ್ಪ ಜಕ್ಕಲಿ

ನ್ಯೂಚ್ ಏಜಂಟ.

ಆಕೆ ಯಾರು?

(ಸಣ್ಣ ಕತೆ)

ಶ್ರೀ. ಎಂ. ನರಸಿಂಹಮೂರ್ತಿ, ಗುಬ್ಬಿ

"ಯಾರ್ರೀ ಅವರು?"

"ಯಾರು?"

"ಆ ಹೆಂಗಸರು!"

"ಯಾವ ಹೆಂಗಸರೇ? ಸ್ಪಷ್ಟವಾಗಿ ಹೇಳಬಾರದೇ?"

"ಅವತ್ತು ರೈಲಿನಲ್ಲಿ....."

"ಏನು ರೈಲಿನಲ್ಲಿ....." ಬಾಯಿ ಬಿಡು: ಅರ್ಧಂಬರ್ಧ ಮಾತಾಡೋದೆಲ್ಲಿ ಕಲಿತೇ! ಸಿಹಿಯಾಗಲಿ, ಕಹಿಯಾಗಲಿ ಬಾಯಿ ಬಿಟ್ಟು ಅಂದು ಬಿಡಬೇಕು!"

"ಆ ಮೇಲೆ ಕೋಪಿಸಿಕೊಂಡ್ರೆ?"

"ಯಾರ ಮೇಲೆ ಕೋಪ, ಯಾತಕ್ಕೆ? ಇಲ್ಲ, ಕೋಪಿಸಿಕೊಳ್ಳೊಲ್ಲ!"

"ಖಂಡಿತವಾಗಿ?"

"ಖಂಡಿತವಾಗಿ ಇಲ್ಲ!"

"ನಾವು ರೈಲಿನಲ್ಲಿ ಬರುವಾಗ ನೀವು ಕಣ್ಣು ಮಿಟುಕಿಸದೆ ಮುಗುಳ್ನಗೆಯಿಂದ ನೋಡುತ್ತಿದ್ದರಲ್ಲಾ, ಆ ದೇವಿ ಯಾರೂ ಅಂತ; ತಿಳೀತೆ?"

"ಓ, ಹೊ! ಅದೇ? ಏನು ಮಾಯಾಂಗನೆಯರೇ ನೀವು! ನೀನು ಹ್ಯಾಗೆ ಕಂಡುಕೊಂಡೆ ಅವನ್ನ?"

"ಬಿಡ್ರೀ ಸಾಕು, ಹೇಳ್ರೀ ಅವಳ್ಯಾರು (ನಸುನಗೆಯಿಂದ) ಎಂದೂ ಸಂಬಬಾರದು ಗಂಡಸರನ್ನ!"

"ನಂಬದಿದ್ದರೆ ಬೇಡ, ಬಿಡು! ನಂಬೂ ಅಂತ ನಿನ್ನ ಗೋಗರ್ಯೋರಾರು?"

"ಆಗಲೇ ಬಂತು ಸಿಟ್ಟು. ಅದಕ್ಕೇ ನಾ ಬಾಯಿ ಬಿಡೋಲ್ಲಾಂತ-ಅಂದದ್ದು ಹೇಳ್ರೀ.....ರೀ!"

"ನೋಡು ಲೀಲಾ, ಹೆಂಗುಸರ ಸ್ವಭಾವನೇ ಇಷ್ಟು. ಕೂಲಂಕಷವಾಗಿ ವಿಚಾರಮಾಡೋದಿಲ್ಲ, ಏನಿಲ್ಲ! ಸುಮ್ಮನೆ ಇಲ್ಲದ ಸಂಶಯ ತಂದುಕೊಂಡು ಕೊರಗೋದು. ನಮ್ಮ ಹಾಗೆ Plain ಆಗಿರಬಾರದೇ?"

"ನೀವು ಗಂಡಸ್ರು ಏನು ಮಾಡಿದರೂ ನಾವು ತುಟಿಪಿಟಕ್ಕೆನ್ನದೆ ನೋಡ್ತಾ ಇದ್ರೆ ಮಾತ್ರ ನಾವು ಒಳ್ಳೆಯವರು; ಏನಾದರೂ 'ಹಾಗಲ್ಲ ಹೀಗೆ ಎಂದರೆ ಆಗಲೇ ಬಂದು ಬಿಡತ್ತೆ ಸಿಟ್ಟು, ಕೋಪ! ಹೋಗಲಿ, ಅವಳ್ಯಾರು ಹೇಳ್ರೀ ನೀವು ಸಾಚಾ ಆದ್ರೇ! ಸಂದೇಹಕ್ಕೆ ನೀನಲ್ಲವೇ ಕಾರಣ?"

"ನೋಡು ಲೀಲಾ, ಕೊಂಚ ಸಮಾಧಾನ ತೊಗೋ. ಈ ಪ್ರಪಂಚದಲ್ಲಿ, ದೇವರು ಎಷ್ಟೋ ವಸ್ತುಗಳನ್ನು ಸೃಷ್ಟಿ ಮಾಡಿದ್ದಾನೆ. ಕೆಲವು ಮುದ್ದಾಗಿ ಮನಸ್ಸಿಗೆಳೆಯುವಂತಿವೆ. ಮತ್ತೆ ಕೆಲವು ಜುಗುಪ್ಸೆಯನ್ನುಂಟುಮಾಡುವಂತಿವೆ. ಸುಂದರ ಗುಲಾಬಿ, ಹುಣ್ಣಿಮೆಯ ಚಂದ್ರ, ಮುದ್ದಾದ ಶಿಶುಗಳು, ನೀಲಿಯಾಕಾಶ ಇವನ್ನು ನೋಡಿದರೆ ಮನಸ್ಸಿಗೆ ಆನಂದವಾಗುವುದಿಲ್ಲವೇ ಹಾಗೇ....."

"ಆಗಲೇ ಬಂತು ಸಿಟ್ಟು. ಅದಕ್ಕೇ ನಾ ಬಾಯಿ ಬಿಡೋಲ್ಲಾಂದದ್ದು"

"ಸಾಕ್ರೀ, ಈ ಪುರಾಣ; ನನಗೂ ಇದೆಲ್ಲಾ ಗೊತ್ತಿದೆ! ಕೇಳಿದ ವಿಷಯ ಬಿಟ್ಟು ನನ್ನನ್ನು ಮರೆಯಿಸಲಿಕ್ಕೆ ಯಾವುದೋ ವಿಚಾರವೆತ್ತಿ ಬಿಟ್ಟರಲ್ಲಾ! ಇದೆಲ್ಲಾ ಬುದ್ಧಿವಂತಿಕೆ ಆ ಹಳ್ಳಿಯ ಮೇಷ್ಟ್ರುಗಳ ಎದುರಿಗೆ ತೋರಿಸಿ, ನನ್ನೆದುರಿಗೆ ಬೇಡ!"

"ಲೀಲಾ, ಈ ನನ್ನ ಪುರಾಣ ಸಾವಧಾನದಿಂದ ಕೇಳೋಕೆ ನೀನಲ್ಲದೆ, ಆಫೀಸಿನಲ್ಲಿ ಕೇಳ್ತಾರೆಯೇ? ಅಲ್ಲಿ ಮಾಡೋ ಕೆಲಸಾ ಬಿಟ್ಟು ಹೀಗೆಲ್ಲಾ ಆಡಿದರೆ ಹುಚ್ಚಿ ಅಂತಾರೆ. ಆ ಮೇಲೆ ಆಸ್ಪತ್ರೆಗೇ—ಈ ಊರ್ದಲ್ಲ, ಬೆಂಗಳೂರು ಹುಚ್ಚಾಸ್ಪತ್ರೆಗೆ ದಾಖಲ್ಮಾಡ್ತಾರೆ. ಆ ಮೇಲೆ ನಿನ್ನ ಗತಿ?"

"ಏನ್ರೀ! ಇದು ಎಲ್ಲಿಂದೆಲ್ಲಿಗೋ ವಿಷಯ ಹಾರಿಸಿಬಿಟ್ರಲ್ಲ! ಖಂಡಿತವಾಗಿ ಕೇಳ್ತೀನಿ ಇನ್ನೊಂದು ಸಲ, ಹೇಳಲ್ಲವೇನ್ರಿ?"

"ಬಾರೇ ಇಲ್ಲಿ, ಇದ್ಯಾಕೆ ಇಷ್ಟು ಮುನಿಸು? ಕೊಂಚತಾಳು! ನೀನು ಕೇಳಿದ್ದಕ್ಕೆಲ್ಲಾ ಉತ್ತರ ಕೊಟ್ಟಿ ಅಸ್ಟೆ; ಇದು ಪುರಾಣವೇನೇ? ಬಾ ಚೆನ್ನ! ಆ ವಿಷಯ ಹೇಳ್ತೀನಿ." ಎಂದವನೇ ರಾಜು ಲೀಲೆಯನ್ನು ಎತ್ತಿ ಪಕ್ಕದಲ್ಲಿ ಕೂಡಿಸಿಕೊಂಡ.

ಹೊರಗಡೆ ಯಾರೋ " ಸಾರ್, ಸಾರ್ " ಎಂದು ಕೂಗಿದಂತಾ ಯಿತು. ಲೀಲೆಯು ಆಶಾಭಂಗದಿಂದ " ಸರಿ, ಯಾರೋ ಮೇಷ್ಟ್ರು; " ಸಾಹೇಬರನ್ನು ಕರೆಯೋಕೆ ಬಂದಿದ್ದಾರೆ. ಇನ್ನೇನು ಹೊರಡಿ'ರೀ, ಒಂದು ಉಪಾಯಮಾಡ್ಲೆ ? ' ಸಾಹೇಬರು ಇಲ್ಲಾಂತ ಹೇಳು ' ಎಂದು ....ರಂಗ ಹತ್ತಿರಲ್ಲಿ ಇದ್ದಾನೆ.....ಅವನಿಗೆ ಹೇಳಲೆ ? '

" ಬೇಡ, ಲೀಲಾ, ಪಾಪ ಆ ಮಾವಿನಕೆರೆ ಮೇಷ್ಟರು ಕರೆಯುವುದಕ್ಕೆ ಬಂದಿದ್ದಾನೇ ಅಂತ ಕಾಣತ್ತೆ. ನಾಳೆ ಆ ಊರಲ್ಲಿ ಹೊಸದಾಗಿ ಕಟ್ಟಿಸಿರುವ ಸ್ಕೂಲ್ ಕಟ್ಟಡದ ಪ್ರಾರಂಭೋತ್ಸವ ಇಟ್ಟುಕೊಂಡಿದ್ದಾರಂತೆ. ಡಿ. ಇ. ಓ. ಸಾಹೇಬರೂ ಬರಬಹುದು ಅವರಿಗೆ ನಾವು ನೆರವಾಗದಿದ್ದರೆ, ಮುಂದೆ ಹೇಗೆ ಕೆಲಸ ನೆರವೇರಿಸಬೇಕೆಂಬುದು ತೋಚುವುದಿಲ್ಲ. ಹೋಗಿ ನೋಡ್ತೀನಿ! "

" ಸರಿ, ಬಿಡಿ ! ನಿಮಗೆ ಯಾವತ್ತು ಪುರಸತ್ತು ? ಇವತ್ತು ವಿಾಟಿಂಗು, ನಾಳೆ ಸರಸ್ವತೀ ಪೂಜೆಯಾಗುವುದು ಸ್ಕೂಲಿನಲ್ಲಿ; ನಾಡಿದ್ದು ಸರ್ಕೀಟು ಇದ್ದೇ ಇದೆ. ಏನಾದರೊಂದು ದಿನ ಬೆಳಗಾದರೆ! ಅಂತೂ ಇಂತೂ ನನ್ನ ಪ್ರಶ್ನೆ ಹಾಗೇ ಉಳೀತು "

" ಲೀಲಾ, ಕೊಂಚ ತಡೆದುಕೋ. ಓಡಿಹೋಗುತ್ತೇನೆಯೇ ನಾನು ? ಇಂದಲ್ಲ ನಾಳೆ ಎಲ್ಲಾ ಗೊತ್ತಾಗುತ್ತೆ ! ಅದನ್ನು ಪುರಪತ್ತಿದ್ದಾಗ ಕೊಂಚ ವಿವರವಾಗಿ ಹೇಳಬೇಕು. ಬರುತ್ತಲೂ ಹೇಳ್ತಿನಿ." ಎಂದು ಕಿರುನಗೆಯನ್ನು ಸೂಚಿಸುತ್ತಾ ಬಾಗಿಲಿಗೆ ಹೋದನು.

ಮೊದಲೇ ಊಹಿಸಿದಂತೆ ಕೂಡಲೆ ಪ್ರಯಾಣ ಮಾಡಬೇಕಾಗಿ ಬಂದಿತು. ಪ್ರಯಾಣದ ಸಿದ್ಧತೆಯ ಗಡಿಬಿಡಿಯಲ್ಲಿ ಲೀಲಾ ತನ್ನ ಪತಿಗೆ ಪೂರ್ಣ ತೊಂದರೆ ಕೊಡಲಿಲ್ಲ. ರಾಜು ಹೊರಟು ಸಿದ್ಧನಾದ; ಲೀಲಾ ಕಡೆ ತಿರುಗಿದ: " ಲೀಲಾ ಮನೆಕಡೆ, ಜೋಪಾನ, ನಾಳೆ ಸಾಯಂಕಾಲ ಬರುತ್ತೇನೆ," ಎಂದು ರಂಗನನ್ನು ಕೂಗಿದ: " ಲೋ ಸಿಕ್ಕಿಪ ಕಡೆ ಆಲೆಯಬೇಡ, ಹುಷಾರಾಗಿ ನೋಡಿಕೋ !" ಎನ್ನುತ್ತಾ ಗಾಡಿಯಲ್ಲಿ ಹೊರಟೇ ಬಿಟ್ಟ.

ಲೀಲೆಯ ಮನಸ್ಸು ಶಾಂತವಾಗಲಿಲ್ಲ. ಏನೇನೋ ಯೋಚಿಸಿ ಯೋಚಿಸಿ, ತನ್ನ ಮನದಲ್ಲಿ ಒಂದು ಕಲ್ಪನಾ ಪ್ರಪಂಚವನ್ನೇ ನಿರ್ಮಿಸಿಕೊಂಡಳು. " ಆವರೇಕ ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ.....? ಇಬ್ಬರೂ ಚಿರಪರಿಚಿತ ವ್ಯಕ್ತಿಗಳಂತೆ ಒಬ್ಬರನ್ನೊಬ್ಬರು ಅಂದು ನೋಡುತ್ತಿರಲಿಲ್ಲವೇ? ಇದಕ್ಕೇನು ಕಾರಣ?....ನೋಡಿದರೆ ನಮ್ಮವರು ಬಹು ಸಂಭಾವಿತರಂತೆ ಕಾಣುತ್ತಾರೆ. ಪಾಪ ಅವರ ನಡತೆಯಲ್ಲಿ ಕೊಂಚವೂ ಕೂಡ ಒಂದಿಷ್ಟು ಕುಂದು ಕಂಡು ಬರುವುದಿಲ್ಲ. ಬೀದಿಯಲ್ಲಿ ಹೋಗುವಾಗ, ನಾನೇ ಎಷ್ಟೋ ಸಾರಿ ನೋಡಿದ್ದೇನೆ....ಹೆಂಗಸರನ್ನು ಕಣ್ಣೆತ್ತಿಕೂಡ ನೋಡುವುದಿಲ್ಲ. ಆದರೆ ಅಂದೇಕೆ ಹಾಗಾಯಿತು?..ಆಕೆ ಇವರಿಗೆ ದೂರದ ಸಂಬಂಧಿಯಿರಬಹುದೇ ? ಇಲ್ಲ,ಅದೂ ಸಾಧ್ಯವಿಲ್ಲ! ಹಾಗಾಗಿದ್ದರೆ ಮಾತನಾಡಿಸಬಹುದಾಗಿತ್ತು. ಇರಲಿ, ಈ ಸಮಸ್ಯೆಯನ್ನು ನಾನಂತೂ ಬಿಡಿಸಲಾರೆ. ನಾಳೆ ಬರಲಿ. ಹೇಳಿಸಿಯೇ ಬಿಡ್ತೀನಿ! " ಎಂದು ತನ್ನಲ್ಲೇ ನಿರ್ಧರಿಸಿದಳು. ಪತಿಯನ್ನು ಸ್ವಾಗತಿಸಿ, ಉಪಚಾರಗಳಿಂದ ತೃಪ್ತಿಪಡಿಸಿ, ಸುಪ್ರಸನ್ನನಾದ ಸಮಯದಲ್ಲಿ ಈ ಪ್ರಶ್ನೆಯನ್ನು ಕೇಳಬೇಕೆಂದು ಯೋಚಿಸಿಕೊಂಡಳು

× × × ×

ರಾಯರು ದೂರದಲ್ಲಿ ಬರುತ್ತಿರುವಾಗಲೆ ರಂಗನು ಓಡಿ ಬಂದು ಹೇಳಿದನು. ಸರಿ, ಸ್ವಾಗತಕ್ಕೆ ಸಿದ್ಧವಾಯಿತು. ರಾಜುವು ಲೀಲೆಯ ಪಂಚಿಕೆಯನ್ನು ಗೊತ್ತು ಮಾಡಿಕೊಂಡು, ಮುಗುಳ್ನಗೆಯಿಂದ ಕಾಫಿ ಕುಡಿಯುತ್ತಿದ್ದನು. ಕೊಂಚ ವಿನೋದ ಮಾಡಬೇಕೆನ್ನಿಸಿತು:

" ಲೀಲಾ, ಬಾ ಇಲ್ಲಿ! ಕೊಂಚ ಪಿಟೀಲು ತೆಗೆದುಕೋ!" ಎಂದ

" ಇವತ್ತು ಹೇಳ್ತೀರೋ? ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಿ!"

" ಪಿಟೀಲು ತೊಗೋ ಬೇಜಾರಾಗಿದೆ ಆಂದ್ರೆ, ಮತ್ತೂ ಬೇಜಾರ್ಮಾಡೋಕೆ ಶುರು ಮಾಡಿದೆ ! "

"ಇಲ್ಲಾಂದ್ರೆ ಪಿಟೀಲು ಬಾರಿಸ್ತೀನಿ, ಆ ಮೇಲೆ ನೀವು ಹೇಳೀಂತ ಕೇಳಿದ್ದು ! "

" ಹಾಗೋ, ಈಗ ಗೊತ್ತಾಯಿತು! ನಾನು ಹೇಳ್ತೀನಿಂತ ಮಾತು ಕೊಟ್ಟರೆ ನೀನೂ ಹಾಡ್ತಿಯೇನು? "

" ಅಲ್ರೀ, ಆ ಕಂಡೀಷನ್ ಏನೂ ಇಲ್ಲ. ನನ್ನ ಆತುರ ನಿಮಗೆ ಹೇಗೆ ಗೊತ್ತಾಗಬೇಕು ? ಹೇಳೋದಿಲ್ಲಾ ಅನ್ನಿ, ಪುನಃ ಕೇಳೋದೇ ಇಲ್ಲ ! "

" ಸಂಶಯಪಿಶಾಚ ಮನಸ್ಸನ್ನು ಕೊರೆಯ-ತ್ತಿದೆಯೇನೋ! ಆಗಲಿ, ಹೇಳೋಣಂತೆ, ಅದಕ್ಕೇನು? ಎಲ್ಲಿ ಹಾಡೋಣಾಗಲಿ!"

ಲೀಲೆಯು ಪತಿಯ ಭರವಸೆಯಿಂದ ಹಿಗ್ಗಿದವಳಾಗಿ. ಮಧುರ ಕಂಠವನ್ನು ಪಿಟೀಲಿಗೆ ಹೊಂದಿಸಿಕೊಂಡು, ಬಹು ಇಂಪಾಗಿ ತ್ಯಾಗರಾಜರ ಕೃತಿಗಳನ್ನು ಹಾಡಿದಳು.

ರಾಜು ಏನ ಕಡೆ ನೋಡಿದಳು. ರಾಜು ಇನ್ನು ತನ್ನ ಸರದಿಯೆಂದು ತಿಳಿದುಕೊಂಡ.

ಅಷ್ಟರಲ್ಲಿ ರಂಗ ಓಡಿ ಬಂದು " ಬುದ್ಧಿ, ದೊಡ್ಡ ಸಾಹೇಬರು ಬಸ್ಸಿನಾಗಬಂದವರೆ; ಕರೀತಾರೆ ತಮ್ಮನ್ನ " ಎಂದ. ಲೀಲೆಗೆ ಎರಡನೆಯ ಬಾರಿ ಆಶಾಭಂಗವಾಯಿತು. ರಾಜು ಕೂಡಲೆ ಕೋಟು, ಬೂಟುಗಳನ್ನು ಧರಿಸಿ ಹೊರಟೇ ಬಿಟ್ಟನು.

× × × ×

ರಾತ್ರಿ ಸುಮಾರು ಒಂಬತ್ತು ಗಂಟೆಗೆ ರಾಜು ಮನೆಗೆ ಬಂದನು. ಲೀಲೆಗೆ ಕೊಂಚ ಆವೇಶ ಬಂದಿತ್ತು. ಮಂಚದ ಮೇಲೆ ಬೋರಲಾಗಿ ಮಲಗಿದ್ದಳು. ರಾಜುವಿಗೆ ಅರ್ಥವಾಯಿತು. ಮೆಲ್ಲಗೆ ಕಪ್ಪೋಲದ ಮೇಲೆ ಕೈಯಿಟ್ಟ. ಕಣ್ಣೀರು ಸುರಿಯುತ್ತಿದ್ದಂತೆ ಕಂಡುಬಂತು. ದಿಂಬೆಲ್ಲ ಕಣ್ಣೀರಿನಿಂದ ನನೆದು ಒದ್ದೆಯಾಗಿತ್ತು. ರಾಜುವಿಗೂ ಮರುಕವುಂಟಾಯಿತು. " ಲೀಲಾ " ಎಂದ. ಲೀಲಾ ಪಕ್ಕಕ್ಕೆ ಸರಿದಳು. " ಏಳು ಲೀಲಾ, ಊಟವಾಗಲಿ, ಹೇಳಿದಲ್ಲದೆ ಮೇಗುವುದಿಲ್ಲ

"ಊಟವಾಗುವ ಹೊತ್ತಿಗೆ ಯಾರು ಬರ್ತಾರೋ ಸಾಹೇಬರನ್ನ ಕರೆಯೋಕೆ? " ಎಂದಳು ಲೀಲಾ. " ಯಾರೂ ಬಹುಶಃ ಬರುವುದಿಲ್ಲ ಬಂದರೂ ಅವರು ಇಲ್ಲ ಅಂತ ಹೇಳಿಕಳುಹಿಸಿ ಬಿಡು!" ಎಂದು ರಾಜು ಮಾತು ಕೊಟ್ಟನು!

ಭೋಜನವಾಯಿತು. ಇಬ್ಬರೂ ತಾಂಬೂಲ ಸವಿಯುತ್ತ ಮಂಚದ ಮೇಲೆ ಕುಳಿತರು. ಆಗ ರಾಜುವೇ ತನ್ನ ಕಥೆಯನ್ನು ಪ್ರಾರಂಭಿಸಿದ: " ಲೀಲಾ, ನಿನ್ನ ಸಂಶಯಕ್ಕೆ ಕೊಂಚವೂ ಎಡೆಯಿಲ್ಲ ಸುಮ್ಮನೆ ವ್ಯರ್ಥ ಏನೇನೂ ಊಹಿಸಿಕೊಂಡು ತೊಂದರೆ ಪಟ್ಟುಕೊಳ್ಳ

ಬಟ್ಟೆಗೆ ಹಾಕುವ 'ಡಾಯ್‌ಮಂಡ್' ತಯಾರಿ ಬಣ್ಣಗಳು

ತಾಳಿಕೆ-ಹೊಳಪುಗಳುಳ್ಳ ಗುಲಾಬಿ, ಹಳದಿ, ಕೇಸರಿ, ನೀಲಿ, ನೀರಲು, ಹಸಿರು, ಕಪ್ಪು, ಕೆಂಪು, ಖಾಕಿ, ಲೆವೆಂಡರ್, ಮತ್ತು ಚಾಕೊಲೆಟ್ ಬಣ್ಣಗಳು!

ಯಾವುದೇ ಬಗೆಯ ೧೧ ಒಡೆಗಳನ್ನು ವಿ. ಪಿ. ಯಿಂದ ೨ ರೂಪಾಯಿಗಳಿಗೆ ಪಡೆಯಬಹುದು.

ಡಾಯ್‌ಮಂಡ್ ಸೋಪ್ ಕಂ. ಕಲ್ಯಾಣ

(ಜಿ. ಆರ್. ಪಿ. ರೈಲ್ವೆ)

ಳ್ಳುತ್ತೀಯೆ. ನಾನು ಮೊದಲು ಕೆಲಸಕ್ಕೆ ಸೇರಿದಾಗ, ಹೈಸ್ಕೂಲು ಮಾಸ್ಟರಾಗಿ ಅಲ್ಲವೇ ಸೇರಿದ್ದು? ನನ್ನನ್ನು ಮೊದಲು ಹಾಸನದ ಹೈಸ್ಕೂಲಿಗೆ ನೇಮಕ ಮಾಡಿದರು. ಆಗ ಇನ್ನೂ ಪ್ರತ್ಯೇಕವಾದ ಹೈಸ್ಕೂಲನ್ನು ಹೆಣ್ಣುಮಕ್ಕಳಿಗಾಗಿ ಏರ್ಪಡಿಸಿರಲಿಲ್ಲ. ಹೆಣ್ಣುಮಕ್ಕಳೂ ಗಂಡು ಹುಡುಗರೂ ಒಟ್ಟಿಗೆ ಹೈಸ್ಕೂಲಿಗೆ ಬರುತ್ತಿದ್ದರು....

....ಆಗ ನನಗೆ ಇನ್ನೂ ಇಷ್ಟು ಲೋಕಾನುಭವ,ತಾಳ್ಮೆ ಇರಲಿಲ್ಲ; ಮೇಲಾಗಿ ಇನ್ನೂ ಚಿಕ್ಕ ವಯಸ್ಸು. IV ಫಾರ್ಮ್ ತರಗತಿಗೆ ಜನ ಹುಡುಗಿಯರು ಬರುತ್ತಿದ್ದರು. ಅವರನ್ನು ಪ್ರತ್ಯೇಕವಾಗಿ ಕೂಡಿಸುವ ರೂಢಿಯಿತ್ತು. ಅವರಲ್ಲಿಯ "ಇಂದುಮತಿ" ಎಂಬ ಹುಡುಗಿ ಬಹಳ ಚುರುಕಾಗಿದ್ದಳು. ಅಲ್ಲದೆ ಕೊಂಚ ಧೈರ್ಯಶಾಲಿ ಎಂದು ಹೇಳಬೇಕು. ಆ ಗಂಡು ಹುಡುಗರಿಗೂ ಇವಳನ್ನು ಕಂಡರೆ ಕೊಂಚ ದಿಗಿಲು. ಅವರ ತುಂಟಾಟಕ್ಕೆ ಇವಳು ಸಗ್ಗುತ್ತಿರಲಿಲ್ಲ. ಎದುರಿಗೇ ದಬಾಯಿಸಿಬಿಡೋಳು; ಇಲ್ಲವೆ ಮುಖ್ಯೋಪಾಧ್ಯಾಯರಿಗೆ ತಿಳಿಸಿ ಶಿಕ್ಷೆ ಮಾಡಿಸುತ್ತಿದ್ದಳು. 'ಇಂದು' ಆ ಹುಡುಗಿಯರ ಗುಂಪಿಗೇ ಮುಂದಾಳಾಗಿದ್ದಳು. ನಾನು ಮೊದ-ಮೊದಲು ಆ ಹುಡುಗರನ್ನೇ ಸಂಭೋಧಿಸಿ ಪಾಠ ಹೇಳುತ್ತಿದ್ದೆ. ಕೆಲವುದಿನ ಹೀಗೆಯೇ ಕಳೆಯಿತು. ಒಂದು ದಿನ ಇಂದುವು "ಏನು ಸಾರ್, ನಮ್ಮನ್ನು ಏನೂ ಕೇಳುವುದೇ ಇಲ್ಲವಲ್ಲ! ನಾವು ಬಂದು ಕೂತಿರೋದು ಹೋಗೋದು ತಾನೆ?" ಎಂದಳು. ಇವಳ ಧೈರ್ಯಕ್ಕೆ ನನಗೇ ಆಶ್ಚರ್ಯವಾಯಿತು. ಅಂದಿನಿಂದ ಪಾಠಕ್ರಮವನ್ನು ಕೊಂಚ ಬದಲಾಯಿಸಿಕೊಂಡೆ; ಆದರೂ ಕಣ್ಣೆತ್ತಿ ಅವರ ಕಡೆ ನೋಡುತ್ತಿರಲಿಲ್ಲ. ಸರಿ. ಕೊಂಚ ದಿವಸಗಳಲ್ಲಿಯೆ ಇಂದುವು ನನಗೆ ನಾಮಕರಣ ಮಾಡಿದಳು. ಅದು ನನಗೆ ತಿಳಿದು ಬಂದುದು ಗಂಡುಹುಡುಗರಿಂದ. ಅವರು ಇಂದುವಿನ ಮೇಲೆ ಸೇಡುತೀರಿಸಿಕೊಳ್ಳಲು ಕಾದಿದ್ದರು. ಮಾಧ್ಯ, ತರಗತಿಯ ಮಾನೀಟರ್, ಒಂದು ದಿನ ನನ್ನ ಕೊಠಡಿಗೆ ಬಂದು, "ಸಾರ್ ಆ ಹುಡುಗೀರು ತಮಗೆ Sheep ಅಂತ ಹೆಸರಿಟ್ಟಿದ್ದಾರೆ. ಅವರ ಗಲಾಟೆ ಜಾಸ್ತಿಯಾಗಿದೆ. ಇದಕ್ಕೆಲ್ಲ ಇಂದುನೇ ಕಾರಣ ಸಾರ್! ನೀವು ಹೆಡ್‌ಮಾಸ್ಟರಿಗೆ ಹೇಳಿ ಬಿಡಿಸಾರ್. ಸರಿ ಹೋಗುತ್ತೆ" ಎಂದ. ನನಗೆ ನಿಜವಾಗಿ ಇಂದುವಿನ ಮೇಲೆ ಕೋಪ ಬರಲಿಲ್ಲ. ಅಕ್ಕೆಯೆ ನನಗೆ ಮಾರ್ಗದರ್ಶಿಸಿಯೆಂದು ಭಾವಿಸಿದೆ. ತಪ್ಪನ್ನು ತಿದ್ದಿಕೊಂಡೆ.

ವಾರ್ಷಿಕ ಪರೀಕ್ಷೆಯ ವೇಳೆ ಸಮೀಪಿಸಿತು. ಒಂದು ದಿನ ಇಂದುವು ನನಗೊಂದು "ಲೆಟರ್" ಕೊಟ್ಟು ಹೊರಟು ಹೋದಳು. ಅದನ್ನು ಓದಿಕೊಂಡೆ. ನನಗೆ ಇಂದುವಿನ ಹೃದಯ ಗೊತ್ತಾಯಿತು. ಅದು ಕ್ಷಮಾಪಣೆಯ ಪತ್ರವಾಗಿತ್ತು. ಅದನ್ನು ಇನ್ನು ಕಳೆಯದೆ ಪೆಟ್ಟಿಗೆಯಲ್ಲಿ ಇಟ್ಟಿದ್ದೇನೆ. ಮಾರನೆಯ ದಿನ ಅವಳನ್ನು ಕರೆದು ಹೇಳಿದೆ: 'ಇಂದು, ಯೋಚಿಸಬೇಡ! ನಿನ್ನ ವಿಷಯದಲ್ಲಿ ನನಗೆ ತಪ್ಪು ಅಭಿಪ್ರಾಯವಿಲ್ಲ. ನನ್ನನ್ನು ಕಣ್ಣು ತೆರೆಯುವಂತೆ ಮಾಡಿದವಳು ನೀನು! ಹೆದರಬೇಡ, ಕ್ಷಮಿಸಿದ್ದೇನೆ ಹೋಗಮ್ಮ!' ಎಂದೆ. ಆಗ ಇಂದುವು ಅಶ್ರುಪೂರಿತವಾದ ಕಣ್ಣುಗಳಿಂದ ನನ್ನನ್ನು ಕ್ಷಣ ನೋಡಿದಳು. ನಾಚಿಕೆಯಾಯಿತೇನೋ; ಪಾಪ ತಲೆತಗ್ಗಿಸಿಕೊಂಡು ಹೊರಟು ಹೋದಳು. ಅಂದಿನ ನೋಟವು ನನಗೆ ಇಂದೂ ಕಣ್ಣಿಗೆ ಕಟ್ಟಿದಂತಾಗಿದೆ. ಆ ವರ್ಷ ನನಗೆ ಅಲ್ಲಿಂದ ನವರ್ಗವೂ ಆಯಿತು. ನಾನು ಈ ಮುಖ್ಯೆ ಅವಳನ್ನು ಎಂದೂ ನೋಡಿರಲಿಲ್ಲ. ಮೊನ್ನೆ ನಾವು ರೈಲಿನಲ್ಲಿ ಸಂಧಿಸಿದುದು ಆಕಸ್ಮಿಕ. ಈಗ ಆಕೆಯೂ ಸಂಸಾರಿಯಾಗಿರಬೇಕು. ಪೂರಾ ಬದಲಾಯಿಸಿದ್ದಾಳೆ. ಆಕೆಯೊಡನೆ ನುತ್ತೆ ಯಾರೋ ಇದ್ದುದರಿಂದ ಅವಳು ನನ್ನನ್ನು ಮಾತನಾಡಿಸಲಿಲ್ಲವೆಂದು ತೋರುತ್ತೆ. ನಾನೂ ನಾಚಿಕೆಯಿಂದ ಮಾತನಾಡಿಸಲಿಲ್ಲ. ಇದರೂ ಇಬ್ಬರ ನೋಟಗಳೂ ಮಿಳಿತವಾದುವು. ಹಿಂದಿನ ನೆನಪು ಕ್ಷಣಕಾಲ ಇಬ್ಬರ ಮನದಲ್ಲಿಯೂ ಮೂಡಿ, ನೋಟವಲ್ಲಿ ನಿಂತು ಹಾಗೆಯೇ ಮರೆಯಾಯಿತು. ತಿಳಿಯಿತೇ "ಲೀಲಾ?" ಎಂದು ಹೇಳಿ ರಾಜುವು ಆ ಕ್ಷಮಾಪತ್ರವನ್ನು ಹುಡುಕಿ ತೆಗೆದು ಲೀಲೆಯ ಮುಂದೆ ಹಾಕಿದನು.

ಲೀಲೆಯ ಸಂದೇಹ ನಿವೃತ್ತಿಯಾಯಿತು. ತನ್ನ ಪತಿದೇವರಡಿಯಲ್ಲಿ ತಲೆಯಿಟ್ಟಳು. ರಾಜುವು ಪ್ರೇಮದಿಂದ ಆಕೆಯನ್ನು ಸಂತಯಿಸಿ ಕ್ಷಮಾಮುದ್ರೆಯನ್ನೊತ್ತಿದನು.

ಮಿತ್ರ ರಾಜುವಿನಿಂದಲೇ ತಿಳಿದು ಬಂದ ಈ ಘಟನೆಯು ಕಥೆಗೆ ಕಾರಣವಾಯಿತು.

ಜಯಂತಿ ಪ್ರಚಾರ ಮಾಲೆ

ಅಕ್ಷರ ಬರೆಯಲು ಬಂದ ಸಾಮಾನ್ಯಕ್ಕೆ ಸುಶಿಕ್ಷಿತನೆನಿಸಿಕೊಳ್ಳಲಿಕ್ಕಾಗುವುದಿಲ್ಲ. ಹಾಗೆನಿಸಿಕೊಳ್ಳುವುದಕ್ಕೆ ನಿಮಿಧ ಮುಖವಾದ ಪ್ರಪಂಚದ ಪರಿಚಯ ಬೇಕು. ಅದಕ್ಕಾಗಿ ಎಲ್ಲರೂ ಈ ಮಾಲೆಯ ಪ್ರಕಾಶನಗಳನ್ನು ಓದಿ ಮನನ ಮಾಡಬೇಕು.

೧ ಜಾತೀಯ ಸಮಸ್ಯೆ	೦-೪-೦
೨ ಕರ್ನಾಟಕ ಏಕೀಕರಣ	೦-೪-೦

ಬೇಕಾದವರು ಕೂಡಲೆ ಬರೆದು ತರಿಸಿಕೊಳ್ಳಿರಿ!

ವಿಜ್ಞಾನದ ವಿಚಿತ್ರ ಪ್ರಪಂಚ

ಶ್ರೀ. ಕೆ. ಎಸ್. ಸವಣೂರ ಎಮ್. ಎಸ್‌ಸಿ. ಧಾರವಾಡ

೩ ಗ್ಯಾಲಿಲಿಯೊ ಗ್ಯಾಲಿಲಿ

(ಜುಲೈ ಸಂಚಿಕೆಯಿಂದ ಮುಂದುವರಿದುದು.)

ಗ್ಯಾಲಿಲಿಯೋನು ಪ್ಯಾಡುವಾ ವಿಶ್ವವಿದ್ಯಾಲಯವನ್ನು ಸೇರಿದೊಡನೆಯೆ, ತನ್ನ ಅಧ್ಯಾಪನ ಕೆಲಸವನ್ನು ಪ್ರಾರಂಭಿಸಿದನು. ಇಲ್ಲಿ ಅವನು ಮಾಡಿದ ಮೊದಲನೆಯ ಭಾಷಣವು ಅವನ ವಾಕ್ಪ್ರೌಢಿಮೆಯ ನಿದರ್ಶನವೆ ಆಗಿದ್ದುದರಿಂದ, ಅವನ ಕೀರ್ತಿಯಾದರೂ ಬೆಳೆಯಲು ಪ್ರಾರಂಭವಾಯಿತು ಅವನ ಭಾಷಣಗಳು ಮೊದ-ಮೊದಲು ವಿಶ್ವವಿದ್ಯಾಲಯದ ಆವಾರದಲ್ಲಿಯೆ ಜರುಗಿದರೂ, ಮುಂದೆ ಕೇಳುವವರ ಸಂಖ್ಯೆಯು ಅತೀವವಾಗಿ ಬೆಳೆದುದರಿಂದ, ಎಷ್ಟೋ ಸಲ ಬಯಲಿನಲ್ಲಿಯೆ ಭಾಷಣ ಮಾಡಬೇಕಾಗುತ್ತಿತ್ತು.

ಇವನ ಪರಿಶ್ರಮದ ಫಲವಾಗಿ ಉಷ್ಣಮಾಪನ ಉಪಕರಣವು ಜನಿಸಿತು. ಅದು ಇಂದು ನಮಗೆ ಸಾಮಾನ್ಯವಾಗಿ ಕಂಡುಬರುವ ಪಾರಜಯುಕ್ತ ಥರ್ಮಾಮೀಟರ್ ಆಗಿರದೆ, ಒಂದು ಸಾಮಾನ್ಯವಾದ ಕಾಚಿನ ಜೆಂಬುವೇ (Flask) ಆಗಿತ್ತು. ಇಂತಹ ಜೆಂಬುವನ್ನು ಬಣ್ಣದ ನೀರಿನಲ್ಲಿ ತಿರುವು-ಮುರುವಾಗಿ ಇಟ್ಟು, ಆ ಜೆಂಬುವಿನಲ್ಲಿಯು ಹವೆಯಾದರೂ ಕೆಲವಂಶದಲ್ಲಿ ಹೊರದೂಡಲ್ಪಟ್ಟಿತು. ಹೀಗೆ ಮಾಡುವುದರಿಂದ, ಹವೆಯ ಒತ್ತಡದ ಮೂಲಕ ಆ ಜೆಂಬುವಿನ ಮೇಲ್ಭಾಗದಲ್ಲಿ ಹವೆಯೂ ಅದರ ಕುತ್ತಿಗೆಯ ಭಾಗದಲ್ಲಿ ಬಣ್ಣದ ನೀರೂ ಇದ್ದು ಇದೇ ಅವನ ಉಷ್ಣಮಾಪನ ಯಂತ್ರವಾಯಿತು. ಇದನ್ನು ಉಪಯೋಗಿಸುವ ಕ್ರಮವಾದರೂ ಅತಿ ಸುಲಭವಿದ್ದು ಉಷ್ಣತೆಯ ಮೂಲಕ ಹೆಚ್ಚಾಗುವ, ಹವೆಯ ಪ್ರಸರಣ ಶೀಲತ್ವ ಗುಣದ ಮೂಲಕ ಕೆಳಭಾಗದಲ್ಲಿರುವ ಬಣ್ಣದ ನೀರು ಕೆಳಗೆ ಒತ್ತಲ್ಪಟ್ಟು ಅದರ ವಾತಳಿಯ ಏರಿಳಿತಗಳು ಉಷ್ಣತೆಯ ಮಾಪನವೆಂದು ತಿಳಿಯಬಹುದಾಗಿದೆ.

ಗ್ಯಾಲಿಲಿಯೋನು ಜಗದ್ವಿಖ್ಯಾತಿಯನ್ನು ಪಡೆಯಲು ಕಾರಣೀಭೂತವಾದ ಶೋಧಗಳನ್ನು ಮಾಡಿದುದು ಇಲ್ಲಿಯೆ. ಅಂದಿನ ಇಟಲಿ ದೇಶದಲ್ಲಿ ಖಗೋಲಶಾಸ್ತ್ರ ವಿಷಯದಲ್ಲಿ ಪರಂಪರಾಗತ ಅಭಿಪ್ರಾಯವು – 'ಪೃಥ್ವಿಯು ಅಚಲವಿದ್ದು ಅದು ವಿಶ್ವಕೇಂದ್ರದಲ್ಲಿದೆ' ಎನ್ನುವದು ಪ್ರಚಾರದಲ್ಲಿದ್ದು – ಇದೇ ಸರ್ವಮಾನ್ಯವಾಗಿತ್ತು. ಇದರಂತೆಯೆ ಇವನು ತನ್ನ ಭಾಷಣಗಳಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಮಾಡಿದರೂ ಒಳಗೆ ಮಾತ್ರ ಕೋಪರ್ನಿಕಸ್[೧] ನಿಂದ ಪ್ರತಿಪಾದಿತವಾದ 'ಸೂರ್ಯನು ವಿಶ್ವಕೇಂದ್ರದಲ್ಲಿದ್ದು, ಪೃಥ್ವಿಯು ಸೂರ್ಯನನ್ನು ಸುತ್ತುಹಾಕುವುದು' ಎಂಬ ಅಭಿವ್ರಾಯವೇ ನಿಜವಿದೆ ಎಂಬ ತತ್ತ್ವವನ್ನು ವಿಚಾರಾರ್ತ್ಯದಲ್ಲಿ ಅಂಗೀಕರಿಸಿದ್ದನು. ಈ ವಿಷಯವನ್ನು ಅವನು ಕೆಪ್ಲರ[೨] ನಿಗೆ ಬರೆದ ಪತ್ರದಲ್ಲಿ ತಾನೇ ಒಪ್ಪಿದ್ದಾನೆ. 'ನಾನು ಎಷ್ಟೋ ವರ್ಷಗಳಿಂದ ಕೋಪರ್ನಿಕಸ್‌ನ ತತ್ತ್ವಕ್ಕೇ ಅಂಟಿಕೊಂಡಿದ್ದೇನೆ; ಏಕೆಂದರೆ ಪರಂಪರಾಗತ ತತ್ತ್ವವಾದ ಪೃಥ್ವಿಕೇಂದ್ರತ್ವವು ನಮಗೆ ನಿಸರ್ಗದಲ್ಲಿ ಕಂಡುಬರುವ ಕಾರಣ-ಕಾರ್ಯಗಳ ಸಂಬಂಧವನ್ನು ತಿಳಿಹೇಳುವ ವಿಷಯದಲ್ಲಿ ಸಮರ್ಥವಾಗಿಲ್ಲ- ಪರಂಪರಾಗತ ತತ್ತ್ವವನ್ನು ಪ್ರತಿಭಟಿಸಲು ಬೇಕಿರುವ ಪ್ರಮಾಣಗಳು ನನ್ನಲ್ಲಿ ಸಾಕಷ್ಟು ಇದ್ದರೂ ನನ್ನ ಗುರುವಾದ ಕೋಪರ್ನಿಕಸ್‌ನಂತೆ ನನ್ನ ಅವಸ್ಥೆಯೂ ಆಗಬಾರದೆಂದು, ಅವನ ತತ್ತ್ವವನ್ನು ಸಾರ್ವಜನಿಕವಾಗಿ ಪ್ರತಿಪಾದಿಸುವ ಸಾಹಸವನ್ನು ಮಾಡಲಪೇಕ್ಷಿಸುವುದಿಲ್ಲ. ನಮ್ಮ ಗುರುವಿನ ಕೀರ್ತಿಯು ಹಲವು ಜನರಿಂದ ಅಚಂದ್ರಾರ್ಕವಾಗಿ ಉಳಿದರೂ, ಉಳಿದ ಮೂರ್ಖರ ಮೂಲಕ ಮಾತ್ರ ಅಪಹಾಸ್ಯ ಮತ್ತು ನಿಂದೆಗೆ ಆತ ಪಾತ್ರನಾಗಿದ್ದಾನೆ."

ಹೊಸ ತತ್ತ್ವವನ್ನು ಪ್ರತಿಪಾದಿಸಲು ಕೆಪ್ಲರನು ಇವನನ್ನು ಒತ್ತಾಯಪಡಿಸಿದನು. ಹೀಗೆ ಮಾಡಿದಲ್ಲಿ ತಾನೂ ತನ್ನ ಗುರುವಿನಂತೆಯೆ ಅಪಹಾಸ್ಯ-ನಿಂದೆಗಳನ್ನು ಎದುರಿಸಿಬೇಕಾಗುವುದೆಂದು ಇವನಿಗೆ ಮನವರಿಕೆಯಾಗಿತ್ತು. ತನ್ನ ಕೆಲಸದ ಮೇಲೆ ಗದೆ ಬೀಳಬಾರದೆಂಬ ಇಚ್ಛೆಯಿಂದ, ತನ್ನ ಮನಸ್ಸಿನ ವಿರುದ್ಧವಾದರೂ ಸುಮ್ಮನಿರಬೇಕಾಯಿತು. ಮುಂದೆ ಇವನ ಕೆಲಸದ ಅವಧಿಯು ಮತ್ತೆ ೭ ವರ್ಷಗಳವರೆಗೆ ಬೆಳೆಯಿಸಲ್ಪಟ್ಟಿತಲ್ಲದೆ ಇವನ ವೇತನವಾದರೂ ಹೆಚ್ಚಿಸಲ್ಪಟ್ಟಿತು. ಇವನು ಸುಮ್ಮನಿರಲು ಬೇರೊಂದು ಕಾರಣವೂ ಇದ್ದಿಲ್ಲವೆಂದಲ್ಲ. ಸುವರ್ಣಾಕ್ಷರಗಳಿಂದ ಬರೆಯಬೇಕಾಗಿರುವ ಚರ್ಚಿನ ಇತಿಹಾಸಕ್ಕೆ ಕಪ್ಪು ಬಳಿಯುವ ಒಂದು ದುರ್ದೈವದ ಸಂಗತಿಯು ಅದೇ ಕಾಲ

---

೧ ಕೋಪರ್ನಿಕಸ್:— ಪೋಲಂಡ್ ದೇಶದಲ್ಲಿ ೧೪೭೩ನೆಯ ಇಸ್ವಿಯಲ್ಲಿ ಹುಟ್ಟಿದನು. ತೋರಿಕೆಯಲ್ಲಿ ಜರಿಯುವ ಆಕಾಶದ ಜಲನೆಯ ಬದಲು ನೈಜವಾಗಿ ಪೃಥ್ವಿಯೇ ತನ್ನ ಅಕ್ಷದಲ್ಲಿ ಮತ್ತು ಸೂರ್ಯನ ಸುತ್ತಲೂ ತಿರುಗುವುದೆಂದು ಪ್ರತಿಪಾದಿಸಿದನು.

೨ ಕೆಪ್ಲರ್:— ಜರ್ಮನಿ ದೇಶದಲ್ಲಿ ೧೫೭೧ನೇ ಇಸ್ವಿಯಲ್ಲಿ ಹುಟ್ಟಿದನು. ಗ್ರಹಗಳ ಗತಿಗಳನ್ನು ಕುರಿತು ಇವನು ಪ್ರತಿಪಾದಿಸಿದ ಮೂರು ಕಟ್ಟಳೆಗಳು ಇಂದಿಗೂ ಪ್ರಸಿದ್ಧವಿವೆ.

ಜರುಗಿತ್ತು. ಬ್ರುನೋ ಎಂಬ ವಿಖ್ಯಾತ ತತ್ತ್ವಜ್ಞಾನಿಯು ಸೂರ್ಯ-ಕೇಂದ್ರತ್ವ ತತ್ತ್ವವನ್ನು ಪ್ರತಿವಾದಿಸಿದ್ದನು. ಇದು ನಾಸ್ತಿಕವಾದ ವೆಂದು ಚರ್ಚಿನ ಸಿದ್ಧಾಂತವಾದ್ದರಿಂದ, ಮುಂದೆ ಇವನು ಅಪವಾದನೆಗೆ ಗುರಿಮಾಡಲ್ಪಟ್ಟು ತುರಂಗಕ್ಕೆ ತಳ್ಳಲ್ಪಟ್ಟನು. ತನ್ನ ಹೇಳಿಕೆಯು ತಪ್ಪೆಂದು ಒಪ್ಪಲಿಲ್ಲ. ಧರ್ಮಾಧಿಕಾರಿಗಳ ಅಭಿಪ್ರಾಯದಂತೆ ಇವನ ಆತ್ಮ ಶುದ್ಧೀಕರಣವಾಗಬೇಕಾಯಿತು. ಈ ಅಪರಾಧಕ್ಕಾಗಿ ಸುಡಿಸಿ ಕೊಂಡು ಸಾಯಬೇಕಾಯಿತು. ಅವನು ಸಾಯುವಾಗ ಹೇಳಿದ್ದಂದರೆ' 'ನನ್ನನ್ನು ಶಿಕ್ಷೆಗೆ ಗುರಿಮಾಡಿದ ನೀವು ಶಿಕ್ಷೆಪಾಡಿಸಿಕೊಳ್ಳಲ್ಪಟ್ಟ ನನಗಿಂತ ಹೆಚ್ಚು ಹೆದರಿದಂತಿದ್ದೀರಿ ಬೆದರಿಕೆಯಿಂದ ಬದುಕುವುದಕ್ಕಿಂತ ಧೈರ್ಯದಿಂದ ಸಾವನ್ನೇ ಎದುರಿಸುವೆ' ಬ್ರುನೋನ ಮರಣವು ಗ್ಯಾಲಿಲಿಯೋನ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡದಿರಲಿಲ್ಲ. ಇಲ್ಲಿ ಅವನು ಖಂಡಿತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಲವು ವರ್ಷಗಳು ಮಾತ್ರ ಗತಿಸಬೇಕಾದುವು

ಈ ವಿಷಯದಲ್ಲಿ ಇವನು ಹೆಜ್ಜೆ ಇಟ್ಟುದು ರೂಢಿಯಲ್ಲಿದ್ದ ಮತ್ತು ಅರಿಸ್ಟಾಟಲನಿಂದ ಪ್ರತಿವಾದಿತವಾದ ಆಕಾಶದ ವಿಷಯವಾಗಿ. 'ಆಕಾಶವು ಸರ್ವಕಾಲದಲ್ಲಿಯೂ ಬದಲಾಗದು' ಎಂಬುದೇ ಅರಿಸ್ಟಾಟಲನ ತತ್ತ್ವ. ಈ ತತ್ತ್ವವನ್ನು ಖಂಡಿಸಲು ಬೇಕಿರುವಯೋಗವು ಮಾತ್ರ ಗೆಲಿಲಿಯನ ಇಸ್ಪಿಯಲ್ಲಿ ಆಕಸ್ಮಿಕವಾಗಿಯೆ ಒದಗಿತು. ಒಮ್ಮೆಲೆ ಒಂದು ದಿನ ಆಕಾಶದಲ್ಲಿ **ಗುರು**ಗ್ರಹದ ತೇಜವನ್ನು ಸಹ ಮೀರಿಸಿದಂತಹ ಒಂದು ನಕ್ಷತ್ರವು ಪ್ರಕಟವಾಯಿತು ಈ ನಕ್ಷತ್ರವು ಗ್ಯಾಲಿಲಿಯೋನಿಗೆ ಪರಂಪರಾಗತ ತತ್ತ್ವಗಳನ್ನು ಪ್ರತಿಭಟಿಸಲು ಮಾರ್ಗದರ್ಶಕವೂ ಮತ್ತು ಅರಿಸ್ಟಾಟಲನ ಅನುಯಾಯಿಗಳಿಗೆ ಬುದ್ಧಿಕಲಿಸುವ ವಿಷಯವೂ ಆಗಿ ಪರಿಣಮಿಸಿತು. 'ಆಕಾಶವು ಒದಲಾಗದಂತಹದಿದ್ದರೆ ಈ ನಕ್ಷತ್ರವು ಬದಲಾಗದ ಆಕಾಶದಲ್ಲಿ ಪ್ರಕಟವಾಯಿತೇಕೆ? ಯಾವುದೊಂದು ಪರಿಣಾಮವನ್ನು ತಿಳಿಹೇಳಲು ಅಶಕ್ಯವಿದ್ದ ಸಿದ್ಧಾಂತಗಳಿಂದ— ಈಗ ಪ್ರಕೃತದಲ್ಲಿ ಅರಿಸ್ಟಾಟಲನ ಆಕಾಶವಿಷಯಕ ಸಿದ್ಧಾಂತದಿಂದ—ಏನು ಪ್ರಯೋಜನ?' ಹೀಗೆಂದು ಅತ್ಯಂತ ಉತ್ಸಾಹಪೂರಿತರಾದ ಸಭಿಕರನ್ನುದ್ದೇಶಿಸಿ ಚರ್ಚಿಸಲು ಪ್ರಾರಂಭಿಸಿದನು. ಇದರ ಪರಿಣಾಮವೆಂದರೆ ವಿಚಾರ ಸ್ವಾತಂತ್ರ್ಯಯುತನಾದ ಇವನು ಇದೇ ವೇಳೆಯನ್ನು ಸಾಧಿಸಿ ಬಹಿರಂಗವಾಗಿಯೇ 'ಸೂರ್ಯಕೇಂದ್ರ' ತತ್ತ್ವವನ್ನು ಪ್ರತಿವಾದಿಸಲು ಪ್ರಾರಂಭಿಸಿದನು. ಇಂತಹ ವಿಚಾರ-ಸ್ವಾತಂತ್ರ್ಯವನ್ನು ಎಂತಹ ಮೌಲ್ಯವನ್ನು ಕೊಟ್ಟುಕೊಳ್ಳಬೇಕಾಯಿತು ಮತ್ತು ಹೇಗೆ ಧರ್ಮಾಧಿಕಾರಿಗಳು ಇವನ ಜೀವನದ ಉತ್ತರಾರ್ಧವನ್ನು ವಿಷಮಯವಾಗಿ ಪರಿಣಮಿಸಲು ಕಾರಣೀಭೂತರಾದರು ಎನ್ನುವುದನ್ನು ಮುಂದೆ ತಿಳಿಯೋಣ.

ಇದೇ ವೇಳೆಯಲ್ಲಿ ದೈವವು ಗ್ಯಾಲಿಲಿಯೋನಿಗೆ ಸೂರ್ಯಕೇಂದ್ರತ್ವ ತತ್ತ್ವವನ್ನು ಪ್ರತಿವಾದಿಸಲು ಬೇಕಿರುವ ಮತ್ತು ತನ್ನ ವಿರೋಧಿಗಳ ತತ್ತ್ವವನ್ನು ನಿರ್ಮೂಲಮಾಡಲು ಬೇಕಿರುವ ಒಂದು ಅತ್ಯಂತ ಶಕ್ತಿಯುತವಾದ ಶಸ್ತ್ರವನ್ನೇ ಒದಗಿಸಿತು. ಹಾಲೆಂಡ್‌ದೇಶದಲ್ಲಿ ಒಂದು ಉಪಕರಣವು ಉಪಲಬ್ಧವಿದ್ದು, ಅದರ ಸಹಾಯದಿಂದ ದೂರದ ವಸ್ತುಗಳನ್ನು ಹತ್ತಿರ ಸಿಚ್ಚಿತವಾಗಿ ಮತ್ತು ಸವಿಾಪವರ್ತಿಗಳಾಗಿದ್ದಂತೆ ನೋಡಬಹುದೆಂಬ ವರ್ತಮಾನವು ಹರಡಿತ್ತು. ಈ ಉಪಕರಣವನ್ನು ಯೋಜಿಸುವುದರಲ್ಲಿ ಚಾಳೀಸಿನ ಹಲವು ಕನ್ನಡಿಗಳನ್ನು ಉಪಯೋಗಿಸಿದ್ದರು. ಈ ಸುದ್ದಿಯು ಗ್ಯಾಲಿಲಿಯೋನ ವರೆಗೆ ಬಂದಿತು. ಇದರ ಪರಿಣಾಮವೆಂದರೆ ಹರಡಿದ ಮತ್ತು ಫಲವತ್ತಾದ ನೆಲದಲ್ಲಿ ಬೀಜವನ್ನು ಬಿತ್ತಿದಂತಾಯಿತು. ಆ ರಾತ್ರಿಯ ನ್ನೆಲ್ಲಿ ವಿಚಾರ ಮಾಡುವುದರಲ್ಲಿಯೇ ಕಳೆದನು. ಅವನು ಅಂತರ್ಗೋಲ ಮತ್ತು ಬಹಿರ್ಗೋಲ ಕನ್ನಡಿಗಳ ವಿಷಯವನ್ನು ತಿಳಿದವನಾಗಿದ್ದನು ಬೆಳಕಿನ ವಿಷಯವಾಗಿ ಉಪನ್ಯಾಸವನ್ನು ಮಾಡಿ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದನಾದುದರಿಂದ, ಕಣ್ಣಿನ ರಚನೆ, ಕೆಲಸ ಮಾಡುವ ರೀತಿ ಇತ್ಯಾದಿ ಎಲ್ಲವುಗಳನ್ನೂ ತಿಳಿದವನಾಗಿದ್ದನು. ಗೋಲಗನ್ನಡಿಗಳನ್ನು ಹೊಂದಿಸಿ, ಆಕಾರದಲ್ಲಿ ಚಲಿಸುವ ಗ್ರಹಗಳನ್ನು ಸವಿಾಪವರ್ತಿಗಳನ್ನಾಗಿ ಮಾಡುವ ಉಪಕರಣವು ಸಾಧ್ಯವಾಗಲಾರದೆ?....ಇತ್ಯಾದಿ ವಿಚಾರ ಮಾಡಿ, ಇಂತಹ ಫಲವನ್ನು ತಂಬೂರಿಸಿದನು. ಇವುಗಳಲ್ಲಿ ಒಂದು ಮಾತ್ರ ಕೈಗೂಡಿತು; ಅದರೆ ಇದರ ರಚನೆಯು ಮಾತ್ರ ಇವನು ಕೇಳಿದ ಹಾಲಂಡದ ಉಪಕರಣಕ್ಕಿಂತ ಭಿನ್ನವಿತ್ತು. ಒಂದು ಕೊಳವೆಯ ಒಂದು ತುದಿಗೆ ಬಹಿರ್ಗೋಲ ಕನ್ನಡಿಯೂ ಎರಡನೆಯ ತುದಿಗೆ ಒಂದು ಅಂತರ್ಗೋಲ ಕನ್ನಡಿಯೂ ಜೋಡಿಸಲ್ಪಟ್ಟವು. ನಿರ್ದಿಷ್ಟ ಕೇಂದ್ರಾಂತರವುಳ್ಳ (Focal Length) ಈ ಗಾಜುಗಳ ವ್ಯವಸ್ಥೆಯು ಒಂದು ದುರ್ಬೀನಿಯಾಗಿ ಪರಿಣಮಿಸಿತಲ್ಲದೆ ಇದರಲ್ಲಿ ಕಾಣುವ ಪ್ರತಿಕೃತಿ (Image)ಯು ತಿರುವುಮುರುವಾಗಿ ಕಾಣದೆ ಸಮನಾಗಿಯೆ ಕಾಣಿಸುತ್ತಿತ್ತು. ಇದರಲ್ಲಿಯೂ ಒಂದು ಕನ್ನಡಿಯು ದೂರದ ವಸ್ತುವಿನ ಪ್ರತಿಕೃತಿಯನ್ನು ಸವಿೀಪವಾಗಿ ತರುವ ಕೆಲಸವನ್ನೂ ಮತ್ತು ಎರಡನೆಯ ಕನ್ನಡಿಯು ಹೀಗೆ ಸವಿಾಪವಾಗಿ ತರಲ್ಪಟ್ಟ ಪ್ರತಿಕೃತಿಯನ್ನು ದೊಡ್ಡದಾಗಿ ಮಾಡುವ ಕೆಲಸವನ್ನೂ ಸಾಧಿಸುವುದು ಎಂದರೆ ನಮಗೆ ದೂರದ ವಸ್ತುವನ್ನು ಸವಿಾಪ ತರಲು ಸಾಧ್ಯವಿಲ್ಲದಿದ್ದರೂ ಅದರ ಪ್ರತಿಕೃತಿಯನ್ನು ಬಹಿರ್ಗೋಲಕನ್ನಡಿಯ ಮೂಲಕ ತರಲು ಸಾಧ್ಯವಿದ್ದುದರಿಂದ, ಇಂತಹ ಉಪಕರಣದಿಂದ ದೂರದ ವಸ್ತುವಿನ ವಿಶೇಷ ಪರಿಚಯವು ಲಭಿಸಲು ಸಾಧ್ಯವಾಗುವುದು. ವೆನಿಸ್ ನಗರದಲ್ಲಿ ಮೇಲಧಿಕಾರಿಗಳಿಗೆ ಮತ್ತು ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಲದ ಸದಸ್ಯರಿಗೆ ಈ ಉಪಕರಣವನ್ನು ತೋರಿಸಲು ಇವನನ್ನು ಕೇಳಿಕೊಳ್ಳಲಾಯಿತು ಇದನ್ನು ನೋಡಲು ಉತ್ಸುಕರಾದ ಜನರ ಉಬ್ಬೆಂದರೆ ಕೇಳಿಪ್ಪಲ್ಲ. ಎಷ್ಟೋ ಇಳಿವಯಸ್ಸಿನ ಜನರೂ ಅತ್ಯಂತ ಎತ್ತರವಾದ ಚರ್ಚಿನ ಗೋಪುರಗಳ ಮೇಲಿಂದ ಅತಿದೂರದಲ್ಲಿ ಬರುತ್ತಿರುವ ಮತ್ತು ಕಣ್ಣಿಗೆ ಕಾಣಿಸದಿರುವ ಹಡಗುಗಳನ್ನು ನೋಡುವುದರಲ್ಲಿ ಉದ್ಯುಕ್ತರಾದರು. ಸುಮಾರು ಮೈಲುಗಳಾಚೆ ಇರುವ ವಸ್ತುಗಳು ಕೇವಲ ಒಂದು ಮೈಲಿನ ಮೇಲಿದ್ದರೆ ಹೇಗೆ ಕಾಣಿಸಬೇಕೋ ಹಾಗೆ ಕಾಣುತ್ತಿದ್ದುವು. ಅದರಂತೆಯೆ ೧೦ ಮೈಲಿನ ಮೇಲಿರುವ ಮನುಷ್ಯನು ನಗುವ ದೃಶ್ಯ ಇತ್ಯಾದಿಗಳು ಜನರನ್ನು ಭ್ರಮೆಗೊಳಿಸಿದುವು ಅದರೆ ಗ್ಯಾಲಿಲಿಯೋನು ಮಾತ್ರ ಒಂದು ಉತ್ತಮವಾದ ಉಪಕರಣವನ್ನು ತಯಾರಿಸಿ, ಅದನ್ನು ಭೂಮಿಯ ಮೇಲಿನ ವಸ್ತುಗಳನ್ನು ನೋಡಲು ಉಪಯೋಗಿಸದೆ, ಊರ್ಧ್ವವಾಗಿರಿಸಿ ಆಕಾಶದ ಕಡೆಗೆ ತೂರಿಳಿಸಿದನು. ಆಕಾಶ ಪರೀಕ್ಷೆಯಲ್ಲಿ ಇವನಿಗೆ ಕಂಡುಬಂದ ಸಂಗತಿಗಳು ಅರಿಸ್ಟಾಟಲನ ತತ್ತ್ವಗಳನ್ನು ಖಂಡಿಸಲು ಪಟ್ಟಿಬ್ಬಾಗಿ ಮಾರ್ಗ-

(ಕಂಡೆಯ ಪುಟಕ್ಕೆ ಸಾಗಿದೆ)

ವಿಜ್ಞಾನದ ವಿಚಿತ್ರ ಪ್ರಪಂಚ

ಶ್ರೀ. ಕೆ. ಎಸ್. ಸವಣೂರ ಎಮ್. ಎಸ್‌ಸಿ. ಧಾರವಾಡ

೩ ಗ್ಯಾಲಿಲಿಯೊ ಗ್ಯಾಲಿಲಿ

(ಜುಲೈ ಸಂಚಿಕೆಯಿಂದ ಮುಂದುವರಿದುದು.)

ಗ್ಯಾಲಿಲಿಯೋನು ಪ್ಯಾಡುವಾ ವಿಶ್ವವಿದ್ಯಾಲಯವನ್ನು ಸೇರಿದೊಡನೆಯೆ, ತನ್ನ ಅಧ್ಯಾಪನ ಕೆಲಸವನ್ನು ಪ್ರಾರಂಭಿಸಿದನು. ಇಲ್ಲಿ ಅವನು ಮಾಡಿದ ಮೊದಲನೆಯ ಭಾಷಣವು ಅವನ ವಾಕ್ಪ್ರೌಢಿಮೆಯ ನಿದರ್ಶನವೆ ಆಗಿದ್ದುದರಿಂದ, ಅವನ ಕೀರ್ತಿಯಾದರೂ ಬೆಳೆಯಲು ಪ್ರಾರಂಭವಾಯಿತು ಅವನ ಭಾಷಣಗಳು ಮೊದ-ಮೊದಲು ವಿಶ್ವವಿದ್ಯಾಲಯದ ಆವಾರದಲ್ಲಿಯೆ ಜರುಗಿದರೂ, ಮುಂದೆ ಕೇಳುವವರ ಸಂಖ್ಯೆಯು ಅತೀವವಾಗಿ ಬೆಳೆದುದರಿಂದ, ಎಷ್ಟೋ ಸಲ ಬಯಲಿನಲ್ಲಿಯೆ ಭಾಷಣ ಮಾಡಬೇಕಾಗುತ್ತಿತ್ತು.

ಇವನ ಪರಿಶ್ರಮದ ಫಲವಾಗಿ ಉಷ್ಣಮಾಪನ ಉಪಕರಣವು ಜನಿಸಿತು. ಅದು ಇಂದು ನಮಗೆ ಸಾಮಾನ್ಯವಾಗಿ ಕಂಡುಬರುವ ಪಾರಜಯುಕ್ತ ಥರ್ಮಾಮೀಟರ್ ಆಗಿರದೆ, ಒಂದು ಸಾಮಾನ್ಯವಾದ ಕಾಚಿನ ಚೆಂಬುವೇ (Flask) ಆಗಿತ್ತು. ಇಂತಹ ಚೆಂಬುವನ್ನು ಬಣ್ಣದ ನೀರಿನಲ್ಲಿ ತಿರುವು-ಮುರುವಾಗಿ ಇಟ್ಟು, ಆ ಚೆಂಬುವಿನಲ್ಲಿಯು ಹವೆಯಾದರೂ ಕೆಲಮಂಶದಲ್ಲಿ ಹೊರದೂಡಲ್ಪಟ್ಟಿತು. ಹೀಗೆ ಮಾಡುವುದರಿಂದ, ಹವೆಯ ಒತ್ತಡದ ಮೂಲಕ ಆ ಚೆಂಬುವಿನ ಮೇಲ್ಭಾಗದಲ್ಲಿ ಹವೆಯೂ ಅದರ ಕುತ್ತಿಗೆಯ ಭಾಗದಲ್ಲಿ ಬಣ್ಣದ ನೀರೂ ಇದ್ದು ಇದೇ ಅವನ ಉಷ್ಣಮಾಪನ ಯಂತ್ರವಾಯಿತು. ಇದನ್ನು ಉಪಯೋಗಿಸುವ ಕ್ರಮವಾದರೂ ಅತಿ ಸುಲಭವಿದ್ದು ಉಷ್ಣತೆಯ ಮೂಲಕ ಹೆಚ್ಚಾಗುವ, ಹವೆಯ ಪ್ರಸರಣ ಶೀಲತ್ವ ಗುಣದ ಮೂಲಕ ಕೆಳಭಾಗದಲ್ಲಿರುವ ಬಣ್ಣದ ನೀರು ಕೆಳಗೆ ಒತ್ತಲ್ಪಟ್ಟು ಅದರ ಪಾತಳಿಯು ಏರಿಳಿತಗಳು ಉಷ್ಣತೆಯ ಮಾಪನವೆಂದು ತಿಳಿಯಬಹುದಾಗಿದೆ.

ಗ್ಯಾಲಿಲಿಯೋನು ಜಗದ್ವಿಖ್ಯಾತಿಯನ್ನು ಪಡೆಯಲು ಕಾರಣೀಭೂತವಾದ ಶೋಧಗಳನ್ನು ಮಾಡಿದುದು ಇಲ್ಲಿಯೆ. ಅಂದಿನ ಇಟಲಿ ದೇಶದಲ್ಲಿ ಖಗೋಲಶಾಸ್ತ್ರ ವಿಷಯದಲ್ಲಿ ಪರಂಪರಾಗತ ತಥಿಸ್ಸಾಯವು – 'ಪೃಥ್ವಿಯು ಅಚಲವಿದ್ದು ಅದು ವಿಶ್ವಕೇಂದ್ರದಲ್ಲಿದೆ' ಎನ್ನುವದು ಪ್ರಚಾರದಲ್ಲಿದ್ದು – ಇದೇ ಸರ್ವಮಾನ್ಯವಾಗಿತ್ತು. ಇದರಂತೆಯೆ ಇವನು ತನ್ನ ಭಾಷಣಗಳಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಮಾಡಿದರೂ ಒಳಗೆ ಮಾತ್ರ ಕೋಪರ್ನಿಕಸ್[೧]ನಿಂದ ಪ್ರತಿಪಾದಿತವಾದ 'ಸೂರ್ಯನು ವಿಶ್ವಕೇಂದ್ರದಲ್ಲಿದ್ದು, ಪೃಥ್ವಿಯು ಸೂರ್ಯನನ್ನು ಸುತ್ತುಹಾಕುವುದು' ಎಂಬ ಅಭಿಪ್ರಾಯವೇ ನಿಜವಿದೆ ಎಂಬ ತತ್ತ್ವವನ್ನು ವಿಚಾರಾಂತ್ಯದಲ್ಲಿ ಅಂಗೀಕರಿಸಿದ್ದನು. ಈ ವಿಷಯವನ್ನು ಅವನು ಕೆಪ್ಲರ[೨]ನಿಗೆ ಬರೆದ ಪತ್ರದಲ್ಲಿ ತಾನೇ ಒಪ್ಪಿದ್ದಾನೆ. ' ನಾನು ಎಷ್ಟೋ ವರ್ಷಗಳಿಂದ ಕೋಪರ್ನಿಕಸ್‌ನ ತತ್ತ್ವಕ್ಕೇ ಅಂಟಿಕೊಂಡಿದ್ದೇನೆ; ಏಕೆಂದರೆ ಪರಂಪರಾಗತ ತತ್ತ್ವವಾದ ಪೃಥ್ವಿಕೇಂದ್ರತ್ವವು ನಮಗೆ ನಿಸರ್ಗದಲ್ಲಿ ಕಂಡುಬರುವ ಕಾರಣ-ಕಾರ್ಯಗಳ ಸಂಬಂಧವನ್ನು ತಿಳಿಹೇಳುವ ವಿಷಯದಲ್ಲಿ ಸಮರ್ಥವಾಗಿಲ್ಲ- ಪಾರಂಪರಾಗತ ತತ್ತ್ವವನ್ನು ಪ್ರತಿಭಟಿಸಲು ಬೇಕಿರುವ ಪ್ರಮಾಣಗಳು ನನ್ನಲ್ಲಿ ನಾಕಷ್ಟು ಇದ್ದರೂ ನನ್ನ ಗುರುವಾದ ಕೋಪರ್ನಿಕಸ್‌ನಂತೆ ನನ್ನ ಅವಸ್ಥೆಯೂ ಆಗಬಾರದೆಂದು, ಅವನ ತತ್ತ್ವವನ್ನು ಸಾರ್ವಜನಿಕವಾಗಿ ಪ್ರತಿಪಾದಿಸುವ ಸಾಹಸವನ್ನು ಮಾಡಲಪೇಕ್ಷಿಸುವುದಿಲ್ಲ. ನಮ್ಮ ಗುರುವಿನ ಕೀರ್ತಿಯು ಹಲವು ಜನರಿಂದ ಆಚಂದ್ರಾರ್ಕವಾಗಿ ಉಳಿದರೂ, ಉಳಿದ ಮೂರ್ಖರ ಮೂಲಕ ಮಾತ್ರ ಅಪಹಾಸ್ಯ ಮತ್ತು ನಿಂದೆಗೆ ಆತ ಪಾತ್ರನಾಗಿದ್ದಾನೆ."

ಹೊಸ ತತ್ತ್ವವನ್ನು ಪ್ರತಿಪಾದಿಸಲು ಕೆಪ್ಲರನು ಇವನನ್ನು ಒತ್ತಾಯಪಡಿಸಿದನು. ಹೀಗೆ ಮಾಡಿದಲ್ಲಿ ತಾನೂ ತನ್ನ ಗುರುವಿನಂತೆಯೆ ಅಪಹಾಸ್ಯ-ನಿಂದೆಗಳನ್ನು ಎದುರಿಸಿಬೇಕಾಗುವುದೆಂದು ಇವನಿಗೆ ಮನವರಿಕೆಯಾಗಿತ್ತು. ತನ್ನ ಕೆಲಸದ ಮೇಲೆ ಗದೆ ಬೀಳಬಾರದೆಂಬ ಇಚ್ಛೆಯಿಂದ, ತನ್ನ ಮನಸ್ಸಿನ ವಿರುದ್ಧವಾದರೂ ಸುಮ್ಮನಿರಬೇಕಾಯಿತು. ಮುಂದೆ ಇವನ ಕೆಲಸದ ಅವಧಿಯು ಮತ್ತೆ ೭ ವರ್ಷಗಳವರೆಗೆ ಬೆಳೆಯಿಸಲ್ಪಟ್ಟಿತಲ್ಲದೆ ಇವನ ವೇತನವಾದರೂ ಹೆಚ್ಚಿಸಲ್ಪಟ್ಟಿತು. ಇವನು ಸುಮ್ಮನಿರಲು ಬೇರೊಂದು ಕಾರಣವೂ ಇದ್ದಿಲ್ಲವೆಂದಲ್ಲ. ಸುವರ್ಣಾಕ್ಷರಂಗಳಿಂದ ಬರೆಯಬೇಕಾಗಿರುವ ಚರ್ಚಿನ ಇತಿಹಾಸಕ್ಕೆ ಕಪ್ಪು ಬಳಿಯುವ ಒಂದು ದುರ್ದೈವದ ಸಂಗತಿಯು ಅದೇ ಕಾಲ

೧ ಕೋಪರ್ನಿಕಸ್:— ಪೋಲಂಡ್ ದೇಶದಲ್ಲಿ ೧೪೭೩ನೆಯ ಇಸ್ವಿಯಲ್ಲಿ ಹುಟ್ಟಿದನು. ತೋರಿಕೆಯಲ್ಲಿ ದಿನಿಸುವ ಆಕಾಶದ ಚಲನೆಯ ಬದಲು ನೈಜವಾಗಿ ಪೃಥ್ವಿಯೇ ತನ್ನ ಅಕ್ಷದಲ್ಲಿ ಮತ್ತು ಸೂರ್ಯನ ಸುತ್ತಲೂ ತಿರುಗುವುದೆಂದು ಪ್ರತಿಪಾದಿಸಿದನು.

೨ ಕೆಪ್ಲರ್ :— ಜರ್ಮನಿ ದೇಶದಲ್ಲಿ ೧೫೭೧ನೇ ಇಸ್ವಿಯಲ್ಲಿ ಹುಟ್ಟಿದನು. ಗ್ರಹಗಳ ಗತಿಗಳನ್ನು ಕುರಿತು ಇವನು ಪ್ರತಿಪಾದಿಸಿದ ಮೂರು ಕಟ್ಟಳೆಗಳು ಇಂದಿಗೂ ಪ್ರಸಿದ್ಧವಿವೆ.

ಜರುಗಿತ್ತು. ಬ್ರುನೋ ಎಂಬ ವಿಖ್ಯಾತ ತತ್ತ್ವಜ್ಞಾನಿಯು ಸೂರ್ಯ-ಕೇಂದ್ರತ್ವ ತತ್ತ್ವವನ್ನು ಪ್ರತಿಪಾದಿಸಿದ್ದನು. ಇದು ನಾಸ್ತಿಕವಾದ ವೆಂದು ಚರ್ಚಿನ ಸಿದ್ಧಾಂತವಾದ್ದರಿಂದ, ಮುಂದೆ ಇವನು ಆಪಾದನೆಗೆ ಗುರಿಮಾಡಲ್ಪಟ್ಟು ತುರಂಗಕ್ಕೆ ತಳ್ಳಲ್ಪಟ್ಟನು. ತನ್ನ ಹೇಳಿಕೆಯು ತಪ್ಪೆಂದು ಒಪ್ಪಲಿಲ್ಲ. ಧರ್ಮಾಧಿಕಾರಿಗಳ ಅಭಿಪ್ರಾಯದಂತೆ ಇವನ ಆತ್ಮ ಶುದ್ಧೀಕರಣವಾಗಬೇಕಾಯಿತು. ಈ ಅಪರಾಧಕ್ಕಾಗಿ ಸುಡಿಸಿಕೊಂಡು ಸಾಯಬೇಕಾಯಿತು. ಇವನು ಸಾಯುವಾಗ ಹೇಳಿದ್ದೆಂದರೆ: 'ನನ್ನನ್ನು ಶಿಕ್ಷೆಗೆ ಗುರಿಮಾಡಿದ ನೀವು ಶಿಕ್ಷೆಸೂಡಿಸಿಕೊಳ್ಳಲ್ಪಟ್ಟ ನನಗಿಂತ ಹೆಚ್ಚು ಹೆದರಿದಂತಿದ್ದೀರಿ. ಬೆದರಿಕೆಯಿಂದ ಬದುಕುವುದಕ್ಕಿಂತ ಧೈರ್ಯದಿಂದ ಸಾವನ್ನೇ ಎದುರಿಸುವೆ' ಬ್ರುನೋನ ಮರಣವು ಗ್ಯಾಲಿಲಿಯೋನ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡದಿರಲಿಲ್ಲ. ಇಲ್ಲಿ ಅವನು ಖಂಡಿತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಲವು ವರ್ಷಗಳು ಮಾತ್ರ ಗತಿಸಬೇಕಾದುವು

ಈ ವಿಷಯದಲ್ಲಿ ಇವನು ಹೆಚ್ಚೆ ಇಟ್ಟುದು ರೂಢಿಯುಲ್ಲಿದ್ದ ಮತ್ತು ಅರಿಸ್ಟಾಟಲನಿಂದ ಪ್ರತಿಪಾದಿತವಾದ ಆಕಾಶದ ವಿಷಯವಾಗಿ. 'ಆಕಾಶವು ಸರ್ವಕಾಲದಲ್ಲಿಯೂ ಬದಲಾಗದು' ಎಂಬುದೇ ಅರಿಸ್ಟಾಟಲನ ತತ್ತ್ವ. ಈ ತತ್ತ್ವವನ್ನು ಖಂಡಿಸಲು ಬೇಕಿರುವಯೋಗವು ಮಾತ್ರ ೧೬೦೯ನೆಯ ಇಸ್ವಿಯಲ್ಲಿ ಅಕಸ್ಮಿಕವಾಗಿಯೆ ಒದಗಿತು. ಒಮ್ಮೆಲೆ ಒಂದು ದಿನ ಆಕಾಶದಲ್ಲಿ **ಗುರು**ಗ್ರಹದ ತೇಜವನ್ನು ಸಹ ಮೀರಿಸಿದಂತಹ ಒಂದು ನಕ್ಷತ್ರವು ಪ್ರಕಟವಾಯಿತು ಈ ನಕ್ಷತ್ರವು ಗ್ಯಾಲಿಲಿಯೋನಿಗೆ ಪರಂಪರಾಗತ ತತ್ತ್ವಗಳನ್ನು ಪ್ರತಿಭಟಿಸಲು ಮಾರ್ಗದರ್ಶಕವೂ ಮತ್ತು ಅರಿಸ್ಟಾಟಲನ ಅನುಯಾಯಿಗಳಿಗೆ ಬುದ್ಧಿಕಲಿಸುವ ವಿಷಯವೂ ಆಗಿ ಪರಿಣಮಿಸಿತು. 'ಆಕಾಶವು ಬದಲಾಗದಂತಹದಿದ್ದರೆ ಈ ನಕ್ಷತ್ರವು ಬದಲಾಗದ ಆಕಾಶದಲ್ಲಿ ಪ್ರಕಟವಾಯಿತೇಕೆ? ಯಾವುದೊಂದು ಪರಿಣಾಮವನ್ನು ತಿಳಿಹೇಳಲು ಅಶಕ್ಯವಿದ್ದ ಸಿದ್ಧಾಂತಗಳಿಂದ— ಈಗ ಪ್ರಕೃತದಲ್ಲಿ ಅರಿಸ್ಟಾಟಲನ ಆಕಾಶವಿಷಯಕ ಸಿದ್ಧಾಂತದಿಂದ—ಏನು ಪ್ರಯೋಜನ?' ಹೀಗೆಂದು ಅತ್ಯಂತ ಉತ್ಸಾಹಪೂರಿತರಾದ ಸಭಿಕರನ್ನುದ್ದೇಶಿಸಿ ಚರ್ಚಿಸಲು ಪ್ರಾರಂಭಿಸಿದನು. ಇದರ ಪರಿಣಾಮವೆಂದರೆ ವಿಚಾರ ಸ್ವಾತಂತ್ರ್ಯಯುತನಾದ ಇವನು ಇದೇ ವೇಳೆಯನ್ನು ಸಾಧಿಸಿ ಬಹಿರಂಗವಾಗಿಯೇ 'ಸೂರ್ಯಕೇಂದ್ರ' ತತ್ತ್ವವನ್ನು ಪ್ರತಿಪಾದಿಸಲು ಪ್ರಾರಂಭಿಸಿದನು. ಇಂತಹ ವಿಚಾರ-ಸ್ವಾತಂತ್ರ್ಯವನ್ನು ಎಂತಹ ಮೌಲ್ಯವನ್ನು ಕೊಟ್ಟುಕೊಳ್ಳಬೇಕಾಯಿತು ಮತ್ತು ಹೇಗೆ ಧರ್ಮಾಧಿಕಾರಿಗಳು ಇವನ ಜೀವನದ ಉತ್ತರಾರ್ಧವನ್ನು ವಿಷಮಯವಾಗಿ ಪರಿಣಮಿಸಲು ಕಾರಣೀಭೂತರಾದರು ಎನ್ನುವುದನ್ನು ಮುಂದೆ ತಿಳಿಯೋಣ.

ಇದೇ ವೇಳೆಯಲ್ಲಿ ದೈವವು ಗ್ಯಾಲಿಲಿಯೋನಿಗೆ ಸೂರ್ಯಕೇಂದ್ರತ್ವ ತತ್ತ್ವವನ್ನು ಪ್ರತಿವಾದಿಸಲು ಬೇಕಿರುವ ಮತ್ತು ತನ್ನ ವಿರೋಧಿಗಳ ತತ್ತ್ವವನ್ನು ನಿರ್ಮೂಲವಾಡಲು ಬೇಕಿರುವ ಒಂದು ಅತ್ಯಂತ ಶಕ್ತಿಯುತವಾದ ಅಸ್ತ್ರವನ್ನೇ ಒದಗಿಸಿತು. ಹಾಲೆಂಡ್‌ನಲ್ಲಿ ಒಂದು ಉಪಕರಣವು ಉಪಲಬ್ಧವಿದ್ದು, ಅದರ ಸಹಾಯದಿಂದ ದೂರದ ವಸ್ತುಗಳನ್ನು ಹೆಚ್ಚು ಸಿಚ್ಚಟವಾಗಿ ಮತ್ತು ಸಮೀಪವರ್ತಿಗಳಾಗಿದ್ದಂತೆ ನೋಡಬಹುದೆಂಬ ವರ್ತಮಾನವು ಹರಡಿತ್ತು. ಈ ಉಪಕರಣವನ್ನು ಯೋಜಿಸುವುದರಲ್ಲಿ ಜಾಕೀಸಿನ ಹಲವು ಕನ್ನಡಿಗಳನ್ನು ಉಪಯೋಗಿಸಿದ್ದರು. ಈ ಸುದ್ದಿಯು ಗ್ಯಾಲಿಲಿಯೋನ ವರೆಗೆ ಬಂದಿತು. ಇದರ ಪರಿಣಾಮವೆಂದರೆ ಹರಗಿದ ಮತ್ತು ಫಲವತ್ತಾದ ನೆಲದಲ್ಲಿ ಬೀಜವನ್ನು ಬಿತ್ತಿದಂತಾಯಿತು. ಆ ರಾತ್ರಿಯನ್ನೆಲ್ಲ ವಿಚಾರ ಮಾಡುವುದರಲ್ಲಿಯೇ ಕಳೆದನು. ಅವನು ಅಂತರ್ಗೋಲ ಮತ್ತು ಬಹಿರ್ಗೋಲ ಕನ್ನಡಿಗಳ ವಿಷಯವನ್ನು ತಿಳಿದವನಾಗಿದ್ದನು. ಜೆಳಕಿನ ವಿಷಯವಾಗಿ ಉಪನ್ಯಾಸವನ್ನು ಮಾಡಿ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದನಾದುದರಿಂದ, ಕಣ್ಣಿನ ರಚನೆ, ಕೆಲಸ ಮಾಡುವ ರೀತಿ ಇತ್ಯಾದಿ ಎಲ್ಲವುಗಳನ್ನೂ ತಿಳಿದವನಾಗಿದ್ದನು. ಗೋಲಗನ್ನಡಿಗಳನ್ನು ಹೊಂದಿಸಿ, ಆಕಾರದಲ್ಲಿ ಚಲಿಸುವ ಗ್ರಹಗಳನ್ನು ಸಮೀಪವರ್ತಿಗಳನ್ನಾಗಿ ಮಾಡುವ ಉಪಕರಣವು ಸಾಧ್ಯವಾಗಲಾರದೆ?....ಇತ್ಯಾದಿ ವಿಚಾರ ಮಾಡಿ, ಇಂತಹ ಹಲವನ್ನು ತರುಬಿದನು. ಇವುಗಳಲ್ಲಿ ಒಂದು ಮಾತ್ರ ಕೈಗೂಡಿತು; ಆದರೆ ಇದರ ರಚನೆಯು ಮಾತ್ರ, ಇವನು ಕೇಳಿದ ಹಾಲೆಂಡಿನ ಉಪಕರಣಕ್ಕಿಂತ ಭಿನ್ನವಿತ್ತು. ಒಂದು ಕೊಳವೆಯ ಒಂದು ತುದಿಗೆ ಬಹಿರ್ಗೋಲ ಕನ್ನಡಿಯೂ ಎರಡನೆಯ ತುದಿಗೆ ಒಂದು ಅಂತರ್ಗೋಲ ಕನ್ನಡಿಯೂ ಜೋಡಿಸಲ್ಪಟ್ಟವು. ಏಕಿಷ್ಟ ಕೇಂದ್ರಾಂತರವುಳ್ಳ (Focal Length) ಈ ಗಾಜುಗಳ ವ್ಯವಸ್ಥೆಯು ಒಂದು ದುರ್ಬಿಣಿಯಾಗಿ ಪರಿಣಮಿಸಿತ್ತಲ್ಲದೆ ಇದರಲ್ಲಿ ಕಾಣುವ ಪ್ರತಿಕೃತಿ (Image)ಯು ತಿರುವುಮುರುವಾಗಿ ಕಾಣದೆ ಸಮನಾಗಿಯೆ ಕಾಣಹತ್ತಿತು. ಇದರಲ್ಲಿಯ ಒಂದು ಕನ್ನಡಿಯು ದೂರದ ವಸ್ತುವಿನ ಪ್ರತಿಕೃತಿಯನ್ನು ಸಮೀಪವಾಗಿ ತರುವ ಕೆಲಸವನ್ನೂ ಮತ್ತು ಎರಡನೆಯ ಕನ್ನಡಿಯು ಹೀಗೆ ಸಮೀಪವಾಗಿ ತರಲ್ಪಟ್ಟ ಪ್ರತಿಕೃತಿಯನ್ನು ದೊಡ್ಡದಾಗಿ ಮಾಡುವ ಕೆಲಸವನ್ನೂ ಸಾಧಿಸುವುವು ಎಂದರೆ ನಮಗೆ ದೂರದ ವಸ್ತುವನ್ನು ಸಮೀಪ ತರಲು ಸಾಧ್ಯವಿಲ್ಲದಿದ್ದರೂ ಅದರ ಪ್ರತಿಕೃತಿಯನ್ನು ಬಹಿರ್ಗೋಲಕನ್ನಡಿಯ ಮೂಲಕ ತರಲು ಸಾಧ್ಯವಿದ್ದುದರಿಂದ, ಇಂತಹ ಉಪಕರಣದಿಂದ ದೂರದ ವಸ್ತುವಿನ ವಿಶೇಷ ಪರಿಚಯವು ಲಭಿಸಲು ಸಾಧ್ಯವಾಗುವುದು. ವೆನಿಸ್ ನಗರದಲ್ಲಿ ಮೇಲಧಿಕಾರಿಗಳಿಗೆ ಮತ್ತು ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಲದ ಸದಸ್ಯರಿಗೆ ಈ ಉಪಕರಣವನ್ನು ತೋರಿಸಲು ಇವನನ್ನು ಕೇಳಿಕೊಳ್ಳಲಾಯಿತು ಇದನ್ನು ನೋಡಲು ಉತ್ಸುಕರಾದ ಜನರ ಉಬ್ಬೆಂದರೆ ಅಷ್ಟಿಷ್ಟಲ್ಲ. ಎಷ್ಟೋ ಇಳಿವಯಸ್ಸಿನ ಜನರೂ ಅತ್ಯಂತ ಎತ್ತರವಾದ ಚರ್ಚಿನ ಗೋಪುರಗಳ ಮೇಲಿಂದ ಅತಿದೂರದಲ್ಲಿ ಬರುತ್ತಿರುವ ಮತ್ತು ಕಣ್ಣಿಗೆ ಕಾಣಿಸದಿರುವ ಹಡಗುಗಳನ್ನು ನೋಡುವುದರಲ್ಲಿ ಉದ್ಯುಕ್ತರಾದರು. ೫೦ ಮೈಲುಗಳಾಚೆ ಇರುವ ವಸ್ತುಗಳು ಕೇವಲ ೬ ಮೈಲಿನ ಮೇಲಿದ್ದರೆ ಹೇಗೆ ಕಾಣಿಸಬೇಕೋ ಹಾಗೆ ಕಾಣುತ್ತಿದ್ದವು. ಅದರಂತೆಯೆ ೧೫ ಮೈಲಿನ ಮೇಲಿರುವ ಮನುಷ್ಯನು ನಗುವ ದೃಶ್ಯ ಇತ್ಯಾದಿಗಳು ಜನರನ್ನು ಭ್ರಮೆಗೊಳಿಸಿದುವು ಆದರೆ ಗ್ಯಾಲಿಲಿಯೋನು ಮಾತ್ರ ಒಂದು ಉತ್ತಮವಾದ ಉಪಕರಣವನ್ನು ತಯಾರಿಸಿ, ಅದನ್ನು ಭೂಮಿಯ ಮೇಲಿನ ವಸ್ತುಗಳನ್ನು ನೋಡಲು ಉಪಯೋಗಿಸದೆ, ಊರ್ಧ್ವವನ್ನು ಅಭಿಮುಖವಾಗಿರಿಸಿ ಆಕಾಶದ ಕಡೆಗೆ ಹೊರಳಿಸಿದನು. ಆಕಾಶ ಪರೀಕ್ಷೆಯಲ್ಲಿ ಇವನಿಗೆ ಕಂಡುಬಂದ ಸಂಗತಿಗಳು ಅರಿಸ್ಟಾಟಲನ ತತ್ತ್ವಗಳನ್ನು ಖಂಡಿಸಲು ಪಚ್ಚೆಜ್ಜಾಜಿಗೆ ಮಾರ್ಗ-

(ಉಳಿದ ಪುಟಕ್ಕೆ ಸಾಗಿದೆ)

ಸಾಹಿತ್ಯ ವಿಹಾರ

"ವಿಹಾರಿ"

ಕಾರಂತರ ಹೆತ್ತಳಾತಾಯಿ.
ರಾಜಪುತಾನಾದಲ್ಲಿಯ ಜಾನಪದ ಸಾಹಿತ್ಯ

ಇತ್ತೀಚೆಗೆ ಹೊರಬಿದ್ದ ಶ್ರೀ. ಕಾರಂತರ ಹೊಸ ಕಾದಂಬರಿ "ಹೆತ್ತಳಾತಾಯಿ" ಯ ವಿಚಾರವಲ್ಲಿ ಬಂದ ಒಂದೆರಡು ವಿಮರ್ಶೆಗಳನ್ನು ನೋಡಿದರೆ, ಓದುಗರಲ್ಲಿ ಆ ಕಾದಂಬರಿಯ ಬಗೆಯಲ್ಲಿ ತಪ್ಪು-ಕಲ್ಪನೆಯಾಗುವುದು ಸಾಧ್ಯವೆಂದು ತೋರಿದ್ದರಿಂದ, ಆ ಕಾದಂಬರಿಯ ಯೋಗ್ಯವಾದ ಅನಲೋಕನೆಗೆ ಅವಶ್ಯವಾದ ದೃಷ್ಟಿಕೋನವನ್ನು ವಾಚಕರೆದುರಿಗೆ ಇಡುವುದು ಅನಿವಾರ್ಯವೆಂದು ತೋರುತ್ತದೆ. ಈಗ ಪ್ರಕಟವಾದ ವಿಮರ್ಶೆಗಳು ತಮ್ಮ ಪೂರ್ವಗ್ರಹಗಳ ಮೂಲಕವಾಗಿಯೋ ಇನ್ನಾವ ಕಾರಣಗಳ ಮೂಲಕವಾಗಿಯೋ, ಆ ಕೃತಿಗಲ್ಲದೆ ಅದನ್ನು ನಿರ್ಮಿಸಿದವರಿಗೂ ಅನ್ಯಾಯ ಮಾಡಿವೆ, ಎಂಬುದು ಅದನ್ನು ಓದಿದ ಕೆಲವು ವಾಚಕರಿಗಲ್ಲದೆ ಪ್ರಸ್ತುತ ಬರೆಹಗಾರನಿಗೂ ಸ್ಪಷ್ಟವಾದ ವಿಷಯವಾಗಿದೆ. ಕಾದಂಬರಿಯಲ್ಲಿ ನಿರೂಪಿತವಾದ ವಿಷಯವನ್ನೂ, ಕಥೆಯನ್ನೂ, ಕಥೆಯನ್ನೇ ಬೆಳಸಿಕೊಂಡು ಹೋದ ರೀತಿಯನ್ನೂ, ಅದರಲ್ಲಿ ವಿಮರ್ಶಿತವಾದ ಒಂದು ಜೀವನದೃಷ್ಟಿಯನ್ನೂ ವಿಹಾರಿಯು ಕೆಲವಾರು ಓದುಗರ ಜೊತೆಯಲ್ಲಿ ಚರ್ಚಿಸಿದ್ದಾನೆ. ಆ ಚರ್ಚೆಯಲ್ಲಿ ನಿಷ್ಪನ್ನವಾದ ಒಂದೆರಡು ವಿಷಯಗಳನ್ನು ಮಾತ್ರ ಇಲ್ಲಿ ಹೇಳುವುದು ಸಾಧ್ಯ. ಅಲ್ಲದೆ ಆ ವಿಷಯಗಳನ್ನು ಸಾಮಾನ್ಯ ಓದುಗನ ಮುಂದೆ ಇಟ್ಟರೆ ಆ ಕಾದಂಬರಿಯನ್ನು ನೋಡುವ ಸಮಂಜಸವಾದ ದೃಷ್ಟಿಯನ್ನು ವಾಚಕನಿಗೆ ಒದಗಿಸಿಕೊಟ್ಟಂತಾಗಬಹುದೆಂದೆನಿಸಿದ್ದರಿಂದಲೂ ಅವುಗಳನ್ನು ಇಲ್ಲಿ ನಿರ್ದೇಶಿಸಲಾಗಿದೆ:

ಕಾದಂಬರಿಯನ್ನು ಇದುವರೆಗೆ ಓದಿರದವರಿಗೆ ರಸಭಂಗವಾಗಬಾರದೆಂದು ಅದರ ಕಥಾನಕವನ್ನು ಇಲ್ಲಿ ಸಾರಾಂಶವಾಗಿಯೂ ಹೇಳಬಯಸುವುದಿಲ್ಲ. ಆದರೆ ಅದರ ವಿಷಯದಲ್ಲಿ ಎರಡು ಮಾತುಗಳನ್ನು ಹೇಳಲೇಬೇಕು. ಮೊದಲನೆಯವಾಗಿ, ಈ ಕಾದಂಬರಿಯಲ್ಲಿ ಕಥೆಗಿಂತ ವ್ಯಕ್ತಿದರ್ಶನ ಮುಖ್ಯವಾದುದೆಂಬುದು. ಎರಡನೆಯದಾಗಿ, ಈ ವ್ಯಕ್ತಿದರ್ಶನದ ಫಲವಾಗಿ ಒಂದು ವಿಶಿಷ್ಟವಾದ ಆವರಣದಲ್ಲಿ ಬೆಳೆದು ಬೇರೊಂದು ತೆರದ ಜೀವನದ ಆಗು-ಹೋಗುಗಳ ಸೆಳವಿಗೆ ಸಿಕ್ಕುಗಾಸಿಯಾದ ಒಂದು ವ್ಯಕ್ತಿಯ ಬಾಳಚಿತ್ರಣ ಒಂದು ರೀತಿಯಲ್ಲಿ ಸಾಧಿಸಿದೆಯಾದರೆ, ಇನ್ನೊಂದು ರೀತಿಯಲ್ಲಿ ಈ ವ್ಯಕ್ತಿಯ ಚಿತ್ರ ಸಮರ್ಪಕವಾಗುವಂತೆ, ಅದಕ್ಕೆ ಯೋಗ್ಯವಾದ ಪರಿಸ್ಥಿತಿಯನ್ನು ಒಟುಮಾಡಿಕೊಡುವಂತೆ, ಉಳಿದೆರಡು ವ್ಯಕ್ತಿಗಳನ್ನು ತೋರಿಸಲಾಗಿದೆ. ಈ ದೃಷ್ಟಿಯಿಂದ ಕುಸುಮೆಯ ಪಾತ್ರದ ಪರಿಪೋಷಕ್ಕಾಗಿ ಅವಳ ಗಂಡನ ಮತ್ತು ಅವನ ಮಿತ್ರನ ವಿಶಿಷ್ಟವಾದ ಸ್ವಭಾವಗಳು ಕಾದಂಬರಿಯಲ್ಲಿ ತೋರಿಸಿದಂತೆ ಇರದೆ ಇದ್ದರೆ, ಕಾದಂಬರಿಯು ವಾಸ್ತವಿಕತೆಗೆ ದೂರವಾಗಿರುತ್ತಿತ್ತಲ್ಲದೆ ಕುಸುಮೆಯ ವಿಪರೀತ ವರ್ತನೆಗೆ ಯೋಗ್ಯವಾದ ಶಿಕ್ಷೆಯನ್ನು ಸಿದ್ಧಪಡಿಸುವುದು ಸಾಧ್ಯವಾಗುತ್ತಿರಲಿಲ್ಲ. ಆದರೆ ಈ ವಿಷಯಗಳಿಗಿಂತ ಮುಖ್ಯವಾಗಿ ಕುಸುಮೆಯ ವಿಚಾರದಲ್ಲಿ ಒಂದು ಆಪಾದನೆಯನ್ನು ಮಾಡಲಾಗಿದೆ. ಅದೆಂದರೆ ತಾಯತನದ ಪವಿತ್ರವಾದ ಹೆಸರಿನಲ್ಲಿ ಶ್ರೀ. ಕಾರಂತರು ಕುಸುಮೆಯ ಕೈಯಿಂದ ವ್ಯಭಿಚಾರವನ್ನು ಮಾಡಿಸಿದ್ದಾರೆಂಬುದು. ಈ ರೀತಿ ಆಪಾದನೆಯನ್ನು ಮಾಡುವವರಿಗೆ ಕುಸುಮೆಯ ಪಾತ್ರವನ್ನು ಯಾವ ರೀತಿ ಕಾದಂಬರಿಕಾರರು ಕಲ್ಪಿಸಿರಬೇಕೆಂಬುದರ ಕಲ್ಪನೆಯೇ ಇಲ್ಲವೆಂದು ಹೇಳಬೇಕು. ಅಲ್ಲದೆ ಕುಸುಮೆಯ ಸ್ವಭಾವದರ್ಶನದಲ್ಲಿ ಶ್ರೀ. ಕಾರಂತರು ತೋರಿಸಿದ ಕೌಶಲ ಹೆಚ್ಚಿನ ಪರಿಣತಾವಸ್ಥೆಯನ್ನು ಸಮೀಪಿಸುತ್ತಿರುವ ಅವರ ಕಲೆಗಾರಿಕೆಯ ದ್ಯೋತಕವೆಂದು ಹೇಳಿದರೆ ಯಾವ ಅತಿಶಯೋಕ್ತಿಯೂ ಆಗಲಾರದು. ಹೀಗೆ ಹೇಳುವವರಲ್ಲಿ ಕುಸುಮೆಯು ಮಾಡಿದ ಅಪರಾಧ ಸರಿಯಾದುದೆಂತಾಗಲಿ, ಅವಳ ವರ್ತನೆಗೆ ಯಾವುದಾದರೊಂದು ಸಮರ್ಥನೆಯನ್ನು ಕಲ್ಪಿಸಿಕೊಡಲು ಯತ್ನಿಸುತ್ತಿದೆ ಎಂತಾಗಲಿ ಓದುಗರು ಭಾವಿಸಕೂಡದು. ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಕುಸುಮೆಯು ಬೆಳೆದುಬಂದ ಆವರಣ ಅವಳ ಸ್ವಭಾವವನ್ನು ಯಾವ ರೀತಿ ಮೂರ್ಪಡಿಸಿತ್ತೆಂಬುದನ್ನೂ, ಒಂದು ವಿಶಿಷ್ಟವಾದ ರೀತಿಯಲ್ಲಿ ಬೆಳೆವಣಿಗೆ ಹೊಂದಿದ ಅವಳ ಸ್ವಭಾವ ಬೇರೊಂದು ಸಾಮಾಜಿಕ ಆವರಣದ ಸೆಳವಿಗೆ ಸಿಕ್ಕಾಗ ಅವಳ ಸ್ವಭಾವ ಯಾವ ರೀತಿಯಾಗಿ ವಿಪರ್ಯಾಸವೊಂದಿತೆಂಬುದನ್ನೂ ನಾವು ನೋಡದಿದ್ದರೆ, ಕುಸುಮೆಯ ಪಾತ್ರದ ಬಗೆಯಲ್ಲಿ ನಮಗೆ ಸರಿಯಾದ ತಿಳಿವು ಬರುವುದು ಸಾಧ್ಯವೇ ಇಲ್ಲ. ಎಲ್ಲಕ್ಕೂ ಮೊದಲು ನಾವು ಒಂದು ವಿಚಾರವನ್ನು ಸ್ಪಷ್ಟಪಡಿಸಬೇಕು: ಅದೆಂದರೆ ವಾಸ್ತವಿಕ ಜೀವನದಲ್ಲಿ ಕುಸುಮೆಯಂಥ ಪಾತ್ರವು ಸಿಕ್ಕುವುದು ಸಾಧ್ಯವೆ, ಎಂಬುದು. ಇಂಥ ಪಾತ್ರವು ಸಾಧ್ಯವೆ ಎಂದು ಕೇಳಿ ಉತ್ತರ ಹೇಳುವುದಕ್ಕಿಂತ ಇಂಥ ಪಾತ್ರ ಅಸಾಧ್ಯವೆ ಎಂದು ಕೇಳಿದರೆ ಉತ್ತರ ಹೇಳುವುದು ಸುಲಭವಾಗುವುದಲ್ಲದೆ, ಒಂದು ಸಾಹಿತ್ಯಕೃತಿಯಲ್ಲಿ ನಿರ್ಮಿತವಾದ ಪಾತ್ರವನ್ನು ಅವಲೋಕಿಸಲು ಬೇಕಾದ ಯೋಗ್ಯವಾದ ವಿಮರ್ಶಾದೃಷ್ಟಿಯನ್ನೂ ಇಟ್ಟುಕೊಂಡಂತಾಗುವುದು. ಆದ್ದರಿಂದ 'ಕುಸುಮೆಯ ಪಾತ್ರ ಬದುಕಿನಲ್ಲಿ ಅಸಾಧ್ಯವೆ' ಎಂಬ ಪ್ರಶ್ನೆಗೆ ಉತ್ತರ ಅಸಾಧ್ಯವಲ್ಲ ಎಂದೇ ಬಹುಜನರು ಹೇಳುವಂತಿದೆ ಎಂಬುದು ಸ್ಪಷ್ಟವಾಗಿದೆ. ಇದಕ್ಕೆ ಕಾರಣವೆಂದರೆ ಆ ಪಾತ್ರದ ಮೂಲ ಕಲ್ಪನೆಯಲ್ಲಿ ಯಾವ ಅಸಂಬದ್ಧತೆಯೂ ಇಲ್ಲ. ಕಾದಂಬರಿಯನ್ನು ಸೂಕ್ಷ್ಮವಾಗಿ ಓದಿ ನೋಡಿದರೆ, ಬಾಲ್ಯದಿಂದ ನಡುಹರೆಯದ ವರೆಗೆ ಕುಸುಮೆಯ ಮನಸ್ಸು ಯಾವ ಯಾವ ಸ್ಥಿತ್ಯಂತರಗಳನ್ನು ಹೊಂದಿ ಒಂದು ವಿಶಿಷ್ಟ ಸ್ವರೂಪವನ್ನು ತಾಳಿತ್ತೆಂಬುದು ಸ್ಪಷ್ಟವಾಗದೆ ಇರದು. ಇಲ್ಲವೆಂಬುದೇ ಒಂದು ಮೂಲ ಮಂತ್ರವಾದ ಹಳ್ಳಿಯ ಬಾಳಿನ ಸಾಮಾನ್ಯವಾದ ಆವರಣದಲ್ಲಿ ತೀರ ಚಿಕ್ಕ ಪುಟ್ಟ ಆಶೆ, ಆಕಾಂಕ್ಷೆಗಳಿಗೂ ಅವಕಾಶವಿಲ್ಲದೆ ಬೆಳೆದ ಹುಮ್ಮಸವ ಹೆಣ್ಣೊಂದು ಪಟ್ಟಣದ ಜೀವನದ ಆಕರ್ಷಣೆಗಳಿಗೆ ಯಾವ ರೀತಿಯಾಗಿ ಬಲಿಬಿದ್ದು ತನ್ನ ಬದುಕನ್ನಲ್ಲದೆ ತನ್ನವನಾಗಿದ್ದವನ ಬದುಕನ್ನೂ ಹಾಳುಮಾಡಿತೆಂಬುದನ್ನು ತೋರಿಸುವುದೇ ಈ ಪಾತ್ರಚಿತ್ರಣದ ಹಿಂದಿನ ಮನೋಭೂಮಿ ಎಂಬುದನ್ನು ನಾವು ಲಕ್ಷ್ಯದಲ್ಲಿಟ್ಟುಕೊಂಡರೆ, ಕುಸುಮೆಯ

ಕೇವಲ ಒಂದು ಅಸಾಧ್ಯವಲ್ಲದ ವ್ಯಕ್ತಿಯ ಚಿತ್ರವಮಾತ್ರವಾಗಿರದೆ, ಒಂದು ರೀತಿಯ ಬಾಳಿನಲ್ಲಿ ಬೆಳೆದು ಇನ್ನೊಂದು ರೀತಿಯ ಬಾಳಿನ ನೀತಿ ನಿಯಮಗಳಿಗೆ ಒಂದು ಜೀವ ಒಳಪಟ್ಟಾಗ ಯಾವ ವಿಪರೀತಕ್ಕೇಡಾಗಬಹುದು ಎಂಬುದನ್ನು ಸೂಚ್ಯವಾಗಿಯಾದರೂ ಸ್ಪಷ್ಟವಾಗಿ ತೋರಿಸುವ ಮಾನವಪ್ರತೀಕಳಾಗಿದ್ದಾಳೆ ಎಂಬುದೂ ಸ್ಪಷ್ಟವಾಗುವುದು. ಈ ದೃಷ್ಟಿಯಿಂದ ಕುಸುಮೆಯ ಪಾತ್ರವನ್ನು ಪರಿಶೀಲಿಸಿ ನೋಡಲಾಗಿ, ಆ ಪಾತ್ರದ ಪರಿಪೋಷಣೆಗಾಗಿ ಉಳಿದೆರಡು ಪಾತ್ರಗಳಾದರೂ ಯಾವ ರೀತಿಯಲ್ಲಿ ಅನಿವಾರ್ಯವಾಗಿದ್ದುವೆಂಬುದನ್ನೂ, ಈ ಮೂರು ಪಾತ್ರಗಳ—ಅವು ಜೀವನದ ವಿಷಯದಲ್ಲಿ ಇಟ್ಟುಕೊಂಡ ವಿಶಿಷ್ಟ ದೃಷ್ಟಿಗಳ ಸಂಘರ್ಷದಲ್ಲಿಯೇ ಕಥೆ ಹೇಗೆ ಬೆಳೆದು ಬರುತ್ತದೆಂಬುದನ್ನೂ ನೋಡಬಹುದು. ಈ ಕಾದಂಬರಿಯನ್ನು ಈ ದೃಷ್ಟಿಯಿಂದ ನೋಡಿದರೆ ಅದರ ಬರೆವಣಿಗೆಗೆ ಈಗ ಕೆಲ ವಿಮರ್ಶಕರೆಂಬುವವರು ಸಲ್ಲಿಸಿದ ಖೈಗುಳ ಕಾಣಿಕೆ ತೀರ ಅಸಮಂಜಸವೆಂಬುದು ಸಹಜವಾಗಿಯೆ ಗೊತ್ತಾಗಬಹುದು.

× × × ×

ಜನಪದಸಾಹಿತ್ಯದ ಉದ್ಧಾರದ ಬಗೆಯಲ್ಲಿ ನಾವು ಕೈಕೊಳ್ಳಬೇಕಾದ ಕೆಲಸವನ್ನು ಕೆಲವು ಕಾಲದ ಹಿಂದೆ ವಿವರಿಸಿದ್ದೆ. ಆದರಲ್ಲಿ ನಾವು ಕಾಣಬಹುದಾದ ಕನಿತ್ವ, ಕಲ್ಪನೆ, ಬಾಳದೃಷ್ಟಿ ಇವುಗಳೆಲ್ಲವನ್ನು ಒಂದೆಡೆ ಇರಿಸಿದರೂ ಇನ್ನೊಂದು ದೃಷ್ಟಿಯಿಂದಲೂ ಜನಪದಸಾಹಿತ್ಯದ ಅಭ್ಯಾಸ ಹೇಗೆ ಉಪಯೋಗವುಳ್ಳದಾಗಬಹುದೆಂಬುದನ್ನು ತೋರಿಸುವ ನಿದರ್ಶನವೊಂದು ನನ್ನ ದೃಷ್ಟಿಗೆ ಬಿದ್ದಿದೆ. ಜನಪದಸಾಹಿತ್ಯದಲ್ಲಿ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳಲ್ಲಿಯ ಕಥಾಭಾಗಗಳು ಕೂಡ ಬೇರೆ ಬೇರೆ ರೂಪಗಳನ್ನು ಹೊಂದುವುದುಂಟು. ಈ ಮಾರ್ಪಾಟಗಳನ್ನು ಮೂಲಕಥೆಯ ಉದ್ದಿಷ್ಟವನ್ನಾಗಲಿ ಹೇಳುವ ರೀತಿಯನ್ನಾಗಲಿ ಬದಲಾಯಿಸುವುದಕ್ಕಾಗಿ ಮಾಡಿರದೆ, ಅದೇ ಕಥೆಗಳನ್ನು ಇನ್ನಷ್ಟು ಜನರು ಮನಮೆಚ್ಚುವಂತೆ ಹೇಳುವುದನ್ನೆ ಧ್ಯೇಯವಾಗಿಟ್ಟುಕೊಂಡಂತೆ ತೋರುತ್ತದೆ. ಹಳೆಯ ಕಥೆಗಳನ್ನು ಮನಮೆಚ್ಚುವಂತೆ ಹೀಗೆ ಮಾರ್ಪಡಿಸುವುದರಲ್ಲಿ ಜಾನಪದ ಕವಿಯು, ಸುತ್ತಲಿನ ಬದುಕಿನಲ್ಲಿಯ ಕೆಲವು ಅಂಶಗಳನ್ನು ಎತ್ತಿಕೊಂಡು ಸಂದರ್ಭಾನುಸಾರವಾಗಿ ಕಥೆಯಲ್ಲಿ ಪೋಣಿಸುಕೊಳ್ಳುತ್ತಿದ್ದ. ಕೆಲವು ವೇಳೆ ತನ್ನ ಕಲ್ಪನೆಯ ಕುದುರೆಯನ್ನೇ ಮುಂದೋಡಿಸಿ ಕೆಲವಾರು ಭಾಗಗಳನ್ನು ತನ್ನದೇ ಆದ ವಿಶಿಷ್ಟವಾದ ದೃಷ್ಟಿಯಿಂದ ಬೆಳೆಸಿಕೊಳ್ಳುತ್ತಿದ್ದ. ಇಂತಹ ಒಂದೆರಡು ಸಂದರ್ಭಗಳು ಇತ್ತೀಚೆಗೆ ಸಂಗ್ರಹಿಸಲ್ಪಟ್ಟ ಕೆಲವು ರಾಜಸ್ಥಾನೀ ಲೋಕಗೀತಗಳಲ್ಲಿ ದೊರಕುತ್ತವೆ. ಸೀತಾಪರಿತ್ಯಾಗದ ಕಥೆಯನ್ನು ಹೇಳುವ ಒಂದು ರಾಜಸ್ಥಾನೀ ಲಾವಣಿಯಲ್ಲಿ, ಪರಿತ್ಯಾಗಕ್ಕೆ ರಾಮಾಯಣಕ್ಕಿಂತ ಬೇರೆಯಾದ ಒಂದು ಕಾರಣವನ್ನೇ ಹೇಳಿದ್ದಾರೆ. ಸೀತೆಗೂ ಶ್ರೀರಾಮನ ಸಹೋದರಿಯಾದ ಶಾಂತೆಗೂ ಹೆಚ್ಚಾಗಿ ಮನಸ್ತಾಪವಾಯಿತೆಂದೂ ಆ ಮನಸ್ತಾಪದಲ್ಲಿ ಶ್ರೀರಾಮನು ತನ್ನ ಸಹೋದರಿಯ ಮಾತಿಗೇ ಗಮನವನ್ನು ಕೊಟ್ಟು ಸೀತೆಯನ್ನು ಕಾಡಿಗೆ ಕಳುಹಿಸಿದನೆಂದೂ ಒಂದು ಲಾವಣಿಯ ಹೇಳಿಕೆ ಇದೆ. ಇನ್ನೊಂದು ಲಾವಣಿಯಲ್ಲಿ ಇನ್ನೂ ಹೆಚ್ಚಿನ ಕಲ್ಪನೆಯ ವಿಲಾಸವಿದೆ. ಲಂಕೆಯಿಂದ ಮರಳಿ ಬಂದಮೇಲೆ, ಶ್ರೀರಾಮನ ಸಹೋದರಿಯು ರಾವಣನನ್ನು ವರ್ಣಿಸುವುದಾಗಿ ಸೀತೆಯನ್ನು ಕೇಳಿಕೊಂಡಳಂತೆ. ಸೀತೆಯು ಬಾಯಿಂದ ವರ್ಣಿಸುವುದರ ಬದಲು ಬಣ್ಣದಿಂದ ರಾವಣನ ಚಿತ್ರ ಬರೆದಳೆಂದೂ ಚಿತ್ರ ಮುಗಿಯುವ ಹೊತ್ತಿಗೆ ಶ್ರೀರಾಮನು ಅಲ್ಲಿಗೆ ಬರಲಾಗಿ ಅವನನ್ನು ಸ್ವಾಗತಿಸುವ ಭರದಲ್ಲಿ, ಚಿತ್ರದಲ್ಲಿಯ ರಾವಣನ ತೊಡೆಯ ಮೇಲೆ ಬಣ್ಣದ ಮುದ್ದೆಯೊಂದು ಅಲ್ಲಿರಬಹುದಾದ ಒಂದು ಗುರುತಿನ ರೂಪವಾಗಿ ಬಿದ್ದುಕೊಂಡಿತೆಂದೂ, ಅವನ್ನು ನೋಡಿದ ಶ್ರೀರಾಮನು, ಸೀತೆಯು ನಿಜವಾಗಿಯೂ ರಾವಣನನ್ನು ಅಷ್ಟು ಸೂಕ್ಷ್ಮವಾಗಿಯೂ ಹೇಗೆ ನೋಡಿರುವುದು ಸಾಧ್ಯವೆಂಬ ವಿಷಯದಲ್ಲಿ ಅನುಮಾನ ಉಳ್ಳವನಾಗಿ ತನ್ನ ಪತ್ನಿಯ ಬಗೆಯಲ್ಲಿ ಸಾರಂಕನಾದನೆಂದೂ, ಆದ್ದರಿಂದ ಅವಳನ್ನು ಆಡವಿಗೆ ಕಳುಹಿಸಿದನೆಂದೂ ಇನ್ನೊಂದು ಲಾವಣಿಯ ಆಶಯವಾಗಿದೆ. ಇಲ್ಲಿ ವ್ಯಕ್ತವಾಗುವ ಸೂಕ್ಷ್ಮಗ್ರಾಹಿ ಕಲ್ಪನಾಶಕ್ತಿಯನ್ನು ನಾವು ಮೆಚ್ಚಿದರೂ, ಮೂಲದಲ್ಲಿಯ ಕಥಾಸಂದರ್ಭ ವಿಪರೀತವಾಗಿ ಬೆಳೆಸಲ್ಪಟ್ಟಿದೆ ಎಂಬುದನ್ನು ನಾವು ಮರೆಯಕೂಡದು. ಶ್ರೀರಾಮನು ನಿಜವಾಗಿಯೂ ಪತ್ನಿಯ ಸ್ವಭಾವದ ಬಗ್ಗೆ ಶಂಕಿತನಾಗಿರದೆ, ಕೇವಲ ಲೋಕಾಪವಾದಕ್ಕೆ ಆಸ್ಪದ ಕೊಡಲಾರದವನಾಗಿ ಸೀತೆಯನ್ನು ಕಾಡಿಗೆ ಕಳುಹಿಸಿದನೆಂಬುದು ರಾಮಾಯಣದಲ್ಲಿ ಸ್ಪಷ್ಟವಿದೆ. ಹೀಗಿದ್ದರೂ ಜನಪದ ಸಾಹಿತ್ಯದಲ್ಲಿ ಹಳೆಯ ಕಥೆಗಳೇ ಬೇರೆ ಬೇರೆ ರೂಪಗಳಲ್ಲಿ ಹೇಗೆ ಉಪಲಬ್ಧವಾಗಬಹುದು ಎಂಬುದೇ ಒಂದು ಮಹತ್ತ್ವದ ಅಭ್ಯಾಸದ ವಿಷಯವಾಗಬಹುದು. ಈ ಅಭ್ಯಾಸವು ಜನಪದ ಸಾಹಿತ್ಯದ ದೃಷ್ಟಿಯಿಂದಲ್ಲದೆ ಪುರಾಕಾವ್ಯಗಳ ಸಂಶೋಧನೆ–ಸಂಪಾದನೆಗಳ ದೃಷ್ಟಿಯಿಂದಲೂ ಮಹತ್ತ್ವದ್ದಾಗಬಹುದೆಂಬುದರಲ್ಲಿ ಸಂಶಯವಿಲ್ಲ. ಈ ತೆರದ ರೂಪಾಂತರಗಳೂ ವ್ಯತ್ಯಾಸಗಳೂ ಕನ್ನಡ ಲಾವಣಿಗಳಲ್ಲಿ ಹಾಡುಗಳಲ್ಲಿ ಕೂಡ ಸಿಗುವುದು ಸಾಧ್ಯ. ಅತ್ತಕಡೆಗೆ ಅವಶ್ಯವಾದ ವಿಮರ್ಶಾದೃಷ್ಟಿಯನ್ನಿಟ್ಟುಕೊಂಡು ಅವುಗಳನ್ನು ಹುಡುಕಿ ಬೆಳಕಿಗೆ ತರುವುದರ ಕಡೆಗಾದರೂ ನಾವು ನಮ್ಮ ಯತ್ನಗಳನ್ನು ತಿರುಗಿಸಬೇಕಾಗಿದೆ.

× × × ×

ಕಳೆದ ಮೇ ತಿಂಗಳ ವಿಹಾರದಲ್ಲಿ ನಮ್ಮ ತರುಣ ವಿದ್ಯಾವಂತರು ನಮ್ಮ ಸಾಹಿತ್ಯ–ಸಂಸ್ಕೃತಿಗಳ ಬಗೆಯಲ್ಲಿ ತೋರಿಸುವ ಅನಾಸ್ಥೆಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಿದ್ದೆ. ಅದಕ್ಕೆ ಉತ್ತರರೂಪವಾಗಿ ಒಬ್ಬಿಬ್ಬರು ಆ ಪರಿಸ್ಥಿತಿಯನ್ನು ದೂರ ಮಾಡುವುದಕ್ಕಾಗಿ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂದು ಪ್ರತಿಯಾಗಿ ಕೇಳಿದ್ದಾರೆ. ಇನ್ನೊಬ್ಬರು ಒಂದು ಸೂಚನೆಯನ್ನೂ ಕಳುಹಿದ್ದಾರೆ. ಆ ಸೂಚನೆಯು—ಯೋಗ್ಯವಾಗಿ ಉಪಯೋಗಿಸಿಕೊಂಡರೆ—ಒಳ್ಳೆಯದೆಂದೇ ಹೇಳಬೇಕು. ಪ್ರತಿ ತಿಂಗಳೂ ವಿಹಾರದ ಕೊನೆಯ ಭಾಗದಲ್ಲಿ ನಾವಜಕರು ಕೇಳಬಹುದಾದ ಒಂದೆರಡು ಪ್ರಶ್ನೆಗಳಿಗೆ ಉತ್ತರ ಹೇಳಬೇಕೆಂಬುದೇ ಆ ಸೂಚನೆ. ಈ ಪ್ರಶ್ನೋತ್ತರ ಒಳ್ಳೆಯ ಉಪಾಯವೇನೋ ಹೌದು; ಆದರೆ ಈಗ ಕೆಲವು ಕನ್ನಡ ಪತ್ರಿಕೆಗಳಲ್ಲಿ ಈ ಪ್ರಶ್ನೋತ್ತರಗಳು ವಿಪರೀತವಾಗಿ ಉಪಯೋಗಿಸಲ್ಪಡುತ್ತಿವೆ

(ಲೇಖನದ ಪುಟಕ್ಕೆ ಮುಂದರಿದುದು)



ಸಿಮ್ಲಾ ಪರಿಷತ್ತು

ಕೊನೆಯ ವರೆಗೂ ಆಶೆಯ ತರಂಗಗಳನ್ನೆಬ್ಬಿಸುತ್ತ ಜನರನ್ನು ಕುಣಿಸುತ್ತಲಿದ್ದ ಸಿಮ್ಲಾ ಪರಿಷತ್ತು ಕನಸಿನಂತೆ ಬಯಲಾಯಿತು. ಪರಿಷತ್ತಿನಲ್ಲಿ ಆಶೆ ಇಟ್ಟುಕೊಂಡವರು ಬರಿಯ ಸಾಮಾನ್ಯ ಜನರಲ್ಲ. ಪರಿಷತ್ತಿಗಾಗಿ ನೆರೆದ ಬೇರೆ ಬೇರೆ ಪಕ್ಷಗಳ ಮುಂದಾಳುಗಳು ಕೂಡ ಪರಿಷತ್ತು ಯಶಸ್ವಿಯಾಗುವುದೆಂದೆ ಸೂಚಿಸುತ್ತಿದ್ದರು. ಆದರೆ ಈ ಮುಂದಾಳುಗಳು ಹೀಗೆ ಹೇಳಿದ ಹನ್ನೆರಡು ತಾಸುಗಳಲ್ಲಿಯೆ ಪರಿಷತ್ತು ಮುರಿಯಿತೆಂಬುದನ್ನು ನೆನಪುಮಾಡಿಕೊಂಡರೆ ಲಕ್ಷ್ಯರ್ಹವೆನ್ನಿಸ ಬಹುದಾಗಿದೆ. ಮುಂದಾಳುಗಳಿಗೆ ಕೂಡ ಪರಿಸ್ಥಿತಿಯ ಅಂದಾಜು ಇದ್ದಿಲ್ಲವೆಂದರೆ ನಿಜವಿದ್ದ ಪರಿಸ್ಥಿತಿಯನ್ನೆ ಇವರ ಕೊನೆಯ ವರೆಗೂ ಅರಿತುಕೊಳ್ಳಲಿಲ್ಲವೆಂದು ಹೇಳಬಹುದೆ? ಕೊನೆಯವರೆಗೂ ನಡೆದುಬಂದ್ದಕ್ಕೆ ಕಣ್ಮುಚ್ಚಿ ಇವರು ತಮ್ಮ ಹೃದಯದೊಳಗಿನ ಆಶೆಯನ್ನೆ ನಂಬಿಕೊಂಡರೆನ್ನಬಹುದೆ? ಇಲ್ಲವೆ ಕೊನೆಯ ವರೆಗೂ ವೈಸರಾಯರು ಪರಸ್ಪರ ಪರಿಸ್ಥಿತಿಯನ್ನು ಬೇರೆ ಬೇರೆ ಪಕ್ಷಗಳಿಗೆ ತಿಳುಹಿಸಿದೆ ಅನೈಕ್ಯವ ಲಾಭವನ್ನು ಸಾಧಿಸಿಕೊಂಡರೆನ್ನಬಹುದೆ? ಇಲ್ಲವೆ ದೇಶದ ಮುಂದಾಳುಗಳು ಮುಂದಾಳುತನದ ಹೊಣೆಯನ್ನು ಹೊರಲು ಅಥವಾ ಅರಿಯಲು ಅಸಮರ್ಥರಾದರೆನ್ನಬಹುದೆ? ಇಂದಿಲ್ಲ ನಾಳೆ ಬಿಕ್ಕಟ್ಟು ಬಿಡುವುದಾದರೆ, ಈ ಪ್ರಶ್ನೆಗಳನ್ನು ಬಿಡಿಸುವುದರಿಂದಲ್ಲವೆ ಒಬ್ಬರೊಬ್ಬರ ಮೇಲೆ ದೋಷಾರೋಪಣೆಯನ್ನು ಮಾಡುವುದರಿಂದಲ್ಲ.

ವೈಸರಾಯರ ಚಾತುರ

ಯೋಜನೆಯನ್ನು ಸಿದ್ಧಪಡಿಸಿದವರು, ಪರಿಷತ್ತಿನ ನಾಯಕರು ತಾವು ಎಂದು ಹೇಳಿಕೊಂಡ ವೈಸರಾಯರ ನೀತಿಯನ್ನೆ ಮೊದಲು ನೋಡಬಹುದು. ಯೋಜನೆಯ ಬಗ್ಗೆ ವೈಸರಾಯರಲ್ಲಿ ಸದಿಚ್ಛೆ ಇದೆ ಎಂದು ಸಾಮಾನ್ಯವಾಗಿ ಎಲ್ಲ ಮುಂದಾಳುಗಳೂ ವಿಶ್ವಾಸಪತ್ರವನ್ನು ಕೊಟ್ಟಿದ್ದಾರೆ. ಆದರೆ ಆ ಸದಿಚ್ಛೆಗೆ ಪುಷ್ಟಿಯನ್ನು ಕೊಡಲು ಸಾಕಷ್ಟು ಧೈರ್ಯವನ್ನಾಗಲಿ, ಬುದ್ಧಿಮತ್ತೆಯನ್ನಾಗಲಿ ವೈಸರಾಯರು ವಿನಿಯೋಗಿಸಲಿಲ್ಲವೆಂದು ವಿಷಾದದಿಂದ ಹೇಳಬೇಕಾಗುವುದು. ಒಂದು ಕಾಂಗ್ರೆಸ್ ಮತ್ತು ಲೀಗಗಳ ಒಪ್ಪಂದವೆ ತಮಗೆ ಅಗತ್ಯವಾಗಿದ್ದರೆ, ಈ ಎರಡು ಪಕ್ಷಗಳ ಮುಂದಾಳುಗಳನ್ನು ಒಂದೆಡೆ ಸೇರಿಸಿ ಅನೌಪಚಾರಿಕವಾಗಿ ಚರ್ಚಿಸಬಹುದಾಗಿತ್ತು. ಅದರಂತೆಯೆ ಪರಿಷತ್ತನ್ನು ಸೇರಿಸಲು ಕಾರಣೀಭೂತವಾದ ತತ್ತ್ವಗಳನ್ನು ಎಲ್ಲ ಪಕ್ಷದವರೂ ಒಪ್ಪಿಕೊಂಡ ಮೇಲೆ, ವೈಸರಾಯರು ಧೈರ್ಯದಿಂದ ಆಯಾ ಮುಂದಾಳುಗಳನ್ನು ಇವರಿಸಿ ನಿರ್ಣಯಕ್ಕಾಗಿ ಹಟತೊಡಬೇಕಾಗಿತ್ತು. ಜನತೆಯ ಪ್ರತಿನಿಧಿ ಎನ್ನಿಸುವ ಮಂತ್ರಿಮಂಡಲವು ಅಜ್ಞೊಂದು ಅಗತ್ಯವೆಂದು ಒಪ್ಪಿ, ಹೆಸರುಗಳನ್ನು ನಿರ್ಣಯಿಸುವ ಕೊನೆಯ ಅಧಿಕಾರವು ತಪ್ಪದೆಂದು ಸಾಧಿಸಿ, ಯಾರಿಗೂ ತಾವು ಆರಿಸಿದ ಹೆಸರುಗಳನ್ನು ತೋರಿಸದ ವೈಸರಾಯರ ನೀತಿಯು ಬುದ್ಧಿಮತ್ತೆಯದಾಗಲಿ ಧೈರ್ಯದ್ದಾಗಲಿ ಇದ್ದಿಲ್ಲವೆಂದು ಹೇಳಲಾಗದು.

ಕಾಂಗ್ರೆಸಿನ ಹೊಣೆ

ಕಾಂಗ್ರೆಸಿನ ಮುಂದಾಳುಗಳು ಪರಿಷತ್ತಿನಲ್ಲಿ ಸಹಕರಿಸಲು ನಿಶ್ಚಯಿಸಿ ತಮ್ಮ ಹೊಣೆಯನ್ನು ಅರಿತುಕೊಂಡರೇನೊ ನಿಜ; ಆದರೆ ಮುಂದೆ ಅದನ್ನು ನಿರ್ವಹಿಸಲು ಎಷ್ಟರಮಟ್ಟಿಗೆ ಅಸಮರ್ಥರಾದರೆಂದು ಹೇಳಬಹುದು. ಪಾಕಿಸ್ತಾನವನ್ನು ಒಪ್ಪಿಗೆ ಮಾತ್ರಕ್ಕೆ ಮುಸ್ಲಿಂ ಲೀಗನ್ನು ಪೂರ್ತಿಯಾಗಿ ಕಡೆಗಣಿಸಬೇಕಾಗಿರಲಿಲ್ಲ. ವೈಸರಾಯರಲ್ಲಿ ಸದಿಚ್ಛೆ ಇದೆ ಎಂದು ಕಂಡ ಮಾತ್ರಕ್ಕೇ ಪೂರ್ತಿಯಾಗಿ ಕಣ್ಮುಚ್ಚಿ ಅವರನ್ನೆ ನಂಬಿಕೊಂಡು ಆಶೆ ಹಿಡಿಯಬೇಕಾಗಿದ್ದಿಲ್ಲ. ಅಖಿಲ ರಾಷ್ಟ್ರದ ಪ್ರತಿನಿಧಿ ತಾನೆಂದು ಹೆಮ್ಮೆಹೊತ್ತ ಸಂಸ್ಥೆಯು ಮುಸ್ಲಿಂ ಲೀಗದೊಡನೆ ಹುರಿತನದ ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕಿತ್ತು. ಆದರೆ ಕಾಂಗ್ರೆಸು ಈ ವಿಷಯದಲ್ಲಿ ತೀರ ತಪ್ಪಾದ ಧೋರಣೆಯನ್ನು ಅನುಸರಿಸಿತು. ಪರಿಷತ್ತಿನ ಲಾಭವನ್ನು ಪಡೆದುಕೊಂಡು, ಪಂಜಾಬಿನ ಮುಖ್ಯಮಂತ್ರಿಯೊಡನೆ ಸೇರಿ, ಮುಸ್ಲಿಂ ಲೀಗನ್ನು ಸದೆಬಡಿಯಬೇಕೆಂದು ಕಾಂಗ್ರೆಸು ನಿಶ್ಚಯಿಸಿದಂತೆ ಕಾಣತ್ತಿತ್ತು. ಇದು ನಿಜವಿದ್ದರೆ ಕಾಂಗ್ರೆಸ್–ಲೀಗ್‌ಗಳ ಪರಸ್ಪರ ಅವಿಶ್ವಾಸ ಪರಿಷತ್ತಿಗಾಗಿ ಹೆಚ್ಚಿತು ಎಂದೇ ಹೇಳಬೇಕಾಗುವುದು. ಲೀಗದ ಧೋರಣೆ ಇಂದು ಕಾಂಗ್ರೆಸಿನ ವೈಷ್ಟಿಯಿಂದ ದೇಶವಿಘಾತಕವಿರಬಹುದು ಆದರೆ ಅಷ್ಟಕ್ಕಾಗಿ ಅಜ್ಞಾನದಿಂದಾಗಲಿ, ಅನಿವಾರ್ಯವಾಗಿಯಾಗಲಿ ಲೀಗನ್ನು ಹಿಂಬಾಲಿಸುವ ಲಕ್ಷಾವಧಿ ಮುಸಲ್ಮಾನರ, ಅನೇಕ ದೇಶಭಕ್ತರನ್ನು ಮುಸಲ್ಮಾನ ಮುಂದಾಳುಗಳ ಸಹಾನುಭೂತಿಯನ್ನು ಕಳೆದುಕೊಳ್ಳುವುದು ಹೊಣೆಗಾರಿಕೆಯ ಲಕ್ಷಣವಲ್ಲ.

ಶ್ರೀರಂಗ ಸಾರಸ್ವತ

ಱ

ಸಂಸಾರಿಗ ಕಂಸ

ಱ

ಪ್ರಪಂಚ ಪಾಣಿಪತ್ತು

ಶ್ರೀರಂಗರ ಎರಡು ಸ್ವತಂತ್ರ ಸಾಮಾಜಿಕ ನಾಟಕಗಳು ರಂಗಮಂಗ ಪ್ರಕಾಶನದಲ್ಲಿ ಬೇಗನೆ ಪ್ರಕಟವಾಗಲಿವೆ.

ನಿಮ್ಮ ಪ್ರತಿಗಳಿಗಾಗಿ ಮುಂಚಿತವಾಗಿ ಬರೆಯಿರಿ.

C/o. ಮ್ಯಾನೇಜರ, 'ಜಯಂತಿ', ಧಾ"ವಾಡ.

ಜಿನ್ನಾ ಇವರ ಜಂಬಗಾರಿಕೆ

ಇತ್ತ ಮುಸ್ಲಿಂ ಲೀಗವೂ ಪ್ರಾಮಾಣಿಕತೆಯಿಂದ ವರ್ತಿಸಲಿಲ್ಲ ಎಂದು ವಿಷಾದವಾಗುತ್ತದೆ. ಇನ್ನೊಬ್ಬರಲ್ಲಿ ಅವಿಶ್ವಾಸ, ತಮ್ಮ ಧೋರಣೆಯನ್ನು ಮಾತ್ರ ನಿಚ್ಚಳವಾಗಿ ಹೇಳುವಂತಿಲ್ಲ. ಈ ಜಂಬದ ಮನೋವೃತ್ತಿಯಿಂದಲೆ ಜಿನ್ನಾರವರು ಎಲ್ಲರ ವಿಶ್ವಾಸವನ್ನು ಕಳೆದು ಕೊಂಡರು. ದೇಶದ ರಾಜಕೀಯ ಘಟನೆಯನ್ನು ನಿರ್ಣಯಿಸುವ ಕಾಲವಿದಲ್ಲ ಎಂದು ಎಲ್ಲರೂ ಒಪ್ಪಿಕೊಂಡಾಗ, ಭಾವೀ ಶಾಶ್ವತಘಟನೆಗೆಯೆ ಸಂಬಂಧಿಸಬಹುದಾದ ಪಾಕಿಸ್ತಾನದ ಪ್ರಶ್ನೆಯನ್ನು ಮಾತ್ರ ಈಗಲೆ ಎಲ್ಲರೂ ಒಪ್ಪಬೇಕು ಎಂಬ ಜಿನ್ನಾ ಸಾಹೇಬರ ಅಭಿಪ್ರಾಯವು ಮತ್ತಷ್ಟು ತಪ್ಪು, ಅನ್ಯಾಯ, ಇದಲ್ಲದೆ ಎಲ್ಲಿ ಹೋದರೂ ತಾವು ಕೇಳಿದ್ದೇ ಸಾಧಿಸಬೇಕು ಎಂಬ ಹಟವಿದ್ದಾಗ, ಜಿನ್ನಾ ಅವರು ಪರಿಷತ್ತಿಗೆ ಹೋದದ್ದು — ಹೋಗಿ ಮುಂದೆ ಕೊನೆಯವರೆಗೂ ಭಾಗವಹಿಸಿದ್ದು — ಅತ್ಯಂತ ಅಸಮಂಜಸವಾಗಿದೆ. ಮುಂಚಿತವಾಗಿಯೆ ತಮ್ಮ ಹಟವನ್ನು ಸಾರಿದ್ದರೆ ಪರಿಷತ್ತಾದರೂ ಸೇರುತ್ತಿದ್ದಿಲ್ಲ. ಪರಿಣಾಮವಾದರೂ ಬೇರೆಯಾಗಬಹುದಾಗಿತ್ತು. ಅಥವಾ ಗಾಂಧಿಜಿಯವರಂತೆ ತಾವೂ ಹೊರಗುಳಿದು ಮಿಕ್ಕವರಿಗೆ ವಿಚಾರನಿರ್ಣಯವನ್ನು ಒಪ್ಪಿಸಬಹುದಾಗಿತ್ತು. ಜಂಬದೊಡನೆ ಜಾಣತನವಿದ್ದರೆ ಅದು ಗೌರವವೆನಿಸುವುದು. ಜಾಣತನವಿಲ್ಲದ ಜಂಬತನವು ಕಡಿಗೇಡಿತನ ಎನ್ನಿಸುವುದು. 'ಇಂದು ಮುಸ್ಲಿಂ ಲೀಗಕ್ಕೆ ಕಿಡಿಗೇಡಿತನದ ಅಪವಾದ ಬಂದದ್ದು ಆಶ್ಚರ್ಯವಲ್ಲ.

ಮುಂದೇನು ?

ದೇಶದ ಪರಿಸ್ಥಿತಿಯ ದೃಷ್ಟಿಯಿಂದ ಹೇಳುವುದಾದರೆ ಅದುವರೆ ವಿಷಾದಕ್ಕಿಂತ ಆಗಬೇಕಾದುದರ ವಿಚಾರ ಆಗತ್ಯವಾಗಿದೆ. ಮೇಲೆ ಹೇಳಿದಂತೆ ಪರಿಷತ್ತಿನಿಂದ ಪರಸ್ಪರ ಸೌಹಾರ್ದ ಬೆಳೆಯುವುದರ ಬದಲು ಅವಿಶ್ವಾಸ ಹೆಚ್ಚಿದ್ದು ಖಂಡಿತ. ಈ ವಾತಾವರಣದ ನೆಪ ಮಾಡಿ, ಬ್ರಿಟಿಶ ದೊರೆತನವು ಸಾರ್ವಜನಿಕ ಚುನಾವಣೆಗಳನ್ನು ಮುಂದೆ ಹಾಕಬಹುದು. ಅದರಂತೆಯೆ ಮುಸ್ಲಿಂ ಲೀಗ ಮತ್ತು ಕಾಂಗ್ರೆಸ್ ಪಕ್ಷಗಳಲ್ಲಿ ಸ್ಪರ್ಧೆ ಹೆಚ್ಚಿದ್ದರಿಂದ, ೧೯೪೬ ಆಗಸ್ಟಿಗೆ ಮುಂಚಿನ ಪ್ರಾಂತಿಕ ಸರಕಾರಗಳ ಪುನರುತ್ಥಾಪನೆಯನ್ನು ಮಾಡುವುದೂ ಹೆಚ್ಚು ಕಠಿನವಾಗಿದೆ. ಕಾಂಗ್ರೆಸ್ ಸರಕಾರಗಳು ರಾಜೀನಾಮೆಯನ್ನು ಕೊಟ್ಟಾಗ 'ಪೀಡೆ ತೊಲಗಿತೆ'ಂದು ಸಂತೋಷಪ್ರದರ್ಶನವನ್ನು ಮಾಡಿದ ಲೀಗವು ಈಗ ಆ ಸರಕಾರಗಳು ಅಸ್ತಿತ್ವದಲ್ಲಿ ಬಂದರೆ ಸಹಿಸಬಹುದೆ ? ಒಟ್ಟಾರೆ, ವೇವೆಲ್‌ರಲ್ಲಿ ಸದಿಚ್ಛೆಯೆ ತುಂಬಿದ್ದರೂ ಇಂದು ಅನಿಷ್ಟ ವಾತಾವರಣವು ಆದರ ಫಲವಾಗಿದೆ. ಈಗಲೂ ವೇವೆಲ್‌ರಲ್ಲಿ ಆಸೆಯನ್ನಿಟ್ಟ ಕಾಂಗ್ರೆಸ್ಸಿನ ಮುಂದಾಳುಗಳವ್ವಾರೆ. ಬ್ರಿಟಿಶ್ ಪಾರ್ಲಮೆಂಟಿನ ಚುನಾವಣೆಯ ಫಲಿತಾಂಶ ಹೊರಬೀಳುವವರೆಗೆ ಕಾದು, ಮುಂದೆ ವೈಸರಾಯರು ನಿಶ್ಚಿತವಾಗಿ ಪರಿಷತ್ತಿನ ಕಾರ್ಯವನ್ನು ಮುಂದುವರಿಸುವವರಿದ್ದಾರೆ ಎಂದೂ ಅನೇಕರು ನಂಬಿಕೊಂಡಿದ್ದಾರೆ ಆದರೆ ಮುಂದೆ ಯಾವುದೆ ನಿರ್ಣಯ ಅಸ್ತಿತ್ವದಲ್ಲಿ ಬಂದರೂ ಸದ್ಯಕ್ಕೆ ಸಿಮ್ಲಾ ಪರಿಷತ್ತಿನಿಂದ ರಾಜಕೀಯ ವಾತಾವರಣವು ಕಲುಷಿತವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಕಾಂಗ್ರೆಸಿನ ಹೊಣೆ ದೊಡ್ಡದಿದೆ: ಲೀಗವು ಮುಸಲ್ಮಾನರ ಏಕಮೇವ ಪ್ರತಿನಿಧಿಯಲ್ಲ ಎಂದು ಸಾಧಿಸಲು ಲೀಗೇತರ ಮುಸಲ್ಮಾನರನ್ನು ಸಂಚುಗೂಡಿಸುವುದು ಘಾತಕವಾಗಿದೆ ಅಖಿಲ ರಾಷ್ಟ್ರದ ಪ್ರತಿನಿಧಿ ತಾನೆಂದು ಸಾಧಿಸುವುದಾದರೆ, ಕಾಂಗ್ರೆಸು ಲೀಗದ ಮುಂದಾಳುಗಳ ಮನವೊಲಿಸಿಕೊಳ್ಳುವುದೇ ವಿಹಿತವಾದ, ಬುದ್ಧಿಪೂರ್ವಕತೆಯ ಮಾರ್ಗ.

(ಅಡಸೆಯ ಪುಟದಿಂದ ಮುಂದುವರಿಸುದು)

ಎಂಬುದನ್ನು ಗಮನಿಸಿದರೆ, ಆ ಸಮ್ಮತಿಯನ್ನು ನಾವು ಎತ್ತಿಕೊಳ್ಳಬೇಕಾದಲ್ಲಿ ಒಂದೆರಡು ಎಚ್ಚರದ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗುವುದು. ಈಗ ನಮ್ಮ ಪತ್ರಿಕೆಗಳಲ್ಲಿ ಉಪಲಬ್ಧವಾಗುವ ಪ್ರಶ್ನೋತ್ತರಗಳುಹೆಚ್ಚಾಗಿ ಚಿತ್ರನಟತಾರಕೆಯರ ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟವುಗಳಾಗಿರುತ್ತವೆಯಲ್ಲದೆ, ಅವುಗಳಿಂದ ಕೆಲವು ವಾಚಕರ ಸಲ್ಲದ ಕುತೂಹಲಕ್ಕೊಂದು ಸಮಾಧಾನ ಸಿಕ್ಕುತ್ತಿರಬಹುದೇ ಹೊರತು ಬೇರೆ ಯಾವ ಪ್ರಯೋಜನವೂ ಆಗುತ್ತಿರಲಾರದು. ಆದುದರಿಂದ ಈ ವಿಭಾಗದಲ್ಲಿ ವಾಚಕರು ಪ್ರಶ್ನೆಗಳನ್ನು ಕೇಳಬಹುದಾದರೆ, ಆ ಪ್ರಶ್ನೆಗಳು ನಮ್ಮ ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಪಟ್ಟವುಗಳಾಗಿರಬೇಕು. ನಮ್ಮ ಲೇಖಕರಿಗೆ ಸಂಬಂಧಪಟ್ಟವುಗಳಾಗಿರಬಹುದಾದರೂ, ಅವರ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿರದೆ ಅವರ ಕೃತಿಗಳಿಗೆ, ಅವರ ಸಾಹಿತ್ಯಜೀವನಕ್ಕೆ ಸಂಬಂಧಿಸಿರಬೇಕು. ಈ ತೆರನ ಪ್ರಶ್ನೆಗಳಿಗೆ ಮಾತ್ರ ಇಲ್ಲಿ ಉತ್ತರ ಸಿಗುವುದು ಸಾಧ್ಯ. ಮುಖ್ಯವಾಗಿ ಇಲ್ಲಿ ಈ ಪ್ರಶ್ನೋತ್ತರ ಪದ್ಧತಿಯನ್ನು ಪ್ರಾರಂಭಿಸಿದುದು ನಮ್ಮ ಲೇಖಕರ ಬಗೆಯಲ್ಲಿ, ಅವರ ಸಾಹಿತ್ಯ ನಿರ್ಮಿತಿಯ ಬಗೆಯಲ್ಲಿ ವಾಚಕರ ಕುತೂಹಲವನ್ನು ಕೆರಳಿಸಿ ಹೆಚ್ಚುಹೆಚ್ಚಾಗಿ ಅವರೆಲ್ಲರೂ ನಮ್ಮ ಸಾಹಿತ್ಯ-ಸಂಸ್ಕೃತಿಗಳ ಅರಿವನ್ನು ಪಡೆಯಬೇಕು ಎಂಬುವಕ್ಕಾಗಿ. ಉತ್ತರವನ್ನು ಹೇಳುವವರಾದರೂ ಆ ದೃಷ್ಟಿಯನ್ನಿಟ್ಟುಕೊಂಡೇ ಹೇಳುವರು. ಪ್ರಶ್ನೆ ಕೇಳಬಯಸುವವರು ತಮ್ಮ ಪ್ರಶ್ನೆಗಳನ್ನು " ನಿಹಾರಿ C/o ಸಂಪಾದಕ ಜಯಂತಿ, ಧಾರವಾಡ " ಈ ವಿಳಾಸಕ್ಕೆ ಕಳಿಸಬೇಕು.

ವಿಜ್ಞಾನದ ವಿಚಿತ್ರ ಪ್ರಪಂಚ

(ಆಚೆಯ ಪುಟದಿಂದ ಮುಂದರಿದುದು)

ಮಾಡಿಕೊಟ್ಟುದಲ್ಲದೆ ಕೆಪ್ಲರನಿಂದ ತಿದ್ದಲ್ಪಟ್ಟ ಮತ್ತು ಕೋಪರ್ನಿಕಸನಿಂದ ಪ್ರತಿಪಾದಿಸಲ್ಪಟ್ಟ ಸೂರ್ಯಕೇಂದ್ರ ತತ್ತ್ವ ವಿಷಯವಾಗಿ ಪ್ರಮಾಣಗಳನ್ನಾದರೂ ಒದಗಿಸಿಕೊಟ್ಟನು.

ತನ್ನ ದುರ್ಬಿಣಿಯಲ್ಲಿ ಇವನು ಮೊದಲು ಚಂದ್ರನನ್ನು ಪರೀಕ್ಷಿಸಿದನು. ಇವನಿಗೆ ಪ್ರಥಮದರ್ಶನದಲ್ಲಿಯೆ ನಮ್ಮ ಜಗತ್ತಿನಂತೆಯೇ ಇಲ್ಲಿಯಾದರೂ ಗಿರಿಕಂದರಗಳು, ತಪ್ಪಲು ಪ್ರದೇಶ, ಸಮುದ್ರ, ಜ್ವಾಲಾಮುಖಿಯ ಲಕ್ಷಣ ಮೊದಲಾದ ವುಗಳು ಇರಬೇಕೆಂದು ಎನಿಸಿತು. ಇದು ಅರಿಸ್ಟಾಟಲನ ಅನುಯಾಯಿಗಳ ಮೇಲೆ ಯಾವ ಪರಿಣಾಮವನ್ನು ಮಾಡಿರಬಹುದೆಂಬುದನ್ನು ಊಹಿಸುವುದೇ ಲೇಸು. ಅವರ ಅಭಿಪ್ರಾಯದಂತೆ—ದೈವೀ ಸೌಂದರ್ಯಕಾಂತಿಯಿಂದ ಯುಕ್ತವಾದ ಚಂದ್ರನ ಮೋರೆಗೆ ಗ್ಯಾಲಿಲಿಯೋನು ಕಲಂಕವನ್ನು ತಂದಂತಾಯಿತು; ಇಷ್ಟಲ್ಲದೆ ಕಲಂಕವನ್ನು ಸಾರ್ವಜನಿಕವಾಗಿ ತೋರಿಸುವ ಉಪಕರಣವನ್ನಾದರೂ ತಯಾರಿಸಿದ್ದನು. ಇದರಂತೆಯೆ ಬೇಕಿನ ಮುದ್ದೆಯಾಗಿ ಆಕಾಶದಲ್ಲಿ ಗೋಚರವಾಗುವ ಆಕಾಶಗಂಗೆಯ ವಿಷಯದಲ್ಲಿ ಪುರಾತನ ಜನರಿಗೆ ಏನೂ ತಿಳಿದಿರಲಿಲ್ಲ. ಇದು ನಕ್ಷತ್ರಸಮೂಹವೇ ಎಂದು ಇವನ ಉಪಕರಣವು ತೋರಿಸಿತು. ಅದರಂತೆಯೆ ಕಣ್ಣಿಗೆ ಕೇವಲ ಒಂದೇ ಇರಬಹುದೆಂದು ಕಾಣುವ ನಕ್ಷತ್ರಗಳು ಎಂಡು ಇರಬೇಕೆಂದು ತೋರಿಸಿತು.

ಖಗೋಲವಿಷಯದಲ್ಲಿ ಇವನು ಮಾಡಿದ ಅತ್ಯಂತ ಜಾಜ್ವಲ್ಯವಾದ ಮತ್ತು ಕ್ರಾಂತಿಕಾರಕ ಶೋಧವನ್ನು ಕುರಿತು ಈಗ ವಿವೇಚಿಸುವ: ಗ್ಯಾಲಿಲಿಯೋನು ತನ್ನ ಉಪಕರಣವನ್ನು ಗುರುಗ್ರಹದ ದೆಸೆಗೆ ತಿರುಗಿಸಿದನು. ಗುರುವಿನ ಸುತ್ತಲೂ ನಾಲ್ಕು ಚಂದ್ರರನು ನೋಡಿ ಇವನು ಆಶ್ಚರ್ಯಭರಿತನಾದನು. ಇವನ ವೈರಿಗಳ ಸಂಖ್ಯೆಯು ಮಾತ್ರ ಬೆಳೆಯಹತ್ತಿತು. ಈ ವಿಷಯವಾಗಿ ಗ್ಯಾಲಿಲಿಯೋನು ಕೆಪ್ಲರನಿಗೆ ಬರೆದ ಪತ್ರವು ಮನೋರಂಜಕವಿದೆ—"ನನ್ನ ಸ್ನೇಹಿಯ ಕೆಪ್ಲರ್, ನೀನು ಇಲ್ಲಿ ಇದ್ದಿದ್ದರೆ ಇಬ್ಬರೂ ಕೂಡಿಯೆ ಮನಃಪೂರ್ವಕವಾಗಿ ನಗಬಹುದಾಗಿತ್ತು. ಇಲ್ಲಿಯ ತತ್ತ್ವಜ್ಞಾನದ ಪ್ರಾಧ್ಯಾಪಕನು ನನ್ನ ದುರ್ಬಿಣಿಯಲ್ಲಿ ಚಂದ್ರ ಮತ್ತು ಗ್ರಹಗಳನ್ನು ನೋಡಲು ಸಹ ಒಪ್ಪದಾಗಿದ್ದಾನೆ. ಅದರಂತೆಯೆ ನೀಸಾದಲ್ಲಿಯ ಪ್ರಾಧ್ಯಾಪಕನು ಮಂತ್ರದಿಂದ ಈ ಹೊಸ ಗ್ರಹಗಳನ್ನು ಆಕಾಶದಿಂದ ಹೊರಗಟ್ಟುವ ಪ್ರಯತ್ನದಲ್ಲಿದ್ದಾನೆ."

ಅದರಂತೆಯೆ ಇವನು ಸೂರ್ಯನ ಮೇಲೆ ಕಲೆಗಳು ಇರುವುವೆಂದು ಕಂಡುಹಿಡಿದನು. ಇದಂತೂ ಅತಿ ಉಗ್ರವಾದ ಅಪರಾಧವೇ ಆಯಿತು. ಈ ಕಲೆಗಳ ಸ್ಥಿತ್ಯಂತರಗಳ ಮೂಲಕ ಸೂರ್ಯನು ತನ್ನ ಅಕ್ಷದಲ್ಲಿ ಭ್ರಮಿಸುವನೆಂದು ಪ್ರತಿಪಾದಿಸಿದನು. ಇವೆಲ್ಲವುಗಳನ್ನು ಕಂಡ ಒಬ್ಬ ಧರ್ಮಾಧಿಕಾರಿಯು, ತನ್ನ ಮೇಲಿನವರಿಗೆ ಈ ವಿಷಯವಾಗಿ ತಿಳುಹಿಸಲು, ಆ ಮೇಲಧಿಕಾರಿಯು—"ನಾನು ಅರಿಸ್ಟಾಟಲನ ಗ್ರಂಥದಲ್ಲಿ ಈ ವಿಷಯದ ಉಲ್ಲೇಖವಿಲ್ಲವೆಂದು ಖಾತ್ರಿ ಮಾಡಿಕೊಂಡಿದ್ದೇನೆ. ಕಾರಣ ಇದು ನಿನ್ನ ಇಂದ್ರಿಯಗಳ ಇಲ್ಲವೆ ಗಾಜುಗಳ ದೋಷಮೂಲಕ ಇರಲಿಕ್ಕಿಲ್ಲವೆ ಎಂಬ ಬಗ್ಗೆ ಮನವರಿಕೆ ಮಾಡಿಕೊ!" ಎಂದು ಧರ್ಮಾಧಿಕಾರಿಗೆ ತಿಳುಹಿದನು. ಒಬ್ಬ ಗಣಿತ ಶಾಸ್ತ್ರದ ಪ್ರಾಧ್ಯಾಪಕನು—ಈ ದುರ್ಬಿಣಿಯಲ್ಲಿ ಮೊದಲು ಗ್ರಹಗಳನ್ನು ತುಂಬಿದ್ದಾದರೆ ಅವು ನೋಡಲು ಸಿಕ್ಕುವುವೆಂದು ಜಾಹೀರು ಪಡಿಸಿದನು. ಇವನ ದುರ್ಬಿಣಿಯಲ್ಲಿ ನೋಡಲು ಒಪ್ಪದ ಅನೇಕ ಪ್ರಾಧ್ಯಾಪಕರಲ್ಲಿ ಒಬ್ಬನು ತೀರಿಹೋದ ಸುದ್ದಿಯನ್ನು ಕೇಳಿ ಗ್ಯಾಲಲಿಯೋನು ನುಡಿದದ್ದೆಂದರೆ—'ಇವನು ಭೂಮಿಯ ಮೇಲೆ ಬದುಕಿದಾಗ ನಾನು ಕಂಡು ಹಿಡಿದ ಆಕಾಶದೊಳಗಿನ ಚಮತ್ಕಾರಗಳನ್ನು ನೋಡಲು ಒಪ್ಪಲಿಲ್ಲ; ಆದರೆ ಈಗ ಇವನು ಅಲ್ಲಿಗೇ ಹೋದುದರಿಂದ ಬಹಳ ಮಾಡಿ ಅಲ್ಲಿಯೇ ಅವುಗಳನ್ನು ನೋಡಬಹುದು!'

ಈಗ ಮಾತ್ರ ಗ್ಯಾಲಿಲಿಯೋನ ವೈರಿಗಳ ಸಂಖ್ಯೆಯು ಕ್ರಮೇಣ ಹೆಚ್ಚಿತು. ಇವನ ಶೋಧಗಳ ವಿಷಯವನ್ನು ಅವರ ಮನಸ್ಸಿಗೆ ಏರುವಂತಾದರೂ ಒಪ್ಪಲೇಬೇಕಾಯಿತು. ಅವರು ಇವನನ್ನು ಮಿಥ್ಯಾಪಯತ್ನದಲ್ಲಿ ರತರಾದರು. ಇಲ್ಲದ ನಕ್ಷತ್ರಗಳನ್ನು ಸಹ ಎಣಿಸಹತ್ತಿದರು

ಗ್ಯಾಲಿಲಿಯೋನು ತನ್ನ ವೈಖರಿಯ ಶಿಖರವನ್ನು ಸಮೀಪಿಸಿದನು ಅಲ್ಲಿ ಕೆಲಕಾಲ ನಿಂತನೋ ಇಲ್ಲವೋ, ತಪ್ಪಲ ಪ್ರದೇಶವನ್ನು ತುದಿಗೇ ಬಂದನು ಇಳಿದ ಮಾತ್ರ ಅವನ ವೈರಿಗಳ ಕಾರಸ್ಥಾನದ ಮೂಲಕ, ಜೀವನದ ಉತ್ತರಾರ್ಧದಲ್ಲಿ ಭೌತಿಕಸುಖದ ಮಟ್ಟಿಗೆ ಕೆಳಕ್ಕೆ ತಳ್ಳಲ್ಪಟ್ಟಂತಾದನು

(ಮುಂದುವರಿಯುವುದು)

ಪ್ರಕಟನೆಗಾಗಿ—

ಶ್ರೀ. 'ಎನ್ಕೆ' ಕುಲಕರ್ಣಿಯವರ ಕೆಳಗಿನ ಗ್ರಂಥಗಳು ಪ್ರಕಟನೆಗಾಗಿ ಸಿದ್ಧವಾಗಿವೆ. ಪ್ರಕಾಶಕರು ಪತ್ರವ್ಯವಹಾರ ಮಾಡಬಹುದು.

೧. ಹೊಸ ಸಾಮಾಜಿಕ ಕಾದಂಬರಿ—(ಕ್ರೌನ್ ೩೦೦ ಪುಟಗಳವು)
೨. ಹತ್ತು ಏಕಾಂಕಗಳ ಸಂಗ್ರಹ
೩. 'ನಡುಮನೆಯಲ್ಲಿ'—ದ್ವಿತೀಯ ಮುದ್ರಣ
೪. ಹರಟೆಗಳ ಸಂಗ್ರಹ—(೨೦ ಹೊಸ ಹರಟೆಗಳು)
೫. 'ಸಾಹಿತ್ಯವಾಹಿನಿ'—ವಿಸ್ತೃತ ದ್ವಿತೀಯ ಮುದ್ರಣ
೬. ನಾನಿಯ ಸೆನಹುಗಳು - (ಕಾಲ್ಪನಿಕ ಚಿತ್ರಗಳು)
೭. ನಾಲ್ಕು ಸಣ್ಣಕತೆಗಳು

ಎನ್. ಕೆ. ಕುಲಕರ್ಣಿ
ಪ್ರಭು ಚಾಳ, ಮಾಳಮಡ್ಡಿ, ಧಾರವಾ

ಕೇವಲ ಒಂದು ಅಸಾಧ್ಯವಲ್ಲದ ವ್ಯಕ್ತಿಯ ಚಿತ್ರಮಾತ್ರವಾಗಿರದೆ, ಒಂದು ರೀತಿಯ ಬಾಳಿನಲ್ಲಿ ಬೆಳೆದು ಇನ್ನೊಂದು ರೀತಿಯ ಬಾಳಿನ ನೀತಿ ನಿಯಮಗಳಿಗೆ ಒಂದು ಜೀವ ಒಳಪಟ್ಟಾಗ ಯಾವ ವಿಪರೀತಕ್ಕೀಡಾಗಬಹುದು ಎಂಬುದನ್ನು ಸೂಚ್ಯವಾಗಿಯಾದರೂ ಸ್ಪಷ್ಟವಾಗಿ ತೋರಿಸುವ ಮಾನವಪ್ರತೀಕಳಾಗಿದ್ದಾಳೆ ಎಂಬುದೂ ಸ್ಪಷ್ಟವಾಗುವುದು. ಈ ದೃಷ್ಟಿಯಿಂದ ಕುಸುಮೆಯ ಪಾತ್ರವನ್ನು ಪರಿಶೀಲಿಸಿ ನೋಡಲಾಗಿ, ಆ ಪಾತ್ರದ ಪರಿಪೋಷಣೆಗಾಗಿ ಉಳಿದೆರಡು ಪಾತ್ರಗಳಾದರೂ ಯಾವ ರೀತಿಯಲ್ಲಿ ಅನಿವಾರ್ಯವಾಗಿದ್ದುವೆಂಬುದನ್ನೂ, ಈ ಮೂರು ಪಾತ್ರಗಳ—ಅವು ಜೀವನದ ವಿಷಯದಲ್ಲಿ ಇಟ್ಟುಕೊಂಡ ವಿಶಿಷ್ಟ ದೃಷ್ಟಿಗಳ ಸಂಘರ್ಷದಲ್ಲಿಯೇ ಕಥೆ ಹೇಗೆ ಬೆಳೆದು ಬರುತ್ತದೆಂಬುದನ್ನೂ ನೋಡಬಹುದು. ಈ ಕಾದಂಬರಿಯನ್ನು ಈ ದೃಷ್ಟಿಯಿಂದ ನೋಡಿದರೆ ಅದರ ಬರೆವಣಿಗೆಗೆ ಈಗ ಕೆಲ ವಿಮರ್ಶಕರೆಂಬುವವರು ಸಲ್ಲಿಸಿದ ಬೈಗುಳ ಕಾಣಿಕೆ ತೀರ ಅಸಮಂಜಸವೆಂಬುದು ಸಹಜವಾಗಿಯೆ ಗೊತ್ತಾಗಬಹುದು.

× × × ×

ಜನಪದಸಾಹಿತ್ಯದ ಉದ್ಧಾರದ ಬಗೆಯಲ್ಲಿ ನಾವು ಕೈಕೊಳ್ಳಬೇಕಾದ ಕೆಲಸವನ್ನು ಕೆಲವು ಕಾಲದ ಹಿಂದೆ ವಿವರಿಸಿದ್ದೆ. ಅಪರಲ್ಲಿ ನಾವು ಕಾಣಬಹುದಾದ ಕವಿತ್ವ, ಕಲ್ಪನೆ, ಬಾಳದೃಷ್ಟಿ ಇವುಗಳೆಲ್ಲವನ್ನು ಒಂದೆಡೆ ಇರಿಸಿದರೂ ಇನ್ನೊಂದು ದೃಷ್ಟಿಯಿಂದಲೂ ಜನಪದಸಾಹಿತ್ಯದ ಅಭ್ಯಾಸ ಹೇಗೆ ಉಪಯೋಗವುಳ್ಳದಾಗಬಹುದೆಂಬುದನ್ನು ತೋರಿಸುವ ನಿದರ್ಶನವೊಂದು ನನ್ನ ದೃಷ್ಟಿಗೆ ಬಿದ್ದಿದೆ. ಜನಪದಸಾಹಿತ್ಯದಲ್ಲಿ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳಲ್ಲಿಯ ಕಥಾಭಾಗಗಳು ಕೂಡ ಬೇರೆ ಬೇರೆ ರೂಪಗಳನ್ನು ಹೊಂದುವುದುಂಟು. ಈ ಮಾರ್ಪಾಟುಗಳನ್ನು ಮೂಲಕಥೆಯ ಉದ್ದಿಷ್ಟವನ್ನಾಗಲಿ ಹೇಳುವ ರೀತಿಯನ್ನಾಗಲಿ ಬದಲಾಯಿಸುವುದಕ್ಕಾಗಿ ಮಾಡಿರಬೆ, ಅದೇ ಕಥೆಗಳನ್ನು ಇನ್ನಷ್ಟು ಜನರು ಮನಮೆಚ್ಚುವಂತೆ ಹೇಳುವುದನ್ನೆ ಧ್ಯೇಯವಾಗಿಟ್ಟುಕೊಂಡಂತೆ ತೋರುತ್ತದೆ. ಹಳೆಯ ಕಥೆಗಳನ್ನು ಮನಮೆಚ್ಚುವಂತೆ ಹೀಗೆ ಮಾರ್ಪಡಿಸುವುದರಲ್ಲಿ ಜಾನಪದ ಕವಿಯು, ಸುತ್ತಲಿನ ಬದುಕಿನಲ್ಲಿಯ ಕೆಲವು ಅಂಶಗಳನ್ನು ಎತ್ತಿಕೊಂಡು ಸಂದರ್ಭಾನುಸಾರವಾಗಿ ಕಥೆಯಲ್ಲಿ ಹೆಣೆದುಕೊಳ್ಳುತ್ತಿದ್ದ. ಕೆಲವು ಸೇಳೆ ತನ್ನ ಕಲ್ಪನೆಯ ಕುದುರೆಯನ್ನೇ ಮುಂದೋಡಿಸಿ ಕೆಲವಾರು ಭಾಗಗಳನ್ನು ತನ್ನದೇ ಆದ ವಿಶಿಷ್ಟವಾದ ದೃಷ್ಟಿಯಿಂದ ಬೆಳೆಸಿಕೊಳ್ಳುತ್ತಿದ್ದ. ಇಂತಹ ಒಂದೆರಡು ಸಂದರ್ಭಗಳು ಇತ್ತೀಚೆಗೆ ಸಂಗ್ರಹಿಸಲ್ಪಟ್ಟ ಕೆಲವು ರಾಜಸ್ಥಾನೀ ಲೋಕಗೀತಗಳಲ್ಲಿ ದೊರಕುತ್ತವೆ. ಸೀತಾಪರಿತ್ಯಾಗದ ಕಥೆಯನ್ನು ಹೇಳುವ ಒಂದು ರಾಜಸ್ಥಾನೀ ಲಾವಣಿಯಲ್ಲಿ, ಪರಿತ್ಯಾಗಕ್ಕೆ ರಾಮಾಯಣಕ್ಕಿಂತ ಬೇರೆಯಾದ ಒಂದು ಕಾರಣವನ್ನೇ ಹೇಳಿದ್ದಾರೆ. ಸೀತೆಗೂ ಶ್ರೀರಾಮನ ಸಹೋದರಿಯಾದ ಶಾಂತೆಗೂ ಹೆಚ್ಚಾಗಿ ಮನಸ್ತಾಪವಾಯಿತೆಂದೂ ಆ ಮನಸ್ತಾಪದಲ್ಲಿ ಶ್ರೀರಾಮನು ತನ್ನ ಸಹೋದರಿಯ ಮಾತಿಗೇ ಗಮನವನ್ನು ಕೊಟ್ಟು ಸೀತೆಯನ್ನು ಕಾಡಿಗೆ ಕಳುಹಿಸಿದನೆಂದೂ ಒಂದು ಲಾವಣಿಯ ಹೇಳಿಕೆ ಇದೆ. ಇನ್ನೊಂದು ಲಾವಣಿಯಲ್ಲಿ ಇನ್ನೂ ಹೆಚ್ಚಿನ ಕಲ್ಪನೆಯ ವಿಲಾಸವಿದೆ. ಲಂಕೆಯಿಂದ ಮರಳಿ ಬಂದಮೇಲೆ, ಶ್ರೀರಾಮನ ಸಹೋದರಿಯು ರಾವಣನನ್ನು ವರ್ಣಿಸುವುದಾಗಿ ಸೀತೆಯನ್ನು ಕೇಳಿಕೊಂಡಳಂತೆ. ಸೀತೆಯು ಬಾಯಿಂದ ವರ್ಣಿಸುವುದರ ಬದಲು ಬಣ್ಣದಿಂದ ರಾವಣನ ಚಿತ್ರ ಬರೆದಳೆಂದೂ ಚಿತ್ರ ಮುಗಿಯುವ ಹೊತ್ತಿಗೆ ಶ್ರೀರಾಮನು ಅಲ್ಲಿಗೆ ಬರಲಾಗಿ ಅವನನ್ನು ಸ್ವಾಗತಿಸುವ ಭರದಲ್ಲಿ, ಚಿತ್ರದಲ್ಲಿಯ ರಾವಣನ ತೊಡೆಯ ಮೇಲೆ ಬಣ್ಣದ ಮುದ್ದೆಯೊಂದು ಅಲ್ಲಿರಬಹುದಾದ ಒಂದು ಗುರುತಿನ ರೂಪವಾಗಿ ಬಿದ್ದುಕೊಂಡಿತೆಂದೂ, ಅದನ್ನು ನೋಡಿದ ಶ್ರೀರಾಮನು, ಸೀತೆಯು ನಿಜವಾಗಿಯೂ ರಾವಣನನ್ನು ಅಷ್ಟು ಸೂಕ್ಷ್ಮವಾಗಿಯೂ ಹೇಗೆ ನೋಡಿರುವುದು ಸಾಧ್ಯವೆಂಬ ವಿಷಯದಲ್ಲಿ ಅನುಮಾನ ಉಳ್ಳವನಾಗಿ ತನ್ನ ಪತ್ನಿಯ ಬಗೆಯಲ್ಲಿ ಸಾರಂಕನಾದನೆಂದೂ, ಆದ್ದರಿಂದ ಅವಳನ್ನು ಆಡವಿಗೆ ಕಳುಹಿದನೆಂದೂ ಇನ್ನೊಂದು ಲಾವಣಿಯ ಆಶಯವಾಗಿದೆ. ಇಲ್ಲಿ ವ್ಯಕ್ತವಾಗುವ ಸೂಕ್ಷ್ಮವಾದ ಕಲ್ಪನಾಶಕ್ತಿಯನ್ನು ನಾವು ಮೆಚ್ಚಿದರೂ, ಮೂಲದಲ್ಲಿಯ ಕಥಾಸಂದರ್ಭ ವಿಪರೀತವಾಗಿ ಬೆಳೆಸಲ್ಪಟ್ಟಿದೆ ಎಂಬುದನ್ನು ನಾವು ಮರೆಯಕೂಡದು. ಶ್ರೀರಾಮನು ನಿಜವಾಗಿಯೂ ಪತ್ನಿಯ ಸ್ವಭಾವದ ಬಗ್ಗೆ ಸಂಕಿತನಾಗಿರದೆ, ಕೇವಲ ಲೋಕಾಪವಾದಕ್ಕೆ ಆಸ್ಪದ ಕೊಡಲಾರದವನಾಗಿ ಸೀತೆಯನ್ನು ಕಾಡಿಗೆ ಕಳುಹಿದನೆಂಬುದು ರಾಮಾಯಣದಲ್ಲಿ ಸ್ಪಷ್ಟವಿದೆ. ಹೀಗಿದ್ದರೂ ಜನಪದ ಸಾಹಿತ್ಯದಲ್ಲಿ ಹಳೆಯ ಕಥೆಗಳೇ ಬೇರೆ ಬೇರೆ ರೂಪಗಳಲ್ಲಿ ಹೇಗೆ ಉಪಲಬ್ಧವಾಗಬಹುದು ಎಂಬುದೇ ಒಂದು ಮಹತ್ವದ ಅಭ್ಯಾಸದ ವಿಷಯವಾಗಬಹುದು. ಈ ಅಭ್ಯಾಸವು ಜನಪದ ಸಾಹಿತ್ಯದ ದೃಷ್ಟಿಯಿಂದಲ್ಲದೆ ಮಹಾಕಾವ್ಯಗಳ ಸಂಶೋಧನೆ–ಸಂವಾದನೆಗಳ ದೃಷ್ಟಿಯಿಂದಲೂ ಮಹತ್ವದ್ದಾಗಿರಬಹುದೆಂಬುದರಲ್ಲಿ ಸಂಶಯವಿಲ್ಲ. ಈ ತೆರದ ರೂಪಾಂತರಗಳೂ ವ್ಯತ್ಯಾಸಗಳೂ ಕನ್ನಡ ಲಾವಣಿಗಳಲ್ಲಿ ಹಾಡುಗಳಲ್ಲಿ ಕೂಡ ಸಿಗುವುದು ಸಾಧ್ಯ. ಅತ್ತಕಡೆಗೆ ಅವಶ್ಯವಾದ ವಿಮರ್ಶಾದೃಷ್ಟಿಯನ್ನಿಟ್ಟುಕೊಂಡು ಅವುಗಳನ್ನು ಹುಡುಕಿ ಬೆಳಕಿಗೆ ತರುವುದರ ಕಡೆಗಾದರೂ ನಾವು ನಮ್ಮ ಯತ್ನಗಳನ್ನು ತಿರುಗಿಸಬೇಕಾಗಿದೆ.

× × × ×

ಕಳೆದ ಮೇ ತಿಂಗಳ ವಿಹಾರದಲ್ಲಿ ನಮ್ಮ ತರುಣ ವಿದ್ಯಾವಂತರು ನಮ್ಮ ಸಾಹಿತ್ಯ–ಸಂಸ್ಕೃತಿಗಳ ಬಗೆಯಲ್ಲಿ ತೋರಿಸುವ ಅನಾಸ್ಥೆಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಿದ್ದೆ. ಅದಕ್ಕೆ ಉತ್ತರರೂಪವಾಗಿ ಒಬ್ಬಿಬ್ಬರು ಆ ಪರಿಸ್ಥಿತಿಯನ್ನು ದೂರ ಮಾಡುವುದಕ್ಕಾಗಿ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂದು ಸ್ಪಷ್ಟವಾಗಿ ಕೇಳಿದ್ದಾರೆ. ಇನ್ನೊಬ್ಬರು ಒಂದು ಸೂಚನೆಯನ್ನೂ ಕಳುಹಿದ್ದಾರೆ. ಆ ಸೂಚನೆಯು—ಯೋಗ್ಯವಾಗಿ ಉಪಯೋಗಿಸಿಕೊಂಡರೆ—ಒಳ್ಳೆಯದೆಂದೇ ಹೇಳಬೇಕು. ಪ್ರತಿ ತಿಂಗಳೂ ವಿಹಾರದ ಕೊನೆಯ ಭಾಗದಲ್ಲಿ ವಾಚಕರು ಕೇಳಬಹುದಾದ ಒಂದೆರಡು ಪ್ರಶ್ನೆಗಳಿಗೆ ಉತ್ತರ ಹೇಳಬೇಕೆಂಬುದೇ ಆ ಸೂಚನೆ. ಈ ಪ್ರಶ್ನೋತ್ತರ ಒಳ್ಳೆಯ ಉಪಾಯವೇನೋ ಹೌದು; ಆದರೆ ಈಗ ಕೆಲವು ಕನ್ನಡ ಪತ್ರಿಕೆಗಳಲ್ಲಿ ಈ ಪ್ರಶ್ನೋತ್ತರಗಳು ವಿಪರೀತವಾಗಿ ಉಪಯೋಗಿಸಲ್ಪಡುತ್ತಿವೆ

(೯೯ನೆಯ ಪುಟಕ್ಕೆ ಮುಂದುವರಿದುದು)



ಸಿಮ್ಲಾ ಪರಿಷತ್ತು

ಕೊನೆಯ ವರೆಗೂ ಆಶೆಯ ತರಂಗಗಳನ್ನೆಬ್ಬಿಸುತ್ತ ಜನರನ್ನು ಕುಣಿಸುತ್ತಲಿದ್ದ ಸಿಮ್ಲಾ ಪರಿಷತ್ತು ಕನಸಿನಂತೆ ಬಯಲಾಯಿತು. ಪರಿಷತ್ತಿನಲ್ಲಿ ಆಶೆ ಇಟ್ಟುಕೊಂಡವರು ಬರಿಯ ಸಾಮಾನ್ಯ ಜನರಲ್ಲ. ಪರಿಷತ್ತಿಗಾಗಿ ನೆರೆದ ಬೇರೆ ಬೇರೆ ಪಕ್ಷಗಳ ಮುಂದಾಳುಗಳು ಕೂಡ ಪರಿಷತ್ತು ಯಶಸ್ವಿಯಾಗುವುದೆಂದೆ ಸೂಚಿಸುತ್ತಿದ್ದರು. ಆದರೆ ಈ ಮುಂದಾಳುಗಳು ಹೀಗೆ ಹೇಳಿದ ಹನ್ನೆರಡು ತಾಸುಗಳಲ್ಲಿಯೆ ಪರಿಷತ್ತು ಮುರಿಯಿತೆಂಬುದನು ನೆನಪುಮಾಡಿಕೊಂಡರೆ ಆಶ್ಚರ್ಯವೆನ್ನಿಸ ಬಹುದಾಗಿದೆ. ಮುಂದಾಳುಗಳಿಗೆ ಕೂಡ ಪರಿಸ್ಥಿತಿಯು ಅಂದಾಜು ಇದ್ದಿಲ್ಲವೆಂದರೆ ನಿಜವಿದ್ದ ಪರಿಸ್ಥಿತಿಯನ್ನೆ ಇವರು ಕೊನೆಯ ವರೆಗೂ ಅರಿತುಕೊಳ್ಳಲಿಲ್ಲವೆಂದು ಹೇಳಬಹುದೆ? ಕೊನೆಯವರೆಗೂ ನಡೆದುಬಕ್ಕೆ ಕಣ್ಮುಚ್ಚಿ ಇವರು ತಮ್ಮ ಹೃದಯಮಂಡೊಗಿನ ತಲೆಸನ್ನು ನಂಬಿಕೊಂಡರೆನ್ನಬಹುದೆ? ಇಲ್ಲವೆ ಕೊನೆಯ ವರೆಗೂ ವೈಸರಾಯರು ಪರಸ್ಪರ ಪರಿಸ್ಥಿತಿಯನ್ನು ಬೇರೆ ಬೇರೆ ಪಕ್ಷಗಳಿಗೆ ತಿಳುಹಿಸದೆ ಅನೈಕ್ಯದ ಲಾಭವನ್ನು ಸಾಧಿಸಿಕೊಂಡರೆನ್ನಬಹುದೆ? ಇಲ್ಲವೆ ದೇಶದ ಮುಂದಾಳುಗಳು ಮುಂದಾಳುತನದ ಹೊಣೆಯನ್ನು ಹೊರಲು ಅಥವಾ ಅರಿಯಲು ಅಸಮರ್ಥರಾದರೆನ್ನಬಹುದೆ? ಇಂದಿಲ್ಲ ನಾಳೆ ಬಿಕ್ಕಟ್ಟು ಬಿಡುವುದಾದರೆ, ಈ ಪ್ರಶ್ನೆಗಳನ್ನು ಬಿಡಿಸುವುದರಿಂದಲ್ಲವೆ ಒಬ್ಬರೊಬ್ಬರ ಮೇಲೆ ದೋಷಾರೋಪಣೆಯನ್ನು ಮಾಡುವುದರಿಂದಲ್ಲ.

ವೈಸರಾಯರ ಆಚಾತುರ

ಯೋಜನೆಯನ್ನು ಸಿದ್ಧಪಡಿಸಿದವರು, ಪರಿಷತ್ತಿನ ನಾಯಕರು ತಾವು ಎಂದು ಹೇಳಿಕೊಂಡ ವೈಸರಾಯರ ನೀತಿಯನ್ನೆ ಹೊದಲು ನೋಡಬಹುದು. ಯೋಜನೆಯ ಬಗ್ಗೆ ವೈಸರಾಯರಲ್ಲಿ ಸದಿಚ್ಛೆ ಇದೆ ಎಂದು ಸಾಮಾನ್ಯವಾಗಿ ಎಲ್ಲ ಮುಂದಾಳುಗಳೂ ಶಿಫಾರಸುಪತ್ರವನ್ನು ಕೊಟ್ಟಿದ್ದಾರೆ. ಆದರೆ ಆ ಸದಿಚ್ಛೆಗೆ ಪುಷ್ಟಿಯನ್ನು ಕೊಡಲು ಸಾಕಷ್ಟು ಧೈರ್ಯವನ್ನಾಗಲಿ, ಬುದ್ಧಿಮತ್ತೆಯನ್ನಾಗಲಿ ವೈಸರಾಯರು ನಿಯೋಗಿಸಲಿಲ್ಲವೆಂದು ವಿಷಾದದಿಂದ ಹೇಳಬೇಕಾಗುವುದು. ಒಂದು ಕಾಂಗ್ರೆಸ್ ಮತ್ತು ಲೀಗಗಳ ಒಪ್ಪಂದವೆ ತಮಗೆ ಅಗತ್ಯವಾಗಿದ್ದರೆ, ಈ ಎರಡು ಪಕ್ಷಗಳ ಮುಂದಾಳುಗಳನ್ನು ಒಂದೆಡೆ ಸೇರಿಸಿ ಅನೌಪಚಾರಿಕವಾಗಿ ಚರ್ಚಿಸಬಹುದಾಗಿತ್ತು. ಅದರಂತೆಯೆ ಪರಿಷತ್ತನ್ನು ಸೇರಿಸಲು ಕಾರಣೀಭೂತವಾದ ತತ್ತ್ವಗಳನ್ನು ಎಲ್ಲ ಪಕ್ಷದವರೂ ಒಪ್ಪಿಕೊಂಡ ಮೇಲೆ, ವೈಸರಾಯರು ಧೈರ್ಯದಿಂದ ಆಯಾ ಮುಂದಾಳುಗಳನ್ನು ಇದಿರಿಸಿ ನಿರ್ಣಯಕ್ಕಾಗಿ ಹಟತೊಡಬೇಕಾಗಿತ್ತು. ಜನತೆಯ ಪ್ರತಿನಿಧಿ ಎನ್ನಿಸುವ ಮಂತ್ರಿಮಂಡಲವು ಅಷ್ಟೊಂದು ಅಗತ್ಯವೆಂದು ಒಪ್ಪಿ, ಹೆಸರುಗಳನ್ನು ನಿರ್ಣಯಿಸುವ ಕೊನೆಯ ಅಧಿಕಾರವು ತಮ್ಮದೆಂದು ಸಾಧಿಸಿ, ಯಾರಿಗೂ ತಾವು ಆರಿಸಿದ ಹೆಸರುಗಳನ್ನು ತೋರಿಸದ ವೈಸರಾಯರ ನೀತಿಯು ಬುದ್ಧಿಮತ್ತೆಯದಾಗಲಿ ಧೈರ್ಯದ್ದಾಗಲಿ ಕದ್ದಿತೆಂದು ಹೇಳಲಾಗದು.

ಕಾಂಗ್ರೆಸಿನ ಹೊಣೆ

ಕಾಂಗ್ರೆಸಿನ ಮುಂದಾಳುಗಳು ಪರಿಷತ್ತಿನಲ್ಲಿ ಸಹಕರಿಸಲು ನಿಶ್ಚಯಿಸಿ ತಮ್ಮ ಹೊಣೆಯನ್ನು ಅರಿತುಕೊಂಡರೇನೊ ನಿಜ; ಆದರೆ ಮುಂದೆ ಅದನ್ನು ನಿರ್ವಹಿಸಲು ಮಾತ್ರ ಅಸಮರ್ಥರಾದರೆಂದು ಹೇಳಬಹುದು. ಪಾಕಿಸ್ತಾನವನ್ನು ಒಪ್ಪದ ಮಾತ್ರಕ್ಕೆ ಮುಸ್ಲಿಂ ಲೀಗನ್ನು ಪೂರ್ತಿಯಾಗಿ ಕಡೆಗಣಿಸಬೇಕಾಗಿರಲಿಲ್ಲ. ವೈಸರಾಯರಲ್ಲಿ ಸದಿಚ್ಛೆ ಇದೆ ಎಂದು ಕಂಡ ಮಾತ್ರಕ್ಕೇ ಪೂರ್ತಿಯಾಗಿ ಕಣ್ಮುಚ್ಚಿ ಅವರನ್ನೆ ನಂಬಿಕೊಂಡು ಆಶೆ ಹಿಡಿಯಬೇಕಾಗಿದ್ದಿಲ್ಲ. ಅಖಿಲ ರಾಷ್ಟ್ರದ ಪ್ರತಿನಿಧಿ ತಾನೆಂದು ಹೆಮ್ಮೆಹೊತ್ತ ಸಂಸ್ಥೆಯು ಮುಸ್ಲಿಂ ಲೀಗದೊಡನೆ ಹಿರಿತನದ ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕಿತ್ತು. ಆದರೆ ಕಾಂಗ್ರೆಸು ಈ ವಿಷಯದಲ್ಲಿ ತೀರ ತಪ್ಪಾದ ಧೋರಣೆಯನ್ನು ಅನುಸರಿಸಿತು. ಪರಿಷತ್ತಿನ ಲಾಭವನ್ನು ಪಡೆದುಕೊಂಡು, ಸಂಜಾಬದ ಮುಖ್ಯ ಮುಂತ್ರಿಯೊಡನೆ ಸೇರಿ, ಮುಸ್ಲಿಂ ಲೀಗನ್ನು ಸದಬಡಿಯಬೇಕೆಂದು ಕಾಂಗ್ರೆಸು ನಿಶ್ಚಯಿಸಿದಂತೆ ಕಾಣುತ್ತಿತ್ತು. ಇದು ನಿಜವಿದ್ದರೆ ಕಾಂಗ್ರೆಸ್--ಲೀಗಗಳ ಪರಸ್ಪರ ಅವಿಶ್ವಾಸ ಪರಿಷತ್ತಿಗಾಗಿ ಹೆಚ್ಚಿತು ಎಂದೇ ಹೇಳಬೇಕಾಗುವುದು. ಲೀಗದ ಧೋರಣೆ ಇಂದು ಕಾಂಗ್ರೆಸಿನ ದೃಷ್ಟಿಯಿಂದ ದೇಶವಿಘಾತಕವಿರಬಹುದು. ಆದರೆ ಅಷ್ಟಕ್ಕಾಗಿ ಅಜ್ಞಾನದಿಂದಾಗಲಿ, ಅನಿವಾರ್ಯವಾಗಿಯಾಗಲಿ ಲೀಗನ್ನು ಹಿಂಬಾಲಿಸುವ ಲಕ್ಷಾವಧಿ ಮುಸಲ್ಮಾನರ, ಅನೇಕ ದೇಶಪ್ರೇಮಿ ಮುಸಲ್ಮಾನ ಮುಂದಾಳುಗಳ ಸಹಾನುಭೂತಿಯನ್ನು ಕಳೆದುಕೊಳ್ಳುವುದು ಹೊಣೆಗಾರಿಕೆಯ ಲಕ್ಷಣವಲ್ಲ.

ಶ್ರೀರಂಗ ಸಾರಸ್ವತ

ಜ

ಸಂಸಾರಿಗ ಕಂಸ

ಜ

ಪ್ರಪಂಚ ಪಾಣಿಪತ್ತು

ಶ್ರೀರಂಗರ ಎರಡು ಸ್ವತಂತ್ರ ಸಾಮಾಜಿಕ ನಾಟಕಗಳು. ರಂಗಮುಂಗ ಪ್ರಕಾಶನದಲ್ಲಿ ಬೇಗನೆ ಪ್ರಕಟವಾಗಲಿವೆ.

ನಿಮ್ಮ ಪ್ರತಿಗಳಿಗಾಗಿ ಮುಂಚಿತವಾಗಿ ಬರೆಯಿರಿ.

C/o. ಮ್ಯಾನೇಜರ, 'ಜಯಂತಿ', ಧಾರವಾಡ.

ನ್ನಾ ಇವರ ಜಂಬಗಾರಿಕೆ

ಇತ್ತ ಮುಸ್ಲಿಂ ಲೀಗವೂ ಪ್ರಾಮಾಣಿಕತೆಯಿಂದ ವರ್ತಿಸಲಿಲ್ಲ ಯು ವಿಷಾದವಾಗುತ್ತದೆ. ಇನ್ನೊಬ್ಬರಲ್ಲಿ ಅವಿಶ್ವಾಸ, ತಮ್ಮ ಕಾರಣೆಯನ್ನು ಮಾತ್ರ ನಿಚ್ಚಳವಾಗಿ ಹೇಳುವಂತಿಲ್ಲ. ಈ ಜಂಬದ ನೋವೃತ್ತಿಯಿಂದಲೆ ಜಿನ್ನಾರವರು ಎಲ್ಲರ ವಿಶ್ವಾಸವನ್ನು ಕಳೆದು ಂಡರು. ದೇಶದ ರಾಜಕೀಯ ಘಟನೆಯನ್ನು ನಿರ್ಣಯಿಸುವ ಲವಿದಲ್ಲ ಎಂದು ಎಲ್ಲರೂ ಒಪ್ಪಿಕೊಂಡಾಗ, ಭಾವೀ ಶಾಶ್ವತಘಟನೆ ಯ ಸಂಬಂಧಿಸಬಹುದಾದ ಪಾಕಿಸ್ತಾನದ ಪ್ರಶ್ನೆಯನ್ನು ಮಾತ್ರ ಗಲೆ ಎಲ್ಲರೂ ಒಪ್ಪಬೇಕು ಎಂಬ ಜಿನ್ನಾ ಸಾಹೇಬರ ಅಭಿಪ್ರಾಯವು ನ್ಯತಪ್ಪು, ಅನ್ಯಾಯ, ಇದಲ್ಲದೆ ಎಲ್ಲಿ ಹೋದರೂ ತಾವು ಕೇಳಿದ್ದೇ ಧಿಸಬೇಕು ಎಂಬ ಹಟವಿದ್ದಾಗ, ಜಿನ್ನಾ ಅವರು ಪರಿಷತ್ತಿಗೆ ೀದದ್ದು — ಹೋಗಿ ಮುಂದೆ ಕೊನೆಯವರೆಗೂ ಭಾಗ ವಹಿಸಿದ್ದು — ್ಯಂತ ಅಸಮಂಜಸವಾಗಿದೆ. ಮುಂಚಿತವಾಗಿಯೆ ತಮ್ಮ ಹಟವನ್ನು ರಿದ್ದರೆ ಪರಿಷತ್ತಿದರೂ ಸೇರುತ್ತಿದ್ದಿಲ್ಲ. ಪರಿಣಾಮವಾದರೂ ಬೇರೆ ಾಗಬಹುದಾಗಿತ್ತು. ಅಥವಾ ಗಾಂಧಿಜಿಯವರಂತೆ ತಾವೂ ಹೊರ ೀದು ಮಿಕ್ಕವರಿಗೆ ವಿಚಾರನಿರ್ಣಯವನ್ನು ಒಪ್ಪಿಸಬಹುದಾಗಿತ್ತು. ಬದೊಡನೆ ಜಾಣತನವಿದ್ದರೆ ಅದು ಗೌರವವೆನಿಸುವುದು. ಜಾಣ- ವಲ್ಲದ ಜಂಬತನವು ಕಿಡಿಗೇಡಿತನ ಎನ್ನಿಸುವುದು. ಇಂದು ುಸ್ಲಿಂ ಲೀಗಕ್ಕೆ ಕಿಡಿಗೇಡಿತನದ ಅಪವಾದ ಬಂದದ್ದು ಆಶ್ಚರ್ಯ- ಿ

ಂದೇನು ?

ದೇಶದ ಪರಿಸ್ಥಿತಿಯ ದೃಷ್ಟಿಯಿಂದ ಹೇಳುವುದಾದರೆ ಆದುದರ ಾದಕ್ಕಿಂತ ಆಗಬೇಕಾದುದರ ವಿಚಾರ ಅಗತ್ಯವಾಗಿದೆ. ಮೇಲೆ ೀದಂತೆ ಪರಿಷತ್ತಿನಿಂದ ಪರಸ್ಪರ ಸೌಹಾರ್ದ ಬೆಳೆಯುವುದರ ನಲು ಅವಿಶ್ವಾಸ ಹೆಚ್ಚಿದ್ದು ಖಂಡಿತ. ಈ ವಾತಾವರಣದ ಫಲ ುದೆ ಮಾಡಿ, ಬ್ರಿಟಿಶ ದೊರೆತನವು ಸಾರ್ವಜನಿಕ ಚುನಾವಣೆ ಗಳನ್ನು ಮುಂದೆ ಹಾಕಬಹುದು. ಅದರಂತೆಯೆ ಮುಸ್ಲಿಂ ಲೀಗ ಮತ್ತು ಕಾಂಗ್ರೆಸ್ ಪಕ್ಷಗಳಲ್ಲಿ ಸ್ಪರ್ಧೆ ಹೆಚ್ಚಿದ್ದರಿಂದ, ೧೯೪೨ ಆಗಸ್ಟಿಗೆ ಮುಂಚಿನ ಪ್ರಾಂತಿಕ ಸರಕಾರಗಳ ಪುನರುತ್ಥಾಪನೆಯನ್ನು ಮಾಡು- ವುದೂ ಹೆಚ್ಚು ಕಠಿನವಾಗಿದೆ. ಕಾಂಗ್ರೆಸ್ ಸರಕಾರಗಳು ರಾಜೀನಾಮೆ- ಯನ್ನು ಕೊಟ್ಟಾಗ 'ಪೀಡೆ ತೊಲಗಿತೆ' ಂದು ಸಂತೋಷಪ್ರದರ್ಶನ ವನ್ನು ಮಾಡಿದ ಲೀಗವು ಈಗ ಆ ಸರಕಾರಗಳು ಅಸ್ತಿತ್ವದಲ್ಲಿ ಬಂದರೆ ಸಹಿಸಬಹುದೆ ? ಒಟ್ಟಾರೆ, ವೇವೆಲ್‌ರಲ್ಲಿ .ಸದಿಚ್ಛೆಯೆ ತುಂಬಿದ್ದರೂ ಇಂದು ಅನಿಷ್ಟ ವಾತಾವರಣವು ಆದರ ಫಲವಾಗಿದೆ. ಈಗಲೂ ವೇವೆಲ್‌ರಲ್ಲಿ ಆಸೆಯನ್ನಿಟ್ಟ ಕಾಂಗ್ರೆಸ್ಸಿನ ಮುಂದಾಳುಗಳಿದ್ದಾರೆ. ಬ್ರಿಟಿಶ್ ಪಾರ್ಲಮೆಂಟಿನ ಚುನಾವಣೆಯ ಫಲಿತಾಂಶ ಹೊರಬೀಳುವ ವರೆಗೆ ಕಾದು, ಮುಂದೆ ವೈಸರಾಯರು ನಿಶ್ಚಿತವಾಗಿ ಪರಿಷತ್ತಿನ ಕಾರ್ಯ ವನ್ನು ಮುಂದುವರಿಸುವವರಿದ್ದಾರೆ ಎಂದೂ ಅನೇಕರು ನಂಬಿಕೊಂಡಿ- ದ್ದಾರೆ ಆದರೆ ಮುಂದೆ ಯಾವುದೆ ನಿರ್ಣಯ ಅಸ್ತಿತ್ವದಲ್ಲಿ ಬಂದರೂ ಸದ್ಯಕ್ಕೆ ಸಿಮ್ಲಾ ಪರಿಷತ್ತಿನಿಂದ ರಾಜಕೀಯ ವಾತಾವರಣವು ಕಲು- ಷಿತವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಕಾಂಗ್ರೆಸಿನ ಹೊಣೆ ದೊಡ್ಡದಿದೆ: ಲೀಗವು ಮುಸಲ್ಮಾನರ ಏಕಮೇವ ಪ್ರತಿನಿಧಿಯಲ್ಲ ಎಂದು ಸಾಧಿಸಲು ಲೀಗೇತರ ಮುಸಲ್ಮಾನರನ್ನು ಸಂಚುಗೂಡಿಸುವುದು ಘಾತಕವಾಗಿದೆ ಅಖಿಲ ರಾಷ್ಟ್ರದ ಪ್ರತಿನಿಧಿ ತಾನೆಂದು ಸಾಧಿಸು- ವುದಾದರೆ, ಕಾಂಗ್ರೆಸು ಲೀಗದ ಮುಂದಾಳುಗಳ ಮನವೊಲಿಸಿಕೊಳ್ಳು- ವುದೇ ವಿಹಿತವಾದ, ಬುದ್ಧಿಯುತಿಕೆಯ ಮಾರ್ಗ.

(ಆಜನೆಯ ಪುಟದಿಂದ ಮುಂದುವರಿದುದು)

ಎಂಬುದನ್ನು ಗಮನಿಸಿದರೆ, ಆ ಪದ್ಧತಿಯನ್ನು ನಾವು ಎತ್ತಿಕೊಳ್ಳ- ಬೇಕಾದಲ್ಲಿ ಒಂದೆರಡು ಎಚ್ಚರದ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳ- ಬೇಕಾಗುವುದು. ಈಗ ನಮ್ಮ ಪತ್ರಿಕೆಗಳಲ್ಲಿ ಉಪಲಬ್ಧವಾಗುವ ಪ್ರಶ್ನೋತ್ತರಗಳುಪಜ್ಞಾಪಿತ ಚಿತ್ರಪಟತಾರಕೆಯರ ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟವುಗಳಾಗಿರುತ್ತವೆಯಲ್ಲದೆ, ಇವುಗಳಿಂದ ಕೆಲವು ವಾಚಕರ ಸಲ್ಲದ ಕುತೂಹಲಕ್ಕೊಂದು ಸಮಾಧಾನ ಸಿಕ್ಕುತ್ತಿರಬಹುದೇ ಹೊರತು ಬೇರೆ ಯಾವ ಪ್ರಯೋಜನವೂ ಆಗುತ್ತಿರಲಾರದು. ಆದುದರಿಂದ ಈ ವಿಭಾಗದಲ್ಲಿ ವಾಚಕರು ಪ್ರಶ್ನೆಗಳನ್ನು ಕೇಳಬಹುದಾದರೆ, ಆ ಪ್ರಶ್ನೆ- ಗಳು ನಮ್ಮ ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಪಟ್ಟವುಗಳಾಗಿರಬೇಕು. ನಮ್ಮ ಲೇಖಕರಿಗೆ ಸಂಬಂಧವಪಟ್ಟವುಗಳಾಗಿರಬಹುದಾದರೂ, ಅವರ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿರದೆ ಅವರ ಕೃತಿಗಳಿಗೆ, ಅವರ ಸಾಹಿತ್ಯಜೀವನಕ್ಕೆ ಸಂಬಂಧಿಸಿರಬೇಕು. ಈ ತೆರವ ಪ್ರಶ್ನೆಗಳಿಗೆ ಮಾತ್ರ ಇಲ್ಲಿ ಉತ್ತರ ಸಿಗುವುದು ಸಾಧ್ಯ. ಮುಖ್ಯವಾಗಿ ಇಲ್ಲಿ ಈ ಪ್ರಶ್ನೋತ್ತರ ಪದ್ಧತಿಯನ್ನು ಪ್ರಾರಂಭಿಸಿದುದು ನಮ್ಮ ಲೇಖಕರ ಬಗೆಯಲ್ಲಿ, ಅವರ ಸಾಹಿತ್ಯ ನಿರ್ಮಿತಿಯ ಬಗೆಯಲ್ಲಿ ವಾಚಕರ ಕುತೂ- ಹಲವನ್ನು ಕೆರಳಿಸಿ ಹೆಚ್ಚುಹೆಚ್ಚಾಗಿ ಅವರೆಲ್ಲರೂ ನಮ್ಮ ಸಾಹಿತ್ಯ- ಸಂಸ್ಕೃತಿಗಳ ಆರಿವನ್ನು ಪಡೆಯಬೇಕು ಎಂಬುದಕ್ಕಾಗಿ. ಉತ್ತರ- ವನ್ನು ಹೇಳುವವರಾದರೂ ಆ ದೃಷ್ಟಿಯನ್ನಿಟ್ಟುಕೊಂಡೇ ಹೇಳುವರು. ಪ್ರಶ್ನೆ ಕೇಳಬಯಸುವವರು ತಮ್ಮ ಪ್ರಶ್ನೆಗಳನ್ನು " ನಿಘಾರಿ C/o ಸಂಪಾದಕ ಜಯಂತಿ, ಧಾರವಾಡ " ಈ ವಿಳಾಸಕ್ಕೆ ಕಳಿಸಬೇಕು.

ವಿಜ್ಞಾನದ ವಿಚಿತ್ರ ಪ್ರಪಂಚ

(ಲೇಖನದ ಮುಂದುವರಿಕೆ)

ಮಾಡಿಕೊಟ್ಟುದಲ್ಲದೆ ಕೆಪ್ಲರನಿಂದ ತಿದ್ದಲ್ಪಟ್ಟ ಮತ್ತು ಕೋಪರ್ನಿಕಸನಿಂದ ಪ್ರತಿಪಾದಿಸಲ್ಪಟ್ಟ ಸೂರ್ಯಕೇಂದ್ರ ತತ್ತ್ವ ವಿಷಯವಾಗಿ ಪ್ರಮಾಣಗಳನ್ನಾದರೂ ಒದಗಿಸಿಕೊಟ್ಟನು.

ತನ್ನ ದುರ್ಬಿಣಿಯಲ್ಲಿ ಇವನು ಮೊದಲು ಚಂದ್ರನನ್ನು ಪರೀಕ್ಷಿಸಿದನು. ಇವನಿಗೆ ಪ್ರಥಮದರ್ಶನದಲ್ಲಿಯೆ ನಮ್ಮ ಜಗತ್ತಿನಂತೆಯೇ ಇಲ್ಲಿಯಾದರೂ ಗಿರಿಕಂದರಗಳು, ತಪ್ಪಲು ಪ್ರದೇಶ, ಸಮುದ್ರ, ಜ್ವಾಲಾಮುಖಿಯ ಲಕ್ಷಣ ಮೊದಲಾದ ವುಗಳು ಇರಬೇಕೆಂದು ಎನಿಸಿತು. ಇದು ಅರಿಸ್ಟಾಟಲನ ಅನುಯಾಯಿಗಳ ಮೇಲೆ ಯಾವ ಪರಿಣಾಮವನ್ನು ಮಾಡಿರಬಹುದೆಂಬುದನ್ನು ಊಹಿಸುವುದೇ ಲೇಸು. ಅವರ ಅಭಿಸ್ರಾಯದಂತೆ—ದೈವೀ ಸೌಂದರ್ಯಕಾಂತಿಯಿಂದ ಯುಕ್ತವಾದ ಚಂದ್ರನ ಮೋರೆಗೆ ಗ್ಯಾಲಿಲಿಯೋನು ಕಲಂಕವನ್ನು ತಂದಂತಾಯಿತು; ಇಷ್ಟಲ್ಲದೆ ಕಲಂಕವನ್ನು ಸಾರ್ವಜನಿಕವಾಗಿ ತೋರಿಸುವ ಉಪಕರಣವನ್ನಾದರೂ ತಯಾರಿಸಿದ್ದನು. ಇದರಂತೆಯೆ ಬೆಳಕಿನ ಮುದ್ದೆಯಾಗಿ ಆಕಾಶದಲ್ಲಿ ಗೋಚರವಾಗುವ ಆಕಾಶಗಂಗೆಯ ವಿಷಯದಲ್ಲಿ ಪುರಾತನ ಜನರಿಗೆ ಏನೂ ತಿಳಿದಿರಲಿಲ್ಲ. ಇದು ನಕ್ಷತ್ರಸಮೂಹವೇ ಎಂದು ಇವನ ಉಪಕರಣವು ತೋರಿಸಿತು. ಅದರಂತೆಯೆ. ಕಣ್ಣಿಗೆ ಕೇವಲ ಒಂದೇ ಇರಬಹುದೆಂದು ಕಾಣುವ ನಕ್ಷತ್ರಗಳು ಎರಡು ಇರಬೇಕೆಂದು ತೋರಿಸಿತು.

ಖಗೋಲವಿಷಯದಲ್ಲಿ ಇವನು ಮಾಡಿದ ಅತ್ಯಂತ ಜಾಜ್ವಲ್ಯವಾದ ಮತ್ತು ಕ್ರಾಂತಿಕಾರಕ ಶೋಧವನ್ನು ಕುರಿತು ಈಗ ವಿವೇಚಿಸುವ: ಗ್ಯಾಲಿಲಿಯೋನು ತನ್ನ ಉಪಕರಣವನ್ನು ಗುರುಗ್ರಹದ ದೆಸೆಗೆ ಹೊರಳಿಸಿದನು. ಗುರುವಿನ ಸುತ್ತಲೂ ನಾಲ್ಕು ಚಂದ್ರರನ್ನು ನೋಡಿ ಇವನು ಆಶ್ಚರ್ಯಭರಿತನಾದನು. ಇವನ ನೈರಿಗಳ ಸಂಖ್ಯೆಯು ಮಾತ್ರ ಬೆಳೆಯಹತ್ತಿತು. ಈ ವಿಷಯವಾಗಿ ಗ್ಯಾಲಿಲಿಯೋನು ಕೆಪ್ಲರನಿಗೆ ಬರೆದ ಪತ್ರವು ಮನೋರಂಜಕವಿದೆ—"ನನ್ನ ಪ್ರೀತಿಯ ಕೆಪ್ಲರ್, ನೀನು ಇಲ್ಲಿ ಇದ್ದಿದ್ದರೆ ಇಬ್ಬರೂ ಕೂಡಿಯೆ ಮನಃಪೂರ್ವಕವಾಗಿ ನಗಬಹುದಾಗಿತ್ತು. ಇಲ್ಲಿಯ ತತ್ತ್ವಜ್ಞಾನದ ಪ್ರಾಧ್ಯಾಪಕನು ನನ್ನ ದುರ್ಬಿಣಿಯಲ್ಲಿ ಚಂದ್ರ ಮತ್ತು ಗ್ರಹಗಳನ್ನು ನೋಡಲು ಸಹ ಒಪ್ಪದಾಗಿದ್ದಾನೆ. ಅದರಂತೆಯೆ ಪೀಸಾದಲ್ಲಿಯು ಪ್ರಾಧ್ಯಾಪಕನು ಮಂತ್ರದಿಂದ ಈ ಹೊಸ ಗ್ರಹಗಳನ್ನು ಆಕಾಶದಿಂದ ಹೊರಗಟ್ಟುವ ಪ್ರಯತ್ನದಲ್ಲಿದ್ದಾನೆ."

ಅದರಂತೆಯೆ ಇವನು ಸೂರ್ಯನ ಮೇಲೆ ಕಲೆಗಳು ಇರುವುವೆಂದು ಕಂಡುಹಿಡಿದನು. ಇದಂತೂ ಅತಿ ಉಗ್ರವಾದ ಅಪರಾಧವೇ ಆಯಿತು. ಈ ಕಲೆಗಳ ಸ್ಥಿತ್ಯಂತರಗಳ ಮೂಲಕ ಸೂರ್ಯನು ತನ್ನ ಅಕ್ಷದಲ್ಲಿ ತಿರುಗುವನೆಂದು ಪ್ರತಿಪಾದಿಸಿದನು. ಇವೆಲ್ಲವುಗಳನ್ನು ಕಂಡ ಒಬ್ಬ ಧರ್ಮಾಧಿಕಾರಿಯು, ತನ್ನ ಮೇಲಿನವರಿಗೆ ಈ ವಿಷಯವಾಗಿ ತಿಳುಹಿಸಲು, ಆ ಮೇಲಧಿಕಾರಿಯು—"ನಾನು ಅರಿಸ್ಟಾಟಲನ ಗ್ರಂಥದಲ್ಲಿ ಈ ವಿಷಯದ ಉಲ್ಲೇಖವಿಲ್ಲವೆಂದು ಖಾತ್ರಿ ಮಾಡಿಕೊಂಡಿದ್ದೇನೆ. ಕಾರಣ ಇದು ನಿನ್ನ ಇಂದ್ರಿಯಗಳ ಇಲ್ಲವೆ ಗಾಜುಗಳ ದೋಷಮೂಲಕ ಇರಲಿಕ್ಕಿಲ್ಲವೆ ಎಂಬ ಬಗ್ಗೆ ಮನವರಿಕೆ ಮಾಡಿಕೊ!" ಎಂದು ಧರ್ಮಾಧಿಕಾರಿಗೆ ತಿಳುಹಿದನು. ಒಬ್ಬ ಗಣಿತ ಶಾಸ್ತ್ರದ ಪ್ರಾಧ್ಯಾಪಕನು—ಈ ದುರ್ಬಿಣಿಯಲ್ಲಿ ಮೊದಲು ಗ್ರಹಗಳನ್ನು ತುಂಬಿದ್ದಾದರೆ ಅವು ನೋಡಲು ಸಿಕ್ಕುವುವೆಂದು ಜಾಹೀರ್ ಪಡಿಸಿದನು. ಇವನ ದುರ್ಬಿಣಿಯಲ್ಲಿ ನೋಡಲು ಒಪ್ಪದ ಅನೇಕ ಪ್ರಾಧ್ಯಾಪಕರಲ್ಲಿ ಒಬ್ಬನು ತೀರಿಹೋದ ಸುದ್ದಿಯನ್ನು ಕೇಳಿ ಗ್ಯಾಲಲಿಯೋನು ನುಡಿದದ್ದೆಂದರೆ—'ಇವನು ಭೂಮಿಯ ಮೇಲೆ ಬದುಕಿದಾಗ ನಾನು ಕಂಡು ಹಿಡಿದ ಆಕಾಶದೊಳಗಿನ ಚಮತ್ಕಾರಗಳನ್ನು ನೋಡಲು ಒಪ್ಪಲಿಲ್ಲ; ಆದರೆ ಈಗ ಇವನು ಅಲ್ಲಿಗೇ ಹೋದುದರಿಂದ ಬಹಳ ಮಾಡಿ ಅಲ್ಲಿಯೇ ಅವುಗಳನ್ನು ನೋಡಬಹುದು!'

ಈಗ ಮಾತ್ರ ಗ್ಯಾಲಿಲಿಯೋನ ವೈರಿಗಳ ಸಂಖ್ಯೆಯು ಕ್ರಮೇಣ ಹೆಚ್ಚಿತು. ಇವನ ಶೋಧಗಳ ವಿಷಯವನ್ನು ಅವರ ಮನಸ್ಸಿಗೆ ವಿರುದ್ಧವಾದರೂ ಒಪ್ಪಲೇಬೇಕಾಯಿತು. ಅವರು ಇವನನ್ನು ವಿಾರುವ ಯತ್ನದಲ್ಲಿ ರತರಾದರು. ಇಲ್ಲದ ನಕ್ಷತ್ರಗಳನ್ನು ಸಹ ಎಣಿಸಹತ್ತಿದರು

ಗ್ಯಾಲಿಲಿಯೋನು ತನ್ನ ವೈಖರಿಯ ಶಿಖರವನ್ನು ಸಮಿಾಪಿಸಿದನು ಅಲ್ಲಿ ಕೆಲಕಾಲ ನಿಂತನೋ ಇಲ್ಲವೋ, ತಪ್ಪಲ ಪ್ರದೇಶದ ತುದಿಗೇ ಬಂದನು ಇಲ್ಲಿಂದ ಮಾತ್ರ ಇವನ ವೈರಿಗಳ ಕಾರಸ್ಥಾನದ ಮೂಲಕ, ಜೀವನದ ಉತ್ತರಾರ್ಧದಲ್ಲಿ ಭೌತಿಕಸುಖದ ಪಟ್ಟಿಗೆ ಕೆಳಕ್ಕೆ ತಳ್ಳಲ್ಪಟ್ಟಂತಾದನು

(ಮುಂದುವರಿಯುವುದು)

ಪ್ರಕಟನೆಗಾಗಿ—

ಶ್ರೀ. 'ಎನ್ಕೆ' ಕುಲಕರ್ಣಿಯವರ ಕೆಳಗಿನ ಗ್ರಂಥಗಳು ಪ್ರಕಟನೆಗಾಗಿ ಸಿದ್ಧವಾಗಿವೆ. ಪ್ರಕಾಶಕರು ಪತ್ರವ್ಯವಹಾರ ಮಾಡಬಹುದು.

೧. ಹೊಸ ನಾಮಾಜಿಕ ಕಾದಂಬರಿ—(ಕ್ರೌನ್ ೩೦೦ ಪುಟಗಳಷ್ಟು)
೨. ಹತ್ತು ಏಕಾಂಕಗಳ ಸಂಗ್ರಹ
೩. 'ನಡುಮನೆಯಲ್ಲಿ'—ದ್ವಿತೀಯ ಮುದ್ರಣ
೪. ಹರಟೆಗಳ ಸಂಗ್ರಹ—(೩೦ ಹೊಸ ಹರಟೆಗಳು)
೫. 'ಸಾಹಿತ್ಯವಾಹಿನಿ'—ವಿಸ್ತೃತ ದ್ವಿತೀಯ ಮುದ್ರಣ
೬. ನಾನಿಯ ನೆನಪುಗಳು—(ಕಾಲ್ಪನಿಕ ಚಿತ್ರಗಳು)
೭. ನಾಲ್ಕು ಸಣ್ಣಕತೆಗಳು

ಎನ್. ಕೆ. ಕುಲಕರ್ಣಿ
ಪ್ರಭು ಚಾಳ, ಮಾಳಮಡ್ಡಿ, ಧಾರವಾ

ಪುಸ್ತಕ ವಿಮರ್ಶೆ

ಗಂಡು-ಹೆಣ್ಣಿನ ಸಮಸ್ಯೆ: — ಪ್ರತಿಭಾ ಗ್ರಂಥಮಾಲೆಯಲ್ಲಿ ಪ್ರಕಟವಾದ ಕಾದಂಬರಿ. ಮೂಲ ಲೇಖಕರು— ಶ್ರೀನಾಥಸಿಂಹ (ಹಿಂದಿಯಲ್ಲಿ). ಅನುವಾದಿಕೆ:— ಶ್ರೀಮತಿ ಕುಪ್ಪಮ್ಮ.

ಸುಮಾರು ೧೦-೧೨ ವರುಷಗಳ ಹಿಂದಿನ ಭಾರತೀಯ ಸಮಾಜದ 'ಸುಧಾರಣಾಯುಗ' ಈ ಕಥೆಯ ಹಿನ್ನೆಲೆಯಾಗಿದೆ. ದಿಲ್ಲಿಯ ಶೋಕನಾರಾ ಬಾಗಿನಲ್ಲಿ ಪ್ರಭಾತಯಾತ್ರೆಗೆ ಬರುವ ಮೂರು 'ಇಜ್ಜೋಡು'ಗಳ—ಸುಮಾರು ೨-೩ ವರುಷಗಳ—ಪ್ರಯೋಗ ಜೀವನವೇ ಇಲ್ಲಿಯ ಕಥೆ.

ಜಗತ್ತಾನಾರಾಯಣ ೪೦ ರೂ. ಸಂಬಳದ ಅಧ್ಯಾಪಕ; ಅವನಿಗೆ ಅಭರಣಪ್ರಿಯಳಾದ ಮಾನವತಿ ಎಂಬ ಹೆಂಡತಿ. ಭ್ರಮರನೆಂಬ 'ಕವಿ'ಗೆ ಹಳ್ಳಿಯ ಹುಡುಗಿಯಾದ ಚಂಪಾವತಿಯೆಂಬ ಹೆಂಡತಿ. ದುರ್ಗಾದಾಸನೆಂಬ ಶೇಟಜಿಗೆ ಶೀಲಾರಾಣಿಯೆಂಬ ಸುಧಾರಣಾಸ್ತ್ರಿಯಳಾದ ಹೆಂಡತಿ.

ಜಗತ್ ನಾದಾ ಜೀವಿ. ಅವನಿಗೆ ಆಡಂಬರ ಎಳ್ಳಷ್ಟೂ ಸೇರದು. ಇದ್ದುದರಲ್ಲೇ ನಗುತ್ತ ಕಾಲಕಳೆಯಬೇಕೆನ್ನುವವ. ಅವನಿಗೆ ಜಗತ್ತಿನ ಬಗ್ಗೆ ಅಪಾರವಾದ ಸಹಾನುಭೂತಿ ಇದೆ. ಯಾರೊಬ್ಬರ ದುಃಖವನ್ನೂ ತನ್ನದಾಗಿ ಭಾವಿಸಿ ಅದನ್ನು ನಿವಾರಿಸಲು ಯತ್ನಿಸುವನು. ಮಾನವಸಹಜ ಪ್ರವೃತ್ತಿಗಳಲ್ಲಿ ಅವನು ತಪ್ಪು ಭಾವಿಸುವುದಿಲ್ಲ. ಇವನ ಮಾತು ರೀತಿ ಅಸಹಜವೆನಿಸುವಷ್ಟು ಅತಿ ಸಹಜವಾಗಿವೆ. ಮಾನವತಿಯ ಒಡವೆಗಳ ಆಶೆಯನ್ನು ತಾನು ಪೂರಯಿಸಲಾರ. ಆದರೆ ಅವಳ ಅಪೇಕ್ಷೆಯನ್ನು ಅಲ್ಲಗಳೆಯುವುದಿಲ್ಲ. ಅವಳ ತೀವ್ರವಾದ ಆಶೆ, ಅದನ್ನು ಪೂರ್ತಿಗೊಳಿಸಿಕೊಳ್ಳಬೇಕೆಂಬ ಹಟ, ಅದು ಸಾಧಿಸದಿದ್ದಾಗ ಉಂಟಾಗುವ ಕ್ರೋಧ— ಶುದ್ಧ ಹಟಮಾರಿ ಮಗುವಿನ ಸ್ವಭಾವ ಅವಳದು. ಇದು ಮೊದಲನೆಯ ಇಜ್ಜೋಡು.

ಭ್ರಮರ ಸೌಂದರ್ಯಸ್ತ್ರಿಯ ಕವಿ. ಅವನಿಗೆ ಜಗತ್ತಿನ ಸೌಂದರ್ಯವೆಲ್ಲ ತನ್ನ ಹಿಡಿತದಲ್ಲಿರಬೇಕೆಂಬ ಹುಚ್ಚು ಆಶೆ. ತನಗೆ ತಾನೇ 'ಕವಿ' ಎಂದುಕೊಳ್ಳುತ್ತಾನೆ. ಅವನ ಸೌಂದರ್ಯದ ಅರ್ಥದಲ್ಲಿ ಹೆಣ್ಣಿಗೆ ಮುಖ್ಯಸ್ಥಾನವಿದೆ. ಪ್ರಕೃತಿ ಸೌಂದರ್ಯ ಅವನಿಗೆ ಹೆಣ್ಣಿಲ್ಲದೆ ರುಚಿಸದು. ಅವನಿಗೆ ಜನರ ಬಾಳು ಗೋಳು— ಇಂಥ ರುಕ್ಷ ವಿಚಾರಗಳೇ ಬರುವುದಿಲ್ಲ. ಇಂಥ ವಿಚಿತ್ರ ರಸಗ್ರಾಹಕನಾದ ಇವನಿಗೆ ಚಂಪಾವತಿ ಹೆಸರಿಗೆ ಹೆಂಡತಿ. ಇವನ ಅಭಿರುಚಿ ಆಧುನಿಕ. ಅವಳು ಪಟ್ಟಣದ ಫ್ಯಾಶನ್ ತಿಳಿದವಳಲ್ಲ. ಇದು ಎರಡನೆಯ ಇಜ್ಜೋಡು.

ಇನ್ನು ಮೂರನೆಯ ಇಜ್ಜೋಡೆಂದರೆ ಶೇಟಜೀ-ಶೀಲಾರಾಣಿ. ಶೇಟಜೀ ನಿಪುಣ ವ್ಯಾಪಾರಿ; ಶ್ರೀಮಂತ. ಅವನಿಗೆ 'ಪರಂಪರೆಯ ರೋಗ' ವಿದೆ. ಗಂಡುಸು ಏನು ಮಾಡಲೂ ಸ್ವತಂತ್ರ. ಹೆಣ್ಣಿಗೆ ನಾನೆ, ಪತಿಸಾನ್ನಿಧ್ಯ ಬಿಟ್ಟು ಲೋಕದಲ್ಲಿ ಬೇರೆ ಸ್ಥಳವಿಲ್ಲ. ಇದ್ದರೆ ಅದು ಪಾಪ. ಗಂಡನು 'ಅತ್ಮಸಾಕ್ಷಿ' ಯಾಗಿ ಏನು ಮಾಡಿದರೂ ಅದು ವಾಸವೇ ಅಲ್ಲ. ಒಂದು ವೇಳೆ ಜನರ ತಿಳಿವಳಿಕೆಗೆ ಪಾಪವೆನಿಸುವ ಘಟನೆ ನಡೆದರೆ, ತೀರ್ಥಯಾತ್ರೆಯಲ್ಲಿ ತೊಳೆದು ಪಾವನನಾಗಬಹುದು. ಹೆಣ್ಣಿಗೆ ಮಾತ್ರ ಪಾಪ ಮಾಡುವ ಅಧಿಕಾರವೇ ಇಲ್ಲ. ಇನ್ನು ತೊಳೆಯುವುದೆಲ್ಲಿಂದ ಬಂತು? ಶೀಲೆ ನಾಲ್ಕು ಪುಸ್ತಕ ಓದಿ 'ಹೊಸದೃಷ್ಟಿ' ಪಡೆದವಳು. ಅವಳು ಸಮಾನತೆಯ ಪ್ರಚಾರಿಕೆ. ಸ್ವತಂತ್ರ, ಸ್ವಚ್ಛಂದ ಪ್ರವೃತ್ತಿಯವಳು. ಸಂಸ್ಕಾರವಂತಳೂ ಆಹುದು. ಒಳ್ಳೆಯ ಜೀವ.

ಈ ಆರು ಭಿನ್ನ ಶಕ್ತಿಗಳು ತಮ್ಮದೇ ಸರಿಯೆಂಬ ಪ್ರತಿಪಾದನೆಯಲ್ಲದೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಹೆಣಗುತ್ತವೆ.

ಕಾದಂಬರಿಯ ವಸ್ತು ಹೆಸರಿಗೆ ತಕ್ಕಂತೆ ಹೆಣ್ಣು-ಗಂಡಿನ ಸಮಸ್ಯೆಯೆ. ಪಾತ್ರಗಳು ಸಮಾಜದ ಘಟಕಗಳೇ ಆದರೂ, ಕಥೆಯ ನಿರೂಪಣೆಯಲ್ಲಿ 'ಸಾಮಾಜಿಕತೆ' ಯ ಪರಿಣಾಮ ಇಲ್ಲವೆ ಸಂಬಂಧ ಉಂಟಾದ ಹಾಗೆ ಕಾಣುವುದಿಲ್ಲ ಈ ವ್ಯಕ್ತಿಗಳಿಗೆ. ಎಲ್ಲ ಬಯಲು ಬಂಗಾರದ ವ್ಯವಹಾರ. ಧರ್ಮದಾಸ ಶೇಟಜೀ ಮಾತ್ರ ರೂಢಿ-ಸಂಪ್ರದಾಯಗಳ, ಪಾಪ-ಪುಣ್ಯಗಳ ನೆವದಿಂದ ಸಮಾಜದ ನೆನಪು ತರುತ್ತಾನೆ;— ಜಗತ್ ನಾರಾಯಣ ಕೂಲಿಕಾರನನ್ನು ಸಂಘಟಿಸುವ ಕೆಲಸದಲ್ಲಿ ತೊಡಗುತ್ತಾನೆ;— ಒಂದು ಸಹಭೋಜನ ಸಮಾರಂಭದ ನಿರೂಪಣೆಯಿದೆ;— ಕುಂಭಮೇಳದ ಕಾಲಕ್ಕೆ ಸಾಧುಗಳ ಮೆರೆವಣಿಗೆಯೊಂದು ಬರುತ್ತದೆ. ಆದರೆ ಇವೆಲ್ಲ ಈ ಆರು ವ್ಯಕ್ತಿಗಳ ಜೀವನ ಚಕ್ರದಲ್ಲಿ ಸಿಕ್ಕ ಎಳೆಗಳಂತೆ ಇವೆ. ಇಲ್ಲಿಯ ಕಥೆ ಸಮೋವ್ಯಾವಾರದ್ದೂ ಅಲ್ಲ; ಸಾವಯವಿಕವೂ ಅಲ್ಲ. ಬಹುಶಃ ಇಲ್ಲಿಯ ವ್ಯಕ್ತಿಗಳು ತಮ್ಮ ತಮ್ಮ ಸಂಕುಚಿತ ಕ್ಷೇತ್ರದಲ್ಲಿಯೆ ಸುಪಾನ್ವೇಷಣೆ ನಡೆಸುತ್ತವೆ. ಜಗತ್ ಮತ್ತು ಶೀಲೆ 'ಆದರ್ಶವಾದ'ವನ್ನು ಪ್ರತಿಪಾದಿಸುತ್ತಾರೆ. ಆದರೆ ಕಾರ್ಯರೂಪಕ್ಕೆ ಬರಲಾರದ ಕಸುತು ಆದರ್ಶವಾದವದು. ಭ್ರಮರನಂತಹ 'ಹೂವಿನಿಂದ ಹೂವಿಗೆ ಹಾರುವ' ಕವಿಗಳನ್ನು ಧರ್ಮದಾಸನಂತಹ 'ಹೆಸರಿಗೆ ಮಂಡ' ವಾದ ಸಂಪ್ರದಾಯ ಶರಣರನ್ನು ಚಂಪೆಯಂತಹ ಕರ್ಮಕುಶಲಿ ಹಳ್ಳಿಯ ಹೆಣ್ಣನ್ನು ಸಮಾಜದಲ್ಲಿ ಕಾಣಬಹುದು. ಮಾನವತಿ ಮಾತ್ರ 'ಅತಿ ಮಾನವಿ' ಯಾಗಿ ಕಾಣುತ್ತಾಳೆ. ಅವಳ ಒಡವೆಯ ಆಶೆಯೇನೋ ಸರಿ.— ಆದರೆ ಅದಕ್ಕಾಗಿ ತನ್ನ ಪತಿಯ ಮುಂದೆ ಇನ್ನೊಬ್ಬನೊಂದಿಗೆ (ದುರ್ಗಾದಾಸ) ಧೈರ್ಯವಾಗಿ ಬಾಳುವುದು ಮಾನವ ಸಹಜಪ್ರವೃತ್ತಿಯ ಲಕ್ಷಣವಾಗಿ ಕಾಣುವುದಿಲ್ಲ. ಶೀಲೆ ತನ್ನ ಆದರ್ಶದಲ್ಲಿಯೆ ಸತ್ತು ಗೆದ್ದಳು. ಆದರೆ ಜಗತ್ತಾನಾರಾಯಣನ ಹೋರಾಟ ಮಾತ್ರ ಸೋಲುವುದಕ್ಕೇ ಆಯಿತು.

ಈ ಕಾದಂಬರಿಯ ಪಾತ್ರಗಳು ಹೇಗೋ ಹಾಗೆ ಈ ಕಾದಂಬರಿಯ ಕಲೆಯೂ ಒಂದು ಪ್ರಯೋಗವೆನ್ನಬಹುದು. ಆದರೆ ಕಥೆ ನವೀನ ವಿಚಾರ ನಿರೂಪಣೆಯಿಂದ ಕುತೂಹಲಕಾರಿಯಾಗಿದೆ. ಹೊಸ ಮಾದರಿಯ ಈ ಕಾದಂಬರಿಯನ್ನು ಕನ್ನಡಿಗರಿಗೆ ಒದಗಿಸಿ ಕೊಟ್ಟ ಅನುವಾದಿಕೆಯರೂ ಪ್ರಕಾಶಕರೂ ಅಭಿನಂದನೆಗೆ ಅರ್ಹರಾಗಿದ್ದಾರೆ.

— ದ. ಬಾ. ಕು

ಮುದ್ರಕರು:
ಎನ್. ಎಸ್. ಬಿಂಗೇರಿ,
ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು:
ಎಂ. ವ್ಹಿ. ಮುಳಗಟ್ಟಿ,
ಜಯಂತಿ ಕಾರ್ಯಾಲಯ, ಧಾರವಾಡ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಕ
ಕನ್ನಡ ಕಂಪನಿಯು ಪಾಲಿಸಿಯನ್ನೇ ಪಡೆಯಬೇಕು!
- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆ ನಿಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ
- ಮರಣಹೊಂದಿದ ಪಾಲಿಸಿದಾರರ ವಾರಸುದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂ ಎಲ್ಲರ ಸಂಬಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನು ಪಾಲುಗಳನ್ನೂ ಕೊಂಡುಕೊಳ್ಳಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಂ. ಗೋವರ್ಧನರಾವ, ಮ್ಯಾನೇಜರ್



ಕೆಮ್ಮನ್ನು ಉಲ್ಬಣಿಸಿದ ವಿಶೇಷ ದುಸ್ಸಂದರ್ಭಗಳಿಂದ, ಸಾವಿರಾರು ಜನರನ್ನು, ಪ್ರತಿದಿನವೂ ಈ ಜೀವಧಾತು ಸಂರಕ್ಷಿಸಿದೆ.
'ಕಾಸ್ಕೊ'ದಲ್ಲಿ ಎರಡು ರೀತಿಯ ಗುಣಗಳಿವೆ:— ಮೊದಲಭಾಗದಿಂದ — ಅದರ ಸಮೀಪದ ಶಕ್ತಿಯು ಗಂಟಲೊಳಗೆ ಇಳಿಕೊಂಡು ಕೆಮ್ಮನ್ನು ಹೊರಡಿಸುವ ಪರಿಗಳನ್ನು ಶಾಂತಪಡಿಸುತ್ತದೆ. ಒಳಭಾಗದಿಂದ:— ಅದು ಗಂಟಲೊಳಗಿನ ಸ್ವಾಭಾವಿಕವಾದ ಒಸರುವಿಕೆಗೆ ದ್ರವತ್ವವನ್ನುಂಟುಮಾಡುತ್ತದೆ, ಕಫವನ್ನು ಕತ್ತರಿಸಲು ಸಹಾಯವನ್ನೀಯುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ ಮತ್ತು ಕೆಮ್ಮನ್ನು ಹೊರಡಿಸುವ ಸೋಂಕನ್ನು ಅಲ್ಲಲ್ಲಿಯೆ ನಿರ್ಮೂಲನಗೊಳಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯನ್ನು ನಿವಾರಿಸುತ್ತದೆ. ಸಹಸ್ರಕ್ಕೊಮ್ಮೆ ಸಂಕೆ ಒಂದು ಬಿಲ್ಲೆಯನ್ನು ೨-೩ ಗಂಟೆಗಳು ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳುವುದು.
ಎಲ್ಲಾ ಔಷಧಾಲಯಗಳಲ್ಲಿಯೂ ಸಿಗುವುದು


ಕೆಮ್ಮಿನ ಬಾಧೆಯಿಂದ ಎಷ್ಟೋ ಬಾರಿ ನಿದ್ರೆ ಕೆಡುವುದು. ಅದಕ್ಕಾಗಿ ಎಷ್ಟೋ ಔಷಧೋಪಚಾರಗಳನ್ನು ಮಾಡಿರಬಹುದು. "ಕಾಸ್ಕೊ" ವನ್ನು ತೆಗೆದುಕೊಳ್ಳಿರಿ. ಆರಂಭದ ಡೋಸ್‌ನಲ್ಲೇ, ಕೆದರಿದ ಮನ, ಪೀಡಿಸುವ ಕೆಮ್ಮು ಒಡನೆ ಸಂಪೂರ್ಣವಾಗಿ ನಿವಾರಿಸುವುದು. "ಕಾಸ್ಕೊ" ಕೆಮ್ಮನ್ನು ಬಚ್ಚಿಡುವುದಿಲ್ಲ— ಆದರೆ, ಕಫೋತ್ಸರ್ಗವಾಗುತ್ತದೆ.

ಆಕ್ಷಯ್ಯ ಕರವಾದ ಕೆಮ್ಮು-ನಿವಾರಕ ಬಿಲ್ಲೆಗಳು

ಉಡುಪಿ ಫಾರ್ಮಸಿ ಲಿಮಿಟೆಡ್, ಅಹಮ್ಮದ್‌ನಗರ

ಹುಬ್ಬಳ್ಳಿ ಲಾಖೆ:— ಸ್ಟೇಶನ್ ರೋಡ, ಹುಬ್ಬಳ್ಳಿ

ಯುಗಾಂತಿ

ಸಂಪಾದಕ:
ಪಟಗೇರಿ ಕೃಷ್ಣಕರ್ಮ

ಪುಟ ೮೨] ಸಪ್ಟೆಂಬರ್ ೧೯೪೫ [ಸಂಚಿಕೆ ೪

—ಈ ಸಂಚಿಕೆಯಲ್ಲಿ—

ಯು ಭ್ರಾಂತಿ; ಬರುತಿದೆ ಮಳೆ! (ಕವನಗಳು) ೬೧
ಶ್ರೀ. ವಸುದೇವ ಭೂಪಾಲಂ ಶ್ರೀ. ಪಾ. ರಾ.
ಉಡುಗೊರೆ (ಕಥೆ) ೫೫
ಶ್ರೀ. ಜೇಂಪ್ರೆ ಲಕ್ಷ್ಮಣರಾಯರು
ಮುಕ್ತ ರಾಷ್ಟ್ರಗಳ ರಾಜತಾಸನ ೧೭೧
ಶ್ರೀ. ನಗರೂರ ರಂಗನಾಥ
ಯ ವ್ಯಾಪಾರ (ಕಥೆ) ೧೮೫
ಸ್ ಬಾಂಬು ೧೮೮
ಶ್ರೀ. ಕೆ. ವಿಶ್ವಲ ಕೇಶೈ
ಸೈನ್ಯೋಗಗಳಿಗೊಂದು ಯೋಜನೆ ೧೯೨
ಶ್ರೀ. ಎಸ್. ಕೆ. ಕಲ್ಲಾಪೂರ
ಸ್ಥಲದ ಪ್ರಕಿಸಲಹ ಸಂಪಾದಕೀಯ ವಿವಿಧ ವಿಚಾರಗಳನ್ನು

ಬಲೆ ಆಠಾಣೆ

N. G. Karkera

ಸಾದರ ಸ್ವೀಕಾರ

೨೬. **ಕಥಾವಳಿ** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ). ಸಂಪಾದಕರು:– ಶ್ರೀ. ಒ. ವಿ. ಗುಪ್ತ, ಮೋಹನಪ್ರೆಸ್, ಬೆಂಗಳೂರು ನಗರ ಅವರು. ಕ್ರೌ. ಅ. ೧೯೬ ಪುಟಗಳು. ತುಂಬ ಚಿತ್ರಗಳಿವೆ. ಬೆಲೆ ೦–೧೨–೦.

ಕನ್ನಡದಲ್ಲಿಯೂ ಇಷ್ಟೊಂದು ಕಣ್ಣು ಸೆಳೆಯುವ ವಿಶೇಷ ಸಂಚಿಕೆಗಳು ಹೊರಡತೊಡಗಿದುವಲ್ಲಾ.... ಎಂದು ಅಭಿಮಾನಪಡುವಂತಿವೆ— ಈ ಸಂಚಿಕೆ. ಒಮ್ಮೆಲೆ ಎದ್ದುಕಾಣುವ ಹೊಸತನವೆಂದರೆ ಇದರಲ್ಲಿಯ 'ಮಕ್ಕಳ ಬಳಗ' ಎಂಬ ವಿಭಾಗ. ಇದರಲ್ಲಿಯ ಚಿತ್ರಸಹಿತವಾದ ಕತೆ-ಕವನ-ಲೇಖನಗಳು ಮನೋರಂಜಕವಾಗಿವೆ. 'ಕಾರ್ಡಿನಲ್ಲಿ ಕಥೆಗಳು' ಎಂಬ ವಿಭಾಗ ಹೊಸತನದಿಂದ ಕೂಡಿದ್ದರೂ ಕತೆಗಳಲ್ಲಿ ಸ್ವಾರಸ್ಯ ಕಡಿಮೆ. 'ಜಲನಚಿತ್ರ' ವಿಭಾಗಕ್ಕೆ ಸೇರಿದ 'ಚಿನ್ನದ ಚಾಟಿ' 'ಚಿತ್ರ-ವಿಚಿತ್ರ' 'ಸ್ಟೂಡಿಯೋ ಸಮಾಚಾರ' ಸಾಮಾನ್ಯ ವಾಚಕರಿಗೆ ರಂಜಕವೆನಿಸಹುದು. ಉದಿಕೋದಿತ ಲೇಖಕರ ಹಲವು ಕತೆ-ಕವನ-ಲೇಖನಗಳೂ ಇವೆ. ಮುದ್ದಾದ ಸಂಚಿಕೆ. ಗಾತ್ರದ ಮಾನದಿಂದ ೦೩ಆಣೆ ಬೆಲೆಯೆಂದರೆ ಏನೂ ಅಲ್ಲವೆನಿಸುವಂತಿದೆ. ಸಂಪಾದಕರಿಗೆ ಧನ್ಯವಾದಗಳು.

೨೭. **ದಕ್ಷಿಣ ಹೈದರಾದಿನ ಕರ್ನಾಟಕ ಸಾಹಿತ್ಯಮಂದಿರದ ೯ನೆಯ ವಾರ್ಷಿಕ ವರದಿ.** ಕ್ರೌ. ಅ. ೨೦ ಪುಟಗಳು.

ಕರ್ನಾಟಕತ್ವದ ಸಂರಕ್ಷಣೆಗಾಗಿ ಹೈದರಾಬಾದಿನಲ್ಲಿ ಹಲವು ಮುಖದ-ಸಾಂಸ್ಕೃತಿಕ ಚಟುವಟಿಕೆಗಳನ್ನು ಈ ಸಂಸ್ಥೆ ನಡೆಯಿಸುತ್ತಲಿದೆ. ಈ ಸಾಹಿತ್ಯ ಮಂದಿರಕ್ಕೊಂದು ಸ್ವಂತದ ಭವನವಿರಬೇಕೆಂಬ ಉದ್ದೇಶದಿಂದ ನಿಧಿಸಂಗ್ರಹ ನಡಾಯುತ್ತಲಿದ್ದು ಈಗ ೧೪೦೦೬ ರೂ. ಗಳ ವಚನ ಬೊರೆತಿದೆ; ೪೫೦೦ ರೂಪಾಯಿ ನಗದು ಬಂದಿದೆ. ನಗರದ ಕನ್ನಡ ಅಭಿಮಾನಿಗಳೆಲ್ಲ ಈ ಸಂಸ್ಥೆಯ ಸಂಚಾಲಕರಲ್ಲಿ ಸದಸ್ಯರಲ್ಲಿ ಇದ್ದಾರೆ. ಮಂದಿರ ಬಹುಕಾಲ ಬಾಳಿ ಕನ್ನಡದ ಹೆಸರನು ಮೆರೆಯಿಸಲಿ!

೨೮. **ಬೈಲೂರು ಶ್ರೀಚಿದಾನಂದೇಶ್ವರ** ಸಾರ್ವಜನಿಕ ವಾಚನಾಲಯದ ೩ನೆಯ ವಾರ್ಷಿಕ ವರದಿ. (ಕೈಬರೆಹದಲ್ಲಿ).

ಉತ್ತರಕನ್ನಡ ಜಿಲ್ಲೆಯ ಹಳ್ಳಿಯೊಂದರಲ್ಲಿ ಕೆಲಸ ಮಾಡುತ್ತಿರುವ ಈ ಕಿರಿಯ ಸಂಸ್ಥೆ, ಹಿರಿಯದಾಗಿ ಬೆಳೆದು ಹಳ್ಳಿಗರಿಗೆ ಬೆಳಕನ್ನು ಕೊಡಲಿ.

೨೯. **Bhatkal Harbour Scheme** (ಪರಿಚಯಾತ್ಮಕ-ಸಚಿತ್ರ ಪುಸ್ತಕ). ಬರೆದವರು ದೇಶಬಂಧು ಶ್ರೀ. ಶಂಕರಲಿಂಗೇ ಗೌಡರು ಬಿ. ಎ. ಅವರು ಪ್ರಕಾಶಕರು ಧನಂಜಯ ಆಂಡ್ ಕಂಪನಿ ಧಾರವಾಡ ಬೆಲೆ ೨–೦–೦.

ಭಟ್ಕಳ ಬಂದರದ ವಿಷಯವನ್ನು ಕೂಲಂಕಷವಾಗಿ ಅಭ್ಯಾಸಮಾಡಿ, ಕನ್ನಡನಾಡಿನ ಅಭ್ಯುದಯಕ್ಕೆ ಅದು ಅತ್ಯಗತ್ಯವೆಂಬುದನ್ನು ಮನವರಿಕೆ ಮಾಡಿಕೊಂಡು, ಅದರ ಸಿದ್ಧಿಗಾಗಿ ಸೊಂಟಕಟ್ಟಿ ನಿಂತವರು ಇವನ್ನು ಬರೆದಿದ್ದಾರೆ. ಸಂಗ್ರಹಿಸಿದ ಅಂಕಿ-ಸಂಖ್ಯೆಗಳೂ ವಿಷಯವೂ ತುಂಬ ಮಹತ್ವದುನಿಸಿದ್ದು ಎಲ್ಲರೂ ಓದಿ ನೋಡಬೇಕಾದಂತಹವು ಇವೆ.

೩೦. **ನಾನು ಕಂಡ ಕೈಲಾಸಂ** (ವ್ಯಕ್ತಿ-ಪರಿಚಯ). ಬರೆದವರು ಶ್ರೀಮಾನ್ ಕಂದಾಡೆ ಕೃಷ್ಣ ಐಯಂಗಾರ್ ಅವರು. ಪ್ರಕಾಶಕರು ಬಿ ಬಿ. ಡಿ. ಪವರ್ ಪ್ರೆಸ್, ಅರಳಿಪೇಟೆ, ಬೆಂಗಳೂರು ಸಿಟಿ ಕ್ರೌ. ಅ. ೯೬ ಪುಟಗಳು; ಬೆಲೆ ೧–೪–೦.

೩೧. **ಕೈಲಾಸ ಕಥನ ಅಥವಾ ಗುಂಡೂ ಭಂಡಾರ ಮಥನ** (ಕೈಲಾಸಂ ಸಾಹಿತ್ಯದ ಪರಿಚಯಾತ್ಮಕ ಪುಸ್ತಕ). ಶ್ರೀಮಾನ್ ಜಿ. ಪಿ. ರಾಜರತ್ನಂ ಬರೆದುದು. ಪ್ರಕಾಶಕರು ಬಿ. ಬಿ. ಡಿ. ಪವರ್ ಪ್ರೆಸ್, ಅರಳಿಪೇಟೆ—ಬೆಂಗಳೂರುಸಿಟಿ. ಕ್ರೌ. ಅ. ೭೨ ಪುಟಗಳಿವೆ. ಬೆಲೆ ೧–೦–೦.

೩೨. **ಹೈದರಾಬಾದ್ ಕನ್ನಡಸಾಹಿತ್ಯ ಸಮ್ಮೇಳನದ** (ರಾಯಚೂರು) **ಅಧ್ಯಕ್ಷರ ಭಾಷಣ.** ಭಾಷಣಕಾರರು ಪ್ರೊ. ದಿ. ಕೆ. ಭೀಮಸೇನರಾಯರು ಎಂ. ಎ. ಅವರು. ಕ್ರೌ. ಅ. ೨೮ ಪುಟಗಳು

ತಾ. ೨೪–೭–೪೪ನೆಯ ದಿನ ರಾಯಚೂರಿನಲ್ಲಿ ಸೇರಿದ ಮೊದಲನೆಯ ಹೈ. ಕ. ಸಾ. ಸಮ್ಮೇಳನದ ಅಧ್ಯಕ್ಷರ ಪ್ರಾರಂಭ ಭಾಷಣವಿದು. 'ಹೈದರಾಬಾದ್ ಪ್ರಾಂತದಲ್ಲಿ ಕನ್ನಡ ಸಾಹಿತ್ಯಸೃಷ್ಟಿ' ಎಂಬ ವಿಷಯದ ಪ್ರತಿಪಾದನೆಯಿದೆ. ಭಾಷಣವು ಸಮಯುಕ್ತವೂ ವಿಷಯಪೂರ್ಣವೂ ಆಗಿದ್ದು, ಎಲ್ಲರೂ ಓದಿಕೊಳ್ಳಬೇಕಾದುದಿದೆ.

೩೩. **ರಥಸಪ್ತಮಿ ಮತ್ತು ಇತರ ಚಿತ್ರಗಳು.** (ಚಿತ್ರಪ್ರಬಂಧ ಸಂಗ್ರಹ). ಬರೆದವರು ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರು. ಮೈಸೂರು ಕಾವ್ಯಾಲಯ. ಕಾವ್ಯಮಾಲೆಯ ೩೦ನೆಯ ಪ್ರಕಟನೆ. ಕ್ರೌ. ಅ, ೬೪ ಪುಟಗಳು. ಬೆಲೆ ೧–೦–೦.

೩೪. **ಬೊಮ್ಮನ ಹಳ್ಳಿಯ ಕಿಂದರ ಜೋಗಿ** (ಸಚಿತ್ರ ಕಥನ ಕವನ). ಬರೆದವರು ಶ್ರೀ. ಕುವೆಂಪು ಅವರು. ಚಿತ್ರಕಾರರು ಶ್ರೀ ಆರ್ ಕೆ. ಲಕ್ಷ್ಮಣರು. ಮೈಸೂರು ಕಾವ್ಯಾಲಯದ 'ಮಕ್ಕಳ ಮುತ್ತಿನಮಾಲೆ'ಯ ೧೧ನೆಯ ಪ್ರಕಟನೆ. ಕ್ರೌ. ಅ. ೩೨ ಪುಟಗಳು. ಬೆಲೆ ೦–೬–೦.

ಶ್ರೀ. ಕೆ. ವಿ. ಪುಟ್ಟಪ್ಪನವರನ್ನು ಜನಪ್ರಿಯರನ್ನಾಗಿ ಮಾಡಿದ ಮೊದಲನೆಯ ಕವಿತೆಯಿದು. ಮೊದಲು 'ಕಿರಿಯಕಾಣಿಕೆ'ಯಲ್ಲಿ ಪ್ರಕಟವಾದುದುದು ಬಳಿಕ ಪುಸ್ತಕವಾಗಿಯೂ ಶ್ರೀ. ಪುಟ್ಟಪ್ಪನವರ ಕಥನಕವನಗಳಲ್ಲಿ ಒಂದಾಗಿಯೂ ಪ್ರಕಟವಾಗಿದ್ದಿತು. ಇದೀ ಸುಂದರವಾದ ಸಂದರ್ಭಚಿತ್ರಗಳೊಂದಿಗೆ ಮತ್ತೆ ಸ್ವತಂತ್ರಪುಸ್ತಕವಾಗಿ ಹೊರಕ್ಕೆ ಬಂದಿದೆ. ಆಶ್ಚರ್ಯಕಟ್ಟನ ದೃಷ್ಟಿಯಿಂದ ಕಿರಿಯರಿಗಾಗಿರುವ ಪುಸ್ತಕಗಳಲ್ಲಿ ಮೂದಲಿಯದೆನಿಸಿಕೊಳ್ಳುವಂತಿದೆ.

೩೫. **ಪ್ರಬುದ್ಧಕರ್ನಾಟಕದ ಬೆಳ್ಳಿ ಸಂಚಿಕೆ.** ಸಂಪಾದಕರು ಶ್ರೀಮಾನ್ ಸೀತಾರಾಮಯ್ಯ ಎಂ. ಎ. ಅವರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಕಾಶನ. ಚಿತ್ರಗಳು ಇವೆ. ಡೆ. ಅ. ೪೪೪ ಪುಟಗಳು.

ತುಂಬ ಉಪಯುಕ್ತ ವಿಷಯಗಳಿಂದ ಕೂಡಿ ಸಂಗ್ರಹಕ್ಕೆ ಯೋಗ್ಯವಾದ ವಿಶೇಷ ಸಂಚಿಕೆಯಿದು. ಇದೇ ಸಂಚಿಕೆಯಲ್ಲಿರುವ 'ಸಾಹಿತ್ಯವಿಹಾರ'ದ ಇನ್ನಿತರ ವಿವರಗಳನ್ನೋದಬೇಕು.

ಮುದ್ರಕರು:
ಎನ್ ಎಸ್ ಬೆಂಗೇರಿ,
ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು:
ಎಂ. ಬಿ. ಮೈಲೈಗಟ್ಟಿ,
ಜಯಂತಿ ಕಾರ್ಯಾಲಯ, ಧಾರವಾಡ

ಸಂಪುಟ ೮

ಸಂಚಿಕೆ ೪

ಸಪ್ಟಂಬರ್ ೧೯೪೫

ವಾ. ವರ್ಗಣಿ ಅಂಚೆಸಹಿತ ಸೇರಿ
೪—೪—೦

ಆರು ತಿಂಗಳಿಗೆ ೨—೪—೦

ಬಿಡಿ ಸಂಚಿಕೆಗೆ ೬ ಆಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಶಾಂತಿಯ ಭ್ರಾಂತಿ

ಶ್ರೀ. ವಸುದೇವ ಭೂಪಾಲಂ ಎಂ. ಎ. ಶಿವಮೊಗ್ಗ

ವಿಶ್ವಪಾದಾಕ್ರಾಂತ ಸಾಮ್ರಾಜ್ಯಲಾಲಸೆಯ
ಆತ್ಮವೈಭವಕಾಗಿ ಬಸಿಯಲನ್ಯರ ರಕ್ತ,
ದರ್ಪಪೀಠದಿ ಮೆರೆವ ದುರ್ಮದತ್ತಾ ವ್ಯಕಾಂಕ್ಷೆ
ಮಣ್ಣಾಯ್ತು ಧ್ಯೇಯಮಂದಿರದಡಿಯೆ ಪೊಳ್ಳರಲು;
ಪ್ರಹ್ರಥನು ವಿಜಯದುನ್ಮತ್ತತೆಗೆ ಮೈಮರೆತ
ಪಾಶವೀಕೃತ್ಯದಲಿ ಕ್ಷೋಭಿಸಿರಲರಿದೇಶ
ದಲಿತರಾಕ್ರಂದನಕೆ ಮೈದೋರಿತದೊ ಶಾಂತಿ,
ಕೋಭಿಸಿದೆ ಕ್ರಂದಿಸಿದ ಕಂಗಳಲಿ ನಸುಕಾಂತಿ.

ವಿಜಿಗೀಷುದರ್ಪದುರಿ ದಹಿಪ ವರೆಗುಂ ಜನವ,
ಅನ್ಯಚಿತೆಯಗ್ನಿಯಿಂ ತಮ್ಮಂಧಮೌರ್ಖವನು
ಬೆಳಗಿಸುವ ದುರ್ಹೃದಯ ಮಿಡಿವವರೆಗುಂ ಜಗದಿ,
ಅಸ್ಥಿನಿರ್ಮಿತ ಆಶ್ರದಾಸರೆಯ ಪಡೆವಾಸೆ
ಮೆರೆವ ವರೆಗುಂ ನಿಲ್ಲದೀ ಯುದ್ಧ; ಇಹ ಶಾಂತಿ
ಪ್ರಚ್ಛನ್ನಭವಿಷ್ಯದಲಿ ಮರೆಯಾಗುವಾ ಭ್ರಾಂತಿ!

ಬರುತಿದೆ ಮಳೆ!

ಶ್ರೀ. ಸಾಲಿ ರಾಮಚಂದ್ರರಾಯರು, ಧಾರವಾಡ

ಬರುತಿದೆ ಮಳೆ ತಂಪೊದವಿಸುತೆ,
ಕರುಣೆಯ ರೂಪನು ತೋರಿಸುತೆ ॥

೧

ಬರುತಿದೆ ಕಾವನು ಕಿಡಿಸುತೆ, ತಂಪನು
ಕರೆಯುತೆ, ಕರ್ಮುಗಿಲಿಂದೆ ಮಳೆ;
ಬಿರುಗಾಳಿಯ ಹೊಯ್ಲಿಗೆ ನುಗ್ಗಾಗುತೆ
ಬರುತಿದಲೇ ತಿರೆಗೊತ್ತರವೆ!

೨

ಎರಚುತೆ ತುಂತುರುಗಳನೊಯ್ಯಾರದೆ
ಬರುತಿದೆ ಬಲು ಬಿಂಕದಲಿ ಮಳೆ;
ಬಿರುಗಾಳಿಯ ಗಾವರಕೆ ಸೆಣಸಿ ಬಲ್-
ಸರದಲಿ ಕೂಗುತೆ ಮೆರೆಯುತಿದೆ!

೩

ಮೊರೆಯಿಟ್ಟತು ಮಹಿ ಕಾವಿಗೆ ಕಂದುತೆ;
ಸುರಿ-ಸುರಿಯಿತು ಘೋರಿಸುತೆ ಮಳೆ;
ಹರಿಯಿತು ನೀರಿನ ಹೊನಲೆಲ್ಲೆಲ್ಲಿಯು
ಕರಗಿತಲೇ ಜಗದೀಶನೆದೆ?



ಕನ್ನಡನಾಡಿನ ಹಳ್ಳಿಗಳು

ಆರ್ಥಿಕ ಅವ್ಯವಸ್ಥೆಯಿಂದ ನಮ್ಮ ಹಳ್ಳಿಗಳು ಹೇಗೆ ಪತನವಾಗಿವೆಯೆಂಬುದನ್ನು ಕಳೆದ ಸಂಚಿಕೆಯಲ್ಲಿ ವಿವರಿಸಲಾಗಿದೆ. ಈಗ ಸಂಸ್ಕೃತಿಯ ದೃಷ್ಟಿಯಿಂದ ಹಳ್ಳಿಗಳ ಸ್ಥಿತಿ ಹಿಂದೆ ಹೇಗಿದ್ದಿತೆಂಬುದನ್ನು ನಿರೀಕ್ಷಿಸೋಣ; ಇಂದಿನ ಸ್ಥಿತಿಯೊಂದಿಗೆ ತೂಗೋಣ.

ಬ್ರಿಟಿಷ್ ಪೂರ್ವದ ನಮ್ಮ ಹಳ್ಳಿಗಳು ಒಂದು ರೀತಿಯಿಂದ ಸ್ವತಂತ್ರವಾಗಿದ್ದುವು. ಅಧಿರಾಜ್ಯದ ನೇತೃತ್ವದಲ್ಲಿ ಇರುತ್ತಿದ್ದರೂ ಹಳ್ಳಿಯ ಆಗು-ಹೋಗುಗಳೆಲ್ಲ ಆಲ್ಲಿಯ ಗೌಡನ ಅಡಳಿತಕ್ಕೆ ಒಳಪಟ್ಟಿದ್ದುವು. ರಾಜಕಾರ್ಯ, ಸಂರಕ್ಷಣೆ ಇವುಗಳ ಎಲ್ಲ ಹೊಣೆ ಗೌಡನ ತಲೆಯ ಮೇಲೆ ಇರುತ್ತಿದ್ದಿತು. ಹಳ್ಳಿಗಳಲ್ಲಿ ಸುವ್ಯವಸ್ಥಿತವಾದ ಜಾತಿವಿಶಿಷ್ಟ ಸಮಾಜಪದ್ಧತಿ ನೆಲೆಗೊಂಡಿದ್ದಿತು. ಲೌಕಿಕ ಜೀವನಕ್ಕಾಗಿ ಅವಲಂಬಿಸಿದ ಉದ್ಯಮಗಳನ್ನನುಸರಿಸಿ ಜಾತಿಗಳು ನಿರ್ಮಿಟ್ಟಿದ್ದರೂ, ಎಲ್ಲ ಜನರ ಅಧ್ಯಾತ್ಮಿಕ ಆದರ್ಶ ಒಂದೆ ಬಗೆಯದಾಗಿದ್ದಿತು. ಇಂದಿನ ದೇಶಾಭಿಮಾನ ರಾಷ್ಟ್ರಾಭಿಮಾನಗಳಿಗೆ ಅಂದು ಎಡೆಯಿರದಿದ್ದರೂ ದೇಶಾಭಿಮಾನ, ಧರ್ಮಾಭಿಮಾನಗಳು ಜೀವಂತವಾಗಿ ಕಾರ್ಯ ಮಾಡುತ್ತಿದ್ದುವು. ಲೌಕಿಕ ಸುಖ-ಶಾಂತಿಗಳನ್ನೊದಗಿಸಬಲ್ಲ ದೊರೆಯೂ ದೇವರು; ಆಧ್ಯಾತ್ಮಿಕ ಸುಖ-ಶಾಂತಿಗಳ ದಾರಿಯನ್ನು ತೋರಿಸಬಲ್ಲ ಗುರುವೂ ದೇವರು: ದೇವರಂತೂ ಸರಿಯೆ ಪ್ರತಿಯೊಂದು ಹಳ್ಳಿಯೂ ದೊರೆ-ಗುರುಗಳ ದಂಡವನ್ನು ಒಪ್ಪಿಕೊಂಡು ನಡೆಯುತ್ತಿದ್ದಿತು.

ಉಪಜೀವನಾನಶ್ಯಕ ಉದ್ಯಮ-ವ್ಯವಸಾಯಗಳ ಸಂಸ್ಕಾರ, ಪರಂಪರೆಯಿಂದಲೆ ದೊರೆಯುತ್ತಿದ್ದಿತು. ಉದ್ಯಮಾನುಸಾರ ಜಾತಿಗಳು ವಿಘಟ್ಟಿಸಿದ ಂದ ಒಂದು ಜಾತಿಯವರ ಉದ್ಯಮವನ್ನು ಇನ್ನೊಂದು ಜಾತಿಯವರು ಕೈ ಕೊಳ್ಳುತ್ತಿರಲಿಲ್ಲ; ಆದುದರಿಂದ ಮೇಲಾಟ-ಮತ್ಸರಗಳಿಗೆ ಎಡೆಯಿರಲಿಲ್ಲ. ಲೌಕಿಕ ಆಧ್ಯಾತ್ಮಿಕ ಆದರ್ಶಗಳು ಸ್ಪಷ್ಟವಾಗಿ ಇದ್ದುದರಿಂದ, ಅದರ ವಿಷಯದಲ್ಲಿ ದೃಢವಾದ ನಂಬುಗೆ ಜಾಗೃತವಾದ ಅಭಿಮಾನ ನಂದಾದೀಪದಂತೆ ಬೆಳಗುತ್ತಿದ್ದುವು. ಈ ನಂಬುಗೆ ಅಭಿಮಾನಗಳು ನಂದದಂತೆ ಸಾಮೂಹಿಕ ಶಿಕ್ಷಣಸಂಸ್ಥೆಗಳೂ ತಲೆಯಿಂದ ತಲೆಗೆ ಕಾರ್ಯಮಾಡುತ್ತ ಬಂದಿದ್ದುವು. ಲೌಕಿಕ ಶಾಂತಿಗೆ ಬಂಡವಾಳ ಬಲವೆಂದೂ ಆಧ್ಯಾತ್ಮಿಕ ಶಾಂತಿಗೆ ಬಂಡವಾಳ ಜ್ಞಾನವೆಂದೂ ಆ ಶಿಕ್ಷಣಸಂಸ್ಥೆಗಳು ಉಪದೇಶ, ಪ್ರಚಾರ ಮಾಡುತ್ತಿದ್ದುವು. ಬಲದ ಪ್ರತೀಕವಾಗಿ ದೊರೆಯನ್ನೂ ಜ್ಞಾನಕ್ಕೆ ಪ್ರತೀಕವೆಂದು ಗುರುವನ್ನೂ ಭಕ್ತಿಯಿಂದ ಕಾಣುವ ಸಂಪ್ರದಾಯ ಅಂದಿನ ಹಳ್ಳಿಗಳಲ್ಲಿತ್ತು. ದೊರೆಯುಂತಾಗಬೇಕೆಂಬ ಅಪೇಕ್ಷೆ ಅವರ ಬಲಸಿದ್ಧಿಗೆ ಕಾರಣವಾಗಿತ್ತು. ಗುರುವಿನಂತಾಗಬೇಕೆಂಬ ಅವರ ಬಯಕೆ ಜ್ಞಾನಸಿದ್ಧಿಗೆ ಕಾರಣವಾಗಿತ್ತು. ಉದ್ಯಮಗಾರರಿಗೂ ಒಕ್ಕಲಿಗರಿಗೂ ಅನ್ನದ ಚಿಂತೆ ಇರಲಿಲ್ಲ. ಆವರು ಉಂಡು ಹೆಚ್ಚಾದುದು ಸಮಾಜಸಂರಕ್ಷಕ ಸಂಸ್ಥೆಗಳಿಗೂ ಶೈಕ್ಷಣಿಕ ಸಂಸ್ಥೆಗಳಿಗೂ ಹಂಚುವಂತೆ ವ್ಯವಸ್ಥೆಯಿದ್ದಿತು. ದಾನ ಪ್ರದಾನಗಳು ಕರ್ತವ್ಯವೆಂಬ ತಿಳಿವಳಿಕೆ ಅಂದಿನ ಜನರಲ್ಲಿ ಇದ್ದುದರಿಂದ ಹೀನ. ದೀನರಿಗೂ ಪಾಪಿ-ಪರದೇಶಿಗಳಿಗೂ ಉಪವಾಸವಿರಬೇಕಾದ ಸಂದರ್ಭವಿರಲಿಲ್ಲ. ಮುದ್ದು ಸಂಗ್ರಹಿಸಿಡುವ ಯಂತ್ರಗಳಾಗಿದ್ದಿಲ್ಲ ಅಂದಿನ ಸಿರಿವಂತರು; ಸಂಗ್ರಹಿಸಿದ ದುಡ್ಡನ್ನು ಸಮಾಜ ಕಲ್ಯಾಣಕಾರ್ಯಗಳಿಗಾಗಿ ಬಿತ್ತುತ್ತಿದ್ದರು. ಸಾರ್ವಜನಿಕ ದೇವಾಲಯ, ಧರ್ಮಚ್ಛತ್ರ, ಕೆರೆ, ಕಾಲುವೆ, ಬಾವಿಗಳು ಇವರ ಹಣದಿಂದ ನಿರ್ಮಾಣವಾಗುತ್ತಿದ್ದುವು. ಪಾಠಶಾಲೆ, ಅನ್ನಛತ್ರ, ಗುರುಕುಲಗಳು ಇವರ ಧರ್ಮದಿಂದ ನಡೆಯುತ್ತಿದ್ದುವು. ಲಲಿತಕಲೆಗಳ ಅಭಿವೃದ್ಧಿಗೂ ಈ ಸಿರಿವಂತರ ಸಂಪತ್ತು ನೆಚ್ಚಲಾಗುತ್ತಿದ್ದಿತು. ಸಂರಕ್ಷಣೆಯು ಹೊಣೆ ದೊರೆಯ ಮೇಲೆ, ಸಂಸ್ಕೃತಿ ಪ್ರಚಾರದ ಹೊಣೆ ಗುರುಗಳ ಮೇಲೆ. ಈ ಹೊಣೆಗಾರಿಕೆಗೆ ಬೇಕಾಗುವ ಪಡಿ-ಪದಾರ್ಥಗಳನ್ನೂ ಹಣ-ಹೊನ್ನುಗಳನ್ನೂ ಗಳಿಸಿ ಕೊಡುವ ಹೊಣೆ ಜನತೆಯ ತಲೆಯ ಮೇಲೆ. ಈ ಬಗೆಯ ಕಾರ್ಯದ ಹಂಚಿಕೆಯು ಮೂಲಕ ಸಮಾಜವು ಸುಸಂಘಟಿತವಾಗಿದ್ದಿತು. ಅನ್ಯೋನ್ಯ ಆಶ್ರಯಭಾವದ ಮೂಲಕ ಒಬ್ಬರನ್ನೊಬ್ಬರು ಆತ್ಮೀಯರಂತೆಯೆ ತಿಳಿದುಕೊಳ್ಳುತ್ತಿದ್ದರು. ರಾಜ-ರಾಜರಲ್ಲಿ ಕಾರಣಾಂತರಗಳಿಂದ ಯುದ್ಧಗಳು ನಡೆಯುತ್ತಿರಬಹುದಾದರೂ, ಹಳ್ಳಿಗರು ಆದರ ದುಷ್ಪರಿಣಾಮವನ್ನು ಅನುಭವಿಸಬೇಕಾಗಿರಲಿಲ್ಲ. ಬಲಶಾಲಿಯೆ ದೊರೆಯಾಗಬಲ್ಲನೆಂಬ ತಿಳಿವಳಿಕೆ ಮನದಟ್ಟಾದುದರಿಂದ, ಒಬ್ಬ ಬಲಹೀನನಾದ ದೊರೆ ಯುದ್ಧದಲ್ಲಿ ಸೋತು ಬೇರೆ ಬಲಿಷ್ಠನಾದ ದೊರೆ ಗೆದ್ದು ಆಳತೊಡಗಿದರೆ, ಸಮಾಜವು ಅದನ್ನು ವಿಶೇಷವೆಂದು ಭಾವಿಸುತ್ತಿರಲಿಲ್ಲ. ಮೊದಲಿನ ದೊರೆಯಂತೆಯೆ ಅವನನ್ನು ಭಕ್ತಿಯಿಂದ ಕಾಣುತ್ತಿದ್ದರು. ಇಂದಿನ ನಮ್ಮ ರೀತಿ-ನೀತಿಗಳಿಗೆ ಇದು ವಿಚಿತ್ರವಾಗಿ ಕಾಣುತ್ತಿದ್ದರೂ, ಅಂದಿನ ಸಮಾಜದ ಸುಪ್ರಶಾಂತಿಗೆ ಇದು ಅನುಕೂಲವಾಗಿ ಪರಿಣಮಿಸುತ್ತಿತ್ತು.

ಹಳ್ಳಿಯ ಗೌಡನಿಗೆ ಸಮಾಜಸಂರಕ್ಷಣದ ಬಗೆಗಿರುವ ಕರ್ತವ್ಯದ ಅರಿವು ಇರುತ್ತಿದ್ದಿತು. ಕರ್ತವ್ಯವನ್ನು ಅರಿತವನು ಅವಶ್ಯಕ ಬಲವನ್ನು ಸಂಧನೆಮಾಡಿಕೊಂಡಿರುತ್ತಿದ್ದನು. ಕರ್ತವ್ಯಕ್ಕೆ ತಕ್ಕ ಬಲಹೀನನಾಗುವುದೂ ಸಹಜ; ಸಮಾಜಕ್ಕೆ ಬೇಡವಾಗುವುದೂ ಸ್ವಾಭಾವಿಕ. ಇಂತಹ ಅಧಿಕಾರವನ್ನು ಎರಡನೆಯ ಬಲಿಷ್ಠ ಗೌಡ ಆಕ್ರಮಿಸಿದರೆ ಸಮಾಜ ವಿಪರೀತ ಭಾವಿಸಲಿಕ್ಕೆ ಕಾರಣವೇನು? ಇವೆಲ್ಲವುಗಳ ತಿಳಿವಳಿಕೆ ಅಂದಿನ ಹಳ್ಳಿಗರಲ್ಲಿ ಚೆನ್ನಾಗಿ ಇರುತ್ತಿದ್ದಿತು. ಬೇರೆ ಬೇರೆ ಜಾತಿಯ ಮುಂದಾಳುಗಳು ತಂತಮ್ಮ ಜನರಲ್ಲಿ ಈ ತಿಳಿವಳಿಕೆಯ ಹಬ್ಬುಗೆಗೆ ಕಾರಣರಾಗಿ ಇರುತ್ತಿದ್ದರು.

ಸಮಾಜದ ಸುವ್ಯವಸ್ಥೆಗಾಗಿ ಬೇಕಾಗುವ ತ್ಯಾಗ, ಸೇವೆ, ಉಪಕಾರ, ಸಹಕಾರ, ಕರುಣೆ, ಸಹಾನುಭೂತಿಗಳು ಜನರ ಎದೆಯಲ್ಲಿ ನೆಲೆಗೊಳ್ಳುವಂತೆ ಜೀವನನೀತಿಯನ್ನು ತಿಳುಹಲು ಪುರಾಣ, ಕೀರ್ತನ, ಕತೆಗಾರಿಕೆ, ಲಾವಣಿ ಹಾಡಿಕೆ ಮೊದಲಾದ ಸಂಸ್ಥೆಗಳು ಕಾರ್ಯಮಾಡುತ್ತಿದ್ದುವು. ಇವು ಇತಿಹಾಸ, ಪುರಾಣ, ವೀರಚರಿತ್ರ, ಮಹಾತ್ಮರ, ಚರಿತ್ರೆಗಳನ್ನು ಜನರಿಗೆ ಪರಿಚಯಮಾಡಿಕೊಡುತ್ತಿದ್ದುವಲ್ಲದೆ ಸಾಮಾಜಿಕ ಆಚಾರ-ವಿಚಾರಗಳನ್ನು ಬೋಧಿಸುತ್ತಿದ್ದುವು. ಅಕ್ಷರ ಬಾರದವರು ಬಹಳ ಜನರು ಇರಬಹುದಾದರೂ ಮನುಷ್ಯತ್ವಸಿದ್ಧಿಗೆ ಅಕ್ಷರ ಕಲಿಯುವುದೇ ಮುಖ್ಯ ಸಾಧನವೆಂದು ಅಂದಿನವರ ಕಲ್ಪನೆಯಿರಲಿಲ್ಲ. ಅಕ್ಷರ ಬಾರದವರಿಗೂ ಲೌಕಿಕ ಜೀವನದ ಪದಗಾರಿಕೆ ಆಧ್ಯಾತ್ಮಿಕ ಜೀವನದ ದಾರಿ ಗೊತ್ತಿರುವಂತೆ, ಅಂದಿನ ಸಂಸ್ಕೃತಿ-ಪ್ರಚಾರಕ ಸಂಘಗಳು ಸದಾ ಜಾಗ್ರತೆ ತೆಗೆದುಕೊಳ್ಳುತ್ತಿದ್ದುವು. ಗರಡಿ-ಮನೆಗಳಿಲ್ಲದ ಹಳ್ಳಿಗಳಿರುತ್ತಿರಲಿಲ್ಲ; ಕತ್ತಿ-ಭಲ್ಲೆಗಳ ಕೈವರಸಗಳನ್ನರಿಯದ ಗಂಡುಸಿರುತ್ತಿರಲಿಲ್ಲ. ಕುದುರೆ ಏರಾಟ, ಕುಸ್ತಿಯಾಟ ಬಲ್ಲವರು ಬೇಕಾದಷ್ಟು ಜನರು. ಮನೆತನದ ಸಂಪ್ರದಾಯಗಳನ್ನು ಅಚ್ಚುಕಟ್ಟಾಗಿ ಸಾಗಿಸಿಕೊಂಡು, ಗಂಡಸಿನಿಗೆ ಅನುಕೂಲ ಹೆಂಡತಿಯಾಗಿ, ಸುಸಂತಾನಕ್ಕೆ ತಕ್ಕ ತಾಯಿಯಾಗಿ ಹಳ್ಳಿಯ ಹೆಂಗುಸರು ನಿಷ್ಣಾತ ಕರ್ಮಯೋಗಿಗಳಾಗಿ ಬಾಳುತ್ತಿದ್ದರು. ಇಂತಹ ಬಲಸಿದ್ಧಿ, ಜ್ಞಾನಲಾಲಸೆ, ಕರ್ತವ್ಯಬುದ್ಧಿಗಳ ನೆರವಿನಿಂದಲೆ ಅಂದಿನ ಹಳ್ಳಿಗರು ಸುಖ-ಸಂಕಥಾವಿನೋದದಿಂದ ಜೀವಿಸುತ್ತಲಿದ್ದರು. ನೃಪತುಂಗನು ಹೇಳುವಂತೆ ಕಾರ್ತವರಲ್ಲದೆ ಮತ್ತಂ ಪೆರರುಂ ತಮ್ಮ ನುಡಿಯೊಳ್ಳೆರ್ ಜಾಣರಾಗಿ ಕೆರುವಕ್ಕಳುಂ ಆ ಮೂಗರುಂ ವಿಶೇಷಮುಂ ಶಾಸ್ತ್ರಗಾಂ ಅರಿಪಲಾ ನೆರೆಸವರ್, ಆಗಿ ನಮ್ಮ ಹಳ್ಳಿಗರು ಇದ್ದರು. ಈಗ ಹೇಗಿದ್ದಾರೆ? ನೋಡಬೇಕಾದರೆ ಹಳ್ಳಿಗಳಿಗೆ ಹೋಗಿರಿ!

—ಸಂಪಾದಕ



೧. ಆಟದ ಬಾಂಬು !

ಜಪಾನಿನ ಮೇಲೆ ಅಮೇರಿಕೆಯವರು ಪ್ರಯೋಗಿಸಿದ ಅಟಂ-ಬೆಂಕಿ-ಗುಂಡ (atom bomb) ನು ಎಷ್ಟೆಂದಿನಿಂದ ನೋಡಿದಲ್ಲೆಲ್ಲ ಈ ಹೊಸ ಅಸ್ತ್ರಕ್ಕಾಗಿ ಆಶ್ಚರ್ಯ-ಆದರಗಳನ್ನೆ ಜನರು ವ್ಯಕ್ತಮಾಡುತ್ತಲಿದ್ದಾರೆ. ಎಲೆಲೆ! ಮಾನವಾ! ಬೆಂಕಿಗೆ ಬೆರಗಾದನಾ! ಸ್ವಲ್ಪದರಲ್ಲಿಯೆ ನೋತು ಶರಣು ಹೋದ. ಇಷ್ಟು ನಿನ್ನ ಬುದ್ಧಿಶಕ್ತಿಗಾಗಿ ಕಸಿಕರು ಉಂಟೇನಯ್ಯ! ಕವಿಗಳಿಗೆ ಕವಿಗಳೆಂಬ ಕರುಳಿಸಲ್ಲಿ! ಸಾಮಾನ್ಯ ಮಾನವನಷ್ಟೆ ಅಲ್ಲ, ಬುದ್ಧಿವಂತರೆಂದು ಹೆಸರಾದವರು ಕೂಡ, ಇಷ್ಟೇಕೆ?—ಮಿದುಳಿನ ಮಾಯಾವಿ ಡಾಪ ಕಾಜಾಜಿ, ಸಾಕ್ಷಾತ್ ಜ್ಞಾನಪೀಠ ಪ್ರಾಜ ಸರ್ವಾಲಾಚಾರಿಯರವರು ಕೂಡ ಹಿಂದಿನ ಕಾಲದಲ್ಲಿ ಸಮ್ಮಲ್ಲೂ ಅಸ್ತ್ರಗಳಿದ್ದುವೆಂಬ ಹೆಮ್ಮೆಯ ಮಾತೆಯಲ್ಲಿ ಇಂದು ತಮಗಾದ ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ! ಹರಹರಾ! ಏನಿಂತು ಬುದ್ಧೀಜ್ಞಾ! ಪುರಾಣಕಾಲದ ಸಮಾಧಾನ ಯಾಕೆ? ಇದಿನ ಈ ಬೆಂಕಿಗುಂಡಿನ ಯೋಗ್ಯತೆ ಏನು? ಇದು ಊರನ್ನು ನಾಶಮಾಡಿತಂತೆ, ೨೦-೬೦ ಸಾವಿರ ಜನರನ್ನು ಕೊಂದಿತಂತೆ! ಉಸುರು! ಇಂತಹ ಚಿಲ್ಲರೆ ಕೆಲಸಕ್ಕಾಗಿ ಮುಂಗರಾಯನಿಗೆ ಕಿರಸ್ಕಾರವಿದೆ. ಇಷ್ಟಕ್ಕಿಂತಲೂ ಸಾವಿರಪಟ್ಟು ಶ್ರೇಷ್ಠನಾದ ಅಸ್ತ್ರವಿನ ಹಿಂದುಸ್ತಾನದಲ್ಲಿಯೆ ಇದೆ ಎಂಬ ಅರಿವು ಸ್ಪಷ್ಟ ಹೆಮ್ಮೆ ಮುಂಗರಾಯನಿಗಿವೆ. ಈ ಅಸ್ತ್ರದಿಂದ ಸಲ ಒಂದು ನಗರವಲ್ಲ, ಇಡಿಯ ದೇಶಕ್ಕೆ ದೇಶವೆ ಸುಟ್ಟು ಹೋಗುವುದು; ಇದರ ಬೆಂಕಿ ಕೆಲವರ್ಷ ಉರಿಯುತ್ತಿರುವುದು. ಇದರ ಮುಂದೆ ಆ ಬಾಂಬು ಎತ್ತ? ೧೯೪೨ರ ಆಗಸ್ಟದಿಂದ ಇನ್ನ ವರೆಗೆ ಒಂದೇ ಸವನೆ ಧಗಧಗಿಸುತ್ತಿದ್ದ ಗನನ್ನೆ, ಅಸ್ತ್ರಪಮುಂದೆ ಆಟಂ ಬಾಂಬು ಎತ್ತ? ನು ಮುಂಗರಾಯನು ಇಡಿಯ ಜಗತ್ತಿಗೇ ಏಲನ್ನು ಕೊಡಿಯುತ್ತಾನೆ!

ಆಟಂ ಬಾಂಬೇ, ನಡೆ, ಹೋಗೊ!
ಇದೊ! ಅರ್ಡಿನನ್ಸ್ ಲಿನಲಿಫ್‌ಗೊ!

× × × ×

೨. ಅಹಿಂಸಾತ್ಮಕ ಯುದ್ಧ

ಯುರೋಪದಲ್ಲಿ ಯುದ್ಧ ಮುಗಿಯಿತು; ಜಗತ್ತಿನ ಯುದ್ಧ ನಿಂತಿತು; ಆದರೆ ಹಿಂದುಸ್ತಾನಕ್ಕೆ ಯುದ್ಧ ಬಂದಿತು! ಆದೆಂತಹ ಯುದ್ಧ! ಸಾವಿರಾರು ವರ್ಷಗಳ ಉದಾತ್ತ ಸಂಸ್ಕೃತಿಯಲ್ಲಿ ಬೆಳೆದ ಭಾರತವು ಕಾಡು ಯುರೋಪದಂತೆ ಹಿಂಸಾತ್ಮಕ ಯುದ್ಧವನ್ನಾಡುವುದೆ? ಛೆ! ಛೂ!—ಎಂದರೆ ಎಂದಿಗೂ ಇಲ್ಲ ಎಂದು ಅರ್ಥ. ಯುರೋಪದ ಯುದ್ಧದಿಂದ ಇಡಿಯ ಜಗತ್ತಿಗೇ ಹಿಂಸೆಯಾಯಿತು ಆದರೆ ಹಿಂಸೆ ಎಂಬುದು ಹಿಂದುಸ್ತಾನದಲ್ಲಿ ಹೆಸರಿಗೆ ಕೂಡ ಇಲ್ಲ! ಹಿಂದುಸ್ತಾನದ ಯುದ್ಧದಿಂದ ಜಗತ್ತಿಗೆ ಹಿಂಸೆಯಂತೂ ಸೂರದಲ್ಲುಳಿಯಲಿ; ತನ್ನಿಂದ ದ್ವನಿವಾಗಿ ಇಡಿಯ ಜಗತ್ತು ಅದನ್ನು ನೋಡಿ ನಕ್ಕು ನಲಿದಾಡಬೇಕು, ಅಂತಹ ಯುದ್ಧವನ್ನಾಡುವುದು ನನ್ನ ದೇಶ. ಎಂತಹ ಯುದ್ಧ! ಇಡಿಯ ಜಗತ್ತಿನಲ್ಲಿ ಹಿಂದುಸ್ತಾನದ ಹೆಸರು ಡಂಗುರ ಸಾರಬೇಕು. ಎಂತಹ ಯುದ್ಧ? ಅದನ್ನು ನೋಡಿ ಇಡಿಯ ಜಗತ್ತು ಹಸೋನ್ಮತ್ತವಾಗಿ ಕುಣಿದಾಡಬೇಕು. ಮತ್ತೂ ಎಂತಹ ಯುದ್ಧ? ಅದನ್ನು ನೋಡಿ ಇಡಿಯ ಜಗತ್ತು ಖಾರ ಕಂಡುಕೊಳ್ಳಬೇಕು, ಬುದ್ಧಿಗಲಿಯಬೇಕು. ಅಂತಹ ಯುದ್ಧವನ್ನು ಅಲ್ಪಾವಧಿಯಲ್ಲಿಯೆ ಹಿಂದುಸ್ತಾನವು ನಾಡಿನುದ್ದ ಹೂಡುವುದೆಂದು ಮುಂಗರಾಯನು ಕಿರಿಕೆಂದು, ತುರಿತುರಿಸಿ, ಟಣಪಣನೆ ಕುಣಿಕುಣಿದು ಸಾರಬಯಸಿದ್ದಾನೆ. ಏಳಿರಿ, ಡಂಗುರವನ್ನು ಕೇಳಿರಿ,

ಬಾದಿತು ಬಂದಿತು ಯುದ್ಧಾಟ
ಜಾತಿ-ಜಾತಿಗಳ ಗುದ್ದಾಟ
ಹೆಸರಿಗೆ ತಾನದು ಚುನಾವಣೆ
ಹಸರಿಪ ಪಿಡುಗದು, ನಸ್ಸಾಣೆ !

\+ + + +

೩. ದೂರೋ ಹಟೋ !

ಮಿತ್ರರಿಗೆ ಜಪಾನವು ಶರಣು ಒಂಪದಿನಿಂದ ಮಿತ್ರರಾಷ್ಟ್ರಗಳಿಲ್ಲವೂ ಮುಂಗರಾಯನಿಗೆ ಶರಣು ಬಂದಿವೆ. ಜಪಾನದ ಆರಸನನ್ನು ಕಿತ್ತೊಗೆಯಬೇಕು ಎಂದು ರಶಿಯಾ-ಚೀನಾಗಳ ಅಭ್ಯರ್ಥನೆ; ಜಪಾನದಲ್ಲಿ ಅರಸೊತ್ತಿಗೆಯನ್ನು ಉಳಿಸಲೇ ಬೇಕು ಎಂದು ಇಂಗ್ಲಂಡ್-ಅಮೆರಿಕೆಗಳ ಹಟ. ಈ ತಿಕ್ಕಾಟವನ್ನು ಹೇಗಾದರೂ ತಣಿಸಬೇಕೆಂದು "ಬಿಗ್ಗ ಪೋರ್"ಗಳು ಮುಂಗರಾಯನನ್ನು ಪೊರೆಹೊಕ್ಕಿವೆ. ನಿಜವಾಗಿ ನೋಡಿದರೆ ಜಪಾನದ ಅರಸೊತ್ತಿಗೆ ತಾನಾಗಿಯೆ ನಾಯವಾಗಿವೆ ಎಂದು ಮುಂಗರಾಯನ ಅಭಿಪ್ರಾಯ. ಅದು ಹೇಗೆಂದರೆ; ಯುದ್ಧದಲ್ಲಿ ಸೋತೊಡನೆ ಜಪಾನದ ಅರಸನಾದ ಹಿರೋ ಹಿಟೋನ ಬುನಾದಿಯಂತಿದ್ದ ಹಿರೋ (Hero=ವೀರ) ಕಳಚಿ ಬಿದ್ದಿತು, ಜಪಾನಿನ ಅರಸೊತ್ತಿಗೆಯ ಮಟ್ಟಿಗೆ ಈಗ ಉಳಿದದ್ದೆಂದರೆ ಹಿಟೊ ಮಾತ್ರ. ಶರಣು ಬರುವಾಗ ಈ 'ಹಿಟೊ'ವನ್ನೂ ಮಿತ್ರರಾಷ್ಟ್ರಗಳಿಗೆ ಒಪ್ಪಿಸಬೇಕಾಗುವುದು. ಇಂತಿದು ಜಪಾನಿನ ಅರಸೊತ್ತಿಗೆಯ ಹಾಡು. ಆದರೆ ಮುಖ್ಯ ತೊಂದರೆ ಎಂದರೆ, ಮಿತ್ರರಾಷ್ಟ್ರಗಳಲ್ಲಿ ಈ 'ಹಿಟೊ'ವನ್ನು ಯಾರು ವಹಿಸಬೇಕು? ಇಂಗ್ಲಂಡ್-ಅಮೆರಿಕೆಗಳು ವಹಿಸಿದರೆ 'ಅಟಂ ಬಾಂಬ್ ಹಿಟೊ' ಎಂಬ ಪರಿಸ್ಥಿತಿ; ರಶಿಯಾ-ಚೀನಾಗಳು ವಹಿಸುವುದಾದರೆ 'ಬೇಕ್ಕ್-ಸ್ಟಾಲಿನ್'ರಲ್ಲಿ 'ಹಿಟೊ' ಪ್ರಾರಂಭವಾಗುವುದು. ಈ ಸೂಕ್ಷ್ಮವನ್ನೆಲ್ಲ ಅರಿತು ಮುಂಗರಾಯನು 'ಬಿಗಿದ ಪೋರ್'ಗಳಿಗೆ ನಿರ್ವಾಕ್ಷಿಣ್ಯವಾಗಿ 'ದೂರೊ ಹಟೊ' ಎಂಬ ನಿರ್ಣಯವನ್ನು ಕೊಟ್ಟಿದ್ದಾನೆ.

\+ + +

೪. ತಾಜಾ ಕಾಲಂ

೧೯೪೨ ಆಗಸ್ಟದ ಗಲಭೆಗಳ ಹೊಣೆಯನ್ನು ಹೊರುವುದಕ್ಕೆ ಇತ್ತೀಚೆಗೆ ಮುಂಬಾಳುಗಳಲ್ಲಿ ಮೇಲಾಟ ನಡೆದಿದೆಯಷ್ಟೆ? ಈ ವಿಷಯವಾಗಿ ಮುಂಗರಾಯನು ಎಚ್ಚರವನ್ನುಕೊಡಬಯಸಿದ್ದಾನೆ. ಇತ್ತಿತ್ತಲಾಗಿ ಹೊಣ ಹೊರುವುದಕ್ಕೆ ಸಾವಿರಾರು ಅರ್ಜಿಗಳು ಬರುತ್ತಲಿವೆ. ಅದರೆ ಆಗಿ ಹೋದುದರ ಹೊಣ ಹೊರಲು ನಾಲ್ಕೇ ಜನರು ಸಾಕಾಪೆಯಂದ ಹೆಚ್ಚಿನ ಯಾವ ಅರ್ಜಿಗಳನ್ನೂ ಗಮನಕ್ಕೆ ತಂದು ಕೊಳ್ಳುವುದರಲ್ಲಿ ಬರುವುದಿಲ್ಲ.

ರಘುಪತಿ ರಾಘವ ರಾಜಾರಾಮು !
ಹೊಣೆ ಹೊರುವರ್ಜಿಗೆ ಇನ್ನು ನಿಷಾನು !

ಸಾಹಿತ್ಯ ವಿಹಾರ

" ವಿಹಾರಿ "

ಪ್ರಬುದ್ಧ ಕರ್ಣಾಟಕದ ಬೆಳ್ಳಿಯ ಸಂಚಿಕೆ; ಕೈಲಾಸಂ ಅವರು, ಅವರ ನಾಟಕಗಳು; ಮನೋಹರ ಗ್ರಂಥಮಾಲೆಯವರ ಮೇಲಾಟದ ಯೋಜನೆ; ದಿವಂಗತ ಕೆರೂರ ವಾಸುದೇವಾಚಾರ್ಯರ ನಲದಮಯಂತಿ ನಾಟಕ.

ಕಳೆದ ಇಪ್ಪತ್ತೈದು ವರ್ಷಗಳಿಂದ ಹೊಸಗನ್ನಡ ಸಾಹಿತ್ಯಕ್ಕೆ ಅದರಂತೆ ಇತ್ತೀಚೆಗೆ ಶಾಸ್ತ್ರ-ವಿಜ್ಞಾನ ವಿಚಾರಗಳಿಗೆ ಪ್ರೋತ್ಸಾಹನ ಪರವಾದ ಸೇವೆಯನ್ನು ಸಂತತವಾಗಿ ಸಲ್ಲಿಸಿದ ಪತ್ರಿಕೆಯೆಂದರೆ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಿಂದ ಸ್ಥಾಪಿಸಲ್ಪಟ್ಟು ಈಗ ಕೆಲವು ವರ್ಷಗಳಿಂದ ಮೈಸೂರು ವಿಶ್ವವಿದ್ಯಾಲಯದಿಂದ ನಡೆಸಲ್ಪಡುತ್ತಿದ್ದ **ಪ್ರಬುದ್ಧಕರ್ನಾಟಕ**. ಹೊಸಗನ್ನಡ ಸಾಹಿತ್ಯಕ್ಕೆ ಈ ಪತ್ರಿಕೆಯು ಮಾಡಿದ ಉಪಕಾರ ದೊಡ್ಡದು. ಇಂದಿನ ನಮ್ಮ ಸಾಹಿತ್ಯದಲ್ಲಿ ಕಂಡು ಬರುವ ಹೊಸ ಚೇತನವು ಸುಮಾರಾಗಿ ಇದೇ ಇಪ್ಪತ್ತೈದು ವರ್ಷಗಳಲ್ಲಿ ಬೆಳೆದು ಬಂದುದೆಂಬ ಮಾತನ್ನು ನಾವು ಲಕ್ಷ್ಯದಲ್ಲಿರಿಸಿದರೆ, ಪ್ರಬುದ್ಧಕರ್ಣಾಟಕದ ಸ್ಥಾಪನೆಗೂ ಅದರ ಬೆಳೆವಣಿಗೆಯಂತೆ ಅದು ಗಳಿಸಿದ ಪ್ರೀತ್ಯಾದರಗಳಿಗೂ ಒಂದು ನಿಕಟವಾದ ಸಂಬಂಧವಿದೆ ಎಂಬುದು ಸ್ಪಷ್ಟವಾಗದಿರದು. ಈ ಪತ್ರಿಕೆಯು ಈ ಹೊಸ ಚೇತನದ ಪ್ರತೀಕವಾಗಿಯೂ, ಅದಕ್ಕೊಂದು ಅವಶ್ಯವಾದ ಮುಖಪತ್ರವಾಗಿಯೂ ಹೊರಬಂದಿತೆಂದು ಸಹಜವಾಗಿಯೇ ಹೇಳಬಹುದು. ಕಳೆದ ಕಾಲುಶತಮಾನದಲ್ಲಿ ಪ್ರಬುದ್ಧಕರ್ಣಾಟಕವು ಕನ್ನಡದ ಶಕ್ತಿಗೆ ಸಾಕ್ಷಿಯಾಯಿತು; ಸುಪ್ತ ಸಾಹಿತ್ಯಸತ್ತ್ವಕ್ಕೆ ಜಾಗೃತಿ ಸಾಧನವಾಯಿತು; ಹೊರಹೊಮ್ಮಲಿಸಗುತ್ತಿದ್ದ ಹೊಸ ಭಾವನಾವೇಶಗಳಿಗೆ ನಾಲಗೆಯಾಯಿತು.

ಮುಖ್ಯವಾಗಿ ಪ್ರಬುದ್ಧಕರ್ಣಾಟಕವು ಮೂರು ಮಹತ್ತರ ಕಾರ್ಯಗಳನ್ನು ಸಾಧಿಸಿತು: ಹೊಸದಾರಿಗಳಲ್ಲಿ ಕಾಲಿಡುತ್ತಿದ್ದ ಸಾಹಿತ್ಯಕ್ಕೆ ತೀರ ಅವಶ್ಯವಾದ ಪ್ರೋತ್ಸಾಹನವನ್ನು ನೀಡಿತು ಕನ್ನಡ ಗದ್ಯಶೈಲಿಗೊಂದು ಸ್ಥಿರಸ್ವರೂಪವನ್ನು ತಂದು ಕೊಟ್ಟಿತು. ಎಷ್ಟೇ ಅನುಷಂಗಿಕವಾಗಿಯಾದರೂ, ಸಾಹಿತ್ಯದ ಬೆಳೆವಣಿಗೆಗೆ ತೀರ ಅನಿವಾರ್ಯವಾದ ಹೊಸನಿಮರ್ಶನಪದ್ಧತಿಯನ್ನು ಬೆಳೆಸಿಕೊಂಡು ಬಂದಿತು. ಕನ್ನಡ ಪತ್ರಿಕೆಗಳಲ್ಲಿ ಪ್ರಬುದ್ಧಕರ್ಣಾಟಕವು ಒಂದು ಹೆಮ್ಮೆಯ ಸ್ಥಾನವನ್ನು ಗಳಿಸಿಕೊಂಡಿದೆ ಎಂಬುದು ಯಾರಾದರೂ ಒಪ್ಪುವ ಮಾತಾಗಿದೆ.

ಇದೀಗ ಈ ಪತ್ರಿಕೆಯ ಬೆಳ್ಳಿನು ಹಬ್ಬದ ಸಂಚಿಕೆಯು ಪ್ರಕಟವಾದದ್ದು ಪತ್ರಿಕೆಯ ಸ್ಥಾನ-ಮಾನಗಳನ್ನು ಸೇವೆ-ಸಾಧನೆಗಳನ್ನು ಕನ್ನಡ ಭಕ್ತರಿದುರಿಗಿಡಲು ಒಂದು ಒಳ್ಳೆಯ ಸಮಯವೇ ಸರಿ ಅದರಂತೆ ಅದೇ ಕಾಲಾವಕಾಶದಲ್ಲಿ ಕನ್ನಡ ಸಾಹಿತ್ಯದ ಮುನ್ನಡೆಯನ್ನು ಓದುಗರೆದುರಿಗಿಡುವುದೂ ಯೋಗ್ಯವಾದದ್ದೆ. ಈ ಕೆಲಸವನ್ನು ಈಗ ಹೊರಬಿದ್ದ ಬೆಳ್ಳಿಯ ಸಂಚಿಕೆಯು ನೆರವೇರಿಸಿದೆ. ಪತ್ರಿಕೆಯ ಸ್ವಂತ ವಿಷಯ, ಕನ್ನಡಸಾಹಿತ್ಯ ಮತ್ತು ಜನಜೀವನದ ಪ್ರಕಾರಗಳು, ಸೋದರ ಸಾಹಿತ್ಯಗಳು, ಲೋಕಪರಿಚಯ ಮತ್ತು ಮುತ್ತುಹವಳ ಎಂಬ ಐದು ತಲೆಕಟ್ಟುಗಳ ಕೆಳಗೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿಯ ಜೀವನದ ಬಹುಮುಖವಾದ ಮುನ್ನಡೆಯನ್ನು ವಿವರಿಸಲಾಗಿದೆ. ಕೆಲವು ಕಾರಣಗಳ ಮೂಲಕ ಬರಬೇಕಾಗಿದ್ದ ಇನ್ನೂ ಎಷ್ಟೋ ಲೇಖನಗಳು ಇಲ್ಲಿ ಬಂದಿಲ್ಲವೆಂದು ಸಂಪಾದಕರು ತಿಳಿಸಿದ್ದರೂ ಇಲ್ಲಿ ಪ್ರಕಟವಾದ ಲೇಖನಗಳನ್ನಷ್ಟೇ ತೆಗೆದುಕೊಂಡರೂ ಕನ್ನಡ ಓದುಗರಿಗೆ ಈ ಸಂಚಿಕೆಯ ಮೂಲಕವಾಗಿ ಒಳ್ಳೆಯ ರಸದೂಟವನ್ನು ಬಡಿಸಿಟ್ಟಹಾಗಿದೆ. ನಿಯಮಿತವಾದ ಮಿತಿಯಲ್ಲಿ ಅಚ್ಚುಕಟ್ಟಾಗಿ ವಿಷಯಗಳನ್ನು ವಿವರಿಸಲಾಗಿದೆ. ಸಾಹಿತ್ಯವಿಚಾರವನ್ನಷ್ಟೇ ನೋಡಿದರೂ ಕೂಡ ಶ್ರೀ. ಜಾಗೀರದಾರರ ಏಕಾಂಕ ನಾಟಕಗಳ ಬಗೆಯಲ್ಲಿಯ ವಿಮರ್ಶಾವಲೋಕನವೂ, ಶ್ರೀ. ಎನ್ ಕೆ. ಅವರ ಹೊಸಗನ್ನಡ ಗದ್ಯದ ವಿಸ್ತಾರವಿಚಾರವೂ, ಶ್ರೀ. ಮುಗಳಿ ಅವರ ಕನ್ನಡ ಕಾದಂಬರಿಗಳ ವಿಷಯವಾದ ವಿವೇಚನೆಯೂ, ಶ್ರೀ. ಗೋರೂರರು ಹೇಳವ ಸಣ್ಣಕತೆಗಳ ಕತೆಯೂ, ಶ್ರೀ. ಮಾಸ್ತಿ ನರಸಿಂಗರಾಯರು ಎತ್ತಿದ ಹೊಸಗನ್ನಡ ನಾಟಕಗಳ ಪ್ರಸಕ್ತಪವೂ, ಶ್ರೀ. ಪರಮೇಶ್ವರ ಭಟ್ಟರು ಬರೆದ ಜೀವನಚರಿತ್ರೆಗಳ ವಿಹಂಗಮಾವಲೋಕನವೂ, ಮಾರ್ಮಿಕವಾಗಿದ್ದು, ಸಾಧಿಸಿಮುದರ ಕಲ್ಪನೆಯನ್ನು ವಾಚಕರ ಮುಂದಿಟ್ಟು ಸಾಧಿಸಬೇಕಾದುದರ ಸೂಚನೆಯನ್ನು ಲೇಖಕರ ಎದುರಿಗೆ ಎತ್ತಿ ಹಿಡಿಯುವಂತಹವಾಗಿವೆ. ಇತಿಹಾಸ, ಸಂಶೋಧನೆ, ಶಾಸ್ತ್ರ, ವಿಜ್ಞಾನ ಧರ್ಮ, ಸಮಾಜವಿಚಾರ ಇನ್ನೆಷ್ಟೋ ವಿಷಯಗಳ ಮೇಲಿನ ವಿಚಾರಪೂರ್ಣವಾದ ಲೇಖನಗಳೊಂದಿಗೆ ಪ್ರಬುದ್ಧಕರ್ಣಾಟಕದ ಈ ವಿಶೇಷ ಸಂಚಿಕೆಯು ವಿಶೇಷವಾಗಿ ಜನರ ಪ್ರೀತಿ-ವಿಶ್ವಾಸಗಳಿಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ. " ಮುಂದಿನ ೨೫ ವರ್ಷಗಳ ವಿಶಾಲ ಆಧುನಿಕ ಜೀವನದ ಮಹಾಯೋಗಿಯಾಗಿ, ಮಹಾಸ್ಫೂರ್ತಿಯಾಗಿ, ಸಾಧಕವಾಗಿ, ಪ್ರೋತ್ಸಾಪಕವಾಗಿ ಪ್ರಬುದ್ಧಕರ್ಣಾಟಕವು ಶ್ರಮಿಸಲು ಶಕ್ಯವಾಗುವಂತೆ ಸಾಡಿನ ಎಲ್ಲ ಸಾಹಿತಿಗಳೂ ನೆರವಾಗಬೇಕು " ಎಂಬ ಸಂಪಾದಕರ ಬೇಡಿಕೆ ಅವರ ಬೇಡಿಕೆಯಾಗಿರದೆ ಕನ್ನಡದ ಕರೆಯಾಗಿದೆ: ಪ್ರಬುದ್ಧ ಕರ್ಣಾಟಕದ ಮೂಲಕವಾಗಿಯೇ ಜಾಗ್ರತಿಗೊಳಿಸಲ್ಪಟ್ಟ ಹೊಸ ಹವಣಿಕೆಗಳ ಹಾರಯಿಕೆಯಾಗಿದೆ. ಸಂಪಾದಕರಿಗೆ ಅಭಿನಂದನೆಗಳು.

ಹೊಸ ಕಾವ್ಯದೃಷ್ಟಿ, ಅದರ ರೀತಿ-ನೀತಿ, ಅದರ ಬೆಳೆವಣಿಗೆ, ಇಪ್ಪತ್ತೈದು ವರ್ಷಗಳಲ್ಲಿ ಅವ ಕನ್ನಡಕಾವ್ಯಪ್ರಪಂಚದಲ್ಲಿಯ ಬದಲಾವಣೆಗಳು, ಕನ್ನಡಕಾವ್ಯದ ಇಂದಿನ ಹೊಸ ಛಂದಸ್ಸು, ಈ ವಿಷಯಗಳನ್ನು ನಿರೂಪಿಸಬಹುದಾಗಿದ್ದ ಕನ್ನಡ ಕವಿತಾ ಪ್ರಪಂಚದ

(ಗಿರ್ಣಿಯ ಪುಟ ನೋಡಿರಿ.)

ತಂಗಿಗೆ ಉಡುಗೊರೆ

(ಅಳವಡಿತವಾಗಿ ನಡೆಯಬಹುದಾದ ಒಂದು ಕಲ್ಪಿತ ಕಥೆ)

ಶ್ರೀ ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ.

"ದೆವ್ವಾ, ಏನಲೇ ಹೀಂಗ ಜಗ್ಳಾಡಿದರ? ಮನ್ಯಾಗ ಹಿರೇರು ಇಲ್ಲಾ ಅಂತ ಮಂಗಮಂಗ್ಯಾನ್ಹಾಂಗ ಮಾಡಾಕ ಹತ್ತೀದಿ! ನನ್ನ ಮೀಸಿಗೆ ಕೈ ಹಚ್ಚಬ್ಯಾಡ ನಿ!"

"ಕಾಮಣ್ಣನ ಮೀಸೀ ಮಾಡ್ತೀನಿ, ಸುಮಾಕ ನಿಲ್ಲಬಾರದ ಒಂದ ತುಸಾ! ನೀ ಸಂತ್ಯಾಗ ಹೊಂಟರ, ನಿಂತು ನೋಡಿರಬೇಕು ಮಂದಿ!"

"ಕಾಮಣ್ಣನ ಮೀಸೀ ಬೋಡಿಕೊಂಡು ನಾ ಮೆರವರ, ನಿನಗ ಬಂದಿದ್ದೇನಲೆ ಖೋಡಿ?"

"ನನಗಂಟs ಬಂತು; ನಿನ್ಹಾಂಗ ಯಾವ ಗಂಡಸದಾನ?"

"ಮಳ್ಳ! ಇಲ್ಲದ ಪಂಟುಬಡಿಬ್ಯಾಡಾ; ಇವತ್ತ ಹಬ್ಬದ ಸಂತಿ, ಜಲ್ದು ಹೊಂಡಬೇಕು ನಾ!"

"ಹೋಗು; ನಿನಗ್ಯಾರು ಬ್ಯಾಡಂದಾರ? ಕಾರಹುಣ್ಣಿವಿಗೆ ಖಣಾ ತರಲಿಲ್ಲ. ಈ ಪಂಚವೀಗರ ಒಂದು ಖಣಾ ತಾ ಮತ್ತ. ಈಗ ಮೈಯ್ಯಾಗಿರೋದೊಂದs ಕುಬಸ ಮನ್ಯಾಗ!"

"ಏನ ಖಣಾ ತರ್ತೀಯಲೆ? ಕೈಯಾಗಿದ್ದ ಮೂರು ರೂಪಾಯಿ ಖಣಕ್ಕೆಟ್ಟರ, ಕುಸ್ತಿ ಖಣಾನs ನೋಡು ಮನಿ!"

"ಅದ್ಯಾಕ? ಆಟs ಏನು ಇರೋದು ನಿನ್ನ ಹಂತ್ಯಾಕ?"

"ಸಾವ್‌ಕಾರ ಕೊಟ್ಟದ್ದು ಆಟs ಮತ್ತ! ನಿನ್ನ ದುಡತದ ರೂಪಾಯಿ ಹಂತ್ಯಾಕ ಇಟ್ಕೊಂಡೀಯಲ್ಲ, ಅವನ್ನ ಕೊಡು, ತರ್ತೀನಿ!"

"ಅವ್ವಾ ನೋಡs ಇವನ್ನ! ಅವು ನಾಳೆ ಹಬ್ಬಕ್ಕ ಮಕ್ಕಳು ಬಂದಾಗ ಕಾಲ್ದಡಗ ತಂಗಾಕಬೇಕೂ ಅಂತ ಇಟ್ಟೀನಿ. ಆ ರೊಕ್ಕಾ ಖಣಕ್ಕೊಟ್ಟರ ಹ್ಯಾಂಗಾದೀತು? ಹಬ್ಬ ಸನೇಕ ಬಂತು; ಕಂದಮ್ಮಗೊಳ್ಳ ಕರಿಯಾಕ ಎಂದ ನೀ ಹೋಗಾಂವ?"

"ಸೋಮಾರ ಗಳಿ ಇರೋದಿಲ್ಲಾ. ಸಾವ್‌ಕಾರಗ ಕೇಳಿ ಹೋಗ್ತೀನಿ ಅಂದ!"

"ಹ್ಯಾಂಗಾದರೂ ಹಬ್ಬದ ಹೊತ್ತಿಗೆ ಕರತರಾಕs ಬೇಕು ಅವನ್ನ; ನೋಡು, ಯಾವಾಗ ಮಾರೀನೋಡೀನೋ ಅನಿಸೈತೆ!"

"ನನಗನಿಸಿಲ್ಲೀನೋ; ಪಾಪ! ನೀವೊಬ್ಬಾಕೇ ಹಡಿದೀಯೇನು ಚಂದ್ರಿ?"

"ಹೌದೇಳೋ ನನ ಚಂದ್ರಾಮಾ, ನೀನೂ ಹಡಿದೀದಿ! ಎಂದೆನ್ನುತ್ತ ರಾಮಿ ತಿಮ್ಮನ ಗಲ್ಲಕ್ಕೆ ತಿವಿದಳು. ತಿಮ್ಮ ಅವಳನ್ನು ಅನಾಮತ್ತು ಎತ್ತಿ ಅವಚಿಕೊಂಡ.

× × × × × ×

ಊರಿಂದ ಎರಡು ಮೈಲು ದೂರವಿರುವ ತೋಟ. ಅಲ್ಲಿ ತಿಮ್ಮನದೊಂದೇ ಗುಡಿಸಿಲು. ತಿಮ್ಮ ಕಳಸದ ಸಂತೆಗೆ ಹೋದ ನೇಲೆ ರಾಮಿ ಕುಳ್ಳುತಟ್ಟುತ್ತ, ಅಕ್ಕನ ಪತ್ತಿರ ಬಿಟ್ಟಿರುವ ತನ್ನ ಎರಡು ಮಕ್ಕಳನ್ನು ಕರೆತರುವ ಯೋಚನೆಯಲ್ಲಿ ತೊಡಗಿದ್ದಳು.

"ತಂಗಿ!" ಒಮ್ಮೆಲೆ ಕರೆಕೇಳಬಂತು.

ರಾಮಿ ಬೆದರಿ ಹಿಂದಿರುಗಿ ನೋಡಿದಳು: ಇಳಿಹರಯದ ಒಬ್ಬ ಆಜಾನುಬಾಹು ಗಂಡುಸು ಹಿಂದೆ ನಿಂತಿದ್ದ. ರಾಮಿ ಚೆಟ್ಟನೆ ಸೆರಗಿನೈ ಒರಸಿಕೊಂಡು ಎದ್ದು ನಿಂತಳು. ಆ ಮನುಷ್ಯ ಓಡಿಬಂದದ್ದರಿಂದ ತೇಕುತ್ತಲಿದ್ದ.

"ತಂಗೆವ್ವಾ, ಹೆದರಬ್ಯಾಡ! , ನಾನು ಪಾಟೀಲ ಸಂಗ; ಪೋಲೀಸರು ನನ್ನ ಬೆನ್ನು ಹತ್ತ್ಯಾರ; ನಿನ್ನ ಮನ್ಯಾಗ ಅಡಗಿಕೊಳ್ಳಾಕ ನನಗಂಟು ಜಾಗಾ ಕೊಡು. ಮನ್ಯಾಗ ಮತ್ತ್ಯಾರದಾರು? ನಿನ್ನ ಹಿರಿಯ ಎಲ್ಲ್ಯದಾನು?"

ಅವನು ಇದನ್ನು ಒಂದೇ ಉಸಿರಿನಲ್ಲಿ ನುಡಿವ. ರಾಮಿಯ ಕೈಕಾಲುಗಳೇ ಹೋದುವು.

"ನನ್ನಪ್ಪಾ ಹಿರಿಯ ಇಲ್ಲ; ಕಳಸದ ಸಂತಿಗೆ ಹೋಗ್ಯಾನು; ನಾ ಒಬ್ಬಾಕೇ ಅದೀನಿ. ನನ್ನ ಶಿವನs ಇವೇನ ಗೋಳು ಬಂತs ತಾಯೀ ನನ್ನ ಪಾಲಿಗೆ!"

ರಾಮಿ ಸೆರಗನ್ನು ಸಾವರಿಸಿಕೊಂಡು, ಹಿಂದೆ ಸರಿದು ಮುದ್ದೆಯಾಗಿ ನಿಂತಳು. ಅವಳು ಚೆಟ್ಟನೆ ಚೀರುವ ಸ್ಥಿತಿಯಲ್ಲಿದ್ದಳು.

"ಗಾಬರಿ ಆಗಬ್ಯಾಡ ನನ ಮಗಳ! ಗಾಂಧೀ ಚಳವಳಿ ಮಂದಿ ನಾವು! ನನ್ನ ಹೆಸರು ಕೇಳಿ ಗೊತ್ತೈತಿಲ್ಲೋ ನಿನಗ? ನಿನಮ್ಮ ಜನರ ಮ್ಯಾಗ---ಅದರಾಗ ಹೆಂಗಸರ ಮ್ಯಾಗ ನಾವೆಂದೂ ಕೈಮಾಡೋದಿಲ್ಲ! ನಮ್ಮ ಜಗಳ ಇರೋದು ಸರಕಾರದ ಕೂಟ. ಈಗ ಆ ಮಾತಿರಲಿ; ಮೊದಲು ನನಗ ಒಳಗ ಅಡಿಗಿಕೊಳ್ಳಾಕ ಜಾಗಾ ತೋರಸು. ನಿನಗೇನೂ ಹೆದರಿಕಿಲ್ಲ!"

"ಹೌದೆಪ್ಪಾ. ನನ ಗಂಡ ಮನ್ಯಾಗಿಲ್ಲಾ. ಇದೋದೀಟು ಸಣ್ಣ ಗುಡಸಲು. ಅಡಗಾಕರs ಜಾಗಾ ಬೇಕಲ್ಲ ನನ್ನವ್ವಾ! ನೀ ಎಲ್ಲಿ ಕುಂಡ್ರಾವ?" ರಾಮಿಗೆ ಏನೂ ತೋಚದಂತಾಯಿತು.

"ಜಲ್ದು ಮಾಡು, ನಡೀ ಒಳಗ; ಎಲ್ಲಾರ್ಯಾದರೂ ಜಾಗಾ ತೋರಿಸು--ನಿನ್ನ ಗಂಡ ಬಂದರ ನಾ ಹೇಳೇ ಹೇಳ್ತೀನಿ. ಇನ್ನ

ಪೋಲೀಸರು ಬಂದರೆ---ನನಗೈತೆ ಅವರಿಗೈತೆ!" ಎಂದೆನ್ನುತ್ತ ಆ ಮನುಷ್ಯ ಗುಡಿಸಿಲೊಳಕ್ಕೇ ನಡೆದ.

ರಾಮಿ ಅಂಜಂಜುತ್ತ ಅವನನ್ನು ಹಿಂಬಾಲಿಸಿದಳು. ಅವನ ಒಂದು ಕೈಯಲ್ಲಿ ಉದ್ದವಾದ ಟಾರ್ಚು, ಇನ್ನೊಂದು ಕೈಯಲ್ಲಿ ತೊಗಲಿನ ಬಾರುಳ್ಳ ಚೀಲ – ಅದರಲ್ಲಿ ರಿವಾಲ್ವರು---ಇದ್ದುವು. ಮೈಯಲ್ಲಿ ಖಾದಿಯ ಅಂಗಿ, ಖಾದಿಯದೇ ಅರಿಚಿಣ್ಣ. ಬರಿಗಾಲಿನಿಂದಲೇ ಇದ್ದ. ಗುಡಿಸಿಲಲ್ಲಿ ಎರಡೂ ಮಗ್ಗಲಿಗೆ ಎರಡು ಕೋಣೆಯ ಹಾಗೆ ಭಾಗಗಳಿದ್ದುವು. ಒಂದರಲ್ಲಿ ಹೊರಸು ಕಾಣುತ್ತಿತ್ತು.

"ನಾ ಇಲ್ಲಿ ಮಲಗತೀನಿ, ಹರಕು ಬಟ್ಟೆ ಇದ್ದರ ಕೊಡು," ಎಂದೆನ್ನುತ್ತ ಅವನು ಕತ್ತಲೆ ಮುಸುಕಿದ ಕೋಣೆಯಲ್ಲಿ ಟಾರ್ಚು ಹಾಕಿದ. ಆ ಬೆಳಕಿನಲ್ಲಿ ಗೂಟಕ್ಕೆ ತಗುಲಿಸಿದ ಒಂದು ಬಟ್ಟೆಯ ಗಂಟು ಕಂಡಿತು. ಅವನ್ನು ಕೆಳಗಿಳಿಸಿ, ಅದರಲ್ಲಿಯ ನಾಲ್ಕಾರು ಅರಿವೆಯ ತುಂಡುಗಳನ್ನು ತೆಗೆದು, ಅವನ್ನು ಎರಡೂ ಕಾಲುಗಳಿಗೆ ಸುತ್ತಿಕೊಂಡ. ಹೊರಸಿನ ಮೇಲೆ ಚೆಲ್ಲಿರುವ ಕೌದಿಯನ್ನು ಮೈತುಂಬ ಹೊದ್ದುಕೊಂಡು, ಮುಖಕ್ಕೂ ಒಂದು ಬಟ್ಟೆ ಸುತ್ತಿಕೊಂಡು ಒರಗಿದ. ಇದನ್ನೆಲ್ಲ ಹೌಹಾರಿ ನೋಡುತ್ತ ರಾಮಿ ನಿಂತಿದ್ದಳು. ಕೂಗುವುದಕ್ಕೂ ಅವಳಿಗೆ ದನಿ ಬಾರದು.

"ಇದು ನೋಡು, ಐದು ಬಾರಿನ ಪಿಸ್ತೂಲು! ಪೋಲೀಸರು ಬಂದು 'ಇವ ಯಾರು?' ಅಂತ ಕೇಳಿದರ, 'ನನ ಗಂಡ, ಕೈಕಾಲು ಹಿಡಿದು ಕಸಾರಿಕೆಯಿಂದ ಮಲಗ್ಯಾನ' ಅಂತ ಹೇಳು. ಇದನ್ನ ಬಿಟ್ಟು ಮತ್ತೇನರಸ ಹೇಳ್ದೊ ್ಯ—ನಿನ್ನ ಜೀವ ಹೋತುತಕ ತಿಳಿ! ನಾ ಹೇಳಿದ್ದಾಂಗ ಸುಮಾಕs ಕೇಳು; ನಿನ್ನ ಕೂದಲಿಗೂ ಧಕ್ಕಿ ಆಗದ್ದಾಂಗ ನಾ ನೋಡಿಕೋತೀನಿ! ನಾ ಯಾರು ಅನ್ನೋದು ನಿನ್ನ ಗಂಡಗ ಗೊತ್ತೈತೆ. ಹೋಗು, ನೀ ಹೊರಗ ಹೋಗಿ ನಿನ್ನ ಕೆಲಸ ಮಾಡು! ಪೋಲೀಸರು ಬಂದಾಗ ಏಟೂ ಬೆದರದ ಇಷ್ಟು ಹೇಳು! ಇದು ದೇಶದ ಕೆಲಸ; ಪ್ರತಿ ಒಬ್ಬನೂ ಪ್ರಸಂಗ ಬಂದಾಗ ಏನು ಬೇಕಾದ್ದು ಮಾಡಬೇಕಾಗತೈತೆ!"

ಹೀಗೆನ್ನುವಾಗ ಅವನ ಮುಖ ಆ ಕತ್ತಲಲ್ಲೆಯೂ ಉಜ್ವಲವಾಗಿ ಕಾಣುತ್ತಿತ್ತು. ರಾಮಿಯ ಮನಸ್ಸಿನ ಮೇಲೆ ಆ ಮುಖ ಅದೇನು ಪ್ರಭಾವವನ್ನು ಬೀರಿತೊ—ಅವಳೂ ತನ್ನ ಮನಸ್ಸನ್ನು ಗಟ್ಟಿಮಾಡಿ, ತುಟಿಗಳನ್ನು ಅವಡುಗಚ್ಚಿ, ಜೋರಕ್ಕೆ ಬಂದು ಕುಳ್ಳು ಹಚ್ಚತೊಡಗಿದಳು. ಆಗಾಗ ಅವಳು ಹಿಂದಿರುಗಿ ನೋಡುವಳು, ಸುತ್ತಲೂ ನಿರುಕಿಸುವಳು, ಕಿವಿಗೊಟ್ಟು ಸಪ್ಪಳವನ್ನು ಕೇಳುವಳು. ಅವಳ ಮನಸ್ಸನ್ನು ಒಂದೇ ಮಾತು ಆವರಿಸಿತ್ತು: 'ಇವ ಗಂಡ ಎಂದು ಹೇಳುವದು ಹೇಗೆ?'. ಆಗ ಅವಳಿಗೇನೋ ಯೋಚನೆ ಹೊಳೆಯಿತು.

ಬಂದ ಮನುಷ್ಯ 'ಸಂಗ್ಯಾ ಪಾಟೀಲ'ನೇ ಇದ್ದ. ಅವನ ಹೆಸರು ನಾಡಿದರೆ ಪೋಲೀಸರ ಎದೆ ಧಸ್ಸೆನ್ನುತ್ತಿತ್ತು. ಅವನನ್ನು ಹಿಡಿಯಲು ಪೋಲೀಸರು ಮಾಡಿದ ಪ್ರಯತ್ನಗಳು ಒಂದೊಂದಲ್ಲ. ಒಂದು ವರ್ಷದಿಂದಲೂ ಅವನು ಹೀಗೇ ಫರಾರಿಯಾಗಿದ್ದು, ಅವನನ್ನು ಹಿಡಿದೇತೀರಬೇಕೆಂದು ಅವರು ಹಟಕ್ಕೆ ಬಿದ್ದಿದ್ದರು. ಇದೇ ಕೆಲಸಕ್ಕಾಗಿ ಪೋಲೀಸ ಖಾತೆಯ ಹೆಸರಾದ ಒಂದು ದಳವನ್ನು ಮುಂಬಯಿಯಿಂದ ಅಲ್ಲಿಗೆ ತರಿಸಲಾಗಿತ್ತು.

ಪಾಟೀಲ ಸಂಗನಗೌಡನಿಗೆ 'ಸಂಗ್ಯಾ ಪಾಟೀಲ' ಎಂದು ಹೆಸರು ಬಂದದ್ದು ಅವನು ಚಳುವಳಿಯಲ್ಲಿ ಹೊಕ್ಕು ಫರಾರಿಯಾದ ಮೇಲೆಯೆ! ಸರಕಾರದ್ದೆಂಬುದನ್ನೆಲ್ಲ ಲೂಟಮಾಡುವುದು, ಬಂದೂಕುಗಳನ್ನು ಅಪಹರಿಸುವುದು, ರೇಲ್ವೆಹಳಿಗಳನ್ನು ಕಿತ್ತುವುದು, ಸರಕಾರಕ್ಕೆ ಸಹಾಯಮಾಡುವ ಜನರನ್ನು ಸಾಯಬೀಳ ಥಳಿಸುವುದು ಇವು ಅವನ ಕಾಯಕದ ವಿಷಯಗಳಾಗಿದ್ದುವು. ದೇಶಭಕ್ತಿ ಇಲ್ಲದಿದ್ದರೂ ಕೈತುಂಬ ಸಿಕ್ಕುವ ಕಾಂಚಾಣದ ಆಶೆಗಾಗಿ ಅನೇಕ 'ಬಾಜಾರಬಿಣಗು' ಜಾತಿಯ ಜನರು ಅವನಲ್ಲಿ ಹಸ್ತಕರಾಗಿ ಸೇರಿಕೊಂಡಿದ್ದರು. ಅವನ ವಿಷಯದಲ್ಲಿ ಹಲವು ದಂತಕಥೆಗಳು ದೇಶದಲ್ಲಿ ಹಬ್ಬಿದ್ದುವು. ಇತಿಹಾಸಕಾಲದ ವೀರರನ್ನು ಹೊಗಳುವಂತೆ ಜನರು ಅವನನ್ನು ಹೊಗಳುತ್ತಿದ್ದರು.

ಕುಳ್ಳು ತಟ್ಟುವುದು ಮುಗಿದರೂ ರಾಮಿ ಒಳಗೆ ಹೋಗದೆ, ದಾರಿಯ ಕಡೆಗೆ ಕಣ್ಣುಹಚ್ಚಿ ಕಾತರಳಾಗಿ ಕುಳಿತಿದ್ದಳು. ಹೀಗೆ ಕಾಲುಗಂಟೆ ಕಳೆಯಿತು. ಆಗ ಕೈಯಲ್ಲಿ ಬಂದೂಕನ್ನು ಹಿಡಿದ ಒಬ್ಬ ಪೋಲೀಸ ಕಾಣಿಸಿಕೊಂಡ. ಅವನ ಹಿಂದೆ ಮತ್ತೊಬ್ಬ, ಆಮೇಲೆ ಇನ್ನೊಬ್ಬ ...ಹೀಗೆ ಆರು ಜನರು ಸಪ್ಪಳ ಮಾಡದೆ ಗುಡಿಸಿಲ ಹತ್ತಿರ ಬಂದ., ಇಬ್ಬರು ರಾಮಿಯ ಎದುರು, ಇಬ್ಬರು ಬಾಗಿಲಿನೆದುರು, ಇಬ್ಬರು ಗುಡಿಸಿಲ ಹಿಮ್ಮಗ್ಗಲು ಹುಚಿಕೊಂಡು ನಿಂತರು.

"ಕೋನ್ ಹೈ ಅಂದರ್? (ಯಾರಿದ್ದಾರೆ ಒಳಗೆ?)*" ಒಬ್ಬನು ಕೇಳಿದ.

"ಏನಂದ್ರೆಪ್ಪಾ?" ರಾಮಿ ಭಾಷೆ ಅರಿಯದೆ ಕೇಳಿದಳು.

"ಅರೇ, ತೆಲಾ ಮರಾಠೀತ? ವಿಚಾರ (ಏ ಅವಳನ್ನು ಮರಾಠಿಯಲ್ಲಿ ಕೇಳು!)" ಇನ್ನೊಬ್ಬನೆಂದ. ಅಷ್ಟರಲ್ಲಿ ಬಾಗಿಲಲ್ಲಿ ನಿಂತ ಪೋಲೀಸರು ಒಳಹೊಕ್ಕರು. ಮಲಗಿದ ಮನುಷ್ಯ ಅತ್ಯಂತ ಬಾಧೆಗೆ ಗುರಿಯಾದವನಂತೆ ನರಳತೊಡಗಿದ

"ಕೋಣ್ ನಿಜಲಯ್ ಆತ್ ? ತುಝಾ ನವರಾ ಹೈಕಾಯ್? (ಯಾರು ಮಲಗಿದ್ದಾರೆ ಒಳಗೆ? ನಿನ್ನ ಗಂಡನೇನು?)"

"ಹೌದೆಪ್ಪಾ, ನನ್ನವರs ಅವರು! ಕೈಕಾಲು ಹಿಡಿದಾನ ಎದ್ದು ಕುಂಡ್ರಾಕ ಸೈತ ಬರಾಣಿಲ್ಲ!" ರಾಮಿ ಹೇಳಿದಳು.

"ರಾಮಿಾ, ದೀಪಾ ಪಚ್ಚು, ಮತ್ತ ಆವರಿಗೆಲ್ಲಾ ಮಸ ತೋರಿಸು!" ಆ ಮನುಷ್ಯ ದವಡೆ ಸೂಲಿಯಾದವನಂತೆ, ಬಾಯಿತೆರೆಯದೆ ಒಳಗೊಳಗೇ ಹೇಳಿದ. ರಾಮಿ ಚಿಮಣಿಯನ್ನಂಟಿಸಿದಳು. ಸಂಗ್ಯಾ ಪಾಟೀಲನನ್ನು ಪ್ರತ್ಯಕ್ಷವಾಗಿ ಆ ಪೋಲೀಸರಲ್ಲಿ ಯಾರೂ ನೋಡಿರಲಿಲ್ಲ. 'ಜೆಹರಾಪಟ್ಟಿ'ಯ ವರ್ಣನೆಯನ್ನು ಅವರು ಅವಲಂಬಿಸಿ ಹೊರಟಿದ್ದರು. ಆ ವರ್ಣನೆಯು ಕೂಡ ಒಂದು ವರ್ಷದ ಹಿಂದಿನದು ಈಗ ಅವನು ತನ್ನ ಮುಖದಲ್ಲಿ ಬಹಳ ಬದಲಾವಣೆಗಳನ್ನು ಮಾಡಿಕೊಂಡಿದ್ದ. ಆದು ಪೋಲೀಸರಿಗೇ ಗೊತ್ತಿರಲಿಲ್ಲ.

"ಸಂಗ್ಯಾ ಅಲಾ ಹೋತಾ ಕಾ ಇಥ? (ಸಂಗ್ಯಾ ಬಂದಿದ್ದನೇನ ಇಲ್ಲ?)" ಒಬ್ಬನು ಕೇಳಿದ.

* ಹಿಂದೀ, ಮರಾಠಿ ಬಾರದವರಿಗೆ ತೊಂದರೆಯಾಗಬಾರದೆಂದು ಭಾಷಾಂತರ ಕೊಟ್ಟಿದೆ. ಸಂ. ಜ.

"ಇಲ್ಲೆಪ್ಪಾ" ಅರ್ಧಮಾತು, ಅರ್ಧ ಕೈಸನ್ನೆ ಇವುಗಳ ಸಹಾಯದಿಂದ ಸಂಗನೇ ಉತ್ತರಕೊಟ್ಟ.

"ಅರೇ, ಇಥಃ ಕಶಾಲಾ ಮರಾಯಲಾ ತೋ ದಡೂನ್ ಬಸ್ತೋ! ಇತಕಾ ಕಾಂಹಿ ತೋ ದುಧಖುಳಾ ನಾಹಿ. ಚಲಾ, ಆತಾ ಪರತ ತಾಣ್ಯಾವರ ಜಾವು. (ಎಲೋ, ಇಲ್ಲೀತಕ್ಕೆ ಸಾಯಲಿಕ್ಕೆ ಬಂದು ಅಡಗಿಕೊಂಡಾನು! ಇಷ್ಟೇನು ಅವನು ಎಬಡನಿಲ್ಲ ನಡಿಯಿರಿ, ಈಗ ಮರಳಿ ಬೀಡಾರಕ್ಕೆ ಹೋಗೋಣ)" ಎಂದೆನ್ನುತ್ತ ಒಬ್ಬನು ಹೊರಬಿದ್ದ; ಅವನ ಹಿಂದೆ ಉಳಿದ ಪೋಲೀಸರೂ ಹೊಂಬಿದ್ದರು.

"ಕಳಸದ ಹಾದಿ ಹಿಡಿದು ಪೋಲಿಸರು ಅರ್ಧ ಮೈಲು ಸಮಾರು ಹೋಗಿದ್ದಾರು; ಎದುರಿನಿಂದ ರಾಮಿಂ ಗಂಡ ತಿಮ್ಮನು ಹೆಗಲಿಗೊಂದು ಗಂಟು, ಕೈಯಲ್ಲಿ ಎಣ್ಣೆಯ ಸೀಸೆ ಹಿಡಿದುಕೊಂಡು ಬರುತ್ತಿದ್ದ. ಮುಚ್ಚಂಜೆಯ ಮಬ್ಬು ಬೆಳಕು. ತಿಮ್ಮ ಬೇಗನೆ ಮನೆ ಸೇರುವ ಆತುರದಿಂದ ಹೆಜ್ಜೆ ಹಾಕುತ್ತಿದ್ದ. ತನ್ನ ತೋಟದ ಪಾದಿಯಿಂದಲೇ ಬರುತ್ತಿದ್ದ. ಪೋಲೀಸರನ್ನು ನೋಡಿ ಅವನು ತುಸು ಗಾಬರಿಗೊಳಗಾದ.

"ಕೋನ್ ಹೈರೇ, ತು? (ಯಾರೋ ನೀನು?)" ಒಬ್ಬ ಪೋಲೀಸ ಗದ್ದರಿಸಿದ.

"ನಾನು ದೇಸಾಯರ ತೋಟಾ ಮಾಡ್ತೀನ್ರಿ....ಸಂತಿಗೆ ಹೋಗಿದ್ದೆನ್ರಿ....ಸಂತೀ ಮಾಡಿಕೊಂಡು ಈಗ ಮನಿಗೆ ಹೊಂಟೀನ್ರಿ!"

ಇದರಲ್ಲಿಯ ಒಂದು ಮಾತೂ ಅವರಿಗೆ ಅರ್ಥವಾದಂತೆ ಕಾಣಲಿಲ್ಲ.

"ಅರೇ ಬಂದರಕೇ ಬಚ್ಚೇ, ಹಿಂದುಸ್ಥಾನೀಮೇ ಬಾತ್ ಕರೋ! ಹಮ್ ತುಮಾರೀ ಕನಡಿ ನಹಿ ಜಾನ್ತಾ! ಮರಾಠೀ ಸಮುಜತಕ ಕಾ ತುಲಾ? (ಎಲೇ ಮುಂಗನ ಮಗನೇ, ಹಿಂದುಸ್ಥಾನಿಯಲ್ಲಿ ಮಾತನಾಡು; ನಿನ್ನ ಕನ್ನಡವಾತು ನಮಗ ತಿಳಿಯುವುದಿಲ್ಲ. ಮರಾಟೀ-ಬರುತ್ತದೆಯೇ ನಿನಗೆ?,"

"ತಿಳತೈತ್ರಿ, ಮಾತಾಡಾಕ ಬರೂದಿಲ್ರಿ!"

"ಏ ದಿಲ್ರಿ ಪಲ್ರಿ ಕ್ಯಾಹೈ? (ಇದೇನೋ ಇದು ಈ ದಿಲ್ರೀ-ಪಲ್ರೀ ಅಂಬೂದು?)"

"ಹಮ್ಕು ಅಚ್ಛಾ ಬಾತ್ ಆತಾ ನೈ ಸಾಬ! ಹಮಾರಾ ಔರತ್ ಔರ್ ಹಮ್ ದೋನೋ ರಹತೇ ಸಾಬ!"

"ಕಾಯರ್ ತೀ ತುಝೀ ಬಾಯಕೊ? ಅನ್ ಮಝಾಶಿ ತಿಥ ಘೋಪಲಾ ಹೋತಾ ತೋ ಕೋಣ? ಏ ತುಮ್ಹಾರೀ ಔರತ್ ಹೈ? (ಆಕೆ ನಿನ್ನ ಹೆಂಡತಿಯೆ? ಮತ್ತೆ ಇದೇ ಈಗ ಒಬ್ಬ ಮಲಗಿದ್ದನಲ್ಲಾ ಅವನು ಯಾರು? ಅವಳು ನಿನ್ನ ಹೆಂಗುಸು?)"

"ಹೋಯ್ ಸಾಬ (ಹೌದು ಸಾಹೇಬ್)!"

"ಅರೇಚ್ಚಾ, ಹಾ ಕಾಯ ಘೋಟ್ಯಾಳಾ ಆಹೆ? ಚಲಾ ಆಪಣ ಯಾಲಾ ಘೇವೂನ ತೇಥ ಪರ್ಯಂತ ಪುನಃ ಜಾವು. (ಎಲೆಲೇ, ಇದೇನೋ ತೊಡಕು ಇದೆ. ನಡೆಯಿರಿ, ನಾವು ಇವನನ್ನು ಕೆಗೆದುಕೊಂಡು ಪುನಃ ಅಲ್ಲಿಯ ವರಗೆ ಹೋಗೋಣ!)" ಹಮ್ಕಾಬಿ ತುಮ್ಹಾರೇ ಸಾಥ್ ಆತೇ ಚಲೊ. ತುಮ್ಹಾರೆ ಘರಮೇ ಏಕಆದಮಿಾ ಸೋಯಾಥಾ. ವಹಾಕಾ ಔರತ ಜೋಲಾ, ಓ ಆಪಕಾ ಮರದ್ ಹೈ; ಏ ಕ್ಯಾ ಮಾಮಲಾ ಹೈ. ಚಲೊ, ಚಲೊ (ನಾವೂ ನಿನ್ನೊಡನೆ ಬರುತ್ತೇವೆ ನಡೆ! ನಿನ್ನ ಮನೆಯಲ್ಲಿ ಒಬ್ಬ ಮಲಗಿಕೊಂಡಿದ್ದ; ಅಲ್ಲಿಯ ಹೆಂಗುಸು ಹೇಳಿದಳು ಆತ ತನ್ನ ಗಂಡನೆಂದು! ಇದೇನಿದೆ ರಹಸ್ಯ? ನಡೆ ನಡೆ!)"

ಎಲ್ಲರೂ ಓಟದ ವೇಗದಿಂದಲೇ ಬಂದರು.

ನಾಲ್ಕು ಜನ ಪೋಲೀಸರು ಮನೆಯನ್ನು ಸುತ್ತುಗಟ್ಟಿದರು. ಇಬ್ಬರು ತಿಮ್ಮನನ್ನು ಮುಂದೆಮಾಡಿಕೊಂಡು ಮನೆಯೊಳಕ್ಕೆ ಹೊಕ್ಕರು. ರಾಮಿ ಒಲೆ ಹೊತ್ತಿಸುತ್ತಿದ್ದಳು. ಪೋಲೀಸರು ಮೊದಲು ಕೋಣೆಯಲ್ಲಿ ನೋಡಿದರು---ಆದರೆ ಹೊರಸಿನ ಮೇಲೆ ಆ ಮನುಷ್ಯನೆಲ್ಲಿದ್ದ? ಪೋಲೀಸರು ಭ್ರಾಂತಚಿತ್ತರಾದರು. ತಿಮ್ಮ ರಾಮಿಯನ್ನು ಅವ- ರಟ್ಟಿ ಹಿಡಿದು ಹೊರಗೆಳೆದು ತಂದ. ಒಂದೇಟು ಕೆನ್ನೆಗೆ ಬಿಗಿದು, 'ಯಾರು ಬಂದಿದ್ದರು ನಾ ಇಲ್ಲದ ಹೊತ್ತಿನ್ಯಾಗ?' ಗಂಟಲ ನರ ಹರಿಯುವ ಹಾಗೆ ಕಿರಿಚಿಕೊಂಡ. ತಲೆ ದಿಮ್ಮೆಂದು ರಾಮಿಗೆ ಮೂರ್ಛೆಯೆ ಬಂತು; ನೆಲದ ಮೇಲೆ ಧೊಪ್ಪನೆ ಬಿದ್ದಳು. ಪೋಲೀಸರು ತಮ್ಮತಮ್ಮಲ್ಲಿಯೆ ಆಲೋಚನೆ ನಡೆಯಿಸಿದರು. ಬಂದವನು ಸಂಗನೇ ಎನ್ನುವ ಮಾತು ಅವರಿಗೆ ಹೆಚ್ಚು ಸಂಭವನೀಯವಾಗಿ ತೋರಿತು. ತಿಮ್ಮ ಮಾತ್ರ ಅವರ ಮಾತಿನ ಕಡೆಗೆ ಲಕ್ಷ್ಯಕೊಡದೆ, ಗಾಬರಿಗೊಂಡವನಾಗಿ, ಎಚ್ಚರದಪ್ಪಿ ಬಿದ್ದಿರುವ ರಾಮಿಯ ಮೂಗಿಗೆ ಈರುಳ್ಳಿಯ ವಾಸನೆ ತೋರಿಸುತ್ತಿದ್ದ. ರಾಮಿ ತುಸು ಎಚ್ಚರುಗೊಂಡು ಅರೆತೆರೆದ ಕಣ್ಣು ಹೊರಳಿಸಿ ಸುತ್ತಲೂ ನೋಡಿದಳು.

"ಅರೇ, ಹೀ ಬದಮಾಷ ಆಹೆ ರಾಂಡ್, ಹಿಲಾ ಆಧಿ ಶೋಕಲಕ ವಾಹುಜೆ! (ಏ ಈ ರಂಡೆ ನೀಚಳಲ್ಲಾ ಕೆ. ಇವಳನ್ನು ಮೊದಲು ಶೋಕಾಯಿಸಬೇಕು!)" ಎಂದವನೆ ಒಬ್ಬನು ಅವಳ ಸೊಂಟದ ಕೆಳಭಾಗಕ್ಕೆ ಜಾಡಿಸಿ ಒದ್ದನು. ರಾಮಿಗೆ ಆ ಹೊಡೆತಕ್ಕೆ ಕಣ್ಣಲ್ಲಿ ಕಿಚ್ಚು ಹಾಕಿದಂತಾಗಿ ಮತ್ತೆ ವಿಸ್ಮೃತಿ ಬಂದಿತು.

"ಗಾಡೀ ಆಹೇ ಕಾಯ ತುಝಿ? (ಚಕ್ಕಡಿ ಇದೆಯೇನು ನಿನ್ನದು?)"

"ಐತೆಪ್ಪಾ" ತಿಮ್ಮ ನುಡಿದ.

"ಗಾಡೀ ಬಾಂಧಕರ್ ಏ ರಾಂಡಕು ಹಮಾರೇ ಸಾಥ ಲೇ ಚಲೊ. ಜಲ್ದಿ ಕರೋ, ಚಲೊ! (ಚಕ್ಕಡಿ ಹೂಡಿ ಈ ರಂಡೆಯನ್ನು ನಮ್ಮೊಡನೆ ತೆಗೆದುಕೊಂಡು ನಡೆ! ಬೇಗನೆ ನಡೆ!)"

ತಿಮ್ಮ ತೆಪ್ಪಗೆ ಎದ್ದು ಬಂಡಿ ಹೂಡಿದ: ರಾಮಿಯನ್ನೆತ್ತಿ ಬಂಡಿಯಲ್ಲಿ ಹಾಕುವಾಗ ತಲೆಯ ಮೇಲೆ ಇನ್ನೊಂದು ಒದಿಕೆ ಕುಳಿತಿತು. ತಿಮ್ಮ ಬಂಡಿ ಹೊಡೆಯುತ್ತಿದ್ದ. ಇಬ್ಬರು ಪೋಲೀಸರು ರಾಮಿಯನ್ನು ನಡುವೆ ಮಲಗಿಸಿ ಅಸ್ತವ್ಯಸ್ತವಾಗಿ ಕುಳಿತಿದ್ದರು. ಉಳಿದವರು ನಡೆಯುತ್ತ ಸಾಗಿದ್ದರು. ಕೈಯಲ್ಲಿ ಆಯತ್ತವಾಗಿ ಸಿಕ್ಕ ಹುಲಿ ತಪ್ಪಿಸಿಕೊಂಡು ಹೋದದ್ದು ತಮಗೆಂಥ ನಾಚಿಕೆಗೇಡು? ಸಂಗನು ಹಾಕಿದ ಜಡ್ಡಿನ ಸೋಗು, ರಾಮಿ ತೋರಿದ ಅಕೃತ್ರಿಮ ನಟನೆ, ತಮ್ಮ ಹೆಡ್ಡತನ ಎಲ್ಲವೂ ಕೂಡಿ, 'ಅವನನ್ನು ಹಿಡಿದುಕೊಡುವ ಅದೃಷ್ಟ ತಮಗೆ ಇಲ್ಲದೆ ಹೋಯಿತಲ್ಲಾ' ಎಂದು ಅವರು ಬಹುವಾಗಿ ಹಲುಬಿದರು. ನಡೆದ ಸಂಗತಿ ನಡೆದ ಹಾಗೆಯೇ ತಮ್ಮ ಮೇಲಧಿಕಾರಿಗೆ ಹೇಳುವುದೆಂದು ಅವರು ನಿರ್ಧರಿಸಿದರು. ಅಂದು ಸ್ಟೇಶಲ್ ಸಬ್

ಇನ್ಸ್‌ಪೆಕ್ಟರ ಮುಕ್ಕಾಮು ಕಳಸದ ಚಾವಡಿಯಲ್ಲಿತ್ತು. ಅಲ್ಲಿಗೆ ತಿಮ್ಮನ ಬಂಡಿ ರಾತ್ರಿಯ ಹತ್ತು ಗಂಟೆಯ ಸುಮಾರಿಗೆ ತಲುಪಿತು. ಆ ಹೊತ್ತಿಗೆ ರಾಮಿ ಚೆನ್ನಾಗಿ ಎಚ್ಚತ್ತಿದ್ದಳು.

ಚಾವಡಿಯ ಕೆಳಗಿನ ಬಂಕದಲ್ಲಿ ಇಬ್ಬರು ಪೋಲೀಸರು ಅಡಿಗೆ ನಡೆಯಿಸಿದ್ದರು. ಇನ್ಸ್‌ಪೆಕ್ಟರ್ ಸಾಹೇಬರು ಪಾನಸಂಭ್ರಮದಲ್ಲಿ ತನ್ಮಯರಾಗಿದ್ದರು. ಅವರೆದುರಿಗೆ ಅವರ 'ಆಡಲಿ' ನಿಂತು ಅವರಿಗೆ ಬೇಕಾಗುವುದನ್ನೆಲ್ಲ ಒದಗಿಸುತ್ತಿದ್ದ. ಇನ್ಸ್‌ಪೆಕ್ಟರ್ ಸಾಹೇಬರಿಗೆ ಈ ಸಂಗತಿಯನ್ನು ತಿಳುಹಲಾಯಿತು.

ಇಬ್ಬರು ಪೋಲೀಸರು ಕೂಡಲೆ ರಾಮಿಯನ್ನೊಯ್ದು ಸಾಹೇಬರೆದುರಿನಲ್ಲಿ ನಿಲ್ಲಿಸಿದರು. ತಿಮ್ಮನನ್ನು ಮಾತ್ರ ಹೊರಗೇ ನಿಲ್ಲಿಸಲಾಗಿತ್ತು. ಸಾಹೇಬರ ಮೊದಲನೆಯ ಪ್ರಶ್ನೆಗೇ ರಾಮಿ ನಡೆದ ಸಂಗತಿಯನ್ನೆಲ್ಲ ಹೇಳಿ, ತಾನು ಕೇವಲ ಜೀವದ ಹೆದರಿಕೆಯಿಂದಲೇ ಹಾಗೆ ನಡೆದುಕೊಂಡೆನೆಂತಲೂ, ಅಲ್ಲಿ ಬಂದ ಪೋಲೀಸರಿಗೆ ಆಗ ನಿಜಸಂಗತಿ ತಿಳಿಸಲು ತನಗೆ ಧೈರ್ಯವಾಗಲಿಲ್ಲವೆಂತಲೂ ಒಪ್ಪಿಕೊಂಡಳು. ಆದರೂ ಸಾಹೇಬರು ಅಷ್ಟಕ್ಕೇ ಬಿಡದೆ ಅವಳಿಗೆ ಅನೇಕ' ಆಡ್ಡತಿಡ್ಡ ಪ್ರಶ್ನೆಗಳನ್ನು ಹಾಕಿ, ಸಂಗನ ಗುಂಪಿಗೆ ಈಕೆ ಸೇರಿಲ್ಲವೆಂಬುದರ ಬಗ್ಗೆ ಖಾತ್ರಿ ಮಾಡಿಕೊಂಡರು. ರಾಮಿ ತೋರಿದ ವಂಚನೆಗಾಗಿ ಮಾತ್ರ ಅವರು ಅವಳ ಮೇಲೆ ಅತ್ಯಂತ ಕ್ರುದ್ಧರಾದರು. ಆದರೆ ಆಗೇನು ಮಾಡಲು ಬರುವಹಾಗಿತ್ತು? ರಾಮಿಯನ್ನು ಹೊಡೆದು ಆ ಸಿಟ್ಟನು ತೀರಿಸಿಕೊಳ್ಳುವುದರಾಚೆಗೆ ಬೇರೆಯೇನೂ ಅವರಿಗೆ ಕಾಣಲಿಲ್ಲ. ಅದನ್ನೂ ತುಸುಮಟ್ಟಿಗೆ ಮಾಡಿದರು. ಕೊನೆಗೆ ಸಾಹೇಬರು ಒಂದು ನಿರ್ಣಯಕ್ಕೆ ಬಂದರು: ಬಂದವನು ಸಂಗನೇ ಎಂದು ಹೊರಪಡಿಸುವುದೆಂದರೆ ತಮ್ಮ ಮಂಕುತನ ತಾವೇ ಬಯಲಿಗಿಟ್ಟಂತಾಗುತ್ತಿತ್ತು; ಆದುದರಿಂದ ಬಂದವನು ಸಂಗನಲ್ಲ ರಾಮಿಯ ಗೆಣೆಯನೆಂದೂ, ರಾಮಿ ಕೂಡ ಇದೇ ಮಾತನ್ನೇ ಹೇಳುವಂತೆ ಮಾಡಬೇಕೆಂದೂ ನಿರ್ಧರಿಸಲಾಯಿತು.

ಈ ವಿಚಾರಣೆ ನಡೆದಾಗ ತಿಮ್ಮ ಬಂಡಿಯ ಹತ್ತಿರ ಚಳಿಯಲ್ಲಿ ನಡುಗುತ್ತ ಕುಳಿತಿದ್ದ. ಕೊನೆಗೆ ಅವನನ್ನೂ ಸಾಹೇಬರ ಎದುರಿಗೆ ಕರೆಯಲಾಯಿತು.

" ನೀ ಈಕೆಯ ಗಂಡನೇನೊ ? " ಸಾಹೇಬರು ಕೇಳಿದರು.

" ಹೌದು ದ್ಯಾವರು ! " ತಿಮ್ಮ ಕೈಜೋಡಿಸಿ ನಿಂತು ಹೇಳಿದ.

" ನಿನ್ನ ಸಂತಿಗೆ ಕಳಸಿ, ಈಕೆ ಹಾದರಾ ಮಾಡ್ತಾಳ; ಮನಿಗೆ ಕರಕೊಂಡು ಹೋಗಿ ಟೊಂಕ ಮುರಿಯೋಹಾಂಗ ಜಡಿ... ಮತ್ತೊಮ್ಮೆ ಹಾದರಾ ಮಾಡಬೇಕೆಂಬೋ ಹುಚ್ಚೆಲ್ಲಾ ಬಿಟ್ಟು, ಹೋಗಿರಬೇಕು ! ಹೋಗು ಕರಕೊಂಡು; ಈಕೀ ಮ್ಯಾಲ ನೆಟ್ಟಗ ನಿಗಾ ಇಡು! ಹೋಗs ಹುಚ್ಚಮುಂದೇ ! ಇನ್ನೊಮ್ಮೆ ಗೆಣೆಯಾನ್ನ ಕರಕೋತಿಯೇನ..?"

" ಇಲ್ಲೆಪ್ಪಾ " ರಾಮಿಗೆ ಈ ಉತ್ತರ ಕೊಡಲೇ ಬೇಕಾಗಿತ್ತು.

ಇಬ್ಬರಿಗೂ ಅಪ್ಪಣೆ ದೊರೆಯಿತು. ತಿಮ್ಮ ಮಧ್ಯರಾತ್ರಿಯ ಸುಮಾರಿಗೆ ಅಲ್ಲಿಂದ ರಾಮಿಯೊಡನೆ ಹೊರಟ.

\+ \+ \+ ×

ರಾಮಿಯನ್ನು ಚಾವಡಿಗೆ ಒಯ್ದ ಸಂಗತಿ ಸಂಗನಿಗೆ ಹೇಗೋ ತಲುಪಿತು.

ತಿಮ್ಮ-ರಾಮಿಯರು ಬಂಡಿಯಲ್ಲಿ ಬಿಟ್ಟುಹೋದ ಸ್ವಲ್ಪ ಹೊತ್ತಿನಲ್ಲಿ ಊಟಕ್ಕೆ ಆಣಿಯಾದರು. ಹಸಿದು ಕಕ್ಕಾಂತರಾದ ಇನ್ಸ್‌ಪೆಕ್ಟರ ಸಾಹೇಬರಿಗೆ ಕೋಳಿಯ ಪದಾರ್ಥ ಬಲು ರುಚಿಯೆನಿಸಿತು. ಅವರು ಕೈ ಸಡಿಲು ಬಿಟ್ಟು ತಿನ್ನುವುದನ್ನು ನಡೆಯಿಸಿದರು. ಮಿಕ್ಕ ಪೋಲೀಸರು ತಮ್ಮ ಬಂದೂಕುಗಳನ್ನು ಒಂದಕ್ಕೊಂದು ತಳುಕು ಹಾಕಿ ನಿಲ್ಲಿಸಿ, ಬಂಕದಲ್ಲಿ ಊಟಕ್ಕೆ ಕುಳಿತಿದ್ದರು. ಅದೇ ಮುಗಿದ ರಾಮಿಯ ವಿಚಾರಣೆಯ ಮಾತುಗಳೇ ನಡೆದಿದ್ದುವು.

ಒಮ್ಮೆಲೆ ಎಂಟು ಜನ ಪೋಲೀಸ ವೇಷದವರೂ, ಒಬ್ಬ ಖಾದಿಯವನೂ ಚಾವಡಿಯನ್ನು ಪ್ರವೇಶಿಸಿದರು.

" ಸಲಾಮ್ ಸಾಬ್ " ಬಂದವರಲ್ಲಿ ಒಬ್ಬನು ನುಡಿದ.

" ಸಲಾಮ್ ಸಲಾಮ್ " ಊಟಕ್ಕೆ ಕುಳಿತವರಲ್ಲಿ ಕೆಲವರು ಮಾನ್ಯ ಮಾಡಿದರು.

ಖಾದಿಯವನ ಕಡೆಗೆ ಬೊಟ್ಟು ಮಾಡಿ ಒಂದವರಲ್ಲಿ ಒಬ್ಬನು ಹೇಳಿದ.

" ಎ ಸಂಗ್ಯಾಕಾ ಸಾಥೀದಾರ್ ಹೈ. ಏಭೀ ಬಡಾ ಅಸ್ಸಲ ಸೈ ಸಾಲಾ (ಇವನು ಸಂಗ್ಯಾನ ಒಡನಾಡಿ; ಇವನೂ ಪಕ್ಕಾ ತುಂಟ ನಿದ್ದಾನೆ !) "

ಎಲ್ಲರೂ ಅವನನ್ನೇ ನೋಡಹತ್ತಿದರು.

" ಅಂದರ್ ಸಾಬ ಹೈ, ನರದೀ ದೇನಾ (ಒಳಗೆ ಸಾಹೇಬರು ಇದ್ದಾರೆ, ಅವರಿಗೇ ವಿಷಯ ಹೇಳಿರಿ!) "

ಬಂದವರು ನಾಲ್ಕು ಕಡೆಗೂ ಸೂಕ್ಷ್ಮವಾಗಿ ದೃಷ್ಟಿಯನ್ನು ಜಿಲ್ಲಿ ಸ್ಥಿತಿ-ಗತಿಯನ್ನು ನೋಡಿಕೊಂಡರು. ಅಷ್ಟರಲ್ಲಿ ಹಳ್ಳಿಗಾಡ ವೇಷದ ೩೦-೪೦ ಜನರು, ಹುತ್ತಿನಿಂದ ಇರುನೆಗಳು ಬರುವಂತೆ ಬುದು ಬುದು ಬಂದು ಚಾವಡಿಯಲ್ಲಿ ಹೊಕ್ಕರು. ಕೆಲವರು ಅಲ್ಲಿ ನಿಲ್ಲಿಸಿ ಬಂದೂಕುಗಳನ್ನೆತ್ತಿದರು. ನಾಲ್ಕಾರು ಜನರು ಕೋಣೆಯೊಳಹೊಕ್ಕು ಇನ್ಸ್‌ಪೆಕ್ಟರರನ್ನು ಹೆಡಮುರಿಗೆ ಕಟ್ಟಿ, ಪಿಸ್ತೂಲನ್ನು ಸ್ವಾಧೀನಪಡಿಸಿಕೊಂಡರು. ಊಟಕ್ಕೆ ಕುಳಿತ ಪೋಲೀಸರನ್ನೆಂತೂ ಹಾಗೆಯೆ ಹಗ್ಗಗಳಿಂದ ಬಿಗಿಯಲಾಯಿತು ಈ ಎಲ್ಲ ಕೃತಿಗಳೂ ಏಕಸಮಯಾವಚ್ಛೇದದಿಂದ ನಡೆದಿದ್ದುವು. ಎಲ್ಲರೂ ಮೈತುಂಬಿದವರಂತೆ 'ಹುಯ್ ಹುಯ್' ಎಂದು ಹುಂಕರಿಸುತ್ತಿದ್ದರು. ಹತ್ತಿರದ ಬಂದೂಕುಗಳನ್ನು ಕೈಬಿಟ್ಟುಹೋದದ್ದರಿಂದ ಪೋಲೀಸರು ತೀರ ಹತವೀರ್ಯರಾಗಿದ್ದರು

೫೨ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೪-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು
ವಿಳಾಸ:- ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ. ಮುಂಬಯಿ

ತಮ್ಮ ಸ್ಥಿತಿಯೇ ಹೀಗೆ ಅನುಕಂಪನೀಯವಾದಾಗ ಇನ್ಸ್ಪೆಕ್ಟರನ್ನು ದೇವರೇ ಕಾಪಾಡಬೇಕು ಎಂದು ಅವರು ಬಯಸಿದರು. ತುಂಟಂ ಏನು ಮಾಡಬೇಕೆಂಬುದನ್ನು ನಿರ್ಧರಿಸಿಕೊಂಡು ಬಂದವರಂತೆ ಚಟಜಟ ಎಲ್ಲವನ್ನೂ ಮುಗಿಸಿ, ತಮಗೆ ಬೇಕಾದ ವಸ್ತುಗಳನ್ನೆತ್ತಿಕೊಂಡು 'ಸಂಗಪ್ಪಾಕೀ ಜೈ!' 'ಇನ್ಸ್ಪೆಲಾಬ್ ಜಿಂದಾಬಾದ್!' ಎಂದು ಘೋಷಣೆಮಾಡುತ್ತ, ಅರೆಗಳಿಗೆಯಲ್ಲಿ ಅಲ್ಲಿಂದ ಅದೃಶ್ಯರಾದರು. ರಾಮಿಯನ್ನು ಬಿಡಿಸಬೇಕೆಂದು ಬಂದಿದ್ದ ಅವರು ತಮ್ಮ ಕಾಯಕವನ್ನು ಈ ರೀತಿಯಲ್ಲಿ ಕೊನೆಗಾಣಿಸಿದರು.

× × × ×

ತಿಮ್ಮನ ಬಂಡಿ ಕಗ್ಗತ್ತಲೆಯಲ್ಲಿ ನಿಧಾನವಾಗಿ ಸಾಗಿತ್ತು. ತಗ್ಗು-ಬಿಟ್ಟ, ಕೊರಕಲು-ಹರಕಲು ಇವುಗಳನ್ನು ಎತ್ತುಗಳೇ ನೋಡಿಕೊಂಡು ದಾರಿ ತುಳಿಯುತ್ತಿದ್ದುವು. ತಿಮ್ಮನ ಮನಸ್ಸೆಲ್ಲ ಎಲ್ಲಿಯೋ ಇತ್ತು. ರಾಮಿಗೆ ಕೇಳಬೇಕಾದದ್ದನ್ನೆಲ್ಲ ಮನೆಗೆ ಹೋದಮೇಲೆಯೇ ಕೇಳುವುದೆಂದು ಅವನು ತನ್ನ ಬಾಯಿಗೆ ಬೀಗ ಹಾಕಿದ್ದ. ಅವನು ಮಾತಿನವನಲ್ಲ; ಕೃತಿಯವನು. ಮನಸ್ಸಿನಲ್ಲಿ ಬಂದುದನ್ನು ಮಾಡಿಯೆ ಬಿಡುವುದು; ಪರಿಣಾಮದ ವಿಚಾರ ಆಮೇಲೆ. ಮನೆಗೆ ಹೋದ ಮೇಲೆ ಏನೇನು ಮಾಡಬೇಕೆಂಬುದನ್ನೂ ಅವನು ಮನಸ್ಸಿನಲ್ಲಿಯೇ ಲೆಕ್ಕಹಾಕುತ್ತಿದ್ದ. ರಾಮಿ ಎರಡೂ ಮೊಣಕಾಲುಮೇಲೆ ತನ್ನ ತಲೆಯನ್ನಿರಿಸಿ, ತೋಳಿನ ಮಧ್ಯದಲ್ಲಿ ಮುಖವನ್ನಡಗಿಸಿ, ಕಣ್ಣೀರು ಸುರಿಸುತ್ತಿದ್ದಳು. ವಿಚಾರಣೆಯಲ್ಲಿಯ ತನಗೆ ಅರ್ಥವಾದ ಎಷ್ಟೋ ಅಂಶಗಳನ್ನು ಅವಳು ಪುನಃ ನೆನಸಿಗೆ ತಂದುಕೊಂಡಳು. ಆದರೆ ಪೋಲೀಸ್ ಸಾಹೇಬರ ಕೊನೆಯ ನಿರ್ಣಯವು ಅವಳಿಗೆ ಅರ್ಥವಾಗದೆ ಹೋಯಿತು. ಬಂದವನು ಸಂಗನೆಂದು ತಾನು ಹೇಳಿದ್ದನ್ನು ಮೊದಲು ನಂಬಿ, ತರುವಾಯ ನಿರಾಕರಿಸಿ, ಈಗ ತನ್ನ ಗೆಣೆಯ ಎಂದು ಹೇಳಲು ತನಗೆ ಒತ್ತಾಯಪಡಿಸಿದ್ದು ಕೇವಲ ಅನ್ಯಾಯವೆಂದು ಅವಳು ಭಾವಿಸಿದಳು. ಏನೇ ಆಗಲಿ, ಮನೆಗೆ ಹೋದ ಮೇಲೆ ಗಂಡನಿಗೆ ಸಾದ್ಯಂತ ಸಮಾಚಾರವನ್ನು ಇದ್ದುದಿದ್ದ ಹಾಗೆ ತಿಳುಹಿಸಬೇಕೆಂದು ಅವಳು ಯೋಚಿಸಿದಳು. ಆದರೂ ಅವಳಿಗೆ ಅಂಜಿಕೆಯೆನಿಸುತ್ತಿತ್ತು. 'ಗಂಡ ಮುಂಗೋಪಿ, ಸಿಟ್ಟಿನ ಕೈಯಲ್ಲಿ ಬುದ್ಧಿಕೊಟ್ಟರೆ ಮಾಡುವುದೇನು?' ಎಂದು ಅಕೆ ತುಂಬ ವ್ಯಸನಕ್ಕೀಡಾದಳು.

ಮನೆ ಬಂತು. ತಿಮ್ಮ ಎತ್ತಿನ ಕೊರಳು ಹರಿದು ಅವನ್ನು ಕೊಟ್ಟಿಗೆಯಲ್ಲಿ ಕಟ್ಟಿದ ಅಷ್ಟರಲ್ಲಿ ರಾಮಿ ದೀಪ ಅಂಟಿಸಿದಳು. ತಿಮ್ಮ ಒಂದು ಬಲವಾದ ಹಗ್ಗದೊಂದಿಗೆ ಒಳಗೆ ಬಂದು; ಬಾಗಿಲನ್ನಿಕ್ಕಿಕೊಂಡ.

"ಇಲ್ಲೆ ಬಾ ಇಲ್ಲೆ," ತಿಮ್ಮನ ದನಿ ಏರಹತ್ತಿತು. "ನನ್ನ ಸಂತಿಗೆ ಕಳಸಿ ಯಾಂವ ಗೆಣೆಯಾನ್ನ ಕರಕೊಂಡು ಮಲಗಿದ್ದಿ? ಹತ್ತು ವರ್ಸ ನನ್ನ ಸಂಗತಿ ಬಾಳಿಮಾಡಿ, ಈ ಬುದ್ದಿ ಯಾಕ ಬಂತು ನಿನಗ?" ತಿಮ್ಮನ ದನಿ ಹೆಚ್ಚಿಬ್ಬು ಮೇಲೆ ಹೋಗ ತೊಡಗಿತು. ತಿಮ್ಮನ ಚೀತ್ಕಾರಕ್ಕೆ ಗುಡಿಸಿಲಿನ ಮೇಲಾರ ಕುಪ್ಪಳಿಸಿ ಬೀಳುವುದೇನೋ ಎನಿಸಿತು. ರಾಮಿಯ ಆದ್ಯಂತ ದೇಹವೆಲ್ಲ ಗದಗುಟ್ಟಿ ನಡುಗಹತ್ತಿತು.

"ಹೇಳ್ತಿಯೆಲ್ಲೋ ಯಾರು ಬಂದಿದ್ದರು?"

"ಖರೆಪಾಗಿ ಸಂಗನಗೌಡರಕ ಬಂದಿದ್ದರು!"

"ಪೋಲೀಸರ ಮುಂದ 'ಗೆಣೆಯ ಬಂದಿದ್ದ' ಅಂತ ಒಪ್ಪಿಕೊಂಡು ಈಗ ನನ್ನ ಬಾಯಿ ಬಡೀತಿ?"

"ನಾ ಹೇಳೋದ್ನ್ನಕರ ಪೂರಾ ಕೇಳು!"

"ಕೇಳೋದು ಮುಗದಕ ಹೋಗೈತಿ. ನೀ ಹಾದರಾಮಾಡಿದ್ದು ಸರಕಾರದಾಗ ರಿಜಿಸ್ಟರಾತು! ಆದರೂ ನನ ಮುಂದ ಸುಳ್ಳು ಸಾಧಿಸೋದು ಬಿಡವೊಲ್ಲಿ. ಕಡೆತನಕ ಇದನ್ನಕ ಸಾಧಿಸು!"

"ನಿನಗ ಎಡ್ಡು ಮಾಡಿಲ್ಲ ನಾ....ಪೋಲೀಸ ಸಾಬ ಮಸಲತ್ತು ಮಾಡಿಕೊಂಡು ನನಗ ಹೀಂಗ ಹೇಳಾಕ ಬೇಕು ಅಂತ ಜಬರು ಮಾಡಿದ. ಎಲ್ಲಾ ಅನಂದಕ ಕುತಂತ್ರ!"

"ನೀ ಒಪ್ಪಿಕೊಂಡಿಲ್ಲೋ ಅವನೆದುರಿಗೆ?"

"ಹೌದು, ಒಪ್ಪಿಕೊಂಡೆ! ಹೀಂಗ ಹೇಳಾಕ ಬೇಕು ಅಂದ"

"ನೀ ಜಾಸ್ತೀ ಮಾತಾಡಬ್ಯಾಡ. ತಿಳೀತು ನಿನ್ನ ನೆಲಿ. ಮದುವ್ಯಾಗಿ ಬಂದಾನತುಟ್ಟು ನನ್ನ ಮ್ಯಾಗ ಏಟಾಕೊಂಡು ಪಿರೂತಿ ತೋರಿಸಿದಿ. ಒಂದಿನಾ ಸೈತ ನನ್ನ ಬಿಟ್ಟು ಇರಾಕಿಲ್ಲ ನೀನು! ಈಗ ನಾ ಬ್ಯಾಡಾಗಿ ನಿನಗ ಗೆಣೆಯ ಬೇಕಾದ್ನ? ಇನ್ನ ನಿನ್ನ ಜೀವದಿಂದ ಇಡೂದಿಲ್ಲ. ಮುಂದ ಬಾ ಇಲ್ಲೆ. ಎರಡೂ ಕೈಜೋಡಿಸಿ ನಿಲ್ಲು! ಹುಂ, ಸುಮಾಕ ನಿಲ್ಲು, ನಿಲ್ತೀಯೋ ಏನು ಬಿಗೀಲ್ಯೊ?"

ರಾಮಿ ನಡುಗುತ್ತ ಹಾಗೆ ನಿಂತಳು. ತಿಮ್ಮ ಅವಳ ಕೈಕಾಲುಗಳನ್ನು ಹಗ್ಗದಿಂದ ಬಿಗಿದು, ಕತ್ತನ್ನು ಕೈಗಳ ಸಂದಿನಲ್ಲಿ ಸೇರಿಸಿ, ಬೆನ್ನ ಮೇಲೆ ಜಾಡಿಸಿ ಒದೆದು ಅವಳನ್ನು ನೆಲಕ್ಕೆ ಕೆಡಹಿದ. ಆಗ ರಾಮಿಯ ಅವಸ್ಥೆ ಏನಾಗಿರಬಹುದು? ಅದನ್ನು ಊಹಿಸುವುದಕ್ಕೂ ಮನಸ್ಸು ಹಿಂಜರಿಯುತ್ತದೆ. ಇಷ್ಟಕ್ಕೇ ಅವಳ ಯಾತನೆ ಮುಗಿಯಲಿಲ್ಲ. ಬಟ್ಟೆಯ ಚೆಂದೊಂದನ್ನು ಅವಳ ಬಾಯಲ್ಲಿ ತುರುಕಲಾಯಿತು. ತಿಮ್ಮನ ಮೈಯಲ್ಲಿ ಆಗ ಪಿಶಾಚಿಯೇ ಸೇರಿಕೊಂಡಿತ್ತು. ಕಟ್ಟಿಗೆ ಒಡೆಯುವ ಕೊಡಲಿ ಅವನ ಕೈಯಲ್ಲಿ ಕಾಣತೊಡಗಿತು. ಆಗ ಮಾತ್ರ ರಾಮಿಗೆ ನಿಜವಾಗಿಯೇ ಎದೆಯೊಡೆದು ನೀರಾಯಿತು. ಆಗೇನು ಮಾಡಲು ಸಾಧ್ಯವಿತ್ತು? ತಿಮ್ಮ ಕೊಡಲಿಯನ್ನೆತ್ತಿದವನೆ ಕುತ್ತಿಗೆಯ ಮೇಲೆ ಕಚ್ ಕಚ್ ಎಂದು ಎರಡೇಟು ಹಾಕಿದ. ಆ ಹೊಡೆತಕ್ಕೆ ರಾಮಿಯ ಕಂಠನಾಳ ಕತ್ತರಿಸಿ, ಅರೆನಿಮಿಷದಲ್ಲಿ ಅವಳ ಪ್ರಾಣ ದೇಹ ಬಿಟ್ಟು ತೊಲಗಿತು.

ಶ್ರೀರಂಗ ಸಾರಸ್ವತ

ಪ್ರಪಂಚ ಪಾಣಿಪತ್ತು

ಸಂಸಾರಿಗ ಕಂಸ

ಶ್ರೀರಂಗರ ಎರಡು ಸ್ವತಂತ್ರ ಸಾಮಾಜಿಕ ನಾಟಕಗಳು ರಂಗಮಂಗ ಪ್ರಕಾಶನದಲ್ಲಿ ಬೇಗನೆ ಪ್ರಕಟವಾಗಲಿವೆ.

ನಿಮ್ಮ ಪ್ರತಿಗಳಿಗಾಗಿ ಮುಂಚಿತವಾಗಿ ಬರೆಯಿರಿ.

C/o. ಮ್ಯಾನೇಜರ್, 'ಜಯಂತ', ಧಾರವಾಡ.

ಕೊಡಲಿಯನ್ನೊಗೆದು ಬಾಗಿಲನ್ನಿಕ್ಕಿಕೊಂಡು ತಿಮ್ಮ ಎದುರಿನ ಮಾವಿನ ಮರದಡಿಯ ಕಟ್ಟೆಯ ಮೇಲೆ ಬಂದು ಕುಳಿತ.

ಬೆಳಕು ಹರಿಯುವುದಕ್ಕೆ ಇನ್ನೂ ಮೂರು ಗಂಟೆ ಅವಧಿಯಿತ್ತು. ತಿಮ್ಮ ಕತ್ತಲನ್ನೇ ಶೂನ್ಯದೃಷ್ಟಿಯಿಂದ ನೋಡುತ್ತ ಹಾಗೆಯೆ ಕುಳಿತ. ಆಗ ಅವನ ಮನಸ್ಸು ಸಾವಿರ ಬಿರುಕುಗಳನ್ನು ಬಿಟ್ಟ ಕನ್ನಡಿಯಂತಾಗಿತ್ತು. ನಸುಕಿನ ತಂಗಾಳಿಗೆ ಅವನಿಗೆ ತೂಕಡಿಕೆ ಬಂದು, ಕಣ್ಣು ಮುಚ್ಚಿಕೊಂಡುವು.

ಕೆಲಹೊತ್ತು ಕಳೆಯಿತು. ಯಾರೋ ಅವನ ಹೆಗಲ ಮೇಲೆ ಕೈಯಿಟ್ಟು ಅವನನ್ನೆಚ್ಚರಿಸಿದರು! ಕಣ್ದೆರೆದು ನೋಡಿದ— ಒಬ್ಬ ಖಾದಿಯ ವೇಷದವನು ಎದುರಿಗೆ ನಿಂತಿದ್ದ! ತಿಮ್ಮನಿಗೆ ದಿಗಿಲು ಬಡಿದಂತಾಗಿ, ಪೋಲೀಸರೇ ತನ್ನನ್ನು ಹಿಡಿಯಲು ಬಂದರು ಎಂದುಕೊಂಡ. ಆದರೂ ಧೈರ್ಯ ತಂದುಕೊಂಡು ಬಂದವನನ್ನು ದಿಟ್ಟಿಸಿ ನೋಡಿದ.

" ತಿಮ್ಮನಾಯಕ ನೀನಕ ಏನು ? " ಬಂದವನು ಕೇಳಿದ.

" ಹೌದೆಪ್ಪಾ ! "

" ಸಂಗನಗೌಡರು ರಾಮವ್ವಗ ಈ ಖಾದೀ ಸೀರಿ, ನಿನಗ ೫೦ ರೂಪಾಯಿ ಕೊಟ್ಟು ಬಾ ಅಂತ ಕಳಿಸ್ಯಾರ. ನಿನ್ನೆ ಪೋಲೀಸರ ಕೈಯಾಗಿಂದ ಅವರ್ನ ಪಾರು ಮಾಡಿದಕಂತ ಆ ತಾಯಿ. ತಂಗಿಗಿದು ಗೌಡರ ಉಡಗೊರಿ— ನಿನ್ನೆ ನಿಮ್ಮನ್ನ ಪೋಲೀಸರು ಚಾವಡ್ಯಾಗ ಹೊಡದು ಬಡದು ಮಾಡಲಿಲ್ಲ ಹೌದಲ್ಲೊ ? "

" ಇಲ್ಲೆಪ್ಪಾ, ಹಂತಾದೇನೂ ಮಾಡಲಿಲ್ಲ ! "

" ನಿಮ್ಮನ್ನ . ಬಿಡಿಸಿಕೊಂಡು ಬರಲಿಕ್ಕಂತ ಗೌಡರು ಅಲ್ಲಿಗೆ ತಮ್ಮ ಮಂದಿನ್ನ ಕಳಿಸಿದ್ರು. ಆಟರಾಗಕ ನೀವು ಬಂದು ಬಿಟ್ಟಿದ್ರಿ ! "

" ಹೌದು ಅಪ್ಪನವರ, ನಮ್ಮನ್ನ ಹೋಗರಿ ಅಂತ ಕಳಿಸಿದರ್ರಿ, ಬಂದೆವು ! "

" ರಾಮವ್ವ ಮಲಗ್ಯಾಳೇನು ? "

"ಇಲ್ಲೆಪ್ಪಾ" ತಿಮ್ಮನಿಗೆ ಏನು ಹೇಳಬೇಕೆಂಬುದು ತೋಚಲಿಲ್ಲ. ಆವನು ನಡುನಡುವೆ ಉಸುಗರೆಯುತ್ತಿದ್ದ. ಬೆರಳುಗಳನ್ನು ಹಿಸುಕಿಕೊಳ್ಳುತ್ತಿದ್ದ. ಅತೀವ ವೇದನೆಯಾದವನು ಕಸವಿಸಿ ಪಡುವಂತೆ ಅವನ ಚಲನವಲನಗಳು ನಡೆದಿದ್ದುವು. ಬಂದವನಿಗೆ ತಿಮ್ಮನ ದೇಹಾಲಸ್ಯದಿಂದ ಬಳಲುತ್ತಿರಬೇಕು—ಎನಿಸಿತು.

" ಯಾಕ ತಿಮ್ಮಯ್ಯಾ, ಮೈಯಾಗ ಪಾಡಿಲ್ಲೇನು ? "

" ಇಲ್ಲೆಪ್ಪಾ, ಕಸಾರಿಕಿ ಆದ್ಹಾಂಗ ಆಗ್ಯೆತಿ ! "

" ಗಳ್ಳ್ಯಾಗ ಯಾಕ ಕುಂತಿ ? ಒಳಗ ಹೋಗಿ ಮಲಗು. ರಾಮವ್ವ ಎಲ್ಲ್ಯದಾಳು ? "

"ಹರ್ಯಾಕ ಎದ್ದು ಕಟಿಗೀ ಆರಸಾಕ ಹೋಗ್ಯಾಳ್ರಿ " ತಿಮ್ಮನಿಗೆ ಈ ಮಾತು ತೋಚಿತು.

" ಆತ , ಬಂದಮ್ಯಾಲ ಈ ಸೀರೀ ಕೊಡು ಮತ್ತ ಗೌಡರ ನಿಮ್ಮಿಬ್ಬರಿಗೂ ಶರಣಾರ್ತಿ ಹೇಳ್ಯಾರು. ಒಮ್ಮೆ ಯಾವಾಗರಕ ಬಂದ ಬೆಟ್ಟಿ ಆಗ್ತಾರಂತ ! ಹೋಗತೀನಿ ನಾನು, ಬೆಳಕು ಹರಿಯೋದರಾ ನಾ ನಮ್ಮ ಜಾಗಾಕ್ಕ ಮುಟ್ಟಬೇಕು" ಎಂದು ಹೇಳಿ ಆ ಖಾದಿಯವನು ರೂಪಾಯಿ, ಸೀರಿ ತಿಮ್ಮನ ಕೈಯ್ಯಲ್ಲಿರಿಸಿ ಕ್ಷಣದಲ್ಲಿ ಕಣ್ಮರೆಯಾದ.

ತಿಮ್ಮ ರೂಪಾಯಿ ಸೀರಿ ಕೈಯಲ್ಲಿ ಹಿಡಿದುಕೊಂಡು, ಒಂದೊಂದೆ ಹೆಜ್ಜೆಯಿಕ್ಕುತ್ತ ಬಾಗಿಲು ತೆರೆದು ಒಳಗೆ ಬಂದ. ಸೀರೆಯನ್ನು ರಾಮಿಯ ಮೈಮೇಲೆ ಹೊದ್ದಿಸಿದ. ಅವಳ ಮುಖದಲ್ಲಿ ತನ್ನ ಮುಖವನ್ನಿಟ್ಟು ಕುತ್ತಿಗೆಯ ಶಿರ ಹರಿದು ಬೀಳುವಂತೆ ಭೋರಿಟ್ಟು ಅಳತೊದಗಿದ. ಕಾಡಿನಲ್ಲಿಯ ತೋಟ! ಕತ್ತಲೆಯ ರಾತ್ರಿ ! ತಿಮ್ಮನ ಅಳುವು ಕಾಡನ್ನು ಭೀಕರಗೊಳಿಸಿತು.

ಆ ಹು ತಿ

(ಬಂದು ಲಘು ಕಥೆ)*

ಶ್ರೀ ಪ. ಸು. ಭಟ್ಟ, ಶಿರಸಿ

ಆ ಹರಕು ಮುರುಕು ಗುಡಿಸಿಲಲ್ಲಿ ಕುಳಿತು ಆ ತರುಣಿಯು ರಾತ್ರಿಯ ನೀರವತೆಯನ್ನು ತನ್ನ ಕರುಣ ಮತ್ತು ಅಸ್ಪುಟ ಸ್ವರದಿಂದ ಭಂಗಮಾಡುತ್ತ ಹೇಳಹತ್ತಿದಳು:—" ಹೇ ದೇವಾ ! ಈ ಯುದ್ಧವನ್ನು ನಿಲ್ಲಿಸುವ ಸುಬುದ್ಧಿಯನ್ನು ರಾಜರಿಗೆ ಕೊಡು ಮತ್ತು ನನ್ನ ಅಸಹಾಯ ಶಿಶುವಿನ ತಂದೆಯನ್ನು ರಕ್ಷಿಸು....." ಅವಳ ಕಂಠ ಬಿಗಿದು ಬಂತು. ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಸುರಿಯಹತ್ತಿತು.

ಶಿಬಿರದಲ್ಲಿ ಸೇನಾಪತಿಯು ವಿಜಯದಿಂದ ಉನ್ಮತ್ತನಾಗಿ ಯೋಚಿಸುತ್ತಿದ್ದನು. " ನಾನು ಅಭೂತಪೂರ್ವ ವಿಜಯವನ್ನು ಸಂಪಾದಿಸಿರುವೆ. ಜನಪಾನಿ ಸ್ವಲ್ಪ ಹೆಚ್ಚಾದರೂ ವಿಜಯ ದೊರಕಿಸಿಗುವೆ. ಆರಸನು ಅವಶ್ಯವಾಗಿ ನನ್ನನ್ನು ಗೌರವಿಸುವನು ಮತ್ತು ದೇಶದ ಪ್ರಮುಖ ವೀರರಲ್ಲಿ ನನ್ನ ಗಣನೆಯಾಗುವುದು. "

ರಾಜಪ್ರಾಸಾದದ ಕೋಮಲ ಶಯ್ಯೆಯ ಮೇಲೆ ಪವಡಿಸಿ ರಾಜನು ಆಲೋಚಿಸುತ್ತಿದ್ದ: ' ನಾನು ಸಾವಿರಕ್ಕಿಂತಲೂ ಹೆಚ್ಚಾದ ಭೂಮಿಯನ್ನು ವಶಪಡಿಸಿಕೊಂಡಿರುವೆನು. ಇಲ್ಲಿಯವರೆಗೆ ಯಾವ ಇಷ್ಟು ದೊಡ್ಡ ಭೂಭಾಗವನ್ನು ಆಳಲಿಲ್ಲ. ಇತಿಹಾಸದಲ್ಲಿ ನನ್ನ ಹೆಸರು ಸುವರ್ಣ ಅಕ್ಷರದಲ್ಲಿ ಬರೆಯಲ್ಪಡುವುದು. ನಾನು ಚಕ್ರವರ್ತಿ! ವಿಜಯಿ!! '

ಪ್ರತ್ಯೂಷದ ಕರಗತವಾಗುತ್ತಲಿದ್ದ ಸೈನಿಕನು ಚೀತ್ಕಾರ ಮಾಡಿದನು ' ನಾನು ದೇಶಭಕ್ತ ! ನನಗೆ ಸಂತೋಷವೇನೆಂದರೆ ನಾನು ದೇಶದ ಸಲುವಾಗಿ ನನ್ನ ರಕ್ತವನ್ನು ಸುರಿಸಿದೆ. ಮತ್ತು ಜೀವನವನ್ನು ಆಹುತಿ ಕೊಟ್ಟೆ '

---

* ೬೦ರ ಕತೆಯೊಂದರ ಅನುವಾದ.

ಸಂಯುಕ್ತ ರಾಷ್ಟ್ರಗಳ ರಾಜಶಾಸನ

(ಸ್ಯಾನ್ ಫ್ರಾನ್ಸಿಸ್ಕೊ ಚಾರ್ಟರ್)

ಶ್ರೀ. ನೆಗಳೂರ ರಂಗನಾಥ, ಎಂ. ಎ. ಧಾರವಾಡ

(ಈ ಲೇಖನದಲ್ಲಿ ಬಳಸಿದ ಕನ್ನಡ ಶಬ್ದಗಳ ಇಂಗ್ಲಿಶ್ ಪ್ರತಿಶಬ್ದಗಳನ್ನು ಇಲ್ಲಿ ಕೊಡಲಾಗಿದೆ.)

ರಾಜಶಾಸನ	— Charter	ನಿತ್ಯ-ಸದಸ್ಯ	— Permanent Member	ಅ ಸ್ವಾಯುತ್ತ	— Non-Self-governing
ಸಂಯುಕ್ತ ರಾಷ್ಟ್ರಗಳ ಸಂಘ	— 'United Nations'	ಅನಿತ್ಯ-ಸದಸ್ಯ	— Non-permanent Member	ವ್ಯೂಹ-ಕ್ಷಮ	— Strategic
ಸರ್ವತಂತ್ರ ಸ್ವತಂತ್ರ	— Sovereign	ಪಾರುಪತ್ಯಮಂಡಲ	— Trusteeship Council	ವ್ಯೂಹ-ಅಕ್ಷಮ	— Non-strategic
ಪ್ರಾದೇಶಿಕ ಅನಿಚ್ಛಿನ್ನತೆ	— Territorial Integrity	ಪಾರುಪತ್ಯ ಪದ್ಧತಿ	— Trusteeship System	ಪ್ರಶ್ನಾವಳಿ	— Questionnaire
ಸಾಧಾರಣ ಸಮಿತಿ	— General Assembly	ವಿಚಾರವಿನಿಮಯ	— Negotiation	ಕಕ್ಷಿ	— Party
ಸಂರಕ್ಷಣಾ ಸಮಿತಿ	— Security Council	ವಿಚಾರಣೆ	— Enquiry	ಹಿರಿ-ಕಾರ್ಯದರ್ಶಿ	— General Secretary
ನ್ಯಾಯಾಲಯ	— Court of Justice	ಮಧ್ಯಸ್ಥಿಕೆ	— Mediation	ಒಪ್ಪಂದ	— Treaty
ಅಧಿಕರಣ ಕಚೇರಿ	— Secretariat	ಸಾಮೋಪಾಯ	— Conciliation	ಸಂಕ್ರಮಣ ಕಾಲದ	— Transitional
ಶಸ್ತ್ರಸನ್ಯಾಸ	— Disarmament	ಪಂಚಾಯಿತಿ	— Arbitration	ಅನುಸಂಧಾನ	— Ratification
ಶಸ್ತ್ರಸಿಯಂತ್ರಣ	— Armaments Control	ನಿಷೇಧ ಪ್ರದರ್ಶನ	— Demonstration	ಅಂಕಿತ	— Signature
ಕಟ್ಟು	— Section	ದಿಗ್ಬಂಧನ	— Blockade	ರಾಸನ ಲೇಬ್ಯಕೆ	— Authenticity
				ದಸ್ತರಖಾನೆ	— Archives
				ನಿಯೋಗ	— Mandate

ಅರುವತ್ತು ದಿನಗಳ ಪರಿಶೆಗೆ ಚರ್ಚೆ ಮಾಡಿ ಕೊನೆಗೆ ಸಂಯುಕ್ತ ರಾಷ್ಟ್ರಗಳ ಪ್ರತಿನಿಧಿಗಳು ಶಾಸನವೊಂದನ್ನು ಸಿದ್ಧಪಡಿಸಿ ಜಗತ್ತಿನ ನುಮಂದೆ ಇಟ್ಟಿದ್ದಾರೆ. ಅಂತರ ರಾಷ್ಟ್ರೀಯ ಸಂಘದ ರೂಪರೇಷೆಯನ್ನು ನಿರ್ಣಯಿಸಲು ಸಮ್ಮೇಲನವೊಂದು ಸ್ಯಾನಫ್ರಾನ್ಸಿಸ್ಕೊದಲ್ಲಿ ನೆರೆದಿತ್ತು. ಅದರ ಫಲವೆ ಈ ರಾಜಶಾಸನ. ೧೦೦೦ ಶಬ್ದಗಳಿಗೂ ಮಿಕ್ಕಿದ ಈ ಶಾಸನವು ೧೯ ಪ್ರಕರಣಗಳಲ್ಲಿ ವಿಭಾಗಿಸಲ್ಪಟ್ಟಿದೆ; ೧೧೧ ಕಟ್ಟುಗಳು ಇವೆ. ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಪೀಠಿಕೆ— ಪೀಠಿಕಾ ಭಾಗದಲ್ಲಿ ಶಾಸನದ ಉದ್ದೇಶವನ್ನು ವಿವರಿಸಲಾಗಿದೆ. ಮಾನವೀಯ ಹಕ್ಕು-ಬಾಧ್ಯತೆ, ಸುಖ-ಸೌಲಭ್ಯಗಳನ್ನು ಭದ್ರವಾಗಿರಿಸಿ, ಜಾಗತಿಕ ಶಾಂತಿಯನ್ನು ಕಾಯುವುದಕ್ಕೆ ಒಕ್ಕಟ್ಟಿನಿಂದ ಬಲವನ್ನು ಕೂಡಿಸಿ, ಅಂತರ ರಾಷ್ಟ್ರೀಯ ಹೊಣೆ ಮತ್ತು ಕಾನೂನುಗಳಿಗೆ ಗೌರವ-ನ್ಯಾಯ ದೊರೆವ ಪರಿಸ್ಥಿತಿಯನ್ನು ನೆಲೆಗೊಳಿಸಲು ಯತ್ನಿಸಿ, ಯುದ್ಧ ಪ್ರಸಂಗಗಳು ಬಾರದಂತೆ ಮಾಡುವ ನಿರ್ಧಾರವನ್ನು ಮಾಡಿನೆಯೆಂದು ಈ ಮೂಲಕ ಸಂಯುಕ್ತ ರಾಷ್ಟ್ರಗಳು ಸಾರುತ್ತವೆ.

ಉದ್ದೇಶ ತತ್ತ್ವ— "ಸಂಯುಕ್ತ ರಾಷ್ಟ್ರಗಳು" ಎಂಬ ಹೆಸರಿನಲ್ಲಿರುವ ಜಾಗತಿಕ ಸಂಘವು ಜಾಗತಿಕ ಶಾಂತಿ-ಸಮಾಧಾನಗಳನ್ನು ಒಲುಮೆಯಿಂದ ಕಾಯುವುದಕ್ಕೆ ಪ್ರಯತ್ನಿಸುತ್ತದೆ. ಒಲುಮೆ ಸಾಧ್ಯವಾಗದಿದ್ದರೆ ಬಲುಮೆಯಿಂದಲಾದರೂ ಸಾಧ್ಯ ಮಾಡಲು ಹೆಣಗುತ್ತದೆ. ಸಮಾನಹಕ್ಕು—ಸ್ವಯಂನಿರ್ಣಯ ತತ್ತ್ವ ಇವುಗಳ ಸಹಾಯದಿಂದ ಅಂತರ ರಾಷ್ಟ್ರೀಯ ಪ್ರೀತಿ-ವಿಶ್ವಾಸಗಳನ್ನು ಬೆಳಸುವುದು ಅದರ ಗುರಿ. ಜಗದ್ವ್ಯಾಪಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳನ್ನು ಅಂತರ ರಾಷ್ಟ್ರೀಯ ಸಹಕಾರದಿಂದ ಬಿಡಿಸಲು ಪ್ರಯತ್ನ ಮಾಡುತ್ತದೆ. "ಜನಾಂಗ, ಭಾಷೆ, ಧರ್ಮ, ಲಿಂಗ ಇವುಗಳ ಭೇದಭಾವನಿಲ್ಲದೆ" ಮಾನವೀಯ ಹಕ್ಕು ಬಾಧ್ಯತೆಗಳಿಗೆ ಗೌರವ ಹೆಚ್ಚಿಸುವುದು.

ಯಾವುದೆ ಸರಕಾರದ ಪ್ರಾದೇಶಿಕ ಅನಿಚ್ಛಿನ್ನತೆಗೆ ಧಕ್ಕೆ ತಗಲದಂತೆ ಜಗಳ ಬಗೆಹರಿಸಲು, ಸರ್ವತಂತ್ರ ಸ್ವತಂತ್ರರೂ ಸಮಾನರೂ ಆದ ಸಂಘದ ಸದಸ್ಯರು ಪ್ರತಿಜ್ಞೆಗೈಯುತ್ತಾರೆ. ಈ ಸಂಘ ತಾನಾಗಿಯೆ ಯಾವ ಸರಕಾರದ ಮೇಲೂ ಅಭಿಯೋಗ ಮಾಡದು. ಜಾಗತಿಕ ಶಾಂತತೆಯನ್ನು ಸುರಕ್ಷಿತತೆಯನ್ನು ಕೆಡಿಸಲು ಈ ಆಶ್ವಾಸನದ ತತ್ತ್ವವು ಮಾತ್ರ ಛತ್ರವಾಗಬಾರದು.

ಸದಸ್ಯತ್ವ—ಸದ್ಯಕ್ಕೆ ಸದಸ್ಯರಲ್ಲದವರು, "ಶಾಂತಿಪ್ರೇಮಿ"ಗಳು "ಸಂಯುಕ್ತ ರಾಷ್ಟ್ರಗಳ ಸಂಘ"ಕ್ಕೆ ಸೇರಬಹುದು. ಶಾಸನದಲ್ಲಿಯ ಹೊಣೆ ಹೊರಲು ಸಿದ್ಧರಾಗಬೇಕು. ಈ ಹೊಸ ಸದಸ್ಯರನ್ನು ಸಂರಕ್ಷಣಾ ಸಮಿತಿಯ ಸೂಚನೆಯ ಮೇಲೆ ಸಾಧಾರಣ ಸಮಿತಿಗೆ ಸೇರಿಸಿಕೊಳ್ಳಬಹುದು. ಸದಸ್ಯರನ್ನು ಸೇರಿಸಿಕೊಳ್ಳುವುದು ತೆಗೆದುಹಾಕುವುದು

ಸಂರಕ್ಷಣಾ ಸಮಿತಿಯ ಅಧಿಕಾರಕ್ಕೆ ಒಳಪಟ್ಟುದು. ಶಾಸನದ ಧ್ಯೇಯ ಘೋರಣಗಳ ವಿರುದ್ಧ ವರ್ತಿಸುವವರನ್ನೂ ಹೊರಗೆ ಹಾಕುವುದನ್ನು ಸಾಧಾರಣೆ ಸಮಿತಿಗೆ ಸೂಚಿಸುವ ಅಧಿಕಾರವು ಸಂರಕ್ಷಣಾ ಸಮಿತಿಗೆ ಇದೆ.

ಅಂಗಸಂಸ್ಥೆ—ಸಂಯುಕ್ತ ರಾಷ್ಟ್ರಗಳ ಸಂಘದ ಅಂಗಸಂಸ್ಥೆಗಳು ಇಷ್ಟು: ಅಧಿಕರಣ ಕಚೇರಿ, ಸಾಧಾರಣ ಸಮಿತಿ, ಸಂರಕ್ಷಣಾ ಸಮಿತಿ ಮತ್ತು ನ್ಯಾಯಾಲಯ, ಅವಶ್ಯವಿದ್ದರೆ ಉಪಾಂಗಸಂಸ್ಥೆಗಳನ್ನೂ ಸ್ಥಾಪಿಸಲುಬಹುದು.

ಸಾಧಾರಣ ಸಮಿತಿ:—ಪ್ರತಿಯೊಂದು ಸದಸ್ಯ ಸರಕಾರದ ಪತಿಯಿಂದ ೫ಕ್ಕಿಂತ ಹೆಚ್ಚಲ್ಲದವರು ಸೇರಿದ ಸಮಿತಿ; ಸರಕಾರಕ್ಕೊಂದು ಮತ; ಸಮಿತಿ ವರುಷಕ್ಕೊಮ್ಮೆ ಕೂಡುವುದು; ಆಗತ್ಯ ಬಿದ್ದರೆ ಒಂದು ವಿಶೇಷ ಸಭೆ ಕರೆಯಬಹುದು. ಸಂಯುಕ್ತ ರಾಷ್ಟ್ರಗಳ ಚರ್ಚಾಕೂಟವೆಂದು ಈ ಸಮಿತಿಯಲ್ಲಿ ಶಾಸನಕ್ಕೆ ಒಳಪಟ್ಟ ವಿಷಯಗಳ ಬಗ್ಗೆ ಚರ್ಚಿಸಬಹುದು. ಮತ್ತು ಸದಸ್ಯಸರಕಾರಕ್ಕೆ, ಸಂರಕ್ಷಣಾ ಸಮಿತಿಗೆ ಸೂಚನೆ ಕಳಿಸಬಹುದು. ಸಂರಕ್ಷಣಾ ಸಮಿತಿಯಲ್ಲಿ, ವಿಚಾರ ನಡೆದಾಗ ಅವರಿಂದ ಕೇಳಿಕೊಳ್ಳದಿದ್ದಾಗ, ಸಂರಕ್ಷಣೆ ವಿಷಯವಾಗಿ ಯಾವ ಸೂಚನೆಯನ್ನು ಮಾಡಲಾಗದು.

ಸಮಿತಿಯು ಶಸ್ತ್ರಸಂನ್ಯಾಸ—ಶಸ್ತ್ರನಿಯಂತ್ರಣಗಳ ಬಗ್ಗೆ ವಿಚಾರಿಸಬಹುದು.. ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ,ಆರೋಗ್ಯಿಕ ಕ್ಷೇತ್ರಗಳಲ್ಲಿ ಆಂತರ ರಾಷ್ಟ್ರೀಯ ಸಹಕಾರವನ್ನೊದಗಿಸಲು ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸುವುದು, ಅವರ ಬಗ್ಗೆ ಅಭ್ಯಾಸ ನಡೆಸುವುದು, ಸಮಿತಿಯ ಕಾರ್ಯವೆಂದು ತಿಳಿಯಬಹುದು.

ಸಂರಕ್ಷಣಾ ಸಮಿತಿಯ ಅ-ನಿತ್ಯ ಸದಸ್ಯರನ್ನು, ಪಾರುಪತ್ಯ ಮಂಡಲದ ಸದಸ್ಯರನ್ನು ಮತ್ತು ಸಾಮಾಜಿಕ—ಆರ್ಥಿಕ ಸಮಿತಿಗಳ ಎಲ್ಲ ಸದಸ್ಯರನ್ನು ಆರಿಸುವ ಅಧಿಕಾರ ಈ ಸಮಿತಿಗೆ ಇದೆಯಲ್ಲದೆ. ಆಂತರ ರಾಷ್ಟ್ರೀಯ ನ್ಯಾಯಾಲಯದ ನ್ಯಾಯಮೂರ್ತಿಗಳನ್ನು ಆರಿಸುವುದರಲ್ಲಿಯೂ ಭಾಗಿಯಾಗುವುದು. ಸಂಘದ ಜೊಕ್ಕಸದ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ಮಾಡುವುದು.

ಮಹತ್ವದ ವಿಷಯದ ನಿರ್ಣಯವು, ಮತದಾನದ ಅಧಿಕಾರವಿದ್ದ ಸಭೆಗೆ ಬಂದ ಜನರಲ್ಲಿಯ ೨/೩ ದಷ್ಟು ಮತದಿಂದ ನಿರ್ಣಯವಾಗಬೇಕು. ಉಳಿದ ವಿಷಯಗಳ ಬಗ್ಗೆ ಬಹುಮತವಿದ್ದರೆ ನಡೆಯುವುದು.

ಸಂರಕ್ಷಣಾ ಸಮಿತಿ:—ಜಾಗತಿಕ ಶಾಂತತೆಯನ್ನು ಕಾಯುವ ಹೊಣೆ ಇದರ ಮೇಲೆ ಅದೆ. ಇದರಲ್ಲಿ ಹನ್ನೊಂದು ಸದಸ್ಯರು—ಇವರಲ್ಲಿ ಐವರು ನಿತ್ಯ ಸದಸ್ಯರು—ಯುನಾಯಿಟೆಡ್ ಸ್ಟೇಟ್ಸ್, ಯುನಾಯಿಟೆಡ್ ಕಿಂಗ್‌ಡಂ. ಸೋವಿಯೆಟ್ ಯೂನಿಯನ್, ಚೀನಾ, ಮತ್ತು ಫ್ರಾನ್ಸ್. ಉಳಿದವರು ಎರಡು ವರುಷಗಳ ಮಟ್ಟಿಗೆ ಆರಿಸುವರು. ಆರಿಸುವಾಗ, ಆಯಾ ಸರಕಾರದ ಪ್ರಾದೇಶಿಕ ವೈಶಾಲ್ಯ, ಮತ್ತು ಜಾಗತಿಕ ಶಾಂತತೆಯ ರಕ್ಷಣೆಗೆ ಅವರು ನೀಡಿದ ಸಹಾಯ, ಇವುಗಳನ್ನು ಅನುಲಕ್ಷಿಸಬೇಕು. ಸಮಿತಿಯ ನಿರ್ಣಯಗಳು ಏಳು ಜನ ಸದಸ್ಯರ ಬಹುಮತದಿಂದ ಆಗಬೇಕಲ್ಲದೆ, ನಿತ್ಯ ಸದಸ್ಯರೆಲ್ಲರ ಒಪ್ಪಿಗೆಯೂ ಇರಬೇಕು. ಸಂಯುಕ್ತ ರಾಷ್ಟ್ರಗಳ ಸಂಘದ ಯಾವುದೆ ಸದಸ್ಯ ರಾಷ್ಟ್ರ, ಮತದಾನವಿಲ್ಲದೆಯೂ ಸಮಿತಿಯ ಅಪ್ಪಣೆಯಿಂದ ಚರ್ಚೆಯಲ್ಲಿ ಭಾಗ ವಹಿಸಬಹುದು. ತೊಡಕು ಬಂದಾಗ ಸದಸ್ಯರಲ್ಲದವರನ್ನು ಸಮಿತಿಯ ನಿಯಮಗಳಿಗೆ ಒಪ್ಪಿಸಿಕೊಂಡು ಆಮಂತ್ರಿಸಬಹುದು.

ತೊಡಕು ತೀರಿಸುವಿಕೆ:—ತೊಡಕು ಬಂದಾಗ ತೊಡಕಿಗರು ಈ ಮೂಲಕ ಬಗೆಹರಿಸಿಕೊಳ್ಳಬೇಕು: ವಿಚಾರವಿನಿಮಯ, ವಿಚಾರಣೆ, ಮಧ್ಯಸ್ತಿಕೆ, ಸಾಮೋಪಾಯ, ಪಂಚಾಯತಿ, ನ್ಯಾಯಾಲಯದ ನಿರ್ಣಯ, ಮತ್ತು ಪ್ರಾದೇಶಿಕ ಹಸ್ತಕರ—ವ್ಯವಸ್ಥೆಯ ಸಹಾಯದಿಂದ ತೀರಿಸಿಕೊಳ್ಳಬೇಕು. ಇವು ಅವುಗೂ ಸಾಧ್ಯವಾಗದಿದ್ದರೆ ಸಂರಕ್ಷಣಾ ಸಮಿತಿಗೆ ಬೇಡಿಕೊಳ್ಳಬೇಕು. ಆಮೇಲೆ ಸಮಿತಿಯವರು ಒಳನೋಡಿ, ಬಡಿದಾಟ ಬಗೆಹರಿಸಬೇಕು. ಸಮಿತಿಯವರು ಸಾಮೋಪಾಯದ ರೀತಿಗಳನ್ನು ಸೂಚಿಸಬಹುದು. ಸಂ. ರಾ. ಸಂಘದ ಯಾವುದೆ ಸದಸ್ಯನೂ ಬಡಿದಾಟದ ಪ್ರಸಂಗದ ಅರಿವನ್ನು ಸಂರಕ್ಷಣಾ ಸಮಿತಿಗೆ—ಸಾಧಾರಣ ಸಮಿತಿಗೆ ಕೊಡಬಹುದು.

ಶಾಂತತಾಭಂಗಕ್ಕೆ:—ಶಾಂತತಾಭಂಗದ ಪ್ರಸಂಗ ಬಂದಿದೆಯೆಂದು ಸಂರಕ್ಷಣಾ ಸಮಿತಿಯವರು ನಿರ್ಣಯಕ್ಕೆ ಬಂದರೆ, ಎದುರಾಳಿಗಳಿಗೆ ಪ್ರಸಂಗ ಹದಗೆಡದಂತೆ ನೋಡಲು ಎಚ್ಚರಿಕೆ ಕೊಡುವುದು. ಆಗತ್ಯವಿದ್ದರೆ ಸಮಿತಿಯ ಸದಸ್ಯರ ಮುಖಾಂತರ, ರಾಜತಂತ್ರವ—ಆರ್ಥಿಕ ಒತ್ತಾಯದ—ಒತ್ತಡದಿಂದ ಹತ್ತಿಕ್ಕಲು ಹವಣಿಸಬೇಕು: ಆಗ ನಿಷೇಧಪ್ರದರ್ಶನ, ದಿಗ್ಬಂಧನಗಳಿಂದಲೂ ನೆಲ, ಜಲ, ವಾಯು ಸೈನ್ಯದಿಂದಲೂ ಹಣ್ಣಿಗೆ ತರಬಹುದು.

ಸದಸ್ಯ ಸರಕಾರದವರು ಸೈನ್ಯಕ್ಕೆ ದಾರಿ ಕೊಡಬೇಕು. ಉಳಿದ ಸಹಾಯ ಸಲ್ಲಿಸಬೇಕು. ಸಮಿತಿಯ ಯುದ್ಧಹಂಚಿಕೆಗಳೆಲ್ಲ ಸಮಿತಿಯ ಪರವಾಗಿದ್ದ ಸೈನಿಕ ಪ್ರವೀಣ ಸಮಿತಿಯಿಂದ ಸಿದ್ಧವಾಗಬೇಕು: ಸಮಿತಿಯವರು ಕೈಹಾಕುವ ತನಕ ಸದಸ್ಯ ಸರಕಾರದವರು ವೈಯಕ್ತಿಕವಾಗಿಯೂ ಸಾಂಘಿಕವಾಗಿಯೂ ಅಭಿಯೋಗವನ್ನೂ ಅತಿಕ್ರಮಣವನ್ನು ತಡೆಯಬಹುದು.

ಸ್ಥಾನಿಕ ವ್ಯವಸ್ಥೆ:—ಸ್ಥಾನಿಕ ಸಂರಕ್ಷಣಾ ಘಟಕಗಳು ಸ್ಥಳೀಯ ತೊಡಕುಗಳನ್ನು ಬಗೆಹರಿಸಲು ಸರ್ವ ಪ್ರಯತ್ನ ಮಾಡಬೇಕು. ಸಂರಕ್ಷಣಾ ಸಮಿತಿಯವರು ಸ್ಥಾನಿಕಘಟಕಗಳ ಸಹಾಯಪಡೆಯಬೇಕು. ಸ್ಥಾನಿಕ ಘಟಕಗಳು ತಮ್ಮ ಹೊಣೆಯ ಮೇಲೆ, ಯಾವ ಹೋರಾಟವನ್ನು ನಡೆಯಿಸಬಾರದು.

ಆಂತರ ರಾಷ್ಟ್ರೀಯ ಸಾಮಾಜಿಕ-ಆರ್ಥಿಕ—ಸಹಕಾರ:—ಪೀಠಿಕೆಯಲ್ಲಿ ಹೇಳಿದ ಮಾನವೀಯ ಉನ್ನತಿಗೆ ಅವಶ್ಯವಾದ ಸಹಾಯವನ್ನು ಸಂಯುಕ್ತ ರಾಷ್ಟ್ರಸಂಘದವರು ಮಾಡುತ್ತಾರೆಂದು ಪ್ರತಿಜ್ಞೆ ಮಾಡುತ್ತಾರೆ. ಈ ಗುರಿಯ ಸಾಧನೆಗಾಗಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆರೋಗ್ಯಿಕ ವಿಷಯಗಳ ಬಗ್ಗೆ ವಿಚಾರಿಸುವ ಆಂತರ ಸರಕಾರ ಸಂಸ್ಥೆಗಳನ್ನು ಸ್ಥಾಪಿಸಿ: ಸಂಯುಕ್ತ ರಾಷ್ಟ್ರಗಳ ಸಂಘಕ್ಕೆ ಸಂಬಂಧೀಕರಿಸಬೇಕು. ಸಾಧಾರಣ ಸಮಿತಿಯ ನೇತೃತ್ವದಲ್ಲಿ ಆರ್ಥಿಕ—ಸಾಮಾಜಿಕ ಸಮಿತಿಯವರು ಸಂಘದ ಈ ಚಟುವಟಿಕೆಗಳ ಮೇಲೆ ಮೇಲ್ವಿಚಾರ ನಡೆಯಿಸಬೇಕು.

ಆರ್ಥಿಕ-ಸಾಮಾಜಿಕ-ಸಮಿತಿ : ಹದಿನೆಂಟು ಜನ ಸದಸ್ಯರನ್ನೊಳಗೊಂಡ ಈ ಸಮಿತಿಯು ಅಭ್ಯಾಸ ಮಾಡಿ ವರದಿ ಒಪ್ಪಿಸುವುದು. ಈ ಸಮಿತಿಯು, ಸ್ಥಾನಿಕಸಮಿತಿಗಳೊಡನೆ ಸಂಬಂಧ ನಿಟ್ಟುಕೊಳ್ಳಬೇಕು. ಅವಶ್ಯವೆನಿಸಿದಾಗೆಲ್ಲ ಸೇರಬೇಕು. ಸಮಿತಿಯ ನಿರ್ಣಯಗಳೆಲ್ಲ ಬಹುಮತದಿಂದ ಸ್ವೀಕರಿಸಬೇಕು.

ಅ-ಸ್ವಾಯತ್ತ ಸರಕಾರಗಳುಳ್ಳ ಪ್ರದೇಶಗಳ ಬಗ್ಗೆ ಹೇಳಿಕೆ : ಅಸ್ವತಂತ್ರ ಪ್ರದೇಶಗಳ ಆಡಳಿತ ನಡೆಯಿಸುವ ಸಂಘದ ಸದಸ್ಯರು ಈ ರೀತಿ ವಚನ ಕೊಡುತ್ತಾರೆ :—

ಒಂದು : ರಾಜಕೀಯ, ಆರ್ಥಿಕ, ಸಾಮಾಜಿಕ, ಮತ್ತು ಶೈಕ್ಷಣಿಕ ಏಳಿಗೆಯ ಬಗ್ಗೆ ಆಸ್ಥೆ ವಹಿಸುವೆವು; ಅವುಗಳ ದುರುಪಯೋಗವಾಗದಂತೆ ಆ ಜನರನ್ನು ರಕ್ಷಿಸುವೆವು.

ಎರಡು : ಸ್ವಾಯತ್ತ ಸರಕಾರವು ಒದಗಿಬರುವಂತೆ ಮಾಡುವೆವು. ಜನತೆಯ ರಾಜಕೀಯ ಆಕಾಂಕ್ಷೆಗಳನ್ನು 'ಲೆಕ್ಕ'ಕ್ಕೆ ತೆಗೆದುಕೊಳ್ಳುವೆವು. ಪ್ರಾದೇಶಿಕ ಪ್ರಸಂಗಾನುಕೂಲತೆಗಳನ್ನು ಅನುಲಕ್ಷಿಸಿ ಸ್ವತಂತ್ರರಾಜಕೀಯ ಸಂಸ್ಥೆಗಳನ್ನು ಬೆಳೆಯಿಸುವುದರಲ್ಲಿ ನೆರವಾಗುವೆವು.

ಮೂರು : ಸಾರ್ವಜನಿಕ ಉನ್ನತಿಯಾಗುವುದಕ್ಕೆ ಬೇಕಾದ ಸಂಶೋಧನ ನಡೆಯಿಸುವುದರಲ್ಲಿ ಸಹಕಾರ ನೀಡುವೆವು.

ನಾಲ್ಕು : ಪಾರುಪತ್ಯ ಪದ್ಧತಿಗೆ ಸೇರ್ಪಡೆಯಾಗವ ಅಸ್ವತಂತ್ರ ಪ್ರದೇಶಗಳಲ್ಲಿಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಪರಿಸ್ಥಿತಿಯ ಬಗ್ಗೆ, ಅಂಕೆ-ಸಂಖ್ಯೆಗಳ, ತಾಂತ್ರಿಕ ಸುದ್ದಿ-ಸಂಗತಿಗಳನ್ನು ಸಂರಕ್ಷಣೆ ಮತ್ತು ಘಟನಾತ್ಮಕ ಬಂಧನಗಳನ್ನು ಅನುಲಕ್ಷಿಸಿ, ಜಾಗತಿಕ ಸಂಘದ ಹಿರಿಯ ಕಾರ್ಯದರ್ಶಿಗೆ ಒಪ್ಪಿಸುವೆವು.

ಅಂತರ ರಾಷ್ಟ್ರೀಯ ಪಾರುಪತ್ಯ ಪದ್ಧತಿ :— ಸಂಬಂಧಿಸಿದ ಸರಕಾರಗಳ ಸಮ್ಮತಿಯ ಮೇರೆಗೆ ಅಸ್ವತಂತ್ರ ಪ್ರದೇಶಗಳು ಈ ಪಾರುಪತ್ಯ ಪದ್ಧತಿಯ ಕೈಕೆಳಗೆ ಇಡಲ್ಪಡಬೇಕು. ಹೀಗೆ ಬರುವ ಪ್ರದೇಶಗಳೆಂದರೆ ಸದ್ಯ ನಿಯೋಗಕ್ಕೆ ಒಳಪಟ್ಟ ಪ್ರದೇಶಗಳು. ಈ ಯುದ್ಧದಲ್ಲಿಯ ರಕ್ತುಗಳ ಕೈಯಿಂದ ಬಿಡಿಸಿಪುವುಗಳು ಮತ್ತು ಉಳಿದ ಅಸ್ವತಂತ್ರನಿಪ್ಪು ತಾವೇ ಬಂದು ಸೇರಿಕೊಳ್ಳುವ ಪ್ರದೇಶಗಳು.

ಆಯಾ ಸರಕಾರಗಳ ಕರಾರುಗಳ ಕಟ್ಟುಗಳ ಮೇರೆಗೆ, ಜನರ ಇಚ್ಛೆಯ ಪ್ರಕಾರ, ಪ್ರದೇಶದ ಪರಿಸರಕ್ಕನುಗುಣವಾಗುವಂತೆ, ಸ್ವಾತಂತ್ರ್ಯವನ್ನೂ, ಸ್ವಾಯತ್ತ ಸರಕಾರವನ್ನೂ ಪಡೆಯಲು ನೆರವನ್ನೀಯುವುದೇ ಈ ಪಾರುಪತ್ಯ ಪದ್ಧತಿಯ ಗುರಿ. ಮತ್ತೊಂದು ಗುರಿಯೆಂದರೆ, ಮಾನವನ ಹಕ್ಕು-ಬಾಧ್ಯತೆಗಳನ್ನು ಗೌರವಿಸುವುದು; ಉತ್ತೇಜನ ಕೊಡುವುದು; ಭೇದಭಾವವನ್ನು ಅಳಿಸುವುದು. ಪಾರುಪತ್ಯ ಪತ್ರವು ಸಂಯುಕ್ತ ರಾಷ್ಟ್ರಗಳ ಸಂಘದ ಸದಸ್ಯರನ್ನು ಆಡಳಿತಗಾರರೆಂದು ನಿರ್ದೇಶಿಸುವುದು.

ಪಾರುಪತ್ಯ ಪ್ರದೇಶವು— ಅದರ ಭಾಗವು—ಸ್ಟ್ರಾಟೆಜಿಕ್ ಪ್ರದೇಶವೆಂದು ಕರಾರುಪತ್ರವು ನಿರ್ದೇಶಿಸಬಹುದು. ಇಂತಹ ಪ್ರದೇಶಗಳ ಆಡಳಿತವೆಲ್ಲ ಸಂರಕ್ಷಣಾ ಸಮಿತಿಯ ಕೈಯಲ್ಲಿ. ಉಳಿದ ಸ್ಟ್ರಾಟೆಜಿಕ್-ಅಲ್ಲದ ಪ್ರದೇಶಗಳ ಆಡಳಿತವೆಲ್ಲ ಸಾಧಾರಣ ಸಮಿತಿ ಕೈಯಲ್ಲಿ.

ಪಾರುಪತ್ಯ ಮಂಡಲ : ೫ ನಿತ್ಯ ಸದಸ್ಯರನ್ನು ಬಿಟ್ಟು ಸಮಿತಿಯಲ್ಲಿ ಪಾರುಪತ್ಯ ಪ್ರದೇಶಗಳ ಆಡಳಿತ ನಡೆಸುವವರಿಗೂ—ನಡೆಸದವರಿಗೂ ಸಮ ಪ್ರಾತಿನಿಧ್ಯ. ಆಡಳಿತಗಾರರಿಂದ ಸಮಿತಿಯವರು ವರದಿ ಒಪ್ಪಿಸಿಕೊಳ್ಳಬೇಕು; ಪಾರುಪತ್ಯ ಪ್ರದೇಶಕ್ಕೆ ಆಗಾಗ ಸಂದರ್ಶನ ಕೊಡಬೇಕು. ಸಮಿತಿಯವರು ಸಿದ್ಧಪಡಿಸಿದ ಪ್ರಶ್ನಾವಳಿಯ ಮೇರೆಗೆ, ಪ್ಯೂಹ-ಅಲ್ಲದ ಪ್ರದೇಶಗಳ ಆಡಳಿತಗಾರರು ವಾರ್ಷಿಕ ವರದಿಯನ್ನು ಸಿದ್ಧಪಡಿಸಬೇಕು. ನಿರ್ಣಯಗಳು ಬಹುಮತದಿಂದ ಸ್ವೀಕೃತವಾಗಬೇಕು. ಒಬ್ಬ ಸದಸ್ಯನಿಗೆ ಒಂದೆ ಮತ.

ಅಂತರ ರಾಷ್ಟ್ರೀಯ ನ್ಯಾಯಾಲಯ : ಶಾಸನದ ಅಧಿಕಾರದಿಂದ ಉದ್ಭವಿತವಾದ ನ್ಯಾಯಾಲಯಕ್ಕೆ ಸಂಯುಕ್ತ ರಾಷ್ಟ್ರಗಳ ಸಂಘದ ಸದಸ್ಯರು—ಸ್ವಯಂ ಕಕ್ಷಿಗಳು. ಸದಸ್ಯರಲ್ಲದವರು, ಸಂರಕ್ಷಣಾ ಸಮಿತಿಯು ಸೂಚನೆಯ ಪ್ರಕಾರ ಸಾಧಾರಣ ಸಮಿತಿಯವರು ಯಾವ ಕರಾರುಗಳಿಗೆ ಒಪ್ಪಿ ಕಕ್ಷಿಗಳಾಗಬಹುದು. ಸಂಘದ ಸದಸ್ಯರು, ತಮ್ಮಲ್ಲಿ ತೊಡಕು ಬಂದು ನ್ಯಾಯಾಲಯದಿಂದ ತೀರ್ಪು ಬಂದಾಗ ಅದನ್ನು ಒಪ್ಪಿಕೊಳ್ಳಬೇಕೆಂದು ಪ್ರತಿಜ್ಞೆ ಮಾಡುತ್ತಾರೆ. ಒಂದು ವೇಳೆ ಒಪ್ಪದಿದ್ದರೆ, ನೊಂದ ಕಕ್ಷಿಗಾರನು ಸಂರಕ್ಷಣಾ ಸಮಿತಿಗೆ ತಿಳಿಸಬೇಕು. ಸಾಧಾರಣ ಸಮಿತಿಯೂ ಸಂರಕ್ಷಣಾ ಸಮಿತಿಯೂ ಉಪದೇಶಾತ್ಮಕ ಅಭಿಪ್ರಾಯವನ್ನು ನ್ಯಾಯಾಲಯದಿಂದ ಪಡೆಯಬಹುದು. ಉಳಿದ ಅಂಗಸಂಸ್ಥೆಗಳು ಸಾಧಾರಣ ಸಮಿತಿಯ ಅಧಿಕಾರದಿಂದ ನ್ಯಾಯಾಲಯದ ಅಭಿಪ್ರಾಯ ಕೋರಬಹುದು.

ಆಧಿಕರಣ ಕಚೇರಿ : ಸಂಯುಕ್ತ ರಾಷ್ಟ್ರಗಳ ಸಂಘದ ಆಡಳಿತದ ಕೆಲಸವನ್ನೆಲ್ಲ ಯಾವ ರಾಷ್ಟ್ರದ ದಾಕ್ಷಿಣ್ಯಕ್ಕೂ ಒಳಗಾಗದ ಅಧಿಕರಣ ಕಚೇರಿಯು ನಡೆಸಬೇಕು. ಆ ಕಚೇರಿಗೆ ಹಿರಿಯ ಕಾರ್ಯದರ್ಶಿಯೊಬ್ಬನು ಸಂರಕ್ಷಣಾ ಸಮಿತಿಯಿಂದ ಸೂಚಿತನಾಗಿ ಸಾಧಾರಣ ಸಮಿತಿಯಿಂದ ನಿಯಮಿಸಲ್ಪಟ್ಟಿರಬೇಕು. ಆ ಅಧಿಕಾರಿಯು ತನ್ನ ಕೈಕೆಳಗಿನ ಕೆಲಸಗಾರರನ್ನೂ ಸಾಧಾರಣ ಸಮಿತಿಯು ನಿಯಮಾವಳಿಗನುಸರಿಸಿ ಆರಿಸಬೇಕಲ್ಲದೆ, ಪರುಷಕ್ಕೊಮ್ಮೆ, ಸಂಘದ ಕಾರ್ಯವಿವರದ ವರದಿಯನ್ನೊಪ್ಪಿಸಬೇಕು. ಜಾಗತಿಕ ಶಾಂತತೆಗೆ ಭಂಗ ಬರಬಹುದಾದ ಪ್ರಸಂಗಗಳ ಸೂಚನೆಯನ್ನು ಸಂರಕ್ಷಣಾಸಮಿತಿಗೆ ಮಾಡುವುದು ಅವನ ಮುಖ್ಯ ಕರ್ತವ್ಯಗಳಲ್ಲಿ ಒಂದು.

ಇತರ ವಿಷಯಗಳು : ಈ ಶಾಸನವು ಕಾರ್ಯರೂಪದಲ್ಲಿ ಬಂದ ಮೇಲೆ, ಯಾವುದೇ ಸದಸ್ಯ ಸರಕಾರವು ಮಾಡಿಕೊಂಡ ಒಪ್ಪಂದದ ಕರಾರುಗಳು ಈ ಅಧಿಕರಣಕಚೇರಿಯಲ್ಲಿ ನಮೂದಿಸಲ್ಪಡಬೇಕು—ಅವರಿಂದ ಪ್ರಕಟಿಸಲ್ಪಡಬೇಕು. ಹಾಗೆ ನಮೂದಿಸದಿ ಇದ್ದಾಗ ಒಡಕುಂಟಾದರೆ, ಸಂಯುಕ್ತ ರಾಷ್ಟ್ರಗಳ ಸಂಘದ ನೆರವು ಬೇಡಿದರೆ ಸಿಗದು.

ಶಾಸನ ಸದಸ್ಯನ ಆಂತರರಾಷ್ಟ್ರೀಯ ದಾಕ್ಷಿಣ್ಯವು ಸದಸ್ಯನಲ್ಲದವನ ಹಕ್ಕುಗಳಿಗೆ ವಿರೋಧಿಯಾಗುತ್ತಿದ್ದರೆ, ಸದಸ್ಯನದೆ ಮೇಲುಗೈಯಾಗುವುದು.

ಸಂಘವು—ಅದರ ಅಧಿಕಾರಿಗಳು ತಮ್ಮ ಕಾರ್ಯಕ್ಕಾಗಿ ಬೇಕಾಗುವ ಸ್ವಾತಂತ್ರ್ಯ, ಸೌಲಭ್ಯ, ಮಾನ-ಮನ್ನಣೆಗಳನ್ನು ಎಲ್ಲ ಸದಸ್ಯ ಪ್ರದೇಶಗಳಲ್ಲಿ ಪಡೆಯುವರು.

ಸಂಕ್ರಮಣ ಕಾಲದ ಸಂರಕ್ಷಣೆಯ ವ್ಯವಸ್ಥೆ : ಶಾಸನವು ಕಾರ್ಯರೂಪದಲ್ಲಿ ಬರುವ ತನಕ, ನಿತ್ಯಸದಸ್ಯರಾಗಬಲ್ಲ ಸರಕಾರಗಳು ತಮ್ಮತಮ್ಮಲ್ಲಿ ವಿಚಾರವಿನಿಯಮಾಡಿ ಶಾಂತತೆ, ಸಂರಕ್ಷಣೆ ನೆಲಸುವ ಪ್ರಯತ್ನ ಮಾಡಬೇಕು.

ತಿದ್ದುಪಡಿ : ಶಾಸನದ ಕಲಮುಗಳಲ್ಲಿ ತಿದ್ದುಪಡಿ ಮಾಡುವುದಿದ್ದರೆ, ಸಾಧಾರಣಸಮಿತಿಯಲ್ಲಿ ೨/೩ ಬಹುಮತದಿಂದ ಸ್ವೀಕೃತವಾಗಿ, ಸಂಘದ ೨/೩ ಸದಸ್ಯರ ಒಪ್ಪಿಗೆ ಪಡೆಯಬೇಕು. ಈ ೨/೩ ದಲ್ಲಿ ಐವರು ನಿತ್ಯ ಸದಸ್ಯರೂ ಇರಬೇಕು.

ಶಾಸನದ ಪುನರಾಲೋಚನೆ ಅಗತ್ಯವೆನಿಸಿದರೆ, ಸಾಧಾರಣ ಸಮಿತಿಯ ೨/೩ ಮತದಿಂದ, ಸಂರಕ್ಷಣಾ ಸಮಿತಿಯ ೭ ಸದಸ್ಯರ ಮತದಿಂದ ಒಂದು ಸಮ್ಮೇಲನ ಕರೆಯಬಹುದು. ಈ ಸಮ್ಮೇಲನವು ತಿದ್ದುಪಡಿ ಸೂಚಿಸಬಹುದು. ಅದು ಕಾರ್ಯರೂಪದಲ್ಲಿ ಬರಬೇಕಾದರೆ ಸಂರಕ್ಷಣಾ ಸಮಿತಿಯ ನಿತ್ಯಸದಸ್ಯರನ್ನೊಳಗೊಂಡ ಸಂಘದ ೨/೩ ಮತದಿಂದ ಒಪ್ಪಿತವಾಗಬೇಕು.

ಸಾಧಾರಣ ಸಮಿತಿಯ ೧೦ ವಾರ್ಷಿಕ ಅಧಿವೇಶನಗಳು ಆಗುವ ತನಕ ಸಮ್ಮೇಲನ ಕರೆಯದಿದ್ದರೆ, ಅದು ಸ್ವಯಂ ೧೦ನೆಯ ಅಧಿವೇಶನದ ಚರ್ಚೆಯ ವಿಷಯದಲ್ಲಿ ಬಂದೇಬಿಡುವುದು. ಸಂರಕ್ಷಣಾ ಸಮಿತಿಯ ೭ ಸದಸ್ಯರ ಒಪ್ಪಿತದೊಡನೆ ಸಾಧಾರಣಸಮಿತಿಯ ಬಹುಮತವಿದ್ದರೆ ಸಮ್ಮೇಲನವು ನೆರೆವುದು.

ಅನುಸಂಧಾನ ಮತ್ತು ಅಂಕಿತ : ಘಟನಾತ್ಮಕ ರೀತಿಯಲ್ಲಿ ಅನುಸಂಧಾನಪಾಮೊಡನೆ, ಶಾಸನವು ಕಾರ್ಯರೂಪದಲ್ಲಿ ಬರುವುದು. ಅದಕ್ಕೆ ಸಂರಕ್ಷಣಾ ಸಮಿತಿಯ ಐದು ನಿತ್ಯಸದಸ್ಯರ ಮತ್ತು ಉಳಿದ ಸದಸ್ಯ ಸರಕಾರಗಳಲ್ಲಿ ಬಹು ಜನರ ಅಂಕಿತ ಬೇಕು. ಚೀನಿ, ಇಂಗ್ಲಿಶ್, ಫ್ರೆಂಚ್, ರಷಿಯನ್ ಮತ್ತು ಸ್ಪಾನಿಶ್ ಭಾಷೆಗಳ ಅಧಿಕೃತ ಪಾಠಗಳಿಗೆ ಸಮಾನ ಶಾಸನಲೇಖ್ಯತೆ ಇದೆಯಲ್ಲದೆ, ಅವೆಲ್ಲವೂ ಸಂಯುಕ್ತ ಸಂಸ್ಥಾನಗಳ (United States) ಸರಕಾರದ ದಸ್ತರಖಾನೆಯಲ್ಲಿ ಉಳಿಯುವುವು. ಅಧಿಕೃತ ಪ್ರತಿಗಳನ್ನು ಎಲ್ಲ ಸದಸ್ಯ ಸರಕಾರಗಳಿಗೆ ಕಳುಹಲಾಗುವುದು.

(ಈ ಸಾರಾಂಶವನ್ನು Usowi News Special ನಿಂದ ಭಾಷಾಂತರಿಸಲಾಗಿದೆ.)

ಈ ಶಾಸನವನ್ನು ಓದಿ ನೋಡಿದಾಗ, ಕಳೆದ ಮಹಾಯುದ್ಧದ ಸಂತರದಲ್ಲಿ ಹುಟ್ಟಿದ ಜಾಗತಿಕ ಸಂಘ (League of Nations) ವು ನೆನಪಿಗೆ ಬರುವುದು. ಈ ಶಾಸನದಲ್ಲಿ ಅಲ್ಲಲ್ಲಿ ತುಸು ಬದಲಾವಣೆ ಮಾಡಿದ್ದರೂ, ಮೂಲ ಸ್ವರೂಪವು ಮಾತ್ರ ಅದನ್ನೇ ಹೋಲುವುದು. ಆ ಸಂಘವಾದರೂ ಒಳ್ಳೆಯ ಉದ್ದೇಶವನ್ನು ಕಟ್ಟುಗಳನ್ನು ಹಾಕಿಕೊಂಡು ಹೊರಟಿದ್ದರೂ, ಎರಡನೆಯ ಮಹಾಯುದ್ಧ ಅದರಿಂದ ತಪ್ಪಲಿಲ್ಲ. ಎರಡನೆಯ ಮಹಾಯುದ್ಧವು ಒದಗಿ ಬರುವುದೆಂದು ೧೯೩೯ಕ್ಕೆಂತ ಮೊದಲು ಅದೆಷ್ಟೋ ಕಾಲ ಗೊತ್ತಾಗಿದ್ದರೂ, ಆ ಸಂಘಕ್ಕೆ ಅದನ್ನು ತಡೆಪುಡಾಗಲಿಲ್ಲ. ಅದರ ಸದಸ್ಯಸಂಸ್ಥೆಗಳು ಅದನ್ನು ಧಿಕ್ಕರಿಸಿ ವರ್ತಿಸಿದುವು. ಉಳಿದ ಸದಸ್ಯರಲ್ಲಿ ಅಷ್ಟು ಶಕ್ತಿ ಸಾಮರ್ಥ್ಯವಿದ್ದಿಲ್ಲ. ಜಾಗತಿಕ ಸಂಘವು, ತನ್ನದೇ ಆದ ಸೈನ್ಯಸಾಮಗ್ರಿ ಇಟ್ಟುಕೊಂಡಿದ್ದಿಲ್ಲ. ಹೀಗಾಗಿ, ಉಳಿದ ಸದಸ್ಯರು ತಮ್ಮ ಸಿದ್ಧತೆ ಮಾಡುವಷ್ಟರಲ್ಲಿ ಪರಿಸ್ಥಿತಿ ಹದಗೆಟ್ಟು ಹೋಗಿತ್ತು. 'ಯುದ್ಧ ಬಂತು, ಬಂತು!' ಎನ್ನುವುದರೊಳಗೆ ಬಂದೆಬಿಟ್ಟಿತ್ತು.

ಈ ಶಾಸನದ ಮೂಲಕ ಹುಟ್ಟುವ ಸಂಯುಕ್ತ ರಾಷ್ಟ್ರಗಳ ಸಂಘವಾದರೂ ಅದೇ ಬಗೆಯದಾಗಬಹುದು. ಈ ಶಾಸನದ ಯಾವುದೆ ಕಲಮುಗಳಲ್ಲಿ ಆಂತರ ರಾಷ್ಟ್ರೀಯ ಸೈನ್ಯದ ಯೋಜನೆಯಿಲ್ಲ. ಶಾಂತತಾಭಂಗ ಮಾಡುವವರ ಮೇಲೆ ಸದಸ್ಯ ಸರಕಾರಗಳು ನೇರಿ ಆಕ್ರಮಣ ಮಾಡಬೇಕು ಎಂದು ಇದೆ. ಯಾವುದೊಂದು ಸದಸ್ಯ ರಾಷ್ಟ್ರವು ಒಲ್ಲೆನೆಂದರೆ, ಅಷ್ಟರಮಟ್ಟಿಗೆ ಕಲಸದ ಜೋರು ಕಡಿಮೆಯಾಗುವುದು. ಸರಕಾರಗಳು ತಮ್ಮ ಮಟ್ಟಿಗೆ ಸರ್ವತಂತ್ರ ಸ್ವತಂತ್ರ ಇರುವುವು. ಈ ಸಂ. ರಾ. ಸಂಘವು ವಿನಂತಿ ಕಳಿಸುವುದು, ಸೂಚನೆ ಕಳಿಸುವುದು ಮಾತ್ರ. ಒಬ್ಬನು ಸೂಚನೆಯನ್ನು ಅವಮಾನ್ಯ ಮಾಡಿದಂತೆ ಮತ್ತೊಬ್ಬನೂ ಮಾಡಬಹುದು. ಆಗ ಈ ಸಂಘದಲ್ಲಿ ಪ್ರತಿಭಟಿಸುವ ಶಕ್ತಿ ಉಳಿಯುವುದಿಲ್ಲ.

ಆಂತರ್ರಾಷ್ಟ್ರೀಯ ಮನೋವೃತ್ತಿಯುಳ್ಳ—ಈ ಸಂಘದ ಪವಿತ್ರ ಹೇತುವಿನಲ್ಲಿ ವಿಶ್ವಾಸವಿಟ್ಟ—ನೈಜ್ಯವಿದ್ದರೆ, ಅವಕ್ಕೆ ಯಾವುದೇ ಪ್ರಬಲ ರಾಷ್ಟ್ರವನ್ನು ಎದುರಿಸುವ ಶಕ್ತಿಯಿದ್ದರೆ ಮಾತ್ರ ಈ ಶಾಸನದ ಉಪಯೋಗವಾಗಬಹುದು. ಈ ಶಾಸನೋದಿತ ಸಂಘವು ಶಾಂತತೆಯ ಕಾಲದಲ್ಲಿ ಒಳ್ಳೆಯದು; ಆದರೆ ಅದು ಯುದ್ಧ ತಡೆದೀತೆಂದು ಹೇಳಲು ಬಾರದು.

ಈ ಶಾಸನವು ಸಾಮ್ರಾಜ್ಯವಾದದ ಬೆಳೆಗೆಯನ್ನು ತಡೆದಿಲ್ಲ; ಇದರಿಂದ ಸಣ್ಣ ರಾಷ್ಟ್ರಗಳಿಗೆ ಸಾಕಷ್ಟು ಸಂರಕ್ಷಣೆಯಿಲ್ಲ; ಅಧಿಕಾರ ಮೂಕದಿಂದ ರಾಜಕಾರಣದಲ್ಲಿ ತೆರೆಗಳನ್ನೆಬ್ಬಿಸಲು ಅನುಕೂಲವಿದೆ. ಹೊಸದೊಂದು ಯುದ್ಧಕ್ಕೆ ಬೇಕಾಗುವ ಪರಿಸ್ಥಿತಿ ಈ ಮೂರು ಕಾರಣಗಳಿಂದ ಹುಟ್ಟಬಲ್ಲುದು.

ಯುದ್ಧ ಆಗದೆ ಇರಬೇಕಾದರೆ, ಪ್ರತಿಯೊಬ್ಬರಲ್ಲಿ ಆಂತರ ರಾಷ್ಟ್ರೀಯ ಮನೋವೃತ್ತಿ ಬೆಳೆಯಬೇಕು. ಎಲ್ಲಿಯವರೆಗೆ 'ರಾಷ್ಟ್ರೀಯ' ಎಂಬ ಸಂಕುಚಿತ ಭಾವನೆ ಉಳಿನುದೊ ಅಲ್ಲಿಯವರೆಗೆ ಏರಾಟ-ಪೋರಾಟಗಳು ತಪ್ಪಿದ್ದಲ್ಲ. ಈ ಶಾಸನವು ಆಂತರ ರಾಷ್ಟ್ರೀಯ ಮನೋವೃತ್ತಿ ಬೆಳೆಸಲು ಪೆಣಗಬೇಕು; ಅದು ಸಾಧ್ಯವಾದಾಗ ಜಗತ್ತಿನಲ್ಲಿ ಶಾಂತತೆ ನೆಲೆಸೀತು.

———

ಕೋಳಿಯ ವ್ಯಾಪಾರ

(ಒಂದು ಜೀವನ ಕಥೆ)

ಬರೆದವರು : 'ಕಿಂ'

(ಈ ಲೇಖಕರು ಮುಂಬಯಿ ವಿಶ್ವವಿದ್ಯಾನಿಲಯದ ಜೋಡು ಪದವೀಧರರು. ದೊಡ್ಡ ಅಧಿಕಾರವಲ್ಲಿದ್ದಾರೆ. ಸದ್ಯ ಮರೆಯಲ್ಲಿರಲು ಅಪೇಕ್ಷಿಸುತ್ತಾರೆ. —ಸಂ. ಜ.)

'ನಮ್ಮಲ್ಲಿ ಇಲ್ಲ; ಹಾಗೆಯೆ ಮುಂದೆ ಹೋಗಿ ಕೇಳಿ!'

" ಕೋಳಿ ಅವೆ ಏನವ್ವಾ ? " ಎಂದು ಕೇಳುತ್ತ ನಾನು ನಿಂತೇ ಬಿಟ್ಟೆ.

ಏಕೆಂದರೆ " ಇಲ್ಲ " ಎಂದು ಹೇಳುತ್ತ ಹೊಸತಿಲ ಬಳಿಬಂದು ನಿಂತವಳು ಒಬ್ಬ ತರುಣಿ. ಬಟ್ಟಗಿನ ತುಂಬಿದ ಮುಖ. ಪಿಳಿ-ಪಿಳಿಸಿ ನಗುತ್ತಿರುವ ಎರಡು ದೊಡ್ಡ ಕಣ್ಣುಗಳು, ಕೆಚ್ಚನೆಯ ತುಟಿ ಅಗಲಿದಾಗ ಕಾಣುವ ಕಪ್ಪಾದ ಹಲ್ಲುಗಳ ಸಾಲು. ನೆಟ್ಟನೆಯ ಮೂಗಿನಲ್ಲಿ ಮಾಸಿದ ಮೂಗುತಿ. ಸ್ವಲ್ಪ ಕೆದರಿದ ಉಂಗರುಂಗರಾದ ಕೂದಲು. ಗೋದಿ ಬಣ್ಣ. ಜೆಲುವೆ. ನೋಡಿದೊಡನೆ ನನ್ನ ಕಣ್ಣುಗಳು ಅವಳನ್ನು ಬಿಟ್ಟು ಅಗಲದಾದುವು. ಅವಳೂ ನಗುವ ಕಣ್ಣುಗಳಿಂದ ನನ್ನನ್ನೇ ನೋಡುತ್ತ ನಿಂತುಬಿಟ್ಟಳು.

ಸೀಪಾಯಿಗಳನ್ನೆಷ್ಟೋ ಜನರನ್ನು ಅವಳು ನೋಡಿರಲೇಬೇಕು ಆಕೆ ಅಡವಿಯಲ್ಲಿದ್ದರೂ. ಈಗ ಸೈನಿಕರಿರುವುದು ಹೆಚ್ಚಾಗಿ ಜಂಗಲಿನಲ್ಲಿಯೆ. ಜಂಗಲಿನ ಯುದ್ಧರೀತಿಯನ್ನು ಅರಿಯದ ಸೈನ್ಯವನ್ನು ಮಲಯಾ ಬರ್ಮಾಗಳಲ್ಲಿಟ್ಟು, ಜಪಾನರಿಂದ ಕ್ರೂರವಾದ ಪೆಟ್ಟನ್ನು ತಿಂದು, ದೇಶಗಳನ್ನು ಕಳಿದುಕೊಂಡು, ಅರ್ಧಕ್ಕಿಂತ ಹೆಚ್ಚು ಸೈನ್ಯಕ್ಕೆ ತಿಲಾಂಜಲಿ ಕೊಟ್ಟು, ಅನ್ಯೋನ್ಯವಾಗಿ ಮುಗ್ಗರಿಸುತ್ತ ಮರಳಿಬಂದು ಹಿಂದುಸ್ತಾನವನ್ನು ಸೇರಿದ ಬಳಿಕ, ದಿಲ್ಲಿಯ ಅಧಿಕಾರಿಗಳಿಗೆ ಎಚ್ಚರು ಬಂದಿತು. ಆಮೇಲೆ ಜುಂಗಲುಗಳೇ ಸೈನ್ಯಗಳ ಬೀಡಾದುವು. ಆದರೇನು? ಕಡವಿ ಸೇರಿದರೂ ಹಳ್ಳಿಗಳಿಂದ ಸೈನ್ಯ ದೂರವಾಗಲಿಲ್ಲ. ಅಲ್ಲಲ್ಲಿ ಗುಡಿಸಿಲುಗಳಿಲ್ಲದ ಅಡವಿಗಳೇ ಇಲ್ಲ ಹಿಂದುಸ್ತಾನದಲ್ಲಿ.

ಸೈನ್ಯದ ಸಿಸ್ತಿನಲ್ಲಿ ಸಿಕ್ಕರೂ ಕೂಡ ಸೀಪಾಯಿ ಮನುಷ್ಯನಾಗಿಯೆ ಇರುವನು. ಹೊಸ ಜೀವನದ ಕಾಠಿಣ್ಯವನ್ನು ಮರೆಯಲು ಯತ್ನಿಸುವನು. ಹೆಂಗುಸರನ್ನು ಬಹಳ ದೂರದಿಂದಲೇ ಗುರುತಿಸುವನು. ಅವರನ್ನು ಕಂಡು, ತುಸು ಸಮಯವಾದರೂ ತಾನು ಸಿಸ್ತಿನ ಸೀಪಾಯಿ ನೆಂಬುದನ್ನು ಮರೆಯುವನು. ನೂರಾರು ಕಟ್ಟಳೆಗಳಿಂದ ಸೀಪಾಯಿಯನ್ನು ಬಂಧಿಸುವ ಸೈನ್ಯ ಆವರಲ್ಲಿ ಈ ಪ್ರವೃತ್ತಿಯನ್ನೂ ಹುಟ್ಟಿಸುವುದು. ಈ ಪ್ರವೃತ್ತಿಯಿಂದ ಜನರ ಮನಸ್ಸು ಸೈನ್ಯದ ವಿಷಯದಲ್ಲಿ ಕಲುಷಿತವಾಗಿ, ಯುದ್ಧಪ್ರಯತ್ನಕ್ಕೆ ಧಕ್ಕೆ ತಗಲುವುದೆಂಬ ವಿಚಾರವಂತ ಹಳ್ಳಿಗಳನ್ನೆಲ್ಲ " ಔಟ್ ಆಫ್ ಬೌಂಡ್ಸ್ " ಮಾಡಿರುವರು, ಅವರೆ ಹಳ್ಳಿಗಳನ್ನು " ಹಪ್ಪುವಿಾರಿದುವು" ಎಂದು ಮಾಡಿಟ್ಟಿರುವರು ಸೈನಿಕರೆಲ್ಲ. ಆದರೂ ಸೈನಿಕರು ಹಳ್ಳಿಗಳನ್ನು ಅಗಲಿ ಇರರು. ಟ್ರೇನಿಂಗ್ "ನ ನೆವ ಮಾಡಿ ಹಳ್ಳಿಗಳಲ್ಲಿ ಹಾಯ್ದು ಬರುವರು. ಕೋಳಿ, ತತ್ತಿ, ವಲ್ಲೆ, ಕೋಳಿ—ಯಾವುದಾದರೊಂದು ನೆವದಿಂದ, ಪಾಸು " ಪಡೆದುಕೊಂಡು, ಹಳ್ಳಿಗಳಿಗೆ ಭೆಟ್ಟಿಕೊಟ್ಟು, ಹೆಂಗಳೆಯರನ್ನು ಕಂಡು ಕಂಡು ಬಂದೇಬರುವರು. ಎದೆಗಾರರಾದ ಸೈನಿಕರಿಗೆ ಪಾಸಿನ ಚಿಂತೆಯಾವರೂ ಏತಕ್ಕೆ ?

ನಾವೂ ಕೋಳಿ-ತತ್ತಿಗಳನ್ನು ತರಲು ಹಳ್ಳಿಗೆ ಹೋಗಿದ್ದೆವು. ನವ.ಗೆ— ಆಫೀಸರರಿಗೆ— ಸೀಪಾಯರಿಗಿರುವಷ್ಟು ನಿರ್ಬಂಧಗಳಿಲ್ಲದಿದ್ದರೂ, ಹಳ್ಳಿಗಳು ಇದ್ದದ್ದು ನಮ್ಮ ಹದ್ದು ಮೀರಿಯೆ. ಆದರೂ ನಮ್ಮನ್ನು ವಿಚಾರಿಸುವುದಿಲ್ಲ. ಸೀಪಾಯರು ಮಾಡುವ ತಪ್ಪುಗಳನ್ನು ನಾವು ಮಾಪುವುದಿಲ್ಲವೆಂದು ಅಭಿಪ್ರಾಯ **ಚಿಂಡವಾಡೆಯ** ಜಂಗಲು ಅಷ್ಟೊಂದು ದೊಡ್ಡದಾಮದೇನೂ ಅಲ್ಲ; ನಾನು ಇಲ್ಲಿಯ ಕೆಲವು ಹಳ್ಳಿಗಳಲ್ಲಿ ಈ ಮೊದಲೇ ಹಾಯ್ದು ಬಂದಿದ್ದೆ. ಬಡತನ, ಅನ್ನದ ಕೊರತೆಗಳ ಹೆಗ್ಗುರುತುಗಳನ್ನೇ ಕಂಡಿದ್ದೆ. ಇಲ್ಲಿಯ ಜನರು ಹೆಚ್ಚಾಗಿ " ಗೊಂಡ "ರು. ಭಾಷೆ: ಅದೊಂದು ತೆರದ ಹಿಂದಿ. ಗಂಡುಸರ ಅರಿವೆ ನಮ್ಮ ಕರ್ನಾಟಕದವರಂತೆಯೇ—ಅದೇ ಅಂಗಿ, ಧೋತರ, ರುಮಾಲು. ಹೆಂಗುಸರು ಮಾತ್ರ ಕಡಿಮೆ ವಸ್ತ್ರ ಧರಿಸುವರು. ತೊಡೆಯ ಮೇಲ್ಗಡೆ ಕಚ್ಚೆ, ಕಿರಿಯದಾದ ಸೆರಗು, ಎದೆ ಮುಚ್ಚಲು ಯತ್ನಿಸುವ ಕುಪ್ಪಸ. ಹಚ್ಚೆಯ ಮೇಲೆ ಬಲು ಪ್ರೀತಿ. ಹಿಮ್ಮಡದಿಂದ ಪ್ರಾರಂಭವಾದ ಹಚ್ಚೆ, ಹಾಕಿದ ಕಚ್ಚೆಯಲ್ಲಿ ಅದಗಿ ಹೋಗುವುದು. ಕಾಲಲ್ಲಿ ಪೊಳ್ಳಾದ ಕಡಗಗಳು. ನಡೆಯುವಾಗ 'ಗಿಲ್ ಗಿಲ್' ಸಪ್ಪಳ ಮಾಡುವುವು ಕೈಯಲ್ಲಿ ಬೆಳ್ಳಿಯ ಅಗಲವಾದ ಪಾಟಲಿ-ಕಡಗಗಳು. ಕಪ್ಪಾದ ಮೈಬಣ್ಣ. ಬತ್ತಿದ ಶರೀರ ಬಾಡಿ ಬೆದರಿದ ಮುಖ; ನೋಡಿದರೆ ಕನಿಕರ ಹುಟ್ಟುವುದು. ಇಂತಹ ಜನರೇ ಇಲ್ಲವೇ ಸರಕಾರದ ಮತ್ತು ಸೈನ್ಯದ ದೊಡ್ಡ ಹೊಟ್ಟೆ ತುಂಬುವವರು? ಈ ಜನರ ಉಪಜೀವನ ಒಕ್ಕಲುತನದಿಂದ. ಇವರ ಬಡತನಕ್ಕನುಸರಿಸಿಯೊ ಏನೋ, ಎತ್ತುಗಳೂ ಸಣ್ಣವು. ಚಕ್ಕಡಿಯೂ ಚಿಕ್ಕದು, ಸಾಗುವಳಿ

ಮಾಡುವ ಸಾಮಾನುಗಳೂ ಹಾಗೆಯೆ. ಇಂಥವರು ಬೆವರು ಹರಿಸಿ ಬೆಳೆದುದನ್ನು ನಾವು ತಿಂದು, ಮೇಯ್ದು, ತೇಗುವೆವು! ಹಳ್ಳಿಗಳಲ್ಲೆಲ್ಲ ಈ ಗೊಂಡ ಹೆಂಗಳೆಯರನ್ನು ನೋಡಿದ ನಾನು, ಇಂದು ಈ ಹಳ್ಳಿಯ ಹುಡುಗಿಯನ್ನು ಕಂಡು, ಕಣ್ಣು ಮಿಟುಕಿಸದೆ ನಿಂತು ಬಿಟ್ಟೆ.

ಆಕೆಯ ಮುಖವನ್ನು ನೋಡಿದೊಡನೆ ಇವಳು "ಗೊಂಡ" ಳಲ್ಲವೆಂದು ಗೊತ್ತಾಯಿತು. ಕಚ್ಚೆ ಪೊಳಕಾಲವರೆಗಿತ್ತು. ಅದರ ಕೆಳಗೆ ನುಣುಪಾದ ಕಾಲುಗಳು. ಸೀರೆ-ಕುಪ್ಪಸಗಳು ಮಾಸಿದ ಬಣ್ಣ ದುವಿದ್ದುದರಿಂದಲೆ ನುಣುಪಾದ, ಅವಳ ಶರೀರ ಚೆಲುವಾಗಿ ಎದ್ದು ಕಾಣುತ್ತಿತ್ತು. ಕೊರಳಲ್ಲಿ ಕರಿಮಣಿಯ ಸರವೊಂದು, ಮತ್ತೊಂದು ಬೆಳ್ಳಿಯ ಸರ. ಮುಂಬಾಗಿಲನ್ನು ಆತುಗೊಂಡು ಆಕೆ ಹೇಳಿದಳು:

"ನಮ್ಮಲ್ಲಿ ಇಲ್ಲ. ಹಾಗೆಯೆ ಮುಂದೆ ಹೋಗಿ ಕೇಳಿರಿ!"

ಇಷ್ಟಕ್ಕೇ ಹೊರಡಲು ನನ್ನ ಮನಸ್ಸು ಒಪ್ಪದಾಯಿತು. ಅವಳನ್ನು ಇನ್ನಿಷ್ಟು ನೋಡಬೇಕು; ಅವಳೊಡನೆ ಇನ್ನಿಷ್ಟು ಮಾತಾಡಬೇಕು—ಎನಿಸಿತು.

"ನಿಜವಾಗಿಯೂ ಸಿಗಬಹುದೇ?" ಎಂದು ಕೇಳಿದೆ.

"ನಾ ಹೇಗೆ ಹೇಳಲಿ. ಸಿಕ್ಕರೂ ಸಿಗಬಹುದು!"

"ನಿಮ್ಮಲ್ಲಿ ನಿಜವಾಗಿಯೂ ಇಲ್ಲವೆ?" ಎಂದು ಕೇಳ ನಕ್ಕೆ. ಆ ನಗೆಯಲ್ಲಿ 'ಕೋಳಿಗಳನ್ನು ಪುಕ್ಕಟೆ ಒಯ್ಯುವೆನೆಂಬ ಅಂಜಿಕೆ ಬೇಡ' ಎಂಬ ಆಶ್ವಾಸನವಿತ್ತು.

"ನಮ್ಮಲ್ಲಿ ಇಲ್ಲರಿ" ಎನ್ನುತ್ತ ಮನೆಯ ಯಜಮಾನಿ ಬಂದಳು. ಹಳದಿಯ ಸೀರೆ, ಕೆಂಪು ಕುಪ್ಪಸ. ಬೆಳ್ಳಿಯಿಂದ ಮುಚ್ಚಿದ್ದಳು. ಜೋಡೆಳೆಯ ಪುತ್ತಳಿ ಸರ: ಪುತ್ತಳಿಗಳೆಲ್ಲ ಜಾರ್ಜ್ ಬಾದಶಹನ ಮುಖಚಿತ್ರವಿದ್ದ ರೂಪಾಯಿಗಳು. ಬಂದು ಆ ಹುಡುಗಿಯನ್ನು ಹಿಂದೆ ಮಾಡಿ ನಿಂತಳು.

"ನಿಮ್ಮಲ್ಲಿ ಯಾಕೆ ಇಲ್ಲ?" ವಿಚಾರಿಸಿದೆ.

"ನಮ್ಮಲ್ಲಿ ಇದ್ದುವು; ಆದರೆ ಈಗ ಮೂರು ದಿನಗಳ ಹಿಂದೆ ಸರ್ಪ ಕಡಿದು ಸತ್ತುವು. 'ನಾಗೋಬಾ' ನಿಗೆ ಆಹುತಿ ಎಂದು ಅವುಗಳನ್ನು ತಿಪ್ಪಿಗೆಸೆದೆವು. ಇದ್ದರಿ ನಿಮಗೆ ಕೊಡದೆ ಬಿಡುತ್ತಿದ್ದೆವೇ?" ಎಂದು ನನಗೆ ಮಾನಕೊಡುವವರಂತೆ ಹೊಸ್ತಲನ್ನು ದಾಟಿ ಬಂದು ನಿಂತಳು.

"ಅಯ್ಯೊ, ಪಾಪ! ಎಷ್ಟು ಹಾನಿ ಆಯಿತಲ್ಲ!" ಆಕೆಯ ಹಾನಿಯಲ್ಲಿ ಪಾಲು ಹೊಂದಿದವನಂತೆ ನಾನು ನುಡಿದೆ. "ಉಳಿದ ಪಳ್ಳಿಗರಲ್ಲಿ ಸಿಗುವುದು ನಿಶ್ಚಯವಲ್ಲವೇ?"

"ನಿಮ್ಮ ನಸೀಬು; ಸಿಕ್ಕರೆ ಸಿಗಬಹುದು!" ಎಂದು ನಕ್ಕಳು ಯಜಮಾನಿ.

ನಾನೂ ನಕ್ಕೆ. ಆದರೆ ನನ್ನ ಕಣ್ಣು ಬಾಗಿಲ ಚೌಕಟ್ಟಿನಲ್ಲಿ ನಿಂತಿರುವ ಯುವತಿಯ ಮೇಲೆ. ತನಗಾಗಿಯೆ ಅದನಗೆ ಕಂಡು ಅವಳೂ ನಸುನಕ್ಕಳು. ನನ್ನ ಸಂಗಡಿಗರನ್ನು ಕೋಳಿಯ ವ್ಯಾಪಾರಕ್ಕೆ ಕಳುಹಿ ನಾನು ಅಲ್ಲಿಯೆ ನಿಂತೆ. ಕೆಲ ಹೊತ್ತು ಸುಮ್ಮನೆ ಸುತ್ತಲೂ ನೋಡಿದೆ. ಅವರಿಬ್ಬರ ಕಣ್ಣು ನನ್ನ ಮೇಲೆಯೆ ಇದ್ದಂತೆ ಎನಿಸುತ್ತಿತ್ತು. ಸಣ್ಣ ದಾದರೂ ಜೊಕ್ಕಟವಾದ ಮನೆ. ಮನೆಯ ಎದುರು ಹೊಲಗಳು, ಅವುಗಳನ್ನು ದಾಟಿ ಹರಿಯುತ್ತಿರುವುದು 'ಕನಹನ' ನದಿ. ನದಿಯಲ್ಲಿ ಅಡಗಿದ ಕಲ್ಲುಗಳನ್ನು ನೋಡಲು ಹವಣಿಸುವ ಎತ್ತರ ಗುಡ್ಡ. ಆ ಕಡೆ, ಹೊಲದಲ್ಲಿ ಸಾಗುತ್ತಿರುವ ನೇಗಿಲನ್ನು ಕಂಡು ನಾನು ಮತ್ತೆ ಮಾತಿಗೆ ಮೊದಲು ಮಾಡಿದೆ:

"ನಿಮಗೆ ಹೊಲಗಳಿಲ್ಲವೇ?"

"ಎಂಧಾ ಹೊಲಾರೀ. ಅದೇ, ಎರಡೆತ್ತಿನ ಕಮತ!"

"ಬೆಳೆ ಏನೇನು ಬರುವುದು?"

"ಗೊಂಜಾಳ, ಈಟು ಗೋದಿ, ತುಸು ಅಕ್ಕಡಿ ಕಾಳು, ಒಂದೀಟು ಜೋಳಾ, ಅಗತಾವರಿ!"

"ಅಕ್ಕಿಗೆ ಹೇಗೆ ಮಾಡುವಿರಿ?"

"ಹಬ್ಬಾ ಹುಣ್ಣಿವೀ ಊಟಕ್ಕಷ್ಟೇರಿ ಅಕ್ಕಿ!"

"ನಿಮಗೆ ಕೋಳಿಯ ವ್ಯಾಪಾರದಿಂದ ರೊಕ್ಕ ಬರಬಹುದಲ್ಲ?"

"ಬರತಾರರಿ ಮಿಲಿಟರಿ ಮಂದಿ....ಕೋಳಿ ಬೇಕಂತ, ಕುರಿ ಬೇಕಂತ! ಮಿಲಿಟರಿಯವರಿಗೆ ಬೇಕಾದಷ್ಟು ಕುರಿ ಸರಕಾರದಿಂದ ಸಿಗೂದಿಲ್ಲೇನರಿ?" ಯಜಮಾನಿ ವಿಚಾರಿಸಿದಳು.

ಸರಕಾರದಿಂದ ಕುರಿ ಸಿಗುವುದು ಕಠಿನವಾಗಿದೆ. ಮರಾಠಾ ಸೀಪಾಯರು ಹೆಣ್ಣು ಕುರಿ ತಿನ್ನುವುದಿಲ್ಲ. ಸರಕಾರಕ್ಕೆ ಹೆಚ್ಚಾಗಿ ಸಿಗುವ ಕುರಿಗಳೆಲ್ಲ ಹೆಣ್ಣೇ! ಸಹಸಾ ಒಂದು ವಾರದಲ್ಲಿ ೨ ಸಲ ಮಟನ್ ಸಿಗುವುದು ಊಟಕ್ಕೆ. ಅದನ್ನು ತರಲು "ಸಪ್ಲಾಯಿ ಡಿಪೊ (ಸಾಮಗ್ರಿ ಸಂಗ್ರಹ)"ಕ್ಕೆ ಹೋಗಲು, ಅವರು ಹೆಣ್ಣು ಕುರಿಗಳನ್ನು ಕೊಡುವರು. ಬೇಡವೆಂದರೆ, "ನಾವು ಕೊಟ್ಟದ್ದನ್ನು ಸುಮ್ಮನೆ ಒಯ್ಯಿರಿ, ಮತ್ತೇನೂ ಸಿಗದು!" ಎಂದು ದರ್ಪದ ಉತ್ತರ ಕೊಡುವರು. ಭಿಕ್ಷೆ ನೀಡಲು ಶಕ್ತಿ ಇದ್ದವರಿಗಿರುವಷ್ಟೇ ಸೊಕ್ಕು ಸಾಮಗ್ರಿದಳದವರಿಗಿದೆ. ಆದಕ್ಕೇ ಅವರಿಗೆ 'ರಾಯಿಸ್ ಕೋರ' (ಅಕ್ಕಿದಲ) ಎಂದು ಮೂದಲಿಸುವರು ಸೈನ್ಯದಲ್ಲೆಲ್ಲ ಅಕ್ಕಿ ಬಲದವರನ್ನು ಕಂಡೊಡನೆ ಮೂಗು ಏರಿಸುವುದು ವಾಡಿಕೆ. ಎಷ್ಟು ಮೂಗು ಮುರಿದರೂ ಹೆಣ್ಣು ಕುರಿ ಗಂಡಾಗದು. ಹೆಣ್ಣು ಕುರಿ ತಿನ್ನಲು ಮರಾಠರ ಮನಸ್ಸು ಒಗ್ಗದು. ಹೀಗಾಗಿ ಪರಿಸ್ಥಿತಿ ಸ್ವಲ್ಪ ವಿಪರೀತಕ್ಕೆ ಹೋಗಹತ್ತಿದುದರಿಂದ ಕೊಲ್ಹಾಪುರದ ಮಹಾರಾಣಿ ಹೆಣ್ಣು ಕುರಿ ತಿನ್ನಲು ಸಂದೇಶ ಕಳಿಸಿದಳು—ಮರಾಠಾ ಸೀಪಾಯಿಯರಿಗೆಲ್ಲ! ಇದನ್ನೆಲ್ಲ ಅವಳಿಗೇನು ಹೇಳುವುದು? ನಾನವಳಿಗೆ ಹೀಗೆ ಹೇಳಿದೆ:

"ಸರಕಾರದಿಂದ ಕುರಿ ಸಿಗುವುದು ಕಠಿಣವಾದಲ್ಲಿಯೇ ನಾವು ಕೋಳಿಗಾಗಿ ಇಲ್ಲಿ ಬರುವೆವು" ಎಂದು ನಮ್ಮ ದುಃಖವನ್ನು ತೋಡಿಕೊಂಡೆ.

ಒಬ್ಬರೊಬ್ಬರ ಆಪತ್ತುಗಳನ್ನು ಕೇಳಿನೊಡನೆಯೆ ಹೃದಯಗಳ ಒಲವು ಪ್ರಾರಂಭವಾಗುವುದು. ಹಿಂದೀಯರು ಸಹೃದಯರು. ನಾವಿಬ್ಬರೂ ನವ್ಯ ಜೀವನದಲ್ಲಿಯ ದುಃಖಗಳನ್ನು ಉಸುರಿದೊಡನೆ ಸಹೃದಯರಾದೆವು. ಅವರೂ ನನ್ನ ಇಚ್ಛೆ ಆ ತರುಣಿಯನ್ನು ಇನ್ನಿಷ್ಟು ನೋಡಬೇಕೆಂದು. ಇಷ್ಟರೊಳಗಾಗಿಯೆ ಕೆಲವು ಸಲ ನಮ್ಮಿಬ್ಬರ ಕಣ್ಣುಗಳು ಕೂಡಿದ್ದವು. ನಗೆಯೂ ಸುಳಿದಾಡಿತ್ತು.

ಯಜಮಾನಿ ಅಂಗಳದ ಕಟ್ಟೆಯ ಮೇಲೆ ಕುಳಿತು ಮಾತಾಡ ತೊಡಗಿದಳು. ಧ್ವನಿಯಲ್ಲಿ ನಂಬಿಗೆಯೂ, ಒಂದು ತರದ ಸ್ನೇಹ ಭಾವನೆಯೂ ಕೂಡಿತ್ತು.

"ಮೊನ್ನೆ ಇಲ್ಲಿ ಬಹಳ ಜನರ ಮಿಲಿಟರಿ ಬಂದಿತ್ತಂ. ದರೋಗಾ (ಪೋಲೀಸ ಇನ್‌ಸ್ಪೆಕ್ಟರ) ಬಂದಿದ್ದರು. ನಮ್ಮೂರಿಗೆಲ್ಲ ಚಕ್ರ ಹಾಕಿದರು. ಪ್ರತಿಯೊಂದು ಮನೆಯಲ್ಲಿಯೂ ಹೊಕ್ಕು ತಪಾಸು ಮಾಡಿದರು. ನಮ್ಮ ಮನೆಯಲ್ಲಿಯೂ ಬಂದರು. ನಾನು ಅವರಿಗೆ 'ಬೇಕಾದಷ್ಟು ನೋಡಿಕೊಳ್ಳಿರಿ, ಆದರೆ ನನ್ನ ಸೊಸೆಯಂದಿರಿಗೂ ಅಡಿಗೆ ಸಾಮಾನಿಗೂ ಕೈ ಹಚ್ಚ ಬೇಡಿರಿ' ಎಂದು ಬೇಡಿಕೊಂಡೆ. ಕೇಳುವರಿಲ್ಲ? ಎಲ್ಲವನ್ನೂ ಕಿತ್ತಾಡಿ ನೋಡಿದರು. ಸೊಸೆಯರಿಗೆ ಕೈ ಹಚ್ಚಲಿಲ್ಲ. ಏನು ಸಿಗಬೇಕು ನಮ್ಮಲ್ಲಿ? ಊರಲ್ಲಿ ಬಹಳ ಮನೆಗಳಲ್ಲಿ ಸಿಕ್ಕಿತು: ....ಶರೆ!"

"ಶರೆಯ ತಪಾಸಣೆಗೆ ಪೋಲೀಸರು ಬಂದಿದ್ದರಿ, ಮಿಲಟರಿಯವರು ಯಾಕೆ?" ಎಂದು ಆಶ್ಚರ್ಯದಿಂದ ಕೇಳಿದೆ.

"ಏನಾದರೂ ಸಿಕ್ಕೀತು ... ಎರಡರಲ್ಲಿ ಒಂದು, ಎಂದು ಬಂದಿದ್ದರು." ಎಂದಳು ಆ ತರುಣಿ.

ಆವಳ ಜಾಣತನಕ್ಕೆ ತಲೆದೂಗಿದೆ.

"ಪೋಲೀಸರಿಗೆ ಸುದ್ದಿ ಯಾರು ಕೊಟ್ಟರು?" ಕುತೂಹಲದಿಂದ ಕೇಳಿದೆ.

"ಬಂದಿರತಾರಲ್ಲ ಹೀಂಗs. ಮಿಲಿಟರಿಯವರು! ರೊಕ್ಕಪಾತೆ ಪಚ್ಚತಾರ. ಕಳ್ಳರನ್ನ ಕುಡೀತಾರ. ಪೋಲೀಸರಿಗೆ ಹೇಳುವ ತನಕ ಅದನ್ನ ಹೊಟ್ಟೆಯೊಳಗ ಇಟ್ಟಕೊಳ್ಳತಾರ!"

ಇದು ಉಂಡಮನೆ ಜಂತೆ ಎಣಿಸುವುದೆಂದು ಒಪ್ಪಿಕೊಂಡೆ.

"ಇದೆಲ್ಲ ಒಬ್ಬನಿಂದ ಸುರು ಆಯ್ತು; ಹಾ, ಹಾ! ಆವ ನಿಮ್ಮ ಮರಾತಾ ಫಲ್ಟನಿನವನೇ! ಇಲ್ಲಿ ಒಂದು ಮನೆ ಗುರ್ತಾ ಮಾಡಿದಾ. ಸೂಳೆ ಒಬ್ಬಳು ಸಿಕ್ಕಳು ಅವನಿಗೆ. ಕುಡಿಯುವುದು, ಅವಳೊಡನೆ ಕ್ರೀಡಿಸುವುದು ಜೋರಾಯಿತು. ಕಡೆಗೆ ನಿಮ್ಮ ಮಿಲಿಟರಿಯವರೇ ಬಂದು ಅವನನ್ನು ಕೈದು ಮಾಡಿಕೊಂಡು ಒಯ್ದರು!"

'ಹೌದು' ಅಂದೆ. ಆದದ್ದೂ ನಿಜವೇ. ಸಂಜೆಯ 'ಹಾಜರಿ' ಆದಮೇಲೆ ಆ ನಾಯಕನು ತನ್ನ ಬಾಶಾದಲ್ಲಿ (ಬಾಶಾ—ಕುಟೀರ) ಇರುತ್ತಲೇ ಇದ್ದಿಲ್ಲ. ಅವನ ಕೈದಾದ ಬಳಿಕ 'ಕೋರ್ಟ್ ಮಾರ್ಶಲ್' (ಮಿಲಿಟರಿ ನ್ಯಾಯ ವಿಚಾರಣೆ) ಆಗಿ, ಆವನಿಗೆ ತಕ್ಕ ಶಿಕ್ಷೆ ಆಗಿತ್ತು.

"ಆವರಿಗೂ ಕೊಡಲು ಹೇಳಬಾರದೇ? ಪಾಪ, ಎಷ್ಟೊತ್ತಾ ಯಿತು ನಿಂತೇ ಇರುವರು" ಎಂದು ಹೇಳುತ್ತ, ಮುಗುಳು ನಗೆ ಬೀರುತ್ತ ತರುಣಿ ಒಳಗೆ ಹೋದವಳು, ಚಿಕ್ಕ ಕೊಸೊಂದನ್ನೆತ್ತಿ ಆಡಿಸತೊಡಗಿದಳು.

ನಾನು ಕುಳಿತುಕೊಂಡೆ. ಯಜಮಾನಿ ತನ್ನ ಮಾತನ್ನು ಶುರು ಮಾಡಿದಳು:

"ಅಂದಿನಿಂದ ನಾವು ಮಿಲಿಟರಿಯವರನ್ನು ಕಂಡರೆ ಸ್ವಲ್ಪ ಅಂಜುವೆವು. ನಮಗ ಹ್ಯಾಂಗ ಅಕ್ಕ-ತಂಗಿಯರಿರತಾರ, ಅವರಿಗೂ ಇರೂದಿಲ್ಲs? ಹೀಗ್ಯಾಕ ಮಾಡತಾರ?"

ಈ ಪ್ರಶ್ನೆಗೆ ನಾನು ಯಾವ ಉತ್ತರ ಕೊಡಲಿ? ನಾನೂ ಸ್ವಲ್ಪ ಆರೋಪಿಯೇ ಎಂದು ಭಾಸವಾಗತೊಡಗಿತು. ನಮ್ಮಿಬ್ಬರಲ್ಲಿ ಬೆಳೆದ ಸಹಜವಾದ ಗೆಳೆತನ ಕಮರ ತೊಡಗಿತು. ಆದನ್ನು ತಡೆಯಲು ಮಾರ್ಗ ಹುಡುಕ ಹತ್ತಿದೆ. ದೃಷ್ಟಿ ಕೂಸನ್ನಾಡಿಸುವ ತರುಣಿಯ ಕಡೆಗೆ ಹೊಯಿತು. ತಟ್ಟನೆ ನುಡಿದೆ:

"ಆ ಕೂಸನ್ನು ನನಗೆ ಕೊಡಿರಿ. ಫಲ್ಟನಿನಲ್ಲಿ ಬೆಳೆಯಿಸಿ ಕಲಿತ ನನನ್ನಾಗಿ ಮಾಡುವೆ"

"ಈಗರೇ ಎರಡೂವರಿ ತಿಂಗಳದವ ಇದ್ದಾನ. ದೊಡ್ಡವ ಆಗಿ ಮಾತಾಡಲಿಕ್ಕೂ ಸುರು ಮಾಡಲಿ; ಒಯ್ಯುವಿರಂತೆ" ಎಂದಳು ಯಜಮಾನಿ ನಗುತ್ತ.

"ನೀವು ಏನು ಕೊಟ್ಟರೂ ನಾನು ನನ್ನ ಮಾಣಿಕಾ ಕೊಡೂದಿಲ್ಲ!" ನುಡಿದಳು ಆ ತಾಯಿ—ಆ ತರುಣಿ.

ನಾವೆಲ್ಲರೂ ನಕ್ಕೆವು.

"ನಿನುಗೆ ಮಕ್ಕಳೆಷ್ಟು ಜನ?" ಕೇಳಿದೆ ನಾನು.

"ಇಬ್ಬರು ಗಂಡು ಮಕ್ಕಳು; ಹೊಲಕ್ಕ ಹೋಗ್ಯಾರ. ಇಬ್ಬರು ಹೆಣ್ಣುಮಕ್ಕಳು: ಗಂಡನ ಮನೆಗೆ ಹೋಗ್ಯಾರ. ಇವರಿಬ್ಬರೂ ಸೊಸೆಯರು!" ಈ ಮಾತು ಕೇಳಿ ಒಳಗಿನಿಂದ ಇನ್ನೊಬ್ಬ ಬೊಗಸೆ ಗಣ್ಣಿನ ಹುಡುಗಿ ಇಣಕಿ ಹಾಕಿದಳು.

"ನೀವು ಲಗ್ನಕ್ಕೆ ಎಷ್ಟು ಖರ್ಚು ಮಾಡುವಿರಿ?" ಅಂದೆ.

"ಐದಾರು ನೂರು ಹತ್ಯಾವರಿ!" ಸಹಜವಾಗಿ ನುಡಿದಳು. ನನ್ನ ಮುಖದ ಮೇಲಿನ ಆಶ್ಚರ್ಯದ ಕಳೆ ನೋಡಿ "ನೂರರ ಮೇಲೆ ಕೊಡಬೇಕಾಗತ್ತದರಿ ಗಂಡಿನವರಿಗೆ. ಆ ಮೇಲೆ ಅರಿವಿ ಊಟ ಮೊದಲಾದದ್ದು ಖಂಡರೆ ತುಸಾನೇ ಖರ್ಚು! ಒಂಭತ್ತು ದಿನಾ ನಡೀತ್ತದೆ ಒಂದೂ ನುಡುವಿ!" ಎಂದಳು ಆ ಯಜಮಾನಿ.

ಇನ್ನೂವರೆಗೂ ರೈಲುಗಾಡಿ ನೋಡದ ಜನ. ಜೀವನವೇ ಕಷ್ಟಸಾಧ್ಯ. ನೋಟನ ಮುಖ ಕಾಣದ ಮಕ್ಕಳು. ಎಷ್ಟೋಸಲ ಹೊಲದ ತೆರಿಗೆಯನ್ನೂ ಕೊಡಲು ಸಾಧ್ಯವಾಗದವರು. ಆದರೂ ಲಗ್ನ

ನಾಗ್ವೀಲಾಸ ಬುಕ್‌ಡಿಪೊ, ದುರ್ಗದಬೈಲು, ಹುಬ್ಬಳ್ಳಿ
ಇವರಲ್ಲಿ ದೊರೆಯುವ ಪುಸ್ತಕಗಳು

ಪೋಲೀಸಗಾಯಿಡು (ಕಲಕೋಟಿಕೃತ)	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೮—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನವಾಸ್ತ್ರ (ಸಬರದಕೃತ)	೧—೪—೦
ತರುಣ ಪತ್ನಿ	೦—೮—೦
ಕಲಿತರೆ ಹೀಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦—೧೨—೦
ತತ್ವಲಾವಣಿ	೦—೮—೦

ವೊಂದಕ್ಕೆ ಐದಾರುನೂರು ಖರ್ಚು ಮಾಡುವ ಸಾಹಸಿಗರು!! ಇದೆಂತಹ ಬಡತನ—ಇದೆಂತಹ ದುರ್ದೈವ!! " ಈ ವಿಚಾರಗಳಲ್ಲಿ ಮತ್ತಾವುದೂ ತೋಚದೆ ಕೇಳಿದೆ :

" ನೀವು ಔಷಧದ ಬಗ್ಗೆ ಏನು ಮಾಡುವಿರಿ ? "

" ಎಲ್ಲೀ ಔಷಧರೀ ! ದೇವರ ಮೇಲೆ ಭಾರಾ ಹಾಕೂದು ಸತ್ತs ಹೊಯ್ತು ಅಂದರ ಮಣ್ಣ ಕೂಡಿಸೋದು! ಡಾಕ್ಟರ್ ಇಲ್ಲ. ವೈದ್ಯ ಇಲ್ಲ! "

ಇಂತಹ ಹಳ್ಳಿಗಳು ಆದೆಷ್ಟು ಇಲ್ಲ ನಮ್ಮ ದೇಶದಲ್ಲಿ! ಆದರೂ ಆಂಗ್ಲೆ ಬೆರಳಿನಷ್ಟಿದ್ದ ಡಾಕ್ಟರರಿಗೆ ಹಳ್ಳಿಗಳೆಂದರೆ ಆಗದು. ತಮ್ಮ ವಿದ್ಯೆಯ ಉದಾತ್ತ ಧ್ಯೇಯಗಳಿಗೆಲ್ಲ ನೀರೆರೆದು ನಾಣ್ಯಗಳ ನಾಪಕ್ಕೆ ಕುಣಿಯುತ್ತ ಕುಳಿತಿರುವರು ಪಟ್ಟಣಗಳಲ್ಲಿ. ಇವರ ಆತ್ಮಗಳು ಪಟ್ಟಣದಲ್ಲಿ ಕೊಳೆಯುತ್ತಿರುವಾಗ ಹಳ್ಳಿಗರ ದೇಹಗಳು ಇವರಿಲ್ಲದ್ದರಿಂದ ಕುಸಿಬೀಳಹತ್ತಿರುವವು. ಕಣ್ಣುಗಳೆಂದು ತೆರೆಯುವುವು??

" ತುಳಸಿಯನ್ನಾದರೂ ನೆಡಿರಿ; ಆದರಿಂದ ಕೆಲವು ರೋಗಗಳಾದರೂ ನೆಟ್ಟಗಾಗುವುವು. ಚಿಕ್ಕ ಮಕ್ಕಳಿಗೂ ಉತ್ತಮ!" ಎಂದೆ.

" ನೀವು ಹೇಳತೀರಿ ಅಂದ ಬಳಿಕ ತುಳಸೀಗಿಡ ಹಚ್ಚತೀನರಿ!" ಎಂದಳು ಯಜಮಾನಿ.

" ನಮ್ಮೂರಲ್ಲಿ ಹೆಚ್ಚು ಮನೆಗಳಲ್ಲಿ ತುಳಸಿ ಇದ್ದೇ ಇರುವುದು!"

ಈ ಮಾತನ್ನು ಅನುಸರಿಸಿ ನಮ್ಮೂರ ಹೆಸರು, ದೇಶ ಮುಂತಾದುದನ್ನು ಹೇಳಿದೆ ಆಗ ಆಕೆಗೆ ಹೊಳೆಯಿತು ನಾನು ಅದು ಹೇಗೆ ಮರಾಟೆಯಲ್ಲಿ ಮಾತನಾಡಬಲ್ಲೆನೆಂದು. ಇಷ್ಟರಲ್ಲಿ ನನ್ನ ಸಂಗಾತಿಗಳು ಓ—ಲ ಕೋಳಿಗಳನ್ನು ಹಿಡಿದುಕೊಂಡುಬಂದರು. ನಾನೂ ಟೊಪ್ಪಿಗೆಯನ್ನು ಹಾಕಿಕೊಳ್ಳುತ್ತ ಎದ್ದೆ. ನೆಲದ ಮೇಲೆ ಒರಗಿದ ಆ ತರುಣಿಯ ಮುಖ ಕಾಣತೊಡಗಿತು. ನನ್ನ ಮನದಲ್ಲಿ ಬಂದುದನ್ನು ಕೃತಿಯಲ್ಲಿ ತರಲು ದಾರಿ ತೋಚದೆ ಸುಮ್ಮನಿದ್ದೆ. ನೋಡೋಣ, ಆ ಯಜಮಾನಿಯಿಂದ ಏನಾದರೂ ಮಾರ್ಗ ದೊರೆಯುವುದೇ ?

" ಹೊರಟಿರೀ ? ಕಡ್ಡೀ ಪೆಟ್ಟಿಗೀನರೆ ಕೊಟ್ಟು ಹೋಗರಿ! " ಎಂದಳು ಯಜಮಾನಿ.

ಕೊಟ್ಟಳು! ಯಜಮಾನಿ ಮಾಡಿಕೊಟ್ಟಳು ದಾರಿ! ಕಡ್ಡಿಪೆಟ್ಟಿಗೆ ಕೊಟ್ಟೆ ನಾನು. ಎರಡು ರೂಪಾಯಿಗಳ ನೋಟು ಚಾಚಿದೆ. ಹಣ ಕಂಡು ಬಾಯಿ ತೆರೆಯಿತು. ಕೈ ಚಾಚಿತು. ಆದರೂ ಬಾಯಿಯಿಂದ ' ಬೇಡ, ಬೇಡ! ' ಎಂಬ ನುಡಿ ಹೊರಬಿತ್ತು. ಹುಸಿನುಡಿ ಎಂದು ಆತೆ ತುಂಬಿದ ಕಣ್ಣು ನುಡಿದುವು. ನುಡಿ ನಂಬಬೇಡಿರೆಂದು ಹೇಳುವ ಕೀಳು ನಗೆಯೊಂದು ಬಂದಿತು ಮುಖದ ಮೇಲೆ. ಯಜಮಾನಿಯ ಮುಖವನ್ನು ತ್ಯಜಿಸಿ ತರುಣಿಯ ಮುಖ ನೋಡಿದೆ. ಆಕೆಯ ಕಣ್ಣುಗಳಲ್ಲಿ ಭಯ ತುಂಬ ತೊಡಗಿತ್ತು. ಅದನ್ನು ದೂರ ಮಾಡಲು ನುಡಿದೆ:

" ಮಗುವಿನ ಅಂಗಿಗಳಿಗಾಗಿ! "

" ನೀವೇ ಮುಂದಿನ ಸಲ ಬಂದಾಗ ತಕ್ರಿ! " ಎಂದು ನುಡಿದಳು ಒರಗಿದ ತರುಣಿ.

" ನಾನು ಮತ್ತೆ ಬರುವುದಿಲ್ಲ; ಭಯಗೊಳ್ಳಬೇಡಿರಿ! ನಾನು ಸೀಪಾಯಿ ಅಲ್ಲ. ಮಗುವಿಗಾಗಿ ತಕ್ಕೊಳ್ಳಿರಿ! " ಎಂದು ಒತ್ತಾಯದಿಂದ ಯಜಮಾನಿಯ ಅಶೆಬುರುಕ ಬೆರಳುಗಳಲ್ಲಿ ನೋಟು ಇಟ್ಟು, ನಾನು ಹೊರಟೆ.

ಕೆಲ ದೂರ ಹೋದ ಮೇಲೆ " ಸಾಹೇಬರೇ, ಸಾಹೇಬರೇ "ಎಂಬ ಕರೆ ಕೇಳಿತು. ಹೊರಳಿ ನೋಡಿದೆ. ಹತ್ತಲಲ್ಲಿ ನಿಂತು ಯಜಮಾನಿ ನೋಟು ತೋರಿಸುತ್ತ ನುಡಿದಳು: " ಸೊಸಿ ಬೇಡ ಅಂತಾಳರಿ! " ಇಟ್ಟುಕೊಳ್ಳಲು ಕೈಸನ್ನೆಯಿಂದ ತಿಳಿಸುತ್ತ ನಾನು ಆ ಹಳ್ಳಿ ಬಿಟ್ಟೆ.

ಹಳ್ಳಿಗೆ ಬಂದದ್ದು ಸಫಲವಾಯಿತು. ಚೆಲುವೆಯಾದ ತರುಣಿಯನ್ನು ಮನವಾರೆ ನೋಡಿದ್ದಾಯಿತು. ಆಕೆಯೊಡನೆ ಮಾತನಾಡಿದ್ದೂ ಆಯಿತು. ಮಗುವಿಗಾಗಿ ರೊಕ್ಕ ಕೊಟ್ಟು ನನ್ನ ಔದಾರ್ಯವನ್ನು ತೋರಿಸಿದ್ದಾಯಿತು. ನನ್ನನ್ನು ಅವರೆಲ್ಲ— ಹೆಚ್ಚಾಗಿ ಆ ತರುಣಿ ಅಂತಃಕರಣದಿಂದ ನೆನಸುವರೆಂಬ ಭರವಸೆಯಿಂದ ಉಬ್ಬಿದವನಾದೆ, ಆ ತರುಣಿ ನನ್ನನ್ನ ನೆನೆಯುವದರಲ್ಲಿ ಸಂಶಯವಿಲ್ಲ. ಆದರೆ, ಉಪಕಾರ ಮಾಡಿದನೆಂದೋ, ಅಪಕಾರ ಮಾಡಿದನೆಂದೋ ?

ಹೊಲದಿಂದ ಬಂದ ಗಂಡ " ರೂಪಾಯಿ ಎಲ್ಲಿಯವು ? " ಎಂದು ಕೇಳಿದರೆ, ಆ ತರುಣಿ ಏನು ಉತ್ತರ ಕೊಡಬೇಕು? " ಮಿಲಿಟರಿಯವರ ಔದಾರ್ಯನಿದು! " ಎಂದು ಅವಳು ಉತ್ತರ ಕೊಟ್ಟರೆ ಅವನ ಮೇಲೆ ಯಾವ ಪರಿಣಾಮವಾಗಬಹುದು ?

ನಾನು ಇದೆಂತಹ ವ್ಯವಹಾರ ಮಾಡಿದೆನು!

ಒಡನಾಡಿ

' ಆನಂದಕಂದ'ರ ಹೊಸ ಕವನಸಂಗ್ರಹ

ಇದೀಗ ಅಚ್ಚಾಗಿ ಬೆಳಕಿಗೆ ಬಂದಿದೆ!

" ಮುಂಬರಯದ ಮುಗ್ಧಪ್ರಣಯದ ಆತುರ-ಕಾತರಗಳನ್ನೂ, ಏರುವರಯದ ಕಾಮುಕ್ರಣಯದ ರತಿ-ಹಾಸವಿಲಾಸಗಳನ್ನೂ, ತುಂಬುವರಯದ ಅನುಭವಪ್ರಣಯದ ಸುಖ-ದುಃಖಗಳ ಉಯ್ಯಲೆಯಾಟವನ್ನೂ, ಇಳಿವರಯದ ಪರಿಪಕ್ವಪ್ರಣಯದ ತೃಪ್ತಿಜ್ಞತೆಯನ್ನೂ ಇಲ್ಲಿಯ ಕೃತಿಗಳಲ್ಲಿ ನೋಡಬಹುದು! "

ಹೊಸಕವನಗಳನ್ನು ವಿವಿಧರಾಗಗಳಲ್ಲಿ ಹಾಡಿಕೊಳ್ಳಬೇಕೆಂದು ಬಯಸುವವರು, ಅವಶ್ಯವಾಗಿ ಈ ಕವನ ಸಂಗ್ರಹದ ಸಹಕಾರ ಪಡೆಯಬೇಕು.

' ಬಾಳಿದು ಕನಸಲ್ಲ ' ' ಬಂತು ಬಂತು ಮಾಗಿ! ' ' ಜಯ ಜಯ ಫಾಲ್ಗುಣ! ' ' ಹಚ್ಚ ದೀಪಾ ನಲ್ಲೆ! ' ಮೊದಲಾದ ಜನಪ್ರಿಯ ಭಾವಗೀತಗಳು ಇದರಲ್ಲಿ ಸಂಗ್ರಹಗೊಂಡಿವೆ.

ಅಂದವಾದ ಮುದ್ರಣ, ಸುಂದರವಾದ ಕಟ್ಟುವಿ!

ಬೆಲೆ ಒಂದು ರೂಪಾಯಿ

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆಯಿರಿ!

ಅಟಾಮಿಕ್ ಬಾಂಬು

ಶ್ರೀ. ಕೆ. ವಿಠ್ಠಲ ಶೇಣ್ಯೆ, ಬಿ. ಎ., ಎಲ್. ಟಿ. ಉಡುಪಿ

ಕಳೆದ ಆರು ವರುಷಗಳಿಂದ ಎಡೆಬಿಡದೆ ನಡೆಯುತ್ತಿದ್ದ ಎರಡನೆಯ ಜಾಗತಿಕ ಯುದ್ಧವು, ಕೆಲವೇ ದಿನಗಳ ಹಿಂದೆ, ತುಸು ಆಸಿರೀಕ್ಷೆಯನ್ನಿಸುವಷ್ಟು ತೀವ್ರವಲ್ಲಿ ಮುಗಿಯಲು, ಆ ಯುದ್ಧದ ಕೊನೆಯ ದಿನಗಳಲ್ಲಿ ಮಿತ್ರಪಕ್ಷದವರು ಜಪಾನಿನ ಮೇಲೆ ಪ್ರಯೋಗಿಸಿದ ಪ್ರಳಯಕಾರಿಯಾದ ಅತ್ಯಾಶ್ಚರ್ಯವಾದ 'ಅಟಾಮಿಕ್ ಬಾಂಬು' ಒಂದು ಕಾರಣವೆಂದರೆ ತಪ್ಪಾಗದು. ಮೊತ್ತಮೊದಲು ಅಂತಹ ಅಟಾಮಿಕ್ ಬಾಂಬು ಎನೋಲಾ ಎಂಬ ಅಮೇರಿಕನ್ ವಿಮಾನಚಾಲಕನಿಂದ ಜಪಾನೀ ಸೈನಿಕೇಂದ್ರವಾದ ಹಿರೋಶೀಮಾದ ಮೇಲೆ ಆಗೋಸ್ತು ೬ನೆಯ ದಿನ ಎಸೆಯಲ್ಪಟ್ಟಿತು. ಅದರಿಂದಾದ ಪರಿಣಾಮಗಳನ್ನು ತುಸು ಎಣಿಕೆಗೆ ತಂದರೆ, ಅಟಾಮಿಕ್ ಬಾಂಬು ಎಂಬುದು ಎಂತಹ ವಿಪ್ಲವಕಾರಿ ಆಯುಧವೆಂಬ ಅರಿವು ಸಮುಗಾಗದಿರದು. ಆ ಬಾಂಬು ನಗರದ ನಟ್ಟನಡುವೆ ಸಿಡಿದು, ನಕ್ಷತ್ರಗಳಷ್ಟೇ ಪ್ರಭೆಯುಳ್ಳ, ಕಣ್ಣುಕುಕ್ಕುವ ಬೆಳಕನ್ನುಂಟುಮಾಡಿತಂತೆ. ಒಡನೆಯೇ ಉಂಟಾದ ಬೆಳ್ಳಗಿನ ಹೊಗೆಸೋಡಗಳು ನೆಲದಿಂದ ೪೦,೦೦೦ ಅಡಿಗಳ (ಸುಮಾರು ಎಳುವರೆ ಮೈಲಿಗಳ) ಎತ್ತರಕ್ಕೆ ನೆಗೆದುವಂತೆ. ಭೂಮಿಯ ಮೇಲಿನ ಸಮಸ್ತ ಜಂತಾಚರ ವಸ್ತುಗಳು ಸುಟ್ಟು ಕರ್ರಗಾಗಿ ಲಯವಾದುವಂತೆ. ಮಾನವ ಜೀವಿಗಳು ಕ್ಷಣಾರ್ಧದಲ್ಲೇ ಸುಟ್ಟು ಆವಿಯ ರೂಪವನ್ನು ತಾಳಿದುವಂತೆ. ಒಟ್ಟಿಗೆ ಹೇಳುವುದಾದರೆ, ಆ ಬಾಂಬಿನ ಸ್ಫೋಟನದಿಂದ ಉಂಟಾದ ಜ್ವಾಲೆಗಳು ಮಿಂಚಿನ ವೇಗದಿಂದ ಸುತ್ತಲೂ ಪಸರಿಸಿ, ವ್ಯಾಯಶಃ ಕಾಂಕ್ರೀಟಿನಿಂದ ರಚಿತವಾದ ವಿಮಾನವಾಳಿ–ಆಶ್ರಯಗಳ ಉಕ್ಕಿನ ಪಂಜರಗಳ ಹೊರತು, ಮಿಕ್ಕೆಲ್ಲ ವಸ್ತುಗಳನ್ನು ಸುಟ್ಟು ನಿರ್ನಾಮ ಮಾಡಿದುವಂತೆ.

ಹೀಗೆ ದೊಡ್ಡ ದೊಡ್ಡ ಕಟ್ಟಡಗಳನ್ನು ಉರುಳಿಸಿ, ಮಾನವ ಜನ್ಮವನ್ನು ಕೊಂದು, ಉಕ್ಕನ್ನು ಕೂಡ ಹೊಗೆಸೋಡದ ರೂಪದಲ್ಲಿ ಮಾಯಗೊಳಿಸಬಲ್ಲ ಅದ್ಭುತ ಶಕ್ತಿಯು ತೀರ ನಿರುಪದ್ರವಿಯಂತೆ ತೋರುವ, ಗೋಲಾಕೃತಿಯ, ಸುಮಾರು ಗಾಲ್ಫ್ (golf) ಆಟವ ಚೆಂಡಿನಷ್ಟು—ಎಂದರೆ ಒಬ್ಬನ ಅಂಗಿಯ ಜೇಬಿನಲ್ಲಿ ಕೂಡ ಹಿಡಿಯುವಷ್ಟು ಚಿಕ್ಕದಾದ ಅಟಾಮಿಕ್ ಬಾಂಬಿನಲ್ಲಿದೆಯೆಂದರೆ ಯಾರಿಗೆ ತಾನೆ ಆಶ್ಚರ್ಯವಾಗಬೇಡ! ಆದರೆ ಅದು ನಿಜವೇ ಆಗಿದೆ.

ಮೂರ್ತಿ ಕಿರಿಯದಾದರೂ ಕೀರ್ತಿ ಹಿರಿಯದೆಂಬಂತಹ ಅಟಾಮಿಕ್ ಬಾಂಬಿನಲ್ಲಿ ಅಡಕವಾಗಿರುವ ಪ್ರಚಂಡ ಶಕ್ತಿಯ ಪರಿಚಯವಾಗಬೇಕಾದರೆ, ಎಲ್ಲ ಪದಾರ್ಥಗಳ ಆಂತರಿಕ ರಚನೆಯ ಕೂಲಂಕಷ ತಿಳಿವು ಅತ್ಯಾವಶ್ಯಕವಾಗಿದೆ. ಸೂತನ ವಿಜ್ಞಾನವ ಮೇರೆಗೆ, ಪ್ರತಿಯೊಂದು ಘನ, ದ್ರವ ಅಥವಾ ಆನಿಲವು ಆಯಾ ಪದಾರ್ಥದ ಅಣು (molecule) ಗಳಿಂದ ರಚಿತವಾಗಿದೆಯೆಂದೂ ಪ್ರತಿ ಅಣುವು ಅದಕ್ಕಿಂತಲೂ ಸಣ್ಣದಾದ ಒಂದು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಪರಮಾಣು ಅಥವಾ ಅಟಂ (atom) ಗಳಿಂದ ಕೂಡಿದೆಯೆಂದೂ ತಿಳಿಯತಕ್ಕದ್ದು. ಪ್ರತಿಯೊಂದು 'ಪರಮಾಣು' ಅಥವಾ 'ಅಟಂ'ನಲ್ಲಿ 'ಪ್ರೋಟೋನ್' (proton) ಎಂದು ಕರೆಯಲ್ಪಡುವ ಒಂದು 'ಕೇಂದ್ರ' ವಿದ್ದು ಅದರ ಸುತ್ತಲು 'ಎಲೆಕ್ಟ್ರಾನ್' (Electron) ಎಂಬವುಗಳು, ಸೂರ್ಯನ ಸುತ್ತ ಗ್ರಹಗಳೋಪಾದಿ ತಿರುಗುತ್ತಲಿವೆಯೆಂದೂ ಭಾವಿಸತಕ್ಕದ್ದು. ಒಂದು 'ಪ್ರೋಟಾನು' ಮತ್ತು ಅದರ ಜತೆಯಲ್ಲೇ ಇರುವ ಎಲೆಕ್ಟ್ರಾನಿಗೆ ಒಟ್ಟಿಗೆ 'ನ್ಯೂಟ್ರಾನ್' (Neutron) ಎಂದೂ ಕರೆಯುವುದು ವಾಡಿಕೆ. 'ಪ್ರೋಟೋನ್' ಮತ್ತು 'ಎಲೆಕ್ಟ್ರಾನು'ಗಳೇ ಇತ್ತೀಚೆಯ ವರೆಗೆ ವಿಜ್ಞಾನಿಗಳಿಂದ ಕಂಡು ಹಿಡಿಯಲ್ಪಟ್ಟ ಪದಾರ್ಥದ ಅತಿ ಸೂಕ್ಷ್ಮಾಂಶಗಳು. ೧೮೬,೦೦೦,೦೦೦ ಮೈಲು ವ್ಯಾಸದ ಒಂದು ಗೋಲಕ್ಕಿಂತ ಗುಂಡುಸೂಜಿಯ ತಲೆಯು ಎಷ್ಟು ಪಾಲು ಕಿರಿದಾಗಿದೆಯೋ, 'ಪ್ರೋಟೋನ್' ಅಥವಾ 'ಅಣುಕೇಂದ್ರ'ವು ಗುಂಡುಸೂಜಿಯ ತಲೆಗಿಂತ ಅಷ್ಟೇ ಪಾಲು ಕಿರಿದಾಗಿದೆಯೆನ್ನುವಾಗ, ಆ 'ಅಣುಕೇಂದ್ರ' (proton or nucleus) ದ ಸೂಕ್ಷ್ಮಾಗಾತ್ರದ ಅರಿವಾಗುವುದು.

'ಅಣುಕೇಂದ್ರ' (nucleus) ವನ್ನು ವ್ಯಘಟ್ಟಕ್ಕರಿಸುವ (disintegrate), ಅಥವಾ ಒಡೆಯುವ ಯಾವುದಾದರೊಂದು ಉಪಾಯವನ್ನು ಕಂಡುಹಿಡಿದರೆ, ಅದರಲ್ಲಿ ಪ್ರಚ್ಛನ್ನವಾಗಿರುವ ಪ್ರಚಂಡ ಶಕ್ತಿಯೊಂದು ಮಾನವನ ಉಪಯೋಗಕ್ಕೆ ಲಭಿಸಬಹುದೆಂಬುದಾಗಿ ಕಳೆದ ಒಂದು ದಶಕ (decade)ದಿಂದ ಎಲ್ಲ ವಿಜ್ಞಾನಿಗಳಿಗೆ ಗೊತ್ತಿತ್ತು. ಅಲ್ಲಲ್ಲಿಯ ಒಬ್ಬಿಬ್ಬರು ವಿಜ್ಞಾನಿಗಳು ಆ 'ಅಣುಕೇಂದ್ರ' ದ ವ್ಯಘಟ್ಟಕ್ಕರಣದ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದರು. ಆದರೆ ಅಂತಹ ವ್ಯಘಟ್ಟಕ್ಕರಣದಿಂದ ಮುಕ್ತವಾದ ಸ್ಫೋಟನಶಕ್ತಿ (explosive force)ಯನ್ನು ಯುದ್ಧಕಾಲದ ನಾಶಕ್ರಿಯೆಗೆ ಉಪಯೋಗಿಸುವ ಹಂಚಿಕೆಯು ಕಳೆದ ಜುಲೈ ತಿಂಗಳಲ್ಲಿ ತಾನೆ ಅಮೇರಿಕ ಹಾಗೂ ಬ್ರಿಟನಿನ ಕೆಲವು ವಿಜ್ಞಾನಿಗಳಿಗೆ ಹೊಳೆಯಿತು. ಅದು ಈ ವರೆಗೆ, ಉಳಿದ ಎಲ್ಲ ವಿಜ್ಞಾನಿಗಳಿಗೆ ರಹಸ್ಯವಾಗಿಯೆ ಉಳಿದಿದೆ. ಪರಂತು 'ಅಟಾಮಿಕ್ ಬಾಂಬು' ಎಂದರೇನು? ಅದನ್ನು ತಯಾರಿಸಲು ಬೇಕಾಗುವ ಸಾಮಗ್ರಿಗಳಾಗುವುವು? ಆ ಬಾಂಬಿನಲ್ಲಿ ಸ್ಫೋಟನ ಉಂಟಾಗುವ ಬಗೆ ಹೇಗೆ?—ಎಂಬಿತ್ಯಾದಿ ಎಲ್ಲ ವಿಚಾರಗಳು ಸರ್ವಪ್ರಥಮವಾಗಿವೆ.

ಅಟಾಮಿಕ್ ಬಾಂಬಿನಲ್ಲಿ 'ಯುರೇನಿಯಮ್' (Uranium) ಎಂಬ ಮೂಲ ಧಾತು (element)ವಿನ ಪರಮಾಣುವಿನ ವ್ಯಘಟ್ಟಕ್ಕರಣದಿಂದ ದೊರೆಯುವ ಸ್ಫೋಟನ ಶಕ್ತಿಯು ಅಡಕವಾಗಿದೆ. ಯುರೇನಿಯಮ್ ಎಂಬುದು ಈ ವರೆಗೆ ದೊರೆತ ಲೋಹಗಳಲ್ಲೆಲ್ಲ ಅತಿ ಭಾರವಾದುದಾಗಿದೆ. ಅದು 'ಪಿಚ್‌ಬ್ಲೆಂಡ್' (pitch blende) ಎಂಬ ಹೆಸರಿನ, ಕಪ್ಪು ಕಂದು ಬಣ್ಣದ, ಘನರೂಪದ, ಹೊಳೆಯುವ ಖನಿಜದಲ್ಲಿ ತೀರ ಸೂಕ್ಷ್ಮ ಪರಿಮಾಣದಲ್ಲಿದೆ. 'ಪಿಚ್‌ಬ್ಲೆಂಡಿ'ನ ನಿಕ್ಷೇಪಗಳೂ ಪ್ರಕೃತಿಯಲ್ಲಿ ಬಹು ವಿರಳವಾಗಿಯೇ ಇವೆ. ಬ್ರಿಟಿಷ್ ದ್ವೀಪಗಳ ಕಾರ್ನವಾಲ್ (Cornwall) ಸಕ್ಸನಿ (Saxony) ಗಳಲ್ಲಿಯೂ, ಕೆನಡಾ (Canada) ಬೊಹೆಮಿಯಾ (Bohemia) ನಾರ್ವೆ (Norway) ಗಳಲ್ಲಿಯೂ ಅದರ ನಿಕ್ಷೇಪ (deposits)

ಗಳಿವೆಯಂತೆ. 'ಯುರೇನಿಯಮ್' ಎಂಬುದು ಅದರ ಜತೆಯಲ್ಲೇ ಸಿಗುವ ರೇಡಿಯಮ್ (radium) ಎಂಬ ಮತ್ತೊಂದು ಅಮೂಲ್ಯ ಲೋಹದಂತೆಯೇ ಹಲವು ಕಪ್ಪು ಕಾಗದಗಳಿಂದ ಆವೃತವಾದ ಫೋಟೋಗ್ರಾಫಿಕ್ ಕಾಗದದ ಮೇಲೆಯೂ ಪರಿಣಾಮವನ್ನುಂಟು ಮಾಡುವ, ಹಾಗೂ ತನ್ನ ಸುತ್ತುಮುತ್ತಲಿನ ವಾಯುವನ್ನು ವಿದ್ಯುದ್ವಾಹಕವಾಗಿ ಪರಿವರ್ತಿಸಬಲ್ಲ ಪಟುವಾದ ಕಿರಣಗಳನ್ನು ಹೊರಡಿಸುವ ಗುಣವುಳ್ಳದಿದೆ. ಇಂತಹ ಪದಾರ್ಥಕ್ಕೆ "ಕಿರಣವಿಕ್ಷೇಪಿ" (radio-active) ಪದಾರ್ಥವೆನ್ನುತ್ತಾರೆ- ಯುರೇನಿಯಮ್ ಎಂಬುದು ಹಾಗೆ ಸ್ವಯಂಕಿರಣವಿಕ್ಷೇಪಿ (spontaneously radioactive) ಯಾದ ಮೂಲಧಾತುವಾಗಿದೆ.

ಯುರೇನಿಯಮಿನಲ್ಲಿ ಎರಡು ತರದ 'ಆಟಂ' ಅಥವಾ ಪರಮಾಣು ಗಳಿವೆ. ಅವು ತಮ್ಮ ಭೌತ ಹಾಗೂ ರಾಸಾಯನಿಕ ಗುಣಗಳಲ್ಲಿ ಬಹುಪ್ರಮಟ ಸರ್ವಸಮ (identical) ಎಂಬಂತಿದ್ದರೂ ಪೂರ್ತಿಯಲ್ಲಿ ಮತ್ತು ಭಾರವಲ್ಲಿ ಅವುಗಳೊಳಗೆ ತುಸು ಭೇದವಿದ್ದೇ ಇದೆ. ಇವುಗಳ ಪೈಕಿ ಹೆಚ್ಚಿರುವ 'ಆಟಂ'ಗಳೇ ಬಾಂಬು ತಯಾರಿಗೆ ಬೇಕಾದುವು ಗಳು. ಇವು ಸಂಖ್ಯೆಯಲ್ಲಿ ಎಷ್ಟು ವಿರಳವಾಗಿವೆಯೆಂದರೆ ಯಾವು ದಾದರೂ ಕೊಟ್ಟ ಭಾರವ ಯುರೇನಿಯಮಿನಲ್ಲಿ ಪ್ರತಿ ೨ ಲಕ್ಷ ನಿರುಪ-ಯೋಗಿ ಭಾರದ 'ಆಟಂ'ಗಳಿಗೆ ಕೇವಲ ಒಂದು ಇಂತಹ ಹಗುರ 'ಆಟಂ' ಇದೆ. ಅಲ್ಲದೆ, ಇವೆರಡು ಜಾತಿಯವುಗಳನ್ನು ಪ್ರತ್ಯೇಕಿಸಲು ಯಾವತರದ ವಿಧಾನವೂ ಬಹಳ ಕಾಲದ ಸರಿಗೆ ಸಾಧ್ಯವಾಗಿರಲಿಲ್ಲ. ಈಗ ತಾನೆ ಅದು ಸಾಧ್ಯವಾದುದರಿಂದಲೇ ಅಟಾಮಿಕ್ ಬಾಂಬಿನ ತಯಾರಿಗೆ ಅನುಕೂಲವಾಯಿತು. ಹೀಗೆ ಎಷ್ಟೋ ಟನ್ ಭಾರದ ಪಿಚ್ ಬ್ಲೆಂಡ್ ಅದುರುಗಳಿಂದ ಅತ್ಯಲ್ಪ ಪರಿಮಾಣದ ಯುರೇನಿಯ-ಮನ್ನು ಕಷ್ಟಪಟ್ಟು ಪ್ರತ್ಯೇಕಿಸಿ, ಅದನ್ನು ಶುದ್ಧೀಕರಿಸಿ, ಅದರಲ್ಲಿರುವ ಅತಿ ಕದಿಮೆಸಂಖ್ಯೆಯ ಹಗುರ 'ಆಟಂ'ಗಳನ್ನು ಬೇರ್ಪಡಿಸುವುದೇ ಅಟಾಮಿಕ್ ಬಾಂಬ ತಯಾರಿಯ ಅತಿ ದೊಡ್ಡ ಸಮಸ್ಯೆ. ಈಗ ಆ ಕೆಲಸದ ಬಗ್ಗೆ ಲಕ್ಷಗಟ್ಟಲೆ ಕೆಲಸಗಾರರು ಕೂಡಿದ ದೊಡ್ಡ ದೊಡ್ಡ ಕೈಗಾರಿಕೆ ಕೇಂದ್ರಗಳೇ ತಲೆಯೆತ್ತಿವೆ.

ಸರ್ ಸಿ. ವಿ. ರಾಮನ್ ಅವರು ಅಟಾಮಿಕ್ ಬಾಂಬಿನ ರಚನಾ ಸೂತ್ರವನ್ನು ವಿವರಿಸುತ್ತ ಹೀಗೆಂದಿದ್ದಾರೆ: "ಯುರೇನಿಯಮಿನ ಅಣುಕೇಂದ್ರ (nucleus)ದ ಮೇಲೆ ವ್ಯಾಕೃತಿಕ ಅಥವಾ ಕೃತಕ ರೀತಿ ಯಲ್ಲಿ ದೊರೆತ 'ನ್ಯೂಟ್ರಾನು'ಗಳು ಎಸೆಯಲ್ಪಟ್ಟಾಗ ಆ ಕೇಂದ್ರವು ಒಡೆಯುವುದು. ಕಾರಣ ಯುರೇನಿಯಮ್ ಎಂಬುದು ಸ್ವಯಂ ಕಿರಣವಿಕ್ಷೇಪಿಯಾದುದರಿಂದ ಅದರ ಅಣುಕೇಂದ್ರವು ತನ್ನ ಸ್ವಾಭಾವಿಕ ಸ್ಥಿತಿಯಲ್ಲೇ ಉದ್ರಿಕ್ತಾವಸ್ಥೆ (excited state) ಯಲ್ಲಿದೆ. ಹಾಗೆ ಉದ್ರಿಕ್ತವಾಗಿರುವ ಕೇಂದ್ರವು ನ್ಯೂಟ್ರಾನನ್ನು ಹೀರಿದಾಗ, ಸಾಮಾನ್ಯ ಒಂದು ದ್ರವದ ಬಿಂದುವನ್ನು ಕಡಿಡಿಸಿಮೊಡನೆ ಹೇಗೋ ಹಾಗೆ) ಇಬ್ಭಾಗವಾಗುವುದು. ಈ ಪೃಥಕ್ಕರಣದಲ್ಲಿ ಮಾಯವಾಗುವ ಪದಾರ್ಥದ ಅಂಶವು ಶಕ್ತಿ (energy) ಯ ರೂಪದಲ್ಲಿ ಬಿಡುಗಡೆ ಹೊಂದುವುದು. ಯುರೇನಿಯಮಿನ ಒಂದು ಪಗುರ 'ಆಟಂ'ನ ಅಣುಕೇಂದ್ರ ದಿಂದ ಸುಮಾರು ೨೦೦ ಮಿಲಿಯ ವೋಲ್ಟ್ (volts) ಒತ್ತಡದ ಶಕ್ತಿಯುಂಟಾಗುವುದೆಂದು ಅಂದಾಜು ಮಾಡಲಾಗಿದೆ. ಬರೀ ಒಂದು 'ಆಟಂ'ನ ಪೃಥಕ್ಕರಣದಿಂದುಂಟಾಗುವ ಶಕ್ತಿಯ ಪರಿಮಾಣವು ಅಲ್ಪವಾದರೂ ೧ ಗ್ರೈಮ್ ಯುರೇನಿಯಮ್ಮಿನಲ್ಲಿರುವ ೧೦" (೧ ೨೨ನೆಯ ಘಾತ) 'ಆಟಂ'ಗಳ ಪೃಥಕ್ಕರಣದಿಂದ ೧ ಮಿಲಿಯ ವೊಟ್ ಅವರ್ (Kilo-watt hour) ಶಕ್ತಿಯು ಉತ್ಪನ್ನವಾ ವುದು. ಎಂದರೆ ೫೦ ವಾಟ್ ಬಲದ ೧ ಮಿಲಿಯ ವಿದ್ಯುದ್ದೀಪಗಳು ೨೦ ತಾಸುಗಳ ವರೆಗೆ ಉರಿಸಲು ಬೇಕಾದಷ್ಟು ಶಕ್ತಿಯುಂಟಾಗುವ ಆಗ ಈ ಪ್ರಚಂಡ ಶಕ್ತಿಯು ಬಿಡುಗಡೆ ಹೊಂದುವುದೊಂದೇ ಮತ್ತೆ ಹಲವು 'ನ್ಯೂಟ್ರಾನು'ಗಳುಂಟಾಗಿ, ಹೀಗೆ ಮತ್ತೆ ಆ 'ನ್ಯೂಟ್ರಾನು'ಗಳು ಪುನಃ ಮತ್ತಷ್ಟು ಶಕ್ತಿಯನ್ನುಂಟು ಮಾಡುವ ಇದೇ ರೀತಿಯಲ್ಲಿ ಶಕ್ತಿ ವಿಮೋಚನಾಕಾರ್ಯವು (release energy) ಮುಂದುವರಿಯುತ್ತ ಹೋಗುವುದು." ಆದರೆ ಈ ಕಾ ಪುನಃ ಪುನಃ ನಿರಾತಂಕವಾಗಿ ಮುಂದುವರಿಯಬೇಕಾದರೆ ಯು ಯಮಿನ ಹಗುರ 'ಆಟಂ'ಗಳೇ ಬೇಕು ಹೊರತು ಭಾರದ 'ಆಟಂ' ಪ್ರಯೋಜನಕಾರಿಯಲ್ಲ. ಆದುದರಿಂದ ಕಳೆದ ೨ ವರ್ಷಗ ವಿಜ್ಞಾನಿಗಳ ಲಕ್ಷ್ಯವೆಲ್ಲ ಯುರೇನಿಯಮಿನಲ್ಲಿರುವ ಇವೆರಡು ವಿ 'ಆಟಂ'ಗಳನ್ನು ಪ್ರತ್ಯೇಕಿಸುವುದರ ಕಡೆಗೇ ಕೇಂದ್ರೀಕೃತವಾಗಿ ಅವರ ಪ್ರಯತ್ನಗಳೀಗ ಫಲಕಾರಿಯಾದಂತಾದುವು. ಈಗ ಪ್ರತ್ಯೇಕಿಸಲ್ಪಟ್ಟ ಹಗುರು 'ಆಟಂ'ಗಳನ್ನು ಒಂದು ಖ ಕೋಶದಲ್ಲಿ ಸಂಗ್ರಹಿಸಿ ಬಾಂಬನ್ನು ತಯಾರಿಸುತ್ತಾರೆ. ಆ ವಿದ್ದಾಗ, ಅವುಗಳ ಮೇಲೆ 'ಆಟಾಮಿಕ್ ತೋಪು' (atom guns) ಗಳಿಂದ ನ್ಯೂಟ್ರಾನುಗಳ ಮಳೆಗರೆಯುತ್ತಾರೆ. ಆಗ 'ಆ ಗಳ 'ಅಣುಕೇಂದ್ರ'ಗಳ ಪೃಥಕ್ಕರಣದಿಂದ ಬಿಡುಗಡೆ ಹೊ ಪ್ರಚಂಡ ಉಷ್ಣ ಹಾಗೂ ಸ್ಫೋಟನ ಶಕ್ತಿಯು ಕಲ್ಪನಾತೀತವಾ ವುದು.

ಇಂತಹ ಆಟಾಮಿಕ್ ಬಾಂಬಿನ ಒಟ್ಟು ಭಾರವು ೪೦೦ ರಾ ಗಳಿದ್ದು, ಅದರಲ್ಲಿರುವ ಸ್ಫೋಟಕ ದ್ರವ್ಯದ (explosive) ಭ ಕೇವಲ ೮ ರಾತಲುಗಳಂತೆ; ಆದರೆ ಅಷ್ಟು ಸಣ್ಣ ಬಾಂಬೇ ಮುಂ ಯಂತಹ ದೊಡ್ಡದೊಂದು ನಗರದ ಮೇಲೆ ಎಸೆಯಲ್ಪಟ್ಟಾಗ ಆ ಆಸುಪಾಸಿನ ಸುಮಾರು ೪ ಚದರ ಮೈಲುಗಳ ವಿಸ್ತೀರ್ಣ ಯಾವೊಂದು ವಸ್ತುವೂ ಉಳಿಯದೆನ್ನುವಾಗ, ಬೇರೆ ಬಾಂಬುಗ ತೆಯೇ ಟನ್ನುಗಟ್ಟಲೆ ಭಾರದ ಅಟಾಮಿಕ್ ಬಾಂಬಿನ ಪರಿಣ ವೇನಾದಿತೆಂಬುದನ್ನು ಊಹಿಸುವುದು ಕೂಡಾ ಅಸಾಧ್ಯವೇ ಅಟಾಮಿಕ್ ಶಕ್ತಿಯ ಶೋಧನೆಗಾಗಿಯೇ ತನ್ನ ಜೀವನವನ್ನು ಯಿಸುತ್ತಿರುವ ಡಾ. ಎಮಿಲಿಯೋ ಹೆರೆರಾ ಎಂಬ ಸ್ಪೇನ್ ವಿಜ್ಞಾನಿಯು "೨೦ ಟನ್ ಭಾರದ ಒಂದು ಅಟಾಮಿಕ್ ಬಾ ೫೦ ಘನ ಮೈಲು ಭೂಮಿಯನ್ನು ಆಕಾಶಕ್ಕೆ ಹಾರಿಸಿ, ೧ ಮೈಲು ೭ ಮೈಲುಗಳ ಉದ್ದದ ಒಂದು ಕುಂಡ (crater) ವನ್ನು ಮಾಡಬಲ್ಲುದು. ಪ್ರಾಯಶಃ ಪ್ರಪಂಚದಲ್ಲಿ ಇಷ್ಟರ ತನಕ ದೊಡ್ಡದೆಂದು ಪರಿಗಣಿಸಲ್ಪಟ್ಟಿರುವ ಕರಕಟೋವಾ (Karakat ಜ್ವಾಲಾಮುಖಿಗಿಂತಲೂ ದೊಡ್ಡ ಅನಾಹುತವನ್ನುಂಟುಮಾಡಬಲ್ಲ ಆದರೆ ೫ ಟನ್ನುಗಳಿಗಿಂತ ಅಧಿಕ ಭಾರದ ಅಟಾಮಿಕ್ ಬಾಂಬುಗ ತಯಾರಿಸಲು ಸಾಧ್ಯವಿಲ್ಲ" ಎಂದಿದ್ದಾನೆ.

ಅಟಾಮಿಕ್ ಶಕ್ತಿಯ ಕುರಿತು ನಡೆದ ಪ್ರಯೋಗಗಳ ಚರಿತ್ರೆಯು ಕೂಡ ಬಹಳ ಸ್ವಾರಸ್ಯಮಯವಾಗಿದೆ. 'ಅಟಂ' ಅಥವಾ 'ಪರಮಾಣು'ವನ್ನು ಭೇದಿಸಿದವರಲ್ಲಿ ಮೊದಲಿಗನೆಂದರೆ ಬರ್ಲಿನಿನಲ್ಲಿದ್ದ ಜರ್ಮನ್ ವಿಜ್ಞಾನಿ ಹಾನ್ (Hohn) ಎಂಬವನಂತೆ. ಅವನು ೧೯೩೭ ರಲ್ಲೇ ಆ ಕೆಲಸದಲ್ಲಿ ಯಶಸ್ವಿಯಾಗಿದ್ದ. ಆದರೆ ಯುರೇನಿಯಮಿನ ಪರಮಾಣುವನ್ನು (೧೯೩೯ ರಲ್ಲಿ) ಭೇದಿಸಿದ ಕೀರ್ತಿಯು ಫ್ರೆಂಚ್ ಭೌತಶಾಸ್ತ್ರಜ್ಞರಾದ (Phvsicist) ಐರಿನ್ ಕ್ಯೂರಿ (Irene Curie) ಎಂಬವರಿಗೆ ಸಲ್ಲುತಕ್ಕುದು. ಆ ಪೃಥಕ್ಕರಣದ ಕಾರಣವನ್ನು ಸಮರ್ಪಕವಾಗಿ ವಿವರಿಸಿದವನು ಡೆನ್ಮಾರ್ಕಿನ,ನೋಬೆಲ್ ಬಹುಮಾನ ಪಡೆದ, ಪ್ರೊ. ಬೋರ್ (Niels Bohr). 'ಅಟಂ'ನ ವಿಘಟಕ್ಕರಣದಿಂದ ನ್ಯೂಟ್ರಾನುಗಳುಂಟಾಗುತ್ತವೆಯೆಂಬುದನ್ನು ಕಂಡು ಹಿಡಿದವರು ಮತ್ತೆ ಇಬ್ಬರು ಫ್ರೆಂಚ ವಿಜ್ಞಾನಿಗಳು. ಆಸ್ಟ್ರಿಯಾದ ಯೆಹೂದಿ ಸ್ತ್ರೀ ವಿಜ್ಞಾನಿ ಲಿಸ್ಸೆ ಮಿಟ್ನರ್ (Dr. Lize Mitner) ಈ ವಿಷಯದಲ್ಲಿ ತುಂಬ ಪ್ರಯೋಗಗಳನ್ನು ನಡೆಸಿ, ತನ್ನ ಕಾಣ್ಕೆಯೊಪ್ಪಿಸಿದ್ದಾಳೆ. ರಷಿಯದ ಕೆಪಿಟ್ಜಾ (Prof Kapitza) ಎಂಬವನೂ 'ಅಟಾಮಿಕ್ ಶಕ್ತಿ'ಯ ರೂಪರೇಷೆಗಳ ಮೇಲೆ ಪ್ರಯೋಗ ನಡೆಯಿಸಿದವರಲ್ಲಿ ಒಬ್ಬ ಮೂಲಪುರುಷನು. ಹೀಗೆ ಎಲ್ಲ ರಾಷ್ಟ್ರಗಳ ವಿಜ್ಞಾನಿಗಳೂ ಈ ನವ ಶೋಧದ ಯಶಸ್ಸಿಗೆ ನೆರವಾಗಿರುವುದೊಂದು ವಿಲಕ್ಷಣ ಸಂಗತಿಯೇ ಸರಿ.

ಅಟಾಮಿಕ್ ಬಾಂಬಿನ ಮುಖ್ಯ ಯೋಜಕರಲ್ಲಿ (Designers) ಬ್ರಿಟಿನಿನ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದ ಪ್ರೊ. ಬ್ಲೆಕೆಟ್ (Blackett) ಎಂಬವರೊಬ್ಬರು. ಅವರ ಕೈಕೆಳಗೆ ಹಲವು ಹಿಂದೀ ಸಂಖ್ಯಾರ್ಥಿಗಳೂ ಅಟಾಮಿಕ್ ಶಕ್ತಿಯ ಮೇಲೆ ಪ್ರಯೋಗಗಳನ್ನು ನಡೆಯಿಸಿದ್ದಾರಂತೆ. ಯುದ್ಧದ ಆದಿಯಿಂದಲೂ ಜರ್ಮನ್ ವಿಜ್ಞಾನಿಗಳು ಅಟಾಮಿಕ್ ಬಾಂಬು ಸಿದ್ಧಪಡಿಸಲಾಗದೆ ಹಗಲಿರುಳು ದುಡಿಯುತ್ತಿದ್ದರಂತೆ. ಆದರೆ ಅವರ ಪ್ರಯತ್ನಗಳು ಸಫಲವಾಗುವ ಮೊದಲೇ ಜರ್ಮನಿಯ ಪತನವಾಯಿತು. ಅಟಾಮಿಕ್ ಪ್ರಯೋಗಗಳ ಬಗ್ಗೆ ಆ ಜರ್ಮನ್ ವಿಜ್ಞಾನಿಗಳು ಡೆನ್ಮಾರ್ಕ್, ನಾರ್ವೆ ಮುಂತಾದ ಎಲ್ಲ ಕಡೆಗಳಿಂದ ಇತರ ವಿಜ್ಞಾನಿಗಳನ್ನು ತಮ್ಮಲ್ಲಿಗೆ ಆಮಂತ್ರಿಸಿದ್ದರಂತೆ. ಅವರೆಲ್ಲ—ಮುಖ್ಯತಃ ಪ್ರೊ. ಬೋರ್ ಎಂಬವರು ಜರ್ಮನಿಗೆ ಸಹಾಯ ಮಾಡಲು ಮನಸ್ಸಿಲ್ಲದವರಾಗಿ, ಅವರಿಗೆ ಸಹಾಯ ಮಾಡುವ ಬದಲು ಜರ್ಮನರು ಅಟಾಮಿಕ್ ಪ್ರಯೋಗಗಳಲ್ಲಿ ಹೊಂದಿದ ಪ್ರಗತಿಯನ್ನು ಗುಟ್ಟಿನಲ್ಲಿ ಆಗಾಗ ಬ್ರಿಟನಿಗೆ ಕಳುಹಿಸುತ್ತಿದ್ದರು. ೧೯೪೩ ರಲ್ಲಿ ಅವರೇ ಸ್ವತಃ ಇಂಗ್ಲೆಂಡಿಗೆ ಬಂದು ಈಗ ಅಲ್ಲೇ ಇದ್ದು, ಆಂಗ್ಲ ಮತ್ತು ಅಮೇರಿಕನ್ ವಿಜ್ಞಾನಿಗಳಿಗೆ ತಮ್ಮ ನೆರವನ್ನೀಯುತ್ತಿದ್ದಾರೆ. ಇತ್ತ ೧೯೪೧ ಅಕ್ಟೋಬರಿನಲ್ಲಿ ಕೆಲವು ಬ್ರಿಟಿಷ್ ವಿಜ್ಞಾನಿಗಳು ಸಂಯುಕ್ತ ಅಮೇರಿಕಕ್ಕೆ ಹೊರಟುಹೋಗಿ, ಅಲ್ಲಿ ಎರಡೂ ರಾಷ್ಟ್ರಗಳ ವಿಜ್ಞಾನಿಗಳು ತಮ್ಮ ಅನುಭವಗಳನ್ನು ಕ್ರೋಡೀಕರಿಸಿ, ಈ ನೂತನ ಅಸ್ತ್ರವನ್ನು ತಯಾರಿಸಿದರು. ಈಗ ಅಮೇರಿಕದ ಟೆನೆಸ್ಸಿ, ವಾಷಿಂಗ್ಟನ್, ಮತ್ತು ನ್ಯೂ ಮೆಕ್ಸಿಕೊಸ್ಥಾನ್ಯಗಳಲ್ಲಿ ಆ ಬಾಂಬು ತಯಾರಿಯ ಕೇಂದ್ರಗಳು ತೆರೆಯಲ್ಪಟ್ಟಿವೆ. ಆ ಕುರಿತು ಪ್ರಯೋಗಗಳೂ ನಡೆಯುತ್ತಿವೆ. ೬೫,೦೦೦ ಕ್ಕೆ ಮೇಲ್ಪಟ್ಟ ಕೆಲಸಗಾರರು ಈ ಕಾರ್ಯದಲ್ಲಿ ಪ್ರವೃತ್ತರಾಗಿದ್ದಾರೆ.

ಹೀಗೆ ಅಮೇರಿಕದ ಮತ್ತು ಬ್ರಿಟನಿನ ವಿಜ್ಞಾನಿಗಳು ಒಟ್ಟಾಗಿ ಇಂತಹ ಪ್ರಳಯಕಾರಿ ಆಯುಧವನ್ನು ಪ್ರಯೋಗಿಸುವುದು ನ್ಯಾಯ ಸಮ್ಮತವೇ ಎಂದು ಯಾರಾದರೂ ಪ್ರಶ್ನಿಸಬಹುದು. ಪೋಪ್ ಗುರುಗಳು ಈ ಗುಪ್ತಾಸ್ತ್ರ ಪ್ರಯೋಗವನ್ನು ಮುಕ್ತಕಂಠದಿಂದ ಖಂಡಿಸಿದ್ದಾರೆ. ತಟಸ್ಥರಾಷ್ಟ್ರಗಳಲ್ಲಿ ಕೆಲವು ಅಟಾಮಿಕ್ ಬಾಂಬಿನಿಂದಾದ ಹತ್ಯಾಕಾಂಡವು ಜರ್ಮನರಿಂದ ನಡೆದು ಹೋದ ಯುದ್ಧದ ಎಲ್ಲ ಅಕೃತ್ಯಗಳಿಗಿಂತ ಹೆಚ್ಚು ಪಾಪಕರವೆಂದಿವೆ. ಅಮೇರಿಕದ ಅಧ್ಯಕ್ಷರು ಕೂಡ ಈ ಆಯುಧವನ್ನು ಉಪಯೋಗಿಸುವ ಮೊದಲು ಹಿಂಜರಿದಿದ್ದು ಕೊನೆಗೆ ಶಾಂತಸಾಗರಿಕ ಯುದ್ಧ (Pacific war) ವನ್ನು ಆದಷ್ಟು ತೀವ್ರವಲ್ಲೇ ಕೊನೆಗೊಳಿಸಿ ಶಾಂತಿಗಾಗಿ ಹಾತೊರೆಯುತ್ತಿರುವ ಜಗತ್ತಿನ ಜನತೆಗೆ ಕ್ಷೇಮವನ್ನುಂಟುಮಾಡಲಿಕ್ಕಾಗಿಯೇ ಪ್ರಯೋಗಿಸಿದರೆಂದು ತಿಳಿದುಬರುತ್ತದೆ. ಆದರೆ 'ಈ ಅಸ್ತ್ರವನ್ನು ಯಾರಾದರೂ ದುರುಪಯೋಗ ಪಡಿಸದಂತೆ ಏನಾದರೊಂದು ನ್ಯಾಯವಾದ ಅಂತರ್ರಾಷ್ಟ್ರೀಯ ನಿಯಂತ್ರಣದ ಏರ್ಪಾಡು ನಡೆಯುವ ಮುನ್ನ ತಾವು ಅದರ ರಹಸ್ಯವನ್ನು ಪ್ರಕಟಿಸಲಾರೆವು' ಎಂದು ಅಮೇರಿಕದ ಅಧ್ಯಕ್ಷರು ಸಾರಿದ್ದಾರೆ. ಆದರೆ ಹಾಗೆ ಮಾಡದಿದ್ದರೆ, ರಾಷ್ಟ್ರ-ರಾಷ್ಟ್ರಗಳೊಳಗೆ ವೈಮನಸ್ಸು ಬೆಳೆಯುತ್ತ ಹೋಗಿ, ಇನ್ನು ಇದಕ್ಕಿಂತಲೂ ಪ್ರಬಲವಾದ ಮಾನವೀ ಹತ್ಯಾಕಾರಿ ಆಯುಧಗಳ ಗುಪ್ತನಿರ್ಮಾಣವಾಗಬಹುದೆಂಬ ಅಭಿಪ್ರಾಯವೂ ಕೆಲವೆಡೆಗಳಿಂದ ಕೇಳಬರುತ್ತದೆ. ಒಟ್ಟಾರೆ, ಅಟಾಮಿಕ್ ಬಾಂಬಿನ ಸಿದ್ಧತೆಗೆ ಪ್ರಕೃತ ಎಲ್ಲ ರೀತಿಯ ಸೌಕರ್ಯಗಳಿರುವ ದೇಶವೆಂದರೆ ಅಮೇರಿಕ. ಆದರೆ ಪೂರ್ವ-ಪಶ್ಚಿಮ ಎರಡೂ ಯುದ್ಧಗಳಲ್ಲಿ ಪ್ರಧಾನಪಾತ್ರ ವಹಿಸಿರುವ ರಷ್ಯಾದ ವಿಜ್ಞಾನಿಗಳಿಗೂ ಅಟಾಮಿಕ್ ಶಕ್ತಿಯ ಪರಿಚಯವಿಲ್ಲದೇ ಇದೆ. ಅವರು ಕೂಡ ಪ್ರಯೋಗಗಳನ್ನು ನಡೆಯಿಸುತ್ತಲೇ ಇರಬಹುದು. ಇವೆಲ್ಲ ದೃಷ್ಟಿಗಳಿಂದ ಪರಿಶೀಲಿಸುವಾಗ ಅಟಾಮಿಕ್ ಬಾಂಬಿನ ರಹಸ್ಯದ ಪರಿಣಾಮವಾಗಿಯೇ ಜಗತ್ತಿನ ಪ್ರಗತಿಶೀಲ ರಾಷ್ಟ್ರಗಳೊಳಗೆ ಮಾತ್ಸರ್ಯ, ದ್ವೇಷಗಳು ಜನಿಸಿ, ಮುಂಚಿನ ೩ ಯುದ್ಧಗಳನ್ನು ಎಲ್ಲ ವಿಧಗಳಲ್ಲಿ ಹಿಮ್ಮೆಟ್ಟುವ ಮೂರನೆಯ ಯುದ್ಧವೊಂದು ಪರಿಣಮಿಸಲಿಕ್ಕೂ ಸಾಕು.

ಇವಲಿ. ಅಟಾಮಿಕ್ ಬಾಂಬಿನಲ್ಲಿ ಉಪಯೋಗಿಸಲ್ಪಡುವ 'ಅಣುಕೇಂದ್ರ'ವಲ್ಲಿಯ ಶಕ್ತಿಯನ್ನು (nuclear energy) ಯುದ್ಧಕಾಲದಲ್ಲಿ ನಾರ್ಕ್ರಿಯೆಗೆ ಹೇಗೊ ಹಾಗೆಯೇ ಶಾಂತಿಕಾಲದಲ್ಲಿ ಮಾನವ ವರ್ಗದ ಹಿತಸಾಧನೆಯ ಬಗ್ಗೆ ಉಪಯೋಗಿಸಲು ಸಾಧ್ಯವಿದೆಯೋ ಇಲ್ಲವೋ ಎಂಬ ಕುರಿತು ವಿಜ್ಞಾನಿಗಳೊಳಗೇ ಭಿನ್ನಾಭಿಪ್ರಾಯವಿವೆ. ಸಂಯುಕ್ತ ಅಮೇರಿಕದ ಯುದ್ಧಖಾತೆಯು ಈ ವಿಷಯದಲ್ಲಿ ಪ್ರಕಟಿಸಿದ ವರದಿಗನುಸಾರ 'ಅಟಾಮಿಕ್ ಶಕ್ತಿ'ಯನ್ನು ಮಾನವನ ಒಳಿತಿಗಾಗಿ ಉಪಯೋಗಿಸಲು ಸಾಧ್ಯವಾಗಬೇಕಾದರೆ, ಇನ್ನೂ ಒಂದೆರಡು ದಶಕಗಳು ಹೋಗಬಹುದೆಂದು ತಿಳಿಯಬರುತ್ತದೆ. ಆ ಪಥದಲ್ಲಿ, ಅನೇಕ ವಿಜ್ಞಾನಿಗಳು ಸ್ವಂತ ಲಾಭದ ಆಸೆಯನ್ನು ತೊರೆದು, ಪ್ರಯೋಗಗಳನ್ನು ನಡೆಯಿಸತೊಡಗಿದ್ದಾರೆಂಬ ವರ್ತಮಾನವೂ ಕೇಳಬರುತ್ತಿದೆ. ಸರ್. ಸಿ. ವಿ. ರಾಮನ್ ಅವರು ಈ ಕುರಿತು ಹೀಗೆಂದಿದ್ದಾರೆ: "ಅಟಾಮಿಕ್ ಬಾಂಬಿನಲ್ಲಿರುವಂತೆ ಒಮ್ಮೆಲೇ ಒಂದೇ ಕಡೆ ಅಟಾಮಿಕ್

೧೩೬ ಪುಟದ ಅಡಿಯಲ್ಲಿ ನೋಡಿರಿ



ಗ್ರಾಮೋದ್ಯೋಗಗಳಿಗೊಂದು ಯೋಜನೆ

ಶ್ರೀ. ಎಸ್. ಕೆ. ಕಲ್ಲಾಪುರ, ಬಿ. ಎ., ಎಲ್. ಎಲ್. ಬಿ. ಹೊನ್ನಾವರ

ಯುದ್ಧಾನಂತರದ ಯುಗದಲ್ಲಿ ಯಾವತ್ತು ಗ್ರಾಮೋದ್ಧಾರದ ವಿಷಯಗಳನ್ನು ಸಹಕಾರೀ ತತ್ತ್ವಗಳ ತಳಪದಿಯ ಮೇಲಿಟ್ಟು ಪುನರ್ರಚಿಸುವ ವಿಚಾರದಲ್ಲಿ ಕೇಂದ್ರ ಸರಕಾರದವರು ತೊಡಗಿರುವುದು ತಿಳಿದುಬರುತ್ತದೆ. ಈ ಬಗ್ಗೆ ಒಂದು ಚಿಕ್ಕ ಟೀಕೆಯ ನೇಮಕವಾಗಿರುತ್ತದೆ.

ಗ್ರಾಮೋದ್ಧಾರದ ಕೆಲಸವು ಒಂದು ಯೋಜನೆಗೆ (Planning) ಒಳಪಟ್ಟು ಮುಂದುವರಿಯಬೇಕೆಂಬದು ಸ್ತುತ್ಯವಾದ ವಿಚಾರವು ಗ್ರಾಮೋದ್ಧಾರದ ಕೆಲಸಗಳು ಅನೇಕವಾಗಿರುತ್ತವೆ. ಅವುಗಳಲ್ಲಿ ಒಂದಾದ ಗ್ರಾಮೋದ್ಯೋಗವನ್ನು ಕುರಿತು ಈ ಲೇಖನವನ್ನು ಬರೆಯಲಾಗಿದೆ. ರಾಷ್ಟ್ರದ ಹಿತ ಮತ್ತು ಪ್ರಗತಿ ಇವುಗಳಲ್ಲಿ ಗ್ರಾಮೋದ್ಯೋಗಗಳಿಗೆ ಇರುವ ಸ್ಥಾನದ ಮಹತ್ತ್ವವನ್ನು ಈ ಮೊದಲೇ ಜನತೆಗೆ ತಿಳಿದಿದೆ ಅವುಗಳ ಪುನರ್ರಚನೆಯಾಗಬೇಕು. ಬೆಳೆವಣಿಗೆಯಾಗಬೇಕು. ಈ ಬಗ್ಗೆ ಸಹಕಾರಿತೆಯು ಅತ್ಯವಶ್ಯ.

ಇದೊಂದು ಯೋಜನೆಯ ಯುಗವಾಗಿದೆ. ಜಗತ್ತಿನ ಪ್ರತಿಯೊಂದು ಜನಾಂಗದಲ್ಲಿಯೂ ಯೋಜನೆಯೆಂಬದೊಂದೇ ಹೆಸರು ಕೇಳಬರುತ್ತಿದೆ. ಸಾಮ್ರಾಜ್ಯವಾದಿಗಳ---ಭಾಂಡವಲದಾರರ ಹಿಡಿತದಿಂದ, ದುಡಿಯುವವರನ್ನು ತಪ್ಪಿಸಿ ಅವರಿಗೆ ಸ್ವಾತಂತ್ರ್ಯವನ್ನೂ ಹೊಟ್ಟೆತುಂಬ ಎರಡು ಊಟ, ಮೈತುಂಬ ಅರಿವೆ, ಮನೆ, ಇವುಗಳನ್ನೂ ಕೊಡುವುದು ಈ ಯೋಜನೆಗಳ ಧ್ಯೇಯವಾಗಿದ್ದರೆ ಅವು ಅವಶ್ಯವಾಗಿಯೂ ಬೇಕು. ಯೋಜನೆಯೆಂಬ ಶಬ್ದದಲ್ಲಿಯೇ ಈ ಕೆಲಸಗಳ ಅದ್ಭುತವು ಹುಟ್ಟಿಬರುತ್ತದೆಂದು ನನ್ನ ಕಲ್ಪನೆ. ಇದು ಹಿಂದುಸ್ತಾನವನ್ನು ಮತ್ತು ಗ್ರಾಮೋದ್ಯೋಗಗಳನ್ನು ಮಾತ್ರ ಅನ್ವಯಿಸುತ್ತದೆ:—

> ಜಾಶ್ಚಿಮಾತ್ಯ ಸುಧಾರಣೆಗಳ ಮತ್ತು ಸಾಮ್ರಾಜ್ಯವಾದಿಗಳ ಹೊಡೆತದಿಂದ ಪ್ರಾಚೀನ ಕಾಲದಿಂದ ನಡೆದು ಬಂದ ನಮ್ಮ ಈ ದೇಶದ ಸಮಾಜಸ್ಥಿತಿಯು ಬುಡಮೇಲಾಗಿದೆ. ಇಲ್ಲಿಯ ಕೈಗಾರಿಕೆಗಳು ನಿರ್ಜೀವವಾಗಿವೆ. ಒಕ್ಕಲತನವು ಏಕಮಾತ್ರ ವ್ಯವಸಾಯವಾಗಿದೆ. ನೂರಕ್ಕೆ ೫೦ ಜನರನ್ನು ಮಾತ್ರ ಈ ವ್ಯವಸಾಯವು ಪೋಷಿಸಲು ಶಕ್ತವಾಗಿರುತ್ತಿದ್ದಾಗ್ಯೂ ೮೦ ಜನರನ್ನು ಪೋಷಿಸುವ ಭಾರವು ಅದರ ಮೇಲೆ ಬಿದ್ದಿದೆ. ಎಷ್ಟೋ ಜನರು ನಿರುದ್ಯೋಗಿಗಳಾಗಿದ್ದಾರೆ. ಇನ್ನೆಷ್ಟೋ ಜನ ಸಾಕಷ್ಟು ಉದ್ಯೋಗವಿಲ್ಲದವರಾಗಿದ್ದಾರೆ. ಹೀಗಾಗಿ ತಮ್ಮ ಜೀವಸಕ್ತಿ ಆವಶ್ಯಕವಿರುವಷ್ಟನ್ನು ದುಡಿಯಲು ಅವರು ಅಸಮರ್ಥರಾಗಿರುತ್ತಾರೆ.

ಎಷ್ಟು ಜನರನ್ನು ಒಕ್ಕಲತನದ ಉದ್ಯೋಗದಲ್ಲಿ ಇಡತಕ್ಕದ್ದು? ಎಷ್ಟು ಜನರನ್ನು ಇದರಿಂದ ತಪ್ಪಿಸತಕ್ಕದ್ದು? ಅವರಲ್ಲಿ ಎಷ್ಟೆಷ್ಟು ಜನರಿಗೆ ಯಾವ ಯಾವ ಉದ್ಯೋಗಗಳನ್ನು ಕೊಡತಕ್ಕದ್ದು? ಅವರಿಗೆ ಎಷ್ಟು ಗಳಿಕೆಯಾಗುವಂತೆ ನೋಡಿಕೊಳ್ಳತಕ್ಕದ್ದು? ಒಕ್ಕಲತನವು ಪ್ರಧಾನ-ವ್ಯವಸಾಯವಾಗಿರುವವರಿಗೆ ಇದರಿಂದ ಸಾಕಷ್ಟು ಗಳಿಕೆಯಾಗದಿದ್ದರೆ, ಅವರು ಯಾವ ಉಪವ್ಯವಸಾಯಗಳನ್ನು ಹೊರಕಿಸಿಕೊಡತಕ್ಕದ್ದು? ಯಾವ ಯಾವ ಜಾತಿಯ ಎಷ್ಟೆಷ್ಟು ಒಡವೆಗಳನ್ನು ಎಷ್ಟೆಷ್ಟು ತಯಾರಿಸತಕ್ಕದ್ದು? ಅವುಗಳಿಗೆ ಯಾವ ಯಾವ ದರಗಳನ್ನು ಇಡತಕ್ಕದ್ದು?

ಇವೇ ಮೊದಲಾದ ಸಮಸ್ಯೆಗಳ ವಿಚಾರ, ಮುಖ್ಯ ಈ ವಿಚಾರಗಳನ್ನು ಕಾರ್ಯರೂಪದಲ್ಲಿ ತರುವ ವ್ಯವಸ್ಥೆ.

ಅರ್ಥಾತ್ ಈ ಉದ್ಯೋಗಗಳ ಬೆಳೆವಣಿಗೆಯನ್ನು ಜನರ ಕೈಗಳಲ್ಲಿಯೇ ಬಿಡದೆ ಸರಕಾರದವರು ತಮ್ಮ ಸ್ವಂತದ ಕೈಗಳಲ್ಲಿಯೇ ತಕ್ಕೊಂಡ ಒಂದು ಪದ್ಧತಿಯಂತೆ ವರ್ತಿಸುವದು.

ಒಂದು-ಒಂದೂವರೆ ಶತವಾನದ ಹಿಂದಿನವರೆಗೂ ನಮ್ಮ ಕೃಷಿಕರ್ಮಕ್ಕೂ ಮನೆವಾರ್ತೆ ಕೆಲಸಗಳಿಗೂ ಅವಶ್ಯವಿರುವ ಪ್ರತಿಯೊಂದು ಒಡವೆಯೂ ಪಳ್ಳಿಗಳಲ್ಲಿ ತಯಾರಾಗುತ್ತಿತ್ತು. ಈ ಯಾಂತ್ರಿಕ ಯುಗದಲ್ಲಿ ಕೂಡ ಪಳ್ಳಿಗಳಲ್ಲಿ ಕೆಲವು ತಲೆಯೆತ್ತಿ ನಿಂತಿವೆ

ಇನ್ನೂ ಕೆಲವು ಸರಕಾರದವರ ಕೆಲಮಟ್ಟಿನ ಪ್ರೋತ್ಸಾಹನದಿಂದ ನಿಲ್ಲಬಲ್ಲವೆಂದು ಸಿದ್ಧಮಾಡಿ ಕೊಟ್ಟಿರುತ್ತವೆ. ಕೃಷಿಕರ್ಮವನ್ನು ಬಿಟ್ಟು ಉಳಿದ ವ್ಯವಸಾಯಗಳಲ್ಲಿ ತೊಡಗಿದವರಲ್ಲಿ ನೂರಕ್ಕೆ ೯೦ ರಂತೆ ಜನರು ಗ್ರಾಮೋದ್ಯೋಗಗಳಲ್ಲಿ ತೊಡಗಿರುತ್ತಾರೆಂಬುದರಿಂದಲೇ ಇವು ನಮ್ಮ ದೇಶದ ರಚನೆಯಲ್ಲಿ ಎಂತಹ ಪ್ರಾಮುಖ್ಯವನ್ನು ಪಡೆದಿರುತ್ತವೆಂಬುದು ಕಂಡುಬರುವಂತಿದೆ

ನಮ್ಮ ಕೈಗಾರಿಕೆಗಳ ಅವನತಿಯ ಕಾರಣವನ್ನು ಪರಿಶೋಧಿಸುವವರಿಗೆ ಈ ಕೆಳಗಿನವು ಒಡೆದು ಕಾಣುತ್ತವೆ:

೧ ವ್ಯವಸಾಯಗಾರರಲ್ಲಿ ಸಂಘಟನೆಯಿಲ್ಲದಿರುವುದು.
೨ ಅವರಲ್ಲಿ ಕೈಗಾರಿಕೆಯ ಶಿಕ್ಷಣವಿಲ್ಲದಿರುವುದು.
೩ ಸಾಕಷ್ಟು ಭಾಂಡವಲು ಇಲ್ಲದಿರುವುದು
೪ ತಯಾರಾದ ಒಡವೆಗಳನ್ನು ಮಾರುವ ಏರ್ಪಾಡು ಇಲ್ಲದಿರುವುದು.

ದೊಡ್ಡ ಪ್ರಮಾಣದಿಂದ ಸರಕುಗಳನ್ನು ತಯಾರಿಸುವ ಭಾಂಡವಲದಾರರು ತಮಗೆ ಬೇಕಾಗುವ ಕಚ್ಚಾಮಾಲುಗಳನ್ನು ದೊಡ್ಡ ಪ್ರಮಾಣದಲ್ಲಿ ಕಡಿಮೆ ದರದಿಂದ ಕೊಳ್ಳುತ್ತಾರೆ. ಎಷ್ಟೋ ಜನರು ಅವುಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಅತಿ ಕಡಿಮೆ ದರದಲ್ಲಿ ಅವು ದೊರೆಯುವ ಸ್ಥಳಗಳನ್ನು ಕಂಡು ಹಿಡಿದು ಅಲ್ಲಿಯೇ ಸ್ವತಃ ಕೊಂಡುಕೊಳ್ಳುತ್ತಾರೆ. ಆದರೆ ಹಳ್ಳಿಗಳ ವ್ಯವಸಾಯಗಾರರು ಅವುಗಳನ್ನು ಕಿರಕುಳವಾಗಿ ಸಾರುವವರ ಕಡೆಯಿಂದ ಅವರು ಹೇಳುವಷ್ಟು ದಿನಗಳನ್ನು ಕೊಟ್ಟು ಕೊಳ್ಳಬೇಕಾಗುತ್ತದೆ ಇದೊಂದೇ ಕಾರಣದಿಂದ ಅವರ ಒಡವೆಗಳು ಭಾಂಡವಲದಾರರ ತಯಾರಿಕೆಗಳಿಗಿಂತ ಒಮ್ಮೊಮ್ಮೆ ಪಟ್ಟನಷ್ಟು— ಎರಡು ಪಟ್ಟನಷ್ಟು— ತುಟ್ಟಿಯಾಗಿ ಬಿಡುತ್ತವೆ. ಬೆಲೆಯ ಎಷ್ಟೋ ಅಂಶವು ದಲಾಲಿ– ಸಾವುಕಾರ— ಅಂಗಡಿಕಾರ ಇವರೇ ಮೊದಲಾದವರ ಪಾಲಾಗುತ್ತದೆ. ಈ ನಿನಾ ಸಾಲು ಕಡ ಮಾಡಿ ಕೊಳ್ಳುವವರು ಹೇರಳ ಬಡ್ಡಿಯನ್ನು— ಅಥವಾ ಇನ್ನೂ ಹೆಚ್ಚಿನ ಬೆಲೆಯನ್ನು ಕೊಡಬೇಕಾಗುತ್ತದೆ

ಕೈಗಾರಿಕೆ ಶಿಕ್ಷಣವು ಅವರಲ್ಲಿ ಇಲ್ಲದಿರುವುದರಿಂದಲೂ ಅವಶ್ಯವಿರುವ ಯಂತ್ರೋಪಕರಣಗಳ ಅಭಾವದ ಮೂಲಕವೂ ತಯಾರಿಕೆಗೆ ಅವಶ್ಯವಿರುವದಕ್ಕಿಂತ ೨: ೩ : ೪ ಪಟ್ಟನಷ್ಟು ಸಮಯವು ಅವರಿಗೆ ಬೇಕಾಗುತ್ತದೆ. ಅಂದ-ಚಂದಗಳು ಬರುವುದಿಲ್ಲ.

ಒಡವೆಗಳು ತಯಾರಾದ ಕ್ಷಣದಲ್ಲಿ ಗಿರಾಕಿಗಳು ದೊರಕುವುದಿಲ್ಲ. ಅವುಗಳನ್ನು ಮಾರುವುದಕ್ಕಾಗಿ ಮನೆ ಮನೆ ತಿರುಗಬೇಕಾಗುತ್ತದೆ. ಸದಾ ದಾರಿದ್ರ್ಯ. ಹೀಗಾಗಿ ಕೇಳುವವರಿಗೆ ಕೇಳಿದ ದರಕ್ಕೆ ಮಾರಬೇಕಾಗುತ್ತದೆ. ಈ ವಿನಾ ಭಾಂಡವಲದಾರರ ಒಡವೆಗಳ ಮೇಲಾಟ. ಆದ್ದರಿಂದ ನಮ್ಮ ಹಳ್ಳಿಗಳಲ್ಲಿಯ ವ್ಯವಸಾಯಗಾರರು ಎಷ್ಟೋ ದಿನಗಳ ಪರಿಶ್ರಮದಿಂದ ತಯಾರಿಸಿದ ಒಡವೆಗಳನ್ನು ಎಷ್ಟೋ ಸಾರೆ ಕಚ್ಚಾಮಾಲುಗಳ ಕ್ರಯಕ್ಕೇ ಮಾರಬೇಕಾಗುತ್ತದೆ.

ಹೀಗಾಗಿ ಅವರಿಗೆ ಬಡತನ ಬಂತು. ಬೆಲೆ ಸಿಗದ್ದರಿಂದ ಬೆಲೋ ಒಡವೆಗಳ ತಯಾರಿಕೆಯು ನಿಂತಿತು. ಅವರ ಕೌಶಲ್ಯವು ಅಳಿದಿತು. ಸಾಲದಲ್ಲಿ ಮುಳುಗಿದರು. ಮನೆ-ಮಾರುಗಳನ್ನು ಕಳಕೊಂಡಿರು. ಆಸ್ತಾಮಾಣಿಕರಾದರು. ಇತರ ಜೀವನೋಪಾಯಗಳನ್ನು ಕಾಣದೆ ಮೊದಲೇ ತುಂಬಿ ಹೋದ ಕೃಷಿವ್ಯವಸಾಯವನ್ನು ಸೇರಿಕೊಂಡರು. ಅನೇಕ ತಲೆಗಳಿಂದ ಅವರಲ್ಲಿ ತೊಡಗಿದವರೊಡನೆ ಸ್ಪರ್ಧಿಸಹತ್ತಿದರು. ತಾವೂ ಕೆಂಗೆಟ್ಟರು. ಅವರನ್ನೂ ಕಂಗೆಡಿಸಿದರು. ದೊಡ್ಡ ಪಟ್ಟಣಗಳನ್ನು ಸೇರಿದರು. ಭಾಂಡವಲದಾರರ ಗುಲಾಮರಾದರು. ತಮ್ಮ ಪೈರಿಗಳನ್ನೇ ಅವರು ಈ ಪ್ರಕಾರ ನೋರೆಹೊಕ್ಕ ಮೇಲೆ ಹಳ್ಳಿಗಳ ಹೋರೆಗಳು ಲಯವಾಗಿ ಹಳ್ಳಿಗಳು ಪರಾವಲಂಬಿಗಳಾದುವು.

ಆದರೆ ಈ ಮಹಾಯುದ್ಧವು ಪ್ರಾರಂಭವಾದಂದಿನಿಂದ ಕೆಲಕೆಲವು ಹಳ್ಳಿಯ ಕೈಗಾರಿಕೆಗಳಿಗೆ ಕಳೆ ಬಂದಿದೆ. ಪರದೇಶಗಳಿಂದ ಸರಕುಗಳು ಬರದಿರುವುದೂ, ಈ ದೇಶದಲ್ಲಿ ತಯಾರಾಗುವ ಒಡವೆಗಳು ಯುದ್ಧಸಿದ್ಧಪಣವ ಕೆಲಸಕ್ಕಾಗಿ ಹೋಗುವುದೂ ಸಾಮಾನಗಳ ಅಭಾವವೂ ಇದಕ್ಕೆ ಕಾರಣ. ಹಳ್ಳಿಗಳೊಳಗಿನ ಕೃಷಿಕರ್ಮ ಮತ್ತು ಇತರ ವ್ಯವಹಾರಿಕ ಕೆಲಸಗಳಿಗೆ ಅವಶ್ಯವಿರುವ ಒಡವೆಗಳೆಲ್ಲವನ್ನೂ

(೧೦೧ನೆಯ ಪುಟದಿಂದ ಮುಂದುವರಿದುದು.)

ರಕ್ತವನ್ನು ಕೇಂದ್ರೀಕರಿಸುವ ಬದಲು, ಅವನ್ನೇ ದೀರ್ಘಕಾಲದ ವರೆಗೆ ಸ್ವಲ್ಪಸ್ವಲ್ಪವಾಗಿಯೆ ಬಿಡುಗಡೆ ಮಾಡಲು ಕಲಿತರೆ, ಅದರ ಸಹಾಯಸಿದ್ಧಶಕ್ತಿ, ಉಗಿರಶಕ್ತಿ ಮುಂತಾದ ಅನೇಕ ರಕ್ತಿಗಳನ್ನು ಹೊರಬಿಸಿ, ರಚನಾತ್ಮಕ (constructive) ಕಾರ್ಯಗಳಿಗೆ ಅವನ್ನು ಸಯೋಗಿಸಬಹುದು. ಆಗ ಒಂದು ಚಹಾ ಬಟ್ಟಲಲ್ಲಿ (tea-cup) ಒಡಿಯುವಷ್ಟು ಯುರೇನಿಯಮ್ ಪೋಹದ ಸಂಪೂರ್ಣ ಪೃಥಕ್ಕರಣದಿಂದ ಕ್ವೀನ್ ಎಲಿಜಬೆತ್ (Queen Elizabeth ನಂತಹ ಅತಿ ದೊಡ್ಡ ಹಡಗು ಇಂಗ್ಲೆಂಡಿನಿಂದ ಅಮೇರಿಕಕ್ಕೂ ಅಲ್ಲಿಂದ ಹಿಂದೆ ಒರಲಿಕ್ಕೂ ಸಾಕಾಗುವಷ್ಟು ಚಾಲಕ ರಕ್ತಿ (driving force) ಉತ್ಪನ್ನವಾಗುವುದು. ಇದರಿಂದಾಗಿ ಎಷ್ಟು ಕಲ್ಲಿದ್ದಲು ಮತ್ತು ಎಣ್ಣೆಯ ಉಳಿತಾಯವಾದೀತೆಂದು ನಾವು ಊಹಿಸಬಹುದು. ಅಲ್ಲದೆ, ಶಾಂತಿ ಕಾಲದಲ್ಲಿ ಕೈಗಾರಿಕೆಯ ಪ್ರಪಂಚದಲ್ಲಿ ಉಗಿಯ ರಕ್ತಿಯಿಂದಾಗುವದಕ್ಕಿಂತಲೂ ದೊಡ್ಡ ಕ್ರಾಂತಿಯಾದೀತು. ಏಕೆಂದರೆ ಒಂದು ಪೌಂಡು ಪರಮಾಣಿಕ್ ರಕ್ತಿಯು ೫ ಮಿಲಿಯ ಪೌಂಡು ಕಲ್ಲಿದ್ದಲಿನ ಯಾ ೩ ಮಿಲಿಯ ಗೆಲನು (gallon) ಪೆಟ್ರೋಲಿನ ರಕ್ತಿಗೆ ಸಮವಾಗಿದೆ" ಎಂದು ಅವರೆಂದಿದ್ದಾರೆ. ಆದರೆ "ಅಟಂನಲ್ಲಿರುವ ಕೇವಲ ನಾಶಕಾರಿ ರಕ್ತಿಯು ಉತ್ಪತ್ತಿಗಾಗಿ ಕಳೆದ ೪ ವರ್ಷಗಳಲ್ಲಿ ೫೦೦ ಮಿಲಿಯ ಪವನುಗಳು ವ್ಯಯವಾಗಿನೆಯೆನ್ನುವಾಗ ಅವರ ವಿಧಾಯಕ ರಕ್ತಿಯ ಉತ್ಪಾದನೆಗೆ ಎಷ್ಟು ವೆಚ್ಚ ತಗಲಬಹುದು, ಎಷ್ಟು ಶ್ರಮ ಬೇಕಾದೀತು" ಎಂದು ಸರ್. ಜಾನ್ ಎಂಡರಸನ್ ಎಂಬವರು ಹೇಳಿದ್ದಾರೆ. ಒಟ್ಟಿಗೆ ಹೇಳುವುದಾದರೆ, ಹೇರಳ ಸಂಪತ್ತಿದ್ದು, ಅನೇಕ ನಿಪುಣ ವಿಜ್ಞಾನಿಗಳಿಂದ ಕೂಡಿದವ ದೇಶಗಳು ಮಾತ್ರ ಈ ರಕ್ತಿಯ ಸದುಪಯೋಗವನ್ನು ಪಡೆಯಬಲ್ಲುದೇನೊ. ಅರ್ಥಾತ್ ಇಂದಿನ ಪರಿಸ್ಥಿತಿಯಲ್ಲಿ ಸಂಯುಕ್ತ ಅಮೇರಿಕ, ಬ್ರಿಟನ್ ಮತ್ತು ರಷ್ಯಾ—ಈ ಮೂರು ದೇಶಗಳಿಗೆ ಮಾತ್ರ ಇದರ ಸದುಪಯೋಜನ ಮಾಡಿಯಬಹುದೆಂದು ಕಾಣುವುದು.

ಹಳ್ಳಿಗಳಲ್ಲಿಯೆ ತಯಾರಿಸಿಕೊಳ್ಳುವ ಪ್ರಸಂಗ ಬಂತು. ಈ ಯುದ್ಧವು ನಮಗೆ ಇದೊಂದು ದೊಡ್ಡ ಉಪಕಾರವನ್ನು ಮಾಡಿರುತ್ತದೆ. ಈಗಿನಷ್ಟು ಪ್ರಮಾಣದಲ್ಲಿ ತೋರಿಬರುವ ಸ್ವಾವಲಂಬನವು ಶಾಶ್ವತವಾಗಿ ಹಳ್ಳಿಗಳಲ್ಲಿ ಉಳಕೊಳ್ಳಬೇಕಾದರೆ, ಸರಕಾರದವರು ಈಗಿನಿಂದಲೇ ಈ ವಿಷಯದ ವಿವೇಚನೆ ಮಾಡಬೇಕಾಗಿದೆ. ಈ ಮೊದಲು ನಾನು ವಿವರಿಸಿದ ಕುಂದು-ಕೊರತೆಗಳನ್ನು ಹೋಗಲಾಡಿಸುವ ವಿಚಾರವನ್ನು ಅವರು ಈಗಿನಿಂದಲೇ ಕೈಕೊಳ್ಳಬೇಕಾಗಿದೆ.

ಇದು ಅಸಾಧ್ಯವಾದ ಕೆಲಸವಲ್ಲ. ಕಠಿಣವಾದ ಕೆಲಸವೂ ಅಲ್ಲ. ಸುಸಂಘಟಿತರಾದರೆ, ನಿರ್ದಿಷ್ಟ ಕ್ಷೇತ್ರದೊಳಗಿನ ಯಾವತ್ತೂ ವ್ಯವಸಾಯಗಾರರು ಸಹಕಾರಿತೆಯಿಂದ ತಮಗೆ ಅವಶ್ಯವಿರುವ ಕಚ್ಚಾ ಮಾಲುಗಳನ್ನೂ ಯಂತ್ರೋಪಕರಣಗಳನ್ನೂ ಕೊಂಡುಕೊಳ್ಳಬಹುದು. ಇಂಥ ಅನೇಕ ಸಂಘಗಳು ಒಟ್ಟಾದರೆ, ಅವೆಲ್ಲವುಗಳಿಗೆ ಬೇಕಾಗುವ ಯಾವತ್ತು ಸರಕುಗಳನ್ನು ಕೊಳ್ಳುವ ಬಗ್ಗೆ ಒಂದು ಮಧ್ಯವರ್ತಿ ಸಂಘವನ್ನು ಏರ್ಪಡಿಸಿಕೊಳ್ಳಬಹುದು. ಆಗ ಅತಿ ಕಡಿಮೆ ದರದಲ್ಲಿ ದೊಡ್ಡ ಪ್ರಮಾಣದಲ್ಲಿ ಇವೆಲ್ಲವುಗಳನ್ನೂ ಖರೀದಿಸಿಕೊಳ್ಳಬಹುದು. ಸಂಘಟಿತರಾದರೆ ಹಣಸಹಾಯವು ದೊರೆಯಬಹುದು. ಕೈಗಾರಿಕೆಯ ಶಿಕ್ಷಣವನ್ನು ಕೊಡುವುದು ಉದ್ಯೋಗಖಾತೆಯವರ ಕರ್ತವ್ಯವಾಗಿದೆ. ಕೇವಲ ಕೈ-ಕಾಲುಗಳ ಸಹಾಯದಿಂದ ಮಾಡಲು ಅಸಾಧ್ಯವಾದಷ್ಟರ ಮಟ್ಟಿನ ಕೆಲಸವನ್ನು ಅಥವಾ ಕಠಿಣ ಸಾಧ್ಯವಾದಷ್ಟರ ಮಟ್ಟಿನ ಕೆಲಸವನ್ನು ಸಾಮೂಹಿಕವಾಗಿ ಕೊಂಡುಕೊಳ್ಳಬಹುದಾದ ಯಂತ್ರಸಾಧನಗಳಿಂದ ಒಂದು ಮಧ್ಯವರ್ತಿಯಾದ ಸ್ಥಳದಲ್ಲಿ ಮಾಡಿಕೊಂಡು, ಇತರ ಕೆಲಸಗಳನ್ನು ಗುಡಿಸಿಲುಗಳಲ್ಲಿ ಮಾಡಿಕೊಳ್ಳುವುದು ಸಾಧ್ಯವಾಗಬಹುದು. ಹೀಗೆ ಮಾಡುವುದರಿಂದ ಕೈಗಾರಿಕೆಗಳಲ್ಲಿ ವ್ಯವಸಾಯಗಾರರಿಗೆ ಉತ್ಸಾಹವುಂಟಾಗುವುದಲ್ಲದೆ, ಒಡವೆಗಳು ಶೀಘ್ರದಲ್ಲಿ ತಯಾರಾಗುವುವು. ಅಂದವಾಗಿ ಕಾಣುವುವು. ಅಗ್ಗವಾಗಿ ಕೊಡುವುದ ಸಾಧ್ಯವಾಗಬಹುದು.

ಪ್ರತಿಯೊಂದು ದೇಶದಲ್ಲಿ ಅನೇಕ ಒಡವೆಗಳಿಗೆ ಸರಕಾರವೇ ಬಹು ದೊಡ್ಡ ಗಿರಾಕಿಯಾಗಿದೆ. ಅಫೀಸುಗಳ ಉಪಯೋಗಕ್ಕೆ ಸಾರ್ವಜನಿಕ ಕಟ್ಟಡಗಳಿಗೆ, ಸಾರ್ವಜನಿಕ ರಸ್ತೆ ಪೂಲು ಮುಂತಾದುವುಗಳ ಬಗ್ಗೆ, ಸಮವಸ್ತ್ರಗಳ ಬಗ್ಗೆ ಇತ್ಯಾದಿ ಇತರೇ ಅನೇಕ ಆವಶ್ಯಕತೆಗಳ ಬಗ್ಗೆ ಅವರು ಪ್ರತಿವರ್ಷವೂ ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡುತ್ತಾರೆ. ಅವರು ಪ್ರೋತ್ಸಾಹಿಸಿದರೆ ಸಾಕು—ಕೈಗಾರಿಕೆಯ ಒಡವೆಗಳಿಗೆ ಗಿರಾಕಿಗಳನ್ನು ಹುಡುಕುವ ಭಾರವು ಬೀಳಲಿಕ್ಕಿಲ್ಲ.

ಕೇಂದ್ರೀಕೃತವಾಗಿ ದೊಡ್ಡ ಪ್ರಮಾಣದಿಂದ ಕೆಲಸ ಪಡಿಸುವ ಗಿರಣಿಗಳು ಈ ದೇಶದಲ್ಲಿ ಸ್ಥಾಪಿಸಲ್ಪಡಹತ್ತಿ ಮುಕ್ಕಾಲು ಶತಮಾನವು ಮೇಲಾಗಿದ್ದರೂ, ೪೦ ಕೋಟಿ ಜನರಲ್ಲಿ ಒಂದೂವರೆ ಕೋಟಿ ಜನರಿಗೆ ಕೆಲಸವನ್ನು ಕೊಡುವುದು ಸಹ ಅವುಗಳಿಂದಾಗಲಿಲ್ಲ. ಇಷ್ಟಾದರೂ, ಅವುಗಳಲ್ಲಿ ತಯಾರಾಗುವ ಒಡವೆಗಳು ನಮ್ಮ ಪೇಟೆಯನ್ನು ತುಂಬಿಬಿಟ್ಟು ಗಿರಾಕಿಗಳಿಲ್ಲದೆ ಅವು ಪೇಜಾಡಹತ್ತಿವೆ ಕನಿಷ್ಟ ಇನ್ನೂ ೧೫ಕೋಟಿ ಜನರನ್ನು ಕೃಷಿಕರ್ಮದಿಂದ ಪರ್ಯಾಯಿಸಿ, ಇತರ ಉದ್ಯೋಗಗಳಲ್ಲಿ ಸೇರಿಸುವುದು ಅವಶ್ಯವೆಂದು ಹೇಳಲಾಗುತ್ತದೆ. ಕಳೆದ ವರ್ಷಗಳ ರೀತಿಯಲ್ಲಿ ಉದ್ಯೋಗೀಕರಣವು ಸಾಗಿದರೆ, ಇಷ್ಟು ಜನರನ್ನು ಸೇರಿಸಲು ಇನ್ನೂ ೬ ಶತಮಾನಗಳು ಬೇಕಾಗಬಹುದು. ಅವರು ತಯಾರಿಸಿದ ಒಡವೆಗಳಿಗೆ ಗಿರಾಕಿಗಳನ್ನೆಲ್ಲಿಂದ ದೊರಕಿಸುವುದು? ಆ ಮೇಲೆ ಎಷ್ಟೋ ತಯಾರಿಕೆ ಕೇಂದ್ರಗಳನ್ನು ಮುಚ್ಚಬೇಕಾಗುವುದು. ಎಷ್ಟೋ ಕೋಟಿ ಜನರನ್ನು ನಿರುದ್ಯೋಗಿಗಳಾಗಿ ಮಾಡಬೇಕಾಗುವುದು ಅಥವಾ ಅವರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡುವ ಬಗ್ಗೆ ಒಂದು ಯುದ್ಧವನ್ನು ಹೂಡಬೇಕಾಗುವುದು.

ಕೃಷಿಕರ್ಮದಲ್ಲಿ ಆವಶ್ಯವಿದ್ದದಕ್ಕಿಂತ ಹೆಚ್ಚು ಜನರು ತೊಡಗಿರುತ್ತಾರೆಂಬುದು ನಿಜವೇ. ಮತ್ತು ಅವರಲ್ಲಿ ಒಂದುಮೂರಾಂಶದ ಮಟ್ಟಿನ ಜನರನ್ನು ಇತರ ವ್ಯವಸಾಯಗಳಲ್ಲಿ ತೊಡಗಿಸಬೇಕೆಂಬುದೂ ನಿಜವೆ. ಮೇಲೆ ನಿವರಿಸಿದ ಅನರ್ಥಗಳನ್ನು ತಂದುಕೊಳ್ಳದ ರೀತಿಯಿಂದ ಈ ಪ್ರಕಾರ ಮಾಡಬೇಕೆಂದರೆ ಗುಡಿಸಿಲುಕೈಗಾರಿಕೆಗಳೊಂದೇ ಉಪಾಯ. ಇವುಗಳಿಗೆ ಭಾಂಡವಲು ಕಡಿಮೆ ಸಾಕು.

ಸುಧಾರಿಸಿದುವುಗಳೆನ್ನಿಸಲ್ಪಡುವ ಪಾಶ್ಚಿಮಾತ್ಯ ದೇಶಗಳನ್ನು ಹೋಲಿಸಿ ನೋಡಿದರೆ, ನಮ್ಮ ದೇಶದಲ್ಲಿ ಉದ್ಯೋಗೀಕರಣಕ್ಕೆ ಬೇಕಾದಷ್ಟು ಇಂಬು ಇರುವುದೆಂದು ಕಂಡುಬರುತ್ತದೆ. ಆ ಬಗ್ಗೆ ಜನ-ಸಾಮಗ್ರಿ ಇಪೆ ಈ ದೇಶವೇ ಬಹು ದೊಡ್ಡ ಪೇಟೆ. ಹಣ-ಸಾಮಗ್ರಿಯು ಇಲ್ಲೆನ್ನಲು ಸಾಧ್ಯವಿಲ್ಲ. ಉದ್ಯೋಗೀಕರಣದಿಂದ ಪಾಶ್ಚಿಮಾತ್ಯ ದೇಶಗಳಲ್ಲಾದ ಅನರ್ಥಗಳು ಇನ್ನೂ ಇಲ್ಲಿ ತಲೆದೋರಿರುವುದಿಲ್ಲ. ಆದ್ದರಿಂದ ಕೈಗಾರಿಕೆಗಳ ವಿಷಯದಲ್ಲಿ ಯೋಜನೆ ಮಾಡುವುದು ಇತರ ಜನಾಂಗಗಳಿಗಿಂತಲೂ ಇಲ್ಲಿ ಸುಲಭವಾಗಬಹುದು. ಈ ವಿನಾ ಬಳಕೆ-ತಾಳಕೆಗಳ ದೃಷ್ಟಿಯಿಂದಲೇ ಸರಕುಗಳನ್ನು ಕೊಳ್ಳುವವರು ಇನ್ನೂ ಈ ದೇಶದಲ್ಲಿ ಹೇರಳವಾಗಿದ್ದಾರೆ. ಕಲಮಟ್ಟಿಗೆ ದಡಸಾದ ಒಡವೆಗಳು ಇನ್ನೂ ಮಾರಾಟವಾಗುತ್ತವೆ.

ಅಂದವಾದ ಒಡವೆ ಕಡಿಮೆ ಬೆಲೆಯೆಂದು ಬಿಟ್ಟರೆ— ಎಲ್ಲರಿಗೂ ಪ್ರೀತಿ. ದೊಡ್ಡ ಪ್ರಮಾಣದಿಂದ ತಯಾರಾಗುವ ಒಡವೆಗಳೊಡನೆ ಮೇಲಾಡಿಸುವುದು ಕೈಗಾರಿಕೆಯ ಒಡವೆಗಳಿಗೆ ಸರ್ವಥಾ ಸಾಧ್ಯವಾಗದು. ಕೈಗಾರಿಕೆಗಳಿಂದಲೇ ಈ ದೇಶದ ಉದ್ಧಾರವಾಗಬೇಕೆಂಬ ತತ್ತ್ವವನ್ನು ಒಪ್ಪಿಕೊಂಡರೆ, ಅವುಗಳಿಗೂ ಗಿರಣಿಗಳಿಗೂ ಮೇಲಾಟವಾಗದಂತೆ ನೋಡಿಕೊಳ್ಳುವುದು ಅತ್ಯವಶ್ಯ. ಆದ್ದರಿಂದ ಕೈಗಾರಿಕೆಗಳಿಂದ ತಯಾರಾಗತಕ್ಕ ಒಡವೆಗಳ ಪಟ್ಟಿಯನ್ನು ಯೋಜಕರು ತಯಾರಿಸಿ, ಅವುಗಳನ್ನು ಗಿರಣಿಗಳಲ್ಲಿ—ಅಂದರೆ ದೊಡ್ಡ ಪ್ರಮಾಣದ ತಯಾರಿಕೆಯ ಕೇಂದ್ರಗಳಲ್ಲಿ ತಯಾರಿಸದಂತೆ ಕಾನೂನುಗಳನ್ನು ಮಾಡಬೇಕು. ಹೀಗಾಗಗೊಟ್ಟಲ್ಲಿ ಅವುಗಳ ಬೆಲೆಯು ಕೆಲಮಟ್ಟಿಗೆ ಏರಬಹುದು. ಆದರೆ ರಾಷ್ಟ್ರಹಿತದ ದೃಷ್ಟಿಯಿಂದ ಪ್ರತಿಯೊಬ್ಬನೂ ಈ ರೀತಿಯ ತ್ಯಾಗಕ್ಕೆ ಸಿದ್ಧನಿರಬೇಕಾಗುತ್ತದೆ.

ಸಾರಾಂಶ

೧. ಗುಡಿಸಿಲು ಕೈಗಾರಿಕೆಗಳನ್ನು ಸರಕಾರದವರು ತಮ್ಮ ಅಧಿಕಾರಕ್ಷೇತ್ರದಲ್ಲಿ ತಕ್ಕೊಳ್ಳತಕ್ಕದ್ದು: ಅವುಗಳನ್ನು ಸಹಕಾರಿ ತತ್ತ್ವಗಳ-ನ್ವಯ ಸಂಘಟಿಸತಕ್ಕದ್ದು. ಸರಕುಗಳ ತಯಾರಿಕೆ, ವಿನಿಯೋಗ ಇವುಗಳನ್ನು ಸರಕಾರದವರ ಪೋಷಣಧನ್ವಯ ಸಾಗಿಸತಕ್ಕದ್ದು. ಈ ಬಗ್ಗೆ ಸರಕಾರದವರು ಕೈನೀಡಿ ಸಹಾಯವನ್ನು ಮಾಡತಕ್ಕದ್ದು.

೨. ಜನತೆಗೆ ಅವಶ್ಯವಿರುವ ಒಡವೆಗಳನ್ನು ದೊಡ್ಡ ಪ್ರಮಾಣದ ತಯಾರಿಕೆ ಕೇಂದ್ರಗಳಲ್ಲಿಯೂ, ಕೈಗಾರಿಕೆಗಾರರಲ್ಲಿಯೂ ಪಾಲು ಪಾಕಿ. ಒಂದು ಕ್ಷೇತ್ರದವರು ಇನ್ನೊಬ್ಬರೊಡನೆ ಮೇಲಾಡಿಸದಂತೆ ವಿಧಿಸತಕ್ಕದ್ದು.

೩. ಕೈಗಾರಿಕೆಗಳ ಒಡವೆಗಳೊಡನೆ ಪರದೇಶದವರು ಸ್ಪರ್ಧಿಸದಂತೆ ನೋಡಿಕೊಳ್ಳತಕ್ಕದ್ದು.

೪. ಕೈಗಾರಿಕೆಗಳ ಒಡವೆಗಳನ್ನು ವಿಶಿಷ್ಟ ರೂಪರೇಖೆಗೆ (standardisation) ತರತಕ್ಕದ್ದು. ಅವುಗಳ ದರವನ್ನು ಸರಕಾರದವರು ನಿಶ್ಚಯಿಸತಕ್ಕದ್ದು. ಸಾಧಾರಣ ತರದ ಕೆಲಸಗಾರರಿಗೆ ದಿನ ಒಂದರ ರೂಪಾಯಿ ಒಂದರಂತೆಯೂ ಕೌಶಲ್ಯದ ಪರಮಾವಧಿಯನ್ನು ಮುಟ್ಟಿದವರಿಗೆ ದಿನ ಒಂದು ಐದು ರೂಪಾಯಿಗಳಂತೆಯೂ ಗಳಿಕೆಯಾಗುವಂತೆ ನೋಡಿಕೊಳ್ಳತಕ್ಕದ್ದು.

೫ ಅವರಿಗೆ ಅವಶ್ಯವಿರುವ ಸಾಮಾನ್ಯ ಶಿಕ್ಷಣ ಮತ್ತು ಕೈಗಾರಿಕೆಯ ಶಿಕ್ಷಣಗಳು ದೊರೆಯುವ ಏರ್ಪಾಡು ಆಗತಕ್ಕದ್ದು.

೬. ಅಸ್ವಸ್ಥತೆ ಅಥವಾ ಇನ್ನಿತರ ಯುಕ್ತ ಕಾರಣಗಳ ಮೂಲಕ ಅವರು ನಿರುದ್ಯೋಗಿಗಳಾದರೆ, ಅವರಿಗೆ ಜೀವನವು ದೊರೆಯುವ ರೀತಿಯ ವಿಮೆಯ ವ್ಯವಸ್ಥೆ ಆಗತಕ್ಕದ್ದು.

ಈ ಮೂಲತತ್ತ್ವಗಳು ಒಪ್ಪಿಗೆಯಾದಲ್ಲಿ, ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಉದ್ಯೋಗಗಳನ್ನು ಎಷ್ಟೆಷ್ಟು ಜನರು ನೂಡತಕ್ಕದ್ದೆಂಬುದನ್ನು ನಿರ್ಣಯಿಸತಕ್ಕದ್ದು.

ಬೂಮ್ಯಾಗ್ ಮನ್ಯಾ ಇಲ್ಲಿದ್ರ?

ಶ್ರೀ. ವಿ. ಜಿ. ಭಟ್ಟ.

ಒಮ್ಮೇ ನಾಳೀಗ್ ನೀನು ನಾನು
ಎಲ್ಲಾ ಜನ್ರೂ ಇಲ್ದಿದ್ರೂನೂ
ಸರ್ಯಾಗ್ ಸಾಗ್ದೇ ಹೋದೀತೇನು ಸುಸಾರ?

ಹೀಂಗೊಮ್ಮೆ ಒಂದ್ ದಿನ
ಬೆಟ್ಟ ಸಿಮ್ಮ ಹುಲಿ ದನ
ಹಿಡ್ದಾವ್ ನಮ್ಮಿಂತಲೂ ಗನ ಅಜಾರ!

ಚಿಕ್ಕಿ ತಿಂಗ್ಳು ಬಾನು ಬೂಮಿ
ಯೆಲ್ಲಾ ಹೀಂಗೇ ತಂತಂ ಸೀಮಿ-
ಸಿಸ್ತ್ನಾಗ್ ಸಾಗ್ದ್ರೂ ಬಂದೀತ್ ಸೋಮಿಗ್ ಬೇಜಾರ;

ಈ ಲೋಕ ಉಪ್ಪ್ಸಕಾರ....
ಅಲ್ಲೊಂದ್ ಇಲ್ಲೊಂದ್ ಬೆಲ್ಲದ್ ಚೂರ....
ವೊಯ್ತ್ಲಾಕ್ ಬರೂ ದೇವ್ತೇರ ಬಾಜಾರ!

DYESTUFFS INTERMEDIATES AND CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

Cotton, Silk, Art Silk,
Wool, Jute, Paper,
Leather, Soap, Wax,
Coir, Varnishes, Oils.

CHEMICALS
ACCELERATORS AND
ANTI-OXIDANTS
FOR
RUBBER INDUSTRY

S. K. KABBUR LIMITED
3/ BASTION ROAD
FORT, BOMBAY
Telegrams "DIAZO" Bombay Telephone 21627

CORRESPONDENTS IN ENGLAND:

KABBUR & CO., LIMITED
RADHA HOUSE
Higher Ardwick, MANCHESTER, 12.
Telegrams "Radha, Manchester."

ವಿಜ್ಞಾನ ಪ್ರಪಂಚ

ಶ್ರೀ. ಕೆ. ಎಸ್. ಸವಣೂರ, ಎಮ್. ಎಸ್‌ಸಿ.

ಕರ್ನಾಟಕ ಕಾಲೇಜ, ಧಾರವಾಡ.

ಗ್ಯಾಲಿಲಿಯೊ ಗ್ಯಾಲಿಲಿ

(ಜೂಲೈ ಸಂಚಿಕೆಯಿಂದ ಮುಂದುವರಿದು ಮುಗಿದಿದೆ)

ಹಿಂದಿನ ಸಂಚಿಕೆಯಲ್ಲಿ ವಿವರಿಸಿದ ಶೋಧಗಳಲ್ಲದೆ ಇನ್ನೂ ಅನೇಕ ಶೋಧಗಳನ್ನು ಮಾಡಿದ ಕೀರ್ತಿಯು ಗ್ಯಾಲಿಲಿಯೋನಿಗೆ ಸಲ್ಲುವುದು. ಇವುಗಳಲ್ಲಿ ಮುಖ್ಯವಾದುವುಗಳೆಂದರೆ—ಶನಿಗ್ರಹವನ್ನು ಸುತ್ತಿ ಚಕ್ರಾಕಾರದ ವಲಯಗಳಿದ್ದು, ಅವುಗಳು ಹೊಯ್ದಾಡುತ್ತಿವೆಯೆನ್ನುವುದು; ಶುಕ್ರನು (ನಮ್ಮ ಚಂದ್ರನಂತೆ) ಪೂರ್ಣ ಕಲೆಗಳಿಂದ ಅರ್ಧಕಲೆಗೆ ಇಳಿಯುತ್ತಾನೆಂಬುದು....ಇತ್ಯಾದಿ. ಈ ಎಲ್ಲ ಶೋಧಗಳೂ 'ಸೂರ್ಯಕೇಂದ್ರ' ತತ್ತ್ವಕ್ಕೆ ಪೋಷಕವಾದುವುಗಳಿದ್ದು, ಮುಂಬರಿಣೆಯು ಹುಟ್ಟುವುದಕ್ಕೆ ನೂರು ವರ್ಷಗಳ ಮೊದಲಿಗೇ ಕೊಪರ್ನಿಕಸ್‌ನ ತಾತ್ತ್ವಿಕ ವಿವೇಚನೆಯಿಂದ ಪ್ರತಿಪಾದಿತವಾಗಿದ್ದುವು. ಈಗಂತೂ ಪ್ರಾಯೋಗಿಕ ಪ್ರಮಾಣವೇ ಸಿಕ್ಕಿತಾದ್ದರಿಂದ, ಇದು ಅರಿಸ್ಟಾಟಲನಿಂದ ಪ್ರತಿಪಾದಿತವಾದ ಪೃಥ್ವೀಕೇಂದ್ರ ತತ್ತ್ವಕ್ಕೆ ಒಂದು ಕೊಡಲಿಯ ಏಟಿನಂತೆಯೆ ಪರಿಣಮಿಸಿತು.

ಈ ಎಲ್ಲ ಕಾರಣಗಳ ಮೂಲಕ ಗ್ಯಾಲಿಲಿಯೋನ ಕೀರ್ತಿಯು ಹೆಚ್ಚಿತು. ಪ್ಲೆಸಿಸ್ ನಗರದ ಜನರಿಗೆ ಇವನು ಆದರ್ಶಪ್ರಾಯನಾಪನು. ಇವನ ಮೊದಲಿದ್ದ ವೇತನವು ಎರಡರಷ್ಟು ಹೆಚ್ಚಿಸಲ್ಪಟ್ಟಿತಲ್ಲದೆ, ಕೆಲಸವು ಕಾಯಂ ಮಾಡಲ್ಪಟ್ಟಿತು. ಇವನಿಗೆ ಮೂರು—ಒಂದು ಗಂಡು, ಎರಡು ಹೆಣ್ಣು ಹೀಗೆ—ಸಂತತಿಗಳಾಗಿದ್ದುವು. ಆದರೂ ಪ್ಲೆಸಿಸ್ ನಗರವು ತನ್ನ ಊರು ಆಗಿರಲಿಲ್ಲವಾದ್ದರಿಂದ, ಇವನಿಗೆ ತನ್ನ ಊರಿನಲ್ಲಿಯೆ ಇರಬೇಕೆಂಬ ಇಚ್ಛೆಯು ಪ್ರಬಲವಾಯಿತು. ಅದರಂತೆಯೆ ಟಸ್ಕನೀ ಭಾಗದ ಜನರಿಗಾದರೂ ಇಂತಹ ಕೀರ್ತಿವಂತ ವ್ಯಕ್ತಿಯನ್ನು ತಮ್ಮ ದೇಶದಿಂದ ಹೊರಗೆ ಹಾಕಿದ್ದಕ್ಕಾಗಿ ವಿಷಾದವೆನಿಸತೊಡಗಿತ್ತು. ಮೇಲಾಗಿ ಗ್ಯಾಲಿಲಿಯೋನು ಈಗ ಮೇಲಿಂದ ಮೇಲೆ ಪೀಸಾ ನಗರಕ್ಕೆ ಹೋಗುತ್ತಿದ್ದನು. ಅಲ್ಲಿಯ ರಾಜಪುತ್ರನವ ಸರದಾರನಿಗೂ ಇವನಿಗೂ ಸಖ್ಯವು ಕೂಡಿತಲ್ಲದೆ, ಈ ಸರದಾರನ ಆಗ್ರಹದ ವಿನಂತಿಯನ್ನು ಮಾನ್ಯಮಾಡಿ, ೧೬೧೦ನೆಯ ಇಸ್ವಿಯಲ್ಲಿ 'ಗಣಿತ ಮತ್ತು ತತ್ತ್ವಜ್ಞಾನ' ವಿಷಯಗಳಲ್ಲಿ ಸರದಾರನಿಗೆ ಸಲಹೆಗಾರನೆಂಬ ಪುದ್ದಿಯನ್ನು ಸ್ವೀಕರಿಸಿದನು. ಹೀಗೆ ಮಾಡಿದುದು ಅವನ ವೃಷ್ಟಿಯಿಂದ ಹಿತಕರವೆನಿಸಿತು. ಏಕೆಂದರೆ ಇದರಿಂದ ತನ್ನ ಊರಿನಲ್ಲಿಯೆ ಇರಲು ಸೊರೆಯಿತಲ್ಲದೆ, ಪ್ರಾಧ್ಯಾಪಕನೆಂದು ಕಲಿಸುವುದೂ ಈಗ ಇರಲಿಲ್ಲ. ಮೇಲಾಗಿ ಇವನು ಈಗ ಇಳಿವಯಸ್ಸನ್ನು ಸಮೀಪಿಸುತ್ತಿದ್ದನಾದ್ದರಿಂದ ಕಲಿಸುವ ಮತ್ತು ಹೊಸ ಶೋಧಗಳನ್ನು ಗೊತ್ತುಹಚ್ಚುವ ಎರಡೂ ಕೆಲಸಗಳನ್ನು ಪರಿಶ್ರಮದಿಂದಲೇ ಸಾಧಿಸಬೇಕಾಗಿತ್ತು. ಆದರೆ ಈಗ ಮೊದಲಿನ ಕೆಲಸದಿಂದ ವಿರಾಮ ಸಿಕ್ಕುತಾಗಿ, ತನ್ನನ್ನು ಹೊಸಶೋಧಗಳಿಗೇ ಮೀಸಲಾಗಿಸಲು ಅವಕಾಶ ದೊರೆಯಿತು. ಪ್ಲೆಸಿಸ್ ನಗರದ ಇವನ ಮಿತ್ರರಿಗೆ ಇವನ ವೈರಿಗಳಾಗುವಷ್ಟು ಅಸಮಥಾನವಾಯಿತು. ಇವನ ಸಮುದ್ದೇಶಪೂರಿತ ಈ ನಿರ್ಣಯವೇ ಮುಂದೆ ಇಳಿವಯಸ್ಸಿನಲ್ಲಿಯ ಇವನ ಲೌಕಿಕದಲ್ಲಿಯ ಅವನತಿಗೆ ಕಾರಣವಾಯಿತು.

ಕೊಪರ್ನಿಕಸನ ತತ್ತ್ವವನ್ನು ಪ್ರತಿಪಾದಿಸುವ ಇವನು, ಕೊಪರ್ನಿಕಸನ ತತ್ತ್ವವನ್ನು ಪ್ರತಿಭಟಿಸುವ ಜನರ ಮಧ್ಯದಲ್ಲಿಯೆ ಇರಬೇಕಾಯಿತು. ಈಗ ಇವನು ಇರುವ ಫ್ಲಾರೆನ್ಸ್ ನಗರವು ಪ್ಲೆಸಿಸ್ ನಗರದಂತೆ ವಿಚಾರಸ್ವಾತಂತ್ರ್ಯದ ವಿಷಯದಲ್ಲಿ ಇನ್ನೂ ಬಹಳ ಹಿಂದಿದ್ದು, ಚರ್ಚಿನ ಜನರೇ ಇಂತಹ ವಿಚಾರಗಳ ಲಗಾಮುಗಳನ್ನು ಬಿಡಿದವರಾಗಿದ್ದರು. ವೈದಿಕರ ವಿಚಾರಗಳಿಗೆ ಪ್ರತಿ ಹೇಳುವವರು ನಾಸ್ತಿಕರೆಂದು ಗಣಿಸಲ್ಪಡುತ್ತಿದ್ದರಲ್ಲದೆ, ಈ ವಿಚಾರಗಳನ್ನು ಆಚಾರದಲ್ಲಿ ತರುವವರಿಗಂತೂ ಬೆಂಕಿಯ ಮಧ್ಯದಲ್ಲಿ ಇರುವಂತೆಯೆ ಆಗಿತ್ತು. ರೋಮ ನಗರದ ಧರ್ಮಾಧ್ಯಕ್ಷನ ವೈದಿಕ ವಿಚಾರಗಳ ಪ್ರಭಾವಕ್ಕೆ ಒಳಪಟ್ಟ ಫ್ಲಾರೆನ್ಸ್ ನಗರವು, ಗ್ಯಾಲಿಲಿಯೋನ ಕಾರ್ಯಕೇಂದ್ರವಾಗಲು ಅತ್ಯಂತ ಅನರ್ಹವಿತ್ತು. ಇಂತಹ ನಾಸ್ತಿಕ ವಿಚಾರಗಳಿಗೋಸುಗ ಜೀವಂತ ಸುಡಿಸಿಕೊಳ್ಳಲ್ಪಟ್ಟ ಬ್ರೂನೋನ ಚರಿತ್ರೆಯಾವರೂ ಜನರ ಮನಸ್ಸಿನಿಂದ ಇನ್ನೂ ಅಳಿಸಿರಲಿಲ್ಲ. ಗ್ಯಾಲಿಲಿಯೋನು ಅರಿಸ್ಟಾಟಲನ ಸಿದ್ಧಾಂತವು ಹುರುಳಿಲ್ಲದ್ದೆಂದು ತೋರಿಸಿದ ಮಾತ್ರಕ್ಕೇ ಅವನು ಧರ್ಮದಲ್ಲಿ ಶ್ರದ್ಧೆಯಿಲ್ಲದವನೆಂದು ತಿಳಿಯಲಾಗದು. ಅವನು ಧರ್ಮದಿಂದ ಕ್ಯಾಥೊಲಿಕ್‌ನಿದ್ದು ಶ್ರದ್ಧೆ ಮತ್ತು ಆಚಾರ ವಿಷಯಗಳಲ್ಲಿ ಬೈಬಲಿನ ತತ್ತ್ವಗಳು ಇವನಿಗೆ ಮಾನ್ಯವಿದ್ದುವು; ಇದೇ ಬೈಬಲ್ಲಿನಲ್ಲಿಯೆ ಪ್ರತಿಪಾದಿತವಾದ ವಿಜ್ಞಾನ ವಿಷಯದ ತತ್ತ್ವಗಳ ವಿಷಯದಲ್ಲಿ ಮಾತ್ರ ಇವನ ಅಭಿಪ್ರಾಯ ಬೇರೆಯಾಗಿತ್ತು. ಇದಕ್ಕೆ ಕಾರಣವೆಂದರೆ ಇಂತಹ ವಿಷಯಗಳು ಅನಾರ್ಥಗಳಿಗೆ ಆಸ್ಪದ ಮಾಡಿಕೊಡುತ್ತವಾದ್ದರಿಂದ, ನೈಸರ್ಗಿಕ ಕ್ರಮಗಳ ವಿಷಯದಲ್ಲಿ, ನಿಸರ್ಗ ಪರೀಕ್ಷೆಯೇ ಬೈಬಲಿನಲ್ಲಿ ಪ್ರತಿಪಾದಿತವಾದ ಇಂತಹ ವಿಷಯಗಳ ನೈಜವಾದ ಅರ್ಥವನ್ನು ಮಾಡುವುದರಲ್ಲಿ ಉಪಯೋಗಿಸಲ್ಪಡಬೇಕು—ಎಂದು ಇವನ ಅಭಿಪ್ರಾಯ. ಈ ಅಭಿಪ್ರಾಯಗಳು ಮಾತ್ರ ಜನರಿಗೆ ರುಚಿಸದಾಯಿತು. ಗ್ಯಾಲಿಲಿಯೋನು ಪೃಥ್ವಿಯನ್ನು ತನ್ನ ಸುತ್ತಲು ಮತ್ತು ಸೂರ್ಯನ ಸುತ್ತಲು ತಿರುಗುವಂತೆ ಮಾಡಿದನು; ತರುಣ-ತರುಣಿಯರಿಗೆ ಆಹ್ಲಾದವನ್ನುಂಟುಮಾಡುವ ಚಂದ್ರನ ಮೋರೆಗೆ ಕಲಂಕವನ್ನು ಬಡಿದನು, ಜಗತ್ತಿಗೇ ಬೆಳಕನ್ನು ಒದಗಿಸುವ ಸೂರ್ಯನನ್ನೂ ವಿಕಾರಗೊಳಿಸಿದನು—ಇಪ್ಪೆಲ್ಲವುಗಳನ್ನೂ ಹೇಗೋ ಸಹನ ಮಾಡಿಕೊಂಡು ಜನರು ಜೀರಿಸಿಕೊಳ್ಳುವುದರಲ್ಲಿಯೆ, ಬೈಬಲಿನಲ್ಲಿಯು ನಿಸರ್ಗ ವಿಷಯಗಳನ್ನು ಕುರಿತು ಇವನು ವ್ಯಕ್ತಪಡಿಸಿದ ವಿಚಾರವು ಮಾತ್ರ ಜನರ ಸಹನಶೀಲತೆಯನ್ನು ಮೀರಿಸಿತು, 'ನಿಸರ್ಗವನ್ನು ವಿಪ್ರಾಸಗೊಳಿಸಿದ ಈ ನಾಸ್ತಿಕನು ಬೈಬಲಿಗಾದರೂ ಕೈಹಚ್ಚಬಾರ-

ಬಾಗಿತ್ತು' ಎಂದು ವಿಚಾರ ಮಾಡಿ ಈ ಜನರು, ಇಂತಹ ತಿಳುವಳಿಕೆಯಿಲ್ಲದ ನಾಸ್ತಿಕರಿಂದ ತಮ್ಮನ್ನೂ ಮತ್ತು ತಮ್ಮ ಧರ್ಮವನ್ನೂ ರಕ್ಷಣೆ ಮಾಡಬೇಕೆಂಬ ಆರ್ಥದ ತೀಕ್ಷ್ಣವಾದ ಹೇಳಿಕೆಯನ್ನು ರೋಮಿನಲ್ಲಿಯ ಮುಖ್ಯ ಧರ್ಮಾಧಿಕಾರಿಗೆ ಕಳುಹಿಸಿದರು.

ಪರಿಸ್ಥಿತಿಯು ಹೀಗಾದ ಮೇಲೆ ಅವನು ಎಲ್ಲ ಬದಿಯಿಂದಲೂ ವಿರೋಧವನ್ನು ಎದುರಿಸಬೇಕಾಯಿತು. ಇಷ್ಟಲ್ಲದೆ ಇವನನ್ನು ಮಿತ್ರನೆಂದು ಭಾವಿಸಿದ ಸರದಾರನು ಕೂಡ ಧರ್ಮಾಧಿಕಾರಿಯೆದುರಿಗೆ ತಲೆಬಾಗಬೇಕಾಯಿತು. ಮುಂದೆ ಬಂದ ಸರದಾರನು ಹಿಂದಿನವರ ಮಿತ್ರತ್ವವನ್ನು ಕೂಡ ಪರಿಗಣಿಸುವ ಪರಿಸ್ಥಿತಿ ಉಳಿಯದೆ, ಮುಂದೆ ವಿವರಿಸಲ್ಪಡುವ ಕಷ್ಟದಾಯಕ ದಿವಸದಲ್ಲಿ ತಾನೊಬ್ಬನೇ ತನ್ನ ವೈರಿಗಳ ಮಧ್ಯದಲ್ಲಿ ನಿಲ್ಲುವ ಸ್ಥಿತಿಯುಂಟಾಯಿತು. ಮೇಲಾಗಿ ಪೀಸಾದೊಳಗಿನ ಅರಿಸ್ಟಾಟಲನ ಅನುಯಾಯಿಗಳೂ ಲೌಕಿಕದಲ್ಲಿ ಆಚಾರ್ಯ ಮತ್ತು ತತ್ತ್ವಜ್ಞಾನಿ ಹೀಗೆ ಎರಡು ಕೆಲಸಗಳನ್ನು ಕೈಕೊಂಡವರೂ ಆದ ಹಲವರು, ಇವನನ್ನು ಕಠೋರ ಹಿಂಸೆಗೆ ಒಳಪಡುವಂತೆ ಮಾಡಿದರು.

ಇದೆಲ್ಲದರ ಫಲವಾಗಿ ೧೬೧೫ನೆಯ ಇಸ್ವಿಯಲ್ಲಿ ಈತನು ರೋಮು ನಗರಕ್ಕೆ ಬರಬೇಕೆಂದೂ ಮತ್ತು ತನ್ನ ಅಭಿಪ್ರಾಯವನ್ನು ತಿಳುಹಬೇಕೆಂದೂ ಕರೆ ಹೋಯಿತು. ಹೋದೊಡನೆಯೆ ಇವನು ಅಲ್ಲಿಯ ಪರಿಸ್ಥಿತಿಯನ್ನು ಗ್ರಹಿಸಿದನು. ವಾದದಲ್ಲಿ ಚತುರನಾದ ಗ್ಯಾಲಿಲಿಯೋನು ಅರಿಸ್ಟಾಟಲನ ಎಲ್ಲ ಅನುಯಾಯಿಗಳನ್ನೂ ವಾದದಲ್ಲಿ ಹಿಮ್ಮೆಟ್ಟಿಸಿದನು. ಅವರ ವಾದದ ರೀತಿ ಅವರ ಮೇಲೆಯೆ ತಿರುಗುವಂತೆ ಮಾಡಿದನು. ಇವನ ವಿಷಯದಲ್ಲಿ ಸದಭಿಪ್ರಾಯವುಳ್ಳ ಧರ್ಮಾಧಿಕಾರಿಯೊಡನೆ ಒಂದು ಘಂಟಿಕಾಲ ವಿಚಾರದಲ್ಲಿ ಕಳೆದು, ಎಲ್ಲವೂ ಸರಿಹೋದವರಂತೆ ಹಿಂತಿರುಗಿದನು. ಆದರೆ ಉಳಿದ ಮಂತ್ರಿಜನರು ಕೊಪರ್ನಿಕಸ್ ಮತ್ತು ಕೆಪ್ಲರ್ ಇವರ ಬರೆಹಗಳನ್ನು ನಿಷೇಧಿಸುವ ಆಜ್ಞೆಯನ್ನು ಹೊರಡಿಸಬೇಕೆಂದು ನಿರ್ಣಯಿಸಿದರಲ್ಲದೆ, ಇವರನ್ನು ಉತ್ತೇಜಿಸುತ್ತಿರುವ ಗ್ಯಾಲಿಲಿಯೋನಿಗೆ ವಾರ್ನಿಂಡನೆಯಾಗಲೇಬೇಕೆಂದು ನಿರ್ಣಯಿಸಿದರು. ಅವರಂತೆಯೇ ಈ ತರದ ತತ್ತ್ವಗಳನ್ನು ಪ್ರತಿವಾದಿಸಕೂಡದೆಂಬ ಮತ್ತು ಹಾಗೆ ಮಾಡಿದುದಾದರೆ ಸೆರೆಮನೆವಾಸ ಮತ್ತು ಚಿತ್ರ ಹಿಂಸೆಗಳು ತಪ್ಪಿದುವಲ್ಲವೆಂದು ಇವನು ೧೬೧೬ನೆಯ ಇಸ್ವಿಯಲ್ಲಿ ಆಜ್ಞಾಪಿಸಲ್ಪಟ್ಟನು. ಈ ಅಪರಿಹಾರ್ಯ ವಿಷಯಕ್ಕೆ ತಲೆಬಾಗಬೇಕಾಯಿತು ಮತ್ತು ವಚನಬದ್ಧನಾಗಿ ಫ್ಲಾರೆನ್ಸ್ ನಗರಕ್ಕೆ ಹಿಂತಿರುಗಿದನು.

ಈಗ ಗ್ಯಾಲಿಲಿಯೋನು ತನ್ನ ಶೋಧಗಳಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿಸುತ್ತಿದ್ದನು; ಆದರೆ ಅವನ ಕೃತ್ಯಗಳನ್ನು ಅತ್ಯಂತ ಸಂಶಯದಿಂದ ಮತ್ತು ಉತ್ಸುಕತೆಯಿಂದ ಜಪ್ತಿಸಿ ನೋಡುತ್ತಿರುವ ವೈರಿಗಳಿಗೆ ಅಪಚಾರವಾಗದಂತೆ ವಕ್ಷತೆಯನ್ನು ವಹಿಸಿದ್ದನು. ಇತಿಹಾಸಜ್ಞನಿಗೆ ಇವನಿಗೆ ಇವನ ಒಬ್ಬ ಮಗಳೇ ಮನಃಶಾಂತಿಗೆ ಕಾರಣಳಾಗಿದ್ದಳು. ಇವಳೇ ತಂದೆಗೆ ಬರೆದ, ಹಲವು—ಇಂದಿಗೂ ಉಪಲಬ್ಧವಿರುವ—ಪತ್ರಗಳು, ನಮ್ಮ ಚರಿತ್ರನಾಯಕನ ಈಗಿನ ಚಿತ್ತಸ್ಪರ್ಶಿ ಜೀವನ ವಿಷಯವನ್ನು ತಿಳಿಸುತ್ತವೆ.

ಮುಂದೆ ೧೬೨೩ನೆಯ ಇಸ್ವಿಯಲ್ಲಿ ಹಿಂದಿನ ಧರ್ಮಾಧಿಕಾರಿಯು ತೀರಿದ್ದರಿಂದ, ಬೇರೊಬ್ಬನು ಧರ್ಮಾಧಿಕಾರಿಯಾದನು. ಈತನು ಗ್ಯಾಲಿಲಿಯೋನ ಪರಮಮಿತ್ರನೇ ಆಗಿದ್ದುದರಿಂದ, ಇವನಿಗೆ ಒಂದ ತೆರನ ಸಮಾಧಾನವೇ ಆದಂತಾಯಿತು ಇದೇ ವೇಳೆಗೆ ಒಬ್ಬ ಮಿತ್ರನ ಸಲಹೆಯಂತೆ ಸ್ವತಃ ರೋಮು ನಗರಕ್ಕೆ ಹೋಗಿ, ತನ್ನ ಮಿತ್ರನು ಧರ್ಮಾಧಿಕಾರಿಯಾಗಿ ನಿಯಮಿಸಲ್ಪಟ್ಟದ್ದಕ್ಕೆ ತನಗಾದ ಆನಂದವನ್ನು ವ್ಯಕ್ತಪಡಿಸಿದನು. ಇದರ ಪರಿಣಾಮವೆಂದರೆ, ಇವನು ತನ್ನ ಊರಿಗೆ ಬರುವುದರೊಳಗೆಯೆ ಅಲ್ಲಿಯ ಸರದಾರನಿಗೆ ಧರ್ಮಾಧಿಕಾರಿಯು ಗ್ಯಾಲಿಲಿಯೋನ ವಿಷಯವಾಗಿ ಒಂದು ಪತ್ರವನ್ನು—'ನಿನ್ನ ತಂದೆಯಂತೆ ಇಲ್ಲವೆ ಅವನಿಗಿಂತ ಹೆಚ್ಚಾಗಿ ನೀನು ಗ್ಯಾಲಿಲಿಯೋನ ವಿಷಯದಲ್ಲಿ ನಡೆದುಕೊಂಡಲ್ಲಿ ನನಗೆ ಅತೀವ ಸಂತೋಷವಾಗುವುದು' ಇತ್ಯಾದಿ ಬರೆದು ಕಳುಹಿಸಿದನು. ಗ್ಯಾಲಿಲಿಯೋನು ತನ್ನ ಗ್ರಹಚಾರವು ತಿರುಗಿತೆಂದು ತಿಳಿದನಲ್ಲದೆ, ತನ್ನ ವಿಚಾರಗಳನ್ನು ಮತ್ತು ಅಭಿಪ್ರಾಯಗಳನ್ನು ಬಾಹ್ಯವಾಗಿ ಪ್ರಕಟಿಸಲು ಬೇಕಿರುವ ಅನುಕೂಲ ಪರಿಸ್ಥಿತಿಯು ನಿರ್ಮಿತವಾಯಿತೆಂದೆ ತಿಳಿದನು. ಇದೇ ಇವನ ಮುಂದಿನ ಆಯುಷ್ಯವನ್ನು ನಿರ್ಣಯವಾಗಿ ಮಾಡಲು ಕಾರಣೀಭೂತನಾಯಿತು.

ಮೇಲೆ ತಿಳುಹಿದ ಕಾರಣದಿಂದ ಉತ್ತೇಜಿತವಾಗಿ ಜನಸಾಮಾನ್ಯರಿಗೆ ತಿಳಿಯುವಂತಹ ಮತ್ತು ಸಂಭಾಷಣರೂಪವಾದ ಒಂದು ಪುಸ್ತಕವನ್ನು ಬರೆದನು. ಈ ಪುಸ್ತಕವು ಖಗೋಲ ಶಾಸ್ತ್ರವಿಷಯದಲ್ಲಿ ಪ್ರಾಚೀನ ಮತ್ತು ಅರ್ವಾಚೀನ ವಿಷಯಗಳಿಗೆ ಸಂಬಂಧಪಟ್ಟುದಿದ್ದು ಈ ಸಂಭಾಷಣದಲ್ಲಿ ಮೂರು ಪಾತ್ರಗಳು ಭಾಗವಹಿಸಿದ್ದುವು. ಈ ಮೂವರಲ್ಲಿ ಒಬ್ಬನು ಕೊಪರ್ನಿಕನ್‌ವಾದಿಯು; ಎರಡನೆಯವನು ಭೋಳೆಸ್ವಭಾವದ ಅರಿಸ್ಟಾಟಲ್‌ವಾದಿಯು. ಮೂರನೆಯವನು ಅಧ್ಯಕ್ಷನು ಹೀಗೆ ಬರೆಮದು ಅವನು ಕೊಟ್ಟ ವಚನಕ್ಕೆ ಭಂಗತರುವಂತ ಹದಿದ್ದು ವಿಷಯವ್ಯತಿಪಾದನೆಯು ಮಾತ್ರ ಅತ್ಯಂತ ಉಜ್ವಲವಿತ್ತು. ಈ ಪುಸ್ತಕವನ್ನು ಪ್ರಕಟಿಸಲು ಅವನು ಪರವಾನಿಗೆಯನ್ನು ಕೇಳಿದ್ದನು; ಆದರೆ ಪರೀಕ್ಷಕ ಅಧಿಕಾರಿಯ ಮರ್ಲಕ್ಷ್ಯತನದಿಂದ ಇಂತಹ ಪರವಾನಿಗೆ ಸಹ ಮೊದಿತ್ತು. ಈ ಪುಸ್ತಕವು ೧೬೩೨ರಲ್ಲಿ ಪ್ರಕಟವಾಯಿತು ಮತ್ತು ಗ್ಯಾಲಿಲಿಯೋನು ಇದನ್ನು ಟಸ್ಕನಿಯ ಸರದಾರನಿಗೇ ಪ್ರೇಮಪೂರ್ವಕವಾಗಿ ಅರ್ಪಿಸಿದ್ದನು. ಜನರು ಈ ಪುಸ್ತಕವನ್ನು ಓದುವುದರಲ್ಲಿ ಅತ್ಯಂತ ಉತ್ಸಾಹ ಮತ್ತು ಲಾಲಸೆಯನ್ನು ತೋರಿಸಿದರು. ಪರೀಕ್ಷಕ ಅಧಿಕಾರಿಗೆ ತನ್ನ ಮರ್ಲಕ್ಷ್ಯತನದ ಅನುಭವವೇ ಒದಗಿದಂತಾಗಿ, ಈ ಪುಸ್ತಕವನ್ನು ಪ್ರತ್ಯೇಕವಾಗಿ ಇಡುವ ಬಗ್ಗೆ ಪ್ರಕಾರಕನಿಗೆ ಆಜ್ಞಾಪಿಸಲಾಯಿತು. ಆದರೆ ಈ ಪರೀಕ್ಷಕನು ಮುಂದಕೆಲಸದಿಂದಲೇ ಕಡಿಮೆಮಾಡಲ್ಪಟ್ಟನು. ಇದರಲ್ಲಿ ಪ್ರತಿಪಾದಿತವಾದ ವಿಷಯವು ಸೂರ್ಯಕೇಂದ್ರ ತತ್ತ್ವಕ್ಕೆ ಅತ್ಯಂತ ಪೋಷಕವಿದ್ದು, ಜನಸಾಮಾನ್ಯರಿಗೆ ಸಹ ಸುಲಭ ಬೋಧೆಯಾಗುವಂತಿತ್ತು. ಇದೆಲ್ಲದರ ಪರಿಣಾಮವೆಂದರ ಅರಿಸ್ಟಾಟಲನ ಅನುಯಾಯಿಗಳಾದ ಇವನ ವೈರಿಗಳು ಧರ್ಮಾಧಿಕಾರಿಗೆ ಮೂರು ಒಯ್ದರು. ಈ ಸಂಭಾಷಣೆಗಳಲ್ಲಿ ಭಾಗವಹಿಸಿದ ಮೂವರೊಳಗೆ ಒಬ್ಬನಾದ ಭೋಳೆ ಸ್ವಭಾವದವನನು ಧರ್ಮಾಧ್ಯಕ್ಷನೇ ಇದ್ದು, ಇದು ಗ್ಯಾಲಿಲಿಯೋನು ಬೇಕೆಂತಲೇ ಮಾಡಿದ ಆಟವೆಂದು ಅವನಿಗೆ ಬೋಧನೆ ಮಾಡಿದರು. ಹೀಗಾಗಿ ಗ್ಯಾಲಿಲಿಯೋನು ತನ್ನ ಮಿತ್ರನಾದ ಧರ್ಮಾಧಿಕಾರಿಯ ಕ್ರೋಧಕ್ಕೆ ಒಳಗಾದನು. ನಾಸ್ತಿಕವಾದದ ಆರೋಪದ ಮೇಲೆ ರೋಮು ನಗರಕ್ಕೆ

ಬರಲೇಬೇಕೆಂದು ಆಜ್ಞಾಪಿಸಲ್ಪಟ್ಟನು. ಫ್ಲಾರೆನ್ಸ್ ನಗರದಿಂದ ರೋಮ ನಗರಕ್ಕೆ ಹೋಗುವುದು ಅಂದಿನ ದಿನಗಳಲ್ಲಿ ಸುಲಭ ಸಾಧ್ಯವಿಲ್ಲದರಿಂದ, ಅಲ್ಲಿ ಪ್ಲೇಗಿನ ಉಪದ್ರವವಿದ್ದುದರಿಂದ, ಎಲ್ಲಕ್ಕೂ ಹೆಚ್ಚಿನ ದೆಂದರೆ ಆವನು ಈಗ ೭೦ ವರ್ಷಗಳ ಮುದುಕನಿರುವನೆಂಬ ಕಾರಣದಿಂದ, ಆವನ ಮಿತ್ರರು ಅವನ ಪರವಾಗಿ ವಾದಿಸಿದರೂ ಆವನಿಗೆ ರೋಮ ನಗರಕ್ಕೆ ಹೋಗಲೇಬೇಕಾಯಿತು. ಆದೇ ವರುಷ ಫೆಬ್ರುವರಿ ೧೪ನೆಯ ತಾರೀಖಿಗೆ ಅಲ್ಲಿಗೆ ತಲ್ಪಿದನು.

ಅಲ್ಲಿಗೆ ಹೋದೊಡನೆಯೆ ಆವನನ್ನು ಸೆರೆಮನೆಯಲ್ಲಿ ಹಾಕದಿದ್ದರೂ ಆಪಷ್ಟು ಒಳಗೇ ಇರಬೇಕೆಂಬ ಕಟ್ಟಾಜ್ಞೆಯಾಯಿತು. ಮುಂದೆ ಏಪ್ರಿಲ್ ತಿಂಗಳಲ್ಲಿ ವಿಚಾರಣೆಯ ಕಚೇರಿಗೆ ಸಾಗಿಸಲ್ಪಟ್ಟನು. ಇಲ್ಲಿ ಮಾತ್ರ ಆವನ ದೇಹದ ಸ್ಥಿತಿಯು ಕೆಡಹತ್ತಿತು. ವಿಚಾರಣಾಧಿಕಾರಿಗಳು ಇವನನ್ನು ದಾಕ್ಷಿಣ್ಯಪರ ರೀತಿಯಲ್ಲಿಯೆ ನಡೆಸಿಕೊಂಡರು; ಆದರೂ ಅವರು ಸಹ ಕಾಯದೆಗಳಿಂದ ಬದ್ಧರಾದ್ದರಿಂದ—ಗ್ಯಾಲಿಲಿಯೋನು ತನ್ನ ಮೊದಲಿನ ಹೇಳಿಕೆಯು ತಪ್ಪೆಂದು ಎನ್ನಲೆಬೇಕು, ತನ್ನ ನಾಸ್ತಿಕ ವಾದದ ವಿಷಯವನ್ನು ಪ್ರಮಾಣಪೂರ್ವಕವಾಗಿ ಅಲ್ಲಗಳೆಯಲೇ ಬೇಕು, ಮತ್ತು ಇದಕ್ಕೆ ತಪ್ಪಿದಲ್ಲಿ ಮತ್ತು ಅಗತ್ಯವಿದ್ದಲ್ಲಿ ಚಿತ್ರಹಿಂಸೆಪಡಿಸಲು ಸಹ ಹಿಂದು ಮುಂದು ನೋಡತಕ್ಕದ್ದಲ್ಲ—ಇತ್ಯಾದಿ ವಿಷಯಗಳು ಇವನಿಗೆ ಅವಗತವಿದ್ದು ಇದರಿಂದ ಇವನಿಗೂ ಮತ್ತು ಇವನ ಮಗಳಿಗೂ ಅತೀವ ದುಃಖವಾಯಿತು. ವಿಜ್ಞಾನ ವಿಷಯಗಳನ್ನುಳಿದು ಉಳಿದ ವಿಷಯಗಳಲ್ಲಿ ಇವನಿಗೆ ಚರ್ಚನೊಂದಿಗೆ ಮತಭೇದವಿರಲಿಲ್ಲ. ಪ್ರತ್ಯಕ್ಷ ಪ್ರಮಾಣಗಳನ್ನು ಅವರಾದರೂ ಒಪ್ಪುವರೆಂದು ಇವನು ಆಶಿಸಿದ್ದನು.

ಇವನ ಮಿತ್ರರು ಇವನಿಗೆ ಆಧಿಕಾರಿಗಳಿಗೆ ತಲೆಬಾಗಲು ಸಲಹೆ ಕೊಟ್ಟರು. ಬ್ರೂನೋನ ಚಿತ್ರಹಿಂಸೆಯ ಇತಿಹಾಸವು ಇನ್ನೂ ಅಳಿದಿರಲಿಲ್ಲ. ಇವನ ವಿಚಾರಣೆಯು, ಚಿತ್ರಹಿಂಸೆಯ ಬೆದರಿಕೆಯು ಮತ್ತು ಮನಸ್ಸಿಗೆ ವಿಷಾದವನ್ನು ಉಂಟುಮಾಡುವ ಮಗಳ ಪತ್ರಗಳು ಎಲ್ಲವೂ ನಮ್ಮ ಮುದುಕನಾದ ಚರಿತ್ರನಾಯಕನನ್ನು ದಿಙ್ಮೂಢನನ್ನಾಗಿ ಮಾಡಿದುವು. ಆದರೆ ಪರಿಸ್ಥಿತಿಯೂ ಹೀಗೆಯೆ ಸಾಗಿದ್ದರಿಂದ ಇವನು ಜೂನ್ ತಿಂಗಳ ೨೦ನೆಯ ತಾರೀಖಿಗೆ ಕೋರ್ಟಿಗೆ ಕರೆಯಲ್ಪಟ್ಟು ಮುಂದೆ ೨೧ರಿಂದ ೨೪ರ ವರೆಗೆ ಕೋರ್ಟಿನ ಕೊಠಡಿಯಿಂದ ಹೊರಗೇ ಬರಲಿಲ್ಲ. ಈ ಮೂರು ದಿನಗಳಲ್ಲಿ ಏನಾಯಿತೆಂಬುದು ಬೆಳಕಿಗೇ ಬರದ್ದರಿಂದ ಮತ್ತು ಈ ವಿಷಯವಾಗಿ ಇವನಾದರೂ ಏನೂ ಬರದಿಟ್ಟಿಲ್ಲವಾದ್ದರಿಂದ ನಮಗೆ ಹೇಳಲು ಸಾಧ್ಯವಿಲ್ಲ. ಇವನನ್ನು ಚಿತ್ರಹಿಂಸೆಗೆ ಗುರಿಮಾಡಿದರೆಂಬ ವಿಷಯದಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಇವನು ವೇದನಾಯಂತ್ರದಲ್ಲಿ (Rack) ಸಿಕ್ಕಿಸಲ್ಪಟ್ಟನೋ ಎಂಬುದು ಸಂದೇಹಾಸ್ಪದವಿದೆ; ಆದರೆ ಇವನು ಮುಂದೆ ಹರ್ನಿಯಾ ರೋಗದಿಂದ ಬಳಲುವಂತಾಯಿತೆಂದೂ ಮತ್ತು ಇದು ಈ ತೆರದ ಚಿತ್ರಹಿಂಸೆಯ ಪರಿಣಾಮವೆಂದೂ ಹಲವು ತಜ್ಞರು ಅಭಿಪ್ರಾಯಪಡುತ್ತಾರೆ.

ಇದು ಏನೇ ಇದ್ದರೂ ಈಗ ಮಾತ್ರ ಇವನು ಬಳಲಿದನು ಮತ್ತು ತಲೆಬಾಗಿದನು. 'ಈಗ ನಾನು ನಿಮ್ಮ ಕೈಯಲ್ಲಿ ಇದ್ದೇನೆ ಮತ್ತು ನೀವು ಆಜ್ಞಾಪಿಸಿದ್ದನ್ನು ಹೇಳುವೆ!' ಎಂದು ಉಸುರಿದನು. ಅಧಿಕಾರಿಗಳು—ಇವನು ತನ್ನ ಕೃತ್ಯಗಳನ್ನು ಪ್ರಮಾಣಪೂರ್ವಕ ಅಲ್ಲಗಳೆಯಬೇಕು, ಮತ್ತು ತೋರಿಕೆಯದಾದರೂ ಆಜನ್ಮ ಕಾರಾಗೃಹವಾಸನನ್ನು ಅನುಭವಿಸಬೇಕು ಮತ್ತು ವಾರಕ್ಕೆ ಒಂದು ಸಲ ಪಶ್ಚಾತ್ತಾಪಸೂಚಕವಾದ ಏಳು ಸೂತ್ರಗಳನ್ನು ಪಠಣಮಾಡಬೇಕೆಂದು ಆಜ್ಞಾಪಿಸಿದರು. ಇದಾದ ಮೇಲೆ ಇವನು, ಮೊದಲೇ ತಯಾರಿಸಲ್ಪಟ್ಟ ಒಂದು ಹೇಳಿಕೆಯನ್ನು ಏನೂ ಬಿಡದೆ ಓದಿ ತನ್ನ ಸಹಿಯನ್ನು ಕಾಣಿಸಬೇಕೆಂದು ಆಜ್ಞಾಪಿಸಲ್ಪಟ್ಟನು. ಆವರ ಆಶಯವು ಕೆಳಗಿನಂತೆ ಇದೆ:

"ಫ್ಲಾರೆನ್ಸ್ ನಗರವಾಸಿಯೂ ೭೦ ವರ್ಷದವನೂ ಆದ ನಾನು—ಗ್ಯಾಲಿಲಿಯೊ ಗ್ಯಾಲಿಲಿ ಪ್ರಮಾಣಪೂರ್ವಕವಾಗಿ ಹೇಳುವುದೇನೆಂದರೆ:—ಧರ್ಮಗ್ರಂಥದಲ್ಲಿ ನಾನು ವಿಶ್ವಾಸವಿದ್ದವನಿದ್ದೇನೆ ಮತ್ತು ಆದರಂತೆಯೇ ಧರ್ಮಾಧಿಕಾರಿಗಳ ಎಲ್ಲ ಬೋಧನೆಯಲ್ಲಿಯೂ ಮುಂದೆ ಸಹ ವಿಶ್ವಾಸವಿಡುವೆನು. ತಮ್ಮ ಆಜ್ಞೆಯಂತೆ, ಸೂರ್ಯಕೇಂದ್ರ ತತ್ತ್ವವು ಹುರುಳಿಲ್ಲದ್ದರಿಂದ ತ್ಯಜಿಸಿದ್ದೇನಲ್ಲದೆ ಈ ವಿಷಯವಾಗಿ ಸಮರ್ಥನೆಯನ್ನಾಗಲಿ, ಇಲ್ಲವೆ ಬೋಧನೆಯನ್ನಾಗಲಿ ಮಾಡುವುದಿಲ್ಲ. ಈ ಅಭಿಪ್ರಾಯವು ನನಗೆ ತಿಳಿಸಲ್ಪಟ್ಟ ಮೇಲೆ ಇಂತಹ ನಾಸ್ತಿಕ ವಿಷಯದ ಮೇಲೆ ಪುಸ್ತಕವನ್ನು ಬರೆದ ಮೂಲಕ ನಾನು ತಪ್ಪಿತಸ್ಥನೆಂದು ನಿರ್ಣಯಿಸಲ್ಪಟ್ಟಿದ್ದೇನೆ. ಕಾರಣ ತಮ್ಮೆಲ್ಲರಲ್ಲಿ ಇದರಿಂದುಂಟಾಗಬಹುದಾದ ತಪ್ಪು ತಿಳಿವಳಿಕೆಯನ್ನು ದೂರಮಾಡಲೋಸುಗ ನನ್ನ ಎಲ್ಲ ತತ್ತ್ವಗಳನ್ನೂ ಪ್ರಮಾಣಪೂರ್ವಕ ಒಪ್ಪಿ, ಇನ್ನು ಮುಂದೆ ಇಂತಹ ಅಪರಾಧವು ನನ್ನ ಮಾತಿನಲ್ಲಿ ಮತ್ತು ಬರೆಹದಲ್ಲಿ ಬಾರದಂತೆ ದಕ್ಷತೆ ವಹಿಸುವೆ. ಇದಲ್ಲದೆ ಹೀಗೆ ಯಾವನಾದರೂ ಮಾಡಿದಲ್ಲಿ ಅವನನ್ನು ನಿಮ್ಮ ವಶಪಡಿಸುವೆ. ಇದಕ್ಕೆ ನಾನು ತಪ್ಪಿದಲ್ಲಿ ಇಂತಹ ಅಪರಾಧಕ್ಕೆ ತಕ್ಕ ಶಿಕ್ಷೆಗೆ ಒಳಪಡುವೆ. ಈ ಪ್ರಕಾರ ನಾನೇ ಎಂದರೆ 'ಗ್ಯಾಲಿಲಿಯೊ ಗ್ಯಾಲಿಲಿ' ಈ ಪತ್ರಕ್ಕೆ ನನ್ನ ಸಹಿ ಹಾಕಿರುವೆ. ೨೨ ಜೂನ್ ೧೬೩೩."

ಈ ಮೇಲಿನ ಆಶಯದ ಪತ್ರಗಳ ಪ್ರತಿಗಳು ಎಲ್ಲ ಕಡೆಗೂ ಕಳುಹಲ್ಪಟ್ಟುವು. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿಗೆ ಇವುಗಳನ್ನು ಸಾರ್ವಜನಿಕವಾಗಿ ಓದುವ ಆಜ್ಞೆಯಾಯಿತು. ಇದರಂತೆಯೆ ಫ್ಲಾರೆನ್ಸ್ ನಗರದಲ್ಲಿ ಇವನ ಮಿತ್ರರನ್ನು ಆಮಂತ್ರಿಸಿ, ಅವರೆದುರು ಓದಲಾಯಿತು.

ಮುಂದೆ ಹಲವು ದಿನಗಳ ಬಂದಿವಾಸವು ಮುಗಿದಮೇಲೆ ಇವನು ಬಿಡಲ್ಪಟ್ಟನು. ಇದೇ ವೇಳೆಗೆ ಇವನ ಮಗಳು ಮರಣ ಶಯ್ಯೆಯಲ್ಲಿದ್ದಳು. ಆನಳಿಗೆ ತನ್ನ ಮುಪ್ಪಿನ ತಂದೆಯನ್ನು ನೋಡುವ ಆಶೆಯನ್ನು ಬಿಟ್ಟರೆ ಬೇರೆ ಏನೂ ಇರಲಿಲ್ಲ. ತಂದೆ-ಮಗಳ ಭೆಟ್ಟಿಯಾದ ಆರು ದಿನಗಳ ನಂತರ ಈ ಮಗಳು ತೀರಿದಳು. ಈಗ ಮಾತ್ರ ಗ್ಯಾಲಿಲಿಯೊನು ತಗ್ಗಿದನು. ಫ್ಲಾರೆನ್ಸ್ ನಗರದಲ್ಲಿ ಇರಲು ಕೂಡ ಪರವಾನಿಗೆಯು ದೊರೆಯಲಿಲ್ಲ. ಅವನಿಗೆ ಯಾರೂ ಭೆಟ್ಟಿಯಾಗುವಂತಿರಲಿಲ್ಲ. ಹೆಚ್ಚಿನ ಸವಲತ್ತುಗಳನ್ನು ಬೇಡಿದ್ದಾದರೆ ಸೆರೆಮನೆವಾಸವು ತಪ್ಪಿದ್ದಲ್ಲ ನೆಂದು ಬೆದರಿಸಲ್ಪಟ್ಟನು. ಆದರೆ ಇವನ ಬುದ್ಧಿವಿಕಾಸವು ಮಾತ್ರ ದಿನೇ ದಿನೇ ಹೆಚ್ಚುತ್ತ ಪ್ರತಿಭೆಯನ್ನು ಬೀರುವಂತಾಗಿತ್ತು. ಈ ನೇಯಲ್ಲಿ 'ಗತಿವಿಷಯಕ ಸಂಭಾಷಣೆಗಳು' ಎಂಬ ಪುಸ್ತಕವನ್ನು ಬರೆಯುತ್ತಿದ್ದನು. ಈ ಪುಸ್ತಕದ ಮಹತ್ತ್ವವನ್ನು ತಿಳಿಯಲು, ಇದು ಮುಂದೆ ನ್ಯೂಟನ್‌ನು ಪ್ರತಿಪಾದಿಸಬಹುದಾದ ಗತಿವಿಷಯಕ ನಿಯಮಗಳಿಗೆ ತಳಪದಿಯಾಯಿತೆಂದು ಹೇಳಿದಲ್ಲಿ—ಸಾಕಾಗುವುದು. ಇದು ೧೬೩೬ ರಲ್ಲಿ ಬೇರೆಡೆಗೆ ಪ್ರಕಟವಾಯಿತು.

ತಾತ್ತ್ವಿಕವಾಗಿ ಸೆರೆಮನೆವಾಸದಲ್ಲಿದ್ದು ಆತನ ಮಗನೇ ಇಂತಹ ಸೆರೆಮನೆಗೆ ಅಧಿಕಾರಿಯೆಂದು ನಿಯಮಿತನಾಗಿದ್ದ. ದೇಹದಿಂದ ದಿನೇ ಹೆಚ್ಚು ಜೀರ್ಣವಾಗುತ್ತಿದ್ದ ಗ್ಯಾಲಿಲಿಯೊನು ಇದೇ ವೇಳೆಗೆ ತನ್ನ ದೃಷ್ಟಿಯನ್ನು ಕಳೆದುಕೊಂಡು ಕುರುಡನಂತಾದನು. ಹಿಂದಿನ ಎಲ್ಲ ಆಘಾತಗಳಂತೆ ಈಗಲೂ ತಾಳ್ಮೆಯಿಂದ ಸಹನಮಾಡಿದರು. ೧೬೩೮ ರಲ್ಲಿ ಈ ವಿಷಯವಾಗಿ ಅವನು ತನ್ನ ಮಿತ್ರನಿಗೆ " ಕಳೆದ ತಿಂಗಳಿಂದ ನಿನ್ನ ಮಿತ್ರನೂ ಸೇವಕನೂ ಅವ ಗ್ಯಾಲಿಲಿಯೊನು ಸಂಪೂರ್ಣವಾಗಿ ಕುರುಡನಾಗಿದ್ದಾನೆ—ಈ ಕಾರಣದ ದೆಸೆಯಿಂದ ನಾನೇ ನನ್ನ ಶೋಧಗಳಿಂದ, ಪ್ರತ್ಯಕ್ಷ ಪ್ರಮಾಣಗಳಿಂದ, ಹಿಂದಿನ ತತ್ತ್ವಜ್ಞಾನಿಗಳ ವಿಶ್ವಾಸಜನ್ಯ ಜ್ಞಾನವನ್ನೂ ಮೀರಿಸಿ ಸಾವಿರಾರು ಪಟ್ಟು ದೊಡ್ಡದನ್ನಾಗಿಸಿದ ಆಕಾಶ, ಪೃಥ್ವಿ ಮತ್ತು ವಿಶ್ವಗಳು ನನ್ನ ದೇಹವು ಹಿಡಿಯಲು ಬೇಕಿರುವಷ್ಟು ಸಣ್ಣದಾಗಿವೆ. ಇದು ಈಶ್ವರೇಚ್ಛೆಯಾದ್ದರಿಂದ ನಾನು ಇದರಲ್ಲಿಯೆ ಸಂತೋಷಪಡುವೆನು! "

ಇಂತಹ ಪರಿಸ್ಥಿತಿಯಲ್ಲಿ ಮಾತ್ರ ಇವನ ಮೇಲೆ ಹೇರಲ್ಪಟ್ಟ ಹಲವು ಬಂಧನಗಳು ಸಡಲಿದುವು. ಬೇರೆ ಬೇರೆ ಮತ್ತು ದೇಶಾಂತರದ ದೊಡ್ಡ ದೊಡ್ಡ ಜನರು ಇವನನ್ನು ಸನ್ಮಾನಿಸಿ, ಸಮಾಧಾನಪಡಿಸಿ ಇವನ ವಿದ್ವತ್ಪೂರ್ಣ ಸಂಭಾಷಣೆಗಳ ಸುಖವನ್ನು ಅನುಭವಿಸಹತ್ತಿದರು. ಈ ಸಂಕಲ್ಪದಿಂದ ಮುಂದೆ ಕುರುಡನಾಗಲಿರುವ, ೭೯ ವಯಸ್ಸಿನವನಾದ ಆಂಗ್ಲ ಮಹಾಕವಿ **ಮಿಲ್ಟನನು** ಇಂದು ಕುರುಡನಾಗಲಿರುವ ನಮ್ಮ ಗ್ಯಾಲಿಲಿಯೋನ ಭೆಟ್ಟಿಯಾದನು. ಇವನ ಕುರುಡತನಕ್ಕೆ ಈಗ ಕಿವುಡತನವೂ ಕೂಡಿತು ಮತ್ತು ಈಗ ಸಣ್ಣ ಜ್ವರಗಳಾದರೂ ಬರಹತ್ತಿ ಕಡೆಗೆ ೮೬ನೆಯ ಜನವರಿ ೧೬೪೨ನೆಯ ದಿವಸ ೭೮ ವಯಸ್ಸಿನವನಾದ ಗ್ಯಾಲಿಲಿಯೋನು ತನ್ನ ಆಜನ್ಮ ಬಂದಿವಾಸದಿಂದ ವಾರಾದನು.

ಅವನಿಗೆ ಸಮಾಧಿ ಮಾಡಕೂಡದೆಂದು ಅಧಿಕಾರಿಗಳ ಪನ್ನ ಕಡೆಗೆ ಸ್ಮಾರಕದಿಂದ ಸಮಾಧಿಯಾಗಬೇಕೆಂದು ಆಜ್ಞೆಯಾಯಿತು. ಹೀಗೆ ಮಾಡಿಯಾದರೂ ಗ್ಯಾಲಿಲಿಯೊ ಮತ್ತು ಅವನ ಗ್ರಂಥಗಳ ನಿರ್ನಾಮ ಮಾಡುವ ವಿಚಾರವಿದು. ವಾಪ ಮುಂದೆ ಒಂದು ವರುಷದೊಳಗೇ ಇವನ ಕೆಲಸವನ್ನು ಮುಂದರಿಸಲು ಮತ್ತು ಇವನ ವಿಚಾರಗಳಿಗೆ ಸ್ಮಾರಕವನ್ನು ಮಾಡುವ ಜಗದ್ವಿಖ್ಯಾತ ನ್ಯೂಟನ್‌ನು ಜನ್ಮ ತೆತ್ತುವನೆಂದು ಇವರಿಗೇನು ಗೊತ್ತು. ಅವನ ಮೃತ್ಯುಪತ್ರವೂ ಮಾನ ಮಾಡಲ್ಪಡಲಿಲ್ಲ. ಅವನ ಮನೆಯೂ ಅವನು ಬರೆದ ಅವಶೇಷಗಳಿಗಾಗಿ ಶೋಧಿಸಲ್ಪಟ್ಟಿತು.

'ಬೈಬಲ್ಲಿನ ಉದ್ದೇಶವು ನಮಗೆ ಸ್ವರ್ಗಕ್ಕೆ ಹೋಗುವ ಹಾದಿಯನ್ನು ತೋರಿಸುವುದಿದೆಯೇ ಹೊರತು ಮೇಲಿನ ವಿಶ್ವದ ಗತಿಯನ್ನು ಅದು ಹೇಳಲಾರದು' ಎಂಬ ಅಭಿಪ್ರಾಯದ ಗ್ಯಾಲಿಲಿಯೊನು ಪ್ರಾಯೋಗಿಕ ವಿಜ್ಞಾನದ ಜನಕನೆನ್ನುವುದಕ್ಕೆ, ಪೀಸಾ ನಗರದಲ್ಲಿ ಇಂದಿಗೂ ಇರುವ ಮತ್ತು ಅರಿಸ್ಟಾಟಲನ ಅನುಯಾಯಿಗಳನ್ನೂ ಅವನ ಸಿದ್ಧಾಂತಗಳನ್ನೂ ಹಿಮ್ಮೆಟ್ಟಿಸುವ ಮತ್ತು ಹುರುಳಿಲ್ಲವೆಂದು ತೋರಿಸುವ ಮೊದಲನೆಯ ಪ್ರಯೋಗದ ಸ್ಥಳವಾದ **ಬಾಗಿದ ಗೋಪುರವು** ಇವನ ಸ್ಮಾರಕವಲ್ಲದೇ ಮತ್ತೇನು? ನಾವೆಲ್ಲರೂ ಇವನ ಚರಿತ್ರೆಯಲ್ಲಿಯ ಮುಖ್ಯ ಅಂಶಗಳನ್ನೂ ಗಮನಿಸಿ ಇವನಿಂದ ಜಗತ್ತಿಗೆ ಬಂದಿರುವ ಜ್ಞಾನವನ್ನು ತಿಳಿಯುವಂತಾದಲ್ಲಿ ಅವನ ಸ್ಮಾರಕವನ್ನು ಮಾಡಿದಂತಾಗದೇ?

ಸಾಹಿತ್ಯ ವಿಹಾರ

(೪೪ನೆಯ ಪುಟದಿಂದ ಮುಂದುವರಿದುದು)

ಸಿಂಹಾವಲೋಕನವು ಈ ಸಂಚಿಕೆಯಲ್ಲಿ ಪ್ರಕಟವಾಗದೆ ಇದ್ದುದು ಆಶ್ಚರ್ಯಕರವಾಗಿದೆ. ಕಥೆ, ಕಾದಂಬರಿ, ನಾಟಕ, ಚರಿತ್ರೆಗಳೆಲ್ಲವುಗಳ ವಿಷಯದಲ್ಲಿಯೂ ಈ ತೆರದ ಲೇಖನಗಳನ್ನು ಬರೆಯಿಸಿಕೊಂಡ ಸಂಪಾದಕರು ಇದನ್ನೂ ಮಾಡಿದ್ದರೆ, ಇಂದಿನ ಸಾಹಿತ್ಯದ ಎಲ್ಲ ಬಗೆಗಳಲ್ಲಿಯೂ ಸಾಧಿಸಿದ ಪ್ರಗತಿ ಎಷ್ಟು, ಸಾಧಿಸಬೇಕಾದುದೇನು ಇತ್ಯಾದಿಯಾದ ವಿಚಾರಗಳನ್ನು ಸಂಕ್ಷೇಪವಾಗಿಯಾದರೂ ಸಾಹಿತ್ಯ ವಿಭಾಗಗಳ ದೃಷ್ಟಿಯಿಂದ ಸಮಗ್ರವಾಗಿ ಇಟ್ಟಂತಾಗುತ್ತಿತ್ತು. ಅದರಂತೆ ಈ ಕಾಲು ಶತಮಾನದಲ್ಲಿ ವಿಮರ್ಶೆಯ ಬೆಳೆವಣಿಗೆಯ ಎಣಿಕೆಯನ್ನೂ ಹಾಕಬಹುದಾಗಿತ್ತು. ಆದರೂ ಕೆಲವು ಕಾರಣಗಳಿಗಾಗಿ ಹಿಂದುಳಿದ ಲೇಖನಗಳನ್ನು ಮುಂಬರುವ ಸಂಚಿಕೆಯಲ್ಲಿ ಪ್ರಕಟಿಸುವೆವೆಂದು ಕೊಟ್ಟ ಸಂಪಾದಕರ ಆಶ್ವಾಸನದಲ್ಲಿ ಇಲ್ಲಿ, ನಮಗೆ ಕಡಮೆ ಎನಿಸಿದ ಲೇಖನಗಳನ್ನು ಅಲ್ಲಿ ಕಾಣಬಹುದೆಂಬ ಭರವಸೆಯನ್ನಿಟ್ಟುಕೊಳ್ಳಬಹುದಾಗಿದೆ.

× × × ×

" ಕನ್ನಡಕ್ಕೊಬ್ಬರೆ ಕೈಲಾಸಂ " ಎಂದು ಯಾರೋ ಹೇಳಿದರು. ಮಾತು ತೀರ ಯಥಾರ್ಥವಾಗಿದೆ. ಎರಡರ್ಥದಲ್ಲಿ ಎಂದೂ ಹೇಳಬಹುದು. ಕನ್ನಡಕ್ಕೆ ಕೈಲಾಸಂ ಅವರಂಥ ಪ್ರತಿಭಾವಂತರು ಒಬ್ಬರೇ ಎಂಬುದು ನಿಜವಿದ್ದಂತೆ ಕೈಲಾಸಂ ಅವರಂಥವರು ಕನ್ನಡಕ್ಕೆ ಮಾತ್ರ ಎಂಬ ವಿಶಾಲಾರ್ಥದಲ್ಲಿಯೂ ಈ ಮಾತು ನಿಜವಾಗಿದೆ ಎಂದೂ ಹೇಳಬಹುದು. ಹೊಗಳಿಕೆಗೆ ಹಂಬಲಿಸದ, ತೆಗಳಿಕೆಗೆ ತಲೆಬಾಗಿಸದ ಈ ಪ್ರತಿಭಾವಂತನ ನಾಲಗೆಯ ಮೇಲೆ ಹತ್ತಾರು ವರ್ಷ ಕುಣಿಯುತ್ತಿದ್ದ ನಾಟಕಗಳನ್ನು ಕೆಲವು ಮಿತ್ರರು ಬರೆವಣಿಗೆಯ ಬಲೆಗುನ್ನೊಡ್ಡಿ ಅವುಗಳನ್ನು ಇದೀಗ ಹಿಡಿದುಹಾಕುತ್ತಿರುವುದು ಕನ್ನಡದ ಭಾಗ್ಯ. ಹೊಸ ತೆರದ ನಾಟಕವನ್ನು ಕನ್ನಡಕ್ಕೆ ಕೊಟ್ಟ, ಏಕಾಂಕನಾಟಕ ತಂತ್ರವನ್ನು ಕನ್ನಡದಲ್ಲಿ ಮೊದಲು ಮಾಡಿದ ಕೈಲಾಸಂ ಅವರ ಹೆಸರು ಎಷ್ಟೋ ಕಾಲ ಜನರ ಎಣಿಕೆಗೆ ದೂರವಾಗಿತ್ತು. ಇದಕ್ಕೆ ಮುಖ್ಯ ಕಾರಣ ಅವರ ಅಪೂರ್ವವಾದ ವ್ಯಕ್ತಿತ್ವವೆಂದೇ ಹೇಳಬೇಕು. ಅವರ ಪ್ರತಿಭೆ ಮನ್ನಣೆಯನ್ನಪೇಕ್ಷಿಸುತ್ತಿರಲಿಲ್ಲ. ಕಳೆದ ವರ್ಷ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷ ಪದವಿ ಅವರನ್ನರಸುತ್ತ ಹೋದರೂ ಅವರ " ಪತ್ತೆ " ಯಾಗಲಿಲ್ಲ. ಈಗ ಅವರ ಅರುವತ್ತನೆಯ ಹುಟ್ಟುಹಬ್ಬವನ್ನು ಕನ್ನಡ ಜನ ಆಚರಿಸುತ್ತಿರುವುದು ಅವರ ಪ್ರತಿಭೆಗೆ ಮನ್ನಣೆಯಲ್ಲದೆ ಜನ ಎಚ್ಚತ್ತುದರ ಸೂಚಕವೂ ಆಗಿದೆ.

ಒಂದೆರಡು ಕಾಲ್ಪನಿಕ ಪಾತ್ರಗಳ ಬಾಯಲ್ಲಿ ಕೃತಕವಾದ ನಾಲ್ಕು ಮಾತುಗಳನ್ನಿಟ್ಟರೆ ನಾಟಕವಾಯಿತೆಂದು, ಬಗೆಯುವವರು ಕೈಲಾಸಂ ಅವರ ನಾಟಕ–ನಾಟಕೆಗಳನ್ನು ಸೂಕ್ಷ್ಮವಾಗಿ ಬಿಡಿಸಿ ನೋಡಬೇಕು. ಕುರಲನಾದ ಸಂಭಾಷಣೆಯು ನಾಟಕಕ್ಕೆ ಒಂದು ಒಳ್ಳೆಯ ಸಾಧನ ಮಾತ್ರ. ನಾಟಕದ ಜೀವಾಳ ಅದು ಚಿತ್ರಿಸುವ

ಸನ್ನಿವೇಶದಲ್ಲಿ; ಆ ಸನ್ನಿವೇಶವಾದರೂ ವಾಸ್ತವತೆಗೆ ದೂರವಾಗಿರದೆ, ನೋಟಕರ ಕುತೂಹಲವನ್ನು ಕಾಯ್ದುಕೊಳ್ಳುವಂತೆ ಹೆಜ್ಜೆಹೆಜ್ಜೆಗೂ ಹೊಸ ಸನ್ನಿವೇಶಗಳ ಮುಂಬರವನ್ನು ಸೂಚಿಸುವಂತಹದಾಗಿರಬೇಕು. ಕೈಲಾಸಂ ಅವರ ಯಾವ ಕೃತಿಯನ್ನು ನೋಡಿದರೂ ಆದರಲ್ಲಿ ಈ ಗುಣಗಳು ಸ್ಪಷ್ಟವಾಗಿ ಕಾಣುವುವು. ಒಂದು ಸನ್ನಿವೇಶ ನಾಟಕದಲ್ಲಿ ಉಪಯೋಗಿಸಲು ಯೋಗ್ಯವಾಗಬೇಕಾದಲ್ಲಿ ಆದರಲ್ಲಿರಬೇಕಾದ ಸ್ವಾಭಾವಿಕತೆ ಒಂದು ಕುತೂಹಲದ ಕವಚವನ್ನು ಧರಿಸಬೇಕಾಗುವುದು. ಮುಂದೆ ನಡೆಯಬೇಕಾದುದು ಎಷ್ಟೋ ಮಟ್ಟಿಗೆ ನೋಟಕನ ಎಣಿಕೆಗೆ ಸರಿಹೋಗಬಹುದಾದರೂ, ಅವನ ಎಣಿಕೆಯನ್ನು ಮೀರಿಸುವ ಕೆಲವು ಅಂಶ ಆ ಸನ್ನಿವೇಶದಲ್ಲಿಯೂ ಅದನ್ನ ಬೆಳೆಸಿಕೊಂಡು ಹೋಗುವ ನಾಟಕಕಾರನ ಕೌಶಲದಲ್ಲಿಯೂ ಇದ್ದೇ ಇರಬೇಕು. ಒಂದು ನಾಟ್ಯಸನ್ನಿವೇಶಕ್ಕೆ ಅನಿವಾರ್ಯವಾದ ಈ ಗುಣಗಳಿಂದಲ್ಲದೆ ಕೈಲಾಸಂ ಅವರ ಮಿಂಚಿನ ಮಾತುಗಳಿಂದ, ಸಹಜವಾದ ಹಾಸ್ಯದಿಂದ, ಆ ಹಾಸ್ಯದ ಹಿಂದೆ ಹುದುಗಿಕೊಂಡಿರಬಹುದಾದ ಮರುಕ-ಮನೋವ್ಯಥೆಗಳಿಂದ, ಅವರ ಕೃತಿಗಳು ಓದುಗರ ಮನಸ್ಸನ್ನು ತಟ್ಟನೆ ಸೆಳೆದರೆ ಯಾವ ಆಶ್ಚರ್ಯವೂ ಇಲ್ಲ. ಸಂಭಾಷಣೆಗಳಲ್ಲಿಯ ಇಂಗ್ಲೀಷಿನ ಪ್ರಮಾಣ ಕನ್ನಡ ಓದುಗರನ್ನು ಕೆಲವು ವೇಳೆ ಕೆರಳಿಸಬಹುದು. ಮಾತುಗಳನ್ನು ಬರೆಯುವ ಒತ್ತಕ್ಷರಗಳ ಸುಗ್ಗಿ ಸಮಾಂಭಗಳು ಸಾಮಾನ್ಯ ಓದುಗನಿಗೆ ಹಲ್ಲುನೋವನ್ನಲ್ಲದಿದ್ದರೂ ನಾಲಗೆ ನೋವನ್ನುಂಟುಮಾಡಬಹುದು. ಆದರೂ ಕೈಲಾಸಂ ಎಂದರೆ ನಾಟಕ. ನಾಟಕವೆಂದರೆ ಕೈಲಾಸಂ! ಅವರ "ಟೊಳ್ಳು ಗಟ್ಟಿಯಲ್ಲಿ" ಯಲ್ಲಿಯ ಗುಂಡೂರಾಯನ ಒಂದೆರಡು ಮಾತುಗಳ ಮೇಲಿಂದಲೇ ಅವರ ನಾಟಕದ ವಿಸ್ತಾರವನ್ನು, ವೈವಿಧ್ಯವನ್ನು, ಉದ್ದೇಶವನ್ನು, ಕಲೆಗಾರಿಕೆಯನ್ನು ನಾವು ಕಾಣಬಹುದು. "ಸುಬ್ಬಾ—ನಾನು ಲೆಕ್ಚರ್ದಲ್ಲಿ ಏನೇನು ಬಗುಳ್ಬೇಕೂ ಅಂತಿದ್ನೋ ಅದ್ನೆಲ್ಲಾ ಇವ್ನ ಬಾಯಿಂದ ಬಗುಳಿಸಿ ಬಿಟ್ಟಿದ್ದೇನೆ." ಎಂದು ಹೇಳುವವನಿಗೆ ನಾಟಕದ ಮುಖಾಂತರವಾಗಿ ಉಪನ್ಯಾಸ ಹೇಳುವ ಧೈರ್ಯವಿದೆಯಲ್ಲದೆ, ಜನರಿಗೆ ಬೇಸರವನ್ನುಂಟುಮಾಡದೆ ಅವರು ಅದನ್ನು ಕೇಳಿಕೊಳ್ಳುವಂತೆ ಮಾಡುವ ಕೈವಾಡವೂ ಇದೆ.

\+ + + +

ಮನೋಹರಗ್ರಂಥಮಾಲೆಯ "ಶತಗ್ರಂಥೋತ್ಸವ"ದ ಕಾಲಕ್ಕೆ ಕಾದಂಬರಿ, ಕತೆ, ನಾಟಕ, ಏಕಾಂಕ, ವ್ಯಕ್ತಿಚಿತ್ರ, ಪ್ರಬಂಧ, ಕಾವ್ಯ ಮೊದಲಾದ ಸಾಹಿತ್ಯದ ಬೇರೆ ಬೇರೆ ಬಗೆಗಳನ್ನು ಕುರಿತಾದ ಬರೆವಣಿಗೆಗಳ ಅನೇಕ ಮುಖವಾದ ಸ್ಪರ್ಧೆಗಳನ್ನು ಏರ್ಪಡಿಸಿ, ಆಕರ್ಷಕವಾದ ಬಹುಮಾನಗಳನ್ನು ಮುಂದಿರಿಸಿ, ನಾಡಿನ ಬರೆಹಗಾರರಿಗೆ ಒಂದು ಒಳ್ಳೆಯ ಸಂಧಿಯನ್ನು ಕಲ್ಪಿಸಿ ಕೊಡುವ ಅಪೇಕ್ಷೆಯನ್ನು ಶ್ರೀ. ಜಿ. ಬಿ. ಜೋಶಿಯವರು ಮಾಡಿದ್ದು ಅಭಿನಂದನೀಯ. ಹೊಳೆಬರೆವಣಿಗೆಗೆ ಉತ್ತೇಜನವಿಲ್ಲವೆನ್ನುವವರು ಇತ್ತ ಗಮನಿಸಬೇಕು. ಯುದ್ಧಕಾಲದ ಕಾಗದ-ಕಟ್ಟುನಿಟ್ಟುಗಳು ಒಂದೊಂದು ದೂರವಾಗಹತ್ತಿದಂತೆ ಕನ್ನಡ ಪುಸ್ತಕಗಳ ಪ್ರಕಾಶನ ಪ್ರಮಾಣವು ಇನ್ನಾದರೂ ಬೆಳೆಯಬಹುದೆಂಬ ಆಶೆ ಶ್ರೀ. ಜೋಶಿಯವರ ಸ್ತುತ್ಯವಾದ ಉಪಕ್ರಮದ ಮೂಲಕವಾಗಿ ಫಲಿಸಬಹುದಾಗಿದೆ. ಈ ಶತಗ್ರಂಥೋತ್ಸವವನ್ನು ನಡೆಯಿಸುವುದರ ಉದ್ದೇಶ ನಮ್ಮ ಸಾಹಿತ್ಯದ ಗತಿ ಇನ್ನಷ್ಟು, ತೀವ್ರವಾಗಲಿ ಎಂಬ ಬಯಕೆಯೇ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದು ಅವರ ಹಂಬಲಕ್ಕೆ ನಿದರ್ಶನವಾಗಿದೆ. ಕನ್ನಡದ ಹೊಸ-ಹಳೆಯ ಲೇಖಕರಿಲ್ಲರೂ ಮೇಲಾಟದಲ್ಲಿ—ಮೇಲಾಟಕ್ಕಾಗಿಯಲ್ಲದಿದ್ದರೂ ಅದರ ಮುಖಾಂತರವಾಗಿ ಸಾಹಿತ್ಯಕ್ಕೊಂದು ಕಾಣಿಕೆಯನ್ನು ಕೊಡುವ ಬುದ್ಧಿಯಿಂದಾದರೂ—ಭಾಗ ವಹಿಸಬೇಕೆಂದು ಇಲ್ಲಿ ಸೂಚಿಸಬಯಸುತ್ತೇನೆ. ವಿಶೇಷವಾಗಿ ಹೊಸ ಬರೆಹಗಾರರಿಗೆ ಇದೊಂದು ಅಪೂರ್ವ ಸಂಧಿ. ಹಳೆಯ ಬರೆಹಗಾರರಿಗೂ ಅಷ್ಟೇ—ತಾವು ಸಾಹಿತ್ಯಕ್ಷೇತ್ರದಲ್ಲಿಯೂ "ಸಿಂಚಣಿ"ಯನ್ನು ಪಡೆದಿಲ್ಲವೆಂದು ತೋರಿಸಿಕೊಡಬೇಕಾಗಿದ್ದರೆ! ಕಳೆದ ಸುಮಾರು ೧೫ ವರ್ಷಗಳಲ್ಲಿಯ ಹೊಸಗನ್ನಡದ ಸಾಹಿತ್ಯ ನಿರ್ಮಿತಿಗೆ ಮನೋಹರ ಗ್ರಂಥಮಾಲೆಯು ನೀಡಿದ ಸಹಾಯ, ಸಹಾನುಭೂತಿ, ಪ್ರೇರಣೆಗಳು ವಿಶೇಷವಾಗಿ ಆದರಣೀಯವಾಗಿದೆ. ಅದೇ ಕೆಲಸವನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಮುಂದುವರಿಸಬೇಕೆಂದಿರುವ ಜಿ. ಬಿ. ಯವರ ಜೊತೆಯಲ್ಲಿ ಸಣ್ಣದೊಡ್ಡ ಲೇಖಕರೆಲ್ಲರೂ ಧಾರಾಳವಾಗಿ ಸಹಕರಿಸುವರೆಂಬ ಭರವಸೆ ನನಗಿದೆ.

× × × ×

ಶ್ರೀ. ಜೋಶಿ ಭೀಮಸೇನರಾಯರ ನೇತೃತ್ವದಲ್ಲಿ ದಿವಂಗತ ಕೆರೂರ ವಾಸುದೇವಾಚಾರ್ಯರ ನಲ-ದಮಯಂತಿ ನಾಟಕವು ಬಾಗಲಕೋಟೆ, ಹುಬ್ಬಳ್ಳಿಗಳಲ್ಲಿ ರಂಗಭೂಮಿಯ ಮೇಲೆ ಬಂದಿತು. ಸಂಗೀತ ಈ ನಾಟಕದ ವೈಶಿಷ್ಟ್ಯ. ಕಥೆ ಪುರಾಣಕ್ಕೆ ಸಂಬಂಧಪಟ್ಟದ್ದೆಂದೂ, ನಾಟಕದ ತಂತ್ರಹಳೆಯದೆಂದೋ ಈ ಪ್ರಯೋಗಗಳು ಜನರ ಮೆಚ್ಚಿಗೆಯನ್ನೂ ಬಯಸಿದಷ್ಟು ಪ್ರಮಾಣದಲ್ಲಿ ಪಡೆಯದೆ ಇದ್ದಿರಬಹುದಾದರೂ, ಕನ್ನಡ ಸಾಹಿತ್ಯ ಹೊಸದಾರಿಗಳಲ್ಲಿ ಕಾಲಿಡುತ್ತಿದ್ದಾಗ್ಗೆ ಧೈರ್ಯವಾಗಿ ಮುಂದುವರಿದು ಕಥೆ, ಕಾದಂಬರಿ, ನಗೆಬರೆಹಗಳನ್ನು ನೀಡಿದ ವಾಸುದೇವಾಚಾರ್ಯರ ಸ್ಮೃತಿಗೊಂದು ಕಾಣಿಕೆಯೆಂದಾದರೂ ಈ ನಾಟಕದ ಪ್ರಯೋಗವನ್ನು ಮಾಡಿದ್ದು ಯೋಗ್ಯವಲ್ಲದೆ ಅಭಿನಂದನೀಯ.

ಹೆಚ್ಚು ಪುಟಗಳು! ದೀಪಾವಳಿಯ ವಿಶೇಷ ಸಂಚಿಕೆ! ಆಕರ್ಷಕ ಚಿತ್ರಗಳು!

(ನವಂಬರ ೧೯೪೫)

ಜಾಹೀರಾತುದಾರರಿಗೆ ಸುಸಂಧಿ!
ಮುಂಚಿತ ಸತ್ವ್ಯವಹಾರ ಮಾಡಿ
ಸ್ಥಳಕಾದಿರಿಸಿಕೊಳ್ಳಬೇಕು

ಏಜೆಂಟರು ಗಮನಿಸಬೇಕು!
ಹೆಚ್ಚಿನ ಪ್ರತಿಗಳು ಬೇಕಿದ್ದಲ್ಲಿ
ಮೊದಲೇ ತಿಳಿಸಬೇಕು.

ನಾಲ್ಕೂ ನಿಟ್ಟಿನ ನೋಟ

ಪ್ರಲಯಶಾಂತಿ

ಯುರೋಪದಲ್ಲಿ ಯುದ್ಧ ಮುಗಿದ ಮೂರೇ ತಿಂಗಳುಗಳ ಅವಧಿಯಲ್ಲಿ ಜಪಾನವು ಶರಣು ಬಂದೀತೆಂದು ಅನೇಕರು ಎಣಿಸಿರಲಿಲ್ಲ. ಶಾಂತಿಸಾಗರದ ಯುದ್ಧ ಬಹುದಿನ ನಡೆಯಲಿಕ್ಕಿಲ್ಲವೆಂಬ ಅಂಬೋಜಿದ್ದರೂ, ಸಮಾಪ್ತಿಯು ಇಷ್ಟು ಸಮೀಪ ಎಂದು ಕಲ್ಪನೆ ಇದ್ದಿರಲಿಲ್ಲವಾದ್ದರಿಂದ, ಜನತೆಗೆ ಅನಿರೀಕ್ಷಿತತೆಗಾಗಿ ಇನ್ನಿಷ್ಟು ಆನಂದವಾಗಿದೆ. ಮಿತ್ರರಾಷ್ಟ್ರಗಳು ತಮ್ಮ ವಿಜಯೋತ್ಸವವನ್ನು ವಿಜೃಂಭಣೆಯಿಂದ ಜರುಗಿಸಿದುವು. ಹಿಟ್ಲರನನ್ನು ಹಣ್ಣು ಮಾಡಿದ ರಶಿಯಾದ ಸೈನ್ಯಬಲವೂ ಜಪಾನನ್ನು ಇದಿರಿಸಿತೆಂಬುದಕ್ಕಾಗಿ, ಇಲ್ಲವೆ ಪರಮಾಣುಪ್ರಲಯ (Atom Bomb) ಕ್ಕೆ ಜಪಾನವು ಹೆದರಿತೆಂದಾಗಿ, ಇಲ್ಲವೆ ಜಪಾನದ ಸಾರ್ವಭೌಮನು ಅತ್ಯಂತ ಕರುಣೆಯಿಂದ (?) ಲೋಕವಿನಾಶವನ್ನು ತಡೆದನೆಂದಾಗಿ— ಹೀಗೆ ಅನೇಕರು ಯುದ್ಧಸಮಾಪ್ತಿಗಾಗಿ ಅನೇಕ ಕಾರಣಗಳನ್ನು ತೋರಿಸುತ್ತಲಿದ್ದಾರೆ. ಆದರೆ ಆ ಮಾತು ಮಹತ್ತ್ವದ್ದಲ್ಲ, ಮುಖ್ಯವೂ ಅಲ್ಲ. ಇಡಿಯ ಜಗತ್ತಿನ ಜನಾಂಗಗಳೆ ಆತ್ಮಹತ್ಯೆಯನ್ನು ಮಾಡಿಕೊಳ್ಳುವುವೆಂಬ ಹೆದರಿಕೆ, ಯನ್ನು ದಿನದಿನಕ್ಕೆ ಸಮರ್ಥಿಸುತ್ತಲಿದ್ದ ಯುದ್ಧವು ಮುಗಿಯಿತು, ಅನಿರೀಕ್ಷಿತವಾಗಿ ಅನಿರ್ಬಂಧವಾಗಿ ಕೊನೆಗೊಂಡಿತು ಎಂಬುವೆ ಮುಖ್ಯ ಸಂಗತಿ.

ಯಾರದು ಹೊಣೆ?

ಯುದ್ಧ ಮುಗಿದುದಕ್ಕೆ ಕಾರಣವನ್ನು ಹುಡುಕುವುದು ಎಷ್ಟು ಅನವಶ್ಯವೊ ಅಷ್ಟೇ ಯುದ್ಧ ಪ್ರಾರಂಭವಾದುದರ ಕಾರಣವನ್ನು ಹುಡುಕುವುದೂ ಅನವಶ್ಯ ಎಂದು ನಮ್ಮ ಅಭಿಪ್ರಾಯ. ಯುದ್ಧದ ಕೊನೆ ಸಮೀಪಿಸಿದಂತೆ 'ಯುದ್ಧಾಪರಾಧಿ'ಗಳ ಪಟ್ಟಿಯನ್ನು ತಯಾರಿಸುವ ಸಿದ್ಧತೆ ನಡೆದಿದೆಯಷ್ಟೆ? ಇದರರ್ಥವೇನು? ಹಿಟ್ಲರನಾಗಲಿ ಹಿರೋಹಿಟೊನಾಗಲಿ ಯುದ್ಧವನ್ನು ಪ್ರಾರಂಭಿದವರು, ಅದಕ್ಕಾಗಿ ಅವರನ್ನು ಮತ್ತು ಅವರಿಗೆ ನಿಕಟರಾಗಿ ಸಹಾಯ ಮಾಡಿದವರನ್ನು ಇಡಿಯ ಜಗತ್ತಿಗೆ ಕಾಣುವಂತೆ ಎತ್ತರದ ಶೂಲಕ್ಕೇರಿಸಬೇಕು ಎಂದಲ್ಲವೆ? ಕಾಯಿದೆಪಂಡಿತರು ಈ ಸಂಗತಿಯನ್ನು ಸಮರ್ಥಿಸುತ್ತಿದ್ದಾರೆ; ನಮ್ಮಲ್ಲಿ (ಉದಾಹರಣೆಗಾಗಿ) ಕಮ್ಯುನಿಸ್ಟರು ಕಾಯಿದೆಪಂಡಿತರನ್ನು ಕೂಡ ಮೀರಿಸಿ ಇಂತಹ ನ್ಯಾಯಪ್ರತಿಪಾದನೆಯನ್ನು ನಡೆಯಿಸಿದ್ದಾರೆ. ಸಮಾಜದಲ್ಲಿ ಅಪರಾಧಿಗೆ ದಂಡನೆಗಿಂತ ಶಿಕ್ಷಣ ಮುಖ್ಯ; ಅವನನ್ನು 'ಸಮಾಜದ್ರೋಹಿ ಎಂದು ತಿಳಿಯದೆ ದಾರಿಗೆಟ್ಟ ದಡ್ಡ ಎಂದು ತಿಳಿಯಬೇಕು ಎಂದು ಈ ಪ್ರಗತಿ-ಶೀಲರೆ ವಾದಿಸುವುದಿಲ್ಲವೆ? ಹಾಗಿದ್ದರೆ ಹಿಟ್ಲರನನ್ನಾಗಲಿ ಹಿರೋಹಿಟೊನನ್ನಾಗಲಿ ಶೂಲಕ್ಕೇರಿಸುವುದಕ್ಕಿಂತ ಶಾಲೆಯಲ್ಲಿರಿಸುವುದೇ ಯೋಗ್ಯವಾಗಲಿಕ್ಕಿಲ್ಲವೆ? ಇದಲ್ಲದೆ ವೈಯಕ್ತಿಕ ಅಪರಾಧದಲ್ಲಿ ವ್ಯಕ್ತಿಯ ಹೊಣೆ ಸ್ಪಷ್ಟವಾಗಿರುವುದು. ಯುದ್ಧದಂತಹ ಸಾಮೂಹಿಕ ಸ್ವರೂಪದ ಅಪರಾಧದಲ್ಲಿ ವ್ಯಕ್ತಿಯ ಹೊಣೆ ಅಷ್ಟು ನಿಶ್ಚಿತವಾಗಬಹುದೆ? ಹಿಟ್ಲರನ ಪರರಾಷ್ಟ್ರ ಧೋರಣೆಯಷ್ಟೇ ಚೆಂಬರಲೇನರ ಧೋರಣೆಯೂ ಯುದ್ಧಕ್ಕೆ ಕಾರಣವಾಗಿರುವಾಗ 'ಹೊಣೆ ಯಾರದು? ಎಂಬ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಕೊಡುವುದು ಸಾಧ್ಯವಿಲ್ಲ.

ದಯೆಯಲ್ಲ ದಡ್ಡತನವಲ್ಲ, ದೂರದೃಷ್ಟಿ!

ಯುದ್ಧಾಪರಾಧಿಗಳ ಬೇಟೆಯನ್ನಾಡುವುದು ಯೋಗ್ಯವಲ್ಲ ಎಂಬ ಮಾತನ್ನು ನಾವು ಕೇವಲ ಕುರುಡಾದ ಕರುಣೆಗಾಗಿ ಹೇಳುವುದಿಲ್ಲ, ಆದರಂತೆಯೆ ವ್ಯವಹಾರದ ಇಲ್ಲವೆ ಕಾಯಿದೆಯ ಜ್ಞಾನವಿಲ್ಲದೆಯೂ ಹೇಳುವುದಿಲ್ಲ; ಸಾಮಾಜಿಕ ಅಪರಾಧವು ಸಮಾಜಕ್ಕೆ ಘಾತಕ, ನಿಜ-ಆದರೆ ಅಂತಹ ಪರಿಸ್ಥಿತಿಯಲ್ಲಿ ಅಪರಾಧಿಯನ್ನು ದಂಡಿಸುವುದು ಮುಖ್ಯವೇ? ಇಲ್ಲವೆ ಅಪರಾಧದ ಪುನರಾವೃತ್ತಿಯಾಗದಂತೆ ನೋಡುವುದು ಮುಖ್ಯವೆ? ಪ್ರಾಚೀನಕಾಲದಿಂದಲೂ ಅತ್ಯಂತ ಕ್ರೂರದಂಡನೆಗಳಿಂದ ಕೂಡ ಮಾನವನ ಹಿಂಸಾತ್ಮಕ ಸ್ವಭಾವದ ನಿವೃತ್ತಿಯಾಗಿಲ್ಲ ಎಂಬುದನ್ನು ನಾವು ನೋಡುತ್ತಲಿದ್ದೇವೆ. ಇದಕಾಗಿ ದಂಡನೆಯನ್ನು ಇನ್ನಿಷ್ಟು ಕ್ರೂರಗೊಳಿಸಬೇಕಿಲ್ಲವೆ ಆ ಪದ್ಧತಿಯನ್ನೆ ಬಿಟ್ಟುಕೊಡಬೇಕೆ? 'ಇನ್ನು ಮುಂದಾದರೂ ಯುದ್ಧ ಬೇಡ, ಚಿರವಾದ ಶಾಂತಿ ನೆಲೆಗೊಳ್ಳಲಿ' ಎಂದು ಯತ್ನಿಸುತ್ತಿರುವ ಈಗಿನ ಕಾಲದಲ್ಲಿ ಮೇಲಿನ ಪ್ರಶ್ನೆಯನ್ನು ನಾವು ಅಗತ್ಯವಾಗಿ, ಸ್ಪಷ್ಟವಾಗಿ, ಸತ್ಯವಾಗಿ ಮತ್ತು ತಾತ್ತ್ವಿಕವಾಗಿ ಬಿಡಿಸಲೇಬೇಕು. ಯುದ್ಧಾಪರಾಧಿಗಳ ದಂಡನೆಯಿಂದ ಯುದ್ಧದ ಪುನರಾವೃತ್ತಿಯಾಗುವುದಿಲ್ಲ ಎಂಬ ಭರವಸೆ ಇದೆಯೆ? ಆ ಭರವಸೆ ಇದ್ದಿಲ್ಲವಾದರೆ ಯುದ್ಧಾಪರಾಧಿಗಳಿಗೆ ದೇಹಾಂತದಂಡನೆ ಅವಶ್ಯವೆ?

ಯುದ್ಧವು ಸಾಮಾಜಿಕವಾಗಿದೆ!

೧೯೧೪ರಲ್ಲಿ ಯುರೋಪದ ಮೊದಲಯುದ್ಧ ಮುಗಿಗು ೧೯೩೯ರಲ್ಲಿ ಎರಡನೆಯ ಯುದ್ಧ ಪ್ರಾರಂಭವಾಗುವವರೆಗಿನ ಘಟನೆಗಳನ್ನು ನೋಡಿದರೆ, ಇಂದಿನ ಯುದ್ಧಕ್ಕೆ ಒಂದು ವ್ಯಕ್ತಿಯಾಗಲಿ ಒಂದು ರಾಷ್ಟ್ರವಾಗಲಿ ಕಾರಣವಾಗಿದೆ ಎಂದು ಹೇಳುವಂತಿಲ್ಲ. ವೆರ್ಸಾಯಿ ಒಪ್ಪಂದ, ಅಮೆರಿಕೆಯು ರಾಷ್ಟ್ರಸಂಘದಿಂದ ಹೊರಗುಳಿದುದು, ಯುರೋಪದ ಚಿಕ್ಕ ರಾಷ್ಟ್ರಗಳನ್ನು ಫ್ರಾನ್ಸ್‌ನವು ತನ್ನ ಬಲಪಾಶದಲ್ಲಿ ಸಿಕ್ಕಿಸಿದುದು, ಫ್ರಾನ್ಸ್‌ನ ಹೆಚ್ಚಳಕ್ಕೆ ಇದಿರಾಗಿ ಇಂಗ್ಲಂಡವು ಜರ್ಮನಿಯನ್ನು ಪ್ರೋತ್ಸಾಹಿಸಿದ್ದು, ಮುಂದೆ ಬಲಿಷ್ಠ ರಾಷ್ಟ್ರಗಳಿಗೆ ರಾಷ್ಟ್ರಸಂಘವು ಕೈಗೊಂಬೆಯಾದುದು—ಹೀಗೆ ಒಂದರಿಂದೊಂದು ಬೆಳೆಯುತ್ತ ಅನೇಕ ಸಂಗತಿಗಳು ಕ್ರಮೇಣ ಒಂದುಗೂಡಿ, ಜರ್ಮನ್ ಜನರು ಹಿಟ್ಲರನ ನಾಯಕತ್ವವನ್ನು ಒಪ್ಪುವಂತೆ ಒತ್ತಾಯಗೊಳಿಸಿದುವೆನ್ನಬಹುದು. ಹೀಗಿರುವಾಗ ಯುದ್ಧವನ್ನು ಅನಿವಾರ್ಯ ಮಾಡಿದವನು ಹಿಟ್ಲರನಾದರೂ ಅವನನ್ನು ಅನಿವಾರ್ಯತೆಯ ಮನಃಸ್ಥಿತಿಯಲ್ಲಿ ನೂಕಿದ ಹೊಣೆ ಮಿಕ್ಕ ಎಲ್ಲರದಾಗಿದೆ. ಇದನ್ನೆರಿಯದೆ ಇಂದು ನಾವು ಮತ್ತೆ 'ಸೋತವನೆ ಅಪರಾಧಿ!' ಎಂಬ ತತ್ತ್ವವನ್ನು ಸಾಧಿಸಿದರೆ ಇನ್ನೊಂದು ಸಲ ಗೆದ್ದೇ ಬಿಡುವೆ' ಎಂದು ಸೋತವನಲ್ಲಿ ಯುದ್ಧದ ಆ ಕಾಂಕ್ಷಾಬೀಜವನ್ನೆ ಬಿತ್ತಿದಂತಾಗುವುದು.

ಶಾಶ್ವತ ಶಾಂತಿ

ಜಗತ್ತಿನಲ್ಲಿ ಮಾನವಸಂಸ್ಕೃತಿ ಉಳಿದು, ಬೆಳೆದು ಶಾಂತಿಯು ಶಾಶ್ವತವಾಗಬೇಕಾದರೆ ನಾವು ಈ ದಂಡನೀತಿಯನ್ನು ಬಿಟ್ಟು ಬೇರೊಂದು ಮಾರ್ಗವನ್ನೇ ಅನುಸರಿಸಬೇಕಾಗುವುದು. ಶಕ್ತಿ ಇದ್ದ ರಾಷ್ಟ್ರಗಳಿಗೆ ಸುಖ ಹೆಚ್ಚು ಎಂಬ ಇಪುವರಿಗಿನ ರೂಢಿಯನ್ನೇ ಬಿಟ್ಟು ಕೊಡಬೇಕು. ರಾಷ್ಟ್ರ-ರಾಷ್ಟ್ರಗಳಲ್ಲಿ ಅವಿಶ್ವಾಸ, ಅನಾದರ, ಅಸೂಯೆ ಹುಟ್ಟುವಂತಹ ಯಾವ ಪರಿಸ್ಥಿತಿಯನ್ನೂ ನಾವು ಇರಗೊಡಲಾಗದು. ರಾಷ್ಟ್ರ-ರಾಷ್ಟ್ರಗಳಲ್ಲಿ ಮೇಲ್ಕೀಳ್ಗೀಗಳನ್ನು ಹುಟ್ಟಿಸುವಂತಹ ಯಾವ ಘಟನೆಯನ್ನೂ ನಾವು ಉಳಿಸಕೂಡದು. ಆದಕಾಗಿಯೆ 'ಇಂದಿನ ಯುದ್ಧಾನಂತರ ಜಗತ್ತಿನಲ್ಲಿ ಯಾವ ರಾಷ್ಟ್ರವೂ ದಾಸ್ಯದಲ್ಲಿಯೆ ಉಳಿಯಲಾಗದು' ಎಂದು ಹಟದಿಂದ ಹೇಳಬೇಕಾಗಿದೆ; ಹಿಂದುಸ್ತಾನದ ದೃಷ್ಟಾಂತವನ್ನು ಎಚ್ಚರಿಕೆ ಎಂದು ತೋರಿಸಿ ಹೇಳಬೇಕಾಗಿದೆ. ಚಿಕ್ಕದೆ ಆಗಲಿ, ದೊಡ್ಡದೆ ಆಗಲಿ ಪ್ರತಿಯೊಂದು ರಾಷ್ಟ್ರವು ಸ್ವತಂತ್ರವಾಗಿರಬೇಕಲ್ಲದೆ ಒಂದು ರಾಷ್ಟ್ರವು—ಆಂತರ ರಾಷ್ಟ್ರೀಯ ವ್ಯವಹಾರದಲ್ಲಿ—ಇನ್ನೊಂದು ರಾಷ್ಟ್ರಕ್ಕೆ ಸರಿಸಮಾನವಾಗಿರಬೇಕು. 'ಅದನ್ನು ಳಿದು Big Three, Big Four' ಎಂದು ಹೆಮ್ಮೆಯಿಂದ ಇಡಿಯ ಜಗತ್ತಿನ ಕಾರಭಾರವನ್ನು ನಡೆಯಿಸುತ್ತ ಹೋದರೆ, ಇಂಗ್ಲಂಡ್-ರಶಿಯಾ-ಅಮೆರಿಕೆಗಳು ಹೆಸರು ಬದಲಾಯಿಸಿ ಸಾಮ್ರಾಜ್ಯ ಲಾಲಸೆ ಉಪಭೋಗಿಸತೊಡಗಿದರೆ ಆಟಂ ಬಾಂಬಿನಿಂದ ಕೂಡ ಯುದ್ಧ ತಡೆಯುವುದಿಲ್ಲ. ಇಷ್ಟೇಕೆ? ಅದೇ ಆಟಂ ಬಾಂಬಿನ ವಿಶ್ವಾಸದಿಂದ ಮೂರನೆಯ ಚಾಗತಿಕ ಯುದ್ಧ ರೂಢಿಯ ಇಪ್ಪತ್ತು ವರ್ಷಗಳಿಗಿಂತ ಬಹಳೇ ಮುಂಚಿತವಾಗಿ ಪ್ರಾರಂಭವಾಗಬಹುದು!

ಸುಖದ ದಾರಿ ಎಲ್ಲರಿಗೂ ತೆರೆಯಲಿ!

ಮುಖ್ಯವಾದ ಮಾತೆಂದರೆ, ಒಂದು ರಾಷ್ಟ್ರದಿಂದ ತನ್ನ ಸುಖಕ್ಕೆ ಅಡ್ಡಿಯಾಗಿದೆ ಎಂಬ ಸಂದೇಹಕ್ಕೆ ಆಸ್ಪದ ಉಳಿಯದಂತೆ ನಾವು ಛೀತಿಯನ್ನು ನಡೆಯಿಸಬೇಕು. ನಾತ್ಸಿವಾದವು ರಾಷ್ಟ್ರೀಯ ಸಾಮ್ಯವಾದವಾಗಿದ್ದಿತು. ಇಂದು ಒಡಾಗುತ್ತಿರುವ ಜಗತ್ತಿನಲ್ಲಿ ರಾಷ್ಟ್ರೀಯತೆಯ ಭಾವನೆಗೆ ಹೆಚ್ಚು ಪ್ರೋತ್ಸಾಹ ದೊರೆಯದು. ಈಗ ನಮಗೆ ಅಂತರರಾಷ್ಟ್ರೀಯ ಸಾಮ್ಯವಾದಬೇಕು. ಎಂದರೆ ಆದೊಂದು ಬೇರೆ ಪಕ್ಷ ಎಂದು ತಿಳಿಯಕೂಡದು. ಸುಖಕ್ಕೆ ಅಧಿಕಾರ ಪ್ರತಿಯೊಬ್ಬ ನಾಗರಿಕನಿಗೆ ರಾಷ್ಟ್ರದಲ್ಲಿ ಸಮಾನವಿರಬೇಕು ಎಂಬುದರ ಬದಲಾಗಿ, ಜಗತ್ತಿನ ಪ್ರತಿಯೊಬ್ಬ ನಾಗರಿಕನಿಗೆ ಸಮಾನವಾಗಿರಬೇಕು' ಎಂದು ನಾವು ತಿಳಿಯಬೇಕಾಗಿದೆ ಎಲ್ಲಿಯವರೆಗೆ ಅನೇಕ ಕಾರಣಗಳಿಗಾಗಿ ರಾಷ್ಟ್ರವೆ ಆಡಳಿತದ ಗುಂಪುಗುರುಹಾಗಿ ಉಳಿಯುವುದೊ ಅಲ್ಲಿಯವರೆಗೆ ರಾಷ್ಟ್ರ-ರಾಷ್ಟ್ರಗಳಲ್ಲಿ ಸರಿಸಮಾನತೆ ಉಳಿಯದಿದ್ದಲ್ಲಿ ಜಗತ್ತಿನ ಪ್ರತಿಯೊಬ್ಬ ನಾಗರಿಕನಿಗೆ ಸುಖದ ಸಮಾನಾಧಿಕಾರ ದೊರೆಯದು. ಆ ಅಧಿಕಾರ ದೊರೆಯದ ವರೆಗೆ— ರಣಾಂಗಣದ ನಿರ್ಣಯವೇನೆ ಇದ್ದರೂ - ನಾತ್ಸಿವಾದಕ್ಕೆ ಸರ್ವನಾಶದ ಸೋಲು ದೊರೆತಿಲ್ಲ ಎಂಬುದನ್ನು ನಾವು ಒಪ್ಪಬೇಕಾಗುವುದು.

ಕೂಲಿಕಾರರ ರಾಜ್ಯ?

ಯುದ್ಧಾನಂತರದ ಶಾಂತಿಯ ರೀತಿಯಿಂದ ಇಂಗ್ಲಂಡಿನ ಕೂಲಿಕಾರ ಮಂತ್ರಿಮಂಡಳವು ಎಷ್ಟು ಮಹತ್ತ್ವದ್ದೆನ್ನಿಸಿದೆಯೊ ಅಷ್ಟೇ ಭಾರತದ ಭವಿತವ್ಯತೆಯ ದೃಷ್ಟಿಯಿಂದಲೂ ಆ ಮಂತ್ರಿಮಂಡಳಕ್ಕೆ ಮಹತ್ತ್ವವಿದೆ. 'ರಾಮ ಗೆದ್ದರೇನು, ರಾವಣ ಗೆದ್ದರೇನು?' ಎಂಬ ಅನಾದರದಿಂದ ಕೆಲವರು ಈ ಪ್ರಶ್ನೆಯನ್ನು ನೋಡುತ್ತಲಿದ್ದಾರೆ. ಹಿಂದಿನ ಅನುಭವವೂ ಹಾಗಿದೆ. ನಿಜ. ಆದರೆ ಇಂದು ಯುದ್ಧದಿಂದ ಬುದ್ಧಿಗಲಿಯಬೇಕಾದ ಕಾಲದಲ್ಲಿ ಕೂಲಿಕಾರ ಪಕ್ಷವು ಅಧಿಕಾರಕ್ಕೆ ಬಂದಿದೆ, ಮತ್ತು ಎಲ್ಲ ಹೊಣೆಯನ್ನು ನಿರ್ವಹಿಸುವ ಕಸುವಿನ ಬಹುಮತದಿಂದ ಅಧಿಕಾರಕ್ಕೆ ಬಂದಿದೆ ಈ ಎರಡು ಕಾರಣಗಳಿಗಾಗಿ ಮೇಲಿನ ಅನಾದರ ದೃಷ್ಟಿಯು ಸರಿಯಾದುದೆನ್ನಿಸುವುದಿಲ್ಲ. ಧನವಂತರ ಲಾಲಸೆಗಾಗಿ ಕೋಟಿಗಟ್ಟಲೆ ಕೂಲಿಕಾರರು ರಣಾಂಗಣದಲ್ಲಿ ತಮ್ಮ ಹರಯದ ಬದುಕನ್ನು ಕಳೆದು ಕೊಂಡಿರುತ್ತಾರೆ. ಹೀಗಿರುವಾಗಲೂ ಕೂಲಿಕಾರ ಮಂತ್ರಿಮಂಡಳವು ಸಾಮ್ರಾಜ್ಯಲಾಲಸೆಯನ್ನೆ ಮುಂದುವರಿಸಿದರೆ, ಜಗತ್ತಿನ ಶಾಂತಿ, ಮಾನವ ಸಂಸ್ಕೃತಿ, ಯುರೋಪದ ನಾಗರಿಕತೆ—ಇವು ಮೂರು ಆತ್ಮವಂಚನೆ ಎಂದು ನಾವು ಖಂಡಿತವಾಗಿ ತಿಳಿಯಬಹುದು; ಹಾಗೆ ನಮ್ಮ ಧೋರಣೆಯನ್ನೂ ಕಾರ್ಯನನ್ನೂ ಬದಲಾಯಿಸಿಕೊಳ್ಳಬಹುದು. ಆದರಂತೆಯೆ ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಡದ (ಕೇವಲ ಬಯಸದ ಅಲ್ಲ,) ಕೂಲಿಕಾರ ಮಂತ್ರಿಮಂಡಳವು ಇಂದಿನ ಜಗತ್ತಿನಲ್ಲಿ ನೀತಿಯು ಹೊಣೆಯನ್ನು ಹೊರಲು ಯೋಗ್ಯನಾದುದೆ ಅಲ್ಲ ಎಂದೂ ಹೇಳಬಹುದು.

ಬಿಕ್ಕಟ್ಟನ್ನು ಬಿಡಿಸುವ ಯತ್ನ.

ಕೊನೆಯ ನಿರ್ಣಯವನ್ನು ಹೇಳುವ ಕಾಲವಿನ್ನೂ ಬಂದಿಲ್ಲ. ಸದ್ಯದ ಮಟ್ಟಿಗೆ ಹೇಳುವುದಾದರೆ ಐರು ವರ್ಷಗಳ ಸಂಯುಕ್ತ ಮಂತ್ರಿಮಂಡಳದ ಸಹವಾಸದಿಂದ ಅಂಟಿಕೊಂಡ 'ಚರ್ಚಿಲ್' ಛಾಯೆ' ಕಂಡರೂ, ಅದನ್ನು ಜಾಡಿಸಲು ಕೂಲಿಕಾರ ಧುರೀಣರು ಯತ್ನಿಸುತ್ತಿರುವ ಚಿಹ್ನಗಳಿವೆ. ಪರರಾಷ್ಟ್ರ ಧೋರಣೆಯಲ್ಲಿ ಸ್ವಾತಂತ್ರ್ಯ-ಸಹಕಾರ-ಶಾಂತಿಗಳ ದೃಷ್ಟಿಯನ್ನು ಇಟ್ಟುಕೊಂಡು ಸಾಗುತ್ತಲಿದೆ ಕೂಲಿಕಾರ ಪಕ್ಷದ ರಥ. ಆದೇ ದೃಷ್ಟಿಯಿಂದಲೆ ಹಿಂದುಸ್ತಾನದಲ್ಲಿ ಕೂಡ ತಮ್ಮ ಭವಿತವ್ಯತೆಯನ್ನೇ ನಿರ್ಣಯಿಸುವ ಅಧಿಕಾರ ತಮಗೆ ಇದೆ ಎಂದು ಭಾರತೀಯರು ತಮ್ಮ ಮುಂದಾಳುಗಳನ್ನೂ ಪ್ರತಿನಿಧಿಗಳನ್ನೂ ಆರಿಸಿಕೊಳ್ಳುವಂತೆ ಕೇಂದ್ರ ಮತ್ತು ಪ್ರಾಂತಿಕ ಶಾಸನಸಭೆಗಳ ಸಾರ್ವತ್ರಿಕ ಚುನಾವಣೆಗಳನ್ನು ನಡೆಯಿಸಲು ಈ ಸರಕಾರವು ನಿರ್ಧರಿಸಿದೆ. ಆದರೆ ಈ ಸ್ವಾತಂತ್ರ್ಯವು ಕೇವಲ ತಾತ್ತ್ವಿಕವಾಗಿಯೆ ಉಳಿಯದೆ ಕೂಡಲೆ ದೇಶದಲ್ಲಿ ಎಲ್ಲ ರಾಜಕೀಯ ಕೈದಿಗಳ ಬಿಡುಗಡೆಯಾಗುವುದೆಂದೂ ಭಾಷಣ ಸ್ವಾತಂತ್ರ್ಯ ಆಚರಣೆಯಲ್ಲಿ ಒಪ್ಪಲಾಗುವುದೆಂದೂ ಪತ್ರಿಕೆಗಳ ಮೇಲಿದ್ದ ನಿರ್ಬಂಧ ದೂರಾಗುವುದೆಂದೂ ನಾವು ನಂಬಿದ್ದೇವೆ. ಕಾಂಗ್ರೆಸ್ ಮಂತ್ರಿಮಂಡಳಗಳ ರಾಜೀನಾಮೆಯಿಂದ ಸಿಮ್ಲಾ ಪರಿಷತ್ತಿನ ವರೆಗೆ ದೇಶದಲ್ಲಿ ನೆಲೆಗೊಂಡ ಬುದ್ಧಿಯ ಅನಾಯಕತ್ವವನ್ನು ತೆಗದೊಗೆಯಲು ಸಂಗಾದ ಯೋಜನೆಗಳಲ್ಲಿ ಇದೇ ಮೊದಲನೆಯದೆಂದು ಹೇಳಬಹುದು.

ಡೋಂಗರೆ ಬಾಲಾಮೃತ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಶೇಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ–ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧–೧೬–೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾ... ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ)

ಬಡವರ ಔಷಧಿ ಸರ್ವಿಸ್, ಸಿರಸಿ

ಕನ್ನಡ ನಾಡಿನ ಅತ್ಯುತ್ತಮ, ಸುಸಂಸ್ಕೃತ ಚಲಚ್ಚಿತ್ರಪತ್ರಿಕೆ

ವಾಕ್ಚಿತ್ರ

ಸಂಪಾದಕರು: ಶ್ರೀ. ಮಾ. ನಾ ಚೌಡಪ್ಪ

೩೬ ಪುಟಗಳು :: ಮೂರಾಣೆ

ವಾರ್ಷಿಕ ಚಂದಾ: ಎರಡೂವರೆ ರೂಪಾಯಿ.

●

ಈಗ ಏಜೆಂಟರಿಲ್ಲದೆಡೆಗಳಲ್ಲೆಲ್ಲಾ ಏಜೆಂಟರು ಬೇಕಾಗಿದ್ದಾರೆ.

———— ವಿವರಗಳಿಗೆ ————

ಚಿತ್ರಾ ಏಜೆನ್ಸೀಸ್

೨ ಸುಲ್ತಾನ್‌ಪೇಟೆ :: ಬೆಂಗಳೂರು ನಗರ

ಹೊಸ ಪುಸ್ತಕ

ಪ್ರಸವ ವಿ...

ಬರೆದವರು:

ಡಾ. ದೊಡ್ಡೇರಿ ವೆಂಕಟಗಿರಿ...

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭಿ... ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ ಪ್ರಸವ, ಪ್ರಸವ ನಿರ್ಬಹಣರೀತಿ, ಅಕ್ರಮ ಮತ್ತು ... ಪ್ರಸವ ರೀತಿಗಳು, ಬಾಣಂತೀ ರೋಗಗಳು ಅವುಗಳ... ಗಳು ಶಿಶು-ಬಾಣಂತಿಯರ ರಕ್ಷಣ ಮೊದಲಾದುವನ್ನು... ವಾಗಿಯೂ ಸಚಿತ್ರವಾಗಿಯೂ ವಿವರಿಸುವ ಪುಸ್ತಕ. ಸ... ಳಸಿ ಚಿತ್ರಗಳಿವೆ.

● ಬೆಲೆ: ಎರಡು ರೂಪಾಯಿಗಳು ●

ಮಾರಾಟದ ಪೂರ್ಣಾಧಿಕಾರಿಗಳು

ಮಾಡರ್ನ್ ಔಷಧಾಲಯ

ದೊಡ್ಡಬಳ್ಳಾಪುರ (ಬೆಂಗಳೂರು...

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

ಈ ಮಿನಿ ಮಾಡುವ ಅನುಕೂಲವುಳ್ಳ ಕರ್ನಾಟಕದವರು, ಛರದಿಂದ ಬೆಳೆಯುತ್ತಿರುವ ಈ
ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

ನವ ದೃಷ್ಟಿ ತೊಡಲಿನೆಯ ಪೌಲ್ಯಮಾಪನದಲ್ಲಿ (Valuation) ಬಾಳವನ್ನು ಕಂಡುಹಿಡಿದಲ್ಲದೆ, ದೊಡ್ಡ ಪ್ರಮಾಣಾಯಿದೆಯು
ಚಿಕ್ಕದೆ ಆ ಸಂಸ್ಥೆಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ
ವಾಗಿರಬೇಕಲ್ಲದೆ ಪಾಲಿಸಿದಾರರ ದಾರುದಾರರಿಗೆ ಒಟ್ಟುಗಿಸಿದ ತಕ್ಷಣ ಹಣ (Claim) ವನ್ನು ಸಲ್ಲಿಸಿರುವುದರಿಂದ,
ದಲ್ಲಿ—ಇನ್ನೊಂದು ಸಂಸ್ಥೆಗೂ ಕಿಟ್ಟುಬಾರದು
ಳಿದು Big Thingದ ನಿಲ್ಲಿಗಾಗಿ ಮಲಿಯುವವರೂ ಅತ್ಯವಶ್ಯವಾಗಿ ಈ ಸಂಸ್ಥೆಯವರೂ, ಇದೇ ಸಂಸ್ಥೆಯ ಪಾಲಿಸಿಗಳನ್ನೂ
ಇಡಿಯ ಜಗತ್ತಿನ ಎಲ್ಲಾ ಕಂಪನಿಗಳನ್ನೂ ಕೊಂಡುಕೊಳ್ಳಲೇಬೇಕು.
ಇಂಗ್ಲಂಡ್-ರಶಿಯಾ-ಅ
ಲಾಲಸೆ ಉಪಭೋಗಿ ವಿಮಾಪಟಿಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು.
ಯುದ್ಧ ತಡೆಯುವುದಿ ಬರೆಯಬೇಕು: ಎಂ. ಗೋವಿಂದರಾವ, ಮ್ಯಾನೇಜರ್
ವಿಶ್ವಾಸದಿಂದ ಮೂರ
ವರ್ಷಗಳಿಗಿಂತ ಬಹಳ

ಸುಖದ ದಾರಿ ಎಲ್ಲಿ!



ಮುಖ್ಯವಾದ
ಅಡ್ಡಿಯಾಗಿದೆ ಎಂ
ಭೀತಿಯನ್ನು ನಡೆ
ವಾದವಾಗಿದ್ದಿತು.
ಯತೆಯ ಭಾವ
ಅಂತರರಾಷ್ಟ್ರೀ
ಪಕ್ಷ ಎಂದ
ನಾಗರಿಕ
ಜಗತ್ತಿನ
ನಾವು ಕ
ರಾಷ್ಟ್ರವೆ
ವರೆಗೆ ಗ
ಪ್ರತಿಯೊ
ಲ ಆಧಿ
ಇದ್ದರೂ
ದನ್ನು ಕ

ತಲೆಗೂದಲು ಕಿತ್ತುಗಿದ್ದರೆ ಚಿಂತಿಸಿಗೊಂದು ಬೆಲೆ!
ಹಂಗೆ ಬೆನ್ನಾಗಿರುವುದೆಂತೆರೇನು?

ತಲೆಗೂದಲು ನಿಮ್ಮಗೆ ಯಾವಾಗಲೂ ಸುಟ್ಟಾಗಿ, ಸುಂದರವಾಗಿ ಇರಬೇಕೇ!

ಯಾವಾಗಲೂ ಕಾಪಾಡಲು "ಯುನಿಕೇಶ್" ಉಪಯೋಗಿಸಿರಿ!

ಕಪ್ಪು-ಕಪ್ಪುಗಿರುವ ಬಿಳಿಯ ಕೂದಲು
ಮೂಲ-ಬಣ್ಣಗಳಿಂದ ಚೆನ್ನಾಗಿದ್ದರೆ
ಏನಾಯಿತು? ಕಲೆಗೆ ಕಾರಣವು
ಚೆನ್ನಾಗಿರದಿದ್ದರೆ ನಿನ್ನ ಬೆಲುವಿಗೆ
ಇಬ್ಬರೂ ಅದು ಕೆಡಿಸಿಬಿಡುವುದು.



ಆಯುರ್ವೇದದ ರಸ್ತುಗಳಿಂದ ಮಾಡಿ ಕೊಚ್ಚಿನ್ ಕೆಮಿಯಲ್ಲಿ ತಯಾರಿಸಲಾದ
"ಯುನಿಕೇಶ್" ಎಂಬ ವೈದ್ಯರಿಳಕ ಕೈಲಾಸವನ್ನು ಯಾವಾಗಲೂ ಬಳಸುತ್ತಿದ್ದರೆ,
ನಿಮ್ಮ ತಲೆಯಲ್ಲಿ ಬ್ಯಾಕ್ಟೀರಿಯ ಹುಳಿಯುತ್ತಿದ್ದಾರೆಂಬ್ಗಳನ್ನು ಗಾರೆಯಬೇಡಿರಿ.

ಜೀವಮಿತ್ರ ಮಾರ್ಕೆಟಿಂಗ್ ಕೆಮಿಕಲ್ಸ್ ಲಿ. ಅಹಮ್ಮದನಗರ

ಚಿತ್ರಾ

ಪುಟ ೮] ಅಕ್ಟೋಬರ್ ೧೯೪೫ [ಸಂಚಿಕೆ ೫

—: ಈ ಸಂಚಿಕೆಯಲ್ಲಿ :—

ಕವಳು (ಸಣ್ಣಕತೆ) ೧೨೭
ರಮಾಕಾಂತ ವೇಸಾಯಿ

ನಾಲಕರ ಚಳವಳಿ (ಪರಿಚಯ) ೧೩೦
ಸಿ. ಎಸ್. ಮುಂಗಸೂಳಿ

ಮುದ್ದು ನಿಂತಿತ್ತೇ? (ಹರಟೆ) ೧೩೨
ಶಿವರಾಮ ಕಾರಂತ

ಜೀವಿಗಳ ಋಣವಿಮೋಚನೆ ೧೩೫
ಸಾಳ್ವೇಕರ ಗುರುದಾಸ

ನಕೊಡಲಿ ಎಂದೆನದಿರು ಗೆಳತೀ! ೧೩೮
ಶ್ರೀಧರ ಬಿ. ಎಚ್.

ತ್ಯರ್ಥತ್ಯಾಗ (ಸಣ್ಣಕತೆ) ೧೩೯
ಕುಮಾರದೇವ

ಯಪ್ಪುಂಬುಲಕೆ ಕೈಯಾನುವರೆ? (ಚರ್ಚೆ) ೧೪೩
ಬಿ. ಬಾ. ಜೋಶಿ

ಯೊ-ಟೆಲಿವ್ಹಿಜನ್ (ವಿಜ್ಞಾನ) ೧೪೫
ಸಿ. ಪಿ. ಗೋಪಾಲ

ಮುಖಪುಟ ಪ್ರತಿಸಲದ ಸಂಪಾದಕೀಯ ವಿಭಾಗಗಳು.

ಬೆಲೆ ಆರಾಣೆ



ಸಾದರ ಸ್ವೀಕಾರ

೩೬. **ನಮ್ಮ ಬದುಕು** (ಕಥಾಸಂಗ್ರಹದ ಒಳನೆಯ ಆವೃತ್ತಿ) ಬರೆದವರು:— 'ಆನಂದಕಂದ'. ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಆ. ೧೧೨ ಪುಟಗಳು; ಬೆಲೆ ೦–೧೪–೦

೩೭. **ಹಂಸವಿಹಾರಿ** (ಮೂರು ಕಿರುಗತೆಗಳು.) ಮುಂಬಯಿಯ ಹಂಸ ಸಾಹಿತ್ಯ ಮಾಲೆಯ ೬ನೆಯ ಪುಷ್ಪ. ಪ್ರಕಾಶಕರು ಕೆನರಾ ಬುಕ್ಸ್ ಆ್ಯಂಡ್ ನ್ಯೂಜ್ ಏಜನ್ಸಿ, ಲಾಲ್‌ಬಾಗ್, ಮುಂಬಯಿ ೧೨. ಕ್ರೌ. ಆ. ೩೦ ಪುಟಗಳು. ಬೆಲೆ ೦–೬–೦.

ಇವರಲ್ಲಿ 'ಆಪ್ಪನ ಆಸ್ತಿಗೆ ತೂಬು' 'ಹಂಸ ವಿಹಾರಿ' 'ವಜ್ರದ ಓಲೆ' ಎಂಬ ಮೂರು ಕತೆಗಳಿದ್ದು ಬರೆದವರಾರೆಂಬುದು ಗೊತ್ತಾಗುವಂತಿಲ್ಲ. ಕತೆಗಳು ಸರಸವಾಗಿವೆ. ಹಂಸ ಸಾಹಿತ್ಯ ಮಾಲೆ ರಾಜಧಾನಿಯಲ್ಲಿದ್ದುಕೊಂಡು, ಕನ್ನಡದ ಕಾರ್ಯ ಮಾಡಿ ಸಪ್ಪು ಸಾಹಿತ್ಯದ ಹೆಸರನ್ನು ಹೆಚ್ಚಿಸಲಿ.

೩೮. **ಜ್ಯೋತಿ** (ಮುಂಬಯಿಯ ಹಸ್ತಲಿಖಿತ ಪತ್ರಿಕೆಯ ೧೯೪೫ರ ಜುಲೈ ಸಂಚಿಕೆ): ಸಂಪಾದಕರು ಶ್ರೀಯುತರುಗಳಾದ 'ದಿನಕರ' ಮತ್ತು 'ನಿಶಾನಾಥ' ಅವರು. ಕಾರ್ಯಾಲಯ ಪ್ರಕಾಶಮಹಲು, ಚಿರಾಗದಾರಿ, ಕೆರಣನಗರ.

ಬಿಡುವಿನ ದಿನಗಳನ್ನು ಕನ್ನಡಸಾಹಿತ್ಯದ ನಿರ್ಮಿತಿಗೂ ಅಭ್ಯಾಸಕ್ಕೂ ಉಪಯೋಗ ಮಾಡಿಕೊಳ್ಳುತ್ತಿರುವ ಈ ಪತ್ರಿಕೆಯ ಸಂಪಾದಕರ ಮತ್ತು ಲೇಖಕವರ್ಗದ ಕಾರ್ಯ ಪ್ರಶಂಸನೀಯವಾಗಿದೆ. ಸುಂದರವಾದ ಬಣ್ಣದ ಮುಖಚಿತ್ರದಿಂದ ಕೂಡಿದ ಈ ಸಂಚಿಕೆಯಲ್ಲಿ, ಪಳಗಿದ ಕೈಯವೆನಿಸಿಕೊಳ್ಳಬಲ್ಲ ಕವನ, ಕಥೆ, ಜೀವನಚಿತ್ರ, ಪ್ರಹಸನ, ಪ್ರಬಂಧಗಳು ಎದೆಗೊಂಡಿವೆ. ಕೈಬರೆಹ ಮುದ್ರಿತಸಂತಸದಾಯಕ. ಹಿರಣವನ್ನು ಸಂಚಿಕೆಯನ್ನು ಕಂಡೇ ಆರಿತುಕೊಳ್ಳಬೇಕು. 'ಸಾಹಿತ್ಯಬನ' ಪಲ್ಲಿಯ 'ವಸವಾಸಿ'ಯ ವಿಚಾರಗಳು ಸ್ಫೂರ್ತಿದಾಯಕವಾಗಿವೆ. ಮುಂಬಯಿ ಕೋಟೆಯೊಳಗೇ ಇಂತಹ ಹಲವು ಪತ್ರಿಕೆಗಳು ಹೊರಡುತ್ತಿರುವುದನ್ನು ಇವರು ಅರುಹಿದ್ದಾರೆ. ಇದೊಂದು ಕನ್ನಡಿಗರ ಜಾಗೃತಿಯ ಗುರುತು. 'ಜ್ಯೋತಿ' ಅಖಂಡವಾಗಿ ಬೆಳಗಿ ತರುಣರಿಗೆ ಕಾರ್ಯದ ದಾರಿಯನ್ನು ತೋರಲಿ.

೩೯. **ಪ್ರಿಯದರ್ಶಿಕಾ ಮತ್ತು ರತ್ನಾವಳಿ** (೨ ಕತೆಗಳು) ಬರೆದವರೂ ಪ್ರಕಾರರು:- ಶ್ರೀಮಾನ್ ಬಿ. ನಾರಾಯಣಸ್ವಾಮಿ ರಾವ್ ಬಿ. ಎ. ರಿಟಾಯರ್ಡ್ ಸ್ಯಾಲೇಸ್ ಟ್ಯೂಟರ್, ಮೈಸೂರು. ಕ್ರೌ. ಆ. ೩೬ ಪುಟಗಳು ಬೆಲೆ ೦–೬–೦.

ಸಂಸ್ಕೃತದಲ್ಲಿ ಶ್ರೀಹರ್ಷ ಕವಿಯಿಂದ ರಚಿತವಾದ 'ಪ್ರಿಯದರ್ಶಿಕಾ' ಮತ್ತು 'ರತ್ನಾವಳಿ' ಯ ವಸ್ತುಗಳನ್ನು ಕಥೆಯ ರೂಪದಲ್ಲಿ ಸಂಗ್ರಹಿಸಿ ಪ್ರಕಟಿಸಿದ ಪುಸ್ತಕವಿದು. ಎರಡೂ ಶೃಂಗಾರರಸ ಪ್ರಧಾನವಾದ ಅದ್ಭುತರಮ್ಯ ಕತೆಗಳು. ಮನೋರಂಜಕವಾಗಿವೆ. ಭಾಷೆಯೂ ಸರಳವಾಗಿದೆ.

೪೦. **ಮೊಗವೀರ ಯುವಕ ಸಂಘ, ಮುಂಬಯಿ** ಈ ಸಂಸ್ಥೆಯ ೧೦ನೆಯ ವಾರ್ಷಿಕವರದಿ ಡೆ ಆ ೩೬ ಪುಟಗಳು.

ಮೊಗವೀರ ಯುವಕರು ಹೊಸಕಾಲದ ನಿರ್ಮಾಣಕ್ಕಾಗಿ ಹೋರಾಡುವವರು ಹೋಗ ಬೇಕಾದುದೆಲ್ಲಿಗೆಂಬುದನ್ನು ಚೆನ್ನಾಗಿ ಕಂಡುಕೊಂಡಿದ್ದಾರೆ ಜಾತೀಯ ಸಂಘಟನೆಯೊಂದಿಗೆ ಪ್ರಾಂತೈಕ್ಯವನ್ನು ಸಂಘಟಿಸಿ, ಭಾರತದ ಸ್ವಾತಂತ್ರ್ಯ ಸಾಧನೆಗೆ ನೆರವನ್ನು ಕೂಡುವ ಹಂಬಲವುಳ್ಳವರು ಕಾರ್ಯಕದ ಬೆಲೆಯನ್ನು ಅರಿತವರು. ತಾವು ಮುಂದುವರಿವ ಗುರಿಯಿಂದ ಹೊರಟಿವರಲ್ಲದೆ, ಯಾರನ್ನೂ ಸ್ಪರ್ಧಿಸುವ ಮನಸ್ಸಿನಿಸುವ ಬಯಕೆ ಅವರಲ್ಲಿ ಇಲ್ಲ. ನಾಡಿನ ಎಲ್ಲ ಜಾತಿಯ ಯುವಕರಲ್ಲಿಯೂ ಇಂತಹ ಸಂಘಟನೆ ಕಂಡುಬರತೊಡಗಿದರೆ, ಕನ್ನಡದ ಏಕೀಕರಣಕ್ಕೂ ಉನ್ನತಿಗೂ ತಡೆಯೇ ಇರದು. ಯುವಕರ ನಡಿಗೆ ತಡೆಯಿಲ್ಲದೆ ಮುಂದೆ ಸಾಗಲಿ!

೪೧. **ಮುಂಬಯಿ ಕರ್ನಾಟಕ ಸಂಘದ ೧೭ನೆಯ ವಾರ್ಷಿಕ ವರದಿ** (೧೯೪೪–೪೫) ಕಾರ್ಯದರ್ಶಿಗಳು ಶ್ರೀಯುತರುಗಳಾದ ಹ. ವೆ. ಇಮಾರತಿ ಮತ್ತು ವೆ. ಬಾ ಸಾಂಗಲಿ ಅವರು. ಡಿ. ಆ. ೧೨ ಪುಟಗಳು.

ಈ ಸಂಘವು ಮುಂಬಯಿಯಲ್ಲಿಯ ಒಟಿಲ ಕನ್ನಡಿಗರ ಪೀಠಿಯ ಸಂಸ್ಥೆಯಾಗಿದ್ದು, ವಿವಿಧ ಮುಖಗಳಾಗಿ ಕನ್ನಡದ ಕೆಲಸ ಮಾಡುತ್ತಿದೆ. ಸಂಘ ಕೊಂಡು ಕಟ್ಟಿದ ಕಟ್ಟಿಡ ಸಲಿಂದು, ಎಲ್ಲ ಸಂಚಾಲಕರೂ ಹುರುಪಿನಿಂದ ಕಾರ್ಯೋನ್ಮುಖರಾಗಿ ಸಂತೋಷದ ಸಂಗತಿ. ಅಂತರಾಳಿಯಾಗಿ ಮುಂಬೈ ಕನ್ನಡಿಗರ ಅಭಿಮಾನದ ಜೀವನಕ್ಕೆ ಕಳೆ ಪೊಂದಾದರೆ ಜೀವ ದೊರೆತಂತಾಗುವುದು. ಜೀ ಆದು ದೊರೆಯಲಿ.

೪೨. **ಭೂಮಾತೆ ಮತ್ತು ಮಂ** (ಮೊದಲನೆಯದು ಕಾದಂಬರಿಯೊಂದರ ಸ ಎರಡನೆಯದು ಶರಚ್ಚಂದ್ರರ ಮೂರು ಕತೆ ಸಂಗ್ರಹ). ಭೂಮಾತೆಯ ಲೇಖಕರು ಗಾಂಗೇಯರು ಮಂದಿರದ ಲೇಖಕರು ಮಾನ್ ಗುರುನಾಥ ಜೋಶಿ ಮತ್ತು ಶ್ರೀಮ ಕುಪ್ಪಮ್ಮ ಅವರು. ಧಾರವಾಡದ ಪ್ರ ಗ್ರಂಥಮಾಲೆಯ ೩ನೆಯ ವರ್ಷದ ೩ನೆ ಕೆರಣ. ಕ್ರೌ. ಆ. ೭೪+೫೮ ಪುಟಗ ಬೆಲೆ ೧–೮–೦

೪೩. **ಹೂಬಿಸಿಲು** (ಕಥಾಸಂಗ್ರ ೨ನೆಯ ಆವೃತ್ತಿ). ಬರೆದವರು ದಿವಂ ಸೌ. ಶಾಮಲಾದೇವಿ ಬೆಳಗಾಂವಕರ್ ಅವ ಪ್ರಕಾಶಕರು ಮನೋರಂಜನ ಪ್ರಕಾ ಸಮಿತಿ, ಧಾರವಾಡ. ಕ್ರೌ. ಆ ೬೬ ಗಳು. ಬೆಲೆ ೧–೦–೦.

೪೪. **ಬಿರುಗಾಳಿ** (ಅನುವಾದಿತ ಕಾ ಬರಿಯ ಪೂರ್ವಾರ್ಧ). ಮೂಲ ಮರಾ ಲೇಖಕರಾದ ಪ್ರೊ. ನಾ. ಸಿ. ಫಡಕೆಯ 'ವಾದಳ' ಎಂಬ ಕಾದಂಬರಿಯನ್ನು ಭಾಲಚಂದ್ರ ಘಾಣೇಕರರೂ ಶ್ರೀ. ಮೆ ಯವರೂ ಕನ್ನಡಕ್ಕೆ ಭಾಷಾಂತರಿಸಿದ ಧಾರವಾಡದ ಪ್ರತಿಭಾ ಗ್ರಂಥಮಾಲೆ ೩ನೇಯ ವರ್ಷದ ೪ನೆಯ ಕೆರಣ. ಆ. ೨೪ ಪುಟಗಳು ಬೆಲೆ ೧–೮–೦.

೪೫. **ಜಾಗ್ರತ ಚೀನ** (ಪರಿಚ ಪ್ರತಿಕ ಗ್ರಂಥ) ಬರೆದವರು ಶ್ರೀಮಾನ್ ಎಸ್ ಕುಲಕರ್ಣಿ ಬಿ ಎ., ಎಲ್ ಎಲ್ ವಕೀಲರು ಅಥಣಿ ಧಾರವಾಡದ ನಿ ಬಳ್ಳಿಯ ೩ನೆಯ ವರ್ಷದ ೩ನೆಯ ಕ್ರೌ. ಆ. ೧೫೬ ಪುಟಗಳು. ಬೆಲೆ ೨–

ಮುದ್ರಕರು:
ಎನ್ ಎಸ್ ಬೆಂಗೇರಿ,
ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು:
ಎಂ. ವಿ. ಪೆಳ್ಳಿಗಟ್ಟಿ,
ಜಯಂತ ಕಾರ್ಯಾಲಯ, ಧ

ಸಂಪುಟ ೮

●

ಸಂಚಿಕೆ ೫

ಅಕ್ಟೋಬರ್ ೧೯೪೫

ವಾ. ವರ್ಗಣಿ ಅಂಚೆವೆಚ್ಚ ಸೇರಿ
೪—೪—೦

●

ಆರು ತಿಂಗಳಿಗೆ ೨—೪—೦

●

ಬಿಡಿ ಸಂಚಿಕೆಗೆ ೬ ಆಣೆ

ಪ್ರತಿಶಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಜೀವವಿಲ್ಲದ ಜೀವ!

ಲೇ ವಿ. ಜಿ. ಭಟ್ಟ, ಕಡತೋಕಾ

ಜೀವವಿಲ್ಲದ ಜೀವ, ನಾವಿಗಳುಕುವೆಯೇಕೆ?
ತೊಲಗು ನೆಲವ;
ನುಸಣ ಹೊಸಯುಗವಾಲೆ: ಭೂಮಿ ಬಲಕೇ: ಜೋಕೆ!
ಕಳುಹು ಗೆಲುವ.

ಗತವೈಭವದ ಗುಲ್ಲು ನಾಕು ನಿನಗೆಲ್ಲೆಲ್ಲು
ಹಿತದ ಬೇಡಿ!
ಹೃದಯ ಲೋಕವನಂಕೆಯಲಿ ತರದು. ಹಿರಿಂಕೆ-
ದೇವನಲಿ ಮೂಡಿ,

ಬರಟು ಬೆರಳುಗಳ ಹಸಿದೊಡಲ ಹಿಸುಕಿದುವು,
ಮಣ್ಣು-ಬೂದಿಗಳಿಣಿಕೆ ಮನವ ಮುಸುಕಿದುವು,
ಜೀವವಿಲ್ಲದ ಜೀವಗಳನೇತಕಾ ದೇವ
ನೇತಾಡಿಸುವುದು?
ಪೊರೆಪೊರೆದು ಬಾಯೊಣಗಿ ಕೊನೆಗೆ ವೈವವನಣಕೆ
ಬೆದರಸುವನು.

ಎತ್ತಿ ಹಿಡಿಯುವನಂತೆ ತನ್ನೆದೆಗೆ ಬಾಚಿ
ಕಟುಪರೀಕ್ಷೆಗೆ ತಾನೆ ತನ್ನೊಳಗೆ ನಾಚಿ
ಇವು ಕೊನೆಯ ತಾಸು ನಡೆ ಪದಮೊನೆಯ ಬೀಸು.
ದೀಪನಿರೆ ಬಂದಾನು! ಹೆಣದ ಹಸೆ ಹಾಸು!

ತೆರವು

ಲೇ. ಟಿ. ಎನ್. ಶ್ರೀನಿವಾಸ, ಮೈಸೂರು

ದಿನದಿನದೊಳು, ಕ್ಷಣಕ್ಷಣದೊಳು
ಮೃತ್ಯುಮುಖಕೆ ಜೀವನ—
ನೂಗುತಲಿವೆ. ನಾಗುತಲಿವೆ,
ಜೀವ-ಮರಣ ಜುಂಬನ!
ಅವುದೊ ತೆರವಾವರಿಸಿವೆ
ಹೃದಯದ ರೂನ್ಯವ ಕಣ!
ನಿನೊ ಕೊರತೆ, ಮುಖಮೊರತೆ—
ಸೌಖ್ಯ-ಮುಖ ಕಾರಣ!
ನಿನೊ ನೇತಿ, ನಿನೊ ಭೀತಿ,
ಅಸಂತೃಪ್ತಿ ಭಾವನಾ!
ಅಮೃತಪಡಸ್ತವಭಯನ್ವರ್ಜ-
ವಿಲ್ಲದುದೋ ಕಾರಣ?
ಕೊರತೆಯಲ್ಲಿ ಬಾಳಲಾರೆ,
ಕೊರಗಿ ಸೊರಗಲಾರೆ ನಾ!
ಅಭಯಹಸ್ತ ಸ್ಪರ್ಶವಿತ್ತು,
ಪೊರೆಯೊ ಪ್ರೇಮಪೂರಣಾ!
ಬಮಕನೊಂದೆ ಘಳಿಗೆ ತುಂಬು;
ಮರುಜಣಕೇ ಜೀವನ-
ನಂತವಿರಲಿ, ಮಿಕ್ಕು ಬರಲಿ;
ಇದಿರುಗೊಳುವೆನದನು ನಾ!

ನಮ್ಮ ಪಲ್ಲಿಗಳಲ್ಲಿಯ ಇಂದಿನ ಸಾಂಸ್ಕೃತಿಕ ದುರವಸ್ಥೆ

ಇಂದಿನ ಹಳ್ಳಿಗಳನ್ನೆ ಹೋಗಿ ನೋಡಿದರೆ, ಸಂಸ್ಕೃತಿಯ ಮಟ್ಟ ಯಾವ ಬಗೆಯಲ್ಲಿ ನಮಗೆ ಕಾಣುವುದು?

ಸರಕಾರವ ಇಂದಿನ ಆಡಳಿತದ ಕ್ರಮದ ಮೂಲಕ, ಗೌಡನ ಸ್ಥಾನ-ಮಾನಗಳು ಹಾಳಾಗಿ ಹೋಗಿವೆ; ಆದುದರಿಂದ ನ್ಯಾಯಕಾಣಿಲ್ಲದ ಪಾಳೆಯ ಗಳಾಗಿವೆ ನಮ್ಮ ಹಳ್ಳಿಗಳು. ಪಟ್ಟಣದಿಂದ ಬರುವ ಪೋಲೀಸ ಸೀಪಾಯಿ ಯೊಬ್ಬನಿಗೂ ಅಂಜಿ ನಡೆಯಬೇಕಾದಾಗ, ಗೌಡನ ಭಾರವನೆ ಅಲ್ಲಿ ಉಳಿ-ಯುವ ಬಗೆ ಹೇಗೆ? 'ಗೌಡನೆಂದರೆ ಸಂರಕ್ಷಕ ನ್ಯಾಯಕ' ಎಂಬ ಭಾವನೆ ಹೋಗಿ, 'ಗೌಡನೂ ಒಬ್ಬ ಪರಕೀಯ ಸರಕಾರದ ಸೇವಕ' ಎಂಬ ವಿಚಾರ ಬೇರುಬಿಟ್ಟಿದೆ. ಹಳ್ಳಿಯ ಅಧಿಕಾರದ ಆಭಾಸವು ಒಡೆದು ಇಬ್ಬರು ಮೂವರಲ್ಲಿ ಹಂಚಿಹೋಗಿರುವುದರಿಂದ, ಅವರಲ್ಲಿ ಮೇಲಾಟ-ಮತ್ಸರಗಳು ತಲೆದೋರಿ, ಪ್ರತಿಯೊಂದು ಹಳ್ಳಿಯಲ್ಲಿಯೂ ಇಬ್ಬಣ, ಮೂಬಣಗಳಾಗಿವೆ. ಲೆಕ್ಕಾಚಾರದ ಅಧಿಕಾರ ಕರಣಿಕನ ಕಡೆಗೆ; ಗ್ರಾಮದ ಸಂರಕ್ಷಣೆಯ ಅಧಿಕಾರ ಗೌಡನ ಕಡೆಗೆ. ಕರ್ತವ್ಯವರಿತು ಕೆಲಸ ಮಾಡಿದರೆ ಮೇಲಾಟ. ಮತ್ಸರಗಳಿಗೆ ಕಾರಣವಿರದು; ಆದರೆ ಪಟ್ಟಣದಿಂದ ಹಳ್ಳಿಗಳಿಗೆ ವಿಚಾರಣೆ ಗಾಗಿ ಹೋಗುವ ಅಧಿಕಾರಿವರ್ಗದ, ಗ್ರಾಮಾಧಿಕಾರಿಗಳ ಕರ್ತವ್ಯಕ್ಕಿಂತ ಅವರು ಕೊಡುವ ಆದರೋಪಚಾರಗಳಿಗೆ ವಿಶೇಷಲಕ್ಷ್ಯಕೊಡುವುದರಿಂದ, ಈ ಆದರೋಪಚಾರಗಳಲ್ಲಿಯೆ ಮೇಲಾಟ ಹೆಚ್ಚಾಗಿ ತೋರುವುದು ಹೆಚ್ಚಿನ ಆದರೋಪಚಾರ ಸಲ್ಲಿಸಿದವರು ಮೇಲಿನ ಅಧಿಕಾರಿಗಳ ಪ್ರೀತಿಗೆ ಪಾತ್ರ-ರಾಗುವರು. ಆದುದರಿಂದ ಹೀಗೆ ಆದರೋಪಚಾರ ಸಲ್ಲಿಸುವುದು ಗ್ರಾಮಾಧಿ-ಕಾರಿಗಳಿಗೆ ಅನಿವಾರ್ಯವಾಗಿದೆ. ಸರಕಾರದಿಂದ ಇವರಿಗೆ ದೊರೆವ ಸಂಬಳ ಅತ್ಯಲ್ಪ; ಆದರಲ್ಲಿಯೆ ಮೇಲಧಿಕಾರಿಗಳ ಮನಸ್ತೃಪ್ತಿಗೊಳಿಸ-ವುದು ಹೇಗಾಗಬೇಕು? ಆದುದರಿಂದಲೆ ತಮ್ಮ ಅಧಿಕಾರಾಭಾಸವನ್ನು ದುರುಪಯೋಗಪಡಿಸಿ, ಹಳ್ಳಿಗರಿಂದ ಹಲವು ಬಗೆಯಾಗಿ ಹಣ ಸುಲಿಯ-ತೊಡಗುವರು. ಹೀಗೆ ಸುಲಿಯುವುದರಲ್ಲಿ ಗ್ರಾಮಾಧಿಕಾರಿಗಳಲ್ಲಿ ಮೇಲಾಟ ನಡೆದು ಗೌಡನ ಪಂಗದ, ಕುಲಕರ್ಣಿಯ ಪಂಗಡಗಳಾಗುವುವು. ಇಬ್ಬರೂ ತಮ್ಮ ತಮ್ಮ ರಕ್ಷಣೆಗಾಗಿ ಪುಂಡರ ತಂಡ ಕಟ್ಟಿಕೊಳ್ಳುವರು. ಈ ಪುಂಡರ ತಂಡಗಳಮೂಲಕ ಶಾಂತರೀತಿಯಿಂದ ದುಡಿದು ಜೀವಿಸಬೇಕೆಂಬ ಹಳ್ಳಿಯ ರೈತರಿಗೆ ಉಳಿಗಾಲವೇ ಇಲ್ಲದಂತಾಗಿದೆ. ಕಾಯಲೆಂದು ನೆಟ್ಟ ಬೇಲಿಯೆ ಎದ್ದು ಹೊಲ ಮೇಯತೊಡಗಿದರೆ ಮಾಡಬೇಕೇನು? ರಾಜಕೀಯ ಸಂಸ್ಕೃತಿಯನ್ನು ಕಾಯಬೇಕೆಂದು ನಿಯಾಮಕರಾದ ಗ್ರಾಮಾಧಿಕಾರಿಗಳ ಕರ್ತವ್ಯಚ್ಯುತರಾದ ಮೇಲೆ ಮಿಕ್ಕವರಿಗೆ ದಾರಿ ತೋರಿಸುವರಾರು? ಹೀಗಾಗಿ ಸಣ್ಣದೊಡ್ಡ ಕಳವು, ಅತಿಕ್ರಮಣ, ಅನ್ಯಾಯ, ಹೊಡೆದಾಟ, ಕೊಲೆಗಳು ಹಳ್ಳಿಗಳಲ್ಲಿ ಹೆಚ್ಚುತ್ತಲಿವೆ. ಬಣಿವೆ ಸುಟ್ಟು ಅರಳು ಮುಕ್ಕುವ ಸ್ವಭಾವದ ಸ್ವಾರ್ಥಿಗಳಾದ ತುಂಟರು ಇವುಗಳಿಗೆ ಪ್ರಚೋದಕರಾಗಿರು-ತ್ತಾರೆ. ಹಳ್ಳಿಯ ಜಗಳಗಳನ್ನು ತೀರಿಸುವ ಅಧಿಕಾರ ಸ್ಥಳೀಯ ಅಧಿ-ಕಾರಿಗಳ ಕಡೆಗೆ ಇಲ್ಲವಾದುದರಿಂದ, ಜಗಳಗಂಟರು ಪಟ್ಟಣದ ಕೋರ್ಟು-ಗಳಿಗೆ ಹೋಗುವುದು. ಹೀಗೆ ಹೋಗುವುದರಿಂದ ಆರ್ಥಿಕ ಲಾಭವಿರು ವುದನ್ನರಿತ ಗ್ರಾಮಾಧಿಕಾರಿಗಳೂ ಅವರ ಹಸ್ತಕರಾದ ಪಂಚರೂ, ಜಗಳ ಗಳನ್ನು ಹೆಚ್ಚಿಸುವರೇ ಹೊರತು ಹಿಂಗಿಸಲಿಕ್ಕೆ ಪ್ರಯತ್ನಿಸರು. ಇದೀಗ ನಮ್ಮ ಹಳ್ಳಿಯಲ್ಲಿಯ ಆಡಳಿತದ ಸಂಸ್ಕೃತಿಯ ದುರವಸ್ಥೆ.

ಹಿಂದೆ ಧಾರ್ಮಿಕ ಸಂಸ್ಕೃತಿ ಇಂದು ಒಳುದಾರಿಯಿಂದ ಹಳ್ಳಿಗರನ್ನು ನಡೆಯಿಸುತ್ತಿದ್ದಿತು. ಸ್ವಾರ್ಥತ್ಯಾಗಿಗಳಾದ ಧರ್ಮಾಧಿಕಾರಿಗಳು ಅವರಿಗೆ ಮಾರ್ಗದರ್ಶಕರಾಗಿ ಇರುತ್ತಿದ್ದರು. ಇಂದು ಧರ್ಮಾಧಿಕಾರಿಗಳಿಗೇ ಧರ್ಮದಲ್ಲಿಯ ವಿಶ್ವಾಸ ಹಾರಿಹೋಗಿರುವಾಗ, ಅವರ ಉಪದೇಶದಲ್ಲಿ ಅಧಿಕಾರವಾಣಿ ಎಲ್ಲಿ ಕೇಳಿಬೇಕು? ಧರ್ಮೋಪದೇಶಕರಾಗಿ ಬಾಳಿನ ನರ್ಗದವರು ತಮ್ಮ ಕರ್ಮ ಬಿಟ್ಟು ಇಂದು ಪಾರ್ಶ್ವಾತ್ಯ ವಿದ್ಯಾಪಾರಂಗತ ರಾಗಿ, ಸರಕಾರದ ನೌಕರಿ ಮಾಡುತ್ತಲೊ ಇನ್ನಾವುದಾದರೂ ಉದ್ಯೋಗವನ್ನು ಸ್ವೀಕರಿಸಿಯೋ ಹಳ್ಳಿಗಳಿಂದ ಹೊರಟುಹೋಗಿರುವರು—ಹೋಗುತ್ತಿರು-ವರು. ಧರ್ಮಕ್ಕಿಂತ ದುಡ್ಡು ಹೆಚ್ಚೆಂಬುದನ್ನು ಅವರು ತಮ್ಮ ಪ್ರತ್ಯಕ್ಷ ಜೀವನದಿಂದಲೆ ಸಿದ್ಧಮಾಡಿ ತೋರಿಸುತ್ತಿರುವಾಗ, ಅವರ ಅನುಯಾಯಿ ಗಳಾಗಿದ್ದ ಹಳ್ಳಿಗರೂ ಧರ್ಮದ ದಾರಿ ಬಿಟ್ಟು ದುಡ್ಡಿನ ಬೆನ್ನುಹತ್ತಿದ್ದರೆ ಅದರಲ್ಲಿ ಆವರ ತಪ್ಪು ಏನು? ಹಳ್ಳಿಗರ ದುಡ್ಡನ್ನು ಪೆಚ್ಚನೆಯಾಡಿ ಕಲಿತು ತಮ್ಮ ಜ್ಞಾನವನ್ನು ಹಳ್ಳಿಗರ ಪ್ರಯೋಜನಕ್ಕಾಗಿ ಬಳಸದೆ, ನಮ್ಮ ಸುಶಿಕ್ಷಿತ ಕರುಣರು, ಸ್ವಾರ್ಥಿಗಳಾಗಿ ಪಟ್ಟಣವನ್ನು ಸೇರಿ ಹಳ್ಳಿಗರನ್ನೆ ಮುರಿದು ತಿನ್ನತೊಡಗುವರು. ಇದರಿಂದ ಸುಶಿಕ್ಷಿತ ಜನರಲ್ಲಿ ಹಳ್ಳಿಗರ ವಿಶ್ವಾಸ ಹೇಗೆ ಉಳಿಯಬೇಕು. ಹಳ್ಳಿಯ ಸಮಾಜದ ಸುಖಜೀವನಕ್ಕೆ ಅನಿವಾ-ರ್ಯವಾಗಿ ಬೇಕಾದುದು ಲೌಕಿಕವನ್ನು ಸುಂದರಗೊಳಿಸುವ ಸಾಮಾಜಿಕ ಸಂಸ್ಕೃತಿ; ಆದರ್ಶವನ್ನು ಬೋಧಿಸುವ ಧಾರ್ಮಿಕ ಸಂಸ್ಕೃತಿ. ಇಂದು ಇವೆರಡನ್ನೂ ಕಾಣದೆ ಹಳ್ಳಿಯ ಜನತೆ ಕುರುಡರಂತೆ ಧಡಪಡಿಸುತ್ತಲಿದೆ; ಕಂಗಾಣದೆ ಸಿಕ್ಕುದನ್ನು ಸಿಕ್ಕಂತೆ ತೊತ್ತುಳಿದುಳಿಯುತ್ತಲಿದೆ. ಅವಕ್ಕಾ-ಗಿಯೆ ಸುಖ-ಶಾಂತಿಗಳ ಸುಳಿವನ್ನೆ ಅದು ಕಾಣದಾಗಿದೆ.

ಸಾಮಾನ್ಯವಾಗಿ ಪ್ರಾಥಮಿಕ ಶಾಲೆಗಳು ಹಳ್ಳಿಗೊಂದರಂತೆ ಇದ್ದು ಅಕ್ಷರ ಪರಿಚಯವುಳ್ಳವರ ಸಂಖ್ಯೆಯೀಗ ಹಳ್ಳಿಗರಲ್ಲಿ ಹೆಚ್ಚುತ್ತಿರಬಹುದು; ಆದರೆ ಈ ಅಕ್ಷರಪರಿಚಯ ಸಂಸ್ಕೃತಿಪ್ರಚಾರಕ್ಕೆ ಸಾಹಾಯ್ಯಕವಾಗದೆ ವಿನಾ-ಶಕವಾಗಿ ಪರಿಣಮಿಸುತ್ತಲಿದೆ. ಉಪಯೋಗವನ್ನರಿಯದವನ ಕೈಯಲ್ಲಿ ಕೊಡಲಿಯೊಂದನ್ನು ಕೊಟ್ಟರೆ ಸಿಕ್ಕುಸಿಕ್ಕುದನ್ನು ಸವರುತ್ತ ನಡೆಯುವಂತೆ, ಹಳ್ಳಿಗಳಲ್ಲಿ ಇಂದು ಅಕ್ಷರ ಬಲ್ಲವರು ಕೆಲಸ ನಡೆಯಿಸಿದ್ದಾರೆ. ಇವರ ಕಿವಿ-ಗೇದಿತನ ಹಳ್ಳಿಗಳಿಗೆ ಮಾರಕವೆನಿಸುತ್ತ ನಡೆದಿದೆಯೆಲ್ಲಿಯೆ ತಾರಕವೆನಿಸು-ತ್ತಿಲ್ಲ. ಆದುದರಿಂದಲೆ ಎಷ್ಟೋ ವಿಚಾರಿಗಳು ಈ ನಿಯುಕ್ತವಾದ ಅಕ್ಷರ ಪ್ರಚಾರಕ್ಕೆ ಬೇಸತ್ತು ಹೋಗಿದ್ದಾರೆ. ಮಾನವನ ಬುದ್ಧಿ-ಭಾವನೆಗಳ ವಿಕಾಸಕ್ಕೂ ಜ್ಞಾನಪ್ರಸಾರಕ್ಕೂ ಅವಕಾಶವೇ ಇಲ್ಲದಂತಾಗಿದೆ ಹಳೆಯ ಪೂಲದ ಸಂಸ್ಕೃತಿಪ್ರಚಾರಕ ಸಂಸ್ಥೆಗಳಾದ ಪುರಾಣ, ಕೀರ್ತನ, ಕಾಲ-ಕ್ಷೇಪ, ಯಕ್ಷಗಾನ, ಬಯಲಾಟಗಳಲ್ಲಿ ಇಂದು ಹಳ್ಳಿಗರ ಶ್ರದ್ಧೆ ಇಲ್ಲದಾ-ಗಿದೆ. ಇದಕ್ಕೆ ಕಾರಣಕರ್ತರು ಹಳ್ಳಿಯ ಸುಶಿಕ್ಷಿತ ಧುರೀಣರು. 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ' ಧುರೀಣರು ಮೊದಲಿನ ಸಂಸ್ಥೆಗಳಲ್ಲಿಯು ಜನರ ಶ್ರದ್ಧೆಯನ್ನು ಕಳೆದಿದ್ದಾರೆ ಮಾತ್ರ; ಅವುಗಳ ಬದಲು ಹೊಸ ಸಂಸ್ಕೃತಿಪ್ರಚಾರಕ ಸಾಧನ-ಸಾಕಾರ್ಯಗಳನ್ನು ನಿರ್ಮಿಸಿಕೊಟ್ಟಿಲ್ಲ. ನಮ್ಮದಲ್ಲದ ಸರಕಾರವೂ ಇತ್ತಕಡೆಗೆ ಕಣ್ಣುತೆರೆದು ನೋಡುವಂತಿಲ್ಲ. ಹೀಗಾಗಿ ಮನುಷ್ಯತ್ವವೆಂದರೇನೆಂಬುದೇ ಹಳ್ಳಿಗರಿಗೆ ಮರೆತುಹೋಗುತ್ತಲಿದೆ. ಹೋಗಿದೆಯೆಂದರೂ ತಪ್ಪಿಸಿಸುವಂತಿಲ್ಲ. ಅದು-ದರಿಂದ ಹಳ್ಳಿಯ ಸಮಾಜಸ್ವಾಸ್ಥ್ಯಕ್ಕೆ ಅನಿವಾರ್ಯವಾದ ಪರಸ್ಪರ ಬಂಧು-ಭಾವ, ಸಹಕಾರಬುದ್ಧಿ, ಭೂತದಯೆ, ಸಹಾನುಭೂತಿ, ಸ್ವಾರ್ಥ-ತ್ಯಾಗ ಇವೆಲ್ಲ ಹಳ್ಳಿಗಳನ್ನು ಬಿಟ್ಟು ಹಿಡಿಹೋಗಿವೆ. ಇಂತಹ ರಸವಾರಿದ ಜೀವ-ಗಾಡುಗಳಂತಿರುವ ಹಳ್ಳಿಗಳಿಂದ ಭಾರತ ಸ್ವಾತಂತ್ರ್ಯದ ಸಾಧನೆ-ಸಂರಕ್ಷ-ಣೆಗಳು ಹೇಗೆ ಸಾಧ್ಯವಾಗಬೇಕು? ಆಗುವುದಿಲ್ಲವಾದುದರಿಂದಲೇ ಭಾ-ರತದ ಭಾಗ್ಯವನ್ನು ಬಯಸುವವರೆಲ್ಲರೂ ಹಳ್ಳಿಗಳತ್ತ ಕಂಡೀದು ನೆಗ-ಬೇಕು; ಹಳ್ಳಿಗರಲ್ಲಿ ಸಂಸ್ಕೃತಿಯ ಹೊಸ ಜೀವನವನ್ನು ತುಂಬಬೇಕು

—ಸಂಪಾದಕರು



೧. ಕಿಸೆ—ದುಕ್ಕಾ

ಮಾರವಾಡಿ ಜನರು ತಮ್ಮ ಲೆಕ್ಕವನ್ನು ಆಯಾ ಪ್ರಾಂತದ ಭಾಷೆಯಲ್ಲಿಡಬೇಕೆಂದು ಬಳ್ಳಾರಿಯ ಜಜ್ ಶಾಹೇಬರೊಬ್ಬರು ನಿರ್ಣಯ ಕೊಟ್ಟಿದ್ದನ್ನು ಓದಿ ಮಂಗರಾಯನು—" ಆರೇ ಬಾಪರೆ! " ಎಂದು ಹೌಹಾರಿದ್ದಾನೆ. 'ನಮ್ದೂ ದೇಶಾ ಆದಾವು, ನಮ್ದೂ ಭಾಶಾ ಆದಾವು' ಎಂದು ಮಾರವಾಡಿಗಳ ಬಾಡಿಗೆ.ರೋದಕರು ಹಾಡಿ ಗೋಳಿಡುವುದನ್ನು ಕೇಳಿ ಪೆತ್ತಸ ಹೃದಯದ ಮುಂಗರಾಯನು ತಡೆಯುವುದೆಂತು? ಧಿಕ್ಕಾರವಿರಲಿ ಬಳ್ಳಾರಿಯ ಕನ್ನಡಿಗರಿಗೆ! ಧಿಕ್ಕಾರವಿರಲಿ ಬೆಳಗಾಂವಿಯ ಕನ್ನಡಿಗರಿಗೆ! ಇವರಿಂದ ಪಾಪ! ಮಾರವಾಡಿಗಳಿಗೆ ಎಂತಹ ತೊಂದರೆ! ಒಂದು ಕಡೆ ತಲುಗು, ಒಂದು ಕಡೆ ಮರಾಠಿ— ಹೀಗೆ ಅನೇಕ ಪ್ರಾಂತಭಾಷೆಗಳುಳ್ಳ ಕರ್ನಾಟಕದಲ್ಲಿ ಮೇಲಿನ ನಿರ್ಣಯದಿಂದ ಮಾರವಾಡಿಗಳಿಗೆ ನ್ಯಾಯ ದೊರಕುವುದು ಹೇಗೆ? ಕರ್ನಾಟಕದ ತುಂಬೆಲ್ಲ ಮಹಾರಾಷ್ಟ್ರ ಮಂಡಲಗಳಿರುವಾಗ ಮುಂಬೈಗರಾಗಲಿ ಮಾರವಾಡಿಗಳಾಗಲಿ ಕನ್ನಡವನ್ನೇ ಕಲಿಯಬೇಕೆಂದು ಹೇಳುವುದು ನ್ಯಾಯವೆ? ಯುಕ್ತವೆ? ಅಲ್ಲ ಅಂದ್ರ 'ಬಗಾ (ರಾ) ಬಗೀ (ರೀ)' ಏನು? ಎಂದು ಹುಂಕರಿಸುತ್ತಾನೆ, ಗಜಿ.ಸುತ್ತಾನೆ, 'ಪಬ್ಲಿ'ಯನ್ನು ತುರಿಸುತ್ತಾನೆ ಮುಂಗರಾಯ! 'ಆರೇ ಬಾಪರೆ! ಕಾನಡೀ ಮುಂದಿಯ ದೊಕ್ಕಾ ಬೇಕಂತ ಬಂದರ, ಕಾನಡೀ ನಳಗ ಲೆಕ್ಕಾ ಬೇಡತಾವಲ್ಲ ಈ ಲೋಕ! ಹಹಹ! ಹೇಗಿದೆ ನೋಜು— ಅಲ್ಲಲ್ಲ—ಹೇಗಿದೆ ಅನ್ಯಾಯ! ಸ್ಟರ್ಲಿಂಗ್ ಬ್ಯಾಲನ್ಸ್ ಅಂತೆ! ಸ್ವತ್, ಲಿಂಗಾಯರು ಬಹಳ ಅನ್ಸಿದರಂತೆ! 'ಕನ್ನಡದ ಕಾಟ ಬಹಳ ಅದರೆ ದೋನತೇ ರೂಪಾಯಿ ಕೊಡೋಣ' ಅನ್ಸಿದರಂತೆ! ಲೆಕ್ಕ ಯಾಕೆ ಬೇಕು ಇವರಿಗೆ— ಎಂದು ಮುಂಗರಾಯನ ಸವಾಲು! ಬರಲಿ ಎಷ್ಟೇ ಸವಾಲು.

\+ + + +

೨. ರಾಜಜ್ಜಿಯ ಕತೆ

ಮುಂಗನಿಂದ ಮನುಷ್ಯ ಆದ ಅಂತ ಹೇಳೋ ಮುಂಗನಿಂದ ಮನುಷ್ಯ ಆದ ಅಂತ ಹೇಳೋ ಆವರ ಅಜ್ಞಾನಕ್ಕಾಗಿ ಕನಿಕರ ತೋರಿಸುತ್ತಾನೆ. ಅದರೆ— ಅಥವಾ— ಕತೆಯನ್ನೆ ಕೇಳಿ. ಒಂದಾನೊಂದು ಕಾಲದೊಳಗ ಒಬ್ಬ ರಾಜ ಇದ್ದ. ಪ್ರೀತಿಯಿಂದ ಎಲ್ಲರೂ ಅವನಿಗೆ ರಾಜಾಜಿ ಅನ್ನುತ್ತಿದ್ದರು. ಹೀಂಗಿರುವಾಗ ರಾಜಾಜಿಯ ದೇಶದ ಮ್ಯಾಲೆ ಗಂಡಾಂತರ ಬಂತು. ಆಗ ಎಲ್ಲರೂ ಟೊಂಕ ಕಟ್ಟಿ ನಿಲ್ಲಬೇಕು ಅನ್ನುವಾಗ ರಾಜಾಜಿ ಅಂದ:— 'ನೀವೇಲ್ಲಾ ಹುಚ್ಚರು. ದೇಶಕ್ಕೆ ದಾಳಿ ಒಂದಾಗಯುದ್ಧಕ್ಕೆ ಟೊಂಕ ಕಟ್ಟಬಾರದು. ಅವರ ಒದಬು ದೇಶವನ್ನೆಲ್ಲ ತುಂದು-ತುಂಡಾಗಿ ಕಡಿದು ಪಾಕ್ಟೇಕು' ಅಂದ್ರೆ ದೇಶ ಇಲ್ದಾಂಗ ಆಗಿ ದಾಳಿ ಮಾಡುವನ ಪೆಚ್ಚಾಗ್ತಾನ' ಅಂತ. ಮತ್ತೆ ತನ್ನ ಬುದ್ಧಿಮತ್ತಾತ್ಕ್ಕ ತಾನೇ ಮೆಚ್ಚಿ ರಾಜಾಜಿ ತಾನು ಹೇಳೋದೇ ಯೋಗ್ಯ ಅಂತ ನೆರೆದ ಜನರು ಸಿಟ್ಟಿಗೆ ಬಂದು ಅವನ್ನ ಹೊರಗ ಹಾಕಿದರು. ಹೀಂಗೇ ವರ್ಷಗದು ವರ್ಷ ನಡಿದು ಜನರೆಲ್ಲಾ ಕಪ್ಪಪಟ್ಟು ಗಂಡಾಂತರ ದಾಟಿದರು. ಆಗ ಮತ್ತೆ ರಾಜಾಜಿ ಅಂದ:— 'ನೋಡಿದಿರಿಲ್ಲೋ? ದೇಶ ಕಡಿದು ಹಾಕಿದ್ದರ ಎಷ್ಟು ಅನರ್ಥ ಆಗ್ತಿತ್ತು? ನೀನೆಲ್ಲಿ ಹುಚ್ಚರ ಹಾಂಗ ಕನಿದು ಪಾಕ್ತೀರೊ ಅಂತ ಪರೀಕ್ಷೆ ಮಾಡ್ಲಿಕ್ಕೆ ಹಾಂಗ ಹೇಳಿದ್ದೆ; ಆದರೆ ನೀವು ನಿಜವಾಗಿ ಶೂರರು' ಅಂತ! ಆಗ ಜನರೆಲ್ಲಾ ಕೂಡಿ ಮತ್ತೆ ಪ್ರೀತಿಯಿಂದ 'ರಾಜಾಂಜೇಕೀಜೈ' ಅಂದರು! ಅದಕೇ ಹೇಳೋದು, ಮುಂಗನಿಂದ ಮನುಷ್ಯ ಆಗಲಿಲ್ಲ—ಅದರೆ, (ಒಬ್ಬ) ಮನುಷ್ಯನಿಂದ (ಮಿಕ್ಕವರು) ಮುಂಗ ಆಗ್ತಾರ ಅಂತ.

× × × ×

೩. (ಕರ್–) ನಾಟಕದ ಘೋಷಣೆ

ಬಂದಿತು ಚುನಾವಣೆ—ನಾಲಗೆಯ ಚಲಾವಣೆ! ಕನ್ನಡ ಮಾತೇ, ಎಚ್ಚರಾಗು! ಯಾಕೆಂದರೆ, ಕನ್ನಡದಲ್ಲಿ ಮಾತನಾಡದವರು ಕೂಡ ಈಗ ಕನ್ನಡಿಗರಾಗುವರು. ಏಕೀಕರಣವೆ, ನೀನಿನ್ನು ತುಸು ಜೋಕೀ. ಕರಣದಲ್ಲಿರು. ಯಾಕೆನ್ನುವಿಯಾ? ಅಧಿಕಾರದ ಬೇಕೇಕರಣದಿದ್ದವರು ಚುನಾವಣೆಯಲ್ಲಿ ನೂಕೇಕರಣ ಮಾಡುವವರಿದ್ದಾರೆ! ಜೋಕೆ! ಜೋಕೆ! ಎಚ್ಚರ! ಹುಷಾರ್! ಯಾಕೆಂದರೆ, ದೇಶಕ್ಕೆ ಸ್ವಾತಂತ್ರ್ಯ ಬೇಕಾಗಿದೆ. ದೇಶವೆಂದರೆ ಕನ್ನಡಿಗರಲ್ಲ —ಆರ್ಥಾತ್— ಕನ್ನಡಿಗರಿಗೆ ದೇಶವಿಲ್ಲ. ಆದ್ದರಿಂದ ಎಚ್ಚರ! ದೇಶಕ್ಕಿಂತ ಸ್ವಾತಂತ್ರ್ಯ ಮುಖ್ಯ. ಸ್ವಾತಂತ್ರ್ಯ ಬೇಡು, ಮನುಜಾ, ದೇಶವನ್ನು ಬಿಡು. ಸ್ವಾತಂತ್ರ್ಯವೆಂದರೆ ಭಾರತವೆ ಸ್ವಾತಂತ್ರ್ಯ, ದೇಶವೆಂದರೆ ಕರ್ನಾಟಕ ದೇಶ. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಆಗ್ರೇಸರರಾದ ಕನ್ನಡಿಗರೆ, ನಿಮ್ಮೊಳಗಿನ ಆಗ್ರೇಸರರನ್ನು—ಅಂದರೆ ನಿಮ್ಮನ್ನು ಬಿಟ್ಟು ಮುಂದೆ ನರದವರನ್ನು—ಆರಿಸಿರಿ, ಕನ್ನಡವನ್ನು ಹಾರಿಸಿರಿ, ಮುಂಗರಾಯನ ಜಯಜಯಕಾರವನ್ನು ತೂರಿಸಿರಿ. ಮತೆಯಬೇಡಿರಿ! ತೊತೆಯಬೇಡಿರಿ! ನೀನೆಲ್ಲರೂ ಹುಚ್ಚರಂತೆ ಜೀಲಿಗೆ ಹೋಗಿ ನಿಷ್ಠೆಯಂರವಾಗಿ ಹೊರಗುಳಿದ ನೀರರನ್ನು ಮರೆಯಬೇಡಿರಿ. ನೀವೆಲ್ಲರೂ ಮುಂದುಗಾಣದ ಕನ್ನಡ-ಕನ್ನಡ ಎನ್ನುವಾಗ ನುಂದಿನ ಅಧಿಕಾರವವದ ತನಿಗೂ ದೂರದೃಷ್ಟಿಯುಳ್ಳ ಸಂತತ ಮುಂದಾಳುಗಳನ್ನು ತೊರೆಯಬೇಡಿರಿ! ಬಂದಿತು ಚುನಾವಣೆ!—ಮುಂದಿಯ ಚುನಾವಣೆ!

ನಾಡಹಬ್ಬದ ಕಾಲದ ಒಂದೊಂದು ದಿನವೂ, ನಾಡಿಗರಲ್ಲಿ ಕನ್ನಡದ ಏಕೀಕರಣದ ಎಚ್ಚರವನ್ನು ಹುಟ್ಟಿಸುವ ದಿನವಾಗಬೇಕು!
ಏಕೀಕರಣದ ಮೊದಲ ಮೆಟ್ಟಿಲ ಮೇಲೇರಿ ನಿಂತಾಗಲೇ
ಕನ್ನಡಿಗರಿಗೆ ರಾಜಕೀಯ ಸ್ವಾತಂತ್ರ್ಯದ ದಾರಿ ಸಿಕ್ಕುವುದು!



ನನ್ನ ಗೀತಗಳು

(ಕವನ ಸಂಗ್ರಹ)

"ಗೀತಾಪ್ರಿಯ" ಬರೆದುದು. ಸಾಧನ ಮುದ್ರಣಾಲಯ, ಧಾರವಾಡ ಆವರ ಪ್ರಕಟನೆ. ಬೆಲೆ ೧-೦-೦.

ಕವನಕಾರರು "ಗೀತಾಪ್ರಿಯ" ಎಂಬ ಮುಚ್ಚುಹೆಸರಿನಲ್ಲಿ ನ್ದರೂ ಮುನ್ನುಡಿಕಾರರಾದ ಶ್ರೀ. ಶಂ. ಬಾ. ಜೋಶಿಯವರು 'ಗೀತಾಪ್ರಿಯ" ರಾರೆಂಬ.ದನ್ನು ಕನ್ನಡಿಗರಿಗೆ ಪರಿಚಯ ಮಾಡಿ ಕೊಟ್ಟಿದ್ದಾರೆ. ಧಾರವಾಡದ ಸಾಧನ ಮುದ್ರಣಾಲಯದ ಯಜಮಾನ ರಾದ ಶ್ರೀ. ಕುಲಕರ್ಣಿ ಶೇಷಗಿರಿರಾಯರೇ ಇಲ್ಲಿಯ ಕವನಕಾರರು.

ಶ್ರೀ. ಶೇಷಗಿರಿರಾಯರು ಭಾವುಕರು, ರಸಿಕರು, ಕಾವ್ಯಾಭ್ಯಾಸಿ ಗಳು. ಎಳೆಯತನದಿಂದಲೂ ಕವನ ಬರೆಯುವ ಹಂಬಲವಿದ್ದರೂ ಇದುವರೆಗೆ ಬೆಳಕಿಗೆ ಬಂದಿದ್ದ ಕವನಗಳು ಎರಡೋ ಮೂರೋ. ಇತ್ತೀ ಚೆಗಿನ ಒಂದೆರಡು ವರ್ಷಗಳಲ್ಲಿ ಬೇರೆ ಬೇರೆ ಪತ್ರಿಕೆಗಳಲ್ಲಿ 'ಗೀತಾ ಪ್ರಿಯ'ರ ಕವನಗಳು ಕೆಲವು ಬೆಳಕಿಗೆ ಬಂದುವು. ಕಲ್ಪನೆ, ಕುಸುರು, ವಿಚಾರ, ಛಂದ, ನಾದ, ಶೈಲಿ ಎಲ್ಲವೂ ಒಂದು ಹದಕ್ಕೆ ಬಂದಂತೆ ಆ ಕವನಗಳನ್ನೋದಿದವರಿಗೆ ಎನಿಸಿರಬಹುದು. ಆ ಕವನಗಳಲ್ಲದೆ ಬೇರೆಯು ಹೊಸ ಕವನಗಳನ್ನೂ ಕೂಡಿಕೊಂಡು ಈ ಸಂಗ್ರಹ ಹೊರಕ್ಕೆ ಬಂದಿದೆ. ಆಧುನಿಕ ಕವಿಗಳ ಮಾಲಿಕೆಯಲ್ಲಿ ಹೆಸರು ಹೊಂ ಸ ತಾದರೂ ಪಳಬರೇ ಆದ ಶ್ರೀ. ಶೇಷಗಿರಿರಾಯರ ಈ ಕವನಸಂಗ್ರಹ, ಅವರ ಕಾವ್ಯಕೃಷಿಗೆ ತಕ್ಕ ಫಲವಾಗಿ ಬಂದುದು ಸ ತೋಷದ ವಿಷಯ

ಇದರಲ್ಲಿ ಒಟ್ಟು ೩೧ ಗೀತಗಳು ಸಂಗ್ರಹಗೊಂಡಿವೆ ಪ್ರಾರ್ಥನಾ-ಗೀತ, ಭಾವಗೀತ, ಪ್ರೀತಿಗೀತ, ವರ್ಣನಾಗೀತ, ರಾಷ್ಟ್ರಭಕ್ತಿಗೀತ ಹೀಗೆ ವಿವಿಧ ಸ್ವರೂಪದುವುಗಳನ್ನು ನಾವಿಲ್ಲಿ ಕಾಣಬಹುದು. ಇವರು ತಾಯಲ್ಲಿ ಹಾಡನ್ನು ಬೇಡುವುದು ಹೀಗೆ ಹಾರಯಿಸಿ:

"ಬಗೆಯ ಬಯಲು ಬಂಜೆಯಾಗಿ ಭೋರಿದುತ್ತ ಬಿದ್ದಿತಿ,
ನಗುವ ಜಗದ ಮಸಣವಾಗಿ ಹೊಗೆಯು ಮುತ್ತಿಕೊಂಡಿದೆ
ಹಾರಿಸದನು, ಆರ್ಸದನು, ಊರು ನಿನ್ನ ಬಾವುಟ—
ಊರು-ಕೇರಿಗೆಲ್ಲ ತೋರಿ ಸಾರುತಿರಲಿ ಹೊಸದಟ!"

'ನನ್ನದಾರಿ' ಎಂಬ ಕವಿತೆ ದೈವೃತಭಕ್ತಿಯಿಂದ ತುಂಬಿದ್ದರೂ, 'ದಾಸೋಹಂ' ಭಾವವನ್ನು ಅದರಲ್ಲಿ ಉಸಿರಿಲ್ಲ; 'ವಿಶ್ವಕವಿಯ ಪ್ರತಿಭೆ ನಾನು, ನಶ್ವರನೆಂದೆಂದರಾರು?' ಎಂಬ ವೀರಭಾವ ಪ್ರಕಟ ವಾಗಿದೆ. 'ದೊರೆಯು ಕಾಣಲಳವೆ?' 'ವಸುಂತನೆಂದಿಗೆ ಬರುವನು?' ಎಂದು ಹಂಬಲಿಸಿದರೂ

"ಮೌನವಾಗಿರು ಮನವೆ ಏನಾದರೂ ಬಳಿಕ,
ಹಾನಿಯೆಂಬುದು ಜಗಕೆ ಗೊತ್ತು ಇಲ್ಲ!
ಏನಿರುವುದೆಲ್ಲವೂ ಜೀವನದ ರಕ್ಷಣೆಗೆ
ದೀನರಕ್ಷಕನಂತೆ ಹುಟ್ಟಿಸಿಹನು!"

ಎಂಬ ನಂಬುಗೆಯಿಂದ ಚಿತ್ತಸ್ಥೈರ್ಯವನ್ನೂ ತಂದುಕೊಳ್ಳುತ್ತಾರೆ. ದೇವನ ಅಸ್ತಿತ್ವವನ್ನೂ ಅತನ ಸರ್ವಜ್ಞಶಕ್ತಿಯನ್ನೂ ಈ ಕವಿ ಒಪ್ಪುವರಾದರೂ ಜೀವನ ಸಾಮರ್ಥ್ಯವಿಕಾಸದಲ್ಲಿಯೂ ಸಂಪೂರ್ಣ ಶ್ರದ್ಧೆಯುಳ್ಳವರಾಗಿದ್ದಾರೆ; ಆದರೂ ಸಂದೇಹದ ಮಂಜು ಈ ಶ್ರದ್ಧೆ-ಯನ್ನು ಅಲ್ಲಲ್ಲಿ ಮರೆಮಾಡಿರುವುದು.

ಸಂಗ್ರಹದಲ್ಲಿಯ ಬಹಳ ಗೀತಗಳಿಗೆ ಸಂಕೇತವು ಜೀವಾಳ ವಾಗಿದೆ. ಅವೆಲ್ಲ ಜೀವನದ ಅನುಭವಗಳನ್ನು ರೂಪಕವಾಗಿ ಬಿಂಬಿಸಿ ರುವುವು. 'ಬನಸಿರಿ' 'ಮುಳಿಬಂಶು' 'ನನ್ನ ದೀಪ' 'ಕೇಳಿಸ ದಾಯ್ತು ನನಗೀತ' 'ಪಯಣದ ಹಾಡು' 'ಮನಸು ಮತ್ತು ಮಾತು' ಮೊದಲಾದುವುಗಳೆಲ್ಲ ಇಂತಹ ರೂಪಕಗೀತಗಳಾಗಿವೆ. ಇವುಗಳಲ್ಲಿಯ ವರ್ಣನೆ, ಪದಸಂಯೋಜನೆ, ನರ್ತನಗಳೆಲ್ಲ ಸಂದ-ರ್ಭೋಚಿತವಾಗಿವೆ.

'ಇನಿಯಳ ಮುನಿಸು' ರಸವತ್ತಾದ ಭಾವಗೀತ. 'ಇನಿಯಳ ಮುನಿಸಿನ ಅರ್ಥವ ಜಗದಲಿ ಹೇಳುವರಾರುಂಟು? ಕನಲಿದರೇನು? ಇನಿಯಳ ಹೃದಯದಿ ಪ್ರೀತಿಯ ಸೆಲೆಯುಂಟು!' 'ಪ್ರೀತಿ-ಮುನಿಸು ಗಳಿಗಂತರವುಂಟೇ? ಒಂದರ ಬೆನ್ನೊಂದು! ರೀತಿಯ ಬಿಟ್ಟರು ಪ್ರೀತಿಯು ಬಿಡದು, ಇರುವುವೆರಡು ಒಂದು!' ಒಳ್ಳೆಯ ಭಾವವಿಸ್ಫೋ ಷಣ ಚಿತ್ರ ಇದರಲ್ಲಿದೆ; ಆದರೆ 'ಮುನಿಸನ್ನೆ' ಯಲ್ಲಿಯ ನಲ್ಲ 'ಸನ ಗೆಲ್ಲಿ ಅಸ್ತಿತ್ವ, ನಿನ್ನೊಳಿಹ ಒಳಸತ್ತ್ವ! ಮಿನುಗಿಲ್ಲಿ ಮೈಗೊಂಡು ನಿಂತಿರುವ 'ಮಹಶಕ್ತಿ'ವ!' ಎಂಬ ಆಧ್ಯೆತ ವೇದಾಂತದಲ್ಲಿ ಪ್ರವ್ಯ ವನ್ನೇ ಕಳೆದುಕೊಂಡಿವ್ವಾನೆ. ಆದರಂತೆಯೆ 'ಗೆಲವು ನವ್ಮದೊಂದೆ ಗುರಿ!' ಎಂದು ಎದೆಯುಬ್ಬಿಸಿ ಮುಂಬರಿವ ವೀರ, 'ನೋಯಿಸದಿರು ಮನವ!' ಎಂಬ ನಿಸ್ಪೃವ-ನಿರ್ವೇದ ಭಾವವನ್ನು ಉಪದೇಶಿಸಲು ಬರುತ್ತಾನೆ. 'ಒಳತು' 'ಬೆಳಕು-ಕತ್ತಲೆ' ಮೊದಲಾದ ತತ್ತ್ವ ಬೋಧಕ ಹಾಡುಗಳೂ ಇದರಲ್ಲಿವೆ. ಕೊನೆಯದಾದ 'ನನ್ನ ಕನ್ನಡ' ಕನ್ನಡದ ಹೀನದಶೆಗಾಗಿ ಮಿಡುಕಿ, ಅದರ ಏಳಿಗೆಯನ್ನು ಹಾರಯಿ ಸುವುದು.

ಛಂದಸ್ಸು-ಭಾಷಾಶೈಲಿಗಳು 'ಅಂಬಿಕಾತನಯದತ್ತ'ರ ನೆನ ಪನ್ನು ತಂದುಕೊಡುವುವಾದರೂ ಅದರಲ್ಲಿ ಶ್ರೀ. ಶೇಷಗಿರಿರಾಯರ ವ್ಯಕ್ತಿತ್ವ ಒಡೆದುಕಾಣುವುದು. ಜಾನಪದ ಛಂದಸ್ಸು, ದೇಸಿಗಳ ಬಳಕೆ ಇವರಿಗಿಂತ ಮೊದಲು ನಮಗೆ 'ಅಂಬಿಕಾತನಯದತ್ತ'ರ ಕೃತಿಗಳಲ್ಲಿ ನೋಡಲು ಸಿಕ್ಕುವುದರಿಂದಷ್ಟಕ್ಕೇ ಇವು ಅವರ ಅನುಕರ ಣೆಯ ಫಲಗಳೆಂದು ಹೇಳುವಂತಿಲ್ಲ. 'ಗೀತಾಪ್ರಿಯ'ರ ಗೀತಗಳು ಇನ್ನೂ ಹೆಚ್ಚು-ಹೆಚ್ಚಾಗಿ ಬರಬೇಕು. ಕನ್ನಡ ರಸಿಕರು ಸಹಾನು-ಭೂತಿ-ಪೂರ್ವಹೃದಯತೆಗಳಿಂದ ಈ ಗೀತಗಳನ್ನು ಓದಿ ರಸವನ್ನು ಅನು ಭವಿಸಬೇಕು. 'ಗೀತಾಪ್ರಿಯ'ರು ರಸಿಕನಲ್ಲಿ ಕೋರುವುದಿದು:

"ದೇಹವೆನ್ನಯ ಕಲ್ಪದ್ರುಮವದಲಿ ಬಯಕೆ ಹಣ್ಣೇನು?
ಸ್ನೇಹಕರಗಳಿಂದೆತ್ತಿ ಆವುಗಳನು ಸ್ವಾಗತ-ಹೃದಯ ನೀನು।

—ಚಿಟಗೇರಿ ಕೃಷ್ಣಶರ್ಮ

(೧೪೯ನೆಯ ಪುಟ ನೋಡಿ

ಅವಳು

(ಸಣ್ಣ ಕತೆ)

ಶ್ರೀ. ರಮಾಕಾಂತ ದೇಸಾಯಿ

ಎಲ್ಲ ಜೀವಗಳೂ ಅದೆಲ್ಲಿಯೊ ತೆರಳಿದಾಗ, ಎಲ್ಲಿಯೂ ಇಲ್ಲದ ಜೀವವೊಂದು ಜಗದಲ್ಲಿ ಬಂತು; ಅದೇ ಜೀವವೇ 'ಅವಳು'. ಅವಳು ಹುಟ್ಟಿದುದು ಮಧ್ಯರಾತ್ರಿಯಲ್ಲಿ. ಅವಳ ಅಪ್ಪನಾರೋ ಎಂಬುದು ಅವಳ ತಾಯಿಗೆ ತಿಳಿಯದು; ಗೊತ್ತಿಲ್ಲದ ತಂದೆಯ ಮಗುವಿನ ಜನ್ಮವು ಅವಳ ಬೀದಿಯಲ್ಲಿ.

ಬೀದಿಯಲ್ಲಿ ಹುಟ್ಟಿದ ಮಗು ಬಾಲಚಂದ್ರನಂತೆ ಬೆಳೆಯಲೂ ಇಲ್ಲ; ಮರಣದ ದಾರಿಯನ್ನು ಹಿಡಿದ ಚಂದ್ರನಂತೆ ಕೊರಗಲೂ ಇಲ್ಲ. ಸರ್ವ ಸಾಧಾರಣ ಭಿಕ್ಷುಕಿಯ ಮಗು ಅದು. ಒಂದು, ಎರಡು, ಮೂರು ದಿನಗಳಂತೆ—ವರುಷಗಳಾಗುತ್ತಲೂ ನಡೆದುವು.

ಒಂದು ಮಾಂಸದ ಮುದ್ದೆ ನಾಲ್ಕುವರುಷದ ತರುವಾಯ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿ ತಿರುಗತೊಡಗಿತು. ತಾಯಿನತ್ತ ಕೂಡಲೆ ಸಂಸಾರದ ಸರ್ವಭಾರವನ್ನು ಹೊತ್ತುಕೊಂಡು ಅದನ್ನು ನಿರ್ವಹಿಸುವುದಕ್ಕಾಗಿ ಅಲೆಯತೊಡಗಿತು. ವಿಧಿಯೇ ಅದರ ಮನೆ, ಸಂಸಾರ.

ಅವಳಿಗೆ ಹಸಿವೆಯಾದರೆ ತಿನ್ನುವುದು ಗೊತ್ತು. ತಿನ್ನುವುದಕ್ಕೆ ಭಿಕ್ಷಾನ್ನವನ್ನು ಬೇಡಿದವರು ಕೊಡುವರೆಂಬುದೂ ಗೊತ್ತು. ಅಂದ ಮೇಲೆನು? ಹರಡಿ ಹಬ್ಬಿದ ನಟ್ಟಣವನ್ನೇ ಅವಳ ತಾಯಿ ಅವಳಿಗೆ 'ಅನ್ನ' ಎಂದು ಮಾಡಿಟ್ಟು ತಾನು ಹೋಗಿದ್ದಳು.

ತಾಯಿಯ ಕುಂಕುಳಲ್ಲಿ ಕುಳಿತಾಗ ಹೆರವರು ಅವಳ ತಾಯಿಗೆ ಹಿಟ್ಟುವನ್ನು ನೋಡಿ ಹಿಗ್ಗುತ್ತಿದ್ದಳು ಅವಳು. ಆದರೆ ಅಂದಿನ ಧನಕ್ಕೆ ಎಂದೂ ಒಡತಿಯಿರಲಿಲ್ಲ, ಅವಳ ತಾಯಿಯಿದ್ದಳು. ಇಂದು ಅವಳೇ ಧನದ ಒಡತಿ, ಏನು ಬಂದರೂ ಅವಳದೇ. ಬಂದ ಎಲ್ಲದಕ್ಕೂ ತಾನೇ ಅಧಿಕಾರಿಣಿ. ಆದುದರಿಂದ ಅವಳ ಜೀವನ ಸುಖವಾಗಿ ಸಾಗಿತ್ತು.

'ಬಂದದ್ದೆಲ್ಲ ತಿನ್ನುವುದಕ್ಕೆ' ಎಂದು ಬಂದದ್ದನ್ನೆಲ್ಲ ತಿಂದು ಸುಖವಾಗಿ ಇರುತ್ತಿದ್ದಳು. ಅವಳ ತಾಯಿ ಇದ್ದಾಗ ದೆಚ್ಚೂ ಇರಲಿಲ್ಲ; ನಾಳೆನು ಕಡಿಮೆಯೂ ಇಲ್ಲ. ಅಂದಿನಂತೆ ಇಂದೂ ಬೇಡುವುದು ತಿನ್ನುವುದನ್ನು ಅಂದಿನಂತೆ ಇಂದೂ ತಿನ್ನುವುದು. ಭಿಕ್ಷುಕರ ಜೀವನದಲ್ಲಿ 'ನಾಳೆಗೆ' ಎಂಬ ಶಬ್ದವೇ ಇರಲಿಕ್ಕಿಲ್ಲ. 'ಇಲ್ಲ' ಎಂದೇ ನನ್ನ ಮತ.

ನಾಳೆ ಎನ್ನುವುದು ಗೊತ್ತಿಲ್ಲದೆಯೆ ಎಲ್ಲ ನಾಳೆಗಳನ್ನು ಒಂದು ತಂದುತ್ತ ಮಗು ಹುಡುಗಿಯಾದಳು. ತರುಣಿಯಾದಳು. ಅಂದಿನಂತೆ ಇಂದೂ ಅರಿವೆಗಳನ್ನು ಧರಿಸುತ್ತಿದ್ದಾಳೆ. ಚಳಿಗಾಳಿಗೆಂದು ತಾನು ಧರಿಸುತ್ತಿದ್ದ ಅರಿವೆಗಳು ಇಂದು ಮಾನ ಮುಚ್ಚುವುದಕ್ಕೆ ಮಾತ್ರವು. ಅಂದಿನಂತೆ ಇಂದೂ ಬೇಡುತ್ತಿದ್ದಳು. ಅಂದು 'ಮಗು' ಎಂದು ನೀಡುತ್ತಿದ್ದರು; ಇಂದು 'ತರುಣಿ' ಎಂದು ನೀಡುತ್ತಾರೆ. ನೀಡುವುದೇನು ನಿಂತಿಲ್ಲ. ನೀಡುವುದು ನಿಂತಿದ್ದರೆ ಅವಳೂ ನಿಲ್ಲುತ್ತಿದ್ದಳು, ಕೊಡುತ್ತಿದ್ದಳು, ಉರುಳುತ್ತಿದ್ದಳು; ಆದರೆ ಹಾಗೇನೂ ಆಗಿಲ್ಲ ಎಂದ ಮೇಲೆ ನೀಡುವುದೇನೂ ನಿಂತಿಲ್ಲ.

ಬೀದಿ ಬೀದಿ ಅಲೆದು ಬೇಡುವುದು, ಬೇಡವಾದಾಗ ಒಂದೆಡೆಗೆ ಕುಳಿತು ಬೇಡುವುದು. ಅದರೂ ಬೇಡುವುದು.

ಅಲೆದು ಅಲೆದು ಬೇಡುವುದಕ್ಕಿಂತ ಕುಳಿತು ಬೇಡುವುದು ಲಾಭದಾಯಕವೆಂದು ಅವಳಿಗೆ ಎನ್ನಿಸುತ್ತಿದೆ. ಏಕೆಂದರೆ ಮನೆಮನೆಗೆ ಹೋದಾಗ ಯಾರೂ ಬಿಲ್ಲಿಯನ್ನೂ ಕೊಡುತ್ತಿರಲಿಲ್ಲ. ನಿಜವಾಗಿ ನೋಡಿದರೆ ಮನೆಯೆದುರು ಅವಳು ಬೇಡುವುದು 'ಕರುಣಾಸಾಗರ' ಎನ್ನುವ ಹೆಣ್ಣನ್ನು. ಆದರೆ ಅವರಾರೂ (ಎಲ್ಲರೂ ಅಲ್ಲ) ಕೊಡುತ್ತಿರಲಿಲ್ಲ. ಆದೇ ಬೀದಿಯಲ್ಲಿ ಕುಳಿತು ಬೇಡಿದರೆ 'ಕ್ರೂರ' 'ಕಠೋರ' ಎನ್ನುವ ಗಂಡು ಜಾತಿ ಇಲ್ಲೆನ್ನದೆ (ಎಲ್ಲರೂ ಅಲ್ಲ) ಹೋಗುತ್ತಿರಲಿಲ್ಲ.

ಅಂತೆಯೆ ಅವಳು ಹೆಂಗುಸಾದರೂ ಹೆಂಗುಸಿನ ಮೇಲೆ ಕೋಪ. ಅಂತೆಯೆ ಗಂಡುಸಿನ ಮೇಲೆ ಪ್ರೀತಿ. ಅವಳೇನು, ಹೇಳಿ ಕೇಳಿ ಭಿಕ್ಷುಕಿ; ಕೊಟ್ಟವರನ್ನು ಹರಸಲೇಬೇಕು. ಯಾರೂ ಕೊಡಲಿ, ಕೊಟ್ಟವರು ದೇವರು; ಒಳ್ಳೆಯವರು. ದೇವರು ಕೊಡುತ್ತಲೇ ಇದ್ದ; ಅವಳ ಜೀವನ ಸಾಗುತ್ತಲೇ ಇತ್ತು, ಬೀದಿಯಲ್ಲಿ.

ಅವಳು ಇಂದಿನ ವರೆಗೆ ಹುಡುಗಿ ಇದ್ದಳು. ಇಂದು ತರುಣಿಯಾಗಿದ್ದಾಳೆ. ಆದರೆ ಅವಳೇನೂ ಅರಿಯಳು: 'ತಾನು ಇಂದಿನ ವರೆಗೆ ಹುಡುಗಿ, ಇಂದು ತರುಣಿ' ಎಂದು. ಏಕೆಂದರೆ ಸಾವಕಾಶವಾಗಿ ಮೈಗೂಡಿದ ತಾರುಣ್ಯ ಅವಳ ಜೀವನದಲ್ಲಿ ಅದಾವ ಬದಲನ್ನೂ ಮಾಡಲಿಲ್ಲ ಅವಳ ದೃಷ್ಟಿಯಿಂದ ಹಿಂದೂ ಹೊಟ್ಟೆಗಾಗಿ ಅವಳ ಕೈ ಮುಂದಿರುತ್ತಿತ್ತು, ಇಂದೂ ಇವೆ. ಜೀವನದಲ್ಲಿ ಏರು—ಇಳಿವು—ಇದ್ದರೆ ಸುಖ ದುಃಖ. ಅದಿಲ್ಲದಿದ್ದಲ್ಲಿ ಎಲ್ಲವೂ ಸಮ. ನಿನ್ನಿನಂತೆ ಇಂದು ಇತ್ತು. ಅದಕ್ಕನುರೂಪವಾಗಿ ಮನವಿತ್ತು. ಆನುದರಿಂದ ಅವಳಿಗೆ ದೇಹದ ಬದಲು ಏನು ಗೊತ್ತಾಗಲೆ ಇಲ್ಲ.

ವಿಧಿಯ ಆಟವೆಂದು ಜನನೆನ್ನುತ್ತಿದ್ದರೆ ನಾನಂತೂ ಮನುಷ್ಯನ ಮನವ ಮಾಟವೆಂದು ಎನ್ನುವೆ. ಮನುಷ್ಯರಲ್ಲಿ ಮನವ ಹೊಯ್ದಾಟವಿರದಿದ್ದರೆ 'ವಿಧಿ'ಯೆಂಬ ಶಬ್ದ ಕೂಡ ಉತ್ಪತ್ತಿಯಾಗುತ್ತಿರಲಿಲ್ಲ. ಗೊತ್ತಿಲ್ಲದ ಯಾವನಿಗೊ, ಯಾವಳಿಗೊ, ಯಾವುದಕ್ಕೊ 'ವಿಧಿ'ಎನ್ನುವುದು ಕೈಯಲ್ಲಾಗದ ಪೇಡಿಯ ಕೆಲಸ. ಅವಳು ಅದೆಂದೂ ವಿಧಿಯನ್ನು ನಂಬಿ ಕೈ ಮುಂದು ಮಾಡಲಿಲ್ಲ; ಹಿಂತೆಗೆದುಕೊಳ್ಳಲೂ ಇಲ್ಲ.

* * * *

ದೇಹಕ್ಕನುರೂಪವಾಗಿದ್ದ ಕುಂಬಿನ ಕೈ ಒಮ್ಮೆದಿನ ಭಾರವಾಯಿತು. ಇಂದಿನ ವರೆಗೆ ಗೊತ್ತಿಲ್ಲದ ಒಂದು ಜಗತ್ತನ್ನು ಇಂದು ಅವಳು ನೋಡಿದಳು. ಅಲ್ಲಿ ಅವಳ ಭಾರವಾದ ಕೈ ತೋರಿಸಿತು.

ಹೊರಜಗದ ಬೀದಿಯನ್ನೇ ಬೀಡಾರ ಮಾಡಿಕೊಂಡಿದ್ದ ಅವಳು ಇಂದು ಒಳಜಗದಲ್ಲಿದ್ದಳು. ಆಯುಷ್ಯದಲ್ಲಿ ಇಂದು ಅವಳು ನಾಲ್ಕು ಗೋಡೆ ಮೇಲೆ ಚಿಪ್ಪರ, ಬಂದು ಮಾಡಿನ ಬಾಗಿಲು ಇವರ ಮಧ್ಯದಲ್ಲಿ ಜೊತೆಯಾಗಿದ್ದಾಳೆ ಒಬ್ಬನೊಡನೆ.

ಅವಳಿಗೆ ಒಂದು ಗೊತ್ತು: ತನಗೆ ನೀಡುವವರು ಒಳ್ಳೆಯವರು ಎಂದು. ತನಗೆ ಅವನು ನೀಡುವ, ಅವರಿಂದ ಅವ ಒಳ್ಳೆಯವ. ಅವನು ಒಳ್ಳೆಯವನಿರದಿದ್ದರೆ, ತನಗೆ ಉಟ್ಟುಕೊಳ್ಳಲು ಹೊದೆನುಕೊಳ್ಳಲು

ಕೊಡುತ್ತಿದ್ದನೆ ? ಅಮೂ ಅಲ್ಲದೆ ಎಲ್ಲರೂ " ದೂರ ಸರಿ " ಎನ್ನುವ ತನ್ನಂತಹ ಭಿಕ್ಷುಕಿಯನ್ನು ಹತ್ತಿರ ಕರೆದುಕೊಳ್ಳುತ್ತಿದ್ದನೆ? ' ಆಹುದು ಅವನು ನಿಜವಾಗಿಯೂ ಬಹಳ ಒಳ್ಳೆಯವ, ಅವನು ದೇವ. ತನ್ನ ದೇವ ! '

ಇಂದು ಅವಳು ಬಿಸಿಲನ್ನು ಬಿಟ್ಟು ನೆಳಲಲ್ಲಿ ಇದ್ದಳು. ಹಲವು ಬೀಸಾಕಿದ ಹಳೆಯ ತುಂಡನ್ನು ಬಿಟ್ಟು ಹಲವರು ಜೆಲುಬೆನ್ನುವ ಹೊಸ ಸೀರೆಯನ್ನುಟ್ಟಿದ್ದಳು. ಹಳಸಿದ ಅನ್ನವನ್ನು ಬಿಟ್ಟು ಬಿಸಿ ಪಕ್ವಾನ್ನದ ಸವಿ ಸವಿಯುತ್ತಿದ್ದಳು. ಇದೆಲ್ಲವೂ ಅವಳಿಗೆ ಅವನ ಪುಣ್ಯದಿಂದ.

ಅವನು ಯಾರು ? ಎಲ್ಲಿಯವ ? ಮಾಡುವನೇನು ? ಇದಾವುದೂ ಅವಳಿಗೆ ಗೊತ್ತಿಲ್ಲ. ಅವಳಿಗೆ ಅದೆಲ್ಲವನ್ನೂ ತೆಗೆದುಕೊಂಡು ಮಾಡುವುದೇನು ? ತನಗೆ ಬೇಡಿದಾಗ ಬೇಡಿದ್ದನ್ನು ತಂದಿಡುವ. ಸಾಕು. ತನಗೆ ಬೇಡಿದ್ದನ್ನು ಕೊಡುವವ ದೇವ. ಹೆಚ್ಚಿಗೇನು ಮಾಡುವುದು ತೆಗೆದುಕೊಂಡು ?

'ಚಳಿ ಬಹಳವಾಗುತ್ತಿದ್ದರೆ ಇಲ್ಲನೆ ನಡೆಯುವಾಗ ಕಾಲು ಬೇಯುತ್ತಿದ್ದರೆ ದುಃಖ, ಭೋಜನ ಸಿಕ್ಕರೆ ಸುಖ' ಎಂದು ಇಂದಿನ ವರೆಗೆ ಅವಳ ಕಲ್ಪನೆ. ಆದರೆ ಇಂದು ಅವಳು ' ಅದು ಅಂದಿನದು ನಿಜವಾದ ಸುಖ-ದುಃಖವಲ್ಲ ' ಎಂದೆನ್ನುತ್ತಾಳೆ. ಈಗಾದರೂ ಅವಳಿಗೆ ' ದುಃಖವೆಂದರೆ ಏನು ? ' ಎಂಬುದು ಇಂದೂ ಗೊತ್ತಿಲ್ಲ; ಆದರೆ ಸುಖವೆಂದರೆ ಇದೇ ಎಂಬುದನ್ನು ಮಾತ್ರ ಅರಿತಿದ್ದಾಳೆ. ತನ್ನ ದೇವ ಹತ್ತಿರಿದ್ದಾಗ ಅವನು ಬಂದು ತನ್ನನ್ನು ಹತ್ತಿರ ಎಳೆದುಕೊಂಡರೆ.....

ದುಃಖದ ಕಹಿ ಹೇಗಿದೆ ಎಂಬುದು ಗೊತ್ತಿರದಿದ್ದರೂ ಸುಖದಲ್ಲಿ ಇದ್ದಾಳೆ; ಸುಖಪಡುತ್ತಿದ್ದಾಳೆ.

' ಸುಖದಲ್ಲಿರುವುದು ' ಎಂದರೆ ದುಃಖಕ್ಕೆ ಆಮಂತ್ರಣ ಕೊಡುವುದಕ್ಕಾಗಿಯೇ ಎಂಬುದನ್ನು ಅವಳು ಅರಿಯದಿದ್ದರೂ,ದುಃಖವು ಸಾಗಿ ಅವಳ ಮೇಲೆ ಬಂತು ತನ್ನ ಸವಿಯನ್ನು ತೋರಿಸುವುದಕ್ಕಾಗಿ; ಒಂದು ದಿನ ಅವಳ ' ಅವ ' ಅವಳಿಂದ ದೂರವಾಗಿ ಹೋದ.

ಜೀವನದಲ್ಲಿ ಅವಳು ಸುಖವನ್ನು ಅನುಭವಿಸಿದಳು. ಈಗ ದುಃಖದ ದರಿಯಲ್ಲಿ ಸಿಲುಕಿದಳು. ಅವಳ ಅವ ಒಬ್ಬ "ಖೂನೀ ಕಳ್ಳ" ನಂತೆ. ಇಂತಹ ಕಳ್ಳರ ಕಾಟವನ್ನು ಕಡಿಮೆ ಮಾಡುವುದಕ್ಕಾಗಿ ಸರಕಾರವು ಅವಳಿಂದ ಅವನನ್ನು ಕಸಿದುಕೊಂಡು ಹೋಯಿತು; ಮತ್ತೆ ತಿರುಗಿ ಅವರಿಬ್ಬರೂ ಒಂದಾಗದಂತೆ ಮಾಡಿತು.

* * * *

ಬೀದಿಯಿಂದ ಮನೆ ಸೇರಿದ ಅವಳು ತಿರುಗಿ ಸ್ವಸ್ಥಾನಕ್ಕೆ ಮರಳಿದಳು. ಮನೆಗೆ ಹೋಗುವಾಗ ಒಬ್ಬಳೇ ಹೋಗಿದ್ದಳು; ಹೊರಗೆ ಬಂದಾಗ ಮಾತ್ರ ಇಬ್ಬರಾಗಿದ್ದರು.

ಇಂದು ಅವಳು ಮೊದಲಿನವಳಿರಲಿಲ್ಲ. ಒರ್ವನ ಹೆಂಡತಿಯಾಗಿ ಸಂಸಾರವನ್ನು ಮಾಡಿದ್ದಳು; ಅವಳ ಸಂಸಾರದಲ್ಲಿ ಏಳರ ಕೊರತೆಯೂ ಇರಲಿಲ್ಲ. ಅವ, ಅದಾವ ರೀತಿಯಿಂದಲೇ ಹಣ ತರಲಿ ತರುತ್ತಿದ್ದ. ಹಿಂದಿನ ಭಿಕ್ಷುಕಿ ನಿನ್ನೆ ಭಿಕ್ಷೆ ನೀಡುವವಳಾಗಿದ್ದಳು. ಮತ್ತೆ ಇಂದು ಭಿಕ್ಷೆ ಬೇಡುವುದಕ್ಕೆ ಸಿದ್ಧಳಾಗಿದ್ದಳು. ಬೇಡುವುದನ್ನು ಬಿಟ್ಟು ಕೊಡುವವಳಾದವಳು ಇಂದು ಕೊಡುವುದನ್ನು ಬಿಟ್ಟು ಮತ್ತೆ ಬೇಡುವುದಕ್ಕೆ ಸಿದ್ಧಳಾಗಬೇಕಾಯಿತು.

ಹಿಂದೆ ಅವಳು ಭಿಕ್ಷುಕಿಯೇ ಇದ್ದಾಗ, ಬೇಡುವಾಗ ಅದಾವ ಭಾವನೆಗಳೂ ಇರುತ್ತಿರಲಿಲ್ಲ. ಅವಳು ಆಗ ತಿಳಿದಿದ್ದಳು 'ಬೇಡುವುದು ತನ್ನ ಧರ್ಮ' ಎಂದು. ಆದರೆ ಇಂದು ಅವಳ ಕೈ ಹಿಂದಿನ ಕಾರ್ಯಕ್ಕೆ ಅಣಿಯಾಗದು. ' ಬೇಡುವುದಕ್ಕಿಂತ ಮರಣ ಲೇಸು, ' ಎನ್ನುತ್ತಿದ್ದಾಳೆ. ಅವಳು ಹಿಂದಿನದನ್ನು ಮರೆತಿದ್ದಾಳೆ.

ಇರಲು ಮನೆಯಿಲ್ಲ; ತಿನ್ನಲು ಅನ್ನವಿಲ್ಲ. ಹಿಂದೆ ಮನೆಯಿಲ್ಲದಾಗ ಬೀದಿಯಲ್ಲಿರುತ್ತಿದ್ದಳು. ಆಗ ಹೆದರಿಕೆ ಇದ್ದಿರಲಿಲ್ಲ. ಆದರೆ ಈಗ ... ... ?

ಅವಳ ಜೀವನದಲ್ಲಿ ಹಗಲು ಹೋಗಿ ರಾತ್ರಿ ಬಂದಿತು. ಅವಳಿಗೆ ಕತ್ತಲೆಯಲ್ಲಿ ಆದೇನೂ ಕಾಣಿಸದು. ಏನು ಮಾಡಬೇಕೆಂಬುದೂ ತಿಳಿಯದು. ಆದರೆ ಹಸಿವ ಹೊಟ್ಟೆಗೆ ಇದಾವುದೂ ಗೊತ್ತಾಗದು. ಅವಳು ನೀಡುವುದನ್ನು ಬಿಟ್ಟು ಬೇಡುವುದಕ್ಕಣಿಯಾದಳು. ಅವಳು ಇಂದು ನುರಿತ ಭಿಕ್ಷುಕಿಯಲ್ಲ. ಮೊದಲನೆಯ ದಿನ ಶಾಲೆಗೆ ಸೇರಿದ ಬಾಲಿಕೆಯಂತಾಯಿತು ಅವಳ ಸ್ಥಿತಿ.

ಇಂದು ಅವಳು ಬೇಡುವಾಗ ಹಲವರು ಹಲವು ತೆರದ ಮಾತುಗಳನ್ನಾಡುವರು: " ನಿನ್ನ ಗಂಡನ ಕಡೆಗೆ ಹೋಗು" " ಹೊಟ್ಟೆಗೆ ಹಾಕುವುದಾಗದಿದ್ದರೆ ಲಗ್ನವನ್ನೇಕೆ ಮಾಡಿಕೊಳ್ಳಬೇಕಿತ್ತು " "ಲಗ್ನ-ವೆ-ಲ್ಲಿಯ-ದರೀss " ಇತ್ಯಾದಿ.....

ಹಲವರ ಹಲವಾರು ತೆರದ ಮಾತು ಕೇಳಿ " ನಾನು ಅವನ ಜೊತೆಗೆ ಅವನ ಮನೆಗೆ ಹೋಗಿರದಿದ್ದರೆ ನಾನು ನಾನೇ ಇರುತ್ತಿದ್ದೆ; ನನಗಾರೂ ಏನೂ ಅನ್ನಪೆ ಹಿಂದಿನಂತೆ ಇಂದೂ ನಡೆಯಬಹುದಾಗಿತ್ತು. ಇಂದು ಎಲ್ಲರೂ ನನ್ನ ಕಂಕುಳಲ್ಲಿಯ ಮಗುವನ್ನು ನೋಡಿ ನಗುವರು. ಆ ಮಗುವಿನಾಗಿ ನಾನೂ ಇಂದು ದುಃಖಿ !" ಎಂದು ಬಗೆಯುವಳು

ಆದರೂ ಅವಳು ಅದೆಂದೂ ತನ್ನ ಮಗುವನ್ನು ಬಿಟ್ಟು ದೂರವಾಗಲಿಲ್ಲ. ಜಗದಲ್ಲಿ ಇನ್ನಾವುದರ ಕಡೆಗೂ ಅವಳಿಗೆ ಎಳೆತವಿರಲಿಲ್ಲ. ತಿರುತಿರುಗಿ ಅವನ ನೆನಹು ನುಗ್ಗುತ್ತಿತ್ತು; ಆ ನೆನಹಿನ ಮರೆಯಲ್ಲಿ ಕುಳಿತು ರೋದಿಸುತ್ತಿದ್ದಳು. ಅವಳು ಅವನ ಜೊತೆಗೆ ಆಡಿದ ಆಟ, ನೋಡಿದ ನೋಟ—ಎಲ್ಲವೂ ಅಗ್ನಿಯನ್ನು ಪ್ರಜ್ವಲಿಸುವ ಸಾಧನಗಳಾಗಿದ್ದುವು. ಜಗದಲ್ಲಿ ತನ್ನ ಮಗುವನ್ನು ಬಿಟ್ಟರೆ ಇನ್ನಾವುದೂ ತನ್ನದೆಂಬುದು ಅಕೆಗೆ ಇರಲಿಲ್ಲ. ಅಂತೆಯೇ ಮಗುವಿನ ಮೇಲೆ ಇಲ್ಲ ನೋಹ. ತಿರುತಿರುಗಿ ಮುದ್ದಿಸುತ್ತಿದ್ದಳು. ಆಡಿಸುತ್ತಿದ್ದಳು. ಮಗನನ್ನು ನೋಡಿ ನಗುವಿನ ತಂದೆಯನ್ನು ಮರೆಯುವುದಕ್ಕೆ ಪ್ರಯತ್ನಿಸುತ್ತಿದ್ದಳು. ಆದರೆ.....?

ಒಂದೇ ಒಂದಾದ ತನ್ನ ಮಗುವಿನ ಅದಾವ ಇಚ್ಛೆಯನ್ನು ಪೂರ್ಣ ಮಾಡದೆ ಇರುತ್ತಿರಲಿಲ್ಲ. ತನ್ನ ಕೂಸು ಎಲ್ಲರಿಗಿಂತ ದೊಡ್ಡವನಾಗಿ ಬಾಳಲಿ ಎನ್ನುತ್ತಿದ್ದಳು. " ಮಗು, ನೀನು ಎಲ್ಲರಿಗಿಂತ ದೊಡ್ಡವನಾಗಿ ಮೋಟರಿನಲ್ಲಿ ಕುಳಿತು ಬಾ ! " ಎನ್ನುತ್ತಿದ್ದಳು. ಏನನ್ನು ತಿಳಿಯದ ಸಜೀವ ಪಿಂಡಕ್ಕೆ.....

ಅವಳ 'ದೊಡ್ಡವನಾಗು' ಎನ್ನುವುದನ್ನು ಸತ್ಯ ಮಾಡುವುದಕ್ಕಾಗಿಯೇ ಏನೋ, ಮಗು ಬಾಲಕನಾದನು. ಆ ಮಗು ಏನನ್ನು

ಬೇಡಿದರೂ ಕೊಡುತ್ತಿದ್ದಳು; ಆದರೆ ಭಿಕ್ಷುಕಿಯ ಮಗು ಬೇಡುವುದೇನು?

ದೊಡ್ಡವನಾಗಲು ಹೊರಟ ಮಗು ದೊಡ್ಡವನಾವ ಚಿಹ್ನಗಳು ಜೋರತೊಡಗಿದುವು. ದಿನಾಲು ಅದೆಲ್ಲಿಯಾದರೂ ತಿರುಗಿ ಹಣ ತರುತ್ತಿತ್ತು. ಮಗು ತಂದ ಹಣದಿಂದ ಅವಳಿಗೆ ಆನಂದವಾಗುತ್ತಿರಲಿಲ್ಲ. ಅವಳ ಆಶೆ 'ಮಗು ತನ್ನ ದಾಗಬಾರದು, ತನ್ನವನ ಮಗುವಾಗಬೇಕು' ಎಂದು. ಆದರೆ.....ಅವಳ ಕಂಕುಳಲ್ಲಿ ಬೆಳೆದ ಮಗು. ದುಃಖ ವಾದರೂ ದೂಡುತ್ತಿರಲಿಲ್ಲ. ಏಕೆ....?

'ಅವಳು ಈಗ ಹಿಂದಿನ ಭಿಕ್ಷುಕಿಯಿರಲಿಲ್ಲ. ಅಂದು ಜನರು ಎಸೆದ ಎಂಜಲನ್ನು ಪಕ್ಕಾನ್ನದ ಸವಿಯಿಂದ ತಿನ್ನುತ್ತಿದ್ದಳು. ಅಂದು ಅವು ಪಕ್ವಾನ್ನದ ಸಮವೆನ್ನಿಸುತ್ತಿತ್ತು. ಆಗ ಅವಳಿಗೆ-ಗೊತ್ತಿರಲಿಲ್ಲ: ಬೇಡುವವರಿಗೆ ನೀಡುವ ಜನ ಹೇಗೆ ನೀಡುತ್ತಾರೆ ಎಂಬುದು. ಬೇಡುವುದು ಹೋಗಿ ನೀಡುವುದು ಬಂದಾಗ, ಅವಳು ಬೇಡುವುದನ್ನು ಮರೆತು ನೀಡುವುದನ್ನು ಅರಿತಳು. ಬೀದಿಗೆ ಬೀಸಾಕುವಾಗ ಬೀಸಾಕಿದ್ದ ಪದಾರ್ಥವದು ಭಿಕ್ಷುಕಿಯ ಉಡಿಯಲ್ಲಿ ಬಿದ್ದರೆ ಅನ್ನವಾಗುತ್ತಿತ್ತು. ಇದನ್ನು ನೋದಲು ಅರಿತಿರಲಿಲ್ಲ. ತಾನು ತಿನ್ನುವ ಅನ್ನ ಬೀದಿಗೆ ಬೀಸಾಕುವಂತಹದೆಂಬುದನ್ನು ಅವಳು ಹಿಂದೆ ಅರಿತಿರಲಿಲ್ಲ. ಆದರೆ..... ಇಂದು—? ಬೇಡುವುದನ್ನು ಬಿಡಿಸಿ ನೀಡುವುದಕ್ಕೆ ಕರೆದುಕೊಂಡು ಹೋದವ, ಆದೆಂದು ನೀಡುವುದನ್ನು ಬಿಡಿಸಿ ಬೇಡುವುದಕ್ಕೆ ಮೂಡಿ ಹೋದನೊ ಅಂದಿನಿಂದ, ಬೇಡಿದ ಅನ್ನವನ್ನು ತಿನ್ನುವುದಕ್ಕಾಗದು. 'ಆಗದು' ಎಂದು ಕುಳಿತರೆ ಹೊಟ್ಟೆ ಕೇಳದು. ಅವಳಲ್ಲಿ ಇನ್ನೂ ಒಂದು ಆಶೆ; ಆ ಆಶೆಗಾಗಿ ತಿನ್ನುತ್ತಿದ್ದಳು. ಅಮೃತದ ಸವಿಯಿಂದಲ್ಲ; ವಿಷದ ಕಹಿಯಿಂದ.

'ತಂದೆಯಂತೆ ಮಗನು ಕೂಡ ಬೀದಿಯಿಂದ ಮನೆಗೆ ಕರೆತಾಯ್ದುವ. ತನ್ನನ್ನು ಬೀದಿ ಬಿಡಿಸಿ ಮನೆಸೇರಿಸುವ ತನ್ನ ಮಗು ಈ ವಿಷತಿಂದು ವಿಷದ ಹುಳುವಾಗಬಾರದು!' ಎಂದು ಬೇರೆ ಮತ್ತೇ ನನ್ನೊ ಮಾಡತೊಡಗಿದಳು. ಆದರೆ ಸ್ವರ್ಗಸುಖದ ಆನಂದದಿಂದಲ್ಲ; ಮರಣದ ಮುಖದಿಂದ.

ಮತ್ತೇನನ್ನೊ ಮಾಡುತ್ತ ಹೊಟ್ಟೆಹೊರೆದುಕೊಳ್ಳುವ, ಮಗನನ್ನು ದೊಡ್ಡವನನ್ನು ಮಾಡುವ ಭಿಕ್ಷುಕಿ ಮತ್ತೇತರ ಸಲುವಾಗಿ ಮತ್ತೊಂದು ಮಗುವಿನ ಜನ್ಮದಾತೆಯಾದಳು? ಬೀದಿಯಲ್ಲಿ ಹುಟ್ಟಿದ ಹೆಣ್ಣು ಬೇರೊಂದು ಹೆಣ್ಣಿಗೆ ಬೀದಿಯಲ್ಲಿ ಜನ್ಮಕೊಟ್ಟಳು. ಮಗುವು ಇಚ್ಛೆ ತಾಯಿಯಂತಾಗಿ ಬಾಳುವೆನೆಂದು ಆರಿತು, ಬೇರೊಂದು ಉಚ್ಚ ಕುಲದಲ್ಲಿ ಜನ್ಮ ತೆಗೆದುಕೊಳ್ಳಬೇಕೆಂದು ಹೊರಟು ಹೋಯಿತು. ಉಳಿದವನನ್ನು ನೋಡಿ ಅವಳು ಕಾಲ ಕಳೆಯುತ್ತಿದ್ದಳು.

ತಾಯಿಯ ಅಮೃತಮಾಯೆಯಿಂದ ಮಗು ಮನುಷ್ಯನಾದನು, ದೊಡ್ಡವನಾದನು. ದೊಡ್ಡವನಾವವ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡತೊಡಗಿದನು. ಅವಳಿಗೆ ಆನಂದ: 'ಮಗು ತನ್ನ ದಾಗಲಿಲ್ಲ ತನ್ನವನದಾಯಿತು' ಎಂದು. ತಂದೆಯಂತೆ ಮಗನು ಅವಳನ್ನು ಮನೆಗೆ ಕರೆದೊಯ್ದ. ಮತ್ತೆ ಅವಳು ಮುಖವನ್ನು ಮರೆತ ಸುಖದಿಂದ ಮುನ್ನೋಡತೊಡಗಿಳು.

ದೊಡ್ಡವನಾಪ ತನ್ನ ಮಗುವನ್ನು ನೋಡುವ ಭರದಲ್ಲಿ ಅವಳು ತನ್ನ ಜನ್ಮಸ್ಥಳವನ್ನು ನೋಡಿರಲೇ ಇಲ್ಲ. ಅಂತೆಯೇ ಹಿಂದೊಮ್ಮೆ ನೆಲಕ್ಕುರುಳಿದವಳು ಮತ್ತೆ ಇಂದೂ ನೆಲಕ್ಕೆ ಉರುಳಿದಳು. ಹಿಂದೆ ಅವಳು ಉರುಳಿದಾಗ ಮೈಯಲ್ಲಿ ಶಕ್ತಿಯಿತ್ತು; ಬಾಳಬೇಕೆಂಬಾಸೆ ಇತ್ತು ಆದರೆ ಇಂದು.....!

ಅವಳ ಜೀವನದಲ್ಲಿ 'ಬಾಳಬೇಕು' ಎನ್ನುವ ಆಶೆಯಿಲ್ಲ. ಹಿಂದೆ ಮನೆಯಿಂದ ಬೀದಿಗುರುಳಿದಾಗ ಇಬ್ಬರಾಗಿ ಹೊರಬಿದ್ದಿದ್ದಳು. ಆದರೆ ಇಂದು ಒಂಟಿಯಾಗಿ ಹೊರಬಿದ್ದಿದ್ದಾಳೆ. ಆಗ ನಡೆಯುವ ಸಾಮರ್ಥ್ಯವಿತ್ತು. ಈಗ ನಿಶ್ಯಕ್ತಳು 'ಅವ' ಹೋದನೆಂದು ಆಗ; ಮಗು ಹೋದನೆಂದು ಈಗ .....

ಅವಳ ಬಯಕೆ ಇತ್ತು ತಂದೆಯಂತೆ ಮಗುವಾಗಬೇಕೆಂದು. ಮಗು ತಾಯಿಯ ಬಯಕೆಯನ್ನು ಪೂರ್ಣಮಾಡಿ ತಂದೆಯಂತಾಗಿ ತಂದೆಯ ಪಾರಿಯನ್ನು ಹಿಡಿದು ಹೋಗಿದ್ದ.

ಗಂಡನೆಂದು ಭಾವಿಸಿದ್ದ **ಅವ** ಹೋದ. ಇನ್ನು ಇಲ್ಲಿ ನನ್ನದೇನಿದೆ? ಏನೂ ಇಲ್ಲ. ಬಾಳಬೇಕು ಎನ್ನುವ ಆಶೆಯಿಲ್ಲ. ಆದರೆ ಸಾಯುವುದು ಹೇಗೆ? ಗಂಡ ಹೋದನೆಂದು ಸಾಯಬೇಕೊ? ಹೋಗಿ ಬಹಳ ದಿನಗಳಾದುವು. ಮಗು ಸತ್ತನೆಂದು ಸಾಯಬೇಕೆ? ಕೂಸು ಸತ್ತಾಗ ಸಾಯಲಿಲ್ಲ. ಆಹುದು. ಅವನು ಹೋದಾಗ, ಕೂಸು ಸತ್ತಾಗ ಮಗ ಇದ್ದ. ಇಂದು....? ಇಂದು ...? ಇಲ್ಲ, ನನ್ನ ಜೀವನದಲ್ಲಿ ಏನೂ ಉಳಿದಿಲ್ಲ. ಇನ್ನು ಉಳಿದದ್ದು ಒಂದೇ. ಮರಣ ಒಂದೇ ಬರುವುದುಳಿದಿದೆ. ಬಾಳಲಾರೆ. ಸಾಯುವೆ. ದೇವಾ—ಕರೆದುಕೊ!..

ಅವಳು ಜೀವನದಲ್ಲಿ ದೇವನನ್ನು ನೆನೆದುದೂ, ಈ ರೀತಿಯಾಗಿ ಅಂಗಲಾಚಿದುದೂ ಇಂದೇ ಎನ್ನಬಹುದು. ಏನನ್ನೂ ಯಾವುದನ್ನೂ ಮಾಡಲಿಕ್ಕೆ ಆದೆಂದು ಮಾನವ ಅಸಮರ್ಥನಾಗುವನೊ ಅಂದೇ ದೇವರ ಆಶ್ರಯ ಬೇಕು; ದೇವರ ಆಶ್ರಯ ಬೇಕು. ಆದರೆ ಅವನು ಇರುವುದೆಲ್ಲಿ? ಅವಳು "ಕರೆದುಕೊ" ಎಂದು ಕೂಗಿದರೂ ಅಂಗಲಾಚಿದರೂ ಅವನ ಕೈ ಕೊಡಲಿಲ್ಲ. ಅದಕ್ಕಾಗಿ ಅವಳು ಅಳುವಳು—ಬರೇ ಅಳುವಳು. ಅಳುತ್ತ ಕೂಡ್ರುವುದೊಂದೇ ಅವಳ ಕೆಲಸವಾಗಿತ್ತು.

ಹೇಗೋ ಅವಳ ಜೀವನ ನಾಗಿತ್ತು. ಅವಳಿಂದ ಈಗ ನಡೆಯುವುದಾಗದು. ತೀರ ಅಶಕ್ತಳಾಗಿದ್ದಾಳೆ. ಸಾವು ಅವಳ ಹಿಂದೆ ನೆರಳಿನಂತೆ ಸಾಗುತ್ತಿದೆ. ಅವಳು ಅದೆಲ್ಲಿಯಾದರೂ ಕುಳಿತು ತನ್ನ ಜೀವನವನ್ನು ನಿರುಕಿಸಿ ನೋಡುವಳು. ಎಲ್ಲವೂ ಬಂದಿತು. ಎಲ್ಲವೂ ಹೋಯಿತು. ಇರಲು ಮನೆಯಿಲ್ಲದೆ ತಂದೆ ಯಾರು ಎಂಬುದು-ಗೊತ್ತಿಲ್ಲದೆ ಬೀದಿಯಲ್ಲಿ ಹುಟ್ಟಿ ಬೆಳೆದ ಹೆಣ್ಣು ಜಗದ ಸವಿಯನ್ನು ಸವಿದು ಮನೆಯನ್ನು ಸೇರಿ ತನ್ನ ಜನ್ಮಸ್ಥಳಕ್ಕೆ ತಿರುಗಿದಳು. ಸುಖದ ಸ್ಮರಣೆ ಬಂದಾಗ ನುನಡಲ್ಲಿ ಹಿಗ್ಗುತ್ತಿದ್ದಳು. ದುಃಖದ ನೆನಹು ನುಗ್ಗಿದಾಗ, ತಡೆಯಲಾರದೆಯೆ ತೆರೆದ ಕಾಲುವೆಯ ನೀರಿನಂತೆ ನುಗ್ಗಿ ಬರುತ್ತಿತ್ತು ಕಣ್ಣೀರು ಆದರೇನು? ಅವಳ ಹಿಗ್ಗನ್ನು ನೋಡಿ ಯಾರೂ ಹಿಗ್ಗುವವರಿಲ್ಲ. ದುಃಖಕ್ಕೆ ಮರುಗಿ ಸಂತಯಿಸುವವರಿಲ್ಲ. ಯಾರೂ ಕರೆಯುವವರಿಲ್ಲ. ಎಲ್ಲರೂ ಮೂಡುವವರೇ.

ಹುಟ್ಟುವಾಗ ಸನಾಥೆ ಇದ್ದಳು. ಸಾಯುವಾಗ ಅನಾಥೆಯಾಗಿ ಇದ್ದಾಳೆ. 'ಅಭಾಗಿಗಳ ಜೀವನ ರಾತ್ರಿಯಲ್ಲಿ' ಎನ್ನುವಂತೆ ಕೊನೆಗೊಂದು ದಿನ ಎಲ್ಲರ ಜೀವಗಳು ವಿಶ್ರಾಂತಿಗೆಂದು ಅದೆಲ್ಲಿಗೂ ಹೋದಾಗ, ಅವಳ ಜೀವನ ಅಖಂಡ ವಿಶ್ರಾಂತಿಗೆಂದು ಮೂರ-ಪೂರ ಹೊರಟು-ಹೋಯಿತು.

ಭರತಖಂಡದಲ್ಲಿ ಬಾಲಕರ ಚಳವಳಿ

(ಬಾಲಕನ್-ಜಿ-ಬಾರಿಯ ಪರಿಚಯ)

ಶ್ರೀ. ಸಿ. ಎಸ್. ಮುಂಗಸೂಳಿ, ಬಿ. ಎ., ಎಲ್. ಬಿ ಅಥಣಿ

ಮಕ್ಕಳ ಶಿಕ್ಷಣವು, ಶಿಕ್ಷಣ ಶಾಸ್ತ್ರದಲ್ಲಿಯ ಒಂದು ಮಹತ್ತ್ವದ ಸಂಗತಿಯಾಗಿದೆ. ಅವರ ಬಗ್ಗೆ ಶಿಕ್ಷಣತಜ್ಞರು ಎಷ್ಟೋ ಸುಧಾರಣೆಗಳನ್ನು ಮಾಡಿದ್ದಾರೆ. ಅವರಿಗೆ ಯೋಗ್ಯ ಶಿಕ್ಷಣವನ್ನು ಕೊಟ್ಟು ಅವರನ್ನು ಕಲ್ಯಾಣಕರವಾದ ಮುಂದಿನ ಭಾರತದಲ್ಲಿ ಯೋಗ್ಯ ನಾಗರಿಕರನ್ನಾಗಿ ತಯಾರಿಸುವುದು ಪಾಲಕರ, ಸಮಾಜದ ಮುಖ್ಯ ಕರ್ತವ್ಯವಾಗಿದೆ. ಏಕೆಂದರೆ ಇಂದಿನ ಬಾಲಕರು ನಾಳೆಯ ನಾಗರಿಕರು.

ಕರ್ನಾಟಕದಲ್ಲಿ ಇತ್ತೀಚೆಗೆ ಪ್ರೌಢ ಶಿಕ್ಷಣದ ಬಗ್ಗೆ ಒಳ್ಳೇ ಉತ್ಸಾಹವು ತುಂಬಿ ತುಳುಕತೊಡಗಿದೆ. ಹೊಸತಾಗಿ ನೂರು ನಾಲ್ಕು ಕಾಲೇಜುಗಳು ಸ್ಥಾಪಿಸಲ್ಪಟ್ಟಿವೆ. ಅವರೆ ಶಿಕ್ಷಣಮಂದಿರವನ್ನು ವೃಥ ಪಡಿಸಬೇಕಾದರೆ ಅವಕ್ಕೆ ಭವ್ಯ ತಳಹದಿಯಾದ ಮಕ್ಕಳ ಶಿಕ್ಷಣದ ಬಗ್ಗೆ ಜಾಗ್ರತೆವಹಿಸಿ, ಸರಿಯಾದ ರೀತಿಯಲ್ಲಿ ತರಬೇತು ಮಾಡುವುದು ಬಹು ಅಮೂಲ್ಯವಾದ ಸಂಗತಿಯಾಗಿದೆ. ಮಕ್ಕಳ ಶಿಕ್ಷಣದ ಬಗ್ಗೆ ನಮ್ಮ ನೆರೆಯ ಪ್ರಾಂತಗಳಲ್ಲಿ ಎಷ್ಟೋ ಸಂಘ-ಸಂಸ್ಥಗಳು ಏರ್ಪಟ್ಟಿವೆ. ಅವುಗಳಲ್ಲಿ ಮುಖ್ಯವಾದ ಸಂಸ್ಥೆಯೆಂದರೆ **ಬಾಲಕನ್-ಜಿ-ಬಾರಿ** (Balakan-gi- Bari) ಎಂಬುದು. ಇಂತಹ ಸಂಸ್ಥೆಗಳು ಕರ್ನಾಟಕದಲ್ಲಿಯೂ ಏರ್ಪಟ್ಟು ಬಾಲಕರ (primary), ವಯಸ್ಕರ (Secondary) ಪ್ರೌಢರ(Colleg)ಶಿಕ್ಷಣದಲ್ಲಿ ಪ್ರಗತಿಯಾದರೆ, ಕರ್ನಾಟಕದ ಸರ್ವಾಂಗೀಣ ಪ್ರಗತಿಯಾಗುವುದರಲ್ಲಿ ಸಂದೇಹವಿಲ್ಲ.

"ಬಾಲಕನ್-ಜಿ-ಬಾರಿ" (Balkan-gi-Bari) ಈ ಶಬ್ದವು ಸಿಂಧಿ ಭಾಷೆಯದು. **ಕಾಕಾ ಕಾಲೇಲಕರ** ಅವರು ಅದನ್ನು ಹಿಂದುಸ್ಥಾನಿಯಲ್ಲಿ ಸೇರಿಸಿಕೊಂಡಿದ್ದಾರೆ. ಅದರ ಅರ್ಥವು "ಮಕ್ಕಳ ತೋಟ" (Children's gardene) ಎಂದು ಆಗುತ್ತದೆ. ಇದು ಮಕ್ಕಳ ಶಿಕ್ಷಣದ ಬಗ್ಗೆ ಯೋರಾಡುವ ಒಂದು ಪ್ರಾಮುಖ್ಯವಾದ ಹೆಸರು ಪಡೆದ ಸಂಸ್ಥೆ. ಇದರ ಮುಖ್ಯ ಧ್ಯೇಯವು, ಬಾಲಕರು ಚಿಕ್ಕವಂದಿನಲ್ಲಿ ಸಹಜವಾಗಿಯೇ ಪಡೆದ ಆನಂದವೃತ್ತಿಯನ್ನು ಅವರು ಪ್ರೌಢರಾದರೂ ಕಳೆದುಕೊಳ್ಳದೆ, ಸ್ವಾನಲಂಬಿಗಳೂ ಆನಂದವೃತ್ತಿಯವರೂ ಆಗಿ ಪ್ರಗತಿಯನ್ನು ಹೊಂದಬೇಕೆಂಬು. ಈ ಸಂಸ್ಥೆಯ ಅಧ್ಯಕ್ಷರಾಗಿ **ಶ್ರೀಮಾನ್ ಬಿ ಜಿ. ಹೇರ್** ಅವರುಇದ್ದಾರೆ. ೧೬ ವರ್ಷದ ಒಳಗಿನ ಮಕ್ಕಳ ಯಾವತ್ತೂ ಸಮಸ್ಯೆಗಳನ್ನು ವಿಚಾರಿಸುವ ಪ್ರಾಮುಖ್ಯ ಸಂಸ್ಥೆ ಇದಾಗಬೇಕೆಂದು ಅವರು ಅಭಿಪ್ರಾಯಪಡುತ್ತಾರೆ. ಈ ಸಂಘವು ಸಾವಕಾಶವಾಗಿಯಾದರೂ ವೃಥವಾಗಿ ಮುಂದುವರಿಯುತ್ತಲಿದೆ. ಈ ಸಂಸ್ಥೆಯಿಂದ ಒಂದು ಮಾಸಪತ್ರಿಕೆ ಹೊರಡಿಸಲ್ಪಡುತ್ತದೆ.



ಮಡುಗರ ಭವಿಷ್ಯಜೀವನದ ಒಡನಾಟ, ಅವರ ಭವಿಷ್ಯಜೀವನದ ಸಮಾಜಸಂಘಟನೆಗೆ ಅತ್ಯಂತ ಸಹಕಾರಿಯೆನಿಸುವುದು.

ಅದರ ಪೆಸರು "ಪುಷ್ಪಾ" ಎಂದಿದೆ. ಇದರ ಸಂಪಾದಕರು **ಮಿಸ್ ಶೈಲಾ ಮೋತವಾನಿ** ಎಂಬವರು.

ಈ ಸಂಘವು **ದಾದಾ** ಎಂಬ ಒಬ್ಬ ಸಿಂಧಿ ಗೃಹಸ್ಥರಿಂದ ೧೯೩೬ ರಲ್ಲಿ ಪ್ರಾರಂಭಿಸಲ್ಪಟ್ಟಿತು. ಬಾಲಕರು ದೊಡ್ಡವರಾದಂತೆ ಅವರಲ್ಲಿ ನ್ಯಾರ್ಥವೃತ್ತಿಯೂ ಬೆಳೆಯುತ್ತ ಹೋಗುವುದು. ಅವರು ಸಹಜವಾದ ಆನಂದವೃತ್ತಿಯನ್ನು ಅದರಿಂದ ಕಳೆದುಕೊಳ್ಳುವರು; ಆದುದರಿಂದ ಅವರು ನ್ಯಾರ್ಥಪರರಾಗಿ, ತಾವಷ್ಟೇ ಮಣಿಗಳಾಗುವುದಲ್ಲದೆ, ತಮಗೆ ಸಂಬಂಧ ಬರುವ ಸಮಾಜವನ್ನೂ ಮಣಿಯನ್ನಾಗಿಮಾಡಿಬಿಡುವರು. ಇದರಿಂದ ಸಾಮಾಜಿಕ ಪ್ರಗತಿ ಕುಂಠಿತವಾಗುತ್ತದೆ. ಅದನ್ನು ಹೋಗಲಾಡಿಸಿ, ಬಾಲಕರು ಸಾಂಘಿಕಜೀವನದ ನ್ಯಾರ್ಥತ್ಯಾಗದ ಸನಿಯನ್ನು ಬಾಲ್ಯದಿಂದಲೆ ಜೆನ್ನಾಗಿ ಕಲಿಯಬೇಕು. ಇದೆಲ್ಲವರ ನ್ಪಷ್ಟಕಲ್ಪನೆಯುಳ್ಳ ದಾದಾ ಅವರು, ಮೊದಲು ಮಕ್ಕಳ ಬಗ್ಗೆ ಕೆಲವು ಪುಸ್ತಕಗಳನ್ನು ಬರೆಯಹತ್ತಿದರು. ಮುಂದೆ ಅವರ ಬಗ್ಗೆ ಮನೋರಂಜನೆಯ ಮತ್ತು ಜೋಧಪ್ರದವಾದ ಕೆಲವು ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಎಲ್ಲಾ ಚಿಕ್ಕ ಬಾಲಕರು, ಜಾತಿಭೇದವಿಲ್ಲದೆ ಒಂದೇ ಕಡೆಗೆ ಕಲೆತು, ಅವರಲ್ಲಿ ಸಾಮೂಹಿಕ ಜೀವನವು ಬೆಳೆಯಬೇಕೆಂದು

ಈ **ಬಾಲಕನ್-ಜಿ-ಬಾರಿ** ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಇವರ ಕನಸು ಈಗೀಗ ನೆನಸಾಗತೊಡಗಿದೆ.

ಬಾಲಕನ್-ಜಿ-ಬಾರಿಯು ಈಗ ಎರಡು ಪ್ರಾಂತಗಳಲ್ಲಿ ಪ್ರಾಂತಿಕ ಸಂಘಟನೆಯುಳ್ಳದ್ದಾಗಿದೆ. ಇವರ ಶಾಖೆಗಳು ಈಗ ೫೧ನಗಳಲ್ಲಿ ಎಲ್ಲಾ ಕಡೆಗೆ ಎಂದರೆ **ಬಂಗಾಲ, ಬಿಹಾರ, ಯು. ಪಿ, ದಕ್ಷಿಣ ಹಿಂದುಸ್ಥಾನ** ಮತ್ತು **ಪಂಜಾಬಗಳಲ್ಲಿ** ಪಸರಿಸಿದೆ. ಒಟ್ಟಿಗೆ ೨೭೦ ಶಾಖೆಗಳಿವೆ. ಇವುಗಳ ಒಟ್ಟು ಪ್ರತಿನಿಧಿಗಳ ಸಂಖ್ಯೆ ೩೪೦೦. ಮುಂಬಯಿ ಪಟ್ಟಣದಲ್ಲಿಯೇ ಇವರ ಶಾಖೆಗಳು ಹೇರಳವಾಗಿವೆ. ಪ್ಲೇಪಾರ್ಲೆ, ಸಾಂಟಾಕ್ರೂಜ್, ಖಾರ, ಬಾಂದ್ರಾ, ಮಾತುಂಗಾ ಗೋಟಕೋಪರ, ತಾರದೇವ, ಚೌಪಾಟಿ ಮತ್ತು ಪೆರಾಯಿನ್-ಲಾಯಿನ್ಸ್ ಎಂಬಲ್ಲಿ ಇವರ ಶಾಖೆಗಳು ತೆರೆಯಲ್ಪಟ್ಟಿವೆ. ಇಲ್ಲಿ ವಾರದಲ್ಲಿ ಒಂದು ಸಾರಿಯಾದರೂ ಎಲ್ಲಾ ಬಾಲಕರು ಒಂದೆಡೆಗೆ ನೇರುವರು. ಮತ್ತು ಕೆಲವೊಂದು ವಿಧಾಯಕ ಕಾರ್ಯಕ್ರಮಗಳನ್ನು ಏರ್ಪಡಿಸುವರು. ಇದಲ್ಲದೆ ಈ ಸಂಘವು 'ಲೇಖನ ಮಿತ್ರತ್ವ (Pen-friendship)' ಎಂಬ ಒಂದು ವಿಭಾಗವನ್ನು ರಚಿಸಿದೆ. ತತ್‌ಪರಿಣಾಮವಾಗಿ ವರಸ್ಥಳಗಳಲ್ಲಿರುವ ಬಾಲಕರು ಒಬ್ಬರೊಬ್ಬರನ್ನು ಪರಿಚಯಮಾಡಿಕೊಳ್ಳಬಹುದು. ಈ ಸಂಘದಿಂದ ಕರಾಚಿಯಲ್ಲಿ ಮತ್ತು ಅಕ್ಕರಪಲ್ಲಿ ಎರಡು ಮಕ್ಕಳ ಶಾಲೆಗಳು ಹೊರಡಿಸಲ್ಪಟ್ಟಿವೆ. ಮಕ್ಕಳ ಬಗ್ಗೆ ವಾಚನಾಲಯಗಳು ವಿಧವಿಧವಾದ ಭಾಷೆಗಳಲ್ಲಿಯ ಪುಸ್ತಕಗಳಿಂದ ತುಂಬಿ, ಬಾಲಕರ ವಾಚನಾಭಿರುಚಿಯನ್ನು ಬೆಳೆಯಿಸುವ ಬಗ್ಗೆ ಖಾರ ಮತ್ತು ಕರಾಚಿಯಲ್ಲಿ ತೆರೆಯಲ್ಪಟ್ಟಿವೆ. ಇದಲ್ಲದೆ ಈ ಸಂಸ್ಥೆಯಿಂದ ಬಡ ವಿದ್ಯಾರ್ಥಿಗಳ ಬಗ್ಗೆ ನಿಧಿಯನ್ನು ಕೂಡಿಸಿದ್ದಾರೆ. ಇದರಿಂದ ಯೋಗ್ಯರಾದ ಬಡ ಬಾಲಕರಿಗೆ ವಿದ್ಯಾವೃತ್ತಿಗಳನ್ನು ಕೊಡುತ್ತಿದ್ದಾರೆ. ಹೋದ ವರ್ಷ ಈ ಸಂಸ್ಥೆಯು ಸಿಂಧ ಮಹಾಪೂರ ನಿಧಿಗೂ, ಬಂಗಾಲ ಬರಗಾಲ ಸಹಾಯಕ ನಿಧಿಗೂ ವ್ಯತ್ಯೇಕವಾಗಿ ೫೦೦ ರೂಪಾಯಿ ಕೊಟ್ಟಿದೆ. ಕಸ್ತೂರ ಬಾ ರಾಷ್ಟ್ರೀಯ ಸ್ಮಾರಕ ನಿಧಿಗೆ ೪೦೦೦ ರೂಪಾಯಿ ಕಾಣಿಕೆಯನ್ನು ಇತ್ತಿದೆ. ಈ ಸಂಘದಿಂದ ಈಗ ನಾಲ್ಕು ಮಾಸಪತ್ರಿಕೆಗಳು—ಇಂಗ್ಲೀಷಿನಲ್ಲಿ ಮತ್ತು ಗುಜರಾಥಿಯಲ್ಲಿ "**ಪುಷ್ಪಾ**", ಹಿಂದುಸ್ಥಾನಿಯಲ್ಲಿ "**ಹಮಾರಾ ಬಾಲಕ**", ಸಿಂಧಿಯಲ್ಲಿ "**ಗುಲಿಸ್ತಾನ**" (Gulistan) ಎಂಬದಾಗಿ—ಪ್ರಕಟಿಸಲ್ಪಡುತ್ತಿವೆ. ಇದಲ್ಲದೆ "**ಬಾಂಬೆ ಕ್ರಾನಿಕಲ್**" ವಲ್ಲಿಯೂ "**ಫ್ರೀ ಇಂಡಿಯಾ**" ವಲ್ಲಿಯೂ, ಗುಜರಾಥಿ ಪತ್ರಿಕೆಯಾದ 'ಯುಗಾಂತರ" ವಲ್ಲಿಯೂ, ತಮಿಳಿನಲ್ಲಿ "**ಸ್ವದೇಶಮಿತ್ರನ್**" ಮೊದಲಾದ ಪತ್ರಿಕೆಗಳಲ್ಲಿಯೂ ಮಕ್ಕಳ ವಿಭಾಗವು ಏರ್ಪಟ್ಟಿವೆ. ಸಿಂಧ ಪ್ರಾಂತೀಯ "ಬಾಲಕನ್-ಜಿ-ಬಾರಿ"ಯ ಅಧ್ಯಕ್ಷರು ಶ್ರೀಮತಿ ಸಾರ್ವತಿ ಟಿ. ಗಿಡವಾನಿ ಎಂಬವರಿದ್ದಾರೆ.

"ಬಾಲಕನ್-ಜಿ-ಬಾರಿ"ಯು ನಿಯತಕಾಲಗಳಲ್ಲಿ ತಿರುಗಾಟಗಳನ್ನೂ ವಿಹಾರಗಳನ್ನೂ ಆದರಂತೆ ಕೆಲಸನಗಾರರ ಶಿಬಿರಗಳನ್ನೂ ಏರ್ಪಡಿಸುತ್ತದೆ. ಹೋದ ವರ್ಷದಲ್ಲಿ ಯುರಾನದಲ್ಲಿ ಬಯ ದೊಡ್ಡವಾದ ಬಾಲಕರ ವಿಹಾರವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಮುಂಬಯಿ ಮತ್ತು ಅದರ ಸುತ್ತುಮುತ್ತಲಿನ ಸ್ಥಳಗಳಿಂದ ಬಂದ ೮೦೦ ಬಾಲಕ-ಬಾಲಿಕೆಯರು ಭಾಗ ವಹಿಸಿದ್ದರು. ಕೆಲಸಗಾರ (workers) ಅಥವಾ ಸೇವಕರ ಶಿಕ್ಷಣ ಶಿಬಿರಗಳು ಕಾಂದಿವಿಲಿ, ಜೋರಿಪಿಲಿ ಮತ್ತು ಘಾಟಕೋಪರಗಳಲ್ಲಿ ನಡೆಯಿಸಲ್ಪಟ್ಟುವು. ೧೯೪೧ರಲ್ಲಿ ಪುಡುಗರ ದೂರದ ಸಂಚಣವು ಕೈಕೊಳ್ಳಲ್ಪಟ್ಟಿತು. ಅಕಾಲಕ್ಕೆ ಮುಂಬಯಿಯಿಂದ ೪೦ ಮಕ್ಕಳು ಸಿಂಧಕ್ಕೆ ಹೋಗಿ, ಕರಾಚಿ, ಹೈದ್ರಾಬಾದ್ ಜಾರಕನ್, ಮೋಹೆಂಜೋ-ದಾರೋ, ನಕ್ಕರ ಮೊದಲಾದ ಸ್ಥಳಗಳನ್ನು ನಂದರ್ಶಿಸಿ ಮತ್ತುವರಿದು ಬಂದರು. ಆದೇ ಕಾಲಕ್ಕೆ ಬಾಲಕನ್-ಜಿ. ಬಾರಿಯು ಕೆಲಸಗಾರರ ಸಭೆಯು ನೆರೆದಿತ್ತು. ಈಗಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ, ಸ್ಥಳಾಣವ ಮತ್ತು ಆಹಾರದ ಅನನುಕೂಲತೆಯ ನಲುವಾಗಿ, ಅಪಿಲ ಹಿಂದೀ ಬಾಲಕರ ಅಥವಾ ಸೇನಕರ ಕೂಟಗಳನ್ನು ಏರ್ಪಡಿಸುವುದು ಶಕ್ಯವಾಗಿಲ್ಲ.

ಈ ಸಂಸ್ಥೆಯು ಈ ಪ್ರಕಾರ ಅನೇಕ ತರದ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು, ತನ್ನ ಉದಾತ್ತವಾದ ಧ್ಯೇಯವನ್ನು ಕೃತಿಯಲ್ಲಿ ತರಲು ಪ್ರಯತ್ನಪಡುತ್ತಲಿದೆ. ಇವರ ಮೊದಲನೆಯ ಕೆಲಸ ಎಂದರೆ—ಬಾಲಕರು ದೇಶಭಕ್ತಿಯುಳ್ಳ, ಆತ್ಮವಿಶ್ವಾಸವುಳ್ಳ ಹಿಂದೀ ನಾಗರಿಕರಾಗುವಂತೆಯೂ, ಸ್ವಾರ್ಥತ್ಯಾಗಿಗಳೂ ಕಷ್ಟಸಹಿಷ್ಣುಗಳೂ ಆಗುವಂತೆಯೂ ಅವರಿಗೆ ಶಿಕ್ಷಣವನ್ನು ಕೊಟ್ಟು ತರಬೇತು ಮಾಡುವುದು. ಈ ಧ್ಯೇಯವು ಸಾಧಿಸಬೇಕಾದರೆ, ಅದಕ್ಕೆ ತಕ್ಕ ಪ್ರಯತ್ನವೂ ದೀರ್ಘವಾದ ಸೇವೆಯೂ ಬೇಕು. ಏನಿದ್ದರೂ ಈ ಸಂಸ್ಥೆಯು ಕೈಕೊಳ್ಳತಕ್ಕ ಕಾರ್ಯವು ಸಾಂಕೇತಿಕವಾದದ್ದು. ಬಾಲಕರ ಶಿಕ್ಷಣದ ಕರ್ತವ್ಯವು ಅವರ ಪಾಲಕರನ್ನೇ ಅವಲಂಬಿಸಿದೆ. ಅನಂತರ ಶಾಲೆ ಅಥವಾ ಉಳಿದ ವಿದ್ಯಾಸಂಸ್ಥೆಗಳನ್ನು ಅವಲಂಬಿಸಿದೆ.

ಇಂತಹ ಸಂಸ್ಥೆಗಳು ಅನಿವ್ಯಾರ ಮೊದಲಾದ ಬಿಡುವಿನ ದಿನಗಳಲ್ಲಿ ಒಂದೆರಡು ತಾಸುಗಳಷ್ಟೆ ದುಡಿಯುತ್ತಿರುತ್ತವೆ; ಆದುದರಿಂದ ಅವರ ಕೆಲಸವು ಕೇವಲ ಸಾಂಕೇತಿಕವೂ ಮಾರ್ಗದರ್ಶಕವೂ ಆಗಿರುವುದು. ಇದು ಬಾಲಕರ ಶಾರೀರಿಕ ಹಾಗೂ ಮಾನಸಿಕ ಉನ್ನತಿಗಾಗಿ ಪ್ರಯತ್ನಿಸುವ ಒಂದು ಸಮೂಹವೆನ್ನಲು ಅಡ್ಡಿಯಿಲ್ಲ. ಆ ಧ್ಯೇಯವನ್ನಿಟ್ಟುಕೊಂಡು ಈ ಸಂಸ್ಥೆಗೆ ಅಪಿಲ ಭಾರತದ ಮಕ್ಕಳ ಸ್ವಯಂಸೇವಕ ದಲವನ್ನು ರಚಿಸಬೇಕೆಂದು ಬಲವಾದ ಬಯಕೆಯಿದೆ. ಯಾವುದೆ ವರ್ಗ, ಜಾತಿ, ಮತ, ಪಂಥ, ವರ್ಣ ಮತ್ತು ಪ್ರಾಂತೀಯ ಭಾವನೆಗಳಿಗೆ ಅಸ್ಪದ ಕೊಡದೆ, ಇಡೀ ಭಾರತದ ಬಾಲಕರಿಗೆ ಈ ಸಂಸ್ಥೆಯು ಏಕಮೇವ ವೇದಿಕೆಯಾಗುವಂತೆ ಇವರ ಪ್ರಯತ್ನವಿದೆ. ಏಕೆಂದರೆ ಇವರಿಂದ ಎಲ್ಲಾ ಬಾಲಕರಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಐಕ್ಯವುಂಟಾಗುವುದು. ಇದು ಬಾಲಕರ ಪರಸ್ಪರ ಸಹಾಯಕ ಕೇಂದ್ರಗಳನ್ನು ರಚಿಸುವಂತೆ ಕೆಲಸ ನಡೆಯಿಸಿದೆ. ಮಕ್ಕಳ ಶಿಕ್ಷಣದ ಬಗ್ಗೆ ಪಾಲಕರಿಗೂ, ಸಮಾಜಕ್ಕೂ, ಸರಕಾರಕ್ಕೂ ತಡೆಯೊಡ್ಡುವ ಯಾವುದಕ್ಕೂ ಬಿಕ್ಕಟ್ಟಿನ ಸಮಸ್ಯೆಗಳನ್ನು ಬಿಡಿಸಬಲ್ಲ ಸಂಸ್ಥೆಯಾಗಬೇಕಾಗಿದೆ. ಅದುವರಿಂದ ಇದು ಉಚ್ಚತರವಾದ, ಮೂದರಿಯ ಶಾಲೆಗಳನ್ನು ಸ್ಥಾಪಿಸಬೇಕೆಂಬ ಪ್ರಯತ್ನದಲ್ಲಿದೆ. ಒಟ್ಟಿನ ಮೇಲೆ ಈ ಸಂಸ್ಥೆಯು ಅಪಿಲ ಭಾರತದ ಬಾಲಕರ ವಿಶ್ವವಿದ್ಯಾಲಯವನ್ನು ನೆಲೆಗೊಳಿಸಲಿವೆ. ಇಂತಹ ಕೆಲಸಗಳು ಕರ್ನಾಟಕದಲ್ಲಿಯೂ ಜರುಗುವುದು ಅತ್ಯಂತ ಅವಶ್ಯವಿದೆ.

ಯುದ್ಧ ನಿಂತಿತೇ?

(ವ್ಯಂಗ್ಯ ಪ್ರಬಂಧ)

ಶ್ರೀ. ಕೋಟ ಶಿವರಾಮ ಕಾರಂತರು, ಪುತ್ತೂರು

"ಜಗತ್ತಿನ ದ್ವಿತೀಯ ಮಹಾಯುದ್ಧ ನಿಂತಿತು!" ಎಂದು ವಾರ್ತಾಪತ್ರಿಕೆಗಳೂ ತೀರ ಕಷ್ಟದಿಂದ ಒಪ್ಪಿದಂತಿದೆ. ನಮ್ಮೂರಿನ ವಾಕ್ಪತ್ರಿಕೆಗಳು "ಯುದ್ಧ....ಇಷ್ಟುಬೇಗ ನಿಲ್ಲಲಾರದು, ನಿಂತಿರಲಾರದು" ಎನ್ನುತ್ತಲೇ ಇವೆ. ಆದರೂ ದಿನಪತ್ರಿಕೆಗಳಲ್ಲಿ—ಜರ್ಮನಿಯನ್ನು ಹಂಚಿಕೊಂಡದ್ದು, ಜಪಾನಿನಲ್ಲಿ ನಿಜಯಿಗಳು ಕಾಲಿರಿಸಿದ್ದು, ರಂಗೂನಿನಲ್ಲಿ ಶರಣಾಗತಿಗೆ ಸಹಿಬಿದ್ದದ್ದು—ಇಂತಹ ಒಂದೊಂದೇ ಅಮುಂಗಳಕರ ವಾರ್ತೆ ಪ್ರಕಟವಾಗಿವೆ. ಜನರ ಮನಸ್ಸು ಇಂತಹ ಒಂದು ಸತ್ಯವನ್ನು ನಂಬಲು ಇನ್ನೂ ಸಿದ್ಧವಾಗಿಲ್ಲ. "ಯುದ್ಧ ನಿಲ್ಲಲಾರದು" ಎಂದುಕೊಳ್ಳುತ್ತಿದೆ ಅದು. ಮನಸ್ಸಿನ ಭಾಷಯಾನೆಯಲ್ಲಿ '. ಯುದ್ಧ ನಿಲ್ಲಬಾರದು" ಎಂದೇ ಅಚ್ಚಾಗಿದೆ. ಅಚ್ಚುದೋಷದಿಂದ 'ಬಾ' ಹೋಗಿ "ಲಾ" ಆಯಿತೇ ಎಂಬ ಅನುಮಾನವೇ ಎಲ್ಲರಿಗೆ. ಅಷ್ಟು ಬಲಶಾಲಿಯಾದ ಜರ್ಮನಿ, ಸತ್ತರೆ ಸಾಯಲಿ—ಹಿಟ್ಲರ್ ಸತ್ತಿಲ್ಲವಲ್ಲ—ಅನ್ನುತ್ತಾರೆ. ಅವನ ಕೈಯಲ್ಲಿ ತುಂಬ ಸಿಗರೇಟು (secret-weapon) ಆಯುಧಗಳಿಲೇ ಬೇಕು. ಒಂದು ದಿನ ಅವನೂ ಸೆಟಾನಿಕ್ ಬಾಂಬ್ ಹೊರತೆಗೆಯಾನು. ಯಾರು ಬಲ್ಲರು—ಈಗಲೇ ಆತನ ಮುತ್ಸದ್ದಿಗಳು ಜಗತ್ತಿನ ಕೇಂದ್ರ ನಗರಗಳಾದ ನ್ಯೂಯಾರ್ಕ್, ಲಂಡನ್, ವಾರಿಸ್, ಲೆನಿನ್‌ಗ್ರಾಡ್, ಧಾರವಾಡ ಮೊದಲಾದ ನಗರಗಳ ಕೆಳಗೋ, ಪಿಟ್ಸ್‌ಬರ್ಗ್, ಪನಾಮಾಗಳ ಕೆಳಗೋ ಈ ಹೊಸ ಬಾಂಬಿನ ಸೊಟ್ಟಿಗಳನ್ನು ಇಟ್ಟಿಲ್ಲವೆಂದು ಯಾರಿಗೆ ಗೊತ್ತು?

ಅದೊಂದೆಯೇ? ಇತ್ತ ಜಪಾನೀ ಅರಸ, ಸೂರ್ಯವಂಶದ ರಾಮಚಂದ್ರನನ್ನು ಮಿಂಚಿಸುವ ಹಿರೋಹಿಟೋ....ಅನನು, ಶರಣಾಗತನಾಗುಲುಂಟೇ? ದೇವನಂತೀಯ. ಯಾರೋ ಸಕಲಿ ದೊರೆಯನ್ನು ತಂದು, ಸುಳ್ಳು ಸಂಧಾನದ ಪಾಯವನ್ನು ತೆಗೆದಿದ್ದಾರೆ. ಯೋಗಲಿ—ಮಿಾಸೆ ಬಲಿತ ಸ್ಟಾಲಿನ್? ಜಗತ್ತಿನ ದೊರೆತನ ದೊರಕಿಸಿಕೊಳ್ಳುವ ತನಕ ಆತ ಸುಮ್ಮನಾಪಾನೆಯೇ? ಇಲ್ಲ. ಅವನೇ ಉಳಿವ ಬಿಗ್ ತ್ರೀ, ಫೋರ್‌ಗಳ ಮೇಲೆ ರಣಹೂಡದೆ ಬಿಟ್ಟಾನೇ? ಆತ ಪುನರ್ಯುದ್ಧ ಹೂಡಿಯಾಯಿತು, ಹೂಡದಿದ್ದರೆ ಹೂಡುತ್ತಾನೆ—ಎಂದು ಮಹಾಜನ ಆಸೆ ಮಾಮುತ್ತಿದೆ. ಇಂತಹ ಸಾವಿರಾರು ಸಚ್ಚರಿತ್ರರ ಅಸೇಕ್ಷೆಗೆ ವಿರುದ್ಧವಾಗಿ, ಜಗತ್ತಿನ ಮಹಾಮೂರ್ತಿಗಳು ವರ್ತಿಸಲಾರರಷ್ಟೇ! ಅವರಾದರೂ ಈ ಒಂದು ಸಂಗತಿಯನ್ನೇ ಯೋಚಿಸಲಿ: ಅಷ್ಟು ರಭಸದಲ್ಲಿ ಜರುಗಿಸಿದ ವ್ಯಾವಂಚಿಕ ವ್ರಲಯೋತ್ಸವವನ್ನು, V-E. V-J ದೇಗಳಂತೆ ಒಂದೆರಡು ದಿನಗಳಲ್ಲಿ ನಿಲ್ಲಿಸಿದರೆ—ಆ ಉತ್ಸವಕ್ಕೆ ರೂಢಿಯಾದ ಜನ ಅದನ್ನು ಸುರೆತು ತಣ್ಣಗೆ ಕುಳಿತಿರಬೇಕೆನ್ನುತ್ತೀರಾ?

ನಮ್ಮ ಅನೇಕ ಜೀಂಬರ್ ಆಫ್ ಕಾಮರ್ಸ್‌ಗಳಲ್ಲಿ—ಯುದ್ಧದ ಪತೋಟಿಗಳನ್ನು, ಆಮನಿಂತ ವಾರ್ತೆಯನ್ನು ನಂಬಿ ನಿಲ್ಲಿಸಬೇಕೆಂದೂ, ಆದರೆ ಯುದ್ಧವನ್ನು ಪೂರ್ತ ಕ್ರಮೇಣ ನಿಲ್ಲಿಸಿ, ಜನಕ್ಕೆ ಶಾಂತಿಯಿಂದ ಒಮ್ಮೆಲೇ ಗಡಿಬಿಡಿಯಾಗದಂತೆ ಎಚ್ಚರವಹಿಸಬೇಕೆಂದೂ ಕೇಳಿಕೊಂಡಿದ್ದಾರೆ. ಅದು ಸಹಜವೇ! ಹದಿನೈದು ದಿನ ಕಾಲ ೧೦೮" ಜ್ವರ ಅನುಭವಿಸಿದ ರೋಗಿಗೆ ಒಮ್ಮೆಗೇ ನಾರ್ಮಲಿಗೋ, ಸಬ್ ನಾರ್ಮಲಿಗೋ ಬಂದರೆ ಹೇಗೆ? ಆಲ್ಲದೆ ನಮ್ಮ ಅಂಗಡಿಕಾರರು ಗಣಿತ ಶಾಸ್ತ್ರವನ್ನೇ ಬೇರೆ ಕಲಿಯಬೇಕಾದೀತು. ಈಗಿನ ಲೆಕ್ಕ ಕೇವಲ ದಶಮಾಂಕ; ಸುಲಭಗುಣಾಕಾರ. ಒಂದಾಣೆ ಇದ್ದ ಒಡವೆಗೆ ೧೦ ಆಣೆ ಅಂದರಾಯಿತು; ಅಥವಾ ಒಂದಾಣೆ ಬದಲು ಒಂದೇ ರೂಪಾಯಿ ಅಂದರಾಯಿತು. ಈ ಯುದ್ಧ ನಿಂತು. ನಿದೇಶಗಳಿಂದ ಒಮ್ಮೆಗೇ—ಹಲ್ಲುಪಿಸ್ತ, ವೇನಾ, ಕ್ಯುಟೇಕೂರಗಳನ್ನು ತಂದು ಸುರಿದು, ವಿಷಮಭಿನ್ನ ರಾತಿಯಲ್ಲಿ ಬೆಲೆಹೇಳಿ, ತಿರುಗಿ ೬೧, ೭೨, ೩೧೭ ಕಮೀಷನ್ ಎಣಿಸಿ ಮಾರಾಟ ಮಾಡಿ, ಅಂದರೆ—ಅವರಿಗೆ ಸಿಗುವ ಲಾಭ ಬರಿಯ ಈ ಲೆಕ್ಕಾಚಾರದ ತೊಂದರೆಗೆ ನಾಕೇ?

ಇತ್ತ ಕೆರೊಸಿನ್ ಎಣ್ಣೆಯ ಅಭಾವದಿಂದ ಅಂಗಡಿ, ಮಾರ್ಕೆಟುಗಳು ಕಾಳಸಂತೆಯಾಗಬೇಕಾಯಿತು. ಬೆಳಕಿನಲ್ಲಿ ಅರಿವೆ ಕೆಳಗೆ ಕೈಯಿಟ್ಟು ಬೆಲೆ ಮಾತಾಡುವ ರೂಢಿ ತಪ್ಪಿತು. ಕತ್ತಲುಕೋಣೆಯಲ್ಲಿ ನಿಂತು—ಒಂದು ಬಂಡಲ್ ಮೂಲಿಗೆ ಒಂದು ಬಂಡಲ್ ನೋಟನ್ನು ಕೊಟ್ಟುಬಂದರಾಯಿತು. ಹಾಗೆ ಕೊಂಡ ಬಂಡಲನ್ನು ಬಿಚ್ಚಿನೋಡಬೇಕಾದುದೂ ಕತ್ತಲುಕೋಣೆಯಲ್ಲೇನೆ. ಇಷ್ಟೆಲ್ಲ ನಿಸ ಕಾಳಸಂತೆಯಲ್ಲಿ ನಡೆಯವರನ್ನೆ, ಈಗ ಬೆಳಕಿಗೆ ತಳ್ಳಿದರೆ ಗೂಬೆಯನ್ನು ಬಿಸಿಲಿಗೆ ಆಟ್ಟಿದಂತಾಗದೇ?

ಈಗ ನನ್ನ ವರ್ಗವನ್ನೇ ನೋಡಿ—ಪ್ರಕಾಶಕರ ಖಾತೆ. ನಾನು ಹಳೆಯ ಬೆಲೆ ೪ ಆಣೆ ಇದ್ದ ಪುಸ್ತಕಕ್ಕೆ ಬರೇ '೧' ಈಚೆ ಸೇರಿಸಿ '೧೪ ಆಣೆ' ಎಂದು ಮಾರಿದ್ದಾಯಿತು. ಹೊಸ ಪುಸ್ತಕವಾದರೆ ಕರಿದು ಕಾಗದಕ್ಕೆ ಕರೀ ಮಸೀ ಸವರಿ, ಕಾಗದದ ತೂಕಕ್ಕೆ ನೋಟಿನ ತೂಕ ಸಮನಾಗುವಂತೆ ವಿಕ್ರಯಿಸಿದೆವು. ಉಳಿದ ರೀತಿಯಿಂದ ಸಂತೋಷಪಡಲಾರದ ಮೂಢಪ್ರಪಂಚ. ನಮ್ಮ ಪುಸ್ತಕ ಅವರು ಕೊಂಡಾರೇ, ಆ ದುಡ್ಡಿನಲ್ಲಿ ಧಾರಾಳವಾಗಿ ಸಿಗಬಹುದಾದ ಚೊಕಲೇಟ್ ತಿಂದಾರು. ಅಲ್ಲಿ ನಾವು ಅರ್ಧ ಕರಿಯ ಕಾಗದದ ಮೇಲೆ ಬರೆಯಲಾರದೆ, ಬಿಳಿ ಕಾಗದದ ಮೇಲೆಯೇ ಬರೆದು ಅಚ್ಚು ಹಾಕಿಸಬೇಕು. ಹಾಗೆ ಅಚ್ಚು ಹಾಕಿಸಿದ್ದನ್ನಲ್ಲಾ ಅವರು ತಿಳಿದು ಕಷ್ಟಕ್ಕೆ ಬೀಳಬೇಡವೇ?

ಯುದ್ಧ ನಿಲ್ಲಬಾರದೆಂಬವರು ಬರಿಯ ಪ್ರಕಾಶಕರಷ್ಟೇ ಅಲ್ಲ. ಯುದ್ಧವನ್ನು ಯಾರ ಮೇಲೆ ಯಾಕೆ ಮಾಡಿದರು—ಎಂದು ಜನ ಪಸಿ ಪಸಿ ವರ್ತಮಾನಗಳನ್ನು ಈ ದಿನವತ್ರಿಕೆಗಳಿಂದ ಮುಕ್ತಿಪ್ತಿ ಪಡುತ್ತಿದ್ದರು. ಪತ್ರಿಕೆಯೋದಲು ಆತುರ ತಡೆಯದೆ, ಕಂಪೋಜಿಟರನ್ನೇ ಕೇಳಿದವರುಂಟು. ರೇಡಿಯೋನಿಗೆ ಕಿವಿ ತಿರುಗಿಸಿದವರುಂಟು; ಅಷ್ಟೇ ತಾತ್ಕಾಲಿಕವಲ್ಲದೆ ಸ್ವತಃ ವಾರ್ತೆಗಳನ್ನು ತಯಾರಿಸಿದವರೂ ಉಂಟು! ಈ ಜನರೆಲ್ಲ ನಾಳೆ ಬರಿಯ ಕಿಚನ್ ಫ್ರಂಟಿನ ವಾರ್ತೆ ಕೇಳಿಕೊಂಡಿರುವುದೇ? ನಮ್ಮ ಪತ್ರ-ಕರ್ತೃಗಳೂ ಸಹ ಸಾಳೆ ಹೆಚ್ಚಿಸಿ ಬೆಲೆ ತಗ್ಗಿಸುವ ದಿನ ಬಂದರೆ! ವಾರ್ತೆಯ ವಿಚಾರ ಬಿಡಿ, ಮೈಮೇಲೆ ಬಂದು ಬೀಳುತ್ತಿದ್ದ—ವಾರ್ ಫ್ರಂಟ್ ಜಾಹೀರಾತುಗಳ ವಿಚಾರ! ಬದಸೆಕಾಯಿ ಬಕೆಸಿ ಜಪಾನರನ್ನೋಡಿಸುವ ಜಾತುರ್ಯ, 'ಅವನು ದೊಡ್ಡವನು ಇಂದಿನ ಪೆನಾನನ್ನು ಕಾದಿಡುವ ಜಮತ್ಕಾರ,' ಇವತ್ತು ಕಾ

ಸಂತೆಯಲ್ಲಿ ಸೀರೆ ಕೊಳ್ಳುವುದಿಲ್ಲವೆಂದು, ಬತ್ತಲೆ ತಿರುಗಾಡಲು ನಿಶ್ಚಯಿಸಿ, ನಾಳೆ ರೇಶ್ಮೆಸೀರೆ ಉಟ್ಟೇನೆಂಬ ಸವಿಗನಸು—ಯಾವ ಪತ್ರಿಕೆಯಲ್ಲಿ ಮುಂದಿಂಥ ದಾರಿಗಳು ಕಾಣಿಸುವುವು?

ನಮ್ಮ ಚಾ-ಕಾಫೀ ದುಕಾನುಗಳ ಗತಿ! ಅವರು ಕೊಟ್ಟ ಬಣ್ಣದ ನೀರನ್ನು ಕಾಫಿ, ಚಾ ಎಂದು ಒಪ್ಪಿ ಕುಡಿದು, ಅವರು ಕೊಟ್ಟ ಜಿಡ್ಡನ್ನು ತುಪ್ಪ, ಬೆಣ್ಣೆಯೆಂದು ತಿಂದು ತೂಗಿದ ನಮ್ಮ ಗತಿ! ನಾವು ಅವರಿಂದ ಕಲಿತ ಈ ಹೊಸ ರುಚಿಯನ್ನೆ ಮರೆತು ತಿರುಗಿ ಹಿಂದಿನಂತಾಗಬೇಕೆ? ಅಲ್ಲದೆ—ಗರಗಸದ ಪುಡಿಯಿಂದ ಕಾಫಿ ಮಾಡಲು ಬರುತ್ತದೆ, ಚಾಕಿನ ಪುಡಿಯಿಂದ ತುಪ್ಪದ ದೋಸೆ ತೂಕ ಹೆಚ್ಚಾಗುತ್ತದೆ, ಚಟ್ನಿಗೆ ಕೊಬರಿ ಬದಲು ಹಿಂಡಿಯೇ ಶಕ್ತಿವರ್ಧಕ ಪದಾರ್ಥ—ಇಂಥ ಮೊದಲಾದ ಯುದ್ಧಕಾಲದ ಇನವೆನ್‌ಷನ್‌ಗಳ ಗತಿ?

ಯುದ್ಧ ನಿಂತರೆ ಆಗುವ ಅನಾಹುತಗಳು ಅಷ್ಟರಲ್ಲೆ ಮುಗಿದಿಲ್ಲ. ಪೇಟೆ-ಹಳ್ಳಿಗಳೆರಡರಲ್ಲೂ ಅದು ಹಾಹಾಕಾರ ಎಬ್ಬಿಸಲುಂಟು. ಈಗಲೋ ನಮ್ಮ ಹುಡುಗರು, ಶಾಲೆಬಿಟ್ಟೊಡನೆ ರೈಲಿಗೆ ಧುಮುಕಿದರು. ರೈಲಿಂದ ಧುಮುಕಿದರು ದೇವಲಾಲಿಗೆ! ಅಲ್ಲಿ ರೈಲು ನಿಲ್ಲದೆ ಹೋದರೆ ಮಾತುಂಗ ಬಲ್ಲಿ ಅವತರಿಸಿದರು. ಇಷ್ಟವಿದ್ದ ರೇಶನ್ ಡಿಪೊವನ್ನೋ, ಸಿವ್ಹಿಲ್ ಸಪ್ಲೈಸು ಖಾತೆಯನ್ನೋ ನುಗ್ಗಿ, ಅಲ್ಲಿಂದ ತಿಂಗಳಿಗೆ ೧೫೦ ರೂಪಾಯಿ ತಂದರೇ ತಂದರು. ಇತ್ತ ಅಳಿಯಂದಿರನ್ನು ಹುಡುಕುವ ಮಾತಾ-ಪಿತೃಗಳಿಗೆ ಎಷ್ಟು ಸುಲಭವಾಯಿತು. ಹಿಂದೆ ೧೦೦೦ ರೂಪಾಯಿ ವರದಕ್ಷಿಣೆ ಕೊಡಲು ಕಣ್ಣು ಕತ್ತಲೆ ಬರುತ್ತಿತ್ತು. ಈಗಲೋ—ಅಳಿಯನ ಸಂಬಳವನ್ನೇ ಶತಕರಿಸಿ ಹಸುರು ನೋಟಿನ ಮಾಲೆಯನ್ನು ಅವನ ಕೊರಳಿಗೆ ಎಸೆದರೆ, ಅವನೂ ಬಲಿಯೇ! ಆ ಕೆಲಸವೂ ಸುಲಭವೇ. ಹಿಂದಿನ ಕಾಲದಲ್ಲಿ ಅಷ್ಟು, ಹಣ ತೆರಲು ಹಣೆ, ಕಣ್ಣು ಕೊಡಿಯೇ ಬೆಪರುತ್ತಿದ್ದುವು. ಈಗ ಸ್ವಂತ ನೋಟಿನ ಛಾಪಖಾನೆ ಇರಿಸಿಕೊಂಡಷ್ಟು ಧೈರ್ಯ ಜನಕ್ಕೆ. ಅಷ್ಟು ಉದಾರಿಗಳಾದ ಜನ ತಿರುಗಿ ಹಣದ ವಿಚಾರ ಅಲ್ಪಮತಿಗಳಾಗಿ—ಆಣೆ, ಪೈ ರೂಪಾಯಿಯೆಂದು ಎಣಿಸಬೇಕೆ? ಹಣ ನಿಲ್ಲದ ಹೆಣ್ಣು ಹುಡುಗಿಯರ ತಂದೆಗಳಿಗೂ ಈ ದಿನ ತಾಪತ್ರಯವಿಲ್ಲ. ಸೆಬ್ಬೆಗೆ ಹುಡುಗಿಯನ್ನು ತಂತಿದ್ವಾರ ಮುಂಬಯಿಗೆ ರವಾನಿಸಿದರೆ—ಅಲ್ಲಿ ಅವರಿಗೂ ಕಾದಿದೆ ಕೆಲಸ. ರೇಶನ್ ಶಾಪು, ಸಿವಿಲ್ ಸಪ್ಲೈಸ್, W. A. C.—ಎಂದು ಬಾಯಿ ತೆರೆದಿದೆ "ಪತಿವಿಹೀನರಿಗಾರು ನಾನೇ ಗತಿ" ಎಂದು.

ಅಲ್ಲಿ ಸಿಗುವ ಸಂಬಳ, ಆ ಸ್ವಾತಂತ್ರ್ಯ, ಟ್ರಂಕು- ಜಾಪೆಗಳೇ ಸ್ಪೃಹಣೀಯವೆಂದು ತಿಳಿಯುವ ವಿಶಾಲ ಜಗತ್ತಿನ ಅನುಭವ ಹೋಗಬೇಕೇ? ಸಪ್ಪನವಾಗಿ ೧೨ ಲಕ್ಷದಿಂದ ೩೬ಕ್ಕೆ ಹೊಟ್ಟೆಯುಬ್ಬರಿಸಿದ ಮುಂಬಯಿ ನಗರ ಮುಂಚಿನಂತಾಗಬೇಕೇ? ಅಲ್ಲಿ ತುಂಬಿದ ಜನ ಊರಿಗೆ, ಹಳ್ಳಿಗಳಿಗೆ ಮರಳಬೇಕೇ? ಬರಿಯ ಆವರು ಬರುತ್ತಾರೆಯೆ? ೨,೦೦,೦೦೦ ಜನ ಯುದ್ಧವೀರರು, ಗ್ರಾಮಾಭಿಮುಖವಾಗಿ ನಿಂತಿದ್ದಾರೆ. ಮಾತು ಆಡಿದರೆ 'ಗೋಳಿ ಫಯರ್' ಮಾಡಿದ ವೀರರು! ಅವರೂ ಬರಬೇಕಾಗಿದೆ. ಅವರೇನು ಮಾಡಬೇಕು? ತಂದ ಖಾಕಿ ಅಂಗಿ, ಬೂಟ್ಸು ಕರಗುವ ತನಕ ರಜೆಗೆ ಊರಿಗೆ ಬಂದಿದ್ದೇನೆಂದು ತಿಳಿದಾರು; ಮುಂದೆ ಅವರ ಗತಿ!

ಹಿಂದೆ "When I was on the continent" ಅನ್ನುವ ಶೋಕೇ ಇತ್ತು ಜನಕ್ಕೆ. ಈಗ "When I was in Jail" ಎಂಬ ಶೋಕೆ ಬಂದಿದೆ. ಈಗಾಗಲೇ "When I was in Guna-Buna" ಎನ್ನುವ ಯುಗ ಕಾಲಿರಿಸಿಯಾಗಿದೆ. ಆ ನೆನಪನ್ನೆ ಅವರು ಮರೆಯಲು ಬಂದೀತೆ? ಅದು ಹೋಗುವ ತನಕ ಹಳ್ಳಿಯಲ್ಲಿ ಸುಖಿಸಿಕ್ಕೀತೇ?

ಏನೋ ಇನ್ನು—ಗ್ರಾಮಕ್ಕೊಂದು, ನೇವಲ್ ಬೇಸು, ಹೆಯರೋಡ್ರೋಮು ಆದ ಮೇಲೆ, ಆವರಿಗೆಲ್ಲ ಕೆಲಸ ಸಿಕ್ಕಿ, ಊರು ಬಚಾಯಿಸಬೇಕು. ಬದಲು ಅವರು ಉಳಿದವರಂತೆ ತರಕಾರಿ ಬೆಳೆಯಿಸಿದರೆ, ಕಾಸಿಗೆ ಮಣ ಮೆಣಸಿನಕಾಯಿ ಮಾರಬೇಕಾದೀತು.

ಇವರೆಲ್ಲರ ಕಷ್ಟವನ್ನು ನಮ್ಮ ಸರಕಾರಿ ನೌಕರರ ಕಷ್ಟದೊಂದಿಗೆ ಹೋಲಿಸಿದರೆ ತುಂಬ ಸಣ್ಣದೇ! ಅವರಿಗೆ ಸಿಕ್ಕಿದ ಎಲೋವೆನ್ಸ್ ಬಲು ಅಲ್ಪ. ಆದರೆ, ಸ್ವಾಮಿಸೇವೆಗಾಗಿ ಬಡತಿ, ಗೌರವ ತುಂಬಿಬಂದಿತ್ತು. ಅಧಿಕಾರದ ವರ್ಚಸ್ಸು ಹೆಚ್ಚಿತ್ತು. ಉದಾಹರಣೆಗೆ ಹೇಳುತ್ತೇನೆ: ನನ್ನ ಒಬ್ಬ ಆಪ್ತಮಿತ್ರ S. S. L. C. ಮುಗಿಸಿ, 'ಕೆಲಸ!' ಎಂದು ಅಕಳಿಸಿ ಕುಳಿತಿದ್ದ. ಅವನ ನಸೀಬಿನಲ್ಲಿ ಬರೆದುದು ಬರಿಯೊಂದು ಅಪೆಂಡರ್ ಕೆಲಸ. ಯುದ್ಧ ಬಂದುದರಿಂದ ಒಂದು ಕಚೇರಿ ಗುಮಾಸ್ತೆ ಸಿಕ್ಕಿ, ಒಮ್ಮೆಗೇ ಆತ ೧೦ ರಾತ್ರಿಯ ಇನ್ಸೆಂಡಿಯರಿ ಬಾಂಬಿನ ಶಕ್ತಿಗಳಿಸಿದ. ಇನ್ನಾರು ತಿಂಗಳಲ್ಲಿ ಸುಣೆಗಾರಿಕೆಯಾಯಿತು. ಲಂಡನ್ ಬ್ಲಿಟ್ಸಿನ ನೇಕೆ ಆತ ೫೦೦ TNT ಯಾದ, ಅಂದರೆ ಮೆಜಿಸ್ಟ್ರೇಟನೇ ಆದ. ಆಗನ್ನೇ ನೇ ತೊಡಗಿತು ಆಗಸ್ಟಿನ ಆವಾಂತರ. ನಮ್ಮ ಮಿತ್ರ—ದಿನಕ್ಕೆ ಹತ್ತರಂತೆ ದೋಂಬಿಜನಗಳನ್ನು ಸಜಾಯಿಸಿ, ತನ್ನ ಶಕ್ತಿಯನ್ನು ೬೦೦೦ ರಾತ್ರಿಯ ಹೆಪ್ಪಿಬಾಂಬಿನಂತೆ ಮಾಡಿಕೊಂಡ! ಅನಂತರ ಬಡತಿಯಾಯಿತು ನಾಮಲೆದಾರಿಕೆಗೆ! ಆಗ ಆತ ಕೇವಲ V_1 V_2 ಆಗಿದ್ದ. ತೀರ ಹೊನ್ನೆ—ಆತನಿಗೆ ಕಲೆಕ್ಟರಿಕೆಲಿ ಬಡತಿಯಾಗಿ ಬಿಟ್ಟಿತು, ಆತ ಊರವರ ಪಾಲಿಗೆ ಒಬ್ಬ ಆಟಮ್ ಬಾಂಬೇ ಆಗಿದ್ದಾನೆ! ಈಗ ನಿಜಕ್ಕೂ, ನಿಲ್ಲಿಬಾರದ ಈ ಯುದ್ಧ ನಿಂತದ್ದಾದರೆ? ಊರಿಂದ ಬಡತಿಹೊಂದಿ, ಬಿರಿದ ಬೂರುಗದ ಹತ್ತಿಯಂತೆ ದಿಕ್ಕಾಪಾಲಾದ ನೌಕರವರ್ಗ ಹಿಂದೆ ಬರಬೇಕಷ್ಟೆ? ನಮ್ಮ ಮಿತ್ರ, Atom ಬಾಂಬಿನ ಪ್ರತಿರೂಪ, ಈತ, ಈ ಐದು ವರ್ಷದ ಅಧಿಕಾರಮಬ್ಬರವನ್ನು ಮರೆತು, ಬರಿಯ ೧೦ ರಾತ್ರಿಯ ಇನ್ಸೆಂಡಿಯರಿ ಆಗಬೇಕೇ? ಆದೂ ಹಂಗಾಮಿ ಕೆಲಸ..... ಯುದ್ಧವೀರರಿಗಾಗಿ ಕಾದಿರಿಸಿದ್ದಂತೆ. ಮನುಷ್ಯ ಉದ್ಯೋಗದಲ್ಲಿ, ವರನಾನವಲ್ಲಿ ಹೆಚ್ಚುಕಡಮೆಯಾವರೂ ಸಹಿಸಬಹುದು. ಆದರೆ ಮನುಷ್ಯನ 'ಕೌರವ'ಕ್ಕೆ ಕುಂದುಬರಬಾರದಲ್ಲಿ (ಧ್ವನಿಗಾಗಿ 'ಗೌರವ'ವನ್ನು 'ಕೌರವ'ಸಿದ್ದಾಗಿದೆ) ಮಾಲುಗಳು ಧಾರಾಳ ಸಿಕ್ಕಿ, ಕಾಂಗ್ರೆಸ್ಸಿಗರೂ ರಾಜಕೀಯ ಗಾಳಕ್ಕೆ ಸಿಕ್ಕಿ, ಅಧಿಕಾರ ವಹಿಸಿಕೊಂಡರೆ, ಪತೋಟಿಗಳು ಹೋದರೆ—ಈ ನೌಕರರೆಲ್ಲ ಏನು ಮಾಡಬೇಕು? ಹಿಂದೀಯರಿಂದ ಇಂಡಿಯಾವನ್ನು ಇನ್ನು ರಕ್ಷಿಸುವವರಾರು? ಅವರ D.I.R. ಆಯುಧ ಕಳಚಿದ ಮೇಲೆ, ಅವರು, ನಿವೃತ್ತಗೊಂಡ ಪೋಲೀಸು ಸುಪರಿಂಟೆಂಡರಂತೆ, ಗದೆ ಕಳಚಿದ ಭೀಮರಂತೆ, ಚಕ್ರನುರಿದ ಕೃಷ್ಣರಂತೆ, ಹಲ್ಲು ಬಿದ್ದ ಹಿದ್ದಿನಂತೆ—ಅಲ್ಲವೇ? ಮೂಷಕರೂಪಿಯು ಮಹಾಯುದ್ಧದಿಂದ ಐರಾವತನಾಗಿ ಬಿಟ್ಟ, ಜನತೆಯೆಂಬುದು ಮನುಷ್ಯತೆಬಿಟ್ಟು,

ಇರುವೆಯಾಗಿ ಅವನ ರಕ್ತಕ್ಕೆ ಅಂಜಿ, ಮಣಿಯಿತು. ಜಿಮಣಿಯೆಣ್ಣೆಯಿಂದ ತೊಡಗಿದ ಪರ್ಮಿಟಿನ ಪಾಠ, ಉಸಿರಿನ ತನಕವೂ ಆವರಿಸಿತು. ಒಂದು ವಿನಾಯಕನ ಚೌತಿ ನಡೆಯಿಸಲು—ಬೆಲ್ಲದ ಪರ್ಮಿಟು, ಅಕ್ಕಿ ಪರ್ಮಿಟು, ಗೋದಿ ಪರ್ಮಿಟು, ಎಂದು ಪರ್ಮಿಟಿನ ಸಹಸ್ರನಾಮ ಮಾಡುವಾಗ, ನಮ್ಮ ಐರಾವತಕ್ಕೆ ಜೊರೆತ ಪೂಜೆ, ವಿನಾಯಕನಿಗೇನೆ ಇಲ್ಲವಾಯಿತು. ಈ ಎಲ್ಲ ಪರ್ಮಿಟು ಕಾರ್ಖಾನೆಗಳು ಮುಚ್ಚುವಂತಾದರೆ, ಅವನ ಗೌರವ ಎಲ್ಲಿಂದ ಉಳಿದೀತು ?

ಅವರ ಮಾತು ಬಿಡಿ. ನಮ್ಮ ಓಡಾರಿಗಳೂ, ಸಮುಗಾರರೂ, ರೈತರೂ ಯುದ್ಧ ನಿಲ್ಲಲೇ ಬಾರದೆಂದು ತೀರ್ಮಾನಿಸಿದ್ದಾರೆ. ಮೊನ್ನೆ ನಮ್ಮ ಕರ್ಕಿ ಗಣೇಶಭಟ್ಟರೂ, ಗೋಡಂಬೆ ಗೋವಿಂದಭಟ್ಟರೂ ಮಂಗಳೂರಲ್ಲಿ ಸಂಚರಿಸುತ್ತಿದ್ದಾಗ, ಯುದ್ಧ ನಿಂತ—ಬ್ಯಾದ್‌ಕಾಸ್ಟ್ ಕೇಳಿ ಗಾಬರಿಯಾದರಂತೆ. ಅವರು ಆಗಲೇ ಮನೆಗೆ ಓಡಿ ಬಂದು, ಮುಂದಿನ ಯುದ್ಧದ ತನಕ, ಮರಗಳಿಂದ ಆಡಕೆಗಳೇ ಉದುರದಂತೆ ಏನೋ ಮಪ್ಪನ್ನೇ 'ಸ್ಪ್ರೇ' ಮಾಡಿಸಿದ್ದಾರೆಂದು ಪಾರ್ಟಿ.

ನಮ್ಮನ್ನು ನಡೆಯಿಸಿಕೊಂಡು ಹೋಗುವ ಯಾವ ವಿಧಿಯಿದೆಯೋ ಅವಕೇನಾದರೂ ಪ್ರಜಾಸತ್ತೆಯ ಈ ದಿನಗಳಲ್ಲಿ, ಲೋಕಾಭಿಪ್ರಾಯದ ಮೇಲೆ ಮನ್ನಣೆಯಿದ್ದರೆ—ಅದು ಯುದ್ಧವನ್ನು ನಿಲ್ಲಿಸಲಾರದೆಂದೂ ತಿಳಿಯಬೇಕು. ಒಮ್ಮೆಯಾದರೂ ಮರೆವಿನಿಂದ ಜಪಾನರು ಶರಣಾಗತಿ ಪತ್ರಕ್ಕೆ ಸಹಿ ಹಾಕಿದ್ದರೂ, ಆ ಸಹಿಯನ್ನೇ ಮರೆಯಬಹುದು. ಅಂತು ಶಾಂತಿಯ ಪೆಸರಲ್ಲಾದರೂ ಯುದ್ಧಸ್ಥಿತಿಯನ್ನೇ ಉಳಿಸಿಕೊಂಡು ಬಂದಾರಂದೇ ನಂಬಿಕೆ. ಏಕೆಂದರೆ ಜಪಾನು ಯುದ್ಧಘೋಷಣೆಯನ್ನು ಚೀನದ ಮೇಲ್ ಮಾಡಿರಲಿಲ್ಲ ಅದರಿಂದ ಸಂಧಾನಘೋಷಣೆಯನ್ನೂ ಮಾಡಬಾರದಷ್ಟೇ !

ಈ ವಿಷಯದಲ್ಲಿ ಒಂದೇ ಒಂದು ಮಂದಗಾಮಿ ಪಕ್ಷವಿದೆ. ಅದರೇನು ಗಮನಾರ್ಹ ಜನತೆಯಲ್ಲ. ಯಾರೆಂದು ಗೊತ್ತಿದೆ ನಿಮಗೆ—ಸಾಲೀ ಮಾಸ್ತರ ನರ್ಗ. ಅವರೊಬ್ಬರಿಗೇ ಯುದ್ಧ ಜೇಡವಾಗಿದೆ' ನಿಮಗೆ ಅವರನ್ನೂ ನಿಮ್ಮ ಪಕ್ಷಕ್ಕೆ ಒಲಿಸುವ ಆಪೇಕ್ಷೆಯಿದ್ದರೆ, ಅವರಿಗೂ ಸ್ವಲ್ಪ D. I. R. ಅಧಿಕಾರ ಹಂಚಿಕೊಡಿ. Food control ನಂತೆ Brain Control ಆರ್ಡರ್ ಒಂದು ಹೊರಡಿಸಿ ಅವರಿಗೇ ಲಧಿಕಾರಕ್ಕೆ ಬಿಡಿ. ಆಗ ಅವರನ್ನೂ ನಿಮ್ಮ ಪಂಗಡಕ್ಕೆ ಸೆಳೆದುಕೊಂಡು, ಜನರನ್ನು ಶಾಂತಿಯ ಗಾಬರಿಯಿಂದ ರಕ್ಷಿಸಬಹುದು.

ಜಯಂತಿ ಕಾರ್ಯಾಲಯದಲ್ಲಿ ದೊರೆಯುವ ಪುಸ್ತಕಗಳು

ಗೀತಾಗಾಂಭೀರ್ಯ	೩	೦	೦
ನಗೆ (ರಸವಿಚಾರ)	೧	೮	೦
ಆಹ್ವಾನ (ಕವನಸಂಗ್ರಹ)	೧	೦	೦
ನಿರಾಹಾರ	೦	೧೨	೦
ಸುದರ್ಶನ (ಕಾದಂಬರಿ)	೧	೦	೦
ವಿರಹಿಣಿ (ಕವನಸಂಗ್ರಹ)	೦	೧೨	೦
ಕರ್ನಾಟಕ ಜನಜೀವನ	೧	೮	೦

DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

Cotton, Silk, Art Silk,
Wool, Jute, Paper,
Leather, Soap, Wax,
Coir, Varnishes, Oils.

CHEMICALS
ACCELERATORS AND
ANTI-OXIDANTS
FOR
RUBBER INDUSTRY

S. K. KABBUR LIMITED
3, BASTION ROAD
FORT, BOMBAY
Telegrams "DIAZO" Bombay Telephone 21627

CORRESPONDENTS IN ENGLAND:
KABBUR & CO., LIMITED
RADHA HOUSE
Higher Ardwick, MANCHESTER, 12.
Telegrams "Radha, Manchester."



ಕೃಷಿಜೀವಿಗಳ ಋಣ ವಿಮೋಚನೆ

ಶ್ರೀ ಪಾಳ್ಬೇಕರ ಗುರುರಾಯರು ಬಿ. ಎ. ಎಲ್ ಎಲ್. ಬಿ. ಹುಬ್ಬಳ್ಳಿ

ಕೇವಲ ಕಾನೂನುಗಳನ್ನು ಪಾಸು ಮಾಡುವುದರಿಂದ ಮಾತ್ರ ಒಕ್ಕಲುತನದಿಂದ ಜೀವಿಸುವವರ ಬಾಳುವೆಯಲ್ಲಿ ಒದಲಾವಣೆಯಾಗದು. ಪೆಟ್ಟಿಡೆವ್ಶನ್ ಆಕ್ಟು ಅನುಲಿನಲ್ಲಿ ಬಂದ ಭಾಗದಲ್ಲಿ ಒಕ್ಕಲಿಗರೆಲ್ಲರೂ ಸುಖಸಾಗರದಲ್ಲಿ ತೇಲಾಡುವರೆಂಬ ಕಲ್ಪನೆ ಕೆಲವರಲ್ಲಿದೆ; ಆದರೆ ಅದು ತೀರ ತಪ್ಪು ತಿಳಿವಳಿಕೆ. ಸಾಲವನ್ನು ಸಂಪೂರ್ಣವಾಗಿ ಮುಳುಗಿಸುವ ಸಾಧನಗಳಲ್ಲಿ ಈ ಕಾನೂನು ಒಂದಾಗಿದೆಯೆಂದು ಕೆಲವರ ತಿಳಿವಳಿಕೆಯಾಗಿದೆ. ಕೃಷಿಜೀವಿಗಳ ಸಾಲದ ಪರಿಹಾರವು ಇಷ್ಟು ಹಗುರಾದ ಮಾತಾಗಿದ್ದರೆ, ಈ ಸಾಲ ಹರಿದು ಬಹಳ ವರ್ಷಗಳಾಗುತ್ತಿದ್ದುವು. ಕಳೆದ ಅರುವತ್ತು ವರ್ಷಗಳಿಂದ ಸರಕಾರದವರು ಈ ತರದ ಕಾನೂನುಗಳನ್ನು ಪಾಸು ಮಾಡತೊಡಗಿದ್ದಾರೆ. ಬಲಖಿರಲ್ಲಿ ಭೂಮಿ ಸುಧಾರಣೆ ಕಾನೂನು (The Land Improvement Act) ಪಾಸಾಯಿತು. ಪುರುವರ್ಷವೇ ಒಕ್ಕಲಿಗರ ಸಾಲದ ಕಾನೂನು (The Agriculturists Loans Act) ಬಂತು. ಡೆಕ್ಕನ್ ಅಗ್ರಿಕಲ್ಚರಿಸ್ಟ್ ಆಕ್ಟು ಪಾಸಾಯಿತು. ಸುಲಭದ ತಗಾಯಿ ಕೊಡುವ ಯೋಜನೆಯಾಯಿತು. ಸಹಕಾರಿ ಪತ್ತಿನ ಸೊಸೈಟಿಗಳ ಸುಕಾಲವಾಯಿತು. ಆನಂತರ ಲ್ಯಾಂಡ್ ಮಾರ್ಗೇಜ್ ಬ್ಯಾಂಕುಗಳ ಮನ್ವಂತರ ಪ್ರಾರಂಭವಾಯಿತು ಇವು ಮುಖ್ಯವಾದ ಉಪಾಯಗಳು. ಇವರಲ್ಲಿ ಕೆಲವು ಉಪಾಂತರ ಯತ್ನಗಳೂ ಆದುವು ಇವೆಲ್ಲ ಉಪಾಯಗಳ ಪರಿಣಾಮನೇನಾಯಿತು? ಒಕ್ಕಲಿಗರ ಸಾಲ ತೀರುವುದು ಬದಿಗುಳಿದು, ಅದು ದಿನದಿನಕ್ಕೆ ಬೆಳೆಯತೊಡಗಿತು.

ಸಾಲದ ಹಣವು ಇಂತಿಷ್ಟೇ ಇದೆಯೆಂದು ನಿರ್ಣಯಾತ್ಮಕ ಅಂಕಿಗಳನ್ನು ಕೊಡಲು ಸಾಧ್ಯವಿಲ್ಲ. ಆ ತರದ ಅಂಕೆಗಳು ದೊರೆಯುವುದಿಲ್ಲ. ಆ ತರದ ಪ್ರಯತ್ನವೂ ಸರಕಾರದಿಂದ ಆಗಿಲ್ಲ. ಮದ್ರಾಸ ಇಲಾಖೆಯಲ್ಲಿ ಕಾಂಗ್ರೆಸ್ ಸರಕಾರವಿದ್ದಾಗ, ಕೋಆಪರೇಟಿವ್ ಸೊಸಾಯಿಟಿಗಳ ಸವ್ಯದ ರಜಿಸ್ಟ್ರಾರರಾದ ಶ್ರೀಮಾನ್ ಸಾಧಿಯಾನಾಥರನ್ನು ಮದ್ರಾಸ ಇಲಾಖೆಯಲ್ಲಿಯ ಕೃಷಿಜೀವಿಗಳ ಸಾಲವೆಷ್ಟೆಂಬುದನ್ನು ಗೊತ್ತುಪಡಿಸುವ ಕೆಲಸಕ್ಕೆ ನೇಮಿಸಿದ್ದರು. ಇವರು ಒಪ್ಪಿಸಿದ ವರದಿ ವಾಚನೀಯವಾಗಿದೆ. ಮದ್ರಾಸ ಇಲಾಖೆಯಲ್ಲಿ ಇಂತಹ ಸಾಲದ ರಕಮು ಸುಮಾರು ಇನ್ನೂರು ಕೋಟಿ ರೂಪಾಯಿಗಳಷ್ಟು ಆಗಬಹುದು. ಭಾರತದಲ್ಲಿಯ ಎಲ್ಲ ಪ್ರಾಂತಗಳಲ್ಲಿಯ ಕೃಷಿಜೀವಿಗಳ ಸಾಲದ ರಕಮು ಒಂದು ಸಾವಿರದ ಮೇಲೆ ಎರಡುನೂರು ಕೋಟಿ ರೂಪಾಯಿ ಆಗಬಹುದು. ೮೦೦ ಕೋಟಿಗಿಂತ ಅದು ಕಡಿಮೆಯಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು.

ಮೇಲೆ ವಿವರಿಸಿದ ಉಪಾಯಗಳು, ರಕ್ತವನ್ನು ಭರದಿಂದ ಹೀರಿಕೊಳ್ಳುವ ಪ್ರಯತ್ನದ ಜೇನಿಗೆ ಶುಂಠಿಯ ಕಷಾಯದ ಯೋಜನೆ ಮಾಡಿದಂತಿವೆ. ಜೀವದ ರಸವನ್ನು ಶೋಷಿಸುವಂತಹ ಈ ದುಷ್ಟ ಜೇನಿಗೆ ಬೇರೆ ದೇಶಗಳಲ್ಲಿ ಸಹಸ್ರವುಟಿ ಅಭ್ರಕದಂತಹ—ಜೇನೆಯನ್ನು ಹಿಸ್ಕೆಟ್ಟಿಸುವಂತಹ— ಔಷಧದ ಉಪಾಯ ಮಾಡುತ್ತಾರೆ. ಪಥ್ಯೋಪಚಾರಕ್ಕಾಗಿ ನ್ಹಿಟ್ಯಾಮಿನುಗಳುಳ್ಳ ಉತ್ತಮ ಆಹಾರಕೂಡುತ್ತಾರೆ. ನಮ್ಮ ದೇಶದಲ್ಲಿ ದಿನೇದಿನೇ ಹೆಚ್ಚು ಹೆಚ್ಚು ನಿತ್ರಾಣನಾಗುತ್ತ ನಡೆದ ರೋಗಿಗೆ ಕೇವಲ ಶುಂಠಿಕಷಾಯದ ಔಷಧ ಹಾಗು ಒಣ ರೊಟ್ಟಿ ಮೆಣಸಿನಕಾಯಿಗಳ ಸಪ್ಯ ದೊರೆಯುತ್ತದೆ. ಆಥವಾ ಈ ಯತ್ನವು ಒಂದು ಸಣ್ಣ ಡೋಣಿಯಲ್ಲಿ ಕುಳಿತುಕೊಂಡು ಮಹಾ ಸಾಗರವನ್ನು ದಾಟುವ ಯತ್ನಮಾಡಿದಂತಿದೆ. ವ್ಯಾಂತಿಕ ಹಾಗು ಮಧ್ಯವರ್ತಿ ಬ್ಯಾಂಕುಗಳ ಇನ್‌ಕ್ವಾಯಿರಿ ಕಮೀಟಿಗಳ ವರದಿಗಳಲ್ಲಿ—ರಿಝರ್ವ್ ಬ್ಯಾಂಕಿನ ಪ್ರಕಟನೆಗಳಲ್ಲಿ—ಈ ವಿಷಯದ ಚರ್ಚೆಯಾಗಿದೆ.

ಈ ವರೆಗೆ ಆದ ಉಪಾಯಗಳು ಹೇಗಿವೆಯೆಂಬ ಬಗ್ಗೆ ಒಂದೆರಡು ಸಂಗತಿಗಳ ಉಲ್ಲೇಖ ಮಾಡಿದರೆ ಸಾಕು. ಏಕೆಂದರೆ ಹಳ್ಳಿಯ ಸಹಕಾರಿ ಸಂಘಗಳಲ್ಲಿ ಸಾಲ ದೊರೆಯುವ ಪ್ರತ್ಯಕ್ಷ ಪದ್ಧತಿ, ತಗಾಯಿ

ಹಣ ಮಂಜೂರಾಗಿ ರೈತರ ಕೈಗೆ ಮುಟ್ಟುವವರೆಗಿನ ಕ್ರಮ, ಲ್ಯಾಂಡ್ ಮಾರ್ಗೇಜ್ ಬ್ಯಾಂಕುಗಳಲ್ಲಿ ಸಾಲ ದೊರೆಯಬೇಕಾದರೆ ಆಗ ಬೇಕಾದ ಪೂರ್ವಸಿದ್ಧತೆ ಮೊದಲಾದುವುಗಳು ಬಹುಜನರಿಗೆ ಗೊತ್ತಿದ್ದ ಸಂಗತಿಗಳಾಗಿವೆ. ಇದಲ್ಲದೆ ಅವುಗಳ ನಿವರಣೆಯನ್ನು ಬಲ್ಲವರು ಮಾಡಿದ್ದಾರೆ. ಒಳ್ಳೆಯ ಸದುದ್ದೇಶದಿಂದ ಸಂಪೂರ್ಣ ರಕಮು—ಯಾರ ಬಾಬನ್ನೂ ಕೊಡದೆ-ಸಾಲಗಾರರ ಕೈಗೆ ಮುಟ್ಟಿದರೂ ಕೂಡ, ಅವರು ಅದರ ದುರುಪಯೋಗ ಮಾಡಿದ ಉದಾಹರಣೆಗಳು ಕಡಿಮೆ ಇಲ್ಲ.

ಕೇವಲ ಒಕ್ಕಲುತನದಿಂದ ಜೀವಿಸುವವರ ಸಂಖ್ಯೆ ಹೆಚ್ಚಾಯಿತು ಜನಸಂಖ್ಯೆಯ ಹೆಚ್ಚುನಿಕೆಯ ಮಾನದಿಂದ ಉದ್ಯೋಗಗಳ ಬೆಳೆವಣಿಗೆಯಾಗಲಿಲ್ಲ. ಒಕ್ಕಲುತನದ ಉತ್ಪನ್ನದಿಂದ ಉಪಜೀವನ ಸಾಗಿಸುವುದು ದುಸ್ತರವಾಗುವುದರಿಂದ ಮತ್ತು ಒಕ್ಕಲುತನಕ್ಕೆ ಸಹಾಯಕವಾದ ಬೇರೆ ಉದ್ಯೋಗಗಳಲ್ಲದುದರಿಂದ ಅನೇಕರು ಸಾಲವಂದಿಗರಾಗಬೇಕಾಯಿತು. ಅನೇಕ ವರ್ಷಗಳ ವರೆಗೆ ನಾಸ್ಯದಲ್ಲಿ ಇದ್ದುದರಿಂದ ನೀತಿಯ ನಿಯಮಗಳು ಮಸುಕಾದವು. ಸ್ಥೈರ್ಯ, ಧೈರ್ಯ, ಸಾಹಸಾದಿಗುಣಗಳು ಲೋಪವಾಗಹತ್ತಿದುವು. ವಂಚನೆ, ಒಡಕು ಪಕ್ಷೆ-ಪಂಗಡ, ವೈಷಮ್ಯ ಮೊದಲಾದುವುಗಳ ಪ್ರಾಬಲ್ಯ ಬೆಳೆಯಿತು. ಅದರಿಂದ ಮೇಲಿನ ಕುಂಟು ಉಪಾಯಗಳ ಉಪಯುಕ್ತತೆಯು ಕಡಿಮೆಯಾಯಿತು. ಸಹಕಾರದಂತಹ ಆಂದೋಲನವು ಸಹ ಬಲಕಾರಿಯಾಗಲಿಲ್ಲ. ೧೯೫೯-೪೦ನೆಯ ವರ್ಷ ಸುಮಾರು ಒಂದು ಲಕ್ಷ ಒಕ್ಕಲುತನದ ಪತ್ತಿನ ಸಂಘಗಳಿದ್ದವು. ಅವುಗಳ ಸೆಂಬರರ ಸಂಖ್ಯೆ ೪೧ ಲಕ್ಷ ಇತ್ತು. ೪೦ ಕೋಟಿ ಜನಸಂಖ್ಯೆಯುಳ್ಳ ದೇಶದಲ್ಲಿ ೪೧ ಲಕ್ಷ ಜನರು ಸಹಕಾರಿ ಸಂಘಗಳ ಸೆಂಬರರು! ಇದು ೪೦ ವರ್ಷದ ಸಹಕಾರದ ಪ್ರಗತಿ. ಸಹಕಾರದಲ್ಲಿ ನಮ್ಮ ಸ್ಥಿತಿಯನ್ನು ಸುಧಾರಿಸುವ ಬಲವಿಲ್ಲವೆಂದು ಅಭಿಪ್ರಾಯವಲ್ಲ; ನಿಜವಾದ ಸಹಕಾರವು ಕಾಮಧೇನು-ಕಲ್ಪವೃಕ್ಷದಂತಿದೆ. ಅದರ ಉಪಯೋಗ ಬೇರೆ ದೇಶಗಳಲ್ಲಿ ಹೇಗಿದೆಯೆಂಬುದನ್ನು ಅನೇಕ ಸಲ ವಿವರಿಸಿದ್ದೇನೆ. ಅದರೆ ದುರ್ದೈವದಿಂದ ನಮ್ಮ ದೇಶದಲ್ಲಿ ನಮ್ಮ ವ್ಯಾಂತದಲ್ಲಿ ಅದು ಜಾತಿವಿಶಿಷ್ಟ ಸಂಸ್ಥೆಯಾಗಿದೆ. ಅದರ ಮೂಲತತ್ತ್ವಗಳನ್ನು ಹೇಳುವವರು ಅವ್ಯವಹಾರಿಕರೆಂದು ಹಳಿಯಲ್ಪಡುತ್ತಾರೆ. ಹೀಗಿದ್ದುದರಿಂದ, ಸಹಕಾರಿ ಸಂಸ್ಥೆಗಳಿಂದ ಒಕ್ಕಲಿಗರ ಸಾಲ ಪರಿಹಾರವಾಗಲಿಕ್ಕೆ ಸಹಾಯವಾಗದಿದ್ದರೆ ಅದು ಸಂಸ್ಥೆಗಳ ತಪ್ಪಲ್ಲ; ಅದರ ಸಂಚಾಲಕರ ತಪ್ಪು.

ಒಕ್ಕಲಿಗರಿಗೆ ಬೇಕಾಗುವ ಸಾಲ ಮುಖ್ಯವಾಗಿ ಎರಡು ತರದ್ದು; (೧) ಸಣ್ಣ ಅವಧಿಯದು, (೨) ದೊಡ್ಡ ಅವಧಿಯದು. ಹಳ್ಳಿಯ ಸಹಕಾರಿ ಸಂಘಗಳು ಮೊದಲನೆಯ ತರದ ಸಾಲ ಕೊಡುವುದಕ್ಕಾಗಿ ಸ್ಥಾಪಿತವಾದುವು. ಅವುಗಳಿಂದಾದ ಸಹಾಯ ಸರ್ವಶ್ರುತವಾಗಿದೆ. ಅವು ಹಳ್ಳಿಗರನ್ನು ಒಂದುಗೂಡಿಸುವ ಬದಲು ಇದ್ದ ಪಕ್ಷೆ-ಪಂಗಡಗಳಲ್ಲಿಯ ದ್ವೇಷ-ಅಸೂಯೆಗಳನ್ನು ಬೆಳೆಯಿಸಿದುವು. ಮೊದಲು ದೊಡ್ಡ ದೊಡ್ಡ ಜಾತಿಗಳಲ್ಲಿ ದ್ವೇಷಾಗ್ನಿಯು ಉರಿಯುಪತ್ತಿತು. ಈಗ ಒಂದೇ ಜಾತಿಯಲ್ಲಿಯ ಉಪಜಾತಿಗಳಲ್ಲಿ ಬೇಗೆ ಹತ್ತಿದೆ. ಇದೇ ಧರ್ಮ! ಇದೇ ಶೀಲ! ಈ ಧರ್ಮಾಭಿಮಾನಿಗಳನ್ನು ಕಂಡು ಧರ್ಮ ಸಂಸ್ಥಾಪಕರು ನಡುಗುತ್ತಿರಬೇಕು. ಇಂತಹ ಮಹಾನುಭಾವರ ಕೈಯಲ್ಲಿ ಸಿಕ್ಕ ಸಹಕಾರವು ಕೊರಗಿದೆ, ಸೊರಗಿದೆ, ಬಳಲುತ್ತಲಿದೆ. ೩ನೆಯ ತರದ ಸಾಲ ಕೊಡುವ ಸಂಸ್ಥೆಗಳೆಂದರೆ ಲ್ಯಾಂಡ್‌ಮಾರ್ಗೇಜ್ ಬ್ಯಾಂಕುಗಳು. ಹಿಂದಿನ ಸಾಲವನ್ನು ತೀರಿಸುವ ಕೆಲಸವನ್ನು ಇವುಗಳಿಗೆ ಒಪ್ಪಿಸುವುದರಲ್ಲಿ ಬಂದಿತು. ಇವು ಒಕ್ಕಲಿಗರ ಸಾಲವನ್ನು ಪರಿಹರಿಸಿ ಅವರ ಆರ್ಥಿಕ ಸ್ಥಿತಿ ಸುಧಾರಿಸುವುವೆ? ಈ ಬಲವು ಆ ತರದ ಬ್ಯಾಂಕುಗಳಲ್ಲಿದೆಯೆಂದು ಬೇರೆ ದೇಶದ ಆಂದೋಲನದ ಇತಿಹಾಸವು ಹೇಳುತ್ತಿದೆ. ನಮ್ಮ ದೇಶದಲ್ಲಿ ಇವುಗಳ ಸಡಗರ ಹೇಗಿದೆ ನೋಡಿ, ಸುಮಾರು ಕಾಲು ಶತಮಾನದ ಹಿಂದೆ ಭಾರತದಲ್ಲಿಯ ಮೊದಲನೆಯ ಲ್ಯಾಂಡ್‌ಮಾರ್ಗೇಜ್ ಬ್ಯಾಂಕು ಪಂಜಾಬದಲ್ಲಿ ಜನಿಸಿತು. ಆ ಪ್ರಾಂತದಲ್ಲಿ ಅವುಗಳ ಪ್ರಗತಿ ಮುಖದ ಕಡೆಗೆ ಆಗುವ ಬದಲು ಬಾಲದ ಕಡೆಗೆ ಆಗತೊಡಗಿತು. ಅದರ ದುಡಿಯುವ ಬಂಡವಲವು ಅರ್ಧದಷ್ಟು ಕಡಿಮೆಯಾಯಿತು— ೩೨ ಲಕ್ಷದಿಂದ ೧೩ ಲಕ್ಷಕ್ಕೆ ಬಂತು ಓದುಗರನ್ನು ಬೇಸರುಗೊಳಿಸಬಾರದೆಂದು ದುಂಡು ಅಂಕಗಳನ್ನೇ ಕೊಟ್ಟಿದ್ದೇನೆ. ಬಂಗಾಲ, ಸಂಯುಕ್ತಪ್ರಾಂತ ಮೊದಲಾದುವುಗಳಲ್ಲಿಯ ಲ್ಯಾಂಡ್‌ಮಾರ್ಗೇಜ್ ಬ್ಯಾಂಕುಗಳಲ್ಲಿ ದುಡಿಯುವ ಬಂಡವಲವು ೮-೧೦ ಲಕ್ಷಕ್ಕಿಂತ ಹೆಚ್ಚಿಲ್ಲ. ಇಷ್ಟರಿಂದ ೧೦೦-೬೦ ಕೋಟಿ ರೂಪಾಯಿಗಳ ಸಾಲ ಹೇಗೆ ಮತ್ತು ಎಂದು ತೀರಬೇಕು? ಬಂಗಾಲದಂತಹ ದೊಡ್ಡ ವ್ಯಾಂತದಲ್ಲಿ ಆರು ವ್ಯಾಯಮರಿ ಲ್ಯಾಂಡ್ ಮಾರ್ಗೇಜ್ ಬ್ಯಾಂಕುಗಳ ಬಂಡವಲವು ಅರೂಕಾಲು ಲಕ್ಷಕ್ಕೆ ಮೀರಿಲ್ಲ ಮದ್ರಾಸ ಇಲಾಖೆಯು ಅಗ್ರಸ್ಥಾನವನ್ನು ಪಡೆದಿದೆ: ೧೯೩೧-೪೨ರಲ್ಲಿ ಲ್ಯಾಂಡ್‌ಮಾರ್ಗೇಜ್ ಬ್ಯಾಂಕುಗಳಲ್ಲಿ ದುಡಿಯುವ ಬಂಡವಾಳವು ೨ ಕೋಟಿ ೬೦ ಲಕ್ಷ ರೂಪಾಯಿಗಳಿದ್ದವು. ಮುಂಬಯಿ ಇಲಾಖೆಯು ದೂರದ ಎರಡನೆಯ ಸ್ಥಾನ ದೊರಕಿಸಿದೆ. ನಮ್ಮ ಇಲಾಖೆಯಲ್ಲಿ ದುಡಿಯುವ ಬಂಡವಾಳವು ೩೨ ಲಕ್ಷ ರೂಪಾಯಿಗಳಿದೆ. ಭಾರತದಲ್ಲಿಯ ಕೃಷಿಜೀವಿಗಳ ೪೦೦-೧೦೦೦ ಕೋಟಿ ರೂಪಾಯಿಗಳ ಸಾಲವು ಲ್ಯಾಂಡ್‌ಮಾರ್ಗೇಜ್ ಬ್ಯಾಂಕುಗಳಲ್ಲಿಯ ೪-೬ ಕೋಟಿ ರೂಪಾಯಿಗಳ ಬಂಡವಾಳದಿಂದ ತೀರುವ ಬಗೆ ಹೇಗೆ?

ಬೇರೆ ದೇಶಗಳಲ್ಲಾದ ಪ್ರಯತ್ನ ನೋಡಿ: ೧೯೩೩ರಲ್ಲಿ ಅಮೇರಿಕೆಯಲ್ಲಿಯ ಅಗ್ರಿಕಲ್ಚರಲ್ ಕ್ರೆಡಿಟ್ಸ್ ಆಕ್ಟ್ ಎಂಬ ಕಾನೂನು ಪಾಸ್ ಆಯಿತು. ಕೂಡಲೆ ೧೩ ಬ್ಯಾಂಕುಗಳು ಸ್ಥಾಪಿಸಲ್ಪಟ್ಟುವು. ಪ್ರತಿಯೊಂದು ಬ್ಯಾಂಕಿನ ಬಂಡವಾಳವು ೫೦ ಲಕ್ಷ ಡಾಲರ್ ಇತ್ತು. ಒಂದು ಡಾಲರ್ ಎಂದರೆ ಸುಮಾರು ೩೨ ರೂಪಾಯಿ. ರಕಮು ತೀರ ದೊಡ್ಡದು ಅಥವಾ ತೀರ ಸಣ್ಣದಾಗದೆ ಇದ್ದ ಸಾಧಾರಣ ಮುದ್ದತಿಯ ಸಾಲ ಕೊಡುವುದಕ್ಕಾಗಿತ್ತು. ನಮ್ಮ ದೇಶದಲ್ಲಿ ೧೦೦ಕ್ಕೆ ೭೫ ಕ್ಕೆಂತ ಹೆಚ್ಚು ಜನರು ಕೃಷಿಜೀವಿಗಳಿದ್ದಾರೆ. ಅಮೇರಿಕೆಯಲ್ಲಿ ೧೦೦ಕ್ಕೆ ೨೫ ಕ್ಕೆಂತ ಕಡಿಮೆ ಜನರು ಕೃಷಿಯನ್ನು ಅವಲಂಬಿಸಿಕೊಂಡವರಿದ್ದಾರೆ ಎಂದರೆ ಒಕ್ಕಲಿಗರಿಗೆ ಸಾಲ ಕೊಡುವ ರಕಮು ನಮ್ಮ ದೇಶದ್ದು ಅಮೇರಿಕೆಗಿಂತ ಹೆಚ್ಚಿಗಿರಬೇಕು. ಅದು ಧನವಂತ ದೇಶ, ನಮ್ಮದು ದರಿದ್ರದೇಶವಾದರೂ ಅಮೇರಿಕೆಗಿಂತ ನಮ್ಮ ಜನಸಂಖ್ಯೆ ಎಷ್ಟೋಪಟ್ಟು ಹೆಚ್ಚಿದೆಯೆಂಬುದನ್ನು ನಾವು ಮರೆಯಬಾರದು. ೧೯೩೩ರಲ್ಲಿ ಅಮೇರಿಕೆಯಲ್ಲಿ ಒಕ್ಕಲಿಗರಿಗೆ ಸಾಲ ಕೊಟ್ಟ ರಕಮು ೧೯೧,೫೬,೯೧೦೦೦ ಡಾಲರ್ ಇತ್ತು. ಮರುವರ್ಷವೇ ಅದು ೨೦೬,೫೬,೨೦,೦೦೦

ಗಾಯಿತು. ಸುಮಾರು ೯ ಲಕ್ಷ ಒಕ್ಕಲಿಗರಿಗೆ ಸಾಲ ದೊರೆಯಿತು. ನಮ್ಮ ದೇಶದಲ್ಲಿ ಒಂದು ದೊಡ್ಡ ಮುಂದುವರಿದ ಜಿಲ್ಲೆಯಲ್ಲಿಯ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ಸ್ ಬ್ಯಾಂಕು ೧೯೩೫ರಿಂದ ೧೯೪೩ರ ವರೆಗಿನ ೮ ವರ್ಷಗಳಲ್ಲಿ ೩೮ ಲಕ್ಷ ರೂ. ಗಳನ್ನು ೩೦೦ ರೈತರಿಗೆ ಸಾಲ ಕೊಟ್ಟಿತು. ಈ ಹೋಮಿಯೋ ಪಥಿಕ್ ಡೋಜಿನಿಂದ ಸಾಲ ಹರಿಯುವುದಿಲ್ಲ. ಒಕ್ಕಲಿಗರ ಸಾಲತೀರಿಸುವುದಕ್ಕಾಗಿ ಅವತಾರ ತಾಳಿದ ಈ ಸಂಸ್ಥೆಗಳ ಅಬ್ಬರ ಅಡಗಿದರೂ ಖಡ್ಡಿ ಇಲ್ಲ; ಇಂತಹ ಕ್ಷಯದ ಬೇನೆಯಿಂದ ಬಳಲುವ ಸಂಸ್ಥೆಗಳಿಂದ ಧನ ಸಹಾಯ ಅಪೇಕ್ಷಿಸುವುದೇ ಮೂರ್ಖತನ. ಈ ಬ್ಯಾಂಕುಗಳ ಬಡ್ಡಿಯ ಜರ, ಸಾಲಕೂಡುವ ಕ್ರಮ ಇವುಗಳನ್ನು ನೋಡಿ ಕೆಲವು ಶಾಸ್ತ್ರ ಜ್ಞರು, ಇದು ಸಾವುಕಾರನ ಸದ್ಧತಿಗಿಂತ ಲೇಸಾಗಿದ್ದರೂ ಒಕ್ಕಲಿಗರ ನಾಲ ಇದರಿಂದ ತೀರುವುದಿಲ್ಲವೆಂದು ಹೇಳಿವ್ದಾರೆ. ಬೇರೆ ದೇಶಗಳಲ್ಲಿಯ ಇಂತಹ ಬ್ಯಾಂಕುಗಳ ಬಡ್ಡಿಯ ದರ ೩ರಿಂದ ೪½ ವರೆಗಿದೆ.

ಕೇವಲ ಸಾಲ ತೀರಿಸುವ ಹವ್ಯಾಸಕ್ಕೆ ಬಿದ್ದು ಅದನ್ನು ತೀರಿಸುವುದರಲ್ಲಿ ಯಶ ದೊರೆಕಿಸಿದರೂ ಅದರಿಂದ ಒಕ್ಕಲಿಗನ ಆರ್ಥಿಕ ಸ್ಥಿತಿ ಪೂರ್ಣ ಸುಧಾರಿಸುವುದಿಲ್ಲ. ಈ ಸಾಧನದಿಂದ ಈ ಉಪಾಯ ಯೋಜನೆಯಿಂದ ಸಾಲ ತೀರುವುದಿಲ್ಲ. 'ಮಾಡಿದ ಸಾಲ ಮುಳುಗುತ್ತದೆ, ಅದನ್ನು ಮುಳುಗಿಸಲಿಕ್ಕೆ ಬೇಕಾದ ಕಾನೂನಿನ ಸಹಾಯ ದೊರೆಯುತ್ತದೆ' ಎಂದರೆ ಸಾಲಗಾರರಾಗುವ ಮಾರ್ಗವನ್ನು ಅವಲಂಬಿಸುವವರ ಸಂಖ್ಯೆ ಸಹಜವಾಗಿ ಬೆಳೆಯುವುದು. ಒಕ್ಕಲಿಗರಿಗೆ ಕೊಟ್ಟ ಸಾಲದ ರಕಮು ತಿರುಗಿ ಬರಲು ಕಠಿನವಾಗಹತ್ತಿದ್ದರಿಂದ ಒತ್ತೆಯ ಬದಲು ಖರೀದಿಯಾಗಲಾರಂಭಿಸಿತು ಖರೀದಿ ಇದ್ದರೂ ಒತ್ತೆಯ ವ್ಯವಹಾರವಿದೆಯೆಂದು ಸಿದ್ಧಪಡಿಸಲು ಕಾನೂನಿನ ಅನುಕೂಲತೆಯುಂಟಾಯಿತು. ಒಕ್ಕಲಿಗನ ಸಾಂಪತ್ತಿಕ ಸ್ಥಿತಿ ಸುಧಾರಿಸಿದ ಹೊರತು ಒಕ್ಕಲುತನದಿಂದ ಜೀವಿಸುವವರ ಸಂಖ್ಯೆ ಕಡಿಮೆಯಾದ ಹೊರತು, ಒಕ್ಕಲತನದಲ್ಲಿ ಸುಧಾರಣೆಯಾಗಿ ಭೂಮಿಯು ಹೆಚ್ಚು ಫಲಪ್ರದವಾದ ಹೊರತು, ಬೇಸಾಯದ ಕೂಡ ಸಾಗಿಸುವಂತಹ ಉದ್ಯೋಗಗಳು ಹಳ್ಳಿಗಳಲ್ಲಿ ಹೆಚ್ಚಾದ ಹೊರತು, ನೀತಿಯ ಮಟ್ಟು (ಸ್ಟ್ಯಾಂಡರ್ಡ ಆಫ್ ಮೋರೆಲಿಟಿ) ಹೆಚ್ಚಾದ ಹೊರತು ಈ ಬಿಕ್ಕಟ್ಟಿನ ಪ್ರಶ್ನೆಯನ್ನು ಬಿಡಿಸಲು ಸಾಧ್ಯವಿಲ್ಲ. ಭೂಮಿಯ ವಿಭಾಗಕ್ಕೆ ಅಥವಾ ಹೆಚ್ಚುವಳಿಕೆಗೆ ತಡೆ ಇಲ್ಲ' ಎಂದು ಎಕರೆಯ ವರೆಗೆ ತೋಟವಿಲ್ಲದ, ಭೂಮಿಯನ್ನು ವಿಭಾಗಿಸುತ್ತಾ ಹೋಗುವುದರಿಂದ, ಆಗುವ ಹಾನಿಯನ್ನು ಮೊದಲು ದೂರ ಮಾಡಬೇಕು. ಬಯಲುಸೀಮೆಯಲ್ಲಿ ಒಂದು ಏಕನಾಮಿಕ್ ಹೋಲ್ಡಿಂಗಿಗೆ ಎಷ್ಟು ಭೂಮಿ ಇರಬೇಕು, ಮಲೆನಾಡಿನಲ್ಲಿ ಎಷ್ಟು ಭೂಮಿ ಇರಬೇಕೆಂಬುದನ್ನು ನಿರ್ದಿಷ್ಟಗೊಳಿಸಿ, ಅದರಲ್ಲಿ ವಿಭಾಗಣೆಯಾಗಗೊಡಬಾರದು. ಎರಡು ಎತ್ತುಗಳಿಂದ ಸಾಗುವ ಭೂಮಿ ಇರಲೇಬೇಕು. ಕಾಳಗಳ ಹಾಗು ಭೂಮಿಯ ಒಡೆಯರ ಸಂಬಂಧ ಮೊದಲಾದ ಅನೇಕ ಪ್ರಶ್ನೆಗಳು ಋಣವಿಮೋಚನಕ್ಕೆ ಸಂಬಂಧಪಟ್ಟಿವೆ—ಇವೆಲ್ಲವುಗಳನ್ನು ಸೂಲಂಕಷವಾಗಿ ವಿಚಾರ ಮಾಡುವುದಕ್ಕಾಗಿ ರಿಝರ್ವ್ ಬ್ಯಾಂಕಿನ ನಿವೃತ್ತ ಡೆಪುಟಿ ಗವ್ಹರ್ನರರಾದ ಸರ್ ಮಣಿಲಾಲ ನಾನಾವತಿಯವರು 'The Society of Agricultural Economics' ಎಂಬ ಸಮಿತಿಯನ್ನು ಸ್ಥಾಪಿಸಿದ್ದಾರೆ. ಪ್ರತಿಯೊಂದು ಪ್ರಾಂತದ ಅಷ್ಟೇ ಅಲ್ಲ, ಅದರ ಬೇರೆ ಬೇರೆ ಭಾಗಗಳ ವಿಶಿಷ್ಟ ಪರಿಸ್ಥಿತಿಗನುಗುಣವಾಗುವಂತಹ ಉಪಯುಕ್ತ ಯೋಜನೆಗಳನ್ನು ಸೂಚಿಸುವುದು ಅಲ್ಲಲ್ಲಿಯ ಕಾರ್ಯಕರ್ತರ– ಮುಖಂಡತ್ವವನ್ನು ವಹಿಸಿದವರ–ಅದ್ಯಕರ್ತವ್ಯವಿದೆ.

ನೀವು ಹೇಳುವ 'ಬಿಜಾಪೂರ ಜೋಳಗುಮಟದ ಕತೆ' ಸಾಕು, ಸದ್ಯದ ಕಾಲದಲ್ಲಿ ಸಾಲವಂದಿಗನಾದ ಒಕ್ಕಲಿಗನು ಏನು ಮಾಡಬೇಕು, ಅವನಿಗೆ ನಿಮ್ಮ ಸಲಹೆ ಏನು? ಹಿಂದೀ ಒಕ್ಕಲಿಗನು ನಾಕಷ್ಟು ಜಾಣನಿರುವನು, ಅವನಿಗೆ ಬೇರೆಯವರ ಸಲಹೆಯ ಕಾರಣವಿಲ್ಲ. ಅವನು ಭರತರಾಯನ ಕೊರಳಲ್ಲಿ ಗಂಟೆ ಕಟ್ಟಿದವರ ವಂಶಸ್ಥನಿದ್ದಾನೆ. ಎಲ್ಲ ಪದಾರ್ಥಗಳ ಧಾರಣೆಯು ಸರಿತು. ಹೊಲಗಳ ಕ್ರಯ ಹೆಚ್ಚಿತು. ಇದರ ಪ್ರತಿಬಿಂಬ ಲ್ಯಾಂಡ್‌ಮಾರ್ಗೇಜ್ ಬ್ಯಾಂಕಿನ ಸಾಲ ಹರಿಯುವುದರಲ್ಲಿ ಸಹ ಕಂಡುಬರುತ್ತದೆ. ಲ್ಯಾಂಡ್‌ಮಾರ್ಗೇಜ್ ಬ್ಯಾಂಕುಗಳ ಸಾಲ ಸಣ್ಣ ಸಣ್ಣ ಕಂತುಗಳಿಂದ ಕೊಡತಕ್ಕದ್ದಿರುತ್ತದೆ; ಮತ್ತು ಬಡ್ಡಿಯ ದರವು ಕಡಿಮೆ ಇರುತ್ತದೆ. ಇಂತಹ ಸಾಲವನ್ನು ಸಹ ತೀರಿಸಿದ ಒಕ್ಕಲಿಗರು ಹೆಚ್ಚು ಬಡ್ಡಿದರದ ಮತ್ತು ಒಂದೆ ಗಂಟಿನಿಂದ ತೀರಿಸುವ ಸಾಲವನ್ನು ಹೇಗೆ ತೀರಿಸದೆ ಇಟ್ಟುಕೊಂಡಾರು? ೧೯೪೭–೪೯ರಲ್ಲಿ ಮದ್ರಾಸದ ಮಧ್ಯವರ್ತಿ ಲ್ಯಾಂಡ್‌ಮಾರ್ಗೇಜ್ ಬ್ಯಾಂಕಿಗೆ (ಅಪೆಕ್ಸ್ ಬ್ಯಾಂಕಿಗೆ) ಸಾಲ ತೀರಿಸುವುದಕ್ಕೆ ಬಂದ ರಕಮು ಸುಮಾರು ೩೮ ಲಕ್ಷ ರೂಪಾಯಿ ಇತ್ತು. ಇದರಲ್ಲಿ ೩೪½ ಲಕ್ಷ ರೂಪಾಯಿ, ಕಂತುಕೊಡುವ ಉಪಾಯ ಸಾಲ ತೀರಿಸುವ ಮುದ್ದತಿಗಿಂತ ಮೊದಲೇ ಕೊಟ್ಟಿದ್ದಿತ್ತು. 'ಮುದ್ದತಿಗೆ ಸರಿಯಾಗಿ ಕಂತುಗಳ ವಸೂಲಿಯಾಗಿಬರುವುದಿಲ್ಲ. ಸಾಲದ ರಕಮು ಬರುವುದಿಲ್ಲ' ಎಂಬ ತಕರಾರು ಬದಿಗುಳಿದು, ಮುದ್ದತಿಗಿಂತ ಮೊದಲೇ ಸುಮಾರು ೩೫ ಲಕ್ಷ ರಕಮು ತಾನಾಗಿ ವಸೂಲಾಗಿ ಬಂದದ್ದು ಆಶ್ಚರ್ಯದ ಸಂಗತಿ. ಆದರೆ ಸ್ವಲ್ಪ ವಿಚಾರಮಾಡಿದರೆ ಇದರಲ್ಲಿ ಆಶ್ಚರ್ಯಪಡತಕ್ಕದ್ದೇನಿದೆ? ಮುದ್ರಾಸದಲ್ಲಿಯ ಒಕ್ಕಲಿಗರ ವಿಚಾರ ಹೀಗೆ: 'ಸಾಲವೆಂದರೆ ಎಷ್ಟಾದರೂ ಬಡ್ಡಿ ಕೊಡಬೇಕಲ್ಲವೇ? ಈಗ ಕಾಳು ಕಡಿ ಮೊದಲಾದುವುಗಳಿಗೆ ಹೆಚ್ಚಿನ ಕ್ರಯ ಇದೆ, ಮುಂದೆ ಇದೇ ಕ್ರಯ ಬರುತ್ತದೆಂದು ನಿಶ್ಚಿತವಾಗಿ ಹೇಳುವವರಾರು? ಹಿಂದಿನ ಯುದ್ಧ ಮುಗಿದ ಬಳಿಕ ಆರ್ಥಿಕ ಮುಗ್ಗಟ್ಟು (ಎಕನಾಮಿಕ್ ಡಿಪ್ರೆಶನ್) ಬಂತು; ಈಗ ಯುದ್ಧಕ್ಕಾಗಿ ಸರಕಾರಕ್ಕೆ ಹೆಚ್ಚಿನ ಚಲನ ಬೇಕಾದ್ದರಿಂದ ಚಲನದ ಅತಿ ವ್ಯವಹಾರವಾಗಿದೆ. ಯುದ್ಧ ಮುಗಿದ ಬಳಿಕ ಚಲನದ ಪ್ರಸರಣವು ಕಡಿಮೆಯಾದರೆ, ಧಾರಣೆಗಳು ತಾವಾಗಿ ಇಳಿಯುವವು. ಈಗ ಬಂದ ಮಹಾ ಪರ್ವಣಿಯ ಕಾಲದಲ್ಲಿ ಸಾಲದಿಂದ ಮುಕ್ತರಾಗುವ; ಇದೇ ಧಾರಣೆ ಉಳಿದರೆ, ಸಾಲಕ್ಕಾಗಿ ಮಾರಿದಷ್ಟು ಭೂಮಿಯನ್ನು ಉಳಿತಾಯದ ಹಣದೊಳಗಿಂದ ಕೊಳ್ಳುವ; ಅದು ಆಗದೆ ಇದ್ದರೆ ಉಳಿದ ಭೂಮಿಯನ್ನು ಇಟ್ಟುಕೊಂಡು ಸಾಲದ ತರಲೆ ಇಲ್ಲದೆ ಹೆಚ್ಚಿನ ಧಾರಣೆಯಿಂದ ಬಂದ ಹೆಚ್ಚಿನ ಉತ್ಪನ್ನದಿಂದ ಹೆಚ್ಚು ಸುಖವಾಗಿರುವ! ಇದನ್ನು ಬಿಟ್ಟು ಕಂತು ಕೊಡುವ ಮುದ್ದತ್ತು ಮುಂದೆ ಅವೆ– ಬಡ್ಡಿ ಕೂಡ ಅದೆ– ಎಂದು, ಈಗ ಹೆಚ್ಚಿನ ಧಾರಣೆಯಿಂದ ಬಂದ ಹೆಚ್ಚಿನ ಉತ್ಪನ್ನವನ್ನು ಸಾಲ ತೀರಿಸಲಿಕ್ಕೆ ಉಪಯೋಗಿಸದಿದ್ದರೆ, ಮುಂದೆ ಧಾರಣೆ ಇಳಿದಾಗ ಕಂತು ಕೊಡುವುದು ಸಹ ಜಡವಾಗು-

ತ್ತದೆ.' ಮೇಲೆ ಕಾಣಿಸಿದ ೨೫ ಲಕ್ಷ ರೂಪಾಯಿ ಸಾಲಗಾರರಿಗೆ ಎಲ್ಲಿಂದ ಬಂತು? ೧೭ತ್ತಿ ಲಕ್ಷ ರೂಪಾಯಿ ಏರಿಕೆಯ ಧಾರಣೆಯಲ್ಲಿಯ ಭೂಮಿಯ ಮಾರಾಟದಿಂದ, ೫೪ ಲಕ್ಷ ಕಾಳು-ಕಡಿಗಳ ಏರಿಕೆಯ ಧಾರಣೆಯಿಂದ ಬಂದಿವೆ ಎಂದು ತಿಳಿದಿದೆ. ಓದುಗರ ಮನವರಿಕೆಗಾಗಿ ಕೆಲವು ವಿವರಗಳನ್ನು ಕೊಡುತ್ತೇನೆ: ೧೯೪೬–೪೩ರಲ್ಲಿ ೧೪೫೫ ಜನರು ತಮ್ಮ ಸಾಲ ತೀರಿಸಿದರು. ಲ್ಯಾಂಡ್‌ಮಾರ್ಗೇಜ್ ಬ್ಯಾಂಕುಗಳು ಸಣ್ಣ ಸಣ್ಣ ಕಂತುಗಳಿಂದ ಸಾಲ ತೀರಿಸಿಕೊಳ್ಳುತ್ತವೆ. ೧೦–೧೫ ವರ್ಷಗಳ ವರೆಗೆ ವಾರ್ಷಿಕ ಕಂತುಗಳಿರುತ್ತವೆ. ಮೇಲೆ ಬರೆದ ೧೪೫೫ ಜನರಲ್ಲಿ ೪೪೨ ಜನರು ಸಾಲ ತಕ್ಕೊಂಡು ಮೂರು-ವರ್ಷಗಳಲ್ಲಿ ಸಾಲ ತೀರಿಸಿದರು. ೬೩೫ ಜನರು ೬ ವರ್ಷಗಳಲ್ಲಿ, ೩೮೧ ಜನರು ೧೦ ವರ್ಷಗಳಲ್ಲಿ ಮತ್ತು ೯೬ ಜನರು ಹತ್ತು ವರುಷಗಳ ನಂತರ ಸಾಲ ತೀರಿಸಿದರು. ಇದಲ್ಲದೆ ಸಾಲ ತಕ್ಕೊಳ್ಳುವವರ ಸಂಖ್ಯೆ ಸಹ ಕಡಿಮೆಯಾಗಿದೆ. ೧೯೪೬–೪೩ರಲ್ಲಿ ೧೬೧೪ ಜನರು ಮಾತ್ರ ಸಾಲ ತಕ್ಕೊಂಡರು. ಅವರು ಸಾಲ ತಕ್ಕೊಂಡ ರಕಮು ೨೩೪ ಲಕ್ಷ ರೂಪಾಯಿ ಇತ್ತು. ಇದೇ ೧೯೪೧–೪೨ರಲ್ಲಿ ಸುಮಾರು ಮೂರು ಸಾವಿರ ಜನರು ಸಾಲ ತಕ್ಕೊಂಡರು, ಮತ್ತು ಅವರು ಸಾಲ ತಕ್ಕೊಂಡ ರಕಮು ೪೦ ಲಕ್ಷ ರೂಪಾಯಿ ಇತ್ತು. ಇನ್ನೂ ಒಂದು ಸಂಗತಿಯನ್ನು ನಾವು ಲಕ್ಷ್ಯದಲ್ಲಿಡಬೇಕು: ನಾನು ಈ ಮೊದಲೇ ಲ್ಯಾಂಡ್‌ಮಾರ್ಗೇಜ್ ಬ್ಯಾಂಕಿನ ಬಡ್ಡಿಯ ದರ ಹೆಚ್ಚಿದೆಯೆಂದು ಹೇಳಿದ್ದೆ. ಲ್ಯಾಂಡ್‌ಮಾರ್ಗೇಜ್ ಬ್ಯಾಂಕುಗಳ ಸಾಲ ತೀರಿಸಲಿಕ್ಕೆ ದೊರೆಕಿಸಿದ ರಕಮುಗಳಲ್ಲಿ ಕೆಲವು (ಈ ರಕಮು ಬಹಳ ಕಡಿಮೆ ಇದೆ) ರಕಮು ಬೇರೆಯವರಿಗೆ ಒತ್ತೆ ಹಾಕಿ ತಂದದ್ದಿದೆ. ಇದರ ಮೇಲಿಂದ ಲ್ಯಾಂಡ್‌ಮಾರ್ಗೇಜ್ ಬ್ಯಾಂಕುಗಳ ಬಡ್ಡಿಯ ದರಕ್ಕಿಂತ ಕಡಿಮೆ ದರದಿಂದ ಸಾಲ ದೊರಕಿರಬೇಕೆಂಬ ಅನುಮಾನ ಹೊರಡುವುದಿಲ್ಲವೋ? ನಮ್ಮ ಪ್ರಾಂತದಲ್ಲಿ ಸಹ ಡೇಟ್ ರೆಡಮ್‌ಶನ್ ಆಕ್ಟಿನ ಮೋಹಕ್ಕೆ ಬೀಳದ ಕೆಲವು ಸಾಲಗಾರರು, ಸದ್ಯದ ಪರಿಸ್ಥಿತಿಯ ಲಾಭ ತಕ್ಕೊಂಡು, ತಮ್ಮ ಸಾಲ ತೀರಿಸಿಕೊಂಡಿದ್ದಾರೆ; ಕೆಲವರು 'ಹೇಗೂ ಹೊಲ ಹೋಗುತ್ತದೆ, ಇದ್ದಷ್ಟು ದಿವಸ ಉಂಡು ಬಿಡುವಾ, ಅಥವಾ ಆದಷ್ಟು ಸುಳ್ಳು ಸಾಧಿಸಿ ಅಥವಾ ಬೇರೆ ಮಾರ್ಗದಿಂದ ಸಾಲ ಮುಳುಗಿಸಲು ಯತ್ನಿಸುವಾ, ಅದು ಆಗದಿದ್ದರೆ ಸಾಲದ ರಕಮನ್ನು ಕಡಿಮೆ ಮಾಡಿಕೊಳ್ಳುವಾ, ಕಂತು ಮಾಡಿಕೊಳ್ಳುವಾ, ಮುಂದೆ ಕೊಡುವುದಾಗದಿದ್ದಾಗ ಏನಾಗುವುದಾಗಲಿ!' ಎಂಬ ವಿಚಾರದವರೂ ಇದ್ದಾರೆ ಇವರಲ್ಲಿ ಯಾರು ಜಾಣರು, ಯಾರು ಮೂರ್ಖರು, ಯಾರು ವ್ಯವಹಾರಿಕರು, ಯಾರು ಅವ್ಯವಹಾರಿಕರು, ಯಾರು ನೀತಿವಂತರು, ಯಾರು ಅನೀತಿವಂತರು ಇವೇ ಮುಂತಾದ ವಿಷಯಗಳನ್ನು ವಾಚಕರೇ ನಿರ್ಣಯಿಸಬೇಕು

ಕಾಗದದ ತುಟಾಗ್ರತೆಯ ಮೂಲಕ ಈ ವಿಷಯದ ಬಗ್ಗೆ ಮಾಹಿತಿ ಕೊಡುವ ವರದಿಗಳಲ್ಲಿ ಈಗ ಸಾಕಷ್ಟು ಸಂಗತಿಗಳಿರುವುದಿಲ್ಲ. ಸಹಕಾರಿ ಆಂದೋಲನದ ವರದಿಗೆ ಕಾಗದವಿಲ್ಲವಂತೆ. ಬೇರೆ ದೇಶಗಳಿಂದ ಬರುವ ಪುಸ್ತಕಗಳ ಆಯಾತಕ್ಕೆ ಸಹ ತಡೆ ಇತ್ತು. ಸೆನ್ಸಾರರ ಪರೀಕ್ಷೆಯೊಳಗಿಂದ ವಾರಾಗಿ ಬರುವ ಪುಸ್ತಕಗಳು ಮಾತ್ರ ಬಹಳ ದಿವಸಗಳ ನಂತರ ದೊರೆಯುತ್ತವೆ. ಯುದ್ಧದ ನಂತರ ಆಗತಕ್ಕ ಸಮಾಜದ ಪುನರ್ರಚನೆಯ ಬಗ್ಗೆ ಬಲ್ಲವರು ವಿಚಾರ ಪರಿಪ್ಲುತವಾದ ಪುಸ್ತಕಗಳನ್ನು ಪ್ರಕಟಿಸಿದ್ದಾರಷ್ಟೇ? ಅವರು ತಮ್ಮ ವಿಚಾರಗಳು ಬಹಳ ವಿಲಂಬವಿಲ್ಲದೆ ಪ್ರಪಂಚದ ಎಲ್ಲ ಭಾಗಗಳಿಗೆ ಮುಟ್ಟಬೇಕು, ಅವುಗಳ ಬಗ್ಗೆ ಚರ್ಚೆಯಾಗಬೇಕು-ಎಂಬ ಉದ್ದೇಶದಿಂದ ಪತ್ರಿಕೆಗಳನ್ನೂ ಹೊರಡಿಸುತ್ತಿದ್ದಾರೆ. ರಾಷ್ಟ್ರೀಯ ಸರಕಾರವು ಸ್ಥಾಪಿತವಾಗಿ ಪ್ರಾಂತಗಳಲ್ಲಿ ಜನರ ಪ್ರತಿನಿಧಿಗಳು ಆರಿಸಿದ ಮಂತ್ರಿಗಳ ಆದಳಿತ ಪ್ರಾರಂಭವಾಗಿ, ಪಂಡಿತ ಜವಾಹರಲಾಲರ ನೇತೃತ್ವದಲ್ಲಿ ಕೆಲವು ಕಾಲ ಕೆಲಸ ಮಾಡಿದ ಪ್ಲ್ಯಾನಿಂಗ ಕಮೀಟಿಯೆ, ಕೃಷಿಜೀವಿಗಳ ಋಣವಿಮೋಚನೆಯ ತೊಡಕಿನ ಪ್ರಶ್ನೆಯನ್ನೂ ಒಕ್ಕಲಿಗನ ಸಾಂಪತ್ತಿಕ ಸ್ಥಾಯಿ ಸುಧಾರಣೆಯ ವಿಷಯದ ಕೂಡ ವಿಚಾರಿಸಿದರೆ ಒಳಿತಾಗುವುದು.

ಏನ ಕೊಡಲಿ ಎಂದೆನದಿರು ಗೆಳತೀ!

ಶ್ರೀ. ಬಿ. ಎಚ್. ಶ್ರೀಧರ ಎಂ. ಎ.

ಏನ ಕೂಡಲಿ ಎಂದೆನದಿರು ಗೆಳತೀ
ಏನನು ಕೊಟ್ಟರು ಎಲ್ಲವದು ॥ವ॥

ಕಮಲನಯನಗೆ ಕುಚೇಲನು ಕೊಟ್ಟುದು
ಕಮಲೆಯನೇ ಕರೆತಂದುದಲಾ!
ಅಮಲಮನವು ಅಮರತ್ವವ ಪಡೆವುದು;
ಶ್ರಮದ ಕೊಡುಗೆಯಿಂದೇನು ಫಲ?
ಅರ್ಘ್ಯದ ಭಾವದೆ ಪ್ರೀತಿಯ ಆಳವ
ಅಳೆವುದು ಲೋಕದ ಪದ್ಧತಿಯು;
ಅರ್ಘ್ಯದಭಾವದೆ ಪ್ರೀತಿಗೆ ಆಳವೆ
ಇರದೆನ್ನದು ಕಬ್ಬಿಗನೆದೆಯು!

ಒಡವೆಯ ಕೊಡುವುದು ಕೊಳುವುದು ನೇಹದ
ಮೊದಲಂತಸ್ತಿನ ವರಿಪಾಠ;
ಒಡವೆಯ ಮಾರ್ದೊಳ್ಗನುಡಿ ಕೊಡು-ಕೊಳು ಮು-
ತ್ತೈರಡನೆಯೇರಿಕೆ, ಮುಂದೋಟ!
ನುಡಿಯನು ಭಂಗಿಸಿ ಆತ್ಮನ ಹೊಗುವುದು
ಕಡೆಘಟ್ಟವು; ಆ ಮೈತ್ರಿಯಲಿ
ನಡೆನುಡಿಯಲ್ಲಿಯದೆಲ್ಲಿಯು ಸಿಕ್ಕದು
ಒಡಕು ಬಿರುಕು- ಆ ಬೆಸುಗೆಯಲಿ!

ಏನನು ಕೊಟ್ಟರು ನೇಹದ ಬಟ್ಟಲೊ-
ಳಮೃತವೆ, ಅದು ಮಧುಮಾಸ್ಲಿಕವೇ;
ಏನಾಡಿದರದು ಕೊಂದಾಟವೆ ಸರಿ,
ಇಲ್ಲವೆ ಅದರಲಿ ಸಾತ್ವಿಕವೇ!
ಸಕ್ಕರೆ ಘಟ್ಟಿಯೊಳೆಲ್ಲರಸಿದರೂ
ಸಿಕ್ಕುವುದೇ ಬೇಡದ ಭಾಗ?
ಅಕ್ಕರೆಯಲಿ ಸಾಯುಜ್ಯದ ಸುಖವಿದೆ;
ಅದು ಎಲ್ಲಾ ಯೋಗದ ಯೋಗ!

ಸ್ವಾರ್ಥತ್ಯಾಗ — ಆದರೆ ಯಾರದು?

(ಪಣ್ಣ ಕತೆ)*

ಶ್ರೀ. ಕುಮಾರದೇವ ವಿ. ಬಾಗ್ಲೋಡಿ, ಮಂಗಳೂರು

'ವೈದ್ಯರಾಜರೆ, ಈ ದಿನವಾದರೂ ನನ್ನ ಮಗಳನ್ನು ನೋಡಲು ಒಸ್ಸಿ—ನಿಮ್ಮ ಹಣವನ್ನು ತಿಂದು ಹಾಕುವುದಿಲ್ಲ!' ಹಂಗುಸೊಬ್ಬಳು ಲಂಗಲಾಜಿ ಬೇಡುತ್ತಿದ್ದಳು.

'ನನ್ನದೇನಾದರೂ ಧರ್ಮಾರ್ಥ ನಡಾಯಿಸೆಯೆ ? ಉದ್ದರಿಯ ಲೆಕ್ಕ ಬರೆದಿಡಲು ನನಗೆ ಸಮಯವಿಲ್ಲ. ಎರಡು ರೂಪಾಯಿ ಫೀ ಸಿಕ್ಕಿ-ಮೊಡನೆ ನಾನು ಹೊರಡುವೆನು!' ವೈದ್ಯರಾಜರು ಅಧ್ಯತೆಯಿಂದ ನುಡಿದರು.

ಆ ಹೆಂಗುಸು ಒಂದು ಚೀಲದಿಂದ ಚಿಲ್ಲರೆ ಹಣವನ್ನು ತೆಗೆದು ವೈದ್ಯರಾಜರ ಮುಂದಿಟ್ಟು ಎಂದಳು: 'ನನ್ನ ಹತ್ತಿರ ಇದೇ ಒಂದೂ ಮುಕ್ಕಾಲು ರೂಪಾಯಿ ಇದ; ನಾನು ದರಿದ್ರಳು! ಹುಡುಗಿಗಾಗಿ ಹತ್ತಿರನಿದ್ದ ದುಡ್ಡನ್ನೆಲ್ಲಾ ತಂದಿದ್ದೇನೆ.'

'ನಾನು ಬಡವರ ವೈದ್ಯನಲ್ಲ: ಹಣವಿಲ್ಲದಿದ್ದರೆ ಧರ್ಮಾಸ್ಪತ್ರೆಗೆ ಹೋಗಿ! ನನ್ನಲ್ಲಿಗೆ ಸುಮ್ಮನೆ ಯಾಕೆ ಬರುತ್ತೀರಿ?' ಅವಳ ಚಿಲ್ಲರೆ ಹಣವನ್ನು ಬೀಸಾಡಿ ಕೂಗಿದರು ವೈದ್ಯರು. ಆ ಹಣವನ್ನು ಒಟ್ಟುಗೂಡಿಸಿ ವೈದ್ಯರಾಜರ ನಿರ್ಗಯತ್ಪಕ್ಕಾಗಿ ಬೈಯುತ್ತ ಹೊರಟು ಹೋದಳು ಆ ಹೆಂಗುಸು.

ರಾಮಭಾವು ವೈದ್ಯರು ಬಡಜ ಹೆಸರುವಾಸಿಯಾದ ಭಿಷಗ್ವರರು. ಪುಣೆಯ ಗುರುವಾರಪೇಟೆಯಲ್ಲಿ ಪಾನವಾಗಿರುವರು ಆ ಪೇಟೆಯಲ್ಲಿ ಪಣಾಖಾನೆಗಳನ್ನು ತೆರೆದ ಹಲವಾರು ಎಮ್. ಬಿ. ಬಿ. ಎಸ್. ಡಾಕ್ಟ-ರರು ಬರಿಯ ಜೇಬಿನಿಂದ ತಿಲ್ಲಿಂದ ವಲಾಯನ ಮಾಡಿದರು. ರಾಮ-ಭಾವು ವೈದ್ಯರ ಔಷಧಗಳು ಹೆಸರಾಂತ ಪೂರ್ವಾನುಪಾರಂಪರ್ಯವು. ಅವರ ರೋಗನಿದಾನ ತಪ್ಪಿಲ್ಲದ್ದು, ಮತ್ತವರ ಕೈಗುಣ ಅತ್ಯುತ್ತಮ ವಾದುದು. ಅವರ ಔಷಧ ಪ್ರಾರಂಭವಾಗೊಡನೆ ರೋಗವು ಗುಣ-ವಾದ ಹಾಗೇ ರೋಗಿಗೆ ತೋರುತ್ತಿತ್ತು. ಆದುದರಿಂದ ಉತ್ತಮ ಡಾಕ್ಟ-ರು ತೆಗೆದುಕೊಳ್ಳುವ ಫೀನನ್ನೇ ವೈದ್ಯರು ತೆಗೆದುಕೊಂಡರೂ. ಜನ-ರಲ್ಲಿಗೆ ಒದುವ ರೋಗಿಗಳ ಸಂಖ್ಯೆ ಕಮ್ಮಿಯಾಗುತ್ತಿರಲಿಲ್ಲ: ಜನರೆ ರಾಮಭಾವು ವೈದ್ಯರು ಮಹಾ ಕೃಪಣರು; ಹಣಕ್ಕಾಗಿಸ್ತರ ಮಾರನ್ನು ದೆಯಾರೆಂದು ಹೇಳಲಸಾಧ್ಯ. ಬಡಬಗ್ಗರಿಗೆ ರಾಮಭಾವು ದಿವ್ಯನ ರೀತಿ ತೋರುತ್ತಿದ್ದರು. ಎಷ್ಟೇ ಕಷ್ಟಪಟ್ಟಲ್ಲಿ ಸಿಲುಕಿದ ಮನುಷ್ಯನಿಗೂ ಎಷ್ಟರಿಯಾಗಿ ಮದ್ದನ್ನು ಕೊಡುವ ನಷ್ಟತಿ ಅವರಲ್ಲಿರಲಿಲ್ಲ. ಅವರಲ್ಲಿ ಸಾಸ್ತ್ರಜ್ಞತ್ವವೆಂಬುದು ಎಳ್ಳಿನಷ್ಟೂ ಇರಲಿಲ್ಲ.

ಅವರಿಗೆ ಸ್ವಂತದ್ದೆಂದು ಕುಟುಂಬವಿರಲಿಲ್ಲ. ತಮ್ಮನಾದ ಲಕ್ಷ್ಮಣ ನುರ ಕುಟುಂಬದ ಭಾರ ಸರ್ವಸ್ವವೂ ಅವರ ಮೇಲೆ ಬಿದ್ದಿತ್ತು. ಸ್ವಲ್ಪ ಧನವನ್ನು ತೋರಿಸಬಾರದಿತ್ತೆಂದು ಜನರು ಪೇಳಿಕೊಳ್ಳುತ್ತಿ-ದ್ದರು. ಒಂದು ದಿನ ರೋಗಿಗಳ ಪರೀಕ್ಷೆ ಮುಗಿಸಿ ವೈದ್ಯರು ತೂಗು-ಮಂಚದ ಮೇಲೆ ನಿಶ್ಚಿಂತರಾಗಿ ಕುಳಿತಿದ್ದರು. ಅದೇ ಅವರ ತಮ್ಮನ ಮಗ—ನೂರು ವರ್ಷದವನು—ಅವರ ಬಳಿಯಲ್ಲಿ ಬಂದು ಕುಳಿತ. ಇವನ ಹಿಂದಿನಿಂದಲೇ ಐದು ವರ್ಷದ ಮಗಳು ಬಂದು ದೊಡ್ಡಪ್ಪನ ಮೆಟ್ಟಲಲ್ಲಿ ಕುಳಿತು ಗಲ್ಲವನ್ನು ಹಿಡಿದು ತನಗೆ ಸ್ಲೇಟ್-ಪೆನ್ಸಿಲ್ ತರು-ವಿಯೋ?— ಎಂದು ಕೇಳತೊಡಗಿದಳು. ದಿವಾನ್‌ಖಾನೆಯಲ್ಲಿ ಕನ್ನಡಿಯ ಕವಾಟನ್ನು ತ್ರಿಸಳಿಯಾಗಿ ಉಪಯೋಗಿಸಿ, ಅವರ ತಮ್ಮನ ಬೇರೆ ಇಬ್ಬರು ಮಕ್ಕಳು ಕ್ರಿಕೆಟ್ ಆಡುತ್ತಿದ್ದರು. ಅವರೆಲ್ಲರಿಗಿಂತ ದೊಡ್ಡವ-ನಾದ ಹನ್ನೆರಡು ವರ್ಷದ ಹುಡುಗ—ಸ್ಯಣ್ಣಾಲಿನಿ, ಅಡಿಗೆಮನೆಯಲ್ಲಿ ತನ್ನ ತಾಯಿಯ ಹತ್ತಿರ ಮಾತನಾಡುತ್ತಿದ್ದಳು: 'ಅಮ್ಮಾ, ದೊಡ್ಡಪ್ಪನಿಗೆ ನುಡ್ಡಿನ ಆಸೆ ತುಂಬ ಎಂದು ಶಾಲೆಯ ಹುಡುಗಿಯರು ಹೇಳುತ್ತಿದ್ದರು.'

'ಸ್ಯಣ್ಣಾ, ಹಿರಿಯರ ವಿಷಯವಾಗಿ ನಿನ್ನಂತಹವರು ಹೀಗೆ ಮಾತನಾಡಬಾರದು. ಆದರೆ (ಅಡಿಗೆಯವಳನ್ನು ನೋಡಿ) ದ್ವಾರಕಾ ಬಾಯಿ, ಭಾವಯ್ಯನವರ ಬೆಳಿಗಿನ ನಡತೆ ನನ್ನ ಮೆಚ್ಚಿಕೆಗೆ ಬರಲಿಲ್ಲ: ನಾಲ್ಕಾಣೆಯನ್ನೇ ಕಮ್ಮಿ ಆದನ್ನು; ನನ್ನ ಕೈಯಿಂದ ನಾಲ್ಕಾಣೆ ಕೊಟ್ಟು, ಆಸ್ಪತ್ರೆಗೆ ಮೋಗಲು ಹೇಳಬೇಕೆಂದು ತೋರಿತು. ಆದರೆ ಬೇಡ, ಸುಮ್ಮನೆ ನನ್ನ ಅಧಿಕಪ್ರಸಂಗತನ ಮಾತ್ರ ತೋರಿಕೆಗೆ ಬರು-ವುದೆಂದು ಎಸಿಸಿ ಬಿಟ್ಟೆ.'

ದ್ವಾರಕಾಬಾಯಿ ತಲೆಯನ್ನಲ್ಲಾಡಿಸುತ್ತ ಎಂದಳು: "ಇಡಿ ಊರಲ್ಲಿ ಭಾವುಸಾಹೇಬರನ್ನು ಜನರು ನಿಂದಿಸುತ್ತಾರೆ. ಅವೇ ಲಕ್ಷ್ಮ-ಮಣರಾಯರಿನ್ನು ನೋಡಿ—'ಎಷ್ಟು ಉದಾರ ಮನಸ್ಕರು! ದೇಶಕ್ಕಾಗಿ ಸಂಸಾರವನ್ನು ಬಿಟ್ಟು ನೋಣ ನೋಣೆ ಪಣ ಗಳಿಸಬಲ್ಲ ಉದ್ಯೋಗವನ್ನೂ ಗಾಂಧಿಯ ಉಪದೇಶದಿಂದ ಬಿಟ್ಟುಬಿಟ್ಟರು! 'ಇಬ್ಬ ರಲ್ಲಿ ಭೂಮಿ-ಆಕಾಶದ ಅಂತರ' ಎಂದು ತಿನಾಜಿಸುವುದಿರಲ್ಲಿ ಎಲ್ಲರೂ ಹೇಳುತ್ತಿದ್ದರು!"

ತನ್ನ ಪತಿಯ ಸ್ತುತಿಯನ್ನು ಕೇಳಿ ಭೂಮಿಳಾಬಾಯಿಗೆ ಸಂತೋಷವಾಯಿತು. ಅಡಿಗೆಯ ಕೆಲಸ ಮುಗಿದನಂತರ ರಾಮ-ಭಾವು ಮತ್ತವರ ತಮ್ಮನ ಐದು ಮಕ್ಕಳು ಊಟಕ್ಕೆ ಕುಳಿತರು. ಊಟ ಮಾಡುವಾಗ ವೈದ್ಯರು ಮಕ್ಕಳ ಕೊಡನೆ ಪ್ರೇಮದಿಂದ ಮಾತನಾಡು ವುದನ್ನು ನೋಡಿ, ಪರಿಚಯವಿಲ್ಲದವರು ಅವರನ್ನು ತಂದೆ-ಮಕ್ಕ-ಳೆಂದೇ ಭಾವಿಸುತ್ತಿದ್ದರು. ಊಟವಾಗುತ್ತಿರುವಾಗ ಗೃಹಸ್ಥರೊಬ್ಬರು ಅವರ ಭೇಟಿಗೆ ಬಂದರು. ಎದುರಿನಲ್ಲಿಯೆ ಮಣೆಯನ್ನಿರಿಸಿ, ಆ ಗೃಹಸ್ಥರನ್ನು ಕುಳಿತುಕೊಳ್ಳಲು ಹೇಳಿ, ರಾಮಭಾವು ಎಂದರು: 'ಮತ್ತೇನು ಜೋಬಿಸಾಹೇಬ್, ನಮ್ಮ ಮನೆಗೆ ಮುತ್ತಿಗೆ ಹಾಕುವ ಆಲೋಚನೆ ಇದೆಯಾ?'

---

* ಮಂಗಳೂರಿನಲ್ಲಿ ಪ್ರಸಿದ್ಧ ಕತೆಗಾರರಾದ ಶ್ರೀ ಟಿ. ವಿ. ಜೋಷಿ ಅವರ ಕತೆಯೊಂದರ ಅನುವಾದವಿದು. —ಲೇ.

ಊರ್ಮಿಳಾಬಾಯಿ ಒಡನೆ ಬಸಿಯೊಂದರಲ್ಲಿ ಸ್ವಲ್ಪ ಮಿಠಾಯಿಯನ್ನು ತಂದು ಚೌಬಳರ ಮುಂದಿಟ್ಟಳು; ಅದರ ಸನ್ಮಾಚಾರವನ್ನು ತೆಗೆದುಕೊಳ್ಳುತ್ತ ಅವರು ನುಡಿದರು: 'ಅಮ್ಮಾ, ಈ ಲಂಚಗಿಂಚ ಎಷ್ಟು ದಿನದವರೆಗೆ ಬಂದೀತು? ಭಾವುಸಾಹೇಬ್, ನಮ್ಮದೂ ನಿಮ್ಮದೂ ಹಳೆಯ ಋಣಾನುಬಂಧ, ಆದುದರಿಂದ ಹೇಳುತ್ತೇನೆ,— ನಿಮಗೆ ಈ ಯಾತನೆಗೆ ಬೀಳುವ ಆವಶ್ಯಕತೆ ಏನು? ನಿಮಗೆ ರಾಜಕಾರಣದಲ್ಲಿ ಅಥವಾ ಪ್ರಸಿದ್ಧಿಯಲ್ಲಿ ಎಳ್ಳಿನಷ್ಟೂ ಆತುರತೆಯಿಲ್ಲ; ಆದರೂ ನಿಮ್ಮ ದೇಶಭಕ್ತ ತಮ್ಮನಿಗೆ ಸಹಾಯ ಮಾಡಿ ಅಪಾಯಕ್ಕೆ ಈಡಾಗುತ್ತೀರಿ. ಹೊಸ ಕಾಯಿದೆಯ ಪ್ರಕಾರ ಕಾಯಿದೆಭಂಗ ಮಾಡಿದವನಿಗೆ ಯಾವುದೇ ಸಾಹಾಯ್ಯವನ್ನು ಮಾಡಿದವನೂ ಸರಕಾರದ ರೋಷಕ್ಕೆ ಪಾತ್ರನಾಗುವನು. ನೀವಾದರೆ ತಮ್ಮನ ಕುಟುಂಬವನ್ನು ಸಾಕಿ ಮತ್ತು ತಮ್ಮನ ಕಾರ್ಯಕ್ಕೆ ಧನಸಾಹಾಯ್ಯವನ್ನು ಮಾಡಿ, ಸರಕಾರವನ್ನು ವಿರೋಧಿಸುತ್ತೀರಿ. ಆದಷ್ಟು ಬೇಗನೆ ಎಚ್ಚರಿಸಿ!'

ರಾಮಭಾವು ಚೌಬಳರ ಮೇಲೆ ಕೋಪಿಸಿ ಎಂದರು: 'ನಿಮ್ಮ ಬುದ್ಧಿವಾದಕ್ಕೆ ನಾನು ಕೃತಜ್ಞನಾಗಿದ್ದೇನೆ; ಆದರೆ ಒಡಹುಟ್ಟಿದ ತಮ್ಮನಿಗಾಗಿ ಸರ್ವಸ್ವವನ್ನೂ ಧಾರೆ ಎರೆಯುವೆನು; ನನ್ನ ಕೈಯಿಂದ ದೇಶಕಾರ್ಯವಾಗುವುದಿಲ್ಲ, ಆದರೆ ನನ್ನ ದೇಶಭಕ್ತ ತಮ್ಮನ ಯೋಗಕ್ಷೇಮವನ್ನು ನೋಡಿಕೊಂಡಿರುವುದು ತಪ್ಪಾಗುವುದಾದರೆ ನನಗೆ ಶಿಕ್ಷೆಯಾಗಲಿ!'

ಭೋಜನವಾದನಂತರ ತಾನೇ ಸ್ವತಃ ತಮ್ಮನ ಮಕ್ಕಳ ಕೈತೊಳೆದು, ರಾಮಭಾವು ಚೌಬಳರ ಸಂಗಡ ಜಗುಲಿಯಲ್ಲಿ ಬಂದು ಕುಳಿತು ಕೇಳಿದರು: 'ಲಕ್ಷ್ಮಣರಾಯ ಈವೊತ್ತು ಬರುತ್ತಾರೇನು?'

'ಲಕ್ಷ್ಮಣರಾಯರು ಪಂಜಾಬಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಪೋಲೀಸರಿಂದ ಹಿಡಿಯಲ್ಪಟ್ಟರು. ಈವೊತ್ತು ಸಾಯಂಕಾಲ ಪೋಲೀಸ್ ಪಹರೆಯಲ್ಲಿ ಇಲ್ಲಿಗೆ ಬರುವರು. ಅವರ ಮೇಲೆ ಕೈದು ವಾರಂಟ್ ಇರುವುದರಿಂದ, ಐದುಸಾವಿರ ರೂಪಾಯಿಯ ಜಾಮೀನಿನಲ್ಲಿವೆ ಬಿಡುಗಡೆಯಾಗದು' ಚೌಬಳರೆಂದರು.

ದೇಶಕಾರ್ಯ, ಅದರ ಸೂತ್ರಗಳು, ಅದರ ಸಂಸಾರಗಳು ಇವುಗಳ ನಡುವೆ ಸಿಕ್ಕಿ ವೈದ್ಯರ ಅಪಾರ ಸ್ವತ್ತು ಮಾಯವಾಗಿ ಬಿಡುತ್ತಿತ್ತು. ಸ್ವತಃ ಯಾವ ಬಗೆಯ ವಸ್ತ್ರಭೂಷಣ, ಐಷಾರಾಮನ್ನೂ ಅವರು ಮಾಡುತ್ತಿರಲಿಲ್ಲ. ಈಗ ಐದುನಾವಿರ ರೂಪಾಯಿಗಳನ್ನು ಎಲ್ಲಿಂದ ತುಂಬುವುದೆಂಬ ಚಿಂತೆಯು ಅವರನ್ನು ಆವರಿಸಿತು.

ಚೌಬಳರು ಗುಪ್ತಪೋಲೀಸರಾದುದರಿಂದ ವೈದ್ಯರ ಚಿಂತೆಯ ಕಾರಣವನ್ನು ತಿಳಿದರು: 'ವ್ಯರ್ಥವಾಗಿ ಹಣ ತುಂಬಿ ಅವರ ಬಿಡುಗಡೆಯಾಕೆ ಮಾಡುತ್ತೀರಿ? ಒಮ್ಮೆ ನಿರ್ಧನ ದೇಶಭಕ್ತಿಯ ಉರಿಯಿಂದ ಎದ್ದು ಸುಟ್ಟರೆ, ಲಕ್ಷ್ಮಣರಾಯರ ಮುದಿವು ಇಳಿದೀತು. ಯಾರು ಕುಟುಂಬಕ್ಕೆ ಬೇಕಾದಷ್ಟು ಮಾಡಿಟ್ಟಿದ್ದಾರೋ ಅಥವಾ ಕುಟುಂಬದ ಯೋಗಕ್ಷೇಮವನ್ನು ನೋಡಲು ಬೇರೆಯವರು ಇದ್ದಾರೋ, ಅಂತಹವರ ದೇಶಕಾರ್ಯದಲ್ಲಿ ಹೆಚ್ಚು ಕಷ್ಟವಿಲ್ಲ. ಎಷ್ಟರ ತನಕ ಸ್ವಜೀವನವನ್ನು ಹಾಳು ಮಾಡಿಕೊಂಡು ಪರರ ಕುಟುಂಬವನ್ನು ಸಾಕುವವರು ಇದ್ದಾರೋ, ಅಷ್ಟರ ತನಕ ದೇಶಭಕ್ತರೆಂಬ ಹೆಸರಿನಿಂದ ಅಲೆದಾಡುವ ತಿರುಕರ ಸಂಖ್ಯೆಯು ಕಮ್ಮಿಯಾಗಲಿಕ್ಕಿಲ್ಲ!' ಚೌಬಳರು ಮಾತನಾಡುತ್ತಲೇ ಇದ್ದರು—ವೈದ್ಯರು ಕೇಳುತ್ತಲೇ ಇದ್ದರು.

* * * *

ಆದೇ ದಿನ ಸಾಯಂಕಾಲ ಶುಭ್ರ ಖಾದಿಯ ಉಡಿಗೆ-ತೊಡಿಗೆ ಧರಿಸಿದ ದೇಶಭಕ್ತ ಲಕ್ಷ್ಮಣರಾಯರು, ತಮ್ಮ ಬಂಧುರಾಜರ ಮನೆಯ ಬಾಗಿಲಲ್ಲಿ ಮೋಟರಿನಿಂದ ಇಳಿದರು. ಅವರ ಸಂಗಡ ಖಾದಿ ವೇಷಧಾರಿಗಳಾದ ಮೂವರು ದೇಶಸೇವಿಕೆಯರು, ಮೂವರು ದೇಶಭಕ್ತರು ಮತ್ತು ಸಾದಾ ವೇಷದಲ್ಲಿ ಇಬ್ಬರು ಪೌಜ್ದಾರರು ಇದ್ದರು. ಲಕ್ಷ್ಮಣರಾಯರ ಹತ್ತಿರ ಸಾಮಾನೂ ತುಂಬ ಇತ್ತು, ದಾರಿಯಲ್ಲಿ ಸಿಹಿ ಹೂಮಾಲೆಗಳ ರಾಶಿಯೂ ದೊಡ್ಡದಾಗಿತ್ತು.

ಲಕ್ಷ್ಮಣರಾಯರು ಬಂದಂದಿನಿಂದ ವೈದ್ಯರ ಮನೆಯಲ್ಲಿ ಬಹಳ ಗಲಾಟೆ. ಮೋಟರ್ ಗಾಡಿಗಳು ಅತ್ತಿತ್ತ ಅಡ್ಡಾಡತೊಡಗಿದುವು. ರಾತ್ರಿಯ ಭೋಜನ ಬಹಳ ವಿಚಿತ್ರವಾಗಿತ್ತು. ಕೆಲವು ದೇಶಸೇವಿಕೆಯರು ಬರಿಯ ಫಲಗಳನ್ನೇ ಸೇವಿಸುವವರು, ಕೆಲವರು ಹಾಲನ್ನೆ ಕುಡಿಯುವವರು. ಕೆಲವು ದೇಶಭಕ್ತರು ಯೂರೋಪಿಯನ್ ಪದ್ಧತಿಯ ಭೋಜನ ಮಾಡುವವರು, ಕೆಲವರು ಮಹಾತ್ಮಾಜಿಯವರ ಹಾಗೆ ಆಡಿನ ಹಾಲು ಮತ್ತು ಬಾಳೆಯ ಹಣ್ಣು ತಿನ್ನುವವರು. ಅವರನ್ನೆಲ್ಲ ಸರಬರಾಯಿ ಮಾಡುತ್ತ ಮಾಡುತ್ತ ರಾಮಭಾವು ವೈದ್ಯರಿಗೆ ಸಾಕೆ ಸಾಕಾಯಿತು. ಅಳತೆಯಿಲ್ಲದ ಖರ್ಚಿನಿಂದಾಗಿ ಅವರ ತಲೆಯೇ ಬಿಸಿಯೇರಿತ್ತು. ಇಷ್ಟು ಉಪಚಾರ ಮಾಡಿಯೂ ಎಲ್ಲರೂ ಲಕ್ಷ್ಮಣರಾಯರನ್ನೇ ಯಜಮಾನರೆಂದು ಭಾವಿಸುತ್ತಿದ್ದರು ಹೊರತು, ಸಂಸಾರದ ತೊಂದರೆಯಿಲ್ಲದ ರಾಮಭಾವು ದೇಶಕಾರ್ಯಕ್ಕೆ ಸಾಹಾಯ್ಯ ಏನೂ ಮಾಡುವುದಿಲ್ಲವೆಂದು ಎಲ್ಲರೂ ಮೂರುತ್ತಿದ್ದರು!

ರಾತ್ರಿಯಲ್ಲಿ ಎಲ್ಲರೂ ನಿದ್ರಿಸಿದನಂತರ ರಾಮಭಾವು ತನ್ನ ಪಾಲಿಗೆ ಬಂದ ಜಮಖಾನೆಯೊಂದರ ಮೇಲೆ ಮಲಗಿದರು. ಅವರಿಗೆ ನಿದ್ರೆ ಬರುವುದರೊಳಗಾಗಿ ಲಕ್ಷ್ಮಣರಾಯರ ಸವಾರಿಯು ಅವರ ತಲೆಯ ಬಳಿಯಲ್ಲಿ ಕುಳಿತು ಗುಟ್ಟು ಮಾತನಾಡತೊಡಗಿತು: 'ಅಣ್ಣಾ, ನಾಳೆ ಐದು ಸಾವಿರದ ಜಾಮೀನು ಸಿಕ್ಕಿದರೇನೇ ನನ್ನ ಬಿಡುಗಡೆಯಾಗುವುದು; ಆದರ ತಜವೀಜು ನಿನ್ನಿಂದ ಆಗಬೇಕು!'

ರಾಮಭಾವು ಸಾಯಂಕಾಲದಿಂದ ಕುಪಿತರಾಗಿದ್ದರು. ಅವರೆಂದರು: 'ನಿನಗೆ ಅನೇಕ ಧನವಂತ ಮಿತ್ರರಿದ್ದಾರೆ; ಅವರಲ್ಲಿಯ ಒಬ್ಬರೂ ಜಾಮೀನಿನ ಹಣ ಕೊಡಲಿಕ್ಕಿಲ್ಲವೇ?'

ಲಕ್ಷ್ಮಣರಾಯರು ಅಣ್ಣನ ಮಾತು ತುಚ್ಛವೆಂದೆಣಿಸಿ ಎಂದರು: 'ಅಣ್ಣಾ, ಐದು ಸಾವಿರವೇ ಏನು, ಐದು ಲಕ್ಷದ ಜಾಮೀನನ್ನೂ ನಾನು ಹೊತ್ತಿಗೆ ಕೊಡಬಲ್ಲೆನು; ಆದರ ಮನೆಯಿಂದ ಜಾಮೀನಿನ ಹಣವನ್ನು ಪಡೆಯದೆ ಸರಕ ಮುಖವನ್ನು ನೋಡತೊಡಗಿದರ, ನನ್ನ ಕುಲದ ಮರ್ಯಾದೆಗೆ ಕುಂದೆಂದು ನಿನಗೆ ಬೇರೆ ಹೇಳಬೇಕೆ? ನಿನ್ನ ಹೇಗೆ ನಾಚಿಕೆಯಾಗುವುದಿಲ್ಲವೋ ಏನೋ; ಆದರೆ ನನ್ನಂತ ಸಾಸವಂತ ಪುರುಷನಿಗೆ ಪರರ ಮುಖಾವಲೋಕನ ಮರಣದಿಂದಲೂ

ಅಪಮಾನಕರವೆಂದು ತೋರುತ್ತದೆ. 'ಸಂಭಾವಿತಸ್ಯಚಾಕೀರ್ತಿಃ ಮರಣಾದತಿರಿಚ್ಯತೇ'—ಎಂಬುದು ನಿನಗೆ ಗೊತ್ತೇ ಇದೆ!'

ತನ್ನ ಸಂಪತ್ತಿನಿಂದ ಚರಿತಾರ್ಥ ನಡೆಯಿಸುವ ಬಂಧುರಾಜಕಪರ್ಪೋಕ್ತಿಗಳನ್ನು ಕೇಳಿ ರಾಮಭಾವು ತೆಪ್ಪಗಾದರು. ಆದರೆ, ಅವರಿಗೆ ಅವನ ಮನಸ್ಸನ್ನು ನೋಯಿಸಬೇಕೆಂದು ತೋರಲಿಲ್ಲ. ಅವರು ಸಂಯುಕ್ತ ಕುಟುಂಬಪದ್ಧತಿಯ ಸಕ್ರಿಯ ಪುರಸ್ಕರ್ತರಾಗಿದ್ದರು. ತದ್ವಿಸರೀತ ಸ್ಥಿತಿಯನ್ನುಂಟು ಮಾಡುವುದು ಅವರಿಂದ ಅಸಾಧ್ಯ. ಒಂದು ಕಡೆ ಸಮಾಜಸತ್ತೆಯ ಪ್ರಾಬಲ್ಯವನ್ನು ಉಪದೇಶಿಸುವ, ಮತ್ತೊಂದು ಕಡೆ ಸಂಯುಕ್ತ ಕುಟುಂಬವಪದ್ಧತಿಯನ್ನು ನಾಶಮಾಡುವ ಆಧುನಿಕ ತತ್ತ್ವಜ್ಞಾನವನ್ನು ಕೇಳಿ ಅವರಿಗೆ ಆಶ್ಚರ್ಯವಾಗುತ್ತಿತ್ತು.

ಪ್ರಾಪ್ತಿ ಯಶೇಷ್ಟವಾಗಿದ್ದರೂ ಬಂಧುರಾಜರ ಹೆಚ್ಚುವ ಸಂಸಾರದ—ಮತ್ತವರ ದೇಶಭಕ್ತಿಯ ಆಟವ ಖರ್ಚಿನಿಂದ ವೈದ್ಯರ ಹತ್ತಿರ ಹಣವೆಂಬುದು ಉಳಿಯುತ್ತಿರಲಿಲ್ಲ. ಒಂದೆರಡು ಸಾವಿರ ರೂಪಾಯಿ ಆ ಹೊತ್ತು ಅವರ ಹತ್ತಿರವಿದ್ದರೂ, ಬಾಕಿ ಮೂರು-ಸಾವಿರ ರೂಪಾಯಿಯನ್ನು ಎಲ್ಲಿಂದ ತರುವುದೆಂದು ಯೋಚಿಸತೊಡಗಿದರು.

* * * *

'ವೈದ್ಯರಾಜರೆ, ನಮ್ಮ ಸೊಸೆಯ ಜೀವ ನಿಮ್ಮ ಕೈಯ್ಯಲ್ಲಿದೆ; ಅನೇಕ ಕ್ಷಯರೋಗಿಗಳನ್ನು ನೀವು ಗುಣಪಡಿಸಿದ್ದೀರಿ! ಒಳ್ಳೆಯ ಔಷಧವನ್ನು ಕೊಟ್ಟು ಇವರನ್ನು ಸೌಖ್ಯಪಡಿಸಿ; ನಿಮ್ಮ ಉಪಕಾರವನ್ನು ನಾವೆಂದಿಗೂ ಮರೆಯಲಿಕ್ಕಿಲ್ಲ!' ರತ್ನಾಪುರದ ರಾಣೇಸಾಹೇಬರು ಕಳವಳದಿಂದ ಎಂದರು.

'ಎಲ್ಲಾ ದೇವರ ಕೃಪೆ; ಅವರೆ ಯುವರಾಜ್ಞಿಯ ರೋಗ ಮೂರನೆಯ ಅವಸ್ಥೆಗೆ ಹೋಗಿದೆ. ಗುಣವಡಿಸಬೇಕಾದರೆ ಮೌಕ್ತಿಕ ಭಸ್ಮ, ಸುವರ್ಣಭಸ್ಮವೊದಲಾದ ಅಮೂಲ್ಯಔಷಧಗಳನ್ನು ತಯಾರಿಸಬೇಕಾಗುವುದು. ಖರ್ಚು ಹೆಚ್ಚುಂಟು!' ರಾಮಭಾವು ಎಂದರು.

'ಖರ್ಚಿನದೊಂದು ದೊಡ್ಡದಲ್ಲ. ಈ ತನಕ ಹಿಂದುನ್ನಾನ ಮತ್ತು ನಿಲಾಯತಿ ಕೂಡಿ ಸ್ವಲ್ಪ ಖರ್ಚಾಯಿತೇನು?' ರಾಣೆಸಾಹೇಬರು ಎಂದರು.

'ಈ ತನಕ ಐವತ್ತು ಸಾವಿರ ರೂಪಾಯಿಯಾದರೂ ಖರ್ಚಾಗಿರಬಹುದು!' ಕ್ಷೀಣಸ್ವರದಿಂದ ಯುವರಾಜ್ಞಿ ನುಡಿದರು.

ಯುವರಾಜ್ಞಿಯ ಮಂಪರಾದ ನಾಡಿ, ನಿಸ್ತೇಜ ಕಣ್ಣು, ಮತ್ತು ಕ್ಷೀಣದೇಹವನ್ನು ನೋಡಿ, ವೈದ್ಯರು ಸಚಿಂತ ಮುಖ್ರಯಿಂದ ಎಂದರು: 'ನಾನು ಪ್ರತಿಜ್ಞೆಯಿಂದ ಯುವರಾಜ್ಞಿಯನ್ನು ಸೌಖ್ಯಪಡಿಸುವೆನು, ಆದರೆ ನನಗೆ ಮುಂಗಡವಾಗಿ ಮೂರು ಸಾವಿರ ರೂಪಾಯಿ ಕೊಡಬೇಕು!'

ರಾಣೇಸಾಹೇಬರು ಕೋಪದಿಂದ ಎಂದರು: 'ವೈದ್ಯರಾಜರೆ, ಈ ತನಕ ನಿಮ್ಮ ಕೃಪಣತ್ವದ ವಿಷಯವಾಗಿ ಅನೇಕ ಕಥೆಗಳನ್ನು ನಾವು ಕೇಳುತ್ತಿದ್ದೆವು; ಆದರೂ ನಮ್ಮಂತಹ ಮಾನವಂತ ಸಂಸ್ಥಾನಿಕರಿಂದ ಮುಂಗಡ ಕೇಳುವಿರೆಂದು ನಾವು ಭಾವಿಸಿರಲಿಲ್ಲ. ನಾವೆಲ್ಲಿಗಾದರೂ ಓಡಿಹೋಗುತ್ತೇವೆ ಏನು?

ರಾಮಭಾವು ನಾಚಿಕೆಯಿಂದ ತಲೆಯನ್ನು ತಗ್ಗಿಸಿದರು, ಆವರ ಮಾಡುವುದೇನು? ಲಕ್ಷ್ಮಣರಾಯರ ಜಾಮೀನಿಗಾಗಿ ಐದುಸಾವಿರ ರೂಪಾಯಿಯ ಭರತಿ ಮಧ್ಯಾಹ್ನ ಹನ್ನೆರಡು ಗಂಟೆಯೊಳಗೆ ಆಗಬೇಕಿತ್ತು. ಆವುದರಿಂದ ನಿರುಪಾಯರಾಗಿ ಎಂದರು: 'ರಾಣೇಸಾಹೇಬರೆ, ಏನು ಮಾಡಲಿ? ನಾನೊಂದು ವಿಲಕ್ಷಣ ಸಂಕಟದಲ್ಲಿ ಸಿಕ್ಕಿ ಬಿದ್ದಿದ್ದೇನೆ. ಆ ಸಂಕಟದಿಂದ ಪಾರಾಗಲು ನನಗೆ ರೂಪಾಯಿಯ ಆವಶ್ಯಕತೆ ಇದೆ. ಯುವರಾಜ್ಞಿಯನ್ನು ಗುಣಪಡಿಸಲು ನನ್ನ ಪುಣ್ಯವನ್ನೆಲ್ಲಾ ಧಾರೆ ಎರೆಯುವೆನು!'

ಕಾರಭಾರಿಯನ್ನು ಕರೆಯಿಸಿ ರಾಣೇಸಾಹೇಬರು ಮೂರು-ಸಾವಿರದ ಚಕ್ಕನ್ನು ಕೊಡಿಸಿದರು. ಅನಭ್ಯನೆಂಬ ಹೆಸರನ್ನು ಪಡೆದುಕೊಂಡು, ಆದರೆ ತಮ್ಮನ ಬಿಡುಗಡೆಯ ಏರ್ಪಾಡನ್ನು ಮಾಡಿ, ರಾಮಭಾವು ಬಂಗಲೆಯಿಂದ ಹೊರಟಾಗ, ಅವರ ಮನಸ್ಸೇ ಅವರನ್ನು ತಿನ್ನುತ್ತಿತ್ತು. ಜಾಮೀನಿನ ಹಣವನ್ನು ಕಟ್ಟಿ ಮನೆಗೆ ಬಂದಾಗ, ಅವರ ದಿವಾನ್‌ಖಾನೆಯಲ್ಲಿ ಅನೇಕ ಸ್ತ್ರೀ-ಪುರುಷರು ಸಭೆ ಕೂಡಿಸಿ ಮಲಬಾರಿನ ಪ್ರಚಾರಕಾರ್ಯದ ಕುರಿತು ಚರ್ಚಿಸುತ್ತಿದ್ದರು.

* * * *

ಸಾಯಂಕಾಲ ಶನಿವಾರ ವಾಡೆಯ ಮುಂದುಗಡೆಯಲ್ಲಿ ಲಕ್ಷ್ಮಣರಾಯರನ್ನು ಅಭಿನಂದಿಸಲು ಸಭೆ ಕೂಡಿತ್ತು. ರಾಮಭಾವು ಪ್ರೇಕ್ಷಕರ ಸಂಗಡ ಕುಳಿತಿದ್ದರು. ಇವರ ಪಕ್ಕದಲ್ಲಿ ಕುಳಿತಿದ್ದ ಅಪರಿಚಿತನೊಬ್ಬನು ಅವರ ಸಂಗಡ ಮಾತನಾಡತೊಡಗಿದನು: 'ಇದು ನೋಡಿದಿರಾ, ನಮ್ಮ ಲಕ್ಷ್ಮಣರಾಯರು ಎಂತಹ ಸ್ವಾರ್ಥತ್ಯಾಗಿಗಳು! ಹೆಂಡತಿ ಮಕ್ಕಳ ತ್ಯಾಗ ಮಾಡಿ, ತಿಂಗಳಿಗೆ ಮೂವತ್ತು ರೂಪಾಯಿ ದೊರೆಯುವ ವಕೀಲಿಯನ್ನು ಎಂಜಲಿನ ಹಾಗೆ ಬಿಸುಟು, ದೇಶಸೇವೆಯ ಆಸಿಧಾರಾವ್ರತವನ್ನು ಆಚರಿಸುತ್ತಾರೆ. ಅದೇ ಇವರ ತಣ್ಣ ಇದ್ದಾನೆ—'

ರಾಮಭಾವು ಸ್ಮಿತರಾಗಿ ಕೇಳಿದರು: 'ಅವ ಹ್ಯಾಗವ್ವಾ?'

ಶ್ರೀರಂಗ ಸಾರಸ್ವತ

ಪ್ರಪಂಚ ಪಾಣಿಪತ್ತು

ಸಂಸಾರಿಗ ಕಂಸ

ಶ್ರೀರಂಗರ ಎರಡು ಸ್ವತಂತ್ರ ಸಾಮಾಜಿಕ ನಾಟಕಗಳು ರಂಗ-ಮಂಗ ಪ್ರಕಾಶನವಲ್ಲಿ ಬೇಗನೆ ಪ್ರಕಟವಾಗಲಿವೆ.
ನಿಮ್ಮ ಪ್ರತಿಗಳಿಗಾಗಿ ಮುಂಚಿತವಾಗಿ ಬರೆಯಿರಿ.

C/o. ಮ್ಯಾನೇಜರ್, 'ಜಯಂತ', ಧಾರವಾಡ.

ಆ ಗೃಹಸ್ಥನೆಂದನು: 'ಅವ ವೈದ್ಯಕಿ ಮಾಡುತ್ತಾನೆ. ಮಹಾಜಾಣ, ಆದರೆ ಮಾಡುವುದೇನು ಅತಿ....ಲೋಭಿ! ಹೆಣವನ್ನು ಮುಟ್ಟಿದರೂ ಜೀವ ಬಂದೀತು, ಅಷ್ಟು ಒಳ್ಳೆಯ ಕೈಗುಣ—ಆದರೆ ಹಣ ವಸೂಲು ಮಾಡಬೆ ರೋಗಿಯನ್ನು ಉಗುರಿನಿಂದಲೂ ಮುಟ್ಟಲಾರನು! ಈವೊತ್ತು ಬೆಳಗ್ಗೆ ನಡೆದ ತಮಾಷೆಯ ಸಂಗತಿಯೊಂದನ್ನು ಹೇಳುತ್ತೀನೆ....'

'ಏನೇನವ್ವಾ!'

'ರತನ್‌ಪುರದ ಯುವರಾಜ್ಞಿಗೆ ಕ್ಷಯರೋಗವಾಗಿದೆ. ಅವರ ಔಷಧೋಪಚಾರಕ್ಕೆ ರಾಮಭಾವು ವೈದ್ಯರನ್ನು ಕರೆಯಿಸಿದರು. ಈ ಕೇಸು ಅನಾಥ್ಯವೆಂದು ಸರಕಾರಿಗೆ ಗೊತ್ತಾಗಿ ಮುಂಗಡವಾಗಿ ಐದು ಸಾವಿರ ರೂಪಾಯಿ ಕೊಡಬೇಕೆಂದಿತು. ಚಿಕ್ಕನ್ನು ಜೇಬಿನಲ್ಲಿಟ್ಟು, ಸರಕಾರಿ ಮಾಯವಾಯಿತು. ಇಂತಹ ಲೋಭಿ ಆ ಲಕ್ಷ್ಮಣರಾಯರ ಅಣ್ಣ! ಒಂದೇ ಗಣೆಯಲ್ಲಿ ಪಜ್ಜ. ಕಲ್ಲಿದ್ದಲು ಎರಡೂ ಸಿಕ್ಕುತ್ತವೆ: ಅಲ್ಲವೆ ಒಂದೇ ವೀಣದಿಂದ ಬೆಳಕೂ ಕಾಡಿಗೆಯೂ ಆಗುತ್ತವೆ. ಅದೇ. ಅದೇ ಪ್ರಕಾರ.....!'

ಬಳಿಯಲ್ಲಿ ಕುಳಿತ ಮತ್ತೊಬ್ಬ ಗೃಹಸ್ಥ ಈ ಭಾಷಣವನ್ನು ಕೇಳಿ ಉದ್ಗರಿಸಿದನು: 'ಒಬ್ಬ ಸ್ವಾರ್ಥತ್ಯಾಗಿಯಾದರೆ ಮತ್ತೊಬ್ಬ ಸ್ವಾರ್ಥಪರಾಯಣ; ಒಬ್ಬ ದೇವಭಕ್ತ, ಮತ್ತೊಬ್ಬ ದೇವದ್ರೋಹಿ! ಲಕ್ಷ್ಮಣರಾಯರು ಬಹುವರ ನಿಶ್ಚರು: ಆದರೆ ರಾಮಭಾವು ಒಡಪರ ರತ್ನ! ಈ ಸೃಷ್ಟಿಯಲ್ಲಿ ಅನೇಕ ಚಮತ್ಕಾರಗಳಿವೆ. ಬಹುರತ್ನಾ ವಸುಂಧರಾ!'

ಈ ಮಾತು-ಕಥೆಗಳನ್ನು ಕೇಳಿ ಸುತ್ತಲಿದ್ದ ಜನರು ಜೊಪ್ಪ ಹೊಡೆದರು: 'ಶ್ಯ-ಶ್ಯ! ನಾವು ನಿಮ್ಮ ಭಾಷಣವನ್ನು ಕೇಳಲು ಬಂದಿಲ್ಲ. ಸಭೆಯ ಅಧ್ಯಕ್ಷರು ಏನೆನ್ನುತ್ತಾರೆ ಎಂಬುದನ್ನಾದರೂ ಕೇಳುವ!' ಶಾಂತತೆಯಾದ ನಂತರ ಅಧ್ಯಕ್ಷರ ಭಾಷಣದ ಕೆಲವುಭಾಗ ರಾಮುಭಾವು ವೈದ್ಯರಿಗೆ ಕೇಳಿಸಿತು: 'ಬಂಧುಗಳೇ, ಲೋಕನಾಯಕನ ನಾಮಧ್ಯೇಯವು ಅವರ್ಣನೀಯವು. ಲಕ್ಷ್ಮಣರಾಯರಿಗೆ ಕೈಮುಗಿದಂತೆ ಇದ್ದರೂ ಅವರು ಸಿಂಹದ ಹಾಗೆ ನಿರ್ಭೀತರಾಗಿದ್ದರು; ಆದರೆ ಅವರ ಲೋಕಪ್ರಿಯತೆಗೆ ಹೆದರಿ ಸರಕಾರವು ತಾನಾಗಿಯೇ ವಾರಂಟನ್ನು ಹಿಂತೆಗೆದುಕೊಂಡಿತು. ಆದುದರಿಂದ ಲೋಕಪಕ್ಷದ ಹೆದರಿಕೆಯು ಸರಕಾರಕ್ಕೆ ಎಷ್ಟಿದೆಯೆಂಬ ಕಲ್ಪನೆಯನ್ನು ನೀವು ಮಾಡಿಕೊಳಬಹುದು. ಲಕ್ಷ್ಮಣರಾಯರಂತಹ ಜನರು ಈಗಿನ ಕಾಲದಲ್ಲಿ ಸಿಗಲಿಕ್ಕಿಲ್ಲ. ಈವೊತ್ತು ಇವ್ವತ್ತು ಜನ ಯುವಕ-ಯುವತಿಯರು ಇವರ ಮನೆಯಲ್ಲಿ ಅತಿಥಿಸತ್ಕಾರ ಹಾಗೆ ಅತಿಥ್ಯವನ್ನು ಭೋಗಿಸುತ್ತಿದ್ದಾರೆ. ಇವರಲ್ಲಿಯ ಕೆಲವರಿಗೆ 'ಕ' ವರ್ಗ ಸಿಕ್ಕುವ ಸಂಭವವಿದೆ; ಆದರೆ ಅಲ್ಲಿ ಕೂಡ ಈ ಆತಿಥ್ಯದ ನೆನಪಿನಿಂದ 'ಕ' ವರ್ಗದ ತುರಂಗವಾಸವು ಅವರಿಗೆ ಪುರವಾಗಿ ತೋರಬಹುದು!' (ಜೋರ್ನಾಳಿ) ರಾಮಭಾವು ತಲೆಯ ಮೇಲೆ ಕೈ ಇಟ್ಟುಕೊಂಡು ಸಭಾಸ್ಥಾನದಿಂದ ನಿರ್ಗಮಿಸಿದರು: ಕೂಡಲೆ ಮನೆಗೆ ಬಂದು ಒಂದು ಮೂಲೆಯಲ್ಲಿ ಮಲಗಿದರು.

ಸಭೆಯ ಗಲಾಟೆ ಮುಗಿದಸರ್ವಾ ರಾತ್ರಿ ರಾಮಭಾವು ವೈದ್ಯರ ಮನೆಯಲ್ಲಿ ಬಹಳ ಗೌಜಿಯ ಸೋಜಾನು ನಡೆಯಿತು. ಸ್ತ್ರೀಯರೂ ಪುರುಷರೂ ನಿಶ್ಚಯಜ್ಞೆಯಲ್ಲಿ ಕುಳಿತಿದ್ದರು. ಇನ್ನೊಬ್ಬರ ಎಲೆಯ ಮೇಲೆ ತಮ್ಮ ಎಲೆಯಲ್ಲಿದ್ದ ಪದಾರ್ಥವನ್ನು ಬೀಸಾಡುವುದು, ಇನ್ನೊಬ್ಬರ ಎಂಜಲಿನ ಪಾತ್ರೆಯಿಂದ ನೀರು ಕುಡಿಯುವುದು, ಭೋಜನಾದಿ ನಂತರ ಇನ್ನೊಬ್ಬರ ಬಾಯಿಗೆ ಬೀಡೆ ತುಂಬಿಸುವುದು ಮೊದಲಾದ ನರ್ಮಪ್ರಕಾರದ ಆಮೋದ-ಪ್ರಮೋದದ ಆಟಗಳನ್ನು ಮಧ್ಯರಾತ್ರಿಯ ತನಕ ಆಡಿ, ತುರಂಗವಾಸದ ನೆನಪಾಗದ ಹಾಗೆ ಮಾಡಿದರು. ಕಾಫಿ-ಚಾ ಮತ್ತು ಕೆಲವು ವ್ಯಕ್ತಿಗಳು ನೆಗ್ ಕುಡಿದನಂತರ, ಎಲ್ಲರೂ ದಿವಾನ್ ಖಾನೆಯಲ್ಲಿ ಅಸ್ತವ್ಯಸ್ತವಾಗಿ ಮಲಗಿದರು.

ಈ ಗಲಾಟೆಯಲ್ಲಿ ಪಾಪ ರಾಮಭಾವು ವೈದ್ಯರ ನೆನಸ್ಸು ಯಾರಿಗೂ ಆಗಲಿಲ್ಲ. ಅವರು ತಾವು ಮಲಗಿದ್ದ ಮೂಲೆಯಲ್ಲಿಯೆ ನಿದ್ರಿಸಿದರು. ಮರುದಿನ ಬೆಳಗ್ಗೆ ಲಕ್ಷ್ಮಣರಾಯರು ಕೋಪದಿಂದ ಎಂದರು: 'ಅಣ್ಣಾ, ನಿನ್ನ ಲೋಭಿವೃತ್ತಿಗೆ ಏನು ಹೇಳಲಿ? ನಿನ್ನೆ ನಾನು ಸಭೆಯ ಕಾರ್ಯದ ವಂತಿಗೆಗಾಗಿ ರತನ್‌ಪುರದ ರಾಣಿಸಾಹೇಬರಲ್ಲಿಗೆ ಹೋಗಿದ್ದೆ, ಆಗ ಅವರು ಹೇಳಿದರು: 'ವಕೀಲ್‌ಸಾಹೇಬ, ನಿಮ್ಮ ಬಂಧು ನಮ್ಮ ವೈದ್ಯರಿಂದ ಮೂರು ಸಾವಿರ ರೂಪಾಯಿ ಸುಲಿದರು! ಈಗ ನಿನಗೆ ಕೊಡಲು ನಮ್ಮ ಪತ್ತಿರ ಒಂದು ಪೈ ಕೂಡ ಇಲ್ಲ' ಎಂದು. ಆಯಿತು, ನಾವು ಹೋದ ಹಾಗೆಯೇ ಕೈ ಬೀಸುತ್ತ ಪುರಕ್ಕೆ ಬಂದೆವು. ನಿಮ್ಮಂತಹ ನ್ಯಾಯಾರ್ಥಿಜನರಿಂದ ನಮ್ಮಂತಹ ಸಂನ್ಯಾಸಿವೃತ್ತಿಯ ಜನರಿಗೆ ಎಷ್ಟು ತೊಂದರೆಗಳು ಉಂಟಾಗುತ್ತವೆ'.

ತಮ್ಮನ ವಾಗ್ಬಾಣಗಳನ್ನು ಕೇಳಿ ರಾಮಭಾವು ಸ್ತಿಮಿತರಾದರು. ಸನಸ್ಸನ್ನು ಏನೆಂಬುದು ತಿಳಿಯದಾಯಿತು. ಆಗಲೆ ಲಕ್ಷ್ಮಣರಾಯರ ಹಿರಿಯ ಮಗಳು ಮೃಣಾಲಿನಿ, ರಾಮುಭಾವು ವೈದ್ಯರ ಹತ್ತಿರ ಕುಳಿತು ಕೇಳಿದಳು: 'ಮೊಡ್ಡನ್ನಾ, ನನಗೆ ಸರ ಯಾವಾಗ ತೆಗೆದುಕೊಳ್ಳುತ್ತೀರಿ?

ತೆಗೆದುಕೊಳ್ಳುವ ಮಗು: ಈವೊತ್ತು ಸಂಜೆ ರವಿವಾರಪೇಟೆಗೆ ಹೋಗಿ ಕೊಂಡು ತರೋಣ!'

ವಾಗ್ವಿಲಾಸ ಬುಕ್‌ಡಿಪೊ, ದುರ್ಗದಬೈಲು, ಹುಬ್ಬಳ್ಳಿ

ಇವರಲ್ಲಿ ದೊರೆಯುವ ಪುಸ್ತಕಗಳು

ಪೋಲೀಸಗಾಯಿಡು (ಕಲಕೋಟೆಕೃತ)	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೮—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦
ತರುಣ ಪತ್ನಿ	೦—೮—೦
ಕಲಿತರೆ ಹೀಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦-೧೫—೦
ಪತ್ನಿಲಾವಣ	೦—೮—೦

(ಒಂದು ಚರ್ಚೆ)

'ಬಾಯ್ತುಂಬುಲಕೆ ಕೆಯ್ಯಾನುವರೆ?' ಎಂಬುದರ ಅರ್ಥವೇನು?

ಶ್ರೀ. ಜೋಶಿ ಶಂಕರರಾಯರು, ಧಾರವಾಡ

ಕುಮಾರವ್ಯಾಸನಲ್ಲಿ ತುಂಬ ಆಸಕ್ತಿಯಿದ್ದು ಆತನ ಭಾರತವನ್ನು ಪಾರಾಯಣಮಾಡಿದ ನನ್ನ ಒಬ್ಬ ಗೆಳೆಯರ ಸಂಗಡ ಚರ್ಚಿಸುವಾಗ, ಮೇಲಣವಾಕ್ಯದ ಬಗೆಗೆ ಇಬ್ಬರಲ್ಲಿ ಕೆಲವೊಂದು ಭಿನ್ನಾಭಿಪ್ರಾಯವಿದ್ದುದು ಕಂಡು ಬಂದಿತು. ಆದುದರಿಂದ ಈ ವಿಷಯದಲ್ಲಿ ಬುಳಿದ ವಿದ್ವಾಂಸರ ವಿಚಾರಗಳು ಏನಿರುವುವು?—ಎಂಬುದನ್ನು ತಿರಿತು ಕೊಳ್ಳುವುದೂ ಆವಶ್ಯಕವೆನಿಸಿ, ಮಹಾಜನಗಳ ಎದುರು ಈ ಮಾತನ್ನು ವಿಮರ್ಶೆಗಾಗಿ ಇರಿಸುತ್ತಿದ್ದೇನೆ. ಬಲ್ಲಿದರು ತಮ್ಮ ಓದಿನಲ್ಲಿ ಬಂದ ಸಂಗತಿಗಳ ಆಧಾರದಿಂದ, ಈ ಸಂಗತಿಯ ನಿಷ್ಕರ್ಷಕ್ಕೆ ಅವಶ್ಯಕವಾದ ಹೊಸ ಬೆಳಕನ್ನು ನೀಡುವರೆಂದು ಹಾರೈಸಿದ್ದೇನೆ.

ಶ್ರೀಕೃಷ್ಣನು ಕರ್ಣನನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು, ಅದು ಕೈಗೂಡದಿದ್ದರೆ, ಕೊನೆಗೆ ಆತನ ಬುದ್ಧಿಭೇದವನ್ನಾದರೂ ಮಾಡಲು ಆತನಲ್ಲಿಗೆ ಬರುತ್ತಾನೆ. ಬಂದು ಕರ್ಣನ 'ತೊಡೆಸೋಂಕೆ' ಕುಳ್ಳಿರುವನು. ಕಡಿಮೆಯವನೆನಿಸಿದ ತನ್ನ ತೊಡೆಗೆ ತೊಡೆಹಚ್ಚಿ ಶ್ರೀಕೃಷ್ಣನಂತಹ ಮಹಾವ್ಯಕ್ತಿಯು ಕುಳಿತುದನ್ನು ಕಾಣುತ್ತಲೆ ಕರ್ಣನು ದೂರ ಸರಿಯುವನು; ಆದರೆ ಶ್ರೀಕೃಷ್ಣನು ಕರ್ಣನನ್ನು ಬರಸೆಳೆದು ಹತ್ತಿರದಲ್ಲಿರಿಸಿಕೊಂಡು, ಆತನಿಗೆ ಆತ್ಮವಿಶ್ವಾಸವುಂಟಾಗಲು ಆತನ ಜನ್ಮವೃತ್ತಾಂತವನ್ನು ಕಿವಿಮಾತಿನಲ್ಲಿ ಹೇಳುವನು; ನೀನು ಯಾದವರ ಸಮಾಪದ ಅಪ್ತನೆಂದೂ ತಿಳಿಸುವನು.

ಇಷ್ಟಾದರೂ ಕರ್ಣನಿಗೆ ಕೃಷ್ಣನ ಮಾತಿನಲ್ಲಿ ವಿಶ್ವಾಸವುಂಟಾಗಲಿಲ್ಲ. 'ಕೃಷ್ಣಾ, ನಾನು ವಂಶವಿಹೀನನು, ನಿಮ್ಮ ಡಿಗಳೊಳು ನಾನು ಸಮಾನನೇ?' ಎಂದು ಬೆದರಿ ಬೆಚ್ಚಿ ತನ್ನ ಕೀಳ್ಮೆಯನ್ನು ಆಡಿಕೊಳ್ಳುವನು. ಆಗ ಶ್ರೀಕೃಷ್ಣನು ಮತ್ತೆ ಆತನಿಗೆ, 'ನೀನು ಸಾಮಾನ್ಯನಲ್ಲ; ಭಾನುವಂಶಲಲಾಮನು,' ಎಂದು ಹೇಳಿ, ಮೇಲೆ ಮತ್ತೆ ತನ್ನ ವಿಶೇಷವಾದ ಪ್ರೀತಿ, ಆತ್ಮೀಯತೆಯನ್ನು ತೋರುವುದಕ್ಕಾಗಿ ಆತನು 'ವೀಳೆಯವನು ಕಳೆದುಕೊಂಡನು, ಅಂಜುಳಿಯೊಳಗೆ ಕರ್ಣಂಗೆ ಇತ್ತನು,' ಎಂದು ವರ್ಣನೆಯು ಕು. ವ್ಯಾಸ ಭಾರತದಲ್ಲಿ ಬಂದಿದೆ.

ಇಲ್ಲಿ ಶ್ರೀಕೃಷ್ಣನು 'ವೀಳೆಯವನು ಕಳೆದುಕೊಂದನು' ಎಂದದ್ದೇನು? 'ವೀಳೆಯವನು ಹೊರಗೆ ತಕ್ಕೊಂಡನು—ಉಗುಳದನು' ಎಂದೇ ಅರ್ಥವಲ್ಲವೆ? ಸರಿ. ಮುಂದೆ ಇರುವ 'ಅಂಜುಳಿಯೊಳಗೆ' ಎಂಬ ಪದದ ಅರ್ಥದ ವಿಷಯದಲ್ಲಿಯೆ ಮುಖ್ಯವಾದ ಭಿನ್ನಾಭಿಪ್ರಾಯ: 'ಅಂಜುಳಿ' ಎಂದರೆ ಬೊಗಸೆಯಲ್ಲ; ಅದೊಂದು ಪಾತ್ರೆ; ಉಗುಳಲು ಉಪಯೋಗಿಸುವಂತಹದು; ಪೀಕದಾನಿ—ಉಗುಳುಪಾತ್ರೆ. ಶ್ರೀಕೃಷ್ಣನು ವೀಳೆಯವನು ಉಗುಳುಪಾತ್ರೆಯಲ್ಲಿ ಕಳೆದುಕೊಂಡು (ಉಗುಳಿ, ಅದೇ—ಪಾತ್ರೆಯನ್ನೆ ಕರ್ಣನಿಗೂ ಕೊಟ್ಟು ಆತನಿಗೂ ಉಗುಳಲು ಹೇಳಿರಬೇಕು. ವಿವಾದ-ಚರ್ಚೆಗಳ ಕಾಲಕ್ಕೆ ಬಾಯಲ್ಲಿ ತಂಬುಲವಿದ್ದಲ್ಲಿ ಬಾಯಿಂದ ಮಾತುಗಳು ಸ್ಪಷ್ಟವಾಗಿ ಬಾರವು; ಆದುದರಿಂದ ಹೆಚ್ಚಿನ ಮಾತುಗಳನ್ನು ಮುಂದುವರಿಸುವ ಮುನ್ನ ಇವರು ಉಗುಳುಪಾತ್ರೆಯಲ್ಲಿ ತಮ್ಮ ವೀಳೆಯವನ್ನು ಕಳೆದುಕೊಂಡರೆಂದು ಕುಮಾರವ್ಯಾಸನಿಗೆ ಸೂಚಿಸಬೇಕಾಗಿದೆ. 'ಅಂಜುಳಿ'ಗೆ ಬೊಗಸೆ ಎಂದು ಅರ್ಥ ಮಾಡಿದರೆ ಶ್ರೀಕೃಷ್ಣನು ಕರ್ಣನಿಗೆ ಎಂಜಲ ತಂಬುಲ ಕೊಟ್ಟನೆಂದು ಅಸಹ್ಯವಾದ ಅರ್ಥವು ಆಗುವುದು. ಇದು ಹೇಸಿ ಕೆಲಸ; ಅಬದ್ಧ; ಅಸಂಸ್ಕೃತ. ನಮ್ಮ ಭಾರತೀಯ ಪರಂಪರೆಗೆ ವಿರೋಧಿ.... ಇತ್ಯಾದಿ, ಇತ್ಯಾದಿ.

ಈ ಅರ್ಥವು ಸೊಗಸಾಗಿ ಕಾಣುವಂತಿರುವುದೇನೊ ನಿಜ; ಆದರೆ ಸೊಗಸಾಗಿ ಕಂಡಾಕ್ಷಣಕ್ಕೆ ಅದು ಸರಿಯಿರಬೇಕೆಂಬ ನಿಯಮವಿಲ್ಲ. ಮೇಲೆ 'ಅಂಜುಳಿ' ಎಂಬುದಕ್ಕೆ 'ಉಗುಳುಪಾತ್ರೆ' ಎಂದು ಮಾಡಿದ ಅರ್ಥವೆ ಮೊದಲು ಸಂದೇಹಾಸ್ಪದವಾಗಿದೆ. 'ಉಗುಳುಪಾತ್ರೆ' ಎಂಬರ್ಥದಲ್ಲಿ 'ಅಂಜುಳಿ' ಎಂಬ ಪದವನ್ನು ಉಪಯೋಗಿಸಿದ ಬೇರೆ ಪ್ರಯೋಗಗಳಾಗಲಿ, ನಮ್ಮ ನಾಡಿನ ಯಾವುದಾದರೂ ಭಾಗದಲ್ಲಿ ಮೇಲಣ ಅರ್ಥದಲ್ಲಿ 'ಅಂಜುಳಿ' ಶಬ್ದವು ಬಳಕೆಯಲ್ಲಿ ಇದ್ದುದಾಗಲಿ ನನಗೆ ಗೊತ್ತಿಲ್ಲ: ಬಲ್ಲವರು ಈ ವಿಷಯದಲ್ಲಿ ನೆರವಾಗಬೇಕಾಗಿ ಪ್ರಾರ್ಥನೆ.

ಇನ್ನು ಕೆಲವರು, ಸ್ವಲ್ಪ ಬೇರೆಯಾಗಿ ಅರ್ಥ ಹೇಳುವರು: 'ಶ್ರೀಕೃಷ್ಣನು ವೀಳೆಯವನು ಕಳೆದುಕೊಂಡನು' ಎಂದರೆ ಎಲೆ ತಕ್ಕೊಂಡನು 'ಅಂಜುಳಿಯೊಳಗೆ (ಬೊಗಸೆಯಲ್ಲಿ) ಕರ್ಣನಿಗೆ ಕೊಟ್ಟನು. ಈ ಅರ್ಥದಲ್ಲಿ 'ಕಳೆದುಕೊಳ್ಳು' ಎಂಬುದಕ್ಕೆ 'ತಕ್ಕೊಳ್ಳು' ಎಂಬ ಭಾವವು ಹೇಗೆ ತಲೆದೋರುವುದೊ ತಿಳಿಯದಾಗಿದೆ.

ಶ್ರೀಕೃಷ್ಣ-ಕರ್ಣ ಸಂವಾದದ ಇನ್ನೊಂದೆಡೆಯಲ್ಲಿ 'ಕರ್ಣನೆ, ನೀನು ಹಿರಿಯನು; ನೀನೇ ಪಟ್ಟದ ಅಧಿಕಾರಿ; ಹೀಗಿರಲು ಕಿರಿಯನಾದ 'ದುರ್ಯೋಧನನ ಬಾಯ್ತುಂಬುಲಕೆ ಕೈಯಾನುವರೆ?' ಎಂಬ ಮಾತು ಬಂದಿದೆ. ಇಲ್ಲಿ ಬಾಯ್ತುಂಬುಲ ಎಂಬುದು ಸ್ಪಷ್ಟವಿದೆ. ಮೇಲೆ 'ಕಳೆದುಕೊಂಡನು ವೀಳೆಯವನು, ಅಂಜುಳಿಯೊಳಗೆ ಆತನಿಗೆ (ಕರ್ಣನಿಗೆ) ಇತ್ತನು' ಎಂದು ಇರುವುದರಿಂದ ಕೆಲವೊಂದು ಸಂದೇಹಕ್ಕೆ ಎಡೆಯಿದ್ದಿತು. 'ಬಾಯಂತಂಬುಲ' ಎಂದರೆ ಬಾಯೊಳಗಿನ ತಂಬುಲ, ಎಂಜಲು' ಎಂದೇ ಅರ್ಥವಲ್ಲದೆ ಬೇರೆ ಅರ್ಥವೆ ಆಗಲಾರದು. ಆದುದರಿಂದ ಮೇಲೆ ತಂಬುಲವನ್ನು 'ಕಳೆದುಕೊಂಡನು, ಅಂಜುಳಿಯೊಳಗೆ ಇತ್ತನು' ಎಂದರೆ ತಾನು ತಿಂದ ತಂಬುಲವನ್ನೇ ಕರ್ಣನಿಗೆ ಕೊಟ್ಟನೆಂಬ ಅರ್ಥವನ್ನು ಮಾಡುವುದೇ ಸಮರ್ಪಕವೆಂದು ಹೇಳಬೇಕಾಗುತ್ತದೆ.

ಆದರೆ, ಇಲ್ಲಿ ಇನ್ನೊಂದು ಮಾತು ತಲೆ ಎತ್ತುವಂತಿದೆ: 'ಬಾಯತಂಬುಲ' ಎಂಬುದಕ್ಕೆ ಶಬ್ದಶಃ ಅರ್ಥ ಮಾಡುವುದಕ್ಕಿಂತ ಅದಕ್ಕೆ 'ಸೇವಾವೃತ್ತಿ,' 'ಆಳ್ತನ' ಎಂದು ಹೇಳುವುದರಿಂದ ಸೊಗಸಾದ ಅರ್ಥವಾಗುವ ಹಾಗಿದೆ. ಆದಕಾರಣ 'ಬಾಯತಂಬುಲ' ಎಂಬು-

ದನ್ನು ಪಡೆನುಡಿ (idiom) ಎಂದು ಇಲ್ಲಿ ಗ್ರಹಿಸಿದರೆ ಲೇಸಾಗಲಿಕ್ಕೆಲ್ಲವೆ?

ಆಗಬಹುದು. ಆದರೆ ನಮ್ಮ ಗುರಿ ಸೊಗಸಾದ ಅರ್ಥವೊ? ನಿಜವಾದ ಅರ್ಥವೊ? ದ್ರೌಪದಿಗೆ ಐವರು ಗಂಡರೆಂಬ ಮಾತು ನಮಗೆ ಹೇಗೋ ಎನಿಸುವುದೆಂದು ಅವಳಿಗೆ ಒಬ್ಬನೇ ಗಂಡನೆಂಬಂತೆ ವರ್ಣಿಸಿದಂತಿದೆ ಈ ಮಾತು! ಒಂದು ಕಾಲಕ್ಕೆ ಹಿರಿಯರು ತಮ್ಮ ಆತ್ಮೀಯರಾದ ಕಿರಿಯರಿಗೆ, ತಮ್ಮಲ್ಲಿರುವ ಪ್ರೀತಿ, ವಿಶ್ವಾಸ, ಐಕ್ಯಗಳ ಕುರುಹಾಗಿ ತಮ್ಮ ಬಾಯತಂಬುಲವನ್ನು ಕೊಡುವ ಸಂಪ್ರದಾಯವು ರೂಢಿಯಲ್ಲಿ ಇದ್ದರೆ! ಆದರ ದ್ಯೋತಕವಾಗಿಯೆ 'ಬಾಯ ತಂಬುಲ'ವೆಂಬ ಮಾತು ತಲೆದೋರಿರಬೇಕಲ್ಲವೆ? ಈ ರೂಢಿಯೆ ಇಲ್ಲದಿದ್ದರೆ 'ಬಾಯತಂಬುಲ' ಎಂಬುದು ಬಳಕೆಯಲ್ಲಿ ಬರಲು ಕಾರಣವೇ ಇದ್ದಿಲ್ಲ.

ಅಲ್ಲದೆ ಇದಕ್ಕೆ ಇನ್ನೂ ಕೆಲವು ಪ್ರಮಾಣಗಳಿವೆ. ಪಂಪಭಾರತದ ಒಂದು ಪದ್ಯದಲ್ಲಿ (೧೪.೧೦) 'ಬಾಯ್ತಂಬುಲ' ಎಂಬುದನ್ನು ಎಂಜಲು ತಂಬುಲ ಎಂಬರ್ಥದಲ್ಲಿಯೇ ಪ್ರಯೋಗಿಸಿದ್ದನ್ನು ಕಾಣಬಹುದು:

" ಅರಿಸಿದರಾರುಮಿಲ್ಲೆನುಗೆ ನೀನೆಪುಗಣ್ಣನೆಯೆಂದು
ಮುನ್ನಮಾ- ।
ಮರಿದೊಡೆ ಪಟ್ಟಮಂ ಸಲಸುಮಂ ನಿನಗಿತ್ತು ಕುರು
ಪ್ರಧಾನನೊಳಾ ॥
ಕರುಪನೆ ನಿಚ್ಚಟಂ ಬಿಸುಟು ನಿನ್ನಯ ವೇಳ್ದುದು ಗೆಯ್ದ
ಸಾಳಿಯಂ ।
[ಪೆಱೆಯೆವೆ] ಬಾಯ ತಂಬುಲಜೊಳಂ, ಮಡುಗೂಳೊಳ-
ಮಂಗವಲ್ಲಭಾ ॥ "

ಪಾಂಡವರು ಕರ್ಣನು ತಮ್ಮ ಅಣ್ಣನೆಂದು ಗೊತ್ತಾದೊಡನೆ ಅತನ ಸಾವಿಗಾಗಿ ಶೋಕಿಸುವಾಗ ಹೇಳುವ ಮಾತಿದು 'ಅಣ್ಣ ನಿನಗೇ ಪಟ್ಟ ಕಟ್ಟಿ, ದುರ್ಯೋಧನನ ದ್ವೇಷವಿಟ್ಟೆ, ನೀನು ಹೇಳಿದಂತೆ ಕೇಳಿಕೊಂಡು, ನಿನ್ನ ಬಾಯತಂಬುಲಕ್ಕೂ, ಉಚ್ಛಿಷ್ಟಾನ್ನಕ್ಕೂ (ನುಡುಗೂಳು) ನಾವು ಸಲ್ಲತಕ್ಕ ಮನ್ನಣೆಯನ್ನಿತ್ತು ನಡೆದುಕೊಳ್ಳುತ್ತಿದ್ದವಲಾ!' ಎಂದು ಮುಂತಾಗಿ ಹಲುಬಿದ್ದಾರೆ. ಇಲ್ಲಿ 'ನುಡುಗೂಳು' ಎಂಬುದಕ್ಕೆ ಉಚ್ಛಿಷ್ಟಾನ್ನವೆಂದು ಬಲ್ಲಿದರೇ ಅರ್ಥ ಹೇಳಿದ್ದಾರೆ.

'ಪಂಪನ ಕಾಲದಲ್ಲಿ ೧೦ನೆಯ ಶತಮಾನದಲ್ಲಿ ರೂಢಿವಿದ್ದ ಈ ಸಂಪ್ರದಾಯವು 'ಕುಮಾರವ್ಯಾಸನ ಕಾಲಕ್ಕೆ ಏಕೆ ಲುಪ್ತವಾಗಿರಲಿಕ್ಕಿಲ್ಲ?' ಎಂಬ ಇನ್ನೊಂದು ಮಾತನ್ನು ಯಾರಾದರೂ ಕೇಳಬಹುದು. ೧೩ನೆಯ ಶತಮಾನದ ಯಾದವ ಕಾಲದ ಮರ್ಹಾಟಿಯ ಒಂದು ಗ್ರಂಥವು ಇತ್ತೀಚೆ ಪ್ರಕಟವಾಗಿದೆ. ಅದರ ಹೆಸರು 'ಲೀಳಾಚರಿತ್ರ' ಎಂದಿದೆ. ಕ್ರಿ. ಶ. ೧೨೪೫ರ ಸುಮಾರಿನ ಗ್ರಂಥ. ಮರ್ಹಾಠಿಯ ತೀರ ಆರಂಭದ ಪೊದಲನೆಯ ಗ್ರಂಥ. ಆಗಿನ ಭಾಷೆ, ಸಾಮಾಜಿಕ ಸ್ಥಿತಿ-ರೀತಿಗಳನ್ನು ಅರಿತುಕೊಳ್ಳಲು ನಾನು ಅದನ್ನು ಓದುತ್ತಿರುವಾಗ, ಅದರಲ್ಲಿ ಕೆಲವು ಉಲ್ಲೇಖಗಳು ಮೇಲಣ ಮಾತಿಗೆ ಪೋಷಕವಾಗಿ ಬಂದಿವೆ. ಆ 'ಲೀಳಾ ಚರಿತ್ರ'ದಲ್ಲಿ ಮಹಾನುಭಾವ ಪಂಥದ ಚಕ್ರಧರ ಸ್ವಾಮಿಯ ದಿನಚರಿಯಿದೆ. ಚಕ್ರಧರನಲ್ಲಿ ಅತನ ಆತ್ಮೀಯ ಶಿಷ್ಯರು ಬಾಯತಂಬುಲವನ್ನು ಪ್ರಸಾದವೆಂದು ಬೇಡಿದ ಹಾಗೂ ಅತನು ಅದನ್ನು ದಯಪಾಲಿಸಿದ ಹಾಗೂ ವರ್ಣನೆಗಳಿವೆ. 'ಶ್ರೀಮುಖೀಜೇ ತಾಂಬೋಳ ಮಾಗೀತಲೇ'; 'ಶ್ರೀ ಗೋಸಾವಿ ತಾಂಬೂಳ ಪರಿತ್ಯೇಜೀತಾ ....ತಾಂಬೋಳಾ ಹಾತ ಓಡವೀತ ಒಡ್ತುತ್ತ)' 'ಗೋಸಾವೀ ತಾಂಬುಳ ದೀಧಲಿ; ತೇ ತೋಂಡೀ ಘಾತಲೇ' ಆಣಿ ದಂಡವತ ಕರೂನಿ ನಿಗಾಲಿ' ಮುಂತಾದ ಉಲ್ಲೇಖಗಳು ಬಾಯ ತಂಬುಲದ ನಿಜಸ್ಥಿತಿಯನ್ನು ಸ್ಪಷ್ಟಗೊಳಿಸುತ್ತಿವೆ.

೧೦ನೆಯ ಶತಮಾನದಿಂದ ೧೩ನೆಯ ಶತಮಾನದ ವರೆಗೆ ಬಳಕೆಯಲ್ಲಿದ್ದ 'ಬಾಯತಂಬುಲ'ದ ರೂಢಿಯು ಕುಮಾರವ್ಯಾಸನ ಕಾಲಕ್ಕೆ ೧೫—೧೬ನೆಯ ಶತಮಾನದೊಳಗಾಗಿ ಲೋಪವಾಗಲಿಲ್ಲವೆಂದು ಅತನ ಗ್ರಂಥವಲ್ಲಿರುವ ಪ್ರಮಾಣಗಳಿಂದಲೇ ಸಿದ್ಧವಾಗುತ್ತದೆ

ಹಿರಿಯರು ಕಿರಿಯರಿಗೆ ಮಾಡುವ ಕೃಪೆಯ ದ್ಯೋತಕವಾಗಿ ಈ ಪದ್ಧತಿಯು ಹಿಂದೆ ರೂಢಿಯಲ್ಲಿದ್ದಿತು. ಅದು ಈಗ ಕಾಣೆಯಾಗಿದೆ ಎಂದು ಕೆಲವರು ಭಾವಿಸಬಹುದು; ಆದರೆ ಅದು ಇನ್ನೂ ಲುಪ್ತವಾಗಿಲ್ಲ. ಕೆಲವೊಂದು ವಿಶಿಷ್ಟ ಸ್ಥಳದಲ್ಲಿ ಅದು ಉಳಿದುಕೊಂಡೇ ಇದೆ. ಗಂಡನು ಹೆಂಡತಿಗೆ, ತಾಯಿ ಮಗುವಿಗೆ (ಉಪನಯನ ಸಂಸ್ಕಾರದ ಮೊದಲು ಮಾತೃಭೋಜನದ ಕಾಲದ ವರೆಗೂ) ಇದು ಕಂಡೂ ಕಾಣದೆಯೂ ಜೀವಂತವಾಗಿರುವುದು. ಸುಳ್ಳಲ್ಲ. 'ಬಾಯ ತಂಬುಲ'ದ ರೂಢಿಯು ಕಡಿಮೆಯಾಗುತ್ತಿರುವಂತೆ ಕಂಡರೂ ಅದು ಸಂಪೂರ್ಣವಾಗಿ ಹೋಗುವ ಸಂಭವವಿಲ್ಲ. ಸ್ವತಃಸಿದ್ಧವಿರುವುದರಿಂದ ಏಕೆಂಬುದಕ್ಕೆ ಬೇರೆ ಕಾರಣ ಹೇಳುವ ಕಾರಣವಿಲ್ಲ.

ಏಜಂಟರಿಗೆ ಸೂಚನೆ

ತರಿಸಿಕೊಳ್ಳುತ್ತಿರುವ ಪತ್ರಿಕೆಯ ಪ್ರತಿಗಳ ಸಂಖ್ಯೆಯಲ್ಲಿ ಹೆಚ್ಚು-ಕಡಿಮೆ ಮಾಡುವುದಿದ್ದರೆ, ೧೦ನೆಯ ತಾರೀಖಿನ ಒಳಗೆ ಕಚೇರಿಗೆ ತಿಳಿಸಬೇಕು. ಹಾಗೆ ತಿಳಿಸದಿದ್ದರೆ, ಕಳೆದ ತಿಂಗಳು ಕಳಿಸಿದಷ್ಟೆ ಕಳಿಸಲಾಗುವುದು

ನವಂಬರ ಸಂಚಿಕೆಯು ದೀಪಾವಳಿಯ ವಿಶೇಷ ಸಂಚಿಕೆಯು ಹೆಚ್ಚು ಪುಟಗಳು – ಚಿತ್ರಗಳು.
ಹೆಚ್ಚು ಪ್ರತಿಗಳು ಬೇಕಿದ್ದವರು ಮೊದಲೇ —೧೦ನೆಯ ತಾರೀಖಿನ ಒಳಗೆ—ತಿಳಿಸಬೇಕು.

ರೇಡಿಯೋ ಮತ್ತು ಟೇಲಿವ್ಹಿಜನ್

ಇವುಗಳ ಆಶ್ಚರ್ಯಕಾರಕ ಭವಿಷ್ಯತ್ತ್ವ *

ಶ್ರೀ. ವಿನಾಯಕರಾವ್ ಗೋಖಲೆ ಬಿ. ಎಸ್ಸಿ. ಬಿ.

ಹಿಂದುಸ್ತಾನಕ್ಕೆ ಟೆಲಿವ್ಹಿಜನ್ ಬರುವುದೆಂದು?—ಈ ಪ್ರಶ್ನೆಗೆ ಉತ್ತರ ಕೊಡುವುದು ಸದ್ಯಕ್ಕಂತೂ ಕಠಿಣವಾಗಿದೆ. ದೊಡ್ಡ ದೊಡ್ಡ ಸಂಗೀತಗಾರರ ಸಂಗೀತಕಚೇರಿಗಳನ್ನೂ, ಬಿಸಿ ಬಿಸಿ ಸುದ್ದಿಗಳನ್ನೂ, ವ್ಯಾಖ್ಯಾನ ಮತ್ತು ನಾಟಕಗಳನ್ನೂ ಮನೆಯಲ್ಲಿಯೆ ಕುಳಿತು ಇಂದು ನಾವು ಕೇಳುವೆವು, ಆದರೆ 'ಚೌಡಯ್ಯ'ನವರು ಪಿಟೀಲು ಬಾರಿಸುವುದನ್ನೇ ಆಗಲಿ, ಜಗತ್ಪ್ರಸಿದ್ಧ ಶಾಸ್ತ್ರಜ್ಞರಾದ ಸರ್ ಸಿ. ವಿ. ರಾಮನ್ನರು ಮಾತನಾಡುವುದನ್ನೇ ಆಗಲಿ, ಇಲ್ಲವೆ ಬಂಗಾಲದ ಬರಗಾಲವನ್ನೋ ಮುಂಬಯಿಯಲ್ಲಾದ ಭಯಂಕರ ಸ್ಫೋಟವನ್ನೋ ಇಷ್ಟೇ ಏಕೆ 'ವಸಂತಸೇನೆ'ಯನ್ನೋ 'Things to come' ಅನ್ನೋ—ನಮ್ಮ ಸಭೆಯಲ್ಲಿಯೆ ಕುಳಿತು ನೋಡುವುದು ನಮಗೆ ಇಂದಂತೂ ಶಕ್ಯವಿಲ್ಲ.

ಟೆಲಿವ್ಹಿಜನಿನ ಮೇಲೆ ನಾವು ಹೀಗೆ ಬೇರೆ ಬೇರೆ ನೋಟಗಳನ್ನು ನೋಡಬಹುದು.

ಇಂಗ್ಲೆಂಡು-ಅಮೇರಿಕಗಳಲ್ಲಿ ಟೆಲಿವ್ಹಿಜನ್ ಸ್ವಾರಂಭವಾದ ಯುದ್ಧವು ಅಡ್ಡಬಾರದೆ ಇದ್ದರೆ ಇದರ ಪ್ರಗತಿಯು ಬಹಳ ಮಟ್ಟಿಗೆ ಆಗಬಹುದಾಗಿದ್ದಿತು; ಆದರೆ ಸಂಶೋಧನ ಮಾತ್ರ ನಡೆದೇ ಇದೆ.

ಕ್ರಿ. ಪ. ೧೯೪೪ರಲ್ಲಿ ತೆಹೆರಾನಿನಲ್ಲಾದ ತ್ರಿರಾಷ್ಟ್ರ ಪರಿಷತ್ತಿನ ಚಲ. ಚ್ಚಿತ್ರವನ್ನು ತೆಗೆದು, ಕೆಲವು ಗಂಟೆಗಳಲ್ಲಿಯೆ ಅದನ್ನು ವಿಮಾನಿನ ಮೂಲಕ ನ್ಯೂಯಾರ್ಕಿಗೆ ಒಯ್ಯಲಾಯಿತು; ಕೂಡಲೆ ಅಲ್ಲಿಂದ ಟೆಲಿವ್ಹಿಜನ್ನಿನ ಮೇಲೆ ಎಲ್ಲ ಕಡೆಗಳಲ್ಲಿಯೂ ತೋರಿಸಲಾಯಿತು. ಇದರಿಂದ ಸಿನೇಮಾದವರಿಗೆ ಮುಖ ಕೆಳಗೆ ಹಾಕುವ ಪ್ರಸಂಗ ಬಂದಿತು. ಏಕಂದರೆ ತೆಹೆರಾನ್ ಪರಿಷತ್ತಿನ ಫಿಲ್ಮುಗಳನ್ನು ಎಲ್ಲ ಚಲಚ್ಚಿತ್ರ ಮಂದಿರಗಳಲ್ಲಿ ಅಷ್ಟು ಲಗುಬಗೆಯಿಂದ ತೋರಿಸುವುದು ಅವರಿಂದಾಗಲಿಲ್ಲ.

ಟೆಲಿವ್ಹಿಜನ್ನಿನಲ್ಲಿ ಎರಡನೆಯ ಮಹತ್ತ್ವದ ಸಂಗತಿ ನಡೆದು. ದೆಂದರೆ, ಫಾಯರ್-ಸ್ಟೋನ್ ರಬರ್ ವರ್ಕ್ಸ್ ಮತ್ತು ಲಿವ್ಹರ್ ಬ್ರದರ್ಸ್ ಎಂಬ ದೊಡ್ಡ ಕಂಪನಿಯವರು, ಪ್ರತಿವಾರಕ್ಕೊಮ್ಮೆ ಟೆಲಿವ್ಹಿಜನ್ನಿನ ಮೂಲಕ ಜನರ ಮನರಂಜನೆ ಮಾಡುವ (ಅದರಲ್ಲಿಯೆ ತಮ್ಮ ಕಂಪನಿಗಳ ಪ್ರಚಾರ ಕಾರ್ಯ ಮಾಡುವ) ಕಾರ್ಯಕ್ರಮವನ್ನು ಕೈಕೊಂಡುದು.

ಟೆಲಿವ್ಹಿಜನ್ನಿನ ಭವಿಷ್ಯತ್ತಿನಲ್ಲಿ ಆಶಾದಾಯಕವಾದ ಮೂರನೆಯ ಸಂಗತಿಯೆಂದರೆ ಡಾ. ಪಾಮರ್ ಕ್ರೆಗ್ ಎಂಬ ಅಮೇರಿಕನ್ ಶಾಸ್ತ್ರಜ್ಞನು ಮಾಡಿದ ಹೊಸ ಶೋಧ. ಟೆಲಿವ್ಹಿಜನ್ನಿನ ದೊಡ್ಡ ತೊಂದರೆಯೆಂದರೆ ದೂರದ ಅಂತರಗಳಲ್ಲಿ ಕಾರ್ಯಕ್ರಮಗಳನ್ನು ಕಳುಹುವುದಕ್ಕೆ ಸಾಧ್ಯವಿಲ್ಲ. ಆದು ಈಗ ಡಾ. ಕ್ರೆಗ್ ಅವರ ಸಂಶೋಧನದ ಮೂಲಕ ಸಾಧ್ಯವಾಗುವುದಿದೆ. ಡಾ. ಕ್ರೆಗ್ ಅವರ ಹೊಸ ಪದ್ಧತಿಯಂತೆ ಟೆಲಿಫೋನಿನ ತಂತಿಗಳ ಮೂಲಕ ಟೆಲಿವ್ಹಿಜನ್ನಿನ ಕಾರ್ಯಕ್ರಮಗಳನ್ನು ಕಳುಹಿಸಲು ಶಕ್ಯವಾಗುವುದು, ನಮಗೆ ಬೇಕಾದಷ್ಟು ದೂರ ಟೆಲಿವ್ಹಿಜನ್ನನ್ನೂ ಕಳುಹಬಹುದು.

ಅಮೇರಿಕನ್ ಕಾರಖಾನೆದಾರರು, ಕೇವಲ ಯುದ್ಧವು ಸಂಪೂರ್ಣ ನಿಲ್ಲುವ ದಾರಿ ಕಾಯುತ್ತಿರುವರು. ಯುದ್ಧ ನಿಂತೊಡನೆ ಕೆಲವು ದಿನಗಳಲ್ಲಿಯೆ ಒಂದರಿಂದ ಮತ್ತೊಂದೂಪಾಯಿಯಲ್ಲಿ ಟೆಲಿವ್ಹಿಜನ್ನನ್ನು ಕೊಂಡುಕೊಳ್ಳಬಹುದು. ನಾವು ಕಾರ್ಯಕ್ರಮಗಳನ್ನು ನೋಡುವ ಪರದೆಯು ಕಡಿಮೆಯೆಂದರೆ ೪×೧೦ ಇಂಚು ಮತ್ತು

* ಮೂಲ ಇಂಗ್ಲಿಷ್ ಲೇಖನವನ್ನು ಶ್ರೀ. ಬಿ. ಎಸ್. ಜೋಶಿ ಬಿ. ಎಸ್. ಸಿ. ಮುಂಬಯಿ ಅವರು ಕನ್ನಡಿಸಿರುವರು. ಸಂ. ಜ.

ಹೆಚ್ಚೆಂದರೆ ೨೦×೨೪ ಇಂಚು ಉದ್ದಗಲತೆಯುಳ್ಳದ್ದಿರುವುದು. ಮತ್ತು ಚಲಚ್ಚಿತ್ರಗೃಹಗಳಲ್ಲಿಯಂತೆ ಸ್ವಚ್ಛವಾದ ಮತ್ತು ಸ್ಪಷ್ಟವಾದ ಚಿತ್ರಗಳನ್ನು ನಾವು ಕಾಣಬಹುದು.

ಯುದ್ಧ ಮುಗಿದೊಡನೆ ಅಮೇರಿಕನರ ಮನೆಗಳಲ್ಲಿ ಮೋಟರು, ಟೆಲಿಫೋನು, ರೆಫ್ರಿಜರೇಟರುಗಳ ಸಂಗಡ ಒಂದು ಟೆಲಿ-ಸೆಟ್ಟನ್ನೂ ನಾವು ನೋಡಬಹುದು.

ಈ ಟೆಲಿವ್ಹಿಜನ್ನಿನ ಮೇಲೆ ಯಾವ ಕಾರ್ಯಕ್ರಮಗಳನ್ನು ತೋರಿಸಬಹುದಾಗಿದೆಯೆಂಬ ಕಲ್ಪನೆಯು ನಿಜವಾಗಿಯೂ ಮನೋರಂಜಕವಾಗಿದೆ. ಸುದ್ದಿ ಮತ್ತು ಆಟಪಾಟಗಳಿಗೆ ಪ್ರಾಧಾನ್ಯ ಸಿಕ್ಕುವ ಆಶೆಯಿದೆ. 'ಸಂಗತಿಗಳು ಸಂಭವಿಸುತ್ತಿರುವುದನ್ನೂ — ಇತಿಹಾಸವು ನಿಮ್ಮ ಕಣ್ಣೆದುರು ನಡೆಯುತ್ತಿರುವುದನ್ನೂ — ಪ್ರತ್ಯಕ್ಷವಾಗಿ ನೋಡಿ!' ಎಂಬ ಜಾಹೀರಾತುಗಳನ್ನು ಟೆಲಿ-ನೆಟ್ಟಿನವರು ಕೊಡುವರು. ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಭಾಷಣವನ್ನು, ಸುಂದರವಾದ ವೈಕ್ಕಟ್ಟನ ಅಯ್ಯರರ ದಿನಪ ಲಂಗಸಾಧನೆಯನ್ನು, ಸಿದ್ಧಾರೂಢರ ಜಾತ್ರೆಯನ್ನು, ಜನರಿಂದ ಕಿಕ್ಕಿರಿದು ತುಂಬಿದ ಕ್ರಿಕೆಟ್ ಪಂದ್ಯಾಟಗಳನ್ನೂ ಫಿಲ್ಮಿನ ಮೇಲೆ ತೆಗೆದುಕೊಂಡು, ಕೆಲವು ತಾಸುಗಳಲ್ಲಿಯೆ ಟೆಲಿವ್ಹಿಜನ್ನಿನ ಮೇಲೆ ಪ್ರತಿಯೊಂದು ಮನೆಮನೆಗೂ — ಧಾರವಾಡದ ಶ್ರೀನಿವಾಸ ಕುಲಕರ್ಣಿಯವರಲ್ಲೂ — ಬೆಳಗಾಂವಿಯ ಪುರೋಹಿತ ರಾಮರಾಯರಲ್ಲೂ, ವಿಜಾಪುರದ ಕ್ರಷ್ಣಾದಾಜಾರ್ಯಗಲಗಲಿಯವರಲ್ಲೂ, ಮೈಸೂರಿನ ಕೆ. ಸುಬ್ರಹ್ಮಣ್ಯಶಾಸ್ತ್ರಿಗಳಲ್ಲೂ — ಒಮ್ಮೆಲೆ ತೋರಿಸಬಹುದು!

ಕಾರ್ಯಕ್ರಮಗಳು ನಡೆಯುತ್ತಿರುವಾಗ, ಟೆಲಿವ್ಹಿಜನ್ ಸೆಟ್ಟಿನ ಮೇಲೆ ಅವುಗಳನ್ನು ಕೂಡಲೆ ಕಳುಹಲು ಬರುವುದಂತೂ ಸರಿಯೇ ಆದರೆ ಇದರ ಬದಲಾಗಿ, ಆ ಕಾರ್ಯಕ್ರಮವನ್ನು ಒಂದೇ ವೇಳೆಗೆ ಬೇರೆ ಬೇರೆ ಥಿಯೇಟರುಗಳಲ್ಲಿಯೂ ಕುಳಿತು ನೋಡಬಹುದು. ಅಮೇರಿಕೆಯಲ್ಲಿ ಒಂದು ಬೊಕ್ಸಿಂಗ್ ಟೂರ್ನಾಮೆಂಟನ್ನು ಹೀಗೆ ಬೇರೆ ಬೇರೆ ಕಡೆಗಳಲ್ಲಿ ತೋರಿಸಲಾಯಿತು.

ಮೊದಲಿಗೆ ಚಲಚ್ಚಿತ್ರಗಳು ಪ್ರಾರಂಭವಾದಾಗ, ಕೇವಲ ನಾಟಕದ ಅನುಕರಣವೇ ನಮಗೆ ಕಂಡುಬರುತ್ತಿತ್ತು: ಪ್ರೇಕ್ಷಕರ ಎದುರು ನಿಂತು ಒಂದೇಸವನೆ ಕುಟ್ಟುವ ಸಂಗೀತ ಮತ್ತು ಒಂದರ ಹಿಂದೊಂದು ಬರುವ ಪ್ರವೇಶಗಳು ಇವು ನಮಗೆ ಇಂದಿನ ಚಲಚ್ಚಿತ್ರಗಳಲ್ಲಿ ಕಾಣಲಾರವು; ಏಕೆಂದರೆ ಚಲಚಿತ್ರದ್ದೊಂದು ವಿಶಿಷ್ಟ ತಂತ್ರವೇ ನಿರ್ಮಾಣವಾಗಿದೆ ಅದರಂತೆಯೆ ಟೆಲಿವ್ಹಿಜನ್ನಿನದೂ ಒಂದು ತಂತ್ರ ನಿರ್ಮಾಣವಾಗಬಹುದು.

ಟೆಲಿವ್ಹಿಜನ್ನು ಬರುವುದರಿಂದ ರೇಡಿಯೋ ನಿರ್ಮೂಲವಾಗಬಹುದೆಂಬ ಗಾಬರಿಗೆ ಮಾತ್ರ ಕಾರಣವಿಲ್ಲ. ಚಲಚ್ಚಿತ್ರವು ಕೂಡ ರಂಗಭೂಮಿಯನ್ನು ಪೂರ್ಣವಾಗಿ ನಾಶಗೊಳಿಸಲಾರದು. ಸಿನೇಮಾ ಬಂದಂದಿನಿಂದ ನಾಟಕಗಳ ಜೋರು ಕಡಿಮೆಯಾಗಿದೆಯೆಂಬುದು ನಿಜವಿದ್ದರೂ, ಯಾವಾಗಲಾದರೂ ಒಮ್ಮೆ ಊರಿಗೆ ಬಂದ ನಾಟಕಕ್ಕೆ ನಾವು ಗುಂಪೆ-ಗುಂಪಾಗಿ ಹೋಗುವೆವೆಂಬುದೂ ಸುಳ್ಳಲ್ಲ. 'ಆಕಾಶವಾಣಿ' ಮತ್ತು 'ಆಕಾಶದೃಷ್ಟಿ' ಅಥವಾ ರೇಡಿಯೋ ಮತ್ತು ಟೆಲಿವ್ಹಿಜನ್ ಇವುಗಳ ಸಂಬಂಧವೂ ಹಾಗೆಯೆ ಉಳಿಯಬಹುದು. ಒಬ್ಬಳು

ಪ್ರೀತಿಯ ಹೆಂಡತಿ, ಮತ್ತೊಬ್ಬಳು ಪ್ರೀತಿಯವಳಲ್ಲ; ಆದರೆ ಇಬ್ಬರೂ ರಾಜನಿಗೆ ಬೇಕಾದವರೆ.

ತಿರುಗಿ ಕೇಳಿದರೆ ರೇಡಿಯೋದಿಂದ ಒಂದು ದೃಷ್ಟಿಯಿಂದ ದೊಡ್ಡ ಲಾಭವೇ ಇದೆ. ಹೊರಗಿನ ವರಾಂಡದಲ್ಲಿ ಗೋವಿಂದರಾಯರು 'ಸಂಯುಕ್ತ ಕರ್ನಾಟಕ' ಓದುತ್ತಿರುವರು, ಸರಸ್ವತಿಬಾಯಿಯವರು ಒಳಕ್ಕೆ ಅಡಿಗೆ ಮಾಡುತ್ತಿರುವರು, ಮತ್ತು ಇತ್ತಕಡೆ ರೇಡಿಯೋ ಪ್ರಾರಂಭವಾಗಿರುವುದು; ಆದರೆ ಟೆಲಿವ್ಹಿಜನ್ನಿನದು ಮಾತ್ರ ಹಾಗಲ್ಲ. ಯಾವಾಗಲೂ ಅದರ ಕಡೆಗೆ ನಾವು ಲಕ್ಷ್ಯಕೊಟ್ಟು ಕುಳಿತುಕೊಳ್ಳಬೇಕಾಗುವುದು. ಅದಕ್ಕಾಗಿ ಇವೆರಡರ ಮಿಶ್ರಕಾರ್ಯಕ್ರಮವನ್ನು ಮಾಡುವುದು ಸರಿಯಾಗುವುದು. ಸರೋಜಿನಿದೇವಿಯವರು ಅಡಿಗೆ ಮಾಡುತ್ತಿರುವಾಗ ಮುಂಜಾನೆ ಎಂಟುಗಂಟೆಗೆ ಗಂಗೂಬಾಯಿಯ ಸಂಗೀತ ನಡೆದಿರುವುದು ರೇಡಿಯೋದ ಮೇಲೆ ಆದರೆ ೧೫ ಗೆ ಸರಳ ಜೇನ್ ಪಟೇಲಳು ಮಾವಿನ ಹಣ್ಣಿನ ಕೇಕ್ ಮಾಡುವ ವಿಧಾನವನ್ನು ಪ್ರತ್ಯಕ್ಷವಾಗಿ ತೋರಿಸುವರು ಎಂದು ನೆನಪಾದೊಡನೆ ಸರೋಜಿನಿದೇವಿ ಟೆಲಿವ್ಹಿಜನ್ನಿನ ಎದುರು ಲಗುಬಗೆಯಿಂದ ಬರುವರು. ಅವರು ಮುಗಿದೊಡನೆ ಮತ್ತೆ ತಮ್ಮ ಕಾರ್ಯಕ್ರಮಕ್ಕೆ ತೆರಳುವರು. ಸಂಜೆಗೆ ಚಿಕ್ಕಮಕ್ಕಳ ಸಲುವಾಗಿ ಲಂಕಾದಹನದ ಇಲ್ಲವೆ ಭಸ್ಮಾಸುರನ ಕಥೆಯನ್ನು ಚಿತ್ರರೂಪದಿಂದ ಟೆಲಿಸೆಟ್ಟಿನ ಮೇಲೆ ತೋರಿಸಬಹುದು. ಇಂತು ದಿನವಲ್ಲಿ ಎರಡು ಮೂರು ಕಾರ್ಯಕ್ರಮಗಳನ್ನೇ ಟೆಲಿಸೆಟ್ಟಿನ ಮೇಲೆ ಇಟ್ಟುಕೊಳ್ಳಬಹುದು.

ಇಂದು ಅಮೇರಿಕೆಯಲ್ಲಿ ಸುಮಾರು ೧೦೦ ಟೆಲಿವ್ಹಿಜನ್ ಸ್ಟೇಶನ್ನುಗಳಲ್ಲಿ ಪ್ರತ್ಯಕ್ಷವಾಗಿ ಕೆಲಸ ನಡೆದಿದೆ. ಮತ್ತು ಸಮೀಪದ ಊರುಗಳಿಗೆ ಈ ಕಾರ್ಯಕ್ರಮವನ್ನು ತೋರಿಸಲಾಗುತ್ತಿದೆ. ಯುದ್ಧ ನಿಂತೊಡನೆ ದೊಡ್ಡ ಪ್ರಮಾಣದ ಮೇಲೆ ಕೆಲಸ ಮಾಡಬಹುದೆಂದು ಅಮೇರಿಕೆಯ ಆಶೆಯಿದೆ.

ತಂತಿಯ ನಿನಾ ಯಂತ್ರದಿಂದ ದೂರದ ವರೆಗೆ ಧ್ವನಿಯನ್ನು ಕಳುಹುವ ಶಾಸ್ತ್ರವು ಎಂದರೆ ರೇಡಿಯೊ ಶಾಸ್ತ್ರವು ಪೂರ್ಣತೆಯನ್ನು ಹೊಂದುತ್ತಿರುವಾಗಲೇ, ಶಾಸ್ತ್ರಜ್ಞರು ತಂತಿಯಿಲ್ಲದ (wireless) ಯಂತ್ರಗಳ ಮೂಲಕ ಚಿತ್ರಗಳನ್ನು ಕಳುಹುವ ಪ್ರಯತ್ನವನ್ನು ಸಾವಕಾಶವಾಗಿ ಪ್ರಾರಂಭಿಸಿದ್ದರು. ಒಂದು ಸ್ವಚ್ಛವಾದ ಚಿತ್ರವನ್ನು ಇಲ್ಲವೆ ಫೋಟೋವನ್ನು ವಿದ್ಯುಚ್ಛಕ್ತಿಯಲ್ಲಿ ರೂಪಾಂತರಿಸಿ, ಅದನ್ನು ತಂತಿಯಿಲ್ಲದ ಯಂತ್ರದಿಂದ ಕಳುಹುವ ಕೆಲಸವು ಟೆಲಿವ್ಹಿಜನ್ನಿನ ರೀತಿಯಿಂದ ಸುಲಭವಾಗಿದೆ. ಟೆಲಿವ್ಹಿಜನ್ನಿನಲ್ಲಿ ಇದೇ ಕೆಲಸವು ಬಹು ಬೇಗ ನಡೆಯಬೇಕಾದುದು. ಪ್ರತಿಯೊಂದು ಚಿತ್ರವನ್ನು ಸಾವಿರಾರು ಬಿಂದುಗಳಲ್ಲಿ ವಿಭಾಗಿಸಿ, ಪ್ರತಿಯೊಂದು ಬಿಂದುವನ್ನು ವಿದ್ಯುಚ್ಛಕ್ತಿಯಲ್ಲಿ ಪರಿಣಮಿಸಲಾಗುತ್ತದೆ (Transferred into electrical Energy) ಮತ್ತು ಇಂತಹ ೩೦ ಚಿತ್ರಗಳನ್ನು ಪ್ರತಿ ಸೇಕಂದಿಗೆ ವಿದ್ಯುಚ್ಛಕ್ತಿಯಲ್ಲಿ ಪರಿಣಮಿಸಬೇಕಾಗುತ್ತದೆ. ಸಿನೇಮಾದಂತೆಯೇ ಬಹು ವೇಗದಿಂದ ಈ ಚಿತ್ರಗಳು ನಮ್ಮ ಕಣ್ಣೆದುರು ಹಾಯ್ದು ಹೋದಾಗ, ಪ್ರತ್ಯಕ್ಷ ಚಿತ್ರಗಳು ಓಡಾಡಿದಂತೆ ನಮಗೆ ಭಾಸವಾಗುತ್ತದೆ. (The persistance of vision) ಇವರ ಮೇಲಿಂದ ಟೆಲಿವ್ಹಿಜನ್ನಿನ ಕೆಲಸ ಎಷ್ಟು ಕಠಿಣವಾದದ್ದೆಂದು

ಯೊಂಬುದನ್ನು ತಿಳಿಯಬಹುದು. ಈಗಿನ ಟೆಲಿವ್ಹಿಜನ್ನಿನಲ್ಲಿ ಪ್ರತಿಯೊಂದು ಚಿತ್ರವನ್ನು ೧೬೦೦೦೦ ಬಿಂದುಗಳಲ್ಲಿ ವಿಭಾಗಿಸಲಾಗುವುದು! ಪ್ರತಿ ಸೆಕಂದಿಗೆ ಎಷ್ಟೋ ಲಕ್ಷ ಮೈಲುಗಳ ವೇಗದಿಂದ ಹೋಗುವ ಇಲೆಕ್ಟ್ರಾನ್‌ಗಳ ಮೂಲಕ ಇದು ಸಾಧ್ಯವಾಗಿದೆ.

ಟೆಲಿವ್ಹಿಜನ್ನನ್ನೂ ಚಿಕ್ಕ ತರಂಗಗಳ (Short waves) ಮೂಲಕ ಕಳುಹಿಸಬೇಕಾಗುವುದರಿಂದ, ೨೦ ಮೈಲುಗಳಿಗಿಂತ ದೂರ ಅವು ಹೋಗುವುದಿಲ್ಲ. ಆದರೆ ಕಳುಹಿಸುವವ ಮತ್ತು ನೋಡುವವ ಇಬ್ಬರಿರ್ವರೂ ಬಹಳ ಎತ್ತರದ ಮೇಲೆ ಹೋದರೆ, ಈ ವಿದ್ಯುತ್ಕಿರಣಗಳ ಮೂಲಕ ೨೦೦ ಮೈಲುಗಳ ವರೆಗೂ ತರಂಗಗಳನ್ನು ಕಳುಹಲು ಸಾಧ್ಯವಾಗುತ್ತದೆಂದು ಕಂಡುಬಂದಿದೆ. ಅಮೇರಿಕೆಯಲ್ಲಿ ಹೊಸತಾಗಿಯೇ ಮಾಡಲಾದ ಒಂದು ಪ್ರಯೋಗದಲ್ಲಿ, ೪ ಮೈಲು ಎತ್ತರದ ಮೇಲೆ ಒಂದು ಬಲೂನನ್ನೂ ಸಂಗಡ ಒಂದು ಟೆಲಿಸೆಟ್ಟನ್ನೂ ಒಯ್ಯಲಾಯಿತು ೨೦೦ ಮೈಲು ದೂರವಿದ್ದ ನ್ಯೂಯಾರ್ಕ್ ಪಟ್ಟಣದಿಂದ ಟೆಲಿಕಾಸ್ಟ್ ಮಾಡಲಾದ ಒಬ್ಬ ಮನುಷ್ಯನ ಚಿತ್ರವು, ಅಲ್ಲಿ ಸ್ಪಷ್ಟವಾಗಿ ಮೂಡಿತ್ತು ಮತ್ತು ಬಲೂನಿನಲ್ಲಿ ಅವನ ಫೊಟೋ ತೆಗೆದುಕೊಳ್ಳಲು ಶಕ್ಯವಾಯಿತು.

ತಂತಿಯಿಲ್ಲದ ಯಂತ್ರಗಳಿಂದ ಬಂದ ರೇಡಿಯೋ ಫೋಟೋಗಳನ್ನು ಯಾವ ಬಗೆಯಿಂದ ಕಳುಹಲಾಗುವುದೋ ಅದೇ ತತ್ತ್ವವ ಉಪಯೋಗವನ್ನು ಬೇರೆಡೆಗಳಲ್ಲಿ ಮಾಡಿಕೊಳ್ಳುವರು. ಉದಾ:— ಹೆಬ್ಬಟ್ಟಿನ ಗುರುತುಗಳನ್ನು ಕೂಡಲೆ ಕಳುಹುವುದಕ್ಕಾಗಿ ಪೋಲೀಸು ಖಾತೆಯಲ್ಲಿ ಇದರ ಉಪಯೋಗವಾಗಬಹುದು.

ತಂತಿಯಿಲ್ಲದ ವರ್ತಮಾನಪತ್ರವು ಆಶ್ಚರ್ಯಕರವಾದ ಒಂದು ಹೊಸ ಶೋಧವಿದೆ. ತಂತಿಯಿಲ್ಲದೆ ಕಳುಹಿದ ಸುದ್ದಿಯನ್ನು ಧ್ವನಿಶಕ್ತಿಯಲ್ಲಿ ರೂಪಾಂತರಿಸದೆ, ರೇಡಿಯೋಕ್ಕೆ ಹೊಂದಿಯೇ ಜೋಡಿಸಿದ ಒಂದು ಯಂತ್ರದೊಳಗಣ ಕಾಗದದ ಮೇಲೆ ಮೂಡಿಸಲಾಗುವುದು. ಇಂತು, ಸುದ್ದಿಗಳನ್ನು ಕೇಳುವ ತೊಂದರೆಯನ್ನು ತಪ್ಪಿಸಿ, ನಮಗೆ ಒಂದು ಕಾಗದದ ಮೇಲೆ ಎಲ್ಲ ಸುದ್ದಿಗಳನ್ನೂ ಬರೆದುದೇ ದೊರೆಯುವುದು. ಒಂದು ತಾಸಿಗೆ ಸುಮಾರು ೫ ಫೂಟು ಉದ್ದವಾದ ಕಾಗದವು ಮುದ್ರಿಸಿ ದೊರೆಯುವುದು. ಈಗ ಈ ಸುದ್ದಿಗಳು ವರ್ತಮಾನಪತ್ರಕ್ಕಿಂತ ಬೇಗನೆ ನಮಗೆ ದೊರೆಯುವುವೆಂಬುದನ್ನು ಬೇರೆ ಹೇಳುವುದು ಬೇಡ. ರೇಡಿಯೋಕ್ಕೆ ಹೊಂದಿದ ಈ 'ವರ್ತಮಾನಪತ್ರ-ಯಂತ್ರ' ವು ಅಮೇರಿಕೆಯಲ್ಲಿ ೧೫೦ ರೂಪಾಯಿಗೆ ದೊರೆಯುವುದು. ಇನ್ನು ಕಲವು ವರುಷಗಳಲ್ಲಿಯೇ ಕೆಲವು ವರ್ತಮಾನಪತ್ರಗಳಿಗೆ 'ತಂತಿಯಿಲ್ಲದ ವರ್ತಮಾನಪತ್ರ'ದ ಚಂದಾದಾರರೂ ಸಿಕ್ಕಬಹುದೇನೊ ಅಪೇಕ್ಷಿಸಲಾಗಿದೆ:

ತಂತಿಯಿಲ್ಲದೆ ಕೆಲವೊಂದು ಅಂತರದ ವರೆಗೆ ಹಡಗಗಳನ್ನೂ ವಿಮಾನಗಳನ್ನೂ ನಡೆಯಿಸುವುದು ಶಾಸ್ತ್ರಜ್ಞರಿಗೆ ಈ ಮೊದಲೆ ಸಾಧ್ಯವಾಗಿದ್ದಿತು. ಜರ್ಮನಿಯು ಹಾರುವ ಬಾಂಬುಗಳು ವಿನಾತಂತಿ— ಮತ್ತು ಬೆಂಕಿ-ಬಾಣಗಳ ಸಾಹಾಯ್ಯದಿಂದ ನಡೆಯುವುವು. ಹೋದ ಸಲಿವತ್ತು ವರುಷಗಳಲ್ಲಾದ ಮತ್ತು ಇಂದು ನಮ್ಮ ಕಣ್ಣೆದುರು ನಡೆಯುತ್ತಿರುವ ಯಾಂತ್ರಿಕಜ್ಞಾನದ ರಭಸದ ಓಟವನ್ನು ನೋಡಿದೊಡನೆ ವಿನಾತಂತಿ, ರೇಡಿಯೋ, ಟೆಲಿವ್ಹಿಜನ್ ಮತ್ತೂ ಇಂತಹ ಎಷ್ಟೋ ಶೋಧಗಳ ಭವಿತವ್ಯದ ವಿಲಕ್ಷಣವಾದ ಮತ್ತು ಆಶ್ಚರ್ಯಕರವಾದ ಕನಸುಗಳು ನಮ್ಮ ಕಣ್ಣೆದುರು ಕಟ್ಟುತ್ತವೆ!

ವಿನಾತಂತಿ ಅಥವಾ ವಾಯರ್‌ಲೆಸ್ ಎಂದರೇ ರೇಡಿಯೋ ಎಂದು ನಾವು ಒಟ್ಟಿಗೆ—ಒಂದು ಮಾತಿನಲ್ಲಿ—ಹೇಳಬಿಡುವೆವು. ಆದರೆ ಇನ್ನು ಕೆಲವು ವರುಷಗಳ ನಂತರ ಒಬ್ಬರೊಬ್ಬರೊಡನೆ ಮಾತನಾಡುವುದಕ್ಕೂ ವಿನಾತಂತಿಯ ಉಪಯೋಗವನ್ನು ದೊಡ್ಡ ಪ್ರಮಾಣದ ಮೇಲೆ ಮಾಡಬಹುದು. ಆಗ ವಿನಾತಂತಿಯ ಮೂಲಕ ರೇಡಿಯೋ ವಿನಿಂದಲೇ ಆಗಲಿ, ಟೆಲಿವ್ಹಿಜನ್ನಿನಿಂದಲೇ ಆಗಲಿ ಕಾರ್ಯಕ್ರಮಗಳನ್ನು ಕಳುಹುವುದನ್ನು ನಿಲ್ಲಿಸಬೇಕಾದೀತು ಮತ್ತು ಆ ಕಾರ್ಯಕ್ರಮಗಳನ್ನು ಇಲೆಕ್ಟ್ರಿಕ್, ಟೆಲಿಫೋನ್ ಇಲ್ಲವೆ ಗ್ಯಾಸಿನ ತಂತಿಗಳ ಮೂಲಕ ಇಲ್ಲವೆ ಹೊಸದಾಗಿ ಹಾಕಿದ ತಂತಿಗಳ ಮೂಲಕ ಕಳುಹಬೇಕಾದೀತು. ಇದಕ್ಕೆ ಕಾರಣವೆಂದರೆ ವಿನಾತಂತಿಯ ಮೂಲಕ ಉತ್ಪನ್ನವಾಗುವ ಇಲೆಕ್ಟ್ರೊ-ಮೆಗ್ನೆಟಿಕ್ ತರಂಗಗಳ ಗದ್ದಲವು ಆಕಾಶದಲ್ಲಿ ಅಷ್ಟು ಭಯಂಕರವಾಗಬಹುದು. ಆದರಿಂದ ನಮಗೆ ವಿನಾತಂತಿಯ ಮೂಲಕ ಕಳುಹಬೇಕಾದ ಸುದ್ದಿಗಳನ್ನು ತಂತಿಯ ಮುಖಾಂತರವಾಗಿಯೆ ಕಳುಹಬೇಕಾದೀತು! ಆಗ ಎಂದರೆ ಇನ್ನೂ ಸ.ಮಾರು ೫೦ ವರುಷಗಳ ನಂತರ—ಪ್ರತಿಯೊಂದು ಮನೆಗೆ, ಈಗ ನೀರಿನ, ಇಲೆಕ್ಟ್ರಿಸಿಟಿಯ ಮತ್ತು ಗ್ಯಾಸಿನ ನಳಗಳಿದ್ದಂತೆ ರೇಡಿಯೋ-ಟೆಲಿವ್ಹಿಜನ್ನಿನ ನಳಗಳನ್ನೂ ತೆಗೆದುಕೊಳ್ಳಬೇಕಾದೀತು; ಮತ್ತು ಈ ನಳಗಳ (ಜೋಟಿ) ಮೂಲಕ ಸಂಗೀತ, ವ್ಯಾಖ್ಯಾನ, ಮತ್ತು ಸಿನೇಮಾ-ನಾಟಕಗಳ ಸಚಿತ್ರ ಕಾರ್ಯಕ್ರಮಗಳು ನೋಡಲು ಸಿಕ್ಕಬಹುದು.

ಪಾರಿಯ ಮೇಲೆ ಇಂದು ಪೋಸ್ಟಿನ ಡಬ್ಬಿಗಳನ್ನಿಟ್ಟಂತೆ ಅಂದು ದೊಡ್ಡ ದೊಡ್ಡ ಟೆಲಿಸೆಟ್ಟುಗಳನ್ನು—ಇಲ್ಲನೆ ಮಾತನಾಡುವ ವರ್ತಮಾನಪತ್ರಗಳನ್ನು ನಿಲ್ಲಿಸಲಾದೀತು! ಮತ್ತು ಆದರಲ್ಲಿ ಮನುಷ್ಯನು ಮಾತನಾಡುವುದನ್ನು ಕಾಣಬಹುದು. ಇದರಿಂದ ಯಾರ ಹತ್ತರ ತಮ್ಮ ಜೇಬಿನಲ್ಲಿ ಇಲ್ಲವೆ ಮೋಟರಿನಲ್ಲಿ ಇಲ್ಲವೆ ವಿಮಾನದಲ್ಲಿ ರೇಡಿಯೋ ನೆಟ್ಟುಗಳು ಇರುವುದಿಲ್ಲವೋ ಅಂಥವರು ಅಲ್ಲಿ ಒಂದೆರಡು ಗಳಿಗೆ ಪಾರಿಯ ಮೇಲೆ ನಿಂತು, ಎಲ್ಲ ವರ್ತಮಾನವನ್ನು ಕೇಳಬಹುದು. ಅಂದಿನ ಎಲ್ಲ ಜಾಹೀರಾತುಗಳೂ ಮಾತನಾಡುವ, ಹರಿದಾಡುವ, ಮತ್ತು ಕುಣಿದಾಡುವ ಚಿತ್ರಪಟಗಳೇ ಆದಾವು! ಬರಿ ಮುದ್ರಿಸಿದ ಜಾಹೀರಾತುಗಳನ್ನು ಅಂದು ಕೇಳುವವರಾರು? ಜೇಬಿನಲ್ಲಿ ರೂಕ್ಯದ ಪಾಕೇಟುಗಳನ್ನಿಟ್ಟಂತೆ ನಾಳೆ ನಾವು ರೇಡಿಯೋಗಳನ್ನು ಇಟ್ಟುಕೊಳ್ಳಬೇಕಾಗಬಹುದು; ಮತ್ತು ಇಂದು ಜನರು ಕೈಗೆ ಗಡಿಯಾರಗಳನ್ನು ಕಟ್ಟುವಂತೆ ನಾಳೆಯ ಜನರು, ವಿನಾತಂತಿಯ ಯಂತ್ರಗಳನ್ನೂ ಕೈಗೆ-ಕಟ್ಟಿ ಜಗತ್ತಿನಲ್ಲಿಯ ಯಾವುದೇ ಮನುಷ್ಯನ ಸಂಗಡ ಮಾತನಾಡಬಹುದು. ಇವೆಲ್ಲ ಶೋಧಗಳನ್ನು ನೋಡುವುದಕ್ಕೆ ಬಹಳ ದಿನ ಕಾಯುವುದಕ್ಕೆ ಬೇಡ. ಥರ್ಮಿಯಾನಿಕ್ ವ್ಹಾಲ್ವ್ (Thermianic Valve) ನ ಶೋಧವಾದ ನಂತರ ರೇಡಿಯೋದ ಪ್ರಗತಿ ಕಣ್ಣು ಮುಚ್ಚಿ ಕಣ್ಣು ತೆರೆಯುವುದರಲ್ಲಾಯಿತೋ ಏನೋ ಎಂಬಂತಾಯಿತು. ಇನ್ನು ಮುಂದಿನ ಯಾಂತ್ರಿಕ ಶೋಧಗಳು ಅದಕ್ಕೂ ವೇಗದಿಂದ ನಡೆಯುವುವು.

ವಿನಾತಂತಿಯ ಮೂಲಕ ಧ್ವನಿ ಮತ್ತು ಚಿತ್ರಗಳನ್ನು ದೂರದ ವರೆಗೆ ಕಳುಹುವ ಶಾಸ್ತ್ರವು ಪೂರ್ಣತೆಯನ್ನು ಪಡೆದೊಡನೆ, ತಂತಿಯಿಲ್ಲದೆ ಸುಗಂಧವನ್ನೂ ಕಳುಹುವ ಪ್ರಯತ್ನಗಳಾಗಬಹುದು. ತೋಟದಲ್ಲಿಯ ಹೂವಿನ ಸುಗಂಧ, ಇಲ್ಲವೆ ಅತ್ತರಿನ ಸುವಾಸನೆ ಇವೆಲ್ಲವುಗಳೂ ಟೆಲಿವ್ಹಿಜನ್ನಿನ ಚಿತ್ರ ನೋಡುವಾಗಲೇ ನಮಗೆ ದೊರೆಯುವುವು.

ಇವಕ್ಕೂ ಮುಂದಿನ ಹೆಜ್ಜೆಯೆಂದರೆ ವಿನಾತಂತಿಯಿಂದ ಸ್ಪರ್ಶವನ್ನು ಕಳುಹುವುದು! ಇದರಲ್ಲೂ ಮೊದಲಿನ ಪ್ರಯೋಗಗಳು ಆಯಶಸ್ವಿಯಾಗಬಹುದು. ಮೆತ್ತಗಿನ ರೇಶಿಮೆಯ ಸ್ಪರ್ಶವನ್ನು ಕಳುಹಿದಾಗ, ಬಿರುಸಾದ ಕಬ್ಬಿಣದ ಸ್ಪರ್ಶವಾಗಬಹುದು ಮೊದಲನೆಯ ಪ್ರಯತ್ನದಲ್ಲಿ; ಆದರೆ ಕೊನೆಗೆ ಈ ಪ್ರಯೋಗಗಳೂ ಯಶಸ್ವಿಯಾಗಬಹುದೆಂಬುದರಲ್ಲಿ ಸಂಶಯವಿಲ್ಲ

ವಿನಾತಂತಿಯ ಭವಿಷ್ಯತ್ತಿನ ವಿಷಯಲ್ಲಿ ಇದೆಲ್ಲ 'ರೇಖಾಮಹಮ್ಮದನ' ಕನಸಿನಂತಿದೆ ಇಲ್ಲವೆ ಬರಿ ಕಲ್ಪನಾ ಸಾಮ್ರಾಜ್ಯವಿದೆ ಎಂದು ಎಷ್ಟೋ ಜನರಿಗೆ ಎನಿಸದೆ ಇರಲಾರದು. ಆದರೆ ನಿಜವಾಗಿಯೂ ಹಾಗೆ ಎನಿಸುವ ಕಾರಣವಿಲ್ಲ. ಬರಿ ನಲವತ್ತು ವರುಷಗಳ ಹಿಂದಿನ ಒಬ್ಬ ಮುದುಕನಿಗೆ ನಾವು ಚಲಚ್ಚಿತ್ರಗಳ ವಿಷಯಕ್ಕಾಗಲಿ ರೇಡಿಯೋದ ವಿಷಯಕ್ಕಾಗಲಿ ಇಲ್ಲವೆ ನಾವು ಅಮೇರಿಕೆಯ ಒಬ್ಬ ಮಿತ್ರನೊಡನೆ ಮಾತನಾಡುವೆವೆಂದಾಗಲಿ ಹೇಳಿದ್ದರೆ ಆ ಮಾತು ನಗೆಗೀಡಾಗುವದು ಸಹಜ.

ಧ್ವನಿ, ಚಿತ್ರಪಟ, ಸುಗಂಧ ಮತ್ತು ಸ್ಪರ್ಶಗಳಾದ ಬಳಿಕ ಶಾಸ್ತ್ರಜ್ಞರು ವಿನಾತಂತಿಯ ಮುಖಾಂತರವಾಗಿ ಯಾಂತ್ರಿಕ ಶಕ್ತಿಯನ್ನೂ ಬೆಳಕನ್ನೂ ಕಳುಹುವ ಕಾರ್ಯದ ಬೆನ್ನುಹತ್ತಬಹುದು ಲಂಡನ್ನಿನಿಂದ ವಿನಾತಂತಿಯ ಮೂಲಕವಾಗಿ ಆಸ್ಟ್ರೇಲಿಯದಲ್ಲಿ ದೀಪಗಳನ್ನು ಹಚ್ಚುವುದು, ಜರ್ಮನಿಯಿಂದ ಇಂಗ್ಲಂಡಿಗೆ ಹಾರುವ ಬಾಂಬುಗಳನ್ನು ಕಳುಹುವುದು ಇವು ಇಂದೇ ಸಾಧ್ಯವಾಗಿವೆ; ಆದರೆ ಈ ರೀತಿಯಿಂದ ವಿನಾತಂತಿಯ ಮೂಲಕ ಮೇಲೆ ಹೇಳಿದ ಸಂಗತಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವದು ಮತ್ತು ವಿನಾತಂತಿಯ ಮುಖಾಂತರ **ಪ್ರತ್ಯಕ್ಷವಾಗಿ** ಪ್ರಕಾಶಶಕ್ತಿಯನ್ನೇ ಅಥವಾ ಯಾಂತ್ರಿಕ ಶಕ್ತಿಯನ್ನೇ ಕಳುಹುವುದರಲ್ಲಿ ಬಹಳೇ ಅಂತರವಿದೆ. **ಪ್ರತ್ಯಕ್ಷವಾಗಿ ಶಕ್ತಿಯನ್ನೇ ಕಳುಹುವುದಕ್ಕೆ ಶಾಸ್ತ್ರಜ್ಞನಿಗೆ ಕೆಲವು ಹೊಸ ತರಂಗಗಳನ್ನೇ** (waves) **ಹುಡುಕಿ ತೆಗೆಯಬೇಕಾದೀತು.** ಇಂದು ರೇಡಿಯೋ ನಿಲ್ದಾಣಗಳಲ್ಲಿ ಕಾರ್ಯಕ್ರಮಗಳನ್ನು ಹೊರಗೆ ಕಳುಹುವಾಗ, ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ಶಕ್ತಿಯನ್ನು ವೆಚ್ಚ ಮಾಡಬೇಕಾಗುವುದೋ ಅದರಲ್ಲಿಯ ಬಹಳೇ ಸ್ವಲ್ಪ ಶಕ್ತಿಯನ್ನು ನಮ್ಮ ಗ್ರಾಹಕದಲ್ಲಿ ತದೆದು ಹಿಡಿಯಲು ಶಕ್ಯವಿದೆ. ಉಳಿದೆಲ್ಲ ಶಕ್ತಿಯು ಆಕಾಶದಲ್ಲಿ ಪಸರಿಸಿ ಹೋಗುವುದು. ಆದರೆ—'ಕೇಂದ್ರಸ್ಥಾನದಿಂದ ಕಳುಹಿದ ಎಲ್ಲ ಶಕ್ತಿಯನ್ನು ತಡೆಹಿಡಿದು ಮನೆಮನೆಗೂ ಹೇಗೆ ಹಂಚಬಹುದು?' ಎಂಬ ಪ್ರಶ್ನೆ ಶಾಸ್ತ್ರಜ್ಞರಿಗೆ ಇನ್ನೂ ಬಿಡಿಸುವುದಾಗಲಿಲ್ಲ.

ವಿನಾತಂತಿಯಿಂದ ಪ್ರಕಾಶವನ್ನು ಕಳುಹುವುದಕ್ಕೆ ಮೊದಲು ಒಂದು ಮಹತ್ತ್ವದ ಪ್ರಶ್ನೆಯನ್ನು ಬಿಡಿಸಬೇಕಾಗಿದೆ ಈಗಿನ ವಿದ್ಯುದ್ದೀಪಗಳಲ್ಲಿ ೯೫% ಶಕ್ತಿಯೆಲ್ಲ ಊಷ್ಣತೆಯ ರೂಪದಿಂದ ಯಾವ ಉಪಯೋಗಕ್ಕೂ ಬಾರದೆ ವೆಚ್ಚವಾಗಿ ಹೋಗುವುದು ಕೇವಲ ೫% ಶಕ್ತಿ ಮಾತ್ರ ಬೆಳಕಿನ ರೂಪದಲ್ಲಿ ಹೊರಬೀಳುವುದು. ವಿದ್ಯುಚ್ಛಕ್ತಿಯ ಎಲ್ಲ ಭಾಗವನ್ನೂ ಪ್ರಕಾಶದಲ್ಲಿಯೇ ರೂಪಾಂತರಿಸಿ, ತಣ್ಣಗಿನ ಪ್ರಕಾಶವನ್ನು ಕೊಡುವುದಕ್ಕೆ ಶಾಸ್ತ್ರಜ್ಞರಿಗೆ ಸಾಧ್ಯವಾದಾಗ ವಿದ್ಯುಚ್ಛಕ್ತಿಯ ವೆಚ್ಚ ಬಹುಮಟ್ಟಿಗೆ ಕಡಿಮೆಯಾಗುವುದಷ್ಟೇ ಅಲ್ಲದೆ, ವಿನಾತಂತಿಯಿಂದ ಪ್ರಕಾಶವನ್ನು ಕಳುಹುವ ಕೆಲಸವೂ ಆಗ ಸುಲಭಸಾಧ್ಯವಾದೀತು.

ವಿನಾತಂತಿಯಿಂದ ಯಾಂತ್ರಿಕಶಕ್ತಿಯನ್ನು ಕಳುಹುವುದಕ್ಕೆ ಸಾಧ್ಯವಾದಾಗ ದಾರಿಯ ಮೇಲಿನ, ಸಮುದ್ರದೊಳಗಿನ ಮತ್ತು ಆಕಾಶದೊಳಗಿನ ಎಲ್ಲ ವಾಹನಗಳನ್ನು ಆ ಶಕ್ತಿಯಿಂದಲೇ ನಡೆಯಿಸಬಹುದು. (ಈ ಯುದ್ಧದ ಕೊನೆಯ ಭಾಗದಲ್ಲಿ ಜರ್ಮನಿಯು ಈ ರೀತಿಯ ಕೆಲವು ಪ್ರಯೋಗಗಳಲ್ಲಿ ಯಶಸ್ವಿಯಾಗಿದೆಯೆಂದು ಹೇಳಲಾಗುತ್ತದೆ.)

ಬಹಳ ದೊಡ್ಡ ಪ್ರಮಾಣದಲ್ಲಿ ವಿನಾತಂತಿಯಿಂದ ಶಕ್ತಿಯನ್ನು ಕಳುಹುವುದರ ಅನಿಷ್ಟ ಪರಿಣಾಮವು ಮನುಷ್ಯನ ಮೇಲೆ ಇಲ್ಲವೆ ವನಸ್ಪತಿಯ ಮೇಲಾಗುವ ಸಂಭವವಿದೆ. ಆದರೆ ಹಾಗಾಗುವುದೆಂದು ಕಂಡುಬಂದರೆ, ಒಂದು ಶಿಷ್ಟ ಮಂಡಲ ನಿಯಮಿಸಿ ಯೋಗ್ಯವಾದ ಉಪಾಯಗಳನ್ನು ಕೈಕೊಳ್ಳಲಾದೀತು. ನಮ್ಮ ಉಡುಪುಗಳಲ್ಲಿಯೆ ಬದಲಾವಣೆ ಮಾಡಿ ಇಲ್ಲನೆ ರಕ್ತವಲ್ಲಿಯೇ ಒಂದು ತರದ ರಸಾಯನವನ್ನು ಹಾಕಿ, ಈ ಹೊಸ ತರಂಗಗಳ ತೊಂದರೆಯನ್ನು ತಪ್ಪಿಸಲಾದೀತು.

ಭವಿಷ್ಯತ್ಕಾಲದ ವಿನಾತಂತಿಯ ಎಲ್ಲಕ್ಕೂ ದೊಡ್ಡ ಪರಾಕ್ರಮವೆಂದರೆ ತಂತಿಗಳಿಲ್ಲದೆ ಪ್ರತ್ಯಕ್ಷವಾಗಿ ವಸ್ತುಗಳನ್ನೇ ಕಳುಹಲು ಶಕ್ಯವಾಗುವುದು! ಇಂದು ಇದು ಅಶಕ್ಯವೆನಿಸುವದು. ಆದರೆ ಇನ್ನೂ ಎರಡು ನೂರುಸೂರು ವರುಷಗಳನಂತರ ಇದು ಅಸಾಧ್ಯವಾದುದೆಂದು ಶಾಸ್ತ್ರಜ್ಞರಿಗಂತೂ ಎನಿಸುವುದಿಲ್ಲ. ಏಕೆಂದರೆ ಸೂಕ್ಷ್ಮ ಪ್ರಮಾಣದಲ್ಲಿಯೇ ಒಂದು ವಸ್ತುವನ್ನು (matter) ತರಂಗಗಳಲ್ಲಿ ರೂಪಾಂತರಿಸುವುದು ಇಂದು ಶಕ್ಯವಾಗಿದೆ

ವಿನಾತಂತಿಯ ಸಂಶೋಧವು ಅವ್ಯಾಹತವಾಗಿ ನಡೆದರೆ ಕೆಲವು ಹೊಸ ಉಪಯುಕ್ತವಾದ ತರಂಗಗಳು ಶಾಸ್ತ್ರಜ್ಞನಿಗೆ ಸಿಕ್ಕಬಹುದು ಈಗ ಕೆಲವೊಂದು ಹೊಸ ನೊಣಗಳು ಕಂಡುಬಂದಿವೆ. ಅವುಗಳಿಗೆ ತವ್ಕದೇ ಜಾತಿಯ ನೊಣಗಳ ತರಂಗಗಳು ದೊರೆಯುದಿದ್ದರೆ ಅವುಗಳು ಸುಖವಾಗಿ ಇರಲಾರವು. ಇದರ ಮೇಲಿಂದ ಪ್ರತಿಯೊಂದು ಜೀವಂತ ಪ್ರಾಣಿಯು ಒಂದುತರದ ತರಂಗಗಳನ್ನು ಬಿಡುತ್ತಿರುವುದು ಮತ್ತು ಆ ತರಂಗಗಳು ಅದೇ ಜಾತಿಯ ಪ್ರಾಣಿಗಳಿಗೆ ಸಿಕ್ಕುವುವು.

ಅನುಭವಸಿದ್ಧಗಳಿಂದ ಅನುಭವಪಟ್ಟ ಕರ್ಕಿ ಮತ್ತು ಕಂಪನಿಯ

ಜ್ವರದ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಲ್ಲ ಪ್ರಕಾರದ ಜ್ವರಗಳಿಗೂ ದಿವ್ಯೌಷಧ

ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ

ಗಿರಗಾಂವ. ಮುಂಬಯಿ

ಎಂಬ ಸಿದ್ಧಾಂತಕ್ಕೆ ಶಾಸ್ತ್ರಜ್ಞರು ಬಂದಿದ್ದಾರೆ. ಯಾವ ಕಾರಣವೂ ಇಲ್ಲದೆ ಕೆಲವೊಂದು ಜನರು ನಮ್ಮ ಕಣ್ಣೆದುರು ಬೇಡವೆನಿಸುವರು; ನುತ್ತು ಕೆಲವು ಜನರ ಪರಿಣಾಮವು ನಮ್ಮ ಮನಸ್ಸಿನ ಮೇಲೆ ಒನ್ಮೆಲೆ ಆಗುವುದು ಇದಕ್ಕೆ ಕಾರಣವು ಇದೇ ಇರಬೇಕೆಂದು ಊಹಿಸಲಾಗಿದೆ. ಬುದ್ಧಿ ಮತ್ತು ಭಾವನೆಗಳ ಮೇಲೆ ಪರಿಣಾಮಮಾಡುವ ತರಂಗಗಳು ಕಂಡುಬಂದರೆ, ಮನುಷ್ಯನ ಮೇಲೆ ಎಷ್ಟೊಂದು ವಿಲಕ್ಷಣವಾದ ಪರಿಣಾಮುಗಳಾಗಬಹುದು!

ಆದರೆ ಶಾಸ್ತ್ರೀಯಜ್ಞಾನವು ವೇಗದಿಂದ ಬೆಳೆದು ವಿಶ್ವಾಮಿತ್ರನ ಈ ಆಶ್ಚರ್ಯಕರವಾದ ಹೊಸ ಸೃಷ್ಟಿಯು ನಿರ್ಮಾಣವಾಗುವುದಕ್ಕೆ ಜಗತ್ತಿನಲ್ಲಿ ಶಾಂತತೆ ನೆಲಸುವುದು ಅತ್ಯಂತ ಅವಶ್ಯವಾಗಿದೆ. ಇಂದಿನ ಮಹಾಯುದ್ಧದಲ್ಲಿ ಅಸಂಖ್ಯ ಮಾನವಜೀವಗಳ ಕೊಲೆಯನ್ನೂ ಇವರ ದೇಹಶಕ್ತಿ ಮತ್ತು ಬುದ್ಧಿಶಕ್ತಿಗಳ ದುರುಪಯೋಗವಾಗುವುದನ್ನೂ ಅಪಾರ ಸಂಪತ್ತು ಹಾಳಾಗುವುದನ್ನೂ ಕಂಡರೆ, ಮತ್ತು ಇಂತಹ ಮಹಾಯುದ್ಧಗಳು ಹೀಗೆಯೆ ನಡೆಯುತ್ತಲೇ ಇದ್ದರೆ, ಸುಖದ ದಿನಗಳ, ಸ್ವಾತಂತ್ರ್ಯದ, ಮತ್ತು ಶಾಸ್ತ್ರೀಯ ಜ್ಞಾನದ ಪ್ರಗತಿಯ ಬಹಳ ಆಶೆ ಬೇಡ. ಈ ಯುದ್ಧ, ಈ ದಾರಿದ್ರ್ಯ ಈ ಬರಗಾಲದ ಭೀಕರತೆ ಇಂತಹ ಎಷ್ಟೋ ದುಃಖದ ಸಂಗತಿಗಳ ಕಾರಣವನ್ನು ನೋಡಿದರೆ, ಒಂದೇ ಒಂದು ಸಂಗತಿಯು ಕಾಣುವುದು. ಅದೆಂದರೆ ಕೆಲವೊಂದು ಮುಂದಾಳುಗಳ ಕುರುಡು ಸ್ವಾರ್ಥ ಮತ್ತು ಸಾಮ್ರಾಜ್ಯವಾದ. ಇವು ನಿರ್ಮೂಲವಾದ ಹೊರತು ಯಾವ ಪ್ರಗತಿಯ ಆಶೆಯೂ ಇಲ್ಲ. ಈಗಿನ ಯುದ್ಧಗಳಲ್ಲಿ ಜಯಹೊಂದಿದ ದೇಶವೂ ಪೂರ್ಣ ಹಾನಿಗೀಡಾಗಿರುವುದರಿಂದ, ನಿಜವಾಗಿಯೂ ಯುದ್ಧದಿಂದ ಯಾರೂ ಜಯಶಾಲಿಗಣದಂತಲ್ಲ. ಆದರೆ ದೇಶದ ಮುಂದಾಳುಗಳಿಗೆ—ಇವರಿಗೆ ಎಂತಹ ಆಳುಗಳು ಎನ್ನಬೇಕೆಂಬುದು ತಿಳಿಯುವುದಿಲ್ಲ—ಈ ಸಂಗತಿ ತಿಳಿಯುವುದಿಲ್ಲವೆಂಬುದು ಬಹಳ ದುರ್ದೈವದ ಸಂಗತಿಯಾಗಿದೆ! 'ಯುದ್ಧದಿಂದ ಎಂದೂ ತಮ್ಮ ಅಥವಾ ಎರಡನೆಯ ರಾಷ್ಟ್ರದ ತೊಡಕುಗಳು ಪರಿಹಾರವಾಗಲಾರವು; ರಾಜಕಾರಣಿಗಳು ಮತ್ತು ಮುತ್ಸದ್ದಿಗಳು ಈ ಸಂಗತಿಯನ್ನು ತಿಳಿದು ಸೌಹಾರ್ದದಿಂದ ಎಂದು ನಡೆಯುಲು ಕಲಿಯುವರು?' ಎಂದು ಎಚ್. ಜಿ. ವೆಲ್ಸರು ಕೇಳಿದ್ದಾರೆ.

ಶಾಸ್ತ್ರಜ್ಞನ ಸಾಹಾಯ್ಯದಿಂದ ಅಂತರ ರಾಷ್ಟ್ರೀಯ ಒಕ್ಕೂಟವನ್ನೇಟುಮಾಡುವುದು ಎಷ್ಟೊಂದು ಸುಲಭವಾಗಿದೆಯೆಂಬುದನ್ನೂ ಮತ್ತು ಇಡಿ ಜಗತ್ತಿನಲ್ಲಿ ಸುಖ, ಶಾಂತತೆಗಳನ್ನು ನೆಲಸುವುದು ಹೇಗೆ ಶಕ್ಯವಾಗಿದೆಯೆಂಬುದನ್ನೂ ತಿಳಿದುಕೊಂಡು, ಜಗತ್ತಿನ ಜನತೆಯೆಲ್ಲ ಎಂದು ಸ್ವಾತಂತ್ರ್ಯ ಪಡೆಯುವುದೋ ಮತ್ತು ಸ್ವಾರ್ಥ, ಜನತೆಯನ್ನು ಹತ್ತಿಕ್ಕುವ ರೀತಿ, ಸಾಮ್ರಾಜ್ಯವಾದ ಇವೆಲ್ಲ ಎಂದು ನಿರ್ಮೂಲವಾಗುವುವೋ ಅಂದೇ ಶಾಸ್ತ್ರಜ್ಞರು ನಿರ್ಮಿಸಿದ ಆಶ್ಚರ್ಯಕರವಾದ ಸ್ವಪ್ನಸೃಷ್ಟಿಯನ್ನು ನಾವು ಪ್ರವೇಶಿಸಬಲ್ಲೆವು.

ಆದರೆ ಎಲ್ಲಿಯ ವರೆಗೆ ಹಿಂದುಸ್ತಾನದ ಕೋಟ್ಯವಧಿ ಜನರಿಗೆ ಒಂದು ಹೇಳಿಗೆ ಸಾಕಷ್ಟು ಅನ್ನವು ಕೂಡ ಸಿಕ್ಕುವುದಿಲ್ಲವೋ ಅಲ್ಲಿಯ ವರೆಗೆ 'ಎ'ದಿಂದ 'ಝೆಡ್'ನ ವರೆಗೆ ಎಷ್ಟೇ ಹೊಸ ವ್ಹಿಟಮಿನ್ನುಗಳನ್ನು ಹುಡುಕಿದರೂ ಏನು ಪ್ರಯೋಜನ?

(೧೫೬ನೆಯ ಪುಟದಿಂದ ಮುಂದುವರಿದುದು.)

ಕನ್ನಡಯಾತ್ರೆ:. ಬರೆದವರು: ಶ್ರೀ. ಮಾಸ್ತಿ ನರಸಿಂಗರಾಯರು, ಎಂ. ಎ. ಪಿ. ಹೆಚ್. ಎಲ್. ಪ್ರಕಾಶಕರು: ಕರ್ನಾಟಕ ಸಾಹಿತ್ಯಮಂದಿರ ಹೈದರಾಬಾದು ಬೆಲೆ ೧-೮-೦.

'ಕನ್ನಡ ಸಾಹಿತ್ಯಮಂದಿರ'ದ ಮೊದಲನೆಯ ಪ್ರಕಟನೆಯಾಗಿ 'ಕನ್ನಡಯಾತ್ರೆ' ಹೊರಬಿದ್ದಿದೆ. 'ಕನ್ನಡಯಾತ್ರೆ'ಯ ಪಯಣಿಗರು. ಕನ್ನಡನಾಡಿಗೆ ಪರಿಚಿತರು. ಕನ್ನಡದ ಅಭ್ಯಾಸ, ಸೂಕ್ಷ್ಮ ವಿಮರ್ಶೆಗಳೊಂದಿಗೆ ಕಲಾನಿಧನ ಗುಣಗಳೂ ಇವರಲ್ಲಿ ಮನೆಮಾಡಿವೆ.

ಕನ್ನಡಯಾತ್ರೆಯ ಮುಖ್ಯ ವಿಷಯ ಶಿವಮೊಗ್ಗೆಯ ಸಾಹಿತ್ಯ ಸಮ್ಮೇಲನದ ಕಾರ್ಯಕ್ರಮಗಳ ವರ್ಣನೆಯಾದರೂ, ಇದಕ್ಕೂ ವರದಿಗೂ ಯಾವ ಅಂತರವಿದೆಯೆಂಬುದನ್ನು—ಪರಿಷತ್ತಿನ ವರದಿಯನ್ನೂ ಕನ್ನಡಯಾತ್ರೆಯನ್ನೂ ಓದಿಯೆ ನೋಡಬಹುದು. ಕನ್ನಡಯಾತ್ರೆಯನ್ನು ಓದಿದುತೆಲ್ಲ ಆ ಮೂವರು ಯಾತ್ರಿಕರೊಡನೆ ನಾವೂ ನಾಲ್ಕನೆಯವರಾಗುತ್ತೇವೆ. ಸಮ್ಮೇಲನಕ್ಕೆ ಹೊರಡಬೇಕೆಂಬ ಅರಂಭ ಸ್ಫೂರ್ತಿ, ಹಣದ ವ್ಯವಸ್ಥೆ, ತಿಂಡಿ-ತೀರ್ಥಗಳ ಸಿದ್ಧತೆಗಳಿಂದ ಮೊದಲ್ಗೊಂಡು ರೈಲುಯಾತ್ರೆಯ ಕಷ್ಟ-ನಿಷ್ಠುರಗಳನ್ನೂ, ಸರಸವಿರಸಗಳನ್ನೂ ಬಣ್ಣಿಸುತ್ತ ಶಿವಮೊಗ್ಗೆಯನ್ನು ಮುಟ್ಟಿ ಮೂರೂ ದಿನಗಳ ಕಾರ್ಯಕ್ರಮವನ್ನು ಮುಗಿಸಿಕೊಂಡು, ಗೆರಸೊಪ್ಪೆಯ ಪೃಥ್ವಿಕಾವ್ಯವನ್ನೂ ಉಡುಪಿಯ ಪುಣ್ಯಾಕ್ಷೇತ್ರವನ್ನೂ ಸಂದರ್ಶಿಸಿ, ಆಗುಂಬೆಯ ದಿವ್ಯದರ್ಶನವನ್ನ ಪಡೆದು ಮರಳಿಬರುವವರೆಗೂ ನಿರೂಪಣೆ ರಸವತ್ತಾಗಿ ಸಾಗುತ್ತದೆ.

ಕೆಲವು ಕೊರತೆಗಳು 'ಕನ್ನಡಯಾತ್ರೆ'ಯಲ್ಲಿರದಿದ್ದರೆ ನಿಜವಾಗಿ ಅದು 'ಪಂಪಾಯಾತ್ರೆ'ಯ ಪರಿಜೋಡಿಗೆ ಬರುತ್ತಿತ್ತು. ಇನ್ನು ನೂರು ವರುಷಗಳ ಮೇಲೆ ಓದಿದರೂ ಪಂಪಾಯಾತ್ರೆ ಚಿರಂತನ ನೂತನತೆಯನ್ನು ತಾಳ ನಿಲ್ಲುತ್ತದೆ. 'ಕನ್ನಡಯಾತ್ರೆ' ರಬಕವಿ ಸಮ್ಮೇಳನದ ಮುಂಜಿಯೆ ಬಾರದಿದ್ದುದಕ್ಕೆ ಹಳಸಾಗಿದೆಯೆಂಬ ಭಾವನೆ ಬರುತ್ತದೆ. ವಿಷಯ ಎಷ್ಟೆ ಕ್ಷಣಿಕವಾಗಿರಲಿ ಪ್ರತಿಭಾವಂತನು ಅದನ್ನು ಚಿರಂಜೀವಿಯಾಗಿಸುತ್ತಾನೆ.

ಇಲ್ಲಿ ಬರುವ ವ್ಯಕ್ತಿಗಳು ಕೆಲವು ಕಾಲ್ಪನಿಕ, ಕೆಲವು ವಾಸ್ತವ. ವಾಸ್ತವವ್ಯಕ್ತಿಗಳನ್ನು ಅವರವರ ಹೆಸರು ಸಹಿತವಾಗಿಯೆ ಚಿತ್ರಿಸಲಾಗಿದೆ. ಇವೂ ಕಾಲ್ಪನಿಕ ಹೆಸರಿನಿಂದಲೆ ಬಂದಿದ್ದರೆ ಸಾಹಿತ್ಯದ ಗುಣ ಇನ್ನಷ್ಟು ಸ್ಪಷ್ಟವಾಗುತ್ತಿತ್ತು. ಎಷ್ಟೊ ಮಹತ್ತ್ವದ ವ್ಯಕ್ತಿಗಳನ್ನು ಹೆಸರುಗೊಂಡೇ ಗೌರವಿಸಿದುದರಿಂದ, ಆಗುವ ಸಂತೋಷದೊಡನೆ ತಮ್ಮ ಅನೇಕ ಗೆಳೆಯರನ್ನು ಎಷ್ಟೋ ವಿಶ್ವಾಸಪೂರ್ವಕವಾಗಿ ಚಿತ್ರಿಸಿದ್ದರೂ ಹೊರಗಿನ ಓದುಗರಿಗೆ ಆ ವ್ಯಕ್ತಿಗಳ ಟೀಕೆಯು ಅಸಹ್ಯತೆಯನ್ನು ಹುಟ್ಟಿಸುವಂತಿದೆ. ಸಮ್ಮೇಳನದ ಕಾರ್ಯಕ್ರಮಗಳ ನಿರೂಪಣೆಯಲ್ಲಿ ಸೂಕ್ಷ್ಮ ವಿವೇಚನೆಗಳಿದ್ದರೂ ಅವು ವರದಿಯಾಗಿಯೆ ಉಳಿಯುತ್ತವೆ.

'ಕನ್ನಡಯಾತ್ರೆ' ಶಿವಮೊಗ್ಗೆಯ ಸಮ್ಮೇಲನವಾದೊಡನೆಯೆ ಯಾವುದೋ ವಾರಪತ್ರಿಕೆಯಲ್ಲಿ ಬಂದಿದ್ದರೆ, ಅತ್ಯಂತ ರಮ್ಯ ಸಾಹಿತ್ಯ ಸಮಾಚಾರವಾಗುತ್ತಿತ್ತು. ಈಗ ಪುಸ್ತಕರೂಪದಲ್ಲಿ ಬಂದುದರಿಂದ ಆದರಲ್ಲಿ ಚಿರಕಾಲ ಬಾಳುವಂತಹ ಕೆಲವಾದರೂ ಸಾಹಿತ್ಯಗುಣಗಳು ಇಲ್ಲದೆ ಇಲ್ಲ ಎಂದು ಹೇಳಬಹುದು. —ಎಸ್.



ನಮ್ಮಲ್ಲಿಯ ರಂಗಭೂಮಿಯ ಗತವೈಭವ; ಕೈಲಾಸಮರ ಪರಿಚಯ ಸಾಹಿತ್ಯದಲ್ಲಿರುವ ಕೊರತೆ; ಕೃತಿಚೌರ್ಯವೆಂದರೆ ಏನು ?

ಮುಂಬಯಿ ಕರ್ನಾಟಕ ಸಂಘದ ವಾರ್ಷಿಕೋತ್ಸವದ ಕಾಲಕ್ಕೆ ಅಲ್ಲಿಯ ನಾಟ್ಯವಿಲಾಸಿಗಳು ಶ್ರೀರಂಗರ 'ಪರಿಜನ್ಯಾಪ' ನಾಟಕವನ್ನು ಉತ್ತಮವಾಗಿ ಅಭಿನಯಿಸಿ ತೋರಿಸಿದರು. ಹೆಸರುಗಳಿಸಿದ ಈ ನಾಟಕದ ಗುಣ-ದೋಷಗಳನ್ನು ಕುರಿತಾಗಲಿ, ಒಳ್ಳೆಯ ರೀತಿಯಲ್ಲಿ ಅದನ್ನು ಅಭಿನಯಿಸಿ ತೋರಿಸಿದ ನಟ ವರ್ಗವನ್ನು ಕುರಿತಾಗಲಿ ಇಲ್ಲಿ ಪ್ರಸ್ತಾಪವನ್ನೆತ್ತಬೇಕಾಗಿಲ್ಲ. ನಾಟಕವನ್ನು ಉತ್ತಮವಾಗಿ ಅಭಿನಯಿಸಿ ತೋರಿಸಿದರೆನ್ನುವದಕ್ಕಿಂತ ಅಭಿನಯಿಸಿ ತೋರಿಸಿದವರು ನಾಟ್ಯವಿಲಾಸಿಗಳು, ಯುವಕರು, ವಿದ್ಯಾವಂತರು ಎಂಬ ಮಾತನ್ನೇ ಎತ್ತಿ ತೋರಿಸಬೇಕಾಗಿದೆ ಅಮೂ ಒಂದು ಮಹತ್ತ್ವದ ಕಾರಣಕ್ಕಾಗಿ. ಇತ್ತೀಚೆಗೆ ಅಲ್ಲಲ್ಲಿ ಕೆಲಸ ಮಾಡುತ್ತಿರುವ ಕನ್ನಡ ನಾಟ್ಯವಿಲಾಸಿಗಳು ಒಂದು ಒಳ್ಳೆಯ ನಾಟಕವನ್ನು ಒಳ್ಳೆಯ ರೀತಿಯಲ್ಲಿ ಆಡಿ ತೋರಿಸಿದಾಗಲೆಲ್ಲ, ಕನ್ನಡ ರಂಗಭೂಮಿಯ ಊರ್ಜಿತಾವಸ್ಥೆಯನ್ನು ಮರೆಯಲಾಗದವನ ಮನಸ್ಸಿನಲ್ಲಿ ಇಂದಿನ ಸ್ಥಿತಿಗಾಗಿ ಮರುಕವುಂಟಾದರೆ ಆಶ್ಚರ್ಯವಿಲ್ಲ. ಕನ್ನಡ ಸಂಸ್ಕೃತಿಯ ಇತರ ಆವಿರ್ಭಾವಗಳಂತೆ ಕನ್ನಡ ರಂಗಭೂಮಿಗೂ ಒಂದು ಮಹತ್ಕಾಲವಿತ್ತೆಂಬುದು ಇಂದು ಕೇವಲ ಒಂದು ಹಳೆಯ ನೆನಪಾಗಿ ಉಳಿದಿದೆ. ಒಂದು ಕಪೆ **ವರದಾಚಾರ್ಯ, ಗುಬ್ಬಿ** ಅವರ ಕಂಪನಿಗಳಾದರೆ ಇನ್ನೊಂದು ಕಡೆ **ಗರುಡ, ವಾಮನರಾಯರ** ಕಂಪನಿಗಳು ಕನ್ನಡ ನಾಡಿನ ನೂಲೆ-ಮೂಲೆಗಳಲ್ಲಿಯೂ ಕನ್ನಡ ರಂಗಭೂಮಿಯ ವೈಭವವನ್ನು ಬೀರಿದುವೆಂಬುದು 'ಪುರಾಣ' ವಿಷಯವಾಗಿದೆ. 'ಪಟ್ಟಾಭಿಷೇಕ' ದಉಗ್ರಕೋಕಕ್ಕೆ, "ಶಿಕ್ಷಣ ಸಂಭ್ರಮ"ದ ಹಾಸ್ಯಕ್ಕೆ, "ವಿಷಮ ವಿವಾಹ"ದ ವಿಪರೀತಕ್ಕೆ, " ಎಚ್ಚಮನಾಯಕ"ನ ಅಭಿಮಾನಪೂರ್ಣ ಶೌರ್ಯಕ್ಕೆ "ವೀರ ಅಭಿಮನ್ಯು "ವಿನ ಕರುಣಕ್ಕೆ, ವೀರಕ್ಕೆ ಇಂದಿನ ನಾವು ಎರವಾಗಿದ್ದೇವೆ. " ಕುರುಕ್ಷೇತ್ರದ" ದೃಶ್ಯವೈಭವನವನ್ನು " ಭೂಕೈಲಾಸ " ದ ಅಪ್ಪುತವಾದ ನಾಟ್ಯ-ನಟನಾ ಸಾಮರ್ಥ್ಯವನ್ನು ಇಂದು ನಾವು ಕಳೆದುಕೊಂಡು, ಆಸ್ತಿಯನ್ನು ಕಳೆದುಕೊಂಡು ಆದು ಕಾಸಿಗೆ ಬಾಯ್ದೆರೆಯುವ ಭಿಕ್ಷುಕನಂತೆ—ನಾಟಕಕ್ಕಾಗಿ, ಉಜ್ವಲವಾದ ರಂಗಭೂಮಿಗಾಗಿ ಬಾಯ್ಬಿಡುತ್ತಿದ್ದೇವೆ. ಈ ಹೀನಾಯಸ್ಥಿತಿಯನ್ನು ಹೋಗಲಾದಿಸುವುದು ಸಾಧ್ಯವೆ ? ಸಾಧ್ಯವಿದ್ದರೆ ಅದಕ್ಕಾಗಿ ನಾವು ಯಾವ ಯತ್ನವನ್ನು ಮಾಡುತ್ತಿದ್ದೇವೆ ? ಈ ಪ್ರಶ್ನೆಗಳಿಗೆ ಉತ್ತರ ಹೇಳುವುದು ಕಷ್ಟ. ಉತ್ತರ ಹೇಳುವುದು ಕಷ್ಟವೆಂದ ಮಾತ್ರಕ್ಕೆ ಪ್ರಶ್ನೆಗಳನ್ನೆ ಎತ್ತದೆ ಇರಲಿಕ್ಕಾಗಬಹುದೆ ? ಎಲ್ಲಿಯಾದರೊಂದು ನಾಟಕವನ್ನು ಕನ್ನಡಿಗರು ಒಳ್ಳೆಯ ರೀತಿಯಲ್ಲಿ ಅಭಿನಯಿಸಿ ತೋರಿಸಿದಾಗ, ಆ ಅಭಿನಯದ ಮೂಲಕವೇ ಈ ಪ್ರಶ್ನೆಗಳು ಹೊರಡುವವು. ಈ ಪ್ರಶ್ನೆಗಳಿಗೆ ಮಾತಿಗಿಂತ ಕೃತಿಯಿಂದ ಉತ್ತರ ಬೇಕಾಗಿದೆ.

ಸುಮಾರಾಗಿ ಈ ಶತಮಾನದ ಮೊದಲ ಮೂರು ದಶಕಗಳಲ್ಲಿ ಕನ್ನಡ ರಂಗಭೂಮಿಯು ಯಾವ ಯಾವ ಆನಸ್ಥೆಗಳನ್ನು ದಾಟಿ ಗಣನೀಯ ಸುಮಾರಿಗೆ ತೀರ ಇಳಿತಾಯದ ಮಟ್ಟಕ್ಕೆ ಬಂದು ತಲುಪಿತು ಎಂಬೆಲ್ಲದರ ವಿವರಗಳನ್ನು, ಆ ವಿಷಯಕ್ಕೆ ಸಂಬಂಧಿಸಿದ ಒಂದು ದೀರ್ಘ ಪ್ರಬಂಧವೇ ಹೇಳಬೇಕು. ಆದರೆ ಕನ್ನಡದಲ್ಲಿ ಹೊಸ ತೆರನ ನಾಟಕ, ಹೊಸ ನಾಟಕಕ್ಕೆ ಅನುಕೂಲವಾದ ರೀತಿ, ರಂಗವ್ಯವಸ್ಥೆಗಳು ಕಂಪನಿ ನಾಟಕದವರಿಂದ ಒದಗಲಿಲ್ಲವೆಂಬ ಕಾರಣದ ಮೂಲಕವಾಗಲಿ, ಹಳೆಯ ನಾಟಕಗಳು ಮತ್ತು ಅವುಗಳ ಅಭಿನಯ ಪದ್ಧತಿಗಳು ಹೊಸ ತಲೆಮಾರಿನ ಯುವಕರ ಮನಸ್ಸನ್ನು ನೆಳೆಯಲಿಲ್ಲವೆಂಬ ಕಾರಣದ ಮೂಲಕವಾಗಲಿ, ಹಳೆಯ ರಂಗಭೂಮಿಯು ಆಳಿದು ಹೋಗುವುದಕ್ಕಲ್ಲದೆ ಹೊಸದು ಹುಟ್ಟಿಕೊಂಡು ಬೆಳೆದು ಬಾರದುದಕ್ಕೆ ಅನುವಾಯಿತು. ಹಳೆಯ ರಂಗಭೂಮಿಯ ರೀತಿ-ನೀತಿಗಳಿಗೆ ಹೊಸ ನಾಟಕ ಹಿಡಿಯಲಿಲ್ಲ; ಹೊಸ ನಾಟಕಗಳಿಗೆ ಬೇಕಾದ ರಂಗಭೂಮಿ ಹುಟ್ಟಿ ಕೊಳ್ಳಲಿಲ್ಲ. ಹೀಗಾಗಿ ಕನ್ನಡ ರಂಗಭೂಮಿಯ ಕಳಸವು ನೆಲಕ್ಕುರುಳಿತು. ನಾಟ್ಯಲೇಖನಕ್ಕೆ ದೊಡ್ಡ ತಡೆಯೊಂದುಂಟಾಯಿತಲ್ಲದೆ ನಿರ್ಮಿತಿಗೆ ಯಾವ ಉತ್ತೇಜನವೂ ಉಳಿಯಲಿಲ್ಲ.

ಆದರೆ ಹೊಸ ತೆರನ ನಾಟಕ ಕನ್ನಡದಲ್ಲಿ ಹೊಮ್ಮಲುವಾಗಿ ಬಂದಿನಿಂದ, ಅದರಲ್ಲಿಯೂ ವಿಶೇಷವಾಗಿ ಏಕಾಂಕನಾಟಕವು ಜನಾದರವನ್ನು ಗಳಿಸಲಾರಂಭಿಸಿದಂದಿನಿಂದ, ರಂಗಭೂಮಿಯ ಕಾರ್ಯತ್ತಲಿನಲ್ಲಿ ಆಕಾರಿಣವೊಂದು ಮಿನುಗಿತು. ಹೊಸ ರೀತಿಯ ದೃಶ್ಯರೂಪಕಗಳನ್ನು ಯಾವುದಾದರೊಂದು ಉತ್ಸವದ ಅಂಗವಾಗಿ ಆಡಿತೋರಿಸುವುದರಲ್ಲಿ ಕೆಲ ನಾಟ್ಯವಿಲಾಸಿಗಳು ಅಲ್ಲಲ್ಲಿ ಮುಂದೆ ಬರತೊಡಗಿದವು. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಾಟ್ಯವಿಲಾಸಿಗಳು ಸಾಧಿಸಬೇಕಾದಷ್ಟು ಸಾಮರ್ಥ್ಯವನ್ನಾಗಲಿ ಸಂಘಟನೆಯನ್ನಾಗಲಿ ಸಾಧಿಸದೆ ಹೋಗಿದ್ದರೂ, ನಾಟ್ಯವಿಲಾಸಿಗಳೇ ನಮ್ಮ ರಂಗಭೂಮಿಯ ನಿನ್ನೆಯ ವೈಭವದ ಅವಶೇಷವಾಗಿ, ಅದರಂತೆ ನಾಳೆಯ ಆಕೆಗೆ ಕಣ್ಣನ್ನೆಯನ್ನಾಗಿ ಉಳಿಯಲು ಯತ್ನಿಸಿದ್ದಾರೆಂಬ ಮಾತನ್ನು ಯಾರಾದರೂ ಒಪ್ಪಬೇಕು. ಬೆಂಗಳೂರಿನ **ವಿ. ಡಿ. ವಿ.** ಸಂಘದವರು, ಧಾರವಾಡದ ನಾಟ್ಯವಿಲಾಸಿಗಳು, ಬಾಗಿಲುಕೋಟೆಯ ವಾಸುದೇವ ವಿನೋದಿನಿ ಸಭಾ ಯವರು, ದಕ್ಷಿಣ ಕನ್ನಡದಲ್ಲಿ ಕಾರಂತರು ಮತ್ತು ಅವರ ಶಿಷ್ಯರು ನಾಡಿನ ಬೇರೆ ಬೇರೆ ಭಾಗಗಳಲ್ಲಿ ಇನ್ನೆಷ್ಟೋ ಸಂಸ್ಥೆಯವರು—ಕನ್ನಡ ರಂಗಭೂಮಿಯನ್ನು ಬದುಕಿಸಿಕೊಂಡು ಹೊಸ ಪರಿಸ್ಥಿತಿಗಳಿಗೆ ಅದನ್ನು ಸಾರ್ವದಿಸಿಕೊಳ್ಳಲು ಯತ್ನಿಸಿದರು. ಯತ್ನಗಳು ಎಷ್ಟೇ ಶ್ಲಾಘನೀಯವಾದರೂ ಫಲಿತಾಂಶದ ಮಟ್ಟಿಗೆ ಇನ್ನೂ ಒಟ್ಟಾರೆ ನಿರಾಶೆಯನ್ನೆ ವ್ಯಕ್ತಮಾಡಬೇಕಾದುದು ಅನಿವಾರ್ಯವಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಈ ಎಲ್ಲ ಯತ್ನಗಳು ಕೆಲವೊಂದು ವಿಶಿಷ್ಟ ಸಂದರ್ಭ-

ಗಳಲ್ಲಿ ಕಾರ್ಯಮುಖವಾಗಿರುವುದು. ಉತ್ಸವಾದಿ ಸಂದರ್ಭಗಳನ್ನು ಖುರಿ, ಕನ್ನಡ ನಾಟಕಗಳನ್ನು ಉತ್ತಮವಾಗಿ ಆಡಿ ತೋರಿಸುವುದೇ ಒಂದು ಧ್ಯೇಯವೆಂದು ಒಪ್ಪಿಕೊಂಡು, ತಮ್ಮ ಯತ್ನಗಳನ್ನು ಸುಸಂಘಟಿತವಾದ ರೀತಿಯಲ್ಲಿ ಮುಂದುವರಿಸುವಂತಾಗಿದ್ದರೆ ಇನ್ನೂ ಹೆಚ್ಚಿನ ಪ್ರಗತಿ-ಶ್ರೇಯಸ್ಸುಗಳನ್ನು ಗಳಿಸಿದಂತಾಗುತ್ತಿತ್ತೆಂದು ಹೇಳಿದರೆ, ಈ ಸಂಸ್ಥೆ-ಸಂಸ್ಥೆಗಳು ಮಾಡಿದ ಮಾಡುತ್ತಿದ್ದ ಕೆಲಸದ ಮಹತ್ತ್ವವನ್ನೂ ಅವಶ್ಯಕತೆಯನ್ನೂ ಅಲ್ಲಗಳೆದಂತಾಗಲಿಲ್ಲ. ಇಂದಿನ ವರಿಸ್ಥಿತಿಯಲ್ಲಿ ನಾವು ನಮ್ಮ ರಂಗಭೂಮಿಯ ಬಗೆಯಲ್ಲಿ ಆಶೆಯನ್ನಿಟ್ಟುಕೊಳ್ಳಬಹುದಾಗಿದ್ದರೆ, ನಾವು ಈ ನಾಟ್ಯವಿಲಾಸಿಗಳ ಕಡೆಗೆಯೇ ನಮ್ಮ ಲಕ್ಷ್ಯವನ್ನು ತಿರುಗಿಸಬೇಕಾಗಿದೆ ಎಂಬುದು ನಿರ್ವಿವಾದವಾಗಿದೆ. ಹೊಸ ನಾಟಕದ ಸಾಮಾಜಿಕ ವಿಚಾರಪರತೆಯನ್ನು ಅದರಂತೆ ಅದರಲ್ಲಿಯ ಮಾತಿನ ಸನ್ನಿವೇಶಗಳ ಸೂಕ್ಷ್ಮಗಳನ್ನು, ಸೂಚನೆಗಳನ್ನು, ಆ ಆ ನಾಟಕವನ್ನು ಓದಿ ಅರ್ಥಮಾಡಿಕೊಂಡು ಅರಗಿಸಿಕೊಳ್ಳುವ ನಟನು ನೋಟಕರ ಮನಸ್ಸಿನೆಡೆಗೆ ಮುಟ್ಟಿಸಲಾರ. ಇಂದಿನ ನಟ ಕೇವಲ ಸಟನಾಗಿರದೆ ಸಹೃದಯನೂ ಆಗಿರಬೇಕಾಗಿದೆ. ಹೀಗಿರದೆ ಹೋದರೆ ಹೊಸ ನಾಟಕ ಜನರ ಮನಸ್ಸನ್ನು ಹಿಡಿಯುವುದು ಸಾಧ್ಯವಿಲ್ಲ. ಆದುದರಿಂದ ಇಂದಿನ ನಮ್ಮ ರಂಗಭೂಮಿಯ ಭವಿತವ್ಯ ನಮ್ಮಲ್ಲಿಯ ನಾಟ್ಯಪ್ರೇಮಿಗಳಾದ ಯುವಕ ವಿದ್ಯಾವಂತರನ್ನು ಕೂಡಿದೆ ಎಂದು ಹೇಳಿದರೆ ಯಾವ ಅತಿಶಯೋಕ್ತಿಯೂ ಅಲ್ಲ. ಯುವಕರು ನಾಟಕ ಕಂಪನಿಗಳನ್ನು ತೆಗೆಯಬೇಕೆಂತಲ್ಲ: ನಾಡಿನಲ್ಲಿ ಅಲ್ಲಲ್ಲಿ ಹಾಗೂ ಹೀಗೂ ಕೆಲಸ ಮಾಡುತ್ತಿದ್ದ ನಾಟ್ಯಸಂಸ್ಥಗಳಲ್ಲಿ ಹೆಚ್ಚಿನ ಆಸ್ಥೆಯನ್ನು ತಾಳಿ ಅವುಗಳಿಂದ ಕನ್ನಡನಾಟ್ಯ ನಿರ್ಮಿತಿಗೆ ಉತ್ತೇಜನ ದೊರಕುವಂತೆ ಮಾಡಬೇಕು. ಕರ್ನಾಟಕ ಸಂಘಗಳಿದ್ದ ಎಲ್ಲೆಡೆಯಲ್ಲಿಯೂ ನಾಟ್ಯಸಂಸ್ಥೆಗಳು ಏರ್ಪಡಬೇಕು. ನಾಟ್ಯವೈಭವವನ್ನು ಕಳೆದುಕೊಂಡ ಜನಕ್ಕೆ ಹೊಸ ನಾಟಕದ ಹೊಸ ವೈಭವವನ್ನು ತೋರಿಸಲೆಸಗಬೇಕು. ಭಾರತದ ಬೇರೆ ಬೇರೆ ಭಾಗಗಳಲ್ಲಿ ಇಂದು ನಾಟಕದ, ರಂಗಭೂಮಿಯ ಉದ್ಧಾರದ ಕೂಗು ಕೇಳಬರುತ್ತಿದೆ. ಜನಸಾಮಾನ್ಯರಿಗಾಗಿ ನಾಟಕಗಳ ಯೋಜನೆಯನ್ನು ಮಾಡುವ ವಿಚಾರ ಅಲ್ಲಲ್ಲಿ ಕೃತಿರೂಪವನ್ನೂ ತಾಳತೊಡಗಿದಾಗ, ನಾವು ಜೀವಿಸಲ್ಲಿ ಕೈ ಸಿದ್ಧಸಿಕೊಂಡು ಹೊರವರು ಸಾಧಿಸಿದುದನ್ನು ನೋಡುತ್ತ ನಿಲ್ಲಬೇಕೆ?

× × × ×

ಕಳೆದ ತಿಂಗಳು ಕೈಲಾಸಂ ವಿಚಾರವಾಗಿ ಬರೆಯುವಾಗ ಸ್ಥಳಾಭಾವಕ್ಕಾಗಿ ಎರಡು ಮಾತು ನಿಂತುಹೋಯಿತು. ಅವರ ಕೃತಿಗಳ ಪ್ರಕಾಶನದ ಬಗೆಯಲ್ಲಿ ಕನ್ನಡ ಪ್ರಕಾಶಕರು ಇತ್ತೀಚೆಗೆ ಎಚ್ಚೆತ್ತಂತೆ ಕನ್ನಡ ವಿಮರ್ಶಕರಾದರೂ ಅವರ ಕೃತಿಗಳ ಅವರ ವ್ಯಕ್ತಿತ್ವದ ಪರಿಜಯವನ್ನು ಕನ್ನಡಿಗರಿಗೆ ಮಾಡಿಕೊಡಲಸಗಿದ್ದಾರೆ. ಇತ್ತೀಚೆಗೆ ಪ್ರಕಟವಾದ ಶ್ರೀ. ರಾಜರತ್ನಂ ಅವರ "ಕೈಲಾಸಂ ಕಥನ ಚಥವಾ ಗುಂಡೂಭಂಡಾಗ ಮಥನ" ಮತ್ತು ಶ್ರೀ. ಕಂಡಾವೆ ಕೃಷ್ಣಯ್ಯಂಗಾರರ "ನಾನು ಕಂಡ ಕೈಲಾಸಂ" ಪುಸ್ತಕಗಳೇ ಇದಕ್ಕೆ ನಿದರ್ಶನ. ರಾಜರತ್ನಂ ಅವರು ತಮ್ಮ ಪುಸ್ತಕದಲ್ಲಿ "ಕರ್ನಾಟಕ ವೃಷಸನ ಪಿತಾಮಹ"ನ ಕೃತಿಗಳ ಪರಿಚಯವನ್ನು ಮಾಡಿಕೊಟ್ಟಿದ್ದರೆ, ಕೃಷ್ಣಯ್ಯಂಗಾರರು ಕೈಲಾಸಂ ಅವರ ವ್ಯಕ್ತಿತ್ವದ ಪರಿಚಯವನ್ನು ಸೂಕ್ಷ್ಮವಾಗಿ ಮಾಡಿಕೊಟ್ಟಿದ್ದಾರೆ. ಇವೆರಡೂ ಪುಸ್ತಕಗಳು ಒಂದಕ್ಕೊಂದು ಪೂರಕವಾಮವು. ಒಂದು ಸಾಹಿತ್ಯದೃಷ್ಟಿಯಿಂದ ಕೃತಿಗಳನ್ನು ಬಿಡಿಸಿ ಬಿಡಿಬಿಡಿಯಾಗಿ ವಿಮರ್ಶಿಸಿದ್ದರೆ ಇನ್ನೊಂದು ಆ ಕೃತಿಗಳ ಹಿಂದೆ ಹುದುಗಿದ ಶಕ್ತಿಯು ಯಾವ ರೀತಿ ಜೀವಿಯಿತೆಂಬುದನ್ನು ತಿಳಿಯಾಗಿ ತಿಳಿಸುವುದು.ಒಬ್ಬರ ತೀಕ್ಷ್ಣವಾದ ವಿಮರ್ಶಾದೃಷ್ಟಿ, ಇನ್ನೊಬ್ಬರ ಸುದೀರ್ಘವಾದ ವರಿಚಯ- ಎರಡೂ ಸಹೃದಯತೆಯಿಂದ ಕೂಡಿ ತೀರ ಅವಶ್ಯವಾದ ಎರಡು ಪರಿಚಯಾತ್ಮಕ ಪುಸ್ತಕಗಳನ್ನು ಕನ್ನಡಿಗರಿಗೆ ಕೊಡುವಂತೆ ಮಾಡಿವೆ.

"ಇಲ್ಲಿ ಹೇಳಿರುವ ವಿಷಯಗಳಿಗಿಂತಲೂ ಹೇಳದೆ ಬಿಟ್ಟಿರುವುದು ಇನ್ನೂ ಇದೆ" ಎಂಬುದರ ಅರಿವು ಶ್ರೀ ರಾಜರತ್ನಂ ಅವರಿಗೆ ಇದೆಯಾದರೂ ಇಲ್ಲಿ ಹೇಳಿರದ ಒಂದು ವಿಷಯದ ಕಡೆಗೆ ಓದುಗರ ಲಕ್ಷ್ಯವನ್ನೆಳೆಯುವುದು ಅಗತ್ಯ. ಅವರ ಕೃತಿಗಳಲ್ಲಿಯ ಕೊರತೆಯೆಂದು ಆ ವಿಷಯವನ್ನು ಪ್ರಸ್ತಾಪಿಸುವುದಿಲ್ಲ, ವಿಮರ್ಶೆಯ ಅಗತ್ಯವೆಂದು ಪ್ರಸ್ತಾಪಿಸುತ್ತಿದ್ದೇವೆ. ಆ ವಿಷಯವೆಂದರೆ ಕೈಲಾಸಂ ಅವರ ಕೃತಿಗಳು ಕೋಣೆಯಲ್ಲಿ ಕುಳಿತು ಓದಿ ಆನಂದಪಡಬಹುದಾದ ಕೃತಿಗಳಾಗಿರದೆ ರಂಗಭೂಮಿಯಮೇಲೆ ಆಡಿ ನೋಡಬಹುದಾದ ನಾಟಕಗಳಾಗಿವೆ ಎಂಬುದು: ಶ್ರೀ ರಾಜರತ್ನಂ ಅವರು ಎಲ್ಲ ಕೃತಿಗಳನ್ನು ಸಾಹಿತ್ಯಕೃತಿಗಳೆಂಬ ದೃಷ್ಟಿಯಿಂದ ಮಾತ್ರ ನೋಡಿದ್ದಾರಲ್ಲದೆ ಆ ಕೃತಿಗಳಲ್ಲಿಯ "ನಾಟಕೀಯತೆ"ಯನ್ನು ವಿಮರ್ಶಿಸಿ ತೋರಿಸಿಲ್ಲ. ಒಂದು ಉತ್ತಮವಾದ ನಾಟಕದಲ್ಲಿ ಸಾಹಿತ್ಯದ ಇತರ ಬಗೆಗಳಿಗೆ ಸಾಮಾನ್ಯವಾದ ಮನವಿಡಿಯುವ ಶಕ್ತಿ ಇರುವುದಲ್ಲದೇ ಆ ಕೃತಿಯನ್ನು ನೋಟಕರಿದುರಿಗಿಟ್ಟಾಗ ಅವರ ಮನಸ್ಸನ್ನು ವಿಶೇಷವಾಗಿ ಸಳೆಯಲು ಸಾಧ್ಯವಾಗುವಂತೆ ಅದರಲ್ಲಿ ಒಂದು ವಿಧವಾದ ರಂಗಚಾತುರ್ಯವೂ ಇರುವುದು. ಎಷ್ಟೋ ಸಾರಿ ಈ ರಂಗಚಾತುರ್ಯವೇ ಮುಕ್ಕಾಲು ಪಾಲು ನಾಟಕದ ಜೀವಾಳವಾಗಿ ಪ್ರೇಕ್ಷಕರ ಮನಸ್ಸನ್ನು ಹಿಡಿಯುವುದುಂಟು. ನಾಟಕವು ಯಾವಾಗಲೂ ಒಂದು ಸಂಯುಕ್ತಕಲಾಕೃತಿಯೆಂಬುದನ್ನು ನಾಟಕದ ವಿಮರ್ಶೆಯಲ್ಲಿ ನಾವು ಮರತರೆ (ಅಥವಾ ಬೇಕಾಗಿಯೇ ಬದಿಗಿರಿಸಿದರೆ) ಆ ವಿಮರ್ಶೆಯು ಸಮಗ್ರತೆಯನ್ನು ಸಾಧಿಸದಲ್ಲದೆ ಕೃತಿಗೂ ಅನ್ಯಾಯ ಮಾಡಿದಂತಾಗಬಹುದು. ಈ ವಿಷಯವನ್ನು ಕೈಲಾಸಂ ಅವರ ಕೃತಿಗಳನ್ನು ಕುರಿತು ಇನ್ನೊಮ್ಮೆ ಒತ್ತಿ ಹೇಳುವ ಅಗತ್ಯವಿದೆ. 'ಯಾವ ಉತ್ತಮ ನಾಟಕದಲ್ಲಿಯೂ ಇರಬೇಕಾದ ರಂಗಚಾತುರ್ಯ ಕೈಲಾಸಂ ಅವರ ನಾಟಕದಲ್ಲಿಯೂ ವಿಶೇಷವಾಗಿ ಎದ್ದು ಕಾಣಿಸುವಂತಿದೆ' ಎಂಬ ವಾತನ್ನು ಮನಗಾಣಬೇಕಾದಲ್ಲಿ ಅವರದೊಂದು ಕೃತಿಯನ್ನು ಮೊದಲು ಮನೆಯಲ್ಲಿ ಓದಿಕೊಂಡು, ಆ ಮೇಲೆ ಆದನ್ನೇ ರಂಗಭೂಮಿಯಮೇಲೆ ನೋಡಿದಾಗ, ಓದಿನಿಂದ ಮನಸ್ಸಿನ ಮೇಲೆ ಆದ ಪರಿಣಾಮವನ್ನು ರಂಗಸ್ಥಳದ ಮೇಲೆ ಅದನ್ನೇ ನೋಡಿ ಉಂಟಾದ ಅನುಭವದೊಡನೆ ಹೋಲಿಸಿ ನೋಡಬೇಕು. 'ಬಹುಷ್ಕಾರ' 'ಗಂಡಸ್ತತ್ರಿ' 'ಹುತ್ತವಲ್ಲಿ ಹುತ್ತ' ಮುಂತಾದ ನಾಟಕಗಳ ನಾಟಕಶಕ್ತಿಯು ಅದ್ಭುತವಾಗಿದ್ದುದನ್ನು ನಾವು ನಮ್ಮ ಓದಿನಲ್ಲಿ ಕಲಮಟ್ಟಿಗೆ ತಿಳಿಯಬಹುದಾದರೂ ಅವುಗಳಲ್ಲಿಯ ನಾಟ್ಯ ಪ್ರತಿಭೆಯನ್ನು ನಾವು ರಂಗಭೂಮಿಯ ಮೇಲೆಯೇ ಕಾಣಬೇಕು. ಈ ದೃಷ್ಟಿಯಿಂದ ಕೈಲಾಸಂ ಅವರ ಕೃತಿಗಳ ವಿಮರ್ಶೆ, ಅವರ ಕೃತಿಗಳಲ್ಲಿಯ ನಾಟ್ಯಶಕ್ತಿಯನ್ನೂ, ರಂಗ-

ಸ್ಥಿತಿಯನ್ನೂ, ಸಂನಿವೇಶಗಳ ಜೋಡಣೆಯನ್ನೂ ಸಮಗ್ರವಾಗಿ ವಿವರಿಸದೆ ಹೋದರೆ ಸಂಪೂರ್ಣವಾಗುವಂತಿಲ್ಲ. ಆದುದರಿಂದ ಈ ಎರಡು ವಿಮರ್ಶಕ ಗ್ರಂಥಗಳ ಜೊತೆಯಲ್ಲಿ ಇನ್ನೊಂದಕ್ಕೆ ಇನ್ನೂ ಅವಕಾಶವಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಕೈಲಾಸಂ ಅವರ ಕೃತಿಗಳು ಮುಖ್ಯವಾಗಿ ನಾಟಕಗಳು, ಎಂದರೆ ರಂಗಸ್ಥಳದ ಮೇಲೆ ಅಭಿನಯಿಸಲ್ಪಡಬೇಕಾದವುಗಳು ಎಂಬ ದೃಷ್ಟಿಯ ಪರಿಶೀಲನೆ ಅನಿವಾರ್ಯವೆಂದು ಹೇಳಬೇಕು. ಇದನ್ನು ಯಾರಾದರೂ ಮಾಡಿದರೆ, ಮೂರು ಪುಸ್ತಕಗಳು ಸೇರಿ ಅಲ್ಪಾವಕಾಶದಲ್ಲಿ ಕೈಲಾಸಂ ಅವರ ಸಾಹಿತ್ಯಸೇವೆಯ ಪರಿಚಯವನ್ನು ಕನ್ನಡಿಗರಿಗೆ ಪೂರ್ಣವಾಗಿ ಮಾಡಿಕೊಟ್ಟಂತಾಗುವುದು.

* * * *

"ಕೃತಿಚೌರ್ಯ ಎಂದರೇನು? ಒಬ್ಬನ ನಿರೂಪಣೆಯಂತೆ ಇನ್ನೊಬ್ಬನದಿದ್ದರೆ ಅವನ್ನೆ ಕೃತಿಚೌರ್ಯವೆನ್ನಬಹುದೇ?" ಎಂಬ ಪ್ರಶ್ನೆಯನ್ನು ಶ್ರೀ. ಜೊ. ಸೋಮನಾಥ ಅವರು ಕೇಳಿದ್ದಾರೆ. ಸಾಮಾಜಿಕ ಜೀವನದಲ್ಲಿಯಂತೆ ಸಾಹಿತ್ಯಿಕ ಜೀವನದಲ್ಲಿಯಾದರೂ ಕಳ್ಳರ ಕಾಕರ ಹಾವಳಿ ಇದ್ದೇ ಇರುತ್ತದೆಂಬುದು ಒಂದು ಸಾಮಾನ್ಯ ಅನುಭವವಾಗಿ ಬಿಟ್ಟಿದೆ! ಆದರೆ ಸಾಹಿತ್ಯ ಪ್ರಪಂಚದಲ್ಲಿಯ ಚೌರ್ಯವನ್ನು ನಿರ್ಧರಿಸುವುದಕ್ಕೆ ಯಾವ ಸ್ಪಷ್ಟವಾದ ಕಾನೂನೂ ಇಲ್ಲವಾದುದರಿಂದ, ಪ್ರತಿಯೊಂದು ಕೃತಿಚೌರ್ಯವನ್ನು ವಿಶಿಷ್ಟವಾದ ಸಂದರ್ಭದಲ್ಲಿ ಅಲ್ಲಿಯ ಪರಿಸ್ಥಿತಿಗಳಿಗನುಗುಣವಾಗಿ ನಿರ್ಧರಿಸಬೇಕಾಗುತ್ತದೆ. ಕೃತಿಚೌರ್ಯವೆಂದರೇನೆಂಬ ಪ್ರಶ್ನೆಗೆ ವ್ಯಾಖ್ಯೆಯ ರೂಪವಾಗಿ ಉತ್ತರ ಹೇಳುವುದು ಕಷ್ಟಸಾಧ್ಯವಾದರೂ, ಸಾಮಾನ್ಯವಾಗಿ ನಾವು ನಮ್ಮ ಸಾಮಾಜಿಕ ಜೀವನದಲ್ಲಿ ಯಾವ ಒಂದು ಕೃತಿಗೆ ಕಳ್ಳತನವ ಆರೋಪಣೆಯನ್ನು ಮಾಡಬಹುದೊ ಅಂಥದೇ ಕೃತಿಯು ಸಾಹಿತ್ಯಪ್ರಪಂಚದಲ್ಲಿ ನಡೆದರೆ ಅಂತಹ ಆರೋಪಣೆಯನ್ನು ನಾವು ಧಾರಾಳವಾಗಿ ಮಾಡಬಹುದೆಂದು ತೋರುತ್ತದೆ. ಎರಡನೆಯವರದೆಂದು ನಿರ್ಧರಿಸಲ್ಪಡಬಹುದಾದ ಒಂದು ಕೃತಿಯನ್ನು ಎತ್ತಿಕೊಂಡು ಅದು ತನ್ನದೆಂದು ತೋರಿಸುವ ಹವಣಿಕೆಯಲ್ಲಿ ಅಲ್ಲಲ್ಲಿ ಕೆಲವು ಚಿಕ್ಕ ದೊಡ್ಡ ಮಾರ್ಪಾಟುಗಳನ್ನು ಮಾಡಿಕೊಳ್ಳುವುದೇ ಬರೆಹಗಳ್ಳನ ಕಳ್ಳತನ.

ಇಲ್ಲಿ ಈ ಮಾರ್ಪಾಟುಗಳು ಕಳ್ಳತನವನ್ನು ಮುಚ್ಚಿಕೊಳ್ಳಲು ಬೇಕಾದ ಮುಸುಕು ಮಾತ್ರ. ರೀತಿಯ ಅನುಕರಣಕ್ಕಿಂತ ಕೃತಿಯ ಚೌರ್ಯವೇ ಹೆಚ್ಚು ನಿಂದ್ಯವೆಂದು ಹೇಳಬಹುದು. ಆದರೆ 'ಒಬ್ಬನ ನಿರೂಪಣೆಯಂತೆ ಇನ್ನೊಬ್ಬನದಿದ್ದರೆ ಅವನ್ನೆ "ಕೃತಿ"ಚೌರ್ಯವೆನ್ನಲಾಗುವುದಿಲ್ಲ. ರೀತಿಯ ಅನುಕರಣವಾಗಬಹುದು. ಆದರೆ ಈ ನಿರೂಪಣೆಯ ಪ್ರಶ್ನೆಯನ್ನು ನಿರೂಪಿತವಾದ ವಿಷಯಗಳು ಬೇರೆಬೇರೆಯಾಗಿದ್ದಲ್ಲಿ ಎತ್ತುವುದೇ ಸಾಧ್ಯವಾಗುವುದಿಲ್ಲ. ಒಂದೇ ಕಥೆಯನ್ನು ಹತ್ತು ರೀತಿಗಳಲ್ಲಿ ಹೇಳುವುದು ಸಾಧ್ಯವಿದ್ದಾಗ, ಬೇರೆ ಬೇರೆಯಾದ ಹತ್ತು ರೀತಿಗಳನ್ನು ಉಪಯೋಗಿಸಿಕೊಂಡ ಹತ್ತು ಲೇಖಕರು ಒಬ್ಬರಿಂದಿನ್ನೊಬ್ಬರು ಕೃತಿಚೌರ್ಯ ಮಾಡಿದರೆಂದು ಹೇಳಲಾಗುವುದಿಲ್ಲ. ಇದಕ್ಕೆ ಕಾರಣವೆಂದರೆ ವಿಷಯ ಒಂದೆಯಾದರೂ ರೀತಿ ಬೇರೆಯಾಗಿದ್ದು ಬೇರೆಯಾದ ಆ ರೀತಿಯ ಮೂಲಕ ಆ ಲೇಖಕ ಆ ಕಥೆಯ ಕೆಲವು ವಿಶಿಷ್ಟವಾದ ಅಂಶಗಳನ್ನು ಒತ್ತಿ ಹೇಳಿರುವುದಾಗಲಿ ಎತ್ತಿ ತೋರಿಸಿರುವುದಾದಾಗಲಿ ಸಾಧ್ಯವಿದೆ—ಆದರೆ ವಿಷಯವೂ ಬೇರೆಯಾಗಿರದೆ ರೀತಿಯೂ ಬೇರೆಯಾಗಿರದೆ ಹೋಗಿದ್ದ ಪಕ್ಷದಲ್ಲಿ ಅನಂತರ ಬಂದ ಕೃತಿಯು ಮೊದಲನೆಯವರ ಚೌರ್ಯವೆಂದೇ ಹೇಳಬೇಕಾಗುವುದು. ಈ ಪ್ರತಿಪಾದನೆಯನ್ನು ಮಾಡುವಾಗ ಒಂದು ಎಚ್ಚರದ ಮಾತನ್ನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗುವುದು. ರೀತಿ ಬೇರೆಯಾಗಿರದ ಸಂದರ್ಭದಲ್ಲಿ. ನಿರೂಪಿತವಾದ ವಿಷಯ ವ್ಯಕ್ತಿವಿಶಿಷ್ಟವಾಗಿದೆಯೋ ಅಥವಾ ಯಾರಿಗಾದರೂ ಗೊತ್ತಿರಬಹುದಾದ್ದಾಗಿದೆಯೋ ಎಂಬ ಮಾತನ್ನು ನಾವು ಗಮನಿಸಬೇಕಾಗುವುದು. ರಾಮಾಯಣ, ಮಹಾಭಾರತದೊಳಗಿನ ಕಥೆಯೊಂದನ್ನು ತೆಗೆದುಕೊಂಡು ಯಾವ ವಿಶೇಷವಾದ ರೀತಿಯ ನವೀನತೆಯೂ ಇಲ್ಲದೆ ನಿರೂಪಿಸಿದರೆ ಕೃತಿಚೌರ್ಯದ ಆರೋಪಣೆಯನ್ನು ಯಾರೂ ಮಾಡಲಾರರಾದರೂ, ಮನ್ನಣೆಯನ್ನೂ ಕೊಡಲಾರರು. ಆದರೆ ಇಂಥ ಸಂದರ್ಭದಲ್ಲಿ ಚೌರ್ಯವು ರೀತಿಗೂ ಹೇಗೆ ಒಂದು ವೇಳೆ ಅನ್ವಯಿಸಬಹುದೆಂಬುದನ್ನು ನಾವು ಕಾಣಬಹುದು. ಸುಪ್ರಸಿದ್ಧವಾದ ಒಂದು ಕಥಾಭಾಗವನ್ನಾಗಲಿ ಸನ್ನಿವೇಶವನ್ನಾಗಲಿ ಎತ್ತಿಕೊಂಡು ಮೊದಲೊಬ್ಬ ಲೇಖಕ ಆ ಸನ್ನಿವೇಶವನ್ನೇ ನಿರೂಪಿಸಿದ ರೀತಿಯಲ್ಲಿಯೇ ಇನ್ನೊಬ್ಬ ಲೇಖಕನು ನಿರೂಪಿಸುವುದಾದರೆ, ಆತ ಕೃತಿಚೌರ್ಯದ ಆಪಾದನೆಯನ್ನು ಎದುರಿಸಲು ಸಿದ್ಧನಾಗಬೇಕಾಗುವುದು. ಹೀಗೆ ಕೆಲವು ಸಂದರ್ಭದಲ್ಲಿ ಕೃತಿಚೌರ್ಯವು ಕೃತಿಯ ಚೌರ್ಯವಾಗುವುದು. ಕೆಲವು ಸಂದರ್ಭದಲ್ಲಿ ರೀತಿಯ ಚೌರ್ಯವಾಗುವುದು.

ಆಗಸ್ಟ್ ತಿಂಗಳ 'ಜೀವನ' ಪತ್ರಿಕೆಯಲ್ಲಿ ಈ ವಿಷಯದ ಒಂದು ಕೂಲಂಕಷವಾದ ಚರ್ಚೆಯನ್ನಡೆಸಿದ್ದನ್ನು ವಾಚಕರು ನೋಡಬಹುದು. ಅಲ್ಲಿ ಚರ್ಚಿಸಲಾಗಿದ್ದ ಕನ್ನಡ ಕಾದಂಬರಿಯನ್ನು ಕುರಿತಾಗಲಿ ಅದಕ್ಕೆ ಮೂಲವಾಗಿರಬಹುದೆಂದು ಅಲ್ಲಿ ಸೂಚಿಸಲ್ಪಟ್ಟ ಫ್ರೆಂಚ್ ಕಥೆಯನ್ನು ಕುರಿತಾಗಲಿ, ಅವೆರಡರ ನಡುವೆ ಇರಬಹುದಾದ ಸಂಬಂಧವನ್ನು ಕುರಿತಾಗಲಿ ಯಾವ ಅಭಿಪ್ರಾಯವನ್ನೂ ಇಲ್ಲಿ ವ್ಯಕ್ತಪಡಿಸಿಲ್ಲ. ಕೃತಿಚೌರ್ಯವನ್ನು ಕೇವಲ ಶಾಸ್ತ್ರೀಯದೃಷ್ಟಿಯಿಂದ ನೋಡಬೇಕಾಗಿದ್ದವರಿಗೆ, ಅಲ್ಲಿ ವಿವೇಚಿಸಲಾಗಿದ್ದ ವಿಷಯ ಎಷ್ಟೋ ಪರಿಯಿಂದ ಸಹಾಯಕವಾಗಬಹುದೆಂದು ತೋರುತ್ತದೆ.

ಶ್ರೀಕಾಂತ

ಮುಕ್ಕಾಲು ಭಾಗ ಶರತ್ ಬಾಬುಗಳ ಆತ್ಮಕತೆಯೇ ಆದ
ಸುಂದರ ಕಾದಂಬರಿ
ಐದು ಭಾಗ ಕೂಡಿ ಬೆಲೆ ೭—೮—೦

ಹೂಬಿಸಿಲು

ವಿ. ಶ್ಯಾಮಲಾದೇವಿಯವರು ಬರೆದ
೧೦ ಕತೆಗಳ ಸಂಗ್ರಹ. ಬೆಲೆ: ೧—೦—೦
ನಮ್ಮಲ್ಲಿ ಕರ್ನಾಟಕದ ಎಲ್ಲ ಸುಪ್ರಸಿದ್ಧ ಲೇಖಕರ
ಪುಸ್ತಕಗಳು ದೊರೆಯುತ್ತವೆ ವಿವರಗಳಿಗಾಗಿ ೧ ಆಣೆ
ಅಂಚೆ ಚೀಟಿಯನ್ನು ಕಳುಹಿಸಿರಿ
ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ

ನಾಲ್ಕಾ ನಿಟ್ಟಿನ ನೋಟ

ಕಾಂಗ್ರೆಸಿನ ನಿರ್ಧಾರ

ಸಿಮ್ಲಾ ಸಮ್ಮೇಳನದ ತರುವಾಯದ ಮಹತ್ತ್ವದ ಘಟನೆ ಎಂದರೆ ಪ್ರಾಂತಿಕ ಮತ್ತು ಕೇಂದ್ರ ಶಾಸನ ಸಭೆಗಳ ಚುನಾವಣೆಯನ್ನು ನಡೆಯಿಸಬೇಕೆಂದು ಸರಕಾರವು ನಿರ್ಧರಿಸಿದ್ದು. ಪರಿಸ್ಥಿತಿಯಲ್ಲಿ ಸುಹತ್ತ್ವದ ಬದಲಾವಣೆಯಾಗಿದೆಯಲ್ಲದೆ, ೭–೮ ವರ್ಷಗಳಿಗೆ ಮುಂಚಿತವಾಗಿ ಆರಿಸಲ್ಪಟ್ಟ ಶಾಸನಸಭೆಗಳ ಪ್ರಾತಿನಿಧಿಕ ಸ್ವರೂಪವೂ ಉಳಿದಿರಲಿಲ್ಲ; ಆದಕಾಗಿ ಹೊಸ ಚುನಾವಣೆಯಾಗಬೇಕೆಂಬ ನಿರ್ಧಾರದಿಂದ ಎಲ್ಲರಿಗೂ ಸಮಾಧಾನವಾಗಬಹುದಾಗಿದೆ. ಆದರೆ ಆದೇ ಕಾಲಾವಧಿಯಲ್ಲಿ ಲಕ್ಷಾಂತರ ಹೊಸ ಮತದಾರರಾಗಬಹುದಾದ್ದರಿಂದ; ಮತದಾರರ ಪಟ್ಟಿಯನ್ನು ಹೊಸತಾಗಿ ತಯ್ಯಾರುಮಾಡಬೇಕಾಗಿತ್ತು ಹಾಗಾಗದ್ದು ಅತ್ಯಂತ ಅಸಮಾಧಾನದ ಸಂಗತಿ. ಇದಲ್ಲದೆ, ಯುದ್ಧ ಮುಗಿಯುವುದಕ್ಕಾಗಿ ದೇಶದ ತಾತ್ಕಾಲಿಕ ಯೋಜನೆಯನ್ನು ಬಿಟ್ಟು ಶಾಶ್ವತಘಟನೆಯನ್ನು ಗೊತ್ತುಮಾಡುವುದಿದೆ. ಇಂತಹ ಮಹತ್ತ್ವದ ನಿರ್ಣಯವನ್ನು ಮಾಡುವಾಗ ದೇಶದ ಎಲ್ಲ ವಯಸ್ಕರಿಗೆ ಮತಾಧಿಕಾರವಿರಬೇಕು; ಆಗ ಅವರ ಪ್ರತಿನಿಧಿಗಳಿಗೂ ಯೋಗ್ಯ ಅಧಿಕಾರ ಪ್ರಾಪ್ತವಾಗುವುದು. ಆದರೂ ಕೂಲಿಕಾರ ಮಂತ್ರಿಮಂಡಳ ಕೂಡ ಪ್ರಜಾಪ್ರಭುತ್ವದ ಈ ಮೂಲತತ್ತ್ವವನ್ನು ಮರೆತಂತೆ ಕಾಣುವುದು. ಇಂತಹ ಪರಿಸ್ಥಿತಿಯಲ್ಲೂ ಕಾಂಗ್ರೆಸು ಎಲ್ಲ ಚುನಾವಣೆಗಳಲ್ಲಿ ಭಾಗ ವಹಿಸಬೇಕೆಂದು ನಿರ್ಧರಿಸಿದ್ದು ಸಂತೋಷದ ಸಂಗತಿ, ಕಾಂಗ್ರೆಸು ತನ್ನ ಹೊಣೆಗಾರಿಕೆಯನ್ನು ವಹಿಸಿಕೊಂಡುದರ ಲಕ್ಷಣ.

ವರ್ಕಿಂಗ್ ಕಮಿಟಿಯ ಧೋರಣೆ

ಈ ಮಾತುಗಳನ್ನು ಬರೆಯುತ್ತಿರುವಾಗ ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸೇರಲಿದೆ. ನಾಲ್ಕು ವರ್ಷಗಳ ಬಂಧನ, ಯಾತನೆ, ಬರಗಾಲ, ಬಳಲಿಕೆ, ದಬ್ಬಾಳಿಕೆಗಳ ಅನುಭವದಿಂದ ಕೆಣಕಲ್ಪಟ್ಟ ಸದಸ್ಯರು ಯಾವ ನಿರ್ಣಯಕ್ಕೆ ಬರಬಹುದೆಂದು ಹೇಳಲಾಗದು. ಆದರೂ ಅ. ಭಾ. ಕಾಂ. ಸಮಿತಿಯ ಮುಂದೆ ಇಡಲ್ಪಡುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯಗಳನ್ನು ನೋಡಿದರೆ ನಮ್ಮ ಮುಂದಾಳುಗಳು ದ್ವೇಷ-ಅಸಹನೆಗಳಿಂದ ಪ್ರೇರಿತರಾಗದೆ ತಮ್ಮ ಹೊಣೆಯನ್ನು ಹೊತ್ತುಕೊಳ್ಳಬಹುದೆಂದು ಹೇಳಲು ಯಾವ ಅಡ್ಡಿಯೂ ಇಲ್ಲ. ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಕಾಂಗ್ರೆಸು ಬಿಟ್ಟುಕೊಟ್ಟಿಲ್ಲ; ದೇಶಕ್ಕಾಗಿ ಯಾತನೆಗಳನ್ನನುಭವಿಸಿದವರನ್ನು (ಇದರಲ್ಲಿ ಸುಭಾಷ ಸೈನ್ಯದವರೂ ಸೇರಿದ್ದಾರೆ) ಕಾಂಗ್ರೆಸು ಮರೆತಿಲ್ಲ; ಕಾಲಕ್ಕನುಗುಣವಾಗಿ ತನ್ನ ಒಳ-ಆಡಳಿತದಲ್ಲೂ ಬದಲಾವಣೆಗಳನ್ನು ಮಾಡಿಕೊಳ್ಳಲಿದೆ; ಇದಲ್ಲದೆ, ಭಾವೀ ರಾಜ್ಯಘಟನೆಯನ್ನು ಸಿದ್ಧಪಡಿಸುವುದರಲ್ಲಿ ಮುಂದಾಗಲು ಸಿದ್ಧವಿದೆ. ಇವೆಲ್ಲ ನಿರ್ಣಯಗಳನ್ನು ಅ. ಭಾ. ಕಾಂ. ಸಮಿತಿಯು ಕೈಕೊಳ್ಳುವುದರಲ್ಲಿ ಸಂದೇಹವಿಲ್ಲ. ಆದರೆ ಇನ್ನೆರಡು ಮಹತ್ತ್ವದ ಸಂಗತಿಗಳ ಬಗ್ಗೆ ಕಾಂಗ್ರೆಸು ನಿರ್ಣಯವನ್ನು ಸ್ವೀಕರಿಸಬೇಕಾಗಿದೆ; ಅವೆಂದರೆ: ಒಂದು, ಅಲ್ಪ ಸಂಖ್ಯಾಕರ ಹಕ್ಕು; ಇನ್ನೊಂದು, ಕಮ್ಯುನಿಸ್ಟರ ವಿರುದ ಶಿಸ್ತಿನ ಕ್ರಮ.

ಅಲ್ಪ ಸಂಖ್ಯಾಕರ ಸಮಸ್ಯೆ

ಅಲ್ಪ ಸಂಖ್ಯಾಕರ ಸಮಸ್ಯೆ ಎಂದರೆ ಮುಖ್ಯವಾಗಿ ಪಾಕಿಸ್ತಾನದ ಪಿಶಾಚಿ ಎಂದು ಬೇರೆ ಹೇಳಬೇಕಾಗಿಲ್ಲ ಈ ಪ್ರಶ್ನೆಯನ್ನು ಕಾಂಗ್ರೆಸು ಹೇಗೆ ಬಿಡಿಸುವುದೆಂದು ಎಲ್ಲರ ನಿರೀಕ್ಷೆ ಇದೆ. ಇತ್ತೀಚ್ಗೆ ಪಂಡಿತ ಜವಾಹರ ಮೊದಲಾದ ಮುಂದಾಳುಗಳು 'ಹಿಂದುಸ್ತಾನದ ಐಕ್ಯವನ್ನು ಮುರಿಯಲಾರೆವು' ಎಂದು ಖಂಡತುಂಡವಾಗಿ ಹೇಳತೊಡಗಿದುದರಿಂದ ಒಂದೆಡೆ ಜಿನಾಪಕ್ಷಕ್ಕೆ ಅಪಪ್ರಚಾರಕ್ಕೆ ಅನುಕೂಲವಾಗಿದೆ. ಪೂನೆಯಲ್ಲಿ ಸೇರಿದ ವರ್ಕಿಂಗ್ ಕಮಿಟಿಯು ಯಾವ ಹೊಸ ನಿರ್ಣಯವನ್ನೂ ಕೈಕೊಳ್ಳದೆ ಹಿಂದಿನ ತನ್ನ ಧೋರಣೆಯನ್ನೆ ಸ್ಪಷ್ಟೀಕರಿಸಿದ ರಿಂದ, ಇನ್ನಿಷ್ಟು ಗೊಂದಲವಾಗಿದೆ. ಪಾಕಿಸ್ತಾನಕ್ಕೆ ವಿರೋಧಿಗಳಾದ ಅನೇಕ ಮುಸಲ್ಮಾನ ಬುದ್ಧಿವಂತರಿದ್ದಾರೆ, ಆವರ ಪಕ್ಷವನ್ನು ನಿರ್ಬಲಗೊಳಿಸುವಂತಿಲ್ಲ; ಸ್ವಾತಂತ್ರ್ಯಪ್ರೇಮಿಗಳಾದ ಪಾಕಿಸ್ತಾನ ವಾದಿಗಳೂ ಇದ್ದಾರೆ; ಅವರ ದ್ವೇಷವನ್ನೂ ಕಟ್ಟಿಕೊಳ್ಳುವಂತಿಲ್ಲ. ಇಂತಹ ಧೋರಣೆ ಅಗತ್ಯವಿದ್ದುದರಿಂದ, ವರಿಸ್ಥಿತಿ ಸೂಕ್ಷ್ಮವಾದದ್ದಿದೆ ಎಂದು ನಾವು ಹೇಳುತ್ತಲಿದ್ದೇನೆ. ಕಾಂಗ್ರೆಸು ಸ್ವಯನಿರ್ಣಯ ತತ್ತ್ವವನ್ನು ಮಾನ್ಯ ಮಾಡಿದ್ದು. ಪ್ರಾಂತಿಕ ಸ್ವಾಯತ್ತತೆಯ ಮಟ್ಟಿಗೆ ಮಾತ್ರವೆ? ಇಂದಿಲ್ಲ ನಾಳೆ ಒಂದು ಪ್ರಾಂತಕ್ಕೆ ಹಿಂದುಸ್ತಾನದಿಂದ ಬೇರೆಯಾಗಬೇಕೆಂದೆನಿಸಿದರೆ ಕಾಂಗ್ರೆಸು ಬಹುಜನರ ಅಭಿಪ್ರಾಯಕ್ಕೆ ಮನ್ನಣೆ ಕೊಡಲಿಕ್ಕಿಲ್ಲವೆ? ಹಿಂದುಸ್ತಾನದ ಒಂದು ಘಟಕವಾಗಿ ಉಳಿಯಲೇಬೇಕು ಎಂಬ ಒತ್ತಾಯವಿದ್ದಾಗ ಸ್ವಯಂನಿರ್ಣಯ ತತ್ತ್ವ ಹೇಗೆ ತಾನೆ ಹತಮು? ಹೀಗೆ ಅನೇಕ ಕಡೆಗಳಿಂದ ದೂರು ಬರಬಹುದಾಗಿದೆ. ಅ. ಭಾ. ಕಾಂ. ಸಮಿತಿಯ ನಿರ್ಣಯವೆ ಕೊನೆಯದಾದ್ದರಿಂದ ಅಲ್ಲಿಯ ವರೆಗೆ ನಮ್ಮ ವಿಮರ್ಶೆಯನ್ನು ತಡೆಯಬೇಕಾಗಿದೆ.

ಕಮ್ಯುನಿಸ್ಟರ ಕೆಂಪೆಪಾಕ

ಎರಡನೆಯದೆಂದರೆ, ಕಮ್ಯುನಿಸ್ಟರ ವಿಷಯ. ಕಮ್ಯುನಿಸ್ಟರು ಕಾಂಗ್ರೆಸಿನ ಸದಸ್ಯರಾಗಬಲ್ಲರು; ಆದರೂ ೧೯೨೨ ಆಗಸ್ಟ್ ೧ನೆಯ ತಾರೀಕಿನಿಂದ ಕಮ್ಯುನಿಸ್ಟರು ಕಾಂಗ್ರೆಸಿನ ನಿರ್ಣಯವನ್ನು ಧಿಕ್ಕರಿಸಿದರು, ದಬ್ಬಾಳಿಕೆಯನ್ನು ನಡೆಯಿಸಿದ ಸರಕಾರದೊಡನೆ ಸಹಕರಿಸಿದರು. ಅವರ ನಡತೆ ಎಂದರೆ ದ್ರೋಹ, ಅವರನ್ನು ನಡೆಯಿಸಿಕೊಳ್ಳುವುದೆಂದರೆ ಶತ್ರುಗಳಂತೆ ಎಂದು ಅನೇಕರು ವಾದಿಸತೊಡಗಿದ್ದಾರೆ. ಶ್ರೀ. ಭುಲಾಭಾಯಿಯವರು ನಿರ್ಣಯ ಕೊಟ್ಟಂತೆ ಕಮ್ಯುನಿಸ್ಟರು ತಪ್ಪು ದಾರಿಯನ್ನೆ ಹಿಡಿದರೆಂದು ತಿಳಿಯುವಾ. ಆದರೆ ಅಷ್ಟಕ್ಕೆ ಕಮ್ಯುನಿಸ್ಟರು ದೇಶದ್ರೋಹಿಗಳೆಂದು ಹೇಳಲಾಗದು; ಇದಲ್ಲದೆ, ಕೆಲವು ಮುಂದಾಳುಗಳನ್ನು ಬಿಟ್ಟರೆ ಮಿಕ್ಕಿ ಲಕ್ಷಾಂತರ ಕಮ್ಯುನಿಸ್ಟರು ಕಾಂಗ್ರೆಸಿನ ಅಭಿಮಾನಿಗಳಾಗಿದ್ದಾರೆ; ಸಾಮ್ರಾಜ್ಯವಿರೋಧತ್ವದ ಪರ.

ೀಯ ರಾಜ್ಯಸತ್ತೆಯ ವಿರೋಧಿಗಳಾಗಿದ್ದಾರೆ. ತನ್ನ ಮಹತ್ತ್ವದ ಸ್ಥಾನವನ್ನರಿತೂ ಕಾಂಗ್ರೆಸಿಗೆ ಎದುರಾಗಿ ನಿಂತ ರಾಜಾಜಿಯವರಿಗೆ ಮತ್ತೆ ಸ್ವಾಗತವನ್ನೀಯುವಾಗ, ಕೇವಲ ತಮ್ಮ ಮುಂದಾಳುಗಳ ನಿರ್ಣಯವನ್ನು ಹಿಂಬಾಲಿಸಿದ್ದಕ್ಕೆ ಲಕ್ಷಾಂತರ ಕಮ್ಯುನಿಸ್ಟರನ್ನು ಹೊರಗೆ ತಳ್ಳಬಹುದೆ? ತಪ್ಪುದಾರಿಯನ್ನು ಹಿಡಿದರೂ ಅವರು ದೇಶ-ಪ್ರೇಮಿಗಳು ಎಂದು ಸುಭಾಷರ ಸೈನಿಕರ ಮೇಲೆ ಕನಿಕರವನ್ನು ತೋರಿಸುವಾಗ ಹಾಗೆಯೆ ತಪ್ಪುದಾರಿಯನ್ನು ಹಿಡಿದಿರಬಹುದಾದ ಕಮ್ಯುನಿಸ್ಟರನ್ನು ದಂಡಿಸುವುದೇಕೆ? ಕಾಂಗ್ರೆಸಿನ ನಿರ್ಣಯ (ಅದು ಯಾವುದಿದ್ದರೂ ಅಧಿಕೃತವಾಗಿರಲಿಲ್ಲ) ವನ್ನು ಧಿಕ್ಕರಿಸಿದ ಮಾತ್ರಕ್ಕೆ ಅವರು ಸರಕಾರದ ಸಹಕಾರಿಗಳಾದರೆ? ಈ ನಾಲ್ಕು ವರ್ಷ ಸರಕಾರದ ನೀತಿಯನ್ನು ಧೈರ್ಯದಿಂದ ಖಂಡಿಸಿದ ಪಕ್ಷವೆಂದರೆ ಕಮ್ಯುನಿಸ್ಟರೊಂದೆ; ಹೀಗಿರುವಾಗ ಲಕ್ಷಾಂತರ ದೇಶಪ್ರೇಮಿಗಳ ಮತ್ತು ಯುವಕರ ಸಹಾನುಭೂತಿಯನ್ನು ಕಳೆದುಕೊಳ್ಳುವ ಘೋರತೆಯನ್ನು ಕಾಂಗ್ರೆಸು ಸ್ವೀಕರಿಸಲಿಕ್ಕಿಲ್ಲವೆಂದು ನಂಬಿದ್ದೇವೆ.

ವೈಸರಾಯರ ಯಾತ್ರೆ

ಸಿಮ್ಲಾ ಸಮ್ಮೇಳನದ ತರುವಾಯದ ಎರಡನೆಯ ಮಹತ್ತ್ವದ ಘಟನೆ ಎಂದರೆ, ಕೂಲಿಕಾರ ಮಂತ್ರಿಮಂಡಳದೊಡನೆ ಚರ್ಚೆಗಾಗಿ ವೈಸರಾಯರು ಮತ್ತೊಮ್ಮೆ ಲಂಡನ್ನಿಗೆ ಹೋದದ್ದು. ಈ ಸಲದ ಚರ್ಚೆಯ ಹಿನ್ನೆಲೆಯಲ್ಲಿ ಎರಡು ಸಂಗತಿಗಳಿವೆ; ಒಂದು, ಹಿಂದುಸ್ತಾನಕ್ಕೆ ಅದಷ್ಟು ಬೇಗ ಸ್ವಾತಂತ್ರ್ಯವನ್ನು ಕೊಡಲೇಬೇಕೆಂದು ಪಟ್ಟುದಿಂದ ತತ್ತ್ವವನ್ನು ಪ್ರತಿಪಾದಿಸುವ ಕೂಲಿಕಾರ ಪಕ್ಷವು ಪಾರ್ಲಮೆಂಟಿನಲ್ಲಿ ಅಧಿಕಾರಾರೂಢವಾಗಿದೆ; ಇನ್ನೊಂದು, ಸಿಮ್ಲಾ ಸಮ್ಮೇಳನದ ಕಾಲದಲ್ಲಿ ಬೇರೆ ಬೇರೆ ಪಕ್ಷದ ಮುಂದಾಳುಗಳೊಡನೆ ವೈಸರಾಯರು ಸಮಕ್ಷವಾಗಿ ಚರ್ಚಿಸಿದ್ದು. ಮೊದಲ ಮಾತಿಗಾಗಿ ವೈಸರಾಯರಿಗೆ ಪಾರ್ಲಮೆಂಟಿನಿಂದ ಉತ್ತೇಜನ ದೊರೆಯುವುದು; ಎರಡನೆಯದಕ್ಕಾಗಿ, ವೈಸರಾಯರ ಅನುಭವದಿಂದ ಕೂಲಿಕಾರ ಮಂತ್ರಿಮಂಡಳದ ಸಮಜಾಯಿಷಿಗೆ ಲಾಭ ದೊರೆಯುವುದು. ಹೀಗೆ ಪರಸ್ಪರ ಪೋಷಕವಾದ ಉತ್ತೇಜಕಗಳ ಹಿನ್ನೆಲೆಯಲ್ಲಿ ಹಿಂದುಸ್ತಾನದ ಬಗ್ಗೆ ಚರ್ಚೆ ನಡೆಯುವುದರಿಂದ, ಈ ಸಲವಾದರೂ ಒಂದು ನಿಶ್ಚಿತ ಪೆಚ್ಚಿಯನ್ನು ಮುಂದಿಡಬಹುದಾಗಿದೆ ಎಂದು ಅನೇಕರು ಭಾವಿಸುವುದು ತಪ್ಪಲ್ಲ. ಇದಲ್ಲದೆ, ಚರ್ಚೆಗೆ ಮುಂಚಿತವಾಗಿ ಸಾರ್ವತ್ರಿಕ ಚುನಾವಣೆಗಳನ್ನು ನಿರ್ಧರಿಸಿದ್ದರಿಂದ ಆಶಾದಾಯಕ ವಾತಾವರಣಕ್ಕೆ ಇನ್ನಷ್ಟು ಪುಟವು ದೊರೆತಿದೆ.

ಘೋಷಣೆ

ಅಖಿಲಭಾರತ ಕಾಂಗ್ರೆಸ ಸಮಿತಿಯ ಅಧಿವೇಶನಕ್ಕೆ ಮುಂಚಿತವಾಗಿಯೆ ಲಾರ್ಡ್ ವೇವೆಲ್‌ರು ಬ್ರಿಟಿಶ್ ಸರಕಾರದ ವತಿಯಿಂದ ಲಂಡನ್ನಿನಿಂದ ತಾವು ತಂದ ಘೋಷಣೆಯನ್ನು ಸಾರಿದ್ದಾರೆ ಈ ಘೋಷಣೆಯಲ್ಲಿಯ ಮುಖ್ಯ ಮಾತುಗಳು ಹೀಗೆ:—

೧. ಪ್ರಾಂತಿಕ ಚುನಾವಣೆಗಳ ನಂತರ, ಆ ಪ್ರತಿನಿಧಿಗಳೊಡನೆ ಮತ್ತು ಸಂಸ್ಥಾನಗಳೊಡನೆ ಘಟನಾ ಪರಿಷತ್ತಿನ (Constituent Assembly) ರಚನೆಯ ಬಗ್ಗೆ ವೈಸರಾಯರು ಚರ್ಚಿಸುವರು.

೨. ಪ್ರಾಂತಿಕ ಚುನಾವಣೆಗಳ ಫಲಿತಾಂಶವನ್ನು ಅನುಲಕ್ಷಿಸಿ ಆಯಾ ಪಕ್ಷಗಳ ಪ್ರಾತಿನಿಧಿಕವಾಗುವಂತೆ ಕೇಂದ್ರದಲ್ಲಿ ವೈಸರಾಯರು ತಮ್ಮ ಕೌನ್ಸಿಲನ್ನು ರಚಿಸಿಕೊಳ್ಳುವುದು.

೩. ಘಟನಾ ಪರಿಷತ್ತನ್ನು ಕೂಡಿಸುವುದು.

೪. ಇಂಗ್ಲಂಡ ಮತ್ತು ಹಿಂದುಸ್ತಾನ ಇವುಗಳಲ್ಲಿ ಆಗಬೇಕಾದ ಒಪ್ಪಂದವನ್ನು ನಿರ್ಣಯಿಸುವುದು; ಇದರ ಬಗ್ಗೆ ಬ್ರಿಟಿಶ ಮಂತ್ರಿಮಂಡಳವು ಈಗಾಗಲೆ ವಿಚಾರವನ್ನು ನಡೆಸಿದೆ.

ಘೋಷಣೆಯ ಮಹತ್ತ್ವ

ಘೋಷಣೆಯಲ್ಲಿ ಯಾವ ದೊಡ್ಡ ಮಾತೂ ಇಲ್ಲದ್ದಕ್ಕಾಗಿ ಅನೇಕರಿಗೆ ನಿರಾಶೆಯಾಗಲು ಸಾಕು. ಆದರೆ ತುಸು ವಿಚಾರ ಮಾಡಿದಲ್ಲಿ ಕೂಲಿಕಾರ ಮಂತ್ರಿಮಂಡಳದವರ್ತಾತ್ತ್ವಿಕ ಹಟ ಮತ್ತು ವೈಸರಾಯರ ಸಿಮ್ಲಾ ಸಮ್ಮೇಳನ ಅನುಭವದ ಲಾಭ—ಎರಡೂ ಕಂಡುಬರುವುವು. ಸದ್ಯದ ಮತದಾರರ ಗಣನಾದಿಯನ್ನು ತಿದ್ದುವುದನಶ್ಯ ಎಂಬ ಮಾತನ್ನು ಸರಕಾರದವರೂ ಒಪ್ಪಿದ್ದಾರೆ; ಆದರೆ ಆ ಕೆಲಸಕ್ಕೆ ತಗಲಬಹುದಾದ ಎರಡು ವರ್ಷಗಳ ವಿಳಂಬಕ್ಕೆ ಸರಕಾರವು ಸಿದ್ಧವಿಲ್ಲ. ಎರಡು ವರ್ಷಗಳ ಕಾಲಕ್ಷೇಪ ಎಂದರೆ ಕೂಲಿಕಾರ ಮಂತ್ರಿಮಂಡಳವು ಕೂಡ ಯಾವ ಸರಿಸ್ಥಿತಿಯಲ್ಲಿರಬಹುದು ಎಂಬುದನ್ನು ಹೇಳಲು ಬರುವಂತಿಲ್ಲ. ಈಗಾಗಲೆ ಕೊಟ್ಟ ವಚನಗಳನ್ನು ಮುರಿಯುವುದರಲ್ಲಿ ಹೆಸರುಗೆಟ್ಟ ಬ್ರಿಟಿಶರಲ್ಲಿ ಭಾರತೀಯರ ಅವಿಶ್ವಾಸ ಹೆಚ್ಚುತ್ತಲಿದೆ; ಇದಲ್ಲದೆ ಇನ್ನೊಂದು ಕಾರ್ಯೋತ್ಸಾಹಿ ವೈಸರಾಯರೂ ಮುಂದೆ ದೊರೆಯಬಹುದೆಂಬ ಭರವಸೆ ಇಲ್ಲ. ಸರಕಾರವು ತತ್ತ್ವದ ಹಟಕ್ಕಾಗಿ ಎಷ್ಟು ಅವಸರದಿಂದ ಕಾರ್ಯಪ್ರವೃತ್ತವಾಗಿದೆ ಎಂಬುದಕ್ಕೆ ವೈಸರಾಯರು ಕಾಣಿಸಿದ ಎರಡು ಕಾರಣಗಳನ್ನು ನಂಬಲು ಅಡ್ಡಿ ಇಲ್ಲ. ಹೊಸತಾಗಿ ಅಧಿಕಾರಾರೂಢವಾದ ಕೂಲಿಕಾರ ಮಂತ್ರಿಮಂಡಳವು ಅನೇಕ ಮಹತ್ತ್ವದ ಪ್ರಶ್ನೆಗಳನ್ನು ಎದುರಿಸಬೇಕಾದಾಗ, ಅಧಿಕಾರಕ್ಕೆ ಬಂದ ಕೆಲವೆ ದಿನಗಳಲ್ಲಿ ಈ ಹಿಂದುಸ್ತಾನದ ಸಮಸ್ಯೆಯನ್ನು ಚರ್ಚಿಸಿ ನಿರ್ಣಯಿಸಿತು; ಇದಲ್ಲದೆ ಎರಡೂ ದೇಶಗಳಲ್ಲಿ ಆಗಬೇಕಾದ ಒಪ್ಪಂದದ ವಿಚಾರವನ್ನೂ ಈಗಾಗಲೆ ಕೈಗೊಂಡಿದೆ.

ವ್ಯಾಪಕ ಮತ್ತು ನಿರ್ಣಾಯಕ

ಏರಲಿರುವ ಚರ್ಚೆಯಲ್ಲಿ ಸಂಸ್ಥಾನಗಳೂ ಸೇರುವುವಾದ್ದರಿಂದ ಭಾರತದ ಭವಿತವ್ಯತೆಯನ್ನು ವ್ಯಾಪಕ ದೃಷ್ಟಿಯಿಂದಲೆ ನೋಡಲಾಗುವುದು ಎಂದು ಹೇಳಬಹುದು. ಇದಲ್ಲದೆ ಪ್ರಾಂತಿಕ ಪ್ರಜಾಪ್ರತಿನಿಧಿಗಳೊಡನೆ ವೈಸರಾಯರು ಚರ್ಚಿಸುವರಾದ್ದರಿಂದ, ಆ ಚರ್ಚೆಯ ನಿರ್ಣಯಕ್ಕೆ ಒಂದು ಅಧಿಕಾರವೂ ಪ್ರಾಪ್ತವಾಗುವುದು ಎಂದು ಹೇಳಲು ಅಡ್ಡಿ ಇಲ್ಲ. ಆದರೆ ಎಲ್ಲಕ್ಕೂ ಮಹತ್ತ್ವದ ಸಂಗತಿ ಇನ್ನೊಂದಿದೆ. ಯುದ್ಧ ಮುಗಿವುದರಲ್ಲಿ ಭಾರತೀಯರು ತಮ್ಮ ಯೋಜನೆಯನ್ನು ಸಿದ್ಧಪಡಿಸದಿದ್ದರೆ ಬ್ರಿಟಿಶ್ ಸರಕಾರವು ಯುದ್ಧದ ತರುವಾಯ ತಾನೇ ಮುಂದೆ ಸಾಗುವುದೆಂಬ ಮಾತು ಕ್ರಿಪ್ಸ್ ಯೋಜನೆಯಲ್ಲಿದ್ದಿತಷ್ಟೆ? ಆ ಮಾತಿಗಾಗಿಯೂ ಇಂದು ಕ್ರಿಪ್ಸ್ ಯೋಜನೆಯನ್ನು ಬ್ರಿಟಿಶ್ ಸರಕಾರವೂ ವೈಸರಾಯರೂ ಎತ್ತಿ ಹಿಡಿದಿದ್ದಾರೆ. ಅದಕಾಗಿಯೇ 'ನಮ್ಮ ಮಾರ್ಗದಲ್ಲಿಯ ಜಡಜಣೆಗಳ ಅರಿವು ನಮಗಿದೆ; ಆದರೆ ಅವುಗಳನ್ನು ದೂರ ಮಾಡಲು ಸರಕಾರವು ನಿರ್ಧಾರದಿಂದ ನನಗೆ ಅಧಿಕಾರ ಕೊಟ್ಟಿದೆ' ಎಂದು ವೈಸರಾಯರು ಹೇಳಿದುವರು. 'ಎಲ್ಲ ಪಕ್ಷಗಳ ಸಮ್ಮತಿ ಆಗತ್ಯ' ಎಂಬ ಅಸಂಭವತೆಯ ಕಂಠಾರು ಕೊನೆಗೆ ಒಮ್ಮೆ ಬ್ರಿಟಿಶರ ಮಾತುಗಳಲ್ಲಿ ಜಾರಿಯವಾಯಿತು ಎಂದು ಈಗ ನಾವು ಅತ್ಯಂತ ಸಂತೋಷದಿಂದ, ಆಶಾಯುಕ್ತತೆಯಿಂದ ಹೇಳಬಹುದಲ್ಲವೆ?

ಅಚ್ಚಾಗಿದೆ: ಶ್ರೀರಂಗರ "ಸಂಸಾರಿಗ ಕಂಸ" ಬೆಲೆ: ೧-೮-೦

ಡೋಗರೆ ಬಾಲಾಮೃತ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಚಲಚ್ಚಿತ್ರ, ಅಭಿನಯ, ನಾಟಕಕಲಾ ವಿಜ್ಞಾನಗಳಿಗೆ
ಮೀಸಲಾದ, ಕನ್ನಡನಾಡಿನ ಅತ್ಯುತ್ತಮ
ಮಾಸಪತ್ರಿಕೆ

ಚಿತ್ರ

ಸಂಪಾದಕರು: ಶ್ರೀ. ಮಾ. ನಾ. ಚೌಡಪ್ಪ

೩೬ ಪುಟಗಳ ಸಚಿತ್ರ ಮಾಸಪತ್ರಿಕೆಯು.

ವಾರ್ಷಿಕ ಚಂದಾ : ರೂ. ೨-೮-೦ : ಬಿಡಿ ಪತ್ರಿಕೆ ೩ ಆಣೆ

ಈಗ ಏಜೆಂಟರಿಲ್ಲದ ಕೇಂದ್ರಗಳಲ್ಲೆಲ್ಲಾ

ಏಜೆಂಟರು ಬೇಕಾಗಿದ್ದಾರೆ.

ವಿವರಗಳಿಗೆ:

ಚಿತ್ರಾ ಏಜೆನ್ಸೀಸ್

೧೨೧ ಸುಲ್ತಾನ್‌ಪೇಟೆ :: ಬೆಂಗಳೂರು ನಗರ

ಶೇಲಢಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಗು ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವೈನ್ಯಾನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧೫-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂವಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಢಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಧಾಕಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ಹೊಸ ಪುಸ್ತಕ ಹೊಸ ಪುಸ್ತಕ

ಪ್ರಸವ ವಿಜ್ಞಾನ

ಬರೆದವರು :

ಡಾ. ದೊಡ್ಡೇರಿ ವೆಂಕಟಗಿರಿರಾವ್

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭಿಣಿಯ ದಿನಚರಿ ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ, ಸಹಜ-ಪ್ರಸವ, ಸ್ರಸನ ನಿರ್ವಹಣರೀತಿ, ಅಕ್ರಮ ಮತ್ತು ಸಂಕೀರ್ಣ ಪ್ರಸವ ರೀತಿಗಳು, ಬಾಣಂತೀ ರೋಗಗಳು ಅವುಗಳ ಚಿಕಿತ್ಸೆಗಳು ಶಿಶು-ಬಾಣಂತಿಯರ ರಕ್ಷಣ ಮೊದಲಾದುವನ್ನು ಸರಳವಾಗಿಯೂ ಸಚಿತ್ರವಾಗಿಯೂ ವಿವರಿಸುವ ಪುಸ್ತಕ. ಸುಮಾರು ೪೩ ಚಿತ್ರಗಳವೆ.

● ಬೆಲೆ: ಎರಡು ರೂಪಾಯಿಗಳು ●

ಮಾರಾಟದ ಪೂರ್ಣಧಿಕಾರಿಗಳು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!
- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಪೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸುದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಕೆಗೂ ಕಳ್ಯವಾಗಿದೆ.
- ಕರ್ನಾಟಕದ ಏಳ್ಗೆಗಾಗಿ ದುಡಿಯುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಎ. ಎಸ್. ಕೆಣ್ಣಿ, ಮ್ಯಾನೇಜಿಂಗ್ ಡೈರೆಕ್ಟರ್ ಎಂ. ಗೋವರ್ಧನರಾವ, ಮ್ಯಾನೇಜರ್



ಕೆಮ್ಮನ್ನು ಆಲಕ್ಷಿಸಿದ ವಿಶೇಷ ಮುಪ್ಪರಿಗಾಮಗಳಿಂದ, ಸುವಿಚಾರು ಜನರನ್ನು, ಪ್ರಸಿದ್ಧಿಹೊಂದಿದ ಈ ಔಷಧವು ಸಂರಕ್ಷಿಸಿದೆ.

'ಕಾಸ್ಕೊ'ದಲ್ಲಿ ಎರಡು ರೀತಿಯ ಗುಣಗಳಿವೆ:—ಹೊರಭಾಗದಿಂದ—ಅದರ ಸವಿಯಾದ ಶಕ್ತಿಯು ಗಂಟಲೊಳಗೆ ಕಾಗಿಕೊಂಡು ಕೆಮ್ಮನ್ನು ಹೊರಡಿಸುವ ಪರಿಗಳನ್ನು ಶಾಂತಪಡಿಸುತ್ತದೆ. ಒಳಭಾಗದಿಂದ—ಅದು ಗಂಟಲೊಳಗಿನ ಸ್ವಾಭಾವಿಕವಾದ ಒಸರುವಿಕೆಗೆ ಚೈತನ್ಯವನ್ನುಂಟುಮಾಡುತ್ತದೆ. ಕಫವನ್ನು ಕತ್ತರಿಸಲು ಸಹಾಯಮಾಡುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ. ಮತ್ತು ಕೆಮ್ಮನ್ನು ಹೊರಡಿಸುವ ಸೋಂಕನ್ನು ಅಲ್ಪಕಾಲದಲ್ಲಿಯೆ ನಿರ್ಮೂಲಪಡಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯನ್ನು ನಿಲ್ಲಿಸುತ್ತದೆ. 'ಪೆಪ್ಪರ್‌ಮೆಂಟ್'ನಂತೆ ಒಂದು ಬಿಲ್ಲೆಯನ್ನು ೧-೨ ಗಂಟೆಗೊಮ್ಮೆ ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳುವುದು.

ಎಲ್ಲಾ ಔಷಧಾಲಯಗಳಲ್ಲಿಯೂ ದೊರಕುವುದು.

ಕಾಸ್ಕೊ

ಅಮೃತಾಂಜನ ಕೆಮ್ಮುಶಾಮಕ ಬಿಲ್ಲೆಗಳು

ಅಮೃತಾಂಜನ್ ಫಾರ್ಮಸಿ ಲಿಮಿಟೆಡ್, ಅಹಮ್ಮದ್‌ನಗರ

ಹುಬ್ಬಳ್ಳಿ ಶಾಖೆ:— ಸ್ಟೇಷನ್ ರೋಡ, ಹುಬ್ಬಳ್ಳಿ

ದೀಪಾವಳಿ

ಸಂಚಿಕೆ



ಶ್ರೀರಂಗ, ಎಚ್. ಎಸ್. ಪಾಟೀಲ, ಎಲ್. ಜೆ ಜೇಂದ್ರೆ, ಆಲೂರ ವೆಂಕಟರಾಯರು
ಪ್ರೊ ಮೂಳವಾಡ, ಎನ್. ಎಸ್. ಗದಗಕರ, ಪ್ರೊ ವಿ. ಎಂ ಇನಾಮದಾರ,
ಪೊರಬ ರಘುನಾಥ, ಪ್ರೊ ಧಾರವಾಡಕರ, ಎನ್ ಕೆ ಕುಲಕರ್ಣಿ,
ಕಸ್ತೂರಿ, 'ಕಾವ್ಯಾನಂದ', ಬಿ ಎಚ್ ಶ್ರೀಧರ, ಸ್ವಾಮಿರಾಯ
ಕುಲಕರ್ಣಿ, ಪ್ರೊ. ಗದ್ದಿಗಿ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ನಿಮ್ಮ ಮಾದುನ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!
- ಸೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸುದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಕೆಗೂ ಶಕ್ತಿಯಾಗಿದೆ.
- ಕರ್ನಾಟಕದ ಏಳ್ಗೆಗಾಗಿ ದುಡಿಯಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನು ಸಾಲುಗಳನ್ನೂ ಕೊಂಡುಕೊಳ್ಳಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಎ. ಎಸ್. ಕಿಣ್ಣಿ, ಮ್ಯಾನೇಜಿಂಗ್ ಡೈರೆಕ್ಟರ್ ಎಂ. ಗೋವರ್ಧನರಾವ, ಮ್ಯಾನೇಜರ್

ಕೆಮ್ಮನ್ನು ಆಲಕ್ಷಿಸಿದ ನಿರೇಪ ದುಷ್ಪರಿಣಾಮಗಳಿಂದ, ಸಾವಿರಾರು ಜನರನ್ನು, ಪ್ರಸಿದ್ಧಿಪೊಂದಿದ ಈ ಔಷಧವು ಸಂರಕ್ಷಿಸಿದೆ.

'ಕಾಸ್ಸೊ'ದಲ್ಲಿ ಎರಡು ರೀತಿಯ ಗುಣಗಳಿವೆ:— ಹೊರಭಾಗದಿಂದ:—ಅದರ ಸವಿಯಾದ ಶಕ್ತಿಯು ಗಂಟಲೊಳಗೆ ಹಾಗಿಕೊಂಡು ಕೆಮ್ಮುವ ಹೊಡಿಸುವ ಪರಿಗಳನ್ನು ಶಾಂತಪಡಿಸುತ್ತದೆ. ಒಳಭಾಗದಿಂದ:— ಅದು ಗಂಟಲೊಳಗಿನ ಸ್ವಾಭಾವಿಕವಾದ ಒಸರುವಿಕೆಗೆ ಚೈತನ್ಯವನ್ನುಂಟುಮಾಡುತ್ತದೆ. ಕಫವನ್ನು ಕತ್ತರಿಸಲು ಸಹಾಯ ಮಾಡುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ. ಮತ್ತು ಕೆಮ್ಮನ್ನು ಹೊರಡಿಸುವ ಸೋಂಕನ್ನು ಅಲ್ಪಕಾಲದಲ್ಲಿಯೆ ನಿರ್ಮೂಲಪಡಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯನ್ನು ನಿಲ್ಲಿಸುತ್ತದೆ. 'ಪಶ್ಚರ್ಮೆಂಟ್'ನಂತೆ ಒಂದು ಬಿಲ್ಲೆಯನ್ನು ೧-೨ ಗಂಟೆಗೊಮ್ಮೆ ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳುವುದು.

ಎಲ್ಲಾ ಔಷಧಾಲಯಗಳಲ್ಲಿಯೂ ದೊರಕುವುದು.



ಹುಬ್ಬಳ್ಳಿ ಶಾಖೆ:— ಸ್ಟೇಷನ್ ರೋಡ, ಹುಬ್ಬಳ್ಳಿ

ದೀಪಾವಳಿ ಸಂಚಿಕೆ

ಶ್ರೀರಂಗ, ಎಚ್. ಎಸ್. ಪಾಟೀಲ, ಎಲ್. ಜೆ ಬೇಂದ್ರೆ, ಆಲೂರ ವೆಂಕಟರಾಯರು
ಪ್ರೊ ಮಾಳವಾದ, ಎನ್. ಎಸ್. ಗದಗಕರ, ಪ್ರೊ ವಿ. ಎಂ ಇನಾಮದಾರ,
ಹೊರಬ ರಘುನಾಥ, ಪ್ರೊ. ಧಾರವಾಡಕರ, ಎನ್ ಕೆ ಕುಲಕರ್ಣಿ,
ಕಸ್ತೂರಿ, 'ಕಾವ್ಯಾನಂದ', ಬ ಎಚ್ ಶ್ರೀಧರ, ಸ್ವಾಮಿರಾಯ
ಕುಲಕರ್ಣಿ, ಪ್ರೊ [illegible]

ಈ ಕತೆ ನಿಮಗೆ ಗೊತ್ತಿಲ್ಲವೆ?

" ಕಮಲಾಸ ಗಂಡನಿಗೆ ಮುಂಬಯಿಯಲ್ಲಿ ಕೆಲಸ; ಮುಂಬಯಿಯ ಪೆರುಗಿಗೆ
ತಕ್ಕವಳಲ್ಲವೆಂದು ಅವಳ ಬಗೆಗೆ ಗಂಡನಿಗೆ ಅತೃಪ್ತಿ! ಆದರೆ ಕಮಲಾ ಚತುರೆ!

ಏನು ಮಾಡಿದಳು ಗೊತ್ತೆ?

ಅಂದವಾದ ವಸ್ತ್ರವೊಂದನ್ನು ತೆಗೆದುಕೊಂಡಳು; ವಿವಿಧ ವರ್ಣದ ರೇಶಿಮೆಯ ಎಳೆಗಳಿಂದ, ಕುಶಲತೆಯಿಂದ ಕುಸುರು ಕುಸುರಿನ ಕಸೀದೆ ತೆಗೆದಳು. ಮುಖ್ಯ ಕಿರಣವಾಗಿ ಕನ್ನಡದಲ್ಲಿ ಮುತ್ತಿನಂತೆ ಗಂಡನ ಹೆಸರನ್ನು ಚಿತ್ರಿಸಿದಳು. ಹೊಸ ಮಾವರಿಯ ಪರಿಮಳ ದ್ರವ್ಯವನ್ನು ಚಿಮುಕಿಸಿ, ಗಂಡನಿಗೆ ಕಾಣಿಕೆಯಾಗಿ ಕಳುಹಿಸಿದಳು.

ಕಮಲೆಯ ಗಂಡ ನೋಡಿದ; ಆಶ್ಚರ್ಯಗೊಂಡ. ಮನದಲ್ಲಿ ಒಲವು ಕೋಸರಿಟ್ಟು ಹಬ್ಬಿತು. ಆಳಯತನಕ್ಕೆ ಕರೆಯಿಸದಿದ್ದರೂ ದೀವಳಿಗೆಗೆ ನೂತನ ಮನೆಗೆ ಬಂದ. ಕಮಲೆಯ ಬಾಳು ಸುಖದ್ದಾಯಿತು.

ಕಮಲಾ ತನಗೆ ಬೇಕಾಗುವ ಎಲ್ಲ ಹೆಣ್ಣಿಕೆಯ ಸಾಮಾನುಗಳನ್ನೂ ಪರಿಮಳದ
ದ್ರವ್ಯಗಳನ್ನೂ ಚೆಂದ-ಚೆಂದದ ಕೈಬಳೆಗಳನ್ನೂ

ಸಿಪಿಸೊಪ್ಟಿಸ್ಟ್, ಮಾರ್ಕೆಟ್ ರೋಡು, ಧಾರವಾಡ

ಅವರಲ್ಲಿಗೆ ಹೋಗಿ ಕೊಂಡುತರುವಳೆಂಬುದು ಎಲ್ಲ ತರುಣಿಯರ
ನೆನಪಿನಲ್ಲಿರಲಿ, ಮರೆಯಬೇಡಿರಿ!

ಇದೀಗ ಹೊರಬಂದಿದೆ! **[ಶೋಡಶಿ]** ಜಾಗ್ರತೆ ಆರ್ಡರು ಕೊಡಿರಿ!!

ಶರಚ್ಚಂದ್ರರ ಹೆಸರಿಗೆ ಕೀರ್ತಿತಂದ ಕಾದಂಬರಿಗಳಲ್ಲೊಂದು!

ಮರಾಠಿಯಲ್ಲಿ 'ಭೈರವಿ,' ಗುಜರಾತಿ-ಬಂಗಾಲಿಗಳಲ್ಲಿ 'ಷೋಡಶಿ' ಎಂಬ ಹೆಸರಿನಲ್ಲಿ ಈ ಕಾದಂಬರಿಯು ಹಲವಾರು ಆವೃತ್ತಿಗಳು ಆಗಿವೆ. ಎಲ್ಲೆಲ್ಲಿಯೂ ಕ್ರಾಂತಿಯನ್ನೆಬ್ಬಿಸಿದೆ. ಅದೇ ಆ "ಷೋಡಶಿ" ಕನ್ನಡದಲ್ಲಿಯೂ ಸಿದ್ಧವಾಗಿದೆ. ಪರಭಾಷೆಯಲ್ಲಿ ಓದುವ ಅಗತ್ಯವಿಲ್ಲ. ಕನ್ನಡ ಷೋಡಶಿಯನ್ನೇ ಕೊಂಡುಕೊಳ್ಳಿ!

ವೇದವತಿ, ಚಂದ್ರನಾಥ, ಪರಿಣೀತಾ ಮೊದಲಾದ ಗ್ರಂಥಗಳನ್ನು ಅನುವಾದಿಸಿದ ಶ್ರೀ. ಗುರುನಾಥ ಜೋಶಿಯವರ ಮನಮೋಹಕ ಶೈಲಿ! ೨೩೬ ಪುಟಗಳು.

ಬೆಲೆ: ಎರಡು ರೂಪಾಯಿ ಮಾತ್ರ (ವಿ. ಪಿ. ವೆಚ್ಚ ಬೇರೆ)

ಇದು 'ಪ್ರತಿಭಾ' ಗ್ರಂಥಮಾಲೆಯ ಹೊಸ ವರುಷದ ಬಿಡಿಸಲೆಯ ಕಿರಣ. ಈ ಗ್ರಂಥಮಾಲೆಗೆ ೧೦-೮-೩ ಮುನಿಯಾರ್ಡರು ಮಾಡಿದರೆ, ಈ ಕೆಳಗಿನ ಪುಸ್ತಕಗಳೆಲ್ಲ ನಿಮ್ಮ ಮನೆಬಾಗಿಲಿಗೇ ಬಂದು ತಲಪುತ್ತವೆ.

೧.	ಹೆತ್ತವಳಾತಾಯಿ	(ಕಾರಂತರ ಕಾದಂಬರಿ)	ರೂ. ೨ ೦ ೦
೨.	ಗಂಡು ಹೆಣ್ಣಿನ ಸಮಸ್ಯೆ	(ಕಾದಂಬರಿ ಭಾ. ೧-೨)	ರೂ. ೩ ೮ ೦
೩.	ಭೂಮಾತೆ ಮತ್ತು ಮಂದಿರ	(೨ ಕಾದಂಬರಿಗಳ ಸಂಗ್ರಹ)	ರೂ. ೧ ೮ ೦
೪.	ಷೋಡಶಿ	(ಸಾಮಾಜಿಕ ಕಾದಂಬರಿ)	ರೂ. ೨ ೦ ೦
೫.	ಬಿರುಗಾಳಿ	(ಶ್ರೀ. ಫಡಕೆಯವರ ಕಾದಂಬರಿ)	ರೂ. ೧ ೮ ೦
೬.	,, ಭಾಗ ೨		ರೂ. ೨ ೦ ೦
೭.	ರಮಾನಾಥ	(ಸಾಹಿತ್ಯ ಸಾಮ್ರಾಟ್ ಶ್ರೀ ಮಜಂದ)	ರೂ. ೨ ೮ ೦
೮.	"ಗುಲಾಬೀ ಹೂ"	(ಶ್ರೀ. ಕಟ್ಟೀಮನಿ)	ರೂ. ೧ ೮ ೦

ಪೆಶ್ತುನರೆ ರೂ. ೪೮೫, ಮೇಲಿನ ಎಲ್ಲ ಹದಿನಾರುವರೆ ರೂಪಾಯಿ ಬೆಲೆಯ ಪುಸ್ತಕಗಳನ್ನು ಪಡೆಯುವ ಸುಸಂಧಿ ಕಳೆದುಕೊಳ್ಳಬೇಡಿ! ಕೆಲವೇ ಸೆಟ್ಟು ಮಾತ್ರ ಇವೆ!

ಇವಲ್ಲದೆ ನೂರಾರು ಕತೆ-ಕಾದಂಬರಿಗಳೂ ಇಂಟು. ಕ್ಯಾಟಲಾಗಿಗೆ ಒಂದಾಣೆಯ ಅಂಚೆಚೀಟು ಕಳುಹಿಸಿರಿ.

ಸಮಾಜ ಪುಸ್ತಕಾಲಯ, ಗಾಂಧೀಚೌಕು, ಧಾರವಾಡ



ದೀಪಾವಳಿ ಸಂಚಿಕೆ

(ನವಂಬರ್)

೧೯೪೫

ಮುಖ್ಯ ವಿಷಯಗಳ ಪರಿವಿಡಿ

ದೀಪಾವಳಿ (ಕವನ)	....	....	ಶ್ರೀ. ಚಿದಾನಂದ ಬಿ. ಎ. ಬೈಲಹೊಂಗಲ	೨೫೫
ಸಂಪಾದಕೀಯ (ಚಿನಾವಣೆ–ಕನ್ನಡಿಗರು)	....		ಸಂಪಾದಕರು	೨೫೬
ಮುಂಗನ ಮಲ್ಲಿನಾಥತನ	....	....	'ಮಲ್ಲಿನಾಥ'	೨೫೭
ತಾರಕ ಸಂಹಾರ (ಏಕಾಂಕ ನಾಟಕ)	....	....	'ಶ್ರೀರಂಗ'	೨೫೯
ಕನ್ನಡದ ಕೆಲಸ (ವಿ. ಪ್ರ. ಪ್ರಬಂಧ)	....	....	ಶ್ರೀ. ಎಚ್. ಎಸ್. ಪಾಟೀಲ ಎಂ. ಎ., ಬಿ. ಕಾಮ್. ಮುಂಬೈ	೨೬೭
ದೀವಳಿಗೆ ಬಂತು (ಕವನ)	....	....	ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಭಟಕಳ	೨೭೦
ಕನ್ನಡ ಮೆರೆಯಲಿ (ಕವನ)	....	....	ಜನಾಬ್ ಬಿ ಎಂ. ಇದಿನಬ್ಬ, ಮಂಗಳೂರು	೨೭೦
ತಿಮ್ಮಣ್ಣನ ಪ್ರಣಯ ಪುರಾಣ (ಸಣ್ಣಕತೆ)	....	....	ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ	೨೭೧
ಕಿವಿಮಾತು (ಜಾನಪದ ಪ್ರಣಯಗೀತ)	....		'ಕಾವ್ಯಾನಂದ' ನಾಂದೇಡ	೨೭೫
ಕರ್ನಾಟಕದ ಚಳವಳಿಯಲ್ಲಿ ಧಾರವಾಡದ ಭಾಗ (ಇತಿಹಾಸ)			ಶ್ರೀ. ಆಲೂರ ವೆಂಕಟರಾಯರು ಬಿ. ಎ, ಎಲ್.ಎಲ್. ಬಿ.	೨೭೬
ನೆಬತೀ ಹಳ್ಳಿದ ದಂಡೀ ವ್ಯಾಳೆ (ಆವಣಿ)	....		ಶ್ರೀ. ಕುಲಕರ್ಣಿ ಸ್ವಾಮಿರಾಯರು ಎಂ. ಎ. ಧಾರವಾಡ	೨೭೯
ಸಣ್ಣಕತೆಯ ತಂತ್ರ (ಸಾಹಿತ್ಯ ವಿಮರ್ಶೆ)	....		ಶ್ರೀ. ಎನ್. ಎಸ್. ಗದಗಕರ ಬಿ ಎ. ಧಾರವಾಡ	೨೮೦
ಜಲಗಾರ ದರ್ಶನ (ಪುಸ್ತಕಾವಲೋಕನ)	....		ಪ್ರೊ. ಎಸ್. ಎಸ್. ಮಾಳವಾಡ ಎಂ. ಎ. ಧಾರವಾಡ	೨೮೨
ಜ್ಞಾನವೋ, ಯುದ್ಧವೊ? (ವಿಜ್ಞಾನ ವಿಚಾರ)	..		ಪ್ರೊ. ಕೆ. ಎಸ್. ಸವಣೂರ ಎಂ. ಎಸ್‌ಸಿ. ಧಾರವಾಡ	೨೮೫
ಯುದ್ಧೋತ್ತರ ಪುನರ್ರಚನೆ (ವ್ಯಂಗ್ಯ ಪ್ರಬಂಧ)	....		ಶ್ರೀ. ಮೊರಬ ರಘುನಾಥರಾಯರು ಬಿ ಎ ಸಿಗ್ಗಾಂವಿ	೨೮೭
ಏಕಾಂಕದ ತಂತ್ರ (ಸಾಹಿತ್ಯ ವಿಮರ್ಶೆ)	....		ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ. ಧಾರವಾಡ	೨೯೧
ಬಾಳ್ಗನಸು (ಸಣ್ಣಕತೆ)	...	....	ಶ್ರೀ. ರಾ. ಶ್ರೀ. ಕಸ್ತೂರಿ ಕೋಟ್ಸು, ಮುಂಬೈ	೨೯೫
ಆಧುನಿಕ ಕವಿ-ಕಾವ್ಯದೃಷ್ಟಿ (ಸಾಹಿತ್ಯವಿಮರ್ಶೆ)	....		ಪ್ರೊ. ರಾ. ಯ. ಧಾರವಾಡಕರ ಎಂ. ಎ. ಧಾರವಾಡ	೨೯೯
ಸುಡಿ–ನಡೆ (ಕವನ)	....	..	'ಗೀತಾಪ್ರಿಯ'	೩೦೪
ಸತ್ತವರು ಯಾರು? (ನಗೆಯಾಟ)	....	....	ಶ್ರೀ- ಕೆ. ಟಿ. ಪುರಾಣಿಕ ಬಿ. ಎ., ಬಿ. ಟಿ. ಗೋಕಾಕ	೩೦೫
ಹರಟೆಯೆಂಬ ಹರಟೆ (ಹರಟೆ)	....	...	ಶ್ರೀ. ವಿ. ಎಂ ಇನಾಮದಾರ್ ಎಂ. ಎ. ಮುಂಬಯಿ	೩೧೦

ಸಾದರ ಸ್ವೀಕಾರ

೪೬ **ಕಾರವಾನ್** (ಕಥಾಸಂಗ್ರಹ). ಬರೆದವರು ಶ್ರೀ ಮಾನ್ ಬಸವರಾಜ ಕಟ್ಟಿಮನಿ ಅವರು. ಬೆಂಗಳೂರಿನ ಶಾರದಾ ಸಾಹಿತ್ಯ ಮಾಲೆಯ ೧೯ನೆಯ ಕಿರಣ. ಪ್ರಕಾಶಕರು ಶಾರದಾ ಪ್ರಕಟನಾಲಯ, ಬಸವನ ಗುಡಿ, ಬೆಂಗಳೂರು ನಗರ. ಕ್ರೌ. ಅ. ೧೦೦ ಪುಟಗಳು ಬೆಲೆ ೧—೦—೦. ಮಾಲೆಯ ವಾರ್ಷಿಕ ಚಂದಾ ೪ ರೂಪಾಯಿ.

೪೭ **ಅಸ್ಪೃಶ್ಯತಾ ನಿವಾರಣೆ** (ವಿವೇಚನಾತ್ಮಕ ಗ್ರಂಥ) ಬರೆದವರು ಶ್ರೀಮಾನ್ ಪಾಟೀಲ ಕಲ್ಲನಗೌಡರು ಬಿ.ಎ., ಪ್ರಕಾಶಕರು ಶ್ರೀ ಹ. ರಾ. ಮೋಹರೆ, ಸಂಯುಕ್ತ ಕರ್ನಾಟಕ ಕಾರ್ಯಾಲಯ ಹುಬ್ಬಳ್ಳಿ ಅವರು. 'ಕಾಂಗ್ರೆಸ್ ಸ್ವರೂಪದರ್ಶನ' ಮಾಲೆಯ ೯ನೆಯ ಪುಸ್ತಕ ಕ್ರೌ. ಅ. ೧೦೦ ಪುಟಗಳು ಬೆಲೆ ೦—೧೫—೦.

೪೮ **ಸತ್ಯಾಗ್ರಹ** (ಇತಿಹಾಸ ಮತ್ತು ತುಲನೆ). ಬರೆದವರು ಶ್ರೀಮಾನ್ ದಿವಾಕರ ರಂಗರಾಯರು. ಪ್ರಕಾಶಕರು ಶ್ರೀ. ಬೋಧೋದಯ ಪ್ರಕಾಶಕರು, ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ. ಕ್ರಾ. ಅ. ೧೨೨ ಪುಟಗಳು. ಬೆಲೆ ೩—೪—೦.

೪೯ **ರಾಷ್ಟ್ರೀಯ ಶಿಕ್ಷಣ** (ತ್ರೈಮಾಸಿಕ ವಿಶೇಷಣೆ). ಬರೆದವರು ಶ್ರೀಮಾನ್ ರಂಗನಾಥ ದಿವಾಕರ ಅವರು. ಪ್ರಕಾಶಕರು ಶ್ರೀ. ಗೀತಾಹರಿಯವರು. 'ಕಾಂಗ್ರೆಸ್ ಸ್ವರೂಪ ದರ್ಶನ' ಮಾಲೆಯ ೧ನೆಯ ಪುಸ್ತಕವಿದು. ಕ್ರಾ. ಅ. ೪೪ ಪುಟ. ಬೆಲೆ ೦—೪—೦.

೫೦ **ರತಿದೇವಿ ಮತ್ತು ಇತರ ಕಥೆಗಳು** (ಕಥಾಸಂಗ್ರಹ). ಬರೆದವರು ಶ್ರೀ ಎಂ. ವಿ. ಸೀತಾರಾಮಯ್ಯ ಎಂ. ಎ. ಅವರು. ಸತ್ಯ ಪ್ರಬೋಧನ ಪ್ರಕಟನ ಮಂದಿರ, ಕೋಟೆ. ಬೆಂಗಳೂರು ನಗರ ಅವರ ಪ್ರಕಟನೆ. ಕ್ರಾ. ಅ. ೧೧೬ ಪುಟಗಳು. ಬೆಲೆ ೧—೦—೦.

೫೧ **ಕೊಪ್ಪಳ ವೀರಶೈವ ಸ್ತ್ರೀ ಶೋರ್ಡಿಂಗಿನ ೩-ನೆಯ ವರ್ಷದ ವರದಿ.** ಗೌರವ ಕಾರ್ಯದರ್ಶಿಗಳು ಶ್ರೀ. ಬಿ. ಎಲ್. ಪಟೇಲರು ಫೂ. ಅ. ೧೩ ಪುಟಗಳು.

ಸ್ವಸಂಸ್ಕೃತಿಯ ಶಿಕ್ಷಣದಿಂದ ಹಿಂದೆ ಉಳಿದಿರುವ ಕೊಪ್ಪಳ ತರಹ ನಿಜಾಮಕರ್ನಾಟಕದ ನಗರಗಳಲ್ಲಿ, ಇಂತಹ ಸಂಸ್ಥೆಗಳ ಅತ್ಯವಶ್ಯ ತುಂಬ ಅವಶ್ಯವಾಗಿದೆ. ಸುಜ್ಞಾಲಕರ ಕಾರ್ಯಕರ್ತೃರತಿ ಪ್ರಶಂಸನೀಯವಾಗಿದೆ. ಈ ಸಂಸ್ಥೆ ಕನ್ನಡದ ಒಕ್ಕೂಟಕ್ಕೆ ಸಹಕಾರಿಯಾಗಲಿ.

೫೨ **ಬಡವರ ಬಂಧು** (ವಾರಪತ್ರಿಕೆ). ಸಂಪಾದಕರು ಶ್ರೀ. ಮಂಗಳೂರು ಜಾರಪ್ಪ; ಉಪಸಂಪಾದಕರು ಶ್ರೀ ಬಿ. ವರ್ಷಪ್ಪ. ಫೂ. ಫೋ. ೮ ಪುಟಗಳು. ವಾ. ಚಂ. ೫—೫—೦, ಪಿಡಿ ಸುಂಕಕ್ಕೆ ೧—೬.

ಮಂಗಳೂರಲ್ಲಿ ೧೩ ವರ್ಷಗಳಿಂದಲೂ ಹೊರಡುತ್ತಲಿದೆ. ಕಾಲ ಬಾಳಿ ಕನ್ನಡಕ್ಕೆ ಸೇವೆ ಕೊಡಲಿ.

೫೩ **ಇಜ್ಜೋಡು** (ಸಾಮಾಜಿಕ ಕಾದಂಬರಿ. ೨ನೆಯ ಭಾಗ) ಬರೆದವರು ಪ್ರೊ. ವಿ. ಕೆ. ಗೋಕಾಕ ಬಿ. ಎ. (ಆಕ್ಸನ್) ಅವರು. ಸರಳವಾದ ಮನೋಹರ ಗ್ರಂಥಮಾಲೆಯವರ ಪ್ರಕಟನೆ. ಕ್ರಾ. ಅ. ೨೦೦ ಪುಟಗಳು. ಬೆಲೆ ೧—೪—೦.

೫೪ **ನಲ-ದಮಯಂತಿ** (ಸಂಸ್ಕೃತ ಪ್ರಧಾನ ನಾಟಕ). ಬರೆದವರು ದಿವಂಗತ ಕೆರೂರ ವಾಸುದೇವಾಚಾರ್ಯರು. ಪ್ರಕಾಶಕರು ಸ್ವಾಮಿ ರಾ. ಕೆರೂರ, ವಾಸುದೇವ ಸಾಹಿತ್ಯ ಪ್ರಕಾಶನಾಲಯ, ಬಾಲಕೋಟೆ. ಕ್ರಾ. ಅ. ೧೩೪ ಪುಟಗಳು. ಬೆಲೆ ೧—೮—೦.

೫೫ **ಇಬ್ಸೆನ್ನಿನ ಕೆಲವು ನಾಟಕಗಳು** (ವಿಮರ್ಶಾತ್ಮಕ ಗ್ರಂಥ). ಬರೆದವರು ಶ್ರೀ. ಎಸ್. ಮಂಜುನಾಥ ಅಂ ಎ. ಮೈಸೂರು. ಪ್ರಕಾಶಕರು ವಿ. ನಿಲಯದ ಪ್ರಚಾರ ಪುಸ್ತಕ ಮಾಲೆಯ ೨ನೆಯ ಪ್ರಕಟನೆ. ಕ್ರಾ. ಅ. ೩೬ ಪುಟಗಳು ಬೆಲೆ ೦—೬—೦.

೫೬ **ಪ್ರಬಂಧ ಪುಷ್ಪಾಂಜಲಿ** (ನಿಬಂಧಗಳ ಸಂಗ್ರಹ). ಬರೆದವರು ಶ್ರೀ. ಪ್ರ ಬ. ನರೇಗಲ್ಲ ಎಂ. ಎ., ಬಿ. ಟಿ. ಧಾರವಾಡ ಮಿಂಚಿನಬಳ್ಳಿಯ ೨ನೆಯ ವರ್ಷದ ೧ನೆಯ ಕುಡಿಯು. ಕ್ರಾ. ಅ. ೧೬+೧೦೮ ಪುಟಗಳು. ಬೆಲೆ ೧—೪—೦.

೫೭ **ಪ್ರತಿಧ್ವನಿ** (ಕಿರುಗತೆಗಳ ಸಂಗ್ರಹ). ಬರೆದವರು ಶ್ರೀ. ಬಿ. ನರ್ಸಪ್ಪ ಮಂಗಳೂರು. ಪ್ರಕಾಶಕರು ಬಡವರಬಂಧು ಪ್ರೆಸ್ ಲಿಮಿಟೆಡ್—ಮಂಗಳೂರು. ಕ್ರಾ. ಅ. ೮೨ ಪುಟಗಳು. ಬೆಲೆ ೧ ರೂ.

೫೮ **ನಿರ್ಭಯ** (ವಾರಪತ್ರಿಕೆ). ಸಂಪಾದಕರು ಶ್ರೀ. ಕಾಖಂಡಿಕೀ ರಾಮಾಚಾರ್ಯರು, ಜಮಖಂಡಿ. ಪ್ರಕಾಶಕರೆ ಪ್ರಕಾಶಕರು. ಫೂ. ಸ್ಮೋ. ೬ ಪುಟಗಳು. ವಾರ್ಷಿಕ ಚಂದಾ ೩—೦—೦. ಬಿಡಿ ಸಂಚಿಕೆಗೆ ೦—೧—೦.

ಉತ್ತರ ಕನ್ನಡದ ಸಂಸ್ಥಾನವೊಂದರಲ್ಲಿ ಕನ್ನಡದ ಪ್ರಚಾರ, ಮನುಷ್ಯತ್ವದ ಅಧಿಕಾರದ ಶಿಕ್ಷಣ ಇವುಗಳಿಗಾಗಿ ಹೊಸತಾಗಿ ಹೊರಟ ಪತ್ರಿಕೆಯಿದು. ಸಂಪಾದಕರು ತುಂಬ ಉತ್ಸಾಹಶಾಲಿಗಳಾಗಿದ್ದಾರೆ. ಬಹುಕಾಲ ಬಾಳಲೆಂದು ನಮ್ಮ ಬಯಕೆ.

೫೯ **ಪ್ರತಿಫಲ ಮತ್ತು ಇತರ ಕಥೆಗಳು** (ಕಥಾಸಂಗ್ರಹ). ಬರೆದವರು ಶ್ರೀಮತಿ ಸೌ. ಜಯಲಕ್ಷ್ಮಿ ಆರ್. ಶ್ರೀನಿವಾಸನ್, ಬೆಂಗಳೂರು. ಬೆಳಗಾಂವಿಯ ಶ್ರೀ. ಪ್ಯಾಟೀ ಶಾಮರಾಯರ ವಿಜಯ ಗ್ರಂಥಮಾಲೆಯ ೨ನೆಯ ಕುಡಿಯಿದು. ಕ್ರಾ. ಅ. ೧೦೦ ಪುಟ. ಬೆಲೆ ೧—೪—೦.

೬೦ **ಪ್ರಪಂಚದ ಕಥೆಗಳು** (ಅನುವಾದಿತ ಕತೆಗಳ ಸಂಕಲನ) ಬರೆದವರು ಶ್ರೇಯುತರುಗಳಾದ ಹೆಗಡೆ ಬಂಧುಗಳು. ಗೋಕರ್ಣ ಕರ್ನಾಟಕ ಸಂಘದ 'ಪರ್ಣಕುಟಿ' ಗ್ರಂಥಮಾಲೆಯ ಪ್ರಕಟನೆ. ಕ್ರಾ. ಅ. ೮೨ ಪುಟ; ಬೆಲೆ ೦—೧೨—೦.

೬೧ **ಭಕ್ತಿಗೀತಾವಳಿ** (ಕೀರ್ತನ ಸಂಗ್ರಹ) ಲೇಖಕರು ಶ್ರೀ. ಎಂ. ಎನ್. ಮೂರ್ತಿ, ಅಧ್ಯಾಪಕರು ಗುಬ್ಬಿ. ಲೇಖಕರೇ ಪ್ರಕಾಶಕರು. ಕ್ರಾ. ಅ. ೧೪ ಪುಟಗಳು. ಬೆಲೆ ೦—೨—೦.

೬೨ **ಸಾಯಲು ಸಿದ್ಧವಾದ ಅಡಿಕೆ ತೋಟ** (ಪರಿಚಯಾತ್ಮಕ ಕಿರುಹೊತ್ತಿಗೆ) ಬರೆದವರು ಶ್ರೀ. ವೆಂಕಟಸುಬ್ಬ ರಾಮಯ್ಯ ಪನಸ್ಕೆ. ಶಿರಸಿ ಸ್ಪೋರ್ಟ್ಸ್, ಹುಬ್ಬಳ್ಳಿ-ಧಾರವಾಡ. ಲೇಖಕರೇ ಪ್ರಕಾಶಕರು. ಡೆ. ಅ. ೨೨ ಪುಟಗಳು.

ಅಡಕೆಯ ವ್ಯವಸಾಯಕ್ಕೆ ಬಂದಿರುವ ದುಃಸ್ಥಿತಿಯನ್ನು ಬೇರೆ ಬೇರೆ ವಿವರಣೆಗಳೊಂದಿಗೆ ವಿವೇಚಿಸಿದ ಪುಸ್ತಕವಿದು. ಎಲ್ಲರೂ ಓದಿ ವಿಷಯಪರಿಜ್ಞಾನ ಪಡಿಕೊಳ್ಳಬೇಕಾದುದು.

೬೩ **ಕಕ್ಕಯ ನೋಟ** (ವ್ಯಕ್ತಿಪರಿಚಯ ಸಂಕಲನ) ಬರೆದವರು ಶ್ರೀಮಾನ್ ದತ್ತಾತ್ರೇಯ ಕುಲಕರ್ಣಿ ಅವರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೧೩ನೆಯ ಕುಡಿಯು. ಕ್ರಾ. ಅ. ೬೦ ಪುಟಗಳು. ಬೆಲೆ ೦—೪—೦.

೬೪ **ಇಂದಿನ ಕರ್ನಾಟಕ** (ಕನ್ನಡನಾಡಿನ ಕೆಲವು ಪುರಸಟ್ಟಣಗಳ ವರ್ತಮಾನದರ್ಶನ). ಬೇರೆ ಬೇರೆ ಬರೆಹಗಾರರು ಬರೆದುಪಯೋಗಿಸಿದ್ದನ್ನು ಶ್ರೀಮಾನ್ ವಿ. ಕೃ. ಗೋಕಾಕ ಅವರು ಸಂಪಾದನೆ ಮಾಡಿಕೊಟ್ಟಿದ್ದಾರೆ. ಇದು ಮೈಲಿನ ಲಲಿತಗ್ರಂಥಮಾಲೆಯ ೧೩ನೆಯ ಕುಡಿ. ಕ್ರಾ. ಅ ೧೦೦ ಪುಟಗಳು. ಬೆಲೆ ೧-೮-೦.

ಮುದ್ರಕರು:
ಎನ್. ಎಸ್. ಜಂಗೇರಿ,
ಶು ಮುದ್ರಾಲಯ, ಧಾರವಾಡ.

ಪ್ರಕಾಶಕರು:
ಎಂ. ವ್ಹಿ. ಮೈಲಿಗಟ್ಟಿ,
ಜಯಂತ ಕಾರ್ಯಾಲಯ, ಧಾರವಾಡ

ಸಂಪುಟ ೮

ಸಂಚಿಕೆ ೬

ನವಂಬರ್ ೧೯೪೫

ವರ್ಗಣಿ ದರ

ವರುಷಕ್ಕೆ ೪—೪—೦
ಆರು ತಿಂಗಳಿಗೆ ೨—೪—೦
(ಅಂಚೇ ವೆಚ್ಚ ಸೇರಿ)

ಬಿಡಿ ಸಂಚಿಕೆಗೆ ೬ ಆಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ದೀಪಾವಳಿ

"ಚಿದಾನಂದ"

೧

ಜಗದೊಡೆಯ ಬೆಳಗಿಸಿಹ
ದೀಪಾವಳಿಯನಿಂದು,
ನೋಡುಬಾ ನಲ್ಲೆ ನೀನು:
ನೋಡಿ ನಲಿದಾಡುಬಾ
ಚೆಲುವೆ ನೀನು;
ನಲಿದು, ಸೊಗ
ಮಾಡು ದೀವಳಿಗೆಯನ್ನು

೨

ಅಗೊ ನೋಡೆ ನೋಡಲ್ಲಿ
ಹೇಗೆ ನೆರೆದಿಹುದದೋ
ದೀಪ-ದೀಪಗಳ ಜಾತ್ರೆ—
ಇಗೊ ನೋಡೆ ನೋಡಿಲ್ಲಿ
ಹೇಗೆ ಹೊರಹೊರಟಿಹುದು
ಜ್ಯೋತಿಗಳ ಜೈತ್ರಯಾತ್ರೆ!

೩

ಒಂದು ಮಿನುಗುತ್ತಲಿದೆ,
ಒಂದು ಮಿಣುಗುಟ್ಟುತಿದೆ,
ಒಂದು ಝಗಝಗಿಸುತಿಹುದು;
ಒಂದು ತೊಳಗುತ್ತಲಿದೆ,
ಒಂದು ಬೆಳಗುತ್ತಲಿದೆ,
ಇನ್ನೊಂದು ಉರಿಯುತಿಹುದು!

೪

ಒಂದು ಪ್ರಾಣದ ದೀಪ,
ಒಂದು ಜ್ಞಾನದ ದೀಪ,
ಮತ್ತೊಂದು ಮೃತ್ಯುದೀಪ!
ಒಂದು ವೈರದ ದೀಪ,
ಒಂದು ಸ್ನೈರದ ದೀಪ,
ಇನ್ನೊಂದು ಕಾಲದೀಪ!

೫

ಅದುವೆ ಪ್ರೇಮದ ಜ್ಯೋತಿ,
ಇದುವೆ ಆಶಾ ಜ್ಯೋತಿ,
ಅದು ನೋಡು ಅಮರ ಜ್ಯೋತಿ!
ಆನಂದ ಜ್ಯೋತಿ ಇದು,
ಪೂರ್ಣವಾ ಜ್ಯೋತಿ ಅದು,
ಇಲ್ಲಿಹುದೆ ಆತ್ಮಜ್ಯೋತಿ!

೬

ವಿವಿಧ ಜ್ಯೋತಿಗಳಿಂದ
ಜಗದಾಣ್ಮನಂತು ನಲಿ-
ಸಿರುವ ಆನಂದ ಮುಗ್ಧ,—
ಮಾಯಾಮನೋಹರ, ನಿ-
ಗೂಢ, ಕಟು, ಸತ್ಯಾತ್ಮ,
ಸೌಂದರ್ಯಯುಕ್ತ ಜಗವ!

೭

ಈ ದೀಪಗಳ ಗುಟ್ಟು
ತಿಳಿದೆಮ್ಮ ದೀಪಾವ-
ಳಿಯ ದೀಪ ಹಚ್ಚುನಲ್ಲೆ,
ನಮ್ಮ ಆತ್ಮಜ್ಯೋತಿ
ವಿಶ್ವಾತ್ಮ ಜ್ಯೋತಿಯಲಿ
ಬೆರೆಯುವುದೆ ಬಾಳ ಎಲ್ಲೆ!

೮

ಜಗದಾಣ್ಮ ಬೆಳಗಿಸಿಹ
ದೀಪಾವಳಿಯನಿಂದು
ನೋಡುಬಾ ಚೆನ್ನೆ ನೀನು.
ನೋಡಿ ನಲಿದಾಡುಬಾ.
ಚೆನ್ನೆ ನೀನು,
ನಲಿದು, ಸೊಗ-
ಮಾಡು ದೀವಳಿಗೆಯನ್ನು!

೯

ಜಗದೊಡೆಯ ಬೆಳಗಿಸಿಹ
ದೀಪಾವಳಿಯನಿಂದು,
ನೋಡುಬಾ ನಲ್ಲೆ ನೀನು!
ನೋಡಿ ನಲಿದಾಡುಬಾ
ಚೆಲುವೆ ನೀನು,
ನಲಿದು, ಸೊಗ-
ಮಾಡು ದೀವಳಿಗೆಯನ್ನು!



ಶಾಸನಸಭೆಯ ಚುನಾವಣೆ, ಕನ್ನಡಿಗರು

ಇಂದು ನಿಜವಾದ ರಾಷ್ಟ್ರೀಯತ್ವದ ವಿಶಾಲ ಭಾವನೆಯನ್ನಿಟ್ಟುಕೊಂಡು ಕಾರ್ಯಮಾಡುತ್ತಿರುವ ಭಾರತೀಯ ಮಹಾಸಂಸ್ಥೆಯೆಂದರೆ ಕಾಂಗ್ರೆಸ್ಸೊಂದೇ ಎಂಬುದು ನಿರ್ವಿವಾದವಾದ ವಿಷಯ. ಬೇರೆ ಕೆಲವು ಸಂಸ್ಥೆಗಳು ತಮ್ಮ ಧ್ಯೇಯವನ್ನು ರಾಜಕಾರ್ಯವೆಂದು ಇರಿಸಿಕೊಂಡಿದ್ದರೂ, ಅವುಗಳ ಸಂಕುಚಿತ ದೃಷ್ಟಿಗಳ ಮೂಲಕ, ಬಹುಜನ ಮಾನ್ಯವಾಗಿ ನಿಲ್ಲುವಂತಹದು ಯಾವುದೂ ಇಲ್ಲ. ಹಿಂದೂ ಮಹಾಸಭೆ, ಮುಸ್ಲಿಂ ಲೀಗ್, ಶೀಖ್ ಮಹಾಸಮಿತಿ ಇವೆಲ್ಲ ಜಾತೀಯತೆಯ ಸೂತಕದಿಂದ ಸ್ಪೃಶಿಸಿಕೊಂಡಿವೆ. ಕಮ್ಯೂನಿಸ್ಟ್, ರ್ಯಾಡಿಕಲ್ ಡೆಮಾಕ್ರ್ಯಾಟಿಕ್ ಪಕ್ಷಗಳವರ ಸಂಸ್ಥೆಯು ನಮ್ಮಲ್ಲಿ ಕಾರ್ಯ ರಾಜಕಾರ್ಯವಾದರೂ, ಆವರ ಪ್ರಚಾರಪದ್ಧತಿ ಭಾರತೀಯರ ಸಾಂಪ್ರದಾಯಿಕ ಮನೋವೃತ್ತಿಯನ್ನು ಬೆದರಿಸುವಂತಹದಾಗಿದೆ. ನಮ್ಮ ಸರಕಾರಕ್ಕೆ ಇದಾವ ಸಂಸ್ಥೆಗಳೂ ಬೇಕಿಲ್ಲವಾದರೂ, ಬಲಿಷ್ಠ ಸಂಸ್ಥೆಯು ಕಾರ್ಯವನ್ನು ಬಲವೀನಗೊಳಿಸಲಿಕ್ಕೆ, ಕಾಂಗ್ರೆಸ್ಸಿಲ್ಲದ ಬೇರೆ ಬೇರೆ ಸಂಸ್ಥೆಗಳಿಗೆ ಅನಾಗ ಪರ್ಯಾಯದಿಂದ ಬೆಂಬಲ ಕೊಡುವಂತೆ—ಪ್ರಚೋದಿಸುವಂತೆ—ತನ್ನ ಚುಮಚಟಿಕೆಯನ್ನು ಇರಿಸಿರುತ್ತದೆ. ಈಗ ಭಾರತೀಯರ ಮುಂದಿರುವ ಶಾಸನಸಭೆಯ ಚುನಾವಣೆಗಳೆಂದರೆ, ಸರಕಾರ ಭಾರತೀಯರ ವ್ಯವಹಾರೀಕ್ಷೆಗಾಗಿ ಇವುಗಳನ್ನು ಇರಿಸಿದಂತಿದೆ. ಭಾರತೀಯರ ರಾಷ್ಟ್ರೀಯ ಭಾವನೆಯು—ದೇಶಪ್ರೇಮವು—ರಾಜಕಾರ್ಯ ಕುಶಲತೆಯು ಒಳಸೋಲಾಗಲಿವೆ: ಈಗ ನಮ್ಮ ಮುಂದಿರುವ ಚುನಾವಣೆಯು ಸರಿಸಾಮ.

ಕಾಂಗ್ರೆಸ್ಸಿನಂತಹ ಬಲಿಷ್ಠ ರಾಷ್ಟ್ರೀಯ ದೃಷ್ಟಿಯವರ ಬಹುಸಂಖ್ಯೆ ಶಾಸನ ಸಭೆಗಳಲ್ಲಾಗಬೇಕೆ ಈಗಿರುವ ನಮ್ಮ ಸರಕಾರ ಸಾಕಷ್ಟು ಪೆಗಲಬಹುದು. ನಮ್ಮಲ್ಲಿಯ ಜಾತೀಯ ಭಾವನೆಯೂ, ಪಾವಪಿಷ್ಠತೆಯು ಅಳಿಸಿನೀರೆವೂ ಮುಂದಾಳುಗಳ ವೈಯಕ್ತಿಕ ಈರ್ಷೆ-ಪುಟ್ಟಾರಗಳೂ, ಸಂಕುಚಿತ ಸ್ವಭಾವದ ಜನರ ಸ್ವಾರ್ಥಪ್ರವೃತ್ತಿಗಳೂ ಸರಕಾರಕ್ಕೆ—ಒಬ್ಬ ತ್ಕೃಷ್ಟವಾಗಿ—ತಮ್ಮ ಸಹಕಾರವನ್ನು ಕೊಡಬಹುದು. ಆವರೆ ಜನಸಾಮಾನ್ಯರು ಈಗ ಜಾಗ್ರತರಾಗಿ, ನಿಜವಾದ ತನ್ನ ಹಿತಚಿಂತಕರಾರೆಯುವುದನ್ನು ಕಣ್ಣು ತೆರೆದು ಕಂಡುಕೊಂಡು, ಕಾರ್ಯಸನ್ನದ್ಧರಾದರೆ, ಭಾರತೀಯರು ಸ್ವತಂತ್ರ್ಯವನ್ನು ನಿಜವಾದ ದೀವಳಿಗೆಯ ಹಬ್ಬವನ್ನು ನೋಡುವ ಸದವಕಾಶ ಬೇಗನೆ ಬಂದೀತು. ಇಲ್ಲವಾದರೆ ನಮಗೆ ನಿತ್ಯದ ಕಗ್ಗತ್ತಲೆ ಕಟ್ಟಿದುದೇ ಸರಿ.

ನಮ್ಮ ಕನ್ನಡನಾಡು ಯಾವಾಗಲೂ ಕಾಂಗ್ರೆಸ್‌ಮಯ ನಾಡು. ಕಾಂಗ್ರೆಸಿನ ಪ್ರತಿಯೊಂದು ಕಾರ್ಯಕ್ರಮವು ಅನಾಯಾಸವೂ ಯಶಸ್ವಿಯಾಗಿ ನಮ್ಮಲ್ಲಿ ನೆರವೇರಿದೆ. ಆದುದರಿಂದ, ಇಂದಿನ ಚುನಾವಣೆಯಲ್ಲಿಯೂ ನಮ್ಮ ನಾಡು ಕಾಂಗ್ರೆಸ್ಸಿಗೆ ಗೆಲವನ್ನು ತಂದುಕೊಡುವುದೆಂಬುದರಲ್ಲಿ ಸಂದೇಹವಿಲ್ಲ. ಕಾಂಗ್ರೆಸ್ಸೊಂದಲ್ಲದೆ ಮಿಕ್ಕ ಯಾವ ರಾಜಕೀಯ ಸಂಸ್ಥೆಯ ಪ್ರಭಾವವೂ ನಮ್ಮ ನಾಡಿನಲ್ಲಿಲ್ಲ. ಆದರೂ ಕಾಂಗ್ರೆಸ್ಸಿನ ಮರಿಯಾಳುಗಳನ್ನು ಸಿದ್ಧಗೊಳಿಸಲೆಂದು, ಕೆಲವು ಜನ ಸ್ವಾರ್ಥಸಾಧಕರು—ವೈಯಕ್ತಿಕ ಪ್ರಾಮುಖ್ಯ ಸಾಲದೆ—ಯಾವ್ಯಾವ ಪಾದರೊಂದು ಇಲ್ಲದ ಸಂಸ್ಥೆಯ ಹೆಸರಿಂದ ಮುಂಬಾಳುಗಳಾಗಿ ನಿಲ್ಲಬಹುದು. ಇದರಲ್ಲಿ ಯಾರೂ ಬುದ್ಧಿಭ್ರಮೆ ಮಾಡಿಕೊಳ್ಳದೆ, ವ್ಯಕ್ತಿಯ ವಾಕ್ಚಾತುರ್ಯಕ್ಕೆ ಒಳಗಾಗದೆ, ದೇಶದ ಹಿತವನ್ನೂ ಜನತೆಯ ಹಿತವನ್ನೂ ಲಕ್ಷ್ಯದಲ್ಲಿ ತಂದುಕೊಳ್ಳಬೇಕು. ಕನ್ನಡಿಗರು ಇಟ್ಟುಕೊಂಡಿರುವ ಸದಭಿಪ್ರಾಯ ಕಾಂಗ್ರೆಸ್ಸಿಗರಲ್ಲಿ ಇರಬೇಕೆಂಬ ಆಶೆ ಎಲ್ಲರ ಹೃದಯದಲ್ಲಿಯೂ ಇರಬೇಕು.

ಕನ್ನಡಿಗರ ಮಹತ್ತ್ವದ ಒಂದು ಬೇಡಿಕೆಯಾದ ಪ್ರಾಂತದ ಏಕೀಕರಣವನ್ನು ಕಾಂಗ್ರೆಸ್ಸು ಒಪ್ಪಿಕೊಂಡು ಬಿಟ್ಟಿದೆ; ಆದರೆ ಕನ್ನಡನಾಡಿನ ಮುಂದಾಳು ಗಳಲ್ಲಿಯ ಕೆಲವರ ಕರ್ನಾಟಕದ ಬಗೆಗಿರುವ ಉದಾಸೀನತೆ-ಅಪ್ರೀತಿಗಳ ಮೂಲಕ. ಈ ಏಕೀಕರಣ ಕಾರ್ಯದ ಕುದುರೆ ರಭಸದಿಂದ ಮುಂದುವರಿಯಲಿಲ್ಲವೆಂಬುದು, ಕಳೆದ ಸಲದ ಕಾಂಗ್ರೆಸ್ ಮಂತ್ರಿಮಂಡಲದ ಕಾಲದಲ್ಲಿ ಹಲವು ಕನ್ನಡಿಗರ ಮನಸ್ಸನ್ನು ನೋಯಿಸಿದೆ; ರೇಗಿಸಿದೆ. ಕರ್ನಾಟಕ ಏಕೀಕರಣ ತತ್ತ್ವಕ್ಕೆ ವಿರೋಧಿಗಳಾಗಿರುವ ಶ್ರೀ. ಲಠ್ಠೆಯವರು ನಮ್ಮ ಪ್ರತಿನಿಧಿಗಳಾಗಿ ಮಂತ್ರಿ ಸೀಟವನ್ನಲಂಕರಿಸಿ, ಏಕೀಕರಣದ ಕಾರ್ಯಕ್ಕೆ ಆಘಾತವನ್ನು ಹಾಕಿದರು. ಆದರಂತೆಯೆ ಜಾತೀಯ ಭಾವನೆಯನ್ನು ತಲೆಯಲ್ಲಿರಿಸಿಕೊಂಡು, ಏಕೀಕರಣವಾದರೆ ಬಹುಸಂಖ್ಯಾಕರು ಅಲ್ಪಸಂಖ್ಯಾಕರಿಗೆ ತೊಂದರೆಯನ್ನು ಉಂಟುಮಾಡಬಹುದೆಂಬ ಸಂದಿಗ್ಧ ಮನಸ್ಸಿನವರೂ ಅಂದಿನ ಶಾಸನಸಭೆಗಳಲ್ಲಿ ಅಧಿಕಾರ ಸ್ಥಾನಗಳನ್ನು ಹಿಡಿದು ಕುಳಿತು, ಏಕೀಕರಣವಾದಿಗಳ ಕಾರ್ಯೋತ್ಸಾಹವನ್ನು ಭಂಗಗೊಳಿಸಿದರು. ಈ ಹಿಂದಿನ ಅನುಭವವನ್ನು ಮುಂದಿರಿಸಿಕೊಂಡು, ನಮ್ಮ ಪ್ರಾಂತಿಕ ಕಾಂಗ್ರೆಸ್ ಸಂಸ್ಥೆ, ಶಾಸನ ಸಭೆಗೆ ತನ್ನ ಹುರಿಯಾಳುಗಳನ್ನು ಆಯ್ದುಕೊಡಬೇಕೆಂಬ ಎಚ್ಚರಿಕೆಯನ್ನು ತಾಳಬೇಕು. ಭಾರತ ಸ್ವಾತಂತ್ರ್ಯಕ್ಕಷ್ಟೇ ಅವಶ್ಯಕತೆ ಏಕೀಕರಣದ್ದೂ ಇದೆಯೆಂಬ ಭಾವನೆಯ ಬೆಳಕಿನವರನ್ನೆ ಆಯ್ದು ಚುನಾವಣೆಗೆ ನಿಲ್ಲಿಸಬೇಕು. ಕಾಂಗ್ರೆಸ್ಸಿನ ಎಲ್ಲ ರಾಜಕೀಯ ತತ್ತ್ವಗಳನ್ನೂ ಕನ್ನಡಜನತೆ ಮಾನ್ಯಮಾಡಿದೆ. ಆದರಂತೆಯೆ ಕನ್ನಡಿಗರ ಒಂದು ಜೀವ-ಸಾವುಗಳ ಸಮಸ್ಯೆಯಾದ ಏಕೀಕರಣದ ಮಹತ್ತ್ವವನ್ನು ಕಾಂಗ್ರೆಸ್ ಸಂಸ್ಥೆ ಒಪ್ಪಿಕೊಂಡರೆ, ಒಪ್ಪಿಕೊಂಡು ಕಾರ್ಯದ ಸಂಕಲ್ಪ ಮಾಡಿದರೆ, ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಖಂಡಿತವಾದ ಗೆಲವುಂಟು. ಇದರಿಂದ ಕನ್ನಡನಾಡು-ಕಾಂಗ್ರೆಸ್ಸುಗಳಿಗೆರಡಕ್ಕೂ ಹಿತವುಂಟು.

ದೀಪಾವಳಿ ಸಂಚಿಕೆ

ಕಾಗದದ ಕೊರತೆಯು ಮೂಲಕ ಈ ಸಲ ದೀಪಾವಳಿ ಸಂಚಿಕೆಯನ್ನು ಪ್ರಕಟಿಸುವ ವಿಚಾರವೇ ಇರಲಿಲ್ಲ. ಇದ್ದುದಿದ್ದಹಾಗೆಯೆ, ಹೇಗಾದರೂ ಮಾಡಿ ಹೊರಡಿಸಬೇಕೆಂದು ನಿರ್ಣಯವಾಯಿತು. ಬಹಿರಂಗ ಸೌಂದರ್ಯದ ದೃಷ್ಟಿಯಿಂದ ಈ ಸಂಚಿಕೆ ವಿಶೇಷವೆಂದು ಕಾಣದಿದ್ದರೂ, ಅಂತರಂಗ ಸೌಂದರ್ಯದ ಮೂಲಕ 'ವಿಶೇಷ ಸಂಚಿಕೆ'ಯ ಹೆಸರಿಗೆ ಅನ್ವರ್ಥಕವಾಗಿ ತೋರಿತೆಂದು ನಮ್ಮ ವಿಶ್ವಾಸ. ಈ ಅಂತರಂಗ ಸೌಂದರ್ಯವನ್ನು ಹೆಚ್ಚಿಸಲು ಕಾರಣರಾದ ಲೇಖಕ ವರ್ಗದವರು—ಅಲ್ಪಾವಧಿಯಲ್ಲಿಯೆ—ನಮಗೆ ಕಲ್ಪನೆಗೆ ಮೀರಿದ ನೆರವನ್ನು ಕೊಟ್ಟಿತು. ಆದಕ್ಕಾಗಿ ನಮ್ಮ ಲೇಖಕ ಮಹನೀಯರಿಗೆಲ್ಲ ಬಲವಿನ ವಂದನೆಗಳನ್ನು ಆದರದಿಂದ ಸಲ್ಲಿಸುತ್ತೇವೆ. ಸಮಯಕ್ಕೆ ಸರಿಯಾಗಿ ಬಂದರೂ, ಸ್ಥಳಸಂಕೋಚ ಕಾಲಾಭಾವದ ಮೂಲಕ ನೂರಾರು ನಾಲ್ವರು ಲೇಖಕರ ಒಳ್ಳೆಯ ಲೇಖನಗಳು ಇವರಲ್ಲಿ ಅಚ್ಚಾಗಿಲ್ಲ. ಆಕೆಲ್ಲ ಮುಂದಿನ ಸಂಚಿಕೆಯಲ್ಲಿ ಬರುವುವು. ನಮ್ಮ ಈ ಅನಿವಾರ್ಯವಾದ ಅಡಚಣೆಯನ್ನು ಮನಮಂದು ನಮ್ಮ ಲೇಖಕ ಮಿತ್ರರು ನನ್ನುನ್ನು ಕ್ಷಮಿಸಬೇಕೆಂದು ಕೋರುವೆವು.

ಅನಧಿ ಕಡಿಮೆಯಿದ್ದುದರಿಂದ ಹೆಚ್ಚು ಪುಟಿಗಳ ಈ ಸಂಚಿಕೆಯ ಮುದ್ರಣದ ಯೋಜನೆಯೂ ನಮಗೆ ತೊಂದರೆ ಕೊಟ್ಟಿತು. ಆದರೆ ಹಗಲೂ ರಾತ್ರಿಯೂ ಶ್ರಮಪಡಿಸಿ ವಿಜಯ ಮುದ್ರಣಾಲಯದವರು ಕಾರ್ಯಮುಗಿಸಿ ಕೊಟ್ಟರಲ್ಲದೆ, ಕರ್ನಾಟಕ ಪ್ರಿಂಟಿಂಗ್ ವರ್ಕ್ಸಿನ ಸಂಚಾಲಕರೂ, ಸಾಧನ ಮುದ್ರಣಾಲಯದ ಒಡೆಯರೂ ನಾವು ಕೇಳಿದ ಮುದ್ರಣಸೌಕರ್ಯಗಳನ್ನು ಒದಗಿಸಿಕೊಟ್ಟರು. ಆದಕ್ಕಾಗಿ ಆವರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇವೆ.

ದೀಪಾವಳಿ ಹಬ್ಬದಿಂದ ಪ್ರಾರಂಭವಾಗುವ ಹೊಸ ವರುಷದ ದಿನಗಳು ಕನ್ನಡಿಗರ ಬಾಳಿಗೆ ಬೆಳಕನ್ನು ಕೊಡಲಿ.

—ಸಂಪಾದಕರು

ಮಂಗನ ಮಲ್ಲಿನಾಥತನ

ಮಂಗರಾಯನ

ಜ-ನಿ-ವಾ-ರ ಜ್ಯು-ಬಿ-ಲಿ!!

ಗರ್ಭಾಷ್ಟಮೇಬ್ದೇ ಕುರ್ವೀತ ಬ್ರಾಹ್ಮಣಸ್ಯೋಪನಯನಂ--ಎಂಟನೆಯ ವರ್ಷಕ್ಕೆ ಬ್ರಾಹ್ಮಣ ಬಟುವಿಗೆ ಉಪನಯನ ಮಾಡಿಸತಕ್ಕದ್ದು--ಎಂಬ ಶಾಸ್ತ್ರ ವಾಕ್ಯ, ಇದೀಗ ಮಂಗರಾಯನಿಗೆ ಎಂಟನೆಯ ವರ್ಷವಾದ್ದರಿಂದ, ಆತನಿಗೆ ಉಪನಯನ ಬೇಡವೆ?--ಎಂದು ವಾಚಕರೊಬ್ಬರು ಮಂಗರಾಯನನ್ನು ಪ್ರಶ್ನಿಸಿದ್ದಾರೆ. ಅದೇನೊ ನಿಜ, ಎಂದರೆ ವಾಚಕರ ದೃಷ್ಟಿಯಿಂದ ನಿಜ. ಸಾಕ! ಆಪರಾದರೂ ಮಾಡಬೇಕೇನು? ಜಾತಿ-ಸಂಸ್ಕಾರ-ಸಂಪ್ರದಾಯಗಳ ಸಂಕೋಲೆಯಲ್ಲಿ ತಾವು ಸಿಲುಕಿದಂತೆ ಇಡಿಯ ಜಗತ್ತೇ ಸಿಲುಕಿದೆ ಎಂದು ಆನರ ಭ್ರಮೆ. ಜಾತಿ-ಧರ್ಮ-ಮತ-ಮುರಿಗಳಿಗೆ ಅತೀತನಾದವನು ಮಂಗರಾಯನು ಎಂದು ಆ ವಾಚಕರಿಗೇನು ಗೊತ್ತು?....

ಹಾಂ! ಒಂದು ವಿಷಯ. ಇದೀಗ ಚುನಾವಣೆಗಳು ಬರುತ್ತವೆ. ಚುನಾವಣೆ ಎಂಬ ಈ ಘನಿಕ ಪಿಡುಗಿಗೆ ಮಂಗರಾಯನು ಆಹುತಿಯಾಗಬಯಸುವುದಾದರೆ, ಆವನಿಗೊಂದು ಜಾತಿ ಬೇಕೇ ಬೇಕು ಎಂದು (ಹಲ್ಲು) ಕಿರಿದನಿಯೊಂದು ಕೀಳುತ್ತಿದೆ. ನಿಜ. ಆದರೆ ತಾನು ನಾಗರಿಕ ಎಂಬ ನ ದೃಷ್ಟಿಯಿಂದ ನಿಜ. ಮಂಗರಾಯನು ಮಾತ್ರ ಯಾಂಬನ್ನರಿಯದ ಅನಾಗರಿಕ, ಹೊ! ಹೊ! ಹಾಗೆಂದರೆ 'ಅನಾಗರಿಕ' ಎಂಬುದೆ ಮಂಗರಾಯನ ಜಾತಿ ಎಂದು ಹೇಳಬಹುದೆ? ಬಿರುದನ ಬಹಾದ್ದರದು ಹೇಳಬಹುದು.....ಾಕೆಂದರೆ ಮಂಗರಾಯನಿಗೆ ತಾನು 'ಅನಾಗರಿಕ' ಎಂಬುದರ ಬಗ್ಗೆ ಅಭಿಮಾನವಿದೆ, 'ಅಸಂಸ್ಕೃತ' ಎಂಬುದೂ ಆವನಿಗೆ ಅಸಮಾಧಾನವಿಲ್ಲ. ಉಪನಯನ ಎಂಬ ಸಂಸ್ಕಾರವನ್ನು ಹೊಂದಿ ನೋಡೋಣ ಎಂದು ಮಂಗರಾಯನಿಗೂ ಮೋಜಿನ ವಿಚಾರ ಬಂದಿದೆ. ಉಪನಯನದ ಅಧಿಕಾರ ಬೇರೆ ಬೇರೆ ಜಾತಿಯವರಿಗೆ ಬೇರೆಬೇರೆ ವಯಸ್ಸಿನಲ್ಲಿದ್ದುದರಿಂದ ಜಾತಿ ಯಾವುದು ಎಂಬ ನಿರ್ಣಯದ ತೊಂದರೆ. ತೊಂದರೆ ನಿವಾರಣೆಗಾಗಿ ರಾಮುನಾಮವನ್ನು ಜಪಿಸುತ್ತಲಿದ್ದಾನೆ ಮಂಗರಾಯ!.--

---ರಾಮುರಾಮು! ಸೀತಾರಾಮು---ಇಲಿಕ್ಕನ್ನಿಗೆ ನಿಂತಾರಾನು! ರಾಮುರಾಮು! ಬುದ್ಧಿಗೆ ವಿರಾಮು! ಇಲಿಕ್ಕನ್ನದಿ ಜಾತಿಯ ಭರಾಮು! ರಾಮ್-ರಾಮ್---ಪಂ! --- ಮಂಗರಾಯನು ಬ್ರಾಹ್ಮಣನಾಗಬಹುದೆ?---'ನಾಗಬಹುದು'---ಅಲ್ಲಲ್ಲ--- ಯಾವ ಬ್ರಾಹ್ಮಣ? ಎಂದರೆ ಕಾಂಗ್ರೆಸೀ ಬ್ರಾಹ್ಮಣನೊ ಕಾಂಗ್ರೆಸೇತರ ಬ್ರಾಹ್ಮಣನೊ? ಕಾಂಗ್ರೆಸೀ ಬ್ರಾಹ್ಮಣನಾಗಿದ್ದರೆ ಜೇಲ ಹಾರಂಗತ ಬ್ರಾಹ್ಮಣನೊ ಏನು ಹಾರ ಜೇಲಂಗತ ಬ್ರಾಹ್ಮಣನೊ?---ಪಾಯ್-ಪಾಯ್---ಎಂದರೆ --- ಹಾಯ್-ನಲ್ಲದು ಬುದ್ಧಿಗೆ...

---ಕಾಂಗ್ರೆಸೇತರ ಬ್ರಾಹ್ಮಣನಿರಬಹುದೆ ಮಂಗರಾಯ? ಎಂದರೆ ಆರ್.ಡೀಪೀನೋ ಏಳ್.ಡೀಪೀನೋ? ಕಮ್ಯುನಿಸ್ಟನೊ ಕನ್ಸರ್-ವೇಟಿವ್-ಗೋಇಸ್ಟನೋ? ಮಹಾಸಭಾದವನೊ ಸ್ವತಂತ್ರಸಭಾದವನೊ? ಅಕಟಕಟಾ! ಹಾರುವರಲ್ಲಿ ಶ್ರೇಷ್ಠನಾದ ಮಂಗರಾಯನು ಯಾವ ಶಾಖೆಯ ಹಾರುವನು? ಶಾಖೆ ಗೊತ್ತಾದರಲ್ಲವೆ ಪಾಕುವ ನೇಣಿನ ಉದ್ದಳತೆ ಗೊತ್ತಾಗುವುದು? ನೇಣಿನ ಉದ್ದಳತೆ ಗೊತ್ತಾಗದೆ ಉಪನಯನವನ್ನು ಮಾಡುವುದೆಂತು?

---ಇಂತು---ಅಲ್ಲ-ಅಂದ್ರೆ---ಅಂತೂ ಬ್ರಾಹ್ಮಣ ಗೋತ್ರಕ್ಕೂ ಮಂಗರಾಯನಿಗೂ ಜನಿವಾರ ಬರುವ ಮುಂಚಿತವೆ ತೊಡಕು ಬಿದ್ದಂತಾಗಿದೆ. ಹಾಗಾದರೆ ಮಂಗರಾಯನು ಅಬ್ರಾಹ್ಮಣ---ಅಲ್ಲ, ಭೂಸಿಗೊ!---ಬ್ರಾಹ್ಮಣೇತರನೇಕಾಗಬಹುದು? ಎಂದರೆ ಮಂಗರಾಯನು ಲಿಂಗಾಯತನೊ ಲಿಂಗಾಯತೇತರನೊ, ಅಥವಾ ಲಿಂಗಾಯತೇತರನೊ ಲಿಂಗಾಯತೇತರೇತರನೊ ಇಲ್ಲವೆ ಲಿಂಗಾಯತೇತರೇತರೇತರೇತರನೊ ಅಥವಾ ಯಾವುದಾದರೂ ಒಂದು ತೆರನೊ ಎಂಬುದನ್ನು ನಿರ್ಣಯಿಸಬಹುದಲ್ಲವೆ? ---ಹುದು- ಛೆ!---ಹುದುಲಾರದು...

---ನಿನಕಟ! ಅಂತೂ ಮಂಗರಾಯನಿಗೆ ಜನಿವಾರದ ಬಿಕ್ಕಟ! ಒಂದೂ ಜಾತಿಗೆ ಹೊಂದದ ಮಂಗರಾಯನಿಗೆ---ಹಾಂ! ತಡೆಯಿರಿ! ಹೊಳೆದಿದೆ! ಒಂದು ಜಾತಿ ಇದೆ! ಆಂದ್ರೆ ಇನ್ನೂ ಒಂದು ಜಾತಿ ಉಳಿದಿದೆ! ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತ ಮೇಲೇರುವ ಮಹತ್ವಾಕಾಂಕ್ಷೆಯ ಮುಂಗರಾಯಾ, ನಿನಗೆ ಸಂದಿಗೊಂದುಗಳಲ್ಲಿ ಹೊಂದತಕ್ಕ ಜಾತಿಯೊಂದಿದೆ; ಪಕ್ಷಾತೀತವಾಗಿದೆ, ಎಂದರೆ ಎಲ್ಲ ಪಕ್ಷಗಳಲ್ಲೂ ಆ ಜಾತಿ ಇದೆ, ನಿನ್ನಂತೆ ಮೇಲೇರುವ, ಅಧಿಕಾರಪದವಿಗೇರುವ ಮಹತ್ವಾಕಾಂಕ್ಷೆಯ ಜಾತಿ ಇದೆ---ಆ ಜಾತಿ ನಿನ್ನ ಪಾಗಬಹುದೆ?

\+ \+ \+

ಭಳೆ! ಭಳೆ! ವಿವರ್ಲಿ ಬಾಂಧವಾ! ನಿರ್ಣಯದ ನಿಕಾಲಸಾ! ನಿನ್ನ ಸ್ಫೂರ್ತಿಯಿಂದ ಕೊನೆಗೊಂದು ಜಾತಿ ದೊರಕಿತು ಮಂಗರಾಯನಿಗೆ! Beverley Nicholas! Verdict on India! ಬೈವರಲ್ಲಿ ನೀ ಕಳಸ! ಬೀವರ್ಲಿ ನಿಕಾಲಸ! ಹಿಂದುಗಳೆಂದರೆ ಬೇಕಾದ್ದನ್ನು ಮಾಡಬಲ್ಲ, ಬೇಕಾದ್ದನ್ನು ನಂಬಬಲ್ಲ, ನೀತಿಗೆಟ್ಟ, ಮತಿಗೆಟ್ಟ ಅಸಂಸ್ಕೃತರು ಎಂದಿದ್ದಾನೆ ನಮ್ಮ ಬೈವರ ಅಲ್ಲಿ! ಆದಕಾರಣ ಮಂಗರಾಯನಿಗೂ ಒಂದು ಜಾತಿ ದೊರಕಬಹುದು ಹಿಂದುಗಳಲ್ಲಿ. ಇಲ್ಲವೆ ಬೈವರ ಅಲ್ಲಿ, ಆಂಗ್ಲ ಸಂಸ್ಕೃತಿಯ ಬಚ್ಚಲು ನಲ್ಲಿ? ಮಂಗರಾಯನಿಗೆ ಅಂತೂ ಮಹದಾನಂದವಾಗಿದೆ. ಏನಾದರೂ ಮಾಡಿ ಮೇಲೇರುವ ಪಕ್ಷ ಹಿಂದುಗಳಲ್ಲಿದ್ದರೂ 'ನಿಕಾಲಸ'ನನ್ನು ನೋಡಿದ ಮೇಲೆ ಆ ನಿಕಾಲಸನ ವೇಶದಲ್ಲಿ ಈ ಪಕ್ಷ ಅತ್ಯಂತ ಉನ್ನತಾವಸ್ಥೆಯಲ್ಲಿದೆ ಎಂದು ಕಂಡುಬಂದಿದೆ ಮಂಗರಾಯನಿಗೆ. ನಿಕಾಲಸಾಹೇಬರೆ, ಮಂಗರಾಯನು ನಿಮಗೆ ತರಣಾಗತನಾಗುತ್ತಾನೆ.. ನಿಮ್ಮ ಜಾತಿಗೆ ಅವನನ್ನು ಸೇರಿಸಿಕೊಳ್ಳುತ್ತೀರಾ? ನಿಮ್ಮ ವಿಚಾರವೈತರಣಿಯಲ್ಲಿ ಅವನಿಗೆ ಅಭಿಷೇಕವನ್ನು ಮಾಡುತ್ತೀರಾ? ನಿಮ್ಮ ವೈಪಯಿದ ಹೊಲೆಗೇರಿಯಲ್ಲಿ ಅವನಿಗೆ ನಾಗರಿಕತೆಯ ದೀಕ್ಷೆಯನ್ನು ಕೊಡುತ್ತೀರಾ? ಆರ್ಥಾತ್, ಉರಿಯಿಂದ ಜಗತ್ತನ್ನು ಸುಡುವ ನಿಮ್ಮ ಉಪದ್ರವ ಸಂಸ್ಕಾರದಿಂದ ಉಪನಯನದೀಕ್ಷೆಯನ್ನು ಕೊಡುತ್ತೀರಾ. **ಬೈವರ ಅಲ್ಲೀಸಾಹೇಬ್?**

× × ×

ದೀವಳಿಗೆಯ ಹಬ್ಬವು ಎಲ್ಲರಿಗೂ ಸುಖದಾಯಕವಾಗಲಿ!

...ಛೆ! ಇದೇನು ಜಾತಿಯ ಗೊಂದಲ-ಎಂದರೆ-ಯಾವ ಜಾತಿಯನ್ನು ಸೇರಬೇಕೆಂಬ ಗೊಂದಲ 'ನುಂಗರಾಯನಿಗೆ? ಹಹಹ! ನುಂಗರಾಯನದೆ ಹುಚ್ಚು! ಮನುಷ್ಯ ಜಾತಿಯೆ ತನ್ನದಲ್ಲವಾದಾಗ ಈ ಪ್ರಶ್ನೆ ಬಿಡುವುದೆಂತು? ಆಟಂ ಬಾಂಬು ಗೋತ್ರದ ನೂಲನಿವಾಸಿ ಬೀವರ್ಲಿಯಾಗರಿ ಆಹಿಂಸಾ ಗೋತ್ರದ ಭಾರತೀಯನಾಗರಿ—ಎಲ್ಲರೂ ಜಾತಿ ಒಂದೇ—ಎಂದರೆ ಇವರಾರೂ ನುಂಗ ಜಾತಿಗೆ ಸೇರಿದವರಲ್ಲ. ಆದಕಾಗಿ ನುಂಗರಾಯನು ತನ್ನ ಜಾತಿಯ ಮಹಾತ್ಮವಾದ ಮುನ್ನೂರು ನುಂಗ ಮಹರ್ಷಿಗಳಿಗೆ ಶರಣು ಹೊಕ್ಕುತ್ತಾನೆ. ಮುನ್ನೂರೂ ನುಂಗಮಹರ್ಷಿಗಳು ತಪೋನಿರತರಾಗಿ: ಕಣ್ಣು ಮುಚ್ಚಿ ಕುಳಿತವರೊಬ್ಬರು, ಕಿವಿ ಮುಚ್ಚಿ ಕುಳಿತವರೊಬ್ಬರು, ಬಾಯಿ ಮುಚ್ಚಿ ಕುಳಿತವರೊಬ್ಬರು. ಈ ಮುನ್ನೂರಲ್ಲಿ ಯಾವ ಜಾತಿಯನ್ನು ನುಂಗರಾಯನು ಅಂಗೀಕರಿಸಬಹುದು? ಆಟಂ ಬಾಂಬಿನ ಸಂಸ್ಕೃತಿಯನ್ನು ನೋಡಲಿಕ್ಕಿಲ್ಲ ಎಂದು ಕಣ್ಣು ಮುಚ್ಚಬಹುದೆ? ಇಲಿಕ್ಸ್ನಿಗಾಗಿ ಪೇರುವ ಸುಳ್ಳನ್ನು ಕೇಳಲಿಕ್ಕಿಲ್ಲವೆಂದು ಕಿವಿಮುಚ್ಚಿಬಹುದೆ? ತನ್ನದು ಈ ಜಾತಿ ಎಂಬ ದಡ್ಡತನವನ್ನು ನುಡಿಯಲಿಕ್ಕಿಲ್ಲವೆಂದು ಬಾಯಿ ಮುಚ್ಚಿ ಕೂಡಬಹುದೆ? ಇಲ್ಲವೆ—ಬರಗಾಲದ ಜಾತಿ ತನ್ನದೆಂದು ಸರ್ವಾಂಗ ಮುಚ್ಚಿ ಕೂಡಬಹುದೆ?...

×

ದೊಡ್ಡದು—ಜಾತಿಯ ತೊಡಕು ದೊಡ್ಡದು—ಇಲಿಕ್ಸ್ನಿನ ಕಾಲದಲ್ಲಿ ಶಬ್ದಗಳಂತೆ ಅರ್ಥವೂ ದೊಡ್ಡದಾಗುವುದು. ಮಾಗಾದಲ್ಲಿ ನುಂಗರಾಯನಿಗೆ ಕೊನೆಗೂ ಉಪನಯನವಿಲ್ಲವೆ? ಛಲೆ! ಛಲೆ! ಆದೇಕಿಲ್ಲ? ಉಪನಯನಕ್ಕೆ ಜಾತಿಯೊಂದೇ ಬೇಕಿಲ್ಲ. ಇನ್ನೂ ಎನೆನ್ನೇ ಬೇಕು. ಪೈಸ್ಟಾಂತಕ್ಕೆ ಕೈಯಲ್ಲೊಂದು ದಂಡ ಬೇಕು. ಯಾವ ದಂಡ? ಕನ್ಯಾಸ್ಟ್ರವನ್ನು ಧರಿಸಬಲ್ಲ ಆಹಿಂಸಾತ್ಮಕ 'ಸಟ್ಟಾಭಿ ದಂಡ' ನಡೆಯಬಹುದೆ? ನಡೆಯುವಾಗ ಊರಿದರೆ ಜಗತ್ತನ್ನು ನಡುಗಿಸುವ ದಂಡಿ ಯಾತ್ರೆಯ ದಂಡ ಬೇಕೆ? ಈ ಇಲಿಕ್ಸ್ನ್ ಕಾಲದಲ್ಲಿ ಯಾವ ದಂಡ ಬೇಕು? ನಮ್ಮ ಇಲಿಕ್ಸ್ನ್ ಎಂಬುವೆ ಒಂದು ದಂಡನೆ? ಹಹಹ!—ಅಂದ್ರೆ—ಅಹಹ!...

× × ×

ನ್ಯೂಗನ ಚರ್ಮವೊಂದು ಬೇಕು ಮೈಗೆ ಸುತ್ತಲು. ನ್ಯೂಗದಂತೆ ಕೂಳಾಗಿ ಒಬ್ಬರೊಬ್ಬರ ಕುತ್ತಿಗೆಗೆ ಕಾದುವ ಬಡಭಾರತೀಯರ ಚರ್ಮ ನಡೆಯಬಹುದೆ? ಹಾಗಿದ್ದರೆ ಬಲು ಸುಖ ನುಂಗರಾಯನಿಗೆ. ಯಾಕೆಂದರೆ ಇನಿಯ ಕೈಲಾಸವನ್ನೆ ನುಚ್ಚು ನೂರು ಚರ್ಮ ಸುಲಭವರಲ್ಲಿ ಸಿಕ್ಕುವುದು, ಕೈಲಾಸದ ಕೆಳಗಿದ್ದ ಭಾರತವಲ್ಲ. ಹಂ! ಹೊಳೆಯಿತು! ನ್ಯೂಗಚರ್ಮವೂ ದೊರಕಬಹುದಲ್ಲ? ಇಲಿಕ್ಸ್ನಿಗಾಗಿ ನರಿಯ ಚರ್ಮಗಳನ್ನು ಹೊದ್ದುಕೊಂಡವರಿಲ್ಲ? ಅವುಗಳನ್ನು ಸುಲಿಯಬಾರದೇಕೆ—ಎಂದರೆ—ಆಹಿಂಸಾಮಯನಾಗಿ ಸುಲಿಯಬಾರದೇಕೆ?....

ಕೊನೆಯುಪಾಗಿ, ಭಗತಿ ಭಿಕ್ಷಾಂದೇಹಿ ಎನ್ನುವುದು. ನುಂಗರಾಯನಿಗೆ ಇದೂ ಒಂದು ಕೊರತೆಯು. ಮಾತಿಗೆ ಬಿಕ್ಷೆಯನ್ನು ಬೇಡಬೇಕೆಂದರೆ —ಯಾವ ಮಾತಿಗೆ? ಶ್ರೀಮತಿ ಹಿಂದುಸ್ತಾನ ಳಗೆಯೆ? ಚೀನಂ ಪಾಕಿಸ್ತಾನಳಿಗೆಯೆ? ಹಿಂದಿ-ಯುಷ್ಟಿಯೆ? ಉರ್ದುವಿನಲ್ಲಿಯೆ?....

ಉಪನಯನದ ತೊಡಕು—ಎಂದರೆ, ಆರ್ಥಾತ್ ಉಪನಯನ—ಬಿಟ್ಟಿಂತಾಯಿತು. ನುಂಗರಾಯ ಬಗೆ ಪೈಕಿ ಇಲ್ಲ. ಇರಿದಿಲ್ಲ ನಾಳೆ ಕ್ಷತ್ರಿಯ ಜಾತಿ ಸುಟ್ಟಿದರೆ ತನ್ನ ಹಸ್ಸಿಂದನೆಯ ವರ್ಗಕ್ಕೆ ಉಪನಯನ ಜರುಗಿಸಬಹುದಲ್ಲ? ಸದ್ಯಕ್ಕೆ ಜಾದೀಕೀ ಜೈ, ಜನಿಪಾರತೋ ನೈ (ನಹೀ) ಎಂದ ಹಾಯಿತು'

ಜಾತಿ ಭೂಪುವೆ ಇರಲಿ, ಹಬ್ಬ ಬಿಟ್ಟಿದ್ದಲ್ಲವಲ್ಲ ನುಂಗರಾಯನಿಗೆ ಎಂದು. ಸಕ್ಕದಯು ನಾಚಿಕರು ಸಹಾನುಭೂತಿಯನ್ನು ತೋರಿಸಬಹುದಾಗಿದೆ. ನಿಜ. ಆದರೆ ಏನೆಂದು ಹಬ್ಬವನ್ನಾಚರಿಸುವುದು ಎಂದು ನುಂಗರಾಯನ ಪ್ರಶ್ನೆ. ನರಕಾಸುರನ ಕಾಟ ತಪ್ಪಿತೆಂದೆ? ಆದರೆ ಆ ಅಸುರ ಮಹಾಶಯನ ಪರಿಚಯ ಕೂಡ ಇಲ್ಲ, ಕಾಟವಂತೂ ದೂರ ದಲ್ಲುಳಿಯಲಿ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕುವುದು ಎಂದು ಕೆಲರಿಗೆ ಹಬ್ಬವಾಗಬಹುದಾದೆರೆ, ಪ್ರಾಂತೀಕರಣ ದೊರೆಯಬಹುದು ಎಂದು ಇನ್ನು ಕೆಲರಿಗೆ ಹಬ್ಬ. ನಿಜ. ಅದರೇನು? ಮಂಗರಾಯನು ಯಥಾರ್ಥವಾದಿ; ಇದಲ್ಲದೆ ಶಾಖಾವಿಹಾರಿ..... ಪ್ರಾಂತವನ್ನು ಪಾಟ ದೇಶಕ್ಕೆಯೆ ಹಾರಬೇಕೆಂಬ ಶಕ್ತಿ ಇದೆ ನುಂಗರಾಯನಿಗೆ. ನುಗನಿಂದಲೆ ತಂದೆ ಮೋಕ್ಷವಿದ್ದುದರಿಂದ ಮೊದಲು ಮಗ ಹುಟ್ಟಲಿ ಆ ಮೇಲೆ ತಂದೆ ಹುಟ್ಟಲಿ ಎಂಬ ಯಥಾರ್ಥವನ್ನನುಸರಿಸಿ ಮೊದಲು ದೇಶಕ್ಕೆ ಸ್ವಾತಂತ್ರ್ಯ ಸಿಗಲಿ, ಆಮೇಲೆ ಪ್ರಾಂತವನ್ನು ನೋಡೋಣ ಎಂದು ಹಬ್ಬವನ್ನಾಚರಿಸಬೇಕೆಂದರೆ ಪ್ರಾಂತಾ ಮಾನಿ (=ದೇಶದ್ರೋಹಿ) ಗಳ ಉಪಟಳ ಇತ್ತ ಲಾಗಿ ಹೆಚ್ಚಾಗಿದೆ. ಸರಕಾರದೊಡನೆ ಹೋರಾಡು ಜೀವನ್ನು ಕಾಣದವರಿಗೆ ದೇಶವೆಂದರೇನೆಂದು ತಿ ಯುವುದು ಹೇಗೆ? ಯಾಕೆಂದರೆ, ನಮಗೆ ದೇ ವೆಂದರೆ ಜೀಲು, ಜೀಲೆಂದರೆ ದೇಶ! ಹಹಹ! ನಾವು ಹೇಳಿದಂತೆಯೆ ಕೇಳುವುದು ದೇಶ, ಅದಕಾ ದೇಶ=ಜೀಲ್. ಹಿಹಿಹಿ! ನಮಗೆ ವಿರುದ್ಧವಾ ವರಿಗೆ ಯಾವ ಶಿಕ್ಷೆ ಎಂದರೆ ಮುಂಬಯಿಯ ಡಾಕ್ಟರ್ ಜಿ. ವಿ. ದೇಶಮುಖರನ್ನು ಕೇಳಿರಿ... ಹೊಹೊಹೊ!

× ×

ಅಂತೂ ನುಂಗರಾಯನಿಗೆ ಹಬ್ಬ. ದೇಶದ್ರೋಹಿ ಗಳನ್ನು—ನರಕಾಸುರರನ್ನು—ದೊಡ್ಡಣ್ಣ ದೇಶ ಮುಖರನ್ನು ಹಾಳು ಸರಕಾರದ ಹೀನ ಶಾಸನಗಳಿಗೆ ನೂಕುವ ಹಬ್ಬ. ಈ ಸಂತಸದ ಭರದಲ್ಲಿ ನುಂಗರಾಯನು ಮುಂದಾಳುಗಳಿಗೆ ವೇಷ-ಭೂಷಣಗಳ ಉಡುಗೊರೆಯನ್ನು ಒಪ್ಪಿಸಬೇಕೆಂದಿದ್ದಾನೆ ಜಿನಾಸಾಹೇಬರಿಗೆ ಗಿಡ್ಡ ಪಂಚೆ, ಸೊಂಟಕ್ಕೆ ಸೆ ಯೂರ; ಸರದಾರರಿಗೆ ಕೆಂಪು ಲುಂಗಿ, ಮೈ ಸುತ್ತಲು ಕೆಂಪು ಶಾಟಿ, ಕೈಯಲ್ಲಿ ಭಗವಾ ಝಂಡಾ ನೆಹರು ಸಾಹೇಬರಿಗೆ ಕೆಂಪು ಗೊಂಡೆಯ ಟೋಪಿ ನೆರೆಯ ಬಣ್ಣದ ಕರವಸ್ತ್ರ, ಗಡ್ಡ, ಮೂಪಿಳ್ಳೆ ಲೂ ಪಟ್ಟಾಭಿಯವರ ಹಣೆಗೆ ಭಸ್ಮ, ಕೊರಳಲ್ಲಿ ರು ಡೀಕ್ಷೆ; ಅದರಂತೆಯೆ—ಹಂ!—ಸ್ಟೂರ್ತಿ! ಸು ಯುತಿದೆ ಕೈ! ತುರಿಸುತಿದೆ ಮೈ!. ಕಿರಿಯು ಪಲ್! ಒಳೆಯುತಿದೆ ನಿಲ್! ಉಡುಗೊರೆ ಭರದಲ್ಲಿ ಜಾತಿಯ ತೊಡಕನ್ನೆ ಬಿಡಿಸಿದ್ದಾ ನುಂಗರಾಯ!

ಎಂಥೆಂಥವರನು ಮೀರಿದ ಜಾತಿ-

ಕೊಡಕವ, ಛಲೆ! ಛಲೆ! ಬಿಡಿಸಿತು ಕೊ

ನುಂಗರಾಯನು ತನ್ನ ಜಾತಿಯ ಮಹಾತ್ಮವಾದ ಮುನ್ನೂರು ನುಂಗಮಹರ್ಷಿಗಳಿಗೆ ಶರಣು ಹೋಗುತ್ತಾನೆ

ತಾರಕ-ಸಂಹಾರ

(ಅನಾದಿ ಅದ್ಭುತ ರಮ್ಯ)

'ಶ್ರೀರಂಗ'

●

ಪಾತ್ರನಿವರ:

●

ವಸಂತ	ಕಾಲ:– ಅನಾದಿ
ಕಾಮ	ಸ್ಥಲ:–ಅನಂತ
ಇಂದ್ರ	
ರತಿ	
ಅಂತರಾಳ	

[All rights of staging, filming, translating etc. strictly reserved by the author]

[ಸಂಶ್ಲೇಷವನ್ನು ರಂಗಸೂಚನೆಯಲ್ಲಿ ಕಾಣಿಸಿದಂತೆ ರಂಗಸ್ಥಲದಲ್ಲಿ ಯೋಜಿಸಲಾಗದಿದ್ದಲ್ಲಿ ಈ ದೃಶ್ಯವನ್ನು ಆಡಲು ಸಮ್ಮತಿ ದೊರೆಯಲಿಕ್ಕಿಲ್ಲ.]

ದೃಶ್ಯ ೧

[ತೆರೆ ಏಳುವ ಮುಂಚೆ ೩-೪ ನಿಮಿಷಗಳ ವರೆಗೆ ಒಂದೇ ಸಮನೆ ನುಂಗಿ ಕಾಣಿಸುವಂತೆ ಆಬ್ಬರವನ್ನು ಕೇಳಿಸಬೇಕು. ಮೊದಲು ಗುಡುಗು, ಆಮೇಲೆ ಸಿಡಿಲಿನ ಕಡಕಡಾಟ, ಆ ಸದ್ದು ಅಡಗಿದ ಮೇಲೆ ಮಿಂಚಿನ ಸೆಳಕು, ಮತ್ತೆ ಸಿಡಿಲು---ಕ್ರಮೇಣ ಸದ್ದನ್ನಿಳಿಸುತ್ತ ಬಿರುಗಾಳಿಯ ಬುಂಕಾರವನ್ನು ಕೇಳಿಸಬೇಕು. ಶಕ್ಯವಾದರೆ ಮುಂದಿನ ತೆರೆಯನ್ನು ಬಿರುಗಾಳಿಯ ಸೆಳೆತಕ್ಕೆ ಸಿಕ್ಕಂತೆ ಹೊಯ್ದಾಡಿಸಬೇಕು. ಮುಂದೆ, ತೆರೆಯ ಹೊಯ್ದಾಟವನ್ನು ಸೂತ್ರ ತೋರಿಸಿ, ಎಲ್ಲ ಸದ್ದನ್ನು ಶಾಂತಗೊಳಿಸಬೇಕು. ಆಗ ಒಮ್ಮೆಲೆ ತೆರೆಯ ಹಿಂದಿನಿಂದ ಅತ್ಯಂತ ಗಂಭೀರವಾವ, ಅಧಿಕಾರಯುಕ್ತವಾದ ದನಿ ಈ ರೀತಿ ಗದ್ದರಿಸುವುದು: 'ಹಿಗ್ಗಲಿ. ನಾನು ಆಜ್ಞೆಯನ್ನು ಹೊರಡಿಸಿದ್ದೇನೆ, ಅರಳಲಿ.' ಆಗ ತೆರೆ ಮೇಲಕ್ಕೇಳುವುದು. ರಂಗಭೂಮಿಯ ಮಧ್ಯದಲ್ಲಿ ಒಂದು ಗಿಡ. ಸುತ್ತಲೂ ಬನದ ವಾತಾವರಣ. ಈ ಗಿಡದ ಬುಡಕ್ಕೆ ಇವಿರು ದಿಕ್ಕುಗಳಿಂದ ಎರಡು ವ್ಯಕ್ತಿಗಳು ಭುಜವನ್ನು ಆನಿಸಿ, ಅದೇ ಆಧಾರದ ಮೇಲೆ ಏಂಬಂತೆ ಒಂದು ಕಾಲನ್ನೂರಿ ಇನ್ನೊಂದು ಕಾಲನ್ನು ಮಡಚಿ ನಿಲಿಸಿ ನಿಂತಿವೆ. ಸಾಮಾನ್ಯ ನಿಂತ ರೀತಿಯಿಂದ ಸುರೆಯ ಮದ ಏರಿದ ರಂಕೆ ಬರುವಂತಿರಬೇಕು. ತರೆ ಎದ್ದೊಡನೆ ಮೊದಲಿನ ದನಿಯೆ---ಈಗ ಆ ವ್ಯಕ್ತಿಯೂ ಕಾಣುವುದು---'ಹಿಗ್ಗಲಿ ! ನಾನು ಆಜ್ಞೆಯನ್ನು ಹೊರಡಿಸಿದ್ದೇನೆ, ಅರಳಲಿ ! ' ಎಂದು ಮತ್ತೆ ಗದ್ದರಿಸುವುದು. ಆಗ ಇನ್ನೊಂದು ವ್ಯಕ್ತಿ ತಿರಸ್ಕಾರವನ್ನು ಸೂಚಿಸುವ ಮುಖಮುದ್ರೆಯಿಂದ---]

೨ನೆಯ ವ್ಯಕ್ತಿ:— ವಸಂತಾ, ನಿನ್ನ ದನಿಯೆ ಬಿರುಗಾಳಿಯಾಗುವವರೆಗೆ ಕೂಗಿದೆ ! ಯಾಕೆ ವ್ಯರ್ಥವಾಗಿ ಕಿರುಚಿ ನಿನ್ನ ಕಂಠಕೋಕಿಲೆಯ ಬಣ್ಣವನ್ನು ಬಯಲಿಗೆಳೆಯುವೆ ?

ವಸಂತ:— (ಆ ಮಾತಿಗೆ ಲಕ್ಷ್ಯವಿಲ್ಲವೆ, ಆವೇಶ ತುಂಬಿದವನಂತೆ, ಕೈಗಳ ಹಾವಭಾವದಿಂದ) ಹಿಗ್ಗಲಿ ! ಅರಳಲಿ ! ಒಲಿಯಲಿ ! ನಕ್ಕು-ನಲಿಯಲಿ ! ಸೊಕ್ಕು ಸೂರೆಗೊಳ್ಳಲಿ ! ನನ್ನ ಆಜ್ಞೆಯಿದು ! ಹೊಸ ಬಗೆಯ, ಹೊಸ ಸೊಗಸಿನ ಸೊಕ್ಕು ಸೂರೆಗೊಳ್ಳಲಿ !

೨ನೆಯ ವ್ಯಕ್ತಿ:— (ನಗುತ್ತ) ವಸಂತಾ, ನಿನ್ನ ಆಜ್ಞೆ ಒಂದೇ ಸಮನೆ ಸುರಿಯುತ್ತಲಿದೆ, ಮಳೆಗಾಲದಂತೆ ಸುರಿಯುತ್ತಲಿದೆ. ಇನ್ನಾವರೂ ಬಿಸಿಯುಸಿರನ್ನೊಮ್ಮೆ ಬಿಟ್ಟು ತಣ್ಣಗಾಗಬಾರದೆ ? ನೀನು ನೋತೆ. ನೀನ್ನೊಬ್ಬನಲ್ಲಿಯೆ ಆ ಶಕ್ತಿ ಇಲ್ಲ. ಒಪ್ಪಿಕೊ. ನೀನು ನೋತೆ. ಹಹಹ!

ವಸಂತ:— (ಇದುವರೆಗಿನ ಆವೇಶಕ್ಕೆ ದನಿದಂತಾಗಿ, ನಿಲ್ಲಿಗೆ ಮುಂದೆ ಸರಿದು, ತಿರುಗಿ ನಿಂತು, ಎರಡನೆಯ ವ್ಯಕ್ತಿಯನ್ನು ದಿಟ್ಟಿಸುತ್ತ) ಏನೆಂದೆ ? (ಒಮ್ಮೆಲೆ ನೋಡಿ) ಯಾರು– ನೀನು? ನೀನು ಹೇಳುವೆಯಾ ನಾನು— ಈ ವಸಂತನು—ಈ ಆನಂದಪುರುಷನು—ನೋತೆನೆಂದು ? ಮನ್ಮಥಾ, ನನ್ನ ಶಕ್ತಿಯನ್ನು ಮರೆಯುವಷ್ಟರ ವರೆಗೆ ಸುರಾಪಾನದ ಆವೇಶದಲ್ಲಿ ಸಿಕ್ಕಿರುವೆಯಾ ?(ಒಮ್ಮೆಲೆ ಸಿಟ್ಟಿನಿಂದ) ಹಹಹ !(ಅಣಕಿಸುವನು).

ಕಾಮ:— (ಗಟ್ಟಿಯಾಗಿ ನಗುತ್ತ) ನಿನ್ನ ಶಕ್ತಿ ? ಎಂತಹ ಶಕ್ತಿ ? ಸುಗ್ಗಿರಾಯನ ಸುರಾಪಾನದ ಶಕ್ತಿಯೆ ? ಹಹ !

ವಸಂತ:— (ಕನಲಿ, ಅಣಕಿಸುತ್ತ) 'ಹಹ ! ಸುರಾಪಾನ ಶಕ್ತಿ !' ಆ ಶಕ್ತಿ ನನ್ನದಲ್ಲ, ನಿನ್ನದು. ನನ್ನದು ಸುರಾಪಾನ ಶಕ್ತಿಯಲ್ಲ, ಅಮೃತದಾನ ಶಕ್ತಿ ! ಹೊಸ ಕಳೆಯನ್ನು, ಹೊಸ ಬೆಳೆಯನ್ನು, ಹೊಸ ಬಗೆಯನ್ನು, ಹೊಸ ನಗೆಯನ್ನು ತಂದುಕೊಡುವ ಶಕ್ತಿ—**ನನ್ನದು !** (ಎಂದು ಕಂಠಕೋಣಕ್ಕಾಗಿ ಬಂದ ಹಣೆಬೆಮರನ್ನು ಒರೆಸಿಕೊಳ್ಳುವನು).

ಕಾಮ:— (ನಡೆದುಬಂದು, ರಮಿಸುವವನಂತೆ ಬೆನ್ನು ಜಪ್ಪರಿಸುತ್ತ) ಹೊಸ ಕಳೆ ! ಸಾಪ ಚೆನ್ನಾಗಿ ಬೆಮರಿಳಿದರೆ ಬರಬಹುದು ಮುಖದ ಮೇಲೆ ಹೊಸ ಕಳೆ. ಹೊಸ ನಗೆ ! ನಿಜ. ನೀನು ಇಷ್ಟೊಂದು ಕನಲಿ, ಕಂಗಾಲನಂತೆ ಹೇಳಿಕೊಳ್ಳುವುದನ್ನು ನೋಡಿದರೆ ನಗೆ ಬರುವುದು, ನಿಜ. ನಾಕು. ನಾನು ನಿನ್ನ ಗೆಳೆಯ. ಆದಕಾಗಿ ಮುರಹಂಕಾರವನ್ನು ಬಿಡು. ಈ ಕಾಮನ ಮುಂದೆ ನೀನು ಕಃಪದಾರ್ಥನೆಂಬುವನ್ನು ಒಪ್ಪಿಕೊ—(ಬೆನ್ನು ಸವರುವನು).

ವಸಂತ:— (ಬೆದರಿದ ದನದಂತೆ ಮೈಜಾಡಿಸಿಕೊಂಡು) ಕಾಮನ ಮುಂದೆ ಕಃಪದಾರ್ಥ ! ನಾನು—ವಸಂತನು—ಸತ್ತುದರಲ್ಲಿ ಸೌಂದರ್ಯವನ್ನು ತುಂಬಿ ಬದುಕಿಸುವ ಬೆಡಗಿನ ಬಂಟನು—ನಾನು ಈ ಅಂತಃಪುರದ ಅಂಜುಗುಳಿಯ ಮುಂದೆ—ಈ ಹೂಬಾಣದ ಹುಡುಗಾಟಿಗೆಯ ಮುಂದೆ—ಕಃಪದಾರ್ಥನೆ ?

ಕಾಮ:— (ಗದ್ದರಿಸುತ್ತ) ಏನೆಂದೆ ? ಅಂತಃಪುರದ ಅಂಜುಗುಳಿ?

ವಸಂತ:— ಅಹುದಹುದು ! ಅಂತರಂಗದಲ್ಲಿ ಹಳಸಿದ ಹುಳಿ—

ಕಾಮ:— (ಮೇಲಿನಂತೆಯೆ) ಏನೆಂದೆ ? ಏನೆಂದೆ ? ಹೂಬಾಣದ ಹುಡುಗಾಟಿಕೆ ?

ವಸಂತ: (ಗಟ್ಟಿಯಾಗಿ) ಅಹುದು ಅಹುದು ! ಹೆಂಗರುಳಿನ ಹುಚ್ಚಾಟಿಕೆ.

ಕಾಮ:— ಏನು— ಏನು— (ಎನುತ್ತ ತಡೆಯದ ಸಿಟ್ಟಿನಿಂದ ಮೂತು ಸಾಲದೆ ಅವನ ಭುಜಗಳನ್ನು ಬಲವಾಗಿ ಹಿಡಿದು ಅಲುಗಿಸುವಾಗ—ಒಮ್ಮೆಲೆ ತಡೆದು—ದೂರ ಸರಿದು—ತಿರಸ್ಕಾರದಿಂದ ಅವನನ್ನು ದಿಟ್ಟಿಸುತ್ತ) ಸರಿ. ಆನೆಯ ಕಿವಿಗೆ ಇಂಟಿಕೊಂಡ ಇರುವೆಯ ಕತೆಯಂತಾಗಿದೆ ನಿನ್ನ ಸ್ಥಿತಿ. ನೆಲವನ್ನು ಮುಟ್ಟದೆ, ಕಿವಿಯ ಎತ್ತರದಿಂದ, ತಾನೂ ಆಷ್ಟೊಂದು ಮೊಡ್ಡವ ಎಂದು ಕಲ್ಪನೆಯಾಯಿತಂತೆ ಆ

ಇರುವೆಗೆ. ನನ್ನ ಸಹವಾಸವಲ್ಲಿ ನೀನೂ ಆ ಇರುವೆಯಂತೆ ಆಗಿರುವೆ. ಆಗಲಿ. ಆನೆ ಕೆವಿ ಜಾಡಿಸಿ ಇರುವೆಯನ್ನು ಕೆಡವಿದಂತೆ, ನಾನೂ ನಿನ್ನನ್ನು ದೂರ ಬಿಸಾಡುವೆ. ಆಗ ನೋಡೋಣ ನಿನ್ನ ಶಕ್ತಿ ಎಷ್ಟೆಂಬುದು ?

ವಸಂತ :— (ಆಶ್ಚರ್ಯಾನುಭವದಿಂದ) ಓಹೊ ! ಕಾಮನಿಗೂ ಗಜಕರ್ಣಕ್ಕೂ ಸಂಬಂಧವಿದೆಯೆ ? ಮಣ್ಣಿನ ಗಜವೂ, ಮಾಟದ ಗಜವೋ? ಎಲವೊ, ದರ್ಪಕ ಎಂಬ ನಿನ್ನ ಹೆಸರನ್ನು ಸಾರ್ಥಕ ಮಾಡಿಕೊಂಡೆ ! ನನ್ನೊಡನೆ ಹೋಲಿಸಿಕೊಳ್ಳುವ ಯೋಗ್ಯತೆಯ ಮಟ್ಟಿಗಾದರೂ ನಿನಗೆ ಶಕ್ತಿ ಇದೆಯೆ? ಹಹ ! (ಎಂದು ತಿರಸ್ಕಾರದಿಂದ ಗಹಗಹಿಸುತ್ತ ಬೆನ್ನು ತಿರುಗಿಸಿ ನಡೆಯುವನು)

ಕಾಮ :— (ಆಣಕಿಸುತ್ತ) ಹಹ ! 'ಹಿಗ್ಗಲಿ, ಅರಳಲಿ' (ವಸಂತನು ಒಮ್ಮೆಲೆ ತಿರುಗಿ ನಿಂತು ಸಿಟ್ಟಿನಿಂದ ನೋಡಲು) ಇದೇ ಜಲ್ಲನೆ ನಿನ್ನ ಶಕ್ತಿ? ಹಿಗ್ಗುವುದೇನು? ಕೂಗಿದ್ದಕ್ಕೆ ಕಂಠವಲ್ಲಿಯ ನರ ಅರಳುವುದೇನು? ಕೂಗಿಕೂಗಿದಂತೆ ಅರಳುವುದು ಬಾಯಿಯಗಲ! (ಅಭಿಮಾನದಿಂದ) ಹೂಬಾಣವಂತೆ ! ಕೇಳಿರನೆಯೂ ಹೂ ಬಾಣದ ಹೊಡೆತಕ್ಕೆ ಸಿಕ್ಕಿದುದರ ಕತೆಯನ್ನು ? ಬಾಣದ ಮಾತಿರಲಿ. ಮುಂಜೆ ಬಿಲ್ಲನ್ನು ಮಣಿಸಿದ್ದಕ್ಕೆ ಜಗತ್ತಿನ ಎದೆ ನಡುಗುವುದು.

ವಸಂತ :— ಎದೆ ನಡುಗುವುದಂತೆ ! ಅದೇ ಹುಡುಗಾಟ ಎನ್ನುವೆ ನಾನು. ಆ ಎದೆಯಲ್ಲಿ ನೀನೇ ಕುಳಿತುಕೊಳ್ಳುವೆ, ಅಂಜುಗುಳಿಯಾದುದರಿಂದ ನಡುಗುವೆ. ಅದಕ್ಕಾಗಿ ಎದೆಯೆ ನಡುಗಿದಂತೆನಿಸಿದರೆ—

ಕಾಮ :— (ನಡುನಡುವೆ) ತಡೆ ನಿನ್ನ ತುಂಟ ತರ್ಕವನ್ನು. ಜಗತ್ತು ನಡುಗುವುದೆಂದರೆ ಗಾಳಿಗೆ ಗಿಡ ನಡುಗಿದಂತೆ, ಬಳ್ಳಿ ಬಳುಕಿದಂತೆ. ಆದರೆ ಆ ಗಾಳಿಯೆ ಆ ಗಿಡಬಳ್ಳಿಗಳಿಗೆ ಜೀವಶಕ್ತಿಯನ್ನು ತುಂಬುವಂತೆ ನಾನು ಜಗತ್ತಿನಲ್ಲಿ ಜೀವಶಕ್ತಿಯನ್ನು ತುಂಬುವವ! ಗಾಳಿಯ ಹೊಡೆತವನ್ನು ಹಿಂಗಿಸಿ ಬೆಳೆವ ಸಾಹಸಶಕ್ತಿಯನ್ನೆ ತುಂಬುವವ.

ವಸಂತ :— (ನಸ್ಯಪೂರ್ಣ ನಗುತ್ತ) ಜೀವಶಕ್ತಿ ! ನೀನು ತುಂಬುವವ ! (ಕಾಮನು ಸಿಟ್ಟಿನಿಮ್ಮದನ್ನು ಕಂಡು ಇನ್ನಷ್ಟು ಜೋರಾಗಿ ನಗುತ್ತ) ನೀನು ತುಂಬುವೆ, ಸಿಡಿ. ಅವರೆ ಅವಕ್ಕೆ ಇಂತಹ ದೊಡ್ಡ ಹೆಸರು ಎಂದು ನನಗೆ ಗೊತ್ತಿರಲಿಲ್ಲ . (ಇಕ್ಕಟ್ಟಾಗಿ ನಗುತ್ತ) ಅವೆಂತಹ ಜೀವಶಕ್ತಿ ! ಅವೆಂತಹ ಸಾಹಸಶಕ್ತಿ ! ನೀನು ತುಂಬುವುದು ಬೇರೆ, ಪುಷ್ಪಶರಾ, ಕೀಲಕಾ ! ಮುಂಜಾವಿನ ಮುಖವಲ್ಲಿ ನಲಿವನ್ನು ತುಂಬುವೆ ನೀನು ! ಹೇಡಿಗಳ ಹೃದಯದಲ್ಲಿ ಉತ್ಸಾಹವನ್ನು ಸಾಹಸಶಕ್ತಿಯನ್ನು ತುಂಬುವವ ನೀನು ! ಮುದ್ದಿಕೆಯ ಬೆಡ್ಡರಲ್ಲಿ ಆತ್ಮವಂಚಕವೌರುಷವನ್ನು ತುಂಬುವವ ನೀನು ! ಗತಿ ಇಲ್ಲದವರಲ್ಲಿ ಜೀವಿಸುವ ಯೋಗ್ಯತೆ ಇಲ್ಲದವರಲ್ಲಿ ಸೂಳೆಗಾರಿಕೆ ಎಂಬ ಜೀವನ ಶಕ್ತಿಯನ್ನು ತುಂಬುವ ನೀನು—

ಕಾಮ :— (ಗದ್ಗದಿಸಿ) ಮುಚ್ಚು ನಿನ್ನ ಬಾಯಿಯನ್ನು ! ಸುಗಂಧದಿಂದ ಪುಷ್ಪಗಳನ್ನು ಅರಳಿಸುವವನಾದರೂ ನಿನ್ನ ಬಾಯಿಯಿಂದ ದುರ್ಗಂಧದ ದುಷ್ಟತನ ಸೂಸುತ್ತಲಿದೆ ಬಂಬಿಡನ್ನು ನುಸಿಯುಬೇಡ ... ಸಾಕು, ನನ್ನ ನಿನ್ನ ಗೆಳೆತನವ ಕೊನೆಯು ಕ್ಷಣವಿದು. ಇಂದಿನ ವರೆಗೆ ಇಬ್ಬರೂ ಒಬ್ಬನಂತಿದ್ದರೆ ಇಂದಿನಿಂದ ಇಬ್ಬರಲ್ಲಿ ಒಬ್ಬನೆ ಬಾಳಿಯಲಿ; ನಿನ್ನ—ನನ್ನ ಶಕ್ತಿಗಳ ಸತ್ತ್ವಪರೀಕ್ಷೆಯಾಗಲಿ....

ವಸಂತ :— (ಹಟಮಾರಿ ಹುಡುಗನನ್ನು ಸಂತಯಿಸುವಂತೆ ಅವನ ಬೆನ್ನು ಚಪ್ಪರಿಸುತ್ತ) ಕಾಮೂ, ಕಲ್ಪನೆಯ ಉದ್ದಾಮ, ಸತ್ತ್ವಪರೀಕ್ಷೆ! ಅಂತಹ ಗಡುಚಾದ ಶಬ್ದಯೋಜನೆ ಯಾಕೆ? ಸತ್ತ್ವಪರೀಕ್ಷೆ—ಎಂದರೇನು ? ಸತ್ತ್ವವಿದ್ದರೆ ಮಾತ್ರ ಪರೀಕ್ಷೆಯ ಪ್ರಶ್ನೆ ಹೊರಡುವುದಲ್ಲವೆ ? ನನ್ನ—ನಿನ್ನ ಸತ್ತ್ವಪರೀಕ್ಷೆ ಆಗುವುದು ಹೇಗೆ? (ಕಾಮನು ಚಕಿತನಂತೆ ತನ್ನನ್ನು ನೋಡಲು, ಹಟದ ಪಣಯಿಂದ) ಆಗುವುದು ಹೇಗೆ—ಎಂದು ಕೇಳುವೆ. ಯಾಕಂದರೆ ನನ್ನಲ್ಲಿ ಸತ್ತ್ವವಿದೆ, ನಿನ್ನಲ್ಲಿ ಸತ್ತ್ವವಿಲ್ಲ—

ಕಾಮ :— (ತಡೆಯುತ್ತ, ನಡುವೆಯೆ) ಏನೆಂದೆ ? ನನ್ನಲ್ಲಿ—

ವಸಂತ :— (ಮಾತು ಮುಂದೆ ಸಾಗಿಸುತ್ತ) ನಿನ್ನಲ್ಲಿ ಸತ್ತ್ವವಿಲ್ಲ (ನಗೆಯಿಂದ) ನಿನ್ನ ಹೂಬಾಣದ ಕತೆಯನ್ನೆ ಹೇಳುವೆ ಕೇಳು, ಅವಸರ ಬೇಡ. ನಿನ್ನ ಹೂಬಾಣವೆಂದರೇನು ? ನಾನು 'ಹುಂ' ಎಂದರೆ ನಿನಗೆ ಬಾಣ....ಹಹಹ !.... ತಿಳಿಯಿತೆ ? ಈ ವಸಂತನು ಅರಳದಿದ್ದರೆ ನಿನಗೆ ಬಾಣನೆ ಇಲ್ಲ ! ಈ ವಸಂತನು ಕೆರಳದಿದ್ದರೆ ನಿನಗೆ ತಾಣನೆ ಇಲ್ಲ ! ತಿಳಿಯಿತೆ ? ಹೀಗೆ ನನ್ನಿಂದ ನಿನಗೆ ಸತ್ತ್ವ, ಹಳೆದಾಗಿ ಹಣ್ಣಾಗಿ, ಹುಳುವಿನ ಬಾಯಿಗೆ ಸಣ್ಣಾಗಿ ಸವೆಯುವ ಕಟ್ಟಿಗೆಯ ಕೊಂಪೆ ಹಸುರಿ, ಚಿಗಿತು, ಹೂವಿನ ಹಾಸಿಗೆಯಲ್ಲಿ ಕೂಸಾಗಿ ಬೆಳೆವ ಗಿಡ-ಎಳ್ಳಿಗಳ ಜೀವಶಕ್ತಿ ನನ್ನಿಂದ ! ಸೃಷ್ಟಿಸೌಂದರ್ಯದ ಕಾಷ್ಯವನ್ನು ರಚಿಸಿ ರಸಿಕತೆಯನ್ನು ಜಗತ್ತಿನಲ್ಲಿ ಪಸರಿಸುವ ಕೋಕಿಲದ ಕಲಕಂಠಕ್ಕೆ ಕಾರಣ ನಾನು ! ಜಗತ್ತಿನಲ್ಲಿ ಸಾವಿಲ್ಲ, ನೋವು ಹುಟ್ಟಿಸುವುದಕ್ಕೆ ಕಾರಣ, ನೋವಿಗೆ ನಿಂತವನು ಸಾವಿಲ್ಲದೆ ಮತ್ತೆ ಚಿಗುರಿ ಜೀತರಿಸಬಲ್ಲನು—ಎಂದು ಜೀವದ ಅಮರತ್ವವನ್ನು ಸಾರುವ ಶ್ರೇಷ್ಠ ಕವಿ ನಾನು ! ನನ್ನ ಮಾತು ಕೋಕಿಲೆಯ ಗಾನವಾಗುವುದು, ನನ್ನ ಉಸಿರು ಮುಂದಮಲಯಾನಿಲವಾಗುವುದು, ನನ್ನ ದೃಷ್ಟಿ ಚಂದಿರನ ಬೆಳ್ದಿಂಗಳಾಗುವುದು, ನನ್ನ ನಗೆ ಹುವ್ವಾಗುವುದು —

ಕಾಮ :— (ತಡೆಯುತ್ತ) ವ್ಯಾಧಿ ಪೊಳ್ಳಾಗುವುದು. (ಮಾತಿನ ವೇಗಕ್ಕೆ ಒಮ್ಮೆಲೆ ತಡೆಯಾದುದಕ್ಕೆ ವಸಂತನು ಆರೆನಿಮಿಷ ಕಕ್ಕಾವಿಕ್ಕಿಯಂತಾಗುವನು. ಕೂಡಲೆ ಸಂದರ್ಭ ಸಿಡುಕಿನಿಂದ ಕಾಮನನ್ನು ನೋಡಲು) ನಿನ್ನ ವ್ಯಾಧಿ ಪೊಳ್ಳಾಗುವುದು— ಎಂದೆ. ನಿನ್ನ ಹೆಸರು ಹೊಗೆಯಾಗುವುದು—ಎಂದರ್ಥ. ಇದೊ, ನನ್ನ ಬಾಣವನ್ನು ಸ್ವೀಕರಿಸಿ ನೊಳಿಸುವೆ. ಅದರ ಪ್ರಭಾವದಲ್ಲಿ ಸಿಕ್ಕಿಕೊಳ್ಳುವ ಮುಂಚೆ ನಿನ್ನ ಶಕ್ತಿಯ ಪ್ರದರ್ಶನವನ್ನು ಮಾಡು—

ವಸಂತ:— (ಅಭಿಮಾನದಿಂದ) ಓಹೋ ! ನಿನಗೆ ನನ್ನ ಶಕ್ತಿಯ ಪ್ರತ್ಯಕ್ಷವೆ ಬೇಕಾಗಿದೆಯೆ? ಹಾಗಾದರೆ ಆವಾಗ ನನ್ನನ್ನು ತಡೆಯಲಾಕೆ ?

ಕಾಮ :— (ತಿರಿಯದೆ) ಯಾವಾಗ ?

ವಸಂತ :— ಮಳೆ—ಮಿಂಚು—ಸಿಡಿಲು—ಬಿರುಗಾಳಿಗಳನ್ನು ನಾ ತಡೆದೆನಲ್ಲ—ಆಗ—

ಕಾಮ :— (ತಿರಸ್ಕಾರವನ್ನು ಸೂಚಿಸುತ್ತ) ಓಹೋ ! 'ಹಿಗ್ಗಲಿ ಅರಳಲಿ' ಎಂದು ಕೂಗಿಕೊಳ್ಳುತ್ತಿರುವಾಗಲೆ ? ಅದೇ ನಿನ್ನ ಶಕ್ತಿ ಪ್ರದರ್ಶನವಾಗಿದ್ದರೆ ತಿಳಿಯಿತು ನಿನ್ನ ಶಕ್ತಿಯ ಸ್ವರೂಪ...ನೆ ಅಷ್ಟೊಂದು ಕೂಗಿಕೊಂಡುದಕ್ಕೆ ಯಾವುದು ಹಿಗ್ಗಿತು? ಗಡುಚಂತೆ ಕೇಳಿದವರ ಕಿವಿ ಹಿಗ್ಗಿತೆ—

ವಸಂತ :— (ನಿಟ್ಟಿನಿಂದ) ಸಾಕು ನಿನ್ನೆ ಸೊಕ್ಕಿನ ಮಾತು! ಅಷ್ಟೊಂದು ಹಟವಿದ್ದರೆ ಸಜ್ಜಾಗು, ಎಚ್ಚರದಿಂದಿರು. ನಾನು ನನ್ನ ಪ್ರಭಾವವನ್ನು ಪಸರಿಸಿದೆನೆಂದರೆ ಮೈಮರೆತುಬಿಟ್ಟೀಯೆ! ಎಚ್ಚರ! (ತಥಿಕಾರ ದನಿಯಿಂದ) ಅಂತರಾಳಾ, ಅಂತರಾಳಾ ...ಎಲ್ಲಿರುವೆ ?

[ಅಂತರಾಳನೆಂಬ ಸೇವಕನು ಬರುವನು]

ಅಂತರಾಳ :— (ಕೈಮುಗಿದು) ತಮ್ಮೆದುರಿನಲ್ಲಿಯೆ ನಿಂತಿದ್ದೇನೆ, ಪೊರೆಯೆ.

ವಸಂತ :— ನಾನೀಗ ನನ್ನ ಶಕ್ತಿಯ ಸೃಷ್ಟಿಯನ್ನು ನಿರ್ಮಿಸುವನಿದ್ದೇನೆ (ಕಡೆಗಣ್ಣಿನಿಂದ ಕಾಮನನ್ನು ನೋಡುತ್ತ) ಅಜ್ಞರಿಗಾಗಿ, ಕ್ಷಣಿಶ್ವಾಸಿಗರಿಗಾಗಿ ಅವತಾರ ಪ್ರದರ್ಶನವನ್ನು ಮಾಡುತ್ತಲಿದ್ದೇನೆ.

ಅಂತರಾಳ :— (ಅಭಿಮಾನದ ದನಿಯಲ್ಲಿ) ಸಂತಸದ ಸುಗ್ಗಿ ಹಾಗಾ ವರೆ, ಪೊರೆಯೆ—

ವಸಂತ :— ಸಂತಸದ ಸುಗ್ಗಿಯೊ ಚಿಂತೆಯ ಬುಗ್ಗೆಯೊ— ನೋಡೋಣವಂತೆ ಆ ಮೇಲೆ. ಸದ್ಯಕ್ಕೆ ಈ ಹುಚ್ಚಾಟವನ್ನು ತಡೆಯಿರಿ—

ವಸಂತ :— (ಕರಳುತ್ತ) ಹುಚ್ಚಾಟ?

ಕಾಮ :— (ಹಟದಿಂದ) ಅಲ್ಲವೆ ಮತ್ತೆ ? ನನ್ನ ಮಾತು ಕೋಗಿಲೆಯ ಗಾನವಾಗುವುದು ಎಂದೆಯಲ್ಲ ? ಆದರೆ ಆದದ್ದು ಮಾತ್ರ ಈ ನುಂಕ ಅಂತರಾಳ! ನೋಡಿದೆಯಾ ಇವನ ಸ್ವರೂಪವನ್ನು ? ಕಾಲಿನಿಂದ ತಲೆ ಎಷ್ಟು ಎತ್ತರದ ಮೇಲಿದೆ ? ಅದಕಾಗಿಯೆ ನಡೆಯಬೇಕೆಂಬ ತಲೆಯೊಳಗಿನ ವಿಚಾರವು ಮೇಳೆಗೆ ಸರಿಯಾಗಿ ಇವನ ಕಾಲಿಗೆ ಮುಟ್ಟ ಸಂತಾಗಿ ಇವನು ಕಾಲನ್ನೂರಿ ನಡೆಯುವುದಿಲ್ಲವೇನು ? ನಿನ್ನ ಮಾತಿನಿಂದ ನೀನು ಸೃಷ್ಟಿಸಿದ ಸೌಂದರ್ಯರಾಶಿ ಇದು !

ವಸಂತ :— ನೀನು ಸ್ಮರನಲ್ಲ, ವಿಸ್ಮರ, ಮರೆವಿನ ಶೂರ! ಇವನು ಅಂತರಾಳ—ನನ್ನ ಸೇವಕ—ಎಂಬುದನ್ನೂ ಮರೆತೆಯಲ್ಲವೆ ? ದಿಕ್ಕುಗಳನ್ನೆಲ್ಲ ತುಂಬಿಕೊಂಡವನಂತಿದ್ದ ಇವನನ್ನು ನಿನ್ನ ಸಲುವಾಗಿ, ನಿನ್ನ ಸಮಾಧಾನಕ್ಕಾಗಿ ಕರಯಿಸಿದ್ದೇನೆ.

ಕಾಮ :— ಇವನನ್ನು ನೋಡಿದರೆ ನನ್ನ ಹೂಬಾಣ ಬಾಡಬಹುದೆಂಬ ಆತಂಕೆಯೆ ನಿನಗೆ ?

ವಸಂತ :— ನನಗೆ ಆತಂಕೆಯಿಲ್ಲ, ನಿನ್ನ ಹೂಬಾಣವೂ ಬಾಡುವುದಿಲ್ಲ. ಬಾಡುವುದು ನಿನ್ನದೆ ಆತಂಕೆ—ನನ್ನ ಪ್ರಭಾವದ ಪ್ರಯೋಗವನ್ನು ನೋಡಿದ ಮೇಲೆ. ಆ ಪ್ರಯೋಗದ ಸ್ವರೂಪ ನಿನಗೆ ತಿಳಿಯಲೆಂದು ಅಂತರಾಳನನ್ನು ಕರೆಯಿಸಿದ್ದೇನೆ. ಒಂದೇ ನೋಟದಿಂದ ಇಡಿಯ ಜಗತ್ತನ್ನು ನೋಡಬಲ್ಲನವನು. ಎಲ್ಲೆಲ್ಲೂ ನನ್ನ ಪ್ರಭಾವ ಹೇಗೆ ಚಿಗುರಿದೆ| ಎಂಬುದನ್ನು ಕಣ್ಣಾರೆ ಕಂಡು ಹೇಳುವ ಸಾಕ್ಷಿ ಎಂದು ಅವನನ್ನು ಕರೆಯಿಸಿದ್ದೇನೆ. ಸಾಕೆನ್ನು. ಸಜ್ಜಾಗು. ಅಂತರಾಳಾ, ನನ್ನ ಪ್ರಭಾವ ಶಕ್ತಿಯನ್ನು ನಾನು ಬೀರಿದೊಡನೆ ದೃಷ್ಟಿಯಿಂದ ಜಗತ್ತನ್ನೆಲ್ಲ ಸಂಚರಿಸಿ ಸುದ್ದಿಯನ್ನು ಸರಿಯಾಗಿ ತಿಳುಹಿಸುವುದು ನಿನ್ನ ಕೆಲಸ. ಸಿದ್ಧನಾಗಿರುವೆಯಾ ?

ಅಂತರಾಳ :— ಕೈಗಳನ್ನು ಎತ್ತಿ ಹಿಡಿದು ನಿಲ್ಲುವೆ. ಆ ಮೇಲೆ ನಾನು ಸಿದ್ಧ, ಪೊರೆಯೆ.

ವಸಂತ :— ಹಿಡಿ, ಎತ್ತು, ಸಜ್ಜಾಗು ಹಾಗಾದರೆ—

ಕಾಮ :— (ತಿರಸ್ಕಾರದ ದನಿಯಲ್ಲಿ) ಸಜ್ಜಾಗು ! ಸುಗ್ಗಿಯ ಅಜ್ಜನು ಹುಚ್ಚಾಗು !

ಅಂತರಾಳ :— (ಕಲ್ಪನೆ ಮೀರಿದ ಎತ್ತರ ದನಿಯಲ್ಲಿ) ಪ್ರಭೋ ! ಎತ್ತಿದೆ ಕೈಗಳನ್ನು—ಎತ್ತಿದೆ—

[ಎನ್ನುವಾಗ ಕ್ರಮೇಣ ರಂಗಭೂಮಿಯಲ್ಲಿ ಕತ್ತಲಾಗುವುದು. ಮುನ್ನರೂ ಕಾಣುವುದಿಲ್ಲ. ಆದರೆ ಮುಂದೆ ಹೇಳಿದಂತೆ ವಸಂತನ ಕೂಗು, ಕಾಮನ ಆಟ್ಟಹಾಸ, ಅಂತರಾಳನ ದನಿ ಮಾತ್ರ ಒಂದೇ ಸವನೆ ಕೇಳಿಸುತ್ತಲಿರುವುವು. ಇದಲ್ಲದೆ ಶಕ್ಯವಾಗುವ ಮಟ್ಟಿಗೆ ಅಂತರಾಳನು ಬಣ್ಣಿಸುವ ದೃಶ್ಯವನ್ನು ಮಾತ್ರ ಆಗಾಗ ಮಿಂಚು. ಅಂತೆ ಮಾಡಬೇಕು—]

ವಸಂತನ ದನಿ :— ಪುಷ್ಪಶರಾ! ಪುಕ್ಕ ಹೆಣ್ಣಿನಿದಿರಿನ ಶೂರಾ! ನೋಡೀಗ ಈ ಸುಗ್ಗಿಯ ಹಿಗ್ಗನ್ನು ! ಈ ವಸಂತನ ವಾರ್ಷಿಕ ಸೃಷ್ಟಿಯನ್ನು ! ಈ ಕಾಲಪುರುಷನ ಹರೆಯದ ಹಿರಿಮೆಯನ್ನು ! ಬೆಂಕೆಯಲ್ಲಿ ನೀರನ್ನು, ಬತ್ತಲಲ್ಲಿ ಬೆಡಗನ್ನು, ಸಾವಿನಲ್ಲಿ ಸೊಬಗಿನುಸಿರನ್ನು ಸೃಷ್ಟಿಸಬಲ್ಲ ಈ ಯೌವನದರಸನ ಯೋಜನೆಯನ್ನು ನೋಡು, ಧೈರ್ಯದಿಂದ ದೃಷ್ಟಿಯನ್ನು ನೀಡು....ಹುಂ—

[ಎಂದು ಹೂಂಗುಡುವ ದನಿ ಕ್ರಮೇಣ ಸುಳಿಗಾಳಿಯಾಗುವುದು]

—ಹಿಗ್ಗಲಿ! ಅರಳಲಿ! ಒಲಿಯಲಿ! ನಕ್ಕು ನಲಿಯಲಿ! ಸೊಕ್ಕು ಸೂರೆಗೊಳ್ಳಲಿ! ನನ್ನ ಆಜ್ಞೆಯಿದು! ಅಂತರಾಳಾ, ನನ್ನ ಆಜ್ಞೆಯ ಪ್ರಸಾರವನ್ನು ಬಣ್ಣಿಸುವಂತಹನಾಗು.

ಅಂತರಾಳ :— ತಥಾಸ್ತು, ಪ್ರಭೋ ಶಿರಸಾಗೃಹೀತವಾಯ್ತು.... ಆಮೊ— ಆಮೊ—ಪ್ರಭುವಿನ ಆಜ್ಞೆಯ ಉಸಿರು ಮಂದಮಂದವಾಗಿ ಬೀಸುತ್ತಲಿದೆ, ಕ್ರಮೇಣ ಇಡಿಯ ಸೃಷ್ಟಿಯನ್ನು ಸೂಸುತ್ತಲಿದೆ! ಆದೊ!—ಆದೊ!—ಅಮೃತದ ಧಾರೆಯಂತೆ ಜಡಜಗತ್ತನ್ನು ಜೀವಿಸುತ್ತಲಿದೆ ! ಆಹೊ ! ಸುಟ್ಟ ನೆಲದ ಕಪ್ಪು ಮುಸುಡೆಯು ಮುಗುಳ್ನಗುವ ಮೂಡಣದಂತೆ ಕೆಂಪೊಡೆಯುತ್ತಲಿದೆ! ಆದೊ—ನೋಡಲ್ಲಿ! ಕೊಳೆತು, ಹಣ್ಣಾಗಿ, ಹುಡಿಯಾಗಿ, ಮಣ್ಣಿನಲ್ಲಿ ಹುದುಗಿಕೊಂಡ ಕಟ್ಟಿಗೆಯ ತುಂಡು ಕಳೆಗೊಳ್ಳುತ್ತಲಿದೆ! ಮೊಳಕೆಗೊಳ್ಳುತ್ತಲಿದೆ ! ಹುಡಿ ಹಸಿಗೊಂಡಿತು ! ಹಸಿ—ಹಾಂ—ಹಸಿ ಹಸುರುಗೊಂಡಿತು! ಅದೊ—ಹಸರು ಹಾರಾಡುತ್ತಲಿದೆ! ಜೀವದ ಜಯಭೇರಿ ಹಾರಾಡುತ್ತಲಿದೆ—!

ವಸಂತನ ದನಿ :— ಹಾಡಲಿ, ಹಾರಾಡಲಿ ಹರಣವ ಹಕ್ಕಿ !

ಅಂತರಾಳನ ದನಿ :— ಆಜ್ಞೆ ಪ್ರಭೋ ! ನಿಜ. ಹಕ್ಕಿ ಹಾಡುತ್ತಲಿವೆ, ಪಕ್ಕಗಳ ತಾಳದೊಂದಿಗೆ ಹಾರಾಡುತ್ತಲಿವೆ! ಆದೊ! ಅದೊ! ಪ್ರಸವವೇದನೆಯಿಂದ ಬೆಮರೊಡೆದ ಮೊಗದಂತೆ ಮಂಜುನನಿಗಳಿಂದ ಮುಸುಕಿದೆ ನೆಲ !

ಕಾಮನ ದನಿ :— (ತಿರಸ್ಕಾರದ ನಗೆ ಕೇಳಬರುವುದು)

ಅಂತರಾಳನ ದನಿ :— (ಒಮ್ಮೆಲೆ ಭಯಚಕಿತಗಳನ್ನು ಸೂಚಿಸುತ್ತ) ಆದರೆ—ಇದೇನು ?

ಕಾಮನ ದನಿ :— ಪ್ರಸವವೇದನೆ! ಹಹಹ!

ಅಂತರಾಳನ ದನಿ :— ಪಾರಿಜಾತಕ್ಕೆ ಬದನೆ!

ವಸಂತನ ದನಿ :— (ಚೀರುತ್ತ) ಏನೆಂದೆ!

ಅಂತರಾಳನ ದನಿ :— (ಸೊಂಪು) ಪಾರಿಜಾತಕ್ಕೆ ಬದನೆ! ಅಮ್ಮೋ-ಅಯ್ಯೋ!—ಮಲ್ಲಿಗೆಯ ಬಳ್ಳಿಗೆ ಮೆಣಸಿನಕಾಯಿ!

ಕಾಮನ ದನಿ :— (ಆತ್ಯಂತ ತಿರಸ್ಕಾರದಿಂದ) ಹಹಹ!

ವಸಂತನ ದನಿ :— (ಕಂಗೆಟ್ಟು) ಪಾರಿಜಾತಕ್ಕೆ ಬದನೆ?

ಕಾಮನ ದನಿ :— ಇದೇ ವಸಂತನ ವಾರ್ಷಿಕ ಯೋಜನೆ! ಹಹಹ!

[ಕಾಮನ ನಗೆ ಕ್ರಮೇಣ ಬಿರುಗಾಳಿಯಾಗುವುದು.]

[ತೆರೆ]

ದೃಶ್ಯ ೨

[ಮೊದಲಿನ ದೃಶ್ಯ ಮುಗಿದ ೫-೬ ನಿಮಿಷಗಳ ತರುವಾಯ. ಅದೇ ಸ್ಥಳ. ಅಂತರಾಳನು ಮಾಯವಾಗಿದ್ದಾನೆ. ವಸಂತನು ಪರಾಧೀನನಾಗಿ ಗಿಡದ ಬುಡವಲ್ಲಿ ತಲೆಯನ್ನು ಕೈಗಳಿಂದ ಹಿಡಿದುಕೊಂಡು ಕುಳಿತಿದ್ದಾನೆ. ಕಾಮನು ಗೆದ್ದವನ ಮುಗುಳ್ನಗೆಯ ಕಳೆಯಿಂದ ವಸಂತನನ್ನೆ ದಿಟ್ಟಿಸಿ ನೋಡುತ್ತಲಿದ್ದಾನೆ. ಏಂಟೆರೆಡು ನಿಮಿಷಗಳ ಕಾಲವಾಯ—]

ಕಾಮ :— [ಕೊಂಕುವ ದನಿಯಲ್ಲಿ] ಮುಗಿಯಿತೆ ನಿನ್ನ ಮನಸಿನ ಮುಳಿಗಾಲ? ವಸಂತಾ, ವಾರಿಜಾಪ್ತ ಬಂಧನೆಯು ಭಗವಂತಾ! [ವಸಂತನು ಮುಖವನ್ನೆತ್ತಿ ತನ್ನನ್ನು ನೋಡಲು ನಗುಹಾಸಿ ನಗುತ್ತ] ಹಹಹ! ಅಂತೇಪುರದ ಅಂಜುಗುಳಿ ನಾನು! ಮಲ್ಲಿಗೆಗೆ ಮೆಣಸಿನಕಾಯಿಯ ಗಾಳಿ ನೀನು! ಹಹಹ!

ವಸಂತ :— (ಎದ್ದು ಮುಂದೆ ಬಂದು) ನೀನು ಮಾಟಗಾರಿಕೆ ಮಾಡಿದುದೆ! [ಪಿಸುಮಾತು] ನಿಜ! ನನ್ನ ರತ್ನವು ವೈಭವ ತಡೆಯುದೆ ನೀನು ಮಾಟಗಾರಿಕೆ ಮಾಡಿದುದೆ! ನಿಜ—ಇಷ್ಟಾದರೆ—ಈ ವಸಂತನ ಉಸಿರಿನಂತಿದ್ದ ಮುಳಿಗಾಳಿ, ಈ ವಸಂತನ ಮುಗುಳ್ನಗೆಯಾಗಿ ಅರಳುವ ಬಲ್ಲವ, ಈ ವಸಂತನ ಪೋಷಣಾಪಾಷಣಾಗಿದ್ದ ಪೂಂಬಳ್ಳಿ—ಇವೆಲ್ಲ ಹೀಗೆ ವಿಕಾರವಾಗುತ್ತಿರಲಿಲ್ಲ! ದಗಾಬೆ ನೀನು! [ತಿರಸ್ಕಾರದಿಂದ] ಮಾಟಗಾರಿಕೆ! ಮಂಚಿನವ ಮಾಟಗಾರಿಕೆ! ಇದೇ ನಿನ್ನ ರತ್ತವುಲ್ಲವೆ?

ಕಾಮ :— ನನ್ನ ರತ್ತ ನಿಜವೆನ್ನುವಂಥ ಬಹುವನ್ನಾದ್ದನ್ನು ಜೀವಿಸುವ ನಿನ್ನ ಪೆಜವಿರತ್ತ ಎತ್ತ? ಸತ್ಯವನ್ನು ಬಹುವೆನುವ ನನ್ನ ಅಮೃತಶಕ್ತಿ ಎತ್ತ? ಸೃಷ್ಟಿಯು ಮಾಯಕ ನಾನು! ಸೃಷ್ಟಿಯನ್ನು ಅನಂತವಾಗಿ ಸಾಗಿಸುವ ಅಮೃತಶಕ್ತಿ ನನ್ನದು! [ತಿರಸ್ಕಾರದಿಂದ] ಮಾಟಗಾರಿಕೆ! ಯಾವುದು ಮಾಟಗಾರಿಕೆ? ಅರಸಿಮಿಸ ಜೀವನವೆಂಬ ಯನ್ನು ಬರಳಿಸುವ ನಿನ್ನ ರತ್ತ ಮಾಟಗಾರಿಕೆಯೆ? ಇಷ್ಟವ ಜನಂತವಾಗಿ ಸೃಷ್ಟಿಗೆ ಸಾಹಸವನ್ನು ತುಂಬಿಕೊಡುವ ನನ್ನ ಶಕ್ತಿ ಮಾಟಗಾರಿಕೆಯೆ?

ವಸಂತ :— (ಕನಲಿ, ತಿರಸ್ಕಾರವಿಂದ ನಗಾಡಿಸುತ್ತ) ಅಮೃತಶಕ್ತಿ! ಹಹಹ! ಅಮೃತಶಕ್ತಿಯಂತೆ! ಮುಚ್ಚಿದ ಬೀಜಶಕ್ತಿ ಬಿಚ್ಚಿ, ಬಯಲಿಗೆ ತೂರಿ, ನಾಶಗೊಳಿಸುವ ಬಂಜಬೆಡಸ ಅಮೃತಶಕ್ತಿಯಂತೆ! ವಿನಾಶಕ ಭುಕ್ತಿ!

ಕಾಮ :— [ಕನಲಿ] ವಿನಾಶಕ ಭುಕ್ತಿಯಲ್ಲ, ವಿಕಾಸದ ಯುಕ್ತಿ.. ಈ ಕಾಮನಿಂದಲೆ ಹೊರಯುವುದು ಅತ್ಯಧಿಕಾಸದ ಮುಕ್ತಿ ..ವಿನಾಶಕವಂತೆ !....ಭುಕ್ತಿಯಂತೆ! [ಏಯು ತಲೆಯಲೆ ಪಬಗುಬ್ಬಿವನಂತೆ ಅತ್ತಿಂದಿತ್ತ ತಿರುಗಾಡುತ್ತಿರುವನು]

ವಸಂತ :— (ಪಾದದಲ್ಲಿ ಗೆದ್ದೆನೆಂದು ಕೆಣಕುವವನಂತೆ) ಕಾಮಾ! ಅಂತರ್ಧಾಮಾ! ಮಾತಿಗೆ ಬಲು ಉದ್ದಾಮಾ! ಕನಸಿನೊಳು ಸಾರ್ವ-ಭೌಮಾ! (ಕಾಮನು ತಡೆದು ತನ್ನನ್ನು ಸಿಟ್ಟಿನಿಂದ ನೋಡಲು) ಯಾಕೆದು ನಿನಗೀ ಭ್ರಮಾ!

ಕಾಮ :— (ಓಡಿಬಂದು ಬಲವಾಗಿ ಅವನ ರಟ್ಟೆಗಳನ್ನು ಬಿಗಿದು, ಸಿಟ್ಟಿನಿಂದ ಆವನನ್ನು ಅಲುಗಾಡಿಸುತ್ತ) ಭ್ರಮ! ಭ್ರಮು? ಯಾರಿಗೆ ಭ್ರಮವೆಂಬುದನ್ನು ಸಾರುವೆ, ತೋರುವೆ, ನಿನ್ನ ಕಣ್ಣಾರೆಳುವಂತೆ ಬೀರುವೆ—ತಡೆ! ನೋಡು; ಇದಿರಾಗಿ ನಿಲ್ಲು. ತೋರಿಸುವೆ ನನ್ನ ಶಕ್ತಿಯನ್ನು, ಪ್ರಭಾವದಿಂದ ಪ್ರಜ್ವಲಿಸುವ ಶಕ್ತಿಯನ್ನು!

ವಸಂತ :— (ನಗೆಯಿಂದ ಬಿಡಿಸಿಕೊಳ್ಳುತ್ತ) ಓಹೊ! ಈ ಶಕ್ತಿಯೆ? ಗೊತ್ತಿದೆ ನನಗೆ! ಹೇಡಿಯಂತೆ ಬಿಗಿದಪ್ಪುವ ಶಕ್ತಿ ನಿನ್ನದು....(ಪೂರ್ ಸರಿದು) 'ಪ್ರಭಾವದಿಂದ ಪ್ರಜ್ವಲಿಸುವ ಶಕ್ತಿ'!....ಹಹ!....ಹಾಗಾದರೆ ಕಣ್ಣು ಮುಚ್ಚಿಯೆ ನೋಡಬಹುದಲ್ಲವೆ?

ಕಾಮ:— (ಇನ್ನೂ ಸಿಟ್ಟಿನಿಂದಲೆ) ನೋಡು—ಕಣ್ಣು ಮುಚ್ಚಿಯಾದರೂ ನೋಡು. ಆಗಲೂ ಕಾಣಿಸುವುದು, ಆಗಲೂ ಕೇಳಿಸುವುದು. ಬಳ್ಳಿ ಬಳುಕುವುದು, ನವಿಲು ಕುಣಿಯುವುದು, ಹಕ್ಕಿ ಹಾಡುವುದು, ಹೃದಯ ಓಡುವುದು, ಜೀವ ಬೇಡುವುದು—ಜೀವ ನೀಡುವುದು, ಜೀವಕ್ಕೆ ಜೀವ ಕೂಡುವುದು, ಅಮರತ್ವನನ್ನು ಕೊಡುವುದು! ಮುಚ್ಚು, ಕಣ್ಣು ಮುಚ್ಚು.....ಆಗಲೂ ಅಮರತ್ವದ ಈ ನಿಸರ್ಗದ ನಗೆಯಾಟವು ನಿನಗೆ ಕೇಳುವುದು.

ವಸಂತ :— (ಅಸಂಬದ್ಧವಾಗಿ) ಮಾತಿಗೆ ಬಲು ಉದ್ದಾಮಾ— (ರಾಗವಾಗಿ ಎಳೆಯುವನು)

ಕಾಮ :— (ತಡಯದೆ, ನಡುವೆಯೆ) ಮುಸ್ತಕ ಮುಚ್ಚಿಸೋಮಾ—(ವಸಂತನು ತಡೆಯಲು) ಸೋಮುರಸ ನಿನ್ನ ತಲೆಯನ್ನು ತಿರುಗಿಸಿಜೆ—ಎಂದೆ!

ವಸಂತ:— ತಲೆ ತಿರುಗಿಸುವುದು ಸೋಮು, ತಲೆ ಬೋಳಿಸುವುದು ಕಾಮ—

ಕಾಮ :— (ಬಮ್ಮೆಲೇ ಆತ್ತಿತ್ತ ಓಡಾಡುತ್ತ) ಇದೊ—ಇದೊ—ಇದೊ—(ನಸ್ಸುತ್ತ ಸುತ್ತಲಿನ ಹೂಗಳನ್ನು ಹರಿಯತೊಡಗುವನು ಕೈತುಂಬ ಹೂಗಳನ್ನು ತಂದು ವಸಂತನಿಗೆ ಇದಿರಾಗಿ) ಇದೊ! ಸಾಕಿನ್ನು ಕೆಣಕುವ ಮಾತು. ನಜ್ಜನಾಗಿರುವನೀಗ ಈ ಸ್ಮರ. ಕಾಣುವುದೀ ಈ ಕಂದರ್ಪನ ಶಕ್ತಿಯ ಭರ! (ಹೂಗಳನ್ನು ತನ್ನ ಎದೆಗೆ ಬಿಗಿದ್ದಿಡಿದು ಒಂದೊಂದಾಗಿ ಬಿಡುವೆ ಈ ಬಾಣಗಳನ್ನು....ಶಾಂತನಾಗು, ಸ್ಥಿರನಾಗು. ಧೀರನಾಗು—ನೋಡುವೆಯಂತೆ ಈ ಪುಷ್ಪಶರದ ಪ್ರತಾಪವನ್ನು!

[ಎಂದು ನಿಕ್ಕುದಿಕ್ಕಿಗೆ ಹೂಗಳನ್ನು ಚೆಲ್ಲುವನು. ಕೂಡಲೆ ರಂಗಭೂಮಿಯೆಲ್ಲ ಕತ್ತಲಾಗಿಸಬೇಕು. ಪಕ್ಕಿಯ ಹಾಡು, ಕೋಗಿಲೆಯ ಕುಹೂಕುಹೂ, ನವಿಲಿನ ಕೇಕೆ, ನೋಡ-ಮಿಂಚು, ಕ್ರಮೇಣ ಮನುಷ್ಯನ ಮತ್ತು ಸ್ತ್ರೀಯಳ ಶ್ರೇಷ್ಠಳ—ಮಂಜು ಕಾವ್ಯಧ್ವನಿ ಕೇಳಬರುವುದು. ಬಂದೆರಡು ನಿಮಿಷಗಳಲ್ಲಿ ಸದ್ದು ದೂರಕ್ಕೆ ನಡೆದಂತಾಗುವುದು. ಆಗ ಕಾಮನ ನ ಕೇಳಬರುವುದು.]

ಕಾಮನ ದನಿ :— (ಗಹಗಹಿಸಿ ನಗುತ್ತ) ವಸಂತಾ, ಬುದ್ಧಿ ಭ್ರಾಂತಾ! ನೋಡೀಗ! ಇಡಿಯ ಸೃಷ್ಟಿಯನ್ನು ನೋಡು....ಆದೇ ಸಪ್ತಲೋಕಗಳ ಸುತ್ತಲೂ ನಿನ್ನ ದೃಷ್ಟಿಯನ್ನು ಚೆಲ್ಲು....ಕಾಣುವುದೆ? ಸರಿಯಾಗಿ ನೋಡುತ್ತಿರುವೆಯಾ? ನೋಡಿದವಲ್ಲೆಲ್ಲ ಶಾಂ

ಮಯ, ಸೃಷ್ಟಿಯೆಲ್ಲ ಸುಖಮಯ! ಅದೋ! ಅಲ್ಲಿ ನೋಡು—ಕೆಸರಿನಿಂದ ಕಲಕಾದ ಸರೋವರ. ಒಂದೆಡೆ ಹಾವು ತೂಗುತ್ತಲಿದೆ, ಅವರ ಮಗ್ಗುಲಲ್ಲಿಯೆ ಕಪ್ಪೆ ಕುಟುಕುತ್ತಲಿದೆ! ಇದೋ—ಇತ್ತ ನೋಡು—ಅಡವಿಯ ದೃಶ್ಯ....! ಮೇಕೆ ಮೆಯ್ಯುತ್ತಲಿದೆ, ಹಕ್ಕಡದಲ್ಲಿಯೆ ತೋಳ ಕಣ್ಮುಚ್ಚಿ ಕುಳಿತಿದೆ!..ಈ ಇನ್ನೊಂದು ಅದ್ಭುತರಮ್ಯವನ್ನು ನೋಡು.. ಪಸಿದು ಹೊಟ್ಟೆಗಿಲ್ಲದೆ ಕಂಗಾಲಾದ ಈ ಎರಡು ಜೀವಿಗಳಲ್ಲಿ ಈತ ಆಕೆಯ ತೊಡೆಯ ಮೇಲೆ ಒರಗಿದ್ದನ್ನು ಆಕೆ ಅರಳಿದ ಮುಗುಳ್ನಗೆಯ ಸುಖದಿಂದ ನೋಡುವುದನ್ನು! ... ನೋಡು—ನೋಡು—ಮೇಲೆ ಮೇಘಮಂಡಲ ಹಾಡುತ್ತಿದೆ, ಕಾಮ ನೆಲ ಉಸಿರಿಡುತ್ತಿವೆ, ಮಳೆ ಬೀಳಲು ಮೇಘ ಮುಟ್ಟಿದ್ದಕ್ಕೆ ರೋಮಾಂಚನವೆದ್ದಂತೆ ನೆಲದ ಜೆಳೆಯನ್ನು ನೋಡು..ನೋಡು, ವಸಂತಾ, ಕಣ್ಮುಚ್ಚಿಯಾದರೂ ನೋಡು. ಹೃದಯಕ್ಕೆ ಹೃದಯ ಹಾತೊರೆಯುವ ಹಾಡು ನಿನಗೆ ಕೇಳುವುದಲ್ಲವೆ? ...ಕಣ್ಮುಚ್ಚಿಕೊಂಡೇ ನೋಡು....ಇಡಿಯ ಪ್ರಪಂಚವೆ ಪ್ರಸನ್ನವಾಗಿ ಬಿಡುವ ಉಸಿರು ನಿನಗೆ ಕೇಳುವುದಲ್ಲವೆ?

[ಒಮ್ಮೆಲೆ ಪ್ರಚಂಡ ಗರ್ಜನೆ ಕೇಳಿಸಲು ಕಾಮನ ಪಸಿ ತಡೆಯುವುದು. ಕೂಡಲೆ ಮೇಘಮಂಡಲ ಸರಿದಂತೆ ರಂಗಭೂಮಿಯು ಕತ್ತಲೆ ಜಾರುವುದು. ಕಾಮ-ವಸಂತರ ಇದಿರಿನಲ್ಲಿ ಒಂದು ವ್ಯಕ್ತಿ ನಿಂತಾಡು ಬೆಳಕಿನಲ್ಲಿ ಕಾಣುವುದು.]

ಕಾಮು :— (ಚಕಿತನಾಗಿ) ಯಾರು—

ವಸಂತ :— (ಚಕಿತನಾಗಿ) ಇಂದ್ರ—ದೇವೇಂದ್ರ.

ಇಂದ್ರ :— ನಾನು ಯಾರೆಂಬುದು ನಿನಗೆ ತಿಳಿಯಿತು. ಆದರೆ ನೀವು ಯಾರು ಎಂಬುದರ ಎಚ್ಚರ ಇದೆಯೆ ನಿನಗೆ? (ಗದರಿಸಿ) ಎಚ್ಚರವಿದೆಯೆ—ಎಂದು ಕೇಳುವೆ. ಕೇಳಿಸಿತೆ?

ಕಾಮು-ವಸಂತ :— (ನಿನ್ನೂ ತಿಳಿಯದೆ ಯಾಕೆ?

ಇಂದ್ರ :— (ಅಧಿಕಾರದ ಸಿಟ್ಟಿನಲ್ಲಿ) 'ಯಾಕೆ'? ಸುರೆಯಿಂದ ಮದೋನ್ಮತ್ತರಾದ ನಿಮ್ಮ ಮೂರ್ಖತನಕ್ಕಾಗಿ ಸೃಷ್ಟಿ ಸಡುತ್ತಲಿದೆ, ದೇವತೆಗಳ ಸತ್ತ್ವ ಸಾಯುತ್ತಲಿದೆ—

ವಸಂತ :— (ಆಶ್ಚರ್ಯದಿಂದ, ಇಲ್ಲ—ಇಂತಹ ಯಾವುದನ್ನೂ ಮಾಡಿಲ್ಲ—

ಕಾಮು :— (ಸುಳ್ಳು ನಗೆಯಿಂದ) ನಿಂನಮ್ಮೊಳಗೆ ಹುಡುಗಾಟಿಕೆಯ ಪಣವನ್ನು ನಡೆಸಿದ್ದೆವು—

ಇಂದ್ರ :— (ಸಿಟ್ಟಿನಿಂದ) ಹುಡುಗಾಟಿಕೆಯಲ್ಲ, ಹುಚ್ಚಾಟ! ಪಣವಲ್ಲ, ಪ್ರಲಯ....ಹೊದಲು ನಿಂದನ ವನ ರೂಪಗೆಟ್ಟಿತು. ಕೊಳತು ಹೀಗ ತರುಣ ಗಾಳಿ ಬೀಸಿತು—

ಕಾಮು : — (ಒಮ್ಮೆಲೆ) ಅನು ವಸಂತನ ಹುಡುಗಾಟ—

ಇಂದ್ರ :— (ಕಾಮುನಿಗೆ) ಹಾಗಾದರೆ ಹುಚ್ಚಾಟ ಮಾತ್ರ ನಿನ್ನದು ....ಅದೋ—ನೋಡು— ನೋಡಿದೆಯಾ? (ಅವನು ಕೈನಾಡಿ ತೋರಿಸಿದತ್ತ ಇಬ್ಬರೂ ನೋಡುವರು) ದೇವತೆಗಳ ನೀತಿಯೆ ದಿಕ್ಕೆಟ್ಟು ಓಡುತ್ತಲಿದೆ, (ಸಿಟ್ಟಿನಿಂದ ಕಾಲು ಬಡಿದು) ನೋಡಿದಿರಾ?

ಕಾಮು :— (ನೋಡುತ್ತಲೆ) ಏನು? ಯಾರು? ಯಾರೋ ಓಡುತ್ತಲಿದ್ದಾರೆ—ಕಂಗೆಟ್ಟವರಂತೆ ಓಡುತ್ತಲಿದ್ದಾರೆ....(ಒಮ್ಮೆಲೆ) ಯಾರು? ಯಾರು? ಪಿತಾಮಹ! ಸಾಕ್ಷಾತ್ ಬ್ರಹ್ಮದೇವ!

ವಸಂತ :— (ನೋಡುತ್ತಲೆ) ಮುಂದೆ ಯಾರೊ—ಯಾರೊ ಸ್ತ್ರೀ ಓಡುತ್ತಿರುವಂತಿದೆಯಲ್ಲ?

ಕಾಮು :— (ಒಮ್ಮೆಲೆ ತಿಳಿದು, ನಕ್ಕು, ಹಿಮ್ಮುಖದಿಂದ ವಸಂತನಿಗೆ) ನೋಡಿದೆಯಾ? ವಸಂತಾ, ನನ್ನ ಪ್ರಭಾವಕ್ಕೆ ಸಾಕ್ಷಾತ್ ಪಿತಾಮಹನೆ ಸಿಕ್ಕಿಬಿದ್ದಿದ್ದಾನೆ! ಹಹ!

ಇಂದ್ರ :— (ಕಸಲಿ) ಸಾಕು ನಿನ್ನ ನಗೆ ...ನೀನು ಮನ್ಮಥನಲ್ಲ, ಉನ್ಮತ್ತ! ಅದಕಾಗಿಯೆ ನಿನಗೆ ಬುದ್ಧಿ ಇಲ್ಲದಂತಾಗಿದೆ! ಮುಂದೆ ಜೀವನದ ಪಂಗು ಇಲ್ಲದೆ ಮುಗ್ಗುತ್ತ ಎಡವುತ್ತ ಓಡುವವರು ಯಾರು, ಗೊತ್ತಿದೆಯೆ?

ವಸಂತ :— (ನೋಡುತ್ತ) ಕೂದಲು ಬೆನ್ನ ಮೇಲೆ ಚೆಲ್ಲಾಪಿಲ್ಲೆಯಾಗಿ ಹಾರಾಡುತ್ತಿದೆ, ಮುಖ ಕಾಣುವಂತಿಲ್ಲ.

ಕಾಮು :— (ನೋಡುತ್ತ, ಪದರಿದ ಮನಸ್ಸಿನಲ್ಲಿ) ಯಾರು? .... ಅದೋ ಮುಗ್ಗರಿಸಿದಳು—ಬಿದ್ದಳು—ಇಲ್ಲ—ಸಾವರಿಸಿಕೊಂಡೆದ್ದಳು—ಏನೂ ಬಿದ್ದಿತಲ್ಲ?—ನಿನದು?—ನನದು? ವೀಣೆ! (ಎಂದು ಹುಚ್ಚು ಹಿಡಿದವನಂತೆ ಉಳಿದಿಬ್ಬರನ್ನು ನೋಡುತ್ತ ನಿಲ್ಲುವನು)

ಇಂದ್ರ :— ನಿಜ. ವೀಣೆ ಹಿಡುವ ಸ್ತ್ರೀ ಸರಸ್ವತಿ....ಪಿತಾಮಹನ ಸಾಕ್ಷಾತ್ ಮಗಳು!....ನೋಡಿದೆಯಾ? ಅಹೊ—ಕೈಗೆ ಸಿಕ್ಕಳೆನ್ನಿಸಿದಾಗ ಸುತ್ತಿ ಮುಂದೆ ಓಡಿದಳೆಂದು ಪಿತಾಮಹನಿಗೆ ಕೆಣಕಿದಂತಾಗಿದೆ, ಹುಚ್ಚದ್ದು ಓಡುತ್ತಲಿದ್ದಾನೆ! ನೋಡಿದೆಯಾ—ನೋಡಿದೆಯಾ—ನಾಲ್ಕೂ ಮುಖಗಳಿಗೆ ನಾಲ್ಕೂ ಕಡೆ ಸರಸ್ವತಿ ಕಂಡಂತಾಗಿ, ಯಾವ ಕಡೆ ಹೋಗುವುದೆಂಬುದು ತಿಳಿಯದೆ—ಹೇಗೆ ನಿಂತಲ್ಲಿಯೆ ಪುಟಿಯುತ್ತಿದ್ದಾನೆ ಪಿತಾಮಹ? ದೇವತೆಗಳ ಸತ್ತ್ವವನ್ನು ಹುಡಿಯಾಗಿ ತುಳಿಯುತ್ತ ಪುಟಿಯುತ್ತಲಿದ್ದಾನೆ, ನೋಡಿದೆಯಾ ನಿನ್ನ ಹುಡುಗಾಟದ ಅನರ್ಥವನ್ನು? ನನ್ನ ಆಜ್ಞೆಯಾಗಿದೆ ನಿನಗೆ—ಕೂಡಲೆ ತಡೆ ಇದನ್ನು—ತಟ್ಟನೆ ನಿಲ್ಲಿಸು ನೋಡೋಣ.

ಕಾಮು :— (ಹುಚ್ಚು ಕಳೆಯುವಂದ) 'ನಿಲ್ಲಿಸು'? ದೇವೇಂದ್ರಾ, ನನ್ನ ಶಕ್ತಿಯನು. ಅದನ್ನು ಬಿದಬಲ್ಲನೆ ಹೊರತು ತಡೆಯಲಾರೆ!

ಇಂದ್ರ :— (ಕೋಪಾವಿಷ್ಟನಾಗಿ) ಏನೆಂದೆ? ತಡೆಯಲಾರೆಯಾ? ನಿನ್ನ ಶಕ್ತಿ! ನಿಲ್ಲಿಸಲಾರೆಯಾ? ನಿಲ್ಲಿಸಲಾಗದ ಶಕ್ತಿಯನ್ನು ನಿಲ್ಲಿಸುವ ನೀನು ಹೂಬಾಣನಲ್ಲ. ಹೌಹಾರಿದ ಕೋಣ! ಕೋಣಾ, ಇದನ್ನು ತಡೆಯುವುದು ಹೇಗೆ ಈಗ?

['ಇದನ್ನು ನಾನು - ರತಿ— ತಡೆಯುವೆ' ಎನ್ನುತ್ತ ರತಿಯು ಬರುವಳು]

ರತಿ :— ಇವನ್ನು ನಾನು—ರತಿ—ತಡೆಯುವೆ. ಇದೋ ತಡೆದೆ (ಎಂದು ಮುಗುಳ್ನಗೆಯಿಂದ ಮುಖ್ಯರನ್ನೂ ನೋಡುವಳು)

ಇಂದ್ರ :—(ಚಕಿತನಾಗಿ) ಯಾರು? ನೀನು? ಕಾಮನ ರತಿ! ಏನು ತಡೆಯುವೆ ನೀನು? ಕೆಡಿಗೇಡಿ ಕಾಮನನ್ನು ತಡೆಯಬಲ್ಲೆ ನೀನು; ಆದರೆ ಕಾಮನ ಕೆಡಿಗೇಡಿತನವನ್ನು ತಡೆಯಬಲ್ಲೆಯಾ?

[ವಸಂತನು ನಗುವನು. ಕಾಮನು ಅದಕಾಗಿ ಸಿಟ್ಟಿಗೇಳುವಷ್ಟರಲ್ಲಿ]

ರತಿ :— (ನಗೆಯಿಂದ) ತಡೆಯಬಲ್ಲೆ; ಇಂದ್ರಾ, ನಾನೇ ತಡೆಯಬಲ್ಲೆ. ಕೆಡಿಗೇಡಿತನ ಕಾಮನದಲ್ಲ. ನೋಡು, ದೇವೇಂದ್ರಾ, (ವಸಂತನನ್ನು ತೋರಿಸುತ್ತ) ಇದು ಕೆಡಿ, (ಕಾಮುನನ್ನು ತೋರಿಸಿ) ಇದು ಕೇಡಿ, ಎಲ್ಲವರ 'ತನ' ಇಲ್ಲಿದೆ (ಎಂದು ತನ್ನುತೆಯ ಸೋಗಿನಿಂದ ತಲೆವಾಗಿ ನಿಂತು) ದೇವೇಂದ್ರನ ಆಜ್ಞೆಯಂತೆ, 'ತನ'ವನ್ನು ತಡೆದಿರುವೆ.

ಇಂದ್ರ :— (ದೂರದಲ್ಲಿ ನೋಡುತ್ತ) ತಡೆದಿರುವೆ !....ನಿಜ.... ನಿಜ....ಪಿತಾಮಹನು ತಡೆದಿರುವ, ತೇಕುತ್ತ ನಿಂತಿರುವ ! ಪಾಪ ! ಹೆದರಿದ ಶಾರದೆ ನುಡಿಯದ ವೀಣೆಯಂತೆ ನಿಂತಿರುವಳು !....ಆಹುದು —ಪಿತಾಮಹನಿಗೆ ಲಜ್ಜೆಯಾಗಿವೆ—ಕೈ ನುಗಿಯುತ್ತಿರುವ—ಮಾತು ಬಾರದೆ ಮಗಳು ಕಣ್ಣೀರು ಸುರಿಸುತ್ತಿದ್ದಾಳೆ—ಅಮೋ! ಪರಮೇಷ್ಠಿಯು ಅವಳನ್ನು ಸಂತೈಸುತ್ತಿದ್ದಾನೆ....(ರತಿಯನ್ನು ನೋಡಿ) ಮನ್ಮಥನ ರಾಣಿಯೆ, ನಿನಗೆ ಧನ್ಯವಾದಗಳು.

ವಸಂತ :— ಪತಿ ಎಂಬ ಮರ್ಕಟಕೆ ಸತಿ ಎಂಬ ಸಂಕೋಲೆ! (ಹಲ್ಲು ಕಿರಿಯುವನು)

ರತಿ :— ಅಲ್ಲ, ವಸಂತಾ—ತಲೆ ಚುಚ್ಚುವ ಅಂಕುರ ನಾನಲ್ಲ, ಕೈಯೊಳಗಿನ—ಪತಿಯ ಕೈಯೊಳಗಿನ ಶಕ್ತಿ ನಾನು!

ಇಂದ್ರ :— (ಒಮ್ಮೆಲೆ) ಹಾ! ಈಗ ನನಗೆ ಹೊಳೆಯಿತು.... ನೀನೆಲ್ಲ ನಿಂನಿಮ್ಮ ಶಕ್ತಿಯ ಹೆಮ್ಮೆಯಿಂದ ಏಗಿದಿರುವಿರಲ್ಲವೆ ? ಹಾಗಾದರೆ, ಆಗಲಿ ನಿಮ್ಮ ಸತ್ತ್ವಪರೀಕ್ಷೆ.

ಕಾಮ :— (ಉತ್ಸಾಹದಿಂದ) ಸದಾಸಿದ್ಧನು ಈ ಸುಮಶರನು.... ಇವನನ್ನು ಮೀರಿದ್ದಾವುದು ?

ವಸಂತ :— ಎಲ್ಲರನ್ನೂ ಮೀರಿ ನಿಂತ ವಸಂತನಿರುವ.... ದೇವೇಂದ್ರಾ, ಆಜ್ಞೆಯಾಗಲಿ....

ಇಂದ್ರ :— (ರತಿಗೆ) ತಾರಕಾಸುರನನ್ನು ಸಂಹರಿಸಲು ರತಿ-ದೇವಿಯೂ ಸಿದ್ಧಳಿರುವಳೆ ?

ರತಿ :— (ತಲೆವಾಗಿ) ಸಿದ್ಧ.... ಸದಾ ಸನ್ನದ್ಧ.... ತಾರಕನು ಮಾರಕನಾದಾಗ ರತಿಯಲ್ಲವೆ ಇನ್ನಾರು ಇವನನ್ನು ಸಂಹರಿಸಬಲ್ಲರು?

ಇಂದ್ರ :— ಪಿತಾಮಹನು ಹೇಳಿಕೊಟ್ಟಿರುವ ತಾರಕ ಸಂಹಾರದ ಯುಕ್ತಿಯನ್ನು....

ಕಾಮ :— (ಉತ್ಸಾಹದಿಂದ) ನನ್ನ ವಿಷಯವಾಗಿ ಹೇಳಿದನೆ ?

ಇಂದ್ರ :— (ನಕ್ಕು) ಇಲ್ಲ—ಹೆಚ್ಚಿಗೆ ಹೇಳಲು ಅವಕಾಶವೆ ದೊರೆಯಲಿಲ್ಲ—ಆಶ್ಚರ್ಯದಲ್ಲಿ ನಿನ್ನ ಜುಟ್ಟಾಟ ಪ್ರಾರಂಭವಾಯಿತು. ಮಾತನ್ನು ಮರೆತು, ಮಾನವನ್ನು ತೊರೆದು, ಮರ್ಕಟನಂತೆ ಕೇಕೆಯನ್ನು ಹಾಕುತ್ತ ಮಗಳನ್ನು ಬೆನ್ನಟ್ಟಿದ....ಅದಕಾಗಿಯೆ ನಾನಿಲ್ಲಿ ಕ್ರೋಧದ ಆವಸರದಿಂದ ಬಂದದ್ದು....ನಡೆಯಿರಿ....ಇನ್ನೊಮ್ಮೆ ಪಿತಾಮಹನನ್ನು ಕಾಣುವ....ತಾರಕಾಸುರನ ತೊಂದರೆ ತಡೆಯಲಂತಾಗಿವೆ; ತನ್ನನ್ನೆ ಮೀರಿದ ಶಕ್ತಿಗಳಿಂದ ದಿಕ್ಕು ತಪ್ಪಿದೆ ಇವನಿಗೆ—

ರತಿ :— ಅಂತಹ ಸಮಯಕ್ಕೆ ರತಿಯೆ ಉಪಾಯ ಎಂಬುದನ್ನು ಇದೇ ಕಣ್ಣಾರೆ ಕಂಡಿರಲ್ಲ ?

ಇಂದ್ರ :— ಕಣ್ಣಾರೆ ಕಂಡದ್ದು ಕನಸಲ್ಲ ಎಂಬುದನ್ನು ನೋಡೋಣ—ನಡೆಯಿರಿ.

[ಮುವ್ವರೂ ಇಂದ್ರನಿಗೆ ನಮಸ್ಕರಿಸಿ ಹೊರಡುವಾಗ—]

(ತೆರೆ)

ದೃಶ್ಯ ೩

[ಹಿಂದಿನ ದೃಶ್ಯ ನಡೆದ ೮-೧೦ ನಿಮಿಷಗಳ ತರುವಾಯ. ತೆರೆ ಮೇಲಕ್ಕೆದ್ದಾಗ ಒಂದು ಅಟವಿಯ ಭಾಗ. ದೂರದಲ್ಲಿ ಎತ್ತರದ ಬೆಟ್ಟ; ಅದರ ತುದಿ ಹಿಮದಿಂದ ಮುಚ್ಚಿದೆ. ಅಲ್ಲಲ್ಲಿ ಗಿಡಬಳ್ಳಿಗಳ ಆಕಾರ-ರೇಖಾಂಕಿತ ದೃಶ್ಯವು ಹಿನ್ನೆಲೆಯಲ್ಲಿ ಕಾಣುವುದು. ಹತ್ತಿರದಲ್ಲಿ ಹಿಮದಿಂದ ಹಸಿರು ಕತ್ತರಿಸಿದ ಗಿಡಗಳು ಭೂತಕಾಲದ ನೆರಳಿನಂತೆ ನಿಂತಿವೆ. ಅಲ್ಲಲ್ಲಿ ಜೇಡಬಲೆ ದೇಟು-ಮಾತ್ರವಾದ ಬಳ್ಳಿಗಳು ತೂಗಾಡುತ್ತಲಿವೆ. ಕೆಲಹೊತ್ತು ನಿಶ್ಶಬ್ದ ಸುಯವಾಗಿದೆ, ರಂಗಭೂಮಿ. ಕೃಮೇಣ ಎರಡು ಪುರುಷಾಕೃತಿಯ ನೆರಳು ಗಳು ಕಾಣುವವು. ಸದ್ದಿಲ್ಲದೆ ಸರಿಯುವ ನೆರಳುಗಳ ಹಿಂದಿನಿಂದಲೆ ಇಂದ್ರ ಮತ್ತು ರತಿ ಬರುವರು—ಮುಂದೆ ಇಂದ್ರ, ರತಿ ಹಿಂಬಾಲಿಸುತ್ತಲಿದ್ದಾಳೆ. ರಂಗಸ್ಥಲದ ಮಧ್ಯದ ವರೆಗೆ ನಡೆದು ಬಂದ ಇಂದ್ರ ತಡೆಯುವನು, ರತಿಯೂ ತಡೆಯುವಳು. ಹೆದರಿದವರಂತೆ ಇಬ್ಬರೂ ಅತ್ತಿತ್ತ ನೋಡುವರು. ಕೊನೆಗೆ ಇಂದ್ರನು ಮೆಲ್ಲಗೆ ರತಿಯ ಹತ್ತಿರ ನಡೆದು ಬಂದು, ಹೆದರಿದವನಂತೆ—]

ಇಂದ್ರ :— (ಮೆಲುದನಿಯಲ್ಲಿ) ಇದೇ ಆ ತಪೋಭೂಮಿ ...(ರತಿ ಅತ್ತಿತ್ತ ನೋಡುತ್ತ ಮಾತಿಲ್ಲದೆ ತಲೆತೂಗುವಳು) ಘಡಘಡ! ಎಂತಹ ಉಗ್ರವಾದ ತಪಸ್ಸು ! ಹಿಮಾಚ್ಛಾದಿತ ಶಿಖರದ ಪರ್ವತರಾಜನು ಕೂಡ ತಪೋನಿರತನಾಗಿ ಮುಖದ ತುಂಬ ಬಿಳಿಕೂದಲುಗಳನ್ನು ಬೆಳೆದಿರುವನೆಂಬಂತೆ ಕಾಣುವುದು .....ಅದೊ—ರತಿದೇವಿಯೆ—ಘೋರ ತಪಸ್ಸಿಗೆ ನಿಂತು ಗಿಡ-ಬಳ್ಳಿಗಳೂ ತಮ್ಮ ಭೌತಿಕದೇಹವನ್ನು ಬಿಸುಡಿ ನಿಂತಿವೆ!....ಸದ್ದಿಲ್ಲ—ಸುಳ್ಳಿಲ್ಲ—ಹಸಿರಿಲ್ಲ— ಹಕ್ಕಿಗಳಿಲ್ಲ .... ಇಡಿಯ ಸೃಷ್ಟಿಯೆ ಅಂತರ್ಧ್ಯಾನದಲ್ಲಿ ಮಗ್ನವಾದಂತಿದೆ !....(ಉಸುರ್ಗರೆದು) ಮಹಾದೇವನ ಈ ಮಹಾತಪಸ್ಸನ್ನು ಭಂಗಗೊಳಿಸಲೇಬೇಕೆಂದು ಪಿತಾಮಹನ ಆಜ್ಞೆ, ಈ ಇಂದ್ರನ ಆಸೆ....

ರತಿ :— [ದೂರ ನೋಡುತ್ತ] ಅದೊ ನೋಡಿದೆಯಾ, ಮಹೇಂದ್ರಾ! ಸಂಸಾರದಲ್ಲಿ ಸೃಷ್ಟಿಯ ಉಸಿರಿನಂತೆ ಶಿವನ ಇದಿರಿನಲ್ಲಿ ಪಾರ್ವತಿ ! . ನಡೆನಾಗ ನಮ್ಮ ಹೃದಯವೆ ನಡೆದಂತಾಗುವುದು ! ಎಂತಹ ಲಾವಣ್ಯ !

ಇಂದ್ರ:— [ನಿರಾಸೆಯ ದನಿಯಲ್ಲಿ] ಹೃದಯವನ್ನು ನಡುಗಿಸುವಂತಹ ಈ ಲಾವಣ್ಯಸಮಾಧಿಗೆ ಸ್ಥಿರತೆಯನ್ನು ಕೊಡುತ್ತಲಿದೆ. ನೋಡು ಮನ್ಮಥನ ರಾಣಿಯೆ, ನೋಡಿದೆಯಾ ? ಈಶ್ವರನ ತೆರೆದ ಕಣ್ಣು ಸ್ಮಿತವಾಗಿವೆಯಲ್ಲದೆ ತುಳುಕಾಡುವುದಿಲ್ಲ! ಈ ಮಹಾತಪಸ್ಸನ್ನು—

[ತೆರೆಯೊಳಗೆ ಗಟ್ಟಿಯಾದ ನಗು. ಅದನ್ನು ಕೇಳಿ ಇಂದ್ರನು ಚಕಿತನಾಗುವನು. ಆವನ ಮುಖದಲ್ಲಿ ಎಷ್ಟು ಸಿಟ್ಟು, ಅಷ್ಟೆ ಹೆದರಿಕೆಯೂ ನುಡಿದೆ. ಆದರೆ ರತಿ ಮಾತ್ರ ನಗುಬರುತ್ತಿರುವ ದಿಕ್ಕನ್ನು ನೋಡಿದೆ ಕೂಗದಿಂದ ನಿರೀಕ್ಷಿಸುತ್ತ ನಿಲ್ಲುವಳು. ಕೃಮೇಣ ನಗು ಪೂರ್ಣ ಗಟ್ಟಿಯಾಗಿಯೂ ಕೇಳಬರುವುದು. ನಿಮಿಷರದು ನಿಮಿಷಗಳ ಗಟ್ಟಿಯಾಗಿ ನಗುತ್ತಿರುವ ಕಾಮು, ಅವನೊಡನೆ ಯಚ್ಚನೆ ನೋಡುತ್ತ, ನೋಡಿನೋಡದಂತೆ ಕಂಗೆಟ್ಟು ಕುಣಿಯುತ್ತ ವಸಂ --ಬರುವರು.]

ಕಾಮ :— ಹಹಹ! ಹಹಹ! (ಎಂದು ವಸಂತನ ಕುಣಿತ ನಗುನಿನ ತಾಳವನ್ನು ಹಿಡಿಯುವನು).

ಇಂದ್ರ :— (ಸಿಟ್ಟಿನಿಂದಾದರೂ ಮೆಲುದನಿಯಲ್ಲಿಯೆ ಮೂರ್ಖರೆ (ಸಿಟ್ಟು ತಡೆಯದೆ) ಇಬ್ಬರೂ ಮೂರ್ಖರು !....ಇಬ್—ಇಬ್— (ಸಿಟ್ಟು ಸಾಲದು) ಇಬ್ಬರು ಯಾಕೆ ? ಶತ—ಶತಮೂರ್ಖರು !

ರತಿ :— ವಸಂತಾ, ಶಾಂತನಾಗು; ಸಂತಸವ ದೊರೆಯೆ, ಸೈರಿಸು.

ಕಾಮ :— (ವಸಂತನು ತಡೆದುದನ್ನು ನೋಡಿ, ನಗು ತಡೆದು) ವಸಂತಾ—ಕಾಲು ಸೋತು ನಿಂತಾ!

ವಸಂತ :— (ದಣಿವಿಗೆ ಉಸಿರು ಸಾಲದವನಂತೆ) ಮಾಯೆ! ಮೋಸ! ಮಾಟಗಾರಿಕೆ! ಅಸಹ್ಯ—ಅಸಹ್ಯ—ಅಥರ್ವವಿದ್ಯೆ!

ಕಾಮ :— (ತಿರಸ್ಕಾರದ ನಗೆಯಿಂದ) ಯಾರಮೂ ವಿದ್ಯೆಯ ಅಥರ್ವವಲ್ಲ, ನಿನ್ನದೆ ಬುದ್ಧಿಯ ಗರ್ವ.

ಇಂದ್ರ :— (ಅಧಿಕಾರದ ದನಿಯಲ್ಲಿ) ಸಾಕು—ಸಾಕು ನಿಮ್ಮ ಸುರಾಮತ್ತ ಚೇಷ್ಟೆ....(ದೂರದಲ್ಲಿ ತೋರಿಸುತ್ತ) ಅಮೊ! ಅಮೊ! ನೋಡಿದಿರಾ ತಪಸ್ಸಿನ ಅಚಲರಾಜನನ್ನು?

ವಸಂತ :— (ಅತ್ತಿತ್ತ ನೋಡುತ್ತ) ಅಚಲ! ಯಾವುದು ಅಚಲ ಈ ವಸಂತನ ಸುಳಿಗಾಳಿಯ ಶಕ್ತಿಯ ಮುಂದೆ?

ಕಾಮ :— (ಕನಲಿ) ಎಲವೊ—ಇನ್ನೂ ನಿನಗೆ ಹೆಮ್ಮೆಯೆ? ಸ್ಥಾಣುವಿನ ತಪೋಭಂಗವು ಕಾಮನಿಂದಲೆ ಸಾಧ್ಯವಾಗಬಹುದೆಂದು ಸಾಕ್ಷಾತ್ತಾಗಿ ಪಿತಾಮಹನೆ ಹೇಳಿರುವಾಗ—

ವಸಂತ :— (ತಿರಸ್ಕಾರದಿಂದ) ವಸಂತನಿಲ್ಲದಿದ್ದರೆ ಕಾಮನೆಲ್ಲಿ?

ರತಿ:— (ಮುಗುಳ್ನಗೆಯಿಂದ) ರತಿ ಇಲ್ಲದಿದ್ದರೆ ಕಾಮ-ವಸಂತರಾರು?

ಇಂದ್ರ :— (ಸಿಟ್ಟಿನಿಂದ) ನೀವೆಲ್ಲರೂ ಇದ್ದಾಗ ಕಾರ್ಯ ಮಾಡುವವರು ಯಾರು? ಕಾರ್ಯ. ತಾರಕನ ಸಂಹಾರವ ಕಾರ್ಯ! (ಕಾಮ-ವಸಂತರಿಗೆ) ನೀವೀಗ ಬಂದದ್ದು ಮನೆಯೊಳಗಿನ ಮುಲ್ಲಯುದ್ಧಕ್ಕಲ್ಲ—ಮುರಾಪೇಪನ ಮರ್ಮಯುದ್ಧಕ್ಕೆ....ಮದನಾ—ಮನ್ಮಥಾ—ಪಿತಾಮಹನನ್ನು ಕೂಡ ಗತಿಗಾಣದಂತೆ ಮಾಡಿದೆನೆಂಬ ಹೆಮ್ಮೆಯ ಮೂರ್ತೀ—ತೋರಿಸು ನಿನ್ನ ಸಾಮರ್ಥ್ಯವನ್ನು...

ವಸಂತ :— (ಒಮ್ಮೆಲೆ ಏನೋ ಹೊಳೆದು) ಹಹಹ! (ಎಂದು-ನಗುವನು).

ಇಂದ್ರ :— (ಕನಲಿ) ನೈಗಿಂತ ಬಾಯಿಯಲ್ಲಿಯೆ ನಿನ್ನ ಶಕ್ತಿ ಹೆಚ್ಚಾಗಿವೆ! (ಆಣಕಿಸುತ್ತ) ಹಹಹ! ಇದೇ ಅಲ್ಲವೆ ವಸಂತನ ಸುಳಿಗಾಳಿ? ಹಹಹ! ಕಿರಿನ ದಂತಾವಳಿ!

ವಸಂತ :— (ನೊಂದು) ಮಹೇಂದ್ರಾ, ಕ್ಷಮಿಸು ನನ್ನನ್ನು... ಕಾಮನ ರಕ್ತಿ ನೋಡಬೇಕೆಂಬ ನಿನ್ನ ಕುತೂಹಲಕ್ಕಾಗಿ ನಗೆ ಬಂದಿತು ನಗೆ. . ಕಾಮನ ಸಾಮರ್ಥ್ಯ?. . ಎಲ್ಲಿದೆ? . . . ಹೂಬಾಣದಲ್ಲಿ.. ಹೂಬಾಣವೆಲ್ಲಿದೆ? ಹುವ್ವಿನಲ್ಲಿ . . ಹುವ್ವು ಎಲ್ಲಿದೆ? ವಸಂತನಲ್ಲಿ.. (ಹೆಮ್ಮೆಯ ದನಿಯಲ್ಲಿ) ಈ ವಸಂತನು ಹುವ್ವನ್ನು ಅರಳಿಸಿದ ಹೊರತು ಕಾಮನು—ಜಾಪ!—ಕೈಯನ್ನು ಕೆರಳಿಸಬಾರನು . . .

ರತಿ :— ಹಾಗಿದ್ದರೆ, ವಸಂತಾ, ಹುವ್ವನ್ನು ಅರಳಿಸುವ ಕೃಪೆ ಮಾಡಬಾರದೆ?

ಕಾಮ :— [ಒಮ್ಮೆಲೆ ಗಟ್ಟಿಯಾಗಿ ನಗುತ್ತ ವಸಂತನ ಸೊಪಲಿನ ಮುಜ್ಜು-ಕುಣತವನ್ನು ಆಣಕಿಸುತ್ತ] ಹಹಹ!

ಇಂದ್ರ :— [ಕೆರಳಿ]ಹಹಹ!....ಹೊಹೊಹೊ!....ಅಕಟಕಟ—

ಕಾಮ :— [ಒಮ್ಮೆಲೆ ಶಾಂತನಾಗಿ] ಮಹೇಂದ್ರಾ, ಕ್ಷಮಿಸು ನನ್ನನ್ನು....ವಸಂತನು ಹುವ್ವು ಅರಳಿಸುವುದು ಎಂಬ ಮಾತಿಗೆ ನನಗೆ ತಡೆಯಡಾಯಿತು ನಗೆ....ಇಲ್ಲಿ ಬರುವಾಗ ವಸಂತನು ಕುಣಿಯುತ್ತಿದ್ದನಲ್ಲ, ದೇವೇಂದ್ರಾ, ಅದು ಹುವ್ವನ್ನು ಅರಳಿಸುವುದಕ್ಕಾಗಿಯೆ.... (ಮತ್ತೆ ನಗೆ ತಡೆಯಜೆ ಗಹಗಹಿಸುತ್ತ) ಕೂಗಿದರಿಲ್ಲ, ಕುಣಿದರಿಲ್ಲ, ಏನು ಮಾಡಿದರೂ ಹುವ್ವು ಅರಳಲಿಲ್ಲ....ಅದಕಾಗಿ ಹುಚ್ಚೆದ್ದು, ಹೌಹಾರಿ, ದಿಕ್ಕುದಿಕ್ಕುಗಳಲ್ಲಿ ಕುಣಿಯತೊಡಗಿದ!—ಕುಣಿದಂತೆ—ಹಹಹ!—ಕೂಗಿದಂತೆ—ಹಹಹಹ!—ಹುವ್ವು ಇಲ್ಲ—ಹಹ!—ಹುಂಕಾರ ಬೆಳೆಯಿತು—ಹಹಹ (ನಗೆ ತಡೆಯಲಾಗುವುದು)

ಇಂದ್ರ :— (ತುಸು ಹೊತ್ತು ಕಾಮ-ವಸಂತರನ್ನು ದಿಟ್ಟಿಸಿ) ಹುವ್ವು ಇಲ್ಲ!....ಅಕಟ....ನಿಜ—ಈ ತಪೋಭೂಮಿಯಲ್ಲಿ ಹುವ್ವು ಅರಳುವುದೆ ಶಕ್ಯವಿಲ್ಲ—

ವಸಂತ:— ಹಾಗಾದರೆ ಕಾಮನ ಕೈಯಲ್ಲಿ ಬೆರಳಿನ ಬಾಣ—

ಇಂದ್ರ :— ಅಯ್ಯೊ! ಕೆಟ್ಟೆವು!

ಕಾಮ :— ಸುರಪತೀ—ಸೈರಿಸು....

ರತಿ :— ದೇವೇಂದ್ರಾ, ಮನ್ಮಥನ ಶಕ್ತಿ ಇದೆ, ಸೈರಿಸು.

ಇಂದ್ರ :— ಮನ್ಮಥನಿಗೆ ಶಕ್ತಿ.... ? ಅದಾವ ಯುಕ್ತಿ ?....ಹಕ್ಕಿ ಹಾಡವ, ಹುವ್ವ ಅರಳವ ಈ ಸಾತ್ತ್ವಿಕ ತಪೋಭೂಮಿಯಲ್ಲಿ ಯಾವ ಶೃಂಗಾರದ ಶಕ್ತಿ ಇದೆ?

ರತಿ :— ಶೃಂಗಾರದ ಶಕ್ತಿಗೆ ಹಾಡುವ ಹಕ್ಕಿ ಬೇಡ, ಅರಳುವ ಹುವ್ವು ಬೇಡ....ಅಮೊ—ಅಮೊ—ನೋಡು, ಮಹೇಂದ್ರಾ, ಸಂಹಾರದಂತಹ ಶೃಂಗಾರಶಕ್ತಿ ಬೇರೊಂದಿದೆಯೆ? ಸಂಹಾರದಿಂದಲೆ ಸೃಷ್ಟಿ—ಸಂಹಾರನೆ ಶೃಂಗಾರ! ವೇದನೆಯೆ ಶೃಂಗಾರ, ಯಾಕೆಂದರೆ ವೇದನೆ ಸಂಹಾರದಲ್ಲಿದೆ. ಯಾತನೆಯೆ ಶೃಂಗಾರ, ಯಾಕೆಂದರೆ ಸಂಹಾರದಲ್ಲಿ ಯಾತನೆ ಇದೆ....ನೋಡಲ್ಲಿ—ಕಳಚಿ ಕೊಳೆತು ಯಾತನೆಯಲ್ಲಿ ಬಳಲುವ ಕಟ್ಟಿಗೆಯ ಶೃಂಗಾರವನ್ನು ನೋಡು—ನೆಲವಾಯಿತು, ಜಲವಾಯಿತು, ಬೀಜವಾಯಿತು, ಬೀಜ ಭಿನ್ನವಾಗಿ ವೇದನೆಗೊಂಡಿತು, ವೇದನೆಯು ಪಲ್ಲವವಾಗಿ ಚಿಗುರಿತು—ಮಹೇಂದ್ರಾ, ಸಂಹಾರ ಸ್ವರೂಪವ ಶಿವನ ತಪಸ್ಸಿನಲ್ಲಿ ಶೃಂಗಾರವನ್ನು ತುಂಬುವ ಶಕ್ತಿ ಕಾಮನಿಗಿದೆ—

ಕಾಮ :— [ಹೆಮ್ಮೆಯಿಂದ ಬಿಗಿದು] ಕಾಮನಿಗೆ ಯಾವ ಶಕ್ತಿ ಇಲ್ಲ?

ವಸಂತ :— [ತಿರಸ್ಕಾರದಿಂದ] ಹೆಂಡತಿಯ ಹೆಮ್ಮೆಯ ಮಾತನ್ನು ನಂಬುವ ರಕ್ತಿ ಇದೆ!

ಇಂದ್ರ :— [ಸಂತೋಷದ ತಲೆ ಎತ್ತುತ್ತ] ಕಾಮನಿಗೆ ಶಕ್ತಿ ಇದೆ! ಇದೆಯೆ?....ನಿಜವೆ?

ರತಿ :— ಶಕ್ತಿ ಇದೆ—ಆದರೆ—

ಕಾಮ :— [ಒಮ್ಮೆಲೆ] ಏನೆಂದೆ?

ಇಂದ್ರ :— [ಜೆವರಿ] —ಆದರೆ— ?

ರತಿ :— ಶಕ್ತಿ ಇದೆ—ಆದರೆ—ಸಾಮರ್ಥ್ಯ ಸಾಲದು.

ವಸಂತ :— ಹಹಹ!

ಕಾಮ :— [ಆವಳನ್ನು ದಿಟ್ಟಿಸಿ] ಏನೆಂದೆ? ಸಾಮರ್ಥ್ಯ ಸಾಲದೆ?

ರತಿ: — ಪುಷ್ಪ ಇಲ್ಲದ್ದಕ್ಕಾಗಿ ಪ್ರಭಾವ ನಡೆಯದು!

ಕಾಮ—: ಪುಷ್ಪ? ಅಯ್ಯೋ! ಮೂರ್ಖತನ!.... ಪುಷ್ಪಗಳೆಲ್ಲಿ ವಸಂತನ ಗಂಟಲಲ್ಲಿಯೆ ಒಣಗಿರಲಿ—ನನಗವರ ನೊಡವೆ ಇಲ್ಲ.... ಮಹೇಂದ್ರಾ, ನೋಡು, ನೋಡು, ನೇವಾಧಿನೇವತೆಗಳನ್ನು ಮೀರಿನ ಈ ಕಾಮನ ಶಕ್ತಿಯನ್ನು—

[ಒಮ್ಮೆ ಜ್ವಾಲೆ ಪ್ರಜ್ವಲಿಸಿದಂತಾಗುವುದು. ನುರುಗಳಿಗೆಯಲ್ಲಿ ಶಾಂತ. ಜ್ವಾಲೆಯು ನಳಕಿಗೆ ಕಣ್ಣು ಕುರುತಾನವರಂತೆ ಇಂದ್ರ-ವಸಂತರು ದಿಟ್ಟಿಸಿ ನೋಡಿ ಒಮ್ಮೆಲೆ—]

ಇಂದ್ರ :— ಅಯ್ಯೋ! ಕಾಮನೆಲ್ಲಿ?

ವಸಂತ :— (ಹೌಹಾರಿ) ಸುವನಾ. ಮನ್ಮಥಾ. ಮಿತ್ರಾ. ಮಾತಿನಲ್ಲಿ ಸುರ್ಯಾವೆ ಮೀರಿವೆ ನಾನು. ಕ್ಷಮಿಸು ನನ್ನನ್ನು ಮಿತ್ರಾ—ಎಲ್ಲಿರುವೆ—ಎಲ್ಲಿ—

ರತಿ :— (ನಗುತ್ತ) ಮಹೇಂದ್ರಾ. ಮಘವಾಜಾ—ನಿನ್ಮಮನ್ಮಥನು ಇಲ್ಲಿದ್ದಾನೆ—ಇಲ್ಲಿ—ರತಿಯ ಹೃದಯದಲ್ಲಿ!

ಇಬ್ಬರೂ :— (ತಿಳಿಯದೆ) ಏನು?

ರತಿ :— (ಮುಂದಲ್ಲಿ ತೋರಿಸುತ್ತ) ಅಮೊ—ನೋಡಿರಿ—ಸಂಹಾರದ ಶೃಂಗಾರ!..ನೋಡಿದಿರಾ, ಸಮಾಧಿಯುಕ್ತಿವ್ವ ಸ್ಥಾಣುವು ಸಂಸಾರಕ್ಕಾಗಿ ಹೊಟ್ಟುವನ್ನು?....ಮನ್ಮಥನು ಗೆದ್ದನು. ಪುಷ್ಪಬಾಣದಿಂದ ಗೆದ್ದನು.

ವಸಂತ :— ಪುಷ್ಪ? ಆದರೆ—ಪುಷ್ಪನೆಲ್ಲಿದೆ?

ರತಿ :— (ತೋರಿಸುತ್ತ) ಅಮೊ—ನೋಡಿದಿರಾ—ಶಿವನ ಇದಿರಿನಲ್ಲಿ ಶೃಂಗಾರವೀನ ಆರಳಿ ನಿಂತುವನ್ನು....

ಇಂದ್ರ :— (ಆಶ್ಚರ್ಯದಿಂದ) ಯಾರು? ಗಿರಿಜೆ!

ರತಿ :— (ತಲೆತೂಗುತ್ತ) ಹೆಂಗುಸಿನ ಹೃದಯವನೆ ಕಾಮನಿಗೆ ಹುವ್ವು....ಇದನ್ನರಿತ ಕಾಮನು ಶಕ್ತಿಗಾಗಿ ಸೊತ್ತೆ. ನಾಮರ್ಥ್ಯನಿಲ್ಲದೆ ಸಂಹಾರಕನಾಗಬಹುದೆಂದು ಅವನ ಪೊಡತಿಯ ತನ್ನ ಹೃದಯದ ಪುಷ್ಪವನ್ನು ನೀಡಿದಳು....ಇಲ್ಲಿದ್ದಾನೆ ಕಾಮ..ಸಂಹಾರನ ಉಗ್ರಾಮ—

ವಸಂತ : (ತಿಳಿಯದೆ) ಸಂಹಾರ?....ಯೆ—ತಾರಕನ ಸಂಹಾರಕ—

ಇಂದ್ರ :— (ವಿಚಾರಿಸುತ್ತ ಮುಂದ ನಡೆದು, ಆ ಮೇಲೆ ನಿಂತು, ರತಿಯನ್ನು ದಿಟ್ಟಿಸಿ, ಕೊನೆಗೆ ಆವಳಿಗೆ ಕೈಮುಗಿದು) ತಾರಕನ ಸಂಹಾರಕ ಯಾರೇ ಇರಲಿ, ರತಿಯೆ, ಸಂಹಾರದ ತಾರಕ ಮಾತ್ರ ನೀನು.

[ಎಂದು ತಲೆಬಾಗಿ ನಮಿಸುವನು. ವಸಂತನ ಸಂತೋಷಕ್ಕೆ ಸರಿಯಾಗಿ ಸೃಷ್ಟಿ ಒಮ್ಮೆಲೆ ಅರಳುವಾಗ—]

(ತೆರೆ)

DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

Cotton, Silk, Art Silk,
Wool, Jute, Paper,
Leather, Soap, Wax,
Coir, Varnishes, Oils.

CHEMICALS
ACCELERATORS AND
ANTI-OXIDANTS
FOR
RUBBER INDUSTRY

S. K. KABBUR LIMITED
37 BASTION ROAD
FORT, BOMBAY
Telegrams "DIAZO" Bombay Telephone 21627

CORRESPONDENTS IN ENGLAND:

KABBUR & CO., LIMITED
RADHA HOUSE
Higher Ardwick, MANCHESTER, 12.
Telegrams "Radha, Manchester."

ಕನ್ನಡದ ಕೆಲಸ

ಶ್ರೀ. ಎಚ್. ಎಸ್. ಪಾಟೀಲ ಎಂ. ಎ, ಬಿ. ಕಾಮ್ ಮುಂಬಯಿ

ಜಗತ್ತಿನ ವುಂದುವರಿದ ರಾಷ್ಟ್ರಗಳಲ್ಲಿ ಈಗಾಗಲೆ ಮೂರನೆಯ ಯುದ್ಧದ ಮಾತುಗಳು ಎದ್ದಿರದಿದ್ದರೂ, ಯುದ್ಧೋತ್ತರ ಪುನರ್ರಚನೆಯ ಮಾತುಗಳಂತೂ ನಿಶ್ಚಿತವಾಗಿ ನಡೆದಿವೆ. ಪಾಳುಗೆಡವ ಪಟ್ಟಣ-ಪ್ರಾಂತ, ಪ್ರದೇಶಗಳನ್ನು ಹೇಗೆ ತಿರುಗಿ ಕಟ್ಟಬೇಕು; ಮುರಿದು ಬಿದ್ದ ಉದ್ಯಮ-ಕಾರ್ಯಾಲಯಗಳನ್ನು ಮತ್ತೆ ಆರಂಭ ಮಾಡಲು ಹೇಗೆ ಕಣವನ್ನು ಜನರನ್ನು ಕೂಡಿಸಬೇಕು; ಮುಚ್ಚಿದ ವ್ಯಾಪಾರ ಬಾಗಿಲುಗಳನ್ನು ಹೇಗೆ ಮತ್ತೆ ತೆರೆಯಬೇಕು?....ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ಪ್ರಪಂಚದ ಧನ, ಉದ್ಯಮ, ವ್ಯಾಪಾರ, ಮುಂತಾದುವುಗಳ ಪುನರುಜ್ಜೀವನದ ವಿಷಯವನ್ನು ಕುರಿತು ಅನೇಕ ಸಭೆ, ಸಮ್ಮೇಳನಗಳು ಜರುಗುತ್ತಲಿವೆ. ಇತ್ತ ಮಹಾಯುದ್ಧದ ಮಹಾಜ್ವಾಲೆಗೆ ಸಿಕ್ಕಿದ ಹಿಂದುಸ್ತಾನದಲ್ಲಿ ಸಹಿತ ಕೂಳಿನ ಕೊರತೆ, ಧನದ ಅಭಾವ, ರಾಜಕೀಯ ದುಃಸ್ಥಿತಿ ಇವುಗಳಿಂದ ಜನತೆಯು ಕಂಗೆಟ್ಟು, ಬಸವಳಿದು ಕುಳಿತುದು ಕಂಡುಬರುತ್ತದೆ ಇದನ್ನು ಪೋಗಲಾಡಿಸುವುದಕ್ಕೆ ಒಂದು ಬದಿಯಿಂದ ಸಪ್ಪು ಪ್ರಭೃತಿಗಳಂತಹರು ಇಡಿಯ ಹಿಂದುಸ್ತಾನಕ್ಕೆ ಸೌಮ್ಯ ಮಾರ್ಗದಿಂದ ಸಿಗಬಹುದಾದುದನ್ನು ದೊರಕಿಸಲು ಯತ್ನ ನಡೆಯಿಸಿದ್ದರೆ, ಅತ್ತ ಕಾಂಗ್ರೆಸ್ಸು ಮುಸ್ಲಿಮ್‌ಲೀಗುಗಳ ಸಂಗಡದವರು 'ನಿರ್ಲಿಪ್ತ' ಭಾವನೆಯಿಂದ ತಮ್ಮ ಆದರ್ಶವನ್ನು ಪಡೆಯುವ ದಾರಿಯನ್ನು ಹಿಡಿದಿದ್ದಾರೆ. ಅದರೂ ಸಹಿತ ದಿಕ್ಕುಗೆಟ್ಟ ವಾತಾವರಣವೇನು ಇಲ್ಲದಂತಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೆಲಕೆಲವು ಶಕ್ತಿಗಳು, ತಮ್ಮ ಪ್ರಭಾವವನ್ನು, ತಿಳಿಯದಂತೆ ಮೆಲ್ಲಮೆಲ್ಲನೆ ತನ್ನು ತಮ್ಮ ಪರಿಸರದಲ್ಲಿ ಪಸರಿಸಪತ್ತಿರುತ್ತವೆ. ಒಂದು ಬಂಡವಾಳವಾದ, ಇನ್ನೊಂದು ಸಾಮ್ಯವಾದ, ಮತ್ತೊಂದು ಬೇರೆ ವಾದ ಹೀಗೆ ಆ ಆ ಮಜಗಳು ತಮ್ಮ ಯೋಗ್ಯತೆಯಂತೆ ಜಾಲವನ್ನು ಹೆಚ್ಚು ಹಿಗ್ಗಿಸ ತೊಡಗಿರುತ್ತವೆ.

ಈ ಬಗೆಯ ಕತ್ತರಿಯ ಹಿಡಿತದಲ್ಲಿ ಸಿಲುಕಿಬಿದ್ದ ಸಾವಾನ ಮನುಷ್ಯನಾಗಲಿ, ಹಿಂದುಳಿದ ಪ್ರಾಂತವಾಗಲಿ, ಜಡತನದ ರಾಷ್ಟ್ರವಾಗಲಿ ಎರಡು ವಿಧದಿಂದ ಇಂದಿನ ಪರಿಸ್ಥಿತಿಯಲ್ಲಿ ಕಾರ್ಯ ಮಾಡುವುದು ವಿಹಿತವೆಂದು ತೋರುತ್ತದೆ. ಒಂದನೆಯದಾಗಿ ಬೇರೆಯದಾದ ಇಲ್ಲವೆ ಬೇಡವಾದ ಸಂಗತಿ, ಸನ್ನಿವೇಶ ಮತ್ತು ಸಂಸ್ಥೆ ಇವುಗಳಿಂದ ಸ್ವತ್ವವನ್ನು ಬಿಡಿಸಿಕೊಂಡು ದೂರ ಉಳಿಯುವುದು, ಎರಡನೆಯದಾಗಿ ತನಗೆ ಬೇಕಾದ ತಮ್ಮ ಏಳಿಗೆಗೆ ಉಪಯುಕ್ತವಾಗುವಂತಹ, ತನ್ನ ಉತ್ಕರ್ಷಗೆ ಅನುಕೂಲವೆನಿಸುವಂತಹ ಮಾರ್ಗದಲ್ಲಿ ಸಂಘಟಿತವಾಗಿ ತಮ್ಮ ಆದರ್ಶವನ್ನು ಪಡೆಯುವ ಪ್ರಯತ್ನ ಮಾಡುವುದು. ಇವೆರಡು ಕಾರ್ಯಗಳು ಒಂದನ್ನೊಂದು ಅವಲಂಬಿಸಿವೆ; ಒಂದಕ್ಕೊಂದು ಪೂರಕವಾಗಿವೆ. ತಮ್ಮ ಹಿತಕ್ಕೆ ಘಾತಕವಾದುದನ್ನು ತಿಳಿದುಕೊಂಡು, ಅದಕ್ಕೆ ವಿರೋಧ ಮಾಡಿ, ಅದರ ಗತಿಯನ್ನು ತಡೆಗಟ್ಟಿ ಹಿಡಿಯುವ ಕ್ರಿಯೆಯೆಲ್ಲಿಯ ತಮಗೆ ನಿಜವಾಗಿಯೂ ಲಾಭವಾಗುವ ವಿಷಯದ ಅರಿವು ಆಗುವುದು ಅದರಂತೆಯೆ. ನಾವು ನಮ್ಮ ಉದ್ಧಾರಕ್ಕಾಗಿ ಕೆಲವು ಬೇಡಿಕೆಗಳನ್ನು ಪಡೆಯುವುದೇ ನೈಸರ್ಗಿಕ, ಹಿತಕರ ಎಂದು ತಿಳಿದುಕೊಂಡಾಗ, ಅದಕ್ಕೆ ಪ್ರತಿಗಾಮಿಯಾದ ಕಾರ್ಯವಾಗಲಿ, ಸಂಸ್ಥೆಯಾಗಲಿ, ಹೇಗೆ ನಮ್ಮ ಪ್ರಗತಿಯನ್ನು ಅಡ್ಡ ತಡೆಯಬಹುದು, ಹೇಗೆ ನಮ್ಮ ಕಾರ್ಯದಲ್ಲಿ ತೊಡಕನ್ನುಂಟುಮಾಡಬಹುದು ಎಂಬುದೂ ಸ್ಪಷ್ಟವಾಗುತ್ತದೆ.

ಈಗ ನಮಗೆ ಅತ್ಯಂತ ಜೀವಾಳದ ಪ್ರಶ್ನೆಗಳಾದ ಒಂದು ಏಕೀಕರಣ, ಒಂದು ಕನ್ನಡ ಮಾಧ್ಯಮ ಇಂತಹ ವಿಷಯಗಳನ್ನೆ ಉದಾಹರಣೆಗಾಗಿ ತೆಗೆದುಕೊಳ್ಳಬಹುದು. ಯುದ್ಧದ ಈಗಿನ ಭೀಕರ ಪರಿಸ್ಥಿತಿಯಲ್ಲಿ ಮತ್ತು ಹಿಂದುಸ್ತಾನದಲ್ಲಿಯ ಈಗಿನ ಸಂಧಿಕಾಲದ ಸಮಯದಲ್ಲಿ ರಾಷ್ಟ್ರದ ವಿಭಜನೆ, ಹೊಸ ಪ್ರಾಂತಗಳ ನಿರ್ಮಾಣ, ಸಂಯುಕ್ತ ರಾಜ್ಯಘಟನೆಯು ಯುಕ್ತಾಯುಕ್ತತೆ ಇಂತಹ ವಿಷಯುಗಳ ಚರ್ಚೆಯು ನಡೆದು, ಈಗಿದ್ದ ಪರಿಸ್ಥಿತಿಯಂತೂ ಉಳಿಯುವುದಿಲ್ಲ, ಉಳಿಯಬಾರದು—ಎಂದು ಗಟ್ಟಿಯಾಗಿ ನಾವು ತಿಳಿದುಕೊಂಡಾಗ, ಕನ್ನಡಿಗರ ಸರ್ವಾಂಗೀಣ ಉನ್ನತಿಗೆ ಏಕೀಕರಣವೆ ಮೂಲಮಂತ್ರ ಎಂಬುದನ್ನು ಒಪ್ಪಿದ ನಾವು, ಆ ಬೇಡಿಕೆಯನ್ನೆ ಸುಸಂಘಟಿತವಾದ ಸ್ವರೂಪದಲ್ಲಿ ಮಂಡಿಸಿ, ಆ ಗುರಿಯಿಂದನ್ನು ಪಡೆಯಲು ಹೆಣಗುವುದೇ ಸರಿಯಾದ ಕರ್ತವ್ಯವಲ್ಲವೆ? ಇಂತಹ ಕಾರ್ಯದಲ್ಲಿ ನಮಗೆ ಆವಶ್ಯಕವಾದುದನ್ನು ಪಡೆಯುತ್ತಲೆ, ಅದಕ್ಕೆ ಅಡ್ಡಿಯಾಗುವಂತಹ ತಮಿಳು-ಆಂಧ್ರ-ಮಲಯಾಳ-ಮರಾಠಿಗರ ದಾಳಿ ದಬ್ಬಾಳಿಕೆಗಳನ್ನು ತಡೆಯುವುದೂ ಒಂದು ಕಾರ್ಯಭಾಗವೆ! ಅದರಂತೆಯೆ ಈಗಿನ ನಮ್ಮ ಶಿಕ್ಷಣದಲ್ಲಿ ಇಂಗ್ಲಿಷಿನ ಅಡಳಿತವು ಪರಿಭಾರವಾಗಿದೆ, ಸಾಮ್ರಾಜ್ಞಿಯಾಗಬೇಕಾದ ಹಿಂದುಸ್ತಾನಿಯು ನಿರಂಕುಶ ಸ್ವಾಮಿನಿಯಾಗುವ ಸಂಭವ ಇದೆ. ನೆರೆಹೊರೆಯವರೆಂದು ಒಳಗೆ ಬಂದು ಕುಳಿತುಕೊಂಡ ಮರಾಠಿ-ತಮಿಳುಗಳು ಮನೆಯೊಡತಿಗಿಂತ ಹೆಚ್ಚು ಮೆಲಿತು ಕುಳಿತಿರುತ್ತವೆ: ಇಂತಹದು ನಮ್ಮ ಕಾರ್ಯಕ್ಕೆ ಕೇಡನ್ನು ಮಾಡುವುದು ಖಂಡಿತ ನಾವು ನಮ್ಮ ಉತ್ಕರ್ಷೆಯನ್ನು, ಏಳ್ಗೆಯನ್ನು ಬಯಸುವವರು. ನೆಲವು ನಮ್ಮ ನುಡಿಯು, ನಮ್ಮ ನಾಡಿನ ವಿಷಯವಾಗಿ ಭಕ್ತಿ-ಪ್ರೇಮ-ಅಭಿಮಾನಗಳುಳ್ಳವರಾಗಿರಬೇಕು. ಆ ಬಗೆಯ ಭಾವನೆಗಳು ಉಂಟಾಗಲಿಕ್ಕೆ, ಬೆಳೆಯಲಿಕ್ಕೆ ನಮ್ಮ ಶಿಕ್ಷಣವು ನಿಜವಾಗಿ ಹೆಚ್ಚು ಫಲಪ್ರದವಾಗಲಿಕ್ಕೆ ನಾವು ನನ್ನು ಮಾತೃಭಾಷೆಯಲ್ಲಿಯೆ ಮೊದಲ ಶಾತನನ್ನು, ಮುಂದಿನ ವಿದ್ಯೆಯನ್ನು ಪಡೆಯಬೇಕು ಎಂದು ಹಂಬಲಿಸುವಾಗ್ಗೆ ಈ ಬಗೆಯ ಧ್ಯೇಯಸಾಧನೆಯ ಮಾರ್ಗದಲ್ಲಿ ಬರಬಹುದಾದ ಎಲ್ಲ ವ್ಯಕ್ತಿ-ಸಂಸ್ಥೆ-ವಿಚಾರಗಳ ಶಕ್ತಿಯನ್ನು ಎದುರಿಸಲೆಬೇಕಲ್ಲವೆ? ಇಂತಹ ದ್ವಿಮುಖವಾದ ಕಾರ್ಯದಲ್ಲಿ ಯಾವ ಭಾಗವು ಹೆಚ್ಚು ಅಗತ್ಯವಾದುದು ಎಂಬದು ಆ ಆ ಕಾಲ-ಪರಿಸ್ಥಿತಿಗಳ ಮೇಲೆ ಅವಲಂಬಿಸಿದ. ಅದನ್ನು ಜಾಣತನದಿಂದ ನಿರ್ಧರಿಸುವುದೂ ಒಂದು ಬಗೆಯಾದ ವಿಷಯವೆ ಆಗಿದೆ ಎನ್ನಬಹುದು.

ಕರ್ನಾಟಕದ ವಿಷಯವಾಗಿ ಮಾತನಾಡುವಾಗ ನಮಗೆ ಏನು ಬೇಕು ಎಂಬುದಕ್ಕಿಂತ ಏನು ಬೇಡ ಎಂಬುದನ್ನೆ ತಿಳಿದುಕೊಳ್ಳುವುದು ಈಗಿನ ಮಟ್ಟಿಗೆ ಹೆಚ್ಚು ಉಪಯುಕ್ತ ಎನಿಸಬಹುದು. ಕರ್ನಾಟಕಕ್ಕೆ

ಏನು ಬೇಕು ಎಂಬುದನ್ನು ದೊರಕಿಸುವ, ಅದನ್ನು ಪಡೆಯುವ ಕಾರ್ಯದಲ್ಲಿ ತೊಂದರೆಯಾಗುವ ವಿಷಯಗಳನ್ನು ತಡೆಯುವ ಕೆಲಸವನ್ನು ತುಮಟ್ಟಿಗೆ ಈಗಾಗಲೆ ಕೆಲವು ಅಖಿಲ ಕರ್ನಾಟಕ ಸಂಸ್ಥೆಗಳು ಮಾಡುತ್ತಿವೆ. ಒಂದು ಸಾಹಿತ್ಯ, ಒಂದು ಸಂಸ್ಕೃತಿ, ಒಂದು ಪ್ರಾಂತ ನಿರ್ಮಾಣ, ಒಂದು ಶಿಕ್ಷಣಸಂಸ್ಥೆ, ಒಂದು ವ್ಯಾಯಾಮ, ಒಂದು ಸಂಗೀತ ಮುಂತಾದ ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ಭಿನ್ನ ಭಿನ್ನ ಸಂಸ್ಥೆಗಳು ದುಡಿಯುತ್ತ ನಡೆದಿವೆ. ಆದರೆ ಕರ್ನಾಟಕದ ತುಂಡು ತುಂಡಾಗಿ ಹರಿದುಬಿದ್ದ ಪರಿಸ್ಥಿತಿಯು ಮೂಲಕ, ಕರ್ನಾಟಕಕ್ಕೆ ದೇಶದ ದೊಡ್ಡ ದೊಡ್ಡ ಆಂದೋಲನಗಳ ಕೇಂದ್ರಗಳು ಹಾಗೂ ರಾಷ್ಟ್ರದ ಸರಕಾರ ಕೇಂದ್ರವು ದೂರ ಇದ್ದ ಮೂಲಕ, ಮತ್ತು ಯುದ್ಧಜನ್ಯ ಪರಿಸ್ಥಿತಿಯಲ್ಲಿ ಮಿಕ್ಕ ಎಲ್ಲರೂ ತಂತಮ್ಮ ಕಾರ್ಯದಲ್ಲಿ ತೊಡಗಿದ್ದುದರಿಂದ, ಇಂತಹ ಅಖಿಲ ಕರ್ನಾಟಕ ಸಂಸ್ಥೆಗಳ ಕಾರ್ಯವು ಹೆಚ್ಚು ರಭಸದಿಂದ ಸಾಗುವುದು ಅನಿವಾರ್ಯವಾಗಿದೆ. ಹೀಗೆ ಅವು ಕಾರ್ಯ ಮಾಡಬೇಕಾದರೆ ಅವಕ್ಕೆ ಹೆಚ್ಚಿನ ಜನಬಲವೂ ಧನಬಲವೂ ಅವಶ್ಯಕ ಎಂಬುದು ಒಪ್ಪತಕ್ಕಂತಹ ಮಾತು. ಅವುಗಳ ಶಕ್ತಿಯು ಹೆಚ್ಚಾದ ಹೊರತು ಯಾವುದೊಂದು ಸಂಸ್ಥೆಯು ಹೆಚ್ಚು ಹೆಣಗಾಡುವುದಾದರೂ ಹೇಗೆ, ತಿಳಯದು!

ಈ ದೃಷ್ಟಿಯಿಂದ ನೋಡಲಾಗಿ ಕಳೆದ ಸಲದ ಪರಿಷತ್ತಿನ ಸಭೆಯಲ್ಲಿ ಕನ್ನಡದ ಕಾರ್ಯವನ್ನು ಹದಿನಾರು ವಿಭಾಗಗಳಲ್ಲಿ ಮಾಡಬೇಕೆಂದು ನಿರ್ಧರಿಸಿದುದು ಒಂದು ತುಂಬಾ ಶ್ಲಾಘನೀಯವಾದ ಮಾತು; ಅದರಲ್ಲಿ ಮುಂಬಯಿ– ಮದ್ರಾಸುಗಳನ್ನು ಕೂಡಿಸಿಕೊಂಡುದು ಮತ್ತಷ್ಟು ಅನುಕೂಲದ ಸಂಗತಿ!

ಆದರೆ ಅಷ್ಟಕ್ಕೆ ನಾವು ಸಂತುಷ್ಟರಾಗಿ ಸುಮ್ಮನೆ ಕುಳಿತುಕೊಳ್ಳುವ ಸ್ಥಿತಿ ನಮ್ಮದಿಲ್ಲ. ಮೇಲೆ ಕಾಣಿಸಿದ ಅನೇಕ ಕಾರಣಗಳ ಮೂಲಕ ಹೆಚ್ಚು ಕಾರ್ಯ ಆಗಬೇಕು ಎಂಬುದು ಖಂಡಿತ. ಈಗಿದ್ದ ಸಂಸ್ಥೆಗಳಿಗೆ ಈ ಬಗೆಯಾದ ತೊಡಕು–ತೊಂದರೆಗಳವೆ:

೧. ಅಖಿಲ ಕರ್ನಾಟಕಸಂಸ್ಥೆಗಳಲ್ಲಿ ಕೆಲವು ಸಂಸ್ಥಾನಗಳಲ್ಲಿರುವುದು.

೨. ಕರ್ನಾಟಕದ ಭಾಗಗಳು ಇರುವ ಬೇರೆ ಸರಕಾರಗಳ ಕೇಂದ್ರಗಳಿಂದ ಕರ್ನಾಟಕವು ದೂರ ಇರುವುದು.

೩. ಹಿಂದುಸ್ತಾನದ ರಾಜಧಾನಿಯಿಂದ ಕನ್ನಡಿಗರು ಮತ್ತು ಕರ್ನಾಟಕ ದೂರ ಇರುವುದು.

೪. ಕನ್ನಡಿಗರ ಬೇಡಿಕೆಯ ಕೂಗು ಹಳ್ಳಹಳ್ಳಿಗಳ ಜನ ಸಾಮಾನ್ಯರಿಗೆ ತಲುಪದಿರುವುದು.

೫. ಮತ್ತು ಕರ್ನಾಟಕದ ಸಂಸ್ಥೆಗಳಲ್ಲಿ ಹರಯದವರು ಮತ್ತು ಅಥವಾ ಹುರುಪಿನವರು ಹೆಚ್ಚಾಗಿ ಸೇರದಿರುವುದು.

ಈ ಎಲ್ಲ ವಿಷಯಗಳನ್ನು ವಿವರವಾಗಿ ತೂಗಿ ನೋಡಬಹುದು. ಕನ್ನಡದ ಕೂಗು ನಿರ್ದುಷ್ಟವಾದುದು, ಅಷ್ಟೆ ಏಕೆ ಅಗತ್ಯವಾದುದು, ನ್ಯಾಯವಾದುದು, ಎಂಬುದು, ಕನ್ನಡಿಗರಿಗಷ್ಟೆ ಅಲ್ಲದೆ ಹೊರಗಿನವರಿಗೆ ಸಹಿತ ಮಾನ್ಯವಾದ ಮಾತು. ಆದರೂ ಕೂಡ ಕನ್ನಡದ ಕಾರ್ಯವು ಮಾತ್ರ ಮುಂದುವರಿಯಲೊಲ್ಲದು. ಇದಕ್ಕೆ ಕಾರಣ ಏನು ಎಂಬುದನ್ನು ವಿಮರ್ಶಿಸಿ ನೋಡಬೇಕಾದ ಹೊತ್ತು ಇದು. ಕರ್ನಾಟಕದ ಅರ್ಧಭಾಗ ದೇಶೀಯ ಸಂಸ್ಥಾನಗಳಲ್ಲಿದ್ದು, ಅದರೊಳಗಿನ ಬಹುದೊಡ್ಡ ತುಂಡು ಮೈಸೂರಾಗಿದೆ ಈ ವಿಷಯದಲ್ಲಿ ಇಂತಹ ಪರಿಸ್ಥಿತಿಯು ಕರ್ನಾಟಕಕ್ಕೆ ಹೇಗೆ ಉಪಯುಕ್ತ ಆಗಿಲ್ಲ ಎಂಬುದು ತುಸು ವಿಶಿಷ್ಟವಾದ ಸಮಸ್ಯೆಯಾಗಿದೆ. ಹೊಸ ಪ್ರಾಂತವನ್ನು ಬೇಡುತ್ತಿರುವ ಆಂಧ್ರದಲ್ಲಿ, ಬೇರಿ ಪಡೆದ ಓಡಿಸಾ, ಸಿಂಧ ಮುಂತಾದುವುಗಳಲ್ಲಿ ಮತ್ತು ಬೇಡಬಹುದಾದ ಮಹಾರಾಷ್ಟ್ರ — ಗುಜರಾತುಗಳಲ್ಲಿ ಎಲ್ಲ ಕಡೆಯಲ್ಲಿಯೂ ಸಂಸ್ಥಾನಗಳು ಇವೆ. ಇತ್ತ ಕರ್ನಾಟಕ ಪ್ರಾಂತವಾಗಬಹುದಾದ ಭಾಗದಲ್ಲಿಯೂ ಸಂಸ್ಥಾನಗಳಿವೆ. ಆದರೆ ಬ್ರಿಟಿಶ್ ಭಾಗಕ್ಕಿಂತ ತುಸು ಪ್ರಮಾಣದಲ್ಲಿ, ಮೈಸೂರಂತಹ ಸಂಸ್ಥಾನವು ಸುಸ್ಥಿತಿಯಲ್ಲಿದ್ದುದು ಒಂದು ನಮ್ಮ ವೈಶಿಷ್ಟ್ಯವಾಗಿದೆ. ಆದರೂ ಇಂತಹ ದೊಡ್ಡ ವಿಭಾಗವು ಮುಂದುವರಿದ್ದು ಇಡಿಯ ಕರ್ನಾಟಕದ ಕಾರ್ಯದಲ್ಲಿ ಅದು ಹೇಗೆ ಮನಸ್ಸು ಮಾಡಿಲ್ಲ; ಮಾಡಿದ್ದುದೇ ಆದರೆ ಇಷ್ಟುಕಾಲದ ವರೆಗೂ ಅದಕ್ಕೆ ಯಶಸ್ಸು ದೊರೆಯಲಿಲ್ಲವೇಕೆ?— ಎಂಬುದೇ ನಮ್ಮೆಲ್ಲರ ಪ್ರಶ್ನೆಯಾಗಿದೆ!

ಈ ಪ್ರಶ್ನೆಗೆ ಉತ್ತರವನ್ನು ಹುಡುಕುವುದೆಂದರೆ, ಹಿಂದುಸ್ತಾನದಲ್ಲಿಯ ಸಂಸ್ಥಾನಗಳ ಸಮಸ್ಯೆಯನ್ನೆ ಅಭ್ಯಾಸ ಮಾಡಿದಂತೆ ಆಗುವುದು. ಕಾರಣಾಂತರದಿಂದ ನಮ್ಮ ಹಿಂದುಸ್ತಾನದಲ್ಲಿಯ ಉತ್ತರದ ಸಂಸ್ಥಾನಗಳಿಗೆ ತಮ್ಮಲ್ಲಿ ಒಳ್ಳೆಯ ಸ್ಥಿತಿಯನ್ನುಂಟುಮಾಡಿಕೊಳ್ಳಲಿಕ್ಕೆ ಆಗಿಲ್ಲ ಎಂಬಂತೆಯೆ ದಕ್ಷಿಣದ ಸಂಸ್ಥಾನಗಳಿಗೆ, ಎಷ್ಟೇ ಸಲ್ಲಗ್ನ ಸ್ಥಿತಿಯಲ್ಲಿದ್ದರೂ ಕೂಡ, ಹೊರಗಿನ ಭಾಗದ ಪರಿಸ್ಥಿತಿಯಲ್ಲಿ ಕೈ ಹಾಕಲು ಬರುವಂತೆಯಿಲ್ಲ....ಎಂಬ ಮಾತೂ ಒಪ್ಪತಕ್ಕಂತಹದು. ಅಂತೆಯೆ ಒಳಗೊಳಗೇ ತಮ್ಮ ಊರ್ಜಿತತೆಯ ಬಗೆಗಾಗಿ ಹೆಣಗಬೇಕೇ ಹೊರತು, ಅವರು ಆದಕ್ಕೂ ಹೆಚ್ಚಿನ ಕಾರ್ಯದಲ್ಲಿ ಕೂಡಲರಿಯರು.

ಈ ಕೊರತೆಯನ್ನು ಪೂಗಲಾಡಿಸಲಿಕ್ಕೆ; ಕರ್ನಾಟಕದ ಸಂಸ್ಥಾನಗಳ ಹೊರಗಿನ ಭಾಗಗಳಲ್ಲಿದ್ದ ಜನರು ಸಂಸ್ಥೆಗಳು ಮತ್ತು ಚಟುವಟಿಕೆಗಳು ತಮ್ಮ ಕಾರ್ಯಕ್ಷೇತ್ರವನ್ನು ಇಡಿಯ ಕನ್ನಡವನ್ನಿಟ್ಟುಕೊಂಡರೆ ಮಾತ್ರ ಸಾಧ್ಯವಾಗುವುದು. ಈ ಉದ್ದೇಶ ಸಾಧನೆಗಾಗಿ ಕನ್ನಡದ ಎಲ್ಲ ಸಂಸ್ಥೆಗಳನ್ನೂ ಒಟ್ಟುಗೂಡಿಸಿಕೊಂಡು, ಕನ್ನಡವ ಆಕಾಂಕ್ಷೆಗಳನ್ನೆಲ್ಲ ಈಡೇರಿಸಬಹುದಾದ ದೊಡ್ಡ ಶಕ್ತಿಯು ಒಂದು **ಕನ್ನಡ ಮಹಾಮಂಡಲ** ಎಂಬ ಸಂಸ್ಥೆಯುಂಟಾಗಬೇಕು.

ಈ ಮಹಾಮಂಡಲವು, ಈಗ ಅಖಿಲ ಕರ್ನಾಟಕ ಸಂಸ್ಥೆಗಳು ಎಂಬ ಎಲ್ಲ ಸಂಸ್ಥೆಗಳ ಕಾರ್ಯವನ್ನಿಷ್ಟೆ ಅಲ್ಲದೆ, ಹೊರನಾಡ ಕನ್ನಡಿಗರ ಸಂಸ್ಥೆಗಳ ಕಾರ್ಯವನ್ನು ಸಹ ಸುಗಮ (Coordinate) ಗೊಳಿಸಬೇಕು. ರಾಜಕೀಯ, ಸಾಂಸ್ಕೃತಿಕ ಎಂಬ ಭೇದಭಾವವನ್ನಾಗಲಿ, ತಾರತಮ್ಯವನ್ನಾಗಲಿ ಇಟ್ಟುಕೊಳ್ಳದೆ, ಅದು ಕರ್ನಾಟಕದ ಸರ್ವಾಂಗೀಣ ಉನ್ನತಿಗಾಗಿ ಹೆಣಗುವ ಎಲ್ಲ ಸಂಸ್ಥೆಗಳನ್ನೂ ಕೇಂದ್ರೀಕರಿಸಬೇಕು. ಅಷ್ಟೇ ಅಲ್ಲದೆ ತನ್ನ ಸ್ವಂತ ಹೊಣೆಯ ಮೇಲೆ ಇಡಿಯ ಪ್ರಾಂತಕ್ಕೆಲ್ಲ ಅನ್ವಯಿಸಬಹುದಾದ ಎಲ್ಲ ಬಗೆಯ ಚಳುವಳಿಯನ್ನು ಹೂಡಬೇಕು. ನಾವು ಕೇವಲ ಭಾಷೆಯ ಸೇವೆಯನ್ನು ಮಾಡುವೆವು; ನಾವು ಕೇವಲ ಸಾಂಸ್ಕೃತಿಕ ಕಾರ್ಯವನ್ನು ಕೈಕೊಳ್ಳ

ನೆವು ಎಂಬ ಮೋಸಗಾರಿಕೆಯ ಮಾತುಗಳನ್ನು ತೊರೆದು ಇಡೀನು ಜನತೆಯ ಲಕ್ಷ್ಯವನ್ನು ಎಳೆಯಬಹುದಾದಂತಹ ಸಂಸ್ಥೆ-ಇದಾಗ ಬೇಕು.

ಇನ್ನು ಪ್ರಚಲಿತ ಪರಿಸ್ಥಿತಿಯಲ್ಲಿ ಕನ್ನಡದ ಕೂಗು ತನ್ನ ಭಾಗ-ಗಳಲ್ಲದ ಮಿಕ್ಕ ಪ್ರಾಂತಗಳಲ್ಲಿ ಸಾಕಷ್ಟು ಎದ್ದು ಕೇಳುವುದಿಲ್ಲ. ಈ ಕೊರತೆಯನ್ನು ಹೋಗಲಾಡಿಸಲಿಕ್ಕೆ ಕರ್ನಾಟಕದ ಭಾಗಗಳಲ್ಲದ ಮೈಸೂರು, ಮುಂಬಯಿ, ಮದ್ರಾಸ, ಹೈದರಾಬಾದ, ಕೊಲ್ಲಾಪುರ (ಉತ್ತರ ಕರ್ನಾಟಕ ಸಂಸ್ಥಾನಗಳು) ಮತ್ತು ಕೇಂದ್ರ ಸರಕಾರದ ಸ್ಥಾನವಾದ ದಿಲ್ಲಿ ಇಂತಹ ಸ್ಥಳಗಳಲ್ಲಿಯಲ್ಲದೆ ಕರ್ನಾಟಕಕ್ಕೆ ಜೀವಾಳದ ಸ್ಥಾನಗಳೆನಿಸಬಹುದಾದ ಕಲ್ಕತ್ತೆ, ಕರಾಚಿ, ನಾಗಪುರ ಮುಂತಾದ ಊರುಗಳಲ್ಲಿ ಸಹ 'ಸಂಯುಕ್ತ ಕರ್ನಾಟಕ ಸಂಘಗಳು' ಎಂಬ ಸಂಸ್ಥೆಗಳು ಜನಿಸಿ, ಆ ಒಂದೊಂದು ಸಂಸ್ಥೆಯ ದೊಡ್ಡ ಬೆಂಬಲ ದಿಂದ ಕರ್ನಾಟಕದ ವಿಷಯವಾಗಿ ನಮ್ಮ ಜನರಲ್ಲಿ ಜಾಗ್ರತಿಯನ್ನು ಮಾಡುದಲ್ಲದೆ ಮಿಕ್ಕವರಿಗೆ ಎಚ್ಚರಿಕೆಯನ್ನು ಕೂಡುವ ಕಾರ್ಯವನ್ನೂ ವಹಿಸಿಕೊಳ್ಳಬೇಕು. ಈ ಉದ್ದೇಶಸಾಧನೆಗಾಗಿಯೆ ಹೊರನಾಡಿನಲ್ಲಿ ಇರುವ ಎಲ್ಲ ಕನ್ನಡಿಗರೂ ಒಂದೇ ಘೋರಣೆಯಿಂದ ಕರ್ತವ್ಯ-ಕಾರ್ಯ ಕ್ರಮಗಳನ್ನು ನೆರವೇರಿಸಲಿಕ್ಕೆ ನೆರವಾಗಲು, ಕನ್ನಡ ಮಹಾಮಂಡಲವು ಅಲ್ಲಲ್ಲಿಯ ಸಂಯುಕ್ತ ಕರ್ನಾಟಕ ಸಂಘಗಳ ಪರವಾಗಿ ಅಲ್ಲಲ್ಲಿ ಹೊರ ನಾಡ ಕನ್ನಡಿಗರ ಸಮ್ಮೇಳನಗಳನ್ನು ಏರ್ಪಡಿಸಬೇಕು. ಈ ಸಮ್ಮೇ-ಳನದ ಕಾರ್ಯವನ್ನೆ ಕನ್ನಡ ಮಹಾಮಂಡಲವು ತನ್ನ ಒಂದು ಅಂಗ-ವೆಂದು, ಶಾಖೆಯೆಂದು ಇಲ್ಲವೆ ವಿಭಾಗವೆಂದು ತಿಳಿದು ಜರುಗಿಸ-ಬಹುದು. ಈ ದೃಷ್ಟಿಯಿಂದ ನೋಡಲು ಇದೀಗ ಪುನರುಜ್ಜೀವನ-ಗೊಂಡು ಕಾರ್ಯತತ್ಪರವಾದ ಮುಂಬಯಿಯ ಸಂಯುಕ್ತ ಕರ್ನಾಟಕ ಸಂಘ ಹುತ್ತು ಇದೇ ತಾನೆ ಸ್ಥಾಪನೆಯಾಗಲಿರುವ ಕೊಲ್ಲಾಪುರದ ಸಂಯುಕ್ತಕರ್ನಾಟಕ ಸಂಘ, ಇವುಗಳ ಕಾರ್ಯವು ಕರ್ನಾಟಕಕ್ಕೆ ತುಂಬಾ ಸಹಾಯಕಾರಿಯಾಗಲಿಕ್ಕೆ ಸಾಕು. ಯಾಕೆಂದರೆ ಮುಂಬಯಿ ಕರ್ನಾಟಕದ ಜಿಲ್ಲೆಗಳು ಇರುವ ಕಾರಣಕ್ಕಾಗಿಯೂ, ಹಿಂದುಸ್ತಾನದ ಹೆಬ್ಬಾಗಿಲು ಎಂಬ ವಸ್ತುಸ್ಥಿತಿಗಾಗಿಯೂ ಮುಂಬಯಿಗೆ ಮತ್ತು ನಾಳೆ ಬರಬಹುದಾದ ಅಂತರ್ಧಾನ ಯೋಜನೆ (Merger Scheme)ಯ ಸಲುವಾಗಿ ಉತ್ತರ ಕರ್ನಾಟಕದ ಸಂಸ್ಥಾನಗಳಲ್ಲಿ ದೊಡ್ಡದಾದ ಕೊಲ್ಲಾಪುರಕ್ಕೆ ತುಂಬಾ ಹೊಣೆಗಾರಿಕೆಯು ಇರುವುದು ಎಂಬ ಮಾತು ಖಂಡಿತ.

ಅದರಂತೆಯೆ ಶೀಘ್ರದಲ್ಲಿಯೆ ಆಚರಣೆಯಲ್ಲಿ ಬರಬಹುದಾದ ಸಂಯುಕ್ತ ರಾಜ್ಯಘಟನೆಯ ಕಾಲಕ್ಕೆ ಇಲ್ಲವೆ ಹೊಸ ಘಟನೆಯನ್ನು ಗೊತ್ತುಮಾಡಿಕೊಳ್ಳುವ ಸಮಯಕ್ಕೆ ನಮ್ಮ ಸ್ಥಾನವನ್ನು ನಾವು ಪಡೆದುಕೊಂಡು, ನಮ್ಮ ಕರ್ತವ್ಯವನ್ನು ನಾವು ಈಡೇರಿಸಿಕೊಳ್ಳಲು ಸಾಕಷ್ಟು ಯೋಗ್ಯತೆಯನ್ನೂ ತಕ್ಕ ಸ್ಥಾನವನ್ನೂ ದೊರೆಕಿಸಿಕೊಳ್ಳು ವುದಕ್ಕಾಗಿ, ಕರ್ನಾಟಕದಿಂದ ಬಹು ದೂರ ಇದ್ದ ಹಿಂದುಸ್ತಾನದ ಕೇಂದ್ರವಾದ ದಿಲ್ಲಿಯಲ್ಲಿ ನಾವು ಸಾಕಷ್ಟು ಯತ್ನ ಮಾಡಬೇಕು. ಅಲ್ಲಿಯ ಕನ್ನಡಿಗರು ಕರ್ನಾಟಕದ ಪತಾಕೆಯನ್ನು ಕೇಂದ್ರದಲ್ಲಿ ಹಾರಾಡಿಸುವ ಸಾಮರ್ಥ್ಯವುಳ್ಳವರಾಗಬೇಕು. ಅವರ ಸ್ಥಾನ ದೊಡ್ಡದು; ಅವರ ಹೊಣೆ ಹಿರಿಯದು; ಅವರ ಕಾರ್ಯವೂ ದೊಡ್ಡ-ದಾಗಬೇಕು.

ಇದೆಲ್ಲ ಕಾರ್ಯದಲ್ಲಿ ನಾವು ಒಂದು ವಿಷಯವನ್ನು ಮರೆತು ನಡೆಯುವಂತಿಲ್ಲ; ಅಲ್ಲಿಯವರೆಗೆ ನಮ್ಮ ಕಾರ್ಯವು ಕುಂಟುತ್ತ ನಡೆದಂತೆಯೆ ಸೈ. ಕನ್ನಡದ ದನಿ, ಕನ್ನಡಿಗರ ಕೂಗು, ಮೊದಲು ಹೊಳಲುಗಳಲ್ಲಿ ಕೇಳಬರುತ್ತಿದ್ದರೂ ಅದು ಹಳ್ಳಿಹಳ್ಳಿಯಲ್ಲಿಯೂ ಪ್ರತಿಧ್ವನಿತವಾಗಬೇಕು. ಎಲ್ಲೆಲ್ಲಿಯೂ ಡಂಗುರ ಸಾರಿದಂತೆ ಕೇಳ ಬೇಕು ಕನ್ನಡದ ನುಡಿ; ಕನ್ನಡಿಗರ ಸೊಲ್ಲು. ಬುಡದಿಂದ ಬಾರದ ಕೆಲಸವು ಮುಗಿಲಲ್ಲಿ ಮುಂದಿರವನ್ನು ಕಟ್ಟಲೆಳಸಿದಂತೆ, ಈ ವಿಚಾರ-ದಿಂದ ಆಳದು ನೋಡಲಾಗಿ ಮೊನ್ನೆಯ ಏಕೀಕರಣ ಪರಿಷತ್ತಿನಲ್ಲಿ ಸ್ವೀಕೃತವಾದ ಸದಸ್ಯತ್ವವನ್ನು ನಾಲ್ಕಾಣೆಗೆ ಇಳಿಸಿ, ಹಳ್ಳಿ-ಹಳ್ಳಿಗಳಲ್ಲಿ ಪ್ರಚಾರ ಮಾಡಬೇಕೆಂದು ನಿಶ್ಚಯಿಸಿದ ಒಂದು ಗೊತ್ತು ವಳಯು ಬಹಳೇ ಮಹತ್ತ್ವದ್ದಾಗಿದೆ ಎಂದು ಧಾರಾಳವಾಗಿ ಹೇಳಬಹುದು.

ಇನ್ನು ಕೊನೆಯದಾಗಿ ಕರ್ನಾಟಕದ ಸಾರ್ವಜನಿಕ ಸಂಸ್ಥೆ-ಗಳಲ್ಲಿ ಇನ್ನೂ ಪರೆಗೆ ಮೂಡದೆ ಇದ್ದ ಕಾರ್ಯಪರಂಪರೆಯು ಇನ್ನು ಮೂಡಬೇಕಾದರೆ ಕಾರ್ಯವೀರರು ಆರಂಭಶೂರರಾಗಬಾರದು, ಲಕ್ಷ್ಮೀ-ಸರಸ್ವತಿಯ ಮುಲಮಕ್ಕಳಾಗಿರಕೂಡದು; ಎಂದರೆ ಹುರುಪಿನ ಹರಯದವರಿಗೆ ಕೆಲಸ ಮಾಡಲು ಅವಕಾಶ, ಅನುಭವ ಹಾಗೂ ಸ್ಫೂರ್ತಿಗಳು ದೊರೆಯಬಹುದು; ಆದರಿಂದ ಕರ್ನಾಟಕದ ಕಾರ್ಯವೂ ಅಸಿರುದ್ಧವಾಗಿ ಸಾಗಬಹುದು.

ಶೇಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಕಕ್ತತೆಯ ಮೇಲೆ ರಾಮಬಾಣ! ಲಿವರ್ ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ. ಕ್ವಿನ್ಯಾನ್ ಬದಲು ವೈದ್ಯ–ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧–೧೬–೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪರಾವ) ಧಾಕಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ದೀವಳಿಗೆ ಬಂತು!

ಶ್ರೀ. ಬಿ. ಎಚ್. ಶ್ರೀಧರ, ಎಂ. ಎ. ಭಟಕಳ

೧

ದೀವಳಿಗೆ ಬಂತು, ದೀಪಗಳ ತಂದಿತೋ
ಮನೆಗೆ ಮನೆಗೆ ಎಲ್ಲ;
ಜೀವಿಗಳ ಭಾವನೆಗೆ ಬೆಳಕು ಬಿದ್ದಿತೋ
ಮನಕೆ ಮುಚ್ಚಳೆಲ್ಲ!
ಅಳರಸರಿಟ್ಟ ವ್ಯಾಪಾರಿವೈಷ್ಣಿ ಬಯ-
ಲಾಗಿ ಬಿಟ್ಟಿತಲ್ಲ—
ಕಾಳಜಕೆ ಅಡಗಲಿಡೆಯಿಲ್ಲ, ಬೆಳಕು ಬೆಳ-
ಕೆಡಕೆ ಬಲಕೆ ಎಲ್ಲ!

೨

ಲಕ್ಷೋಪಲಕ್ಷ ಸತ್ಯಪ್ರದೀಪಗಳ
ಪ್ರಖರ ಕಿರಣದಲ್ಲಿ
ಪಕ್ಷೋಪಜೀವಿಗಳ ಪಶುಮನೀಷೆ ತಲೆ-
ಮರೆಸಿಕೊಳ್ಳಲ್ಲಿ?
ಜನಹರರಜಯ್ಯ ವಾಕ್ಕೈಲಫಾರೆಯಿಂ-
ದುರಿವ ನಾಡಿನೊಲುಮೆ
ಜಪನಿಗೂ ಜಗ್ಗದುಜ್ವಲಿಸುತಿರಲು ಮ-
ತ್ತಾರದಿಲ್ಲಿ ಬಲುಮೆ?

೩

ದೀಪಾವಳಿಯಲಿ ಕನ್ನಡವ ಬಯಕೆ ಪ-
ಣ್ಣಾಗಿ ಬರಲಿ ಪೂರ;
ಪ್ರಾಂತತ್ವಸಿದ್ಧಿಸಲಿ, ಪರರ ಹಾವಳಿಗೆ
ಬರಲಿ ಅಂಧಕಾರ!
ಆ ಪ್ರೀತಿಯೆಂಬ ಬಾಳ್ವನೆಯ ಜ್ಯೋತಿ ಮೂ-
ರಕ್ಷ ಆತ್ಮಗಳನು-
ಕಾಣಿಸಲಿ ಒಂದಕೊಂದನ್ನು ಪತ್ರಿಕಾ-
ಪ್ರಣತಿ ರಸಿಕರನ್ನು!

× × ×

ದೀವಳಿಗೆ ಬಂತು, ದೀಪಗಳ ತಂದಿತೋ
ಮನೆಗೆ ಮನೆಗೆ ಎಲ್ಲಾ....
ಜೀವಿಗಳ ಭಾವನೆಗೆ ಬೆಳಕು ಬಿದ್ದಿತೋ
ಮನಕೆ ಮುಚ್ಚಳಿಲ್ಲಾ!

ಕನ್ನಡ ಮೆರೆಯಲಿ!

ಜನಾಬ್ ಬಿ. ಎಂ. ಇದಿನಬ್ಬ, ಮಂಗಳೂರು

೧

ಕನ್ನಡ ಮೆರೆಯುವ ಕಾಲವು ಬರಲಿದೆ
ನೋಡಿ ಭವಿಷ್ಯತ್ತು;
ಕನ್ನಡ ಉನ್ನತ ಪದದಲಿ ನಿಲಲಿದೆ....
ನಿಮುಗಿದೆ ದವಲತ್ತು!

೨

ಕನ್ನಡವಲ್ಲದೆ ಉಳಿದುದು ಎಲ್ಲಾ
ಅನ್ಯರ ಅನುಕರಣೆ;
ಜಿನ್ನಾಗಿರುವೀ ಕನ್ನಡ ಬೆಳೆಯಲಿ,
ಒದಗಿಸಿ ಸಲಕರಣೆ!

೩

ಕನ್ನಡ ನಾಡಿನ ಕನ್ನಡ ಜನರಿಗೆ
ಕನ್ನಡ ಹಿರಿಬದುಕು—
ಹೊರಗಿನದೆಲ್ಲವ ತೊರೆಯಲೆ ಬೇಕು
ಹಿಡಿದರೆ ಬಲು ಕಡುಕು!

೪

ಗುಲಾಮಗಿರಿಯನು ಬೆಳೆಸುತಲಿರುವುದು
ಪರದೇಶದ ಭಾಷೆ....
ಸಲಾಮು ಹೊಡಿಸುತ ತಿಣುಕಿಸುತಿರುವುದು,
ನೀಗಿರಿ ಜದಂತೆ!

೫

ಚಿನ್ನದ ಕತ್ತಿಯು ಅನ್ಯರ ಭಾಷೆ—
ಕರುಣೆಯ ತೋರಿತೆ?
ಕನ್ನಡ ಮಾತೆಯ ಕಣ್ಣಿದೆಗಳನದು
ಇರಿಯದೆ ಬಿಟ್ಟೀತೆ?

೬

ಕನ್ನಡ ನಾಡಿನ ಜನ ಸಮುದಾಯವೆ
ಏಳಿರಿ ಒಂದಾಗಿ....
ಹುಲಿಗಳ ತೆರದಲಿ ಗರ್ಜಿಸಿ ಗರ್ಜಿಸಿ
ಬನ್ನಿರಿ ಮುಂದಾಗಿ!

೭

ಕನ್ನಡನೆಂಬುದು ಮುಕುಟದ ಮಣಿಯಿದು
ಬೆಳಗುತ ಬರಬೇಕು;
ಉಳಿದುದು ಎಲ್ಲವು ಆಮೇಲೆನ್ನುವ
ಬುದ್ಧಿಯು ಇರಬೇಕು!

ತಿಮ್ಮಣ್ಣನ ಪ್ರಣಯ ಪುರಾಣ

(ಸಣ್ಣ ಕತೆ)

ಶೀ. ಬೇಂದ್ರೆ ಅಕ್ಷ್ಮಣರಾಯರು, ಧಾರವಾಡ

ಒಮ್ಮೆ ನನಗೊಂದು ಪ್ರಣಯಪತ್ರ ದೊರೆಯಿತು! 'ಪ್ರಣಯ ಪತ್ರ' ಎಂದೊಡನೆ ಎಷ್ಟೋ ಮಾತು ಕಣ್ಣ ಮುಂದೆ ನಿಲ್ಲುತ್ತವೆ ಪ್ರಣಯ ಪತ್ರ—ಬೇರೆಯವರ ಪ್ರಣಯ ಪತ್ರ—ಹೀಗೆಂದೂ ದೊರೆಯುತ್ತಿರುವುದಿಲ್ಲ. ಕರ್ಮ-ಧರ್ಮ ಸಂಯೋಗ; ನನಗೇನೊ ದೊರೆಯಿತು. ಯಾರೇನು ಅರಿಯರೆ - ಪ್ರಣಯ ಪತ್ರ ಎಂದರೆ ಅದೊಂದು ಸವಿಯೂದ ರಹಸ್ಯ ಎಂಬುದನ್ನು? ಅದರ ಸ್ವಾರಸ್ಯವನ್ನ ಅದನ್ನನುಭವಿಸಿದವರನ್ನೇ ಕೇಳಬೇಕು. ಆ ವಿಷಯವನ್ನು ಹೇಳಿದರೆ ಎಂಥ ವಿರಾಗಿಯೂ ಕುತೂಹಲಿಯಾಗಿ ಕೇಳುವನು. ದೀಪಾವಳಿ ಒಂದಾಗಲೆಲ್ಲ ನನಗೆ ಅದರ ನೆನಪಾಗುತ್ತದೆ. ಆ ನೆನಪನ್ನು ಕೇವಲ ನನ್ನ ಆತ್ಮೀಯರಾದ ನಿಮಗೆ ಮನಬಿಚ್ಚಿ ಇಂದು ಹೇಳಬೇಕೆಂದಿದ್ದೇನೆ. ಜೋಕೆ, ನೀವು ಅದನ್ನು ಯಾರಿಗೂ ಉಸುರಬೇಡಿ! ಕಂಡಪರಿಗೆಲ್ಲ ಹೇಳುವ ವಿಷಯವಲ್ಲ ಅದು.

ಒಮ್ಮೆ ಹೀಗಾಯಿತು:

ನಾವು ಆ ಮನೆಗೆ ಅದೇ ಹೊಸತಾಗಿ ಬಾಡಿಗೆಗೆ ಬಂದೆವು. ಮೊದಲಿಗಿರುವವರು ಅದನ್ನು ತೆರವು ಮಾಡಿದ ಗಳಿಗೆಗೇ ನಾವು ಆ ಮನೆಯಲ್ಲಿ ಕಾಲಿಟ್ಟೆವು ಅವರ ಸಾಮಾನು ಗಾಡಿಯನ್ನೇರಿತು; ನಮ್ಮದು ಗಾಡಿಯಿಂದಿಳಿಯಿತು.

ನನ್ನ ಹೆಂಡತಿ ತೀರ ಕೈಲಾಗದವಳು. ಗಾಲ್ದು ಮುಕ್ಕಳೆಂದರೆ ನನಗೇನೇನೂ ಎನಿಸುವುದಿಲ್ಲ; ಆದರೆ ಅವಳಿಗೆ ಹೊಟ್ಟೆಯಲ್ಲಿದ್ದ ಬಂದು ಕೂಸು ಕೂಡ ಭಾರ ಎನಿಸುತ್ತವೆ! ಅವಳಿಗೆ ಅಷ್ಟೇ ನೆವ ಸಾಕಾಗಿತ್ತು. ಬಂದವಳೆ ಕಸದ ಮೇಲೆಯೆ ಜಮಖಾನೆಯನ್ನು ಒಗೆಮ ಉರುಳಿಕೊಂಡಳು. ನಾನು ಮಾತ್ರ ಏಕಚಕ್ರಾಧಿಪತಿಯಾಗಿ, ಮನೆಯನ್ನು ಓರಣವಾಗಿರಿಸಲು ಹೋರಾಟಗಾರನಾಗಿ ನಿಂತೆ! 'ಮೊದಲು, ಮಲಗುವ ಕೋಣೆಯನ್ನೇ ಸಜ್ಜುಗೊಳಿಸುವುದು' ಎಂದು ನಿರ್ಧರಿಸಿದೆ. ಒಳಗೆ ಕಾಲಿಟ್ಟ ಕೂಡಲೆ ಗೋಡೆಯಲ್ಲಿರಿಸಿದ ಒಂದು ದೊಡ್ಡ ಕಪಾಟು ಕಣ್ಣಿಗೆ ಬಿದ್ದಿತು ಮಹತ್ತ್ವದ ಕಾಗದ ಪತ್ರಗಳನ್ನೂ ಬೆಲೆಯುಳ್ಳ ಒಡವೆಗಳನ್ನೂ ಇಡಲು ಅದು ತಕ್ಕದ್ದೆಂದೆಣಿಸಿ, ಅದನ್ನು ತೆರೆದು ದೂಳವನ್ನು ಜಾಡಿಸಹತ್ತಿದೆ. ಇಲಿಯ ಬೊಕ್ಕೆಯೊಂದು ಕಂಡಿತು. ಅವನ್ನು ಮುಚ್ಚದೆ ಯಾವುದೇ ವಸ್ತುವನ್ನು ಇಡುವುದು ಹೇಗೆ? ಅದು ಎಷ್ಟು ದೊಡ್ಡದಿದೆಯೊ ನೋಡೋಣ ಎಂದು, ಅಂಜಂಜುತ್ತ ಮೆಲ್ಲಗೆ ಕೈ ತೂರಿಸಿದೆ ಕಾಗದದಂಥದೇನೋ ಒಂದು ಕೈಗೆ ತಾಕಿತು ಹಿಡಿದೆಳೆದೆ; ಒಂದು ಲಕ್ಕೋಟೆ! ತುಸು ದಪ್ಪನಾಗಿಯೇ ಇತ್ತು. ಈಚೆ-ಪಾತೆಯ ಕರಡು ಕಾಗದದ ಅಸಡ್ಡಾಳ ಲಕ್ಕೋಟೆಯಲ್ಲ. ಅಂದವಾದ ಬಣ್ಣದ ಸುಂದರ ಲಕ್ಕೋಟೆ. ಅದಕ್ಕೆ ಬರುತ್ತಿರುವ ಸುಗಂಧ ನನ್ನ ಮನಸ್ಸನ್ನು ಉಲ್ಲಾಸಗೊಳಿಸಿತು. ಕುತೂಹಲ ತಡೆಯಲಿದರಲ್ಲಿರುವ ಕಾಗದವನ್ನು ಹೊರತೆಗೆದು ನೋಡಿದೆ—ಎರಡು ಪ್ರಣಯ ಪತ್ರಗಳು! ಪ್ರಿಯತಮನೂ ಪ್ರಿಯತಮೆಯೂ ಪರಸ್ಪರರಿಗೆ ಬರೆದುವು!

ಯಾವಾಗಲೂ ಇಂಥ ಸಮಯಕ್ಕೆ ವಿಘ್ನ ಎಂಬುದು ಕಟ್ಟಿಟ್ಟದ್ದೇ! ತನ್ನ ಕುಂಕುಮ ಪೆಟ್ಟಿಗೆ ಬಂತೆ?—ಎಂದು ಕೂಗಿದಳು ನಮ್ಮಾಕೆ! ಇನ್ನು ಬಂದೇ ಬಿಡುತ್ತಾಳಲ್ಲಾ ಎಂದು ಹೇಗೋ ಅವನ್ನು ಮಡಿಸಿ ಲಕ್ಕೋಟೆಯನ್ನು ನಡುವಿನಲ್ಲಿ ಸಿಕ್ಕಿಸಿದೆ! ಮುಂದೆ ಸುಮಾರು ಮೂರು ಗಂಟೆ ನಮ್ಮಾಕೆ ನನ್ನ ಬೆನ್ನು ಬಿಡಲಿಲ್ಲ. ಅವಳ ಕೈಯಿಂದ ಬೇಗನೆ ಪಾರಾಗಬೇಕೆಂದು ನಾನು; ಮನೆಯನ್ನು ಆಣಿಗೊಳಿಸಿದ ಮೇಲೆಯೆ ನನ್ನ ಕೈಬಿಡಬೇಕೆಂದು ಅವಳು!

ರಾತ್ರಿ ಊಟವಾದ ಮೇಲೆ, ತಾಯಿ-ಮಕ್ಕಳು ಒಮ್ಮೆ ನಿದ್ದೆ ಹೋದರು. ನನಗೆಲ್ಲಿಯ ನಿದ್ದೆ? ಇವಳನ್ನು ತಪ್ಪಿಸಿ ಪತ್ರಗಳನ್ನು ಓದಬೇಕೆಂದು ನಾನು ಕಾದಿದ್ದೆ. ಕೊನೆಗೊಮ್ಮೆ ಆ ಒಳ್ಳೆಯ ಗಳಿಗೆ ಒದಗಿತು. ನಾನು ಹಾಸಿಗೆಯ ಮೇಲೊರಗಿಕೊಂಡೇ ಲಕ್ಕೋಟೆಯಿಂದ ಸಪ್ಪಳ ಮಾಡದೆ—ಆ ಪತ್ರಗಳನ್ನು ಹೊರತೆಗೆದು ಓದಲು ಮೊದಲು ಮಾಡಿದೆ. ಅವೆರಡನ್ನೂ ಚಂದ್ದಂತೆ ಕೊಟ್ಟಿದ್ದೇನೆ:

"ನನ್ನ ಮೋಹನ ಮೂರ್ತಿಯೆ,

ಈಗೆರಡು ದಿನಗಳಿಂದ ನೀನು ನನ್ನೊಡನೆ ಸಲುಗೆಯನ್ನು ನಿಲ್ಲಿಸಿರುವೆ. ನನ್ನಿಂದೇನಾದರೂ ತಪ್ಪಾಯಿತೆ? ನಾವು ಈ ಮನೆಗೆ ಬಂದಂದಿನಿಂದ ಕೂಡಿದವರು, ಒಂದು ದಿನವೂ ಅಗಲಿರಲಿಲ್ಲ. ಎರಡು ದಿನದ ಈ ನಿನ್ನ ಮುನಿಸು ನನಗೆ ಮರಣಪ್ರಾಯ ದುಃಖವನ್ನು ಕೊಟ್ಟಿದೆ. ನಾನು ಈ ಎರಡು ದಿನಗಳನ್ನು ಬರಿ ಹಿಂದಿನ ನಮ್ಮ ಒಡನಾಟದ ಸವಿನೆನಪುಗಳಲ್ಲಿಯೆ ಕಳೆದಿದ್ದೇನೆ. ನಾನು ಆದೇ ಹೊಸತಾಗಿ ಬಂದಾಗ, ನಿನ್ನನ್ನು ನೋಡಿ ನನಗೆ ಪ್ರೀತಿಯೆ ಎನಿಸಲಿಲ್ಲ. ತುಸು ಗಾಬರಿಯೂ ಆಯಿತು. ಆದರೆ ಬರು-ಬರುತ್ತ ನಿನ್ನ ಸಹವಾಸವು ನನಗೆ ಬೇಕೆನಿಸಿತು ಯಾರೂ ಇಲ್ಲದಾಗ, ನಿನಗೆ ಕಾಣುವ ಹಾಗೆ ದೂರ ನಿಂತೇ ನಾನು ಜಿನ್ನಾಟ ನಡೆಸುತ್ತಿದ್ದೆ. ನೀನು ನಿನ್ನ ಮುಂಗಚೇಷ್ಟೆಗಳನ್ನು ಮೈಮರೆತು ನನಗೆ ತೋರಿಸುತ್ತಿದ್ದೆ. ಆದರೂ ನಾನು ನಿನ್ನ ಹತ್ತಿರ ಬಂದಿರಲಿಲ್ಲ. ಮುಂದೆ ಒಂದು ದಿನ ನಾವಿಬ್ಬರೂ ಹತ್ತಿರ-ಹತ್ತಿರ ಕುಳಿತಿದ್ದೆವು. ಯಾರೂ ಇಲ್ಲದ್ದನ್ನು ನೋಡಿ ನೀನು ನಿನ್ನ ಕೈ ಮುಂಪೆ ಚಾಚಿದೆ; ನಾನು ಅದನ್ನು ಮುತ್ತಿಟ್ಟೆ. ಹಾಗೆ ಮಾಡುವಾಗ ನನಗೆ ಎಚ್ಚರವೆ ಉಳಯಲಿಲ್ಲ. ಸರಿ, ಅಂದಿನಿಂದಲೇ ನಮ್ಮ ಪ್ರೇಮಕ್ಕೆ ಮೊದಲಾಯಿತು. ಮೊದಲ ಸಲ ನಿನ್ನ ಅಂಗಸ್ಪರ್ಶನಾದಾಗ, ನಿನ್ನ ಮೈ ಅದಷ್ಟು ಮೃದು, ನಿನ್ನ ಕೂದಲು ಅದೆಷ್ಟು ನಯ

ನಿನ್ನ ಚಾಪಲ್ಯ, ನಿನ್ನ ಅಂಗಸೌಷ್ಠವ, ನಿನ್ನ ಚೆಂಬಣ್ಣ, ನನ್ನನ್ನು ಮುಗ್ಧಗೊಳಿಸಿದುವು. ನಿನ್ನ ನೇಲಿರುವಷ್ಟು ಸ್ತ್ರೀತಿ ನನಗೆ ಯಾರ ಮೇಲೂ ಇಲ್ಲ. ಇದು ವಂಚನೆ ಎಂದು ನೀನು ಎನ್ನಬಹುದು: ಆದರೆ ನನ್ನ ಹೃದಯ ನನ್ನ ಸ್ವಾಧೀನದಲ್ಲಿ ಈಗ ಉಳಿದಿಲ್ಲ. ಅದನ್ನೂ ನಿನಗೇ ಧಾರೆ ಎರೆದಿದ್ದೇನೆ. ನಾನು ಬಾಮಿಂದ ತಾರು ಹಗುರು. ನನ್ನದೆಲ್ಲ ತೋರಿಕೆಯ ಸಿಟ್ಟು. ನೀನು ಅವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಪುನಃ ನನ್ನಲ್ಲಿ ಅನುರಾಗವನ್ನು ತೋರು! ನೀನು ಏಗೆ ನನ್ನ ಸಂಬಂಧ ಬಿಟ್ಟು ಮುನಿಸನ್ನೇ ತಳೆದರೆ ನಾನು ಮೇಘಾತರೆ ಓಡಿಹೋಗುವೆ. ಇಲ್ಲಸೆ ಸ್ತ್ರಾಣಕ್ಕೇನಾದರೂ ಮಾಡಿಕೊಂಡು ಬಿಡುವೆ. ನೀನು ಕೆರಳಿದಾಗಿನಿಂದ ನಾನು ಬೂಟಿನನ್ನೇ ನಿಟ್ಟಿಸಿದೆನೆ. ನನ್ನ ತಪ್ಪೇನಾದರೂ ಇದ್ದರೆ ಕ್ಷಮಿಸಿ, ನನ್ನನ್ನು ಮತ್ತೆ ಪಕ್ಕದಲ್ಲಿ ಕರೆದುಕೊ! ಹೆಚ್ಚು ನಾನು ಬರೆಯಲಾರೆ. ಅವರು ಬರುವ ಕಾಲವಾಯಿತು. ಈಗಲೇ ಇಷ್ಟಕ್ಕೆ ಮುಗಿಸುತ್ತೇನೆ.

ಎಂದಿಗೂ ನಿನ್ನವಳೇ ಆದ.

× ಯು

ಇನ್ನೊಂದು ಅವನು ಅವಳಿಗೆ ಬರೆದದ್ದು ಹೀಗೆಂದು ಇತ್ತು:

"ನನ್ನ ಚಿನ್ನಾ.

ನೀನು ನಿನ್ನ ಹೃನ್ಮಲಿಕವನ್ನು ಬಲವಂತ ತಳಿಸಿದೆ. ನನ್ನಲ್ಲಿ ಕ್ಷಮಾಯಾಚನೆ ಮಾಡಿದೆ. ನೀನು ಕ್ಷಮೆ ಕೇಳದಿದ್ದರೂ ಆಷ್ಟೇ, ಕೇಳಿದ್ದರೂ ಆಷ್ಟೇ. ನನ್ನ ಮನಸ್ಸು ಈಗ ಬೇರೆಯಾಗಿದೆ. ನಿನ್ನನ್ನು ನಾನು ಮೊದ-ಮೊದಲು ಸ್ತ್ರೀತಿಸಿದ್ದೇನೋ ನಿಜ; ಆದರೆ ಆ ಸ್ತ್ರೀತಿ ಅಸ್ವಾಭಾವಿಕವಾದದ್ದೆಂದು ನನ್ನ ಮನಸಾಕ್ಷಿದಾಯಿತು. ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳು ಒಂದನ್ನೊಂದು ಸ್ತ್ರೀತಿಸಬೇಕೆಂಬ ತತ್ತ್ವವಾಚಿಗೆ ನಾವು ಪರಸ್ಪರರು ಹೋಗಲಾರೆವು. ಯಾಕೆಂದರೆ ನೀನೊಂದು ಜಾತಿ; ನಾನೊಂದು ಜಾತಿ. ನಮ್ಮಲ್ಲಿ ಕರೀರನಂಥ ಇಣುಚಿತ. ಭೂಮಜ್ಞನೈ ನೀನು ಒಬ್ಬರನ್ನು ಆಶ್ರಯಿಸಿಯೇ ಇರಬೇಕು. ನಾನೋ ಸ್ವತಂತ್ರನು. ಇಂದು ಇಲ್ಲಿ, ನಾಳೆ ಇನ್ನೊಂದೂರಿಗೆ. ರಾತ್ರಿ ಹಿದ್ದಿಗೆ ಒಂದು ವಸತಿ ಸಿಕ್ಕರೆ ನನ್ನ ಕೆಲಸ ನಡೆಯಿತು. ನಾನು ಯಾವಾಗಲೂ ಬಂಧನವನ್ನು ಮೀರಿ ಇರಬಯಸುವವನು. ನೀನೊ, ಒಬ್ಬನ ಆಧೀನಳು; ಅವನನ್ನೇ ನಂಬಿ ಇರುವವಳು. ನಿನಗೂ ನನಗೂ ಹೊಂದಿಕೆಯಾಗದು. ನಿನ್ನೊಡನೆ ನಾನು ಇಷ್ಟುವರೆಗೆ ಮಂಗನಂತೆ ನಡೆದುಕೊಂಡೆ. ನಿನ್ನ ರೂಪಕ್ಕೆ ಮನಸೋತು ನನ್ನ ಬುದ್ಧಿಯನ್ನೇ ಕಳೆದುಕೊಂಡೆ. ಇತ್ತು—ನಿನ್ನ ಚಿನ್ನಾಟದಲ್ಲಿ, ನಿನ್ನ ನಗೆಯಾಟ-ಒಕನಾಟದಲ್ಲಿ ಅಂಧಡೊಂದು ನಾದಕತೆಯಿತ್ತು. ಆದರೆ 'ಏನಿದ್ದೇನು ಫಲ? ಎಲ್ಲವೂ ವ್ಯರ್ಥ' ಎಂದು ಅನುಭವಕ್ಕೆ ಬಂದಾಗ ನಾನೆಂಥ ತಪ್ಪು ಮಾಡಿದೆ ಎಂದು ಪರಿತಾಪನಾಗುತ್ತದೆ. ನೀನು ಇರುವಲ್ಲಿಯೆ ಸುಖವಾಗಿರು. ನಾನು ಮಾತ್ರ ಇನ್ನು ಇಲ್ಲಿರಲಾರೆ. ಇದೊ ಹೊರಟೆ!

ಪ್ರೇಮಿಸಿದರೂ ಕಾಮಿಸದ

ನಿನ್ನ ಒಡನಾಡಿ

× ತಿ.

ಎರಡು ಪತ್ರಗಳನ್ನೂ ಒಂದು ಸಲ, ಎರಡು ಸಲ, ಮೂರು ಸಲ ಓದಿದೆ. ಮಡಿಸಿ ಅವನ್ನು ಲಕೋಟೆಯಲ್ಲಿರಿಸಿದೆ. ತರುವಾಯ ಆ ಲಕೋಟೆಯನ್ನು ಯಾರ ಕೈಗೂ ಬೀಳದಂಥ ಒಂದು ಜಾಗೆಯಲ್ಲಿರಿಸಿ, ಹಾಸಿಗೆಯ ಮೇಲೊರಗಿದೆ. ಚಿತ್ತ ಉದ್ರೇಕಾವಸ್ಥೆಯಲ್ಲಿತ್ತು. ನಿದ್ರೆ ಬರಲಿಲ್ಲ. ಪತ್ರದಲ್ಲಿಯ ಹೆಣ್ಣನ್ನು ಕಲ್ಪನೆಯ ಬಣ್ಣದಲ್ಲಿ ಚಿತ್ರಿಸಿ, ಅವಳಿಗಾಗಿ ಕತ್ತಂತಸ್ತಿನ ಒಂದು ಮಹಲನ್ನೇ ನಿರ್ಮಿಸಿದೆ. ಮನಸ್ಸು ಎಲ್ಲೆ ಕಟ್ಟು, ಇಲ್ಲದೆ ಅದರಲ್ಲಿ ಅಲೆಯುತ್ತಿತ್ತು, ಕನಸನ್ನು ಕಾಣುತ್ತಿತ್ತು; ಅದರ ನನಸಿಗಾಗಿ ಹಂಬಲಿಸುತ್ತಿತ್ತು. ಆ ಹಂಬಲದ ಹುಚ್ಚುಹೊಳೆಯಲ್ಲಿ ನಾನು ಮುಳು-ಮುಳುಗಿ ಏಳುತ್ತಿದ್ದೆ!

× × × ×

ಎರಡು ದಿನ ಕಳೆದುವು. ಹೆಂಡತಿ ತನ್ನ ತಂಡನ್ನು ಕಟ್ಟಿಕೊಂಡು ಸಿನೇಮಾಕ್ಕೆ ಹೋಗಿದ್ದಳು. ನಾನು ಒಬ್ಬನೆ ಸುಖಾಸನದಲ್ಲಿ ಪವಡಿಸಿ ಪತ್ರದಲ್ಲಿಯ ಮಾತನ್ನೇ ನೆನೆಯುತ್ತ ಪರವಶನಾಗಿದ್ದೆ: 'ಮೂಡಿ-ಕೊಂಡವನಲ್ಲಿ ಪ್ರೀತಿ ಇರಲಿಲ್ಲ ಎಂದು ಇನ್ನೊಬ್ಬನನ್ನು ಪ್ರೀತಿಸಿದಳು; ಪ್ರೀತಿಸಂಬಂಧದಲ್ಲಿ ಜಾತಿ ಒಂದಲ್ಲವೆಂದು ನೀತಿ ಬೋಧಿಸುವನ ಅವನೆಂಥ ಮೂರ್ಖ! ಅವನೆಂಥ ಹೇಡಿ! ಛೀ, ಅಕೆಯನ್ನು ಎಂಥ ನಿರಾಕೆಗೆ ಗುರಿಮಾಡಿದ....!' ಇಂಥ ಹಲವೊಂದು ವಿಲೋಚನೆಗಳು ಒಂದರ ಹಿಂದೊಂದು ತೆರೆತೆರೆಯಾಗಿ ಬರುತ್ತಿದ್ದುವು.

ಅದೇ ಹೊತ್ತಿಗೆ ಯಾರೋ ಬಾಗಿಲನ್ನು ತಟ್ಟಿದ ಸದ್ದಾಯಿತು. ಎದ್ದುಹೋಗಿ ಬಾಗಿಲನ್ನು ತೆರೆದೆ; ಎದುರಿಗೆ ಒಬ್ಬ ನಡುಹರಯದ ಹೆಂಗುಸು ಛಾವಿಯಿಂದ ನಿಂತಿದ್ದಳು.

"ಯಾರು ಬೇಕಿತ್ತು?" ಕೇಳಿದೆ.

"ಒಂದು ಸಂಗತಿ ಕೇಳಬೇಕಿತ್ತು" ಎಂದಳಾಕೆ.

"ಬನ್ರಿ. ಇಲ್ಲಿ ಕೂತುಕೊಳ್ಳಬಹುದು." ನಾನು ಒಂದು ಆಸನವನ್ನು ತೋರಿಸಿದೆ.

ಅವಳು ಕೊಡೆಯನ್ನು ಕೆಳಗಿಳಿಸಿ, ಒಳಕ್ಕೆ ಬಂದು, ಅಚ್ಚುಕಟ್ಟಿತನದಿಂದ ಕುಳಿತಳು. ಮೊದಲ ನೋಟಕ್ಕೇ ಅವಳ ರೂಪು ನನ್ನ ಮನಸ್ಸನ್ನು ಶುಂಬಿತು. ವೇಷಭೂಷಣಗಳ ಬಿಡಿಗು ಹೆಚ್ಚು ಎನಿಸಿತು. ಮಾತಿನಲ್ಲೆ ಸಹಜತೆಗಿಂತಲೂ ಹೆಚ್ಚು ಒಯ್ಯಾರವೇ ತಲೆದೋರಿತ್ತು.

"ತಾವು ಯಾರೆಂಬುದು ನನಗೆ ತಿಳಿಯಬಹುದೊ?" ನಾನು ನನ್ನಲ್ಲಿರುವ ಸೌಜನ್ಯವನ್ನೆಲ್ಲ ಎಳೆದುತಂದು ಕೇಳಿದೆ.

"ನೀನು ಬರುವುದಕ್ಕೆ ಮೊದಲು ನಾನೇ ಈ ಮನೆಯಲ್ಲಿರುತ್ತಿದ್ದೆ. ಕರವಸ್ತ್ರದಿಂದ ತುಟಿಯಮೇಲಿನ ಬೆವರನ್ನೊರಿಸಿಕೊಳ್ಳುತ್ತ, ಅಷ್ಟರಲ್ಲಿಯೆ ಬಿನ್ನಾಣದಿಂದ ಗೋಣನ್ನಲ್ಲಾಡಿಸಿ ನುಡಿದಳು.

ನಾನು ಅಸಬುರುಕನಂತೆ ಆರ್ಥಾರ್ಜಯಗಲ ಕಣ್ಣರಳಿಸಿ ನೋಡಹತ್ತಿದೆ; ಒಕೆಗೆ ತುಸು ನಾಚಿಕೆಯಾಯಿತು. ಸೆರಗನ್ನು ಸರಿಮಾಡಿಕೊಂಡು ಇನ್ನಿಷ್ಟು ಓರಣವಾಗಿ ಕುಳಿತಳು.

"ನೀವು ಈ ಮನೆಯಲ್ಲಿ ಎಷ್ಟು ದಿನ ಇದ್ದಿರಿ?" ನಾನು ಕೇಳಿದೆ

"ನಾಲ್ಕು ವರ್ಷ ಇದ್ದೆವು; ಹಾಗೆ ಮನೆ ಅನುಕೂಲವಾಗಿದೆ. ಆದರೆ ಒಂದು ತೊಂದರೆ!" ಎಂದಳು.

"ಏನು?" ನಾನೆಂದೆ.

"ಇಲಿಗಳ ಕಾಟ ತುಂಬ ಆಗಿದೆ; ಈ ಮನೆಯಲ್ಲಿ ಯಾವ ಪದಾರ್ಥವನ್ನೂ ಹೊರಗೆ ಇಡುವ ಹಾಗಿಲ್ಲ!"

"ಅದೇನೋ ನಿಜ; ಈಗ ಬಂದ ನಾಲ್ಕು ದಿವಸದಲ್ಲಿಯೆ ನನ್ನ ಹೆಂಡತಿಯ ಎರಡು ಸೀರೆಗಳನ್ನು ತುಂಡುಮಾಡಿ ಹಾಕಿವೆ!"

"ನಾನು ಕೂಡ ಇದಕ್ಕಾಗಿಯೆ ಬೇಸತ್ತು ಹೊರಬಿದ್ದೆ. ಇನ್ನೊಂದು ವಿಷಯ—ಅದನ್ನು ಕೇಳಬೇಕೆಂದೇ ಇಂದು ನಾನು ಇಲ್ಲಿಗೆ ಬಂದದ್ದು. ನನ್ನ ಪತ್ರದ ಒಂದು ಲಕ್ಕೋಟೆ ಕಳೆದುಹೋಗಿದೆ. ಆ ಕೋಣೆಯ ಕಪಾಟಿನಲ್ಲಿಯೆ ನನ್ನ ಬಟ್ಟೆಗಳನ್ನು ಇಡುತ್ತಿದ್ದೆ. ಅದರಲ್ಲಿ ಆ ಲಕೋಟೆ ಇತ್ತು. ಬಟ್ಟೆಗಳ ಜೊತೆಗೆ ಅದೂ ಇರಬಹುದು ಎಂದು ನಂಬಿದ್ದೆ. ಆದರೆ ಈಗದು ಅದರಲ್ಲಿ ಇಲ್ಲದಾಗಿದೆ. ಸ್ನೇಹಿಯು ಒಂದು ಸನ್ನಿವೇಶಕ್ಕಾಗಿ ನಾನದನ್ನು ಕಾದಿಟ್ಟಿದ್ದೇನೆ. ನಿಮಗೇನಾದರೂ ಅದು ದೊರೆತಿದ್ದರೆ ಕೇಳಬೇಕು ಎಂದು ಬಂದೆ. ಆ ಲಕ್ಕೋಟೆ ಹೋದದ್ದರಿಂದ ನನ್ನ ಪ್ರಸನ್ನಿಗೆ ಸಮಾಧಾನವಿಲ್ಲ," ಎಂದು ಹೇಳುವಾಗ ಅದೆಷ್ಟು ವಿಪ್ಲವತೆಯನ್ನು ತೋರಿದಳು. ಆಗ ನನಗಂತೂ—ಒಂದು ಲಕ್ಕೋಟೆಯೇ ಏಕೆ—ಇವಳು ಸಾಮ್ರಾಜ್ಯವನ್ನು ಕೇಳಿದರೂ ಕೊಟ್ಟುಬಿಡಬೇಕು—ಎನಿಸಿತು!

ಆದರೆ ಮರುಕ್ಷಣದಲ್ಲಿಯೆ ಹೀಗೊಂದು ಆಲೋಚನೆ ಬಂತು—"ಈಗಲೆ ಪತ್ರವನ್ನು ಕೊಟ್ಟುಬಿಟ್ಟರೆ ಬಾಯಿತುಂಬ ಕೃತಜ್ಞತೆಯನ್ನು ವ್ಯಕ್ತಪಡಿಸಿ ಈಕೆ ಹೊರಟುಬಿಡಬಹುದು; ಈ ನಿಮಿತ್ತದಿಂದ ಹುಟ್ಟಿದ ಪರಿಚಯವನ್ನು ಇಷ್ಟಕ್ಕೇ ಮುಗಿಸಲಾಗದು' ಎಂದೆನಿಸಿ, ಆದಕ್ಕೊಂದು ಯುಕ್ತಿ ತೆಗೆದು ನಾನೆಂದೆ:—"ನಿಮ್ಮ ಲಕ್ಕೋಟೆ ನನಗೆ ಅದೇ ಕಪಾಟಿನಲ್ಲಿ ಒಂದು ಇತಿಯ ಬೊಕ್ಕೆಯಲ್ಲಿ ದೊರೆಯಿತು" ಎಂದು ಅವರ ಸಾಧ್ಯಂತ ವರ್ಣನೆಯನ್ನು ರಂಜಕವಾಗಿ ಹೇಳಿ, "ಆ ಲಕ್ಕೋಟೆಯನ್ನು ತೆಗೆದು ಭದ್ರವಾಗಿ ಇಟ್ಟಿದ್ದೇನೆ; ಕಪಾಟಿನ ಬೀಗದ ಕೈಸರ ಹೆಂಡತಿಯ ಹತ್ತಿರ ಇದೆ. ಆಕೆ ಸಿನೇಮಾಕ್ಕೆ ಹೋಗಿದ್ದಾಳೆ."

"ಈಗ ಹೇಗೆ ಮಾಡುವುದು? ನಾನು ಪುನಃ ಬರಬೇಕಾಯಿತಲ್ಲ!" ಎಂಬ ತೊಂದರೆಯನ್ನು ಸೂಚಿಸುವ ಮುಖಭಾವ ತೋರಿಸಿ ನುಡಿದಳು.

"ನೀವು ಇದಕ್ಕಾಗಿಯೆ ಪುನಃ ಬರಬೇಕಾದ ಕಾರಣವಿಲ್ಲ. ನಿಮ್ಮ ಮನೆ ಎಲ್ಲಿ ಎಂಬುದನ್ನು ಹೇಳಿದರೆ, ನಾನೇ ಅದನ್ನು ತಂದು ಕೊಡುತ್ತೇನೆ. ನಾಡಿದು ದೀಪಾವಳಿ ಹಬ್ಬ; ನನಗೂ ರಜೆ ಇದೆ. ನಾನೇ ಬರುತ್ತೇನೆ ನಿಮ್ಮ ಮನೆಯನ್ನೂ ನೋಡಿದ ಹಾಗಾಯ್ತು; ಹೆಚ್ಚು ಪರಿಚಯವಾದಂತಾಯ್ತು!" ಎಂದು ಆಮಂತ್ರಣವನ್ನು ಪಟ್ಟಿಕೊಂಡೇ ಮಾತನಾಡಿದೆ.

ಕಳೆದ ಪತ್ರಗಳನ್ನು ಹುಡುಕಿ ಕೊಟ್ಟರಲ್ಲಾ ಎಂಬ ಕೃತಜ್ಞತಾಭಾವದಿಂದಲೊ ಏನೊ, ಆ ಯುವತಿ ನನಗೆ ಹಬ್ಬದೂಟಕ್ಕೇ ಔತಣ ಕೊಟ್ಟಳು "ಬರುವಾಗ ಲಕ್ಕೋಟೆಯನ್ನು ತರಲು ಮರೆಯಬೇಡಿ!" ಎಂದು ಮತ್ತೊಮ್ಮೆ ಎಚ್ಚರಿಸಿ ತನ್ನ ಮನೆಯ ವಿಳಾಸವನ್ನು ಕೊಟ್ಟು ಹೊರಟುಹೋದಳು. ಅವಳು ಇನ್ನಷ್ಟು ಹೊತ್ತು ಕೂಡಬೇಕು ಎಂಬ ಆಶೆಯಿದ್ದರೂ, ಅವಳ ಮನೆಯಲ್ಲಿಯೆ ಅವಳನ್ನು ಕಾಣುವೆನಲ್ಲಾ ಎಂಬ ವಿಚಾರ ಮನಸ್ಸಿಗೆ ತುಂಬ ಸಮಾಧಾನವನ್ನು ತಂದಿತು.

\+ \+ \+ \+

ಅವಳು ಶಿಕ್ಷಕಿ; ಹೆಸರು 'ಶರಾವತಿ' ಎಂಬುದು ಅವಳು ಕೊಟ್ಟ ವಿಳಾಸದಿಂದಲೆ ಗೊತ್ತಾಗುತ್ತಿತ್ತು. ಶಿಕ್ಷಕಿ ಎಂದೊಡನೆಯೆ ಸಂಯಮ ಬಿಟ್ಟೇ ಅವರ ಬಗ್ಗೆ ಮಾತನಾಡಬೇಕು ಎಂದು ಅನೇಕರಿಗೆ ಎನಿಸುವುದುಂಟು. ಅಂಥವರಲ್ಲಿ ನಾನೂ ಒಬ್ಬ. ಇದನ್ನು ನಿಮ್ಮೆದುರಿನಲ್ಲಿ ಒಪ್ಪಿಕೊಳ್ಳಲು ನಾಚಿಕೆಯೆನಿಸುವುದಿಲ್ಲ! ಶರಾವತಿಯ ಸುತ್ತಮುತ್ತಲೂ ಇಂಥ ಕೆಲವು ಕಲ್ಪನೆಗಳನ್ನು ರಚಿಸಿ, ಅದರ ಮಧ್ಯೆ ಅವಳನ್ನು ನಿಲ್ಲಿಸಿದೆ. ಆಗ ನನಗಂತೂ ಅವಳು ಜೇತೋಹಾರಿಯಾಗಿ ಕಂಡಳು!

ಅವಳ ಮನೆಗೆ ಹೋಗುವ ದಿನ ಅದೆಷ್ಟು ಉಬ್ಬಸದಲ್ಲಿದ್ದೆ! ಅವಳ ಮೇಲಿನ ನನ್ನ ಅನುರಾಗವನ್ನು ಸೂಚಿಸುವುದು ಹೇಗೆ ಎಂದು ವಿಚಾರ ಮಾಡುತ್ತಿರಲು, ನಾನೇ ಅವಳಿಗೆ ಒಂದು ಪತ್ರವನ್ನು ಬರೆದು, ಅವಳ ಸ್ನೇಹಿತನ ಪತ್ರಕ್ಕೆ ಒದಲಾಗಿ ನನ್ನದನ್ನು ಅದರಲ್ಲಿರಿಸಿ ಅವಳಿಗೆ ಕೊಡಬೇಕು... ಎಂದು ಒಂದು ಹೆಂಚಿಕ ತಲೆದೋರಿತು. ಕೂಡಲೆ ಒಂದು ಪತ್ರವನ್ನು ಬರೆದೆ:

"ಪ್ರಿಯ ಶರಾವತಿಯವರಿಗೆ,

ನಮ್ಮನ್ನು ಪ್ರತ್ಯಕ್ಷವಾಗಿ ಕಂಡು, ನಿನ್ನೊಡನೆ ಪರಿಚಯವಾದ ನೇರವೆ ಈ ಪತ್ರವನ್ನು ನಿಮಗೆ ಬರೆಯಲು ಧೈರ್ಯಗೊಂಡಿದ್ದೇನೆ. ನಾನು ನಿಮ್ಮ ನಿಷಯದಲ್ಲಿ ಒಂದು ಅಪೇಕ್ಷೆಯನ್ನಿಟ್ಟುಕೊಂಡದ್ದಕ್ಕಾಗಿ ಕ್ಷಮಿಸಬೇಕು. ನಿಮ್ಮ ಪ್ರೇಮಕ್ಕೆ ಅರ್ಹನಾಗಬೇಕೆಂಬುದೇ ನನ್ನ ಹಿರಿಯಾಸೆ. ನಿಮ್ಮ ಪತ್ರಗಳನ್ನು ಓದಿದೆ. ಸ್ನೇಹಿಯಲ್ಲಿ ನಿಮಗೆ ನಿರಾಶೆಯಾದದ್ದಕ್ಕಾಗಿ ನಿಮಗಾದ ಅತ್ಯಂತ ದುಃಖವನ್ನು, ಹಗುರುಗೊಳಿಸಲು ನನಗೆ ಸಾಧ್ಯವಿದ್ದರೆ ಮಾಡಬೇಕೆಂಬುದೇ ನನ್ನ ಬಯಕೆ. ಇದಕ್ಕೆ ನಿಮ್ಮಿಂದ ಒಪ್ಪಿಗೆಯ ಉತ್ತೇಜನ ದೊರೆತರೆ ನನ್ನ ಹೃನ್ಮತನವನ್ನು ನಿಮಗೆ ಸ್ಪಷ್ಟಪಡಿಸುವೆ.

ನಿಮ್ಮ ಅನುರಾಗದ ಅನುಗ್ರಹಕ್ಕಾಗಿ
ಕಾಯ್ದಿರುವ
ತಿರುಮಲರಾಯ ಊರ್ಫ್
ತಿಮ್ಮಣ್ಣ"

ಕೊನೆಗೆ ಆ ದಿನವಂತೂ ಬೆಳಗಿತು – ಒಬ್ಬ ಸ್ನೇಹಿತನ ಮನೆಗೆ ಊಟಕ್ಕೆ ಹೋಗಬೇಕಾಗಿದೆಯೆಂದು ಹೆಂಡತಿಯ ಒಪ್ಪಿಗೆಯನ್ನು ಪಡೆದು, ಬೀರನ ಜುಡುಪನ್ನು ಧರಿಸಿ, ಲಕ್ಕೋಟೆಯನ್ನು ಸಂಗಡ ತಕ್ಕೊಂಡು, ಸಕಾಲದಲ್ಲಿಯೆ ಹೊರಟೆ. 'ಊಟವನ್ನು ಮುಗಿಸಿ ಮನೆಗೆ ಹೊಂಟುನಾಗಲೆ ಅವನ್ನು ಅವಳ ಕೈಯಲ್ಲಿಡುವುದು' ಎಂದು ನಿರ್ಧರಿಸಿದ್ದೆ.

ನನಗಾಗಿ ಕಾದವಳಂತೆ ಬಾಗಿಲಲ್ಲಿಯೆ ನಿಂತಿದ್ದ ಅವಳು ನಮುನಗೆಯಿಂದ ನನ್ನನ್ನು ಬರಮಾಡಿಕೊಂಡಳು.

"ನನ್ನಿಂದ ತಡವಾಗಲಿಲ್ಲವಲ್ಲ?" ಎಂದೆ ನಾನು.

"ನೀವು ಹೊತ್ತಿಗೆ ಸರಿಯಾಗಿ ಬಂದಿರಿ. ನಮ್ಮಿಂದಲೇ ತುಸು ತಡ. ಹಾಲು ಬೇಗ ಬರಲೇ ಇಲ್ಲ. ನಾವು ಮಾತಾಡುತ್ತ ಕೆಲಹೊತ್ತು ಕೂಡೋಣ. ಅರ್ಧಗಂಟೆಯಲ್ಲಿ ಊಟಕ್ಕೆಸಿದ್ಧವಾಗಬಹುದು!" ವಿನೀತಳಾಗಿ ನುಡಿದು ಒಂದು ಆಸನವನ್ನು ನನ್ನ ಹತ್ತಿರ ಎಳೆದಳು. ನಾನು ಅವಳಿಗೆ ಮೊದಲು ಕೂಡಲು ಸೂಚಿಸಿ, ನಾನೂ ಒಂದರ ಮೇಲೆ ಕುಳಿತೆ

ಯುದ್ಧ, ರೇಶನ್, ಸಿನೆಮಾ ಮತ್ತು ಕೆಲಸದವರು— ಈ ವಿಷಯಗಳ ಮೇಲೆ ಮಾತನಾಡುವುದಕ್ಕೆ ವಿಶೇಷವಾಗಿ ಬುದ್ಧಿಯೇನು ಬೇಕಾಗದಿದ್ದರೂ ಅವಳು ಅಂದು ಆಡಿದ ಮಾತುಗಳನ್ನೆಲ್ಲ ಬುದ್ಧಿವಂತಿಕೆಯಿಂದ ಆಡಿದಳು. ಪ್ರಾಣಿಗಳನ್ನು ಸಾಕುವವರಲ್ಲಿ ಅವಳಿಗೆ ತುಂಬ ಪ್ರೀತಿ ಎನ್ನು ತೋರಿತು. ಅವಳು ನನ್ನೊಡನೆ ಸೀಸಂಕೋಚವಾಗಿ, ಆದರೂ ಸೌಜನ್ಯದ ಎಲ್ಲೆಯನ್ನು ಮೀರದಂತೆ, ಮಾತನಾಡುತ್ತಿದ್ದಳು. ಅವಳ ನಡೆ-ನುಡಿಯಲ್ಲಿ ಮಾನವಂತಿಕೆ ಒಡೆದು ಕಾಣುತ್ತಿತ್ತು.

ಊಟವಂತೂ ಬಲು ರುಚಿ ಎನಿಸಿತು. ಆಗ ನನ್ನ ವಿಷಯದಲ್ಲಿ ಅನೇಕ ಮಾತುಗಳನ್ನು ಅವಳು ಕೇಳಿ ತಿಳಿದುಕೊಂಡಳು. ಹೇಗೆ ಹೇಳಿದರೆ ರುಚಿಸಬಹುದೊ ಹಾಗೆ ಅವನ್ನು ಮಾರ್ಪಡಿಸಿಕೊಂಡು ಹೇಳಿದೆ. ಅದನ್ನು ಕೇಳಿ ಅವಳಿಗೆ ಸಂತೋಷವಾದಂತೆ ಕಂಡಿತು. ಅವಳ ವಿಷಯವನ್ನು ನಾನು ಬೇಕಾಗಿಯೇ ಕೇಳಲಿಲ್ಲ. ಅದರಲ್ಲಿ ಯಾವ ವೈತ್ಯಾಸವಿದೆಯೊ, ಏನೋ ಮೂಕ ಸಂತಾಪ ಹುದುಗಿಕೊಂಡಿದೆಯೊ ಯಾರು ಬಲ್ಲರು? ಅವಳಾಗಿ ಹೇಳುವವರೆಗೆ ಕೇಳುವುದು ಸಮುಂಜಸವೆನಿಸದ್ದರಿಂದ ನಾನವನ್ನು ಕೇಳುವ ಗೋಜಿಗೆ ಹೋಗಲಿಲ್ಲ. ಮನೆಯಲ್ಲಿ ಅವಳು, ಅವಳ ಆಡಿಗೆಯವಳು ಇಬ್ಬರೇ ಇದ್ದರು. ಪಂಜರದಲ್ಲಿ ಮಾತ್ರ ಎರಡು ಜರ್ಮನ್ ಗುಬ್ಬಿಗಳು ಕಾಣುತ್ತಿದ್ದುವು. ಮದುವೆಯಾಪ ಸಂಚಯವು ಬರುತ್ತಿದ್ದಿತಾದರೂ ಅಂಥ ಸಂಬಿಕೆಗೆ ಸಾಕಷ್ಟು ಅವಕಾಶವೇನೂ ತೋರಿಬರಲಿಲ್ಲ. ಊಟವೂ ಒಮ್ಮೆ ಊಟ ಮುಗಿದು ತಾಂಬೂಲ ಸವಿಯುತ್ತ ಕುಳಿತೆವು.

"ನನ್ನ ಪತ್ರಗಳ ಆ ಲಕ್ಕೋಟೆ?' ನಗೆಯನ್ನು ಬೀರಿ ಕೇಳಿದಳು ಅವಳು.

"ತಂದಿದ್ದೇನೆ. ಅವನ್ನು ಹೇಗೆ ಸುಖಿತು ಬಿಡೇನು?" ನಾನೆಂದೆ.

"ಇತರರ ಕೈಗೆ ಬಿದ್ದಿವೆಂದೆ ನನಗೆಂದೂ ದೊರೆಯುತ್ತಿರಲಿಲ್ಲ; ನೀವೆಂತಲೇ ಅವನ್ನು ಕಾಯ್ದುಟ್ಟು ನನಗೆ ಸುಟ್ಟಿಸಲು ಶ್ರಮವಹಿಸಿ ಬಂದಿರಿ. ನಿಮ್ಮ ಉಪಕಾರವನ್ನು ನಾನು ಹೇಗೆ ತೀರಿಸುವೆನೋ ಕಾಣೆ. ಈ ಕಾರಣದಿಂದಲಾದರೂ ನಿಮ್ಮ ಪರಿಚಯವಾಯಿತು. ನಿಮ್ಮ ಮನೆಯವರನ್ನು ಒಮ್ಮೆ ಕರೆದುಕೊಂಡು ಬನ್ನಿ. ನಾನು ಸಜ್ಜಕ್ಕೆ ಒಬ್ಬಳೇ ಇದ್ದೇನೆ; ಒಳ್ಳೆಯವರ ಸ್ನೇಹಸಂಪರ್ಕ ನನಗೆ ತುಂಬಾ ಪ್ರೀತಿ!" ಕೊನೆಯ ಮಾತನ್ನು ಹೇಳುವಾಗ ಅವಳು ಅದೆಂಥ ಮುದಕ ಮಾಡಿದಳು! ನಾನು ಸಂತೃಪ್ತನಾಗ್ದೆಂತೆ ಅವಳನ್ನೇ ನೋಡುತ್ತ ಕುಳಿತಿದ್ದೆ.

ಎನ್ನೋ ಮಾತುಗಳನ್ನು ಆಡಬೇಕೆಂದು ಹಲವುಸಾರಿ ಅತುರಪಟ್ಟು, ಕೊನೆಗೆ ಯಾವ ಮಾತನ್ನೂ ಆಡದೆ, ಲಕ್ಕೋಟೆಯನ್ನು ಅವಳ ಕೈಯಲ್ಲಿರಿಸಿ, ಕೂಡಲೆ ಅಲ್ಲಿಂದ ಜಾರಿದೆ.

× × ×

ನಾಲ್ಕುದಿನ ಅವಳಿಂದ ಯಾವ ಸುದ್ದಿಯೂ ತಿಳಿಯಲಿಲ್ಲ. ನಾನು ಆಲೋಚನೆಗೊಳಗಾದೆ: 'ನನ್ನ ಪತ್ರವನ್ನು ಸೋಡಿದಳೋ ಇಲ್ಲವೋ? ನೋಡಿದ್ದರೆ ಅದಕ್ಕೆ ಒದಲು ಏನಾದರೂ ಬರೆಯಬೇಕೆತ ಕ ಬರದಿರಲಿಕ್ಕಿಲ್ಲ? ನಾನು ಪಂಚಿಸಿ ಪತ್ರವಂದ. ನೆಂದು ಅವಳು ಸಿಟ್ಟಾಗಿರಬಹುದೆ? ಅಥವಾ ಉತ್ತರ ಏನೆಂದು ಬರೆಯಬೇಕೆಂಬುದು ತೋಚದೆ ವಿಚಾರ ಮಾಡುತ್ತಿರಬಹುದೆ? ಏನೇ ಆದರೂ ಅವಳ ಪತ್ರವಂತೂ ನನ್ನ ಕೈಯಲ್ಲಿ ಸಿಕ್ಕಿದೆಯಲ್ಲ, ಆದರ ಸಲುವಾಗಿಯಾದರೂ ಅವಳು ನನ್ನ ಬಳಿಗೆ ಬರಲೇಬೇಕು. ಆಗ ಅವಳ ಮನೋಗತ ತಿಳಿದೇ ತಿಳಿಯುತ್ತದೆ ಅದುವರೆಗೆ ದಾರಿ ಕಾಯಬೇಕು' ಎಂದು ನಿರ್ಣಯಿಸಿಕೊಂಡು ಸುಮ್ಮಗೆ ಇದ್ದುಬಿಟ್ಟೆ.

ಕೊನೆಗೊಂದು ದಿನ ಅವಳಿಂದ ಕಾಗದ ಬಂತು: 'ಪ್ರಿಯರೇ, ಬೇಗನೆ ಬಂದು ನನ್ನನ್ನು ಕಾಣಬೇಕು; ಬರುವಾಗ ನಿಮ್ಮಲ್ಲಿದ್ದ ನನ್ನ ಪತ್ರವನ್ನು ತಪ್ಪದೆ ತರಬೇಕು." ಎಂದಿಷ್ಟೇ ಇತ್ತು. ಪತ್ರದ ಪ್ರತಿಯೊಂದು ಅಕ್ಷರ-ಅಕ್ಷರದಲ್ಲಿಯೂ ಪ್ರೇಮವು ಸೂಸಿ ಹರಿಯುವಂತೆ ನನಗೆ ಭ್ರಮೆಯಾಯಿತು.

ನಾನು ಅಷ್ಟೇ ಆತುರನಾಗಿ ಮನೆಯಿಂದ ಹೊರಟು ಅವಳಲ್ಲಿಗೆ ಬಂದೆ. ನಮಸ್ಕಾರದ ಶಿಷ್ಟಾಚಾರ ಮುಗಿದಮೇಲೆ ಅವಳು ನಗುತ್ತಲೆ ಹೇಳಿದಳು:

"ನಿಮ್ಮ ಪತ್ರ ಓದಿದೆ; ನನ್ನ ಪತ್ರ ತಂದಿದ್ದೀರಾ?"

ನಾನು 'ಹೌದು' ಎಂದು ಜೇಬಿನಿಂದ ಅದನ್ನು ತೆಗೆದು ಅವಳ ಕೈಯಲ್ಲಿರಿಸಿದೆ. ಅವಳು ಅದನ್ನೊಯಿದು ಒಳಗಿಟ್ಟು, ನನ್ನ ಪತ್ರವನ್ನು ಒಡನೆ ತಂದಳು. ನನ್ನ ಎದೆಯ ಮಿಡಿತ ತುಸು ಜೋರಾಗಿಯೆ ನಡೆಯಿತು. ಆದರೆ ಅವಳು ಎಂದಿನಂತೆ ನಗು-

ಹೊಸ ಪುಸ್ತಕ ಹೊಸ ಪುಸ್ತಕ

ಪ್ರಸವ ವಿಜ್ಞಾನ

ಬರೆದವರು:

ಡಾ. ದೊಡ್ಡೇರಿ ವೆಂಕಟಗಿರಿರಾವ್

ಗರ್ಭಧಾರಣೆ, ಗರ್ಭಲಕ್ಷಣ, ಗರ್ಭಿಣಿಯ ದಿನಚರಿ ಗರ್ಭಿಣೀ ರೋಗಗಳೂ ಅವುಗಳ ಚಿಕಿತ್ಸೆಗಳೂ, ಸಹಜ-ಪ್ರಸವ, ಪ್ರಸವ ನಿರ್ಣಹಣಾರೀತಿ, ಆಕ್ರಮ ಮತ್ತು ಸಂಕೀರ್ಣ ಪ್ರಸವ ರೀತಿಗಳು, ಬಾಣಂತೀ ರೋಗಗಳು ಅವುಗಳ ಚಿಕಿತ್ಸೆಗಳು ಶಿಶು-ಬಾಣಂತಿಯರ ರಕ್ಷಣಾ ಮೊದಲಾದುವನ್ನು ಸರಳವಾಗಿಯೂ ಸಚಿತ್ರವಾಗಿಯೂ ವಿವರಿಸುವ ಪುಸ್ತಕ. ಸುಮಾರು ೨೫ ಚಿತ್ರಗಳಿವೆ.

ನವೆಂಬರ ೧೦ಕ್ಕೆ ಪ್ರಕಟವಾಗುವುದು.

● ಬೆಲೆ: ಎರಡು ರೂಪಾಯಿಗಳು ●

(ಅಂಚೆ ವೆಚ್ಚ ಬೇರೆ ವಿ. ಪಿ ಕಳಿಸುವುದಿಲ್ಲ.)

ಮಾರಾಟದ ಪೂರ್ಣಾಧಿಕಾರಗಳು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

ಮುಖದಿಂದಲೇ ಇದ್ದಳು. ಅದರಿಂದ ನಾನು ತುಸು ಧೈರ್ಯ ಗೊಂಡು ಕುಳಿತೆ. ಅವಳು ಮಾತು ಮೊದಲು ಮಾಡಿದಳು:

"ಇದು ನಿಮ್ಮ ಪತ್ರ, ತಕ್ಕೊಳ್ಳಬೇಕು, ಮತ್ತಾರಿಗಾದರೂ ಬರೆಯಬೇಕೆಂದೆನಿಸಿದಾಗ ಇದನ್ನು ಪಯೋಗಿಸಬಹುದು. ನನ್ನ ವಿಷಯ ನಿಮಗೆ ಹೇಳದಿರುವುದೇ ಈ ಬಗೆಯ ತಪ್ಪು ಕಲ್ಪನೆಗೆ ಕಾರಣವಾಗಿದೆ. ನಾನು ಅವಿವಾಹಿತಳೂ ಅಲ್ಲ, ವಿವಾಹಬಾಹಿರ ಪ್ರೇಮಕ್ಕೆ ಮನಸೋತವಳೂ ಅಲ್ಲ. ನನ್ನ ಪತಿ ಯುದ್ಧಕೈದಿಗಳಾಗಿದ್ದಾರೆ. ಆ ಪ್ರೇಮಪತ್ರಗಳು ನನಗೆ ಸಂಬಂಧಿಸಿದುವಲ್ಲ. ಬೇರೆ ಎರಡು ಪ್ರಾಣಿಗಳಿಗೆ ಸಂಬಂಧಿಸಿದವು. ಅದರ ಇತಿಹಾಸ ಹೀಗಿದೆ: ಹೊತ್ತು ಕಳೆಯುವುದಕ್ಕೆಂದು ನಾನೊಂದು ಮಂಗನನ್ನು ಸಾಕಿದ್ದೆ. ಹಲವು ದಿನಗಳಮೇಲೆ ಒಂದು ಹೆಣ್ಣು ನಾಯಿಯನ್ನು ತಂದೆ. ಎರಡೂ ಒಬನ್ನೊಂದು ಅತಿಯಾಗಿ ಪ್ರೀತಿಸುತ್ತಿದ್ದವು. ಅವುಗಳ ಚಿನ್ನಾಟ, ಸಲುಗೆ, ಅನ್ಯೋನ್ಯಭಾವ ನೋಡಿದಾಗಲೆಲ್ಲ, ನನಗೆ ಗಂಡು-ಹೆಣ್ಣಿನಲ್ಲಿ ಕಾಣುವ ಪ್ರೇಮ ವಿಕಾರಗಳದೇ ನೆನಪಾಗುತ್ತಿತ್ತು. ಮುಂದೆ ಒಂದು ದಿನ ಆ ಮಂಗ ಓಡಿಹೋಯಿತು. ಅದು ಹೋದಂದಿನಿಂದ ಆ ಹೆಣ್ಣು ನಾಯಿ ಅನ್ನವನ್ನೇ ತಿನ್ನಲಿಲ್ಲ. ಅವುಗಳ ಪ್ರೇಮವನ್ನು ಗಂಡು-ಹೆಣ್ಣಿಗೆ ಹೋಲಿಸಿ, ನಾನೇ ಆ ಎರಡು ಪತ್ರಗಳನ್ನು ಬರೆದೆ. ಈ ಸಂಗತಿಯನ್ನರಿಯದ ಯಾರಿಗೂ, ಆ ಪತ್ರಗಳನ್ನೋದಿದರೆ, ನನ್ನ ವಿಷಯದಲ್ಲಿ ನಿಮಗುಂಟಾದಂತೆ, ಹೀನ ಭಾವನೆ ಉಂಟಾಗುವ ಸಂಭವವಿದೆ. ಆದರೆ ಆ ಎರಡು ಪ್ರಾಣಿಗಳನ್ನೂ ನಾನು ಬಲು ಪ್ರೀತಿಯಿಂದ ಸಾಕಿದ್ದೆ. ಮುಂದೆ ಆ ನಾಯಿ ಸತ್ತುಹೋಯಿತು. ಇದೇ ಅವುಗಳ ಫೋಟೊ!" ಎಂದು ಗೋಡೆಯ ಕಡೆಗೆ ಬೊಟ್ಟುಮಾಡಿ, ಒಂದು ಫೋಟೊ ತೋರಿಸಿದಳು. ನಾನು ಕುಳಿತಲ್ಲಿಂದಲೇ ದಿಟ್ಟಿಸಿನೋಡಿ, ಕನಿಕರ ವ್ಯಕ್ತಪಡಿಸಿದೆ. ಅವಳು ಮತ್ತೆ ಹೀಗೆಂದಳು:

"ಅವರು ಯುದ್ಧದಿಂದ ಮರಳಿ ಬಂದಮೇಲೆ ಅವರಿಗೆ ತೋರಿಸಬೇಕೆಂದು ಈ ಪತ್ರಗಳನ್ನು ಅಚ್ಚೊಂದು ಜತನವಾಗಿಟ್ಟಿದ್ದೇನೆ. ಅವರಿಗೂ ಪ್ರಾಣಿಗಳೆಂದರೆ ತುಂಬ ಪ್ರೀತಿ. ನೀವು ನನಗೆ ಒಬ್ಬ ಅಣ್ಣ ಇದ್ದಂತೆ! ನನ್ನೊಡನೆ ನೀವು ಇನ್ನು ಮುಂದೆ ಅದೇ ಭಾವನೆಯಿಂದಲೆ ನಡೆದುಕೊಳ್ಳುವಿರೆಂದು ನನ್ನಾಸೆ. ನೀವು ಬರೆದ ಪತ್ರವನ್ನು ಮರೆತುಬಿಡಿರಿ; ನಿಮ್ಮದೇನೂ ತಪ್ಪಲ್ಲ! ಗಂಡಸಿನಲ್ಲಿಯೇ ತುಸು ಮರುಳು ಹೆಚ್ಚು ಎಂದು ನಾನು ಕಂಡಿದ್ದೇನೆ!"

ನನ್ನ ಬಾಯಿ ಒಣಗಿದಂತಾಗಿ ಉಗುಳು ಜಿಗಿಜಿಗಿಯಾಗಿತ್ತು. "ಇಲ್ಲ, ನನ್ನಿಂದ ಮಹಾಪರಾಧವಾಯಿತು, ಕ್ಷಮಿಸಬೇಕು! ನೀವು ನನಗೆ ತಂಗಿಯೇ ಇದ್ದಂತೆ" ಎಂದು ಹೇಗೋ ಒಮ್ಮೆ ಹೇಳಿ ಮುಗಿಸಿ, ಅವಳಪ್ಪಣೆ ಪಡೆದು ಹೊರಬಿದ್ದೆ. ರಸ್ತೆಯಲ್ಲಿ ಬಂದಮೇಲೆ, ತಾನಾಗಿಯೇ ಒಬ್ಬೆಲೆ ನನ್ನ ಬಾಯಿಗೆ ಬಂತು:– "ನಾನೆಂಥ ಬೂತಂಗ, ವಿವೇಕವನ್ನು ಯಾರಲ್ಲಿ ಅಡವಿಟ್ಟಿದ್ದೆನೊ!"

• ಕಿವಿಮಾತು •

(ಜಾನಪದ ಪ್ರಣಯ ಗೀತ)

-ಕಾವ್ಯಾನಂದ' ನಾಂದೇಡ

ದುಡ-ದುಡದು ಬ್ಯಾಸತ್ತು ಬಂದಾಗ....
ಕೈತುಂಬ ಕೂಲಿಯ ತಂದಾಗ....
ಮನದಾಗ-ತನನನ ಅಂದಾಗ....
ಜೀವಾ ಕೇಳ್ಬೇಕನತಕ ಕಿವಿಮಾತ—
ಜೇನಿನ ಹನಿಗಿಂತ ಸವಿಮಾತ!

ಹೊಲದೊಳಗ ಹಸಿರು ಮುರಿವಾಗ ...
ಎದೆನುಟ ಬೆಳೆಯು ಮೆರೆವಾಗ....
ಗಿಡದಾಗ ಕೋಗಿಲಿ ಕರೆವಾಗ ...
ಜೀವಾ ಕೇಳಬೇಕನತಕ ಕಿವಿಮಾತ—
ಎಳೆ ಬೆಳಸಿಗಿಂತ ಸವಿಮಾತ!

ತೋಟದಿ ಬೀಜವ ಹೊಯ್ವಾಗ....
ಬಾಳೆಯ ಗೊನೆಯನು ಕೊಯ್ವಾಗ....
ಒಬ್ಬನೆ ಇರಲಾರ್ದೇ ಸುಯ್ವಾಗ....
ಜೀವ ಕೇಳಬೇಕನತಕ ಕಿವಿಮಾತ—
ಎಲೆ-ಅಡಿಕೆಗಿಂತಾ ಸವಿಮಾತ!

ಹೂಗಿಡಕ ನೀರನು ಸುರಿವಾಗ....
ಹಂದರದಿ ಮಲ್ಲಿಗಿ ಬಿರಿವಾಗ....
ಪಾಡಾದ ಹಣ್ಣುಗಳ ಹರಿವಾಗ....
ಜೀವಾ ಕೇಳಬೇಕನತಕ ಕಿವಿಮಾತ—
ದ್ರಾಕ್ಷಿಯ ರಸಕಿಂತ ಸವಿಮಾತ!

ಬೆಳಿಗಿನ ಉಟಕ್ಕ ಕುಂತಾಗ....
ಎತ್ತುಗಳ ಬಿಟಗೊಂಡು ನಿಂತಾಗ....
ಜೊತೆಯಿಲ್ಲದಿರುವ ಚಿಂತ್ಯಾಗ. ..
ಜೀವಾ ಕೇಳಬೇಕನತಕ ಕಿವಿಮಾತ—
ಕೆನೆಮೊಸರಿಗಿಂತಾ ಸವಿಮಾತ!

ಕಣದಾಗ ಒಬ್ಬವನೇ ಕುಳಿತಾಗ...
ಮನದಾಗ ಮೋಹವು ಮೊಳೆತಾಗ....
ಜೋಡಿನ ಆಸೆಯು ಕಳಿತಾಗ....
ಜೀವಾ ಕೇಳಬೇಕನತಕ ಕಿವಿಮಾತ—
ಹೆಂತಿಯ ಪದಕಿಂತ ಸವಿಮಾತ!

ಸಿಹಿನೀರ ದಾರ್ಯಾಗ ಬರುವಾಗ....
ಕಲ್ಲಾಗ ಹಿಟ್ಟನು ತಿರುವಾಗ....
ಕಂಬಳಿಯು ಮುಲಗಲು ಕರೆವಾಗ....
ಜೀವಾ ಕೇಳಬೇಕನತಕ ಕಿವಿಮಾತ—
ಸಕ್ಕರಿ ನಿದ್ದಿಗಿಂತ ಸವಿಮಾತ!

ಕರ್ನಾಟಕದ ಚಳವಳಿಯಲ್ಲಿ ಧಾರವಾಡದ ಭಾಗ

(ಕನ್ನಡದ ಪುನರುಜ್ಜೀವನದ ಇತಿಹಾಸ)

ಶ್ರೀ. ಆಲೂರ ವೆಂಕಟರಾಯರು, ಧಾರವಾಡ

ಕರ್ನಾಟಕದ ಚಳವಳಿಯಲ್ಲಿ, ಧಾರವಾಡ ಪಟ್ಟಣವು ಯಾವ ಕಾರ್ಯವನ್ನು ಮಾಡಿದೆ ಯೆಂಬುದು, ಬಹುಶಃ ಸಾಮಾನ್ಯವಾಗಿ ಎಲ್ಲ ರಿಗೂ ಗೊತ್ತೇ ಆದೆ. ಈ ಲೇಖನದಲ್ಲಿ ನಾನು ಹೆಚ್ಚಿನದೇನನ್ನೂ ಮಾಡಿಲ್ಲ. ಆದನ್ನೇ ಒತ್ತ-ಟ್ಟಿಗೆ ಸಂಕಲಿತವನ್ನಾಗಿ ಮಾಡಿ, ಕನ್ನಡಿಗರ ಕಣ್ಣ ಮುಂದೆ ಒಮ್ಮೆಲೆ ಕಟ್ಟುವಂತೆ ಇಟ್ಟಿರು ವೆನು. ನೆನಪಾಗದೆ ಆನೇಕ ಸಂಗತಿಗಳು ಉಳಿದಿರುವುದು ಸಹಜವಿದೆ. ಗೊತ್ತಿದ್ದವರು ಅವುಗಳನ್ನು ಜಯಂತಿಯ ಸಂಪಾದಕರ ಕಡೆಗೆ ಕಳುಹಿಸಿ, ಇವಕ್ಕೆ ಪೂರ್ಣ ಸ್ವರೂಪವನ್ನು ಕೊಡಬೇಕು. ಇಲ್ಲಿ ನಾನು ಸಿಂಹಾವಲೋ-ಕನ ರೀತಿಯಿಂದ ಕೆಲವು ಸಂಗತಿಗಳನ್ನು ಇಟ್ಟಿರುವೆ.

ಕರ್ನಾಟಕದ ಚಳವಳಿಯು ಸಂಘಟಿತ ವಾಗಿ ಪ್ರಾರಂಭವಾಗುವ ಮುಂಚೆಯೆ, ಧಾರವಾಡವು ವ್ಯಕ್ತಿಶಃ ಹಲವು ಪ್ರಯತ್ನ-ಗಳನ್ನು ಈ ದಿಸೆಯಲ್ಲಿ ಮಾಡಿತು. ಇಂಥ ಪ್ರಯತ್ನಗಳು ಮೊದಲಿಗೆ ಪ್ರಾರಂಭವಾದು ದೆಂದರೆ ೧೯೦೫ನೆಯ ಇಸವಿಯಲ್ಲಿ. ಇದಕ್ಕೂ ಪೂರ್ವದಲ್ಲಿ ಸಾರ್ವಜನಿಕ ಜೀವನದಲ್ಲಿ, ಕನ್ನ-ಡಕ್ಕೆ ಧಾರವಾಡದಲ್ಲಿ ಗೌರವಸ್ಥಾನ ಮಾತ್ರ-ವೇ ಅಲ್ಲ– ಸ್ಥಾನವೇ ಇದ್ದಿಲ್ಲ. ಆಗಿನ ಕಾಲದ ಚಳವಳಿಗಳ ಮುಖಂಡರೆಲ್ಲರೂ ಮರಾಠೀ ಊರುಗಳಿಂದ ಇಲ್ಲಿಗೆ ಬಂದು ನೆಲಸಿದ ಮರಾ ಟಿಗರು. ಅವರು ಗಣೇಶೋತ್ಸವ, ಶಿವಾಜಿ ಉತ್ಸವಗಳಲ್ಲಿ ಮರಾಠೀ ಪೋಳಗಳನ್ನೇ ಮಾ-ಡಿಸುತ್ತಿದ್ದರು. ಕನ್ನಡ ವಿದ್ಯಾರ್ಥಿಗಳು ಮರಾಠಿ ಪದಗಳನ್ನು ಆಸ್ವಾದಿಸುತ್ತಿದ್ದರು. ೧೯೧೮ರಲ್ಲಿ ಈ ಸ್ಥಿತಿ ಅಲ್ಪಮಟ್ಟಿಗೆ ಬದಲಾಯಿತು. ಒಂದೆ-ರಡು ಕನ್ನಡಮೇಳಗಳು ಹೊರಟುವು. ಮುಂದೆ ಒಂದೆರಡು ವರ್ಷಗಳಲ್ಲಿ ಕನ್ನಡ ಪದಗಳೂ ರಚಿಸಲ್ಪಟ್ಟುವು. ಈ ಸ್ಥಿತಿ ಸುಮಾರು ೧೯೨೦ರ ವರೆಗೆ ಇದ್ದಿತು.

ಧಾರವಾಡದಲ್ಲಿ ಕನ್ನಡ ಶಾಲೆಗಳಿದ್ದರೂ ಮಿಕ್ಕ ಅನೇಕ ಕನ್ನಡ ಊರುಗಳಲ್ಲಿ ಕನ್ನಡ ಶಾಲೆಗಳೇ ಇದ್ದಿಲ್ಲ. ಬೆಳಗಾಂವಿ ಜಿಲ್ಲೆಯಲ್ಲಿ ಮರಾಠೀ ಶಾಲೆಗಳ ಪ್ರಾಬಲ್ಯವೇ ಇತ್ತು. ಈ ಸ್ಥಿತಿ ಬ್ರಿಟಿಶರ ಆಳಿಕೆ ಪ್ರಾರಂಭವಾದ ಬಳಿಕ ೨೫-೩೦ ವರುಷಗಳ ವರೆಗೂ ಇದ್ದಿತು. ಈ ಪರಿಸ್ಥಿತಿಯನ್ನು ದೂರ ಮಾಡಿದವರು ಧಾರವಾಡದ ಶಿಕ್ಷಣಖಾತೆಯಲ್ಲಿದ್ದ ಅಧಿಕಾರಿ ಗಳು.

ಹೀಗೆ ಸಾರ್ವಜನಿಕ ಜೀವನದಲ್ಲಿ ೧೯೧೮ರಲ್ಲಿ ಕನ್ನಡಕ್ಕೆ ಸ್ಥಾನವು ಪ್ರಾರಂಭವಾಗಲಿಕ್ಕೆ, ೧೯೨೦ರಲ್ಲಿ ಉಂಟಾದ ಸುಸಂಘಟಿತವಾದ ಪ್ರಯತ್ನವೇ ಕಾರಣ. ಆ ವರ್ಷ ಧಾರವಾಡವು, **ಕರ್ನಾ-ಟಕ ವಿದ್ಯಾವರ್ಧಕ ಸಂಘವನ್ನು** ಸ್ಥಾಪಿಸಿ,

ಇಡೀ ಕರ್ನಾಟಕದ ಮೇಲ್ಪಙ್ತಿಯನ್ನು ಹಾಕಿಕೊಟ್ಟಿತು. ಅದೇ ಕರ್ನಾಟಕ ಚಳವ-ಳಿಯ ಬೀಜ.

ಮುಂದೆ ೧೯೨೦ರಲ್ಲಿ ಧಾರವಾಡಕ್ಕೆ ಮರಾ-ಟಿಗರನ್ನು ಎದುರಿಸುವ ಒಂದು ಪ್ರಸಂಗ ಬಂದಿತು. ಶಿಕ್ಷಣಖಾತೆಯ ಮರಾಠೀ ಅಧಿ-ಕಾರಿಗಳು, ಕನ್ನಡಶಾಲೆಗಳಲ್ಲೆಲ್ಲ ಮರಾಠಿಯೂ ಕಲಿಸಲ್ಪಡಬೇಕೆಂಬ ಆಗ್ರಹ ತೊಟ್ಟರು. ಆಗ, ವಿದ್ಯಾವರ್ಧಕ ಸಂಘವೂ ಇಲ್ಲಿಯ ಪತ್ರಿಕೆಗಳೂ ಮರಾಟಿಗರನ್ನು ಎದುರಿಸಿ ಯುದ್ಧ ಹೂಡಿದುವು. ಮತ್ತು ಅದರಲ್ಲಿ ಗೆದ್ದುವು. ವಿದ್ಯಾವರ್ಧಕ ಸಂಘವು 'ವಾಗ್ಭೂ-ಷಣ' ಸಾಪ್ತಾಹಿಕಪತ್ರಿಕೆಯನ್ನು ಹೊರಡಿಸಿತು; ಮತ್ತು ಅನೇಕ ಗ್ರಂಥಕರ್ತರಿಗೆ ಪ್ರೋತ್ಸಾ-ಹನ ಕೊಟ್ಟಿತು. ಅವರಲ್ಲಿ ಅನೇಕರು ಧಾರ ವಾಡಪರರೆ.

ಇತ್ತ ವೃತ್ತಪತ್ರಿಕೆಗಳೂ ಕನ್ನಡದ ಅಭಿ-ಮಾನವನ್ನು ಹೆಚ್ಚಿಸಿದುವು. 'ಧಾರವಾಡ ವೃತ್ತ' ಎಂಬ ಪತ್ರಿಕೆಯು ಮರಾಠೀ ಪತ್ರಿಕೆಯು; ಮೊದಲಿಗೆ ಅದೇ ಪ್ರಮುಖ ಪತ್ರಿಕೆಯಾಗಿತ್ತು. ಮುಂದೆ ರಾಜಹಂಸ, ಧನಂಜಯ, ಚಂದ್ರೋ-ದಯ, ಕರ್ನಾಟಕ ಪತ್ರ, ಕರ್ನಾಟಕವೃತ್ತ, ಹಿಂದುಸ್ಥಾನ ಸಮಾಚಾರ, ಕ್ಷೇಮಸಮಾ-ಚಾರ, ಕನ್ನಡಕೇಸರಿ, ಶುಭೋದಯ, ಕರ್ಮ-ವೀರ ಮುಂತಾದ ವಾರಪತ್ರಿಕೆಗಳೂ ಸ್ವಧರ್ಮ, ಜಯಕರ್ನಾಟಕ, ಸಚಿತ್ರಭಾರತ, ಮುಂತಾದ ಮಾಸ ಪತ್ರಿಕೆಗಳೂ ಕಾಲಕಾಲಕ್ಕೆ ಹೊರಟು ಇಂದಿನ ವರೆಗೆ ಕರ್ನಾಟಕದ ಚಳವಳಿಯನ್ನು ಪೋಷಿಸುತ್ತ ಬಂದಿವೆ.

೧೯೨೦ರಲ್ಲಿ ಸ್ವದೇಶೀ ಚಳವಳಿಯು ಪ್ರಾ-ರಂಭವಾದಾಗಿನಿಂದ, ದೇಶಭಾಷೆಗಳಿಗೆ ಪ್ರೋ-ತ್ಸಾಹನ ದೊರೆಯಿತು. ಅದರ ಪರಿಣಾಮವಾಗಿ ಇಲ್ಲಿ ೧೯೨೦ ರಲ್ಲಿ ರಾಷ್ಟ್ರೀಯ ಶಾಲೆ ಹೊರ-ಟಿತು. ಸಾರ್ವಜನಿಕ ವಾತಾವರಣವೂ ಒಮ್ಮೆಲೆ ಬದಲಾಯಿತು. ಸಾರ್ವಜನಿಕ ಜೀವನದಲ್ಲಿಯೂ ಕೆಲವು ಕನ್ನಡಿಗರ ಸ್ಥಾನೀ-ಯವಾಯಿತು. ಆದರೂ ಮುಖಂಡತ್ವವು ಹಳೆಯ ಮರಾಠೀ, ಪ್ರಸಿದ್ಧ –ವಕೀಲರ ಕೈಯಲ್ಲಿಯೆ ಇತ್ತು. ಮುಂದೆ ಅವು ತಾನಾಗಿಯೆ ಕಡಿಮೆ ಕಡಿಮೆಯಾಗುತ್ತ ನಡೆದು, ನೆಲ್ಲನೆ ಮುಖಂಡ ತ್ವವೂ ಕನ್ನಡಿಗರ ಕೈಸೇರಿತು.

ಆದರೂ ಇಲ್ಲಿಯ ವರೆಗೆ, ಕೇವಲ ಕರ್ನಾ-ಟಕದ ಅಭಿಮಾನದಿಂದ ಇಡೀ ಕರ್ನಾಟಕದ ಸಲುವಾಗಿ, ವಿದ್ಯಾವರ್ಧಕ ಸಂಘದ ಹೊರತು ಮತ್ತಾವ ಸಂಸ್ಥೆಯೂ ಕಾರ್ಯ ಮಾಡಿದ್ದಿಲ್ಲ. 'ಸಿರಿಗನ್ನಡಂ ಗೆಲ್ಗೆ' ಎಂಬ ಧ್ವಜಪತಾಕೆ-ಯನ್ನು ಹಚ್ಚಿದುದು ಇದೇ ಮೊದಲನೆಯದು. ಆದರೆ, ಇಡೀ ಕರ್ನಾಟಕದೊಡನೆ ಸಂಬಂಧ ಬೆಳಸುವ ಕಲ್ಪನೆಯು ಪ್ರಬಲವಾಗಿದ್ದಿಲ್ಲ. ಸ್ವದೇಶೀಚಳವಳಿಯ ಮೂಲಕ ಹುಟ್ಟಿದ ರಾಷ್ಟ್ರೀ-ಯತ್ವದಿಂದ ಧಾರವಾಡದವರಿಗೆ ಆ ಕಲ್ಪನೆ ಹೊಳೆಯಿತು. ಆಗ ೧೯೨೦ನೆಯ ಇಸ್ವಿ-ಯಲ್ಲಿ ಧಾರವಾಡವು ಕರ್ನಾಟಕ ಗ್ರಂಥಕರ್ತರ

ಸಮ್ಮೇಲನವನ್ನು ಕೂಡಿಸಿತು. ಕರ್ನಾಟಕದ ಎಲ್ಲ ಭಾಗಗಳಿಂದಲೂ ಪ್ರತಿನಿಧಿಗಳನ್ನು ಕರೆಯಿಸಿತು. ಅಲ್ಲಿಯ ವರೆಗೆ ಭಿನ್ನ ಭಿನ್ನವಾಗಿದ್ದ ಕನ್ನಡ ಭಾಷೆಗೆ ಏಕರೂಪತೆಯನ್ನು ಕೊಡಲಿಕ್ಕೂ, ಮಿಕ್ಕ ಕನ್ನಡಿಗರೂ ನಾವೂ ಒಂದೇ ಎಂಬ ಭಾವನೆ ಹುಟ್ಟಿಸುವುದಕ್ಕೂ ಪ್ರಯತ್ನಿಸಿತು. ಪುನಃ ೧೯೦೮ರಲ್ಲಿಯೂ ಅದೇ ತರದ ಸಮ್ಮೇಲನವನ್ನು ಕೂಡಿಸಿತು. 'ಕರ್ನಾಟಕ ಗ್ರಂಥ ಪ್ರಸಾರಕ ಮಂಡಲ'ವನ್ನು ಆಗಿನ ಕಾಲಕ್ಕೇನೇ ತೆಗೆದು, ಆ ಭಾವನೆಗೆ ಪುಷ್ಟಿಯನ್ನು ಕೊಟ್ಟಿತು.

ಮುಂದೆ ೧೯೦೮ರಿಂದ ೧೯೧೪ರ ವರೆಗೆ ಧಾರವಾಡದವರು ಮೈಸೂರು, ಬೆಂಗಳೂರು ಗಳಕಡೆಗೆ ಹೋಗಿ, ಜನತೆಯಲ್ಲಿಯೂ ಅಲ್ಲಿಯ ಅಧಿಕಾರಿಗಳಲ್ಲಿಯೂ ಕರ್ನಾಟಕದ ಅಭಿಮಾನದ ಬೀಜವನ್ನು ಬಿತ್ತಿ, ೧೯೧೪ನೆಯ ಇಸ್ವಿಯಲ್ಲಿ ಕರ್ನಾಟಕ ಸಾಹಿತ್ಯಪರಿಷತ್ತಿನ ಹುಟ್ಟಿಗೆ ಕಾರಣರಾದರು. ೧೯೦೫ರಿಂದ ೧೯೧೪ರ ವರೆಗೆ ಧಾರವಾಡದವರು, ಕರ್ನಾಟಕದ ಐತಿಹಾಸಿಕ ಸ್ಥಳಗಳನ್ನೆಲ್ಲ ಸಂದರ್ಶಿಸಿ, ಶೋಧಿಸಿ ಕರ್ನಾಟಕದ ಇತಿಹಾಸವನ್ನು ಬರೆದರು. ಶ್ರೀ ವಿದ್ಯಾರಣ್ಯಚರಿತ್ರೆಯು ಹೊರಟು, ಕರ್ನಾಟಕದ ಅಭಿಮಾನವನ್ನು ಜಾಗೃತಗೊಳಿಸಿತು. 'ಭೃಗುನಿರಸನ'ವು ಬರೆಯಲ್ಪಟ್ಟು ರಂಗ ಭೂಮಿಯಲ್ಲಿ ಆಡಲ್ಪಟ್ಟು, ಮರಾಠಿಯನ್ನೋದದವರನ್ನು ಪೂರವಾಡಿತು. ೧೯೧೪ರಲ್ಲಿ ಧಾರವಾಡದವರು, 'ಕರ್ನಾಟಕ ಮೇಲ್' ಎಂಬ ಬೆಂಗಳೂರಿನಲ್ಲಿಯ ಇಂಗ್ಲಿಷ ಪತ್ರಿಕೆಯಲ್ಲಿ "Unification of Kannadigas" ಎಂದು, ಕರ್ನಾಟಕ ಏಕೀಕರಣದ ಬಗ್ಗೆ ಲೇಖ ಬರೆದು, ಕರ್ನಾಟಕದ ಏಕೀಕರಣದ ಪ್ರಶ್ನೆಯ ಕಡೆಗೆ ಜನಮನವನ್ನು ಎಳೆಯಿತು. ಸಾರ್ವಜನಿಕವಾಗಿ ಈ ವಿಚಾರವನ್ನು ಸ್ಪಷ್ಟವಾಗಿ ಹರಡಿದ ಮೊದಲನೆಯ ಲೇಖನವೆಂದರೆ ಇದೇ. ಇದಕ್ಕೂ ಪೂರ್ವದಲ್ಲಿ ಸಾಬ್ಜೆಷನದಲ್ಲಿಯೂ ಈ ಕಲ್ಪನೆ ಸೂಚಿತವಾಗಿತ್ತು. ಕರ್ನಾಟಕದ ಪ್ರತ್ಯೇಕ ಅಸ್ತಿತ್ವದ ಬಗ್ಗೆ ವಿಚಾರಮಾಡುವುದಕ್ಕಾಗಿ ಧಾರವಾಡದವರು ತೆಲುಗು ಸಾಹಿತ್ಯ ಸಮ್ಮೇಲನ, ತೆಲುಗು ರಾಷ್ಟ್ರೀಯ ಪರಿಷತ್ತುಗಳಿಗೆ ಹೋಗಿ ಬಂದರು.

ರಾಜಕಾರಣದಲ್ಲಿಯೂ ಕರ್ನಾಟಕಕ್ಕೆ ಪ್ರತ್ಯೇಕ ಅಸ್ತಿತ್ವವಿರಬೇಕೆಂಬ ವಿಚಾರವು ಧಾರವಾಡದವರಿಗೆ ಮುಂಚೆಹೊಳೆದು,ಅದನ್ನು ಅವರು ರಾಜಕಾರಣದ ಮುಖಂಡರ ಮುಂದೆ ೧೯೧೬ರಲ್ಲಿ ಇಟ್ಟರು: ಆದರೆ ಆಗ ಅದನ್ನು ಮುಖಂಡರೇ ತಿರಸ್ಕರಿಸಿದರು.ಮುಂದೆ ಅಥಣಿಯಲ್ಲಿ ಕೂಡಿದ ಮುಂಬಯಿ ಪ್ರಾಂತದ ರಾಜಕೀಯಪರಿಷತ್ತಿಗೆ ಹೋಗಿ, ಅಲ್ಲಿ ಕರ್ನಾಟಕದ ಏಕೀಕರಣದ ಗೊತ್ತುವಳಿಯನ್ನೂ ಕರ್ನಾಟಕಕ್ಕೇನೇ ಬೇರೊಂದು ರಾಜಕೀಯ ಪ್ರಾಂತಿಕ ಸಭೆ ಬೇಕೆಂಬುವರ ಅನವಶ್ಯಕತೆಯನ್ನೂ ಮುಖಂಡರ ಮುಂದಿಟ್ಟು, ಪ್ರತ್ಯೇಕ ಪ್ರಾಂತ ಸಭೆಯ ಗೊತ್ತುವಳಿಯನ್ನು ಮಂಜೂರು ಮಾಡಿಕೊಂಡರು.

೧೯೧೬ರಲ್ಲಿ ಧಾರವಾಡದವರು ಕರ್ನಾಟಕ ಸಭೆಯೆಂಬ ಸಂಸ್ಥೆಯನ್ನು ಹೊರಡಿಸಿ, ಅಖಿಲ ಕರ್ನಾಟಕದ ಯಾವತ್ತು ಚಳವಳಿಗಳಿಗೆ ಜೀವಾಳ ಬೀಜವನ್ನು ಊರಿದರು. ಇಂದು ಕರ್ನಾಟಕ ಚಳವಳಿಯೆಂಬ ಅತ್ಯಂತ ವ್ಯಾಪಕವಾದ ಚಳವಳಿಗೆ ಇದೇ ಮೂಲಭೂತ ಸಂಸ್ಥೆ. ಕೇವಲ ಕರ್ನಾಟಕತ್ವವೊಂದೇ ಅವರ ಧ್ಯೇಯ. ಸಕಲ ನಿಧದ ಕರ್ನಾಟಕದ ಚಟುವಟಿಕೆಗಳಿಗೆ ಕರ್ನಾಟಕತ್ವದ ಸ್ವರೂಪವನ್ನು ಕೊಡುವುದೂ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತ, ಪ್ರತ್ಯೇಕ ಬಂದರ, ಪ್ರತ್ಯೇಕ ಹಾಯಕೋರ್ಟು ಮುಂತಾದವುಗಳನ್ನು ದೊರಕಿಸುವುದೂ ಅದರ ಉದ್ದೇಶ. ಮಾಂಟೀಗ್ಯೂ ಕಮೀಶನು ಬಂದಾಗ, ಈ ಸಭೆಯು ಸಕಲ ಕರ್ನಾಟಕ ಭಾಗಗಳಿಂದ ಸಹಿಗಳನ್ನು ದೊರೆಕಿಸಿ, ಪ್ರತ್ಯೇಕ ಪ್ರಾಂತದ ಬೇಡಿಕೆಯನ್ನು ಮುಂದಿಟ್ಟಿತು. ೧೯೧೮ರಲ್ಲಿ ಧಾರವಾಡವು ಕರ್ನಾಟಕ ಸಾಹಿತ್ಯ ಸಮ್ಮೇಲನ, ಐತಿಹಾಸಿಕ ಸಮ್ಮೇಲನ, ಪ್ರದರ್ಶನಾದಿಗಳನ್ನು ಕೈಕೊಂಡಿತು. ೧೯೨೦ರಲ್ಲಿ, ಅಖಿಲ ಕರ್ನಾಟಕ ರಾಷ್ಟ್ರೀಯ ಪರಿಷತ್ತು ಎಂಬ ಉಜ್ಜ್ವಲತಾಪ ಸಮ್ಮೇಲನವನ್ನು ಕೂಡಿಸಿ, ಕೊಡಗು, ಮಂಗಳೂರು ಮುಂತಾದ ಎಲ್ಲ ಕಡೆಗಳಿಂದಲೂ ಸುಮಾರು ೭೦೦೦ ಅತಿಥಿಗಳನ್ನು ಕರೆಸಿ, ಕರ್ನಾಟಕಕ್ಕೆ ಸಂಬಂಧಿಸಿದ ಯಾವತ್ತೂ ತರದ ಕೊರತೆಗಳ ಬಗ್ಗೆ ಗೊತ್ತುವಳಿಯನ್ನು ಮಂಜೂರು ಮಾಡಿಕೊಂಡಿತು. ಆದರಲ್ಲಿ ರೇಲ್ವೆಗಳು, ಕಾಲುವೆಗಳು, ಉಂಡೆಯ ವಿಷಯಗಳು, ನೀರಕಾಲುವೆಗಳು,ಸೇತುವೆಗಳು ಇವೇ ಮುಂತಾದ ಯಾವತ್ತು ವಿಷಯಗಳೂ ಅಡಕವಾಗಿದ್ದುವು.

ಈ ಕಾಲದಲ್ಲಿ ಅಂದರೆ ೧೯೧೬ರಿಂದ ೧೯೨೦ರ ವರೆಗೆ ಧಾರವಾಡವು ಮರಾಟಿಗರೊಡನೆ ಪ್ರತ್ಯಕ್ಷಯುದ್ಧ ಹೂಡಬೇಕಾಯಿತು. ಇಲ್ಲಿಯ ರಾಜಕೀಯ ಮುಖಂಡರಲ್ಲಿ ಕೆಲವರು ಮರಾಟಿಗರಿದ್ದರೆಂದು ಹೇಳಿದೆನಷ್ಟೆ! ಅವರು ಸಾರ್ವಜನಿಕ ಸಭೆಗಳಲ್ಲಿ ಮರಾಟಿಯಲ್ಲಿಯೆ ಮಾತಾಡುವೆನೆಂಬ ಹಟ ಹಿಡಿದರು. ಕೂಡಲೆ ಹೀಗೆ ಮಾಡಗೊಡಲಿಕ್ಕಿಲ್ಲವೆಂಬ ಕಹಳೆಯನ್ನು ಧಾರವಾಡವು ಊದಿತು. ಮತ್ತು ಸಾರ್ವಜನಿಕ ಜೀವನದಲ್ಲಿ ಕನ್ನಡಕ್ಕೇನೇ ಪಟ್ಟವೆಂದು ಡಂಗುರ ಸಾರಿ, ಸಭೆಗಳಲ್ಲಿ ಯಾರಿಗೂ ಮರಾಟಿಯಲ್ಲಿ ಮಾತನಾಡಗೊಡಲಿಕ್ಕೇ ಇಲ್ಲವೆಂದು ಸಾರಿತು. ಇಲ್ಲಿ ಮಾತ್ರವೇ ಅಲ್ಲ, ಕನ್ನಡದ ಪಟ್ಟಣಗಳಲ್ಲಿ ಎಲ್ಲಿಯೂ ಅವರಿಗೆ ಸ್ಥಾನ ದೊರೆಯದು ಎಂದು ಹೇಳಿ, ಧಾರವಾಡದವರು ಕರ್ನಾಟಕವನ್ನು ಸುತ್ತಿ ಪ್ರಚಾರ ಮಾಡಿದರು. ಅವರ ಮೂಲಕ ಧಾರವಾಡದಲ್ಲಿ ಮಾತ್ರವೇ ಏಕೆ, ಎಲ್ಲ ಕಡೆಗೂ ಆ ತತ್ತ್ವವು ಸ್ಥಾಪಿತವಾಯಿತು.

ಕರ್ನಾಟಕ ಗತವೈಭವ, ವಿದ್ಯಾರಣ್ಯ ಕೀರ್ತನೆ, ಶ್ರೀಕೃಷ್ಣ ಪಾನಾಮೃತ ಮುಂತಾದವುಗಳನ್ನು ಧಾರವಾಡದವರು ಬರೆದರು. ವಿದ್ಯಾರಣ್ಯ ಕೀರ್ತನ ಮತ್ತು ಶ್ರೀ ಕೃಷ್ಣ–ದಾನಾಮೃತಗಳೆಂಬ ಎರಡು ಕೀರ್ತನಗಳ ಮೂಲಕ ಧಾರವಾಡವು ಉತ್ತರಕರ್ನಾಟಕದಲ್ಲಿ ಅದ್ಭುತವಾದ ಜಾಗೃತಿಯನ್ನುಮಾಡಿತು.

೧೯೧೬ರಲ್ಲಿ ಕರ್ನಾಟಕಕ್ಕೆ ತನ್ನದೊಂದು ಪ್ರತ್ಯೇಕವಾದ ಸ್ವರಾಜ್ಯಸಂಘವಿರಬೇಕೆಂದು ವಾದಿಸಿ, ಆ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮುಖಾಂತರವಾಗಿ ೫-೬ ಚಿಕ್ಕ ಹೊತ್ತಿಗೆಗಳನ್ನು ಬರೆದು ಮುದ್ರಿಸಿ, ಸ್ವರಾಜ್ಯವ ಕಲ್ಪನೆಯನ್ನು ಪ್ರಸಾರಮಾಡಿತು. ೧೯೧೮ನೆಯ ಇಸ್ವಿಯಲ್ಲಿ ಪುಣೆಯಲ್ಲಿ ಕೂಡಿದ ಮುಂಬಯಿ ಪ್ರಾಂತಿಕ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಧಾರವಾಡವು ಹೊಟ್ಟೆನೂವಲಿಗೆ ಕನ್ನಡದಲ್ಲಿ ಮಾತನಾಡಿ ಕನ್ನಡದ ಹಕ್ಕನ್ನು ಪ್ರಸ್ಥಾಪಿಸಿತು. ೧೯೨೦ರಲ್ಲಿ ಕಾಂಗ್ರೆಸ್ಸಿನಲ್ಲಿ ಧಾರವಾಡವೇ

ಪ್ರಾಮುಖ್ಯವಾದ ಭಾಗವನ್ನು ತೆಗೆದುಕೊಂಡು. ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನು ಮೊದಲಿಸಿತು.

ವಿದ್ಯಾರಣ್ಯ ಉತ್ಸವ, ನಾಡಹಬ್ಬ, ವಿಜಯನಗರಗಳ ಉತ್ಸವಗಳನ್ನು ಪ್ರಾರಂಭಿಸಿದುದು ಧಾರವಾಡವೆ. ಹಾಗೆಯೇ ವೀಣಾವಾದಕರನ್ನೂ ವೇಣುವಾದಕರನ್ನೂ ಸಂಗೀತಗಾರರನ್ನೂ, ಕೀರ್ತನಕಾರರನ್ನೂ ಕರೆಯಿಸಿ ಕರ್ನಾಟಕತ್ವವನ್ನು ಪ್ರಚಾರಮಾಡಿತು.

ಹೀಗಿದೆ ೧೯೫೦ರವರೆಗಿನ ಇದರ ಇತಿಹಾಸ. ಅದರ ಮುಂದಿನ ಧಾರವಾಡದ ಚಟುವಟಿಕೆಗಳನ್ನು ಬರೆಯುವುದಕ್ಕೆ ಎರಡು-ಮೂರು ಪ್ರತ್ಯೇಕ ಲೇಖನಗಳೆ ಬೇಕಾಗುವುವು. ಅದನ್ನು ಬೇರೊಬ್ಬರು ಮಾಡಬೇಕೆಂದು ಸೂಚನೆ. ಇಲ್ಲಿ ಸಂಕ್ಷಿಪ್ತವಾಗಿ ಹೇಳುವುದೆಂದರೆ ೧೯೫೦ರಿಂದ ಕರ್ನಾಟಕದ ಪ್ರತಿಯೊಂದು ಚಟುವಟಿಕೆಯಲ್ಲಿ ಧಾರವಾಡವು ಬಹುಶಃ ಅಗ್ರಭಾಗವನ್ನು ವಹಿಸಿದೆ. ಅನೇಕ ಉತ್ತಮೋತ್ತಮ ಕವಿಗಳಿಗೂ ಸಂಶೋಧಕರಿಗೂ, ಸಾಹಸಿಗಳಿಗೂ, ಜನ್ಮಕೊಟ್ಟದೆ. ಕರ್ನಾಟಕ ಸಾಹಿತ್ಯಭಾಂಡಾರ, ಕರ್ನಾಟಕ ಸಾಹಿತ್ಯಮಂದಿರ, ಮನೋಹರ ಗ್ರಂಥಭಾಂಡಾರ, ಮನೋಹರ ಗ್ರಂಥಮಾಲೆ, ಮಿಂಚಿನಬಳ್ಳಿ, ನವಜೀವನ ಗ್ರಂಥಭಾಂಡಾರ ಮುಂತಾದ ಅನೇಕ ಪ್ರಚಾರಸಂಸ್ಥೆಗಳನ್ನೂ ಧಾರವಾಡವು ತೆಗೆದಿದೆ. ಕನ್ನಡದ ನೆಲೆ, ಕರ್ನಾಟಕ ಜನಜೀವನ, ಕರ್ನಾಟಕ ಸಾಹಿತ್ಯ ಸಂಸ್ಕೃತಿದರ್ಶನ, ವಿಜಯನಗರದ ಇತಿಹಾಸ ಮುಂತಾದ ಅನೇಕ ಗ್ರಂಥಗಳು ಧಾರವಾಡದಲ್ಲಿ ಹುಟ್ಟಿವೆ. ಗೆಳೆಯರ ಗುಂಪು, ಮಂಗಮತ ಮುಂತಾದ ಅನೇಕಾನೇಕ ಕರ್ನಾಟಕ ಸಂಘಗಳು ಹೊರಟಿವೆ. ಅವೆಲ್ಲ ಅಸಂಖ್ಯವಾಗಿವೆ.

ಒಂದೇ ಶಬ್ದದಲ್ಲಿ ಹೇಳುವುದಾದರೆ, ಧಾರವಾಡವು ಈಗ ೪೦-೫೦ ವರುಷಗಳಿಂದ ಸತತವಾಗಿ 'ಜಯಕರ್ನಾಟಕ' ಮಂತ್ರವನ್ನು ಜಪಿಸುತ್ತಿದೆ. ಅದಕ್ಕೆ ಧಾರವಾಡವು ತನ್ನಲ್ಲಿ ಹುಟ್ಟಿದ ಸಂಸ್ಥೆಗಳಿಗೂ ಪತ್ರಿಕೆಗಳಿಗೂ "ಕರ್ನಾಟಕ" ಎಂಬ ಉಪಪದವನ್ನು ಕೊಟ್ಟಿರುವುದೇ ಸಾಕ್ಷಿ. ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಗ್ರಂಥಕರ್ತರ ಸಮ್ಮೇಲನ, ಕರ್ನಾಟಕ ಗ್ರಂಥಪ್ರಸಾರಕ ಮಂಡಳ, ಕರ್ನಾಟಕ ರಾಷ್ಟ್ರೀಯ ಶಾಲೆ, ಕರ್ನಾಟಕ ಔದ್ಯೋಗಿಕ ಪ್ರದರ್ಶನ, ಕರ್ನಾಟಕ ರಾಷ್ಟ್ರೀಯ ಪರಿಷತ್ತು, ಕರ್ನಾಟಕ ಏಕೀಕರಣ ಸಂಘ, ಕರ್ನಾಟಕ ವಿಶ್ವವಿದ್ಯಾಲಯ ಸಂಸ್ಥೆ, ಕರ್ನಾಟಕ ವಾಚನಾಲಯ ಸಮ್ಮೇಲನ, ಕರ್ನಾಟಕ ನಾಟಕ ಸಮ್ಮೇಲನ, ಕರ್ನಾಟಕ ಗ್ರಂಥಭಾಂಡಾರ, ಕರ್ನಾಟಕ ಗತವೈಭವ, ಕರ್ನಾಟಕ ವೀರರಕ್ಷಗಳು, ಕರ್ನಾಟಕ ಕಾಲೇಜು, ಕರ್ನಾಟಕ ವಿದ್ಯಾಪೀಠ, ಕರ್ನಾಟಕ ವಿದ್ಯಾಪ್ರಸಾರಕ ಮಂಡಳ, ಕರ್ನಾಟಕ ವ್ಯಾಯಾಮಪೀಠ, ಕರ್ನಾಟಕ ಸೇವಾದಳ, ಇವೇ ಮುಂತಾದುವುಗಳು ಧಾರವಾಡದ ಸೊತ್ತಾಗಿವೆ. ಒಟ್ಟಿಗೆ 'ಕರ್ನಾಟಕ' ಎಂಬೊಡನೆ ಧಾರವಾಡದವರ ಸಂಸ್ಥೆಯೆಂದು ಅರ್ಥವಾಗುತ್ತದೆ. ಧಾರವಾಡಕ್ಕೂ ಕರ್ನಾಟಕಕ್ಕೂ ಇಷ್ಟೊಂದು ತಾದಾತ್ಮ್ಯವಿದೆ. ಆದ ಕಾರಣ ಧಾರವಾಡದವರೇ "ಕರ್ನಾಟಕ" ಎಂಬ ಹೆಸರಿನ ಈ "ಪೇಟೆಂಟ"ನ್ನು ಏಕೆ ಪಡೆಯಬಾರದು? **ಕರ್ನಾಟಕಕ್ಕೆ** ಧಾರವಾಡವು ಕೇಂದ್ರವೆಂದು ಕರೆಯಿಸಿಕೊಳ್ಳುವುದಕ್ಕೆ ಇದೇ ಕಾರಣ. ಆದರೆ, ಧಾರವಾಡವು ತನ್ನ ದೋಷಗಳ ಬಗ್ಗೆಯೂ ಆತ್ಮನಿರೀಕ್ಷಣೆ ಮಾಡಿಕೊಳ್ಳುವುದು ಒಳಿತಲ್ಲವೆ?



ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಚಲಚ್ಚಿತ್ರ, ಅಭಿನಯ, ನಾಟಕಕಲಾ ವಿಜ್ಞಾನಗಳಿಗೆ
ಮೀಸಲಾದ, ಕನ್ನಡನಾಡಿನ ಅತ್ಯುತ್ತಮ
ಮಾಸಪತ್ರಿಕೆ

ಚಿತ್ರ

ಸಂಪಾದಕರು: ಶ್ರೀ. ಮಾ. ನಾ. ಚೂಡಪ್ಪ

೩೬ ಪುಟಗಳ ಸಚಿತ್ರ ಮಾಸಪತ್ರಿಕೆಯು.
ವಾರ್ಷಿಕ ಚಂದಾ: ರೂ. ೨-೮-೦ : ಬಿಡಿ ಪತ್ರಿಕೆ ೩ ಆಣೆ
ಈಗ ಏಜೆಂಟರಿಲ್ಲದ ಕೇಂದ್ರಗಳಲ್ಲೆಲ್ಲಾ
ಏಜೆಂಟರು ಬೇಕಾಗಿದ್ದಾರೆ.
ವಿವರಗಳಿಗೆ:
ಚಿತ್ರಾ ಏಜೆನ್ಸೀಸ್
೧೨೧ ಸುಲ್ತಾನ್‌ಪೇಟೆ :: ಬೆಂಗಳೂರು ನಗರ

ನೆಬತೀ ಹಳ್ಳದ ದಂಡೀ ಮ್ಯಾಲೆ

(ಲಾವಣಿ)

ಶ್ರೀ. ಕುಲಕರ್ಣಿ ಸ್ವಾಮಿರಾಯರು, ಎಂ. ಎ. ಧಾರವಾಡ

ನೆಬತೀ* ಹಳ್ಳದ ದಂಡೀ ಮ್ಯಾಲ
ನೆಬತೀ ಕಂಟೀನೇ ಹಬ್ಬ್ಯಾವೋ ।
ಜಾಲಿಯ ಬಡ್ಡ್ಯಾಂದು ಬಿದ್ದಽದೋ । ಅದರ
ಟೊಂಗಿಗೊಳೆಲ್ಲಾನೂ ಒಣಗ್ಯಾವೊ ॥೧॥

ಹಳ್ಳದ ದಂಡ್ಯಾಗs ಕುರುಬsರೋ । ಅಂದ—
ಕುರಿಗೋಳನಲ್ಲಿಯೆ ತರಿಬ್ಯಾರೋ ।
ಸಿಳ್ಳನ ಕುರುಬರ ಬೀರ್ಯಾನೋ । ಅಲ್ಲಿ—
ಕುರಿಗೋಳ ಕಾವ್ತ ಕುಂತಾನೋ ॥ ೨ ॥

ಕುರಿಗೋಳ ನೀರಿಗಿ ತಂದಾನೋ । ಕಿವಿ-
ನಿಗ.ರಿಸಿ ದನಿಯೊಂದ ಕೇಳ್ಯಾನೋ ।
ನೆಬತೀ ಕಂಟ್ಯಾಗ ನೋಡ್ಯಾನೋ । 'ದನಿ—
ಯಾರದು ಇರಬೇಕು?' ಅಂದಾನೋ॥೩॥

ಹಸರು ಕುಬಸ, ಹಳದಿಯ ಸೀರಿ । ಉಟ್ಟು—
ಒನಪಿಲೆ ಹೊಂಟಾಳ ಒಯ್ಯಾರಿ !
ನೆಬತೀ ಕಂಟೀಲೆ ಹಾದಾಳ್ರಿ । ಕೈಲೆ—
ನೆಬತೀನ ಜಾಲೀನ ಆಯ್ದಾಳ್ರಿ ॥ ೪ ॥

ಬೀರಣ್ಣ ಕಣ್ಣೆಟ್ಟು ನೋಡ್ಯಾನೋ । ಆಕಿನಾ-
ಮತ್ತೊಮ್ಮೆ ಕಣ್ಣೆಟ್ಟು ನೋಡ್ಯಾನೋ ।
ಅಪ್ಪನ ದನಿನಾಗs ಕೇಳ್ಯಾನೋ । ತಿರಿಗಿ—
ನೋಡುತ ನೋಡುತ ಹೋಗ್ಯಾನೋ॥೫॥

೨

ಮರದಿನ ಲಗುಬಂದು ಕುಂತಾನೋ।ಅಂದ—
ತಿರ್ಗ್ಯಾಡಿ ಅಲ್ಲಲ್ಲೀ ನೋಡ್ಯಾನೋ ।
ಕುರಿಗೋಳ ಹಿಂಡನ್ನ ಬಿಟ್ಟಾನೋ । ಅ-ದಿನ-
ಹುಡಿಗಿಯ ಮ್ಯಾಲ ಮನಸಿಟ್ಟಾನೊ॥೬॥

ಮುಂಜಾಲ್ದಿಡಕೊಂಡ. ಮದ್ಯಾನ್ವಮಟಿ।ಅವ-
ಬಿಸಲಾಗ ಕುಂತಾನ ಮುಟನ ಟ ।
ಆಕಿನ್ನ ಕಾಣೂದು ಒಂದೇ ಹಟ – ತೊಟ್ಟು
ಅಕ್ಕಿಯೆ ಕುಂತಾನ ಚಂಜೀಮಟ ।೭॥

ಅಂದಲ್ಲಿ ಉರುವಲ ಇರಲಿಲ್ಲೋ—ಆದಕ—
ಆ ಹುಡುಗಿ ಅಲ್ಲಿಗೆ ಬರಲಿಲ್ಲೋ ।
ಹ್ಯಾಂಗೋ ಗುಡಸಲ ಸೇರ್ಯಾನೋ । ಅಜ್ಜಿ
ಉಣ್ಣಾಕ ಬ್ಯಾಡಂತ ಸಾರ್ಯಾನೋ ॥ ೮ ॥

೩

ಮರದಿನ ನಸಿಕಲೆ ಎದ್ದಾನೋ । ಕುರಿ-
ಹೊಡಕೊಂಡು ಹಳ್ಳಕ ಬಂದಾನೋ ।
ಕೊಳಲನು ಊದುತ ನಿಂತಾನೋ—' ಆಕಿ
ಇಂದರೆ ಬರಬೇಕು ' ಅಂದಾನೊ ! ॥ ೯ ॥

ಕೊಳಲಿನ ದನಿಯೊಂದs ಕೇಳ್ಯಾಕೋ।ನಾರ-
ಬಳಕೂತ ದೂರಲಿ ನೋಡ್ಯಾಕೋ !
ಒಬ್ಬರನೊಬ್ಬರು ನೋಡ್ಯಾರೋ— ನೋಡಿ-
ನಾಚಿಕಿ ಪಟ್ಟಾಂಗs ಮಾಡ್ಯಾರೋ ॥೧೦॥

ಸುತ್ಮುತ್ತ ಕಣ್ಣಾಕಿವಿ ನೋಡ್ಯಾನೋ—ಬೀರ-
ಜಾಲಿಯ ಬಡ್ಡೀನ ಹತ್ತ್ಯಾನೋ ।
ಹಳ್ಳದ ಹೊಲದಾಗ ಮನಸ್ಯಾನೋ—ಒಬ್ಬ-
ನಟ್ಟನ ಕಡಕೊಂತ ನಿಂತಾನೋ ॥ ೧೧ ॥

ಕುರಿ ಮೇವೂ ತಿಗ್ಗಿಗೆ ಹೋಗ್ಯಾನೋ—ಆಕಿ-
ಕಟಿಗೀನ ಆಯೂದು ನೋಡ್ಯಾನೋ !
ದಿನ್ನಿ ಹತ್ತಿ ಆಕಿ ಬಂದಾಳೋ— ಬಂದು
ತನ ಮನ್ಯೀ ದಾರಿಯ ಹಿಡದಾಳೋ ॥೧೨॥

೪

ಮರವಿನ ಹಳ್ಳದ ದಂಡೀಮ್ಯಾಗs— ಒಂಟಿ-
ಒಬ್ಬನೆ ಜಂತೀಲೇ ಕುಂತಾನೋ ।
ಸುತ್ಮುತ್ತಕ ಇಂವ ಯಾರೂ ಇಲ್ಲಾ—'ಏಂಗ
ನಿನ್ನೊಕ್ಕಿ ಇರಬಾರ್ದೇ?" ಅಂತಾನೋ॥೧೩॥

ಇಂದೇನೂ ಅವಳಲ್ಲಿ ಬರ.ವುದೆ ಇಲ್ಲಂತ
ಎಪೆಮನೆ ಕಳಕೊಂಡು ಕುಂತಾನೋ ।
" ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ—
ಇನ್ನೇನು ನನ ಗತಿ?" ಅಂತಾನೋ॥೧೪॥

ಕುರಿಗೋಳ ಓಡಾಟಾ ನೋಡ್ಕೊಂಡಿ
ಕಣ್ಣಾಬಿಟ್ಟ
ಕುರಿಹಿಂಡಿನೊಳಗಾಕಿ ಕಂಡಾಳೋ ।
ಜಾಲಿಯ ಹೊಲದಾಗಿನ ಬೇಲಿಯ
ಮುರಕೊಂತ
ಸಪ್ಪಳಾ ಮಾಡುತ ನಿಂತಾಳೋ ॥ ೧೫ ॥

(ಓಟ)

ಚಟಕ್ಕನೇ ಎದ್ದು ಗೊಂಗಡಿ ಛಟಛಟ
ಜಾಡಿಸಿ ।
ಹೆಗಲಮ್ಯಾಲ ಹೊತ್ತುಕೊಂಡು ಕುರಿಹಿಂಡು
ಓಡಿಸಿ ।
ದೂರದೂರ ನೋಡಿಕೊಂತ ಮಿಕಿಮಿಕಿ
ಪಿಳಕಿಸಿ ।
ಆಕೀ ಕಡೆ ನೋಡಲಾಕ ಹೋಗತಾನ
ಫುರಮಾಸಿ ।

(ರಾಯಿ)

ಒಣಗಿದ ಜಾಲಿಯ ಟೊಂಗೀ ಮುರದು
ಕೈಯಾಗ್ಹಿಡಕೊಂಡು ಹೊಂಟಾನೋ ।
" ಬೇಲೀ ನೀಯೇನ ಬ್ಯಾಡs " ಅಂತ
ಜಾಲಿಯ ಕಟಿಗೀನ ಕೊಟ್ಟಾನೋ ॥೧೭॥

೫

(ಓಟ)

ಸೆರಗೆಳದು ಮಾರಿಮ್ಯಾಲ.....। ಆಕಿ-
ಮುಗಳ್ನಗ ನಕ್ಕಾಳ.....ಗೀಗೀಗೀ
ಟೊಂಗೀ ಲಟಾಲಟಾ ಮುರಿದಾಳ.....
ಉಡ್ಯಾಗಟ್ಟಕೊಂಡು ಹೊಂಟಾಳs.....
ಗೀಗೀಗೀ ॥ ೧೮ ॥

ಒಬ್ಬರನೊಬ್ರು ನೋಡತಾರಣ್ಣಾ,
ಪ್ರೀತೀ ಗಂಡ-ಹೆಣ್ಣಾ
ಇಬ್ಬರೊಳಗೂ ಮೌನ-ಮೌನ ।
ಜಾಲೀಹಳದೂರ ರಾಮರಾಯರ ಮಗ
ಸ್ವಾಮಿರಾಯ ಹೇಳವಾನ। ॥ ೧೯ ॥

× × ×

ನೆಬತೀ ಹಳ್ಳದ ದಂಡೀಮ್ಯಾಲೆಲ್ಲಾ
ನೆಬತೀ ಕಂಟೀನೆ ಹಬ್ಬ್ಯಾವೋ ।
ಜಾಲೀಯ ಬಡ್ಡೊ[illegible]ದ ಬಿದ್ದಽದೋ-ಅದರ
ಟೊಂಗಿಗಳೊ[illegible] ಒಣಗುರ್ಯಾವೊ !

* ಒಂದು ಜಾತಿಯ ಮುಳ್ಳುಕಂಟ

ಸಣ್ಣಕತೆಯ ತಂತ್ರ

ಶ್ರೀ ಎನ್. ಎಸ್. ಗದಗಕರ ಬಿ. ಎ. ಧಾರವಾಡ

ಸಣ್ಣ ಕತೆ ಜನತೆಗೆ ಅತ್ಯಂತ ಲೋಕಪ್ರಿಯವಾಗಿದೆಯೆಂಬುದಕ್ಕೆ ಇಂದಿನ ಇಪ್ಪತ್ತನೆಯ ಶತಮಾನದಲ್ಲಿ ಯಾವ ಸಂಶಯವೂ ಉಳಿದಿಲ್ಲ. ಇಂದಿನ ವಾರಪತ್ರಿಕೆಗಳಲ್ಲಿ, ಮಾಸಪತ್ರಿಕೆಗಳಲ್ಲಿ, ವಿಶೇಷ ಸಂಚಿಕೆಗಳಲ್ಲಿ, ತ್ರೈಮಾಸಿಕಗಳಲ್ಲಿ ಸಣ್ಣಕತೆಗಳು ತಪ್ಪದೆ ಬರುವುವು. ಬೇರೆ ಏನಿಲ್ಲದಿದ್ದರೂ, ಪತ್ರಿಕೆ ಎನಿಸಿದ ತಪ್ಪಿಗೆ ಒಂದು 'ಸಣ್ಣಕತೆ' ಇದ್ದೇ ಇರುವುದು. ಒಳ್ಳೆಯವರಿರಲಿ ಕೆಟ್ಟವರಿರಲಿ ಸಾವಿರಾರು ಜನರಿಗೆ ಅವನ್ನು ಓದುವ ಹುಚ್ಚಲು ಹರಿಪು-ಗಪ ಇದೆ.

'ಹಾಗಾದರೆ ಇಂದಿನ ಸಣ್ಣಕತೆಯ ಲೋಕಪ್ರಿಯತೆಗೆ ಕಾರಣ ವೇನಿರಬಹುದು?' ಎಂದು ಸಹಜವಾಗಿ ಪ್ರಶ್ನೆ ಉದ್ಭವಿಸಬಹುದು. ಮುಖ್ಯವಾಗಿ ಜಗತ್ತು ನೊದಲಿಂದಲೂ ಕ್ಷಣಕ್ಷಣಕ್ಕೆ ಮುಂದಡಿಯಿಡುತ್ತಿದೆ ಎಂಬದು ನಿರ್ವಿವಾದ. ಇಂದು ಜನರಿಗೆ ನೂರಾರು ಕೆಲಸಗಳಿದ್ದಾಗ, ಹಿರಿಯ ತೊತ್ತಿಗೆಗಳನ್ನು ಓದುಲಿಕ್ಕೆ ತೆರವು ಎಲ್ಲಿ? ನಾ ಮುಂದೆ ನೀ ಮುಂದೆ ಎಂದು ನಿರಂತರ ಹೋರಾಟ ನಡೆದ ಈ ಕಾಲದಲ್ಲಿ ಕೇವಲ ಸಾಹಿತ್ಯಲೋಲರಾದರೆ ನಮ್ಮ ಬದುಕಿಗೆ ಬಗೆ ಏನು? ಈ ಸಮಸ್ಯೆ ಎಷ್ಟೋ ಜನರಿಗೆ. ಕೇವಲ ರಂಜನೆಗೆಂದೇ ಜನಸಾಮಾನ್ಯರು ಸಾಹಿತ್ಯಕ್ಕೆ ಕೈಚಾಚುವುದುಂಟು.—ರುಚಿ ಇಲ್ಲಿವೆ ವಿಲಾಸಕ್ಕೆಂದು ಚಹಸ್ಕೆ ಎಲ್ಲರೂ ಹೋಹೋಗುವಂತೆ ಎನ್ನಿ ಬೇಕಾದರೆ! ಜನರ ಈ ಬುದ್ಧಿಗೆ ಆಹಾರ ಕಲ್ಪಿಸುವುದು ಸಣ್ಣ ಕತೆಯಲ್ಲವೇ? ಅಂತೆಯೆ ಸಣ್ಣಕತೆಗಾಗಿ ಜನರೆಲ್ಲರಿಗೂ ವಿಚಿತ್ರ ವ್ಯಾಮೋಹ.

ರಂಜನೆ ಸಣ್ಣಕತೆಯ ಧ್ಯೇಯವೆನಿಸಿದರೂ ಅದರ ತಂತ್ರವನ್ನು ಯಾರೂ ಬೇಳುಗಳೆಯಲಾಗದು. ಸಣ್ಣಕತೆಗೆ ಮೊಟ್ಟಮೊದಲು ಬಾಹ್ಯಸ್ವರೂಪದ ದೃಷ್ಟಿಯಿಂದ ಒಂದು ವ್ಯಾಖ್ಯೆ ಕಲ್ಪಿಸಬಹುದು: ಐರ್ಫತಾಸಿನಿಂದ ತಾಸಿನವರೆಗೆ ಓದಬಹುದಾದ ಗದ್ಯ ಸಣ್ಣಕತೆ. ಇಷ್ಟರಿಂದಲೇ ಅದರ ಅಂತರಂಗದಲ್ಲಿ ಹುದುಗಿರುವ ಲಕ್ಷಣಗಳ ಕಲ್ಪನೆ ಬಾರದು. ಮಿತಿಯಾಗಿ ಹೇಳಿ ಚಿತಿಯಾಗಿ ಬೀಜಿಸುವುದು ಸಣ್ಣಕತೆಯ ಒಂದು ಸೂತ್ರಬದ್ಧರೀತಿ ಎಂಬಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರಲಿಕ್ಕಿಲ್ಲ. ಭಾವಗೀತೆಯಂತೆ ಸಣ್ಣಕತೆ—ಸಂಕ್ಷೇಪತೆ, ಸರಲತೆ, ಹೃದಯದಿಂದ ನೇರವಾಗಿ ಹೊಮ್ಮುವ ಭಾವನೆಗಳು—ಹೀಗೆ ಲಕ್ಷಣಗಳುಂಟು. ಸುತ್ತುಮುತ್ತಲಿನ ದೃಶ್ಯ ಸಮಸ್ಯೆಗಳನ್ನು ಕಲಾಪೂರ್ಣವಾಗಿ ವಿವೇಚಿಸಿ, ಜೀವನಕ್ಕೆ ಕನ್ನಡಿ ಹಿಡಿಯುವುದಲ್ಲದೆ ನಾಶ್ವತತೆಯ ಕಟ್ಟು ಅದಕ್ಕಿದೆ. ಅಂತೆಯೆ ಮನಸೆಳೆಯುವ ಪ್ರಾರಂಭದೊಡನೆ, ಚಿತ್ತಭಿತ್ತಿಯಲ್ಲಿ ಚಿತ್ರ ಕೂರಿಸಿದಂತೆ ವಿಚಾರ ರೂಪಿಸುವ ಕೊನೆ ಬೇಕು. ಕಪಿಗ ಆಪೂರ್ಣ ಜೀವಕಳತುಂಬಲು ಒಂದು ವಿಶೇಷ ವಿಧಾನವೂ ನಡುವೆ ಒರುವುದುಂಟು. ಜೀವನದ ಮನೋಹರವಾದ ಪಡಿನೆಳಲಿನ ಜೊತೆಗೆ ಆದರ್ಶ ಸಣ್ಣಕತೆಯಲ್ಲಿ ಪಾತ್ರಪರಿಪೋಷಣೆಗೆ ಪ್ರಶಸ್ತಿಯಿದ್ದರೂ, ಮುಖ್ಯಪಾತ್ರವು ಒಂದೇ ಇರಬೇಕಾದುದು. ಆ ಪಾತ್ರದ ಎಲ್ಲ ಲಕ್ಷಣಗಳು ಕತೆಯ ಓಟದಲ್ಲಿ ಧ್ವನಿತವಾಗದಿದ್ದರೂ ಕೆಲವು ಲಕ್ಷಣಗಳಂತೂ ಬಿಟ್ಟುಬಿಡದೇ ಪರಿಣಾಮಕಾರಿಯಾಗಿ ಚಿತ್ರಿತವಾಗುವುದು ಅತ್ಯವಶ್ಯ. ಇಷ್ಟೇನು? ಘಟನೆ ಇಲ್ಲವಾದರೆ ಕತೆಗೆ ಬೆನ್ನೆಲುಬೆಲ್ಲಿ? ಅಂತೆಯ ಕಲೋಪಾಸಕರು ಸಣ್ಣಕತೆಗೆ ಮುಖ್ಯವಾಗಿ ಘಟನೆ ಒಂದೇ ಬೇಕೆಂದು ಹೇಳುವರು. ಒಂದೇ ಪಾತ್ರಮುಖ್ಯವಾಗಿರಲಿ, ಒಂದೇ ಘಟನೆ ಸ್ಫುಟವಾಗಿರಲಿ, ಆದರೆ ಸಣ್ಣಕತೆಯು ಒಂದೇ ಉದ್ದೇಶದಿಂದ ಸ್ಫೂರಿತವಾಗಿರದಿದ್ದರೆ ರಸಭಂಗವಾಗುವುದು. ಆಗ ಏಕತಾನವಾಗಿ ನಿಶ್ಚಿತ ಪರಿಣಾಮವಾಗದು ಆ ಮೇಲೆ ಕತೆಯ ಜೀವಾಳವಾದ ಕುತೂಹಲವೂ ಕೆರಳದಂತಾಗದು. 'ಮುಂದೇನು?' ಎಂದು ಓದುಗನಿಗೆ ಕೇಳಬೇಕೆನಿಸದೆ 'ಇದೂ ಒಂದು ಹಾಳುರಗಳೆ' ಎಂದು ಆಕಳಿಸಿ ತೂಕಡಿಸಿ ಪುಸ್ತಕ ಬಿಸಾಕುವ ಮನವಾದರೆ, ಅದೆಂತಹ ಒಳ್ಳೆಯ ಸಣ್ಣ ಕತೆ? ಹಾಗೆ ಅಂತಹದನ್ನೇ ಒಳ್ಳೆಯ ಕತೆಯೆಂದು ಭ್ರಾಮಕ ಕಲ್ಪನೆ ಮಾಡಿಕೊಳ್ಳುವುದರ ಬದಲು ವಿಹಾರಕ್ಕೆಂದು ಹೊರಹೊರಡುವುದು ವಿಹಿತ. ಸೃಷ್ಟಿಯ ಮಡಿಲಲ್ಲಿ 'ಮುಗಿಲುಮಾರಿಯು ರಾಗರತಿಯು ನೀಜಾದರೂ' ನೋಡಲು ದೊರೆತೀತು. ಹೊಟ್ಟೆತುಂಬ ನಗ ತಲೆತುಂಬ ವಿಚಾರ ಪೂರಯಿಸಲು ನಾಲ್ಕಾರು ಗೆಳೆಯರಾದರೂ ಒಂದು ವೇಳೆ ದೊರಯಬಹುದು.

ಸಣ್ಣ ಕತೆಯ ತಂತ್ರದ ದೃಷ್ಟಿಯಿಂದ ನಿಚಾರಿಸಲಾಗಿ ನವೀನ ಮಾದರಿಯ ಕತೆಗಳು ತೀರ ಕಲವು ಮಾತ್ರ ದೊರೆಯುವವು. ಆನಂದರ 'ನಾನು ಕೂಂದ ಹುಡುಗಿ' 'ಹೆಡತಿಯು ಕಾಗದ' ಗಳು ಘಟನಾತ್ಮಕವಾದುವಲ್ಲವೆ ಪಾತ್ರಪರಿಪೋಷಣೆ-ಪ್ರಾರಂಭ-ಮುಕ್ತಾಯಗಳು ಮನೋಹರವಾಗಿವೆ ಹೃದಯಸ್ಪರ್ಶಿಯಾಗಿವೆ. ಆನಂದಕಂದರ 'ಜೀವದ ಹೂ' ಎಂಬ ಕತೆಗೆ ಆದರ್ಶವೆನ್ನಲು ಅಡ್ಡಿ ಇಲ್ಲ. ಮನೆಯಲ್ಲಿ ಹಬ್ಬದ ನಿಮಿತ್ತ ಸಂಭ್ರಮ; ಎಲ್ಲಿ ನೋಡಿದರೂ ತಳಿರು ತೋರಣದ ಶೃಂಗಾರ; ಪಂಚಪಕ್ವಾನ್ನಗಳ ಊಟದ ಸಿದ್ಧತೆ ಯಜಮಾನನ ಅಪೂರ್ವ ಆನಂದ..... .....ಎಲ್ಲವೂ ಹೀಗೆ ಉನ್ಮಾದದಲ್ಲಿ ಹಾಸು-ಹೊಕ್ಕಾದಾಗ 'ಮನೆಯ ಮಗುವು ಬೀದಿಯ ಪೋಟುಗೆ ತುತ್ತಾಗಿ ಮಡಿಯಿತು' ಎಂಬ ಸುದ್ದಿ ತಲಪಿದಾಗ, ಎಂತಹ ಹಾಹಾಕಾರ, ವಿಚಿತ್ರ ಪರಿಸ್ಥಿತಿ! ಇಲ್ಲಿಯ ವಸ್ತು,—ಕಾವ್ಯಮಯ ಬಣ್ಣನೆ "ಮಮತೆಯ ಮುಡಿಪಿ"ನಲ್ಲಿ ಇಲ್ಲದಿದ್ದರೂ ಅಲ್ಲಿಯ ವಸ್ತು ಅಧಿಕಾರಲಾಲಸೆಯ ಅನಾಹುತ ತೋರಿಸುವುದಕ್ಕಾಗಿಯೇ ಮೀಸಲು. ಆದರೂ ಅಲ್ಲಲ್ಲಿ ಮಿನುಗುವ ಮಾತಿನ ಮಿಂಚು, ಕತೆಯ ಏಕತೆಯ ಮಟ್ಟಿ, ರಾಯರ ವರ್ಣ, ಮಗಳು-ಅಳಿಯರ ಪ್ರಣಯ-ಎಲ್ಲವೂ ಕೊನೆಗೆ—ರಾಯರ ಅಳಿಯ ದೇಶಕ್ಕಾಗಿ ಆತ್ಮಾರ್ಪಣೆ ಮಾಡಿದಾಗ —'ಅಯ್ಯೋ ರಾಯರ ಜನ್ಮವೇ!' ಎಂದು ಹಳಹಳಿಯಾಗುವುದು. ಓದುಗರು ಸಿಟ್ಟುಸಿರಿಡುವರು. ಇನ್ನು ಟೇಂಗ್ಸೆಯವರ "ಗಂಗೆಯ ಗುತ್ತಿಗೆ" ಎಂದರೆ ನಮ್ಮ ಸಮಾಜ ಜೀವನದ ಅಂದವಾದ ಕೈಗನ್ನಡಿ. ನಮ್ಮ ನಿತ್ಯವ್ಯವಹಾರದ ಕಷ್ಟ-ನಷ್ಟಗಳಾವುವು? ಅವೆಲ್ಲವೂ ಇಲ್ಲಿ ಕಲೆತು ಕುಂಚದಿಂದ ಚಿತ್ರಿತ

ಗ್ಯವನ

ನಾಗಿವೆ. ಥಾಮಸ್ ಹಾರ್ಡಿ ಎಂಬ ಪ್ರಸಿದ್ಧ ಆಂಗ್ಲ ಲೇಖಕನು ತನ್ನ ಜನ್ಮಭೂಮಿಯಾದ ವೆಸೆಕ್ಸ್ ದೇಶವನ್ನು ಸಾಹಿತ್ಯರಂಗಕ್ಕೆ ಇಳಿಸುವ ಶ್ರೇಯಸ್ಸು ಪಡೆದಿದ್ದರೆ, ಟೇಂಗ್ಸ್‌ಯವರು ಬರಿ ಹುಟ್ಟಿದ ಊರೇಕೆ? ಅಲ್ಲಿಯ ಚಿಕ್ಕ ದೊಡ್ಡ ಬೀದಿಗಳು, ಗಂಡು-ಹೆಣ್ಣಿನ ಸಮಸ್ಯೆ, ಬಡವರ ಗುಡಿಸಿಲು, ಊರಿನ ಬಿಳಿಛಾಯೆ, ಜನರ ವೇಷ-ಭೂಷಣ-ಭಾಷೆ— ಮೊದಲಾದುವುಗಳಿಗೆಲ್ಲ ಜೀವಕಳೆ ತುಂಬಿ ಕಥಾ ಪ್ರಪಂಚದಲ್ಲಿರಿಸಿದ್ದಾರೆ. **ಕೆ. ಗೋಪಾಲಕೃಷ್ಣರಾಯರ** ಕಥಾಸಂಗ್ರಹಗಳಲ್ಲಿಯ ಯಾವ ಪಾತ್ರಗಳನ್ನು ಮರೆತರೂ ನಟಿಯನ್ನೂ 'ಬಂಗಾರದ ಡಾಬಿ'ನ ಹುಡುಗಿಯನ್ನೂ ಮರೆಯಲಾಗದು. ನಟಿಯಲ್ಲಿ ಮನೋವಿಶ್ಲೇಷಣೆಯ ಸೊಬಗನ್ನು ಕಂಡರೆ 'ಬಂಗಾರದ ಡಾಬಿ'ನಲ್ಲಿ ಕಥಾನಾಯಕಿಯ ಸ್ವಾರ್ಥತ್ಯಾಗ ಬುದ್ಧಿ ನಮ್ಮ ಮನ ಸೆರೆಹಿಡಿಯುವುದು. ಲಗ್ನವಾದ ಕೆಲದಿನಗಳಲ್ಲಿ ಗಂಡನೊಡನೆ ಬಾಯಿಬಿಟ್ಟು ಮಾತನಾಡದ ಹೆಂಗಳೆಯರು ಇಂದು ಹೆಚ್ಚಿರುವಾಗ, ಈ ಕಥಾನಾಯಿಕೆಯು ತನ್ನ ಗಂಡನ ವಿದ್ಯಾಭ್ಯಾಸದ ಪೂರ್ತಿಗಾಗಿ 'ಡಾಬು ಬೇಕಾದರೆ ಮಾರಿರಿ' ಎನ್ನುವಳು. ಇಂತಹ ಸ್ವಭಾವಸೌಂದರ್ಯವು ಸಾಧಾರಣವಾದರಿಯದೆ. ಹ. ಪಿ. ಜೋಶಿಯವರ 'ಭಾವಪ್ರಭಾತ' ಕಥಾಸಂಗ್ರಹದ ಕತೆಗಳಲ್ಲಿ ಸಣ್ಣಕತೆಯ ತಂತ್ರವು ಅತ್ಯಂತ ಸೂಕ್ಷ್ಮವಾಗಿ ಇಳಿದುಬಂದಿದೆ ಎಂದು ರಸಿಕ ಓದುಗನಿಗೆ ಹೊಳೆಯುವುದು. 'ನೈತ್ಯಾಂಗನೆ'ಯಲ್ಲಾಗಲಿ "ಕದೆ ಆಟ"ದಲ್ಲಾಗಲಿ ಪಾತ್ರ ಪರಿಪೋಷಣೆ ರಸವತ್ತಾಗಿದೆಯಲ್ಲದೆ, ಅವರ ವಿಶಾಲ ಹೃದಯಕ್ಕಾಗಿ ಬದರ ಸುಟ್ಟುವುದು. ಚಿಕ್ಕ ಚಿಕ್ಕ ವಾಕ್ಯಗಳಿಂದ—ಭಾವಗರ್ಭಿತ ಸಂವಾದದ ಸೊಗಸಿನಿಂದ— ಮಸ್ತವಾದ ಮೂರ್ತಿವೆತ್ತು ನಿಂತು ಓದುಗನನ್ನು ಮುಗ್ಧಗೊಳಿಸುವುದು. ಎಲ್. ಜಿ. ಬೇಂದ್ರೆಯವರ "ಸರಸೀ ಕೂಡ ಸಿನೆಮಾ" ಎಂಬ ಒಂದೇ ಕತೆ ಓದಿದರ ಸಾಕು; ಅವರ ಉಳಿದ ಕತೆಗಳ ಸೊಗಸು ತಾನೆ ತಿಳಿಯುವುದು. ಅದೊಂದು ಆದರ್ಶ ಸಣ್ಣ ಕತೆ. ಸೂಚ್ಯರ್ಥಬದ್ಧಗಳೇ ಕತೆಯ ಹೃದಯವಾದರೆ ಬೇಂದ್ರೆಯವರ ಕಥನ ಶೈಲಿಗೆ ಯಾರೂ ಮೋಹಿಸದವರು. ನಮ್ಮ ದೈನಿಕ ಜೀವನದ ಮನೋಭಾವದ ಪ್ರತಿಬಿಂಬವೇ ಅಲ್ಲಿದೆ ಹಿರಿಯರ ಕಣ್ಣು ತಪ್ಪಿಸಿ ಸಿನೇಮಾಕ್ಕೆ ಹೋಗುವುದು ಪ್ರಣಯಿಗಳಿಗೊಂದು ದೊಡ್ಡ ಸಾಹಸವೇ! ಇಂತಹದರಲ್ಲಿ ಗೆದೆಯಲಾಗದ ಹಲವು ಯುವಕರ; ತಮ್ಮ ಪ್ರೇಯಸಿಯರಿಗೆ ಕಳಹಳಿಯುಂಟುಮಾಡಿರಬಹುದು. ಇಂತಹ ಸಾಮಾನ್ಯ ವೈಶ್ಯ ಬಿಂದಲೇ ಕತೆಗೆ ಕಳೆಕಟ್ಟಿದೆ. ನೈಜ ವಾತಾವರಣ ಕಲ್ಪಿಸಲೋಸುಗ ಒಳಸಲಾದ ಚಿಕ್ಕ ಚಿಕ್ಕ ಸಂಗತಿಗಳು ಹೆಸರುಗಳು— ಕತೆಗಾರರ ಬುದ್ಧಿಮತ್ತೆಯ ಕೈಚಳಕದ ದ್ಯೋತಕವಾಗಿದೆ. **ಕೃಷ್ಣಕುಮಾರ** ಲ್ಲೂರರ "ಜೀವನ" ಎಂಬ ಕತೆ ಇಷ್ಟು ಸಾಮಾನ್ಯ ವಸ್ತುವಿ ದ ಕೂಡಿಲ್ಲ. ಅಲ್ಲಿ ಪುನರ್ವಿವಾಹದ ಗಂಭೀರ ಸಮಸ್ಯೆ ತಲೆ ತೋರಿದೆ.

ಮೊದಲು ಮುಪ್ಪಿನ ತಾಯಿ ಮಗನನ್ನು ತಿರಸ್ಕರಿಸುತ್ತಿದ್ದರೂ, ಸೊಸೆಗೆ ಸೊಮ್ಮಗನ ಲೀಲೆಯಿಂದ ಮುಗ್ಧಳಾಗಿ, ಎಲ್ಲಿ ಮರೆತ್ತು ಸೊಸೆಯು ಬಗ್ಗೆ ಅಕಸ್ಮಿಕ ಮೋಹ ತಳೆಯುವಳು! ಆದರ್ಶ ನೈಷ್ಠತ್ಯಪ್ರಣಯದ ಜೊತೆಗೆ ಜೀವನದ ವಿರೋಧಗಳೂ ಸಮರಸವಾಗಿ, ಕತೆಗೆ ಮೆರುಗು ಉಂಟಾಗಿ, ಮೊದಲಿನಿಂದ ಕೊನೆಯವರೆಗೂ ಏಕತಾನವಾದ ಪರಿಣಾಮವಾಗುವುದು. ಕತೆಯ ಬಗೆಗೆ ಕುತೂಹಲವೂ ಹೆಚ್ಚುತ್ತ ಹೋಗುವುದು. **ಅನಿರುದ್ಧರ** "ಇದೂ ಒಂದು ಕನಸಾಗಬಾರದಿತ್ತೇ?' ಬಸವರಾಜರ "ಬರದ ದೇವಿ" ಇವು ಕಥಾತಂತ್ರದ ದೃಷ್ಟಿಯಿಂದ ಹೊಸ ಪ್ರಯೋಗಗಳೆ. **ಕುಮಾರಿ ದೇವಾಂಗನಾ ರಾಪ್ತಿ**, ದಿವಂಗತ **ಗೌರಮ್ಮ—ಶ್ಯಾಮಲಾದೇವಿ** ಯರು ಸಣ್ಣಕತೆಯ ತಂತ್ರವನ್ನು ಬಿಟ್ಟುಬಿಡದೆ ಪೋಷಿಸಿರದಿದ್ದರೂ ಜೀವನವನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಉತ್ಸಟೇಚ್ಛೆ ತೋರಿದ್ದಾರೆ.

ಹೀಗೆ ಬೆರಳನೆಣಿಸಬಹುದಾದಷ್ಟು ಒಳ್ಳೆಯ ಕತೆಗಾರರಿದ್ದರೂ ಒಟ್ಟಿನಮೇಲೆ ಇಂದು ಒಂದು ಬಗೆಯಿಂದ ಸಣ್ಣಕತೆಯ ಅವನತಿ ನಡೆದಿದೆ. ಅಲ್ಲಲ್ಲಿ ಅನೇಕ ಕತೆಗಳು ಪ್ರತಿ ತಿಂಗಳೂ ಮಾಸಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದರೂ, ವಾರಪತ್ರಿಕೆಗಳಲ್ಲಿ ಕಾಣುತ್ತಿದ್ದರೂ ಜಗತ್ತಿನ ಬೇರೆ ಭಾಷೆಗಳಲ್ಲಿ ಹೊರೆಯುವಷ್ಟು ಒಳ್ಳೆಯ ಸಣ್ಣ ಕತೆಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆತಿಲ್ಲ. ದೊರೆತಿರುವುದರಲ್ಲಿ ದೋಷಗಳಿವೆ. ನಮ್ಮ ಸಾಮಾಜಿಕ ಜೀವನದ ಪರಿಪೂರ್ಣ ಪರಿಚಯವಿಲ್ಲದಿರುವುದೇ ಇಂದಿನ ಎಷ್ಟೋ ಕತೆಗಳಲ್ಲಿಯ ಕೊರತೆಗೆ ಕಾರಣವಾಗಿದೆ. ಕೆಲವು ಕತೆಗಾರರು ತಮ್ಮ ಸುತ್ತಮುತ್ತಲಿನ ಜೀವನವಲ್ಲಿಯ ಮೂಲಗಳನ್ನು ಕತೆಯಲ್ಲಿ ಮೂಡಿಸದೆ, ಕಣ್ಣೆದುರಿಂದ ನೋಡದಿರುವ ಇಲ್ಲವೆ ಅಸಂಭವವಾದ ಕಲ್ಪನಾ ಸಾಮ್ರಾಜ್ಯಕ್ಕೆ ಓಡುಗನನ್ನೆಳೆಯುವರು. ಅಲ್ಲದೆ ಹೊಸ ಒರೆಹಗಾರರಿಗೆನ್ನೋ ಸರಿಯಾದ ಅನುಭವದ ಸಂಸ್ಕಾರವಿಲ್ಲದೆ, ಸಣ್ಣಕತೆಗೆ ಕೈಹಾಕಬೇಕಾದುದರಿಂದ ಅಂಧಾನುಕರಣ ಆಭಾಸಗಳೇ ಹಚ್ಚುವುದು. ಜೀವನ್ಮಿತ್ರದ ಅನುಭವವಿಲ್ಲದೆ ಕತೆ ಕಟ್ಟಲು ಪ್ರಾರಂಭಿಸಿದವರಿಗೆ ವಾಸ್ತವತೆಯು ಅರಿವುಂಟಾಗುವ ಬಗೆ ಹೇಗೆ? ಇಂತು ಭಾವಲೋಕವು ನಕ್ಷತ್ರ ಕೇಳಬೇಕೆಂಬ ಹುಚ್ಚು ಬಿಟ್ಟು, ನಮ್ಮ ಸುತ್ತುಮುತ್ತಲಿನ ಸಮಾಜವನ್ನೇ ಸೂಕ್ಷ್ಮವಾಗಿ ಪರಿಶೀಲಿಸಿ, ವಾಸ್ತವತೆಯ ಬಣ್ಣದೊಡನೆ ಸ್ವತಂತ್ರ ಸಾಮಾನ್ಯ ಕಲ್ಪನೆಯೊಡನೆ ಬರೆಯಲುಪಕ್ರಮಿಸಿದರೆ ಸಣ್ಣಕತೆಯು ಹೃದಯಂಗಮವು ಮನದುಂಬಿಗಬಹುದು.

ನಮ್ಮ ಸಣ್ಣಕಥಾ ಪ್ರಪಂಚವು ಇಂತಹ ಅವನತಿಯ 'ಕಷ್ಟವಡವಿಯ ಕಳೆದು, ಬೆಟ್ಟಮೊಳೆಗಳ ಪಾದ ಇರುಳನ್ನು ನೂಕಬೇಕಾದರೆ' ಇನ್ನೂ ನಮ್ಮ ಕತೆಗಾರರ ದೃಷ್ಟಿ ವಿಶಾಲವಾಗಬೇಕು. ಇಂದು ನಮ್ಮ ಕತೆಗಾರರ ಲೆಕ್ಕಣಿಕೆಗೆ ಹತ್ತದೆ ಎಷ್ಟೋ ವಿಷಯಗಳು ಉಳಿದಿವೆ. ಪ್ರೇಮವೆಂದರೆ ಗಂಡು-ಹೆಣ್ಣಿರವಷ್ಟೇ ಎಂಬ ಕಲ್ಪನೆ ಮಾಯವಾಗಿ ಅಣ್ಣ-ತಮ್ಮಂದಿರ ಪ್ರೇಮ, ತಾಯಿ-ಮಕ್ಕಳ ಪ್ರೇಮ, ತಂದೆ-ಮಕ್ಕಳ ಪ್ರೇಮ, ಗೆಳೆಯರ ಒಡನಾಡಿತನಗಳು ಕಥಾರಂಗಕ್ಕೆಳೆಯಬೇಕು. ಮನೋವಿಶ್ಲೇಷಣೆಯ ಉಪಾಯದಿಂದಲೂ ಕತೆಗೆ ಬಣ್ಣಕಟ್ಟದು; ಕತೆಯೂ ಜನಂತ ಕಾಲದ ವರೆಗೆ ಬಾಳದು. ಇಂದಿನ ಪರಿಸ್ಥಿತಿಯನ್ನೇ ವಸ್ತುವಾಗಿಟ್ಟುಕೊಂಡು ಒರೆದ ಕತೆಗಳು ಬಹಳ ಕಡಿಮೆ. ಹೆಚ್ಚಾಗಿ ಕತೆಗಾರರಿಗೆ ರಾಜಕಾರಣದ ಮಾತೆತ್ತುವುದೆಂದರೆ ಮೈಗೆ ಮುಳ್ಳು ಎನಿಸುತ್ತಿರಬೇಕಲ್ಲವೇ? ಅದೊಂದು ಅಸ್ಪೃಶ್ಯ ವಿಷಯವಾಗಿದೆ. ಪುಕ್ಕಲತನವಾಗಿದೆ. ಆಳು-ಳೋಳುಗಳ ಪಾತ್ರಗಳಲ್ಲಿಯೂ ಜೀವಕಳೆ

(ಮುಂದಿನ ಪುಟದ ಅಡಿಯಲ್ಲಿ)

'ಜಲಗಾರ' ದರ್ಶನ

(ಪುಸ್ತಕಾವಲೋಕನ)

ಪ್ರೊ. ಎಸ್. ಎಸ್. ಮಾಳವಾಡ ಎಂ. ಎ. ಧಾರವಾಡ

ಅಂದು ಆ ಊರಿನ ಶಿವಗುಡಿಯ ಯಾತ್ರೆ. ತೇರೆಳೆಯಲೆಂದು ಅನಿಬರು ಹೊರಟಿಹರು. ರೈತನೂ ಬೇಗಿನಲಿ ಹೊಂಟಿದ್ದಾನೆ. ಹಾದಿಯಲಿ 'ಜಲಗಾರ' (ಕಸಗುಡಿಸುವವ) ನನು ಯಾತ್ರೆಗಾಗಿ ಕರೆಯುತ್ತಾನೆ. "ನನಗೇಕೆ ಶಿವಗುಡಿಯ ಯಾತ್ರೆ? ಕರ್ಮವೇ ಆರಾಧನೆ. ಸೇವೆಯೇ ಪೂಜೆ. ಪೊರಕೆ ಎನ್ನ ಘಾಗದ ಆರತಿ. ಗುಡಿಸುವುದೇ ನನ್ನ ದೇವರ ಪೂಜೆ. ಎನ್ನ ಎದೆಯೇ ದೇಗುಲ. ಎನ್ನ ಒಲ್ಮೆಯೇ ಪೂಜೆ! " ಎಂದಿದು ಜಾಲಗಾರನ ಉತ್ತರ. ರೈತ ಮುಂದೆ ವಾದಿಸಲಾರ. 'ಜಲಗಾರ ಪೂಜೆಯೆಂಬುದನರಿಯ; ದೇವನೆಂಬುದನರಿಯ!' ಎಂದು ಗೊಣಗುಟ್ಟುತ್ತ ಮುಂದೆ ಸಾಗುತ್ತಾನೆ. ಜಲಗಾರ ಸಂಗೀತದಲಿ ತನ್ಮಯನಾಗುತ್ತಾನೆ. ಜಾತ್ರೆಗೆಂದು ಹೊರಟ ಇವರು ಪಾರ್ವರು ಆ ಸಂಗೀತಸುಧೆಯನ್ನು ಸೂರದಿಂದಲೆ ಸವೆದು 'ಗಾಯನವು ಮಧುರತಮ; ಅದು ಅಮಲ ಹೃದಯದಿಂದ ಹೊರಹೊಮ್ಮಿರಬೇಕು' ಎಂದುಕೊಂಡರು. ಹಾಡಿದವನು ಜಲಗಾರನೆಂದು ತಿಳಿದಾಗ "ಸಂಗೀತವನಿತೇನು ಮನಮೋಹಪಂತೆ ಇರಲಿಲ್ಲ; ಗಾನದೇವಿ ಹೀನ ಜಲಗಾರನನ್ನೊಲೆಯುವಳೇ? ಶೂದ್ರಕೊಳು ಕವಿವರ್ಯರು ರುದಿಸುವರೇ, ಹುಟ್ಟುವರೇ ಪಂಡಿತರು?"ಎಂದುಕೊಂಡು ಮುಂದುವರಿಯುತ್ತಾರೆ. ಜಾತ್ರೆಗೆ ಹೊರಟ ಜನಸ್ತೋಮದಲ್ಲಿಯ ಯುವಕನೊಬ್ಬ "ಜಲಗಾರ, ಜಾತ್ರೆಯೊಳು ಕೂಡ ನಿನಗೆ ಬಿಡುವಿಲ್ಲವೇ? ನಾಳೆ ಗುಡಿಸುವಂತೆ ಒಂದು ದಿನವಾದರೂ ವಿಶ್ರಾಂತಿಯಿರಲಿ! " ಎಂದು ಹೇಳಿದ್ದಕ್ಕೆ " ಯುವಕನೆ ತೆರಳು, ನೀನು ಶಿವನ ಗುಡಿಯೊಳಗೆ ಅರಸು; ನಾನು ಅವನನ್ನು ಪುಡಿಯೊಳಗೆ ಅರಸುವೆನು! " ಎಂಬುದು ಜಲಗಾರನ ಉತ್ತರ. ಜಾತ್ರೆಗಾಗಿ ಕುರುಹ ತಿರುಕ, ಕರ್ಮಠ ಭಟ್ಟ, ಮಾತಿನ ಮಲ್ಲರಾದ ಆಧುನಿಕ ತರುಣ ಇವರೆಲ್ಲ ಹೊರಟಿದ್ದಾರ 'ಧರ್ಮವೇ ಕಾಸು ಕೊಡಿರಪ್ಪಾ' ಎಂದ ತಿರುಕ. 'ನೀ ಸತ್ತರೆ ನನಗೇನೋ, ನನ್ನ ಮಡಿಬಟ್ಟೆ ಮುಟ್ಟಬೇಡ!' ಎಂದು ಹೇಳಿ 'ತ್ವಮೇವ ಮಾತಾ ಚ ಪಿತಾ ತ್ವಮೇವ' ಎಂಬ ಮಂತ್ರ ಉಚ್ಚರಿಸುತ್ತ ಭಟ್ಟ ಜಾತ್ರೆಯ ಹಾದಿ ಹಿಡಿದ. ತರುಣರಿಬ್ಬರು ನಮ್ಮ ಸಮಾಜದ ಮೂಢತನವನ್ನು ಕುರಿತು ಚರ್ಚೆ ನಡೆಸಿದ್ದಾರೆ. " ಬಡಜನರ ಕಣ್ಣೆತ್ತಿ ನೋಡದಿಹ ಮರುಗದಿಹ ಹಾಳು ಪೂಜೆಯು ಅದೇತಕೆ? ಜೀವದ ದರಿದ್ರ ನಾರಾಯಣರ ಪೂಜೆಯಲ್ಲವೇ ಪರಮಪೂಜೆ!" ಇಂತಿವು ಅವರ ಮಾತಿನ ತಿರುಳು. 'ಧರ್ಮವೇ ಕಾಸು ಕೊಡಿರಪ್ಪಾ' ಎಂಬ ಕೂಗು ಕಿವಿಗೆ ಬೀಳುತ್ತದೆ. ತರುಣರು ಅಪಾತ್ರದಾನ ಮಾಡಬಾರದೆಂದು ನಿರ್ಧರಿಸಿ, ತಿರುಕನು ಕಳ್ಳನೆಂದು ಹೇಳಿ ಅತನ ಕಣ್ಣನ್ನು ತಿವಿದು, ಬಿಡಿಸಲು ಬಂದ ಜಲಗಾರನನ್ನು ಒಪೆದು ಮುಂದೆ ಸಾಗುತ್ತಾರೆ. ಭಟ್ಟನಾದರೋ ಬಯ್ದು ಹೋದ; ಬಡಜನರಿಗಾಗಿ ಮರುಗುತ್ತಿದ್ದಂತೆ ಮಾತನಾಡುತ್ತಿದ್ದ ತರುಣರು ಬಡವರನ್ನು ಗೋಳಾಡಿಸಿ ಹೋದರು. 'ಶತ್ರುಗಳ ಕಾಟವಾವರೂ ಬೇಕು; ಮಿತ್ರರೆಂಬುವ ನೆವದಿ ಮುಸುಕ ತೋರುವ ಜನರ ಕಾಟಬೇಡ' ಎಂದು ಜಲಗಾರನಿಗೆ ಎನಿಸಿದುದು ಸಹಜವೆ.

\+ + + + + +

ಕೆಂಪಿನ ಮುತ್ತಿನ ಮಾಲೆಯೊಂದಿಗೆ ಉಷೆ ಬರುತ್ತಿರುವಾಗ ಭೂದೇವಿ ಹಾಡುತ್ತಿದ್ದಾಳೆ:

ಬಾರಾ ಸವಿಯೇ ಉಷೆಯೇ ಬಾರಾ,

....

" ತಳಿರಿನ ಸೊಬಗಿನ ಸಿರಿಯನುಟ್ಟು
ಸೈರಿನ ರಮಣೀಯತೆಯನು ತೊಟ್ಟು
ಮುಗಿಲಿನ ಕುರುಳನು ತೇಲಲು ಬಿಟ್ಟು
ಉದಯದ ಹೂಗಳ ಸೊಬಗನು ಕೊಯ್ದು
ವನಗಳ ನಗ್ನ ಗಭೀರತೆಯಾಯ್ದು
ವಿಶ್ವದ ಗರ್ಭವ ಬೆಲುವನು ಹೊಯ್ದು
ಮಾಯಾ ಮೋಹದ ಜಾಲವ ನೆಯ್ದು
ತಳಿರಿನ ಹೂಗಳ ಸಂಕವ ಮಾಡಿ
ಬಾರಾ ಉಷೆಯೇ ನಲಿನಲಿದಾಡಿ!"

ಭೂದೇವಿಯ ಈ ಹಾಡು ಮುಗಿಯುತ್ತಿರುವಾಗಲೆ ಕರ್ಮಯೋಗಿ ಜಲಗಾರ ಪೊರಕೆ-ಬುಟ್ಟಿಗಳೊಂದಿಗೆ ತನ್ನ ದಿನದ ಕೆಲಸಕ್ಕೆ ಹೊರಟಿದ್ದಾನೆ. ಉದಯವಾಗಲಿರುವ ರವಿಯನ್ನು ಕುರಿತು ಹಾಡುತ್ತಾನೆ: "ಜಗದ ಕಣ್ಣೆ ಬಾ ಬಾ! " ಎಂದು. ರಮ್ಯ ಅರುಣೋದಯದಲಿ, ಸ್ವರ್ಗೀಯ ಸುಪ್ರಭಾತದಲಿ ಜಲಗಾರ ಕಸಗುಡಿಸುವ ಕೆಲಸ ಅನುವಾದಾಗಲೇ ರೈತ, ಪಾರ್ವರು, ತಿರುಕ, ಭಟ್ಟ, ತರುಣರು ಜಾತ್ರೆಗಾಗಿ ಹೊರಟಿದ್ದರು. ಅವರು ಜಾತ್ರೆಗೆ ಹೋದರು. ಜಲಗಾ

(ತರುವಾಯ ಪುಟದಿಂದ ಮುಂದೆ ಸಾಗಿದ್ದು)

ತುಂಬಿ ಕಥಾಪ್ರಪಂಚದಲ್ಲಿ ಅವುಗಳಿಗೆ ಸ್ಥಾನ ನಿರ್ಮಿಸುವ ರೂಢಿಯನ್ನು ನಮ್ಮ ಕತೆಗಾರರನೇಕರು ಇಟ್ಟುಕೊಂಡಿಲ್ಲ. ಶರಚ್ಚಂದ್ರರ ಅಕ್ಕಾಜಿ, ಸುರೇಂದ್ರ, ದೇವದಾಸರಂತಹ ಬಹುಕಾಲ ಬಾಳಬಹುದಾದ ಪಾತ್ರಗಳು ನಮ್ಮ ಕಥಾಜಗತ್ತಿಗೆ ಅಡಿಯಿಟ್ಟಿಲ್ಲ. ಇತ್ತ ನಮ್ಮ ಕತೆಗಾರರು ಗಮನಿಸುವರೊ?

ಅಯಿತು. ಕೇವಲ ತಂತ್ರ ತಿಳಿದ ಸೂತ್ರಕ್ಕೆ ಸಣ್ಣಕತೆ ಕಟ್ಟಲು ಸಾಧ್ಯವಾಗಲಾರದು. ಪ್ರಪಂಚದ ಸೂಕ್ಷ್ಮಪರಿಚಯದೊಡನೆ ಕಲ್ಪನಾ ಚಮತ್ಕೃತಿಯನ್ನು ಮೈಗೂಡಿಸಿಕೊಂಡಿ ವಾಸ್ತವತೆ ತಾನೇ ಕಲೆಸೊರಿವುದು. ಪ್ರಾರಂಭ-ಮುಕ್ತಾಯಗಳ ಹೃದಯದಿಂದ ನೇರವಾಗಿ ಹೊರಹೊಮ್ಮುವ ಭಾವನೆಗಳನ್ನ ವಲಂಬಿಸಿವೆ. ಹೀಗೆ ಸಣ್ಣ ಕತೆಯು ಉತ್ಪಾದಕರು ಜೀವನದ ಎಲ್ಲ ಸಮಸ್ಯೆಗಳನ್ನು ಸಹಾನುಭೂತಿಯಿಂದ ನೋಡಿಕೊಂಡುದಾದರೆ ಇಂದಿನ ಅವನತಿಗೆ ಅವಕಾಶವೆಲ್ಲಿ? ಮುತ್ತಿನ್ನೆ ನಮ್ಮ ಕಥಾಪ್ರಪಂಚದ ಸುಂದರ ಸುಮಗಳ ನೆಲೆವೀಡಾಗಲಿ! ರಸಿಕ ಕುಲ ರಂಜಿಸಲಿ!

ತನ್ನ ಕರ್ತವ್ಯನೆಲಿ ನಿರತನಾವ. ಜಾತ್ರೆ ನಡೆಯಿತು. ಮುಗಿಯಿತು. ಸಂಜೆಗೆ ಜನ ಹಿಂದಿರುಗಿದರು. ಆಗ ದೂರದಿಂದ ಸಂಜೆಪೆಣ್ಣು ಬರುತ್ತಿದ್ದಳು. ಭೂದೇವಿ ಸಂಜೆಪೆಣ್ಣನ್ನು ಕುರಿತು ಹಾಡುತ್ತಿದ್ದಳು:

" ವ್ಯೋಮಯುವತಿಯ ಮುಖಕಿರೀಟ
ಭೂಮಿ ಪಾಪ ನೀತಿವು---ವನ-
ಧಾಮ ಹಸುರಿನುಡಿಗೆಯು,
ಇಂದುಯುವತಿಯ ಮುಕುಟಮಣಿಯು:
ತಾರೆ ರನ್ನ ಗಿಡಿಗಳು---ಕುರಿ-
ಹೋಲ ನೀಲಮುಗಿಲು

.....

ನಲಿನಲಿಯುತ ನುಲುನಡೆಯುತ
ಸಂಜೆಪೆಣ್ಣು ಬರುವಳು---ನೋ-
ಡಜೋ ತೇಲಿ ಬರುವಳು!"

ಈ ಹಾಡು ನಡೆಯುತ್ತಿರುವಾಗ ಜಲಗಾರನ ದಿನದ ಕೆಲಸ ಮುಗಿಯುತ್ತ ಬಂದಿತ್ತು. ಜಾತ್ರೆ ಮುಗಿಸಿ ಹೊರಟ ಕೃತ ತನ್ನ ಅನುಭವ ಹೇಳಿದ. - " ಜಾತ್ರೆಯದು ವೈಭವನ ಜಾತ್ರೆ ! ಜನವೇನು? ಧನವೇನು ? ಆ ಗಲಭೆಯೇನು ? ನೋಟಗಳೋ ಬಹು ರಮ್ಯ! " ಪಾರ್ವನ ಅನುಭವ ಇನ್ನೊಂದು ರೀತಿ. ಅವನಿಗೆ ದಕ್ಷಿಣೆಯ ದುಬ್ಬ ನಡೆಯಿತು. ಹಣ್ಣು-ಕಾಯಿ-ತೀರ್ಥ ಮಾರಿದ ದುಡ್ಡು; ರೂಪ್ರನನು ಸುಲಿಗೆ ಮಾಡಿದ ದುಡ್ಡು. ಇದೆಲ್ಲ ಅವನ ವೈಭವ. ಜನರು ಗುಂಪು ಗುಂಪಾಗಿ ನುನೆಗೆ ಹೊರಟಾಗ, ಜಲಗಾರ ಕೆಲಸ ಮುಗಿಸಿ ಒಂದೆಡೆ ಕುಳಿತು ಹಾಡುತ್ತ ಮೈಮರೆತಾಗ, ವಿನನು ಅತನಿಗೆ ಜಲಗಾರನ ವೇಷದಲ್ಲಿ ಪ್ರತ್ಯಕ್ಷನಾದನು. ಚಂದ್ರಮಂ ಗಗನಕ್ಕೆ ಬಿಸುಟು, ಗಂಗೆಯನ್ನು ಹಿಮಗಿರಿಗೆ ಎಸೆದು, ಹಾವುಗಳ ಹಾರಾಕಟ್ಟಿ, ಹಣೆಗಣ್ಣ ನೇಸರನಿಗೆ ಕೊಟ್ಟು, ಕಲ್ಪನೆಯ ದೂಪವನ್ನೆಲ್ಲ ತೆಗೆದೊಗೆದು, ನಿಜಭೂಪದಿಂ ಒಂದು ನಿಜ ಭಕ್ತ ಜಲಗಾರನೆದುರು ನಿಂತನು. 'ನೀನು ಊರ ಜಲಗಾರ, ನಾನು ಜಗದ ಜಲಗಾರ' ಎಂದು ವಿವನು ಹೇಳುತ್ತಿರುವಾಗ ಜಲಗಾರ 'ಶಿವ ನಾನು ಶಿವ ನಾನು'ಎಂದು ಭಾವಪರವಶನಾದ.

ಕಾವ್ಯಸೌಂದರ್ಯ, ಜೀವನನಿಷ್ಠೆ ಇವುಗಳನ್ನು ಸುಂದರವಾಗಿ ಮೈದಿಸಿಕೊಂಡ 'ಜಲಗಾರ' ವೃತ್ತಾಂತವನ್ನು ಶ್ರೀಮಾನ್. ಕೆ. ವಿ. **ಪುಟ್ಟಪ್ಪನವರು** ಇಂದಿಗೆ ಪದಿನಾಲ್ಕು ವರುಷಗಳ ಹಿಂದೆಯೆ ಚಿತ್ರಿಸಿದರು. ಆ ವೃತ್ತಾಂತದಲ್ಲಿ ಬರುವ ಪಾತ್ರಗಳು ಕೆಲವಾರು ಮಾತ್ರ ಬಂಚಿ ಮಾಯವಾದರೂ, ಅವುಗಳಿಂದ ವ್ಯಕ್ತವಾಗುವ ನಮ್ಮ ನವಾನವ 'ದರ್ಶನ' ಸ್ಫುಟವಾಗಿದೆ. ಈ ಕೃತಿಯ ಕೇಂದ್ರವ್ಯಕ್ತಿ ಜಲಗಾರ. ಈ ಪಾತ್ರದ ಸೂಲಕ ಪುಟ್ಟಪ್ಪನವರು ಒಳ್ಳೆಯ ಸಂದೇಶ ಬೀರಿದ್ದಾರೆ: **ನನ್ನ ಬಾಳದು ಬರಿಯ ಮಾಯೆಯಲ್ಲ! ನನ್ನ ಕರ್ಮವು ಬರಿಯ ಕನಸಲ್ಲ!"** ಎಂಬ ಹೊಸಯುಗದ ಕವಿಯ ಸಂದೇಶದಲ್ಲಿ ಗೀತೋಲೆ ಉಡಕವಾಗಿದೆ. ತಮ್ಮ ಕಾವ್ಯದಲ್ಲಿ ಗಳ ವರುಷಗಳ ಹಿಂದೆಯೆ ಶೈತನನ್ನು 'ನೇಗಿಲ ಯೋಗಿ'ಎಂದು ಕರೆದುದು ಗಮನಾರ್ಹವಾಗಿದೆ.

ಹಣ್ಣು-ಕಾಯಿ ತೆಗೆದುಕೊಂಡು ಮೋಜಿಗಾಗಿ ಜಾತ್ರೆಗೆ ಹೊರಟ ಕರ್ಮಠ ಭಟ್ಟನ ಮಡಿವಂತಿಕೆ. ಮಧುರತಮ ಗಾನವನ್ನು ಹಾಡಿದನು ಜಲಗಾರನೆಂದು ತಿಳಿದಾಗ ಸಂಪ್ರದಾಯವಾದಿಗಳು ತೋರಿಸಿದ ಜಾತಿಮದದ ಅಸಹನಶೀಲತೆ, 'ನುಡಿಗೂ ನೆಗಳ್ತಿಗೂ' ಸಂಬಂಧವಿರದ ತರುಣರ ಪ್ರೌಢತನ ಇವುಗಳಲ್ಲಿ ಕಂಡುಬರುವ ಪುಟ್ಟಪ್ಪನವರ ಸಮಾಜ ವಿಮರ್ಶೆ ಸೂಕ್ಷ್ಮವಾಗಿದೆ; ಸಹಜವಾಗಿದೆ. ಉದಾತ್ತ ಸಾಹಿತ್ಯದ ಕೃತಿಯಿಂದ ನಾವು ಅಪೇಕ್ಷಿಸುವ 'ದರ್ಶನ' 'ಸಂದೇಶ' 'ನೊಗಸು' ಇವುಗಳ ಹೊಂದಾಣಿಕೆ ಇಲ್ಲಿದೆ. ಧರ್ಮ, ಪೂಜೆ, ಮಡಿ, ಸುಧಾರಣೆಯ ಹಂಬಲ. ಜಾತ್ರೆ ಇವುಗಳ ರಹಸ್ಯವನ್ನು ಪುಟ್ಟಪ್ಪನವರು ಎತ್ತಿ ತೋರಿಸಿ ವ್ಯಾಲಿ.ಇಲ್ಲಿಯ ಕಲೆಯ ಉದಾತ್ತ ವಾತಾವರಣದಲ್ಲಿ ಕೇಳುಭಾವನೆಗೆ ಅವಕಾಶ ಇರಲಾರದು. ಕೊನೆಯಲ್ಲಿ ವಿನನು ಸ್ಪರ್ತ್ಯಕ್ಷನಾಗುವ ಭವ್ಯದೃಶ್ಯವನ್ನು ಚಿತ್ರಿಸುವಲ್ಲಿ ಕಂಡುಬರುವ ನಾಟಕೀಯ ಪರಿಣಾನು, ಒಟ್ಟಿಯ ಕಲ್ಪನೆ, ಭೂದೇವಿಯ ಹಾಡುಗಳಲ್ಲಿಯ ಸುಂದರ ಕಾವ್ಯ ಇವುಗಳನ್ನು ನುನಲಾಗಾ--- ಆದರ್ಶ ನಾಟಕ, ವಾಸ್ತವ ನಾಟಕ ಇವುಗಳನ್ನು ಕುರಿತು ಹೋಡುವ ವಾದ-ವಿವಾದದಲ್ಲಿಯ ಕಹಿ ಅರ್ಥವಿಲ್ಲವೆನ್ನಿಸದೆ ಹೋಗುತ್ತದೆ. ಪ್ರಸ್ತುತ ಸಮಾಜದ ಸತ್ಯ ಚಿತ್ರ ಮೊಂದಿಗೆ ಉಷಃಕಾಲ, ನಾಯಂಕಾಲ ಇವುಗಳ ರನ್ಮವಾಹ--ಕೆಲವುಟ್ಟಿಗೆ ನಾಂಪ್ರದಾಯಿಕವೂ ಅದ---ರಣಾನಿಸಿಗಳನ್ನು ಕೊಟ್ಟಿರುವ ಪುಟ್ಟಪ್ಪನವರು 'ವ್ಯಗತಿಲೀಲ' 'ನಾಂಪ್ರದಾಯಿಕ' ನಾಹಿತ್ಯಗಳ ನಮನ್ವಯ ನಾಡಿ ತೋರಿಸಿದ್ದಾರೆಂದು ಹೇಳಬಹುದು. ಈ ಕೃತಿಯಲ್ಲಿಯ ಪಾತ್ರಪರಿಚಯನನ್ನು, ವಿಚಾರಸ್ಪಾಲಿಯನ್ನು, ಸಂದೇಶವನ್ನು ವ್ಯಗತಿಲೀಲರು ಮೆಚ್ಚಿದೆ ಇರಲಾರರು. ಅಷ್ಟರಂತೆ ಇಲ್ಲಿಯ ಕಾವ್ಯಮಯ ವರ್ಣನೆಗಳನ್ನು ಕಲ್ಪನೆಯ ಸೊಗಸನ್ನು ಕೊನೆಯಲ್ಲಿ ಭಕ್ತನಿಗಾಗಿ ದೇವನು ವ್ಯಕ್ತೀಕರಣವಾದ ನನ್ಮನೋಹರನನ್ನು ನಾಂಪ್ರದಾಯಿಕ ನಾಹಿತಿಗಳು ಎತ್ತಿ ತೋರಿಸಿ, ತಮ್ಮ ಆಕ್ಷೇಪಣೆಯನ್ನು ನಮರ್ಥಿಸಿಕೊಳ್ಳಬಹುದಾಗಿದೆ. ಸುಂದರವಾದ, ನಾರ್ಥಕವಾದ ನಾಹಿತ್ಯ ಕೃತಿ ಇಂತಹ ಯಾವ ಯಾವ ಗಳನ್ನೂ ಹಾಟಿನಿಲ್ಲಿಲ್ಲವೆಂಬುದನ್ನು 'ಜಲಗಾರ' ನಿದ್ದ ಸೊಳಿಸುವಂತಿದೆ. ನಮ್ಮ ನಮಾಜದ ಪಾಂಚೀಕರಣದ ಪ್ರೌಢತನವನ್ನು ಬಯಲಿಗೆಳೆಯುವುದು ನಮಾಜದ ಹಿತದ ದೃಷ್ಟಿಯಿಂದ ಅನಿವಾರ್ಯವೇ ಆಗಿದೆ. ಆದರೆ ಬಿರುನುಡಿಗಳಿಂದ ಕೆಣಕುವುದೇ ಇಲ್ಲಿಯ ಉದ್ದೇಶವೆಂದು ಹೇಳಲು ಬರುವಂತಿಲ್ಲ. ಕವಿಯ 'ದರ್ಶನ'ದೊಂದಿಗೆ ನಮಾಜ ಸುಧಾರಕನ ಹಂಬಲವೂ ಸೇರಿ. ಸೌಂದರ್ಯದೊಂದಿಗೆ ಉಪಯುಕ್ತತೆ ಬೆರೆತು, 'ಜಲಗಾರ' ಇತ್ತೀಚನಾಗಿಯೂ ಸಫಲತೆಯನ್ನು ಪಡೆದಿದೆ.

ಜಲಗಾರ ಇಲ್ಲಿಯ ಕೇಂದ್ರ ವ್ಯಕ್ತಿಯಾದರೆ, 'ಜಾತ್ರೆ' ಇಲ್ಲಿಯ ಕೇಂದ್ರ ನನ್ನಿವೇಶ. ದೈವ ಇಲ್ಲಿಯ ಮೂರ್ತಿಯಾಗಿ. ಜಂಬವಾದ ವಿಗ್ರಹ, ಜೋಯಿಸರ ಜರತಾರಿ ಒಟ್ಟ ಇವುಗಳನ್ನು ಕಂಡು ಉಚ್ಚರಿಸಬಲ್ಲ ಹಿಂದಿರುಗಿದ ತಿರುಕನಿಗೆ ಜಾತ್ರೆಯೊಂದು ಹೊಟ್ಟೆ ಹೊರೆದುಕೊಳ್ಳುವ ಸಾಧನ. ಬಲ್ಲಿಗೆ ಹೋದ ಇನ್ನೂರು ಪಾರ್ವರಿಗೆ ಜಾತ್ರೆ ಉತ್ಪನ್ನದ ಬಾಬು: ಮೂಢ ಜನರನ್ನು ನುಲಿಗೆಮಾಡಿ ತನ್ನ ಹೊಕ್ಕಳ ತುಂಬಿಕೊಳ್ಳುವ ಅನುಕೂಲ ಈ ಎಲ್ಲಿ ನೋಟಗಳನ್ನು ನೋಡುತ್ತ, ಟೀಕಿಸುತ್ತ, ತಮ್ಮ ಜಾತ್ಯೆಯ ಜರ್ಜರಗೆ ತಾವೇ ನೆಚ್ಚುನ್ನ ಒಂದ ತರುಣರಿಗೆ ಜಾತ್ರೆ ಜರ್ಜರಿಯ ನಾಮಗ್ರಿಯನ್ನು ಒದಗಿಸಿಕೊಡುತ್ತದೆ. ಇವಿಷ್ಟು ಪಾತ್ರಗಳು ಕೆಲವೊಂದು ಸಂಘಾತಕೆಯಲ್ಲಿ ತೊಡಗಿವೆ. ಆದರೆ ಇನ್ನು ಕೆಲವು ಪಾತ್ರಗಳು ಹಾಗೆಯೆ ಬಂದು ಮಾಯವಾಗುತ್ತವೆ. 'ವಿನ್ನಪ್ಪನ. ಕೊಳ್ಳಿನ. ಗತಿಯಿಲ್ಲದ ಹುಡುಗಿಗೆ

ಜಾತ್ರೆಯಾವ ಸಮಾಧಾನವನ್ನೂ ಕೊಡಲಿಲ್ಲ. ಅವಳ ಬಾಳಿನ ಗೋಳು ಒಂದು ಹಾಡಿನಲ್ಲಿ ಮೈದೆತ್ತು ಬಂದಿದೆ. ವೈತ, ವಾರ್ಧ್ಯ, ತಿರುಕ, ತರುಣ ಇವರಿಗೆ ಒಂದೊಂದು ರೀತಿಯಿಂದ ಅನುಕೂಲವಾದ ಜಾತ್ರೆ ಈ ಹುಡುಗಿಯ ಪಾಲಿಗೆ ಏನೂ ಇಲ್ಲ. ಜಾತ್ರೆಯಿಂದ ಅವಳ ಮನೆಯ ತಾಪತ್ರಯ ನೀಗಲಿಲ್ಲ; ಮನಸಿನ ಮಗುಡು ಅಳಿಯಲಿಲ್ಲ. ಕಂಡ ಕಂಡ ಕಲ್ಲಿಗೆ ಕೈ ಮುಗಿದಳು, ಜಾತ್ರೆಗೆ ಹೋದಳು, ಪರಕೆ ಹೊತ್ತು ಕಾಣಿಕೆ ತೆತ್ತೂ ಆಯಿತು. 'ಕಲ್ಲಪ್ಪನವರಿಗೆ ಕರುಣೆಯಿಲ್ಲ?' ಇದು ಅವಳ ಹಾಡಿನ ಪಲ್ಲವಿ. ಆ ಮೇಲೊಬ್ಬ ಕವಿ ಬಂದು ಹಾಡಿ ಹೋಗುತ್ತಾನೆ. ಸುಖಪ್ರಪುಷ್ಪನೀನ. ಕಾರಣವಿಂದಲೆ ಈತ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳುವವನಲ್ಲ. ಏನೇ ಆಗಲಿ, ಎಲ್ಲ ಜನಜಂಗುಳಿಯೊಂದಿಗೆ ಜಾತ್ರೆಗೆ ಹೋದ; ಏನೂ ಕೊಳ್ಳದೆ ಬಂದ. ಜಾತ್ರೆಯ ಬಗೆಗೆ ರೈತನ ಉತ್ಸಾಹವಾದರೂ ಕುಡುಗಿಯ ನಿರಾಸೆಯಾದರೂ ಇವನಿಗೆ ಸೋಂಕುವಂತಿಲ್ಲ. "ಕೊಂಡದ್ದೇನು? ಮಾಡಿಕೊಂಡದ್ದೇನು? ಬರಿದೆ ಬಾಳನು ಜರಿವುದೇಕೆ?" ಎಂಬುದೇ ಇವನ ಹಾಡಿನ ಪಲ್ಲವಿ. ಜಾತ್ರೆಗೆ ಹೋದರೂ ಅಷ್ಟೇ, ಬಿಟ್ಟರೂ ಅಷ್ಟೇ. ಜೀವನದಲ್ಲಿ ಸೊಗಸನ್ನು ಕಾಣುವ ದೃಷ್ಟಿ, ಇದ್ದವನಿಗೆ ಎಲ್ಲಿಗೆ ಹೋದರೇನು? ಬಿಟ್ಟರೇನು? ಇಲ್ಲಿಯ ಕಬ್ಬಿಗನ ಸಂವೇದ ಅಶಾರ್ಮಾಣವಾಗಿದೆ. ಇನ್ನು ಜಾತ್ರೆಗೆಂದು ಹೋದ ಬಾಲಕರ ಗುಂಪಿನ ಹಾಡೊಂದಿದೆ. ಎಲ್ಲವೂ ಅವರಿಗೆ ಲೀಲೆಯೇ; ಜಾತ್ರೆಯಂತೂ ಹಾಡೆಯೇ ಎಂದು ಹೇಳಬೇಕಾದುದೇ ಇಲ್ಲ. ಮರುಳುವನವೇ ರತ್ನವಾಗಿರುವ ಅವರು.

"ಜವನ ಮೀಸೆಯುಕೆಳಿಸಿ
ಕೋಲೆಬಸವನ ಸಲಿಸವು"

ಎಂದು ಹೇಳುತ್ತಿರುವುದು ಸಹಜವೇ ಆಗಿದೆ. ಸ್ವಚ್ಛಂದ ಪ್ರವೃತ್ತಿಯಲಿ ವಿಹರಿಸುವ ಈ ಬಾಲಕರಿಗೆ 'ಲಾಭ-ನಷ್ಟವನೊಂದೂ ಇಲ್ಲ' ಹಾಡುತ, ಆಡುತ, ಕುಣಿಯುತ, ನಲಿಯುತ ಕಾಲವನ್ನು ಹಾಸ್ಯ ಮಾಡುವವರು ಅವರು. ಸಂಸಾರವನ್ನು ಕುರಿತು ಇಂತಹ ದೃಷ್ಟಿಯಿದ್ದರೆ ದುಃಖ ಎಲ್ಲಿಂದ ಬರಬೇಕು ?—ಎಂಬ ಸಂದೇಶ ಇಲ್ಲಿ ಒದಗಿದೆ.

ಕೊನೆಯದಾದ ಶಿವಸಾಕ್ಷಾತ್ಕಾರದ ದರ್ಶನ ಸಹಜವಾಗಿದೆ. ಊರ ಜಲಗಾರನನ್ನು ಜಗದ ಜಲಗಾರ ಸಂಧಿಸುತ್ತಾನೆ. ಶಾಸ್ತ್ರಿಗಳು ಶಿವನಿಗೆ ಕೊಟ್ಟ ದಾನಗಳನ್ನು ಕಳೆದರೆ, ಉಳಿಯುವ ಜಗದ ಜಲಗಾರನ ನಿಜವಾದ ದೃಶ್ಯ ಇಲ್ಲಿದೆ. ಶಿವನ ಒಗೆಗಿರುವ ಶಾಸ್ತ್ರಿಗಳ ಕಲ್ಪನೆಯೇ ಬೇರೆ; ಕಸಗೂಡಿಸುವ ತನ್ನ ಕರ್ತವ್ಯಕರ್ಮದಲ್ಲಿಯೇ ಜೀವನವನ್ನು ಅರಸುವ ಬಡವನೊಬ್ಬನಿಗೆ ಪ್ರತ್ಯಕ್ಷನಾದ ಶಿವನೇ ಬೇರೆ. ಅವನು ಹೇಳುವ ಮಾತುಗಳೂ ಮಾರ್ಮಿಕವಾಗಿವೆ:

"ಸೋದರನೆ ಶಾಸ್ತ್ರಿಗಳ ಕಂಗಳಿಗೆ ನಾನು
ನೋಡಲು ಕೂರೂಪಿಯಾಗಿದ್ದೆ; ಆದರಿಂದ
ಬೆಲ್ಲಾಂತ ತಣ್ಣಗಿರನೊಡನೆ ಮಾತಾಡಲೆನಗೆ.
ಅವರ ಭಾಗಕೆ ನಾನು ಪಾಪಿಯಾಗಿದ್ದೆ;
ಆದರಿಂದ ಗಂಗೆಯನು ತೊಡಸಿದರು ತಲೆಯಲ್ಲಿ
ತೊಳೆದೆನ್ನ ಪುಣ್ಯ ಮಾಡಲು ಎಂದು ! ಅಸ್ಪೃಶ್ಯ-
ನಾಗಿದ್ದೆ ! ಆದರಿಂದ ಪಣಿಗಲ್ಲು ಮುಡಿಸಿದರು
ಸುಟ್ಟಿನ್ನ ಶುಚಿ ಮಾಡಲೆಂದು ! ರಾಗ್ರತೆಯು-
ನೀಯಲೆಂದೆನಗೆ ಉರಗಗಳ ಸುತ್ತಿದರು
ಕೊರಳಲ್ಲಿ"

ಜಲಗಾರ ನಿಜವಾದ ಭಕ್ತನಾದ ಕಾರಣ, ಶಿವನು ಕಲ್ಪನೆಯ ರೂಪನನ್ನು ಬಿಸುಡಿ ನಿಜರೂಪದಲಿ ಕಂಡು 'ಜಲಗಾರನೆಸಗುವ ಕೆರುಗೆಲಸ ತೊಳಗುತಿಹ ಚುಕ್ಕಿಗಳ ಕಾಂತಿಗಿಂತಲೂ ಚಿರವೆಂಬುದನ್ನು ಸಿದ್ಧ ನೊಳಸಿದ್ದಾನೆ. ಕವಿ ಅದನ್ನು ರಮ್ಯವಾಗಿ, ಅರ್ಥವತ್ತಾಗಿ ಚಿತ್ರಿಸಿದ್ದಾನೆ.

'ಜಲಗಾರ'ದಲ್ಲಿ ಜಾತ್ರೆಯ ವಿಡಂಬನೆಯಿದೆ; ಮೂಢ ರೂಢಿಗಳ ಪ್ರತಿಭಟನೆಯಿದೆ. ನಿಜವಾದ ಶಿವನ ದರ್ಶನವಿದೆ. ಕರ್ಮಯೋಗಿಯೊಬ್ಬನ ಅಪೇಕ್ಷಣೀಯ ದರ್ಶನವೂ ಇದೆ. ಕವಿಯು "ಪೂಜೆಯೆಂಬುದು ಧರ್ಮಬುದ್ಧಿಯನು ಜೋಗುಳದಿ ಮಲಗಿಸುವ ಕಾಲಮಂತ್ರವು" ಎಂಬ ವಿಚಾರಸರಣಿಯನ್ನು ಒಳ್ಳೆಯ ಕವಿತೆಯ ಮೂಲಕ ಮಂಡಿಸುತ್ತ 'To instruct delight fully ಎಂಬ ಹೇಳಿಕೆಯನ್ನು ಸಮರ್ಥಿಸಿದ್ದಾನೆ.

ಇಂತಿದು ಜಲಗಾರ ದರ್ಶನ !

ಕನ್ನಡಿಗರು ದೀವಳಿಗೆಯಲ್ಲಿ ಮಾಡಬೇಕಾದ ಒಂದು ದೊಡ್ಡ ಕೆಲಸವೆಂದರೆ ಕರ್ನಾಟಕ ಏಕೀಕರಣ ಸಂಘಕ್ಕೆ ಸದಸ್ಯರಾಗುವುದು ನಮ್ಮೆಯಬೇಡಿ !

ತಿನೆಯ ಆವೃತ್ತಿ ಆಕರ್ಷಕವಾಗಿ ಹೊರಕ್ಕೆ ಬಂದಿದೆ !

ಬಡತನದ ಬಾಳು

'ಆನಂದ ಕಂದ' ರ ಕತೆಗಳ ಸಂಕಲನ

೧. ಆ ಚಿತ್ರ ಈ ಚಿತ್ರ, ೨. ಬಹಿಷ್ಕಾರ, ೩. ಹೊಟ್ಟೆಯ ಹೆಸರಾಟ, ೪. ರಾಜನ ಧರ್ಮ ಸಂಶೋಧನೆ ಎಂಬ ನಾಲ್ಕು ಸಾಮಾಜಿಕ ಸುಂದರ ಚಿತ್ರಗಳು ಇದರಲ್ಲಿವೆ.

ಒಂದಕ್ಕಿಂತ ಒಂದು ಹೃದಯಾಕರ್ಷಕವಾದ ಕತೆಗಳು ! ಲಲಿತವಾದ ಶೈಲಿ ! ಹದವನ್ನರಿತ ಕತೆಗಾರಿಕೆ ! ಓದಲು ಕೈಗೆ ತೆಗೆದುಕೊಂಡವರು ಮುಗಿಸುವವರೆಗೆ ಪುಸ್ತಕ ಕೆಳಗಿರಿಸರು.

ಬೆಲೆ: ೧— ೪—೦; ಅಂ. ವೆ. ಬೇರೆ

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದುಕೊಳ್ಳಬೇಕು

ಎಲ್ಲ ಪುಸ್ತಕ ವ್ಯಾಪಾರಿಗಳೂ ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು.

ಜ್ಞಾನವೋ, ಯುದ್ಧವೋ?

(ವಿಜ್ಞಾನ ವಿಚಾರ)*

ಶ್ರೀ. ಕೆ. ಎಸ್. ಸವಣೂರ, ಎಮ್. ಎಸ್ಸಿ. ಕರ್ನಾಟಕ ಕಾಲೇಜು, ಧಾರವಾಡ

ನಾವೇನೊ ಇಂದು ವಿಜ್ಞಾನಯುಗದಲ್ಲಿದ್ದೇವೆ. ಸಾಮಾನ್ಯವಾಗಿ ಇಂದಿನ ಕಾಲದಲ್ಲಿ ವಿದ್ಯುತ್ತಿನ ಸರ್ವಮಾನ್ಯ ಉಪಯುಕ್ತತೆಯು ಕಂಡುಬಂದರೂ, ಬೇರೊಂದು ರೀತಿಯಲ್ಲಿ ಇಂದಿನ ಯುಗವನ್ನು ತಜ್ಞರ ಯುಗವೆಂದೇ ಸಂಶೋಧಿಸಬೇಕಾಗುವುದು. ಮೇಲಾಗಿ ಇಂದು ದೊರೆತಿರುವ ಜ್ಞಾನಭಾಂಡಾರ ಮತ್ತು ಅದು ಪ್ರತಿಕ್ಷಣ ಬೆಳೆಯುತ್ತಿರುವ ವೇಗ ಇವುಗಳನ್ನು ಪರೀಕ್ಷಿಸಿದ್ದಾದರೆ, ಯಾವನೇ ಒಬ್ಬ ಮನುಷ್ಯನು—ಅವನು ಎಂತಹ ಮೇಧಾವಿಯೇ ಇರಲಿ,—ತನ್ನ ಜೀವಮಾನದಲ್ಲಿ ಎಲ್ಲವನ್ನೂ ಅವಗತ ಮಾಡಿಕೊಳ್ಳುವುದು ಸಾಧ್ಯವೇ ಇಲ್ಲವೆಂದು ಕಂಡುಬರುವುದು. ಇನ್ನು ಎಲ್ಲ ಜ್ಞಾನದ ವಿಷಯವನ್ನು ಬದಿಗಿರಿಸಿ ವಿಚಾರ ಮಾಡಿದುದಾದರೆ, ಯಾವುದೊಂದು ವಿಶಿಷ್ಟ ವಿಷಯದಲ್ಲಿ ಸಹ ನಿಷ್ಣಾತನಾಗುವುದು ಕೂಡ ಸಾಧ್ಯವಿಲ್ಲದಾಗಿಸಿ; ಹೀಗಾಗಿ ಮೇಲೆ ವಿವರಿಸಿದ ತಜ್ಞರ ಕಾರ್ಯಕ್ಷೇತ್ರವು ಅತ್ಯಂತ ಸುಸೂತ್ರಾದಿತವಾಗುವಂತಹ ಪರಿಸ್ಥಿತಿಯು ಇಂದು ಬಂದಿದೆಯೆಂದೂ ಮತ್ತು ಈ ಕ್ಷೇತ್ರದಲ್ಲಿಯ ಕಾರ್ಯಕಾರಣ ವಿಚಾರಗಳ ವಿಶಿಷ್ಟತಜ್ಞತೆಯೇ ಹೆಚ್ಚಿನ ಜ್ಞಾನಕ್ಕೆ ಮಾರ್ಗದರ್ಶಿಯಾಗಲು ಸಾಧ್ಯವೆಂಬುದೂ ನನಗೆ ಕಂಡುಬರಹತ್ತಿದೆ. ಈ ಮಾತು ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಾಗಿ ವಿಜ್ಞಾನದ ಬೆಳೆವಣಿಗೆಗೆ ಸಂಬಂಧಪಟ್ಟುದಾದರೂ, ಜ್ಞಾನದ ಸರ್ವತೋಮುಖ ಬೆಳೆವಣಿಗೆಗೆ ಸಹ ಅಗತ್ಯವಿದೆ.

ವಿಶಿಷ್ಟ ತಜ್ಞತೆಯು ಅಗತ್ಯವಿದ್ದರೂ, ಕೇವಲ ವಿಶಿಷ್ಟತಜ್ಞತೆಯು ನಿಜವಾದ ಜ್ಞಾನವನ್ನು ಬಿಚ್ಚಿ ತೋರಿಸಲು ಇಲ್ಲವೆ ಇಂತಹ ಜ್ಞಾನದ ಬೆಳೆವಣಿಗೆಯ ವೇಗವನ್ನು ಹೆಚ್ಚಿಸಲು ಮಾತ್ರ ಸಮರ್ಥವಾಗಲಾರದು. ಈ ತಜ್ಞನು ತನ್ನ ಕಾರ್ಯಕ್ಷೇತ್ರದಲ್ಲಿ ತಜ್ಞತೆಯನ್ನು ಪಡೆಯುವುದು ಎಷ್ಟು ಮಹತ್ತ್ವವಿದೆಯೋ ಅದಕ್ಕಿಂತ ಮಹತ್ತ್ವವು, ಹೀಗೆ ಬೇರೆ ಬೇರೆ ದಿಶೆಗಳಲ್ಲಿ ದೊರೆಯುವ ಸಿದ್ಧಾಂತಗಳಿಗಿನ ಸಂಬಂಧವನ್ನು ತಿಳಿಯುವುದರಲ್ಲಿದೆ. ಇದನ್ನು ಒಂದು ನಿದರ್ಶನೆಯಿಂದ ತಿಳಿಯಬಹುದಾಗಿದೆ. ಈಗ ಉಷ್ಣತೆ, ಬೆಳಕು ಮತ್ತು ವಿದ್ಯುತ್ತು ಈ ಮೂರು ವಿಷಯಗಳಲ್ಲಿ ನಿಷ್ಣಾತರಾದ ಮೂವರು ತಜ್ಞರಿರುವರು. ಈ ಮೂರೂ ಶಕ್ತಿಗಳು, ಚಲಿಸಲು ವಿಶಿಷ್ಟ ತೆರದ ತೆರೆಗಳನ್ನು ಹುಟ್ಟಿಸುವುವು ಈ ತೆರೆಗಳ ಸ್ವಭಾವವು ಒಂದೇ ಬಗೆಯದ್ದು, ಅವು ಭಿನ್ನ ಪ್ರಸಂಗಗಳಲ್ಲಿ—ಉಷ್ಣತೆಯ, ಬೆಳಕಿನ ಮತ್ತು ವಿದ್ಯುತ್ತಿನ ತೆರೆಗಳಿವೆ ಎಂಬ ಜ್ಞಾನವು ಉದ್ಭವಿಸಲು ಈ ಮೂವರಿಗೂ ಸಾಮಾನ್ಯವಲ್ಲದ ಬೇರೆ ಜ್ಞಾನದ ಅವಶ್ಯಕತೆ ಇದೆ; ಮತ್ತು ಹೀಗಾಗಿವಲ್ಲಿ ಮೂವರಿಗೂ ತಾವು ಒಂದೇ ವಿಷಯದಲ್ಲಿನ ಶೋಧದಲ್ಲಿ ಉದ್ಯುಕ್ತರಾದ ವಿಷಯವು ತಿಳಿಯುವುದು. ಈ ರೀತಿಯಲ್ಲಿ ಕೆಲಸ ಮಾಡಿದವರೇ ಅನೇಕ ಉಪಯುಕ್ತ ಶೋಧಗಳನ್ನು ಮಾಡಿರುವರೆಂದು ಕಂಡುಬಂದಿದೆ.

ಇಂದು ಜನಸಾಮಾನ್ಯರಿಗೆ ಈ ಹೊಸ ಶೋಧಗಳಲ್ಲಿಯ ಪಾಂಡಿತ್ಯವಿಚಾರವು ರುಚಿಸಲಾರದು. ಅವರಿಗೆ ಬೇಕಿರುವುದು ಈ ಶೋಧಗಳ ಉಪಯುಕ್ತತೆಯು. ಉಗಿ, ವಿದ್ಯುತ್ತು ಮತ್ತು ಜಲಪಾತಗಳಲ್ಲಿ ಶಕ್ತಿಸಂಚಯವಿದೆ ಎಂಬ ವಿಷಯಕ್ಕಿಂತ ಇವುಗಳನ್ನು ಉಪಯೋಗಿಸಿ ಕೆಲಸ ಮಾಡುವ ಉಗಿಬಂಡಿ, ರೇಡಿಯೊ, ಯಂತ್ರಗಳು ಮುಂತಾದ ನಿತ್ಯೋಪಯೋಗಿ ಮತ್ತು ವ್ಯಾಪಾರಕ್ಕೆ ಸಂಬಂಧಪಟ್ಟ ಸಾಧನಗಳೇ ಹೆಚ್ಚಾಗಿ ರುಚಿಸುವುವು. ಹಿಂದಕ್ಕೆ ಫೆರಡೆ ಮಹಾಶಯನು ಇದೇ ಹುಡುಕಿದ ವಿದ್ಯುತ್ತಿನ ವಿಷಯವಾಗಿ ಒಬ್ಬ ಹೆಣ್ಣು ಮಗಳು—ಈ ಅತ್ಯಪೂರ್ವ ಶೋಧದ ಉಪಯೋಗವೇನೆಂದು ಪ್ರಶ್ನಿಸಲು, ಅವನು 'ತಾಯಿ, ಇದೇ ಹುಟ್ಟಿದ ಕೂಸಿನ ಉಪಯೋಗವನ್ನು ಹೇಳಲ್ಲಿರಾ?' ಎಂದು ಕೇಳಿದನು. ಇಂದು 'ಫೆರಡೇನಿಂದ ಉದ್ಭವಿತವಾದ ಈ ಜ್ಞಾನ-ಶಿಶುವು ಪ್ರಪಂಚವನ್ನೇ ಆಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ ವಿದ್ಯುದ್ದೀಪಗಳು, ರೇಡಿಯೊ, ನಮ್ಮ ಔದ್ಯೋಗಿಕ ಆಸ್ತಿತ್ವ ಇವೆಲ್ಲವುಗಳೂ ಈ ಜ್ಞಾನಶಿಶುವಿನ ಬೆಳೆವಣಿಗೆಯ ಕುರುಹುಗಳಲ್ಲವೇ?

ಹೊಸದಾಗಿ ಶೋಧಿಸಿದ ಜ್ಞಾನದ ಬೆಲೆಯನ್ನು ಒಮ್ಮೆಲೇ ನಿರ್ಧರಿಸಲಾಗದು. ಎಷ್ಟೋ ಸಲ ಹೀಗೆ ಶೋಧಿಸಿದ ಜ್ಞಾನದ ಉಪಯುಕ್ತತೆಯು ಬೆಳಕಿಗೆ ಬರಲು ಅನೇಕ ವರುಷಗಳು ಹಿಡಿಯಬಹುದು. ಎಂದರೆ ಜ್ಞಾನವು ಬೆಲೆಯುಳ್ಳದ್ದು ಮತ್ತು ಕೇವಲ ಪಾಂಡಿತ್ಯವನ್ನು ಪ್ರತಿಪಾದಿಸುವಂತಹದಲ್ಲವೆಂದು ನಾವು ತಿಳಿಯಲೆಬೇಕು.

'ಅಸಂತೋಷವೇ ವಿಜ್ಞಾನದ ಮೂಲ' ಎಂಬ ಮಾತು ವಿಜ್ಞಾನದ ಬೆಳೆವಣಿಗೆಯ ವಿಷಯವಲ್ಲಿ ಹೆಚ್ಚಾಗಿ ಅನ್ವಯಿಸುವುದು. ಯುದ್ಧ ದಿನಗಳಲ್ಲಿ ಅನೇಕ ರಾಷ್ಟ್ರಜ್ಞರು ತಮ್ಮ ಮೇಧಾಶಕ್ತಿಯನ್ನು ಜನರನ್ನು ಸುಖಿಯಾಗಿರಿಸುವ ಕಾರ್ಯದಲ್ಲಿ ಉಪಯೋಗಿಸದೆ, ಧನ ಮತ್ತು ಪ್ರಾಣಗಳ ಹಾನಿಯ ಕೆಲಸದಲ್ಲಿ ಉಪಯೋಗಿಸುವರೆಂದು ಕಂಡುಬಂದಿದೆ. ಅವರು ಹೀಗೇಕೆ ಮಾಡುವರು ಇಲ್ಲವೆ ಹೀಗೆ ಮಾಡುವುದು ತಪ್ಪೊ ಒಪ್ಪೊ?—ಎಂಬ ವಿಚಾರವನ್ನು ಬದಿಗಿರಿಸಿ, ಇದರಿಂದಾಗುವ ಪರಿಣಾಮವನ್ನಷ್ಟೇ ಪರೀಕ್ಷಿಸುವಾ: ಇದೇ ಮುಗಿದ ಯುದ್ಧವು ವಿಜ್ಞಾನಬಲದಿಂದಲೇ ಪ್ರಾರಂಭವಾಯಿತು ಮತ್ತು ಇದು ಮುಗಿಯಲು ವಿಜ್ಞಾನ ಬಲವೇ ಕಾರಣವಾಯಿತು. ಯುದ್ಧ ಸಮಯದಲ್ಲಿ

* ಈ ಲೇಖನಕ್ಕೆ ಪುಷ್ಟೀಕರಣವೆಂದು ಪ್ರೊಫೆಸರ್ ಎ. ಎಮ್. ಲೊ ಇವರ ಕೆಲವು ವಿಚಾರಗಳನ್ನು ಉಪಯೋಗಿಸಿದ್ದೇನೆ.

ಶುದ್ಧ ವಿಜ್ಞಾನದಲ್ಲಿಯ ಶೋಧಗಳು ತಡೆಹಾಕಲ್ಪಟ್ಟಂತಾಗಿ, ಕೇವಲ ಉಪಯುಕ್ತವಿಜ್ಞಾನವೇ ಬೆಳೆಯಲು ಪ್ರಾರಂಭಿಸುವುದು. ಇಂತಹ ಶೋಧಗಳಲ್ಲಿ ಹಲವು—ಸಂರಕ್ಷಕ ಯುದ್ಧಕ್ಕೆ, ಸೈನಿಕರ ಆಹಾರ ವಿಷಯವಾಗಿ, ಉಪರ ಆರೋಗ್ಯನಿಮಿತ್ತವಾಗಿ, ಜನಸಾಮಾನ್ಯರ ಸಂರಕ್ಷಣೆಗಾಗಿ—ಇತ್ಯಾದಿ ಅನೇಕ ರೀತಿಯಲ್ಲಿ ಉಪಯೋಗಿಸಲ್ಪಡುವುವು. ಮೇಲಾಗಿ ಪರಿಸ್ಥಿತಿಯ ಒತ್ತಾಯದ ಮೂಲಕ, ಶೋಧಗಳ ವೇಗವಾದರೂ ಹೆಚ್ಚುತ್ತವೆ. ಮುಂದೆ ಇಂತಹ ಯುದ್ಧವು ನುಗಿದೊಡನೆಯೆ ಈ ಶೋಧಗಳು ನಾಗರಿಕರನ್ನು ಹೆಚ್ಚಾಗಿ ಸುಖಿಗಳನ್ನಾಗಿರಿಸಲು ಉಪಯೋಗಿಸಲ್ಪಡುವಂತಿವೆ. ಕಳೆದ ಯುದ್ಧದ (೧೯೧೪-೧೯೧೮) ವೇಳೆಯಲ್ಲಿ ವಿಮಾನವು ಹೆಚ್ಚಾಗಿ ಬೆಳೆಯಲಾರಂಭಿಸಿ, ಇಂದು ಅದು ನಮ್ಮ ನಾಗರಿಕ ಜೀವನದಲ್ಲಿ ಪ್ರಾಮುಖ್ಯವಾದ ಭಾಗವನ್ನು ವಹಿಸಿದೆ. ರಾತ್ರಿಯ ವೇಳೆಯಲ್ಲಿ ವಿಮಾನವು ಸಂಚರಿಸಲು ಅನುಕೂಲವಾಗುವಂತಹ ರೇಡಿಯೊ ವಿಷಯಕ ಶೋಧಗಳು ಮಳಗ ವಿಮಾನದ ಬರುವಿಕೆಯನ್ನು ಸೂಚಿಸುವ ರೇಡಿಯೋ ಡಿಟೆಕ್ಟರು, ಅಣುವಿನಲ್ಲಿಯ ಮಹತ್ಶಕ್ತಿಯನ್ನು ಪ್ರಕಟಿಸುವ—ನಿಸಿಸಲಿರುವ ಆಹಾರವನ್ನು ಬಹುಕಾಲ ಬಾಳುವಂತೆ ಮಾಡುವ—ಬೆಣ್ಣೆಯ ಆಭಾವದಲ್ಲಿ ನೆಣವನ್ನು ಪೂರಯಿಸುವ—ಇತ್ಯಾದಿ ಅನೇಕ ಯುದ್ಧ ನಿಮಿತ್ತ ಆಗತ್ಯವೆನಿಸಿದ ಇನ್ನೂ ಅನೇಕ ಶೋಧಗಳು ಶಾಂತಿದಿನಗಳಲ್ಲಿ ಉಪಯೋಗಿಸಲ್ಪಟ್ಟುವಾದರೆ, ಮಾನವನ ಸುಖಕ್ಕೆ ಹೆಚ್ಚಾಗಿ ಪೋಷಕವಾಗುವಂತಿವೆ. ಆಹಾರ ವಿಷಯಕ ಶೋಧಗಳು ಬರಗಾಲ ನಿವಾರಣೆಗೆ ಮತ್ತು ಅಣುವಿನ ಮಹತ್ಶಕ್ತಿಯು ಕಲ್ಲಿದ್ದಲು ಮತ್ತು ಪೆಟ್ರೋಲ್ ಮುಂತಾದುವುಗಳ ಕೊರತೆಯನ್ನು ತುಂಬಿಕೊಡಲು ಇವೇ ಮೊದಲಾದ ರೀತಿಗಳಲ್ಲಿ ಉಪಯುಕ್ತವಾಗುವಂತಿವೆ. ಎಂದರೆ ಈ ಉಪಯುಕ್ತತೆಗೆ ನಾವು ಅನೇಕ ಜನರ ಮತ್ತು ಲೆಕ್ಕವಿಲ್ಲದಷ್ಟು ಹಣದ ಬಲಿಕೊಟ್ಟಂತಾಯಿತು. ಆದರೆ ಶಾಂತಿದಿನಗಳಲ್ಲಿ ಈ ಎಲ್ಲ ಶೋಧಗಳು ಮಾಡಲಿರುವ ಕೆಲಸವನ್ನು ನೆನೆದುದಾದರೆ ಇದನ್ನು ಮರೆಯಬಹುದು. ಮೇಲಾಗಿ ಇಂದಿನ ಯುದ್ಧದ ರೀತಿಯು ಎಲ್ಲ ಜನರ ಪ್ರವೃತ್ತಿಯನ್ನು ಒದಲಿಸಿ, ಶಾಂತಿಪ್ರಿಯರನ್ನಾಗಿ ಮಾಡುವುದೂ ಅಸಾಧ್ಯವಿಲ್ಲ. ಕೇವಲ ಯುದ್ಧಪ್ರಿಯ ಜನರ ಪ್ರವೃತ್ತಿಯನ್ನೇ ನೆನಮಾಡಿಕೊಂದು ವಿಜ್ಞಾನವನ್ನು ಹಿಮ್ಮೆಟ್ಟುವುದು ಯೋಗ್ಯವೆನಿಸದು, ಏಕೆಂದರೆ ಎಲ್ಲ ಆಂತರರಾಷ್ಟ್ರೀಯ ವಾದ-ವಿವಾದಗಳು ಒಪ್ಪಂದದಲ್ಲಿ ಕೊನೆಗೊಂಡೊಡನೆಯೆ ಈ ಒಪ್ಪಂದದ ಪಾಲನೆಗೆ ವಿಜ್ಞಾನದಷ್ಟು ಯಾವುದೇ ಕರಾರಾದರೂ ಉಪಯುಕ್ತವಾಗದು. ಮನುಷ್ಯನ ಸುಖ ಮತ್ತು ಪ್ರಗತಿ ಇವೆರಡೂ, ಶೋಧಗಳ ಮತ್ತು ಇವುಗಳ ಉಪಯುಕ್ತತೆಯನ್ನು ಅವಲಂಬಿಸಿವೆ. ಅನೇಕ ಶತಮಾನಗಳಿಂದ ಕ್ಷತ್ರಿಯರ ಸ್ವಾಭಾವಿಕ ಗುಣಧರ್ಮವೆನಿಸಿದ ಯುದ್ಧವು ಇಂದು ಅತ್ಯಂತ ಹೇಯ ಮತ್ತು ಭಯಂಕರ ಎಂದು ಎಲ್ಲರಿಂದಲೂ ಗಣಿಸಲ್ಪಟ್ಟಿದೆ. ವಿಜಯೋನ್ಮಾದವು ಉಳಿದ ವ್ಯವಹಾರಗಳನ್ನು ಕಟ್ಟು ಮಾಡಲು ಸಾಧ್ಯವಾದರೂ, ವಿಜ್ಞಾನವಿವಾಹವನ್ನು ಕಡಿಯಲು ಸಾಧ್ಯವಿಲ್ಲ. ವಿಜ್ಞಾನಕ್ಕೆ ಬೇಕಿರುವುದು ಶಾಂತಿ. ವಿಮಾನಗಳು, ಹಡಗಗಳು ಮತ್ತು ರೇಡಿಯೋ ಇವುಗಳು ಜಗತ್ತಿನ ಜನಾಂಗಗಳೊಳಗಿನ ಬಳಕೆ—ತಿಳಿವಳಿಕೆಗಳನ್ನು ಹೆಚ್ಚಿಸಲು, ಸಂಸ್ಕೃತಿ ಮೊದಲಾದುವುಗಳನ್ನು ತಿಳಿಸಲು ಮತ್ತು ಎಲ್ಲರನ್ನೂ ನೆರೆಮನೆಯವರಂತೆ ಮಾಡಲು ಸಹಕಾರಿಯಾಗುವ ಪ್ರಯುಕ್ತ, ದೇಶದೇಶಗಳಲ್ಲಿಯ ಮೇರೆಯೇ ಅಳಿಸುವುದರಲ್ಲಿದೆ. ಹಂನೆಯ ಶತಮಾನದಲ್ಲಿಯ ಎರಡೂ ಯುದ್ಧಗಳನ್ನು ನೆನೆದರೆ 'ಜ್ಞಾನವೋ ಯುದ್ಧವೋ?' ಎಂಬ ಪ್ರಶ್ನೆಯು ಉದ್ಭವಿಸುವುದು. ಇಂದು ನಮ್ಮ ನಾಗರಿಕ ಜೀವನದಲ್ಲಿ ಉಪಯೋಗಿಸಲಿರುವ ಅನೇಕ ಉಪಯುಕ್ತ ಶೋಧಗಳು ಬಲಿತೆಗೆದುಕೊಂಡಿವೆ. ದುರಾಶೆಯೇ ಈ ಶೋಧಗಳನ್ನು ಪ್ರಜ್ವೋದಿಸಿದಂತಿದೆ. ಆದರೂ ಇವುಗಳು ಶಾಂತಿದಿನಗಳಲ್ಲಿ ನಮ್ಮನ್ನು ಸುಖಿಯಾಗಿ ಮಾಡಿವೆ. ಅನೇಕ ರೋಗಗಳು ಆಂಕೆಯಲ್ಲಿ ಒದಿವೆ. ಜಗತ್ತಿನ ಜನಸಂಖ್ಯೆಯು ಕಳೆದ ನೂರು ವರ್ಷಗಳಲ್ಲಿ ಮೊದಲಿನ ಎರಡರಷ್ಟಾಗಿದೆ. ಜನರ ಸರಾಸರಿ ಆಯುರ್ಮಾನವಾದರೂ ಬಹಳೇ ಬೆಳೆದಿದೆ. ಎಲ್ಲರಿಗೂ ಸಾಕಷ್ಟನ್ನು ಒದಗಿಸುವ ಔದ್ಯೋಗೀಕರಣದ ಹಾದಿಯು ಕಂಡಿದೆ— ಈ ರೀತಿಯಾಗಿ ತಿಳಿದುದಾದರೆ ವಿಜ್ಞಾನವು ಬಹಳೇ ಸಾಧಿಸಿದೆ ಎಂದು ಹೇಳಬಹುದು. ಇದೇ ಪ್ರಕಾರ ಉಳಿದ— ಸಮಾಜ ವಿಜ್ಞಾನ, ಸಂತಾನ ವಿಜ್ಞಾನ ಮುಂತಾದುವುಗಳೂ ಸಹ ಬೆಳೆದುವಾದರೆ, ಮನುಷ್ಯನಲ್ಲಿ ಇಂದು ಸಹಜವಾದ ಮತ್ತು ಎಲ್ಲ ಅನರ್ಥಗಳಿಗೂ ಕಾರಣವಾದ ದುರಾಶೆಯನ್ನು ಅಡಗಿಸಿ, ತನ್ನಂತೆಯೆ ಪರರೆಂಬ ತಿಳಿವಳಿಕೆಯನ್ನು ಹುಟ್ಟಿಸಲು ಸಹಕಾರಿಯಾಗಬಹುದು. ಇಂತಹ—ತನ್ನಷ್ಟೇ ಪರರು ಸುಖಿಗಳಾಗಬೇಕೆಂಬ—ಪರಿಸ್ಥಿತಿಯಲ್ಲಿ, ಬಲಿಕೊಡದೆ ವಿಜ್ಞಾನವು ಬೆಳೆಯಬಹುದು. ಇಂದು ದುರಾಶೆಯು ಯುದ್ಧಕಾಲದಲ್ಲಿ ಒಲ ತೆಗೆದುಕೊಂಡು, ಶಾಂತಿದಿನಗಳಲ್ಲಿಯ ಸುಖವನ್ನು ಒದಗಿಸುವ ಕೆಲಸವನ್ನು ಮಾಡಿದರೆ, ಆಂದು ತನ್ನಷ್ಟೇ ಪರರೂ ಸುಖಿಯಾಗಲಿಲ್ಲವೆಂಬ ತಿಳಿವಳಿಕೆಯಿಂದ ಹುಟ್ಟಿದ ಮನೋಯುದ್ಧವು, ಏನೂ ಬಲಿ ತೆಗೆದುಕೊಳ್ಳದೆ, ಇನ್ನೂ ಹೆಚ್ಚು ಉಪಯುಕ್ತವಾಗುವ ಶೋಧಗಳನ್ನು ಮಾಡಿಯೇ ತೀರುವುದು. ನಿಜವಾದ ವಿಜ್ಞಾನ ಕಾರಣವಾಗಲಿರುವ ಈ ತೆರದ ಅಸಂತೋಷವು ಮಾಡುವ ಸುದಿನವು ಎಂದಾದರೂ ಬಂದೀತೇ ?

ಕನ್ನಡ ಕಲಾವಂತಿಕೆ

ಧಾರವಾಡ ನಗರದಲ್ಲಿ ಕಲಾತ್ಮಕವಾಗಿ ಕುಸುರಿನ ಕೆಲಸ ಮಾಡುವ ಒಂದೇ ಒಂದಾದ ಸ್ಥಳ!

ಇಲ್ಲಿ ನೂತನ ಹೆಣಿಕೆ-ಕಸೀದೆಗಳ ಕೆಲಸ, ಕುಶಲ ಕೆಲಸಗಾರರ ಚಿತ್ರಗಳ ಕೆಲಸ ನಡೆಯುವುದು.

ಸೊಗಸಾದ ಅಲಂಕಾರ ಸಾಧನಗಳು ಯೋಗ್ಯ ಬೆಲೆಗೆ ರುಚಿಗೆ ತಕ್ಕಂತೆ ಸಿಕ್ಕುವುದು.

ಇಂದೇ ಭೇಟ್ಟಿ ಕೊಟ್ಟು ಅನುಭವ ಪಡೆಯಿರಿ.

ಧರ್ಮರಾಜ ರಾಯಚೂರ
ಗಾಂಧೀಚೌಕು, ಧಾರವಾಡ.

ಯುದ್ಧೋತ್ತರ ಪುನರ್ರಚನೆ

(ವ್ಯಂಗ್ಯಪ್ರಬಂಧ)

ಶ್ರೀ. ಮೊರಬ ರಘುನಾಥರಾಯರು ಬಿ. ಎ. ಸಿಗ್ಗಾಂವಿ

ಮೊನ್ನೆಯ ಆಸ್ಥಾನಂಗಿಕ ಯುದ್ಧೋತ್ತರ ಪುನರ್ರಚನಾ ಸಮಿತಿಯಲ್ಲಿ, ಭಾವೀ ಪುನರ್ರಚನೆಯ ವಿಷಯಕ್ಕೆ ಚರ್ಚೆಯು ಏರ್ಪಾಡಾಗಿದ್ದಿತು. ಬೇರೆ ಬೇರೆ ಭಾಷಣಕಾರರು ತಮ್ಮ ತಮ್ಮ ವಿಚಾರ ಲಹರಿಗಳನ್ನು ಪ್ರಸಾರಿಸಿದರು. ಮುಖ್ಯಾಂಶಗಳನ್ನಷ್ಟೆ ತೆಗೆದುಕೊಂಡು ಎಲ್ಲರ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ, ಆಂದಿನ ಅಧ್ಯಕ್ಷರು ಸುದೀರ್ಘಕಾಲ ಭಾಷಣ ಮಾಡಿದರು. ಅವರ ಭಾಷಣದ ಸಾರಾಂಶವನ್ನೆ ಇಲ್ಲಿ ಕೊಡಲಾಗಿದೆ.

—ಸಂಪಾದಕರ ಪರವಾಗಿ—ಲೇಖಕ.

ಅಧ್ಯಕ್ಷೀಯ ಭಾಷಣ

"ಬಂಧು-ಭಗಿನಿಯರೆ ಮತ್ತು ನನ್ನ ಗೆಳೆಯರೆ, ಸನ್ಮಾನ್ಯ ಸಭಿಕರೆ, ಮತ್ತೆ ಆಸ್ಥೆಯಿಂದ ಕೇಳುವ ಸಹೃದಯಿ ಕೇಳಿಗರೆ, ಇಲ್ಲಿಯತನಕ ಈ ಹೊತ್ತಿನ ವಿಷಯವಾದ 'ಯುದ್ಧೋತ್ತರ ಪುನರ್‌ರಚನೆ' ಎಂಬ ಸದ್ಯದ ಮತ್ತು ಮಹತ್ತ್ವದ ವಿಷಯದ ಮೇಲೆ, ಇಷ್ಟು ಹೊತ್ತಿನತನಕ, ಈಹೊತ್ತಿನ ದಿವಸ, ತಮ್ಮ ತಮ್ಮ ಮೆಚ್ಚಿಗೆಯ ವಿಷಯ ತೆಗೆದುಕೊಂಡು, ತಮ್ಮ ವಿಚಾರಗಳನ್ನು ಪ್ರತಿಯೊಬ್ಬ ಭಾಷಣಕಾರರು ತಮ್ಮೈದುರಿಗೆ, ಇಷ್ಟೇ ಏಕೆ ನನ್ನೆದುರಿಗೆ, ಇಷ್ಟೇ ಏಕೆ ಇಡಿಯ ಹಿಂದುಸ್ತಾನದ ಎದುರಿಗೆ---ತದ್ವಾರಾ ಎಂದರೆ ಮುಂಬಯಿಯ ಮುಖಾಂತರ—ಅರ್ಥಾತ್ ರೇಡಿಯೊ ಮುಖಾಂತರ ಇಲ್ಲವೆ ವರ್ತಮಾನಪತ್ರದ ಮುಖಾಂತರ ಇಡಿಯ ಜಗತ್ತಿನ ಎದುರಿಗೇನೆ ಇಟ್ಟಿದ್ದಾರೆ. ಈಗ ಸಾಕಷ್ಟು ವೇಳೆಯಾಗಿದೆ. ನಾನು ಹೆಚ್ಚು ನಿಮ್ಮನ್ನು ಇಲ್ಲಿ ಇನ್ನು ಕೂಡಿಸುವುದಿಲ್ಲ. ಅವರೆಲ್ಲರೂ ಹೇಳಿರುವ ಸರ್ವಸಾಮಾನ್ಯವಾದ ಕೆಲವು ಮುಖ್ಯಾಂಶಗಳನಷ್ಟೆ ನಾನು ಈಗ ಎತ್ತಿಕೊಂಡು, ನಿಮ್ಮೆದುರು ಮಂಡಿಸುವವನಿದ್ದೇನೆ. ತಾವು ಶಾಂತ ಚಿತ್ತದಿಂದ ಕೇಳಬೇಕು. ಎಲ್ಲರೂ ನಾವು ಕೂಡಿ ಒಂದೇನು ನಿರ್ಧಾರಕ್ಕೆ ಬಂದೇವೊ.... ಅದನ್ನು ನಾನೇ ಕಡೆಗೆ ಹೇಳುವವನಿದ್ದೇನೆ.

"ಮೊದಲು ಹೇಳಿದ ಭಾಷಣಕಾರರು ನಮ್ಮ ಕಣ್ಣುಗಳನ್ನು ಚೆನ್ನಾಗಿ ಅಂದರೆ ಅಗಲವಾಗಿ ತೆರೆಯಿಸಿದ್ದಾರೆ. ನಮ್ಮ ದೃಷ್ಟಿ ವಿಶಾಲ ವಾಗಬೇಕು, ನಮ್ಮ ಹೃದಯ ವಿಸ್ತಾರವಾಗಬೇಕು, ನಾವು ಸಂಕುಚಿತ ಕೂಪಮಂಡೂಕ ವೃತ್ತಿಯನ್ನು ಬಿಡಲೆ ಬೇಕು. ಅವರ ಪುನರ್‌ರಚನೆಯ ದೃಷ್ಟಿಯಲ್ಲಿ, ನಾವು ಏಕಮೇವಾದ್ವಿತಿಯರಾಗಿ ಜಿಲ್ಲೈತ ತತ್ತ್ವವು ನಮ್ಮ ನರ-ನಾಡಿಗಳಲ್ಲಿ ಒಳ್ಳೆಯ ಜೋರಿನಿಂದ ಹರಿಯ ಬೇಕು. ನಾವೆಲ್ಲರೂ ಒಂದು; ನಾವೂ ನೀವೂ ಒಂದು; ಅವರೂ ನಾವೂ ನೀವೂ ಒಂದೇ. ಅವರಿಗೆ ನಮಗೆ ನಿಮಗೆ ಭೇದವಿಲ್ಲ. ಸಂಪೂರ್ಣ ಅಭೇದದ ಕಲ್ಪನೆ ಬೇಕು. ಆ ಕಲ್ಪನೆಯನ್ನು ನಂಬ ಬೇಕು. ನಾವೂ ಮರಾಟಿಗರೂ ಒಂದೆ; ನಾವೂ ತೆಲುಗರೂ ಒಂದೆ: ನಾವೂ ಆಂಗ್ಲರೂ ಒಂದೆ; ನಾವೂ ಮುಸ್ಲೀಮರೂ ಒಂದೆ. ನಾವು ಸುಸಲೀಮರೂ ಆಹುದು; ನಾವು ಆಂಗ್ಲರೂ ಆಹುದು; ನಾವು ತೆಲುಗರೂ ಆಹುದು! ಇದಿಷ್ಟು ನಾವು ಸಂಪೂರ್ಣ ತಿಳಿದುಕೊಂಡಲ್ಲಿ, ನಮ್ಮ ಮುಂದಿನ ಮಾರ್ಗ ಸುಗಮವಿದೆ; ಸುಲಭವಿದೆ. ನಾವು ಮಾಡ ಬೇಕೆಂಬ ಕೆಲಸವನ್ನೇ ನಮ್ಮವರಾದ ಮರಾಟಿಗರೂ ತೆಲುಗರೂ ಮಾಡುತ್ತಿದ್ದಾರೆ. ನಮ್ಮಲ್ಲಿಯ ಸಂಕುಚಿತ ವಿಚಾರವನ್ನು ಹೊಡೆದು ಹಾಕುತ್ತಿದ್ದಾರೆ. 'ನಮ್ಮ ಕರ್ನಾಟಕ' 'ನಮ್ಮ ಕನ್ನಡ' ಎಂಬ ಕೂಪಮಂಡೂಕವೃತ್ತಿಯನ್ನು ನಮ್ಮ ಹೃದಯದಿಂದ ಕಿತ್ತಿ ಹಾಕುತ್ತಿದ್ದಾರೆ. ನಿಮ್ಮೆಲ್ಲರ ಪರವಿಯಿಂದ, ಸ್ವತಃ ನನ್ನ ಪರವಿಯಿಂದ ಅವರೆಲ್ಲರನ್ನು ಅಭಿನಂದಿಸಬೇಕಾಗಿದೆ. ಇಂತಹ ಉದಾತ್ತ ವಿಚಾರಗಳಿಗೂ, ತನ್ಮ್ಮ ಭಾಷೆ, ನಾಡು ಇವುಗಳಿಗಾಗಿ ಅವರು ಹೆಣಗಾಡುತ್ತಿರುವುದಕ್ಕೂ ನಾವೇಕೆ ಅಡ್ಡ ಬರಬೇಕು? 'ನಮ್ಮ ಕರ್ನಾಟಕ' 'ನಮ್ಮ ನುಡಿ' ಎಂದು ಮುಂತಾದ ಅಹಂಭಾವ ಸ್ವಾರ್ಥಪ್ರೇರಿತ ವಿಚಾರಗಳನ್ನು ನಾವು ಬಿಡುವುದು ಒಳಿತಲ್ಲವೆ? ನಮಗೆ ಹಿಂದಿಯಾದರೇನು, ಮರಾಟಿಯಾದರೇನು, ಇಂಗ್ಲೀಷಾದರೇನು? ಎಲ್ಲವೂ ನಮ್ಮ ಹೃದಯದ ನುಡಿಯೆ, ನಮ್ಮ ಆತ್ಮನ ಸೊಲ್ಲೇ ಎಂದು ತಿಳಿದಾಗ, ನಮಗೆ 'ಕರ್ನಾಟಕ' 'ಕನ್ನಡ' ಎಂಬ ವ್ಯಾವಹಾರಿಕ ಜಗತ್ತು ಏತಕ್ಕೆ ಬೇಕು? ನಾವು, ನಾವೇ ಬ್ರಹ್ಮ-ಎಲ್ಲವೂ ಬ್ರಹ್ಮಸ್ವರೂಪಿಯೆಂದು ತಿಳಿದಾಗ, ಭರತಖಂಡ, ಸ್ವಾತಂತ್ರ್ಯ ಎಂದು ಕೂಗಾಡುವ ಕಾಂಗ್ರೆಸ್ಸಿಗೆ ನಾವು ಕಿವಿಗೊಡಬೇಕೇಕೆ? ಸ್ವರಾಜ್ಯ, ಸ್ವಾತಂತ್ರ್ಯ ಎಂದು ಹೂಲಿ ಎಬ್ಬಿಸುವುದರಲ್ಲಿ. ನಮ್ಮ ಸ್ವಾರ್ಥವೇ ನೇಲ್ಸ್ಸಿಲೈಯಾಗಿದೆ; ಅದೇ ಜೊರಚಿಮ್ಮುತ್ತಲಿದೆ. ಆಂಗ್ಲರೇನು ನಮಗೆ ಹೊರಗಿನವರೆ? ಅವರೇ ನಾವು ಎಂದು ತಿಳಿದಾಗಲೂ, ಅವರಿಗೆ ಹಿಂದುಸ್ತಾನ ಬೇಕಾಗಿದುವಾಗ, ನಾವು ವಿಶಾಲದೃಷ್ಟಿಯುಳ್ಳವರಾಗದರಿಂದ, ಅವರಿಗೆ ಹಿಂದುಸ್ತಾನ ನನ್ನು ಬಿಟ್ಟು ಕೊಡುವುದೇ ಲೇಸಲ್ಲವೆ? ಚುನಾವಣೆ, ಮಂತ್ರಿಮಂಡಲ ಮುಂತಾದ ಉಪಾಧಿಗಳನ್ನು ನಾವು ತೊಲೆಯಲೆ ಬೇಕು. ಏಕೆಂದರೆ ನಮ್ಮ ಪರಿಸ್ಥಿತಿ ಈಗ ಹೀಗಿದೆ: ಕೆಲಸ ಮಾಡಬೇಕೆಂಬ ಲವಲವಿಕೆ ಇದ್ದವರಿಗೆ ವೋಟು ಸಿಕ್ಕುವದಿಲ್ಲ! ವೋಟು ಸಿಕ್ಕುವರು ಕೆಲಸ

ಮಾಡುವುದಿಲ್ಲ! ಇಲ್ಲವೆ ಕೆಲಸ ಮಾಡಬೇಕೆಂದು ಮನಸ್ಸಿರದವನಿಗೆ ಪ್ಲೋಟು ತಾನಾಗಿಯೆ ಮಾಲೆಹಾಕುವುದು—ಹೀಗೂ ಆನ್ನಬಹುದು! ಅದಕ್ಕಾಗಿ ಇಂತಹ ಬಾಹ್ಯಜಗತ್ತಿನ ಈ ವ್ಯಾನೋಪಹಕ್ಕೆ ನಾವು ಎಂದೂ ಸಿಲುಕಬಾರದು! ಕರ್ನಾಟಕ ಏಕೀಕರಣ, ಔದ್ಯೋಗೀಕರಣ ಮುಂತಾದ ಕರಣಗಳಿಂದ ನಾವು ಅಲಿಪ್ತರಾಗಿ ಹಿಂದೆ ಉಳಿಯುವುದೇ ಒಳ್ಳೆಯದು. ಏಕೆಂದರೆ ನಮ್ಮ ದೃಷ್ಟಿ ಈಗ ಅತ್ಯಂತ ವಿಶಾಲವಾಗ ಬೇಕಾಗಿದೆ. ಇಡಿಯ ಜಗತ್ತೇ ನಮ್ಮ ದೃಷ್ಟಿಪಥವಲ್ಲಿರಬೇಕು. ನಾಳೆ ಮಂಗಳಲೋಕವೂ ನಮಗೆ ಕಂಡೀತು. 'ಈ ವ್ಯಾವಹಾರಿಕ ಜಗತ್ತೆಲ್ಲ ಸುಳ್ಳು, ಮಾಯೆ!' ಎಂದು ನಮ್ಮ ಅನ್ವೈತಮತವು ಸಾರುತ್ತಿರುವಾಗ, ಈ ಕನ್ನಡ, ಈ ಹಿಂದುಸ್ತಾನ, ಈ ಪಾಕಿಸ್ತಾನ ಇವೆಲ್ಲ ಮಿಥ್ಯೆ ಎಂದು ತಿಳಿದು, ಆ ವಿಷಯಗಳಿಗೆ ಗಮನ ಕೊಡಬಾರದು. ಅಂದರೇನೇ ನಾವು ಪರಬ್ರಹ್ಮಸ್ವರೂಪಗಳಾಗುವೆವು; ಜೀವನ್ಮುಕ್ತರಾಗುವೆವು; ಅದರಿಂದಲೇ ನಮಗೆ ನಿರ್ಲಕ್ಷಣ ಆನಂದವೂ ಮೊಗೆ-ಕೊಳ್ಳುವುದು. ಕೊನೆಗೆ ಭಾಷಣಕಾರರು ಹೇಳಿದ್ದೇನೆಂದರೆ:—ಭಾಷಣ ಕಾರರು ಕೂಡ ಬ್ರಹ್ಮವೇತ್ತಿಗಳೂ ಜೀವನ್ಮುಕ್ತರೂ ಆದುದರಿಂದ, ಅವರು ಕರ್ನಾಟಕದ ಆಧ್ಯಾತ್ಮಿಕ ಜೀವನವನ್ನು ಸುಧಾರಿಸಲೋಸುಗ ಒಂದು ಸಮಾಜವನ್ನು ಕಟ್ಟುವವರಿದ್ದಾರೆ. ಆ ಸಮಾಜದವರು ಯಾವ ಮತ, ಪಂಥ, ಜಾತಿ, ದೇಶ. ಭಾಷೆಗಳಿಗೂ ಒಳಪಟ್ಟವರಲ್ಲ. ಒಮ್ಮೊಮ್ಮೆ ಯಾವ ಭಾಷೆಯಲ್ಲಿ ಮಾತನಾಡಬೇಕೆಂಬುದು ತಿಳಿಯ ಲಾರದೆಯೆ, ಕೆಲವು ದಿನ ಮೌನವನ್ನೇ ಆಚರಿಸುವರು. ಆಪರಕಾರ್ಯ ಕ್ರಮಗಳು ವಿಶಾಲವಾದುವುಗಳಿರುವುದರಿಂದ. ಕೆಲವನ್ನು ಮಾತ್ರ ನಿವರಿಸುತ್ತೇವೆ: (೧) 'ಅಹಂ ಬ್ರಹ್ಮಾಸ್ಮಿ' ಎಂಬ ತತ್ತ್ವವು ನಮ್ಮಲ್ಲಿ ವಿಸ್ತಾರವಾವಂತೆ, ಈಗಿರುವ ಕರ್ನಾಟಕದ ಮೇರೆಯನ್ನು ಕಿತ್ತಿ ಒಗೆಯಬೇಕು ಮತ್ತು ಯಾವ ಮೇರೆಯನ್ನೂ ಹಾಕಕೂಡದು. (೨) ಯಾರೂ ಕರ್ಮಿಗಳಾಗಕೂಡದು; ಕರ್ಮತ್ಯಾಗ ಮಾಡಬೇಕೆಂಬ ಬುದ್ಧಿಯಿಂದ, ತಾವು ಕೈಕೊಂಡ ಕೆಲಸಗಳನ್ನು ಒಮ್ಮೆಲೆ ಬಿಟ್ಟು ಬಿಡಬೇಕು. (೩) ಭರತಖಂಡದ ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ ಮುಂತಾದ ಸಂಕುಚಿತ ಸ್ವಾರ್ಥಪರ ವಿಚಾರಗಳಿಂದ ನೀವು ದೂರ ಇರಬೇಕು; ಇದಕ್ಕಾಗಿ ಚಳವಳಿ ಹೂಡಬೇಕು. (೪) ಎಲ್ಲ ಉಪಾಯ ಗಳನ್ನೂ ಬಿಟ್ಟುಕೊಟ್ಟು, ಮನಸ್ಸು ಬಿಗಿಹಿಡಿದು, ಮನಸ್ಸು ಕೊರಗಿಸಿ, ಈ ಮನೋಮಯ ಜಗತ್ತನ್ನು ನಾಶಪಡಿಸಬೇಕು. (೫) ಇವೆಲ್ಲ ತತ್ತ್ವ ಗಳು ಬಹುತರವಾಗಿ ಅಲಸಿಗರಲ್ಲಿ ಹಚ್ಚಾಗಿ ಸಿಕ್ಕುತ್ತಿರುವುದರಿಂದ, ಅವರೇ ನಮ್ಮ ಅವತಾರಿ ಪುರುಷರೆಂದು ಮನ್ನಿಸಿ, ಅವರು ನಡೆಯುವ ಸರಳ ದಾರಿಯಲ್ಲಿ ನಾವು ಹೆಜ್ಜೆ ಹಾಕಬೇಕು—ಇತ್ಯಾದಿ.....

"ನೀವು ಚಿಪ್ಪಾಳಿ ಹೊಡೆಯುವ ಕಾರಣವಿಲ್ಲ. ಅಹುದು, ಈ ಮೇಲಣ ತತ್ತ್ವಗಳು ಮಾನ್ಯವಿವೆಯೆಂಬುದನ್ನು ನೀವು ತೋರಿಸುತ್ತಿರುವಿರಿ. ಆದರೆ ಗದ್ದಲ ಬೇಡ! ಗದ್ದಲ ಮಾಡಿದಲ್ಲಿ ಮುಂದಿನ ಭಾಷಣವನ್ನು ಇಲ್ಲಿಸೇನೆ ನಿಲ್ಲಿಸಬೇಕಾಗಿವುದು. Silence, ಶಾಂತರಹೊ, ಗಡಬಡ ಬಂದಕರಾ! ಕೇಳಿರಿ ಈಗ.... ಎರಡನೆಯ ಭಾಷಣಕಾರರು 'ಆರೋಗ್ಯವರ್ಧನ' ಎಂಬ ವಿಷಯದ ಮೇಲೆ ಒಳ್ಳೆಯ ಜಾಣ್ಮೆಯಿಂದ, ರಸವತ್ತಾಗಿ, ತಮ್ಮ ವಿಚಾರವನ್ನು ಮಂಡಿಸಿದ್ದಾರೆ. ಹಿಂದಿನ ನಮ್ಮ ಜೀವನ, ಇಂದಿನ ನಮ್ಮ ಜೀವನ—ಇವುಗಳನ್ನು ಒಂದು ಸಂಸ್ಕೃತಿಯ ತಕ್ಕಡಿಯಲ್ಲಿ ತೂಗಿ, ಇಂದಿನ ನಮ್ಮ ಜೀವನದ ಹಿರಿಮೆಯನ್ನು ಒಳ್ಳೆಯ ಮಾರ್ಮಿಕವಾಗಿ ಬಿತ್ತರಿಸಿರುವರು. ಹಿಂದಿನವರು ಪುಂಬಾ ಗಟ್ಟಿಗರು, ಶೂರರು, ಬೀರರು ಎಂಬುದು ಸುಳ್ಳು! ಆಗ ಬೇನೆ-ಬೇಸರಿಕೆಗಳು ಆಧಿ-ವ್ಯಾಧಿಗಳು ಇದ್ದಿಲ್ಲವೆಂಬುದೂ ತೀರ ಸುಳ್ಳು! ಮೊನ್ನೆಮೊನ್ನೆಯ ಸಂಶೋಧನೆವಲ್ಲಿ, ಹೊಸಹೊಸ ಬೇನೆಗಳು ಬೆಳಕಿಗೆ ಬಂದಿವೆ. ಹೊಸಹೊಸ ಔಷಧಿಗಳೂ ನಮ್ಮ ಕಣ್ಣೆದುರಿಗೆ ಸುಳಿಯ ಹತ್ತಿವೆ. ಇವೆಲ್ಲ ಸುಸಂಸ್ಕೃತಿಯ ದ್ಯೋತಕವಾಗಿವೆ. ದೇಹದಿಂದ ಮಾತ್ರ ಗಟ್ಟಿಗರಾದಲ್ಲಿ, ಅವರೇನು ಆರೋಗ್ಯವಂತರೆಂದು ಹೇಳಲಿಕ್ಕೆ ಬರುವಂತಿಲ್ಲ! ಯುದ್ಧದಲ್ಲಿ ಕಾದಿ ಮಡಿದ ಮಾತ್ರಕ್ಕೆ ನಮ್ಮ ಪೂರ್ವಜರು ಶೂರರೂ ಧೀರರೂ ಎಂದು ಹೊಗಳುವಂತಿಲ್ಲ! ಈಗಿನ ಪರಿಸ್ಥಿತಿಯೆ ಬೇರೆಯಾಗಿದೆ. ನಮ್ಮ ಜನರೆಲ್ಲ ಸೈನ್ಯಕ್ಕೆ ಸೇರಿ ಸೇರಿ, ಅವರಂತೆಯೇ ಯುದ್ಧದಲ್ಲಿ ಯಶಸ್ವಿಯಾಗಿ ಹಿನ್ನಡೆ ನಡೆದು, ಅವರು ಒಂದು ಮಾತ ಹಾಕಿಕೊಂಡಿದ್ದಾರೆ. ಎಂದರೆ ಯುದ್ಧದಲ್ಲಿ ಕಾದಿ ಮಡಿಯುವುದಕ್ಕಿಂತ, ಯುದ್ಧಕ್ಕೆ ಹೋಗಿ ಕಾವಡೆ ಓಡಿ ಬರುವುದೆ ಈಗಿನ ಶೌರ್ಯದ ಲಕ್ಷಣ! ಸೈನ್ಯದ ನಾಶವಾಗುವುದೆಂತು? ಅವರಂತೆಯೆ ನಮ್ಮ ಸೈನಿಕರು ಬದುಕಿ ತಿರುಗಿ ಬಂದಿರುವರೆಂದ ಮೇಲೆ ಅದೆಷ್ಟು ಗಟ್ಟಿಗರು! ಇದರಿಂದ ಹೊರಡುವ ಸಿದ್ಧಾಂತವೆಂದರೆ, ಹಿಂದಿನವರಿಗಿಂತ ನಾವು ಗಟ್ಟಿಗರು ಮತ್ತು ಶೂರರೂ ಧೀರರೂ ಇದ್ದೇವೆ. ಅವರಂತೆಯೆ ನಮ್ಮ ಜನತೆಯೆಲ್ಲ ಶೂರರೂ ಧೀರರೂ ಆಗುತ್ತಿರುರೆಂಬುದು ಗೊತ್ತಾಗಿದೆ. ಇದೆಲ್ಲಕ್ಕೂ ಕಾರಣವೆಂದರೆ ನಮ್ಮಲ್ಲಿಯ ರೇಶನ್! ಹಿಂದಿನವರು ಒಂದು ವ್ಯಕ್ತಿಯ ಜೀನೆಗಾಗಿ ಔಷಧೋಪಚಾರವನ್ನು ತೆಗೆದರೆ, ನಮ್ಮವರು ಇಡಿಯ ಸಮಾಜದ ಬೇನೆಗೇ ಔಷಧ ಹುಡುಕಿ ತೆಗೆದಿದ್ದಾರೆ! ಅದೇ ರೇಶನ್ನು! ಅದೇ ಲೇಸೆನ್ನು! 'ಸರ್ವ ರೋಗಾಪಹರ ರಾಮಬಾಣ!' ಎಲ್ಲ ರೋಗಗಳು ಹುಟ್ಟುವುವು ಅಜೀರ್ಣದಿಂದ! ರೇಶನಿನಲ್ಲಿ ಕಾಳು ಕಡಿಮೆ ಮಾಡುತ್ತ ಹೋದರೆ, ಜನತೆಯ ಕೂಳು ಕಡಿಮೆಯಾಗಿ, ಅಜೀರ್ಣ ಮುಂತಾದ ಯಾವ ರೋಗಗಳೂ ಬರಲಿಕ್ಕಿಲ್ಲ. ನಮ್ಮ ಪ್ರಕೃತಿ ಕಡಿಮೆ ಕೂಳಿಗೆ ಒಗ್ಗುತ್ತ ಹೋಗುವುದು. ಆಮೇಲೆ ನಾವು ಗಾಳಿಗೂ ಹಗುರಾಗುವೆವು! ವಿಮಾನ—ಆಕಾಶೋಡ್ಡಾಣ—ಮುಂತಾದ ಸಾಧನಕ್ಕೆ ನಮ್ಮ ದೇಹವು ಸಹಜವಾಗಿ ಸಿದ್ಧವಾಗುವುದು! ಆ್ಯಟಂ ಬಾಂಬು ಬೀಳುವಷ್ಟರಲ್ಲಿಯೆ, ನಾವು ಮೇಲಕ್ಕೆ ಒಮ್ಮೆಲೇ ಜಿಗಿದು ಜಿಗಿದು, ಆ್ಯಟಂ ಬಾಂಬಿನಿಂದುಂಟಾಗುವ ಅನಿಷ್ಟಕ್ಕೆ ಗುರಿಯಾಗುವದಿಲ್ಲ. ಈ ಗುಟ್ಟು ರಟ್ಟಾಗಕೂಡದು. ಇದನ್ನು ಯಾರಿಗೂ ಹೇಳಬಾರದೆಂದು ಕಾಯದೆ ಹುಟ್ಟಬೇಕು. ಇನ್ನೂ ಒಂದು ಸೂಚನೆಯಿದೆ: ಬೇರೆ ಬೇರೆ ಓಣಿಯಲ್ಲಿರುವಂತಹ ರೇಶನ್ ಅಂಗಡಿಗಳನ್ನು ಒಮ್ಮೆಲೆ ಮುಚ್ಚಿಬಿಡಬೇಕು! ಊರಿಗೆ ಒಂದೇ ಅಂಗಡಿ ಇಡಬೇಕು. ರೇಶನ್ ತರಲಿಕ್ಕೆ ಹೋಗಿ ಬರುವುದು ಸಾಕಷ್ಟು ಈ ದೇಹಕ್ಕೆ ವ್ಯಾಯಾಮವನ್ನೀಯುವುದು. ಹೀಗೆ ನಮ್ಮ ಸುಧಾರಣೆಯ ದಾರಿ ಮುಂದುವರಿಯುತ್ತಿರುವಾಗ, ವಿಜ್ಞಾನವು ಕೂಡ ಕೆಲವು ಅಚ್ಚರಿಯಾಗುವಂತಹ ಸಂಶೋಧನೆಗಳನ್ನೂ ಮಾಡುತ್ತ ಹೋಗುವುದು. ಇತ್ತೀಚೆಗಿನ

ಒಂದು ಸಂಶೋಧನೆಯು ಅತಿಶಯ ಮಹತ್ತ್ವದ್ದಾಗಿದೆ. ಕಸುಕು ಪದಾರ್ಥಗಳನ್ನು ತಿಂದರೆ ಕಸುವು ತಾನಾಗಿಯೆ ಬರುವುದು. ಅದರಂತೆ ಕಾಳು-ಕಡಿಗಳನ್ನು ಬೇಯಿಸದೆ, ಕುದಿಸದೆ, ಸುಡದೆ ಹಾಗೆಯೆ ನಾವು ನೇರವಾಗಿ ಬಾಯಲ್ಲಿ ಹಾಕಿ, ಜಗಿದು ತಿಂದಲ್ಲಿ, ನಾವು ಹೆಚ್ಚು ಬಲಿಷ್ಠರಾಗುವೆವು! ಇನ್ನು ಮುಂದೆ ರೇಶನ್ ಅಂಗಡಿಯ ಬದಿಯಲ್ಲಿ Q ರೀತಿಯಲ್ಲಿ ನಾವು ಸಾಲ್ಗಿಡಿದು ನಿಲ್ಲಬೇಕು; ರೇಶನ್ ಅಂಗಡಿಯವರೇ ಕಾಳು ಅಳೆದು ನಮ್ಮ ಬಾಯಲ್ಲಿ ಹಾಕಬೇಕು. ಎಂದರೆ ಎಲ್ಲ ತೊಂದರೆಗಳು ತಪ್ಪುವುವು.; ರೇಶನ್ನು ಸೂಸೂತ್ರ ಸಾಗುವುದು. ಭಾಷಣಕಾರರು ಇನ್ನೊಂದು ಮಹತ್ತರವಾದ ಸೂಚನೆಯನ್ನು ಬಯಲಿಗಿಟ್ಟಿದ್ದಾರೆ. ಅದನ್ನು ಸಭಿಕರು ಹಿಂದುಗಳೆಯದೆ ನೆನಪಿನಲ್ಲಿಡಬೇಕು. ಅದೆಂದರೆ ಪ್ರಕೃತಿಸಿದ್ಧಾನಂ. ಎಲ್ಲ ರೋಗಗಳಿಗೆ ಒಂದೇ ಒಂದು ಉಪಾಯ. ಈಗ ಸದ್ಯದ ಒಂದು ರೋಗಕ್ಕೆ ಈ ಉಪಚಾರ ಯಶಸ್ವಿಯಾದ ಪರಿಣಾಮ ಉಂಟು ಮಾಡಿದೆ. ಅದೇ ಮಧುಮೇಹ ರೋಗ! ಅದಕ್ಕೆ ಉಪಾಯ ರೇಶನ್! ಆ ರೋಗ ಈಗ ಇಲ್ಲದಂತೆಯೆ ಆಗಹತ್ತಿದೆ. ಈ ರೋಗಕ್ಕೆ ಮುಖ್ಯ ಕಾರಣವಾದ ಸಿಹ್ಯವನ್ನು ಕ್ರಮೇಣ ನಮ್ಮ ಜೀವನದಲ್ಲಿ ಇಲ್ಲದಂತೆ ಮಾಡುವುದು. ಅಕ್ಕಿ ಮತ್ತು ಸಕ್ಕರೆಗಳಲ್ಲಿ ಸಿಹ್ಯದ ಪ್ರಮಾಣವು ಹೆಚ್ಚಿನ ಅಂಶದಿಂದ ಇರುವುದರಿಂದ, ಪ್ರತಿದಿನದ ಆಹಾರದಲ್ಲಿ ಅವುಗಳನ್ನು ಕ್ರಮೇಣ ಬಿಡುತ್ತಾ ಹೋಗಬೇಕು! ರೇಶನ್ನಿನಲ್ಲಿ ಸಕ್ಕರೆ ಮತ್ತು ಅಕ್ಕಿಯ ಪ್ರಮಾಣವನ್ನು ಕಡಮೆ ಮಾಡಿದ್ದಕ್ಕಾಗಿ ರೇಶನಿನ ಕಾರ್ಯಕರ್ತರನ್ನೂ ನಾವು ಈಗ ಸರ್ವಾನುಮತಗಳಿಂದ ಅಭಿನಂದಿಸಬೇಕು! ಮತ್ತು ಇನ್ನು ಕೆಲವೇ ದಿನಗಳಲ್ಲಿ, ಅಕ್ಕಿ-ಸಕ್ಕರೆಗಳನ್ನು ಸಂಪೂರ್ಣ ಬಂದು ಇಡಬೇಕೆಂದು ಈ ಸಭೆಯು ಬಿನ್ನವಿಸಿಕೊಳ್ಳುತ್ತದೆ. ಇದೇ ರೇಶನ್ ಪದ್ಧತಿ ಇನ್ನೂ ಎಷ್ಟೋ ವರ್ಷಗಳವರೆಗೆ ನಡೆಯಬೇಕು. ಅದರ ಸರ್ವಾಂಗೀಣ ಅಭ್ಯುದಯಕ್ಕಾಗಿ ನಾವೆಲ್ಲರೂ ಕಂಕಣಬದ್ಧರಾಗಬೇಕು. ಮುಂಬಯಿನ ರಾಷ್ಟ್ರೀಯ ಮಂತ್ರಿಮಂಡಲಕ್ಕೆ ಈ ಸಂಗತಿಯನ್ನು ಒತ್ತಾಯವಿಂದಾದರೂ ಅನುಸರಿಸಬೇಕೆಂದು ಬೇಡಿಕೊಳ್ಳಬೇಕು; ಇಲ್ಲವೆ ಒತ್ತಾಯಪಡಿಸಬೇಕು!

"ನೀವು ಧಾಂವಲೆ, ಗಲಾಟೆ, ಗದ್ದಲ ವಗೈರೆ ಮಾಡಿದರೆ ಪ್ರಸ್ತುತ ನಾನೇನೂ ಭಾಷಣ ಮಾಡುವುದನ್ನು ಬಿಡುವಂತಿಲ್ಲ. ರೇಶನ್ನೂ ನಿಮಗೆ ವಿರೋಧವಿರಬಹುದು; ಆದರೆ ಅದು ವ್ಯಕ್ತಿಗತ ವಿರೋಧವಿದೆ. ಅದಕ್ಕೆ ಮನ್ನಣೆ ಇಲ್ಲಿ ಸಿಗಲಾರದು. ಅದನ್ನು ನಾವು ಈಗ ಕೇಳುವುದಿಲ್ಲ. ಕೇಳುವ ಪರಿಸ್ಥಿತಿ ನಮಗೀಗ ಉಳಿದಿಲ್ಲ. ಇದಕ್ಕಾಗಿ ನಾವಾಡುವ ತತ್ತ್ವಗಳನ್ನೂ ನೀವು ಪಾಲಿಸಲಿಕ್ಕೇ ಬೇಕು. ಇದು ನಮ್ಮ ತಲಸಿಗಸಂಘದ ಕಟ್ಟಪ್ಪಣೆಯಿದೆ—ಅಸ್ತು! ಅತ್ಯಂತ ಮೇಧಾವಿಗಳಾದ ಮೂರನೆಯ ಭಾಷಣಕಾರರು ಪುನರ್ರಚನೆಯಲ್ಲಿ ಕೆಲವಾಗಳೆ ಭಾಗವಹಿಸಿದ್ದಾರೆ. ಅವರ ವಿಚಾರಗಳು ಅನುಭವದ ತಳಹದಿಯಿಂದ ಅಳೆದುವಾಗಿವೆ. ಮುಂಧೋರಣೆಯ ಒಪ್ಪು ಅವರಿಗಿದೆ. ಅವರೇ ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸುವೆ. ಅವರು ಆರಿಸಿಕೊಂಡ ವಿಷಯಗಳು ಎರಡು—'ಪುನರ್-ರಚನೆಯಲ್ಲಿ ಆರ್ಥಿಕಪ್ರಪಂಚ ಮತ್ತು ಶಿಕ್ಷಣ.' ಈಗಿನ ಸದ್ಯದ ಪರಿಸ್ಥಿತಿಯನ್ನು ಆರಯ್ದರೆ, ನಮ್ಮ ಜೇಬು ಈ ಕರನ್ಸಿ ನೋಟಿನ ಒಜ್ಜೆಯನ್ನು ತಾಳಲಾರದೆ, ಕೆಳಗೆ ಇಳಿಬೀಳಲಿಕ್ಕೆ ಹತ್ತಿದೆ. ಅದರಿಂದಲೆ ಶರ್ಟ್ ಕೋಟು ಹೋಗಿ ಲಾಂಗ್ ಕೋಟು ಆಗಹತ್ತಿವೆ. ಈ ಒಜ್ಜೆಯನ್ನು ನಾವು ಕಡಮೆ ಮಾಡಿಕೊಳ್ಳಬೇಕು. ನಮ್ಮ ಜೇಬನ್ನು ಹಗುರು ಮಾಡಬೇಕು. ಅರ್ಥಾತ್ ನಮ್ಮ ಹಣ ಸದ್ವಿನಿಯೋಗಕ್ಕೆ ಉಪಯೋಗವಾಗಬೇಕು. ಕಾಳು-ಕಡಿಯ ಧಾರಣೆ ಕಲ್ಪನೆ ಮೀರಿ ಮೇರೆದಪ್ಪಿ ಏರಿದುದರಿಂದ, ಬಂಗಾರದ ಧಾರಣೆ ಆಷ್ಟೇ ನಾಲ್ಕುಪಟ್ಟು ಏರಿರುವುದರಿಂದ ನಮಗೆ ನೋಟಿನ ಒಜ್ಜೆ ತಪ್ಪುವಂತಿಲ್ಲ. 'ಬೆಳ್ಳಿಯ ರೂಪಾಯಿಗಳು ಬಂದರೆ?' ಎಂದು ನೀವು ಕೇಳಬಹುದು. ಗಾಳಿಗೂ ಹಗುರಾಗಬೇಕೆಂದು ನಮ್ಮ ಹಂಬಲವಿದ್ದುದರಿಂದ, ನೋಟುಗಳು ಕೂಡ ಒಜ್ಜೆಯಾಗುತ್ತಿರುವಾಗ, ನಾವು ಅನ್ಯಥಾ ಬೆಳ್ಳಿ-ಬಂಗಾರವನ್ನು ಪೈಸೆಪೈಸೆಲೆ ಭರಿಸುವುದಕ್ಕಿಂತ, ಅವುಗಳನ್ನು ಹೊಡೆದೋಡಿಸಲಿಕ್ಕೆ ಪ್ರಯತ್ನಿಸಬೇಕು. ಈಗಷ್ಟೋ ಆ ಪ್ರಯತ್ನ ಸಫಲವಾಗಿದೆ. ಈಗ ಎಲ್ಲತೆರದ ಒಜ್ಜೆಯೂ ಕಡಿಮೆಯಾಗಹತ್ತಿದೆಯೆಂಬುದು ಸಂತೋಷದ ಸಂಗತಿಯಾಗಿದೆ. ಪಾಟಲಿ-ಗೋಟುಗಳು ಹೋಗಿ ಬಳೆಗಳುಬಂದಿವೆ; ಸೀರೆ ಹೋಗಿ ಸತ್ತಲ ಬಂದಿದೆ; ಖಣ ಹೋಗಿ ವಾಯಿಲು ಬಂದಿದೆ: ಬಂಗಾರದ ಮೊಗ್ಗೆಯಮಾಲೆ ಮುಂತಾದವು ಅಳಿದು ಈಗ ಕಾಗದದ ಹೂ ಬಂದಿವೆ; ಧೋತರ ಮರೆಯಾಗಿ ಜೆಲ್ಲಣ ಮುಖವೆತ್ತಿದೆ: ಜೆಲ್ಲಣ ಒಜ್ಜೆಯಾಗಿ ಪಿಜಾಮುಗಳೂ ಬಂದಿವೆ—ಅವು ಕೂಡ ಒಜ್ಜೆಯಾಗಿ ಅಂಡರ್‌ವೇರುಗಳೂ ಬರುವ ಯೋಗವು ಇದೆ. ರುಮಾಲಿನೆಂದೊ ಮಾಯವಾಗಿದೆ. ಇದಕ್ಕೂ ನಾವು ಮುಂದೆ ಹೆಜ್ಜೆಯನ್ನಿಡಬೇಕಾಗಿದೆ. ನಮಗೆ ನೋಟಿನ ಒಜ್ಜೆ ಕಡಿಮೆಯಾಗಬೇಕು. ನಮಗೆ ಲಾಭಕರವಾಗಬೇಕು. ನಮ್ಮ ಹಣದ ವಿನಿಯೋಗ ಸರಳವಾಗಬೇಕು. ಇದಕ್ಕೆ ಒಂದೇ ಹಾದಿಯಿದೆ! ನಾಲ್ಕುಪಟ್ಟು ಧಾರಣೆ ಏರದಂತಹ ವ್ಯಸನಾದಾರಕ್ಕೆ ಮಾತ್ರ ನಾವು ಸುಗ್ಗಬೇಕು. ನಮ್ಮ ಹಣದ ಸದುಪಯೋಗವಾಗಬೇಕಾದರೆ, **ಸಿನೇಮಾ, ನಾಟಕ, ಪ್ರವಾಸ, ಕ್ಲಾರ್, ಚಹ**—ಈ ದಾರಿಗಳು ನಮ್ಮನುಂದಿವೆ. ನಾಟಕದ ಸಮಸ್ಯೆ ಹೀಗಿದೆ: ನಮ್ಮಲ್ಲಿ ನಾಟಕ ಕಂಪನಿಗಳು ಇಲ್ಲವೆಂತಲ್ಲ; ಅವೆಲ್ಲ ಉರುಸು, ಜಾತ್ರೆ, ಸುಗ್ಗಿ ಇವುಗಳಿಗೆ ಮೀಸಲಾಗಿವೆ. ಹೊಸ ಕಂಪೆನಿಗಳನ್ನು ಹುಟ್ಟಿಸುವ ತೋಜಿಗೆ ನಾವು ಹೋಗಕೂಡದು. ಅವುಗಳ ಅವಶ್ಯಕತೆಯಿಲ್ಲ. ಮರಾಟೀ ಹಿಂದೀ ಕಂಪೆನಿಗಳನ್ನು ಇಲ್ಲಿಗೆ ಕರೆಯಿಸಿ, ಅವರ ಪ್ರಯೋಗಗಳು ಯಶಸ್ವಿಯಾಗುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನಮಗೆ ಹಣದ ಕೊರತೆ ಇದ್ದರೇನೆ, ಬೇರೆಯೇನಾದರೂ ಉದ್ಯೋಗ ಮಾಡಬೇಕೆಂಬ ಪ್ರವೃತ್ತಿಯಾಗುವುದು ಸಹಜವಿದೆ. ಅವರಂತೆ ಒಂದೆರಡು ವ್ಯಕ್ತಿಗಳಿಗೆ ಆ ಕೊರತೆಯುಂಟಾದಲ್ಲಿ, ಇಂತಹ ಸಿನೇಮಾ ನಾಟಕ ಕಂಪೆನಿಗಳನ್ನು ಹುಟ್ಟಿಸುವುದೂ, ಆ ಕೊರತೆ ತುಂಬಿದಲ್ಲಿ ಅವುಗಳನ್ನು ಮುಚ್ಚಿಯುವುದೂ ಸಹಜವಾಗಿದೆ. ಆದುದರಿಂದ ನಮ್ಮಲ್ಲಿಯ ಹೆಚ್ಚಾದ ಹಣವನ್ನು ಹೆರವರು ತಿಂದಲ್ಲಿ ನಮ್ಮದೇನು ಕೇಡು? ಜಾಗದಲ್ಲಿ ವೀರರೆಂದು ಹೆಸರು ಪಡೆದವರು ನಾವು; ಹೀಗೆಯೆ ದಾನಮಾಡುತ್ತ ಹೋಗಬೇಕಲ್ಲವೆ? ಹೆರವರ ಕೊರತೆಯನ್ನು ತುಂಬಿ. ಅವರ ಸುಖ-

ಮುಖಗಳಲ್ಲಿ ಭಾಗೀದಾರರಾಗುವುದು ಸಮತಾವಾದಿಗಳಾದ ನಮ್ಮ ಕರ್ತವ್ಯವಲ್ಲವೆ? ವಾಕ್‌ಚಿತ್ರಗಳನ್ನು ನಡೆಯಿಸಲಿಕ್ಕೆ ನಾವು ಅನೇಕ ಮಂದಿರಗಳನ್ನು ಕಟ್ಟಿಸಬೇಕು. ಜೋಗ ವಿದ್ಯುತ್‌ಶಕ್ತಿಯ ವಿನಿಯೋಗ, ಈ ಚಿತ್ರಮಂದಿರಗಳನ್ನು ನಡೆಯಿಸಲಿಕ್ಕೆ ಮೀಸಲಾಗಿರಿಸಬೇಕು. ಇನ್ನು ಪ್ರವಾಸ. ಇಂಟರ್ ಕ್ಲಾಸಿನಲ್ಲಿ ತಿರುಗಾಡುವುದು ಈಗ ಸಹಜವಾಗಿದೆ. ಒಮ್ಮೊಮ್ಮೆ ತಪ್ಪಿ ಫರ್ಸ್ಟ್‌ಕ್ಲಾಸಿನ ಟಿಕೆಟು ತೆಗೆದುಕೊಂಡರೂ ಅದನ್ನು ಸ್ಟೇರಸಿನಲ್ಲಿ ಬದಲಿಸಿ ನುತ್ತೆ ಇಂಟರ್ ತೆಗೆದುಕೊಳ್ಳುವ ಸರಿಪಾತವೂ ನೆಲೆಗೊಂಡಿದೆ. ಒಮ್ಮೊಮ್ಮೆ ಇಂಟರ್ ಟಿಕೆಟ್ಟು ತೆಗೆದುಕೊಂಡರೂ, ಫರ್ಸ್ಟ್‌ಕ್ಲಾಸಿನಲ್ಲಿ ಕುಳಿತಿರುವುದು ಕೂಡ ಹೆಮ್ಮೆಯ ವಿಷಯವಾಗಿದೆ. ಇನ್ನು ಮುಂದೆ ಸೆಕಂಡ್‌ಕ್ಲಾಸ್, ಫರ್ಸ್ಟ್ ಕ್ಲಾಸಿನ ಟಿಕೆಟ್ಟು ಕೊಂಡುಕೊಳ್ಳುವ ಸರಿಪಾತವಿಡಬೇಕು. ದಿನಾಲು ವರ್ತಮಾನ ಪತ್ರದಲ್ಲಿ ಪ್ರಸಿದ್ಧಿಸಿದ ವಾಕ್‌ಚಿತ್ರ-ನಾಟಕಗಳ ಜಾಹೀರಾತನ್ನು ಓದಿಕೊಂಡು, ಯಾವುದೇ ಊರಲ್ಲಿ ಒಳ್ಳೆಯ ನಾಟಕ-ಚಿತ್ರಗಳಿದ್ದಲ್ಲಿ, ಆ ಊರಿಗೆ ನಾವು ಪ್ರಯಾಣ ಕ್ಕೆಕೊಳ್ಳ ಬೇಕು. ಈಗ ಕ್ಲೇರವ ವಿಷಯ ತಕ್ಕೊಂಡರೂ ಹಾಗೆಯೆ. ಕೂದಲು ಕತ್ತರಿಸುವುದು ಆರು ಆಣೆಯಾದುದರಿಂದ, ಅದನ್ನು ಬಟ್ಟುಬಿಡಬಹುದು. ದಾಡಿ ಮಾತ್ರ ಮೊದಲಿನ ಧಾರಣೆಗೇ ಇದೆ. ತಲೆಯ ಮೇಲಿನ ಕೂದಲು ಎಷ್ಟೇ ಬೆಳೆದರೂ, ದಾಡಿ ಮಾತ್ರ ಪ್ರತಿದಿನ ಆಗಲೇ ಬೇಕು. ಕ್ಯಾವು ಎಷ್ಟೇ ಬೆಳೆದರೂ ಅದೂ ಒಂದು ಫ್ಯಾಶನ್ನಾಗಿದೆ. ನಮ್ಮ ಆದರ್ಶ ನಾಯಕರಾದ ಅಶೋಕಕುಮಾರ, ಬರುವಾ, ನಜಮಲ್, ಸುರೇಂದ್ರ ಇವರು ಹೇರ್‌ಕಟ್ಟು ಮಾಡಿಸುವುದೇ ಇಲ್ಲ. ಮುಖ ಮಾತ್ರ ಯಾವಾಗಲೂ 'ಗುಳುಗುಳೀತ' ಇರಬೇಕು; ಯಾವಾಗಲೂ ಮಿಂಚುತ್ತಿರಬೇಕು. ಮುಂಜಾನೆ ಒಮ್ಮೆ ಸಂಜೆಗೊಮ್ಮೆ ಹೀಗೆ ಎರಡು ಸಲ ದಾಡಿ ಆಗಲೇ ಬೇಕು. ರಾಜಕಾರಣಿಗಳಿಗೆ ಯಾವ ತಿಥಿ, ನಕ್ಷತ್ರ, ಕ್ಷೇತ್ರ, ವೇಳೆಗಳ ಬಂಧನವಿಲ್ಲ—ಹೀಗೆ ಅನುಕೂಲಸಿಂಧುವಿನ ನಿರಂತರ ಆಧಾರವಿದೆ. ಈಗ ಎಲ್ಲರೂ ಮತಾಧಿಕಾರಿಗಳಾದುದರಿಂದ, ಎಲ್ಲರೂ ರಾಜಕಾರಣಿಗಳಾಗಿದ್ದಾರೆ. ಆದುದರಿಂದ ಎಲ್ಲರೂ ಪ್ರತಿದಿನ ದಾಡಿಯಾಗಲೇ ಬೇಕೆಂಬುದು ಸಿದ್ಧಾಂತ. ಚಹ ಬಿಡಬೇಕೆಂದು ಎಷ್ಟೇ ಚಳವಳಿ ಯಾದರೂ, ಆ ಚಳವಳಿ ವಿಫಲವಾಯಿತು. ಯಾವ ಸಂಸ್ಥೆಯಲ್ಲಿ ಚಹ ಬಿಡಬೇಕೆಂಬುದು ನಿರ್ಧಾರವಾಯಿತೊ, ಅದೇ ಸಂಸ್ಥೆಯಲ್ಲಿ ಚಹದ ಕೈ ಮೇಲಕ್ಕೇರಿದೆ. ಅದು ಬಿಡಲಾರದಂತಹ ಬದುಕಾಗಿದೆ. ಪ್ರತಿಯೊಂದು ಸಂಸ್ಥೆಯ ಯಾವುದೇ ಕಾರ್ಯಕ್ರಮದ ಉಪಸಂಹಾರವು ಚಹದ ಸಂಹಾರದಿಂದಲೆ ಕೊನೆಗೊಳ್ಳುತ್ತದೆ. ಅದುವೆ ಒಂದು ಸನ್ಮಾನನೀಯ ಪೇಯವಾಗಿದೆ. ಒಮ್ಮೊಮ್ಮೆ ಸಕ್ಕರೆ ಸಿಕ್ಕದಿದ್ದರೂ ಅಡ್ಡಿಯಿಲ್ಲ; ಬೆಲ್ಲದ ಚಹವನ್ನಾದರೂ ಕುಡಿಯಲೇಬೇಕೆಂಬ ಹಟಬೇಕು. ಇನ್ನಾವುದಕ್ಕೆ ಸಕ್ಕರೆ ಕೊಡುವುದನ್ನು ಬಿಟ್ಟರೂ ಚಿಂತೆಯಿಲ್ಲ; ಚಹಕ್ಕೆ ಮಾತ್ರ ಸಕ್ಕರೆಯನ್ನು ರೇಶನ್ನಿನವರು ಕೂಡಲೇ ಬೇಕು! ರೇಶನ್ನಿಗೆ ನಮ್ಮ ಪ್ರಕೃತಿಯು ಸರಿ ಹೋಗಬೇಕಾದರೆ, ನಾವು ಚಹದ ಪ್ರಮಾಣವನ್ನು ಹೆಚ್ಚಿಸಿದರೂ ಅಡ್ಡಿ ಇಲ್ಲ. ಆಗಳಿ, ಮಹಸೀಯರೆ, ರೇಶನ್ನಿಗೆ ಗದ್ದಲ ಮಾಡಿದಂತೆ, ಈಗ ಚಹದ ವಿಷಯ ಬಂದಾಗ ಮಾತ್ರ ನೀವು ತೆಪ್ಪಗೆ ಕುಳಿತಿರುವಿರಿ—ಚಹದ ಮಹಿಮೆಯೆ ಹಾಗಿದೆ! ಇದೇ ಭಾಷಣಕಾರರು ತಿಕ್ಷಣದ ವಿಷಯಕ್ಕೆ ಕೆಲವು ಮನಸೀಯ ಅಂಶಗಳನ್ನು ಬಿಚ್ಚಿರಿಸಿದ್ದಾರೆ. ಈಗ ನಿಮ್ಮ ಅಮೂಲ್ಯವೇಳೆಯನ್ನು ನಾನು ಸಾಕಷ್ಟು ತೆಗೆದುಕೊಂಡಿರುವೆ. ನಿಮಗೆ ಮಾತ್ರ ಬೇಸರು ಬಂದಿರಲಿಕ್ಕಿಲ್ಲ. ತಿಕ್ಷಣವು ಜೀವನದ ಮುಖ್ಯ ಘಟಕವಾದುದರಿಂದ, ಕೆಲವೆ ಮಾತ್ರ ಮಹತ್ತ್ವದ ವಿಚಾರದ ಕುಡಿಗಳನ್ನು ನಿಮ್ಮೆದುರಿಗೆ ಮಂಡಿಸುವೆ: (೧) ಕಾಗದದ ತುಟ್ಟಾಗ್ರತೆಯಿದ್ದುದರಿಂದ, ನೇರವಾಗಿ ಕಲಿಸುವ ಪದ್ಧತಿಯನ್ನು Direct method ಇನ್ನಿಷ್ಟು ಉಗ್ರರೀತಿಯಿಂದ ರೂಢಿಯಲ್ಲಿ ತರಬೇಕು. ಪ್ರಾಥಮಿಕ ಶಾಲೆಗಳಲ್ಲಿ ಅಕ್ಷರಗಳನ್ನು ಕಲಿಸಲು ಬೇಕಿಲ್ಲ. (೨) (ಅ) ಮಾಧ್ಯಮಿಕ ಶಾಲೆಯಲ್ಲಿ, ರೇಶನ್ನು, ಕಂಟ್ರೋಲು D. I. ಕಾಯದೆ, ಬ್ಲೋಲನಾಕಾ, ಬ್ಲ್ಯಾಕ್‌ಮಾರ್ಕೆಟು, ರೇಶನ್ ಕಾರ್ಡು, ಗ್ಯಾಸ್‌ಪ್ಲಾಂಟ್ ಮೋಟಾರು ಮುಂತಾದುವುಗಳ ವಿಷಯಕ್ಕೆ ವಿಶೇಷ ಮಾಹಿತಿ (ಬ) ಬಿ ಜೀವಸತ್ತ್ವ, ನಾಲ್ವಾಣೆ ಪಾಲಿಸಿ—ಎಂಟಾಣೆ ವಾಲೀಸಿ ಅಕ್ಕಿ, ಗೋದಿಯ ಹಿಟ್ಟು, ಮುಗ್ಗು ಜೋಳ, ಸೀರ, ಧೋತರ, ಶರ್ಟು, ಝಂಪರ್, ಮಗ್ಗುಲಪಾಸಿಗೆ, ತಲೆಗಿಂಬಿನ ಜೀಲ—ಇವೆಲ್ಲಕ್ಕೂ ಒಂದೇ ಅರಿವು—ಮಾಂಜರಪಾಟು ಇವುಗಳ ವಿಷಯಕ್ಕೆ ನಿಬಂಧ ಬರೆಯಿಸುವುದು. (ಕ) ರೇಶನ್ ಕಾರ್ಡು, ಪೆಟ್ರೋಲ ಕೂಪನ್ನು, ಸಪ್ಲಾಯ್ ಡಿಪಾರ್ಟ್‌ಮೆಂಟು ಇವುಗಳ ರಾಜ್ಯಕಾರಭಾರ (administration) ಇವುಗಳನ್ನು ಮೇಟ್ರಿಕ್ಯುಲೇಶನ್ನಿನ ಮುಖ್ಯ ವಿಷಯಗಳನ್ನಾಗಿ ಮಾಡುವುದು. (೩) ಕೆಲವು ದೊಡ್ಡ ಊರುಗಳಲ್ಲಿ ಕಾಲೇಜುಗಳನ್ನು ಸ್ಥಾಪಿಸಿದುದು ಸಂತೋಷದ ಸಂಗತಿ. ಇನ್ನೂ ಹಲವಾರು ಕಾಲೇಜುಗಳನ್ನು ತೆರೆಯಬೇಕು. ಮೆಟ್ರಿಕ್ ಪರೀಕ್ಷೆಯ ಪರಿಣಾಮ ಮಾತ್ರ ಕಡಕಡಮೆ ಮಾಡುತ್ತ ಹೋಗಬೇಕು. ಅದುವೇ ಕಾರಣದಿಂದ, ನಮ್ಮ ಹಿರಿಯರನ್ನು ಒತ್ತಾಯದಿಂದ ಕಾಲೇಜಿಗೆ ಕಳಿಸಲು ಬರುವುದು. (೪) ಇಂಗ್ಲಿಷ್ ಭಾಷೆಯೆಂದರೆ ನಮಗೊಂದು ಅಭಿಮಾನ. ಮೊತ್ತಮೊದಲಿಗೆ ಇಂಗ್ಲಿಷ್ ಭಾಷೆಯನ್ನೆ ನಾವು ಸುರುಮಾಡಬೇಕು. ಕನ್ನಡ ಮರೆತಷ್ಟು ಇಂಗ್ಲಿಷ್ ಆಡಿಸಷ್ಟು ನಮ್ಮ ಗೌರವ. ಅದಕ್ಕಾಗಿ ನಾವು ಇಂಗ್ಲಿಷ್ ಭಾಷೆಯನ್ನೆ ಮಾಧ್ಯಮ ಭಾಷೆಯೆಂದು ಸೂರ್ಪಡಿಸಬೇಕು. ಏಕೆಂದರೆ ಚಹದಂತೆ ಇಂಗ್ಲಿಷ್ ಕೂಡ ಬಿಡಲಾರದಂತಹ ಉಪಾಧಿಯಾಗಿದೆ. (೫) ಇನ್ನು ಮುಂದೆ ನಾವು ಇಂಗ್ಲಿಷ್ ಭಾಷೆಯಲ್ಲಿ ಮಾತಾಡಬೇಕು; ಭಾಷಣ ಕೊಡಬೇಕು. ಈಗ ಮಾತ್ರ ಕನ್ನಡದಲ್ಲಿ ಕೊಟ್ಟ ಬಗ್ಗೆ ಕ್ಷಮೆಯನ್ನು ಕೋರುತ್ತೇವೆ. ಉಪಸಂಹಾರ. ಮಹನೀಯರೆ, ಇಲ್ಲಿಯವರೆಗೆ ನೀವು ಶಾಂತ ಚಿತ್ತದಿಂದ ವಿಶೇಷ ಗದ್ದಲ ಮಾಡದಲೆ, ಏನು ಕೇಳಿದಿರಿ ಅದಕ್ಕೆ ನಾನು ತುಂಬಾ ಆಭಾರಿಯಾಗಿದ್ದೇನೆ. ಈ ಹೊತ್ತಿನ ಭಾಷಣಕಾರರ ಅಭಿಪ್ರಾಯಗಳನ್ನು ಒಂದೆಡೆಗೆ ತಂದು, ಅವುಗಳಿಗೆ ಒಂದು ತಿರುಳನ್ನು ಒಂದೇ ಒಂದು ರಬ್ದದಲ್ಲಿ ನಾನು ಹೇಳುವೆನೆಂದು ಹಿಂದೆಯೇ ವಚನ ಕೊಟ್ಟಿದ್ದನ್ನೇ. ಆ ಮೇರೆಗೆ 'ಯುದ್ಧೋತ್ತರ ಪುನರ್ರಚನೆ' ಯಾವ ಪ್ರಕಾರವಾಗಿ ಯಾವ ರೂಪದಿಂದ ಕರ್ನಾಟಕದಲ್ಲಿ ಸುರುವಾಗಬೇಕೆಂಬುದನ್ನು ಹೇಳಿಯಾಗಿದೆ. ಅದುವೆ ಕರ್ನಾಟಕ ಬೋರ್ಡೀಕರಣ. ಬೋರ್ಡೀಕರಣದ ಪ್ರಚಾರಕ್ಕಾಗಿ ಒಂದು ಬೋರ್ಡನ್ನು

(೨೯ನೆಯ ಪುಟದಲ್ಲಿ ಮುಂದುವರಿದಿದೆ)

ಏಕಾಂಕಗಳ ತಂತ್ರ

(ಸಾಹಿತ್ಯ ವಿಮರ್ಶೆ)

ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ. ಧಾರವಾಡ

ಇಂದಿನ ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆಗಳಿಗೆ ಕೈಹಾಕಿದಷ್ಟು ಜನ ಏಕಾಂಕಕ್ಕೆ ಕೈ ಹಾಕಿಲ್ಲ. ಸಾಹಿತ್ಯ ಬರೆಯಬೇಕೆನ್ನುವವರಿಗೆ ಸಣ್ಣಕತೆಗಳು ಎಷ್ಟು ಸುಲಭವೆನಿಸಬಹುದೊ ಏಕಾಂಕಗಳು ಅಷ್ಟು ಸುಲಭವೆನಿಸಲಿಕ್ಕಿಲ್ಲ. ಏಕಾಂಕವೆಂದೊಡನೆಯೆ ಭಾವ ಎಂತಹದಿರಬೇಕು? ದೃಶ್ಯಗಳು ಎಷ್ಟಿರಬೇಕು? ಅವುಗಳ ಕ್ರಮ ಹೇಗಿರಬೇಕು? ಸಂಭಾಷಣೆಗಳ ಮುಖಾಂತರ ಕಥೆಯನ್ನು ಹೇಗೆ ಸಾಗಿಸಬೇಕು? ಪಾತ್ರ ಪರಿಪೋಷಣೆಯೆಂದರೇನು? ಎರಡಕ್ಕಿಂತ ಹೆಚ್ಚು ಪಾತ್ರಗಳು ರಂಗಭೂಮಿಯ ಮೇಲಿದ್ದಾಗ ಏಕಸೂತ್ರವಾಗುವಂತೆ ಸಂಭಾಷಣೆಯನ್ನು ಎಲ್ಲರ ನಡುವೆ ಹೇಗೆ ಹಂಚಬೇಕು? ಇವೇ ಮೊದಲಾದ ಪ್ರಶ್ನೆಗಳು ಉದ್ಭವಿಸುವಾಗ, ನಮ್ಮನೆ ಸಣ್ಣಕತೆ ಬರೆಯುವುದೆ ಮೇಲೆನಿಸಬಹುದು ಹಲವರಿಗೆ.

ಹುಟ್ಟು ನಾಟಕಕಾರನಾದವನಿಗೆ ಈ ಎಲ್ಲ ಪ್ರಶ್ನೆಗಳು ತಾವೇ ತಾವಾಗಿ ಬಗೆಹರಿಯುತ್ತವೆ. ಶ್ರೀ. ಟಿ. ಪಿ. ಕೈಲಾಸಂರ ಯಾವುದೇ ನಾಟಕ ಓದಿದರೂ, ಆರಂಭದಲ್ಲಿಯೆ ಮೇಲಿನ ಎಲ್ಲ ಪ್ರಶ್ನೆಗಳಿಗೂ ಉತ್ತರಕೊಡುತ್ತ ಹೇಗೆ ಆಟವಾಡುತ್ತ ಸನ್ನಿವೇಶವನ್ನು ಅರಳಿಸುತ್ತಾರೆಂಬುದು ಗೊತ್ತಾಗುತ್ತದೆ.

'ಹೋಂ ರೂಲ್' ನ ಮೊದಲನೆಯ ದೃಶ್ಯ. ರಾಮಣ್ಣನ ತಾಯಿ ಸುಬ್ಬಮ್ಮ ವಿಧವೆ ಮುದುಕಿ—'ಹತ್ತಿರದಲ್ಲೆಲ್ಲಾದ್ರೂ ಆಳ್ತಾಪ ಭಾವಿ ಇದೇನ್ರಮ್ಮಾ?' ಎಂದು ಕೇಳುತ್ತ ಬರುವಳು. 'ಇದೇನು ನಡೆದಿದೆ ದುರಂತ' ಎಂದು ನೋಡುಗರಿಗೆ ಕುತೂಹಲ! ಈ ಮುದುಕಿಯ ಪಾತ್ರಪ್ರವೇಶವಾದಮೇಲೆ, ಐದುನಿಮಿಷದ ವರೆಗೆ ಕೂಡ ನಿಲ್ಲುವುದಿಲ್ಲ. ಹಾಳುಭಾವಿ ಬೀಳಲಿಕ್ಕೆ ಈ ಮುದುಕಿ ಇಲ್ಲಿ ಎರಡು ನಿಮಿಷ ಬಂದು ನಿಳಿದು ಹೋಗುವುದೇಕೆ?— ಎಂದು ಯಾರಿಗಾದರೂ ಎನಿಸಬಹುದು. ಮೇಲೆ ಹೇಳಿದಂತೆ 'ಇದೇನು ನಡೆದಿದೆ ದುರಂತ?' ಎಂಬ ಕುತೂಹಲ ಹುಟ್ಟಿಸಿದರೆ ಸಾಕು, ಈ ಅಲ್ಪ ಪ್ರವೇಶದ ಸಾಫಲ್ಯ ಅದಂತಾಯಿತು. ಮುಂದೆ ನಡೆಯುವ ಹೋಂ ರೂಲಿನ ಸಂಗ್ರಾಮ ಭೂಮಿಗೆ ಇದು ಮಾರ್ಮಿಕ ಮುನ್ನುಡಿ, ಇಲ್ಲವೆ ನಾಂದಿಯೆಂದರೂ ಆದೀತು.

ಅಥವಾ ಆರಂಭದಲ್ಲಿ ರಾಮಣ್ಣ ತಾನೇ ಪ್ರವೇಶಿಸಿ, ಹದಿನೈದು ನಿಮಿಷ ಆತ್ಮಗತ ಭಾಷಣ ಮಾಡುತ್ತ ತಾನು ಯಾರು, ತನ್ನ ಹೆಂಡತಿ ಎಂತಹಳು, ತನ್ನ ಮುದಿ ತಾಯಿಯ ಸ್ವಭಾವ ಯಾವಪರಿ, ಇವರಿಬ್ಬರ ನಡುವೆ ತಾನು ಪಡುತ್ತಿರುವ ಸಂಕಟವೇನು—ಎಲ್ಲಾ ಹೇಳುತ್ತ ನಿಲ್ಲಬಹುದು. ಈ ತಂತ್ರ ಹಿಡಿದು ನಾಟಕ ಆರಂಭವಾದರೆ, ಅನುಕಂಪನೀಯ ನಾಟಕಗಳ ಥಾಟಿಯಾಗಬಹುದು. ಸಾಲದುದಕ್ಕೆ ಮೇಲೊಂದು ನಾಗ್ಯಸಂಗೀತವನ್ನೂ ಹೇಳಬಹುದು:

ಇನ್ನೆಂದರಲ್ಲಿ ಆರಂಭಿಸಿದ್ದರೆ ಸಾರ್ಮಿಕವಾಗಿ ಕಂಡೀತು? ಎಂದು ಯಾರಾದರೂ ಪ್ರಶ್ನೆ ಮಾಡಿದರೆ, ಮೊದಲನೆಯದೆ ಹೃದ್ಯವಾದ ಹಾದಿ ಎಂದು. ತಿಳಿಗಳಿಕೆಯುಳ್ಳ ಕಂಪನಿಯ ನಾಟಕಕಾರನೂ ತಲೆದೂಗಬಹುದು.

ಇದಿಷ್ಟು ಆರಂಭವಾಯಿತೊ ಆಮೇಲೆ. ಪಾತ್ರಗಳು ಪ್ರಧಾನವಾಗಿ ಅವಕ್ಕೆ ಅಧೀನವಾಗಿ ಸಂಭಾಷಣೆ—ಕಥೆಗಳು ಹೇಗೆ ಹೊಂದಿಕೊಳ್ಳಬೇಕೆಂಬುದೊಂದು ಪ್ರಶ್ನೆ. ರಾಮಣ್ಣನ ಸ್ವಭಾವ ಎಂತಹದು? ಮೊದಲು ತಾಯಿಗೂ ಮಗನಿಗೂ ನಡೆಯುವ ಸಂಭಾಷಣೆ ಕೇಳಬೇಕು. ಪುರಾಣಗಳ ಉದಾಹರಣೆಗಳನ್ನೆ ಕೊಟ್ಟು, ವೇದಾಂತದ ನೋಗುಹಾಕಿ, ಸಂಸಾರ ನಶ್ವರತೆಯಮೇಲೆ ಭಾಷಣಮಾಡಿ, ತಾಯಿಯ ಮನಸ್ಸು ಕರಗಿಸಲು ಯತ್ನಿಸುತ್ತಾನೆ, ರಾಮಣ್ಣ. ಆಮೇಲೆ ಮನೆಯ ಮಾಸ್ಟರ್ ಆಗಬೇಕೆಂಬ ಜವನ 'ಮಿಸ್ಟೈಸ್ಸು'; ಅವಕೊಡನೆ ಇವನ ವರ್ತನೆ ಹೇಗೆ? ಲಾಯ್ರಿ ಮಾಡುವ ರಾಮಣ್ಣನ ಕೋಣೆಯಲ್ಲಿ ಕಾಯಿಪಲ್ಲೆ ಹೆಚ್ಚುತ್ತ ಕೂತಿರುತ್ತಾಳೆ ಯಜಮಾನತಿ ಸೆಂಕಮ್ಮ. ವೃತ್ತಿ ಹೀಗೆ ಆರಂಭವಾದೊಡನೆಯೆ ಇವಳ ಸ್ವಭಾವಪರಿಚಯ ನಮಗಾಗುತ್ತದೆ. ರಾಮಣ್ಣ ಇವಳೊಡನೆ ವ್ಯವಹರಿಸುವಾಗ ಇವಳಿಗೆ ಹೇಗೆ ಅನುಕೂಲವಾಗಿ ನಡೆಯುತ್ತಾನೆ ಎಂಬುದನ್ನು ನೋಡುತ್ತೇವೆ. ಆಯಿತು. ಹೀಗೆ ಕ್ರಮಕ್ರಮವಾಗಿ ನಾಟಕ ವೈಶ್ಯವೃತ್ತಿಗೆ ಕಳೆಕಟ್ಟುತ್ತ ಪರಮಾವಧಿಗೆ ಹೋಗುತ್ತದೆ. 'ಹೋಂ ರೂಲು' ಕೈಲಾಸಂರ ಆದರ್ಶವಾದ ಏಕಾಂಕ.

ಕೈಲಾಸಂರಿಗಿಂತ ಮೊದಲು ಕನ್ನಡದಲ್ಲಿ ಇಂತಹ ಏಕಾಂಕಗಳೇ ಇದಿಲ್ಲ. (ಏಕಾಂಕಗಳೇ ಇದ್ದಿಲ್ಲವೆನ್ನೋಣ) ಇಪ್ಪತ್ತೈದು ವರುಷಗಳ ಮುಂಚೆ ಕಂಪನಿಯ ನಾಟಕಗಳೇ ನಾಟಕಗಳು. ಪೌರಾಣಿಕ ಕಥೆಗಳು—ಅವೂ ಮರಾಠಿ ಇತರ ಪರಭಾಷೆಗಳ—ಅನುವಾದಗಳು. ಪುರಾಣದ ನಾಟಕಗಳಿಗೆ ಆಗಿನ ಪುರಾಣ ತಂತ್ರವೇ ಒಗ್ಗಿತು. ಕಲೆಗೂ ಕಂಪನಿಗೂ ಯಾವುದೇ ಸಂಬಂಧವಿಲ್ಲವೆಂಬಂತೆ ನಾಟಕಗಳ ನಿರಂಕುಶ ಪ್ರಭುತ್ವ ಮೆರೆಯಿತು. ಕೆಲವಾದರೂ ಮರಾಟಿಯ ಪೌರಾಣಿಕ ನಾಟಕಗಳು(ಉದಾ—ಶೀಜಕವಧ, ಚ್ರೌವದೀ, ರುಕ್ಮಿಣೀಸ್ವಯಂವರ, ಸಿಂಹಾಚಾ ಛಾವಾ, ಧ್ರುವಚರಿತ್ರ ಸತ್ಯಾಗ್ರಹ) ಕಲಾವಂತಿಕೆಯಿಂದ ಕೂಡಿ ಕಳೆಕಟ್ಟುವಂತಾಗಿವೆಯೆಂದು, ಅವುಗಳ ಅನುವಾದವಾದರೂ

ಯಶಸ್ವಿಯಾಗಿ ಪರಿಣಮಿಸಿದುವೆಂದೇ ಹೇಳಬಹುದು. ಆದರೆ ಕರ್ನಾಟಕದ ದಕ್ಷಿಣ ಭಾಗದಲ್ಲಿ ಕೈಲಾಸಂರಿಗಿಂತ ಮೊದಲಿನ ಕಂಪನಿ ನಾಟಕಗಳೆಂದರೆ ಏನೂ ಸತ್ತ್ವ-ಸ್ವಾರಸ್ಯ ಇಲ್ಲದುವು.

ಇಂದಿನ ಭಾವಗೀತೆಗಳು, ಇಂದಿನ ಸಣ್ಣ ಕತೆಗಳು, ಇಂದಿನ ಪ್ರಬಂಧಗಳು, ಇಂದಿನ ಎಲ್ಲ ಸಾಹಿತ್ಯ ಪ್ರಕಾರಗಳಂತೆ ಏಕಾಂಕಗಳೂ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಬಣ್ಣ ಪಡೆದು ಬೆಳಕಿಗೆ ಬಂದುವು. ನಾಟಕಕ್ಕೂ ಜನಜೀವನಕ್ಕೂ ಯಾವ ಸಂಬಂಧವಿರಬೇಕೆಂಬ ಪ್ರಶ್ನೆ ಈ ಮೊದಲು ಉಚ್ಚವಿಸಿರಲಿಲ್ಲ. ಏಕೆಂದರೆ ಜನಜೀವನಕ್ಕೆ ಸಂಬಂಧಿಸಿದ ಸಾಮಾಜಿಕ ನಾಟಕಗಳೆ ಆಗ ಇರಲಿಲ್ಲ, ಈ ಹೊಸಬಗೆಯ ರಂಗಭೂಮಿ ಎಷ್ಟು ವಾಸ್ತವಪೂರ್ಣವಾದುದು ಎಂಬುದನ್ನು ಕೈಲಾಸಂರು ಟೊಳ್ಳುಗಟ್ಟಿಯಲ್ಲಿ ವ್ಯಾಖ್ಯಾಯಿಸಿದ್ದಾರೆ. ನಾಯಕ ಸಾಮಾಜಿಕ ವ್ಯಕ್ತಿಗಳ 'ಫೋಟೊ' ತೆಗೆದು, (ಬಹಿ)ರಂಗ ಸ್ಥಳಕ್ಕೆ ಯೆಳ್ತಂದಿಪ್ಪಂದು ತಾನು ಲೆಕ್ಚ್ಯರ್ನಲ್ಲಿ ಏನೇನು ಬಗುಳ್ಬೇಕೂ ಅಂತಿದ್ನೊ ಅದನ್ನೆಲ್ಲಾ ಇವರ ಬಾಯಿಂದ ಬಗುಳಿಸ್ಬಿಡಬೇಕು— ಎನ್ನುತ್ತಾನೆ. **ಇದುವೆ ಹೊಸಯುಗದ ಗಾಳಿ:** ಪಾತ್ರಗಳೆಂದೊಡನೆ ತಲೆಕಿರೀಟ, ಭುಜಕಿರೀಟ, ಜರಿಯ ವಾದರಕ್ಷೆ, 'ಶಿರಪೇಚು' ಗಳ ಆಡಂಬರವಿಲ್ಲ. ದೃಶ್ಯವೆಂದೊಡನೆ ರಸ್ತಾ, ಮಹಾಲ್, ಜಂಗಲ್ ಸೀನುಗಳ ಸೊಂದಲವಿಲ್ಲ. ಅಭಿನಯವೆಂದೊಡನೆಯೆ ನಟನು ಭ್ರುಕುಟಿ ಬದ್ಧನಾಗಿ, ಕಲ್ಲಿಮೀಸೆಗಳಿಂದ ಕಿಡಿ ಕಾರುತ್ತ ಪ್ರಲಯಕಾಲದ ಮೇಘ ಗರ್ಜನೆ ಮಾಡುವ ಅಗತ್ಯವಿಲ್ಲ. ಭಾಷೆಯೆಂದೊಡನೆ ಪಟಾಕ್ಷಿ-ಧಡಲ್ ಬಾಜಿಗಳ ಸಪ್ಪಳವಲ್ಲ. ಜನಜೀವನದಲ್ಲಿ ಏನು ಕಾಣುತ್ತೇವೊ ಅದು, ಜನರ ಆಚಾರ-ವಿಚಾರ-ಮಾತುಕತೆ-ವ್ಯವಹಾರಗಳು ಯಾವ ಪ್ರಕಾರವಾಗಿ ನಡೆಯುತ್ತವೆಯೊ ತಪ್ಪತ್ತಾಗಿ ರಂಗಭೂಮಿಯ ಮೇಲೆ ಬರಬೇಕು. ಈ ಸ್ವಾಭಾವಿಕತೆ, ಈ ವಾಸ್ತವಿಕತೆ ಎಷ್ಟೆಷ್ಟು ಸಾಹಿತ್ಯವಲ್ಲಿ ಒಪ್ಪಪಡೆವುದೊ ಸಾಹಿತ್ಯ ಅಷ್ಟಷ್ಟು ಕಲಾಪೂರ್ಣವಾಗುತ್ತದೆ. ಇದೇ ತಂತ್ರವನ್ನೆ ಶ್ರೀರಂಗರು ತಮ್ಮ 'ತ್ರಿಶೂಲ' ಎಂಬ ನಾಟಕದಲ್ಲಿ ಸ್ಪಷ್ಟಪಡಿಸಿದ್ದಾರೆ. ನಾಟಕಕಾರ ತನ್ನ ಗೆಳೆಯನನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ.... ತಾನು ರಚಿಸಿದ ಹೊಸದೊಂದು ನಾಟಕ ತೋರಿಸಲಿಕ್ಕೆ. ನಡುಮನೆಯೆ ರಂಗಭೂಮಿಯಾಗುತ್ತದೆ. ತಾಯಿಯ ಮಡಿಯ ಸೀರೆಯೆ ಅಂಕಪಡದೆಯಾಗುತ್ತದೆ. ಸಂಪ್ರದಾಯನಂತ ತಂದೆ-ತಾಯಿ, ಬೆಳೆದು ಮದುಸೆಯಾಗದ ಮಗಳು ಇವರು ಪಾತ್ರಗಳಾಗುತ್ತಾರೆ. ತನ್ನ ಮನೆಯಲ್ಲಿ ನಿತ್ಯ ನಡೆಯುವ ತಿಕ್ಕಾಟವೇ ಒಂದು ನಾಟಕವಾಗುತ್ತದೆ. ನಾಟಕಕಾರ ಇದನ್ನು ಬರೆದಿಡುವುದಕ್ಕಿಂತ ಪ್ರತ್ಯಕ್ಷವಾಗಿಯೆ ತೋರಿಸುತ್ತಾನೆ, ತನ್ನ ಮಿತ್ರನಿಗೆ. ನಾಟಕಕ್ಕೂ ಜನಜೀವನನಕ್ಕೂ ಇಷ್ಟು ಸಂಬಂಧವಿದೆ. ಏಕಾಂಕ ನಾಟಕದಲ್ಲಿ ಜನಜೀವನದ ಒಂದು ಘಟನೆ, ಒಂದು ಪಾತ್ರನಿರೂಪಣೆ, ಒಂದು ಸಮಸ್ಯಾಚರ್ಚೆ ಯಾವುದೋ ಒಂದು ಇರಬಹುದು. ಅದು ಜನಜೀವನಕ್ಕೆ ಸಮೀಪವಾಗಿ, ಜನರಾಡುವ ಮಾತಿಗೆ ಸಾಟಿಯಾಗಿ ಸುಂದರವಾಗಿ ಚಿತ್ರಿತವಾದರೆ ಅದುವೆ ಇಂದಿನ ಉತ್ತಮ ಏಕಾಂಕದ ತಂತ್ರ.

ಕೈಲಾಸಂರ ತರುವಾಯ ಏಕಾಂಕದ ತಂತ್ರಕ್ಕೆ ಹೊಸಹೊಸ ದೃಷ್ಟಿಯಿಂದ ಹೊಸತಾದ ಮೆರುಗನ್ನು ತಂದವರು ಇತ್ತ ಶ್ರೀರಂಗರು, ಅತ್ತ ಕಾರಂತರು. ಒಂದು ಓಣಿಯ 'ಕಟ್ಟಿಯ ಪುರಾಣ' ವೇ ಒಂದು ಏಕಾಂಕವಾಯಿತು ಕಾರಂತರ ಕೈವಾಡದಿಂದ. ಒಂದು ಮನೆಯ 'ಜಂಬದ ಜಾನಕಿ' ಯ ಉಪನ್ಯಾಸವೇ ಇನ್ನೊಂದು ಮನೋರಂಜಕವಾದ ಏಕಾಂಕದ ವಸ್ತುವಾಯಿತು. ಎಷ್ಟೊ ಏಕಾಂಕಗಳನ್ನು ಗೀತರೂಪದಲ್ಲಿ ಹೊಸೆದರು. ಇನ್ನೂ ಕೆಲವು ಏಕಾಂಕಗಳನ್ನು ಮೂಕ ಅಭಿನಯಗಳಿಂದ ಪ್ರದರ್ಶಿಸಿದರು; ಮತ್ತೂ ಕೆಲವನ್ನು ನೆರಳನಾಟ್ಯದಿಂದ ಅಭಿನಯಿಸಿ ತೋರಿದರು. ದೇವ-ಮಾನವರಲ್ಲಿ ಹೆಚ್ಚು ಕಡಿಮೆ ಮಾಡದೆ, ನಾರದನನ್ನು ಭೂಲೋಕಕ್ಕಿಳಿಸಿ ಅವನನ್ನು ಗೇಲಿಮಾಡಿ, ಇನ್ನೊಂದು ಬಗೆಯ ವಿಡಂಬಕ ಏಕಾಂಕವನ್ನು ಪ್ರಯೋಗಿಸಿದರು.

ಶ್ರೀರಂಗರು ಒಂದೊಂದು ಏಕಾಂಕದಲ್ಲಿಯೂ ಒಂದೊಂದು ಬಗೆಯ ಹೊಸ ಹೊಸ ತಂತ್ರವನ್ನು ಪ್ರಥಮತಃ ಬಳಸಿದ ಯತ್ನ ಕಂಡುಬರುತ್ತದೆ. ಅವರ 'ವೈದ್ಯರಾಜ' ದೊಳಗಿನ ಕಾರಕೂನ ತಿಮ್ಮಾಜಿಯ ಮನೆತನದ ಒಂದು ದೃಶ್ಯ: ಹೆಂಡತಿ ಒಳಗೆ ಮಲಗಿದ್ದಾಳೆ, ಹೊರಗೆ ಬರುವಂತಿಲ್ಲ. ಗಂಡ ದೀಪಪಚ್ಚುವುದಕ್ಕಾಗಿ 'ಕಡ್ಡೀ ಪೆಟ್ಟಿಗೆ' ಹುಡುಕುತ್ತಾನೆ. ಹೆಂಡತಿಗೆ ಅನೇಕ ಪ್ರಶ್ನೆ ಕೇಳುತ್ತಾನೆ. ಆಕೆಯ ಮಾತು ನಮಗೆ ಕೇಳಿಸದಿದ್ದರೂ ಇವನ ಮಾತಿನಿಂದ ತಾನೆ ಧ್ವನಿಸುತ್ತದೆ. ಇದೇ ತಂತ್ರನೇ ಅವರ 'ಪ್ರಪಂಚಪ್ರವಾಹ'ದಲ್ಲಿ ಇನ್ನಷ್ಟು ಸೊಗಸಾಗಿ ಚಮತ್ಕಾರಿಕವಾಗಿ ಉಪಯುಕ್ತವಾಗಿದೆ. ರಂಗಭೂಮಿಯ ಮೇಲೆ ಎರಡು ಮನೆತನದ ಜೀವನವನ್ನು ಚಿತ್ರಿಸಿದ್ದಾರೆ. ಆದರೆ ಮಾತನಾಡುವ ವ್ಯಕ್ತಿಗಳಾದರೊ ಎರಡೇ. ಒಂದನೆಯ ಮನೆಯಲ್ಲಿ 'ಈಕೆ'ಗೆ ಜಡ್ಡು, ಎರಡನೆಯ ಮನೆಯಲ್ಲಿ 'ಆತ'ನಿಗೆ ಜಡ್ಡು. ರಂಗಭೂಮಿಯ ಮೇಲೆ ಬರುವವರು ಈಕೆಯ ಗಂಡ, ಆತನ ಹೆಂಡತಿ. ಈಕೆಯ ಗಂಡ ಒಳಗಿರುವ ಈಕೆಯೊಡನೆ, ಆತನ ಹೆಂಡತಿ ಒಳಗಿರುವ ಆತನೊಡನೆ: ಮಾತನಾಡುತ್ತಾರೆ. ನಮಗೊ ಈಕೆಯ ಗಂಡ, ಆತನ ಹೆಂಡತಿ ಮಾತನಾಡುತ್ತಿರುವಂತೆ ಭಾವನೆಯಾಗುತ್ತದೆ. ಏಕೆಂದರೆ ಎರಡೂ ದಂಪತಿಗಳ ಮಾತು-ಕಥೆಗಳ ವಿಷಯ, ಅನುಭವ ಅಪ್ಪೆತವಾಗಿರುತ್ತದೆ; ಒಂದೇ ಆಗಿರುತ್ತದೆ.

ಈಕೆಯ ಗಂಡ..... 'ನನ್ನ ಕೋಟುಎಲ್ಲಿದೆ ಅಂದೆ?.... ...'

ಅಂದರೆ ಒಂದಿಷ್ಟು ಗಟ್ಟಿಸಿ ಮಾತಾಡಲ್ಲ! ಹೂ!.....

ಆತನ ಹೆಂಡತಿ:..... ಅಷ್ಟು ಯಾಕ ಗಟ್ಟಿಸಿ ಮಾತಾಡತೀರಿ ಅಂದೆ.

ಕೇಳಿಸಿತು ನನಗ ನೀವು ಹೇಳೋದು.....

ಹೀಗೆ ಸಂಭಾಷಣೆ ಸಾಗುತ್ತದೆ.

ಶ್ರೀರಂಗರು ಯಾವುದೇ ಒಂದು ಏಕಾಂಕವನ್ನು ಬರೆದರೂ ಸಂಪೂರ್ಣ ರಂಗಭೂಮಿಯ ವೃಷ್ಟಿಯನ್ನು ಕಣ್ಣೆದುರಿಗೆ ಇಟ್ಟುಕೊಂಡೇ ಬರೆಯುತ್ತಾರೆ. ನಮ್ಮಲ್ಲಿ ಏಕಾಂಕ ನಾಟಕಕಾರರೇನೊ ಕೆಲವು ಜನ ಇದ್ದರೂ, ರಂಗಭೂಮಿಯ ವೃಷ್ಟಿಯನ್ನು ಇಟ್ಟುಕೊಂಡು ಬರೆಯುವವರು ತೀರ ಕಡಮೆ. ಶ್ರೀ. ಮುಗಳಿಯವರು ಬರೆದ 'ಮೋಟಾರ ಮಾರಿಕಾ' ಎಂಬುದೊಂದು ಏಕಾಂಕ. ದೃಶ್ಯ ಆರಂಭವಾಗುವುದು: ಪ್ರವಾಸಿಗರು ಮೋಟಾರಿನಲ್ಲಿ ಹತ್ತುತ್ತಾರೆ ಆದರೆ

ಮೋಟಾರು 'ಪಂಚರ್' ಆಗಿ ಹೊರಡುವುದಿಲ್ಲ. ಮಧ್ಯದಲ್ಲಿ ಪ್ರವಾಸಿಗರ ವಿವಿಧ ಹರಟೆಯಾಗಿ, ಮೋಟಾರು ಸಾಗಬೇಕೆನ್ನುವಷ್ಟರಲ್ಲಿ 'ಪೆಟ್ರೋಲ್' ತೀರಿರುತ್ತದೆ. ವಿಷಯವೇನೋ ರಂಜಕವಾಗಿದೆ? ಆದರೆ ನಮ್ಮ ಶಾಲೆ–ಕಾಲೇಜುಗಳ ನಾಟ್ಯವಿಲಾಸಿಗಳು ಇದನ್ನು ಅಭಿನಯಿಸುವ ಬಗೆ ಹೇಗೆ? ಮೋಟಾರ್ ಇಲ್ಲದೆ ನಾಟಕ ಆಡಿದರೆ ನಾಟಕಕಾರನ ಉದ್ದೇಶ ಸಾಫಲ್ಯವೆಂತು? ಜೇಂಬ್ರೈಯವರ 'ಸಾಯೋ ಆಟ'ವೂ ಓದುವುದಕ್ಕೆ ರಸಭರಿತವೆನಿಸಿದರೂ ಅಭಿನಯಿಸಿದಾಗ ರಸಸಿದ್ಧಿ ಸಾಧಿಸದೆ ಹೋದೀತು. ನಾಟಕವು ಓದುಗಬ್ಬವಾಗಬಾರದು, ಪಡುಗಬ್ಬವಾಗಬೇಕು.

ಶ್ರೀರಂಗರ ರಂಗಭೂಮಿಯ ಸೂಕ್ಷ್ಮದೃಷ್ಟಿಯನ್ನು ಅವರು ವರ್ಣಿಸುವ ಸುದೀರ್ಘ ರಂಗಸೂಚನೆಯಿಂದಲೆ ನೋಡಿಕೊಳ್ಳಬಹುದು. ಅಲ್ಲದೆ ರಂಗಭೂಮಿಯ ಮೇಲೆ ಎರಡು ಪಾತ್ರಗಳು ಕಂಬ ನಂತೆ ನಿಂತು ಹರಟೆ ಕುಟ್ಟುತ್ತ ಸಾಗಿದರೆ, ರಂಗಭೂಮಿ ಕಳೆಕಟ್ಟೀತೇ? ಇವರ 'ನನ್ನ ದಲ್ಲ' ದಲ್ಲಿ ತರುಣ–ತರುಣಿಯರ ಸಂಭಾಷಣೆಯಿಂದಲೆ ದೃಶ್ಯ ಆರಂಭವಾಗುತ್ತದೆ. ಇಲ್ಲಿ ಕೃತಿ ಏನಾದರೂ ಬೇಕೆಂಬ ದೃಷ್ಟಿಯಿಂದಲೆ ನಾಟಕಕಾರರು, ಅವರ ಕೈಗಳನ್ನು ಟೇಬಲ್ ಸರಿಹಚ್ಚುವ ಕೆಲಸಕ್ಕಾದರೂ ಹಚ್ಚುತ್ತಾರೆ. ಆಮೇಲೆ ತರುಣನ ಮಿತ್ರರು ಬರುತ್ತಾರೆ. ಒಬ್ಬ 'ಏಳು' ಇನ್ನೊಬ್ಬ 'ಎಂಟು' ಎಂದು ತಾಸಿನ ಮೇಲೆ ತಾನು ಏರಿಸುತ್ತ ಪ್ರವೇಶಿಸುತ್ತಾರೆ. ಈ ಏಳು–ಎಂಟು ಏನಿದು? ಎಂದು ನಮಗೆ ಕುತೂಹಲ ಬೆಳೆದಾಗ, ಅದು ಅವನ ಮನೆಯ ಪಾಟಿಗೆಗಳ ಸಂಖ್ಯೆ ಎಂದು ಗೊತ್ತಾದಾಗ ಹುಚ್ಚುನಗೆ ಬರುತ್ತದೆ. ಇದೇನೋ 'ಸ್ಟಂಟುಹಾಸ್ಯ' ಎಂದು ನಮಗೆ ತೋರಬಹುದು. ಆದರೆ ರಂಗಭೂಮಿಯ ಮೇಲೆ ಇಂತಹದೂ ಬೇಕಾಗುತ್ತದೆ ಎಂಬುದನ್ನು ಮರೆಯಬಾರದು. ಕೇವಲ ಮಾತಿನಿಂದಲೆ ನಗೆ ಬೇಕಾದರೆ, ಅವರ 'ಸಂಪುಷ್ಟ ರಾಮಾಯಣ'ವನ್ನು ನೋಡಬಹುದು—ಕಂಪನಿಯ ನಟರು, ಅವರ ಹುಂಬತನ, ನಾಟಕಕಾರನ ಅರಣ್ಯಪಾಂಡಿತ್ಯ–ಈ ಸನ್ನಿವೇಶದಲ್ಲಿ ಹೊಸ ಮಾತೂ ಮನೋರಂಜಕವಾಗುತ್ತದೆ. **ಯಮುನ**ನನ್ನು ನಿಮಾ ಕಂಪನಿಯ ಏಜಂಟನೆಂದು ತಿಳಿದು ಅವನೊಡನೆ ಬಡಗೃಹಸ್ಥ ಭವಿಷ್ಯ ತೋರ ಹೋಗುತ್ತಾನೆ; ಹೆಂಡತಿ ಯಮುನಿಂದ ಇನ್ನೊಬ್ಬ ನಾಯಿತ್ರಿಯೆನಿಸಿಕೊಳ್ಳುತ್ತಾಳೆ.

ಸಾಮಾನ್ಯವಾಗಿ ಏಕಾಂಕಗಳಲ್ಲಿ ಅನೇಕ ದೃಶ್ಯಗಳು ಬರುವುದು ಡಿನೆ. ಶ್ರೀ. ಕೆ. ಗೋಪಾಲಕೃಷ್ಣರಾಯರ 'ಕನ್ಯಾರ್ಥಿ' ಎಂಬ ನಾಟಕದಲ್ಲಿ ('ಕೋಲ್ಮಿಂಚು' ಸಂಗ್ರಹ) ದೃಶ್ಯಗಳು ಅನೇಕವಾಗಿ ಂದು, ಏಕಾಂಕದ ತಂತ್ರ ಬಹಳ ಶಿಥಿಲವಾಗಿ ಹೋಗಿದೆ. 'ಹೋಂ ಾಲಿ' ನಲ್ಲಿಯೂ ಅನೇಕ ದೃಶ್ಯಗಳು (ಅಯ್ದು ದೃಶ್ಯಗಳು) ಬರುವುದುಂಟು. ಪ್ರತಿಯೊಂದು ದೃಶ್ಯವೂ ರಾಮಣ್ಣನ ಪಾತ್ರಸ್ಫುಟತೆಗೆ ಪಾಯಕವಾಗಿಯೆ ಬರುವುದುಂಟು. ಅನಾವಶ್ಯಕವಾಗಿ ಇಲ್ಲಿ ಒಂದು ತ್ರವೂ ಬರುವುದಿಲ್ಲ. ಒಬ್ಬ 'ಬೋರ' ನಂತಹ ಜವಾನ ಬಂದರೂ ನನಮೇಲೆ ರಾಮಣ್ಣನ ಅಧಿಕಾರ ಹೆಚ್ಚೊ, ವೆಂಕಮ್ಮನ ಅಧಿಕಾರ ಚ್ಚೊ—ಎಂಬುದನ್ನೆ ವಿಶದಪಡಿಸಲು ಬರುತ್ತಾನೆ. ಎರಡೇ ಮಾತು ಳಿ ಹೋಗುವುದಕ್ಕೂ ಒಂದು ಪಾತ್ರ ಬಂದರೆ, ಅದು ಮುಖ್ಯ ಕಥೆಯ ಆರಯಕ್ಕೆ ಪುಷ್ಟಿಯನ್ನೆ ಕೊಡುವಂತಾಗಿರಬೇಕು. 'ಗಂಡಸ್ತ್ರೀ' ಅರ್ಧ ತಾಸಿನೊಳಗೇ ಮುಗಿಯುವಂತಹ ನಾಟಕ. ಎರಡು ದೃಶ್ಯಗಳು, ಮೂರು ಮುಖ್ಯ ಪಾತ್ರಗಳು, ಒಬ್ಬ ಜೋರ. ಇಷ್ಟರಿಂದ ನಾಟಕಕಾರರು ಉಂಟುಮಾಡುವ ಅದ್ಭುತ ಪರಿಣಾಮವೆಂತಹದು! ಹೆಣ್ಣಿನ ನೀರು ಎಷ್ಟು ಆಳ ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಹೀಗೆ ಪಾತ್ರಸೃಷ್ಟಿ, ದೃಶ್ಯರಚನೆ, ಕಾಲಮಾನಗಳ ವೃಷ್ಟಿಯಿಂದ, ಏಕಾಂಕದಲ್ಲಿ ಒಳ್ಳೇ ಹಿಡಿತ ಬೇಕು. ಒಟ್ಟಿನ ಪರಿಣಾಮದಲ್ಲಿ ಏಕರೂಪತೆ ಬೇಕು. ಒಂದು ಪಾತ್ರ ಹೆಚ್ಚಾದೀತು, ಒಂದು ಪಾತ್ರ ಕಡಿಮೆಯಾದೀತು; ಒಂದೇ ದೃಶ್ಯವಿದ್ದೀತು, ಎರಡು–ಮೂರು ದೃಶ್ಯಗಳ ವರೆಗೆ ಬೆಳೆದಿದ್ದೀತು—ಇದಾವುದೂ ಮಹತ್ತ್ವವಲ್ಲ; ಅದರಿಂದ ಯಾವ ಬಗೆಯ ಪರಿಣಾಮವಾಗುತ್ತದೆಂಬುದು ಮಹತ್ತ್ವದ್ದು. ಆದರೂ ಸ್ಥೂಲದೃಷ್ಟಿಯಿಂದ ಒಂದೇ ದೃಶ್ಯ, ಮೂರು ನಾಲ್ಕು ಪಾತ್ರಗಳು, ಅರ್ಧತಾಸಿನಷ್ಟು ಘಟನೆಗಳು ಸಾಮಾನ್ಯವಾಗಿ ಏಕಾಂಕದಲ್ಲಿ ಬರುತ್ತವೆಯೆಂದು ಹೇಳಬಹುದು. ಎನ್ವೈಯವರ 'ಉಷಾನಾರಾಯಣ' ದಲ್ಲಿ ತರುಣ–ತರುಣಿಯರಿಬ್ಬರೆ ಇದ್ದರೂ, ದಾಂಪತ್ಯದ ಶೃಂಗಾರ ಜೀವನಕ್ಕೆ ನಿತ್ಯದ ನಾಂದಿಯಂತಿರುವ ಬೆಳಗಿನ ಜಪಾನದ ದೃಶ್ಯವು, ಸಸ್ತು ವಿಷಯದಿಂದ ಏಕಾಂಕಕ್ಕೆ ಸಮತೂಕವಾಗಿ ನಿಲ್ಲುತ್ತದೆ. ಘಟನೆಯನ್ನು ರಂಗಭೂಮಿಯಮೇಲೆ ತೋರಿದರೂ ಒಮ್ಮೊನ್ಮೆ ಪರಿಣಾಮವಾಗದೆ ಹೋದೀತು. ಆದರೆ ಎರಡುಪಾತ್ರಗಳ ಸಂಭಾಷಣದ್ವಾರಾ ಎಷ್ಟೋ ಘಟನೆ ಸಂಭವಿಸಿ ಹೋದಂತೆ ಪರಿಣಾಮವನ್ನುಂಟು ಮಾಡಲು ಬರುತ್ತದೆ. ಇದು, ಉತ್ತಮ ಏಕಾಂಕದ ಲಕ್ಷಣ. ಶ್ರೀರಂಗರ 'ಮನೆಯಲ್ಲಿ ಮಹಾಸಭೆ'ಯು ಈ ಮಾತನ್ನು ಎದ್ದು ತೋರುವಂತೆ ಎತ್ತಿ ತೋರಿಸುತ್ತದೆ. ಆದರೆ ಬರಿ ಸಂಭಾಷಣೆಯಿಂದಲೆ ನಾಟಕವಾಗದೆಂಬುದಕ್ಕೆ ಬೇಂದ್ರೆ ಲಕ್ಷ್ಮಣರಾಯರ 'ಸರಸಿಯ ಕೂಡ ಸಿನೆಮಾ' ಎಂಬ (ಜಕಮಕಿ) ಕತೆ(!) ನೋಡಬಹುದು.

ಏಕಾಂಕದಲ್ಲಿ ಹುಚ್ಚಾಟ, ಪ್ರಹಸನ, ಏಕಾಂಕ ನಾಟಕ ಎಂದು ಆಯಾ ನಾಟಕದ ವಿಷಯ–ಶೈಲಿ–ರಸನಿರೂಪಣೆಗಳ ಗಾರಿಭೀರ್ಯದ ಮೇರೆಗೆ ನಿಮರ್ಶಕರು ನಿಭಾಗಿಸುತ್ತಾರೆ. ಹುಚ್ಚಾಟ–ಪ್ರಹಸನಗಳನ್ನು 'ಫಾರ್ಸ್'ಗಳೆಂದು ಕರೆಯುವರು. ಇವುಗಳಲ್ಲಿ ಹಾಸ್ಯರಸವೆ ಪ್ರಧಾನವಾಗಿರುತ್ತದೆ. ಶ್ರೀ. ಬೇಂದ್ರೆಯವರ 'ಹುಚ್ಚಾಟಗಳಿಂದ' ಕನ್ನಡದ ಏಕಾಂಕಗಳಿಗೆ ಒಂದು ಹೊಸ ವಿಶಿಷ್ಟ ಸ್ವರೂಪ ಬಂತು. ಹಾಸ್ಯಕ್ಕೆ ಒಂದು ಜೀವಕಳೆ ಬಂತು.

ನಮ್ಮ ಸಮಾಜದಲ್ಲಿ ಮದುವೆಯಾಗದ ಹೆಣ್ಣಿಗಿಂತ ಮದುವೆಯಾಗದ ಹೆಣ್ಣು ಹೆಡೆದ ತಂದೆಯ ಗೋಳು ಒಂದು ಮಹಾ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಶ್ರೀರಂಗರು 'ಅಶ್ವಮೇಧ'ದಲ್ಲಿ ಅತಿಶಯೋಕ್ತಿಯ ಬಣ್ಣಕೊಟ್ಟು ಹುಚ್ಚಾಟದ ರೂಪದಲ್ಲಿ ಒಳ್ಳೇ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಕೈಲಾಸಂರು 'ಬಹಿಷ್ಕಾರ'ದಲ್ಲಿ ಇದನ್ನೆ ಕರುಣಾರಸದ ಪ್ರಣಾಲಿಯಲ್ಲಿ ಮಃಖಾಂತರಗೊಳಿಸಿ, ಪೂರ್ಣ ಭೇದಕವಾಗಿ ಚಿತ್ರಿಸಿದ್ದಾರೆ.

ಮದುವೆಯ ಸಮಸ್ಯೆಯ ಮತ್ತೊಂದು ಮುಖವನ್ನು ತೋರಿಸುವ ಸಾ. ಕಸ್ತೂರಿಯವರ 'ವರಪರೀಕ್ಷೆ' ಸಮಾಜವನ್ನು ನೋಡುವ

ವ್ಯಸ್ತನೋಟದ ಒಂದು ಸ್ಥೂಲಹಾಸ್ಯದ ಪ್ರಹಸನ. 'ಗಗ್ಗಯ್ಯನ ಗಡಿಬಿಡಿ'ಯೂ ಇದೇ ಜಾತಿಗೆ ಸೇರಿದ ಹುಡುಗಾಟದ ಹುಚ್ಚಾಟ. ಪ್ರಹಸನದಲ್ಲಿ ಸಾಮಾಜಿಕವ್ಯಕ್ತಿಗಳ ಟೀಕೆಯುಳ್ಳ ಅತಿಶಯೋಕ್ತಿಯ ಸ್ವೇಚ್ಛಾಚಾರವನ್ನೂ ವಿನಾಯಕರ 'ವಿಮರ್ಶಕ ನೈವ್ಯ'ದಲ್ಲಿ ಕಾಣಬಹುದು. ಇಲ್ಲಿ ಸಾಮಾಜಿಕ ಸಮಸ್ಯೆಯಿಲ್ಲ. ಸಮಾಜದ ವಿಮರ್ಶೆಯಿದೆ. ಹಾಸ್ಯ ಕೈಲಾಸಂರಲ್ಲಿ ನಲಿವಾಡರೆ ಇಲ್ಲಿ ನೋವಾಗಬಹುದು. 'ನಕ್ಕು ನಗಿಸುವಾ ನನೆ ಲೇಸು' ಎಂಬ ಸರ್ವಜ್ಞನ ಮಾತನ್ನು ಯಾವ ಶ್ರೇಷ್ಠ ಏಕಾಂಕಕಾರನೂ ಮರೆಯಲಾರ.

ಕಸ್ತೂರಿ, ಕಾರಂತ, ಶ್ರೀರಂಗರ ಕೈಯಲ್ಲಿ ಏಕಾಂಕವು ಅನೇಕ ಸಲ ಬರಿ ವಿಡಂಬನೆಯಾಗಿಯೆ ಬೇರೆ ಬೇರೆ ರೂಪತಾಳಬಹುದು. ಪದವೀಧರರೆಲ್ಲಾ ಸರ್ಕಸಿನೊಳಗಿನ ಸಾಕಿದ ಪಶುಗಳಂತೆ–ಎಂಬ ಮಾತನ್ನು, ಶ್ರೀರಂಗರು 'ಸರ್ಕಸ್ಸಿನ ಸರಸ್ವತಿ'ಯಲ್ಲಿ ಮಂಡಿಸುವಾಗ, ನಗೆಯಹಿಂಜೆ ಹೊಗೆಯೇಳಬಹುದು. ಕಾರಂತರ 'ನಾಲ್ಕನೆಯ ಪಿಶಾಚಿ' ಮನೋವಿಜ್ಞಾನದ ಸೂಕ್ಷ್ಮ ವಿಭಜನೆಯನ್ನು ತೋರುವ ಕಟು ವಿಡಂಬನೆ; ಇಲ್ಲಿ ನಗೆಗೆ ಸ್ಥಾನವೇ ಇಲ್ಲ. 'ಗಾಳಿಗೋಪುರ' 'ಚಕ್ರದೃಷ್ಟಿ' 'ಮೊಂಕುಬಾಲ' 'ಯದ್ವಾತದ್ವಾ'ಗಳಲ್ಲಿ ವಿಧವಿಧವಾಗಿ ಮೊನೆ-ಮೊನೆಯಾಗಿ ಹೊರಹೊಮ್ಮಿವ ವಿಡಂಬನೆ, ಅವರ ಏಕಾಂಕಗಳಲ್ಲಿ ಮಾತ್ರ ಒಂದೇ ಧಾಟಿಯ ಸ್ಥೂಲ ನಗೆಯಾಗಿ ಹರಿದಿದೆ.

ಒನ್ಮೊಮ್ಮೆ ಕೆಲಕೆಲವು ತಾತ್ಕಾಲಿಕ ಸಂಗತಿಗಳೂ ಏಕಾಂಕ ವಿಷಯವಾಗಿ ದೊರಕಬಹುದು. ಕನ್ನಡ–ಹಿಂದೀ ಪಾಪವು ಶ್ರೀ. ಅ. ನ. ಕೃಷ್ಣರಾಯರ 'ಜ್ವಾಲಾಮುಖಿ'ಯಂತಹ ನಾಟಕದಲ್ಲಿ ಸ್ಫೋಟವಾಗ ಬಹುದು. ಇಂದಿನ ಮಹಾಯುದ್ಧದ ವಿಶ್ವವಿದ್ಯಾಲಯ, ಸೆರಗು ಸೋಂಕಿ, ಬರಗಾಲದ ಗರ ಮೊದಲು ಶ್ರೀರಂಗರ 'ಬರಗಾಲ ಬಂಟರು' ಹೊರಹೊಮ್ಮಬಹುದು. ರೇಶನ್–ಕಂಟ್ರೋಲುಗಳ ಹಾವಳಿ 'ಎನ್ಸೆ'ಯವರ 'ಟೆಲಿಫೋನ್ ಟಾಕೀಜ' 'A. R. P. ಪ್ರಹಸನ'ಗಳಿಗೆ ಪುಟಕೊಡಬಹುದು.

ಹಳ್ಳಿಯ ರಾಟೀನೂಲುವ ಒಬ್ಬ ಮುದುಕಿಯ ಚಿತ್ರಣದೊಂದಿಗೆ ಸದ್ಯದ ಸುಧಾರಿಸಿದ 'ಸೊಸ್ತೆ'ಯರ ಮೇಲೆ ಗದೆಯೆತ್ತುವ ಚಿತ್ರೆಯಂದಿಂ ವಿಡಂಬನೆ, ವಿ. ಕೌಜಲಗಿ ಹಣಮಂತರಾಯರ 'ಜೀವಂತ ಜ್ವಾಲಾಮುಖಿ' ಎಂಬ ನಾಟ್ಯಘಟವಲ್ಲಿ ಉತ್ತಮ ಬಣ್ಣನೆಯನ್ನು ಪಡೆಯಬಹುದು. ಏಕಾಂಕ ಸ್ವರೂಪವು, ಸಣ್ಣಕತೆಯು ಜಿ. ಪಿ. ರಾಜರತ್ನಂರಲ್ಲಿ 'ಹನಿಗಳಾದಂತೆ' ವಿ. ಕೌಜಲಗಿಯವರಲ್ಲಿ ನಾಟ್ಯಘಟದ ಒಂದು ಹೊಸ ಸ್ವರೂಪ ಪಡೆದು, ವಿಶೇಷ ಬಳಕೆಗೆ ಬಂದಿವೆ. ಇದೇ ನಾಟ್ಯಘಟವು ಬೊರಬ ರಘುನಾಥರಾಯರಿಂದ ಇನ್ನಷ್ಟು ಪ್ರಚುರಗೊಂಡಿತು.

ಪೌರಾಣಿಕ ಕಥೆಗಳನ್ನು ಬಳಸಿಕೊಂಡ ಶ್ರೀನಿವಾಸರ 'ಶಾಸ್ತ್ರಿ' ಅ. ನ. ಕೃಷ್ಣರಾಯರ 'ಸ್ವರ್ಣಮೂರ್ತಿ'ಗಳು ಪಾತ್ರಸ್ಫುಟತೆ, ಶೈಲಿಯ ರಮ್ಯತೆಯ ದೃಷ್ಟಿಯಿಂದ ಕಲಾಪೂರ್ಣವಾದ 'ಏಕಾಂಕ'ಗಳಾಗಿವೆ. ಆದರೆ ಪೌರಾಣಿಕ ಕತೆಗಳ ಅಣಕವಾಡುವ ಶ್ರೀರಂಗರ 'ರರಪಂಜರ' 'ಅಹಲ್ಯೋದ್ಧಾರ' 'ಬರೆಹಗಾರನ ಭಗವದ್ಗೀತೆ' ಗಳ ತಂತ್ರ ಇನ್ನೊಂದು ರೀತಿ. ಪೌರಾಣಿಕ ಹಿನ್ನೆಲೆಯಲ್ಲಿ ಅಧುನಿಕ ಸಮಾಜದ ಅಣಕವಾಡುವುದೇ ಇವುಗಳ ಗುರಿ.

ಹೀಗೆ ನಮ್ಮ ಕನ್ನಡ ನಾಟಕಕಾರರು ವಿವಿಧ ಸ್ವರೂಪದ ಏಕಾಂಕನಾಟಕದ ತಂತ್ರವನ್ನು ಸ್ಪಷ್ಟೀಕರಿಸಿದ್ದಾರೆ. ಆಯಾ ಉದಾಹರಣೆಗಳಿಂದಲೆ ಏಕಾಂಕಗಳ ತಂತ್ರವನ್ನು ವಿವರಿಸಲು ಇಲ್ಲಿಯತ್ನಿಸಲಾಗಿದೆ. ಏಕಾಂಕದ ಸ್ವರೂಪ ಹೀಗೇ ಇರಬೇಕೆಂದು ವಿಧಾನಿಸಿ ಹೇಳುವ ಗುರುಸಮ್ಮಿತಿ ಇದಲ್ಲ. ವೈಯಕ್ತಿಕವಾಗಿ ವಿಚಾರಿಸಿ ಕಂಡುಕೊಂಡ ಅಭಿಪ್ರಾಯಗಳ ಮಂಡನೆ ಮಾತ್ರ ಇಲ್ಲಿದೆ.

(೨೯ನೆಯ ಪುಟದಿಂದ ಮುಂದುವರಿದುದು)

ನಿರ್ಮಿಸುವವರಿದ್ದೇವೆ. ಅದಕ್ಕಾಗಿ ತಾವೆಲ್ಲರೂ ತನು-ಮನ ಧನದಿಂದಾನ-ತ್ಯಾಗಗಳಿಂದ ಸಾಹಾಯ್ಯ ಮಾಡುವಿರೆಂದು ಹಾರಯಿಸುತ್ತೇನೆ. ಇನ್ನು ಉಪಸಂಹಾರದ ಕಡೆಯ ಕಾರ್ಯಕ್ರಮವೆಂದರೆ ಉಪಾಹಾರ. ಸಭಿಕರು ಸಭೆಯ ಮುಗಿದನಂತರ ತೆಗೆದುಕೊಂಡು—ಫಂಡಿನಸಲುವಾಗಿ ಹೆಬ್ಬಾಗಿಲಿಲ್ಲಿ ಹತ್ತಿರಡಬ್ಬಿಯಿದೆ; ಅದರಲ್ಲಿ ನಿಮಗೆ ತಿಳಿದಷ್ಟು ಹಣ ಹಾಕಬೇಕೆಂದು ಬೇಡಿಕೆ. ಆದರೆ, ನಿಮಿ ಸಜ್ಜಿಗೆಗೆ ಸಕ್ಕರೆಯೆಲ್ಲಿ ಸಿಕ್ಕೀತು ಎಂದು ದಯವಿಟ್ಟು ಯಾರೂ ಕೇಳಲಿಕ್ಕಿಲ್ಲವೆಂಬ ಭರವಸೆಯಿಂದ ನಾನು ನನ್ನ ಚಿಕ್ಕ ಮತ್ತು ಚೊಕ್ಕ ಭಾಷಣವನ್ನು ಮುಗಿಸುತ್ತೇನೆ. ಯಾರಾದರೂ ಪ್ರಶ್ನೆ ಕೇಳುವುದಿದ್ದಲ್ಲಿ ಅಂಚೆಯ ಮುಖಾಂತರ ಮರುಟಪಾಲು ಪತ್ರ ಸಹಿತ ಕೇಳಿದಲ್ಲಿ (ಗದ್ದಲ) ....."

ಸಾಧನ ಮುದ್ರಣಾಲಯದ
ಸುಂದರ ಪ್ರಕಟನೆಗಳು.

ಕನ್ನಡ ಮೇಘದೂತ	ಶ್ರೀ. ದ. ರಾ. ಬೇಂದ್ರೆ ಎಂ. ಎ.	೧–೦
ಗರಿ ೨ನೇ ಆವೃತ್ತಿ	ಶ್ರೀ. ದ. ರಾ. ಬೇಂದ್ರೆ ಎಂ. ಎ	೨–೦
ಸಾಹಿತ್ಯದಲ್ಲಿ ಪ್ರಗತಿ	ಪ್ರೊ. ವಿ. ಕೆ. ಗೋಕಾಕ ಬಿ. ಎ. ಆನರ್ಸ್	೧–೪
ಮುಂಗಾಲ್‌ಪುಟಿಗಿ	ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ. ಬಿಟಿ.	೧–೧೫
ಪರಿಣೇತಾ	ರವಜ್ಜಂದ; ಚಟ್ಟೋಪಾಧ್ಯಾಯ	೧–೦
ಮೈಲುಕಲ್ಲಿನೊಡನೆ ಮಾತುಕತೆಗಳು	ಶ್ರೀ. ಕೋ. ಶಿ. ಕಾರಂತ	೧–೪
ನನ್ನ ಗೀತಗಳು	ಗೀತಾಪ್ರಿಯ	೧–೦
ಮಹಾಪೂರ ೨ನೇ ಆವೃತ್ತಿ	ಶೇ. ಗೋ. ಕುಲಕರ್ಣಿ	೧–೦

೧೦–೪–೦ ಗಳನ್ನು ಮನಿಯಾರ್ಡರ್ ಮಾಡಿ ಎಲ್ಲ ಪುಸ್ತಕಗಳನ್ನೂ ಒಟ್ಟಿನಲ್ಲಿ ತರಿಸಿಕೊಳ್ಳುವವರಿಗೆ ಅಂಚೆಯೆಚ್ಚವನ್ನು ತಕ್ಕೊಳ್ಳುವುದಿಲ್ಲ. ಅಂಥವರು ಕೂಡಲೆ ಕೆಳಗಿನ ವಿಳಾಸಕ್ಕೆ ಹಣ ಕಳಿಸಿರಿ.

ಮ್ಯಾನೇಜರ್

ಸಾಧನ ಮುದ್ರಣಾಲಯ, ಧಾರವಾ

ಬಾಳ್ಗನಸು

(ಸಣ್ಣ ಕತೆ)

ಶ್ರೀ ರಾ. ಶ್ರೀ. ಕಸ್ತೂರಿ, ಕೋಟ, ಮುಂಬಯಿ

ಕತೆ ಬರೆಯಿರೆಂದು ಬಾಯವರು ಬೆಳಗಿನಿಂದ ದುಂಬಾಲು ಬಿದ್ದಿದ್ದರು. 'ಏನು ಸುಡುಗಾಡು ಕತೆ ಬರೆಯಲಿ?' ಎಂದು ಕೇಳಿದೆ ನಾನು. 'ಚೆನ್ನಾದ ಮಾತು! ಏನು ಬರೆಯಲಿ ಎಂದು ಕತೆಕಾರರು ಕೇಳುತ್ತಾರೆಯೆ ಯಾರಾನ್ನಾದರೂ?' ಮಾರ್ಮಿಡಿದರವರು. ದಕ್ಷಿಣ ಕನ್ನಡ ಜಿಲ್ಲೆಯ ಉತ್ತರದಲ್ಲಿ 'ಕಾರರು' ಎಂಬೊಂದು ಜಾತಿಯಿದೆ. ಎನ್ನೇ ನೆನಸಿಯೋ ಏನೋ 'ಕಾರರು' ಎಂದು ಒತ್ತಿ ಹೇಳಿದ್ದರವರು. ಎಂತರೆ ಮರಾಟಿಗೆ ಮಾರುಹೋದವರನ್ನು ಕನ್ನಡಿತಿಯನ್ನಾಗಿ ಪರಿವರ್ತಿಸಿದುದರಿಂದ, ಮಾತಾಡುವಾಗ ತುಸು ತಡವರಿಸುತಿದ್ದರವರು. ಅದರಿಂದಾಗಿ ಅವರು ಮಾತಾಡುವಾಗ ಎಣಿಸಿದ ಭಾವದೊಂದಿಗೆ ಮತ್ತೊಂದರ್ಥವೂ ಮೂಡಿ ಬರುತಿತ್ತು. ಹಿಂದೊಮ್ಮೆ ದಿನ ನಡೆದ ಸಂಗತಿಯೊಂದು ಎಂದಿಗೂ ಮರೆವಂಥದಲ್ಲ. ಮರಾಟಿ ಭಾಷೆಯ 'ಸ್ತ್ರೀ' ಎಂಬೊಂದು ಪತ್ರಿಕೆಗೆ ಚಂದಾಹಣ ಕಟ್ಟಬೇಕೆಂದು ಅವರು ಅದೆಷ್ಟೋ ದಿನಗಳಿಂದ ಪೀಡಿಸುತಿದ್ದರು. ನನಗದು ಸರಿ ತೋರಲಿಲ್ಲ. 'ನಾವು ಕನ್ನಡಿಗರು, ಕನ್ನಡ ಪತ್ರಿಕೆ ನಾಲ್ಕಾರು ಬರುತ್ತವೆ; ಪುಹಿಳೆಯರದೇ ಬೇಕೆಂದರೆ 'ಸರಸ್ವತಿ' ಇದೆ' ಎಂದೇ ನಾನು ಸುಮ್ಮಗಾದೆ. 'ಮರಾಟಿ ಪತ್ರಿಕೆಗಳನ್ನು ತರಿಸಲಾಗದು' ಎಂಬ ಭಾವನೆಯಲ್ಲ— ಅವರೆ ಚಂದಾಹಣ ಇಪ್ಪತ್ತೈನಾಲ್ಕು ರೂ. ಎಲ್ಲಿಂದ ತೆರಲಿ? ಮೇಲಾಗಿ 'ಸುಲಿವ ಬಾಳೆಯ ಹಣ್ಣಿನಂದದಿ, ಕಳೆವ ಸಿಗುರಿನ ಕಬ್ಬಿನಂದದಿ, ಅಳವ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ— ಲಲಿತವಹ ಕನ್ನಡದ ನುಡಿಯಲಿ ತಿಳಿದು ಕನ್ನೊಳು ತನ್ನ ಮಾರ್ಗವ, ಗಳಿಸಿಕೊಂಡರೆ ಸಾಲದೇ? 'ಮಿಕ್ಕುದ-ರೊಳಿನ್ನೇನು?' ಎಂದೇ, ಖರ್ಚಿಲ್ಲದೆ ದೊರೆಯುತ್ತಿದ್ದ ಪತ್ರಿಕೆಗಳೇ ಸಾಕು ಎಂದು ಅವರನ್ನು ಮೆಚ್ಚಿಸಲೆಳಸಿದೆ ನಾನು. ಆದರವರು ಕುಂಬಸಿ ಮಿಡಿದರು. 'ಬಾಯವರು ಅಳುತ್ತಿರುವರಲ್ಲಾ' ಎಂದು ನಿಗಿಲಾಯಿತು ನನಗೆ. ಆದರೆ ದೊರೆಯುತ್ತಿರುವ ೭೫-೮೦ ರೂಪಾಯಿ ವೇತನದಲ್ಲಿ ಇಬ್ಬರ ಸಂಸಾರ ಸಾಗಬೇಕು. ಬಟ್ಟೆಬರೆ, ಕಾಯಿಪಲ್ಯ, ಕಾಫಿ, ಚಾ, ಸಿಗರೇಟು, ಮನೆಬಾಡಿಗೆ, ಇತರ ನೆಚ್ಚಗಳು—ಜತೆಗೆ ಬಾಯವರಿಗಷ್ಟು ಪೌಡರು—ಸ್ನೋ. ಹೂಂ! ತಿಂಗಳ ಕೊನೆಯ ವಾರದಲ್ಲಿ ಕಾಫಿ ಕುಡಿಯಲು ಕಾಸಿಲ್ಲನೆ, ಯಾರಾದರೂ 'ಬಾ' ಎಂದು ಕರೆವರೋ ಎಂದು ಇದಿರು ನೋಡುತ್ತಿರುವ ಕಾನು, ಈ 'ಸ್ತ್ರೀ'ಗೆ ಇಪ್ಪತ್ತೈನಾಲ್ಕು ರೂಪಾಯಿ ಚಂದಾ ಎಲ್ಲಿಂದ ತೆರಲಿ? ನನ್ನ ಅವಸ್ಥೆಯನ್ನೆಲ್ಲಾ ಬಿಚ್ಚಿ ಹೇಳಿದೆ ಅವರಿಗೆ; ಆದರವರು ಸುಮ್ಮನಾಗಲಿಲ್ಲ. 'ಕೋಡೋಣ ತಮಾಷೆ' ಎನಿಸಿತು ನನಗೆ. ಅವರನ್ನೊಮ್ಮೆಕೆಣಕಲೆಳಸಿ ಇದ್ದೊಬ್ಬ 'ಸ್ತ್ರೀ'ಯೇ ಈ ಗಂಡ ಎಂದಿಗೆ ಸತ್ತಾನು ಎಂದು ಕಣ್ಣೀರ ತರ್ಪಣ ಬಿಡುತ್ತಿರುವಾಗ, ಇನ್ನೊಬ್ಬ 'ಸ್ತ್ರೀ'ಯ ಗೊಂದಲ ನನಗೇಕೆ?....ಎಂದು 'ರಪ್ಪನೆ' ಹಣೆ ಬಡಿದುಕೊಂಡು ಮೊಗತಿರುಹಿದೆ. ಆಗ ಮಾತ್ರ ಬಾಯವರು ನಿಮುವಾದರು. ನನ್ನ ಪಕ್ಕದಲ್ಲಿ ಬಂದು ಕುಳಿತು—'ಹೋಗಲಿ ಬಿಡಿ, ನೀವಂತೂ ತರಿಸಿಕೊಡಲೊಲ್ಲಿರಿ; ಹೆಂಡತಿಯಾಜವಳ ಸಾಮಾನ್ಯೇಚ್ಛೆಯೊಂದನ್ನೂ ಸಲ್ಲಿಸಲಾರದ ನೀವು ಅದೇಕೆ ಮದುವೆಯಾದಿರೋ ಕಾಣೆ—'ಎಂದು ಮುಗುಳು ನಕ್ಕರು. ನಾನು ಮರುನುಡಿಯಲಿಲ್ಲ. ಆಗ ಅವರೇ 'ಮುಂಬಯಿಯಲ್ಲಿರುವ ತನ್ನ ತಂದೆಗೆ ಬರೆದು ಆ ಪತ್ರಿಕೆಯನ್ನು ತರಿಸಿಕೊಳ್ಳಲೇ?' ಎಂದು ಕೇಳಿದರು. 'ಧನ್ಯವಾದಗಳು' ಎಂದೆ ನಾನು. 'ನಿನ್ನಂತಹ ಹೆಂಡಿರೇ—ಎಂದರೆ ತಮಗೆ ಬೇಕಾದುದನ್ನೆಲ್ಲಾ ತಂದೆಯ ಮನೆಯಿಂದಲೆ ತರಿಸಿಕೊಳ್ಳುವಂತವರು—ಇರುತಿದ್ದಿದ್ದರೆ.....ನನ್ನಂತಹ ಅಲ್ಲ—ಗಂಡಂದಿರೆನಿಸಿಕೊಂಡವರು ಅದೆಷ್ಟು ಸುಖಿಯಾದಾರು!' ಅವರೇನೋ ಅನ್ನುವುದರಲ್ಲಿದ್ದರು. ಆದರೆ ಆಗಲೇ ನಾನು ಬೇರೆಡೆಗೆ ನಡೆದುದರಿಂದ, ಅತ್ತ ನನ್ನ ಗಮನ ಹರಿಯಲಿಲ್ಲ. ಇರಲಿ, ಅದು ಹಿಂದಿನ ಮಾತು.

'ಬರೆಯಿರಿ ಎಂದಾಕ್ಷಣ ಬರೆಯಲಾಗುವುದೆ? ಆದಕ್ಕೆ ಸ್ಫೂರ್ತಿ ಬೇಡವೇ' ಕೇಳಿದೆ ನಾನು. 'ಏನು ಸುಡುಗಾಡು ಸ್ಫೂರ್ತಿ?' ಸಿಡಿಮಿಡಿಗುಟ್ಟುತ್ತ ಸರಿದು ಕುಳಿತರವರು. ಬೆಳಗ್ಗೆ ಆದ ಪ್ರಸಂಗವಾದುದರಿಂದ ಉಪಹಾರವಿನ್ನೂ ಆಗಿರಲಿಲ್ಲ. ಬಾಯವರು ಸಿಟ್ಟಾದರೆ ಉಪಾಹಾರ 'ಸೊನ್ನೆ' ಎಂದು 'ಹೂಂ' ಎಂದೆ ನಾನು. ಆನಂದವಾಯಿತವರಿಗೆ. ಆಗಲೆ ಬೆಂಕಿ ಹೊತ್ತಿಸಿ, ಚಾ ನೂಡಿ ತಂದಿತ್ತು, ಬಳಿಕೊಂದು ಸಿಗರೇಟನ್ನಿತ್ತರು. ಆಹಾ! ಏನು ಆದರ! ಏನು ಭಕ್ತಿ! 'ಬರೆಯಿರಿ' ಎಂದು ಸನಿಹಾಪಕ್ಕೆ ಸರಿದು ಕುಳಿತರವರು. ಮಂದಹಾಸದಿಂದವರು ಇದಿರಿಗೆ ಕುಳಿತಾಗ, ಸಿಗರೇಟಿನ ಹೊಗೆ ಸುರುಳಿಯಾಗಿ ಮೇಲೇರುತ್ತಿರಲು, ಭಾವ ಉದಿಸಿತು. ಬಾಯವರೆಂಬಂತೆ 'ಕವಿ' ಆದೆ ನಾನು. ಸರಸತಿಯೇ ಇದಿರಾಗಿ ಕುಳಿತು ಬರೆಯಲು ಆವ್ಹಾನೆಯನ್ನಿಯುತ್ತಿರುವಂತೆಯೂ, ವರದಹಸ್ತದಿಂದ ಹರಸುತ್ತ 'ಭಕ್ತಶ್ರೇಷ್ಠನೇ, ನಿನ್ನ ತಪಸ್ಸಿಗೆ ಮೆಚ್ಚಿ ನೈದೋರಿದ್ದೇನೆ. ನಿನ್ನಿಷ್ಟವೇನು?' ಎಂದು ಕೇಳುತ್ತಿರುವಂತೆಯೂ ಎನಿಸಿತು. 'ದೇವೀ ನಿನ್ನ ಭಕ್ತನಾದವನಿಗೆ ಎಂದಾದರೂ ಕೊರತೆ ಎಂಬುದಿದೆಯೇ? 'ಭೂ-ವ್ಯೋಮ ಪಾತಾಳಲೋಕಂಗಳಲ್ಲಿ ಸಂಭಾವ್ಯನೆಂದೆನಿಸಿಕೊಂಬಬಿಳ ದೇವರ್ಕಳಿಂ ಸೇವ್ಯನಾದಜನ ಪಟ್ಟವ ರಾಣಿ, ವರದೆ ಕಲ್ಯಾಣಿ ವಾಣಿ; ಬರೆಹನೆನ್ನಮ ಭುವನದೊಳ್ಸಕಲ ಜನರಿಂಪ ಸನ್ಮಾನ್ಯಮಪ್ಪಂತೆನ್ನ ಪದನಾಜ್ಜನವಲ್ಲಿ ನೀನೇ ವ್ಯಾಪಿಸಿರ್ದಮಲ ಸುಮತಿಯಂ ತಾಯೆನಗೆ ತಾಯಿ ನನೆಗೂಡಿ ನೋಡಿ!' ಎಂದೆ; ಆ ಮೇಲೆ 'ಮನೆಯವರಿಗೆ ತುಸು ಸುಬುದ್ಧಿಯನ್ನು ಕೊಡು' ಎಂದು ಕೈ ಮುಗಿದೆ. ನಗುಭಾವದ ಸರಸತಿಯ ಮೊಗದ ಮೇಲೆ ಬಿಗುಭಾವ ಕಂಡಿತು. 'ಅದೇಕೆ ಮನೆಯವರಿಗಾಗಿ ಮರುಗುತಿದ್ದೀರೋ' ಎಂದವರು ವಾಗಸ್ತ್ರವನ್ನೆಸೆದರು. ಭಾವಲೋಕದಿಂದ ನೆಟ್ಟಗೆ ಇಹಲೋಕಕ್ಕಿಳಿದೆ ನಾನು. 'ದೇವರೇ, ಮನೆಯವರು, ಮನೆಯವರು ಎಂದು ನೂವಲಿಸುತ್ತಿರುವ, ಇವರ ಹೆಗಲ ನೋಲೇಕೆ ಒನ್ಮೆ ಕೊಂಡೊಯ್ಯಲಾರೆಯಯ್ಯಾ' ಎನ್ನುತ್ತ ಎದ್ದು ನಡೆದರು; ಕೆಡಕೆನಿಸಿತು ನನಗೆ. ಆ ಒಂದು ಚಣ, ಆ ದೇವಿಯ ಸಾನ್ನಿಧ್ಯದಲ್ಲಿ, ಸಾಮೀಪ್ಯದ ಬಲದಿಂದ, ಸಾಯುಜ್ಯ, ಸಾಲೋಕ್ಯ-

ಗಳತ್ತ ಹರಿಯುತ್ತಿದ್ದ ಮನವು, ಮೇಲಿನ ಕಲ್ಲು ಭೂಮಿಯ ಕಾಂತ-ಶಕ್ತಿಯಿಂದ ಆಕರ್ಷಿಸಲ್ಪಟ್ಟು ಕೆಳಗಿಳಿವಂತೆ, ಧಸಕ್ಕನೆ ಕೆಳಗಿಳಿಯಿತು-ಳಿ ಒಂದು ಚಣದಲ್ಲಿ, ಸರ್ವಜ್ಞನ ಸುಡಿಕಟ್ಟಿನ್ನು—'ನೆಚ್ಚಕ್ಕೆ ಹಣ-ವಿರಲು, ಬೆಚ್ಚಗೆ ಮನೆಯಿರಲು, ಚಿಕ್ಕ ಹೆಂಡತಿಯಿರಲು ಸಗ್ಗಕ್ಕೆ ಕೆಚ್ಚು ಹಾಕೆಂದ ಸರ್ವಜ್ಞ'—ನನಗಂಡನನು ನಾನೇ ಎಂದು ಹೆಮ್ಮೆಪಡು-ತ್ತಿದ್ದನನ ಅಧಃಪತನವಾಯಿತು! ಅಂತೂ ಕತೆಯ ಪೀಕಲಾಟ ತಪ್ಪಿ-ತಲ್ಲ!— ಎಂದು ಮನದಲ್ಲೇ ನಕ್ಕೆ. ಆದರೆ ಮುಖ್ಯಾಷ್ಟನ ಕೂಳಿನ ಪ್ರಶ್ನೆ ಮನದಲ್ಲೇ ಸುಳಿಯುತಿತ್ತು.

ಬಾಯನವರು ದಕ್ಷಿಣ ಕನ್ನಡದವರೇ: ಆದರೆ ಹುಟ್ಟಿನಿಂದಲೇ ಮುಂಬಯಿಯಲ್ಲಿದ್ದುದರಿಂದ, ಮರಾಟಿಯ ಸಂಸರ್ಕ ಜೆಳೆದಿದ್ದಿತು. ಎಂದರೆ ಅಲ್ಲಿಯ ವಾತಾವರಣ, ಕನ್ನಡ ಸಾಲೆಗಳ ಕೊರತೆ, ಸುಲಭ ವಾಗಿ ಮಾರುಹೋಗುವ ಗುಣ ಎಂದೆಲ್ಲ, ಅವರ ಓರಿಯರಿಗೆ ಬಾಯವ ರನ್ನು ಮರಾಟಿ ಶಾಲೆಗೇ ಕಳುಹಿಸುವಂತೆ ಪ್ರೇರೇಪಿಸಿದ್ದುವು. ಮನೆ ಯಲ್ಲೂ ಮರಾಟಿಯಾತೇ ಮುಖ್ಯವಾಗಿದ್ದುದರಿಂದ ಬಾಯವರಿಗೆ ಮರಾಟಿಯೇ ಮಾತೃಭಾಷೆಯಾಯಿತು. ಹಾಗೇ ಮೆಟ್ರಿಕ್ ತನಕ ಓದಿದರವರು. ಆಗಲೇ ಅವರ ಪರಿಚಯವಾದುದು ನನಗೆ. ಓದು ಮುಗಿಸಿ, ಮುಂದೆ ಓದಲು ಕಾಸಿಲ್ಲದೆ, ನೆರವಾಗುವನೆಂದಪೊಬ್ಬರಲ್ಲಿ ನಡೆದು ಅಲ್ಲಿಯೂ ಆರೆ ಬಯಲಾಗಿ, ಅಲ್ಲೆಲ್ಲಾ ಸುತ್ತಾಡಿ, ಮುಂಬ-ಯಿಗೆ ಬಂದು, ಬಾಯನರ ಮನೆಯ ಪಕ್ಕದಲ್ಲೇ ತಳವೂರಿದೆ. ಊರು-ಮನೆಯವರಾದುದರಿಂದ ಪರಿಚಯ ಬೆಳೆಯಿತು. ಆಗ ಬಾಯವರು ಸಾಲ್ಕನೆಯ ಈಯತ್ತೆಯಲ್ಲಿ ಓದುತ್ತಿದ್ದರು. ಲೆಕ್ಕದಲ್ಲಿ ತುಸು ಹಿಂದೆ, ಇಂಗ್ಲೀಷೆಂದರೆ ತುಸು ಅನಾಸಕ್ತಿ—ಆ ಪರದೇಶೀ ಭಾಷೆಗೆ ಮಾರು ಹೋದುದರಿಂದಲೇ ಭಾರತೀಯರಿಂದು ಗುಲಾಮಗಿರಿಯಲ್ಲಿ ನರಳುತ್ತಿ-ರುವರೆಂಬ ಭಾವನೆಯಿರಬಹುದು (!), ಏನೇ ಇರಲಿ. ಆ ವರ್ಷ ಬಾಯನರು ನಾಪಾಸಾಗಿ ಅದೇ ವರ್ಗದಲ್ಲಿ ಆನರ್ಸ್‌ಮಾಡಿದರು. ಕಚೇರಿಗೆ ಹೋಗುವ ಮೊದಲು, ಅವರು ಮನೆಯಲ್ಲಿರುತ್ತಿದ್ದುದರಿಂದ ಆ ಮೇಲೆ ಸಂಜೆ ಕೆಲವೇಳೆ, ಮತ್ತೆ ಆದಿತ್ಯವಾರದಲ್ಲೆಲ್ಲಾದರೊಮ್ಮೆ ಬಾಯವರ ಭೇಟಿಯಾಗುತ್ತಿತ್ತು. ನೋಡಲೇನೋ ತೆಳ್ಳಗಿನ ಶರೀರ, ಸುಂದರ ಮೊಗ, ತೀಡಿದ ಮುಂಗುರುಳು, ಇಬ್ಬದಿಗಳಲ್ಲೂ ಇಳಿಬಿಟ್ಟ ಜಡೆ, ಆ ಜೊಗಸೆಗಂಗಳು ಎಂದೆಲ್ಲ ಅದೊಂದು ತರವ ಆಕರ್ಷಣೆಯ ಸ್ಪೀಯುತಿದ್ದುವು. ಮೇಲಾಗಿ ಅವರ ಕಡೆಗಣ್ಣ ಕುಡಿನೋಟ ಎಂತವ ನನ್ನೂ ಮೆಚ್ಚಿಸುತಿತ್ತು. ಮೇಲಷ್ಟು ಪೌಡರು ದಪ್ಪಗಾಗಿ ಪಚ್ಚಿ-ಕೊಳ್ಳುತಿದ್ದರು. ಅವರನ್ನು ಕಂಡಾಗಲೆಲ್ಲ ಸಿಟ್ಟಿಗೆಬ್ಬಿಸಬೇಕೆಂದೆನಿಸು ತಿತ್ತು ನನಗೆ. ಎಂದರೆ ಸಿಟ್ಟಿನಿಂದ ಕೆಂಪಾದಾಗ ಅವರು ಮತ್ತಷ್ಟು ಚೆಲುವಾಗಿ ಕಾಣಿಸುತ್ತಿದ್ದರು. ಅಂತೆಯೆ ಒಂದು ದಿನ ಅವರು ಇದಿರಾ-ದಾಗ 'ದಿನಕ್ಕೆ ಎಷ್ಟು ಪೌಡರು ಖರ್ಚಾಗುತ್ತದೆ?' ಕೇಳಿದೆ ನಾನು. ಫಕ್ಕನೆ ಸಿಟ್ಟಾದರವರು. ಸಿಟ್ಟೆಂದರೆ ಸಿಟ್ಟಲ್ಲವದು, ಅದೊಂದು ಭಾವ ನಾತ್ರ. 'ನಿನಗೇನಂತೆ ಅವರಿಂದ, ನಿನ್ನ ಹೆಂಡತಿ ಎಷ್ಟು ಪೌಡರು ಹಾಕುವವಳಿರುತ್ತಾಳೋ ನೋಡುತ್ತೇನೆ; ನಿನ್ನ ಹೆಂಡತಿ ಕರ್ರಗಿಸ-ವಳಿರುತ್ತಾಳೆ ನೋಡು!' ಎಂದು ಜಣಕಿಸಿದರವರು. ನಸು ನಕ್ಕೆ ನಾನು. ಮುಂದೊಂದು ದಿನ ಆ 'ಕರ್ರಗಿರುವ ಹೆಂಡತಿ, ಮತ್ತಾ ಪೌಡರು ತರುವ ಗಂಡ ಇಬ್ಬರೂ ನಾವೇ ಆಗಲಿದ್ದೇನೆ' ಎಂಬುದನ ಕಲ್ಪನೆ ಕೂಡಾ ಆಗ ಇರಲಿಲ್ಲ. ಒಮ್ಮೆ 'ನೀವು ನಾಪಾಸಾದುದು ಏಕೆ?' ಎಂದು ಕೇಳಿದೆ ನಾನು. ಅವರೆಂದರು—ನಮ್ಮ ಅಧ್ಯಾಪಕ-ರಿಗೆ ಹೆಣ್ಣುಮಕ್ಕಳಿಂದರೆ ಸರಿಹೋಗುವುದಿಲ್ಲ. ಅದಕ್ಕಾಗಿ ನಾಪಾಸು ಮಾಡಿದರು'—ಎಂದು. 'ಹೂಂ'! ಎಂದೆ. ಅಂತೂ ಬಾಯನರು ತನ್ನ ಸೋಲನ್ನೊಪ್ಪಿಕೊಳ್ಳರಲ್ಲ ಎಂದು ತಲೆದೂಗಿದೆ. ಮುಂದೊಮ್ಮೆ ಇದ್ದ ಕೆಲಸ ಹೋಯಿತು. ಗ್ರಹಚಾರ ಎಂದು ಹಣೆಬರಹದ ತ್ಯಾಂಪಣ್ಣ-ನಾಗಿ ಮನೆಯಲ್ಲಿ ಕುಳಿತೆ. ಅದನ್ನು ಕೇಳಿದ ಬಾಯವರು ನೆಟ್ಟನೆ ನನ್ನೆಡೆಗೆ ಬಂದು, ನನ್ನನ್ನು ಬೇರೆಯಾಗಿ ಕರೆದು— ಒಂದು ಕೆಲಸ ವಿದೆ, ಸೇರುತ್ತೀಯಾ?' ಎಂದು ಕೇಳಿದರು. ನಾನಾದರೂ ಆಶ್ಚರ್ಯ-ಲೇಕೆ? 'ಹೂಂ!' ಎಂದೆ. 'ನೋಡು ನನ್ನ ಜಿ. ಐ. ಪಿ. ರೈಲ್ವೇ ಕಂಪೆನಿಯದೆಯಲ್ಲ; ಅದರಲ್ಲಿ ರೈಲು ಹೋಗುವಾಗ ಮುಂದಿನಿಂದ ದಾರಿತೋರಿಸಲು ಒಬ್ಬನ ಆವಶ್ಯಕತೆಯಿದೆಯಂತೆ' ಎಂದರವರು. ಆಚೀಜೆಗಿನವರು ಹೊಟ್ಟೆಪ್ಪುಂಬ ಸಕ್ಕರು; ಪುಂಬ ಅವಮಾನವಸಿ-ಸಿತು ನನಗೆ. 'ನಾಳೆ ಬರುವನಸಿರುವನಲ್ಲ; ಅವನಿಗೆ ಪೇಳಿ ಈ ಕೆಲಸ!' ಎಂದೆ. ಆಗ ಮಾತ್ರ ಬಾಯನರು ನಾಚಿಕೆಯಿಂದ ಒಳಗೆ ನಡೆದರು.

ಮುಂದೆ ಅವರು ಮೆಟ್ರಿಕ್ಕಿನಲ್ಲಿದ್ದಾಗ ಅವರ ತಂದೆ ವರಾನ್ವೇಷ-ಣೆಗೆ ತೊಡಗಿದರು. ಹತ್ತಾರು ವರ್ಷ ಮುಂಬಯಿಯಲ್ಲಿ ನೆಲಸಿದ್ದುದ-ರಿಂದ ಬಾಯನರಿಗೊಬ್ಬ ಯೋಗ್ಯಗಂಡನನ್ನು ಕಂಡು ಹಿಡಿಯುವುದು ಮಹಾಸಮಸ್ಯೆಯಾಗಿ ಕಾಣಲಿಲ್ಲ ಅವರಿಗೆ. ಸುಮಾ ಮುಮಾ ವ್ಯಕ್ತಿ-ಗಳನ್ನೇ ಕಂಡರು. ಸರಿವಂತರ ಮಕ್ಕಳಿಗೇ ಗಂಟು ಬಿದ್ದರು. ಆದರೆ ಎಲ್ಲ ನಿಷ್ಪ್ರಯೋಜನ. ಅವರ ಜಾತಕವಲ್ಲಿ 'ವರಾನ್ವೇಷಣೆ ಬಲುಕಷ್ಟ-ದಾಯಕ' ಎಂದಿದೆಯೆಂದು ಆಚಾರ್ಯರು ಬಾಯನರ ಜಾತಕ ಪರೀ-ಕ್ಷೀಲಿಸಿ ನುಡಿದಿದ್ದರಂತೆ. ಹಾಗಾಗಿ ಮೆಟ್ರಿಕ್ ಮುಗಿದರೂ ಬಾಯ-ನರ ಗಂಡನಾಗುವ ಗಂಡು ಸಿಗಲಿಲ್ಲ. ಈ ಮಧ್ಯೆ ನನಗೂ ಬಾಯನ-ರಿಗೂ ಆವಾವ ತರವ ಸಂಪರ್ಕವೂ ಇರಲಿಲ್ಲ. ಅವರಿದ್ದಲ್ಲಿಂದೆಷ್ಟು ತುಸು ದೂರದಲ್ಲಿ ನೆಲಸಿದ್ದುದರಿಂದ, ಅವರ ಮನೆಯತ್ತ ಹೋಗುವ ಆವಶ್ಯಕತೆಯೂ ಇರಲಿಲ್ಲ. 'ಆಗಾಗ ಬಾಯನರು ನನ್ನ ವರಾಗುತಿದ್ದಿದ್ದರೆ ಚೆನ್ನಾಗುತಿತ್ತು' ಎಂದು ಹೊಂಗನಸು ಕಾಣುತಿದ್ದೆ. ಅದು ನನಸಾಗ-ದೆಂದೇ ನನ್ನ ಭಾವನೆಯಿತ್ತು. ಕಾರಣ ಬಾಯವರಿಗಿಂತ ತುಸು ಹೆಚ್ಚಾಗಿಯೇ ಓದಿದ್ದೆನಾದರೂ ಸಿರಿವಂತನಾಗಿರಲಿಲ್ಲ. ಜೀವನಕ್ಕೆ ಸಾಕಷ್ಟು ದುಡಿಯುತಿದ್ದೆನಾದರೂ ಆ ದುಡಿಮೆ ನಾಲ್ಕು ಜನರ ಮನ ಸೆಳೆವಂತಿರಲಿಲ್ಲ. ಮೇಲಾಗಿ ಆಷ್ಟೇನೂ ರೂಪವಂತನೂ ಅಲ್ಲ. ಎಂದೇ ವ್ಯಾಭಾವಿಕವಾಗಿ ಸಾಮಾನ್ಯ ಪರಿಚಯವು ಪ್ರಣಯವತ್ತ ಸುಳಿದು ರೂಪುಗೊಳ್ಳುವ ಮೊದಲೇ ನಾನು ದೇರೆಯಾಗಿ ಹೋಗಿದ್ದೆ. ಅನಾಪ್ತ ವಿಚಾರಗಳ ಕಡೆಗೆ ಮನವನ್ನೇಕೆ ಹರಿಯಗೊಡಬೇಕೆಂದು ಮನವ ಭಾವನೆಗಳನ್ನು ತಡೆದು ಹಿಡಿಯಲಾರಂಭಿಸಿದ್ದೆ. ಆದರೆ ಬಾಯನರ ನೋಲಣ ಆಕ್ಟ್ರೀಯತೆ ಮಾತ್ರ ಅಚ್ಚಳಿಯದೆ ನಿಂತಿತ್ತು. ಅಷ್ಟೊಂದು ಮಾಡುಹೋಗುವ ಎನ್ನಿ! ಎಲ್ಲಾದರೊಮ್ಮೆ ವಿಶೇಷ ಸಂದರ್ಭಗಳಲ್ಲಿ ಊಟಕ್ಕಾಹ್ವಾನವಿರುತ್ತಿತ್ತು. ಆಗ ಬಾಯನರ ದರ್ಶನವಾಗುತ್ತಿತ್ತು. ಕಣ್ಣೋಟ, ಭಾವ, ಬದವಲಾವಣೆಗಳೇನೂ ಆಗುತಿದ್ದುದಾದರೂ ವಿಶೇಷ ಮಟ್ಟಿಕ್ಕಲ್ಲಿ ಎಡೆಯಿರಲಿಲ್ಲ. ಹಾಗಂತೆ

ಒಂದಿನ ಹೋಗಿದ್ದಾಗ ಬಾಯವರ ತಂದೆಯ ಭೇಟಿಯಾಯಿತು. ಬಾಯವರನ್ನ ಸಂಗಾತಿಯನ್ನಾಗಿಮಾಡಿಕೊಳ್ಳೆಂದವರು ಗಂಟುಬಿದ್ದರು ರೋಗಿ ಬಯಸುತಿದ್ದುದೂ ಹಾಲು, ಪೈಪ್ಯ ಕೊಟ್ಟುದೂ ಹಾಲು ಎಂಬಂತಾಯಿತು ನನಗೆ. ಜಾತಕಗಳೇನೋ ಸರಿ ತೂಗುತಿದ್ದುವು. ಆದರೂ ಒಮ್ಮೆಗೇ 'ಹೂಂ' ಎನ್ನಲಾರೆನಾದರೂ (ನನ್ನ ಉತ್ಸುಕತೆಯನ್ನವರಿಗೆ ತೋರ್ಪಡಿಸಲು ಮನಸ್ಸೊಪ್ಪಲಿಲ್ಲ.) 'ಅಲ್ಲೆನ್ನಲಿಲ್ಲ. ಒಂದೊಂದೇ ನೆವಸಗಳನ್ನು ಹೇಳುತ್ತ ಅವರು ಇನ್ನೂ ಒತ್ತಾಯಿಸುವಂತೆ ಮಾಡಿದೆ. ವರದಕ್ಷಿಣೆಯನ್ನೂ ಈವೆನೆಂದರವರು. ಆದರೆ ಈ ಕಾಸಿನ ದಕ್ಷಿಣೆ ಮನಸೆಚ್ಚಿದ ವಧುವಿಗಿಂತ ಹಿರಿಜೆ? ಈವೆನೆಂಬುದನ್ನು ಬಿಡಲಾಗದೆ ನಾನು ಬಯಸುವುದನ್ನೇ ಕೇಳಿದೆ: 'ವಧುವು ನೂಲಬೇಕು. ನೂತು ತನಗೊಂದು ಸೀರೆ, ಜತೆಗೆ ಗಂಜಿನಾಗುವಷ್ಟು ನಿಗೊಂದು ಪಂಜೆ ನೆಯ್ದು ಕೊಟ್ಟರೆ ಮದುವೆಯಾಗುವೆ!' ಎಂದೆ. 'ಇಂಥಾ ತರದ ವಿಚಿತ್ರ' ಎಂದು ತಲೆದೂಗಿದರು ಬಾಯವರ ತಂದೆ. ಸಮಸ್ಯೆ ಬಾಯವರ ಮುಂದೆ ಹೋಯಿತು. ಅವರಿಗಾದರೂ ನಾನು ಇವರ ಗಂಡನಾಗುವೆನೆಂದು ತಿಳಿದಾಗ ಅತೀವ ಆನಂದವಾಗಿತ್ತು. ಜೊಲುವಿಲ್ಲದಿದ್ದರೂ ಒಲವು ಅವರೆದೆಯಲ್ಲಿ ಕೂಡಿತ್ತು. 'ಹೂಂ' ಎಂದು ನಗುತ್ತ ನೂಲತೊಡಗಿದರವರು. ನೂಲಬೇಕೆಂಬ ಪ್ರೇರಣೆ ಯಾವರೂ ನನ್ನ ಮೂಲಕವೇ. ಒಂದೆರಡು ವರ್ಷಗಳ ಹಿಂದೆ ಆಗಿತ್ತು ಅಂತೂ ಸಾಕಷ್ಟು ನೂತು ದಕ್ಷಿಣೆ ಸಲ್ಲಿಸಿದರು ಬಾಯವರು; ಮದುವೆಯಾಯಿತು.

ಕನಸು ನೆನಸಾಗೆ ಬಾಯವರೊಂದಿಗೆ ಸಂಸಾರ ಹೂಡಿದೆ ನಾನು ಒಬ್ಬರನ್ನೊಬ್ಬರು ಸಾಕಷ್ಟು ಜೀನ್ನಾಗಿ ತಿಳಿದಿದ್ದುದರಿಂದ ಒಲವುಟಾಗಿ ಎರಡು ಹೃದಯಗಳ ಮಿಲನಸಂಸಾರ ಸುಗಮವಾಗಿ ಸಾಗತೊಡಗಿತ. ಆದರೆ ಜೀವನದ ಮೊದಲ ಸಮಸ್ಯೆ ಮಾರುಹೋದ ಬಾಯವರಲ್ಲಿ ತನ್ನ ತನದ ಅರಿವನ್ನುಂಟು ಮಾಡುವುದಾಗಿತ್ತು. ಕನ್ನಡ ನಾಡಿನ ಪರವರು. ಮನೆಮಾತೇನೋ ಕೊಂಕಣಿ. ಹುಟ್ಟಿನಿಂದಲೇ ಮುಂಬಯಿಯಲ್ಲಿದ್ದು. ಬಳಿದು, ಓದಿದುದರಿಂದ ಕನ್ನಡ ಅವರಿಗೆ ತಿಳಿಯುತ್ತಿರಲಿಲ್ಲ. ಪಾತಾವರಣ, ಮರಾಟಿಯವರೊಂದಿಗೇ ಓದು, ಮನೆಮಾತು ಕೊಂಕಣಿ ಎಂದೆಲ್ಲ ಕನ್ನಡಸುಡಿ ಅವರಿಂದ ದೂರವಿರುತಿತ್ತು. ಆರಾರೋ ಮಾತಾಡುವಾಗ ಹೆಕ್ಕಕೊಂಡ ಕೆಲವು ರಬ್ಬಗಳನ್ನೆತ್ತಿ 'ಹಕ್ಕಿ ಚೂಚೂ! ನಿರುಬೇಕು' ಎಂದು ನನ್ನಡಗೆ ಅಣಕವಾಡುತ್ತಿದ್ದರವರು. ಮನೆಯಾಪೋಷನೆ ಕನ್ನಡಕಲಿಯಬೇಕೆಂದು ಬಾಯವರಿಗೆ ನಾನೆಂದೆ. ನನಗೆ ಕನ್ನಡದ ಮೇಲಿರುವ ಅಭಿಮಾನವನ್ನು ಕಂಡು, ಇನಿಯಳಿಗೆ ಸಿಹಾಪುಬೇ ಇನಿಯಳಿಗೂ ಇನಿದೆಂದು 'ಹೂಂ' ಗುಟ್ಟಿದರವರು. ಮೇಲಾಗಿ ಅವರೊಂದಿಗೆ ಕನ್ನಡವನ್ನೇ ನುಡಿಯತೊಡಗಿದೆ ನಾನು. ಪೈಸನ್ನೆಗಳಿಂದ ತಿಳುಹಬೇಕಾಯಿತವರಿಗೊಮ್ಮೊಮ್ಮೆ. ಅವರೂ ಸುಧಾರಿಕರಿಸಿ. ಹಾಗೇ ಓದು-ಬರೆಹ, ಹೇಳಕೊಟ್ಟು-ಕಲಕಾಲ ಎಡರಿಲ್ಲದೆ ಸಾಗಿತು ಪರಿವರ್ತನೆ. ದಿನಾಲೂ ಬೆಳಗ್ಗೆ ಕಚೇರಿಗೆ ಹೋಗುವ ಮುಂಚೆಯೂ ಅವರಿಗಷ್ಟು ಕೆಲಸ ಹಚ್ಚಿಕೊಟ್ಟು ಹೋಗುತಿದ್ದೆ. ಸಂಜೆ ಬಂದಾಗ ಅದನ್ನೊಪ್ಪಿಸಬೇಕೆಂದು ಪತಿಯ ಅಲ್ಲ—ಪತಿದೇವನ ಪ್ರಾಣಪತಿ. ಭಾರತೀಯ ಮಹಿಳೆಯರಿಗೆ ಪತಿಯ ಮಾತೆಂದರೆ ನೇವ ವೈದ್ಯವಷ್ಟೆ! ಅವರಾವರೂ ಅಲ್ಲಗಳೆಯಲಿಳಸಲಿಲ್ಲ. ಆದರೆ ಬರುಬರುತ್ತ ಅನಾಸಕ್ತಿ ತೋರತೊಡಗಿದರು. ಸಿಟ್ಟು ಬಂದಿತು ನನಗೆ. ಇವರು ಕನ್ನಡದಲ್ಲಿ ಮಾತಾಡುವ ತನಕ ಅವರೊಂದಿಗೆ ಮಾತಾಡೆನೆಂದುಕೊಂಡೆ. ತಿಂಗಳೊಂದು ಸಾಗಿತು.... ಮಾತು-ಕತೆಯಿಲ್ಲದೆ. ಸಂಜೆಗೆ ಜತೆಯಾಗಿ ಅಡ್ಡಾಡ ಹೋಗುತಿದ್ದೆವು. ಸಂಸಾರದ ಮಾತುಗಳನ್ನೆತ್ತಿ ನುಡಿಯುತ್ತಿದ್ದರವರು. ಆದು ಹಾಗಾಯಿತು, ಇದು ಹೀಗಾಯಿತು, ನೆರೆಮನೆಯವರು ಹೊಸಬಟ್ಟೆ ತಂದರು.....ಇತ್ಯಾದಿ. ಆದರೆ ಅವಕ್ಕೆಲ್ಲ ನಾನು ಕಿವಿಗೊಡುತ್ತಿರಲಿಲ್ಲ. ಸುಮ್ಮಗೆ....ಮರುನುಡಿಯದೆ ಮುಂದರಿಯುತಿದ್ದೆ. ಇದರಿಂದ ಅವರು ಬೆವರಿದರು. ಪುನಃ ಕನ್ನಡ ಅಭ್ಯಾಸ ಸಾಗಿತು. ಬರೆಯುವುದು, ಓದುವುದು, ಎಂದೆಲ್ಲ ಹಾಗೇ ಪತ್ರಿಕೆಗಳನ್ನೂ ಕತೆ ಕಾದಂಬರಿಗಳನ್ನೂ ಓದತೊಡಗಿದರು. ಗೆದ್ದೆ ನಾನು! ಬರೆವ ಹಂಬಲ ಅವರಲ್ಲಿ ನಾಕಷ್ಟಿತ್ತು. ಶಾಲೆಯಲ್ಲಿ ಇದ್ದಾಗಲೇ ಕೈಬರೆಹದ ಪತ್ರಿಕೆಗೆ ಒಂದೆರಡು ಕತೆಗಳನ್ನು ಬರೆದು ಕೊಟ್ಟಿದ್ದರಂತ. ಅಕ್ಷರ ಬೀರುಜಿಲ್ಲರ ಕತೆಗಳ ಪಡಿಯಚ್ಚೇ ಆವರೂ ಬರೆದುದು ಅನಂತಲ್ಲವೆ ?

ಸುಮಾರು ಒಂದು ವರ್ಷ ಕಳೆಯಿತು. ಬಾಯವರೊಂದಿಗೆ ಸುಗಮವಾಗಿ ಸಾಗಿತ್ತು ಸಂಸಾರ. ಈ ಮಧ್ಯೆ ಹಿಂದೊಮ್ಮೆ ಊರಿಗೆ ಹೋಗಿದ್ದಾಗ, ಅಂದಿನ ಶಾಲೆಯ ವಾರ್ಷಿಕ ಕೂಟದವರು ಆಹ್ವಾನಿಸಿದರು. ನನ್ನನ್ನೇ ಅವರು ಆಹ್ವಾನಿಸಿದ್ದರಾದರೂ ಆ ಹೊಣೆಗಾರಿಕೆಯನ್ನು ಬಾಯವರ ಮೇಲಕೆವೆ ನಾನು. ಅವರಾಗಿ ಒಪ್ಪಿಗೆಯನ್ನು ಸೂಚಿಸದಿದ್ದರೂ ಬಲುಮೆಗಾಗಿ ಒಪ್ಪಿಕೊಂಡರವನು. ಆದರೆ ವಿಷಯದ ಕುರಿತು ಒಂದರೆ ತಾನು ಅವರಿಗೆ ಹೇಳಬೇಕಾಯಿತು. ಕರ್ನಾಟಕದ ವಿಕೇಕರಣದ ಕುರಿತು ಮಾತನಾಡಲೆಳಸಿದ್ದರು— ಶಾಲೆಯ ಮಕ್ಕಳು. ಬಾಯವರು ಮಾತಾಡಬಲ್ಲರೇ?....ಎಂಬುದು ನನಗೂ ತಿಳಿಯದ ವಿಷಯವಾಗಿತ್ತು. ಇವರು ಶಾಲೆಯಲ್ಲಿದ್ದಾಗ ತಾರ್ಕಿಕ ಕೂಟಗಳೇನೋ ಕೂಡುತ್ತಿದ್ದುವು: ಆದರೆ ಅವುಗಳಲ್ಲಿಷ್ಟು ಆಸಕ್ತಿ ಇರಲಿಲ್ಲ. ಮನೆಯಲ್ಲೋ ಧಾರಾಳವಾಗಿ ಮಾತಾಡುತ್ತಿದ್ದರು— ಒಂದಕ್ಕೆ ನಾಲ್ಕಾಗಿ.'ಏನು ಮಾಡಿಳಿಯಪ್ಪಾ ನೀನು!' ಎಂದೊಮ್ಮೊಮ್ಮೆ ನಾನು ಎತ್ತಿ ಹೇಳಬೇಕಾದ ಸಂದರ್ಭಗಳೂ ಬಂದಿದ್ದುವು. ಸಭೆ ನೆರೆತು. ಅವ್ಯವ್ಯವ ಆಯ್ಕೆಯಾಯಿತು. ಇವರ ಪರಿಚಯ ಮಾಡಿಕೊಡಬೇಕೆಂದು ಕಾರ್ಯದರ್ಶಿ ನನ್ನನ್ನು ಕೇಳಿಕೊಂಡ. ನನ್ನಷ್ಟು ಚೆನ್ನಾಗಿ, ನನ್ನ ಹೊರತು ಮತ್ತಾರು ಬಾಯವರನ್ನು ಬಲ್ಲರು? ಎಂದೇ ನಾನು ಬಾಯವರ ಪರಿಚಯ ಮಾಡಿಕೊಟ್ಟೆ. " ಹಿರಿಯರು ಕನ್ನಡ ನಾಡಿನವರಾದರೂ ಮುಂಬಯಿಯಲ್ಲಿ ಹುಟ್ಟಿ. ಮರಾಟಿ ಶಾಲೆಯಲ್ಲಿ ಓದಿದುದರಿಂದ, ಕನ್ನಡ ನುಡಿಯ ಪರಿಚಯ ಧಾರಾಳವಾಗಿ ಅವರಿಗಿಲ್ಲ ನಿಜ. ಆದರೆ ಕನ್ನಡಕ್ಕಾಗಿ ಬಾಯ್ಬಿಡುವ ಬಬ್ಬ ಕನ್ನಡಿತಿ ಅವರು. ವಿದ್ಯಾರ್ಥಿ ದಸೆಯಲ್ಲಿದ್ದಾಗ ಕನ್ನಡವನ್ನೋದುವ ಸೌಕರ್ಯ, ಸೌಲಭ್ಯಗಳವರಿಗಿದ್ದಿಲ್ಲ ನಿಜ: ಆದರೆ ಕನ್ನಡವನ್ನವರು ಮರೆಯಲಿಲ್ಲ. 'ತಾನು ಕನ್ನಡ ನಾಡವಳು' ಎಂಬುದನ್ನು ಮರೆಯದೆ ಆಗಾಗ ತನಗೆ ತಿಳಿದ ಒಂದೆರಡು ಕನ್ನಡ ರಬ್ಬಗಳನ್ನು 'ಹಕ್ಕಿ ಚೂಚೂ ಎಂದೋ, 'ನಿರುಬೇಕು' ಎಂದೋ ಎನ್ನುವ ಪರಿವಾರವಿಟ್ಟುಕೊಂಡಿದ್ದರು. ಮುಂದೆ ಈ ರಾಯರ ಜತೆಗಾತಿಯಾದಂದಿನಿಂದ ಕನ್ನಡದ ನೇಲಣ ಅವರ ಮಮತೆ, ಅಭಿಮಾನ ಕೊನರಿತು. ಬಾಯವರು ಈಗಾಗಲೇ ಕನ್ನಡದಲ್ಲಿ ಬರೆಹಗಳನ್ನು ಬರವಿದ್ದಾರೆ. ಇವರಿಲ್ಲದಾಗ ಅವರ ಪೆಟ್ಟಿಗೆ

ಯನ್ನು ಪರಿಶೋಧಿಸುವ ಕುತೂಹಲವುಂಟಾಗಲು, ನನಗೆ ಅಲ್ಲಿ ಅವರು ಆದಾಗಲೇ ಬರೆದಿದ್ದ ಒಂದೆರಡು ಕತೆಗಳು ನೋಡಸಿಕ್ಕುವು..... "

ಬಾಯನರ ಮೊಗವು ಕೆಂಪಾಗಿತ್ತು. ಈ ಕುಹಕತನದ ಅರಿವು ಅವರಿಗಾಗಿರಲಿಲ್ಲ. ನಾನಾದರೂ ಅವರಿಗೆ ಈ ವಿಚಾರದ ಸುಳಿವು ಕೂಡ ಹತ್ತದಂತೆ ಜಾಗರೂಕನಾಗಿದ್ದೆ. ಅವರ ಬರೆಹಗಳನ್ನು ನಾನು ಓದಿದೆ ಮತ್ತು ಅದಾಗಲೇ ಕಿಡಿನೋಟವೊಮ್ಮೆ ಹಾರಿತು ನನ್ನೆಡೆಗೆ. ಆದರೆ ನಾನು ನನ್ನವರ ಪರಿಚಯವನ್ನು ಅರ್ಧದಲ್ಲೇ ಬಿಡಲಾದೀತೆ ? ಮೇಲಾಗಿ ಈ ಪರಿಚಯಾತ್ಮಕ ಭಾಷಣ ನೆರೆದವರಲ್ಲಿ ತುಂಬ ಉತ್ಸುಕತೆಯನ್ನುಂಟು ಮಾಡಿತ್ತು. ಆನರ ಕತೆ ಹೇಳದಿದ್ದರೆ ಸರಿಯಾದೀತೆ? ಮುಂದರಿವೆ ನಾನು.....

" ಅವರ ಮೊದಲ ಕತೆ, ಒಬ್ಬ ಅಜ್ಜಿ, 'ಕತೆಹೇಳು, ಕತೆಹೇಳು' ಎಂದು ಪೀಡಿಸುತಿದ್ದ ತನ್ನ ಮೊಮ್ಮಗನಿಗೆ ಹೇಳಿದುದು: 'ಒಬ್ಬ ಜಿಪುಣ ಬ್ರಾಹ್ಮಣನಿದ್ದನಂತೆ. ಆತನಿಗೆ ಅದೆಲ್ಲೋ ಒಂದು ಪೈ ದಕ್ಷಿಣೆ ದೊರೆಯಿತಂತೆ. ಆ ಪೈಯನ್ನಾತ ಸೊಂಟಕ್ಕೆ ಸಿಕ್ಕಿಸಿಕೊಂಡು ಮನೆಗೆ ಬಂದಾಗ ಬಾಯಾರಿಕೆಯಾಗಲು, ಸನಿಾಪದ ಬಾವಿಗೆ ಹೋಗಿ ನೀರು ಸೇದಲು ಬಗ್ಗಿದಾಗ, ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಪೈ ಬಾವಿಗೆ ಬಿದ್ದಿತು. (ಈ ಕತೆ ಹೇಳುವಾಗ ಕೇಳುತ್ತಿದ್ದ ಮೊಮ್ಮಗ 'ಹೂಂ' 'ಹೂಂ' ಎನ್ನುತ್ತಿರಬೇಕು.) 'ಕಾಸು ಬಾವಿಗೆ ಬಿತ್ತು' 'ಹೂಂ' 'ಹೂಂ' ಎಂದರೆ ಬರುವುದೇ ?' 'ಹಾಂ!' 'ಹಾಂ ಎಂದರೆ ಬರುವುದೇ?' 'ಆಗಲಿ ಮುಂದೇನಾಯಿತು?' 'ಮುಂದೇನಾಯಿತು? ಎಂದರೆ ಬರುವುದೆ ?"—ಇದಾದ ಮೇಲೆ ಮತ್ತೊಂದು ಕತೆ....."

ನೆರೆದ ಮಕ್ಕಳು ಬಾಯ್ತುಂಬ ನಗತೊಡಗಿದರು. ಇದೇನು ಮಹಾಕತೆ ಎಂದೋ ಏನೋ ಕೈಚಪ್ಪಾಳೆ ಸಹಾ ಬಡಿಯತೊಡಗಿದರು. ಬಾಯನರು ಕೂಡ ಮುಗುಳು ನಗುತಿದ್ದರು. ಬಹುಶಃ ತನ್ನ ಕತೆಯನ್ನು ನೆರೆದವರು ಮೆಚ್ಚಿದರೆಂದೋ ಏನೋ!

" ಇನ್ನೊಂದು ಕತೆ ಬಡ ಬ್ರಾಹ್ಮಣನೊಬ್ಬನ ಕುರಿತು. ದಕ್ಷಿಣೆಯಿಂದಲೇ ಆತನ ಜೀವನ. ಹೇಳಿಕೆ, ಕೇಳಿಕೆಗಳ ಪರಿವೆಯಿಲ್ಲದೆ ಆತನು ತನ್ನ ಮುಕ್ಕಾಲು ಡಜನ್ ಮಕ್ಕಳನ್ನು ಕಟ್ಟಿಕೊಂಡು ಎಲ್ಲೇ ಆಗಲಿ 'ಊಟ ಇದೆ' ಎಂದಾಕ್ಷಣ ಅತ್ತ ನಡೆಯುತ್ತಿದ್ದ. ಹಾಗೊಂದು ದಿನ ಸರಿಯಾಗಿ ಉಂಡರೆ ಮಿಕ್ಕೆರಡು ದಿನ ಊಟದ ಪ್ರಶ್ನೆ ಅವರ ಮುಂದೆ ಸುಳಿಯುತ್ತಿರಲಿಲ್ಲ. ಹೀಗಿರಲೊಂದು ದಿನ ನೆರೆಯೂರಲ್ಲಲ್ಲೋ ಒಂದು ಶ್ರಾದ್ಧದ ಊಟವಿದೆಯೆಂದು ಕೇಳಿ ಬ್ರಾಹ್ಮಣನು, ತನ್ನ ಸೈನ್ಯದೊಂದಿಗೆ ಹೊರಟನು. ಸರಿ. ಊಟಕ್ಕೆ ಪ್ರಾರಂಭವಾಯಿತು. ಒಂದೊಂದೇ ತರದ ಭಕ್ಷ್ಯ ಭೋಜ್ಯಗಳು ಮುಗಿದ ಬಳಿಕ ಕಡುಬು ಬಂದಿತು. ಆಗ ಬ್ರಾಹ್ಮಣನಿಗಿದಿರಾಗಿ ಕುಳಿತಿದ್ದ ಆತನ ಕಿರಿಯ ಮಗ ನೀರು ಕುಡಿಯತೊಡಗಿದನು. ಇದನ್ನು ಕಂಡು ತಂದೆಗೆ ತುಂಬ ಸಿಟ್ಟು ಬಂದಿತು. 'ನೀರು ಇಲ್ಲೇಕೆ ಕುಡಿಯಬೇಕು, ಮನೆಯಲ್ಲಿ ದೊರೆಯದೆ ? ಕಡುಬು ತಿನ್ನು ' ಎಂದು ಗದರಿಸಿದನಾತ ಮಗನನ್ನು. ಆಗ ಆ ಹುಡುಗನು ಕೈಸನ್ನೆಯಿಂದ ತಂದೆಗೆ ಸುಮ್ಮಗಿರಹೇಳಿ, ಒಂದೊಂದೇ ಕಡುಬು ತಿನ್ನುತ್ತಲೂ, ನೀರು ಕುಡಿಯುತ್ತಲೂ ಊಟ ಮುಗಿಸಿದನು. ಬಳಿಕ ಮನೆಗೆ ಹೊರಟಾಗ ದಾರಿಯಲ್ಲಿ ಒಂದು ತೋಡು ಸಿಕ್ಕಿತು. ತಂದೆಯ ಮಂಕುತನಕ್ಕಾಗಿ ಸಿಡಿನಿಡಿಗುಟ್ಟುತಿದ್ದ ಮಗನು 'ತಂದೆಯೇ ನೋಡು' ಎಂದು ತೋಡಿನ ತಡಿಯ ಮರಳಿನಿಂದ ಒಂದು ಮುಷ್ಟಿ ಹೊಯ್ಗೆಯನ್ನು ತೆಗೆದನು. ಅಲ್ಲೊಂದು ಸಣ್ಣ ಹೊಂಡ ಉಂಟಾಯಿತಷ್ಟೆ! ಆ ಮೇಲಾತನು ಕೈಯ್ಯಲ್ಲಿದ್ದ ಮಳಲನ್ನು ನೀರಿನಲ್ಲಿ ಒದ್ದೆ ಮಾಡಿ ಮೊದಲಿದ್ದಲ್ಲೇ ಹಾಕಲು ಹೊಂಡವು ಅರ್ಧ ದಷ್ಟು ಕೂಡಾ ಮುಚ್ಚದಾಯಿತು. ಎಂದಾಗ ಒಂದೊಂದೇ ಹಿಟ್ಟು ತಿಂದು ನೀರುಕುಡಿದುದರಿಂದ ಮತ್ತಷ್ಟು ಹೆಚ್ಚಿಗೆ ತಿನ್ನಲಾಯಿತು ಎಂದು ಮಗನು ತನ್ನ ಹೊಟ್ಟೆಯ ಮೇಲೆ ಕೈಯಾಡಿಸಿದನು. ತಂದೆಗೆ ಹಿಡಿಸಲಾರದಷ್ಟು ಆನಂದವಾಯಿತು. 'ಮಗನೇ ಹತ್ತೇಕೆ ಹಲವೇಕೆ, ನನಗೆ ನೀನೊಬ್ಬನಿದ್ದರೆ ಸಾಕು ಕುಲಕೆ ರತ್ನ' ಎಂದು ಮಗನನ್ನು ತಬ್ಬಿಕೊಂಡು ಮನೆ ಸೇರಿದನು.... ..."

ನೆರೆದವರೆಲ್ಲ ಆನಂದದಿಂದ ಎಡೆಬಿಡದೆ ಐದು ನಿಮಿಷಗಳ ವರೆಗೆ ಕೈ ಚಪ್ಪಾಳೆ ಬಡಿದರು. ಹಳ್ಳಿಯ ಹಾಸ್ಯದ ಕತೆಯದು. ಆದರೆ ಬರೆದವರು ಬಾಯವರಾದುದರಿಂದ (!) ಅದು ಮತ್ತಷ್ಟು ಚೆನ್ನಾಗಿ ಕಂಡಿರಬೇಕವರಿಗೆ! ' ಎಲ್ಲರೂ ನಗುವಾಗ ಬಾಯವರೂ ನಕ್ಕರೆನ್ನಿ. ಆದರೆ ಆ ನಗು ನಾಚಿಕೆಯಿಂದಲ್ಲ; ಬದಲು 'ತನ್ನ ಬರೆಹದಿಂದ ನೆರೆದವರನ್ನು ತಲೆದೂಗಿಸಿದೆನಲ್ಲ' ಎಂಬ ಹೆಮ್ಮೆಯಿಂದಿರಬಹುದು. ಮುಂದರಿಯಿತು ಪರಿಚಯ.....

" ಮುಂದೆ ಕೆಲವು ನಗುಮಾತುಗಳಿದ್ದುವು. ಅವುಗಳಲ್ಲಿ ಒಂದನ್ನು ಮಾತ್ರ ಎತ್ತಿ ಹೇಳುತ್ತೇನೆ: ಒಬ್ಬ ಅಜ್ಜಿ ಹಬ್ಬದ ಮುಂದಿನ ಕಡುಬು ಮಾಡುವ ಸನ್ನಾಹದಲ್ಲಿದ್ದಳಂತೆ. ಅವಳಿಗೊಬ್ಬ ಮೊಮ್ಮಗ ಇದ್ದ. ಪರಿಚಿತರಾರೋ ಅಜ್ಜಿಯ ಸನ್ನಾಹಗಳನ್ನು ಕಂಡು 'ಅಜ್ಜಿ, ಏನು ಮೊಮ್ಮಗನಿಗೆ ಕಡುಬಿನ ಔತನ ಮಾಡಿಸುತ್ತೀರಾ?' ಎಂದು ಕೇಳಿದರು. ಆಗ ಅಜ್ಜಿ ತೀರ ನೈರಾಗ್ಯಭಾವದಿಂದ— 'ಏನು ಸುಡುಗಾಡು ಔತನ! ನನ್ನ ಮಗುವಿಗೆ ಕಡುಬೆಂದರಾಗದು; ಉಪ್ಪಿನಕಾಯಿ ರಸವಲ್ಲಿ ಎರಡು ತಿಂದ, ಪಲ್ಯದೊಂದಿಗೆ ಎರಡು, ಕೊತ್ತಂಬರಿ ಸೊಪ್ಪಿನ ಚಟ್ನಿಯಲ್ಲಿ ಎರಡು, ಪಾಯಸದೊಂದಿಗೆ ಎರಡು ತಿಂದ—ಇನ್ನು ಮುಂದೆ ಹೇಳಲಿದ್ದಳಂತೆ ಅಜ್ಜಿ—ಆದರೆ ಅಷ್ಟರಲ್ಲೇ ಕೇಳುತ್ತಿದ್ದವಳು ತಲೆದೂಗಿ ಬೆರಳು ಕಚ್ಚಿದುದರಿಂದ ಸುಮ್ಮಗಾದಳಂತೆ. ಸರಿ, ಇನ್ನೂ ಹಲವಾರು ಇಂಥವಿವೆ. ಆ ಭಂಡಾರವನ್ನೆಲ್ಲ ಬಿಚ್ಚುತ್ತ ಹೋದರೆ ನಿಮಗೆ ಬೇಸರ ಬರಬಹುದು. ಇಷ್ಟರಲ್ಲೇ ಬಾಯವರ ಸಾಕಷ್ಟು ಪರಿಚಯ ಮಾಡಿಕೊಟ್ಟಂತಾಯಿತಲ್ಲ!" ಎಂದು ಕುಳಿತೆ ನಾನು. ನಕ್ಕು ನಲಿಯಿತು ಸಭೆ. ಜನಜೀವನವನ್ನು ಚಿತ್ರಿಸಿದ (!) ಬಾಯನರು ನಿಜಕ್ಕೂ ಪ್ರಗತಿಶೀಲ ಸಾಹಿತಿಗಳು ಎಂಬೊಬ್ಬ ಗೆಳೆಯರೂ ನನ್ನ ಬೆನ್ನು ತಟ್ಟಿದರು.

ಮುಂದೆ ಸಭೆಯ ಕಾರ್ಯಕ್ರಮಗಳೆಲ್ಲ ಸಾಂಗವಾಗಿ ಸಾಗಿದುವು. ಮಕ್ಕಳ, ಸಭಿಕರ, ಅಧ್ಯಾಪಕರ ಭಾಷಣಗಳೆಲ್ಲ ಮುಗಿದ ಮೇಲೆ, ಅಧ್ಯಕ್ಷರ ಭಾಷಣವೂ ಆಯಿತೆನ್ನಿ. ನನ್ನವರೆಂಬ ಹೆಚ್ಚಳದಿಂದ ನುಡಿದ ಮಾತಲ್ಲವಾದರೂ, ಸಹಜವಾಗಿ ಬಾಯವರು ಹದಿನೈದು ನಿಮಿಷಗಳನಕ ಸರಳವಾಗಿ ಸೂತಾಡಿ ' ನಾನು ಅವರ ಕುರಿತು ನುಡಿದುದರಲ್ಲಿ ಎಳ್ಳಷ್ಟೂ ಸುಳ್ಳಿಲ್ಲ ' ಎಂಬುದನ್ನು ಮನಗಾಣಿಸಿದರು. ಒಟ್ಟಾರೆ ಬಾಯನರು ಚೆನ್ನಾಗಿ ಬಾಯಿಪಾಠ ಮಾಡಿದ್ದರೆಂದು ತಲೆದೂಗಿದವ ನಾನೊಬ್ಬನೆ!

[೨೦೩ನೆಯ ಪುಟದಲ್ಲಿ ಮುಂದುವರಿದಿದೆ.]

ಆಧುನಿಕ ಕವಿ-ಕಾವ್ಯ-ದೃಷ್ಟಿ

ಪ್ರೊ. ರಾ. ಯ. ಧಾರವಾಡ ಎಂ. ಎ.

ಕೆ. ಇ. ಬೋರ್ಡ್ಸ್ ಆರ್ಟ್ಸ್ ಕಾಲೇಜ, ಧಾರವಾಡ.

ಹಾಡು-ಕಾವ್ಯ-ನೈಸರ್ಗಿಕವಾದಷ್ಟೇ ಜನಪ್ರಿಯವೂ ಆಗಿದೆ. ಸುಗ್ಗಿಯ ಸಿರಿಯಲ್ಲಿ, ಮದುವೆಯ ಸಮ್ಮೋಹಿನಿಯಲ್ಲಿ, ಸಂತಾನದ ಆನಂದದಲ್ಲಿ- ನುಡಿ ಹಾಡಾಗಿ ಎಂದಿನಿಂದಲೂ ಹೊರಬೀಳುತ್ತಲಿದೆ. ನಲಿದು ಇತರರನ್ನು ನಲಿಸುತ್ತಿದೆ. ಇಂದಿನ ಕನ್ನಡದಲ್ಲಿಯಂತೂ "ಕಾವ್ಯಗಾಯನಗಳ" ಮೂಲಕ ಕವಿತೆ ತೀರ ಜನಸ್ತ್ರಿಯವಾದ ಸಾಹಿತ್ಯರೂಪವಾಗಿದೆ. ಕನ್ನಡ ಕವಿಯಾದರೂ ಸುತ್ತು ಮುತ್ತಲಿನ ಜೀವನದ ಬಗ್ಗೆ ತುಂಬಾ ಜಾಗೃತನಾಗಿದ್ದಾನೆ.

ಆಧುನಿಕ ಕನ್ನಡ ಕಾವ್ಯವು ಎಂದು ಮತ್ತು ಯಾರಿಂದ ಪ್ರಾರಂಭವಾಯಿತೆಂಬುದಾಗಲಿ, ಅದರಲ್ಲಿ ಕಂಡುಬರಬಹುದಾದ "ದೋಷ" ಗಳಾಗಲಿ ಪ್ರಸ್ತುತ ಲೇಖನದ ಉದ್ದೇಶವಲ್ಲ. "ಆರಾರ್ ಏರಂ ಶಾಸ್ತ್ರಕ್ರೀರೋಹಣಗಿರಿಯಂ ಅಲ್ಲಿ ನವಕವಿತಾರ್ತ್ಥಂ ದೊರೆಗುಮೆ ಮಾರಾರಿಯ ಕೃಪೆಯಿಲ್ಲದಂಗೆ ಜಗತೀ ತಲದೊಳ್?" ಎಂಬುದು ಎಷ್ಟೋ ಮಟ್ಟಿಗೆ ನಿಜವಾದರೂ "ಪ್ರತಿಭೆಯುಂ ಕಾವ್ಯ ಪರಿಚಯವುಂ...." ಎಂದು ಕಾವ್ಯದ ಅವಶ್ಯಕತೆಯನ್ನು ಹೇಳುವ "ವೈಕ್ಲವ್ಯತ್ತಿಯ" ಆಭಾವ ಸ್ವಲ್ಪಮಟ್ಟಿಗೆ ಇಂದಿನ ಕಾವ್ಯದಲ್ಲಿ ಕಂಡು ಬರುವುದೆಂಬುದನ್ನಾಗಲಿ, ಪುನರಾವೃತ್ತಿ, ಅನುಕರಣೆ, ಕಾವ್ಯದ ಗದ್ಯತನದ ವಿಷಯವಾಗಿಯಾಗಲಿ ಇಲ್ಲಿ ಹೇಳಬಯಸುವುದಿಲ್ಲ.

ಕಳೆದ ಸುಮಾರು ಶತಮಾನದಲ್ಲಿ ಕನ್ನಡದ ಆಕಾಂಕ್ಷೆ-ಉತ್ಸಾಹಗಳು, ದರ್ಶನ-ಕಲ್ಪನೆಗಳು— ಯಾವ ರೀತಿ ಹೊಸಗನ್ನಡ ಕಾವ್ಯದಲ್ಲಿ ಅಭಿವ್ಯಕ್ತಿಯನ್ನು ಪಡೆದಿವೆ....? ಛಂದಸ್ಸು, ಕಾವ್ಯರೂಪಗಳು ಯಾವ ರೀತಿ ಹೊಸ ಹೊಸ ರೂಪಗಳನ್ನು ಧರಿಸಿವೆ?....ಪರದೇಶಗಳ ಪ್ರಭಾವ ಕಾವ್ಯದಲ್ಲಿ ಯಾವ ರೀತಿ ಮೂಡಿದೆ—ಎಂಬುದನ್ನು ಗಮನಿಸಬೇಕು. ಸಾ. ರಾ., ಡಿ. ವಿ. ಜಿ. ಮತ್ತು ಗೋವಿಂದ ಪೈ ಅಂಥವರ ಕವಿತೆಯ ರೀತಿ ಹಳೆ ಮತ್ತು ಹೊಸದರ ಸೇತುವೆಯಾದರೂ, ಇಂದಿನ ಕವಿಯ ದೃಷ್ಟಿ ಹೊಸದರ ಕಡೆಗೆ ಹೆಚ್ಚಾಗಿದೆ. ಹಾಯ್ದಲ್ಲಿ ಹೊಸ ಹೊಸ ದಾರಿ ಕಾಣುತ್ತಿವೆ.

ಸುಮಾರು ಶತಮಾನದ ಹಿಂದೆ, ಕನ್ನಡ ಕವಿ ಜಾಗೃತನಾದಾಗ, ಅವನು ಕಂಡ ದೃಶ್ಯವು ಹೃದಯದ್ರಾವಕವಾಗಿದ್ದಿತು. ನೆರೆ. ಹೊರೆಯ ಬಾಂಧವರು ರಾಜ್ಯ-ಸಾಮ್ರಾಜ್ಯಗಳಿಗೆ ಕೈಚಾಚುತ್ತಿರುವಾಗ ಕನ್ನಡ ಜನ ಮಾತ್ರ ಹರವರ ಹಿರಿತನದಲ್ಲಿ ಕೊಂಗುತ್ತಿದ್ದುದು ದೈವವಾಗಿದ್ದಿತು. ಒಂದು ನಾಡು, ಒಂದು ನುಡಿ ಎನ್ನುವ ಜಾಗೃತಿಕೂಡ ಕನ್ನಡಿಗರಲ್ಲಿ ಮೂಡಿರಲಿಲ್ಲ. ವಿಜಾಪುರ-ಧಾರವಾಡಗಳ ಜಾಹೀರು ಸಭೆಗಳು ಕೂಡ 'ಕನ್ನಡದಲ್ಲಿ ಮಾತಾಡುವುದೋ ಇತರ ಭಾಷೆಗಳಲ್ಲೋ?' ಎಂದು ತಾಳಮಾಡುತ್ತಿದ್ದವು. ಸಾವಿರಾರು ವರುಷ ಅಖಂಡ ವೈಭವದಲ್ಲಿ ಬಾಳಿದ ನುಡಿಗೆ ಹೆರಕುಚಿಂದಿಯ ಉಡುಗೊರೆ ಸನ್ಮಾನವಾಗಿತ್ತು. ಕೊರಗಣ ಮರ್ಯಾದೆಯಂತೂ ಸರಿಯೇ..... ಹೊರಗಣವರಿಗೆ ಕನ್ನಡರು "ಾಕನಡೀ ಕಾವಳ್ಯಾ" "ಕಾನಡೀ ಅಪಾ" ಗಳಾಗಿದ್ದರು. ಕನ್ನಡರು ಮಾತ್ರ ಮರಾಟಿಯನ್ನು "ಆರೇ ಅರಸಾಗಿ ಮಾಡಿ" ಕನ್ನಡವನ್ನು ಕೊರಸಾಗಿ ಮಾಡಿದ್ದರು. ಮರಾಟಿಗರಿಗೆ ತಮ್ಮ ಭಾಷೆಯಲ್ಲಿ ತಿಳಿದುದ "ಮಿಳಿಲ್ಲ" "ಕಾನಡಿ" ಆಗಿದ್ದಿತು. ಸ್ವತಃ ಕನ್ನಡಿಗರಲ್ಲೇ ಹೀಗೆ ರಜವು ತುಂಬಿ, ವಿನೆಯಲ್ಲೆಲ್ಲ ಹುಲ್ಲು ಬೆಳೆದು ಗೀಳಾದಾಗ, ಮನೆಗೆದ್ದ ಮಾರು ರಕ್ಷಿಸುವ ದ್ವಿವಿಧಕಾರ್ಯ ಕನ್ನಡ ಕವಿಗೆ ಪ್ರಾಪ್ತವಾಯಿತು. ಭಾರತದ ಆಂದೋಲನದ ಪ್ರಕ್ಷೋಭ ಸಮುದ್ರವನ್ನೀಜುವ ಸಾಹಸವಷ್ಟೇ ಅಲ್ಲದೆ, ಮುಳುಗುತ್ತಲಿರುವ ತನ್ನ ಕನ್ನಡದ ದೋಣಿಯನ್ನೂ ರಕ್ಷಿಸುವ ಹೊಣೆಯನ್ನು ಅವನು ವಹಿಸಬೇಕಾಯಿತು.

ಕನ್ನಡದ ಈ ನಾಡು ಮತ್ತು ನುಡಿಯ ಜಾಗೃತಿಯ ವಿಷಯ ಮತ್ತು ಅದರ ಹಿರಿಮೆಯ ಅರಿವು ಸಾಮಾನ್ಯವಾಗಿ ಪ್ರತಿಯೊಬ್ಬ ಕವಿಯ ಕಾವ್ಯದಲ್ಲೂ ಕಂಡುಬರುತ್ತದೆ. ಅನೇಕ ವೇಷಗಳನ್ನು ಹಾಕಿಕೊಂಡು ಬಂದು, ಇರುಳಲ್ಲಿ ಕತ್ತು ಹಿಚುಕಲು ಯತ್ನಿಸುವ ಪ್ರಯತ್ನಗಳ ಬಗ್ಗೆ ಜಾಗರೂಕರಾಗಲು ಕೆ. ವಿ. ಪುಟ್ಟಪ್ಪನವರು ಸಾರಿದರು:

> "ಉತ್ತರದ ಕಾಶಿಯಲಿ ಕತ್ತಿ ಮಿಂದೈತರಲು
> ದಕ್ಷಿಣದ ದೇಶಕದು ಕುದುರೆಯಹುದೆ ?
> ತಾಜುತ್ತ ಹೊಲೆಸಾಲೆ ನಿಮ್ಮ ಪೈಗಾಗದಿರಿ,
> ಹೂತ್ತ ಹೊರೆ ಬಲಕಾರಿ ನೆತ್ತರಹುದೆ ?"

ಮುಗುಳಿ ಅವರು "ಹುಲುಸಾದ ಬೆಳೆ ಹೋಗಿ" ಹುಲ್ಲು ಕೊಳೆಯಾದ ಸ್ಥಿತಿಗೆ ಮರುಗಿದರು. "ವಿನಾಯಕರು" "ತಾರೆಗಳು ನೀಳವಿಷಿ" ಬೀಡಬಟ್ಟ ನಾಡಿನಲ್ಲಿ "ಸಲುಗೆಯನು ಬೆಳಸುತ್ತ ಸುಲಿಗೆಯನ್ನು" ನಡೆಸಿದ ಅವಸ್ಥೆಗಾಗಿ ಕನಲಿದರು. "ಅಂಬಿಕಾತನಯದತ್ತರು" "ಜಾಗೃತಿಯು ಘನ, ಕೃತಿಯು ಘನ, ವಿಸ್ಮೃತಿಯು ಘನವು, ಮೂಢ್ತವರು" ಎಂದು ಮೂದಲಿಸಿ "ಗಂಡುಸಾದವರ ಬಲಿ" ಕೇಳಿದರು. "ಅನಂದಕಂದರು" ಕನ್ನಡದ ವಾಣಿಯ ನೇವುರದ ಸವಿಯನ್ನು ಬೀರಿದರು:

> "ಎನಿತು ಇನಿಮ ಈ ಕನ್ನಡ ನುಡಿಯು
> ನುಸವನು ತಣಿಸುವ ಪೋಷನಸುಧೆಯು !"

ಸಾ. ರಾ. ಅವರಿಗೆ ಕನ್ನಡದ ನೆಲದ ಹುಲ್ಲು ಕೂಡ ಪಾವನ ತುಳಸಿಯಾಯ್ತು. ಇಂತಹ ಜಾಗೃತಿಯನ್ನು ಈ ಮೊದಲೇ ಕೆಲಮಟ್ಟಿಗೆ ಸಾಧಿಸಿದ "ಶಾಂತಕವಿಗಳು" ಹರುಷದಲ್ಲಿ

> "ಮೆರೆವಣಿಗೆ ಮಿಗಿಲಾಯ್ತು
> ಸಾಹಸವ ಹಿರಿದಾಯ್ತು
> ಧರೆಯೊಳುದಿಸಿದ ಕಾರ್ಯ ಸಫಲವಾಯ್ತು!"

ಎಂದು ಸಾರಿ ರಂಗಮಿದ ಕೆಳಗಿಳಿದರು.

ಆದರೆ ಈ ಕನ್ನಡ ಜಾಗೃತಿ ಕರ್ನಾಟಕದಲ್ಲಿ ರಾಷ್ಟ್ರೀಯ ಭಾವನೆಗೆ ವಿಘಾತಕವೇನೂ ಆಗಲಿಲ್ಲ. ಅವೇಶ ಉನ್ಮಾದವಾಗಿ, ಅಭಿಮಾನ ಹುಚ್ಚಾಗಿ ಪರಿಣಮಿಸಿಲ್ಲ. ರಾಷ್ಟ್ರೀಯತೆ ಮತ್ತು ನಾಡು-ನುಡಿಗಳ ಅಭಿಮಾನ ಕನ್ನಡದಲ್ಲಿ ಕೈಯಲ್ಲೆ ಕೈಯಿಕ್ಕಿ ಸಾಗಿವೆ. ಕನ್ನಡ ಕವಿ

ಕನ್ನಡಿಗನಿದ್ದಷ್ಟೇ ಭಾರತೀಯನಾಗಿದ್ದಾನೆ. ಎಂತಲೇ ಬರಿಯ ಲೆಕ್ಕಕ್ಕೆ ನಿಂತ ಮೂವತ್ತು ಮೂರು ಕೋಟಿಗಾಗಿ ಬೇಂದ್ರೆಯವರು ಮರುಗಿದ್ದಾರೆ:

"ನನ್ನಿಬೆಯ ಹಾಲನೆರೀ— ನಸ್ನೊಳಿಸ ಬೆಳಕ ಬೆರೀ—
ವಜ್ರದೇಹಿಗಳೆಂದೆ, ಗೊನೆಮಿಂಚೂ ಎನೆ ಕಂಡೆ-
ವಿಜಯನಿರಲೆಂದು ಪರಸೀ- "

ಆದರೆ ಕೊರಗೆ ಕಂಡುದು "ಹಾಳರ್ಧ ಹೆಣ್ಣು ಬೀಳರ್ಧ ಸೊಲೆಯ" ರೆಂಬ ಕೋಲಾಹಲ....ಮಾನವತೆಯು ನೊಳಗಿ, ನಾಗರಿಕತೆಯು ಬೆಳೆದು, ಬಳಭಾಯೆ ಹಬ್ಬಿದ ಇಂದಿನ ಕಾಲದಲ್ಲೂ ರಾಜಕೀಯ ದ್ರೋಹಕ್ಕಾಗಿ "ನರಬಲಿ" ಕೊಡುವುದೂ ಒಂದು ಪೂಜೆ!

"ಕೋಳಿಯ ಕೊಯ್ದರೆ ಕೆರಳುವರುಂಟು!
ಕುರಿಯನು ಕೊಂದರೆ ಕೇಳುವರುಂಟು!
....
ಗುಬ್ಬಿ ಮಾನವನ ಕೊಯ್ದರು ಕೊಂದರು
ಕಣಿದರು ಏನು? ಕೊಂದನು ಆತನು ತನ್ನನೆ ತಾನು!"

ಈ ಪಾಕವೀ "ದಬ್ಬಾಳಿಕೆಗೆ" ಅನೇಕ ಕಡೆಗೆ ಮೂರು ನಾಮವನ್ನೆಳೆದರು. ಪುಟ್ಟಪ್ಪನವರು ಈ ಸಾಮ್ರಾಜ್ಯಲಾಲಸೆಯನ್ನು—ಯಾವ ಶೇಪೆ ಒಡೆದುಕೊಂಡೇ ಇರಲಿ—ಸ್ಪಷ್ಟವಾಗಿ ಖಂಡಿಸಿದರು.

"ಕರಿಯರನೊ? ಬಿಳಿಯರನೊ? ಯಾರಾದರೇನು?
ಸಾಮ್ರಾಜ್ಯವಾವನಂ ಸುಲಿಗೆ ಕೈತರಿಗೆ— —
ವಿಜಯನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
.....
ಕತ್ತಿ ಪರದೇಶಿಯಾದರೆ ಪಾತ್ರ ಸೋಪೆ?
ನಮ್ಮವರೆ ಪದ ಪಾಕಿ ತಿನಿದರದು ಹೂವೆ?".....

ಕನ್ನಡ ಕವಿಯ ಉದಾರದೃಷ್ಟಿ ಬರಿಯ ದೇಶಾಭಿಮಾನದ ಬಾಂದುಗಲ್ಲಿಗೇ ನಿಂತಿಲ್ಲ. ಅಂತರ ರಾಷ್ಟ್ರೀಯ ಸೌಹಾರ್ದಕೂಡ ಅವನ ದೃಷ್ಟಿಸಥವಡೆದಿದೆ. "ಅಟಮ್ ಬಾಂಬ್" ವಿಮಾನಗಳ ಈ ಕಾಲದಲ್ಲಿ ಯಾವ ರಾಷ್ಟ್ರವೂ ದೂರವಾಗಿ ಉಳಿಯದು. ಜಪಾನು ಹಿಂದುಸ್ಥಾನ-ಇಂದಿಲ್ಲ ನಾಳೆ ಧಾರ್ಮಾಡ ಹುಬ್ಬಳ್ಳಿ. ಯಾವ ಕವಿಯೂ "ಬೇಲಿಯ ಮೇಲೆ ಕುಳಿತು" ತೂಕಡಿಸಲಾರ. ಎಂತಲೇ ಬೇಂದ್ರೆ ಅವರು "ಅವತಾರಕ್ಕೊಂದೊಂದು ಅಭಿಷೇಕ ಮಾಡಿದರು" ಮೊದಲಗಿತ್ತಿಯಂತೆ ಮೆರೆವ ಭೂದೇವಿಗೆ ತೃಪ್ತಳಾಗಲು ಬಿನ್ನವಿಸಿಕೊಂಡಿದ್ದಾರೆ. ಪುಟ್ಟಪ್ಪನವರು ರಷಿಯಾದಲ್ಲಿ ಕಂಡ ಕೋಕಿಲೆ ಪೊಸದು, ಮೈಸೂರಿನ ಪರಪುಟ್ಟವಲ್ಲ. ವಿದ್ಯಾಭ್ಯಾಸಕ್ಕಾಗಿ ಅಕ್ಸ್‌ಫರ್ಡಿಗೆ ಹೋಗಿದ್ದ ಕನ್ನಡದ ಸುಪ್ರಸಿದ್ಧ ವಿದ್ವಾಂಸರೊಬ್ಬರಿಗೆ ಆಂಗ್ಲಪ್ರಕೃತಿ ಸೌಂದರ್ಯವು ಕೂಡ ಭಯಾನಕವಾಗಿ ಕಾಣುತ್ತದೆ:

"ನೂರು ಕಮತನೂರುಗಳನು ಹಾಳುಮಾಡಿ
ಬೆಳೆದಿತು ನಿನ್ನ ಕಮನೂರು ಸಂಪತ್ತು .....
ನೀನು ಆಂಗ್ಲ, ನಾನು ಭಾರತೀಯ,
ಬಾರದಿಲ್ಲಿ ಪೈಪಯದ ವಂಪತ್ತು— "

ಆಫ್ರಿತದ "ಕಾಡಿಗೆಯ ಮೇಲೆ ಸಂಜೆಗೆಂಪು" ಮೂಡಿದಾಗ "ವಿನಾಯಕ"ರಲ್ಲಿ ಹುಟ್ಟಿದ ಭಾವನೆಗಳು ಇವು:

"ಅಬಿಸೀನಿಯನ ಕೊಲೆ, ನಿಗರ್ವಿಗಳ ದಾಸ್ಯ,
ಸುಮಾಲಿಗಳ ಕೊರಗು
ಕಪ್ಪುಹಚ್ಚುವ ಕೃತಿಗಳವು—ರಕ್ತವರ್ಣದವು
ಆಫ್ರಿಕ ಖಂಡದ ಜನರ ಮೈಯಲ್ಲಿಲ್ಲ ಮಾಂಸಖಂಡ—
—ಗುಲಾಮರ ಲೋಕವದು—ಮಾನವನು ಮೆಟ್ಟಿದ ಪಾತಾಳ"

ಇದು ಆಧುನಿಕ ಕನ್ನಡ ಕವಿಯ ಅಂತರ ರಾಷ್ಟ್ರೀಯ ಸೌಹಾರ್ದ.... ಹಾಗೆಯೆ ಸಮಾಜದಲ್ಲಿಯ ಅಂಧಪರಂಪರೆ, ವೇಷಗಳ ಸೋಗೂ ಕನ್ನಡ ಕಾವ್ಯದಲ್ಲಿ ಹೊಡೆಬಿದ್ದಿದೆ. ಸಾ. ರಾ. ಅವರ "ಮಳೆಬೀಳುತ ಲಿತ್ತು"; ದಿನಕರ ದೇಸಾಯಿ ಅವರ "ಭಿಕ್ಷುಕರು"; ಬೇಂದ್ರೆ ಅವರ "ಜಾರಕೃಷ್ಣನ ಕಥೆಗೆ ಕೋಡು ಮೂಡಿಸಿದ ವಿಧವೆ" - ಇವೆಲ್ಲ ನಮ್ಮ ಸಮಾಜದಲ್ಲಿಯ ಅಂಧಸಂಸ್ಕಾರಗಳ ಸ್ಮಾರಕಗಳು. "ವಿಧವೆ" ಕುರುಡುಧರ್ಮದ ಸ್ಮಾರಕವಾದರೆ, "ಅವರ್ಣನೀಯ ಅರ್ವಾಚೀನ ಸೌಂದರ್ಯ" Fashion ಧರ್ಮದ ಕುರುಡು. ಒಂದು ಹಳೆಯ ಧರ್ಮ; ಮತ್ತೊಂದು ಹೊಸಯುಗ "ಧರ್ಮ"; ಎರಡರಲ್ಲಿಯೂ ಜ್ಞಾನ ಕಣ್ಣು ತರಿಸಿಲ್ಲ. ಹಳೆಯದನ್ನು ತೆಗಳುವ ಭರದಲ್ಲಿ ಹೊಸಬರು ಹೊರಟ ಸಮುದ್ರದ ದಾರಿ: ಎರಡರಲ್ಲಿಯೂ ಕೈಯ ಬೇಡಿ ಕಾಲಿಗೆ ಅಷ್ಟೇ!...."ಕುರುಡಿರಲಿ ಮರಳಲಿ ಕಪ್ಪು ಕನ್ನಡಕವಿರೆ ನಯನ-ಗಳನೇನು ಬಣ್ಣಿಸಲಿ ಪಣ್ಣ!"....

ಇದರಿಂದ ಆಧುನಿಕ ಕನ್ನಡ ಕಾವ್ಯ ಬರಿಯ ಕದಡಿದ ಸಮುದ್ರ-ವೆಂದು ಗ್ರಹಿಸಲಾಗದು. ಹೊಸ ಕನ್ನಡ ಅರ್ಧನಾರೀ ನಟೇಶ್ವರನ ರೂಪದಲ್ಲಿ ರೋಷವೂ ಇದೆ; ಕೃತಜ್ಞತೆಯೂ ಇದೆ; ಕೆಚ್ಚೂ ಇದೆ; ಸೌಂದರ್ಯವೂ ಇದೆ. ಆನಂದದ ಅವಿರತ ಒರತೆಗಳಾದ ಪ್ರಕೃತಿ ಸೌಂದರ್ಯ, ಹೆಣ್ಣಿನ ಚೆಲುವು, ತಾಯಿಯ ಸೈರಣೆ, ಶಿಶುಗಳ ಮೆಲ್ಲುಲಿ—ಎಲ್ಲವೂ ಕಾವ್ಯ ಮಂದಿರವನ್ನು ಚಲಂಕರಿಸಿವೆ. ಪುಟ್ಟಪ್ಪ-ನವರ ಕಾವ್ಯ ಬಹುಪುಟ್ಟಿಗೆ ಮಲೆನಾಡ ಸುಂದರ ಪಸಿರು; ಅಪ್ಪರ ಭೂಮಿ. ಅವರ "ನೇನೆ ಹಕ್ಕಿ" ಚಿರಸ್ಮರಣೀಯತೆ. ಕವಿ ಕನಲಿದಾಗ ಪಾಂಚಜನ್ಯ" ಗದರಿಸಿದರೂ, ಅವರ ಕಾವ್ಯದ ರೀತಿ "ಕೊಳಲಿನ" "ಮೆಲ್ಲುಲಿ; "ನವಿಲಿ"ನ ನರ್ತನ; ಅಪ್ಸರ ಸಂಗೀತ....ಬೇಂದ್ರೆ ಅವರ "ಪಾತರಗಿತ್ತಿ ಪಕ್ಕ" "ಮಾಡಲ ವನೆ" "ಚಳಿಯಾಕೆ" "ಮುಗಿಲ ಮಾರಿಗೆ".....ಎಲ್ಲವೂ ಚಿರ ಪರಿಚಿತ.....ಇನ್ನೂ ನೂರಾರು ಕವಿಗಳು ಪ್ರಕೃತಿ ಸೌಂದರ್ಯವನ್ನು ಕುರಿತು ಹಾಡಿದ್ದಾರೆ..... "ಸಲ್ಮೆ" "ವಿರಹಿಣಿ" "ಒಡನಾಡಿ" "ಒಲುಮೆ" "ಸಖೀಗೀತ" "ಬಾಸಿಗ" "ಮೈಸೂರ ಮಲ್ಲಿಗೆ"—ಸ್ತ್ರೀ ಸೌಂದರ್ಯ-ಪ್ರೇಮವು-ಅನಂತ ಮುಖಗಳು—ಬಾಳ ಬೆಳಕು—

'ಯಾರಿಗಸುಯಿಸಲಿದನು ಮಾಲೆಯ
ಯಾರ ಕೊರಳೊಳಗಿರಿಸಲಿ?"—

ಎನ್ನುವ ವಿರಹ ವೇದನೆಯಿಂದ—

"ಒಡನಾಡಿ ಬೇಕೆಂದು
ಮಿಡುಕಿಯೇ ನಿಡುಕಿದನು
ಕಡೆಗೆ ನೀ ಬಂದೆನ್ನ ನಿಡುಕ ಕಳೆದೆ"—

ಎನ್ನುವ ಸಂತೃಪ್ತಿಯ ವರೆಗೆ ಕನ್ನಡ ಪ್ರಣಯ-ಕಾವ್ಯ-ವಲ್ಲಿ ಹೂ ಬಿಟ್ಟಿದೆ. "ಪ್ರೀತಿ ಪೌರ್ಣಮೆಯಲ್ಲಿ" "ಶೃಂಗಾರಗಾರಿ"ಯ ಪೂಜೆ ಪಡೆದಿದ್ದಾಳೆ....

"ಬಾಳಿದು ಕನಸಲ್ಲ; ಗೋಳಿನ ತನಸಲ್ಲ,
ನನ್ನ–ಹಿಗ್ಗಿನ ಹೊಸತೋಟ!
ನಾನೊಂದು ಮಾಮರ, ನೀ ಮಲ್ಲಿಗೆಯ ಬಳ್ಳಿ..."

ಎನ್ನುವ ಸತ್ಯವನ್ನು ಕನ್ನಡ ಪ್ರಣಯಕಾವ್ಯ ಸಾರಿದೆ.

"ಮೈಸೂರ ಮಲ್ಲಿಗೆ"ಯಂತೂ ಸ್ತ್ರೀ ಸೌಂದರ್ಯ ನುಡಿಯಿಸಿದ ವೀಣೆ; ಆ ಸಂಧ್ಯಾರಾಗಕ್ಕೆ ಅರಳಿದ ಕಮಲ. ಸೌಂದರ್ಯದ ನಾಗರ ಕಮಣಿ ಕಣ್ಣನ್ನೆ ಗೈದಂತೆ ಕಾವ್ಯವಿಲ್ಲಿ ಹೆಡೆ ತೂಗಿದೆ.....ನಲ್ಲ-ನಲ್ಲೆಯರ ಪ್ರಣಯ ಸೂಚಕವಾದ "ಶಾರದೆ" ಯಂಥ ಕವಿತೆಗಳನ್ನು ಈಗ ಬಿಡೋಣ; ಕವಿಗೆ ತಮ್ಮೂರಿನ ಯಾವ ಸ್ತ್ರೀಯೆಂದರೂ ಆಡಿ ಮುಗಿಸಲಾರದ ಪ್ರೀತಿ; ಅಂತಃಕರಣ; ಅಭಿಮಾನ. "ಶಾನುಭೋಗರ ಮಗಳು" ಅಂತಹ ಒಬ್ಬ ಜೀವಿ. ಅವಳ ವಿಷಯ ಕವಿಯ ಪ್ರೀತಿ ತೂಗೆಯದಕಿಂತಲೂ ಹೆಚ್ಚು! "ಶಾನುಭೋಗರ ಮಗಳು ರತ್ನದಂತಹ ಹುಡುಗಿ" ಆದರೆ "ವಯಸ್ಸಾದರೂ" ಮದುವೆಯಾಗಿಲ್ಲ. ಅವಳ ಸೌಂದರ್ಯವೋ! ಬೆಳಗಿನ ಅಪ್ಸರ ವರ್ಣವಂತೆ!.....ಇಂತಹಳ ಪಾಣಿಗ್ರಹಣಕ್ಕೆ "ಸಾಣೆಕಟ್ಟೆಗೆ" ಮಾತ್ರ ಯೋಗ್ಯನಾಗಬಹುದಾದ ತಾಪಕೆರೆಯ ಜೋಯಿಸರ ಮೊಮ್ಮಗ ಬರುತ್ತಾನೆ. ಹುಡುಗೆಗೋ! ಅವನಲ್ಲಿ ಸ್ವಲ್ಪವೂ ಇಷ್ಟವಿಲ್ಲ. ಪೀತಾಂಬರಕ್ಕೆ ಮಡಿಸೀರೆ ಜೋಡೆ? ಅವ್ವರಿಂದ ಅವಳು ಒಲ್ಲೆನೆಂದು ಹೇಳುತ್ತಾಳೆ. (ಈ ಕರ್ಪೂರ ಗೊಂಬೆಯ ಬುದ್ಧಿಮತ್ತೆಯೂ ಕಲೆದೂಗುವಂತಹದಿದೆ) ಅವರ ತಂಪ ಕೇಳಿದಾಗ ಪಾಣಿಗ್ರಹಣಕ್ಕೆ ಒಪ್ಪದ ಕಾರಣವೆಂದರೆ "ಜೋಯಿಸರ ಮನೆಯಲ್ಲಿ ಊಟ ತಡವಾಗುವದೆಂದು" "ನಕ್ಕುಬಿಟ್ಟರು ತಂದೆ" ಮತ್ತೇನು ಮಾಡಿಯಾರು? ಊಟ ತಡವಾಗುವುದೆಂದು ಮದುವೆ ನಿರಾಕರಿಸುವಷ್ಟು, ನಿರ್ದಯರಿದ್ದುದನ್ನು ನಾವು ಕೇಳಲಾರೆವು.) ಆ ಮೇಲೆ ಸತ್ಯಾಂಶ ಹೊರಬೀಳುತ್ತದೆ. ಮುಗುದೆ ಹೇಳುತ್ತಾಳೆ: "ತಾವರೆ ಕೆಯ್ಯ ಜೋಯಿಸರ ಮೊಮ್ಮಗನು ತನ್ನ ಕೂದಲಿಗಿತ ಕಪ್ಪು" ಎಂದು. ಇಂಥವನು ಈ ಬಲುವೆಯನ್ನು ಈ ಪುತ್ಥಳಿಯನ್ನು ಬಯಸುವುದೇ?

"ನಮ್ಮೂರಿನಕ್ಕರೆಯ ಸಕ್ಕರೆಯ ಗೊಂಬೆಯನು
ನೋಡಬೇಕೇ ಇಂಥ ಕಪ್ಪು ಗಂದು ?
ಶಾನುಭೋಗರ ಮನೆಯ ತೋರಣವ ಹೇಳುವುದು
ಬಂದವಾರಿಗೆ ಸುಖವಿಲ್ಲವೆಂದು"

ಸ್ತ್ರೀ ಸೌಂದರ್ಯದ- ಅಂತಃಕರಣದ ತೆಯೇ, ಶಿಶುವಿನ ಮುದ್ದು "ಕಡಲೆಪುರಿ" ."ತುತ್ತೂರಿ" "ಮುದ್ದನ ಮಾತು" - ಮೊದಲಾದುವುಗಳಲ್ಲಿ ಚಿತ್ರಿತವಾಗಿವೆ. ....

ಇಂಥ ಹೃದಯದ ಅಂತಃಕರಣದ ಕಾವ್ಯದ ಜೊತೆಗೇ ಶೈನವ ನುದಾದೀಪಗಳಿಂದ ಅನೇಕ ಕವಿತೆಗಳೂ ಹೊರಬಿದ್ದಿವೆ. ಗುಳಿ ಅವರ "ನಿನ್ನಪಾರ ಕರುಣೆ" ವಿ. ಸೀ. ಅವರ ನೈವೇದ್ಯ"; ಮಧುರಚೆನ್ನರ "ನನ್ನವಲ್ಲ"; ಬೇಂದ್ರೆ ಯವರ ಅನೇಕ ಕವನಗಳು, ಡಿ. ವಿ. ಜಿ. ಅವರ "ಮಂಕುತಿಮ್ಮನ ಕಗ್ಗ" – ಆತ್ಮದ ಕಳವಳದ ನಿರಂತರ ಪ್ರಶ್ನಾರ್ಥಕತೆಯನ್ನು ಭಿನ್ನ ಭಿನ್ನವಾಗಿ ಬಿಡಿಸಲು ಹೆಣಗಿವೆ. "ಶ್ರದ್ಧಾವಾನ್ ಲಭತೇ ಯೋ ಜ್ಞಾನಂ" ಎಂದು ಪರಮಾತ್ಮನು ಅಭಯವಿತ್ತಿರುವಾಗ, "ಸಂಶಯಾತ್ಮಾ ಪ್ರಣಶ್ಯತಿ" ಎಂದು ನಿಶ್ಚಲವಾಗಿ ಹೇಳಿದ್ದರೂ, ಸಂದೇಹ ತೂಗುಯ್ಯಲೆಯಾಡದಿರದು. ಯಾವ ದೇವರೇ ಬರಲಿ ನಂಬುಗೆ ಮಾತ್ರ ನಿರಂತರವೆಂದು ಕಾಣುತ್ತದೆ.

" ಪೋಪವರ ಪದವಿಗಳಿಗಿನ್ನಾರು ಬಂದಪರೋ ?
.....
ಎಲ್ಲಿಗೂ ಪರಿಯದಿಹ ಸಂಶಯವ ಕೊನೆಯೋ ! "

ಇದರಂತೆ ಆಧುನಿಕ ಕಾವ್ಯದಲ್ಲಿ 'ವಿಡಂಬನ ಕಾವ್ಯವು' ಎಷ್ಟೋ ಮಟ್ಟಿಗೆ ಹೊಸದು. ಜಪಾನೀ ಅರಸರು ತಮ್ಮ ಮೂಲಪುರುಷನನ್ನು ಸೂರ್ಯನಿಂದ ಗಣಿಸುವರಂತೆ. ಹಾಗೆಯೇ ನಾವೂ ವಿಡಂಬನ ಕಾವ್ಯಕ್ಕಾಗಿ ವೇದಕಾಲದಿಂದ ಗುಣಾಕಾರ ಹಾಕುವ ಅವಶ್ಯಕತೆಯಿಲ್ಲ. ಸಾಹಿತ್ಯದಲ್ಲಿಯೆ ಆಗಲಿ; ಜೀವನದಲ್ಲೇ ಆಗಲಿ; ಅವೇಶದ ಅತಿರೇಕಹೊಂದಿದ ಬುದ್ಧಿ ಕಾಲುಮಣೆಯನ್ನೇ ಒದ್ದು ನಿಂತಾಗ, ಗಾಳಿತುಂಬಿ ಆಕಾಬುಟ್ಟಿಯ ಹಾಗೆ ವ್ಯಾವಹಾರಿಕ ಬುದ್ಧಿ ನೆಲವನ್ನೇ ಬಿಟ್ಟು ಹಾರುವಾಗ – ಈ ನಗುವಿನ ಸೆಲೆಯೊಡೆಯುತ್ತದೆ. ಈ ೨೦-೩೫ ವರ್ಷಗಳಲ್ಲಿ ಕನ್ನಡ ಸಾಹಿತ್ಯದಲ್ಲೂ ಜೀವನದಲ್ಲೂ ಇಂತಹ ಅನೇಕ ವೈಪರೀತ್ಯಗಳು ಬಂದಿವೆ. ಅವೆಲ್ಲವುಗಳನ್ನು ಬೇಂದ್ರೆ, ವಿನಾಯಕ, ರಾಜರತ್ನಂ ಮೊದಲಾದವರು ತಮ್ಮ "ವಿಡಂಬನ ಕಾವ್ಯಗಳಲ್ಲಿ" ಎತ್ತಿ ತೋರಿಸಿದ್ದಾರೆ. ಬೇಂದ್ರೆ ಅವರ "ವರದಾ ತಗಣಿ ವರದಾ" ಬರಿಯ ಅಣಕವಾಡಾಗಿದ್ದರೆ, ರಾಜರತ್ನಂ ಅವರ "ಹಾರ್ಮೋನಿಯಂ ಹರಣ" ಸುಂದರ ವಿಡಂಬನ ಕಾವ್ಯವಾಗಿದೆ. ಗಾಂಧರ್ವ ವಿದ್ಯಾ ಚಾಪಲರಾದ ವೆಂಕಟಾಚಾರ್ಯರಿಗೂ, ಕನ್ಯಾರತ್ನ ವೆಂಕುವಿಗೂ ಒಳ್ಳೆಯ ಮುಂಗಾರತಿಯಾಗಿದೆ. ಅನಾವಶ್ಯಕವಾಗಿ ಬಿಯಗಾಳಿ ಎಬ್ಬಿಸಿ ಜಾಡು ಹಿಡಿದು ತೂಕಡಿಸುತ್ತಿರುವ "ಪಾಣಿನಿಯ ಪೈಲ್ವಾನರನ್ನೂ" "ಕೇಶಿಯ ಗರಡಿಯಾಳುಗಳನ್ನೂ" ಹೊಡೆದೆಬ್ಬಿಸಿದ "ಕರ್ಣ ನಾಟಕ ಪುರಾಣವೂ" ಸುಂದರ ವಿಡಂಬನೆ. " ಸರ್ವ ಧರ್ಮಾನ್ ಪರಿತ್ಯಜ್ಯ 'ಣ'ತ್ವೈಕಂ ಶರಣಂ ವ್ರಜ"

"ತರುಣನಾಗಲಿ, 'ಣ'ತ್ವ ತಪ್ಪದು
"ತರುಣಿಯಾಗಲಿ, 'ಣ'ತ್ವ ತಪ್ಪದು
ಅರರೆ ಕೇಳೂ ಉರಿವ ಬೆರಣಗೂ 'ಣ'ತ್ವ ತಪ್ಪದಲಾ—

..... "ತೆಂಗಿನಕಾಯಿಗೂ ಭಾರತ ಸ್ವಾತಂತ್ರ್ಯಕ್ಕೂ" ಸಂಬಂಧ ಹೇಳುವ ಕವಿಗಳು "ಸಾಲಿ ಅಯ್ಯಗಳಾ ಛಡೀ ಸಪ್ಪಳದ ಕವಿಗಳು" ಇನ್ನೂ ಅನೇಕ ವಿಪರೀತ ಬುದ್ಧಿಗಳು "ವಿಮರ್ಶಕ ವೈದ್ಯನ" ಡೋಜಿಗೆ ಸಿದ್ಧರಾಗಿದ್ದಾರೆ. ರಾಜರತ್ನಂ ಅವರು ಹೇಳಿದಂತೆ ಈಯೆಲ್ಲ ಕಾವ್ಯಗಳಲ್ಲಿ "ಸೋಗಿನಲಿ ಸಾಹಿತ್ಯ ಜೀವ ನದಿಗಳನವಿಕೃತಿಗಳನತಿಗಳಲಾಗಿ" ಹಾಕಿಸಿದ್ದಾರೆ ಈ ವಿಡಂಬನ ಕಾರರು.

ಕೊನೆಯದಾಗಿ ಆಧುನಿಕ ವಿದ್ಯಾಭ್ಯಾಸ ಮತ್ತು ಜೀವನವು ಮುಂದುವರೆದಂತೆಲ್ಲ ಹೊಸ ಹೊಸ ನಾಡುಗಳ ಜೀವನ ಮತ್ತು ವಾತಾವರಣಗಳು ನಮ್ಮ ಕಾವ್ಯದಲ್ಲಿ ಹೇಗೆ ಬಂದಿವೆಯೆಂಬುದನ್ನು ಗಮನಿಸಬಹುದು. ಹಿಂದಿನ "ಪಾಂಡ್ಯ ಚೋಳ ಚೇರ" ಇದು ನಮ್ಮ ಅಡುಗೆಮನೆ ಪಡಸಾಲೆ. ಜೀವನ 'ಅದಕ್ಕೂ ಮುಂದೆ ಹೋಗಿದೆ. ಇಂಗ್ಲೆಂಡ್, ಜರ್ಮನಿ. ಇಟಲಿ,... ಅನೇಕ ಪರದೇಶಗಳು ಕನ್ನಡ ಕಾವ್ಯದಲ್ಲಿ ವರ್ಣನೆ ಪಡೆದಿವೆ. ದಿವಂಗತ ಭಾಸ್ಕರ

ರಾಯರು ಗದ್ಯದಲ್ಲಿ ಮಾಡಿದ ಸೇವೆಯನ್ನೇ ಪೇಜಾವರ ಸದಾಶಿವರಾಯರು, ಮತ್ತು 'ವಿನಾಯಕರು' ಕಾವ್ಯದಲ್ಲಿ ಮಾಡಿದ್ದಾರೆ. ಸದಾಶಿವರಾಯರ "ವರುಣನಿಗೆ ಆಹ್ವಾನ" ಇಟಲಿಯ ಮಳೆಗಾಲವನ್ನು ಸುಂದರವಾಗಿ ಚಿತ್ರಿಸುವ "ಓಡು", "ತಿರಿತಿರಿತಿರಿತ್ತಿರಿನು" ಬೀಳುವ ಮಳೆ, ದಾರಿಯ ಬದಿಯ ಹೊಲಗಳು—ಎಲ್ಲವೂ ಹೊಸ ಸೃಷ್ಟಿ; ಉರ್ವಸಿಯ ನಾಟ್ಯ. ಆದರೆ ಅವಕ್ಕೂ ಹೆಚ್ಚು-ಅವರ "ಲಾರೆಂಝೋ ಇಲ್ ಮನ್ನಿಫಿಕೊ". ಭಾರತದ ಕಟ್ಟುನಿಟ್ಟಿನಲ್ಲಿ ಉಸಿರುಗಟ್ಟಿ, ಇಟ್ಟ ಪ್ರತಿ ಹೆಜ್ಜೆಗೂ ಟೀಕೆಯ ನಿಶಿತಬಾಣಗಳನ್ನು ಸಹಿಸಿ, ಕಟುಕಿಯ ಕೊಳಚೆಯಲ್ಲೇ ಮುಳುಗೇಳುತ್ತಿದ್ದ ಕನ್ನಡಿಗನಿಗೆ ಇಟಲಿಯ ಸ್ವತಂತ್ರ ವಾತಾವರಣವು ಉತ್ತೇಜಕವಾಗಿರಬೇಕು. ಆಶಾಪಕ್ಷಿ ಗರಿಗೆದರಿ ಹಾರಿರಬೇಕು. ವಿಶಾಲತೆಯಾದ ಆ ಸುಂದರ ಪ್ರಕೃತಿಜದಲ್ಲಿ "ವೈಗ್ ಬಂಧ ದಿಗ್ ಬಂಧ" ಎಲ್ಲವೂ ಸ್ವಚ್ಛಂದ.....ನೆಲವೇ ಎಮ್ಮು ಮುಗಿಲನ್ನು ಆಲಿಂಗಿಸಬಯಸಬಹುದಾದಂಥ ಇಟಲಿಯು ಒಂದು ಸುವರ್ಣದ ರಾತ್ರಿಯ ಮೇಲಿನ ಕವಿತೆಯಲ್ಲಿ ವರ್ಣಿತವಾಗಿದೆ. "ಲಾರೆಂಝೋ" ಒಂದು ಸುಂದರ ಉತ್ಸವ. ನಾಡಿನ ಎಲ್ಲ ಯುವಕ - ಯುವತಿಯರೂ ಆದರಲ್ಲಿ ಭಾಗ ವಹಿಸುತ್ತಾರೆ. ಅಂದಿನ ನೃತ್ಯಶಾಲೆಯಲ್ಲಿ ಯಾವ ಸಂದೇಹ-ಸಂಕೋಚಗಳಿಗೂ ಎಡೆಯಿಲ್ಲ. ಎಲ್ಲವೂ "ಪವನದಂತೆ ಪಾವನ". ಪಾರ್ಶ್ವವಾದ್ಯ ಮಿಡಿದಂತೆಲ್ಲ ವಿದ್ಯುತ್ ಬೆಳಕು ಕಡಿಮೆಯಾಗುತ್ತ ಬರುತ್ತದೆ. ಬಿಳಿ - ನೀಲಿ - ಕುರುಡುನೀಲಿ - ಕೊನೆಗೆ ಕತ್ತಲೆ.....ಮೊದಲೇ ಇಟಲಿಯು ನರುಗಂಪು ಅದರಲ್ಲಿ ಇಂತಹ ಉತ್ಸವ. ಪರಂಪರೆಯ ಭಾರದಲ್ಲಿ ಬೆನ್ನೆಲುಬು "ನಿರಿಸಿಟಲು ನಿಟಲೆಂದು" ಮುರಿವ ಕನ್ನಡ ಕವಿಗೆ ಎಲ್ಲವೂ ಹೊಸದಾಗಿ ಕಂಡಿದೆ. ಅವನೂ ಆನಂದ ಸಾಗರದಲ್ಲಿ ಈಜು ಬೀಳುತ್ತಾನೆ.—

" ಲಾರೆಂಝೊ ಇಲ್ ಮನ್ನಿ ಫಿಕೊ
ಹಾಡನರ್ಪಿಸಿಹೆನು ತೆಕೊ
ಇಂದಿನೀ ಉತ್ಸವದಲಿ
ಯೌವನದೀ ಸಂಭ್ರಮದಲಿ
ಗುರುವೆ ನಿನಗೆ ಅಗ್ರಪೀಠ
ಕಲಿತೆ ನಿಂದು ನಿನ್ನ ಪಾಠ"

ಅಲ್ಲಿ ಸುತ್ತಲೂ "ವೆನೀಶಿಯದ ಕಡೆದ ಗಾಜಿದೆ" "ಸಾರ್ದೀನಿಯದ ಸುರೆಯ ಮೋಜಿದೆ....." ಜನರೋ ?

" ನೀನು ಯಾರು ? ನಾನು ಸ್ವಾನ್ಯ
ನೀನು ಯಾರು ? ನಾನು ಗ್ರೇಜ್ಯ
ಇದೋ ಇತಾಲ್ಯ...ಅದೊ ಜರ್ಮಾನ್ಯ "

ಈ ಯೌವನದ ರಾಜ್ಯದಲ್ಲಿ ಯಾವುದಕ್ಕೆ ಕೊರತೆ ?

" ಮುತ್ತಿರುವರೆ ಕತ್ತಲು
ಸೌರಭವಿದೆ ಎತ್ತಲು
ಸುಂದರಿಯರು ಸುತ್ತಲು....."

ಕನ್ನಡ ಕವಿಗೆ ಎಲ್ಲವೂ ಸನ್ನೋಹಕವಾಗಿ ಕಾಣುತ್ತದೆ.

" ಜೀವನಕ್ಕೆ ಎರಡು ಮುಖ
ಒಂದು ಸುಖ ಬೆಂದು ಮುಖ....."
.....

ವಿನಾಯಕರ "ಸಮುದ್ರ ಗೀತೆಗಳಲ್ಲಿ" ಇಂಗ್ಲೆಂಡಿನ, ಏಡನ್, ಆಫ್ರಿಕಾ, ಸ್ಕ್ಯಾಂಡೀನೇವಿ ಇತ್ಯಾದಿಗಳ ವರ್ಣನೆಯನ್ನೂ ವಾತಾವರಣವನ್ನೂ ಕಾಣುತ್ತೇವೆ.

"ವಿನಾಯಕರ" ಕಾವ್ಯದಲ್ಲಿ ಭಾರತೀಯ ದೃಷ್ಟಿ ತುಂಬಾ ಕಂಡು ಬರುತ್ತದೆ. ಮಹಾತ್ಮಾಗಾಂಧಿ ಅವರು ಒಂದು ಸಲ ಇಂಗ್ಲೆಂಡಿನ ಕೂಲಿಕಾರರನ್ನುದ್ದೇಶಿಸಿ ಹೇಳಿದರಂತೆ :—"ನಿಮಗಾಗಿ ನನ್ನ ಮರುಕವಿದೆ; ನನ್ನ ಕಣ್ಣೀರಿವೆ; ಆದರೆ ಅವನ್ನು ನನ್ನ ಜನಕ್ಕಾಗಿ ಕಾದಿಡುತ್ತೇನೆ. ಅವು ಅವರಿಗೆ ನಿಮಗಿಂತ ಹೆಚ್ಚು ಅಗತ್ಯ" ಎಂದು. 'ವಿನಾಯಕರ' ಮನೋಭಾವವೂ ಹಾಗೇ. ಆಂಗ್ಲನಾಡಿನ ಸ್ವಾತಂತ್ರ್ಯದಲ್ಲಿದ್ದರೂ, ಪ್ರಕೃತಿದೇವಿಯ ಸೌಂದರ್ಯದಿಂದ ಆಕರ್ಷಿತರಾದರೂ,

" ಇವನು ಮೇಘ-ಶ್ಯಾಮನೆಂದು ಕೋಪದಲಿ
ಜನರೆಲ್ಲ ಹಳಿಯುತಿರೆ ಶ್ವೇತದ್ವೀಪದಲಿ,
ಕೂಸು-ಕುನ್ನಿಗಳು ಸಹ ಬೆದರಿ ನೋಡಿ
ಪರ್ಣ ದ್ವೇಷವ ... "

ಕಲಿಯುವ ಸನ್ನಿವೇಶ ಅವರ ಮನಸ್ಸಿನಿಂದ ದೂರವಾಗದು. "ಮಾರ್ಸೆಲದ ನಾತದರ್ಶನವನ್ನು ಕಂಡ, ಫ್ರಾನ್ಸಿನ ಸೌಂದರ್ಯ-ಕಲೆಗಳಿಗಾಗಿ ಆನಂದಪಟ್ಟರೂ ಭಾರತ - ಕನ್ನಡ— ಗಳಲ್ಲಿ ಇಂಥವಿಲ್ಲವೆಂದು ಅಸಮಾಧಾನವಿದೆ.

ನಿನ್ನ ನಂದನ ವನಗಳಲಿ ಪುಟಿಯುತಿಹ ಕಾರಂಜಿ
ಇದರ ಫೋಟೋಗ್ರಾಫಿ ಇದೆ ಮೈಸೂರಲ್ಲಿ
'ಜೀವಕಳೆಯಿದೆಯಿಲ್ಲಿ— ನಿನ್ನು ಸುರಿನಲ್ಲಿ "

THE
GENERAL ASSURANCE SOCIETY Ltd.
AJMER

A MOST PROGRESSIVE CONCERN
WITH
POWERFUL DIRECTORATE
INVITES

Applications for Salcried
INSPECTORS & SPECIAL AGENTS
FOR ALL PARTS OF
KARNATAK

Apply to :

BRAHMA DATTA, B.Sc., LL.B., F.Ss. (LOND), *General Manager.*
P. VENKOBACHAR, B. A., B. T., *Branch Secretary, Hubli.*

ಸ್ವಾಭಾವಿಕವಾಗಿ ಈ ವಿಮರ್ಶಕ ದೃಷ್ಟಿಗೆ 'ಲಾರೆಂಝೊ' ದಂತಹ ಉತ್ಸವಗಳು ಮನಸಿಗೆ ಒಗ್ಗವು. ಆ ಸ್ವಾತಂತ್ರ್ಯ, ಆ ಉಲ್ಲಾಸ—ಸ್ವಲ್ಪ ತೂಕ ತಪ್ಪುವ ರೀತಿ. ಈ ದೃಷ್ಟಿಗೆ ಆ ಸೌಂದರ್ಯ ಹೊಲಿ-ನೆಣ್ಣೆ ಸೊಬಗು.... ಸ್ವಾತಂತ್ರ್ಯ ಸೈರವೃತ್ತಿ....! ಇಂತಹ ಒಂದು ಸಂದರ್ಭದಲ್ಲಿಯೇ 'ವಿನಾಯಕರು' 'ನಾಟ್ಯಕಾಲಿ' ಎಂಬ ಒಂದು ಕವಿತೆಯನ್ನು ಬರೆದಿದ್ದಾರೆ; ಅದರ ಸೌಂದರ್ಯ ಇವರನ್ನು ಎಳ್ಳಷ್ಟೂ ಆಕರ್ಷಿಸದು:

'ಇಂದ್ರನ ರಾಜ್ಯವಲ್ಲವಿದು. ಇಂದ್ರಿಯಗಳ ರಾಜ್ಯ—ಮಿಟಿ ಮಿಟಿ ಸ್ವರ್ಗ.... ತ್ರಿಶಂಕುವಿನ ಅಮರಪುರಿ.... ಎಚ್ಚರಿಕೆ'' ನೂರು ದಿವಸ ಒಳಗಾಗಿ ಬಾಳಿ ಮೂರು ದಿವಸ ಹೋಳಿ ಮಾಡುವ ರೀತಿ ಇದು. ಜೀವನ ಯಾವುದೋ ಕಾರ್ಗತ್ತಲೆಯ ದಾರಿ ಹಿಡಿದಿದೆ.

'' ಸಹಜಪಲ್ಲ ನಾಟ್ಯಶಾಲೆಯೊಳಗಿ ಸಂಸಾರನೆ
ನಿರಳಕಾಗಿಪೆಯೀಗ,
ದಿನಪ ಬಾಳೆಲ್ಲ ಹೋಳಿಯಾಗುತಿದೆ
ಪ್ರೇಮವು ಕಾಮುಸಾಗುತಿದೆ.
ಗಂಡಾಪರೆ ಸಾಳು; ಗಂಜನಸ-ಹೆಣ್ಣಾದರೆ ಸಾಕು
ಹೆಂಜತಿಯನಳು
ಇಲ್ಲಿಗಿಳಿದಿದೆ ಸಂಕರ ..''..... ... .

ಓಣಿಗೊರ್ವ ಅಹಲ್ಯೆಯಾದಾಗ ಯಾವ ಪತಿತ ಪಾವನ ಉದ್ಧಾರ ಮಾಡಿಯಾನು? ಎಡವಿದ ಕಲ್ಲೆಲ್ಲ ಹೆಣ್ಣಾದಾವು! 'ಕೊಡ ತಂಬುತಿದೆ'.... ಇದೂ ಒಂದು ದರ್ಶನ.... ಅದೂ ಒಂದು ದರ್ಶನ. ಆಧುನಿಕ ಕನ್ನಡ ಕವಿ ಎರಡನ್ನೂ ಕಂಡಿದ್ದಾನೆ. 'ನೀತಿ' ಒಳಗೆಳೆ, ಯಾವ ಜಾಡಾಕತ್ತೇ ಇರಲಿ, ರೇಷ್ಮೆಯ ಅಲಂಕಾರವೇ ಇರಲಿ. ಎರಡೂ ಕಾವ್ಯದಲ್ಲಿ ಸಿಂತಿವೆ

ಛಂದಸ್ಸು ಕಾವ್ಯರೂಪಗಳ ವಿಷಯವೂ ಹೀಗೆಯೇ. ಪಟ್ಟದಿ. ವೃತ್ತಗಳಪ್ರಭೇದಗಳಲ್ಲದೆ ಅನೇಕ ಹೊಸ ತಾಳ-ಲಯ-ಛಂದಸ್ಸು ಗಳೂ ಬಂದಿವೆ ಸಾಹಿತ್ಯ ರೂಪದಲ್ಲಿ ಅಪ್ಪಪಟ್ಟವಿ ಓಡು, ವಿಡಂಬನ, ಕಾವ್ಯ, ಸಂಗೀತಪ್ರಧಾನ ಕಾವ್ಯ ಎಲ್ಲವೂ ಹೊಸ ಬೆಳಕನ್ನು ಕಂಡಿವೆ ಛಂದಸ್ಸಿನಲ್ಲಿಯಂತೂ ಎಲ್ಲಿಯೂ ಹೊಸ ದೃಷ್ಟಿ.

'' ಸ್ವಚ್ಛಂದ ಬಂದದಲ್ಲಿ
ಜಲಕ್ರೀಡಾಪ್ರತ್ತಪಲ್ಲಿ
..
ಗೀತನನೊರೆಯನಂದು ಗೀಳ್ ಮಾಡಬೇಡ''

'' ಸಮುದ್ರವ ಸೆರೆ ಹಿಡಿದವರುಂಟೆ?'' '' ರಂಧಿಗೆ ಕೊಡದಿರು ಪಟ್ಟದಿಯ ದೀಕ್ಷೆಯನು''— ಇದು ಛಂದಸ್ಸು, ಕಾವ್ಯವಸ್ತುವಿನ ಹೊಸಕೆಯ ದೃಷ್ಟಿ.

ಒಟ್ಟಾರೆ ನಾಡು-ನುಡಿ, ದೇಶ, ಅಂತರ ರಾಷ್ಟ್ರೀಯ ಭಾವನೆ ಸಮಾಜ, ಪ್ರಕೃತಿ, ಪ್ರಣಯ, ಶಿಶು ಸಾಹಿತ್ಯ, ತತ್ತ್ವಜ್ಞಾನ ವಿಡಂಬನ ಕಾವ್ಯ, ಪರದೇಶದ ವಾತಾವರಣ-ಜೀವನ— ಎಲ್ಲವೂ ಆಧುನಿಕ ಕವಿ, ಕಾವ್ಯ ದೃಷ್ಟಿಯ ದ್ಯೋತಕಗಳಾಗಿವೆ. ಬೆಳೆಯುತ್ತಲಿರುವ ಕನ್ನಡ ಕಾವ್ಯದ ಹೊಂಗನಸುಗಳಾಗಿವೆ ಮಾಗಿವಷ್ಟೂ ಕೈಸಿ ಹೆಚ್ಚಿನ ಫಲವನ್ನೀಯುತ್ತಿದೆ ಅಗಿದಷ್ಟು ಸುಂದರ ಸಲಿಲ ಒರತೆ ಒರತೆಯಾಗಿ ಪುಟಿಯುತ್ತದೆ. ಬೆಳೆಯಿದ್ದಷ್ಟೂ ಕಾವ್ಯದ ಜನ ಮುಂದು ಒರಹತ್ತುವುದು ಕನ್ನಡದ ಸುದೈವ. ಆ ಸುದಿನ ಶೀಘ್ರ ಬೆಗ ಬರಲಿ. ಕನ್ನಡ ನಂದನವನ ಅನೇಕ ಗೀತಗಳಿಂದ ತುಂಬಲಿ.

ಬಾಳ್ಗನಸು

[ಕತೆಯು ಪ್ರಪಂಚದ ಮುಂದುವರಿಯುವಿಕೆ.]

ಇದೆಲ್ಲಿ ಈ ವರೆಗಿನ ಬಾಳಿನ ಕತೆ. ಆ ದಿನ ಬಾಯನರು ಕತೆ ಬರೆಯುತೆಂದು ಹುಂಬಾಲುಬಿದ್ದು ಸಿಡಿದು ಕುಳಿತರೆಂದೆನಲ್ಲ! ಸರಿ, ಮನೆಯಿಂದ ಹೊರಬಿದ್ದು, ಪೇಟೆಯಲ್ಲೆಲ್ಲಾ ಸುತ್ತಾಡಿ. ಊಟದ ಹೊತ್ತಿಗೆ ಸರಿಯಾಗಿ ಮನೆಸೇರಿದೆ ನಾನು. ಚಿಮಿಗೆ ಆಗಿತ್ತು. ಒಳ-ಹೋಗುತ್ತಲೆ ಊಟಕ್ಕೆ ಒರಬಹುದೆಂದು ಅನ್ನಿಸಿಯಾಯಿತು. ನನಗಾದರೂ ಜೀಕಾಡುವಷ್ಟೆ! ಇಮಿರಿದಿರಾಗಿ ಇಬ್ಬರೂ ಊಟಕ್ಕೆ ಕುಳಿತೆವು. ಹಲವಾರು ಸಾತಿಗಳಾದ ಒಳಿಕ ಜೆಳಗಿನ 'ಕತೆ'ಯ ಪ್ರಶ್ನೆ ಬಂಯಿತು. ನಾನು ಸುಮ್ಮಗಾದೆ. ಅವರು ಮುಂದರಿದರು: 'ವಿನೋ ಹೀಗೇ ಹೇಳಿದೆ. ಜಯಂತಿ, ಪ್ರಜಾಮತ ಎಂದೆಲ್ಲಾ ದೀವಾಳಿಗೆ ಸಂಚಿಕೆಗಳನ್ನು ಹೊರಡಿಸುವುದಂತ ಅವುಗಳಲ್ಲೆಲ್ಲಾದರೂ ನಿಮ್ಮ ಕತೆ ಒಂದರ 'ನನ್ನ ಯಜಮಾನರು ಒರೆದಿದ್ದರ— ಎಂದು ಹಿಗ್ಗುತ್ತಿದ್ದೆ' ಎಂದುಕೊಂಡರು. 'ಹೂಂ' ಎಂದಿದ್ದೆ ನಾನು. ಮನೆಯೆಜ್ಜು ಸಂತೆ ಬರೆದು, ಜನಮನವನ್ನು ರಂಜಿಸುವ ಅಸ್ಕೊಂದು ಹಿರಿಮೆ ನನ್ನ ಲೇಖನಿಗೆ ಬರದಿದ್ದರೂ 'ನಾನೆ ಮನ' ಪಾಡರೂ ಮೆಚ್ಚಿತಷ್ಟೆ! ಅವರಂತೆ ಮೆಚ್ಚಿಸಲು ಸಶಕ್ತನಾಗಬೇಕು ಎಂದು ಎಣಿಸುತ್ತಿರುವಾಗಲೇ ಬಾಯನರು ಒಂದು ಸಿಗರೇಟಿನ್ನು ಬಾಯ್ಗಿಟ್ಟು ಹೊತ್ತಿಸಿದರು. ಸಿಗರೇಟಿನ ಹೊಗೆ ನಿಮಿಷ ನಿಮಿಷಕ್ಕೂ ಬಿಡುತ್ತ 'ಇನ್ನೇ ಪೇವಿಯ ನಾನ್ನಿಷ್ಟನಷ್ಟಿ ಬರೆ ಸ್ಫೂರ್ತಿ' ಎಂದು ಧ್ಯಾನಾಸಕ್ತನಾಪೆ ನಾನು.



ನಡೆ - ನುಡಿ

‘ಗೀತಾಪ್ರಿಯ’

ಕೂತೊಂದು ತಾಣದಲಿ
ಮಾತನಾಡದೆ ನೀನು
ಮೌನದಲಿ ನಡೆಸಿರುವೆ
ವಾಕ್-ತಪವನು,
ವಾಕ್‌ಸಿದ್ಧಿ ಪಡೆಯದಲೆ
ವಾಕ್‌ಶಕ್ತಿ ಬರದೆಂದು
ವಾಕ್ ಉಗಮದಲಿ ಗಮಿಸಿ
ನೆಲೆಸಿರುವೆ ನೀನು.

ಮಾತಾಡಿ ಫಲವೇನು?
ಆಡಿದಂತಾಗದಿರೆ!
ಆಡುವದಕಾಗುವದ–
ಕಂತರವದೇಕೆ?
ಆಡಿ ಮಾಡುವೆನೆಂಬ
ಮಾಡಿ ಆಡುವೆನೆಂಬ
ರೂಢಿ, ಮಾತಿನ ಮಲಕು.
ಹುರುಳಿಲ್ಲವದಕೆ.

ನಡೆ-ನುಡಿಗಳೆರಡನ್ನು
ನಡೆಯಿಸುವ ಶಕ್ತಿ ಜೀ-
ರೆಡೆಯಲ್ಲಿ ಬೆಳಗುತಿರೆ
ಪಡೆಯಬೇಕದನು;
ಒಂದೆ ನಕ್ಷತ್ರದಿಂ
ಬಂದ ಕಿರಣಗಳೆರಡು
ಹೊಂದಿ ಹೊರಸೂಸಿದುವು
ನೋಡು ಕಣ್ದೆರೆದು!

ಬೆಳಕು ಅಲೆ ಅಲೆಯಾಗಿ
ಹೊಳೆ ಹೊಳೆದು ಉಳಿಯುತ್ತ,
ಇಳೆಯಲ್ಲಿ ನೈಗೊಂಡ
ಆದು ಬಾಳ ಹರಳು
ತಿಳುವಿನಪ್ಪೇ ಪದನು
ಬೆಳಕ ಬದುಕಿನ ಬಾಳು
ಹೊಳೆಯಂತೆ ಕೊರೆಯುವದು
ತಿರೆಯ ಒಡಲನ್ನು.

ನಡೆ-ನುಡಿಗಳೆರಡರಲಿ
ಒಡಕು ಹುಟ್ಟಿಸಬೇಡ,
ಒಡಹುಟ್ಟು ಬೆಳೆದಿರುವ
ಆನಂದ-ಜವಳಿಗಳು!
ಹುಡುಕಿಕೊಡೆ ಒಂದನ್ನು
ಪಡೆನೆ ಇನ್ನೊಂದನ್ನು,
ನಡೆ ಸಾಗು ಬಿಡಬೇಡ,
ಪಿಡಿದ ವ್ರತವನ್ನು!

ಲೋಕ ಕಲ್ಯಾಣಕ್ಕೆ
ಏಕಾಕಿ ನೀನೆಂದು
ವ್ಯಾಕುಲವ ಮನದಿಂದ
ನೀ ಮಿಡುಕಬೇಡ,
ಲೋಕಕ್ಕೆ ಲೋಕವೇ
ಏಕಾಗಿ ಕೈಗೊಳುವ
ಲೋಕದುದ್ಧಾರಕ್ಕೆ
ನೀನೊಬ್ಬನಾಗು!

ನೂರು ಜನ ಮನಸುಗಳ
ವಿಚಾರಿಸುವ ನರನೊಬ್ಬ
ವೀರಪಾಣಿಯನುಸಿರಿ
ನುಗ್ಗಿ ಜನ ಬಹರು:
ಯಾರ ಮನಸನು ಕೂಡ
ಸೇರಿ ಒಡಲೊಳಗಿಂದ
ಸಾರಿದಾ ದೇಶವನು
ವಿಚಾರುವವರಾರು?

ಎಲ್ಲಿ ಮನವನು ಸೇರು,
ಅಲ್ಲೆ ವಾಸಿಸು ಮತ್ತೆ,
ಎಲ್ಲಿ ಹುಡುಕಿದೊಡಲ್ಲಿ
ನೀನೆ ನೆಲೆಯಾಗು;
ಕಲ್ಲಾಗು ಹುಲ್ಲಾಗು
ಬಲ್ಲ ಪಂಡಿತನಾಗು
ಎಲ್ಲೆ ಇಲ್ಲದ ಬಾನ
ಬಸಿರ ಉಸಿರಾಗು!

ಮನದ ಮೌನ

‘ಕಲಾನಂದ’

ಮನವೆ ನೀನೇಕಿಂತು
ಮೌನ ವಹಿಸಿರುವೆ?
ಹೃದಯವೇ ನೀನೇಕೆ
ಕುಗ್ಗಿ ಹೋಗಿರುವೆ?
ನೋಡಲ್ಲಿ ಮೂಡಣದಿ
ಬೆಂಗದಿರ ಬರುತಿಹನು–
ಹೊಳೆವ ಕಿರಣಗಳನ್ನು
ಇಳೆಗೆ ಚೆಲ್ಲುವನು.

ಕೋಗಿಲೆಯು ಹಾಡುತಿದೆ
ಬನದ ಮರಗಳಲಿ;
ಹೊಳೆ ಗಾನ ಮಾಡುತಿದೆ
ಕಾಡ ಮಧ್ಯದಲಿ.

ಹೊಸ ವೇಷ ಹಾಕಿಹುದು
ಜಗವೆಲ್ಲಯಿಂದು;
ಹೊಸಗಾನ ಕೇಳುತಿದೆ
ಸೃಷ್ಟಿಯೊಳು ಇಂದು.
ಪ್ರಕೃತಿ ಮಾತೆಯು ಇಂದು
ಚೆಲುವನಾಂತಿಹಳು;
ಮಧುರ ಗಾನವ ಹಾಡಿ
ನಲಿದಾಡುತಿಹಳು–
ನಾಡೆಲ್ಲ ಈ ತೆರದಿ
ಕುಣಿಯ ತೊಡಗಿರಲು
ಕಾಡೆಲ್ಲ ಈ ತೆರದಿ
ಹಾಡತೊಡಗಿರಲು–
ಮನವೆ ನೀನೇಕೆಸಿತು
ಮೌನ ವಹಿಸಿರುವೆ?
ಹೃದಯವೇ ನೀನೇಕೆ
ಕುಸಿದು ಹೋಗಿರುವೆ?

ಮೌನತೆಯ ಕಳೆದೊಗೆದು
ಮನವೆ ಬಾ ಇಂದು!
ಚೆಲುವಾವ ಜೀವನದಿ
ನಲಿಯಲಿಕೆ ಎಂದು!

ಸತ್ತವರು ಯಾರು?

(ಒಂದು ನಗೆಯಾಟ)

●

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ., ಬಿ. ಟಿ. ಗೋಕಾಕ

ಪಾತ್ರಗಳು

ರಂಗಣ್ಣ : ವಕೀಲ. ರಂಗಯ್ಯ : ಕೇಂಜರ್.
ರಂಗೂ : ಅವನ ಹೆಂಡತಿ. ಕಾಡೇಶಿ : ರಂಗಣ್ಣನ ಆಳುಮಗ
ರಂಗಮ್ಮ : ಅವನ ತಾಯಿ. ಕಾಳಪ್ಪ : ಫಾರೆಸ್ಟ್ ಗಾರ್ಡ್

ಕಾಲ : ೧೯೪೩–೪೫.

[ತೆರೆ ಏಳುತ್ತಲೇ ಎದುರಿಗೆ ಕಾಣುವ ತಳಿರಿನ ಬಾಗಿಲು ಮನೆಯ ನಡುಮನೆಯದು. ಆ ಮನೆಯ ಹೊಗಸಾಲೆಯಲ್ಲಿ ರಂಗಣ್ಣನು ಮಲಗಿರುವನು. ಹೊಗಸಾಲೆಯ ಮೂಲೆಯಲ್ಲಿ ತನ್ನ ಕೆಲಸ ಮುಗಿಯಿತು ಎಂದು ತೋರಿಸುವಂತೆ—ಕಾಯಿದೆ ಪುಸ್ತಕಗಳು ಅಸ್ತವ್ಯಸ್ತವಾಗಿ ಬಿದ್ದಿವೆ. ಅವುಗಳನ್ನು ಧರಿಸುತ್ತಿದ್ದ 'ಸೆಲ್ಸು' ಬರಿಯ ಹೊಟ್ಟೆಯನ್ನು ತೋರಿಸುತ್ತ ಪ್ರೇಕ್ಷಕರಿಗೆ ಎದ್ದು ಕಾಣಿಸುತ್ತವೆ. ರಂಗಣ್ಣನು ಆಕಳಿಸುತ್ತಲೇ ಚಟಿಕೆ ಹೊಡೆಯುತ್ತ ಸೀಲಿದ್ದು 'ಟೀಪಾಯ್' ಪ ಕಡೆಗೆ ನೋಡುವನು. ಈಗ ಪ್ರೇಕ್ಷಕರಿಗೆ ರಂಗಣ್ಣನ ಮುಖ ಸ್ಪಷ್ಟವಾಗಿ ಕಾಣುತ್ತದೆ. ವಕೀಲೀ ವೃತ್ತಿಯ ನಿರಾಶೆಯ ಕಳೆಯು ಎದ್ದು ಕಾಣಿಸಿದರೂ ಏನಾದರೂ ಮಾಡಬೇಕೆಂಬುವ ನಿರ್ಧಾರದ ಮುಖ. 'ಟೀಪಾಯ್' ಪ ಕಡೆಗೆ ಕ್ಯೂರಿಯಸ್ಸಿಯನ್ನು ಬೀರಿ, ರಂಗಣ್ಣ ಪನ ಸರಿಮಾಡಿಕೊಂಡರೂ ಅಹು ತಾಳದ ಮೇಲಿ ಬರಹಾಗಲು ಗೊಗ್ಗರ ಪನಿಯಿಂದಲೇ :—]

ರಂಗಣ್ಣ :— ಅವ್ವಾ ! ....
....

ಏ ಅವ್ವಾ ! ಎಲಾ ಇವನ ! ಈವತ್ತ ಏಳೂ ಹರಿವಾಸರ ಮಾಡಿದ್ಹಾಂಗ ಕಾಣಸ್ತsದ ಮನೀ ಮಂದಿ. ಅವ್ವಾ ! [ಜನ ಸು ನಡಿಕೊಳ್ಳುತ್ತ] ಏ !.... ... ಏ ! [ನಿರಾಶೆಯಿಂದ] ಅವ್ವಾ ! ಊದಿಲ್ಲೆನವಾ ಇವತ್ತ ? ನೀ ಮುದುಕಿ ಮನಿಶ್ಯಾಳು, ಸ್ವಲ್ಪ ಊಶ್ತು ಮಲಕೋವಲ್ಯಾಕ. ಇಕಿಸ್ನರ ಎಬ್ಬಿಸಬಾರದ ? ಎಬ್ಬಿಸಿ ಏಳಬೇಕೆಂಬೂ ಹಟಾ ಎಂಥಾದು ಇವಳಗೇ ಅಂತೀನಿ ! ಎ ! ಇದೇನಿದು. ಎಲ್ಲಾ ಗಪ್‌ಚಿಪ್. ಇಮೊಳ್ಳೇ ಸೇಜಾಟಕ್ಕ ಏಳಲು. ದಿನಾ ನಾ ಏಳೂದರಾಗ ಚಹಾವ ಕಪ್ಪು ನನ್ನ ಮಂ ನೋಡ್ತs 'ಟೀಪಾಯ್' ದ ಮೇಲಿರೂದು ಬಿಟ್ಟು ನತ್ತ ಬರೇ 'ಟೀಪಾಯ್' ಬಕ್ಕ ತಲೀಲಿ ನಿಂತದಲಾ, ಇದರ ನೇನೂ ಅಂತೀನಿ..... (ಕಾಡೇಶಿ ಕೈಯಲ್ಲಿ ಕಸಬರಿಗೆಯನ್ನು ಮುಕೊಂಡು ಆಂಜಂಜುತ್ತ ಪ್ರವೇಶಿಸುವನು) ಏ! ಕಾಡೇಶಿ, ಏನಾ ಮೋ ಈಹೊತ್ತು ಮನಿಯವಂಗೆಲ್ಲಾ ? ಒಬ್ಬರ ಸುಳುವ ತ್ತವಲ್ಲದಲ !

ಕಾಡೇಶಿ :— ನನಗ ನಿನ್ನೇ ಏನೋ ರಂಸೇವು ಬಾವಂಗಾ ಸ್ತ ದಣೇರ. 'ದೊಡ್ಡ ನಶಿಕನಾಗ ಬಂದು ಬಿಡು ಕಾಡೇಶಿ, ಸ್ವಲೂ ಕೂಡಿ ಒತ್ತಟ್ಟಿಗೆ ಹೋಗಬೇಕಾಗೇದ' ಅಂತ ಹೇಳದ್ರು ಸ್ವವ್ವಾವರು ನಾ ಆದs ಮಾತ ಧೇನಿಸಿಗೋತ ಬೆಳ್ಳಬೆಳ್ತನಕಾ ಸ್ಟರಿದ್ರೂ ಇಲ್ಲಿ ಬರೂ ವ್ಯಾಳ್ಯಾಕ ಹ್ಯಾಂಗ ನಿದ್ದಿ ಹತ್ಯೋ ವರೇ ಬಲ್ಲ! ಎಚ್ಚರಾದಾಗ ಗಡಬಡಿಸಿ ಎದ್ದು ನೋಡತೀನಿ, ಹೆಸ್ಸ ವ್ಯಾಳ ಬಂದಾನು ! ಹೆಂಗs ಬಾಣಾ ಬಿಟ್ಟಂಗ ಬರ. ಕನ್ನೂವರಾಗ, ನಮ್ಮ ಹಿತ್ತಲ ಕಡೀ ಮನ್ಯಾಗ ಬೀಗರು ವಿದ್ದರು ದಣೇರ. ಅವರ ಪೈಕಿ ಒಬ್ಬಾತ ನನ್ನ ಗುರುತಿನವ....

ರಂಗಣ್ಣ :— [ಅವಸಾನನಸ್ಟುವಂತೆ] ಅದೇನಾದರೂ ಲಿ ಬಿಡೋ ಕಾಡೇಶಿ. ಮನೆಯವರು ಹೋಗಿರುವರಾದರೂ ಎಲ್ಲೆ?

ಕಾಡೇಶಿ :— ಸಣ್ಣ ಬಾಯಿಯವರ ಕೋಣೇ ಹಂತ್ಯಾಕ ನಿಂತು ದೊಡ್ಡ ಬಾಯೀಲೆ ಕೂಗೇ ಕೂಗಿದ್ನಿ ದಣೇರ, ಸಪ್ಪಳಾನೇ ಇಲ್ಲ. ಅವ್ವಾಅವರು ಎಲ್ಲಿ ಹೋಗಿದ್ದಾರವಾ ?

ರಂಗಣ್ಣ :— [ತ್ರಾಸಿನಿಂದ] ಯಾರಿಗೋ ಕೇಳೂದು ಈ ಪ್ರಶ್ನಿ ಎಬಡಾ ! ನನ್ನ ಮಾತಿಗೆ ಉತ್ತರಾ ಕೊಡೂದು ಬಿಟ್ಟು ನನಗ ಪ್ರಶ್ನೀ ಹಾಕತೀಯಲಾ !

ಕಾಡೇಶಿ :— ನಾನರ ಏನ ಮಾಡ್ಲಿ ದಣೇರ! ದೊಡ್ಡ ಅವ್ವಾವರು ನಸಕಿನ್ಯಾಗ ಎದ್ದು ಎಲ್ಲಿ ಹೋಗಿದ್ದಾರಪಾ ಅಂಬೂ ಮಾತು ನೆಪ್ಪಾದರ ಗಲ್ಲುಗಲ್ಲ ಬಡಕೊಂಬೂ ಹಾಂಗ ಆಕ್ಕೈತಿ; ನಾ ಯಾಕರೇ ತಡಾ ಮಾಡಿದ್ದೇನೂ ಅನ್ನೂ ಹಂಗ ಆಗೇತಿ!

ರಂಗಣ್ಣ :— ನೀ ತದಾಮಾಡಿದ್ದರಿಂದ 'ಈಕೆ' ನ್ನ ಕರಕೊಂಡು ಹೋಯಿತೆ ಕಾಣುತ್ತದೆ. ನಿನ್ನಂತಹ ಕುಂಭಕರ್ಣ ಆಳುಮಗನಿನ್ನಿರೆ ತೀರಿತು. ಮುರಾಳ!

ಕಾಡೇಶಿ :— (ತಪ್ಪು ಒಪ್ಪಿಕೊಳ್ಳುತ ದನಿಯಲ್ಲಿ) ದಣೇರ....

ರಂಗಣ್ಣ :— (ಆತುರವನ್ನು ತೋರಿಸುತ್ತ) ಹೇಳೋ ಎಬಡಾ ! ಎಲ್ಲಿ ಹೋಗ್ಯಾರ ? ಏನ ಸುದ್ದಿ ?

ಕಾಡೇಶಿ :— ಆ ಸುದ್ದೀ ಕೇಳಾಕs ನಿಮ್ಮ ಹತ್ಯಾಕ ಬಂದ್ರ, ದಣೇರು ನೀವಽs....

ರಂಗಣ್ಣ :— (ಚಿಂತಾತುರನಾಗಿ) ಹೋಗು ಕಾಡೇಶಿ ! ಅವರೆಲ್ಲಿ ಹೋಗಿರುವರೆಂಬುವನ್ನು ತಿಳಕೊಂಡು ಬಾ. ನನಗೇಕೋ ಸಮಾಧಾನಾನೇ ಇಗವೊಲ್ಲದು ಹೂ, ಹೋಗು. (ಕಾಡೇಶಿ ಹೋಗುವ ಅವಸರದಲ್ಲಿ ಅವನ ಮನಾಲಿಯ ಬಿಚ್ಚುವನು. ಅವನು ಅವನ್ನು ಒಳೇ ನಡಿಬಿಡಿಯಿಂದ ಸುತ್ತುತ್ತಿರುವಾಗ) ಎಲ್ಲಿಗ್ಯಾರ ಹೋಗಿದ್ದಾರಪಾ ಈ ಮಂದಿ ? ಹೋಗೂದು ಹೋಗತಿದ್ದರು, ನನಗಿಷ್ಟು ಚಹಾನನೇ ಕಾಸಿಕೊಟ್ಟು ಹೋಗಬಾರದ್ದ! ಈ ಹೆಂಗಸರ ಜನ್ಮ....

(ಚಲಕದ ಸಪ್ಪಳ. ರಂಗೂ ಪ್ರವೇಶಿಸುವಳು)

ರಂಗೂ :— ಜನ್ಮ ಜನ್ಮಾಂತರಕ್ಕೂ ಬೇಡ ತಾಯಿ.

---

* ಈ ನಗೆಯಾಟವನ್ನು ರಂಗಭೂಮಿಯ ಮೇಲೆ ತರಲಿಚ್ಛಿಸುವವರು ಲೇಖಕನ ಅಪ್ಪಣೆ ಪಡೆದುಕೊಳ್ಳುವುದು ಅವಶ್ಯವಾಗಿದೆ. ಲೇ.

ರಂಗಣ್ಣ :— (ಸಂದರ್ಭವನ್ನು ಗ್ರಹಿಸದೆ) ಅಂದರ ! ಮುಂದಿನ ಜನ್ಮದ ಸುದ್ದೀ ಇಂದೇ ಮಾತಾಡೋ ಪ್ರಸಂಗಾರೇ ಏನ ಬಂದದ ಅಂತೇನಿ.

ರಂಗೂ :— (ಆಕ್ಕಸ ಬಿತಿತ ದನಿಯಲ್ಲಿ) ಪ್ರಸಂಗ ಬಂದಲ್ಲೀ ಮಾತಾಡ್ತದ ಮತ್ತ!

ರಂಗಣ್ಣ :— ಮತ್ತೇನು ಬಂತು ಅಧಿಕ ಪ್ರಸಂಗ ಮತ್ತ! ಅದೇನೆ ಇರಲಿ, ಬಾಯಿಸಾಹೇಬರು ನಮಗೆ ಚಹಾ ಮಾಡಿ ಕೊಡುವರೊ, ಇಲ್ಲವೆ....

ರಂಗೂ :— (ಕೆಣಕುವ ದನಿಯಲ್ಲಿ) ಇಲ್ಲೇ ಏನು ಮಾಡುವಿರಿ?

ರಂಗಣ್ಣ :—(ನಿರ್ಧಾರದ ಸ್ವರದಲ್ಲಿ) ನಾನೇ ಮಾಡಿಕೊಳ್ಳುವೆವು.

ರಂಗೂ :— ಮನೆಯಲ್ಲಿ ಕಟ್ಟಿಗೆಯಿದ್ದರೆ ಅಲ್ಲವೆ? ಸುಟ್ಟ ಬರ್ಲಿ, ಎಣ್ಣೀ ತಾವತಕ್ಕ್ಯಾದಾಗ ನೆಟ್ಟೀ ಮೂಲಿಗುಂಬಾತು; ಈಗ ಕಟ್ಟಿಗಿ ಅರೇ ಹೊತ್ತಿಸಬೇಕಂದ್ರ ಅವೂ ಇಲ್ದಂಗಾಗ್ಯಾವ! ಏನು ಕಾಲಚಾಚಿ ಉರಿಸಬೇಕs ಒಲೀನ? ನನಗನಸಕಾ ಈ ತಾವತಕ್ಕ್ಯದಾಗ ಅಳೂಹಂಗ ಆಗೇದ. ಈ ಯುದ್ಧದೇ ಎಂದ ಮುಗೀತದ ನಮ್ಮವ್ವಾ ಅನ್ನೂಹಾಂಗ ಆಗೇದ!

ರಂಗಣ್ಣ :— (ಸಂಭ್ರಮವನ್ನು ತಿಳಿಮುಕೊಂಡು) ನನಗನಸಕಾ ಚಹಾ ಯಾವಾಗ ಸಿಗತದs ಅನ್ನೂಹಂಗ ಆಗೇದ. ಒಂದು ಕಪ್ಪು ಚಹಾ ಕಾಸಿಕೊಡಲಿಕ್ಕೆ ಎರಡುತಾಂಡು ಕಟ್ಟಿಗೆ ಕೂಡ ಇಲ್ಲ? (ರಂಗೂ ಇಲ್ಲವೆಂಬಂತೆ ಗೋಣು ಅಲ್ಲಾಡಿಸುವಳು) ಏ! ಕಾಡೇಶಿ! ಕತ್ತೀಕಾಯುವಿಯೇನು ಮನೆಯಲ್ಲಿ?

ಕಾಡೇಶಿ :— ಇಲ್ಲ ದಣೇರ ಇಲ್ಲ....ನಾ....ನಾ.....

ರಂಗಣ್ಣ :— ನಾ....ಏನು ನಿನ್ನ ತಲೆ.

ಕಾಡೇಶಿ :—ನಿನ್ನೆ ಹೋಗಿದ್ದಿ ದಣೇರ ಅದs ದಗದಕ್ಕ; ಆ ರಂಜಣಗೀ ಸಾಬರು ನಮ್ಮ ಕೂಸಣ್ಣ ನೋಡಿ, 'ವಾರಕ್ಕ ನಾಕು ಮಣಾ ಅಂತ ಬರೆದಿರಲಿಕ್ಕೆಬಂದಿನಾ ಮದಲs ಯಾಕ ಬಂದೆಲೇ ಮಳ್ಳ!' ಅಂತ ಬೆದರಿಸಿ ಬಿಟ್ಟಸ್ರಿ. ನಾ ಹೇಳಿದ್ನಿ : ದಣೇರ, ನಾ ಇಂಥಾ ಏಕೇಲರ ಆಳುಮಗಾ ಅಂತ. ಅವೊಂದು ಕೇಳಬೇಕs ನಸ್ತ ಮಾತ! ನಾನೂ ಒಟ್ಟಕ್ಕs ಬಿಡಲಿಲ್ಲ ಮಗಾ. ಏನು ತಿನ್ನೂಬದಕ....ಒಂದಿನಾ ಮದಲ ಕೊಟ್ರ ಆಗೂದರ ಏನು ಗತ? ಕಟಿಗಿ ಇಲ್ದಿದ್ರ ಒಲಿಯಾಗೇನ ಕಾಲೂ ಹಾಕಾಡೈತೇ ಅಂತ ಕೇಳೇ ಬಿಟ್ನಿ. ಆದಕ್ಕ ಆ ಸಾಬರ ಸಿಪಾಯಿ ಏನನಬೇಕು ನನ್ನ ಮಗಾ. 'ಕಾಲ ಏನ ಹಾಕ್ತೇಯಲೇ ಮಳ್ಳ, ಸುಮ್ಮಾನ ನಿನ್ನ ತಲೀನ ಯಾಕಿಬಿಡು, ಇಂದ್ರ ಇಲ್ಲಿ ಪಗಲೆಲ್ಲಾ ಬರೂ ತಾಪುರ ತಪ್ಪೈತಿ' ಅಂದಬಿಟ್ಟ. ಈ ಮಾತ-ಕೇಳಿ ನಂಗ ಬಡಿಯೂ ಅಂತಾ ಸಿಟ್ಟು ಬಂದಿತ್ರಿ. ಸುಮ್ಮಾಕ ನೀ ಮೋತೀ ನೋಡಿ ಬಿಟ್ಟೆ

ರಂಗಣ್ಣ :— ಸಾಕುಮಾಡೋ ನಿನ್ನ ಪುರಾಣ (ಒಳೀ ಹೋಗುವದಕ್ಕೆ ಸಿದ್ಧನಂತೆ) ಈಗ ಏನ ಮಾಡೂದು ಅಂತೇನಿ. ಚಿಮಣೀ ಎಣ್ಣೆ ಇಲ್ಲಾ ಅಂದ್ರ ಒಳೆಣ್ಣೇ ದೀಪಾ ಹಚ್ಚಿತು. ಸಕ್ರೆ ಇಲ್ಲಾ ಅಂದ್ರ ಸಂಗ್ಲೇ ಅಂತು. ಈಗ ಈ ಕಟಿಗಿಗೂ ಈ ಗತ್ತ ಹಚ್ಚಿದಂ ಬಾಳೇ ಆರ ಮಾಡೂದು ಹ್ಯಾಂಗ? ಈ ರೇಂಜರ ಗತ್ತ ನನಗ ಗೊತ್ತಿಲ್ಲೇನು? ತಮ್ಮ ತಮ್ಮ ಜನರ ಮನ್ಯಾಗ ಕಟಿಗೀ ರಾತೀ ಒಟ್ಟಿದರ, ಉಂಡವರ ಮನೀಗೆ ಬರಬೇಕರ ಎಲ್ಲಿಂದ? ದಿನಾ ಒಬ್ಬೊಬ್ಬರತೆ ಪಾಳೀ ಪ್ರಕಾರ ಸತ್ತರೂ ತಿಂಗಳಾನು ತಿಂಗಳೂ ಸುಡುವಷ್ಟು, ಕಟಿಗಿ ಒತ್ತಟ್ಟಿಗೆ: ಸಾಯೂ ಪ್ರಸಂಗದಾಗ ಒಂದು ಚೆಲ್ಲೀ ಚೂರು ಸಿಗೂದು ಕಷ್ಟ ನಮ್ಮಂಥವರಿಗೆ. ಈ ವಿಷಮ ಪರಿಸ್ಥಿತಿಯೊಳಗಿಂದ .. ..
(ತಕ್ಷಣೆ ಒಂದು ಮಗ್ಗಲಿನಿಂದ ರಂಗಮ್ಮ ಚಿಣ್ಣಾಡಿ-ಪಂಟು-ಚಿಕ್ಕೆಗಳ ಒಂದು ಸೆಂಡೆಯನ್ನು ಹೊತ್ತುಕೊಂಡು ಬರುತ್ತಿರುವುದನ್ನು ನೋಡಿ...) ಅವ್ವಾ! ಅವ್ವಾ! ಇದನ್ನೇನು ಸುರುವು ಮಾಡಿದೇ. ಅವ್ವಾ.....
(ಸೆಂಡೆಯನ್ನು ಇಳಿಸಿಕೊಳ್ಳುತ್ತಿರುವಾಗ)

ರಂಗಮ್ಮ :— (ಸೆಂಡೆಯನ್ನು ಒಗೆದು) ರಂಗೂ! ಇವನ್ನ ಪುಟುವು ಮಾಡಿ ನಿನ್ನ ಗಂಡನಿಗೆ ಛಾ ಮಾಡಿಕೊಡು. ಅಡಿಗೀ ಮಾತು ಅಡಿಗ್ಗೆ ಉರ್ಶಾ....ಆವ್ವಾ....ಬಾಳಾ! ಮುಂಡ್ಯೆಂಗಸಾನಾ ಬರಗಾಲ ಕಂಡೀನಿ. ಯುದ್ಧದ ದಿನಮಾನದಾಗೂ ಸಂಸಾರಾ ಮಾಡೀನಿ. ಇಂಥಾ ಪರೀ ಕಟಿಗೀ. ಬರಾ ಮಾತ್ರ ಎಂದೂ ಕಂಡಿದ್ದಿಲ್ಲ ಬಿಡೂ. ಯುದ್ಧದಾಗ ಕಟಿಗೀ ತಗೊಂಡು ಏನು ಮಾಡತಾರೋ ರಂಗಣ್ಣ ?

ರಂಗಣ್ಣ :— ಸಾಯೂದಿಲ್ಲಾ ಅಂತ ಮನಿಯೊಳಗ ಕೂತರ, ಸಾಯಲಿಕ್ಕೇ ಬೇಕೂ ಅಂತ ಕೊಂದು ಈ ಕಟಿಗೀ ಉಪಯೋಗ ಮಾಡಿಕೋತಾರ. ಅವ್ವಾ....ಕಟಿಗಿ....ಕಟಿಗಿ. (ವಿಚಾರ ದಿಙ್ಮೂಢನಾಗುವನು)

ರಂಗಮ್ಮ :— (ಆಂತಃಕರಣದಿಂದ ಮೈಮೇಲೆ ಕೈಯಾಡಿಸುತ್ತ) ಚಿಂತೀ ಮಾಡಿದರ ಏನ ಬಂದಂಗಾತೋ ತಮ್ಮಾ. ಈಗಂತೂ ಛಾ ಕುಡಿ! ಛಾ ಕುಡಿದೆಂದ್ರ ಸ್ವಲ್ಪು ಹುಶಾರ ಆಗ್ತೀ ನೀನು. ಮತ್ತ ಸಂಜೀನಾಗ ಹಾಂಗs ನಾಕು ಪುಡಿಜೆಕ್ಕೆ ಅರಿಸಿ ತರ್ತೀನಿ! ಕುಳ್ಳನ ಮ್ಯಾಲs ಅನ್ನಾ ಕುಚ್ಚಂತ ಹೇಳತೀನು ರಂಗೂಗ. ನೀ ಮಾತ್ರ ತಲೀ ಕೆಡಿಸಿಕೊಂಡು ಕಟಿಗೀ ತರಲಿಕ್ಕೆ ಗುಡ್ಡತನಕಾ ಹೊಗೂ ಉಸಾಬರೀ ಮಾಡೀ ಮತ್ತ. ಸಣ್ಣ ಕಂದವ್ವ....ಅಕಾ....! ಛಾ ತಂದಳು ನೋಡು!

(ರಂಗೂ ಚಹದ ಬಟ್ಟಲವನ್ನು ಟೀಪಾಯಿದ ಮೇಲಿಟ್ಟು ಹೋಗುವ ಹೊತ್ತಿಗೆ, ಕಾಡೇಶಿ ಅಂದಿನ 'ಸಂಯುಕ್ತ ಕರ್ನಾಟಕ'ವನ್ನು ತಂದಿರಿಸುವನು. ರಂಗಣ್ಣ ಒಲ್ಲೀ ಗಂಭೀರ ಭಾವದಿಂದಹಿಮತ್ತ ಚಹವನ್ನು ಸೇವಿಸುತ್ತಿರುವಾಗ, ರಂಗನ್ನು ಸಾವಕಾಶವಾಗಿ ಮನೆಯ ಒಳಕ್ಕೆ ಹೋಗುವಳು. ಒಳಗಿನಿಂದ ಹಸಿ ಕುಳ್ಳಿನ ಹೊಗೆಯು ಬರುತ್ತಿರುವದು. ಇವರಿಬ್ಬರಿಲ್ಲದೆ ರಂಗಣ್ಣ ಒಂದು ಸುದ್ದಿಯನ್ನು ಒಲ್ಲೀ ಕುತೂಹಲದಿಂದ ಓದುತ್ತಿರುವನು. ಕಡೆಗೆ ಏನೋ ನಿರ್ಧಾರ ಮಾಡಿದವನಂತೆ ಕಣ್ಣರಳಿಸಿ ಮುತ್ತಲೂ ನೋಡುವನು. ಮತ್ತೆ ಆ ಸುದ್ದಿಯ ಕಡೆಗೆ ಕಣ್ಣಾಸ್ಥಿಟ್ಟು ಒಮ್ಮೆಲೇ 'That is right ಈ ರೇಂಜು ಸಾಹೇಬನಿಗೆ ಹೀಗೆ ಮಾಡುವದೇ ಒಳ್ಳೆಯ ' ಎಂದು ಒಟಗುಟ್ಟಿ ಮತ್ತೆ ಆದರ ಬಗ್ಗೆ ವಿಚಾರ ಮಾಡುವವನಂತೆ ತಲೆ ತುರಿಸಿಕೊಳ್ಳುತ್ತ, ಕೊನೆಗೆ ಏನೋ ಒಂದು ಕಾರಸ್ಥಾನದ ರೂಸು-ರೇಷೆ ಗೊತ್ತಾದವನಂತೆ ಸಮಾಧಾನದ ನಗೆನಗುತ್ತ, 'ಅವ್ವಾ!' ಎಂದು ಕೂಗುವನು. ರಂಗಮ್ಮ ಹೊಗೆದುಂಡಿದ ಕಣ್ಣನ್ನು ಒರೆಸಿಕೊಳ್ಳುತ್ತ)

ರಂಗಮ್ಮ :— ಆಂಥಾದೇನು ಬರದದಪಾ 'ಕರ್ನಾಟಕದ ಸಂಕಟ'ದಾಗ?

ರಂಗೂ :— (ಗಂಡನ ಕೂಗಿನಿಂದ ಕುತೂಹಲಳಾಗಿ ತಾನೂ ಕೇಳಬೇಕೆಂಬ ಆಸಕ್ತರದಲ್ಲಿ ಅರೆಮುರಿದ ಕುಳ್ಳಿಂದನ್ನು ಹಿಡಿದುಕೊಂಡೇ ಬಾಗಿ) ಅಯ್ಯ! ಸುದ್ದಿ. ಕರ್ನಾಟಕದ ಸಂಕಟಂತ. ಸಂಯುಕ್ತ ಕರ್ನಾಟಕಾ ಅನಬಾರದ್ಯಾ ಛಂದಾಗಿ!

ರಂಗಣ್ಣ :—(ಎದ್ದು ಹೋಗಿ ಬಾಗಿಲನ್ನು ಭದ್ರವಾಗಿ ಇಕ್ಕಿ ಬಂದು) ಇಲ್ನೋಡವ್ವಾ. ನಮ್ಮ ಸಂಕಟಾ ಬಿಡಸೂ ಸುದ್ದಿ ಒಂದು ಬಂದದ. ಒಂದು ಸ್ವಲ್ಪ ಯಾರಾದರೂ ತೊಂದ್ರೆ ತಗೊಂಡ್ರ ನಮ್ಮ ಸಂಕಟ ಬಿಟ್ಟಿಂಗs ಅಂತ ತಿಳಿ!

ರಂಗಮ್ಮ :— (ಆತುರದಿಂದ) ನಮ್ಮ ಸಂಕಟಾ ಬಿಡಸೂ ಸುದ್ದಿ ಅದೆಂಥಾದಪಾ? ಏನರ ಆದ ಓದ್ಯಾರ ತೋರಿಸಲಾ! ಎಷ್ಟ ಗಟ್ಟಿಮುಟ್ಟಾಗಿ ಮುಷ್ಟೀ ಒಳಗ ಹಿಡದೀ ಆ ಮೂರು ದುಡ್ಡಿನ ಕಾಗದಾ?

ರಂಗಣ್ಣ :— (ಬಾಗಿಲ ಕಡೆಗೆ ನೋಡಿ ಒಳದನಿಯಲ್ಲಿ) ಈ ಮೂರು ದುಡ್ಡಿನ ಕಾಗದದಾಗ ಮೂರೂ ಲೋಕ ಸಿಕ್ಕಾವ ಅವ್ವಾ! ಇಲ್ನೋಡು. ಈ ಸುದ್ದೀ ಬಹಳ ಗುಟ್ಟಾಗಿ ಇಡಬೇಕು ಮಾತ್ರ. (ಹೆಂಡತಿಯು ಕಡೆಗೆ ನೋಡಿ) ನಿಮ್ಮ ಕಚೇರೀ ಕಟ್ಟಾ್ಯಗ ಈ ಸುದ್ದಿ ಚರ್ಚ್ಯಾಕ ಇಡಬ್ಯಾಡ, ತಿಳತಿಲ್ಲೊ? ಹೆಂಗಸರ ಬಾಯಿಗೆ ಬೀಗಾ ಹಾಕೂದು ಬ್ರಹ್ಮದೇವರಿಗೂ ಶಕ್ಯ ಇಲ್ಲ....ಅನ್ನೂ ಹಂಗ....ಮಾಡಬ್ಯಾಡ ತಿಳೀತೇನು?

ರಂಗೂ :— (ಕೆಡಕೆನಿಸಿಕೊಂಡು ಕೆಣಕುವ ದನಿಯಲ್ಲಿ) ಗುಟ್ಟಿನ ಮಾತನಕೋತ ಇಷ್ಟ್ಯಾಕ ಬೀರತೀರಿ....ನನ್ನ ಕಿವಿ ಕೇಳಸೂದಿಲ್ಲ ಅಂತ ಗೊತ್ತಾದವರ್ಹಂಗ? ಗುಟ್ಟಿನ ಮಾತಂತ! ಅದೆಂಥಾ ಗುಟ್ಟಿನ ಮಾತೋ ಸುಡ್ಲಿ! ಭಾಸಿಸಿ ಬಂದ ಸುದ್ದಿಗೆ ಗುಟ್ಟಿನ ಸುದ್ದೀ ಅನ್ನೂ ಗಂಡಸರ ಬುದ್ಧಿಗೆ ಏನನಬೇಕೋ ತಿಳೀದಾಗೇದ! ಹೆಂಗಸರ ಬಾಯಿ ಮಾತ್ರ ಸಡಿಲು, ಗಂಡಸರ ಬುದ್ಧಿ..... .....

ರಂಗಣ್ಣ :— (ಹತೋಟಿ ತಪ್ಪಿದವನಂತೆ) ಏ! ಏ! ಗಂಡಸರ ಬುದ್ಧಿ....! ಈಗಿನ ಮಹತ್ವದ ಪ್ರಸಂಗದಾಗಾರೇ ಸ್ವಲ್ಪ ನಿದಾನ ತೆಗೆದುಕೋ! ಕೆಲಸದ ಮಹತ್ವವನ್ನು ತಿಳಿಹೇಳುವದರ ಸಲುವಾಗಿ ನಾ ಸ್ವಲ್ಪು ಗಂಭೀರ ವಾತಾವರಣ ಹುಟ್ಟಿಸೂ ಪ್ರಯತ್ನ ಮಾಡಿದರ ಜಗಳಕ್ಕ ನಿಲ್ಲಬೇಡ! ಭಾಸಿಸಿದರ ಸುದ್ದಿ ಎಲ್ಲಾರಿಗೂ ಗೊತ್ತs ಆಗತದ; ಅದಕ್ಕೆಲ್ಲಿ ಇಲ್ಲ ಅಂತೀನಿ. ಆದರ ಆ ಸುದ್ದೀ ಉಪಯೋಗ ಮಾಡಿಕೊಳ್ಳೂದು ಗುಟ್ಟಿನ ಕೆಲಸ, ತಿಳತೇನು?

ರಂಗೂ :— (ತಿಳದವಳಂತೆ) ಎಲ್ಲಾ ಗೊತ್ತದ. ತಿಳಿಯೂದಿಲ್ಲ ಅಲ್ಲಿಕ್ಕೆ ನಾಯೇನು ಸಣ್ಣ ಹುಡಿಗಿ ಅಲ್ಲ!

ರಂಗಣ್ಣ :— (ಕೆಣಕಿದವನಾಗಿ) ಏನು ತಿಳೀತು?

ರಂಗೂ :—(ಅದೇ ದನಿಯಲ್ಲಿ) ಏನು ತಿಳಕೊಳ್ಳಬೇಕಾಗಿತ್ತು?

ರಂಗಮ್ಮ :—(ನಡುವೆ ಬಾಯಿಹಾಕಿ) ಏ! ರಂಗಣ್ಣಾ! ಇದೇನು ಹುಚ್ಚುಚ್ಚಾರ ನಡಿಸೀದ್ಯೊ? ಸಂಕಟಾ ಬಿಡಸೂ ಸುದ್ದೀ ಓದೂದು ಬಿಟ್ಟು ಇಲ್ಲದ ಸಂಕಟಾ ತರೂಹಂಗ ಇದೇನ ಸಣ್ಣ ಹುಡುಗರ್ಹಂಗ ಪಾಕ್ಯಾಡಲಿಕ್ಕೆ ಹತ್ತಿದ? ನಾವೇನ ಹಿಂಗ ಮಾಡತಿದ್ದಿಲ್ಲ ಮಾರಾಯಾ, ನಾಲ್ವತ್ತು ವರುಷ ಸಂಸಾರ ಮಾಡಿದಿವಿ ಖರೆ! (ಕಣ್ಣೀರು ಒರಸಿಕೊಂಡು) ಇರಲಿ ಬಿಡಕ ರಂಗೂ, ಹೂಂ! ಹೇಳಪಾ ಇನ್ನ ಮ್ಯಾಲಬೇ ನಿನ್ನ ಸುದ್ದಿ!

ರಂಗಣ್ಣ :— (ಒಳದನಿಯಲ್ಲಿ ಓದುವನು) "ಅಖಿಲ ಹಿಂದುಸ್ತಾನದ ದಹನ ಕಮಿಟಿಯ ಅಭಿಪ್ರಾಯವನ್ನು ಸರಕಾರದವರು ಕೂಲಂಕಷವಾಗಿ ವಿಚಾರಿಸಿ, ಸುಡುವ ಜಾತಿಯ ಸತ್ತ ಮನುಷ್ಯನಿಗಾಗಿ ಅವನ ವಯೋಮಾನ, ಸಾಯುವ ಮೊದಲಿದ್ದ ಅವನ ದೇಹದ ತೂಕ ಮೊದಲಾದವುಗಳನ್ನು ವಿಚಾರ ಮಾಡದೆ, ೩೦ ಮಣ ಕಟ್ಟಿಗೆಯನ್ನು ಕೊಡಬೇಕೆಂದು ನಿರ್ಧರಿಸಿದೆ. ಈ ನಿರ್ಣಯವು ಇದೇ ತಿಂಗಳ ೧೫ನೆಯ ತಾರೀಖಿನಿಂದ ಅಮಲಿನಲ್ಲಿ ಬಂದಿರುವದೆಂದೇ ತಿಳಿಯಬೇಕು!" ತಿಳೀತೇನು ಅವ್ವಾ?

ರಂಗಮ್ಮ :—(ಏನೂ ತೋಚದೆ) ಸತ್ತ ಜನರ ದಹನಕ್ಕಾಗಿ ಕಟಿಗೀ ಕೊಟ್ಟರ, ನಮ್ಮ ಸಂಕಟ ಹ್ಯಾಂಗ ಕಡಿಮಿ ಆಗತ್ತsದೋ ಬಾಳಾ!

ರಂಗೂ :— (ಮುಗುಳುನಗೆ ನಗುತ್ತ) 'ಕಟಿಗೀ ಆಶೆಯಿಂದ ಸತ್ತರ ಸರಕಾರದವರು ಯಾವ ರೀತಿಯಿಂದಲೂ ಜವಾಬುದಾರರಲ್ಲ' ಅಂತ ಬರದಿಲ್ಲೇನು ಅಲ್ಲಿ? ದಹನಕ್ಕ ಕಟಿಗಿ ಸಿಗತಾವಂತ ಇವರಿಗ್ಯಾಕೆಸ್ಟು ಉಬ್ಬು ಏನೋ ನಮ್ಮವ್ವಾ!

ರಂಗಣ್ಣ :—(ನಿರ್ಧಾರದ ದನಿಯಲ್ಲಿ) ಈ ಮೂವತ್ತು ಮಣಾ ಕಟಿಗೀ ನಾ ಹ್ಯಾಗಾದರೂ ದೊರಕಿಸಿಯೇ ಬಿಡಾಂವಾ (ಇಬ್ಬರ ಮುಖದ ಕಡೆಗೂ ನೋಡುವನು)

ರಂಗಮ್ಮ :— (ಕಿವಿಮುಚ್ಚಿಕೊಳ್ಳುತ್ತ) ಒಳತನ್ನು ಹುಚ್ಚು ಖೋಡಿ. ಅಭದ್ರಭದ್ರ ಮಾತಾಡಬ್ಯಾಡ!

ರಂಗಣ್ಣ :—(ಏಕಿಯ ದನಿಯಲ್ಲಿ) ಅಭದ್ರವೆಲ್ಲಿ ಬಂತು ಅವ್ವಾ! ದಿನಾಲು ಕಟಿಗಿಯ ಸಲುವಾಗಿ ಸುಕಟದ ಸಾವು ಅನುಭವಿಸುತ್ತ ಸಾಯುವದಕ್ಕಿಂತ ಒಮ್ಮೆ ಸತ್ತು ಮೂವತ್ತು ಮಣಾ ದೊರಕಿಸಿದರೆ ತಪ್ಪೇನು? ಈ ಮೂವತ್ತುಮಣಾ ದೊರಕಿಸಲು ....

ರಂಗೂ :—(ವಿಷಯ ಗ್ರಹಿಸುತ್ತ ಹುರುಪಾಗಿ) ಯಾರಾದರೂ ಸಾಯಬೇಕು!

ರಂಗಣ್ಣ :—(ಅವಸರದಿಂದ) ತಪ್ಪಿದಿ, ಸತ್ತಂಗ ಮಾಡಬೇಕು! ನೀನು ಈ ಸೋಗು ಹಾಕೂ ಶಾಣ್ಯಾತನ ತೋರಿಸಿದೆಂದ್ರ.....

ರಂಗೂ :—(ನಗುತ್ತ) ಸಾಯೂ ಪಾರ್ಟ್ ಮಾಡಲಿಕ್ಕೆ ಶಾಣ್ಯಾತನಾ ಎಂಥಾದು ಬೇಕಾಗತದೋ ಮತ್ತೆ. (ಇಬ್ಬರೂ ಕಿವಿಯಲ್ಲಿ ಗುಣುಗುಟ್ಟುವರು) ಅತ್ತೆಮ್ಮನವರನ್ನ ಒಪ್ಪಿಸಿರಿ. ನಾನಂತೂ ಸಿದ್ಧ!

ರಂಗಮ್ಮ :— (ಇವರ ಪಿಸುಮಾತಿನಿಂದ ಸಂಶಯಗ್ರಸ್ತಳಾಗಿ ನಡುಗುವ ಸ್ವರದಲ್ಲಿ) ಏನು? ನಾ ಸಾಯಲಿಕ್ಕೆ ಒಪ್ಪಬೇಕs? ಅಯ್ಯ ನನ್ನ ಹಡ್ಡೇಬಾರs (ಅಳತೊಡಗುವಳು)

ರಂಗಣ್ಣ :— ಅವ್ವಾ! ಅವ್ವಾ! ಸಾಯೂ ಸಂತೋಷದಾಗ ಅಳೂ ಮಾತ್ಯಾಕವ್ವಾ! ಆ ಸಂತೋಷ ಸಿಗಲಿಲ್ಲಾ ಅಂತ ಅಳುವವರು ಇನ್ನಾವರವ್ವಾ.

ರಂಗೂ :— (ಗಾಭರಿಯಾಗಿ) ಇವಳ್ಹದ ನಿಮಗೆಲ್ಲ ಸಾಯಂತ ಅಂದsದ, ಸ್ವಲ್ಪು ಹೇಳೂವರ ಕೇಳಕೋರೆಲಾ!

ರಂಗಮ್ಮ :— (ಕಣ್ಣೊರಸಿಕೊಳ್ಳುತ್ತ) ಸಾಯೂ ಮಾತ ಕೇಳದ ಕೂಸ್ಲೆ ದುಃಖಾನೇ ಬರತದ ಸುಟ್ಟಬರ್ಲಿ....ನಾ ಆರೇ ಏನ ಮಾಡ್ಲಿ ರಂಗೂ! ಎನವಾ ಈ ಮಾತು? ಸಾಯೂದು ಕೆಡೂದು! ಆ ಸಂಯುಕ್ತ ಕರ್ನಾಟಕಾ ಕರ್ನಾಟಕದ ಸಂಕಟಾನೇ ಖರೇನ್ವಾ ಖರೇ!

ರಂಗೂ:— (ತಿಳಿಸಿಹೇಳುವ ರೀತಿಯಲ್ಲಿ) ಅತ್ತೆಮ್ಮಾ! ಇದರಾ ಗೇನೂ ಮಹತ್ವ ಇಲ್ಲ. ಯಾರಾದರೂ ಒಬ್ಬರು ಸತ್ತಾಂಗ ಎರಡು ತಾಸು ಬಿದ್ದುಕೊಳ್ಳಬೇಕು. ಇವರು ಹೋಗಿ ಮೂವತ್ತು ಮಣಾ ಕಟಿಗೀ ತಂದು ಸ್ಮಶಾನಕ್ಕ ಕಳಿಸೂದು ಬಿಟ್ಟು ಮನಿಗೇ ತರತಾರ; ನಮ್ಮದರs ಏನ ವಾಗತ್ತಾೈ ಸುಟ್ಟಿತು! ಏನ ಸಾಯಿ ಅಂದರ ಸಾಯೂದಿಲ್ಲಾ; ಬದಕೂ ಅಂದರ ಬದಕೂದಿಲ್ಲ! ಅದಕ ನಾನs ಒಂದೆರಡು ತಾಸು ಸಾಯಬೇಕಂತ ಮಾಡೀನಿ. ಇದರಾಗೇನದ?

ರಂಗಮ್ಮ :—ಸಾಯೂ ಮಾತು ಮರ್ಯೋ ಬ್ಯಾಡ ನಮ್ಮವ್ವಾ! ಇವರೊಬ್ಬರು ಕಣ್ಣಮುಚ್ಚಿ ..... (ಬಿಕ್ಕಿ ಬಿಕ್ಕಿ ಅಳುವಳು)

ರಂಗಣ್ಣ ! (ಮನಸ್ಫೋಲಿಸುವ ರೀತಿಯಲ್ಲಿ) ಇದರಲ್ಲಿ ಖರೇ ಅಂದ್ರ ಯಾರೂ ಸಾಯೂದಿಲ್ಲ ಅವ್ವಾ! ಹಿಂಗ್ಯಾಕ ಮಾಡತೀ ಹುಚ್ಚೀ ಹಾಂಗ! ನೀನs ನೋಡು. ಈ ಕಟಿಗೀ ಸಲುವಾಗಿ ಎಷ್ಟು ಗೋಳ್ಯಾಟ ನಡದದ! ಈ ಗೋಳಾಟ ತಪ್ಪಿಸಬೇಕಾದರ ಏನಾದರೂ ಮಾಡಬೇಕಾಗ್ತsದ. ನಿನಗ ಈ ಮಾತು ವಾಗತ್ತಾೈ ಅನಸತಿದ್ರ ಒಂದೆರಡು ತಾಸು ಮಾನಿಂಗೇಶ್ವರ ಗುಡ್ಯಾಗ ಕುಳತುಕೋ; ನಾವ್ಯಾರಾರೇ ಸತಕೋತೇವು!

ರಂಗಮ್ಮ :— [ಅಸಹ್ಯದಿಂದ] ಥೂ! ಹುಚ್ಚುಬೋಡೀ.

ರಂಗಣ್ಣ :— ನೀ ಸುಮ್ಮನಿರು ಅವ್ವಾ! ಈ ದಿನದಾಗ ಸಾಯೂ ಜನಂಗೆ ಯಾರೂ ಅಡ್ಡ ಬರಬಾರದು!

ರಂಗಮ್ಮ :— ಏನ ಅಡ್ಡಡ್ಡ ಮಾತಾಡತೀಯೋ ರಂಗಣ್ಣ! ನನ್ನ ಎದ್ಯಾಗ ಬರೀ ಎಳೆ ಕ್ಷಂಗ ಮಾತಾಡಿ ನನ್ನ ಗೋಳಾಡಿಸಿದರ ನಿಮಗೇನ ಬರತದ? ಈ ಸಾಯೂ ಕೆಲಸ ಮರ್ಯೋ ಬ್ಯಾಡ ಅಂತ ಹೇಳಲ್ಲs?

ರಂಗಣ್ಣ ! :— ಹಾಗಾದರ ನೋಡು ಅವ್ವಾ! ನಾ ಮಾತ್ರ ಮನೀ ಒಳಗ ಇರಾಂವ ಅಲ್ಲ. ಸುಳುಸುಳ್ಳೀ ನನ್ನ ಸಿಟ್ಟಿಗೆಬ್ಬಸ್ತೀ ಅತು! ಒಂದೆರಡು ತಾಸು ಇರೇ ಸತ್ತವಳಂತೆ ಮಲಗಿದರ ಆಗುವದಾದರೂ ಏನು? ಹೇಳಬಾರದೇ ? ಮೊನ್ನೆ ಮೊನ್ನೆ ನಾ ಛೆಂಡೋಲಿ ಮಾಡಿಸಲಿಲ್ಲಾ ಅಂತ ಮೂರು ತಾಸು ಮುಸುಕು ಬಗದಿದ್ದು; ಅದರಿಂದ ಅವಳಿಗೇನೂ ಫಾಯಿದೆ ಆಗಲಿಲ್ಲ, ಆಮಾತು ಬೇರೆ! ಈಗ ಅದಕ್ಕೂ ಸ್ವಲ್ಪು ಹೆಚ್ಚು ಹೊತ್ತು ಮಲಗಿದರ ಮೂವತ್ತು ಮಣ ಕಟಿಗಿ ಅರೇ ಸಿಗತಾವ. ನೀ ಸುಮ್ಮನಿರವ್ವಾ. ಸಾಯೂವವಳು ಸಿದ್ಧಳಾದಾಗ, ಅಳೂವವರು ಸಾಯೂ ಅವರಾಂಗ ಮಾಡಬಾರದವ್ವಾ! ನಿನ್ನ ಕಾಲs ಹಿಡತೀನಿ, ಇದೊಂದು ಮಾತು ನಡಿಸಿಕೊಡು!

ರಂಗಮ್ಮ :— (ಕನಿಕರವ ದನಿಯಲ್ಲಿ) ನನ್ನ ಕಣ್ಣೆದುರಿಗೆ ಸುಳುಸುಳ್ಳೀ ಆದರೂ ಸಸಿ ಹೆಣಾ ಪ್ಯಾಂಗ ನೋಡಲಿ ರಂಗಣ್ಣ! ಇದು ನನ್ನ ಕಡಿಂದ ಆಗದ ಮಾತು. ನಿನ್ನ ಕಟಿಗಿ ಬ್ಯಾಡಾ. ನಿನ್ನ ಕುಳ್ಳು ಬ್ಯಾಡಾ.

ರಂಗಣ್ಣ :— (ಕೊನೆಯ ಅಸ್ತ್ರಪ್ರಯೋಗಪ್ರವೀಣನಂತೆ) ಹಾಂಗಾರ ನಾಳೆ ಅಪ್ಪನ ಶ್ರಾದ್ಧಕ್ಕೂ ಹತ್ತ ಜನಾ ಬ್ರಾಹ್ಮಣರ ಅಡಿಗೀ ಮಾಡಲಿಕ್ಕೆ ಕಟಿಗೀ ಎಲ್ಲೀದ ತರತೀ ಹೇಳವ್ವಾ. (ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಬಿಕ್ಕುತ್ತ) ಈ ಕಟಿಗೀ ಸಲುವಾಗಿ ಅಪ್ಪನ ಶ್ರಾದ್ಧ....ಬಿಡೂ....ಪ್ರ-ಸಂ-ಗ ಬಂದ್ತsದ.....ನಾ ಏನ ಮಾಡಲಿ ಹೇಳು ಅವ್ವಾ. (ದುಃಖ ಪೂರಿತನಾಗುವನು)

ರಂಗಮ್ಮ :— (ಹಾಹಾರ) ಎಂಥಾ ಪ್ರಸಂಗs ನಮ್ಮವ್ವಾ ಇದು! ಪ್ಪೆಗ್ದಾಗ ಹಸಿದು ಕುಳತ.....ನಮ್ಮವ್ರಿಗೆ.....ವರ್ಷ-ಕ್ಕೊಮ್ಮೆಯಾದರೂ.....ಬ್ರಾಹ್ಮಣರ ಮುಪಾಂತರ ಊಟಕ್ಕ..... ಹಾಕಬೇಕಂದರ .....ಹಾಕಬೇಕಂದರ.....

ರಂಗಣ್ಣ :— (ಬಿಕ್ಕುತ್ತ ತಡೆದು ಮಾತಾಡುತ್ತ) ನಮ್ಮ....ಮಾತು ....ಕೇಳಬೇಕವ್ವಾ! ನನಗ ಅಪ್ಪನ ಶ್ರಾದ್ಧದ....ದಿನ....ನೆನಪಾ...ದ ...ರ.... (ದುಃಖವು ತಡೆಯಿಡದ ಹಾಗಾಗಿ, ಮುಖಕ್ಕೆ ಸೆರಗೂ ಹಾಕಿ-ಕೊಳ್ಳುವನು.)

ರಂಗಮ್ಮ :— (ಉಪಾಯಹೀನಳಾಗಿ) ನನ್ನ ಹಣೇಬಾರಕ್ಕ ನೀನರೇ ಏನಮಾಡೀ ರಂಗಣ್ಣ! ಈ ಮುದಿತೀ ಕಡಿಂದ ಏನ ಮಾಡ-ಸ್ತೀಯೋ ಮಾಡಿಸು. ಮುಖ್ಯ....ಶ್ರಾದ್ಧ....ರಂಗ.. .ಶ್ರಾ....

ರಂಗಣ್ಣ :— ಹೌದು....ಅವ್ವಾ....ಅದಕ್ಯ....

ರಂಗಮ್ಮ :— ಏನು ಹುಚ್ಚುಚ್ಚಾರ ಮಾಡಿಕೋತೀರೋ ಮಾಡಿಕೋಳ್ಳಿ. ನನ್ನ ಕಡಿಂದ ರಂಗೂನ ಹೆಣಾ ಮಾತ್ರ ನೋಡೂದು ಮರ್ಯೋ ಆಗೂದಿಲ್ಲ! ಸುಸೂತ್ರ ನಾನೇ ಕಣ್ಣು ಮುಚ್ಚತೀನಿ!

ರಂಗಣ್ಣ :— (ಒಳ್ಳೆ ಹುರುಪಿನಿಂದ) ಎರಡು ತಾಸು ಅವ್ವಾ, ಅಷ್ಟೆ. ಕಟಿಗಿ ಮನಯಲ್ಲಿ ಬಿದ್ದವೋ, ನಿನ್ನ ಸಂಜೀವಿನಿ ಬಂತೆಂದು ತಿಳಿ!

ರಂಗಮ್ಮ :— (ಒಂದು ವಿಚಾರದ ಸುಳಿಯಲ್ಲಿ ಸಿಕ್ಕು) ಅಲ್ಲೋ ರಂಗಣ್ಣಾ! ನನ್ನ ವಯಸ್ಸು ಅರವತ್ತರ ಮನೀ ದಾಟಿ ಹೋಗೇದ? ಮ್ಯಾಲ ದಮ್ಮು ಸೇರಿ ಅರಕ್ತ ಆಗಿ ಬಿಟ್ಟೀನಿ. ಯಾವಾಗ ದಮ್ಮಿನ ಚೀಲ ಒಡೀತದೋ ನೇಮದ್ದಲ್ಲ. ಈಗರೇ ನೀ ನನ್ನ ಹೆಣದ ಹೆಸರಿನ ಮ್ಯಾಲ ಕಟಿಗೀ ತರತೀದಿ. ಮುಂದ .... (ಬಿಕ್ಕುತ್ತ).... ಖರೇಂದ್ರ ನಾ ಸತ್ತರ ನನ್ನ ದಹನದ ಗತೀ ಏನು ರಂಗಣ್ಣಾ?

ರಂಗಣ್ಣ :—(ಒಳ್ಳೇ ಆವೇಶದಿಂದ) ಇವರೊಳಗೇನದ ಬಡವ್ವಾ. ದ್ವಿಜರಾದ ನಾವು ಎರಡು ಸಾರೆ ಜನ್ಮ ತಾಳುತ್ತಿರುವಾಗ, ಎರಡು ಸಾರೆ ಸಾಯುವದೇನಾಶ್ಚರ್ಯವೆ? ಆಗ ಈ ರೇಂಜರನ್ನ ನೀ ಸತ್ತ ಮಾತಿನ ಖಾತ್ರೀ ಮಾಡಿಕೊಳ್ಳಕ್ಕೆ ಮನೀತನಕಾ ಎಳಕೊಂಡು ಬರತೀನಿ; ನಿನ್ನ ಪವಿತ್ರ ಹೆಣಾ ಅವ್ವಾ....! ನಿನ್ನ ಪವಿತ್ರ ಹೆಣಾ.... ಕೃಷ್ಣಾಜಿನದ ಮ್ಯಾಲೆ ವಿರಾಜಮಾನವಾದದ್ದನ್ನು ನೋಡಿದ ಮೇಲೆ, ಮೂವತ್ತು ಮಣಾ ದಿಂಡಲು ಯಾಕ....(ಮುದುಕಿ ಅಳಹತ್ತುವಳು) ಅವ್ವಾ, ಗಂಧದ ಕಟಿಗೀ ಕೊಡತಾನ! ನೀ ಸತ್ತಮ್ಯಾಲೆ ಆಗೂ ಹೆಣದ ಸಿಂಗಾರ ಪ್ಯಾಂಗಾಗ್ತದ ಅಂಬೂದನ್ನ ನೀ ಸತ್ತರೇ ನೋಡವ್ವಾ. ಈಗ ಮಾತ್ರ ಸುಖವಾಗಿ ಸಾಯಿ. ಬೇಕಾದರ ತಣ್ಣೀರ ಸ್ನಾನ ಮಾಡಿ, ಹೊಟ್ಟೆ-ಗಿಷ್ಟು ಅಳ್ಳಿಟ್ಟನ ನೇವೇದ್ಯಾ ಮಾಡಿಕೊಂಡು, ಗಟ್ಟಿಮುಟ್ಟ ಆಗೇ ಸಾಯಿ. (ಹೆಂಡತಿಯ ಕಡೆಗೆ) ಅಹುದಲ್ಲೊ ?

ರಂಗೂ :— ಕಟಿಗಿ ಸಿಗತಾವಂದ ಮ್ಯಾಲೆ . ...

ರಂಗಣ್ಣ :— ಸಾಯೂ ಆಟಾ ಹೂಡಬೇಕs!

ರಂಗಮ್ಮ :—(ಹತಾಶಳಾಗಿ) ಎನವ್ಯಾಳ್ಯಾ ಬಂತವ್ವಾ ಇದು. ರಂಗಣ್ಣಾ! ಈಗಂತೂ ನಾ ಸಾಯತೀನಿ; ಲಗೂನೇ ಬದಕುಸೂ

ಭಾರ ನಿಂದು. ರಂಗೂ! ನಾ ಬದುಕೂ ಹೊತ್ತಿಗೆ ನೀ ಮೈತೊಳ ಕೊಂಡು ಬ್ಯಾಳಿಗೆ ಎಸರಿಡು. ನಾ ಬದುಕಿದವಳೇ ಎದ್ದು ಮೈತೊಳ-ಕೊಂಡು ಬದುಕಿದ ಪ್ರಾಯಶ್ಚಿತ್ತಕ್ಕಾಗಿ ಹಣಮಂತ ದೇವರಿಗೆ ತಪ್ಪದ ದೀಪಾ ಹಚ್ಚಿ ಬರತೀನಿ ಹಂಗಾರ .... ಉರ್ಶಾ ... ಅಪಾ ...ಸಾಯೂ ಸಿದ್ಧತೆ ಮಾಡಲೇನಪಾ ರಂಗಣ್ಣಾ. (ಎನ್ನುತ್ತ ರಂಗಮ್ಮ ಎದ್ದು ಕೃಷ್ಣಾ-ಜಿನ ಹಾಸಿ ಮಲಗಿಕೊಳ್ಳಬೇಕೆನ್ನುವಷ್ಟರಲ್ಲಿ ರಂಗಣ್ಣ ತಲೆಗೊಂದು ಪಂಚೆ ಸುತ್ತಿಕೊಂಡು, ಹೆಗಲಮೇಲೆ ಅಂಥದೇ ಒಂದು ಪಂಚೆ ಹೊದ್ದುಕೊಂಡು, ಅಪಸವ್ಯವಾದ ಮುಖದ ನಟನೆ ಮಾಡುತ್ತ 'ಅವ್ವಾ! ಅವ್ವಾ!' ಎಂದು ನಗುತ್ತ ಅಳಹತ್ತುವನು. ರಂಗೂ ಅವನ ನಗುಮುಖದಲ್ಲಿ ನಗೆಗೂಡಿಸುತ್ತ ಅಳುವಿ ನಲ್ಲಿ ಅಳುವನ್ನು ಕೂಡಿಸುತ್ತಿರುವಾಗ)

ರಂಗಣ್ಣ :—ಅವ್ವಾ! ಈಗs ನೋಡಿಕೋ, ನೀ ಸುಳ್ಳs ಸತ್ತಾಗ ಇಂಥಾ ಪರಿ ಅಳತೇನಿ ಇನ್ನ ನೀ ಖರೇಂದ್ರು ಸತ್ರ ನಾ ಎಷ್ಟು ಅಳತಿ-ದ್ದೇನು. (ಎಂದು ನಗುತ್ತ ಸರ್ರನೇ ಹೋಗಿ ಬಿಡುವನು. ರಂಗಮ್ಮ ಕೃಷ್ಣಾ-ಜಿನದ ಮೇಲೆ ಕುಳಿತು ಹಡೆಪಣೆ ಗಟ್ಟಿಸಿಕೊಳ್ಳುತ್ತಿರುವಾಗ, ತೆರೆಯು ಸರಸರನೆ ಬೀಳುವುದು.)

(ಒಂದು ನಿಮಿಷ ರಂಗಭೂಮಿಯಲ್ಲಿ ಕತ್ತಲೆಯನ್ನು ತೋರಿಸಿ ಕೆಲವ ಕಾಲ ಗತಿಸಿದ್ದನ್ನು ಸೂಚಿಸಿ ತೆರೆ ಏಳುವುದು.)

(ಅದೇ ರಂಗಣ್ಣನ ಮನೆ. ನಡುಮನೆಯ ಬಾಗಿಲ ಎದುರಿಂಗೆ ಪ್ರೇಕ್ಷಕರಿಗೆ ಕಾಣುವಂತೆ ರಂಗಣ್ಣನ ತಾಯಿ ಸತ್ತು (?) ಮಲಗಿದ್ದಾಳೆ. ರಂಗಣ್ಣನ ಹೆಂಡತಿ ಒಳಗೆ ಕೆಲಸ ಮಾಡುತ್ತಿರುವುದು ಭಾಂಡಿಯ ಸಪ್ಪಳದಿಂದ ಗೊತ್ತಾಗುತ್ತದೆ.)

ರಂಗಮ್ಮ :— ರಂಗೂ! ಇನ್ನೂ ಎಷ್ಟೋತ್ತವ್ವಾ ನಾ ಬದ ಕೂದು? ರಂಗಣ್ಣ ಹೋದಾವಾ ಅತ್ತಲಾಗs ಹೋದನಲಾ! ಅವಂದರ ಏನ ತಪ್ಪು? ಖರೇ ಅಂದ್ರ ಸತ್ತಿದ್ರ ಏನಾರs ಗಡಿಬಿಡಿ ಮಾಡ್ಯಾನು!

ರಂಗಣ್ಣ :— (ತೇಕುತ್ತ) ಏ! ಏ! ಏssss! ಹುರ್ರಾ ... ಹುರ್ರಾ....ಅವ್ವಾ... ಘಾತಾತು! ಏ ... . ಏ .... .. ss

ರಂಗೂ :— (ಒಳಗಿನಿಂದ) ಇಷ್ಟ್ಯಾಕೆ ಬಡಕೋತೀರಿ, ಖರೇ ಅಂದ್ರ ಘಾತ ಆದವರಾಂಗ? ಸುಳುಸುಳ್ಳೇ ಸತ್ತರೂ ಘಾತ ಆಗತದೇನು? ನಿಮ್ಮ ಮಾತನಕಾ ತಿಳಿಯೂ ಹಂಗಿಲ್ಲ ನಮ್ಮವ್ವಾ!

ರಂಗಣ್ಣ :—(ಅತ್ತಿತ್ತ ಓಡಾಡುತ್ತ) ಹುರ್ರ .... ಹುರ್ರ ... ಏ ಅವ್ವಾ! ನಿಮುಕಬ್ಯಾಡಾ, ಬಂದರು ...ಬಂದರು ...

ರಂಗೂ :— (ಹೊರಗೆ ಬರುತ್ತ) ಇಲ್ಲಾ ಸ್ಯಾಕ ಕರಕೊಂಡು ಬಂದ್ರಿ ಅವರನ್ನ? ಅಲ್ಲೇ ಡಡ್ಡಿಮನ್ಯಾಗ ಚಲ್ಲಿಸರಲಾ!

ರಂಗಣ್ಣ :— ಏ! ಮಾತು ಬಂದುಮಾಡು .ಅವ್ವಾ . ಅವ್ವಾ ...ಏನು ಬಂತವ್ವಾ ಕಾಲ!

ರಂಗೂ :—
ರಂಗಮ್ಮ :— } ಏ ನಾ ತೂ ?

ರಂಗಣ್ಣ :—(ಇಬ್ಬರ ಮುಖದ ಮೇಲೂ ಕೈಯಿಡುತ್ತ ಒಳಗಿನ ಸಿಯಲ್ಲಿ) ಬಂದರು ಅವ್ವಿ. ನೀ ಸತ್ತದ್ದನ್ನ ಖಾತ್ರಿಮಾಡಕೊಳ್ಳಲಿಕ್ಕೆ ಸ್ವತಃ ಸಾಹೇಬರೇ ಬಂದ್ರು ... ಸಾಯಿ ....ಅವ್ವಾ .ಲಗೂನs ಸಾಯಿ....ಛೆ....ಛೇ....ಏಳಬ್ಯಾಡವ್ವಾ. (ಅವಳನ್ನು ಬಿಗಿಯಾಗಿ ಹಿಡಿದು) ಅಯ್ಯಯ್ಯೋ! .... ಬಂದರು! ಏ! ಅಳೂ .... ಜೋರಲೇ ಅಳು! ನಿಮ್ಮವ್ವ ಸತ್ತಂಗ ಅಳು....(ಸ್ವತಃ ತಾನೂ) ಅಯ್ಯೋ . .... ಅವ್ವಾ! (ಎಂದು ಅಳಹತ್ತುವನು.)

(ಮುಂದುಕಿ ನಡುವೆ ಗಂಡ-ಹೆಂಡರು ಅತ್ತ ಇತ್ತ. ಸಾಹೇಬರು ಮೊಗಸಾಲೆಯು ಬಾಗಿಲ ಹತ್ತಿರ ಪ್ರವೇಶ).

ರಂಗಣ್ಣ :—(ಒಳ್ಳೇ ಜೋರಿನಿಂದ) ಅವ್ವಾ! ಅವ್ವಾ! ನಿನ್ನ ನೋಡಲಿಕ್ಕೆ ಸಾಹೇಬರs ಬಂದಾರವ್ವಾ! ದೊಡ್ಡ ಸಾಹೇಬರವ್ವಾ! ಬಾಳಾ ದೊಡ್ಡ ಸಾಹೇಬರೂ....ಅವ್ವಾ....ಅವ್ವಾ.....

ರಂಗಮ್ಮ :— [ಮಲಗಿದಲ್ಲಿಂದ] ಅವರ್ಯಾಕ ಬಂದರೋ ಬಾಳಾ! ನಾ ಖರೇ ಅಂದ್ರ ಸತ್ತೀನಿ ಅಂತ ಹೇಳಿ ಅತ್ತಲಾಗs ಕಳಸಿ ಬಿಡಲಾ, ನಿಂದ್ರು ನಾನs ಬೇಕಾದರ ಆ ಮಾತ ಹೇಳತೀನಿ. (ಏಳಲಿಕ್ಕೆ ಪ್ರಯತ್ನಿಸುವಳು)

ರಂಗಣ್ಣ :— [ಕಕ್ಕಾಬಿಕ್ಕಿಯಾಗಿ] [ಒಳ್ಳೇ ಜೋರಿನ ದನಿಯಲ್ಲಿ] ಅವ್ವಾ! ಅವ್ವಾ! [ಅವಳ ಕಿವಿಯ ಹತ್ತಿರ ಬಾಯಿ ಬಯ್ದು ಮೆಲ್ಲನೆ] ಅವ್ವಾ! ನೀ ಸತ್ತೀದಿ! ಸತ್ತವರು ಮಾತನಾಡಬಾರದು! ಸುಮ್ಮಗ ಮಲಕೋ ಒಂದು ಗಳಿಗಿ.. ಅವ್ವಾ! ಸಾಹೇಬರ! ನಿನ್ನೆ ಎಂಥಾ ಗಟ್ಟಿಮುಟ್ಟಿ ಇದ್ದಲ್ರೀ ನಮ್ಮವ್ವಾ! [ಹೆಣದ ಮೇಲೆ ಬೀಳುವನು.]

ರಂಗಯ್ಯ :—[ಸಂಶಯದಿಂದ] ಇದೇನಿದು....ಆಗಳೇ ಮೂರನೇ ದನಿಯೊಂದು ಆದಂತಾಯಿತೂ. [ಏನ್ನುತ್ತ ಮುಂದೆ ಬರಹತ್ತುವನು.]

ರಂಗಣ್ಣ :— [ತಡೆಯುತ್ತಲೆ] ನೂರನೇ ದನಿ ಇಲ್ಲ; ನಾಲ್ಕನೇ ದನೀ ಇಲ್ಲ! ಇಲ್ಯಾಗೂದು ಒಂದೇ ದನಿ ಸಾಲೇಬರ ... ಹಾಂ! ...ಮುಂದ ಬರಬ್ಯಾಡ್ರಿ ಸಾಹೇಬರ! [ರಂಗಯ್ಯ ಮುಂದೆ ಬರಲು ಬಿಡ್ಡನೇ ಹಾರಿ ಅವನನ್ನು ಸಂಸುತ್ತ] ಸತ್ತ ಬ್ರಾಹ್ಮಣರ ಮನ್ಯಾಗ ಹೆಣದ ಹತ್ತರ ಬೂಟಗಾಲಿಲೇ ಬಂದಬಾರದು ಸಾಹೇಬರ . ನಮ್ಮವ್ವಂದು ಕಾತಿಗೆ ಹೋಗಿ ಬಂದ ಹೆಣಾ [ಎನ್ನುತ್ತ ಹೆಣದ ಹತ್ತರ ಬಂದು] ಅವ್ವಾ! ಅವ್ವಾ!

ರಂಗಮ್ಮ ಹೋದರೇನೋ ಬಾಳಾ!

ರಂಗಣ್ಣ ಅವನ ಬಾಯಿಯನ್ನು ಗಟ್ಟಿಯಾಗಿ ಹಿಡಿಯುವಾಗ, ಕಾಳಪ್ಪ ಸರ್ರನೆ ಬಂದು ನೋಡುವನು.

ಕಾಳಪ್ಪ : — ರಾಯರ! ಬ್ರಾಂಬ್ರ ಮಂದ್ಯಾಗ ಸತ್ತ ಹೆಣಗೋಳೂ ಒಮ್ಮೊಮ್ಮೆ ಮಾತಾಡೂಹಂಗ ಕಾಣ್ತೈತಿ!

ರಂಗಮ್ಮ :— ರಂಗೂ! ಬ್ಯಾಳಿ ಹೊತ್ತಿದಂಗ ನಾತ ಬರಲಿಕ್ಕೆ ಹತ್ತೈದಲಾ; ಹೋಗಿ ಒಂದಿಷ್ಟು ನೀರು ಹಾಕಿ ಬಾ. ರಂಗಣ್ಣಾ ! ಎಷ್ಟ ಅಂತಃಕರಣವಾ ನಿಮದು; ಖರೇ ಅಂದ್ರ ನಾ ಸತ್ತಿದ್ರ ಎಷ್ಟ ಅಳತಿದ್ಯೋ ಮಗನ!

ರಂಗಣ್ಣ ಉಪಾಯಹೀನನಾಗಿ 'ಅವ್ವಾ!' ಎನ್ನುವಾಗ)

ರಂಗೂ:— ಮೊದ್ವನರು ಮನಿಗೆ ಬಂದಾಗ ಇದೇನಿದು ಅವ ಲಕ್ಷಣಾ! ಛಾ ತಗೋತಾನೆನು ಕೇಳ್ರೆಲಾ?(ಎನ್ನುತ್ತ ಒಳಗೆ ಹೋಗುವಳು)

ರಂಗಮ್ಮ:— ಸತ್ತವರ ಮನ್ಯಾಗ ಛಾ ಏನು ತಗೋತಾರ? (ಎಂದು ತಪ್ಪಿನೆ ಎನ್ನುತ್ತ ಕೂಡುವಳು.)

[ಕಾಳಪ್ಪ ಹೌಹಾರಿ ಹಿಂದೆ ಸರಿಯುವನು; ರಂಗೂ ಒಳಗಿನಿಂದ ಚಹದ ಬಟ್ಟಲವನ್ನು ತರುವಳು. ರಂಗಯ್ಯ ನಿರ್ವ್ಯಾಪಾರನಾಗಿ ರಂಗಮ್ಮನನ್ನು ನೋಡುತ್ತ ಒನ್ಮೆಲೆ]

ರಂಗಯ್ಯ :— ಸತ್ತವರು ಯಾರು? (ಎಂದು ಚೀರುವನು)

[ಕೃಪೇಣ ಪ್ರತಿವ್ಯನಿಯಂತೆ ಒಬ್ಬರ ತರುವಾಯ ಒಬ್ಬರು ಅದನ್ನೇ ನುಡಿಯುವಾಗ]

[ತೆರೆ]

ಹರಟೆ ಎಂಬ ಹರಟೆ

(ನಿಮರ್ಶಾತ್ಮಕ ಲಘುಪ್ರಬಂಧ)

ಶ್ರೀ. ವಿ. ಎಂ. ಇನಾಮದಾರ ಎಂ. ಎ. ಮುಂಬಯಿ

"ಹರಟೆಗೇನು, ತಳವಿಲ್ಲ, ಬುಡವಿಲ್ಲ" ಎಂಬುದೊಂದು ವಾದಿಕೆಯ ಮಾತಾಗಿ ಹೋಗಿದೆ. ಇದರರ್ಥ ಹರಟೆಗೆ ಯಾವ ವಿಷಯವೂ ಇರುವುದಿಲ್ಲವೆಂದಲ್ಲ. ವಿಷಯ ಒಂದೇ ಆಗಿರುವುದಿಲ್ಲ. ಇಷ್ಟೇ, ನಿರ್ದಿಷ್ಟವಾದ ವಿಷಯ ವೊಂದನ್ನಿಟ್ಟುಕೊಂಡು ನಾಲ್ಕು ಜನ ಗೆಳೆಯರು ಹರಟೆಗೆಂದು ಕುಳಿತರೆ. ಅಲ್ಲಿ ನಿಜವಾದ ಹರಟೆಗೆ ಅವಕಾಶವೇ ಉಳಿಯುವುದಿಲ್ಲ. ಅಲ್ಲಿ ನಡೆಯಬಹುದಾದದ್ದು ಚರ್ಚೆಯಾಗಬಹುದು: ಇನ್ನೇನೋ ಆಗಬಹುದು. ಹರಟೆ ರಸವತ್ತಾಗಿ ಬೆಳೆಯಬೇಕಾದರೆ ವಿಷಯದ ಬಗೆಯಲ್ಲಿ ಯಾವ ಕಂಟ್ರೋಲೂ ಅಲ್ಲಿ ಇರಕೂಡದು! ಎಂದರೆಯೇ ಹರಿಯಬಲ್ಲದು ಹರಟೆಯ ಪ್ರವಾಹ. ನಿರ್ಗಳವಾಗಿ ಯಾವುದಾದರೊಂದು ಪ್ರಸಂಗದಲ್ಲಿ ನಾವೆಲ್ಲರೂ ಹರಟೆ ಹೊಡೆದೇ ಹೊಡೆಯುತ್ತೇವೆ. (ಕನ್ನಡಿಗರಾದ ನಾವು ಈ ಕಲೆಯಲ್ಲಿ ಒಳ್ಳೆ ಗಟ್ಟಿಗರು. ಇಂದಿನ ಸುಟ್ಟಿಗೆ ಇನ್ನೇನನ್ನೂ ಸಾಧಿಸಿರದಿದ್ದರೂ ಈ ಬಗೆಯಲ್ಲಿ ನಮ್ಮನ್ನು ಸಮೀಪಿಸುವವರು ತೀರ ಕಡಮೆ ಜನವೆಂಬುದು ಸಾಮಾನ್ಯವಾಗಿ ಒಪ್ಪಬಲ್ಲ ವಿಷಯವೆಂದು ತೋರುತ್ತದೆ) ಯಾವುದಾದರೊಂದು ಇಂಥ ಹರಟೆಯ ಸಂದರ್ಭವನ್ನು ನಾವು ನೆನೆದುಕೊಂಡರೆ, ಆ ಹರಟೆಯ ಕಾಲಾವಧಿಯಲ್ಲಿ ನಾವು ಚರ್ಚಿಸಿದ ವಿಷಯಗಳು ಎಷ್ಟು, ಎಂಥವು ಎಂಬ ವಿವರಗಳ ಲೆಕ್ಕ ಹಾಕಿದರೆ, ನಾವೇ ಆಶ್ಚರ್ಯಪಡುವಂತಾಗುತ್ತದೆ. ಸುಮಾರಾಗಿ ಒಂದು ಗಂಟೆ ಅವಧಿಯಲ್ಲಿ ನಾವು ಎರಡು ಸಲವಾದರೂ ಭೂಪ್ರದಕ್ಷಿಣೆಯನ್ನು ಮಾಡಿರುತ್ತೇವೆ. ಮಾಂಟ್ರಿಯಾಲ್‌ದಿಂದ ಮಂಗಸೂಳಿಯವರೆಗಾಗಲಿ, ಲಂಡನ್ನಿನಿಂದ ಟೋಂಬಾದ ವರೆಗಾಗಲಿ ನಮ್ಮ ಹರಟೆ ಹೆಚ್ಚುಕಡಮೆ ಕೆಲವಾರು ನಿಮಿಷಗಳಲ್ಲಿ ಮಾತ್ರ ಪ್ರಯಾಣ ಬೆಳಸುತ್ತದೆ. ಅತಿವೇಗವಾದ ವಿಮಾನವೂ ಈ ಹರಟೆಯ ವೇಗದ ಮುಂದೆ ತಲಬಾಗಬೇಕು. ಈ ಕ್ಷಣದಲ್ಲಿ ರೂಜ್‌ವೆಲ್ಟನ ಜೊಡ್ಡಸ್ತಿಕೆಯನ್ನು ಕುರಿ ಮಾತನಾಡುತ್ತಿರುವ ನಾವು, ಇನ್ನೈದು ನಿಮಿಷಗಳಲ್ಲಿಯೇ ಗುಡಿಯ ಗುಂಡಾಚಾರಿಯ ಗಡ್ಡದ ವಿಷಯವಾಗಿ ಟೀಕಾಸ್ತ್ರಗಳನ್ನು ಎಸೆಯುತ್ತಿರುತ್ತೇವೆ. ಹಿರೋಹಿಟೋ ಪಿಟ್ಲರಾದಿ ಪ್ರಭೃತಿಗಳು ಹತ್ತು ನಿಮಿಷಗಳಲ್ಲಿ ಹದಿನೆಂಟುಸಾರೆ ಯಾದರೂ ಬಂದುಹೋಗುತ್ತಾರೆ. ಚರ್ಚಿಲ ಸಾಹೇಬನ ಜೀರೊಟಿನಿಂದ ಮೊದಲಾಗಿ ಚಂಚಲಾ 'ಅಗರಬತ್ತಿ'ಗಳ ವರೆಗೂ ಸಾಗಬಹುದಾದ ಈ ಹರಟೆಯ ಪ್ರಪಂಚವ್ಯಾಪಕತ್ವ ತನ್ನ ದಾರಿಯಲ್ಲಿ ಕಾಮನ್ಸ್ ಸಭೆಯನ್ನೂ ಕಾಂಗ್ರೆಸಿನ ಅಧಿವೇಶನವನ್ನೂ, ಅಟಮಿಕ್ ಬಾಂಬನ್ನೂ ಅಹಿಂಸಾ ತತ್ತ್ವವನ್ನೂ ಎಳೆದುಕೊಂಡು ಮುನ್ನುಗ್ಗುತ್ತಿರುತ್ತದೆ. ಇದರರ್ಥ ಇಷ್ಟೇ: ಹರಟೆಗೆ ಇಂಥದೇ ವಿಷಯವಿರಬೇಕೆಂಬ ನಿಯಮವಿಲ್ಲ. ಇಡೀ ಜ್ಞಾನ ಪ್ರಪಂಚವೇ ತನಗೆ ಅಭ್ಯಾಸವಿಷಯ ವೆಂದು ಬೇಕನ್‌ನು ಹೇಳಿದನಂತೆ. ಹರಟೆಗಾರ ಅವನಿಗೂ ಮೇಲು ಎಂದು ತೋರುತ್ತದೆ. ಅವನ ಹರಟೆ ಅಕ್ಷಾಂತ ವಿಷಯಗಳಿಗೂ ಸಂಬಂಧಿಸಿರಬೇಕೆಲ್ಲದೆ, ಕಲ್ಪನಾ ಪ್ರಪಂಚದಲ್ಲಿಯೂ ಅವನಿಗೆ ಸ್ವೀ ಪಾಸ್-ಪೋರ್ಟು! ಆದುದರಿಂದ ಹರಟೆಯಲ್ಲಿ ವಿಷಯಕ್ಕಿಂತ ಹರಟೆಯನ್ನು 'ಹೊಡೆಯುವು' ದಕ್ಕೇ ಪ್ರಾಧಾನ್ಯ ಹೆಚ್ಚು. ಕೆಲವೊಂದು ವೇಳೆ ಹರಟೆ ನೀರಸವಾಗಿ ನಿಂತುಹೋಗುವುದುಂಟು. ಬ್ರಹ್ಮಾಂಡವೇ ಬಾಯಿತೆರೆದು ಹರಟೆಗೆ ವಿಷಯವಾಗಿ ಮುಂದೆ ನಿಂತಾಗಲೂ ಹರಟೆಯು ಕುಂಟುತ್ತ ಸಾಗಬಹುದು. ಅದರ ಹೊಣೆಗಾರಿಕೆಯನ್ನು ನಾವು ಹರಟೆ ಹೊಡೆಯುವವನಪಲ್ಲಿಯೆ ಹುಡುಕಬೇಕು.

ಈ ಮಾತು ಬಾಯಿಂದ 'ಹೊಡೆದ' ಹರಟೆಗೆ ಅನ್ವಯಿಸುವಂತೆ ಕೈಯಿಂದ ಬರೆದ ಹರಟೆಗೂ ಅನ್ವಯಿಸುವುದು. ವಿಷಯದ ಮೇಲೆ ಯಾವ ತೆರದ ನಿಯಂತ್ರಣವೂ ಇರುವುದಿಲ್ಲ. ಸೋಡಾವಾಟರಿನಂತೆ ಸಚ್ಚಿದಾನಂದದವರೆಗೆ ಸಾಗಬಹುದು. ಆದರೆ ಬಾಯಹರಟೆಯಂತೆ ಬರೆದ ಹರಟೆಯಲ್ಲಿಯ ಸ್ವಾರಸ್ಯವಾದರೂ ಹರಟೆ ಹೊಡೆಯುವವನ ಯೋಗ್ಯತೆಯನ್ನೆ ಅವಲಂಬಿಸುವುದುಂಟು. ವಿಷಯ ಮುಖ್ಯವಾಗಿರದೆ ಮೊದಲುಮಾಡಿದ ವಿಷಯವನ್ನೆ ಬೇಸರಬಾರದಂತೆ ಮುಂದೆಳೆದೊಯ್ಯುವುದೇ ಮುಖ್ಯವಾದ ಅಂಶವಾಗಿರುತ್ತದೆ. ಹರಟೆಗಾರನಿಗೆ ಕಟ್ಟು-ನಿಟ್ಟುಗಳೇನಾದರೂ ಇದ್ದರೆ ಆತ ಬೇಸರವನ್ನು ದೂರವಾಗಿರಿಸಲೇಬೇಕು ಬುದ್ಧಿಯಿಂದೇ. ಓದರ ಕಳೆಯಬೇಕೆಂದು 'ಹೊಡೆದ' ಅಥವಾ ಬರೆದ ಹರಟೆ ಬೇಸರವನ್ನು ಉಂಟುಮಾಡುವಂತಹದಾದರೆ, ಅದಕ್ಕೆ ಸಮರ್ಥನೆಯೇ ಇಲ್ಲ. "ಹಾಳು ಹರಟೆ ಕೈಯಲ್ಲಿ ಪರಟೆ" ಎಂದು ಹೇಳುವುದು ಇಂಥ ಹರಟೆಯ ವಿಷಯವಾಗಿ ಎಂದು ತೋರುತ್ತದೆ.

ಈ ಮಾತಿನ ಮೂಲಕವಾಗಿಯೇ ಬಾಯಿ ಹರಟೆಗೂ ಬರೆವ ಹರಟೆಗೂ ಇರಬಹುದಾದ (ಇರಬೇಕಾದ) ವ್ಯತ್ಯಾಸವನ್ನು ಸೂಚಿಸಬಹುದಾಗಿದೆ. ಸಾಮಾನ್ಯವಾಗಿ ಬಾಯ ಹರಟೆ ಹೊತ್ತುಗಳೆಯುವ ಹಂಬಿಕೆ. ಬರೆದ ಹರಟೆಯಾದರೂ ಆಸ್ಪೇ; ಆದರೆ ಅದರಲ್ಲಿಯೂ ಒಂದು ವಿಶೇಷವಿದೆ. ಹೊತ್ತುಗಳೆಯಲಿಕ್ಕೆ ಆಮೊಂದು ಸಾಧನವಾಗಬಹುದಾದರೂ, ಅದರ ಜೊತೆಯಲ್ಲಿ ಇನ್ನೂ ಒಂದು ಉದ್ದಿಷ್ಟವನ್ನು ಸಾಧಿಸಬಲ್ಲದು. ಯಾವ ಓದೂ ಹೊತ್ತನ್ನು ಕಳೆಯಬಲ್ಲದು; ಆದರೆ ಒಳ್ಳೆಯದಾಗಿ ಬರೆದ ಹರಟೆಯನ್ನು ಓದಿದಾಗ ಕಳೆದ ಹೊತ್ತಿನ ಪ್ರತಿಫಲವಾಗಿ ಪತ್ತಾರು ವಿಷಯಗಳ ಬಗೆಯಲ್ಲಿ, ನಮ್ಮ ಸುತ್ತುಮುತ್ತಿನ ಪರಿಸರದ ವಿಷಯದಲ್ಲಿ, ಒಂದು ತೆರದಿಂದ ಸೂಕ್ಷ್ಮವಾದ ಪರಿಜ್ಞಾನ ಸಿಕ್ಕುವುದು ಸಾಧ್ಯವಿರುತ್ತದೆ. ಯಾವ ಗಹನವಾದ ವಿಚಾರವನ್ನು ಕುರಿತೂ ಗಹನವಾದ ಚರ್ಚೆ ನಡೆಯುವುದಿಲ್ಲವೊ ಮಾತು ಗಹನವಲ್ಲದ ರೀತಿಯಲ್ಲಿ ನಡೆದರೂ ಗಹನವಾದ ವಿಚಾರಗಳ ಸುಳುವು-ಹೊಳಪುಗಳು ಅಲ್ಲಲ್ಲಿ ಕಾಣಿಸಿಕೊಳ್ಳದೆ ಇರುವುದಿಲ್ಲ. ಕಗ್ಗತ್ತಲಿನಲ್ಲಿ ಕೊರೆದ ಕಡ್ಡಿಯ ಬೆಳಕಿನಷ್ಟಾದರೂ ಬೆಳಕನ್ನು ಬಾಳ ಬಗೆಗಳ ಮೇಲೆ ಬೀರಿ ಹರಟೆಯು ಚೆಲ್ಲಬಹುದು. ಬಾಯ ಹರಟೆಯಲ್ಲಿ ಹರಿದದ್ದು ಹಳ್ಳ, ನಿಂತದ್ದು ತೀರ್ಥ

ಬರೆದ ಹರಟೆ ಹಳ್ಳವಾಗಿ ಹರಿಯಬಲ್ಲುದಾದರೂ ಎಲ್ಲಿಯಾದರೂ ತೀರ್ಥವಾಗಿ ನಿಂತೇ ನಿಲ್ಲುವುದು. ಒಂದು ಬದುಕಿನಂತೆ ಅನಂತ; ಇನ್ನೊಂದು ಕಲೆಯಂತೆ ಆನಂದ-ಬೋಧ-ಕ್ರಿಯೆ.

ಹರಟೆ ಬಾಳ ಬಗೆಗಳ ಮೇಲೆ ಬೆಳಕನ್ನು ಚೆಲ್ಲದಿರುವಂತಹದಾದರೆ ಆದು ಹಾಳು ಹರಟೆ ಆಗಬಹುದು. ಎಂದರೆ ಹರಟೆಗೂ ಒಂದು ಉದ್ದಿಷ್ಟವಿರಬೇಕೆಂದಾಯಿತು. ಆದರೆ ಈ ಉದ್ದಿಶ್ಯ ಹರಟೆಯನ್ನು ಬರೆಯಲಾರಂಭಿಸಿದಾಗ ಬರೆಹಗಾರನಿಗೂ ಸ್ಪಷ್ಟವಾಗಿರುತ್ತದೆಯೋ ಇಲ್ಲವೋ ಹೇಳಲಾಗುವುದಿಲ್ಲ. ಬರೆಹ ಮುಂದುವರಿದಂತೆ, ಹತ್ತಾರು ವಿಷಯಗಳನ್ನು ಹರಟೆಗಾರನ ಮನಸ್ಸು ಸುತ್ತಿಕೊಂಡು ಬಂದಾಗ, ಆವನಿಗೆ ತಿಳಿದೋ ತಿಳಿಯದೆಯೋ, ಅವನ ವಿಮರ್ಶಾದೃಷ್ಟಿ ಅಲ್ಲಲ್ಲಿ ವ್ಯಕ್ತವಾಗುವುದು. ನಮ್ಮ ಬೇಕು-ಬೇಡಗಳಿಗೆ ಸರಿಯಾಗಿ ನಮ್ಮ ಮಾತು ಮುಂದುವರಿಯುತ್ತಿದ್ದಾಗ, ಕೆಲವು ವಿಷಯಗಳಲ್ಲಿ ನಾವು ಟೀಕಾತ್ಮಕವಾದ ಧೋರಣೆಗಳನ್ನು, ಕೆಲವು ವಿಷಯಗಳಲ್ಲಿ ಒಪ್ಪಿಗೆಯ ಬಲವನ್ನು ತೋರಿಸುವುದು ಅನಿವಾರ್ಯವಾದದ್ದು. ಹೀಗೆ ಒಮ್ಮೆ ಒಪ್ಪಿಗೆಯಲ್ಲಿಯಾದರೆ ಇನ್ನೊಂದು ವೇಳೆ ಅಸಮ್ಮತಿಯಲ್ಲಿ, ಹರಟೆ ಹೊದೆಯುವವರು ಬದುಕಿನ ಬೇರೆ ಬೇರೆ ವಿಷಯಗಳಲ್ಲಿ ತಮ್ಮ ದೃಷ್ಟಿಯನ್ನು ಸ್ಪಷ್ಟಪಡಿಸುವುದರಿಂದಲೇ ಹರಟೆಗೊಂದು ಉದ್ದಿಷ್ಟದ ಬೆನ್ನೆಲಬು ದೊರೆಯುವುದು. ಈ ಉದ್ದಿಷ್ಟ ಹೆಚ್ಚುಕಡಿಮೆ ಕೆಲವು ಮಾತುಗಳಿಂದ ಊಹಿಸಲ್ಪಡಬೇಕಾದುದರಿಂದ, ಅದು ಯಾವಾಗಲೂ ಸೂಚ್ಯವಾಗಿದ್ದು ಒಂದು ಸಿದ್ಧವಾದ ಪ್ರಮೇಯದಂತೆ ಎತ್ತಿ ಹೇಳಿರುವುದಿಲ್ಲ. ಆರುವತ್ತೊಂದು ವರ್ಷದ ಅಜ್ಜನೊಬ್ಬನು ಹದಿನಾರು ವರ್ಷದ ಹರೆಯದವಳನ್ನು ಹೆಂಡತಿಯನ್ನಾಗಿ ಮಾಡಿಕೊಂಡಾಗ ಆತ 'ಕಲಪ' ಬಳಿದ ವಿಾಸೆಗಳನ್ನು ತಿದ್ದುತಿದ್ದಾಗ,ಸೊಂಟ ನೋಯುತ್ತಿದ್ದರೂ ನೆಟಿದು ನಡೆಯಲು ಹವಣಿಸುತ್ತಿದ್ದಾಗ, ಕುಲದೀಪಕನ ಬರವಿಗಾಗಿ ಮಕರಧ್ವಜ ಗುಟಿಯನ್ನು ಇನ್ನಾವುದನ್ನೋ ಮೊರೆಹೊಕ್ಕಾಗ, ಹರಟೆಗೆ ಒಂದು ರಸವತ್ತಾದ ವಿಷಯ ದೊರಕುವುದಲ್ಲದೆ, ಹರಟೆಯ ಮೂಲಕ ಇಂಥ ನೋಗಿನ ಬದುಕಿನ ವಿಷಯವಲ್ಲಿ ಸಾಮಾಜಿಕ ದೃಷ್ಟಿಕೋನವನ್ನು ಸ್ಪಷ್ಟವಾಗಿ ಹೇಳುವುದೂ ಸಾಧ್ಯವಾಗುವುದು. ಅಲ್ಲಿ ಸ್ಪಷ್ಟವಾದ ವಿಮರ್ಶೆಯನ್ನಾಗಲಿ, ಮುಂಗಾಣಿದ ದೃಷ್ಟಿಕೋನವನ್ನಾಗಲಿ ಎಲ್ಲರೂ ಒಪ್ಪಲೇ ಬೇಕೆಂಬ ನಿಯಮವಿಲ್ಲ. ಇವು ಹರಟೆಗಾರನಿಗೆಯೇ ವಿಶಿಷ್ಟವಾದ ಅಭಿಪ್ರಾಯಗಳು. ತನಗೆ ಆ ಕ್ಷಣದಲ್ಲಿ ತೋರಿದ್ದನ್ನು, ಸುಸ್ತುನುತ್ತಲಿನ ವಿಷಯಕ್ಕೆ ಸರಿಯಾಗಿ, ಮನರಂಜನೆಯಾಗುವಂತೆ ಯೋಜನೆಗೆ ಹೊಳಿಪ ಸಾಲು ಮಾತುಗಳನ್ನು ಹರಟೆಗಾರ ಹೇಳುವನು. ಅಲ್ಲಿ ಅವನು ವಾಚಾಳಿಯೂ ಅಲ್ಲ; ತತ್ತ್ವಜ್ಞಾನಿಯೂ ಅಲ್ಲ. ಒಳ್ಳೊಳ್ಳೆ ಮಾತುಗಳನ್ನು ಉದುರಿಸುವ ಬುಡಬುಡಕೆಯವನೂ ಅಲ್ಲ. ಪಾಂಡಿತ್ಯದ ಬಿಗುವಿನಲ್ಲಿ ಮಾತಿಗೆ ಬಾಗಿ ಬಿಗಿದ ಮೂಕ ಒನವನು ಅಲ್ಲ. ಹರಟೆಗಾರ ಇವರಿಬ್ಬರಿಗೂ ನಡುವೆ ನಿಂತು ಹುಟ್ಟಿಸಿಕೊಳ್ಳುವ ಮಾತುಗಾರಿಕೆಯನ್ನು ಇನ್ನೊಬ್ಬನಿಂದ ಕೇಳಿಸಿಕೊಳ್ಳುವ ಕಲೆಯನ್ನು ತನ್ನಲ್ಲಿ ತಂದುಕೊಂಡು, ಈ ಕಲೆಯನ್ನೇ ಜೀವನವಾಗಿಸಿಕೊಂಡಂತೆ ತನ್ನೆದುರಿನ ಶ್ರೋತೃವರ್ಗದ ಮೇಲೆ ಎಸೆಯುತ್ತಾನೆ. ಅಲ್ಲಿ ಅರ್ಥಪೂರ್ಣ ಮಾತುಗಾರಿಕೆಯ ಮಾಯಾ ಜಾಲವನ್ನು ಸಿಲುಕಿಸುತ್ತಾನೆ. ಮಾತುಗಾರಿಕೆಗೆ ಸುಸಂಸ್ಕೃತರು ಅರ್ಹತೆಗೆ ಎರವಾಗಬಹುದು. ಆದರೆ ಮಾತುಗಾರಿಕೆಯಿಲ್ಲದ ಹರಟೆಯಾಗಲಾರದೆಂಬುದನ್ನು ನಾವು ಲಕ್ಷ್ಯಕ್ಕೆ ತಂದರೆ ಹರಟೆಯೂ ಕೂಡ (ಬಳಿದ ಸಾಲ್ಗಳ ಪ್ರಕಾರಗಳಂತೆ) ಹೇಗೆ ಒಂದು "ಪಾಗರ್ಥ ಪ್ರತಿಪತ್ತಿ" ಯಾಗಬಹುದು ಎಂಬುದನ್ನು ಮನಗಾಣಬಹುದು.

ಹರಟೆ ಸುಖವಾಗಿ ಮುಂದೆಸಾಗಬೇಕಾದರೆ ಅಲ್ಲಿಯ ಮಾತಿಗೆ ಹಾಸ್ಯದ ಜೋಡು ಇರಬೇಕು. ಎಲ್ಲ ಹರಟೆಗಾರರಲ್ಲಿ ಹಾಸ್ಯವಿದ್ದೇ ಇರುತ್ತದೆಯೆಂಬ ನಿಯಮವಿರದಿದ್ದರೂ ತನ್ನ ಮಾತುಗಳನ್ನು ಕೇಳುವವರ (ಓದುವವರ) ಕುತೂಹಲವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಇನ್ನಾವ ಸಾಧನವಾದರೂ ಆತನ ಬತ್ತಳಿಕೆಯಲ್ಲಿರಲೇ ಬೇಕು. ಈ ಸಾಧನ ಕೆಲವು ವೇಳೆ ಹಾಸ್ಯವಾಗಬಹುದು, ಕೆಲವು ವೇಳೆ ವರ್ಣನೆಯಾಗಬಹುದು, ಕೆಲವು ವೇಳೆ ಕಥೆ-ಹೇಳುವ ಕೈವಾಡವಾಗಬಹುದು. ಆದ್ದರಿಂದ ಹರಟೆಗಾರ ಕಥೆಯನ್ನೂ ಹೇಳಬಲ್ಲವನಾದ ಕಥೆಗಾರನಾಗಿರಬಹುದು. ತನ್ನ ಬದುಕಿನಲ್ಲಿಯಂತೆ ಬಳಿವನರ ಬದುಕಿನಲ್ಲಿಯ ಅನುಭವಗಳನ್ನು ಪೆಚ್ಚು-ಕಡಿಮೆಯಾಗಿ ವರ್ಣಿಸಬಲ್ಲ ಕವಿಯೂ ಆಗಿರಬಹುದು. ಆದರೆ ಸಾಮಾನ್ಯವಾಗಿ ಮಾಸ್ಯವಿದ್ದಲ್ಲಿ ಉಳಿದ ಸಾಧನಗಳ ಪೆಟಿಕೆ ತುಂಬಿಸಬೇಕಾಗುವುದಿಲ್ಲ. ರಸವತ್ತಾದ ಹರಟೆ ನಡೆದಾಗ, ಮನೆಯ ಹಂಚ್ಚುಗಳು ಹಾರಿಹೋಗುವಂತೆ 'ಹೊ' ಎಂಬ ನಗೆ, ಹರಟೆಯ ಜೀವಾಳವೆಂದೇ ಹೇಳಬಹುದು. ಹಾಸ್ಯವಿಲ್ಲದ ಹರಟೆ, ಪೆಣಸಿನ ಹಿಂದೆ ಹೋಗುವವರ ಬೆನ್ನಿನ ಮೆಯಲ್ಲಿಯ ತಲ್ಲಣದ ಮಾತಾಗುವುದು ಸುಸ್ಪಷ್ಟವಾಗಿ ಇಲ್ಲಿ ಉಪಮಾನಕ್ಕೆ ಎಡೆಯಿಲ್ಲ. ನಿಯಮಕ್ಕೆ ನಿರ್ಬಂಧವಿಲ್ಲ. ಕಟ್ಟು-ಪಟ್ಟುಗಳು ಇದ್ದೇ ಇರಬೇಕಾದ್ದಿಲ್ಲವಾದುದರಿಂದ ಸೃಷ್ಟಿಕೃತಿಯಾಗಲಿಕ್ಕೆ ಅವಶ್ಯವಾದ ಸಾಮಾನ್ಯ ಕಟ್ಟುಗಳು ಮಾತ್ರ ಇರುವವು. ಸುಮಸುಮವಿದ್ದರೂ ಹರಟೆಯ ರಸವನ್ನು ಇಂಗಿಸುವಂತಹದಲ್ಲ. ಉದ್ದಿಶ್ಯದ ಘೋರಣೆಯಿದ್ದರೂ ಅದು ಹರಟೆಗೆ ಒಂದು ಹಿನ್ನೆಲೆಯಾಗಿ ನಿಂತು, ಅವಕ್ಕೊಂದು ಅನಿವಾರ್ಯವಾದ ಸೂಚನೆಯಿಂದ ಆಭಿಪ್ರಾಯಗಳಿಗೆ. ಜೀವನ್ನು ನೋಡುವ ದೃಷ್ಟಿಗಳಿಗೆ ಜನರ ಮನಸ್ಸಿನೆಡೆಗೆ ನೇರಲು ಒಂದು ಸಾಧನವಾಗುವಂತಿರುತ್ತದೆ. ಅವಕ್ಕಿಂತಲೆ ಹರಟೆಯು ಸಾಹಿತ್ಯವಾದಾಗ ವಿಹಾರಮೊದಲಿನ ವಿಕಾಸವನ್ನು ಸಾಧಿಸುವಲ್ಲಿದ್ದಾಗುತ್ತದೆ.

ಕನ್ನಡನಾಡಿನ ಏಕೀಕರಣದ ಅರಿವಿನ ದೀಪವು, ದೀಪಾವಳಿ ಹಬ್ಬವೆಲ್ಲ
ಕನ್ನಡಿಗರ ಮನೆಮನೆಯಲ್ಲಿಯೂ ಬೆಳಗಲಿ!

ಸಾಹಿತ್ಯವಿಹಾರ

'ವಿಹಾರಿ'

ಕೈಲಾಸಂ ವಿಚಾರ ಮತ್ತೆ ಈ ಸಲವೂ ಬರೆಯಬೇಕು. ಮುಂಬರುವ ಸಾಹಿತ್ಯಸಮ್ಮೇಳನಕ್ಕೆ ಅವರು ಅಧ್ಯಕ್ಷರಾಗಿ ಆರಿಸಿ ಬಂದದ್ದು ಆಶ್ಚರ್ಯವಲ್ಲ. ಅವರು ಅಧ್ಯಕ್ಷರಾಗಲಿಕ್ಕೆ ಒಪ್ಪಿದ್ದು ಮಾತ್ರ ಹೆಚ್ಚಿನ ಆಶ್ಚರ್ಯ. ನಮ್ಮ ನಾಡಿನ ಹಿರಿಯ ಸಾಹಿತ್ಯಸನ್ಮಾನ ಜನರ ಪ್ರೀತಿ ವಿಶ್ವಾಸಗಳಲ್ಲಿ ಅವರಿಗೆಂದಿಗೂ ಲಭಿಸಿದ್ದ. ಈಗ ವರಿಷತ್ತು ಅವರನ್ನು ಈ ರೀತಿ ಗೌರವಿಸುವುದು ಒಂದು ರೀತಿಯ ಸಂಪ್ರದಾಯ ಮಾತ್ರ. ಈ ಮಾನ ಅವರಿಗೆ ಎಂದಿಗೋ ಸಲ್ಲಬೇಕಿತ್ತೆಂದು ಹೇಳಿದರೆ ಸಂಪ್ರಧಾಯದ ಮಾತೆನಿಸೀತು. ಆದರೆ ಈ ತೆರದ 'ದೊಡ್ಡಸ್ತಿಕೆ'ಗೆ ಅವರೆಂದಿಗೂ ಹಂಬಲಿಸಿದವರೂ ಅಲ್ಲ. ವ್ಯಕ್ತಿಯ ಮಾತು ಬೇಡ, ಕೃತಿಯ ಮಾಪು ಬೇಕಾದಷ್ಟು ನಡೆಯಲಿ ಎಂಬುದನ್ನು ಬದುಕಿನಲ್ಲೊಂದು ತತ್ತ್ವವನ್ನಾಗಿಟ್ಟುಕೊಂಡವರಲ್ಲವೆ ಅವರು? ಈಗ ಅವರು ಅಧ್ಯಕ್ಷ ಪದವಿಗೆ ಒಪ್ಪಿದ್ದು ಜನರಿಗೊಂದು ರಿಯಾಯಿತಿ! ಆಂಶೂ ಮದರಾಸಿನ ಸಾಹಿತ್ಯಸಮ್ಮೇಳನ ಅಪೂರ್ವವಾಗುವುದರಲ್ಲಿ ಸಂದೇಹವಿಲ್ಲ. ಭಾಷಣ ಕೂಡ.

× × ×

ಶಂ. ಬಾ. ಅವರ "ಕನ್ನಡ ನುಡಿಯ ಜೀವಾಳ"ಕ್ಕೆ ದೇವರಾಜ ಬಹಾದ್ದೂರ ಬಹುಮಾನ ದೊರಕಿದ್ದು ಹೆಮ್ಮೆಯ ಸಂಗತಿ. ಅವರಿಗೆ ಅಭಿನಂದನೆಗಳಲ್ಲದೆ ಬಹುಮಾನದ ನಿರ್ಣಯಕಾರರಿಗೂ ಅಭಿನಂದನೆಗಳು. ಇತ್ತೀಚೆಗೆ ಶಂ. ಬಾ. ಅವರ ಸಂಶೋಧನೆಗಳು ಮಾನ್ಯತೆ ಪಡೆಯುತ್ತಿರುವಷ್ಟೇ ಪ್ರಮಾಣದಲ್ಲಿ ಕೆಲವರಿಗೆ ತಲೆನೋವನ್ನೂ ಕೊಡುತ್ತಿವೆ. ಕೆಲವರಿಗೆ ಅವುಗಳಲ್ಲಿ ಹೊಸದೊಂದು ಕ್ರಮನೇ ಕಾಣುತ್ತಿದ್ದರೆ ಕೆಲವರಿಗೆ "ವಿಚಿತ್ರ"ವಾಗಿ "ವಿಪರೀತ"ವಾಗಿ ತೋರುತ್ತಿವೆ. ಮುಖ್ಯವಾಗಿ ಶಂ. ಬಾ. ಅವರ ದಾರಿ ಹೊಸದೆಂಬುದನ್ನು ಹೆಸರಿಡಲು ಹಾತೊರೆಯುವ ನಾವು ಮರೆಯುತ್ತೇನೆ. ಶಬ್ದಶಾಸ್ತ್ರ ಅವರಿಗೆ ಅಭ್ಯಾಸವಿಷಯ. ಆದರೆ ಅವರು ಅನುಸರಿಸುವ ರೀತಿ-ಕ್ರಮಗಳು ಬೇರೆ. ಶಬ್ದ ಉತ್ಪತ್ತಿಯನ್ನು ಹುಡುಕುವುದಕ್ಕಿಂತ ಅರ್ಥವನ್ನು ನಿರ್ಣಯಿಸಗಳನ್ನು ಅರಸುವವರು ಅವರು. ಶಬ್ದಗಳನ್ನು ಬರೆಯುವವರು ಹತ್ತು ಜನರಾದರೆ ಅವುಗಳನ್ನು ಪ್ರಯೋಗಿಸುವವರು ನೂರು ಜನ. ಈ ಕಾರಣ ಶಬ್ದದ ಬಾಹ್ಯಸ್ವರೂಪವನ್ನು ಬದಲಾಯಿಸಲಿಕ್ಕೆ ಅಸ್ಪದ ಕಡಮೆ. ಈ ದೃಷ್ಟಿಯಿಂದಲೇ ಇರಲಿ, ಶಬ್ದಕ್ಕಿಂತ ಅರ್ಥವೇ ಮಹತ್ತ್ವದ್ದೆಂಬ ಕಾರಣದಿಂದಲೇ ಇರಲಿ, ಶಂ. ಬಾ. ಅವರು ತಮ್ಮ ಶಬ್ದಸಂಶೋಧನೆಗಳಲ್ಲಿ ಅರ್ಥಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾರೆ. "ಕನ್ನಡ ನುಡಿಯ ಜೀವಾಳ"ದಲ್ಲಿ ಅವರು ಕಾಸಪಾರಿಯನ್ನು ಧೈರ್ಯವಾಗಿ ನೆಟ್ಟಿದ್ದಾರೆ. ಅವರ ಎಲ್ಲ ಸಂಶೋಧನೆಗಳೂ ಎಲ್ಲರಿಗೂ ಗ್ರಾಹ್ಯವಾಗಲೇ ಬೇಕೆಂಬ ಹಟ ಅವರಿಗಿಲ್ಲ. ಕೆಲವು ಅವರ ಸಂಶೋಧನೆಗಳಿರಬೇಕು. ಕೆಲವು ಅವರಿಗೆ ತೋರಿದ ಸಂದೇಹಗಳಿರಬೇಕು. ಅಲ್ಲವುಗಳ ನಿರ್ಣಯವಾಗಬೇಕೆದ್ದಲ್ಲಿ ವಿಷಯವನ್ನು ಅಭ್ಯಾಸ ಮಾಡಿದವರು ಜೆನ್ನಾಗಿ ಚರ್ಚೆ ನಡೆಸಬೇಕು.

× × ×

ಆಂತರ ರಾಷ್ಟ್ರೀಯ ಪಿ. ಈ. ಎನ್. ಸಂಸ್ಥೆಯ ಭಾರತೀಯ ಕೇಂದ್ರನ ಆಶ್ರಯದಲ್ಲಿ ಮೊದಲನೆಯ ಅಖಿಲ ಭಾರತೀಯ ಲೇಖಕರ ಪರಿಷತ್ತು ಜಯಪುರದಲ್ಲಿ ಶ್ರೀಮತಿ ಸರೋಜಿನಿ ನಾಯ್ಡುರವರ ಅಧ್ಯಕ್ಷತೆಯಲ್ಲಿ, ಅಕ್ಟೋಬರ ೨೦–೨೩ರಲ್ಲಿ ನಡೆಯಿತು. ಜಯಪುರದ ದಿವಾಣರಾದ ಸರ್ ಮಿರ್ಝಾ ಇಸ್ಮಾಯಿಲ್ ಅವರು ಆಧಿವೇಶನದ ಉದ್ಘಾಟನೆ ಮಾಡಿದರು. ಭಾರತದ ಬೇರೆ ಬೇರೆ ಸಾಹಿತ್ಯಗಳಲ್ಲಿ ಕಳೆದ ೫೦ ವರ್ಷಗಳಲ್ಲಿಯ ಪ್ರಗತಿಯ ವಿಚಾರದಲ್ಲಿ ಚರ್ಚೆಯಲ್ಲದೆ ಈ ಎಲ್ಲ ಸಾಹಿತ್ಯಗಳು ಭಾರತದ ಸಾಂಸ್ಕೃತಿಕ ಏಕ್ಯವನ್ನು ಸಾರುವಂಥವು ಎಂಬ ಮುಖ್ಯ ವಿಷಯದ ಮೇಲೆ ವಾದ ನಡೆಯಿತು. ಈ ಚರ್ಚೆಯನ್ನು ಪಿ. ಈ. ಎನ್. ಸಂಸ್ಥೆಯ ಉಪಾಧ್ಯಕ್ಷರಲ್ಲಿ ಒಬ್ಬರಾದ ಪಂಡಿತ ಜವಾಹರಲಾಲ್ ನೆಹರು ಅವರು ಪ್ರಾರಂಭಿಸಿ, ಹಿಂದಿ-ಉರ್ದು ಮತಭೇದವನ್ನು ಕುರಿತಾದ ತಪ್ಪು ತಿಳಿವನ್ನು ಗಮನಾರ್ಹವಾದ ರೀತಿಯಲ್ಲಿ ಕಳೆಯಲೆತ್ನಿಸಿದರು. ಸಾಹಿತ್ಯವು ಭಾರತೀಯ ಸಂಘಟನೆಯಲ್ಲಿ ಮುಖ್ಯವಾದ ಶಕ್ತಿಯೆಂಬ ತಮ್ಮ ವಿಶ್ವಾಸವನ್ನು ಅಧ್ಯಕ್ಷಿಣಿಯರಾದ ನಾಯ್ಡು ಅವರಂತೆ ಅವರಾದರೂ ಒತ್ತಿ ಹೇಳಿದರು. ಶೇಫೊಕ್ಲಿಸ್-ಶೇಕ್ಸ್‌ಪಿಯರರ ದುಃಖಾಂತನಾಟಕಗಳ ಶೋಕವನ್ನೂ ಮರೆಯಿಸುವಂಥ ಶೋಕಮಯವಾದ ಇಂದಿನ ಇತಿಹಾಸದ ಉಗ್ರವಾದ ನಾಟಕದೆದುರಿನಲ್ಲಿ, ಮಾನವನಿಗೆ ತನ್ನ ಮಾನವತೆಯನ್ನು ಮೊರೆಹೊಗದ ಹೊರತು ಬೇರೆ ದಾರಿ ಉಳಿಯಲಿಲ್ಲವೆಂದೂ ಈ ಮಾನವತೆಯ ಸಂದೇಶವನ್ನು ಜನರೆದುರು ಸಾಹಿತ್ಯವಲ್ಲದೆ ಇನ್ನಾವುದೂ ಎತ್ತಿಹಿಡಿಯಲಾರದೆಂದೂ ಸರ್ ಮಿರ್ಝಾ ಅವರು ತಮ್ಮ ಭಾಷಣದಲ್ಲಿ ಹೇಳಿದರು.

ಅಖಿಲ ಭಾರತೀಯ ಸಾಹಿತ್ಯಗಳಿಗೂ ಯೋಗ್ಯವಾದ ಮನ್ನಣೆ ಕೊಟ್ಟ ಈ ಸಮ್ಮೇಳನವು ವಿಶೇಷವಾಗಿ ಗೌರವಾರ್ಹವಾಗಿದೆ. ಹೊಸ ಜಗತ್ತಿಗೆ ಭಾರತದಲ್ಲಿ ಸಾಹಿತ್ಯದ ಬೆಳಸು ಎಷ್ಟು ವಿಧವಾಗಿ ಬೆಳೆದು ಬರುತ್ತಿದೆ ಎಂಬುದನ್ನು ತೋರಿಸಲು ಇದು ಹೆಚ್ಚಾಗಿ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ. ಆಯಾ ಭಾಷೆಗಳಲ್ಲಿಯ ಸಾಹಿತ್ಯಗಳಲ್ಲಿಯ ಪ್ರಗತಿಯನ್ನು ಕುರಿತಾದ ಲೇಖನಗಳನ್ನು ಒರೆ ಬೇರೆ ವಿದ್ವಾಂಸರಿಂದ ಬರೆಯಿಸಿಕೊಳ್ಳಲಾಗಿದ್ದು ಅವೆಲ್ಲವುಗಳನ್ನು ಪುಸ್ತಕರೂಪವಾಗಿ ಪ್ರಕಟಿಸಲಿದ್ದಾರೆಂದು ತಿಳಿಯುತ್ತದೆ. ಕನ್ನಡದ ಬಗೆಯಲ್ಲಿನ ಲೇಖನವನ್ನು ಪ್ರೊ. ಗೋಕಾಕರವರು ಸಿದ್ಧಪಡಿಸಿದ್ದಾರೆ.

ಸಮ್ಮೇಳನಕ್ಕೆ ದೂರದಿಂದ ಪ್ರತಿನಿಧಿಗಳು, ಅತಿಥಿಗಳು, ಬಂದಿದ್ದಾರೆ. ಸುಪ್ರಸಿದ್ಧ ಕಾದಂಬರಿಯಾದ 'ಭಾರತಮಾರ್ಗ'ದ ಲೇಖಕರಾದ ಇ. ಎಂ. ಫಾರ್ಸ್‌ಟರ್ ಇಂಗ್ಲೆಂಡಿನಿಂದ, ಪ್ರೊ. ಓಲಿವ್ಹರ್ ಲಾಕೊಂಬ್ ಫ್ರಾನ್ಸಿನಿಂದ, ರಾಲ್ಫ್ ಬ್ಲಾಕ್ ಅಮೇರಿಕೆಯಿಂದ, ಪ್ರೊ. ಫಾಂಗ್ ಚೆಂಗಮಿ ಅವರು ಚೀನದಿಂದ ಬಂದಿದ್ದರಲ್ಲದೆ ಹಿಂದುಸ್ಥಾನದ ಸುಪ್ರಸಿದ್ಧ ಸಾಹಿತಿಗಳೆಲ್ಲರೂ ಒಂದೆಡೆಗೆ ಸೇರಿದ್ದರು. ಇದೆಲ್ಲದರ ಶ್ರೇಯಸ್ಸು ಭಾರತದ ಪಿ. ಈ. ಎನ್. ಕೇಂದ್ರ ಸ್ಥಾಪಕರಾದ ಶ್ರೀಮತಿ ಸುಫಿಯಾ ವಾಡಿಯಾ ಅವರಿಗೆ ಸೇರಬೇಕಾದುದು.

ದೀಪಾವಳಿಯ ದಸೆಯಿಂದ

ಶ್ರೀಧೂತಪಾಪೇಶ್ವರ ಪನವೇಲ ಲಿಮಿಟೆಡ್, ಪನವೇಲ:— ಕುಲಾಬಾ.

ಹುಬ್ಬಳ್ಳಿ ಕೇಂದ್ರ:— ಮೇಸರ್ಸ್ ಯುನಾಯಿಟೆಡ್ ಎಜನ್ಸೀಜ್ ಶಿವನಿಕೇತನ

ಧಾರವಾಡ ಕೇಂದ್ರ:— ಎನ್. ಜಿ. ಟಿಕಾರೆ

ದಿ ಯುನಾಯಿಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿನ್ನು ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವದಲ್ಲದೆ, ಹೊಸ ವಿಮಾಕಾಯಿದೆ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವ ರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಂ. ಗೋವರ್ಧನರಾವ್.



ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ

ಹಾಗೆ' ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯ ಕಣ್ಣು ಮೂಗು-ಒಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆ ಇದ್ದರೂ ಅದು ವ್ಯರ್ಥವೆನಿಸುವುದು.

ಮುಕುಲ
ದಿನದಿನವೂ ಉಪಯೋಗಿಸಿರಿ.

ಅದಕ್ಕಾಗಿಯೇ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ತಯಾರಿಸಲಾದ "ಮುಕುಲ" ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗ
ಹುಬ್ಬಳ್ಳಿ ಶಾಖೆ: ಸ್ಟೇಶನ್ ರೋಡು, ಹುಬ್ಬಳ್ಳಿ.

ಚಿತ್ರಾಂಗಿ



ಸವ ಕರ್ನಾಟಕದ
ನಿರ್ಮಾಣಕ್ಕಾಗಿ
ಹೋರಾಡುವ
ಪಾಸ ಪತ್ರಿಕೆಯು

ಡಿಸೆಂಬರ್
೧೯೪೫

ಪ್ರಣತೆ

ಚಿ. ವಿ. ಚಿತ್ತಾಳ
ಆರ್.ಆರ್. ನಾಡಿಗೇರ
ವಿ. ಜಿ. ಶಾನಭಾಗ
ಕೋ. ಚೆನ್ನಬಸಪ್ಪ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿನಗೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಕ
ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆ
ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಋಣ (Claim) ವನ್ನು ಸಲ್ಲಿಸಿರುವ
ರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನು
ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಂ. ಗೋವರ್ಧನರಾವ್

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ
ಹಾಗೆ' ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕ

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬಯಿ ಕಣ್ಣು
ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ
ಏನಾಯಿತು? ತಲೆಗೆ ಕೂದಲು
ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆ
ಇದ್ದರೂ ಅದು ವ್ಯರ್ಥವೆನಿಸುವುದು.

ಮುಕುಲ
ದಿನದಿನವೂ ಉಪಯೋಗಿಸಿರಿ.

ಅದಕ್ಕಾಗಿಯೇ
ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ತಯಾರಿಸಲಾದ
"ಮುಕುಲ" ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ,
ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗ
ಹುಬ್ಬಳ್ಳಿ ಶಾಖೆ: ಸ್ಟೇಶನ್ ರೋಡು, ಹುಬ್ಬಳ್ಳಿ.

ಪಿಲಿಂಬಿ



ನವ ಕರ್ನಾಟಕದ
ನಿರ್ಮಾಣಕ್ಕಾಗಿ
ಹೋರಾಡುವ
ಮಾಸ ಪತ್ರಿಕೆಯು

ಡಿಸೆಂಬರ್
೧೯೫೫

ಚಿ. ವಿ. ಚಿತ್ತಾಳ
ಆರ್.ಆರ್. ನಾಡಿಗೇರ
ವಿ. ಜಿ. ಶಾನಭಾಗ
ಕೋ. ಚೆನ್ನಬಸಪ್ಪ

ಆಣೆ

ಸಂಪುಟ ೮ | ಡಿಸೆಂಬರ್ ೧೯೪೫ | ಸಂಚಿಕೆ ೩

ಸಂಪಾದಕರು :
ಬೆಟಗೇರಿ ಕೃಷ್ಣಶರ್ಮ

ಮುಖ್ಯ ವಿಷಯಗಳು

ದುಃಸಮಯ (ಅನುವಾದಿತ ಕವನ)
ಶ್ರೀ. ಜೆ. ವಿ. ಚಿತ್ತಾಳ ಬಿ. ಎ. ಮುಂಬೈ ೩೧೩

ಬೆಳಗಿಹುದು ಮೂಡಲಲ್ಲಿ (ಕವನ)
ಶ್ರೀ. ವಿಸ್. ಕರ್ಕಿ ಎಂ. ಎ. ಬೆಳಗಾಂವಿ ೩೧೬

ಕರ್ನಾಟಕಕ್ಕೊಂದು ಯೋಜನೆ ಆವಶ್ಯಕವೆ ?
ಶ್ರೀ. ಕೃಷ್ಣಕುಮಾರ ಎಂ. ಎ. ಮುಂಬೈ ೩೧೭

ಮುನ್ನೂರಾ ಎರಡು (ಒಂದು ವ್ಯಂಗ್ಯವೈಚಿತ್ರ್ಯ)
ಶ್ರೀ. ಆರ್. ಆರ್. ನಾಡಿಗೇರ ಎಲೆಲ್. ಬಿ. ೩೨೦

ಒಂದು ವಿಚಾರ ಪ್ರಚೋದಕ ಪತ್ರ
ಶ್ರೀ. ಕೋ. ಚೆನ್ನಬಸಪ್ಪ ಬಿ. ಎ. ಬೆಳಗಾಂವಿ ೩೨೩

ಗಂಡು-ಹೆಣ್ಣಿನ ಸಮಸ್ಯೆ (ಒಂದು ಪತ್ರವ್ಯವಹಾರ)
ಶ್ರೀಮತಿ ××ದೇವಿ××ಪಾಠಕ,××ಗಾಂವಿ ೩೨೯

ಬದುಕಿನ ಬೆಲೆ (ಸಣ್ಣಕತೆ)
ಶ್ರೀ. ವಿ. ಜಿ. ಕಾಸಬಾಗ, ಕುಮಟಾ ೩೩೦

ಕುಲಕರ್ಣಿಯವರ ನೃತ್ಯನಾಟಿಕೆಗಳು (ಪರಿಚಯ)
ಒರ್ವ ಕಲೋಪಾಸಕ, ಮದ್ರಾಸ ೩೩೫

ಸಾಹಿತ್ಯ ವಿಹಾರ (ವಿಮರ್ಶಾತ್ಮಕ ಟಿಪ್ಪಣಿ)
'ವಿಹಾರಿ' ೩೩೮

ಅಲ್ಲದೆ ಸಂಪಾದಕೀಯ, ಮುಂಗನ ಮಲ್ಲಿನಾಥನ ಪುಸ್ತಕ ವಿಮರ್ಶೆ, ಸಾದರ ಸ್ವೀಕಾರಗಳು.

ಸಮಾಧಾನದ ಸಂಗತಿ

ಜನವರಿಯಿಂದ ನಮಗೆ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕಾಗದವು ಸೀದಾ ಸಿಕ್ಕಬಹುದಾದುದರಿಂದ, ಅವಕ್ಕನುಸಾರವಾಗಿ ಸಂಚಿಕೆಗಳ ಪುಟಸಂಖ್ಯೆಯನ್ನು ಹೆಚ್ಚಿಸಲಾಗುವುದು.

—ಸಂ. ಜ.

DYESTUFFS
INTERMEDIATES
AND
CHEMICALS

SIZING AND FINISHING PRODUCTS
MACHINERIES FOR ALL INDUSTRIES
FOR

Cotton, Silk, Art Silk,
Wool, Jute, Paper,
Leather, Soap, Wax,
Coir, Varnishes, Oils.

CHEMICALS
ACCELERATORS AND
ANTI-OXIDANTS
FOR
RUBBER INDUSTRY

S. K. KABBUR LIMITED
3, BASTION ROAD
FORT, BOMBAY
Telegrams "DIAZO" Bombay Telephone 21627

CORRESPONDENTS IN ENGLAND:

KABBUR & CO., LIMITED
RADHA HOUSE
Higher Ardwick, MANCHESTER, 12.
Telegrams "Radha, Manchester."

ಮುದ್ರಕರು :
ಎನ್. ಎಸ್. ಬೆಂಗೇರಿ,
ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು :
ಎಂ. ವಿ. ಪೆಟ್ಟಿಗಟ್ಟಿ,
ಜಯಂತಿ ಕಾರ್ಯಾಲಯ ಧಾರವಾಡ.

ಸಂಪುಟ ೮

ಸಂಚಿಕೆ ೭

ಡಿಸೆಂಬರ್ ೧೯೪೫

ವರ್ಗಣಿ ದರ

ವರುಷಕ್ಕೆ ೪—೪—೦
ಆರು ತಿಂಗಳಿಗೆ ೨—೪—೦
(ಅಂಚೇ ವೆಚ್ಚ ಸೇರಿ)

ಬಿಡಿ ಸಂಚಿಕೆಗೆ ೬ ಆಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ದುಃಸಮಯ

(ರವೀಂದ್ರರ ಕವನವೊಂದರ ಭಾವಾನುವಾದ)

ಶ್ರೀ. ಗಂಗಾಧರ ಚಿತ್ತಾಲ, ಬಿ. ಎ., ಮುಂಬಯಿ

ಸಂಧ್ಯೆ ಮುಂದ-ಮಂಥರ ಗತಿಯಿಂದ ಬಕಂದಿಳಯಲಿ,
ಇಳೆಯ ಗಾನವೆಲ್ಲ ಮೂಕಮ್ಲಾನವಾಗಿ ನಿಶ್ಚಲಿ,
ಜೊತೆಯ ಜೀವನಾರು ಇಲ್ಲದಿರಲಿ, ಬಾನ ಬಯಲಲಿ
ತೊಳಲಿ ಬಳಲಿ ಬಲವ ಕುಂದಿ ಮೆಲ್ಲನೆ ಮೈಸೋಲಲಿ.

ಮನದ ಮೌನದಲ್ಲಿ ಮಹಾಶಂಕೆಯೊಂದೇಳಲಿ,
ದಿಗ್ದಿಗಂತವೆಲ್ಲವನ್ನು ಕಾವಳ-ಕಡಲಾಳಲಿ.
ಇಂತಾದರು, ಎಂತಾದರು ಓ ಎನ್ನ ವಿಹಂಗಮಾ,
ನಿಲ್ಲಿಸದಿರು ನಿನ್ನ ಪಕ್ಷಸಂಚಾಲನ ಸಂಭ್ರಮಾ,
ಅದೋ! ಮುಂದೆ ಮರ್ಮರಗುಂಜಿತ ವನವದು ಅಲ್ಲವು—
ಅಜಗರ ಗರ್ಜನದಿಂ ಘೂತ್ಕರಿಸುವ ಜಲಲೋಲವು!
ಕಣ್ಣರಂಜಿಸುವ ಕುಂದಕುಂಜವದೂ ಅಲ್ಲವು—
ಆಕಲ್ಲೋಲ ಕಕಲ್ಲೋಲ ಫೇನ ಹಿಕಲ್ಲೋಲವು!

ಎಲ್ಲಿ ಹಾ! ತಳರು ಹೂವು ತುಂಬಿದ ಆ ತೀರವು,
ಎಲ್ಲಿ ತಂಪುಗೂಡು, ತೂಗುರೆಂಬೆ—ಶಾಂತಿಸಾರವು?
ಇಂತಾವರು, ಎಂತಾದರು ಓ ಎನ್ನ ವಿಹಂಗಮಾ,
ನಿಲ್ಲಿಸದಿರು ನಿನ್ನ ಪಕ್ಷಸಂಚಾಲನ ಸಂಭ್ರಮಾ!

ದಾರಿಯುದ್ದಕಿನ್ನು ಅಂಧಕಾರ ಪಾರವಿಲ್ಲದೆ
ಅರುಣ ತೂಗಿ ತೂಕಡಿಪನು ದೂರದಸ್ತಶೈಲದೆ
ವಿಶ್ವವೆಲ್ಲ ನಿಃಶ್ವಾಸವಾಗಿ ಏಕಾಂತದಿ—
ಪ್ರಹರಗಳನು ಎಣಿಸುತಿಹುದು ಸ್ತಬ್ಧಾಸನ ಶಾಂತದಿ

ತೇಲಿ ಬಾಪ ತೀರ ತೋರದಂಧ ತಿಮಿರ ಸಾಂದ್ರವಾ
ತೋರುತಿಹ ದಿಗಂತದಲ್ಲಿ ಕ್ಷೀಣ ವಕ್ರ ಚಂದ್ರನೂ;
ಅಂತೆಯೆ ನೀನೆಂತಾದರೂ ಓ ಎನ್ನ ವಿಹಂಗಮಾ,
ನಿಲ್ಲಿಸದಿರು ನಿನ್ನ ಪಕ್ಷಸಂಚಾಲನ ಸಂಭ್ರಮಾ!

ಮೇಲೆ ಬಾನ ತಾರೆ ಬೆರಳು ತೋರಿ ಸನ್ನೆಮಾಡುತ
ಕಣ್ಣ ಮಿಟುಕಿಸದಿಹನದೋ! ನಿನ್ನೆಡೆಗೇ ನೋಡುತ—
ಕೆಳಗೆ ಎದ್ದು ಬರುತಿಹುದು ಗಭೀರ ಭೀರು ಮರಣವೆ
ಶತತರಲ ತರಂಗವಾಗಿ ನಿನ್ನೆಡೆಗೆ ಭಯಾನವು.

ದೂರವೆಲ್ಲೊ ಆಚೆ ದಡದ ಮಸುಕಲಾರೊ ಕರೆವರು—
'ಬಾಽ ಬಾಽ' ಎಂದು ದೀನವಾಣಿಯಿಂದ ಮೊರೆವರು.
ಅಂತೆಯೆ ನೀನೆಂತಾದರು ಓ ಎನ್ನ ವಿಹಂಗಮಾ,
ನಿಲ್ಲಿಸದಿರು ನಿನ್ನ ಪಕ್ಷಸಂಚಾಲನ ಸಂಭ್ರಮಾ!

ಇಲ್ಲ ಭಯವು, ಇಲ್ಲವೋ ಸ್ನೇಹ-ಮೋಹಬಂಧನ;
ಭಾಷೆಯಿಲ್ಲ, ಇಲ್ಲವೋ ಕುಳಿತು ವೃಥಾ ಕ್ರಂದನ;
ಆಶೆಯಿಲ್ಲವೋ, ಸುಳ್ಳು ಛಲವು ಆಶೆಯಿಲ್ಲವು—
ಇಲ್ಲ ಎಲೆಯ ಪಸರ, ಮನೆಯು, ಹೂವ ಹಾಸು ಇಲ್ಲವು!

ಇರುವವೆರಡು ರೆಕ್ಕೆ, ಇವನ್ನಿರುವುದು ಬಾನಂಗಳ,
ಉಷೆಯ ದಿಶೆಯು ಕೂಡ ಕಾಣದಂಧ ಕ್ರೂರ ಕಾವಳ.
ಅಂತೆಯೆ ನೀನೆಂತಾದರೂ ಓ ಎನ್ನ ವಿಹಂಗಮಾ,
ನಿಲ್ಲಿಸದಿರು ನಿನ್ನ ಪಕ್ಷಸಂಚಾಲನ ಸಂಭ್ರಮಾ!

ನಮ್ಮ ಮಧ್ಯಮ ವರ್ಗದ ಜನರು

ಆರ್ಥಿಕ ದೃಷ್ಟಿಯಿಂದ ವಿಚಾರಮಾಡುವಾಗ ಸಮಾಜವನ್ನು ಸಿರಿವಂತರು, ಮಧ್ಯಮವರ್ಗದವರು, ಬಡವರು ಎಂದು ಮೂರು ವಿಭಾಗಗಳನ್ನಾಗಿ ಹೇಳಬಹುದಾಗುವುದು. ಮೊದಲನೆಯವರಾದ ಸಿರಿವಂತರು ತಮ್ಮ ಸಿರಿಯ ಬಲದಿಂದ ಎಂತಹ ಕಾಲದಲ್ಲಿಯೂ ಹೇಗೂ ಬಾಳಬಲ್ಲರು. ಪರಂಪರಾಗತ ಆಚಾರ-ಪದ್ಧತಿಗಳನ್ನು ನಡೆಯಿಸಿಕೊಂಡು ಬದುಕಲಿಕ್ಕೂ ಅವರಿಗೆ ಕೊರತೆಯಿರದು; ಎಲ್ಲವನ್ನೂ ಬಿಟ್ಟು ಸ್ವತಂತ್ರ ಆಚಾರ-ವಿಚಾರಗಳಿಂದ ಬದುಕಲಿಕ್ಕೂ ತೊಂದರೆಯಿರದು. ಹಣದ ಅವಶ್ಯಕತೆಯಿರುವವರು ಅವರನ್ನು ಅನುಸರಿಸಲಿಕ್ಕೂ ಜೊಳಿಗವಾಡಲಿಕ್ಕೂ, ಅವರ ಅಪೇಕ್ಷೆಯಂತೆ ವರ್ತಿಸಲಿಕ್ಕೂ ಸಿದ್ಧರಾಗಿ ಇರುವುದರಿಂದ, ಅವರಿಗೆ ನಿಜವಾಗಿ ಧರ್ಮ-ಪಥ-ನಿಯಮಗಳೂ ಸಾಮಾಜಿಕ ನಿರ್ಬಂಧಗಳೂ, ರಾಜಕೀಯ ಶಾಸನಗಳೂ ಯಾವ ತೊಡಕನ್ನೂ ಉಂಟುಮಾಡವು. ಹಣವೊಂದರ ಸಾಮರ್ಥ್ಯದಿಂದ 'ತಾವು ಬೇಕಾದುದನ್ನೆಲ್ಲ ಪಡೆಯುವೆವೆಂಬ ನಂಬುಗೆ ಅವರಲ್ಲಿ ದೃಢವಾಗಿ ನೆಲಸಿರುವುದರಿಂದ 'ಸರ್ವಜನ ಹಿತಬುದ್ಧಿಯಿಂದ ಸಮಾಜ ಜೀವನಕ್ಕೆ ಸುಖ' ಎಂಬ ಮಾತು ಅವರ ಮಿದುಳನ್ನು ಸುಟ್ಟುವುದು ಸಾಧ್ಯವಿಲ್ಲ. ಆಡಳಿತದ ಸೂತ್ರ ಹಿಡಿದ ಯಾವ ಸರಕಾರವೂ ಸಿರಿವಂತರ ಪಕ್ಷಪಾತಿಯಾಗಿ ಇರುವುದರಿಂದ, ಹೇಗೆ ಬದುಕಿದರೂ ಅವರಿಗೆ ಸರಿಯಾದ ಸಂರಕ್ಷಣೆ ದೊರೆಯುತ್ತದೆ. ಬಡವರಿಂದ ಸೇವೆ, ಸರಕಾರದಿಂದ ಸಂರಕ್ಷಣೆ ಸಿಕ್ಕುತ್ತಿರುವಂಥ ಮೇಲೆ ಅವರಿಗೆ ಸುಖಕರ ಸುಖಜೀವನದ ಯೋಚನೆ ಏತಕ್ಕೆ? ಸಮಾಜ ಸಂಘಟನೆಯ ಅವಶ್ಯಕತೆ ತಿಳಿಯುವುದು ಹೇಗೆ? ಆದುದರಿಂದಲೆ ನಮ್ಮ ನಾಡಿನ ಸಮಾಜದಿಂದ ಸಿರಿವಂತರು ಸಿಡಿದು ದೂರನೇ ಉಳಿಯಲು ಪ್ರಯತ್ನಿಸುತ್ತಿರುವರು. ಪರಕೀಯರ ಬಲುಮೆಯ ಸರಕಾರ, ಹಿರಿಯತನದ ಹೊಣೆಯರಿಯದ ಸಿರಿವಂತರು ಇರುವ ಯಾವ ದೇಶದಲ್ಲಿ ಸುಖ-ಸಮಾಧಾನಗಳು ನೆಲಸಬಲ್ಲವು? ಯಾವ ಸಮಾಜ ಪ್ರಗತಿಪಥದಲ್ಲಿ ಸಾಗಬಲ್ಲದು? ನಮ್ಮಲ್ಲಿಯ ಸಿರಿವಂತರಲ್ಲಿ ಮೂರು ಮುಖ್ಯ ವಿಭಾಗಗಳನ್ನು ಮಾಡಬಹುದು. ೧. ಜಮೀನುದಾರರು, ೨. ವ್ಯಾಪಾರಿಗಳು(ಡಾಕ್ಟರು-ವೈದ್ಯರು ಕೂಡ ಇವರಲ್ಲಿ ಬರುವರು), ೩. ಸರಕಾರದ ಉಚ್ಚವರ್ಗದ ನೌಕರರು (ವಕೀಲರು ಈ ವರ್ಗದಲ್ಲಿ ಸೇರುವರು) ಈ ಮೂರು ತರದ ಜನರೂ, ತಾವು ಮನುಷ್ಯವರ್ಗಕ್ಕಿಂತ ಹೆಚ್ಚಿನವರೆಂಬ ಅಹಂಕಾರದಿಂದ ಕುರುಡರಾಗಿ ಜೀವಿಸುತ್ತಿರುವರು. ಸಾಮಾಜಿಕ ಕರ್ತವ್ಯ ಬುದ್ಧಿ ಇವರಲ್ಲಿ ಇಷ್ಟುವರೆಗಂತೂ ಮೂಡಿಲ್ಲ; ಮೂಡಬಹುದಾದ ಕುರುಹುಗಳೂ ಕಾಣುತ್ತಿಲ್ಲ.

ಇನ್ನು ಮೂರನೆಯ ವಿಭಾಗದಲ್ಲಿ ಬರುವ ಬಡವರನ್ನು ವಿಮರ್ಶೆಗೆ ತೆಗೆದುಕೊಂಡರೆ, ಅವರು ಬದುಕುವ ರೀತಿ ಮನುಷ್ಯತ್ವವನ್ನೆ ಮರೆಯಿಸಿ ನಿಡುಸಂತಾಪದಾಗಿದೆ. ಕೇವಲ ಹಸಿವನ್ನು ಹಿಂಗಿಸುವುದಕ್ಕಾಗಿಯೆ ಅವರ ಆಯುದಿನದ ಹೆಣಗಾಟ. ಧರ್ಮ, ಸಮಾಜ, ಸಂಸ್ಕೃತಿ, ಶಿಕ್ಷಣ, ಸಂಘಟನೆ, ಸ್ವಾತಂತ್ರ್ಯ ಮೊದಲಾದ ಯಾವ ವಿಚಾರಗಳನ್ನೂ ಮಾಡುವುದಕ್ಕೆ ಅವರಿಗೆ ಬಿಡುವೂ ಇರುವುದಿಲ್ಲ; ಬುದ್ಧಿಯೂ ಬೆಳೆದಿರುವುದಿಲ್ಲ. ದುಡಿತದ ಫಲವಾಗಿ ಮಧ್ಯಾಹ್ನ ತುತ್ತು ಕೂಳು ಸಿಕ್ಕಿದರೆ ಸಾಕು; ಅದರಲ್ಲಿಯೆ ಅವರಿಗೆ ಶಾಂತಿ, ಸಮಾಧಾನ. ಹೊಟ್ಟೆತುಂಬ ಉಂಡದಿನವೇ ಅವರಿಗೊಂದು ಹಬ್ಬವಿದ್ದಂತೆ. ತನ್ನ ಹೊಟ್ಟೆ ತುಂಬಿದಾಗ ಅಲ್ಲವೇ ಅನ್ಯರ ವಿಚಾರ? ತನ್ನ ಹಸಿವು ಆರದಿರುವಾಗ ಅನ್ಯರ ಹಸಿವಿನ ಕಲ್ಪನೆ ಬರುವುದು ಹೇಗೆ? ಆದುದರಿಂದಲೆ ಸ್ವಾರ್ಥ, ಅಸಹನೆಗಳು ಬಡವರಲ್ಲಿ ಇರುವುದೆಂದರೆ ಅದೇನು ಅಸ್ವಾಭಾವಿಕವಲ್ಲ. ಬಡವರ ಸ್ವಾರ್ಥ, ಸಂಘಟನೆ-ಸಹಕಾರಗಳ ಅಭಾವ, ಪರಸ್ಪರರಲ್ಲಿಯ ಮೇಲಾಟ ಇವುಗಳ ಮೂಲಕ ಸಿರಿವಂತರಿಗೆ ಅನುಕೂಲವಾಗುವುದು. ಅಗ್ಗದ ಕೂಲಿಯಲ್ಲಿ ಹೆಚ್ಚು ಕಾಲದ ದುಡಿತ ದೊರೆತು, ಅವರ ಸಿರಿತನದ ಜೊಜ್ಜು ಇನ್ನಿಷ್ಟು ಹೆಚ್ಚುವುದು. ದುಡಿತಕ್ಕೆ ತಕ್ಕ ಆಹಾರ ದೊರೆಯದೆ ಬಡವರ ದೇಹಸೌಷ್ಠವ ಸಾಕಷ್ಟು ವಿಕಾಸ ಹೊಂದದಿರುವಾಗ, ಬುದ್ಧಿ-ಭಾವನೆಗಳ ವಿಕಾಸಕ್ಕೆ ಮಾರ್ಗವೆಲ್ಲಿ? ಹೀಗಿರುವಾಗ ಸಾಮಾಜಿಕ ಕರ್ತವ್ಯ ಬುದ್ಧಿಯನ್ನು ಇವರಲ್ಲಿ ನಾವು ಅಪೇಕ್ಷಿಸುವುದು ಹೇಗೆ? ಆದುದರಿಂದ ನಾವು ಹೀಗೆ ಹೇಳಬೇಕಾಗುವುದು; ಸಮಾಜದಲ್ಲಿ ಪರಿಗಣಿತರಾಗುತ್ತಿದ್ದರೂ ಇಂದು ನಮ್ಮಲ್ಲಿಯ ಸಿರಿವಂತರು ಸಮಾಜಕ್ಕೆ ಸೇರಿಕೊಂಡಿಲ್ಲ; ಬಡವರೂ ಸಮಾಜಕ್ಕೆ ಹೊಂದಿಕೊಂಡಿಲ್ಲ.

ಸಮಾಜವೆಂದೆನಿಸಿಕೊಳ್ಳುವ ಜನರಲ್ಲಿ ಇಂದು ನಿಜವಾಗಿ ಇರುವವರೆಂದರೆ ಕೇವಲ ಮಧ್ಯಮ ವರ್ಗದವರು. ಸಾಮಾಜಿಕ ಸಂಘಟನೆ, ರಾಷ್ಟ್ರೀಯ ಸ್ವಾತಂತ್ರ್ಯ, ಸಂಸ್ಕೃತಿ ಪ್ರಚಾರ ಮೊದಲಾದುವುಗಳ ಅವಶ್ಯಕತೆ ಸ್ಪಷ್ಟವಾಗಿ ಕಾಣುತ್ತಿರುವುದು ಅವರಿಗೆ ಮಾತ್ರ. ಹೊಟ್ಟೆಯ ಪಸಿವಿಗಾಗಿ ದುಡಿದ ಮೇಲೂ ದಿನದಲ್ಲಿ ಕೆಲವು ಸಮಯ ಇವರಿಗೆ ಉಳಿಯುವುದು. ಈ ಕಾಲದಲ್ಲಿ ಇವರು ವೈಯಕ್ತಿಕ ವಿಕಾಸ, ಸಮಾಜ ಸುಖಗಳನ್ನು ಕುರಿತು ವಿಚಾರ ಮಾಡುವರು. ಅದಕ್ಕಾಗಿ ಸಂಘ-ಸಂಸ್ಥೆಗಳನ್ನು ಕಟ್ಟುವರು; ಉಪನ್ಯಾಸ-ಪ್ರವಚನಗಳನ್ನು ಮಾಡುವರು. ಕಾರ್ಯಗೌರವವನ್ನೇರಿಸಿ ಸಿರಿವಂತರಿಗೆ ಮಾನ-ಸನ್ಮಾನಗಳನ್ನೂ ಸಲ್ಲಿಸಿ ಅವುಗಳ ಬೆಲೆಯೆಂದು ಸಮಾಜ ಕಾರ್ಯಕ್ಕಾಗಿ ಹಣವನ್ನು ತಕ್ಕಮಟ್ಟಿಗೆ ಪಡೆಯುವರು. ಇವರ ಜೀವನಕ್ರಮವೊಂದು ಆದರ್ಶವಿರುವುದು. ಧರ್ಮ, ನೀತಿ, ಸಮಾಜ, ಸರಕಾರಗಳಿಗೆ ಹೆದರಿ ಬೆದರಿ ನಡೆಯುವವರಾದರೂ, ವೈಯಕ್ತಿಕ ಆತ್ಮವಿಕಾಸಕ್ಕೂ ಸಮಾಜ ಶಾಂತಿಗೂ ಅವುಗಳಿಂದ ವ್ಯತ್ಯಯ ಬರುತ್ತಿದ್ದರೆ, ಕಾಲೋಚಿತವಾದ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ವಿರೋಧಕ ಶಕ್ತಿಯೊಂದಿಗೆ ಚಳವಳಿ ಹೋರಾಟಗಳನ್ನು ಹೂಡುವರು. ಮೇಲೆಂದು ತಿಳಿದುಕೊಂಡವರನ್ನು ನೀವೂ ಮನುಷ್ಯರೆಂಬ ತಿಳಿವಳಿಕೆ ಕೊಟ್ಟು ಸಮಾಜದೊಂದಿಗೆ ನಡೆಯಿರೆಂದು ಕೀಳೆಂದು ತಿಳಿದವರನ್ನು ಮೇಲೆತ್ತಿ ತಮ್ಮೊಂದಿಗೆ ಕೈಹಿಡಿದು ಕರೆದುಕೊಂಡು ಹೋರಾಡುವುದಕ್ಕೂ ಈ ಮಧ್ಯಮ ವರ್ಗದವರ ಕರ್ತವ್ಯಬುದ್ಧಿಯೆ ಕಾರಣವಾಗುವುದು. ದೇಶದಲ್ಲಿ ನಿಜವಾದ ಸಮೋತ್ಥಾನವನ್ನು ಸಂರಕ್ಷಿಸಿ ಆಜೀವ ಕೊಂಡು ಹೋಗುವವರೆಂದರೆ ಇವರು. ಮತ, ಪಂಥ, ಆಚಾರ, ವಿಚಾರಗಳಲ್ಲಿ ಭಿನ್ನತೆಯಿದ್ದರೂ ಮನುಷ್ಯತ್ವ, ಅದರ ಸ್ವಾಭಾವಿಕ ಬೇಕು-ಬೇಡುಗಳು ಇವು ಎಲ್ಲರಲ್ಲಿಯೂ ಒಂದೆಂಬ ಅರಿವು ಇವರಲ್ಲಿ ಚೆನ್ನಾಗಿ ಉಂಟಾಗಿರುವುದು. ಜೀವನದಲ್ಲಿ ಕಂಡ ಏರಿಳಿತ, ಸುಖದುಃಖಗಳ ಮೂಲಕ ವಿವಿಧ ಅನುಭವಗಳನ್ನು ಪಡೆದ ಇವರ ಮನಸ್ಸು-ಹೃದಯ-ಬುದ್ಧಿಗಳು, ಬರಿ ವರ್ತಮಾನವೊಂದನ್ನೇ ಗಣಿಸದೆ ಭೂತಕಾಲವನ್ನು ನೆನಪಿಟ್ಟುಭವಿಷ್ಯತ್ತನ್ನು ಕಲ್ಪಿಸಿಯೂ ಬಾಳ ದಾರಿಯಲ್ಲಿ ನಡೆಯಲು ನಡೆಯಿಸಲು ಸಮರ್ಥವಾಗಿರುವುವು. ಇಂದಿನ ನಮ್ಮ ವಿಸ್ಖಲಿತ ಹಿಂದು ಸಮಾಜವೂ ಇದುವರೆಗೆ ಬದುಕಿಕೊಂಡು ಬರಲಿಕ್ಕೆ ನಮ್ಮ ಮಧ್ಯಮ ವರ್ಗದವರೇ ಕಾರಣರಾಗಿರುವರು. ಇದನ್ನು ಸುಳ್ಳು ಸರ್ವಾಂಗ ಸಂಪೂರ್ಣ ಮಾಡುವ ಬಯಕೆ ಅವರಲ್ಲಿಯೆ ತಲೆದೋರಿದೆ, ಆದರಿಂದಲೆ ಪ್ರಯತ್ನ ನಡೆದಿದೆ. ಆದರೆ ಅವರಿಗೆ ಸಿರಿವಂತಿಕೆಯ ಬೆಂಬಲವಿಲ್ಲ; ಸಿರಿವಂತರ ಸರಕಾರದ ಕರುಣೆ-ಕೃಪೆಗಳ ಬೆಂಬಲವೂ ಇಲ್ಲ. ಅವರ ಜೀವನದ ಕಲ್ಪನೆ, ಅದನ್ನು ಸಾಧಿಸುವ ಕಾರ್ಯಶಕ್ತಿ ಇವೇ ಅವರ ಜೀವಾಳಗಳು. ಈ ಜೀವಾಳದಿಂದಲೆ ಸಮಾಜವನ್ನವರು ಎಚ್ಚರಿಸಬಲ್ಲರು. ಉತ್ಸಾಹತುಂಬ ಬಲ್ಲರು; ಪ್ರಗತಿ ಪಥದಲ್ಲಿ ನಡೆಯಿಸಬಲ್ಲರು. ಈ ಮಾತನ್ನು ಪುನಃ ಎದುರು ತಂದು, ಮಧ್ಯಮವರ್ಗದವರೆನಿಸಿಕೊಳ್ಳುವ ನಮ್ಮ ಜನರು, ಸಣ್ಣ ಸಣ್ಣ ಕೋಟೆ ಕಟ್ಟಿಕೊಂಡು ಅದರಲ್ಲಿಯೆ ಕೆಲಸ ಮಾಡುತ್ತಿದ್ದರೆ ಅದನ್ನು ಬಿಟ್ಟು, ಸಂಕುಚಿತ ಕಾರ್ಯಕ್ಷೇತ್ರವಿದ್ದರೆ ಅದನ್ನು ವ್ಯಾಪಕಗೊಳಿಸಿ, ದೃಷ್ಟಿಯನ್ನು ವಿಶಾಲಗೊಳಿಸಿ ಸ್ವದೇಶ, ಸ್ವಜನ, ಸ್ವಸಮಾಜ ಎಂಬ ಭಾವನೆಯೆಲ್ಲವೂ ಕಾರ್ಯಪ್ರವೃತ್ತರಾಗಲಿ. ಆಗ ನಮ್ಮ ಪ್ರಗತಿಯನ್ನು ಯಾ ವಿರೋಧಕ ಶಕ್ತಿಯು ತಡೆದೀತು? ಯಾರು ನಮ್ಮನ್ನು ಪಾರತಂತ್ರ್ಯದಲ್ಲಿ ಇಡಲು ಶಕ್ತರಾದಾರು?

೧. ಅಖಿಲ ಭಾರದ-ವಿದ್ಯಾರ್ಥಿ-ಸೋಂಗ!

ಇತ್ತಿತ್ತಲಾಗಿ ನೇತದ ತುಂಬ ವಿದ್ಯಾರ್ಥಿಗಳು ಶಿಸ್ತು-ಸಂಯಮನಗಳನ್ನು ಬದಿಗಿಟ್ಟು ನಿರರ್ಥಕ ಹಾವಳಿಯನ್ನೆಬ್ಬಿಸುವುದು ಹೆಚ್ಚಾ ಗಿ ಎಂದು ಹಿರಿಯರೊಬ್ಬರು ಮನೋವ್ಯಥೆಯಿಂದ, ಸಾರ್ವಜನಿಕ ಸಭೆಯಲ್ಲಿ ಮುಂಗರಾಯನಲ್ಲಿ ಬರೆದುಕೊಂಡಿದ್ದಾರೆ. ಇಂತಹ ಅವಿಧೇಯತೆಗೆ ಮುಂಗರಾಯನ ಸಂಸ್ಕೃತಿಯೆ ಪ್ರೇರಕವಾಗಿದೆ ಎಂದೂ ಈ ಹಿರಿಯರ ಮಾರ್ಮಿಕ ಸೂಚನೆ! ಪಾಪ, ಎಂದು ಕೊಂಬೆ ಮುರಿವಂತೆ ಸಿಡಿದೇಳುತ್ತಾನೆ ಮುಂಗರಾಯ ಇಂತಹ 'ಮುಂಗ್ಯ' ಸೂಚನೆಗೆ! ಶಿಸ್ತಿನಿಂದ ರಚಧಿಯಂದಾಂಟಿ ರಾವಣಾಸುರನಂತೆ ಮಧಿಸಿರ್ದ ಮುಂಗಮಹಾಕುಲೋತ್ಪನ್ನರ ಸಂಸ್ಕೃತಿಗೆ ಅವನವಾನವಲ್ಲವೆ ಇದು? ಹೊರಗೆ ಹಾವಳಿಯನ್ನೆಬ್ಬಿಸುವ ವಿದ್ಯಾರ್ಥಿಗಳಿಗೆ ಶಿಕ್ಷಣಸಂಸ್ಥೆಗಳ ಒಳಗೆ ಮೀರದ ಬಿಗುನಿದ್ದಿರಬಹುದು; ವಿದ್ಯಾರ್ಥಿಗಳ ಚಳವಳ ನಿರರ್ಥಕವಾಗಿಪ್ಪದರೆ ಅವರ ವಿದ್ಯೆಗೆ ನಿರರ್ಥಕತೆಯೆ ಧ್ಯೇಯವಾಗಿರಬಾರದೇಕೆ? ಅಂತೂ ಈ ಪರಿಸ್ಥಿತಿಗೆ ಹಿರಿಯರೂ ಶಿಕ್ಷಕರೂ ರಕ್ಷಕರೂ ಇವರೇ ಪ್ರೇರಕರೆಂದು ಈಗ ಮುಂಗರಾಯನು ಮುರುಸುಪಾಲನ್ನು ತುರಿಸುತ್ತಾನೆ. ಆಕಾರವಲ್ಲಿ ಪೋಲೀಸರು ಗುಂಡನ್ನು ಹಾರಿಸಿದಾಗ (ಮುಂಬಯಿಯ) ವಿದ್ಯಾರ್ಥಿಗಳು ಚದರಿದರೆಂಬುದು ಅವಿದ್ಯೆಯ ಲಕ್ಷಣವಲ್ಲವೆ? ಮೇಲೆ ಹಾರಿಸಿದ ಗುಂಡಿನ ದಿಕ್ಕನ್ನು ಕೂಡ ಅರಿಯದೆ ಚದರಿದ ಕೆಳಗಿನ ವಿದ್ಯಾರ್ಥಿಗಳನ್ನು ಅವರವರ (ಶಾಸ್ತ್ರೀಯ ವಿಷಯದ) ಪರೀಕ್ಷೆಯಲ್ಲಿ ಫೇಲ್ ಮಾಡಬೇಕೆಂದು ಮುಂಗರಾಯನು 'ಮುಂಗ್ಯ' ವಾಗಿಯೆ ಆಯಾ ಶಿಕ್ಷಕರ ಮೇಲೆ ರಶಾ ಹೊಡೆಯುತ್ತಾನೆ! ಇದಕ್ಕೇನೆನ್ನುವಿರಿ ಹಿರಿಯರೆ, ಪುಚ್ಛವನ್ನು ಸಿ ಹಲ್ಲು ಕಿರಿಯರೆ? ಪಾಪ! ಪರೀಕ್ಷೆಯನ್ನು ಗಿದ ಎದುರಿಸದ ವಿದ್ಯಾರ್ಥಿಗಳು ಮತ್ತೇನನ್ನು ಎದುರಿಸಬಲ್ಲರು,—ದಡ್ಡತನದ ಅತ್ಮಹತ್ಯೆಯೊಂದ ನ್ನಳಿದು!—ಎಂದು ಮುಂಗರಾಯನಿಗೆ ಕಳವಳ—ಪಾಲಕರಿಗಾಗಿ ಅಲ್ಲ. ಅವರ ಪಾಲಕರಿಗಾಗಿ. ರಾಕೆಂದರೆ ಮುಂಗರು ಮುಷ್ಕಾರಾಗಿದ್ದಾರೆ ತಮ್ಮ ಮುಚ್ಚಿಗೆ.

ಯಾರೂ ಇಲ್ಲ! ಝಿಂದಾಬಾದ್
ಯಾರೋ—ಬಂದರು? ಸಂದಿಗೆ ಹೋದ್—

\+ + +

೨. ಮಲ್ಲರ ಮತ, ಕನ್ನಡಕ ಭಟ್ಟ

ಏಕೀಕರಣ ಚಳವಳಕ್ಕಾಗಿ ಕರ್ನಾಟಕದ ಕೆಲ ಕಾಂಗ್ರೆಸ ಹಿರಿಯರು ಕನಲಿದ ನೋಜನ್ನು ಕಂಡು ಮುಂಗರಾಯನಿಗೆ ನುಸುಳ್ಳಿಗೆ ತಲೆಯಾಡಿಸಿದೆ. ಕಾಂಗ್ರೆಸಿನ ಲೆಕ್ಕದಲ್ಲಿ ಬಹುತೇ ಜಕೆಯಾಯಿತು. ಏಕೀಕರಣದ ಲೆಕ್ಕವು ಹೊಸತು—ಹೀಗೆಂದು ಜನರು ಹಳೆಯವಕ್ಕೆ ಬೇಸರ್ತು ಹೊಸತಕ್ಕೆ ನೆರೆತರೆ, ಚಾಣಾಕ್ಷನಾದ ಮುಂಗಾಳು ಮೆಲ್ಲಗೆ ಹೊಸತನ್ನೆ ಲೆಕ್ಕಿಂಪ ಬೇಕಲ್ಲವೆ, ಬಾಯಿ ಬುರುಗು ಬರುವಂತೆ ಸಿಟ್ಟು ಗೇಳಬಾರದು. ಕರ್ನಾಟಕದ ಕಾಂಗ್ರೆಸಿನ ಹಿರಿಯರಲ್ಲಿ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವ ಹಿರಿಯರೂ ಇನ್ನೂ ಕೆಲವರಿದ್ದಾರೆಂಬುದು ಕರ್ನಾಟಕದ ಸುದೈವ, ಮುಂಗರಾಯನಿಗೂ ನುರ್ಕಾಟದೈವ. ಅವಿಲ್ಲವಾಗಿದ್ದರೆ ಎಂತಹ ದುಃಸ್ಥಿತಿ ಒದಗಬಹುದಾಗಿತ್ತು! ಹರಿಹರೀ! ವಾತೋದ್ಭ ಹಸುಮಂತಜೀ! ನಮ್ಮಲ್ಲಿಯ ಮುಂದಾಳುತನವೆ ಹಿಂದೆ ಬೀಳಬಹುದಾಗಿತ್ತು! ಯಾಕೆಂದರೆ ಯಾವುದನ್ನು ಎತ್ತಿ ಹಿಡಿದವೆ ತಾನು ಮುಂದಾಗಬಹುದೆಂಬುದನ್ನರಿಯದವನು ಮುಂದಾಳಾಗುವುದು ಹೇಗೆ? ಎಂದಿನಿಂದಲೂ ಸಮಾಜವನ್ನು ಉದ್ಧರಿಸುವ ಮಠಗಳ ತವರ್ಮನೆಯಾದ ವಿಜ್ಞೇಷ್ಟಕನ್ನಡ ಜಿಲ್ಲೆಯಲ್ಲಿ ಕೂಡಲೆ ಮುಂದಾಳುತನವ ಮಠ ಸ್ಥೊಂದು ಸ್ಥಾಪಿತವಾಗಬೇಕೆಂದು,—ಗಲೇ ಬೇಕೆಂದು ಮುಂಗರಾಯನು ಸರ್ವಾನುಮತನಾಗಿ ಸೂಚಿಸುತ್ತಾನೆ. ಇನ್ನೆ ಅಲ್ಲ, ಎಲ್ಲ ಮುಂಗಳಲ್ಲಿ ಇದು 'ಮಲ್ಲಸುತ' ವಾಗುವಂತೆ ಘಟನೆಯಲ್ಲಿಯೆ ಸ್ವಯಸ್ಫೆಯಾಗಲೆಂದು ಮುಂಗರಾಯನು ಎಷ್ಟಲಿಕೆಯನ್ನೂ ಕೊಡಬಯಸುತ್ತಾನೆ. ಇಲ್ಲವಾದರೆ 'ಮಲ್ಲ ಮುಂದಾಳು'ಗಳು ಹುಟ್ಟುವುದೆಂತು? ಕರ್ನಾಟಕದ ಮಠವೆಂಬ ಕಂಪನಿಯನ್ನು ಹಿಡಿದು ಹಾದಿಗೆ ನಡೆಸುವುದೆಂತು?

\+ + +

೩. ಮತ-ದಾಸ-ಸಾಹಿತ್ಯ

ಬಿನ್ನಪಕೆ ಬಾಯಿಲ್ಲವಯ್ಯಾ।
ಏನಿಂತು ಮತವನ್ನು ನೀನೆನಗೆ ಕೊಡುವಾತ ॥ಪ॥
ಧನಸೋಹ ಜನಮೋಹ ಜನಪ ಜಾತಿಯ ಮೋಹ।
ಜನಸಭೆಗೆ ಮುಂದಾಳು ಎಂಬ ಮೋಹಾ ॥
ಮನದಿ ನಸ್ಮಯ ಮೋಹ ಜನಕಾಗಿ ಹೊರ
ಮೋಹ।
ತನುವನ್ನು ತಕ್ಕಂತೆ ವೇಷಿಸುವ ಮೋಪಾ ॥೧॥

ಇಸ್ಪು ಮೊರಕಿದರೆ ಮುತ್ತಿಸ್ಪು ಬೇಕೆಂಬಾಕೆ।
ಅಸ್ಪು ಮೊರಕಿದರು ಮುತ್ತಿಸ್ಪರಾಕೆ ॥
ಕಸ್ಪು ಸಹಿಸಿದರೆ ಬೇಕಸ್ಪು ನನಗೆಂಬಾಕೆ।
'ಲಿಪ್ಪಿ' ನೊಳಗಿರ್ಪಾಕೆ ಧುರಂಧರೆ ಪರಲ ॥೨॥

\+ + +

೪. ಸಮ್ಮೇಳನದ ಸನಾಚಾರಗಳು

ಎಂದೂ ಇಲ್ಲದಂಥ ಆಶ್ಚರ್ಯ—ಒಂದು ವಿಷಯಕ್ಕಾಗಿ—ಮುಂಗರಾಯನಿಗೆ. ಆ ವಿಷಯವೆಂದರೆ ಪಾರಜಪಂತಹ ಕೈಲಾಸಂ ಸಾಹಿತ್ಯ ಸಮ್ಮೇಳನದ ಕುರ್ಚಿಯ ಮೇಲೆ ಒಂದೆಡೆಯಲ್ಲಿಯೆ ಕೂಡಲು ಸಿದ್ಧರಾದುದು. ಪಾರಜವನ್ನು ಗಟ್ಟಿಗೊಳಿಸಲಿಕ್ಕೆ ನಮ್ಮ ವೈದ್ಯವೀರರು ಎಷ್ಟೆಷ್ಟೋ ವನೌಷಧಿ ಪ್ರಯೋಗಗಳನ್ನು ಮಾಡಿ ದಣಿಯುತ್ತಿರುತ್ತಾರೆ; ಸಾಧ್ಯವಾಗದೆ ನಿರಾಶೆಗೊಳ್ಳುತ್ತಾರೆ. ಕೈಲಾಸಂ ಪಾರಜವನ್ನು ಯಾವ ಮುಂಗವೈದ್ಯ ಹೇಗೆ ಗಟ್ಟಿಗೊಳಿಸಿರಬಹುದು? ಎಂಬುದು ಮುಂಗರಾಯನಿಗೊಂದು ಒಡೆಯದ ಒಗಟಾಗಿದೆ.

× × ×

ತನ್ನಂತೆಯೆ ಚಂಚಲಚಿತ್ತರಾದ ಕೈಲಾಸಮುಂಗೆ ಅಧ್ಯಕ್ಷ ಪದವಿ ದೊರೆತುದನ್ನು ನೋಡಿದ ಮುಂಗರಾಯನಿಗೆ ಒಂದು ಮೂರವ ಆಕೆ ತಲೆದೋರಿದೆ: ಕೈಲಾಸಮುರೂ ಮಹಾಸಾಹಿತಿಗಳು, ತಾನು ಸುಪಾಸುಪಾ ಸಾಹಿತಿ. ಸಾಹಿತಿಗಳು ಬೇರೆಯಾವ ಕೆಲಸ ಮಾಡಲಾರರೆಂಬುದು ನಮ್ಮ ಜನರಿಗೆ ಗೊತ್ತಿದ್ದರೂ, ಅಧ್ಯಕ್ಷರನ್ನಾಗಿ ಆರಿಸುವ ಸದ್ಬುದ್ಧಿ ಅವರಲ್ಲಿ ತಲೆದೋರಿದೆ. ಎಂದಮೇಲೆ ಮರದಿಂದ ಮರಕ್ಕೆ ಹಾರಾಡುತ್ತ ನಿರಂತರ ನಿಷ್ಪ್ರಯೋಜಕನಾಗಿ ಇರುವ ತನಗೂ ಸಮ್ಮೇಳನಾಧ್ಯಕ್ಷ ಪದವಿ ಸಹಜವಾಗಿ-ಮುಂದಿನ ವರ್ಷದ್ದೇ-ಸಿಕ್ಕುವುದೆಂದು ಮುಂಗರಾಯನಿಗೆ ಸಂಬುಗೆ ಉಂಟಾಗಿದೆ. ಅದುದರಿಂದ ಉಲ್ಲಾಸದಿಂದವನು ನಡೆಸಿರುವ ಲಾಸ್ಯಕ್ಕೆ ಹೆಮ್ಮರ-ಹೆಮ್ಮರಗಳೂ ಮುರಿದು ಉದುರಲಾಗುತ್ತಿವೆ.

ಬೆಳಗಿಹುದು ಮೂಡಲಲ್ಲಿ!

(ನೀರ ಜೀವಿಯರ ನಲ್ವಾಡು)

ಶ್ರೀ. ಡಿ. ಎಸ್. ಕರ್ಕಿ, ಎಂ. ಎ., ಬೆಳಗಾಂವಿ

"ನನ ನೀರ, ನಮ್ಮ ನಾಡಿಂಗೆ ಭಾಗ್ಯರವಿ
ಮೂಡಿ ಬರುವನೆಂದು?"
"ನನ ನೀಕಿ, ಯಾವ ಬಗೆ ಸಾರಿ ಇಂತು ನೀ
ಕೇಳುತಿರುವೆ ಇಂದು?" ೧

"ಬಗೆಯಲ್ಲ, ನಲ್ಲ, ನಾಡೊಲ್ಮೆ ಹೊಮ್ಮೆ, ನುಡಿ
ತಾನೆ ಬಾರದೇನು?"
"ನನಗಿಹುದು ನಲ್ಲೆ, ನಾಡಿನಲಿ ನಲ್ಮೆ, ಅರಿ-
ತಿಲ್ಲವೇನು ನಾನು?" ೨

"ಸರಿ, ನುಡಿಯಿರೀಗ, ಸೌಭಾಗ್ಯಸೂರ್ಯ ಬರ-
ಲಿಹನೆ ನಾಡಿನಲ್ಲಿ?"
"ಉತ್ತರಿಸಲೇನು? ಉತ್ತರವದುಂಟು
ಎತ್ತಿರುವ ಪ್ರಶ್ನೆಯಲ್ಲಿ." ೩

"ಮರುಮಾತಿನಲ್ಲಿ ಒರಗಿಹುದು ಒಗಟು; ತೆರಿ-
ತೆರೆದು ತಿಳುಹಿ, ನೀರ"
"ಸ್ವರದೊಡಲಿನಲ್ಲಿ ನೆರೆಯೇಕೆ ರಾಗ, ರವಿ
ತಾನೆ ಏಕೆ ಬಾರ?" ೪

"ನಮಗುಂಟು ರಾಗ, ನಿಮಗುಂಟೆ?–ಎಂಬ ಸಂ-
ದೇಹವೇಳುತಿಹುದು:"
"ನಮಗಿಹುದು ಬುದ್ಧಿ, ನಿಮಗಿಹುದೆ?–ಎಂದು ನಾವ್
ಮರಳಿ ಕೇಳಬಹುದು." ೫

"ಆ ಬುದ್ಧಿ ನಿಮ್ಮೆಗೊಳಗಾದ ಪರಿಯನರಿ-
ತಿರುವನೇನು ಪುರುಷ?"
"ನಿಮಗೊಲಿದ ಬುದ್ಧಿ ನೀವರಿಯೆ ಸಾಧ್ಯ, ನಮ-
ಗದು ಅಸಾಧ್ಯ ಪರುಷ." ೬

"ಅಹ! ಜಾರಿ ಹೋಗುತಿಹ ಜಾಣ! ಅದಕೆ ಹೊಣೆ
ಯಾರು?–ನೀವೊ–ನಾವೊ?"
"ಹೇಳದನು ನೀನೆ, ನನ್ನೆದೆಯ ವೀಣೆ, ನುಡಿ
ಹೊಣೆಯದೆಂತು ನಾವು?" ೭

"ಈ ಬಾಳ ಬೆಳಗುವರಿ ಪಾಲ ಜೀವಿಗಳ
ಬೀಳುಗಳೆದರಾರು?"
"ತೊರೆವೆದೆಯ ಹಾಲ ಜತೆ ಹಸಿವ ಸ್ಫೂರ್ತಿಯನು
ಊಡದಿರುವರಾರು?" ೮

"ಅಹುದಹುದು, ನನ್ನ ಮನದನ್ನ, ಅದಕೆ ಎಡೆ-
ಯೀವರಾರು ತಾನೆ?"
"ಛಲೆ! ಅಂತೊ, ಇಂತೊ, ಇನ್ನೆಂತೊ ನಾಲಗೆಯ
ಕಟ್ಟ ಬಲ್ಲೆ ಜಾಣೆ!" ೯

"ಬಲು ಬುದ್ಧಿನಂತರಲ! ಪರರು ಕುಣಿವ ತೆರ
ಕುಣಿವುದಾವ ಬುದ್ಧಿ?"
"ತಿಳಿ ಭಾವದಂಗನೆಯೆ, ಭಾವದಿಂದ ಕೈ-
ಸಾರಿತಾವ ಸಿದ್ಧಿ?" ೧೦

"ಕೈ ಸಾರಬಹುದು, ಅನುಕರಣದಿಂದ ತನ-
ತನವ ಪಡೆವುದೆಂತು?
"ಹೊಸ ಹೊಸತು ಯುಗದಿ, ಹೊಸ ಹೊಸತು ರೀತಿ ಜಗ-
ಪ್ರಗತಿ ಪಡೆಪುದಿಂತು." ೧೧

"ಏನಿದುವೆ ಪ್ರಗತಿ! ಬರಿ ಬೆಡಗಿನಲ್ಲಿ ಮರೆ-
ಯಾಯ್ತು ನಾಡ ನೀತಿ!"
"ಹಳಿ ನೀತಿಯಲ್ಲಿ ಹೊಸ ರೀತಿ ಬೆರೆಯೆ, ಹೊಳೆ
ಯುವುದು ಮತ್ತೆ ಜ್ಯೋತಿ!" ೧೩

"ಅದು ಉಳಿಯಲಿಲ್ಲ, ಇದು ತಿಳಿಯಲಿಲ್ಲ, ನಡೆ-
ಯಾಯ್ತು ಹುಚ್ಚು ಹುಚ್ಚು!
ನುಡಿಯುವುದೆ ನಿಮ್ಮ ನಾಡಿಯಲಿ ಭಾರತದ
ವೀರತನದ ಕಚ್ಚು" ೧೩

"ಆ ಕೆಚ್ಚು ಕೆರಳಲಿಂದಚ್ಚ ಕೊಂಕು ನುಡಿ
ನುಡಿದೆಯೆತ್ತಿ ಜಾಣೆ?"
"ನಾ ಕೊಂಕು ಬಿಂಕುಗಳ ಸೋಂಕನರಿಯೆ, ನುಡಿ-
ದಿಹುದು ಭಾವ ತಾನೆ!" ೧೪

"ಬಾ ಭಾನು, ನಾಡ ನಾರಿಯರ ಹೃದಯದಲಿ
ಸ್ಫುರಿಸಲಿಂಥ ಭಾವ."
"ಬಗೆಗಾರ ನಿಮ್ಮ ಸುವಿಚಾರ–ಭರಕೆ ತೆರೆ-
ಗೊಳಲಿ ಜನದ ಜೀವ." ೧೫

"ತುಳುತುಳುಕಿ ಹರಿಯೆ ನಾಡೊಲುಮೆ ನಾಡಿಗರ
ನಾಳ ನಾಳದಲ್ಲಿ–!"
"ನಿಮಿ-ನಿಮಿಷಕೊಮ್ಮೆ ನಲ್ನಾಡ ನೆನಹು ಚೇ-
ತರಿಸೆ ಚಿತ್ತದಲ್ಲಿ–!" ೧೬

"ನೀ ಕನಸಿನಲ್ಲಿ ಕಂಡೊಲಿದ ಭಾಗ್ಯರವಿ
ಬಹನು ನೈಜದಲ್ಲಿ."
"ನೀವಾ ಚಿತ್ತದಲ್ಲಿ ಚಿತ್ರಿಸಿದ ಪ್ರಗತಿ ಮೈ-
ವೆತ್ತು ನಿಲುವುದಿಲ್ಲಿ" ೧೭

"ಅಹುದಿನ್ನು ಕೂಡಿ ಸಾಗೋಣ ನಾಡ ನೀ–
ತಿಯಲಿ ಹೆಜ್ಜೆ ಜೆಲ್ಲಿ
ಮರೆಯಾದ ಕಳೆಯ ಗಳಿಸೋಣ, ನೋಡು, ಬೆಳ-
ಗಿಹುದು ಮೂಡಲಲ್ಲಿ!" ೧೮

ಕರ್ನಾಟಕಕ್ಕೊಂದು ಯೋಜನೆ ಆವಶ್ಯಕವೆ?

ಶ್ರೀ ಕೃಷ್ಣಕುಮಾರ, ಪ್ರಿನ್ಸಿಪಾಲ್ ಜಾಟೂಕ್ ಇಂಡಸ್ಟ್ರಿಯಲ್ ಸ್ಕೂಲು, ಅಂಧೇರಿ

೧. ಮೊದಲ ಮಾತು

ವಿಷಯ ಅಪ್ರಸ್ತುತವೇನೋ ಸರಿಯೆ. ಹುಟ್ಟಿದ ಮಗುವಿಗೆ ಹೆಸರಿಡಲು ಹವಣಿಸಿದಂತೆಯೇ. ಅಂತೇ ಈ ವಿಷಯದಲ್ಲಿ ಇನ್ನೂ ಸಾಕಷ್ಟು ಚರ್ವಿತಚರ್ವಣವಾಗಿಲ್ಲ. ಅಲ್ಲಲ್ಲಿ ಜಿಲ್ಲಾ ಯೋಜನೆಯ ವಿಚಾರಿಣಿಯ ಪ್ರತಿಧ್ವನಿಯೇನೋ ಕೇಳಿಬಂದಂತಿತ್ತು ನಿಜ. ಆದರೆ ಮಾತಿನ್ನೂ ಸಾಕಷ್ಟು ಮುಂದರಿದಿಲ್ಲ. ಇದಕ್ಕೆ ಕನ್ನಡಿಗರ ಆಲಸ್ಯಕ್ಕಿಂತ ಅವರ ವಾಸ್ತವವಾದವೇ ಹೆಚ್ಚು ಕಾರಣವಿರಬೇಕೆಂದು ಹಿಡಿಯುವ! ಬರಿಗೈಲೆ ಮೊಳಹಾಕುವುದೇಕೆಂದೇ ಬಿಟ್ಟಿರಬೇಕು ಈ ವಿಷಯವನ್ನು. ಗಾಂಧೀಜಿಯವರು ಹೇಳಿಲ್ಲವೇ Independence is the first postulate of economic reconstruction ಎಂತ. ಹಾಗೆಯೆ Unification is the first postulate of planning for Karnataka— ಏಕೀಕರಣವಿಲ್ಲದೆ ಕರ್ನಾಟಕಕ್ಕೆ ಯಾವ ಯೋಜನೆಯೂ ಸಾಧ್ಯವಿಲ್ಲ—ಎಂದು ಕನ್ನಡಿಗರು ಗಟ್ಟಿಯಾಗಿ ನಂಬಿ ಕುಳಿತರೆ ತಪ್ಪೇನು?

ಅವರೆ ಬರಿಗೈಯಲ್ಲಿ ಮೊಳ ಹಾಕಿದವರು, ಹಾಕುವವರು ಎಷ್ಟಿಲ್ಲ ನಮ್ಮಲ್ಲಿ? ಇನ್ನೂ ಮಾಡಿಕೊಂಡಿರವ ಹೆಂಡತಿ ಹೇಗಿರಬೇಕೆಂದು ಕನಸು ಮೇಲಕಾದಿಸಿದ ಜನವೆಷ್ಟಿಲ್ಲ! ಹುಟ್ಟಿದ ಮಗುವಿನ ಸೊಲಬು ನೆನೆಸುವ ಭಾವೀ ಮಾತೆಯರಿಗೇನು ಕಡಿಮೆ! ಒಂದು ಚೆಂಬು ಹಿಡಿದುಕೊಂಡು ಬಂದು ಮಾರ್ಕೆಟುಗಳನ್ನೆ ಮಾರುಗೊಳ್ಳುವ ಮಾರವಾಡಿಗಳಿಲ್ಲವೆ! ಯೋಜನೆ ಎಂಬುದೇ ಪೂರ್ವಸಿದ್ಧತೆಯ (—ಇನ್ನೂ ಇಲ್ಲದುದನ್ನು ಉಂಟುಮಾಡುವುದರ,) ದ್ಯೋತಕ. ಇದು ಮಾಡುವುದರ ಮೊದಲು ಬಂದಾಕ್ಷಣಕ್ಕೇ ಅದನ್ನೊಂದು ಹಾಳುಗಸನು ಎಂದು ಹಳಿಯಲಾಗದು. ಯೋಜನೆಯನ್ನು ಮುಂಗಾಣದ ನಾಟ ಬಸವನ ಮುಂದೆ ಬಂಡಿ ಹೂಡಿದಂತೆ. ಸಂಯುಕ್ತಕರ್ನಾಟಕ ಇನ್ನೂ ಒಂದು ಕನಸಿನಂತಿದ್ದರೂ ಅವರ ಭಾವೀ ಅಸ್ತಿತ್ವಕ್ಕಾಗಿಯೇ ನಾವು ಒಂದು ಯೋಜನೆಯನ್ನು ಮುಂಗಾಣಬೇಕಾಗಿದೆ. ಯೋಜಕರು ದುರ್ಲಭರಾದರೂ ಯೋಜನೆಯ ಪ್ರಯೋಜನವಿಲ್ಲದಿಲ್ಲ.

೨. ಮೂಲಸಿದ್ಧಾಂತಗಳು.

ಕರ್ನಾಟಕವ ಯೋಜನೆಯ ವಿಚಾರನನ್ನು ಸ್ಥಿರೀಕರಿಸುವ ಮೊದಲು, ಕೆಲವೊಂದು ಅನಿಶ್ಚಿತ ಮಾತುಗಳನ್ನು ಸಂಪೂರ್ಣನಿಶ್ಚಿತ ಸೆಂದು ಖಂಡಿತವಾಗಿ "ಗೃಹಿತ" ಮಾಡಿಕೊಳ್ಳುವುದು ಅತ್ಯವಶ್ಯ. ಇವುಗಳಲ್ಲಿ ಅತ್ಯಂತ ಆವಶ್ಯಕವಾದ ಮಾತುಗಳು ಎರಡು: ಒಂದನೆಯ ವಂದರೆ, ಕರ್ನಾಟಕ ಏಕೀಕೃತವಾಗಿ ಒಂದು **ಪ್ರಾಂತ** ನಾಗಿದೆ ಎಂದು ಕನ್ನಡಿಗರು ತಮ್ಮ ಮಟ್ಟಿಗಾದರೂ ಅಸಿಮಿಸಿಯಿಲ್ಲದೆ ಸಂಬುವುದು. ಎರಡನೆಯದೆಂದರೆ, ಕರ್ನಾಟಕವು ಸರ್ವಾಂಗೀಣವಾಗಿ ಬೆಳೆದರೆ ಅದು ಆರ್ಥಿಕ, ರಾಜಕೀಯ, ಹಾಗು ಸಾಂಸ್ಕೃತಿಕ ಮಟ್ಟದಲ್ಲಿ ಹಿಂದುಸ್ತಾನವ ಬೇರೆಯೆಲ್ಲ ಭಾಗಗಳಷ್ಟೇ—ಸಾಧ್ಯವಾದರೆ ಕೊಂಚ ಹೆಚ್ಚಾಗಿ—ಅಭಿವೃದ್ಧಿ ಪಡೆದು ಹಿಂದುಸ್ತಾನದ ಮೇಲ್ತರಗತಿಯ ರಾಷ್ಟ್ರೀಯ ಘಟಕವಾಗಬಲ್ಲುದು ಎಂಬ ಮಾತು. ಇದರಲ್ಲಿ ಒಂದನೆಯದು ಸಿದ್ಧವಾಡಬೇಕಾದುದನ್ನು ಸಿದ್ಧನೆಂದು ಗೃಹಿಸಿ ಲೆಕ್ಕಗುಣಿತವಾಕುವ ತರ್ಕದ ಮಾತು. ಎರಡನೆಯದು ಆ ತರ್ಕಕ್ಕೆ ತಕ್ಕ ತಳಹದಿಯಾಕುವ ಆತ್ಮವಿಶ್ವಾಸದ ಮಾತು. ಇವೆರಡನ್ನೂ ಗೃಹಿಸುವುದು ಮುಗಿಲಲ್ಲಿ ಈಸಹೋಗುವಂತಹ ಮಾತಲ್ಲ. ಎರಡಕ್ಕೂ ನೆಲೆಯಿಂಬುದಿದೆ. ಕರ್ನಾಟಕವು ಏಕೀಕೃತ ಪ್ರಾಂತವಾಗುವುದು ಸಾಧ್ಯಾಸಾಧ್ಯತೆಯ ಮಾತಾಗಿರದೆ ಕೇವಲ ಅವಧಿ-ಸಿದ್ಧತೆಗಳ ಮಾತಾಗಿದೆ ಇನ್ನು ಕರ್ನಾಟಕವು ಸಂಪನ್ನ ದೇಶವಾದೀತೆಂಬದಕ್ಕೆ ಆದು ಹಿಂದೆ ವೈಭವಶಾಲಿಯಾಗಿದ್ದಿತೆಂಬುದರ ಸಾಕ್ಷಿ ಬೇಡವೆಂದರೂ, ಇಂದಿನ ಯಾಂತ್ರಿಕ ವಿಜ್ಞಾನಿಗಳೂ, ಭೂಗರ್ಭಶಾಸ್ತ್ರಜ್ಞರೂ, ಭೌಗೋಲಿಕತಜ್ಞರೂ, ರಾಸಾಯನಿಕರೂ, ಕರ್ನಾಟಕದ ಹೊಟ್ಟೆಯಲ್ಲಿ ಅಡಗಿದ ಅಗಾಧ ಸಂಪತ್ತಿನ ಬಗೆಗೆ ಇಲ್ಲಲ್ಲಿ ಮಾಡಿವೆ ಸೂಚನೆಗಳೂ ಅಖಂಡನೀಯ ಸಾಕ್ಷಿಗಳಾಗಿವೆ. ಕರ್ನಾಟಕದ ಯೋಜನೆಯ ವಿಚಾರದಲ್ಲಿ ಕರ್ನಾಟಕದ ಗರ್ಭದಲ್ಲಿ ಅಡಗಿದ ಆ ಅಪಾರ ಸಂಪತ್ತಿನ ಕಣಜಗಳ ಎಣಿಕೆಯೂ ಒಂದೇ ಬರುತ್ತದೆ.

೩. "ವಿಕೃತ ಕರ್ನಾಟಕ"

ಮೇಲಿನವೆರಡು ಗೃಹಿಕೆಗಳನ್ನು ಮೂಲಸಿದ್ಧಾಂತವೆಂದು ಹಿಡಿದು ಸಾಗಿದರೂ, ವಸ್ತುತ ಕರ್ನಾಟಕ ಖಂಡಿತವಾಗಿಯೇ ಇರುವುದರಿಂದ, ಸದ್ಯದ ಮಟ್ಟಿಗೆ ಸಂಯುಕ್ತಕರ್ನಾಟಕದ ರೂಪರೇಷೆಯೊಂದನ್ನೂ ಗೃಹಿತವಾಗಿ ಹಿಡಿಮಕೊಳುವುಮೂ ಅವಶ್ಯ. ಏಕೆಂದರೆ ಕರ್ನಾಟಕ ಒಡೆದು ದೋಮಲಲ್ಲವೆ, ಕಳಿದ ನೂರಾರು ವರ್ಷಗಳಲ್ಲಿ ತನ್ನ ಅಂಚುಗಳನ್ನು ಸವೆಯಿಸಿಕೊಳ್ಳುತ್ತ ಬಂದಿದೆ. ಆದರೆ ಗಡಿಗಳು ಕಾಲಾನುಕ್ರಮದಲ್ಲಿ ಹಿಂಜರಿಯುತ್ತ ಸಡೆದಿವೆ. ಅವರ ಒಟ್ಟು ವಿಸ್ತಾರ ಖಾನೇಸುಮಾರಿಯಿಂದ ಖಾನೇಸುಮಾರಿಗೆ ಸಂಕುಚಿತವಾಗುತ್ತ ಸಡೆದಿದೆ. ಆದ್ದರಿಂದ ನಮ್ಮ ಕರ್ನಾಟಕ ಇಷ್ಟೇ ಎಂದು ಹೇಳುವುದು ತಜ್ಞರಿಗೂ ಅಸಾಧ್ಯವಾಗಿದೆ. ಈ ವರೆಗೆ ಗಡಿಸಮಿತಿಗಳನ್ನು ನೇಮಿಸುವ ಆವಶ್ಯಕತೆ ಸರಕಾರಕ್ಕೆ ಬರಲಿಲ್ಲ. ಕರ್ನಾಟಕವ ಯಾವುದೂ ಒಂದು ಕೇಂದ್ರ-ಸಂಸ್ಥೆ ಕರ್ನಾಟಕದ ಗಡಿ 'ಇಷ್ಟು' ಎಂದು ಅಂಕೆ–ಗ್ಣಣಿತ–ಪರಿಮಿತಿಗಳಿಂದ ಗೊತ್ತುಮಾಡುವ ಹವ್ಯಾಸಕ್ಕೂ ಹೋಗಿಲ್ಲ. ಮೂಲ ಕರ್ನಾಟಕ ಅಥವಾ ಒಳುತಮ ಕರ್ನಾಟಕ (Minimum Karnataka) ಇಷ್ಟು, ಬೃಹತ್ತಮ ಕರ್ನಾಟಕ (Maximum Karnataka) ಇಷ್ಟು ಎಂದು ಈಗಾಗಲೇ ಗೊತ್ತಾಗಬೇಕಿತ್ತು. ಅಲ್ಲಲ್ಲಿ ಕೆಲವು ವೈಯಕ್ತಿಕ ಪ್ರಯತ್ನಗಳು ಕರ್ನಾಟಕದ ಗಡಿ ಗೊತ್ತುಮಾಡುವ ದಿಶೆಯಲ್ಲಿ ಆಗಿವೆಯೇನೋ ನಿಜ. ತೀರ ಇತ್ತೀಚಿನ, ಇದ್ದುದರಲ್ಲೇ ಹೆಚ್ಚು ಪ್ರಮಾಣಬದ್ಧವಾದ ಪ್ರಯತ್ನವೆಂತಿರುವುದು ಶ್ರೀ ಎಂ. ಎಚ್. ಕೃಷ್ಣ ಅವರು ತಯಾರಿಸಿದ ಕರ್ನಾಟಕದ ನಕಾಶೆ. ಇವಲ್ಲದೆ ಶ್ರೀ. ವೆಂಕಟ ರಂಗೋ

ಕಟ್ಟಿಯವರು, ಧಾರವಾಡಕರ ನಾಮನರಾಯರು, ಕಾವ್ಯರತ್ನ ಕುಲಕರ್ಣಿಯವರು, ಮುಳಬಾಗಿಲ ಅವರು, ರಾ. ಹ. ದೇಶಪಾಂಡೆಯವರು, ಪುಣೆಯ ದಾತಾರ್ ಆ್ಯಂಡ್ ಕಂಪನಿಯವರು, ಕರ್ನಾಟಕ ವ್ರಾಂತಿಕ ಕಾಂಗ್ರೆಸ್ಸಿನವರು, ಏಕೀಕರಣ ಸಂಘದವರು, ಕಲ್ಲೆಯವರು, ಶ್ರೀನಿವಾಸ ಆ್ಯಂಡ್ ಕೋ. ದವರು, ರಾಜಪುರೋಹಿತರು, ಕಾಲ್ಡವೇಲ್-ರಾಯಿಸಾದಿಗಳು, ಎ. ಆಯ್. ಎಸ್. ಎ. ದವರು, ಪ್ರೊ. ಶೇಷಗಿರಿ ಅವರು, Linguistic Survey ದಲ್ಲಿ ಗ್ರಿಯರ್‌ಸನ್ನರು, ಸರಕಾರಿ ಗ್ಯಾಝಿಟ್ಟುಗಳು, ಕ್ಯಾಪ್ಟನ್ ವಿಲ್ಕ್ಸ ಅವರು Indian Cyclopeadia ದವರು ಕರ್ನಾಟಕದ ಸಂಪೂರ್ಣವಾದ ಇಲ್ಲವೆ ಭಾಗಶಃ ರೂಪರೇಷೆಯ ನಕಾಶೆಯನ್ನೂ ವರ್ಣನೆಯನ್ನೂ ಕೊಟ್ಟಿದ್ದಾರೆ. ಈ ಬಗ್ಗೆ ಇಷ್ಟು ಸಾಹಿತ್ಯವಿದ್ದರೂ 'ಇಂದಿನ ಕರ್ನಾಟಕ ಇಷ್ಟೆ' ಎಂದು ಹೇಳುವುದು ದುಸ್ಸಾಧ್ಯವಾಗಿದೆ. ಗಡಿನಾಡುಗಳನ್ನು ಗಟ್ಟಿಮಾಡುವ ಯತ್ನ ಇನ್ನೂ ಆರಂಭವಾಗಿಲ್ಲದುದರಿಂದ, ಮೇಲೆ ಹೇಳಿದಂತೆ ಆ ಗಡಿಗಳು ಸವೆಯುತ್ತ ನಡೆದು, ವಿಚ್ಛಿನ್ನ ಕರ್ನಾಟಕವು ವಿಕೃತ, ಕರ್ನಾಟಕವೂ ಆಗಿದೆ. ಉದಾಹರಣೆಗೆ ಕ್ಯಾಪ್ಟನ್ ವಿಲ್ಕ್ಸ ಅವರ ವರ್ಣನೆಯ ಮೇರೆಗೆ ಸಾತಾರೆ ಜಿಲ್ಲೆಯ ಆಗ್ನೇಯ ಅರ್ಧಕ್ಕಿಂತ ಹೆಚ್ಚು ಭಾಗ ಕರ್ನಾಟಕದಲ್ಲಿ ಸಮಾವೇಶವಾಗಬೇಕು. ಕರ್ನಾಟಕದ ಉತ್ತರದ ಗಡಿಯನ್ನು ಅವರು ಬಹಳ ಸ್ಪಷ್ಟವಾಗಿ ಕೊಟ್ಟು ಹೇಳಿದ್ದಾರೆ: 'ಕೃಷ್ಣಾನದಿಯ ಉಗಮದಿಂದ ಸ್ವಲ್ಪ ದೂರ ಪೂರ್ವಕ್ಕೆ ಆ ಮೇಲೆ ಈಶಾನ್ಯದಿಶೆಯಲ್ಲಿ ಬೀದರದ ಉತ್ತರಕ್ಕೆ (೧೯° ೪೫' ಅಕ್ಷಾಂಶದ ವರೆಗೆ)' ಕೊರೆದ ಗೆರೆಯೇ ಕರ್ನಾಟಕದ ಉತ್ತರದ ಗಡಿ—ಎಂದು ಅವರ ಅಭಿಪ್ರಾಯ. ಕೃಷ್ಣಾನದಿಯ ಉಗಮದ ವರೆಗೆಂದರೆ ಸಾತಾರಾ ಜಿಲ್ಲೆಯ ಅರ್ಧಭಾಗವೇ. ಇಂಡಿಯನ್ ಸಾಯಕ್ಲೋಪೀಡಿಯದಲ್ಲಿ, ಕರ್ನಾಟಕದ ಉತ್ತರದ ಅಂಚು ಬೀದರ ದಾಟಿ, ಮುರಕುಂದ ಎಂಬ ಹಳ್ಳಿಯ ವರೆಗೆ ಎಂದು ಹೇಳಿದೆ. ಆದರೆ ಕರ್ನಾಟಕಕ್ಕೆ ಇಂದು ಆ ಭಾಗಗಳೆಲ್ಲ ದೊರೆತಾವೆ?—ಎಂಬುದೇ ಪ್ರಶ್ನಾರ್ಧಕದ ವಾತಾವರಣವಾಗಿದೆ. ಇದಲ್ಲದೆ ಇನ್ನೊಂದು ಬಿಗಿ ಮಾತೆಂದರೆ, ಇತ್ತೀಚಿನ ಗಡಿ ಗೊತ್ತುಮಾಡುವ ಯತ್ನಗಳಲ್ಲಿ ಒಂದಕ್ಕೊಂದು ತಾಳಮೇಳವಿಲ್ಲ. ಡಾ. ಕೃಷ್ಣ ಅವರು ಗೋವೆಯನ್ನು ಒಳಗೊಂಡು ಉಸ್ಮಾನಬಾದವನ್ನು ಹೊರಗೆ ಬಿಟ್ಟಿದ್ದಾರೆ. ಏಕೀಕರಣ ಸಂಘದವರ ನಕಾಶೆಯಲ್ಲಿ ಉದಗಿರಿ ಉಳಿದು ಉಸ್ಮಾನಬಾದವ ಭಾಗ ಒಳಗೊಂಡಿದೆ. ಮುಳಬಾಗಲು ನೀಲಗಿರಿಯನ್ನು ಹೊರಗೆ ಬಿಟ್ಟಿದ್ದಾರೆ. ಹೀಗಾಗಿ ನಮ್ಮ ಕರ್ನಾಟಕದ ವಿಸ್ತಾರ, ಯೋಜನೆಯ ದೃಷ್ಟಿಯಿಂದ ಎಷ್ಟಿರಬಹುದು, ಎಷ್ಟಿರಬೇಕು, ಎನ್ನುವದು ಗೊತ್ತಾಗುವುದೇ ಇಲ್ಲ.

೪ "ನಮ್ಮ ಕರ್ನಾಟಕ"

ಹೀಗಿದ್ದರೂ ಯೋಜನೆಯ ದೃಷ್ಟಿಯಿಂದ ಒಂದು "ಗೃಹಿತ ಕರ್ನಾಟಕ"ದ ಆವಶ್ಯಕತೆಯಿದೆ. ಈ ಗೃಹಿತ ಕರ್ನಾಟಕಕ್ಕೇ ನಮ್ಮ ನಾನು "ನಮ್ಮ ಕರ್ನಾಟಕ" ಎನ್ನುತ್ತೇನೆ. ಬಹು ಜನ ಕನ್ನಡ ತಜ್ಞರ ಎಣಿಕೆಗಳಿಂದ ಸರಾಸರಿಯಾದ ಒಂದು ಗಡಿಯನ್ನು ಕೊರೆದು ಸದ್ಯಕ್ಕೆ ಅದು ನಮ್ಮ ಕರ್ನಾಟಕ ಎಂದು ತಿಳಿದು ಸಾಗಬೇಕಾಗಿದೆ. ಗಡಿಗಳ ನಾಗಮುರಿಗೆಯನ್ನು ಗಡಿ ಸಮಿತಿಯವರೇ ಗೊತ್ತುಮಾಡಬಲ್ಲರು. ಆದ್ದರಿಂದ ಈಗಿನ ಮಟ್ಟಿಗೆ ನಾವೊಂದು ಸರಳರೇಖೆಯ ಗಡಿ-ಗುರುತಿನಿಂದ ಕರ್ನಾಟಕದ ವಿಸ್ತಾರ ಇಷ್ಟೆಂದು ಗೊತ್ತುಮಾಡಿಕೊಂಡು ಸಾಗುವ. ಸರಳರೇಖೆಯ ಗಡಿ ಕೊರೆದ ನಕಾಶೆಯಲ್ಲಿ ನಮ್ಮದು ಸ್ವಲ್ಪ ಹೊರಗೆ ಹೋಗುವುದು ಹೊರಗಿನದು ಸ್ವಲ್ಪ ಒಳಗೆ ಬರುವುದೂ ಸಂಭವನೀಯ. ಆದರೆ ನಜಾಬಾಕಿಯ ಲೆಕ್ಕದಲ್ಲಿ ಒಟ್ಟಾರೆ ವಿಸ್ತಾರ ನಾವು ಗೃಹಿಸಿದಷ್ಟೆ ಆಗುವುದೂ ಅಷ್ಟೇ ಸಂಭವನೀಯ. ಕರ್ನಾಟಕದ ಈಗಿನ ಭೌಗೋಲಿಕ ಸ್ಥಿತಿಯನ್ನು ಸ್ಥೂಲವಾಗಿ ಹೇಳಬೇಕೆಂದರೆ, ಕೊಲ್ಹಾಪುರ, ಸೊಲ್ಹಾಪುರ, ಉದಯಗಿರಿ, ಹೈದ್ರಾಬಾದ, ಸೇಲಂ, ಕೊಯಿಮತ್ತೂರುಗಳ ನಡುವಣ ನಾಡೇ ಕರ್ನಾಟಕ ಎನ್ನಬಹುದು ಅಥವಾ ನದಿಗಳ ಲೆಕ್ಕದಿಂದ ಹೇಳುವುದಾದರೆ, ನಿಜಾಮದಲ್ಲಿ ಮಂಜೀರಾ, ಅನಂತಪುರದಲ್ಲಿಯ ಪೆನ್ನಾರ್ ಕೊಯಿಮತ್ತೂರಿನಲ್ಲಿಯ ಭವಾನಿ ಹಾಗು ಪಶ್ಚಿಮಕ್ಕೆ ಕಡಲ ಕರೆ ಇವುಗಳ ನಡುವಣ ನಾಡೇ ಕರ್ನಾಟಕ. ಇನ್ನು ಸರಳ ರೇಖೆಯ ಗೆರೆ ಕೊರೆದು ಹೇಳುವುದಾದರೆ ಕೊಲ್ಹಾಪುರದಿಂದ ಈಶಾನ್ಯ ಮುಖವಾಗಿ ಸರಳರೇಖೆಯಲ್ಲಿ ಉದಯಗಿರಿಯವರೆಗೆ ಎಳೆದ ಗೆರೆ ಕರ್ನಾಟಕದ ಉತ್ತರದ ಗಡಿ; ಉದಯಗಿರಿಯಿಂದ ಅನಂತಪುರ, ಅಲ್ಲಿಂದ ಸ್ವಲ್ಪ ಹೊರಳಿ ಸೇಲಂ ವರೆಗೆ ಎಳೆದ ಎರಡು ಸರಳರೇಖೆಗಳ ಗೆರೆ ಪೂರ್ವದ ಗಡಿ; ಸೇಲಂನಿಂದ ಪಶ್ಚಿಮಕ್ಕೆ ಕೊಯಮತ್ತೂರ ವರೆಗಿನ ಒಂದು ಸರಳರೇಖೆ, ಅಲ್ಲಿಂದ ವಾಯವ್ಯಕ್ಕೆ ಹೊರಳಿ ಹೊಸದುರ್ಗದ ದಕ್ಷಿಣಕ್ಕೆ ಕಾಸರಗೋಡು ತಾಲೂಕಿನ ಗಡಿಯವರೆಗೆ ಎಳೆದ ಮತ್ತೊಂದು ಸರಳರೇಖೆ, ಇವು ದಕ್ಷಿಣದ ಗಡಿ; ಅಲ್ಲಿಂದ ಸದಾಶಿವಗಡದ ವರೆಗೆ ಕರಾವಳಿಯ ಗೆರೆ, ಹಾಗು ಸದಾಶಿವಗಡದಿಂದ ಉತ್ತರಕ್ಕೆ ಕೊಲ್ಹಾಪುರದ ವರೆಗೆ ಎಳೆದ ಮತ್ತೊಂದು ಗೆರೆ ಇವು ಪಶ್ಚಿಮದ ಗಡಿ.

ಆರ್ಥಿಕ ಯೋಜನೆಯ ದೃಷ್ಟಿಯಿಂದ ಈ ಸ್ಥೂಲ ವಿಭಾಗವೇ ಸಾಕು. ಯಾಕೆಂದರೆ, ಕರ್ನಾಟಕವೇನು ನಡುಗಡ್ಡೆಯಲ್ಲ; ಮೇಲಾಗಿ ಕರ್ನಾಟಕದ ಆರ್ಥಿಕ ಯೋಜನೆ ಹಿಂದುಸ್ತಾನದ ಆರ್ಥಿಕ ಯೋಜನೆಯ ಒಂದಂಶ ವಾಗ್ರಾ. ಅದನ್ನು ಕೊರೆದಿಟ್ಟುಕೊಂಡಂತೆ ವಿಶಿಷ್ಟವಾಗಿ ಯೋಜಿಸುವುದು ಸಾಧ್ಯವಿಲ್ಲ. ಇಂಥ ಯೋಜನೆಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ-ಆಂಧ್ರಗಳೊಡನೆ ಸಹಕರಿಸಿಯೇ ತೀರಬೇಕು. ಅಲ್ಲದೆ ಕರ್ನಾಟಕದ ಪಕ್ಕದಲ್ಲಿಯೇ ಸಿಕ್ಕು ಮಹಾರಾಷ್ಟ್ರಕ್ಕಿಂತಲೂ ಕರ್ನಾಟಕಕ್ಕೇ (ಭೌಗೋಲಿಕ ಆರ್ಥಿಕ ದೃಷ್ಟಿಗಳಿಂದ) ಹೆಚ್ಚು ಸಂಬಂಧವಿಟ್ಟ ಗೋವೆ, ಸಾವಂತವಾಡಿ, ದಕ್ಷಿಣರತ್ನಾಗಿರಿ ತಾಲೂಕುಗಳು, ಯೋಜನೆಯ ವಿಷಯದಲ್ಲಿ ಕರ್ನಾಟಕದೊಡನೇ ನೊಗ ಹೂಡಬೇಕಾಗುತ್ತದೆ. ಇದಲ್ಲದೆ ಸಾತಾರೆಯ ಹೆಚ್ಚು ಭಾಗ—ಆರ್ಥಿಕ ಯೋಜನೆಯ—ದೃಷ್ಟಿಯಿಂದ ಕರ್ನಾಟಕದೊಡನೇ ತೊಡಕಿಕೊಳ್ಳುತ್ತದೆ. ಹೀಗೆ "ಕನ್ನಡ ಕರ್ನಾಟಕ"ದಲ್ಲಿ ಅಲ್ಲದಿದ್ದರೂ, "ಆರ್ಥಿಕ ಕರ್ನಾಟಕದಲ್ಲಿ" ಒಂದು ಕಡೆ ಮಹಾರಾಷ್ಟ್ರದ ಇನ್ನೊಂದು ಕಡೆ ಆಂಧ್ರದ ತುಣುಕುಗಳೂ ಒಳಸೇರಬೇಕಾಯಿತು. ಇದೆಲ್ಲವನ್ನು ಮನದಂದು ಒಟ್ಟಾರೆ ಕೊಲ್ಹಾಪುರ, ಉದಯಗಿರಿ, ಸೇಲಂ, ಕೊಯಮತ್ತೂರುಗಳ ನಡುವಣ ನಾಡು ಒಂದು ಆರ್ಥಿಕಘಟಕವಾಗಿ ಲಾಭದೊಂದಬಹುದಾದ್ದರಿಂದ, ಸಮ್ಮ ಯೋಜನೆ ಆ ವಿಸ್ತಾರಕ್ಕನುಗುಣವಾಗಿರುವುದು ಆವಶ್ಯಕವಾಗಿದೆ.

೫ ನಾಲ್ಕು ಕೋಟಿ ಕನ್ನಡಿಗರು?

ಪ್ರತಿಯೊಂದು ಯೋಜನೆಗೂ ಕೆಲವೊಂದು ಮೂಲ ಸಲಕರಣೆಗಳ (Pre-requisits) ಆವಶ್ಯಕತೆಯಿದ್ದೇ ಇರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಪ್ರತಿಯೊಂದು ಆರ್ಥಿಕ ಘಟಕವೂ ಸಂಪೂರ್ಣ ಫಲಪ್ರದವಾಗುವಂತೆ ಯೋಜಿಸುವುದಾದಲ್ಲಿ, ಆ ಘಟಕವು ಒಂದೇ ರಾಜಕೀಯ ಘಟಕವಾಗಿ ಒಂದೇ ಆಡಳಿತಕ್ಕೊಳಗಾಗಿರುವುದೂ ಅವಶ್ಯವಾಗಿರುತ್ತದೆ. ಇವಲ್ಲದೆ ಯೋಜನೆಗೊಳಗಾಗುವ ಪ್ರದೇಶದಲ್ಲಿರುವ ಜನಗಳ ಜೀವಿತದ ಬಗೆಯ, ಆಯಾ ಪ್ರದೇಶದ ಭೌಗೋಲಿಕ ನೈತಿಷ್ಟ್ಯಗಳ, ಹಾಗು ಆರ್ಥಿಕ ಉತ್ಪಾದನೆಯ ವೈವಿಧ್ಯದ ಅಭ್ಯಾಸವೂ ಅಷ್ಟೇ ಅವಶ್ಯಕವಾದದ್ದು. ಎಲ್ಲ ಯೋಜನೆಗಳಂತೆ ಕರ್ನಾಟಕದ ಯೋಜನೆಯ ಉದ್ದೇಶವೂ, ಕರ್ನಾಟಕದ ವಿವಿಧ ಸಂಪತ್ತಿನ ಮೂಲಗಳನ್ನೂ ಆರ್ಥಿಕ ಜೀವನದ ಸಾಧನೆಗಳನ್ನೂ ಸಂಪೂರ್ಣವಾಗಿ ವಿಕಾಸಗೊಳಿಸಿ, ಅಭಿವೃದ್ಧಿಗೊಳಿಸಿ, ಕರ್ನಾಟಕದ ಜನತೆಯ ಜೀವನದ ಮಟ್ಟವನ್ನು (Standard of life) ಹೆಚ್ಚು ಉಚ್ಚವಾಗಿ, ಸದೃಢವಾಗಿ, ಸಂತೃಪ್ತಿಶೀಲವಾಗುವಂತೆ ಮಾಡುವುದೇ ಸರಿ. ಪ್ರಸ್ತುತ ಸ್ಥಾಪಿತವಾಗಿರುವ ಪರಿಸ್ಥಿತಿ ಸಂಬಂಧವಾದ ಅಭ್ಯಾಸವಲ್ಲದೆ ಇನ್ನೊಂದು ಮಾರ್ಮಿಕವಾದ ಸಾತನ್ನೂ ನಾವು ಕರ್ನಾಟಕದ ವಿಷಯದಲ್ಲಿ ಲಕ್ಷ್ಯದಲ್ಲಿಡಬೇಕಾಗುತ್ತದೆ. ಅದೆಂದರೆ ಕರ್ನಾಟಕವು ಐತಿಹಾಸಿಕ ರಾಜಕೀಯ ಘಟನೆಗಳಿಂದಾಗಿ ಒಡೆದು ಮೈಸೂರಿಂದ, ಕರ್ನಾಟಕ ಬೇರೆ ಪ್ರಾಂತಗಳಿಂತ ಯೋಜನೆಯ ಪರ್ಯತ್ತಿನಲ್ಲಿ ಬರ್ಮಾ ಹಿಂದೆ ಬಿದ್ದಿದೆ. ಅನುಯೊಡನೆ ಬಿದ್ದು ಕಟ್ಟಿದ ಮೊಲದ ಹಾಗೆ. ಆದ್ದರಿಂದ ಕರ್ನಾಟಕದ ಯೋಜನೆಯು ಸ್ವಾಭಾವಿಕವಾಗಿ ಉಳಿದ ಪ್ರಾಂತೀಯ ಯೋಜನೆಗಳಿಗಿಂತ ಹೆಚ್ಚು ವಿಸ್ತಾರವುಳ್ಳದ್ದೂ ಹೆಚ್ಚು ಆಳವಾದದ್ದೂ, ಅಂತೆಯೆ ಹೆಚ್ಚು ಹೆಚ್ಚು ವುಳ್ಳದ್ದೂ ಆಗಬೇಕಾಗಿದೆ. ಕರ್ನಾಟಕದ ಯೋಜನೆಯು ಸಾಧ್ಯವನ್ನು ಇನ್ನೂ ಹೆಚ್ಚಿಸುವ ಸಾಧನಗಳೆಂದರೆ ಕರ್ನಾಟಕದ ಪ್ರಸ್ತುತ ಸಂಪತ್ತಿನ ಆಗರಗಳನ್ನು ಇರುವುದೇ. ಉದಾಹರಣೆಗೆ ಕರ್ನಾಟಕದಲ್ಲಿ ಸಿಕ್ಕುವ ಬಂಗಾರವನ್ನೆಲ್ಲ ಶೋಧಿಸಿ ತೆಗೆಯುವುದಾದರೆ ಅಬ್ಜಸ್ಟೆಲೆ ರೂಪಾಯಿಗಳ ಯೋಜನೆ ಬೇಕಾದೀತು. ಕರ್ನಾಟಕದ ಸಂಪತ್ತಿನ ರೀತಿಯೇ ಹೀಗೆ. ಹಾಗೆಷ್ಟು ಜನವನ್ನು ಹೀರಿಕೊಂಡು ಅದಕ್ಕೆ ಹತ್ತಾಗಿ ಫಲಿಸುವಂತಿವೆ ಕರ್ನಾಟಕದ, ಸಂಪತ್ತಿನಾಗರ. ಖನಿಜಾತಗಳ ಸಂಪತ್ತನ್ನು, ಖನಿಜಗಳ ಸಂಪತ್ತನ್ನು, ಕೃಷಿಸಂಪತ್ತನ್ನು, ಅರಣ್ಯಗಳ ಸಂಪತ್ತನ್ನು, ಉದ್ಯೋಗಗಳ ಸಂಪತ್ತನ್ನು—ಯಾವುದೇ ಸಂಪತ್ತುಗಳನ್ನು ಸ್ವೀಕರಿಸಿಕೊಳ್ಳುವುದಾದರೂ ಅಂತರಗಳು ಮೊದಲಾದೀತು. 'ಮೊದ್ದಿವರೆಲ್ಲರೂ ಮೊದ್ದ'ನಂಬಂತೆ ಕರ್ನಾಟಕವ ಯೋಜನೆಯೂ ಮೊದ್ದ ಪ್ರಮಾಣದಲ್ಲಿಯೇ ಆಗಬೇಕಾಗಿದೆ. ಹಣದ ಮಾತೇ ಏಕೆ? ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಈಗಿದ್ದ ಕನ್ನಡಿಗರ ಕೈಗಳೂ ಸಾಲದೆ ಹೋದಾವು. ಕರ್ನಾಟಕದ ಜನಸಂಖ್ಯೆ ಕನಿಷ್ಠ ನಾಲ್ಕು ಕೋಟಿಯಾದೀತು. ಅಷ್ಟು ಕೈಗಳಿಗೆ ಕೆಲಸ ಕೊಟ್ಟು, ಅಷ್ಟು ಹೊಟ್ಟೆಗಳಿಗೆ ಅನ್ನ ಹಾಕುವ ಆರ್ಥಿಕ ಶಕ್ತಿ ಕರ್ನಾಟಕದ ಅಂತರ್ಯದಲ್ಲಿಯೇ ಇವೆ. ಕರ್ನಾಟಕದ ಸಂಪೂರ್ಣ ಆರ್ಥಿಕ ಉನ್ನತಿಯಾದಾಗ, ಸಂಪತ್ತಿನಲ್ಲೂ ವೈಭವದಲ್ಲೂ, ಜನಬಲದಲ್ಲಿಯೂ * ಕನ್ನಡಿಗರು ಬೇರೆಲ್ಲ ಪ್ರಾಂತಗಳಿಗಿಂತ ಮುಂದು-ಹೆಜ್ಜೆಯವರಾದಾರು. ಅದಕ್ಕೆಲ್ಲ ಯೋಜನೆ ಬೇಕು; ಯೋಜಕರೂ ಬೇಕು; ಅದಕ್ಕೂ ಹೆಚ್ಚಾಗಿ ಸಮಷ್ಟಿಯ ದೃಷ್ಟಿ ಹಾಗು ಧ್ಯೇಯ ಪರಾಯಣತೆ ಬೇಕು. ಇಂದು ಕನಿಷ್ಠವಾದ ಕರ್ನಾಟಕ ಆತ್ಯುತ್ಕೃಷ್ಟ ಕರ್ನಾಟಕವಾಗಬಲ್ಲ ಆರ್ಥಿಕ ಬಲಾಂಶವಿದೆ ಕರ್ನಾಟಕದಲ್ಲಿ; ಅದನ್ನು ಸರಿಯಾದ ವ್ಯಾಯಾಮದಿಂದ ಬೆಳೆಯಿಸುವ ಬುದ್ಧಿ-ಸಂಕಲ್ಪಗಳೂ ಬೇಕು.

೬ ಯೋಜನೆಯ ಬೀಜಮಾತುಗಳು

ಇನ್ನು ಕರ್ನಾಟಕ ಅಭ್ಯುದಯಗಟ್ಟಿಲೆ ಸಂಪತ್ತಿನ ಆಗರವಾಗಬಲ್ಲುದೆಂಬ ಬೀಜಮಾತಿನ ನಿಜಾಂಶವನ್ನು ಅಳೆಯುವ. ಹಿಂದೆ ಸರಳರೇಪೆಯ ಗಡಿಯ ಗುರುತಿನಿಂದ "ನಮ್ಮ ಕರ್ನಾಟಕ"ವ ರೂಪರೇಷೆಯನ್ನು ಗೊತ್ತುಮಾಡಿದೆವಷ್ಟೇ, ಈ ಕರ್ನಾಟಕವ ವಿಸ್ತಾರ ಸುಮಾರು ೧ ಲಕ್ಷ ಚದರ ಮೈಲು. ಈ ವಿಸ್ತಾರದ ಸರಾಸರಿ ಜನಸಂಖ್ಯೆ ಮೈಲಿಗೆ ೨೦೦ ರಷ್ಟು ಎಂದು ಹಿಡಿದರೆ, ಕರ್ನಾಟಕದ ಇಂದಿನ ಜನಸಂಖ್ಯೆ ಸುಮಾರು ೨ ಕೋಟಿ ಎನ್ನಬಹುದು. ವಿಸ್ತಾರದ ದೃಷ್ಟಿಯಿಂದ ಮೈಸೂರು (೨೯೦೦೦ ಚ. ಮೈ.) ಸುಮಾರು ಕರ್ನಾಟಕದ ಮೂರರಲ್ಲಿ ಒಂದಂಶ. ಜನಸಂಖ್ಯೆಯಲ್ಲೂ ಮೈಸೂರು (೭೨ ಲಕ್ಷ) ಮೂರರಲ್ಲಿ ಒಂದಂಶವೆ. ಮೈಸೂರಿನ ಉಪ್ಪನ್ನ ೧೯೧೦ ರಲ್ಲಿ ೨ ಕೋಟಿ ಇದ್ದದ್ದು ೧೯೪೦ ರಲ್ಲಿ ೪ ಕೋಟಿಯಾಗಿದೆ. ಈ ನೂರಕ್ಕೆ ನೂರು ಪಟ್ಟಿನ ಆದಾಯದ ಬೆಳೆವಣಿಗೆಗೆ, ಮೈಸೂರು ಔದ್ಯೋಗೀಕರಣದಲ್ಲಿ ಪ್ರಗತಿಪರವಾದ ದಾರಿಯನ್ನು ಹಿಡಿದುದೇ ಕಾರಣವಾಗಿದೆ. ಕರ್ನಾಟಕದ ಒಳನಾಡಾದ ಮೈಸೂರಿನಲ್ಲಾವ ಪ್ರಗತಿ ಕರ್ನಾಟದ ಉಳಿದ ಭಾಗಗಳಲ್ಲಿ ಆಗಿಲ್ಲ. ಇಷ್ಟೇ ಅಲ್ಲ, ಅಲ್ಲಲ್ಲಿ ಪ್ರಗತಿ ಹಿಮ್ಮೋಡಾದ ಉದಾಹರಣೆಗಳೂ ಉಂಟು. ಕೃಷಿ, ಉದ್ಯೋಗ, ವಿದ್ಯುತ್ತು, ಖನೀಜಸಂಪತ್ತು, ಅಡವಿಯ ಸಂಪತ್ತು, ಮುಂತಾದುವುಗಳಲ್ಲಿ ಮೈಸೂರು ಸವ್ವ ಕರ್ನಾಟಕದ ಕೆನೆಯಂತ ಕಂಡರೂ, ಮೈಸೂರಿಗಿಂತಲೂ ಹೆಚ್ಚು ಫಲವತ್ತಾದ ನೆಲ, ಹೆಚ್ಚು ಪ್ರಬಲವಾದ ಔದ್ಯೋಗಿಕ ಪರಂಪರೆಗಳು, ಹಚ್ಚು ವಿದ್ಯುತ್ತನ್ನು ಹುಟ್ಟಿಸಬಲ್ಲ ಎಡೆಗಳು, ಹೆಚ್ಚು ಬೆಲೆಯುಳ್ಳ ಖನಿಜಗಳು, ಹಚ್ಚು ಮೂಲ್ಯವಾದ ಗಣಿಗಳು

* ಇತ್ತೀಚಿನ ಜನಗಣತಿಗಳ ಪ್ರಕಾರ ಕರ್ನಾಟಕದಲ್ಲಿ ಎಲ್ಲಕ್ಕೂ ಸಿಬಿದವಾದ ತಾಲ್ಲೂಕು ನುಂಗಳೂರು—ಚದರ ಮೈಲಿಗೆ ೫೦೦ ರಷ್ಟು ಜನಸಂಖ್ಯೆ. ಎರಡನೆಯ ನಂಬರಿನ ತಾಲ್ಲೂಕು ಚಿಕ್ಕೋಡಿ; ಮೈಲಿಗೆ ೪೦೦ ರಷ್ಟು ಜನಸಂಖ್ಯೆ. ಎಲ್ಲಿಕ್ಕೂ ವಿರಳವಾದ ತಾಲ್ಲೂಕುಗಳು, ಎಲ್ಲಾಪುರ; ಹಾಗು ಹಲ್ಲಿಯಾಳ; ಮೈಲಿಗೆ ೬೫ ರಷ್ಟು : ಸರಾಸರಿ ಜನಸಿಬಿದತೆ ಚದರ ಮೈಲಿಗೆ ೨೦೦ ರ ಒಳ-ಹೊರಗೆ ಎನ್ನಬಹುದು. ಈಗಿನ ಚಿಕ್ಕೋಡಿ ತಾಲೂಕಿನ ಸುಖಸಮೃದ್ಧಿ ಹಾಗು ಜನಸಿಬಿದತೆ ಇಡೀ ಕರ್ನಾಟಕದಲ್ಲಿ ಆದರೆ, ಕರ್ನಾಟಕದ ಜನಬಲ ೪ ಕೋಟಿಯನ್ನು ಸಹಜವಾಗಿ ಮುಟ್ಟೀತು. ಜನಸಂಖ್ಯೆಯನ್ನು ಬೆಳೆಯಿಸುವುದು ಯೋಜನೆಯ ಉದ್ದೇಶವಲ್ಲದಿದ್ದರೂ ಬೆಳೆಯುತ್ತಿರುವ ಜನ-ಸಂಖ್ಯೆಯ ಕ್ರಮವನ್ನು ನುಂಗಂದು, ಮುಗು ಬರುವ ಮೊದಲೇ ಜೊಲ ಸುರಿಸುತುಂಬಿರುವಂತೆ, ಆ ಜನಕ್ಕೆ ತಕ್ಕ ಸುಖ-ಸಮೃದ್ಧಿಯ ಸಾಧನೆಗಳನ್ನು ಒದಗಿಸಿಕೊಡುವುದು ಯೋಜನೆಯ ಮುಖ್ಯ ಕಾರ್ಯ. ಕೈ-ಹೊಟ್ಟೆ-ಕೆಲಸಗಳ ತಾಳೆಯೇ ಯೋಜನೆ.

ಮೈಸೂರ ಹೊರಗಿನ ಕರ್ನಾಟಕದಲ್ಲಿ ಇವೆ. ಇದೀಗ ಹಿಂದುಸ್ತಾನಕ್ಕೆ ಹಿರಿಯ ಹುದ್ದರಿಯಾಗಿರುವ ಮೈಸೂರನ್ನು ಪ್ರಪಂಚದ ಇತರ ಪ್ರಗತಿಪರ ಭಾಗಗಳಿಗೆ ಹೋಲಿಸಿದರೆ ಅದು ಹಿಂದೆ ಬೀಳುತ್ತದೆ ಆದರೂ ಇಂದಿಗೆ ಮೈಸೂರು ಆರ್ಥಿಕ ಸ್ವಾಯತ್ತತೆಯನ್ನು ಪಡೆದ ನಾಡು ಎನ್ನಿಸಿದೆ. ಅದಕ್ಕೆ ಸದ್ಯ ಸಾಲವಿಲ್ಲವಿಷ್ಟೇ ಅಲ್ಲ, ಅದರ ಅಸೆಟ್ಟುಗಳು ಕೋಟ್ಯಂತರ ರೂಪಾಯಿಯಷ್ಟಿವೆ. ಈಗಿರುವ ಮೈಸೂರಿನಷ್ಟೇ ಉಳಿದ ಕರ್ನಾಟಕದ ಭಾಗಗಳೂ ಪ್ರಗತಿ ಪಡೆದರೆ ಮೈಸೂರನ್ನುಳಿದ ಕರ್ನಾಟಕ ಮೈಸೂರಿನೆರಡಷ್ಟಾದರೂ ಸಂಪತ್ತನ್ನು ಳೆದ್ದಾಗಬೇಕು. ಎಂದರೆ ಮೈಸೂರನ್ನುಳಿದ ಕರ್ನಾಟಕದ ಆದಾಯ ಸುಮಾರು ೮ ಕೋಟಿಯಾಗಬೇಕು. ಮೈಸೂರನ್ನೊಳಗೊಂಡ ಇಡಿ ಕರ್ನಾಟಕದ ಉತ್ಪನ್ನ ೧೫ ಕೋಟಿಯಾಗಬೇಕು. ಎಂದರೆ ಇದು ಸುಮ-ಸುಮಾರು ಬಂಗಾಲ, ಪಂಜಾಬಗಳ ಹತ್ತಿರದ ಆದಾಯವಲ್ಲದೆ, ಬಿಹಾರ, ಸಿ. ಪಿ. ಸಿಂಧಗಳ ಎರಡರಷ್ಟು. ಈ ಲೆಕ್ಕವಂತೆ ಕೇವಲ ಬ್ರಿಟಿಷ ಕರ್ನಾಟಕದ ಉತ್ಪನ್ನವೇ ನಾಲ್ಕುಕೋಟಿಯಾಗಬೇಕು. ಈ ನಾಲ್ಕುಕೋಟಿಯೆಂದರೆ ವಾಯುವ್ಯ ವ್ಯಾಂತ, ಓರಿಸಾ, ಆಸಾಮಗಳಿಗಿಂತಲೂ ಹೆಚ್ಚಿನ ಆದಾಯ. ಆದರೆ ಮೈಸೂರ ಹೊರಗಿನ ಕರ್ನಾಟಕದ ಆದಾಯವಾಗಲಿ, ಕೇವಲ ಬ್ರಿಟಿಷ ಕರ್ನಾಟಕದ ಆದಾಯವಾಗಲಿ ನಾವು ಗ್ರಹಿಸಿದ ಅಂಕೆಗಳ ಅರ್ಧ ಕೂಡ ಇಲ್ಲ. ಯುದ್ಧಸಮಯದಲ್ಲಿ ಮೈಸೂರಿನ ಉತ್ಪನ್ನ ೪ ಕೋಟಿಗೇರಿತು. * ಮೈಸೂರ ಹೊರಗಿನ ಕರ್ನಾಟಕದಲ್ಲಿ ಇದೇ ಪ್ರಮಾಣದ ಬೆಳೆವಣಿಗೆಯಾಗಲಿಲ್ಲ. ಇದಕ್ಕೆಲ್ಲ ಕಾರಣವೆಂದರೆ ಮೈಸೂರು ಒಂದೇ ಅಖಂಡವಾದ ತುಂಡಾಗಿದ್ದು, ಬೆಳೆವಣಿಗೆಗೆ ಪೂರಣವಾದಷ್ಟು ವಿಸ್ತಾರವಾಗಿದ್ದು, ಒಂದೇ ರಾಜಕೀಯ ಆಡಳಿತಕ್ಕೆ ಒಳಗಾದುದೊಂದು ಮಹತ್ತ್ವದ ಕಾರಣವೆಂದರೆ, ಮೈಸೂರಿನ ಮಹತಿಗೆ ಅದಕ್ಕೂ ಮಹತ್ತರವಾದ ಇನ್ನೊಂದು ಕಾರಣ ಇದೆ: ಈಗ ೩೫ ವರ್ಷಗಳ ಹಿಂದೆಯೆ ಮೈಸೂರಿನಲ್ಲಿ ಸರ್ವಾಂಗೀಣ ಆರ್ಥಿಕ ಪುನರುಜ್ಜೀವನದ ಕಾರ್ಯ, ಮುನ್ನೋಟದ ಮಹರ್ಷಿ ಸರ್. ವಿಶ್ವೇಶ್ವರಯ್ಯನವರಿಂದ ಆರಂಭವಾದದ್ದು. ಕರ್ನಾಟಕದ ಆರ್ಥಿಕ ದೃಷ್ಟಿಯಿಂದ ಸ್ವಾಯತ್ತ(Self Sufficient) ಆದೀತೇ ಎಂಬುವರಿಗೆ ಮೈಸೂರು ಈಗಾಗಲೇ ಉತ್ತರ ಕೊಟ್ಟಿದೆ. ಒಂದು ತುಂಡಿನಲ್ಲಾದ ಪ್ರಗತಿ ಆ ತುಂಡಿಗಿಂತಲೂ ಹೆಚ್ಚು ಆರ್ಥಿಕ ಆಸ್ಪದವುಳ್ಳ ಇಡಿಯಲ್ಲಿ ಆಗಬಾರದೇಕೆ ಎಂಬುದರ ಉತ್ತರವನ್ನು ಸಂಶಯ ಎತ್ತುವವರೇ ಕೊಡಲಿ. ಭೌಗೋಲಿಕ ದೃಷ್ಟಿಯಿಂದ ಕರ್ನಾಟಕದ್ದೇ ಒಂದು ಭಾಗವಾಗಿದ್ದ ಮೈಸೂರು ಸಂಕ್ಷಿಪ್ತ ಕರ್ನಾಟಕ ಆದಂತಿದೆ. ಮೈಸೂರಲ್ಲಾದ ಪ್ರಗತಿಯ ಮೂರರ ಮೂರು ಪಾಲಿನಷ್ಟು ಪ್ರಗತಿಯನ್ನು ಇಡೀ ಕರ್ನಾಟಕ ಸಹಜವಾಗಿ ತೋರಬಲ್ಲುದು.

೭. ಯೋಜನೆಯ ಪೂರ್ವಯೋಜನೆ.

ಇವರಿಂದ ಒಡೆದು ಬರುವ ಮಾತೆಂದರೆ, ಮೈಸೂರೇತರ ಕರ್ನಾಟಕ ಮೊದಲು ಕನಿಷ್ಠಪಕ್ಷಕ್ಕೆ ಮೈಸೂರನ್ನು ಸರಿಗಟ್ಟುವಂತಹ ಮಟ್ಟವನ್ನು ಮುಟ್ಟುವುದು ಒಂದನೆಯ ಹಂತ; ಆಮೇಲೆ ಮೈಸೂರನ್ನೊಳಗೆಕೊಂಡು ಇಡಿ ಕರ್ನಾಟಕ ಯುದ್ಧೋತ್ತರ ಯೋಜನೆಯ ಪರಾಕಾಷ್ಠೆಯನ್ನು ಮುಟ್ಟುವುದು ಎರಡನೆಯ ಹಂತ; ಹೀಗೆ ನೋಡಿದರೆ ಮೈಸೂರು ಇದೀಗ ಹತ್ತಬೇಕಾದದ್ದು ಒಂದು ಹಂತ; ಉಳಿದ ಕರ್ನಾಟಕ ಹತ್ತಬೇಕಾದದ್ದು ಎರಡು ಹಂತ. ಹೀಗಾದುದಕ್ಕೆ ಕರ್ನಾಟಕ ಮೊಲವಾಗಿ ಮಲಗಿದ್ದೇ ಕಾರಣ; ಆಥವಾ ಛಿನ್ನವಿಚ್ಛಿನ್ನವಾಗಿ ಸಂಣ ಸಂಖ್ಯ ತುಂಡಾಗಿ ಹಂಚಿಹೋದದ್ದೇ ಕಾರಣ. ಆರ್ಥಿಕ ಬೆಳೆವಣಿಗೆಗೆ ಪೂರಣವಾಗುವ ಲಕ್ಷಣವು ವಿಸ್ತಾರ, ಮೈಸೂರ ಹೊರತು ಇನ್ನುಳಿದ ಕರ್ನಾಟಕದ ಯಾವ ಭಾಗದಲ್ಲೂ ಇಲ್ಲ. ಇದ್ದದ್ದರಲ್ಲಿಯೇ ಸರಿಸಮಾನವಾದ ಎರಡು ದೊಡ್ಡ ತುಂಡುಗಳೆಂದರೆ ನಿಝಾಮ ಕರ್ನಾಟಕ (ಸುಮಾರು ೭೦೦೦೦ ಚ. ಮೈ.) ಹಾಗು ಮುಂಬೈ ಕರ್ನಾಟಕ (ಸುಮಾರು ೬೯೦೦೦ ಚ. ಮೈ.); ಆದರೆ ಇವೆರಡರಲ್ಲೂ ಔದ್ಯೋಗೀಕರಣದ ಆಧುನಿಕಯಂತ್ರಯುಗದ ಅಂಶಗಳಾಗಲಿ ಆರ್ಥಿಕ ಬೆಳವಣಿಗೆಗಳ ಯುತ್ಪನ್ನಗಳಾಗಲಿ ಹೇಳಿಕೊಳ್ಳುವಷ್ಟು ಆಗಲಿಲ್ಲ. ಇವೆಲ್ಲವನ್ನು ಬಗೆದರೆ ಕರ್ನಾಟಕದ ಏಕೀಕರಣ ಇಲ್ಲವೆ ಬ್ರಿಟಿಷ ಕರ್ನಾಟಕದ ಪ್ರಾಂತೀಕರಣ (Unification is the first postulate of economic reconstruction of Karnataka) ಆರ್ಥಿಕ ಯೋಜನೆಯ ಪ್ರಾಥಮಿಕ ಸಿದ್ಧಾಂತವೆನ್ನುವುದು ಇನ್ನು ಸ್ಪಷ್ಟವಾಗುವುದು.

ಇವೆಲ್ಲ ಮಾತುಗಳಿಂದ ಸಿದ್ಧವಾಗುವ ಇನ್ನೊಂದು ಮಾತೆಂದರೆ, ಮೈಸೂರು ಆಥವಾ ಇನ್ನುಳಿದ ಹಿಂದುಸ್ತಾನದ ಭಾಗಗಳಂತೆ ಕರ್ನಾಟಕ ಸಮಸ್ಯೆಕ್ಕೇ ಆರ್ಥಿಕ ಯೋಜನೆಗೆ ತಕ್ಕುದಾದ ಘಟಕವಾಗಿಲ್ಲ ಎಂಬುದು. ಹಾಗಾಗಬೇಕಾದರೆ ಅವ್ಯವಹಾರಂದು ಪ್ರಾಂತವಾದರೂ ಆಗಬೇಕು ಕನಿಷ್ಠಪಕ್ಷಕ್ಕೆ. ಇದೀಗ ಕರ್ನಾಟಕ ಪ್ರಾಂತವಾಗಿಲ್ಲವೆಂದು ಅದು ಯೋಜನೆಗೆ ಅರ್ಹವಾಗಿಲ್ಲ; ಭಾಗಶಃ (ಎಂದರೆ ಜಿಲ್ಲೆ-ಜಿಲ್ಲೆಗಳ ಮಟ್ಟಿಗೆ) ಮಾಡುವ ಯೋಜನೆಗಳಾಗಲಿ, ಪ್ರಾಂತಾಥವಾ ಪರಪ್ರಾಂತಗಳಲ್ಲಿ ಕರ್ನಾಟಕದ ಭಾಗಗಳನ್ನು ಸೇರಿಸಿ ಮಾಡುವ ಯೋಜನೆಗಳಾಗಲಿ ಕರ್ನಾಟಕಕ್ಕೆ ಲಾಭಕರವಾಗದೆ, ಒಮ್ಮೊಮ್ಮೆ ಅನಿಷ್ಟಕಾರಕವಾಗುವ ಸಂಭವವೇ ಹೆಚ್ಚು. ಈ ಪರಿಸ್ಥಿತಿಯಲ್ಲಿ ಕರ್ನಾಟಕದ ಯೋಜನೆಯ ಯೋಚನೆಮಾಡುವುದೂ ಮೊದಲಿಗೇ ಹೇಳಿದಂತೆ ಅಪ್ರಸ್ತುತವೇ ಸರಿ. ಆದರೂ ಇವೆಲ್ಲ ನಿಮರ್ತೆಯಿಂದ ಒಡೆದು ತೋರುವ ಮಾತೆಂದರೆ, ಕರ್ನಾಟಕ ಒಂದಾಗದೆ ಯೋಜನೆಯಿಲ್ಲ; ಯೋಜನೆಯಿಲ್ಲದೆ ಕನ್ನಡಿಗರ ಉದ್ಧಾರವಿಲ್ಲ; ಆ ಯೋಜನೆಗಾಗಿಯಾದರೂ ಕರ್ನಾಟಕ ಒಂದಾಗಬೇಕು ಎಂಬುದು. ಹೀಗಿರುವುದರಿಂದ ನಾವೀಗ ವಿಚಾರ ಮಾಡಬೇಕಾದುದು ಆರ್ಥಿಕ ಯೋಜನೆಯಲ್ಲ; ಆ ಯೋಜನೆಯ ಪೂರ್ವಯೋಜನೆ ಯ ಪೂರ್ವಯೋಜನೆಯೆಂದರೆ ಸ್ವತಂತ್ರಕರ್ನಾಟಕಪ್ರಾಂತ.

* ಈ ಲೆಕ್ಕದಿಂದ ಯುದ್ಧಕಾಲದ ಇಡೀ ಕರ್ನಾಟಕದ ಆದಾಯ ೨೫ ಕೋಟಿಯಾಗಿರಬೇಕಿತ್ತು.

ನಮ್ಮ ಗಂಗಾವತಿಯ ಏಜಂಟರು
ಶ್ರೀ. ಎಸ್. ಬಿ. ಅಳವಂಡಿಕರರು

ನಮ್ಮ ಹುಬ್ಬಳ್ಳಿಯ ಏಜಂಟರು
ದಿ ಕಂಬಾಯಿಂಡ್ ಸ್ಟೋಜ್ ಏಜನ್ಸಿ ಹುಬ್ಬಳ್ಳಿ

೩೦೨

(ಒಂದು ದೃಶ್ಯ)

ಶ್ರೀ. ಆರ್. ಆರ್. ನಾಡಿಗೇರ ಬಿ. ಎ. ಎಲ್‌ಎಲ್. ಬಿ. ವಕೀಲ, ಧಾರವಾಡ.

(ತೆರೆ ಏಳುತ್ತಲೆ, ಎದುರಿಗೆ ಕಾಣುವುದು ನ್ಯಾಯಮಂದಿರ. ಸರಕಾರೀ ವಕೀಲರೂ, ಆರೋಪಿಯ ವಕೀಲರೂ ಇಬ್ಬರು ಬದಿರಾಗಿ ಕುಳಿತಿದ್ದಾರೆ- ಒಂದು ಬದಿಗೆ ಅಸ್ಸೆಸರರು ಕುಳಿತಿದ್ದಾರೆ. ನೋಡಲು-ಕೇಳಲು ಅನೇಕ ಜನ ಬಾಗಿಲ ಬಳಿ ನೆರೆದಿದ್ದಾರೆ. ನ್ಯಾಯಾಧೀಶರ ಬರವನ್ನು, ನೀರೀಕ್ಷಿಸುತ್ತಿದ್ದಾರೆ.....ಗಂಭೀರ ವಾತಾವರಣ ಪಸರಿಸಿದೆ. ೧೯೩೦ ಆಗಸ್ಟದಸಂಜೆ ಹತ್ತಾರು ನಿಕೆಂದು ಕಳೆಯುವಷ್ಟರಲ್ಲಿ ಬಲಬದಿಯ ಚೇಂಬರದಿಂದ ನ್ಯಾಯಾಧೀಶರು ಬರುವರು. ನ್ಯಾಯಾಲಯದಲ್ಲಿಯ ಜನರೆಲ್ಲರೂ ಎದ್ದು ನಿಂತು ನಮಸ್ಕರಿಸುವರು. ನ್ಯಾಯಾಧೀಶರು ಸಿಂಹಾಸನದ ಮೇಲೆ ಕುಳಿತ ಮೇಲೆ ಎಲ್ಲರೂ ಕುಳಿತುಕೊಳ್ಳುವರು. ಸರಕಾರೀ ವಕೀಲರು ಆರೋಪದ ಭಾಗವನ್ನು ಓದುವುದಕ್ಕೆ ಕೈಯಲ್ಲಿ ಕಾಗದ ಹಿಡಿದುಕೊಂಡು ಆರೋಪಿಯ ಕಡೆಗೆ ಮೊಗ ಮಾಡಿ)

ಸ. ವಕೀಲ :— ನೀನು ಆಗಸ್ಟ ೧೨ನೆಯ ತಾರೀಖಿನ ದಿವಸ ಕೊಪ್ಪದ ಚಾವಡಿಯಲ್ಲಿ ಎಲ್ಲಪ್ಪಾ ಕರಿಗಾರ ಎಂಬ ಪೋಲೀಸನನ್ನು ಪಾಕಿ ಸುಟ್ಟಿರುತ್ತೀ !

ನ್ಯಾಯಾಧೀಶ :— ನೀನು ದೋಷಿ ಇದ್ದಿಯೊ ನಿರ್ದೋಷಿ ಇರುವಿಯೊ ?

ಆರೋಪಿ:— (ತಲೆಬಾಗಿ ಕೈ ಜೋಡಿಸಿ) ನಾನು ಯಾವ ಗುನ್ಹೇನೂ ಮಾಡಿಲ್ಲರಿ. ಒಂದು ಅಂಗಳಾಯಿತು, ನಾನು ಊರು ಬಿಟ್ಟು ಹೋಗಿಲ್ಲರಿ. ನಮ್ಮಾಕೆ,ಬ್ಯಾಡಬ್ಯಾಡ ಅಂದರೂ ಪೋಲೀಸರ ಹೇರಿನ ಗದ್ದೀ ಹಿಡಕೊಂಡು ಬಂಳರಿ; ಅದನ್ನ ಹೋಡಿಯೋವರಾಗ ಪಾಕಾಗಿ ಹೋತು; ಊರಾಗೆಲ್ಲಾ ಪನವ ಬ್ಯಾನಿ ಬ್ಯಾರೆ ಐತಿರಿ !

ಸ. ವ. :— ಕಾಂಗ್ರೆಸಿನ ಯಾವ ಮುಖಂಡನಗ ಈ ಭಾಷಣ ಕಲಿಸಿವಾ? ನೀನು ದೋಷಿ ಕೌಸೊ ಅಲ್ಲೊ ? ಕೊಪ್ಪದ ಚಾವಡಿ ಸುಟ್ಟದ್ದ ಖರೆನೋ ಸುಳ್ಳೋ?

ಆರೋಪಿ :— ನನಗ ಯಾವುದೂ ಗೊತ್ತಿಲ್ರಿ! ನಮ್ಮ ಊರ ಆಸಪಾಸ ಕೊಪ್ಪ ಅಂತ ಊರು ಇಲ್ಲರಿ !

ಸ. ವಕೀಲ:— (ಆರೋಪಿಯನ್ನು ಮುಮುಗುಟ್ಟಿಸುತ್ತ) ಎಲ್ಲಾರೂ ಹೇಳುವುದು ಒಂದೇ ರೀತಿ (ಪಟ್ಟಿವಾಲನನ್ನು ನೋಡಿ) ಫೌಜದಾರರನ್ನು ಬರಹೇಳು!

(ಫೌಜದಾರರು ಬರುವರು)

ಶಿರಸ್ತೇದಾರ :— ದೇವರಾಣೇ ಮಾಡಿ ಖರೇ ಹೇಳತೀನಿ ಅನ್ನಿರಿ.

ಫೌಜದಾರ:— ದೇವರಾಣೇ ಮಾಡಿ ಖರೇ ಹೇಳತೀನಿರಿ.

(ಮುಂದೆ ಅವನ ಹೆಸರು ತಂದೆಯ ಹೆಸರು, ವಯಸ್ಸು ಮುಂತಾದುದನ್ನು ಕೇಳಿಕೊಂಡು ಬರಕೊಳ್ಳುವರು).

ಸ. ವಕೀಲ :— ೧೨ನೆಯ ಆಗಸ್ಟಕ್ಕೆ ನೀವು ಕೊ[illegible] ಹೋಗಿದ್ದಿರಿ ?

ಫೌಜದಾರ :— ನಮ್ಮ ಸಾಹೇಬರು ಹುಲಿ ಹೊಡೆಯುವುದರ ಸಲುವಾಗಿ ಅಲ್ಲಿ ಕ್ಯಾಂಪು ಮಾಡುತ್ತೇವೆಂದು ಹೇಳಿದ್ದರು, ಅವರ ಬಂಬೋಬಸ್ತಿಗೆ ನಾನು ಹೋಗಿದ್ದೆ.

ಸ. ವಕೀಲ :— ಅಲ್ಲೇನಾಯಿತು ?

ಫೌಜದಾರ್ :—ಸುಮಾರು ಸಂಜೆಯ ಏಳು ಗಂಟೆಗೆ ಈ ಆರೋಪಿಯು ಕೈಯಲ್ಲಿ ನಿಶಾನಿ ಹಿಡಿದುಕೊಂಡು, ಕೆಲ ಜನರನ್ನು ಕರೆದುಕೊಂಡು ಬರುತ್ತಿದ್ದನು. ಇವನ ಹೆಗಲ ಮೇಲೆ ಒಂದು ಚೀಲದ ಗಂಟು ಇತ್ತು. ಜನರು ಬಹಳ ಇದ್ದರು. ನಾನು ಡ್ರೆಸ್ ಹಾಕಿದ್ದಿಲ್ಲವಾದ್ದರಿಂದ ಅವರ ಹತ್ತರ ಹೋಗಲಿಲ್ಲ. ಕೆಲವು ತಾಸಿನ ಮೇಲೆ, ಊರ ಹೊರಗೆ ಚಾವಡಿ ಸುಡುವುದನ್ನು ನೋಡಿದೆ. ನಮ್ಮ ಬಾತ್ಮೀದಾರರು ನನಗೆ ಹೇಳಿದರು: ಆ ಚಾವಡಿಯೊಳಗೆ ಆ ಹಳ್ಳಿಯ ಪೋಲೀಸನನ್ನು ಹಾಕಿ ಸುಟ್ಟರಂದು. ನಾನು ನೆಟ್ಟಗೆ ತಾಣೆಗೆ ಬಂದು ರಿಪೋರ್ಟು ಮಾಡಿದೆನು.

ಸ. ವಕೀಲ:— ನೀವು ಚಾವಡಿಯ ಹತ್ತರ ಹೋಗಲಿಲ್ಲವೇಕೆ ?

ಫೌಜದಾರ್ :— ನನಗೆ ಆರ್ಡರ್ ಇದ್ದಿಲ್ಲ!

(ಸರಕಾರೀ ವಕೀಲರು ಕೂಡ್ರುವರು. ಆರೋಪಿಯ ವಕೀಲರು ಪ್ರತಿ ಸವಾಲಿಗಾಗಿ ಏಳುವರು.)

ಆ. ವಕೀಲ :— ಕೊಪ್ಪ, ಇದು ಎಲ್ಲಿದೆಯುವುದು ?

ಫೌಜದಾರ್ :— ನನ್ನ ಬೀಟಿನಲ್ಲಿರುವುದು

ಆ. ವಕೀಲ :— ಪಂಚನಾಮಾ ನೀ ನೇ ಮಾಡಿರುವಿರೇನು ?

ಫೌಜದಾರ :—ಇಲ್ಲ. ನಮ್ಮ ಹವಾಲದಾರನು ಮಾಡಿರುವನು.

ಆ. ವಕೀಲ:— ಖೂನ್ ಆದ ಪೋಲಿಸನ ಗುರುತು ನಿಮಗಿತ್ತೇನು ?

ಫೌಜದಾರ್ :— (ಒಳ್ಳೇ ವಿಶ್ವಾಸದಿಂದ) ಗುರ್ತು ಇಲ್ಲದೇ ಏನು? ಮೊದಲು ಅವ ನನ್ನ ತೈನಾತಿಗೆ ಇದ್ದ.

ಆ. ವಕೀಲ :— ಆ ಪೋಲಿಸನ ನಂಬರು ಯಾವುದು ?

ಫೌಜದಾರ್ :— (ತನ್ನ ಡಾಯರಿ ನೋಡಿ) ೧೭೩೪.

ಆ. ವಕೀಲ :— ನೀವು ಹೋಗಬಹುದು. (ಫೌಜದಾರನು ಸಲಾಂ ಮಾಡಿ ಹೊರಟು ಹೋಗುವನು; ಸ. ವಕೀಲರು ಜಲಾಲ ಸಾಹೇಬನನ್ನು ಕರೆಸಲು ಸೂಚಿಸುವರು; ಜಲಾಲ ಸಾಹೇಬನು ಬರುವನು. ಸಲಾಂ ಮಾಡಿ ನಿಲ್ಲುವನು)

ಶಿರಸ್ತೇದಾರ :— (ಕೈಯಲ್ಲಿ ಕುರಾನ ಕೊಟ್ಟು) ದೇವರಾಣೇ ಮಾಡಿ ಖರೆ ಹೇಳತೀನಿ ಅನ್ನು !

ಜಲಾಲ :— ದೇವರಾಣೆ ಮಾಡಿ ಖರೇ ಹೇಳತೇನಿರಿ.

(ರೀತಿ ಪ್ರಕಾರ ಅವನ ಹೆಸರು ಮುಂತಾದ್ದನ್ನು ಕೇಳಿ ಬರಕೊಳ್ಳಲಾಗುವುದು.)

ಸ. ವಕೀಲ:— ೧೨ನೆಯ ತಾರೀಖಿಗೆ ಸಂಜೆಯ ಏಳು ಗಂಟೆಗೆ ನೀನು ಎಲ್ಲಿ ಇದ್ದಿ?

ಜಲಾಲ :— ಚಾವಡೀ ಹತ್ತರ ನನ್ನ ಹೊಲದಾಗ ನಾ ಮೇಯಿಸತ್ತಿದ್ದೆ.

ಸ. ವ :— ಆಗ ಏನು ಆತು ?

ಜಲಾಲ :— ಒನ್ಮೆಲೆ ಯಾರೋ ಒಬರಿದ್ದಾಂಗ ಕೇಳಿಸಿತು.

ಸ. ವ :— ನೀನು ಅಲ್ಲಿಗೆ ಯಾಕ ಹೋಗಲಿಲ್ಲ. ?

ಜಲಾಲ :— ನಾನು ಪೀರಗ ಒಂದು ಕೊಳ್ಳೀ ಕೊಡತೀನಿ ಅಂತ ಬೇಡಿಕೊಂಡಿದ್ದೆ, ಅದನ್ನ ಕೊಟ್ಟಿಲ್ಲ. ಅದು ಪೀರನ ಪನಿ ಇರಬಹುದಂತ ಅನ್ನಿಸಿತು !

ಸ. ವ :— ಮುಂದೇನಾಯಿತು ?

ಜಲಾಲ :— ಬೆಂಕಿ ಕಾಣಿಸಿತು.

ಸ. ವ :— ಮುಂದ .....ಜನರು ಕಂಡರೇನು ? ಜನರು ಬಿಳಿ ಟೊಪ್ಪಿಗೆಯವರೇನು ?

ಜಲಾಲ :— ಹತ್ತೆಂಟು ಜನರು ಕಂಡರು.

ಸ. ನ. :—ಆವರ ಕೈಯೊಳಗ ಏನು ಇತ್ತು?

ಜಲಾಲ :— ಒಂದು ನಿಶಾನಿ ಇತ್ತರಿ.

(ಸರಕಾರಿ ವಕೀಲರು ಕೂಡುವರು. ಆ. ವಕೀಲ ಪ್ರತಿಸಪಾಲಿಗಾಗಿ ಏಳುವರು).

ಆ. ವ. :— ನಿನ್ನ ಹೊಲದಿಂದ ಚಾವಡಿ ಎಷ್ಟು ದೂರ ಇರುವದು?

ಜಲಾಲ :— ಸುಮಾರು ಎರಡು ಮೈಲು ದೂರ ಐತಿರಿ!

ಆ. ವ. :— ನಿನ್ನ ಹೊಲದಿಂದ ಚಾವಡಿ ಕಾಣುವುದೇನು?

ಜಲಾಲ :— ಚಾವಡಿಗೆ ಬೆಂಕಿ ಹತ್ತಿದರ ರಾತ್ರಿ ಬೆಳಕು ಕಾಣಬಹುದರಿ!

ಆ. ವ. :— ಸಂಜೆಯ ೭ ಗಂಟೆಗೆ ಕಾಣುವುದೇನು?

ಜಲಾಲ :— ಇಲ್ಲರಿ!

ಆ ವ :— ನಿನ್ನ ಊರು ಯಾವ್ದು?

ಜಲಾಲ :— ನನ್ನ ಊರು ಕೊಪ್ಪರಿ.

ಆ. ವ. :— ನೀನು ಇರುವುದು ಎಲ್ಲೆ?

ಜಲಾಲ :— ಧಾರವಾಡದಾಗರಿ!

ಆ. ವ. :— ೧೨ನೆಯ ತಾರೀಖಿನ ದಿನ ಧಾರವಾಡ ಎತ್ತಿನ ಪ್ಯಾಟೆಯೊಳಗ ನಲಾಲೀ ಮಾಡಿದೆಯೊ ಇಲ್ಲೊ?

ಜಲಾಲ :— ಹೌನರಿ!

ಆ. ವ. :— ಹಾ ಂ ಗಾ ಪ ರೆ ಕೊ ಪ್ಪ ಕ್ಕ ಯಾವಾಗ ಹೋಗಿದ್ದಿ?

ಜಲಾಲ :— ನಾನು ಕೊಪ್ಪಕ್ಕ ಯಾವಾಗೂ ಹೋಗೂದಿಲ್ಲರಿ! ನನ್ನ ಹೊಲಾ ನನ್ನ ಮಾವ ಮಾಡತಾನರಿ!

ಆ. ವ. :—ನೀವು ನಿಮ್ಮ ಊರಿಗೆ ಹೋಗದೆ ಎಷ್ಟು ದಿನ ಆಯವು?

ಜಲಾಲ :— ನಮ್ಮ ಮಾವನ ಮಗ ಸತ್ತಾಗ ಹೋಗಿದ್ದಿನಿರಿ. ಈಗ ಸುಮಾರು ಏಳೆಂಟು ವರಸಾತರಿ!

ಆ. ವ. :— ಇನ್ನು ಹೊತ್ತಿನ ತನಕ ನೀನು ಹೇಳಿದ್ದು ಸುಳ್ಳು ಅಪಾದೋ ಆಲ್ಲೊ?

ಜಲಾಲ :— ನಾನು ಹುಟ್ಟಿದ ಮೇಲೆ ಸುಳ್ಳು ಹೇಳಿಲ್ಲ. ಸುಳ್ಳು ಹೇಳಿದರ ಪ್ಯಾಟ್ಯಾಗ ನಿಂದರಗೋಟ್ಟಾರ್ರೆ? ಪಟಗಾ ಮಾರಿಸ್ಯಾರು ಪಟಗಾ....

(ಎಂದು ಆವೇಶ ಬಂದಂತೆ ಮಾಡುವನು.)

ಆ. ವ. :— ಹೋಗ ಬಹುದು ನೀನು!

(ಜಲಾಲ ಸಾಕ್ಷಿಬನ್ನು ಆವೇಶದಲ್ಲಿಯು ಸಲಾಂ ಮಾಡಿ ಹೋಗುವನು. ಕೊಪ್ಪದ ಗೌಡರನ್ನು ಕರೆಸುವರು.)

ಸರಸ್ತೆದಾರ :— ಜೀನರಾಣೀ ಮಾಡಿ ಖರೆ ಹೇಳತೀನಿ ಜನ್ನ!

ಗೌಡ :— ಜೀನರಾಣೀ ಮಾಡಿ ಖರೇ ಹೇಳತೇನಿರಿ.

ಸ. ವ. :— ನಿಮ್ಮ ಊರ ಚಾವಡಿ ಸುಟ್ಟಿರುವ್ರುದೇನು?

ಗೌಡ :— (ಗಾಬರಿ ಗೊಂಡಂತೆ) ಇಲ್ಲರಿ!?

ನ್ಯಾಯಾಧೀಶ :— (ಚಕಿತನಾಗಿ) ಹಾಂ! ಹಾಂಗಾದರ ಇದೇನು ಭಾನಗಡಿ ಗೌಡರೆ?

ಗೌಡ:— (ಭಯ-ಭಕ್ತಿಯಿಂದ) ಈ ಆರೋಪ ಧಾರವಾಡದಾಗ ಒಂದು ಜತಿ ಎತ್ತು ೩೦೦ ರೂಪಾಯಕ್ಕ ತೊಗೊಂಡಿದ್ದ; ಸುಗ್ಗಿಗೆ ಹಣಾ ಕೊಡತೀನಿ ಅಂತ ಹೇಳಿದ್ದ. ಜಲಾಲ ಸಾಬನ ದಲಾಲಿ ಎರಡು ರೂಪಾಯಿ. ಹೀಂಗ ೩೦೨ ರೂಪಾಯಿ ವಸೂಲು ಮಾಡಿಸಿ ಕೊಡಿರಿ ಎಂದು ನಮ್ಮ ಸರದಾರ ಸಾಹೇಬರಿಗೆ ಹೇಳಿ ಕೊಂಡಿದ್ದೆ. ಕೋರ್ಟಿಗೆ ಹೋದರ ಕಂತು ವಗೈರೆ ಆಗಿ ಬಹಳ ದಿವಸ ಹಿಡಿಯಬಹುದಂತ ನಾನು ಪೋಲಿಸರಿಗೆ ಹೇಳಿದ್ದೆ.

ಸ ವ :— ಕರಿಗಾರ ಸಿದ್ದನೆಂಬ ಪೆ ೀಲೀ ಸನನ್ನು ಸುಟ್ಟದ್ದು ನಿಜವೊ?

ಗೌಡ :— ಆ ಪೋಲೀಸ ಪೆನ್ಶನ್ ಮೇಲೆ ಹೋಗಿ ೫ ವರಸಾತರಿ.

ಸ ವ : (ದಿಗ್ಭ್ರಾಂತನಾಗಿ ನ್ಯಾಯಾಧೀಶರ ಮೊಗ ನೋಡಿ) ಇವರೆಲ್ಲರೂ ಒಂದೆ. ಮೂಸಿ ಸೆಕ್ಕನ್ನು ಹತ್ತಿರುವುದು. ದಂಗೆಯನ್ನು ಬಲವಾದ ಶೋಳಿನಿಂದ ಹತ್ತಿಕ್ಕಬೇಕೆಂದು ನನಗೆ ಮೇಲಿನಿಂದ ಆಜ್ಞೆ. ಬಂದಿರುವುದು.

ನ್ಯಾಯಾಧೀಶ :— (ಹತಾಶನಂತೆ) ನನಗೂ ಬಂದಿರುವುದು. ಆದರೆ ಇದರಲ್ಲಿ ಯಾವ ಸತ್ತಿಲ್ಲ ಮುಂದೇನು?

ಸ. ವ. :—(ಏನೂ ತಿಳಿಯದವನಂತೆ ಕೈಚಲ್ಲಿ) ಮುಂದೇನು?

(ಎಲ್ಲರೂ:— ಮುಂದೇನು? ಎಂಬ ಭಾವ ತೋರುತ್ತಿರುವಾಗ ತೆರೆ ಸಾವಕಾಶವಾಗಿ ಬೀಳುವುದು).

ಇದೀಗ ಪ್ರಕಟವಾಗಿದೆ! ತ್ವರೆ ಮಾಡಿರಿ!!

ಕರ್ನಾಟಕದ ಸುಪ್ರಸಿದ್ಧ ಪತ್ರಿಕೆಗಳೂ ಪತ್ರಿಕಾಕರ್ತರೂ ಸದಭಿಪ್ರಾಯವನ್ನು ವ್ಯಕ್ತಗೊಳಿಸಿದ ಮುಕ್ಕಾಲು ಭಾಗ ತಮ್ಮದೇ ಆತ್ಮಕತೆಯಾದ

ದಿವಂಗತ ಶರಚ್ಚಂದ್ರ ಚಟ್ಟೋಪಾಧ್ಯಾಯರ ರವೀಂದ್ರ ಕಾದಂಬರಿ.

ಶ್ರೀ ಕಾಂತ

(ಭಾಗ: ೪)

ಬೆಲೆ: ೧೫೦ ಮಾತ್ರ (ಅ. ವೆ. ಬೇರೆ)

ಆರೂ ಭಾಗಗಳು ಕೂಡಿ ಬೆಲೆ ರೂ. ೭-೧೫-೦. ಅ.ವೆ. ಬೇರೆ.

ವ್ಯಾಪಾರಿಗಳಿಗೆ ಧಾರಾಳವಾದ ಕಮೀಶನ್

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ

ಮುಸಲ್ಮಾನರ ಆಳಿಕೆ	(ಜಳಪೇಟಿ)	೦— ೮—೦
ಪತ್ತಿ ಅರಳಿ ಜಂತ್ರಿ		೦— ೮—೦
ಚಾಲುಕ್ಯರ ಪುಲಿಕೇಶಿ		೧— ೦—೦
ಸಂತಾನ ಶಾಸ್ತ್ರ		೧— ೪—೦
ಬ್ರಹ್ಮಚರ್ಯ ಬಲಿಸೃಷ್ಟಿ		೦—೧೦—೦
ಕೆರಾತಾರ್ಜುನೀಯ ಸಾರ		೧— ೦—೦
ಮಹಾತ್ಮಾ ಗಾಂಧಿ ಸ! ಚರಿತ್ರ.		೧— ೬—೦
ತರುಣ ಪತ್ನಿ		೦— ೮—೦
ಕಲಿತರೆ ಹೀಗೆ ಕಲಿಯಬೇಕು.		೦— ೫—೦
ಎಲ್. ಎಲ್. ಬಿ.		೦—೧೦—೦

ಇದು ಅಲ್ಲದೆ ಶಾಲೆಗೆ ಬೇಕಾಗುವ ಪ್ರತಿಯೊಂದು ಪುಸ್ತಕ ಸಪ್ಲೈ ಸಿಗುವವು. ಬೇಕಾದರೆ ಬರೆಯಿರಿ.

ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ.

ಒಂದು ವಿಚಾರ ಪ್ರಚೋದಕ ಪತ್ರ

ಬರೆದವರು: ಶ್ರೀ. ಕೆ.ಜಿ. ಚೆನ್ನಬಸಪ್ಪ ಬಿ. ಎ. ಬೆಳಗಾಂವಿ

ನಮಸ್ತೆ, ಪೊಳಕಾಲ್ಮೂರು
ತಾ. ೬ನೆಯ ಸಪ್ಟೆಂಬರ್ ೧೯೪೫

ಬಹು ದಿನಗಳಾದುವಲ್ಲವೆ? ಬೇಸರಪಡಲು ತುಂಬ ಅವಕಾಶವುಂಟು. ಆದರೆ ಚಾಸನ ಪ್ರತಿಯೊಂದು ರಂಗದಲ್ಲಿಯೂ ಎದುರು ನೋಡುವ ವ್ರತವನ್ನಾಚರಿಸಿ, ಪತ್ರಗಳಿಗಾಗಿ ಎದುರು ನೋಡುವುದೂ ನಮಗಾಗಲೆ ನೈಗೂಡಿಬಿಟ್ಟಿದೆ. ಯಾರು ಯಾರಿಗೆ ಬರೆಯದಿದ್ದರೂ, ಯಾರೂ ತಕರಾರು ಮಾಡುವ ಆನಸ್ಯಕವೇ ಇಲ್ಲ. ದೂರಿಡುವ ಸ್ಥಿತಿಯೇ ಇಲ್ಲ. ಪತ್ರ ಬರೆಯದಿರುವುದೇ ಸಾಮಾನ್ಯ ನಿಯಮವಾದಾಗ, ಬರೆಯುವುದೇ ಅಲ್ಲವೇ—ಕೌತುಕಕ್ಕೆ ಕಾರಣ?

ಆದರೆ ಈ ಮಧ್ಯೆ ಎಷ್ಟು ಘಟನೆಗಳಾದುವು! ವ್ಯಕ್ತಿ, ದೇಶ, ಜಗತ್ತು, ವಿಶ್ವಗಳಲ್ಲಿ ಎಷ್ಟು ಬದಲಾವಣೆಗಳಾಗಿವೆ! ಅದರಲ್ಲೂ ನನ್ನ ಲೆಷ್ಟು ವ್ಯತ್ಯಾಸವಾಗಿವೆ! ಅದರಲ್ಲೂ ನಮ್ಮ ದೇಶದ ಬದಲಾವಣೆ ಏನು! ಒಟ್ಟು ಜಗತ್ತಿನ ಮುಖ ಎಷ್ಟು ಮಾರ್ಪು ಹೊಂದಿದೆ! ಆದರೆ ಈ ಎಲ್ಲ ಬದಲಾವಣೆಗಳನ್ನು, ಎಲ್ಲ ಮಾರ್ಪಾಟುಗಳನ್ನು, ಎಲ್ಲ ವ್ಯತ್ಯಾಸಗಳನ್ನೂ ಮೀರಿ ಎದ್ದು ಕಾಣುವ ಒಂದೆಂದರೆ ಯುದ್ಧದ ನರಕ ಯಾತನೆಯನ್ನು ಸುಸ್ತು ಹೊಡೆದು ನಿರ್ಜೀವವಾಗಿ, ಕಡೆಗೊಮ್ಮೆ ಕಡೆಹಾಯ್ದ ಯುದ್ಧದ ಮುಕ್ತಾಯ; ಅಶಾಂತಿಯ ಭೀಕರ ಕದನ ಸಂಘಟ್ಟನೆಯ ಭೈರವ ನಿನಾದವು ಮಧ್ಯದಲ್ಲಿಯಾದರೂ—ನಾಲ್ಕು ದಿನ ಆಗಲೊಲ್ಲದೇನೆ—ಶಾಂತಿ-ಸುಖ ತಲೆದೋರೀತು ಎಂಬ ನೆಚ್ಚು. ವಿಜಯವೆಂದು ಹುಚ್ಚೆದ್ದು ಕುಣಿಯುವ ಅವಿವೇಕದ ಅತಿರೇಕಕ್ಕೆ ಹೋಗಲು ಬಾರದಿದ್ದರೂ 'ಸಾಯಲಿಲ್ಲ' ಎಂದು ಸಮಾಧಾನ ಹೊಂದ ಬಹುದಷ್ಟೆ? ಸಾಯದಿದ್ದರೆ ನಾವು ಬದುಕಿದ್ದೇನೆಯೆ ಎಂದು ಮಾರ್ನುಡಿಯ ಬಹುದು ನೀವು. ಬದುಕಿರದಿದ್ದರೂ ಬದುಕುವ ಆಸೆ ಇರುವಷ್ಟು ಪ್ರಾಣ ಉಳಿದಿದೆಯಲ್ಲ? ಅದು ಸಮಾಧಾನ ತರುವ ವಿಷಯವಲ್ಲವೆ? ಸಂತೋಷವಿಲ್ಲದಿರಲಿ; ಸಮಾಧಾನ?

ಕ್ಷ, ಮಜ್ಜಾ, ಮಾಂಸ!

ಎಂಥ ಭೀಕರ ಕದನ! ಏನು ವಿಧ್ವಂಸಕ ಪರಿಣಾಮ! 'ಶಿವ ನಾ' ಎಂದು ಜನ ನರಳಿದುದೆಷ್ಟು! ಎಷ್ಟು ರಕ್ತಪಾತ! ಎಂಥ ಬರ ಎಂಥ ನರಳಿತು ಜನ! ಎಷ್ಟು ಲಕ್ಷ ಪ್ರಜೆಗಳು ಬರೀ ಒಂದೆನುಳು ಕೊಳಿಗಾಗಿ ಮನೆ, ಮಾರು, ಸುರ ಮಾನ, ವಿದ್ಯಾಬೆ, ಲಜ್ಜೆ, ನಯ, ಶೀಲ, ಸೌಜನ್ಯ,—ಎಷ್ಟು ಮಾತಿನಿಂದೇನು? ಮಾನವರಿಗೆ, ಇರಬೇಕಾದುದೆಲ್ಲವನ್ನೂ—ಮಾರಿಕೊಂಡಿತು ಜನ! ಎಷ್ಟು ಮಕ್ಕಳ ತಾಯಿಗೆರೆವ ಹಾಲನ್ನು ಕಸಿದುಕೊಂಡು ಈ ಮಾರಿಯ ಬಟರ ಬಾಯಿಗೆ ಸುರಿದುದಾಯಿತು! ಎಷ್ಟು ಕೋಮರೆಯರ ಸುಖಶಾಂತಿಯನ್ನು ಬಲಿಯಿತ್ತೆವು ಈ ಕ್ರೂರ ಲಂಕಿಣಿಯ ಕೊಲೆಪೀಠದ ಮೇಲೆ! ಎಷ್ಟುಜನರ ಪ್ರಾಣ ಹೋಯ್ತು ಈ ಕದನ ರಾಕ್ಷಸಿಗೆ! ಇಷ್ಟೆಲ್ಲ ಬಲಿ ಇತ್ತವರು 'ಇವೆಲ್ಲ ಏತಕ್ಕೆ? ಯಾರಿಗಾಗಿ?'ಎಂದು ಕೇಳಬೇಡವೇನು? ಸಹಜವಾಗಿ, ಎಂಥ ಕೊರಡುಬುದ್ಧಿಗೂ ತೋರುವ ಪ್ರಶ್ನೆ. ಇದನ್ನೇ ನಾವು ಕೇಳಿದುದು ಯುದ್ಧಕ್ಕೆ ನಮ್ಮನ್ನು ಮೂಡಿದಾಗ. ನಮ್ಮ ಆಸ್ತಿ ಪಾಸ್ತಿ, ಮನೆ-ಮರಗಳನ್ನುಳಿದು, ಮಡದಿಮಕ್ಕಳ ತುತ್ತು ಕಸಿದು, ನಮ್ಮ ನ್ಯೆ ಅರಿನೆಯನ್ನು ತ್ಯಜಿಸಿ ಹೋರಾಡಿ' ಎಂದು ಹೇಳಿದಾಗ ನಾವು ಕೇಳಿದುದೇ ಇದನ್ನು. ಆದರೆ ದಾಸರಿಗೆ ತಾವೇನು ಮಾಡುತ್ತಾರೆಂಬುದರ ಕಾರಣ ತಿಳಿಯಬಾರದು. ಅರಿತರೂ ಅನ್ವಯಿಸಬಾರದು. ಅಪಸ್ವಾರದ ಅಗ್ರಗಣ್ಯರಾದ ಆಳರಸರು ಸ್ಪೈದಡವಿ ಮುದ್ದಿಸಿ ಹೇಳಬಂದರು: 'ಸ್ವಾತಂತ್ರ್ಯಕ್ಕಾಗಿ' ಎಂದು. 'ಹಾಗೆಂದರೆ ಅಂತಹ ಸ್ವಾತಂತ್ರ್ಯ ನಮಗುಂಟೇ?' ಎಂದು ಕೇಳಿದಾಗ 'ಕೇಳಬಾರದ ಪ್ರಶ್ನೆ, ಆಡಬಾರದ ಮಾತು!' ಎಂದು ಕಟ್ಟಪ್ಪಣೆ ಬಂತು. ಆದರೆ ದೌರ್ಜನ್ಯಕ್ಕೆ ಬಾಗದ ಜನರು ಪ್ರತಿಭಟಿಸಿದರು. ಪ್ರತಿಭಟನೆ ಕ್ರಾಂತಿಯ ಸ್ವರೂಪ ತಾಳಿತು. ಮುಂದಾದ ಕುರುಕ್ಷೇತ್ರ ಹೇಳಬಾರದಷ್ಟು ಭೀಕರ; ನೆನೆಯಬಾರದ್ದು ಹೇಯ! ಮನೆಯಳಾರದಷ್ಟು ಪ್ರಸಂಗ; ಅದರ ಇರಿತದಿಂದ ಗಾಯಗೊಂಡ ಜನರ ಗಾಯದ ಹಸಿ ಇನ್ನೂ ಆರಿಲ್ಲ. ಆ ದಬ್ಬಾಳಿಕೆಯ ಮರಂತಚಿತ್ರ ಕಣ್ಮರೆಯಾಗವ ಸಜೀವ ಚಲನಚಿತ್ರ! ಆ ಸಂಕಟದ ಬೇಗ ಹೊಗೆಯಾಡುತ್ತಿದೆ ಇನ್ನೂ ಪ್ರಲಯಜ್ವಾಲೆಯಾಗಲು ಸಮಯ ಸನ್ನಿವೇಶವನ್ನು ನಿರೀಕ್ಷಿಸುತ್ತಾ. ಇಂದಲ್ಲ ನಾಳೆ ಆ ಜ್ವಾಲೆ ಭುಗಿಲ್ ಎಂದು ಮೇಲೇಳುತ್ತದೆ; ಅಡ್ಡಿ ಬರುವ ಎಲ್ಲವುಗಳನ್ನೂ ಆಪೋಶನ ಮಾಡುತ್ತದೆ. ಇದಕ್ಕೆ ಹೊರತಿಲ್ಲ.

ರೊಟ್ಟಿಯ ಚೂರು

ಈ ಸತ್ಯ ಬ್ರಿಟಿಷರಿಗೂ ಚೆನ್ನಾಗಿ, ಬಹುಶಃ ನಮಗಿಂತಲೂ ಚೆನ್ನಾಗಿ ಗೊತ್ತು. ಭಾರತೀಯರ ಸಹಾಯ, ಸಹಕಾರ, ಅದರ ಒಲವುಗಳಿಲ್ಲದೆ ಇನ್ನು ಬೆಚ್ಚುಕಾಲ ಕಾರುಭಾರ ನಡಸಲಾಗುವುವಿಲ್ಲವೆಂಬ ಸತ್ಯ ದ್ವಿಗುಣಿತ ಗತಿಯಿಂದ ಅವರಿಗೆ ಮನವಟ್ಟಾಗುತ್ತಿದೆ. ಆದಕಾರಣ ಭಾರತೀಯ ರಾಷ್ಟ್ರೀಯ ಸಂಸ್ಥೆಯೊಡನೆ ಸಖ್ಯ ಬೆಳೆಸಿಕೊಳ್ಳಲೇಬೇಕೆಂದು ಅವರ ತವಕ. ನಮ್ಮ ಉದ್ಧಾರ, ಏಳ್ಗೆ, ಸಂಪದಭ್ಯುದಯ, ತುಷ್ಟಿ-ಪುಷ್ಟಿಗಳಿಗಾಗಿ ಅಲ್ಲ; ಅವರ ಸಾಮ್ರಾಜ್ಯ ಜಾಜ್ವಲ್ಯಮಾನವಾಗಿ ಬೆಳಗಲಿ, ಬಾಳಲಿ. ಭಾರತ ಕೈ ತಪ್ಪಿ ಹೋಗದಿರಲಿ ಎಂಬ ಉತ್ಕಟೇಚ್ಛೆಯಿಂದ, ಭಾರತದಲ್ಲಿ ತಮ್ಮ ನಿರಂಕುಶ ಪ್ರಭುತ್ವದ ಬಿಗಿ ತಪ್ಪಿಸಿ ಭಾರತೀಯರಿಗೆ ಜವಾಬ್ದಾರಿ ಸರ್ಕಾರವನ್ನು ಕೊಡಲು ಮಾಡುವ ಪ್ರಯತ್ನಗಳಿಗೆ ಸಾಮ್ರಾಜ್ಯನೌಕ್ಯ, ಭವ್ಯತೆಗಾಗಿ ಪಡುವ ಪಾಡು ಎಂಬುವನ್ನು ಹೇಳಿದರೆ ಆಶ್ಚರ್ಯವಾಗಬಹುದು ನಿಮಗೆ. ಆದರೆ ಸತ್ಯತಮಸತ್ಯ ಈ ಮಾತು! ಈ ಮಾತಿನ ವ್ಯಾಪ್ತಿ ಆಗಲೇಬೇಕೇನು? ಯಾಗಾದರೆ ಕೊಂಚ ಸಾವಧಾನದಿಂದ ನನ್ನೊಡನೆ ಯೋಚನೆಯಲ್ಲಿ ಸಹಕರಿಸುವಿರೇನು?

ಈಗ ಭಾರತೀಯರಿಗೆ ಎಳ್ಳಷ್ಟು ಜವಾಬ್ದಾರಿಯನ್ನು ಅವರ ಸರ್ಕಾರದಲ್ಲಿ ಕೊಡಲಿಲ್ಲ ಎಂದು ಇಟ್ಟುಕೊಳ್ಳೋಣ. ನಮ್ಮ ಸಂಕೋಲೆಗಳನ್ನು ಇನ್ನೂ ಭದ್ರಪಡಿಸುತ್ತಾರೆ ಎಂದೂ ಭಾವಿಸೋಣ. ಮುಂದಾಗುವುದೇನು? ನಾವೇನು ನಿಃಸಹಾಯರಲ್ಲ. ಕಾರ್ಯಕ್ರಮ

ಳರಿಯದೆ ದಿಕ್ಕು ತಪ್ಪಿದವರಲ್ಲ. ಸ್ವಾತಂತ್ರ್ಯಕ್ಕಾಗಿ ಜನರೊಡನೆ ಒಡನಾಡಿ ಪಾರತಂತ್ರ್ಯದ ಭೀಕರ ಪರಿಣಾಮವನ್ನು ಮನನಮಟ್ಟು ಮಾಡಿಸಿ, ಅಹಿಂಸಾಯುತ ಅಸಹಕಾರ ಚಳವಳಿಕ್ಕೆ ವೇದನನ್ನು ಅಣಿ ಮಾಡುತ್ತಾ ಹೋಗಲೇ ಬೇಕು. ರಾಜ್ಯಪರಿಪಾಲನಾ ಭಾರ ನಮಗಿರದಿದ್ದರೆ, ನಮ್ಮ ಜನರಿಗೆ ನಮ್ಮ ಜನರೇ ಆಳುತ್ತಾರಲ್ಲ ಎಂಬ ನುಂಕು ಕನಿಯುವಿದ್ದರೆ, ನಮಗೆ ಚಧಿಕಾರವ ಕೀಟವ ಹೊರೆಯಿರದಿದ್ದರೆ ರಾಷ್ಟ್ರವನ್ನು ಕ್ರಾಂತಿಗಾಗಿ ಅಣಿಮಾಡುತ್ತೇವೆ. ಇದು ಅನಿವಾರ್ಯ. ಒಂದು ವರಕದಲ್ಲಿ ಆಗಲಿ, ಕಾಲು ಶತಮಾನದಲ್ಲಾಗಲಿ, ಹೆಚ್ಚೆಂದರೆ ಇನ್ನರ್ಧ ಶತಮಾನದಲ್ಲಿ ಆಗಲಿ ಪಾರತಂತ್ರ್ಯವನ್ನು ಖಂಡಿತವಾಗಿಯೂ ನಿರ್ಮೂಲ ಮಾಡುತ್ತೇವೆ. ನಿರ್ನಾಮಗೊಳಿಸುತ್ತೇವೆ. ಸ್ವತಂತ್ರರಾಗಿಯೇ ತೀರುತ್ತೇವೆ. ನಾನೆಂದಿಗೂ ಸ್ವತಂತ್ರರಾಗಲಾರೆನೆಂಬ ನಿರಾಶೆ ನಮಗಿಲ್ಲ. ಮೂಡುವ ಸೂರ್ಯ-ಜಂದ್ರರಷ್ಟು ಸತ್ಯವಾದ ಮಾತು. ಸರಕಾರದ ದಬ್ಬಾಳಿಕೆ ನಮ್ಮ ಮೇಲೆ ಎಷ್ಟು ಎಷ್ಟು ಹೆಚ್ಚಾಗುತ್ತದೆಯೋ ನಮ್ಮ ಜಾಗೃತಿ ಅಷ್ಟು ಅಷ್ಟು ಹೆಚ್ಚಾಗಲೇ ಬೇಕು. ನಮ್ಮ ಸ್ವಾತಂತ್ರ್ಯಾಕಾಂಕ್ಷೆಯನ್ನು ಮುರಿದು ನೂಲಿಗೆ ತಳ್ಳಬೇಕೆಂದು ಮಾಡುವ ಪ್ರಯತ್ನಗಳೆಲ್ಲ ನಮ್ಮ ಆಕಾಂಕ್ಷೆಯ ಬಿಳವಣಿಗೆಗೆ ಕಾರಣವಾಗಿಯೇ ತೀರುತ್ತವೆ. ನಮ್ಮ ಎದೆಯಿಂದ ಸುರಿದ ರಕ್ತದ ಕಣ ಒಂದೊಂದೂ ಅಷ್ಟು ಹೊಸ ರೂಪದಿಂದ ರಾಷ್ಟ್ರದ ಬಿಡುಗಡೆಯ ಕದನಕ್ಕಾಗಿ ಮುನ್ನುಗ್ಗಿ ಬರುತ್ತವೆ. ಎಂದ ಮೇಲೆ ಸರಕಾಳಿಕೆ ನಮ್ಮ ಪ್ರಯತ್ನಗಳನ್ನು ಮುರಿಯುವೇಕೆಂದು ಮಾಡುವ ಸ್ಪತಿಯೊಂದು ಸಣ್ಣ ದೊಡ್ಡ ಪ್ರಯತ್ನವೂ ಅದು ನಮ್ಮ ಸ್ವಾತಂತ್ರ್ಯಾಪೇಕ್ಷೆಗೆ ಪುಟಗೆಯನ್ನು ಕೊಡುತ್ತದೆ. ತನ್ನ ಸೋರಿಯನ್ನು ತಾನೇ ಕಟ್ಟಿಕೊಳ್ಳುವ ಕಾರ್ಯವನ್ನು ಫರದಿಂದ ಸಾಗಿಸಿಕೊಂಡು ಹೋಗುತ್ತದೆ. ಇಂದಲ್ಲ ನಾಳೆ ಬಿಡುಗಡೆ—ಎಂತಹ ಅನಪೇಕ್ಷಿತ. ನಿರಾಶಾಜನಕ ನನ್ನು ವೇಶಗಳಿದ್ದರೂ– ಕಟ್ಟಿಟ್ಟ ಬುತ್ತಿ.

ಹೀಗಾಗದೆ ರಾಜ್ಯಾಡಳಿತದಲ್ಲಿ ನಾವು ಜಾಗವಹಿಸಿದೆವು ಎಂದು ಇಟ್ಟುಕೊಳ್ಳೋಣ. ಮುಂದಾಗುವುದೇನು? ಸ್ವಾತಂತ್ರ್ಯ ಎಂದರೆ ನಾವು ಭಾವಿಸುವುದರಲ್ಲಿ ಹತ್ತರೊಂದಂಶವಾದರೂ ಸ್ವಾತಂತ್ರ್ಯ ಆ ಆಡಳಿತದಲ್ಲಿ ನಮಗಿಲ್ಲ. ಈಗಿರುವ ಫಟನೆಯಲ್ಲಿ ರಾಜ್ಯಾಡಳಿತ ಪ್ರಜೆಗಳ ಹಿತಕ್ಕಾಗಿ ಕೈಕೊಳ್ಳುತ್ತೇವೆಂಬುದು ಗಾಳಿಯನ್ನಿರಿಯಲು ನಾಡುವ ಪ್ರಯತ್ನದಂತೆ. ತದ್ವಿರುದ್ಧವಾಗಿ ನಮ್ಮ ಜನ ತಮ್ಮ ಗುರಿಯನ್ನು ಕೆಲವು ಕಾಲವಾದರೂ ಮರೆಯುವೆ ಇರಲು ಈ ಏರ್ಪಾಟಿನಿಂದ ಅನಿವಾರ್ಯ. ನಮ್ಮ ಜನರೇ ಅಧಿಕಾರದಲ್ಲಿದ್ದರೂ—ಪಾರತಂತ್ರ್ಯದ ಅತ್ಯುಷ್ಣತ ಶಕ್ತಿಯ ನೆರಳಿನಲ್ಲಿ ಯಾವ ನಾಸ್ತಿಕ, ಶಾಶ್ವತ ಸೆಲಗಳನ್ನೂ ಪಡೆಯಲಾರರು. ಆಳರಸರ ಕೈಗೊಂಬೆಯಾಗಿ, ಅವರ ಸೂತ್ರಚಾಲನೆಯಂತೆ ನರ್ತಿಸುವುದು ನಮ್ಮ ನಾಯಕರಿಗಂತೂ ಹಿಡಿಸಲಾರದ ವಿಷಯ. ಎಂದ ಮೇಲೆ ನುತ್ತೆ ರಾಜೀನಾಮೆ, ಮತ್ತೆ ದಬ್ಬಾಳಿಕೆ, ಮತ್ತೆ ಅಸಹನೀಯ ಅಶಾಂತಿ. ಎಂದರೆ ಆಳರಸರು ನಮ್ಮ ಜನರ ತಲೆಗೆ ಗಿಲೀಟಿನ ಮುಡಿಗಳ ಕೀಟವನ್ನು ಕಟ್ಟಿ, ತಮಾಷೆ ನೋಡುವ ಕಾಲ ಅನ್ಯಾಯವಾಗಿ ಕಳೆದು ಹೋಗುತ್ತದೆ. ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಒಂದು ಮೆಟ್ಟಿಲು ಕೆಳಗಿಳಿದು ಸಂಧಾನವಾಡಿಕೊಳ್ಳುವುದು ನಮ್ಮ ಚಳವಳಿಯ ಗಾಲಿಯ ಗತಿಗೆ ಒಡ್ಡಿದ ಬೀಡು-ಗಲ್ಲು, ಅಡಚಣೆ, ಅಡ್ಡಿ. ಅಧಿಕಾರವನ್ನು ವಹಿಸಿ ಸಂಪೂರ್ಣ ಸ್ವತಂತ್ರರಾಗಲಾರೆವು. ಅಷ್ಟಾಗದೆ ನಮಗೆ ಗತಿಯಿಲ್ಲ. ಎಂದ ಮೇಲೆ ತಾತ್ಕಾಲಿಕವಾಗಿ ನಮ್ಮ ಜನರಿಗೆ ಮಂಕುಬೂದಿ ಎರಚಿ ನೋಡುವುದು, ಬ್ರಿಟಿಷರು 'ಹೇಗಾದರೂ ಬಿಟ್ಟುಹೋಗುವುದು ಅನಿವಾರ್ಯವೆನಿಸಿದಾಗ ಎಷ್ಟು ದಿನ ಸಾಧ್ಯವಾದರೆ ಅಷ್ಟು ದಿನ ಭಾರತಕ್ಕೆ ಜೋತುಬೀಳುವ ಎಂದು ಈ ಚುನಾವಣೆಯೆಂದೆಲ್ಲ ಪೊಟ್ಟಿಯ ಜೂರುಗಳನ್ನು ಎಸೆಯುತ್ತಿದ್ದಾರೆ.

ಭದ್ಮವೇಷ.

ಇಷ್ಟೇ ಅಲ್ಲದೆ, ಸಾಮ್ರಾಜ್ಯವನ್ನೂ ಭದ್ರಪಡಿಸಿಕೊಳ್ಳುವುದಕ್ಕೆ ರಾಜಕೀಯ ಏಕಮಾತ್ರ ಛತ್ರಾಧಿಪತ್ಯ, ಸಾಮ್ರಾಜ್ಯಶಾಹಿಗಳ ಕೈಯಲ್ಲಿಯೇ ಇರಬೇಕೆಂಬ ನಿಯಮವಿಲ್ಲ. ಸಾಮ್ರಾಜ್ಯಶಾಹಿ ಒಂದೊಂದು ದೇಶದಲ್ಲಿ ಒಂದೊಂದು ವೇಷದಲ್ಲಿ ತಲೆಯೆತ್ತಿ ಮೆರೆಯಬಹುದು. ಪೆಲೆಸ್ಟೈನ್, ಇರಾಕ್, ಇರಾನ್, ಈಜಿಪ್ಟ್ ಮುಂತಾದ ಮಧ್ಯಪೂರ್ವದ ದೇಶಗಳಲ್ಲಿ ಸಾಮ್ರಾಜ್ಯವಾದ 'ಮ್ಯಾನ್‌ಡೇಟರೀ' ಎಂಬ ಪೆಸರಿನಲ್ಲಿ ಆಯಾ ದೇಶಗಳನ್ನು ಸುಲಿಗೆ ಮಾಡುತ್ತಿದೆ, ನೆತ್ತರು ಬಸಿಯುತ್ತದೆ, ಪ್ರಾಣ ಹಿಂಡುತ್ತದೆ. ಚೈನಾದಲ್ಲಿ ಷಾಂಗಾಯ್, ಹಾಂಕಾಂಗ್ ಪಟ್ಟಣಗಳನ್ನು ಮಾತ್ರವೇ ಹಿಡಿದಿಟ್ಟುಕೊಂಡು ಚೀನೀ ಜನರನ್ನು ಕೊಳ್ಳೆ ಹೊಡೆಯುವುದೂ ಸಾಮ್ರಾಜ್ಯಶಾಹಿಗಳ ಒಂದು ಲಕ್ಷಣ. ಭಾರತದ ಸಾಮ್ರಾಜ್ಯಶಾಹಿ ಎಲ್ಲಕ್ಕಿಂತ ಭೀಕರ, ಎಲ್ಲಕ್ಕಿಂತ ಭಯಂಕರ, ಎಲ್ಲಕ್ಕಿಂತ ಬತ್ತಲೆ, ಎಲ್ಲಕ್ಕಿಂತ ನಿರ್ಲಜ್ಜವೇಷದಲ್ಲಿ ಮೆರೆಯುತ್ತಿದೆ. ಚೂತಿಗೆ ಕಟ್ಟಿಕೊಂಡವರಿಗೆ ಹತ್ತಾರು ಜವಾಬ್ದಾರಿಗಳೂ ಉಂಟು. ಅವುಗಳನ್ನು ನಿರ್ವಹಿಸಿಯೇ ತಮ್ಮ ಸುಲಿಗೆಯ ಕಾರ್ಯವನ್ನು ಮುಂದುವರಿಸಿಕೊಳ್ಳಬಹುದು. ಚೀನಾ ದೇಶದಲ್ಲಿ ಬ್ರಿಟಿಷರು (ಯುದ್ಧ ಪೂರ್ವದಲ್ಲಿ)ಆ ದೇಶವನ್ನಾಳುವ ಜವಾಬ್ದಾರಿ ಎಲ್ಲವನ್ನೂ ತಮ್ಮ ಮೇಲಿರದೆ ಆ ಜನರ ನೆತ್ತರು ಬಸಿಯುತ್ತಿದ್ದರು. ಇರಾಕ್, ಇರಾನ್, ಪೆಲಸ್ಟೈನ್‌ಗಳಲ್ಲಿಯೂ ಹಾಗೆಯೇ ಛದ್ಮವೇಷದ ಸಾಮ್ರಾಜ್ಯವಾದ ಆಸುರೀವೃತ್ತಿಯಿಂದ ಮೆರೆಯುತ್ತಿದೆ. ಹಾಗೆಯೆ ಭಾರತವನ್ನು ಸುಲಿಯಬಾರದೇಕೆ? ಅದನ್ನಾಳುವ ಜವಾಬ್ದಾರಿ ಇಲ್ಲಿ ಉದರಿಂದಾಗುವ ಎಲ್ಲ ಆರ್ಥಿಕ ಸೌಲಭ್ಯಗಳನ್ನೂ ಪಡೆಯಬಾರದೇಕೆ? ಒಂದು ವೇಳೆ ಲಾರ್ಡ್ ವೇವೆಲ್ ಗವರ್ನರ್ ಮಹಾಪ್ರಭು ತನ್ನ ಗಾಯಿಂದಿಳಿದು ಹೋದರೂ ಅವರ ಸಾಮ್ರಾಜ್ಯವನ್ನು ಕಾಪಾಡಿಕೊಳ್ಳಬಹುದು, ಇನ್ನೊಂದು ಛದ್ಮವೇಷದಲ್ಲಿ. ಬಿಟ್ಟು ಹೋಗಲೇಬೇಕಾದರೂ ಖಂಡಿತವೆಂಬ ಮೇಲೆ—ಇಂದೇ ಅಥವಾ ಇನ್ನು ಹತ್ತೇನದೂ ವರ್ಷದಲ್ಲಿ ಬಿಟ್ಟು ಹೋಗಬಹುದಿದ್ದರೂ, ಕ್ರಮೇಣ ಕಾಲಾನುಕಾಲದಲ್ಲಿ— ಸಾಧ್ಯವಾದಷ್ಟು ಕಾಲ ಯಾವ ಯಾವ ಪ್ರಯತ್ನದಿಂದಲಾದರೂ ಅಂಟಿಕೊಂಡು ಮುಂದುವರಿಯುವುದು ಜಾಣತನದ ಮಾತಲ್ಲವೆ? ಭಾರತೀಯರೊಡನೆ ಹಿಟವಾಡಿ ಒಂದುದಿನ ಗಂಟುಮೂಟೆ ಸಹಿತ ಹೊರಟುಕೊಂಡು ಹೋಗುವುದಕ್ಕೆ ಬದಲು, ಸಹಕರಿಸಿ ಒಳ್ಳೆಯ ನಾಳೆಗಳಿಂದಲೇ ರಕ್ತಹೀರುವುದು ಲಾಭದಾಯಕವಲ್ಲವೆ? ಎಂದ ಮೇಲೆ ಚುನಾವಣೆ, ಸಿಮ್ಲಾ ಪರಿಷತ್ತು, ಮುಂಡುಮೇಜುಗಳಂತಹ ಕಪಿಗಳನ್ನು ಹೂಡಬಾರದೇಕೆ? ಬ್ರಿಟಿಷರ ರಾಜಕೀಯ ವಿಜ್ಞಾನ ಮುತ್ಸದ್ದಿತನದ ಸೂರರಲ್ಲಿ ಒಂದಂಶವಾದರೂ ನಮಗಿದ್ದಿದ್ದರೆ ಭಾ

ನಿಜವಾಗಿ ಇಂದು ಈ ಭೀಕರ ಪರಿಸ್ಥಿತಿಯಲ್ಲಿರುತ್ತಿಲ್ಲ. ತಾತ್ಕಾಲಿಕ ಸುಖ, ತಾತ್ಕಾಲಿಕ ಸೌಕರ್ಯ, ತಾತ್ಕಾಲಿಕ ಸರ್ಕಾರ, ತಾತ್ಕಾಲಿಕ ಸಂಧಾನವೆಂದು ಹಾತೊರೆಯುವುದು ನಮ್ಮ ರಾಜಾಜಿಯಂಥವರ ಘೋರಣೆ. ನೂರು ವರ್ಷಗಳ ಭವಿತವ್ಯವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮುಂದುವರಿಯುವುದು ಬ್ರಿಟಿಷ್ ರಾಜಕಾರಣಿಗಳ ಜಾಣತನ. ಅವರಿಗೆ ತಾತ್ಕಾಲಿಕವಾಗಿ ಏನಾದರೂ ಬಿಟ್ಟರೂ ಅಷ್ಟೊಂದು ಚಿಂತೆಯಿಲ್ಲ; ಭವಿತವ್ಯದ ದೃಷ್ಟಿಯಿಂದ ಮಾತ್ರ ಅವರ ಕಾದಾಟ.

ನಮ್ಮ ದೃಷ್ಟಿ ಯಾವುದು?

ಬ್ರಿಟಿಷರು ಈಗ ನಡೆಸುತ್ತಿರುವ ಸಂಧಾನ, ಲಂಡನ್ ಪ್ರಯಾಣ, ಸಿಮ್ಲಾ ಸಮ್ಮೇಳನ ಇವು ಕೇವಲ ಭಾರತೀಯರ ಹಿತದೃಷ್ಟಿಯಿಂದಲೇ ಕೈಕೊಂಡವುಗಳೆಂಬ ಸದುದ್ದೇಶದಿಂದಲೇ ಮುಂದುವರಿಯೋಣ. ಚುನಾವಣೆಯನ್ನು ಅವರ ಭವಿತವ್ಯದ ನಿರ್ಣಯಕ್ಕಾಗಿ 'ಮಾಫಲೇಮ ಕದಾಚನ' ಎಂದುಕೊಂಡು ಮುಂದೆ ಮಾಡಿದ್ದಾರೆ ಎಂದಿಟ್ಟುಕೊಳ್ಳೋಣ, ಹಾಗಾದರೆ ಈ ಚುನಾವಣೆಗಳ ಬಗ್ಗೆ ನಮ್ಮ ಘೋರಣೆ ಏನಿರಬೇಕು? ದೃಷ್ಟಿ ಯಾವುದಿರಬೇಕು?—ಎಂಬುದನ್ನು ವಿಚಾರಿಸಿಕೊಳ್ಳದೆ ಮುಂದುವರಿಯುವುದು ವಿವೇಕವೆನಿಸಲಾರದು.

ಮುಖ್ಯವಾಗಿ ಚುನಾವಣೆಯಲ್ಲಿ ಜಯಶೀಲರಾಗಿ ಅಧಿಕಾರ ಸ್ವೀಕಾರ ಮಾಡಿದೆವು ಎಂದು ಇಟ್ಟುಕೊಳ್ಳೋಣ. ಆಗ ನಮ್ಮ ಜವಾಬ್ದಾರಿಗಳೇನು? ಹೊಣೆ ಯಾವುದು? ರಾಜಾಜಿ ಈ ವಿಚಾರ ನನ್ನು ಅನೇಕ ಸಲ ಮಾಡಿದ ಭಾಷಣಗಳಲ್ಲಿ ಹೇಳಿದ್ದಾರೆ: ಯುದ್ಧ ಮುಗಿದಿದೆ. ಯೋಧರನ್ನು ಬಿಡಬೇಕು. (demobilise) ಅವರಿಗೆ ನಿಕ್ಕ ರಂಗದಲ್ಲಿ ಕೆಲಸವನ್ನು ಒದಗಿಸಿಕೊಡಬೇಕು. ಅಂತಹ ಯೋಧರು ಇಪ್ಪತ್ತೈದು ಲಕ್ಷ ಜನರಿದ್ದಾರಂತೆ. ಅವರನ್ನು ನಾಗರೀಕರಲ್ಲಿ ಒಂದುಗೂಡಿಸಿಕೊಳ್ಳುವುದು ಹೇಗೆ? ಅವರ ಬುದ್ಧಿಶಕ್ತಿಗನುಗುಣವಾಗಿ, ವಿವಿಧರಂಗಗಳಲ್ಲಿ ಉದ್ಯೋಗವನ್ನು ಕಲ್ಪಿಸುವುದು ಹೇಗೆ? ಕೇಂದ್ರ ಸರ್ಕಾರ ಮೊನ್ನೆ ಮೊನ್ನೆ ಹೇಳಿದಂತೆ ಯುದ್ಧಾನಂತರ ಸರ್ಕಾರಿ ನೌಕರಿಗಳಲ್ಲಿ ಸೇರಿಸಿಕೊಂಡ ಸೇಕಡಾ ೭೦ ಜನರನ್ನು ಮನೆಗೆ ಕಳಿಸಿ, ರಂಗದಿಂದ ಹಿಂದಿರುಗಿದ ಸಚಿವಕೊಟ್ಟಸರಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು. ಹಾಗಾದರೆ ಮನೆಗೆ ಬಂದ ಜನರ ಗತಿಯೇನು? ಅವರ ಹೊಟ್ಟೆಯ ಚಿಂತೆ ಯಾರಿಗಿರಬೇಕು? ಈ ನಿರುದ್ಯೋಗದ ಸಮಸ್ಯೆಗಳನ್ನು ಸರಕಾರ ಎದುರಿಸಬೇಡವೆ? ನಾವು ಅಧಿಕಾರ ನಹಿಸಿದರೆ ಜವಾಬ್ದಾರಿಯಿಂದ ಮಾಡಬೇಕಾದ ಕೆಲಸಗಳಲ್ಲಿ ಇದು ಒಂದು. ಎಲ್ಲಕ್ಕಿಂತ ಹಿರಿದಾಗ ಆರ್ಥಿಕಸುಧಾರಣೆಯನ್ನು ಕೈಕೊಳ್ಳಬೇಕು. ಯುದ್ಧಾನಂತರ ನಿರ್ಮಾಣ ಮಾಡುವ ಕಾರ್ಯಯುದ್ಧವನ್ನು ಮಾಡುವುದಕ್ಕಿಂತಲೂ ಕಠಿನವೆನಿಸದಿರಲಾರದು. ಎಂದಮೇಲೆ ಮಿತ ಅಧಿಕಾರವುಳ್ಳ ನಾವು ಅಧಿಕಾರವಹಿಸಿದರೆ ಈ ಎಲ್ಲ ಪಟಿಲ ಸಮಸ್ಯೆಗಳನ್ನು ಸುಗಮವಾಗಿ ಬಿಡಿಸುವುದಾದೀತೆ? ಆದ್ದರಿಂದಲೇ ರಾಜಾಜಿ "ಪ್ರಜೆಗಳ ಒಪ್ಪಿಗೆಯಿಂದಲೋ, ಇಲ್ಲದೆಯೋ ಪರಕೀಯ ಸರ್ಕಾರ ಯುದ್ಧವನ್ನು ಪ್ರಾರಂಭಿಸುವುದು ಸುಲಭವಾದ ಕೆಲಸವೇ; ಆದರೆ ಯುದ್ಧದಿಂದಾದ ಗಾಯಗಳನ್ನು ಮಾಯಿಸುವುದು, ಯುದ್ಧದಿಂದುಂಟಾದ ಅನೇಕ ಸಮಸ್ಯೆಗಳನ್ನು ಎದುರಿಸುವುದು ರಾಷ್ಟ್ರೀಯ ಸರ್ಕಾರದಿಂದ ಮಾತ್ರ ಸಾಧ್ಯ," ಎಂದೂ "ಚುನಾವಣೆಗೆ ಸಿದ್ಧತೆಯನ್ನು ಮಾಡಿ, ನಮ್ಮನ್ನು ಅಧಿಕಾರಕ್ಕೇರಿಸುವುದೊಂದು ವರಪ್ರಸಾದ ಎಂದು ಯಾರೂ ತಿಳಿಯದಿರಲಿ," ಎಂದೂ ಎಚ್ಚರಿಸಿರುವುದು. ಈ ಚುನಾವಣೆಗಳನ್ನೇರ್ಪಡಿಸಿ ಬ್ರಿಟಿಷ್ ಸರ್ಕಾರ, ನಮ್ಮ ಒಪ್ಪಿಗೆಯಿಲ್ಲದೆ ಯುದ್ಧದ ಕುಂಡಕ್ಕೆ ದೂಡಿದುದರಿಂದುಂಟಾದ ಭೀಕರ ಪರಿಣಾಮ—ಸಮಸ್ಯೆಗಳ, ಪರಿಹಾರ—ಬಿಡಿಸುವಿಕೆಗಳ ಜವಾಬ್ದಾರಿಯನ್ನು ನಮ್ಮ ತಲೆಗೆ ಕಟ್ಟುವುದಕ್ಕಾಗಿ ಮಾಡಿದ ಪ್ರಯತ್ನ ವೆಂದೇಕೆ ತಿಳಿಯಬಾರದು ನಾವು? ಆದರೂ ರಾಷ್ಟ್ರೀಯ ಸರ್ಕಾರ ಸ್ಥಾಪನೆಯಾದರೆ ಜನರ ನೋವು ಕೊಂಚವಾದರೂ ಕಡಿಮೆಯಾದೀತು; ಬಂಗಾಲದ ಬರಗಳಂಥವು ಬಂದರೂ ಮೂವತ್ತು ಲಕ್ಷ ಜನರನ್ನಂತೂ ಒಲಿಕೊಡಲಾರದು ನಮ್ಮ ಸರ್ಕಾರ. ಆದರೆ ಬರವು ಬಾರದಂತೆ ತಡೆಮ ನಿಲ್ಲಿಸಲಿಲ್ಲವೇಕೆ ಎಂಬ ಆರೋಪ ಖಂಡಿತ ಅನ್ಯಾಯವಾದುದು. ಆದಕಾರಣ ಮಣಿಮವನ್ನುಂಡು ಕೊರಗುತ್ತಿರುವ ಜನರ ಮಣಿಮನಿವಾರಣೆಗಾಗಿ ನಿರ್ಭಂಚನೆಯಿಂದ ಸಹಾಯಮಾಡಬೇಕು. ಆ ದೃಷ್ಟಿಯಿಂದ ಅಧಿಕಾರ ಸ್ವೀಕಾರ ಒಳಿತೇ ಎನ್ನಬಹುದು.

ಆದರೆ ಈ ಚುನಾವಣೆಗಳಬಗ್ಗೆ ನಮ್ಮ ನಿಶ್ಚಿತ ಘೋರಣೆಯೇನಿರಬೇಕು? ಇದು ಎಲ್ಲರೂ ಉತ್ತರ ಕೊಡಲೇ ಬೇಕಾದ ಪ್ರಶ್ನೆ. ಚುನಾವಣೆಗಳಲ್ಲಿ ಭಾಗವಹಿಸುವುದರ ಮೂಲೋದ್ದೇಶವೇನಿರಬೇಕು? ಈ ಪ್ರಶ್ನೆಗೆ ಜನಹರರು ಕಾಶ್ಮೀರದಿಂದಲೇ ಉತ್ತರಕೊಟ್ಟಿದ್ದಾರೆ: "ಒಂದೆರಡು ಸ್ಥಳಗಳಿಗಾಗಿ ಕಾದಾಟವಲ್ಲ. ಹೆಚ್ಚಿನ ಸ್ಥಾನಗಳನ್ನು ಗೆಲ್ಲಬೇಕೆಂದಲ್ಲ ಈ ಚುನಾವಣೆಯಲ್ಲಿ ಭಾಗವಹಿಸಬೇಕಾದುದು. ಅಧಿಕಾರಲಾಲಸೆಗಾಗಿಯಲ್ಲ ಈ ಚುನಾವಣೆಯು ನಮಗೆ. ಭಾರತದ ಮನೆ ಮನೆಗೂ ಸ್ವಾತಂತ್ರ್ಯ ಸಂದೇಶವನ್ನು ಮುಟ್ಟಿಸುವುದೇ ಕಾಂಗ್ರೆಸಿನ ಗುರಿಯಾಗಿರಬೇಕು. ಜೊತೆಗೆ ಬಹುದಿನಗಳಿಂದ ಅಂತರಿಕ್ಷದಲ್ಲಿ, ಬೇರುಗಳಲ್ಲದೆ ತಲೆಯಾಡುತ್ತಿದ್ದ ಎಷ್ಟೋ ಸಮಸ್ಯೆಗಳು ಇತ್ಯರ್ಥವಾಗುವುದಕ್ಕೆ ಸಹಾಯವಾಗುತ್ತದೆ. ಆದಕಾರಣ ನಾವು ಚುನಾವಣೆಯಲ್ಲಿ ಭಾಗವಹಿಸುವುದಾದರೂ ಈ ಉದ್ದೇಶದಿಂದಲೇ ಇರಬೇಕು." ಇದಲ್ಲದೆ ಇದರಿಂದ ಶಾಶ್ವತ ಶಾಂತಿ, ಸುಖ, ಏಳಿಗೆ, ಸಂವದಭೃದವಾದೀತು ಎಂದು ನಾವು ಬಯಸುವುದು ಮೂರ್ಖತನ. ನಮ್ಮ ಸ್ವಾತಂತ್ರ್ಯಸಾಧನೆಯ ಸಮಸ್ಯೆಯನ್ನು ಬಿಡಿಸುತ್ತೇನೆನ್ನುವುದೊಂದು ದೊಡ್ಡ ಭ್ರಮೆ. ಈ ಬಗ್ಗೆ ನಾಗಿನ್‌ದಾಸ್ ಟಿ. ಮಾಸ್ಟರರ ಮಾತುಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬಹುದು.

ಆದರೆ ಈ ಸನ್ನಿವೇಶ.

ಆದರೆ ಚುನಾವಣೆಗಾಗಲು ಇರಬೇಕಾದ ಸ್ವತಂತ್ರ ಸನ್ನಿವೇಶ ಈಗ ಉಂಟೊ? ಮತದಾರರಿಲ್ಲ ತನ್ನ ಮತವನ್ನು ಯಾರೂ ಬ್ಬರ ಹಂಗು-ಹೆದರಿಕೆಗಳಿಲ್ಲದೆ ನಿಷ್ಪಕ್ಷವಾತವಾಗಿ ಹಾಕಲು ಇರಬೇಕಾದ ಯೋಗ್ಯ ಸನ್ನಿವೇಶವಿದೆಯೆ? ಪ್ರಜಾಸತ್ತಾತ್ಮಕ ರಾಜ್ಯಘಟನೆಯನ್ನು ತಯಾರಿಸಲು ಚುನಾಯಿತರಾಗಿ ಬರುವ ಘಟನಾಸಮಿತಿಯ ಸದಸ್ಯರ ಚುನಾವಣೆ ಪ್ರಜಾಸತ್ತಾತ್ಮಕ ಸರ್ಕಾರದ ನೇತೃತ್ವದಲ್ಲಿ ಜರುಗಬೇಡವೆ? ಈ ಎಲ್ಲ ಪ್ರಶ್ನೆಗಳಿಗೂ ನಿರಾಶಾಜನಕವಾದ ಉತ್ತರಗಳನ್ನೇ ಕೊಡಬೇಕಾಗುತ್ತದೆ. ದೇಶದ ಪ್ರಮುಖ ಪ್ರಾಂತಸರ್ಕಾರಗಳು ಗವರ್ನರರ ನಿರಂಕುಶ, ಬೇಜವಾಬ್ದಾರಿಯ ಸಲಹೆಗಾರರಿಂದ ಜರುಗುತ್ತಲಿವೆ. ಸೆಕ್ಷನ್ ೯೩ ವಾರುವತ್ಯ ನಡೆಸಿದೆ. ಮಿಕ್ಕ ಪ್ರಾಂತಗಳಲ್ಲಿ ಪ್ರಜಾಪೆಂಬಲವಿಲ್ಲದ ಕೈಗೊಂಬೆ ಮಂತ್ರಿಗಳ ಕೈಯಲ್ಲಿವೆ ಆಡಳಿತ. ಇನ್ನೂ ಕೆಲವು ಪ್ರಾಂತಗಳಲ್ಲಿ, ಜಾತೀಯ ಜಾಡ್ಯ ಆವರಿಸಿ

ಜಾತಿಸಕ್ಷಪಾತಿಗಳ ಕೈಯಲ್ಲಿವೆ. ಇನ್ನುಳಿದ ಸ್ಥಾನಗಳಲ್ಲಿ 'ಹೂಡಿದ್ದೆಲ್ಲಗ್ಗೆ, ಆಡಿದ್ದೆ ಆಟ' ಎನ್ನುವಷ್ಟು ಅನೇಕ ವಿಷಯಗಳಿಂದ ಸಾಗಿದೆ. ಇಂತಹ ವಿಷಮ ಸನ್ನಿವೇಶದಲ್ಲಿ ಚುನಾವಣೆ ನಡೆಯಬೇಕು! ಚುನಾಯಿತರು ನಮ್ಮ ರಾಜ್ಯಘಟನೆಯನ್ನು ತಿದ್ದುವ ಸಾಧನರಾಗುವವರಲ್ಲಿ ನೆರವಾಗಬೇಕು! ಇವನ್ನೇ ನಮ್ಮ ಸಾಮಾನ್ಯ ಸ್ವಾತಂತ್ರ್ಯತ್ಮಕ ರಾಜ್ಯದ ಅವಹೇಳನ ಎಂದು ಕರೆಯುವ ವಿಚಿತ್ರ ಸ್ಥಾನದ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ. ಬಿ.ಜಿ.ಖರ್ ಮತ್ತು ಸಚಿವರ ಸ್ಥಾನದ ತಾರೀಖು ಕಳ್ತತ್ತಿಯಲ್ಲಿ ಹೇರಿದ ಮಾತುಗಳನ್ನು ಇಲ್ಲಿ ನಿನಗೆ ಜ್ಞಾಪಿಸಬಹುದು: "ಜಾತೀಯ ಮತ್ತು ಕೃತಕವಾದ ವರ್ಗಗಳಿಗೆ ಬೆಂಬಲಕೊಡುವುದರಲ್ಲಿ ಆನಂದ ಪೀಠವಾದ ಪೇಶವಾಯಿ ಸರ್ಕಾರವು ಚುನಾವಣೆಗಳನ್ನೇರ್ಪಡಿಸುವುದನ್ನು ಇತ್ತೀಚಿನ ಯಾವ ಘಟನೆಯೂ ಅನುಮೋದಿಸಿಲ್ಲ. ಅಷ್ಟು ಮಾತ್ರವಲ್ಲ, ಸಿವಿಲ್ಯಾಂತದಲ್ಲಿ ನಡೆದಂತೆ ಪ್ಯಾಂತೀಯ ಪಾಸನಸಭೆಯನ್ನು ವಿಸರ್ಜಿಸಿಯೂ ಅಲ್ಪಸಂಖ್ಯಾಕ ಪಕ್ಷಗಳು ಅಧಿಕಾರವಲ್ಲಿದ್ದು ಚುನಾವಣೆಗಳನ್ನು ಜರುಗಿಸಲು ಅವಕಾಶ ಕೊಡುವುದು ರಾಜ್ಯಘಟನೆಗೇ ಮಾನ ತೆಗೆದಂತೆ" ಇದಕ್ಕಿಂತ ಪ್ರಬಲವಾದ ಮಾತುಗಳನ್ನೆ ಯಾರು ಹೇಳಬಲ್ಲರು? ಏನು ಹೇಳಬಲ್ಲರು? ಯಾಕೆ ಹೇಳಬೇಕು? ಚುನಾವಣೆಗೆ ಅಭ್ಯರ್ಥಿಮಾರರನ್ನು ನಿಲ್ಲಿಸುವ ಪ್ರತಿಯೊಂದು ಪಕ್ಷವೂ ತನ್ನ ಸೀಟಿ, ಘೋರಣೆಯನ್ನು ಮತದಾರರ ಮುಂದೆ ಇಡುವ ಸ್ವಾತಂತ್ರ್ಯವಿರಬೇಕು. ಸ್ವಾತಂತ್ರ್ಯವಿರಬೇಕು. ಆದರೆ ಈಸೆಯ ಕಲಂ ವಾಮಪಕ್ಷ ನಡೆಸುತ್ತಿರುವಾಗ ಇದು ಸಾಧ್ಯವೆ?

ಇದರ ಜೊತೆಗೆ ಭಾರತಸಂರಕ್ಷಣೆ ಕಾಯಿದೆಯು ಮಹಾಕುತ್ತ ನಮ್ಮ ಜನರ ಬಾಳನ್ನು ಸುತ್ತಿಕೊಂಡಿದೆ. ಸ್ವತ್ತಿಸ್ವಾತಂತ್ರ್ಯವನ್ನು ಅಂಗುಲ ಅಂಗುಲಕ್ಕೆ ಕಡಿದು ತಿನ್ನುವ ವಿಷಸರ್ಪ ದೇಶವನ್ನು ಸುತ್ತಿದೆ. ಯುದ್ಧ ಮುಗಿದ ಇಪ್ಪತ್ತು ತಾಸುಗಳ ಒಳಗಾಗಿಯೆ ಇಂಗ್ಲೆಂಡಿನಲ್ಲಿ ಅಂತಹ ಕಾಯಿದೆಗಳನ್ನೆಲ್ಲ ರದ್ದುಗೊಳಿಸಿದರು. ಆದರೆ ಭಾರತದಲ್ಲಿ ಅವುಗಳ ಆವಶ್ಯಕತೆಯೇನು? ಯುದ್ಧದ ಅಸಾಧಾರಣ ಕಾಲಕ್ಕಾಗಿ ಏರ್ಪಡಿಸಿದ ಆಯುಧವನ್ನು ಆ ಕಾಲ ಹಿಂದಾದ ಮೇಲೆ ಇಟ್ಟುಕೊಳ್ಳಬೇಕೇಕೆ? ಭಾರತ ಸಂರಕ್ಷಣೆ ಕಾಯಿದೆಗಳು ಭಾರತ ಭಕ್ಷಣೆ ಕಾಯಿದೆಗಳು ಎಂದು ಆಚಾರ್ಯ ಕೃಪಲಾನಿಯವರು ಅದಕ್ಕಾಗಿಯೆ ಕರೆದದ್ದು. ಇಂಥ ಸನ್ನಿವೇಶದಲ್ಲಿ ಚುನಾವಣೆಗೆ ಸಿದ್ಧರಾಗಿ ಎನ್ನುವುದು ತುಂಬ ಅನ್ಯಾಯ.

ಇಷ್ಟೂ ಅಲ್ಲದೆ, ಎಷ್ಟು ಜನರು ಇನ್ನೂ ಸೆರೆಮನೆಯಲ್ಲಿದ್ದಾರೆ? ಬಂಗಾಳದಲ್ಲಿ ಇನ್ನೂ ನೂರಾರು ಸಾವಿರ ರಾಜಕೀಯ ಕೈದಿಗಳಿದ್ದಾರೆ. ಎ. ಐ. ಸಿ. ಸಿ. ಸದಸ್ಯರು ಹತ್ತು ಜನರು ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ. ಮುಂಬಯಿ ಸರ್ಕಾರದ ಸೆಕ್ಯುಟರಿ ಕೈದಿಗಳು ಸಾತಾರ ಜಿಲ್ಲೆಯಲ್ಲೊಂದೆ ಇನ್ನೂರಕ್ಕೆ ಮಿಕ್ಕಿದ್ದಾರಂತೆ. ಮದ್ರಾಸ್ಪ್ರಾಂತದಲ್ಲಿ ಎಷ್ಟೋ ಜನರಿದ್ದಾರೆ. ಹೀಗೆ ರಾಜಕೀಯ ಕೆಲಸಗಾರರ ಕೈಬಾಯಿಗಳನ್ನು ಕಟ್ಟಿ, ಸ್ವಾತಂತ್ರ್ಯಾಪಹರಣಮಾಡಿ ಚುನಾವಣೆ ಜರುಗಿಸುವುದು ಎಂಥ ಅನ್ಯಾಯದ ಮಾತು?

ಮತದಾರರ ಪಟ್ಟಿ.

ಇಂತಹ ವೈಷಮ್ಯವಾತಾವರಣದಲ್ಲಿ ಚುನಾವಣೆ ನಡೆಯಬೇಕು: ಕಾಂಗ್ರೆಸ್ಸು ತನ್ನ ಪಕ್ಷವನ್ನು ಸಮರ್ಥಿಸಿಕೊಳ್ಳಬೇಕು ಎಂಬುದು ಅನ್ಯಾಯದ ಪರಮಾವಧಿಯಾದರೂ ಒಪ್ಪಿಕೊಳ್ಳುವ ಮಾತು. ಜೊತೆಗೆ ಮತದಾರರ ದೃಷ್ಟಿಯಿಂದಲೂ ದೇಶದಲ್ಲಿ ಅನ್ಯಾಯ ನಡೆಯುತ್ತಿದೆ. ಓಬೀರಾಯನ ಕಾಲದಲ್ಲಿ ಮತದಾರರೆಂದು ಪರಿಗಣಿಸಿದ ಮತದಾರರಿಂದಲೇ ಚುನಾವಣೆ ನಡೆಯಬೇಕೆಂಬುದು ಶುದ್ಧ ಅಸಂಬದ್ಧ. ಈ ಈ ಮತದಾರರ ಪಟ್ಟಿಗಳಾದರೂ ನ್ಯಾಯವಾದುವುಗಳೆ? ಅದನ್ನು ಜವಾಹರರ ಮಾತುಗಳಲ್ಲಿಯೆ ನಿಮ್ಮ ಮುಂದಿಡುತ್ತೇನೆ: "ಬಹು ಜನರು ಈ ಮತದಾರರ ಪಟ್ಟಿಗಳ ಅಸತ್ಯತೆಯ ಉದಾಹರಣೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ನೋಲೆ ನೋಲೆ ನೋಡಿದರೂ ಕಾಣುವಂತೆ ಬಹು ಜನ ಮತದಾರರಿರಬೇಕಾದ ಸ್ಥಳಗಳಲ್ಲಿ, ಕೇವಲ ಕೆಲವನ್ನು ಮಾತ್ರ ಸೇರಿಸಿದೆ. ಇದು ದೇಜಲಿಯಲ್ಲಿಯಂತೂ ತಾನೇ ತಾನಾಗಿ ತೋರಿತು. ಹೊಸ ದೆಹಲಿಯಲ್ಲಿ ಕೆಲವೇ ಸ್ತ್ರೀಮತದಾರರನ್ನು ಮಾತ್ರ ಪಟ್ಟಿಯಲ್ಲಿ ಸೇರಿಸಿರುವರಂತೆ. ತಪ್ಪು, ಅಸತ್ಯ, ಮೋಸ. ಮೋಸಗಳುಳ್ಳ ಮತದಾರರ ಪಟ್ಟಿಯ ಮೇಲೆ ಚುನಾವಣೆಯನ್ನು ಏರ್ಪಡಿಸುವುದರಲ್ಲಿ ಅರ್ಥವಿಲ್ಲ. ಆದರೂ ಈಗ ಕೊಂಚ ಬದಲಾವಣೆ ಮಾಡಬಹುದೆಂದು ಹೇಳುತ್ತಾರೆ. ಕಾಂಗ್ರೆಸ್ ಜನರ ಪುಟ್ಟಿಗೆ ಹೇಳುವಾಗಲೆ ಅವರು ಸೆರೆಮನೆಯಲ್ಲಿದ್ದರು, ಇಲ್ಲವೇ ಈ ಮತದಾರರ ಪಟ್ಟಿಗಳ ಬಗ್ಗೆ ಯೋಚಿಸುವುದಕ್ಕಿಂತಲೂ ಉತ್ತಮ ಕೆಲಸಗಳಲ್ಲಿ ತೊಡಗಿದ್ದರು .....ಆದರೆ ಚುನಾವಣೆಯ ಹೊರತು ಮಾಡಲು ಬೇರೆ ಕೆಲಸವಿಲ್ಲದ ಇನ್ನಿತರ ಪಕ್ಷಗಳು ಅದೇ ಉದ್ಯೋಗವನ್ನು ಹೂಡಿವೆ ಈ ವರ್ಷಗಳಲ್ಲಿ. ಅದೇನೇ ಇರಲಿ, ಚುನಾವಣೆಗಳಾಗಬೇಕೆಂದರೆ ಸರಿಯಾದ ಮತ್ತು ಕೇವಲ ಹೊಸ ಮತದಾರರಿಂದ ನಡೆಯಬೇಕು. ಜನರನ್ನು ಕಾಣಲು ಎಲ್ಲ ನಾಗರಿಕ ಹಕ್ಕುಗಳೂ, ಸ್ವಾತಂತ್ರ್ಯವೂ ಇರಬೇಕು. ಎಷ್ಟೋ ಸ್ಥಳಗಳಲ್ಲಿ ವಾಕ್‌ಸ್ವಾತಂತ್ರ್ಯದ ಮೇಲೆ ಇನ್ನೂ ಪ್ರತಿಬಂಧಕವಿದೆ. ಬಹುಜನ ಕಾಂಗ್ರೆಸಿಗರು ಸೆರೆಮನೆಯಲ್ಲೇ ಕೊಳೆಯುತ್ತಿದ್ದಾರೆ. ಇದೆಲ್ಲ ವಿಚಿತ್ರರೀತಿಯಲ್ಲಿ ನಡೆಯುತ್ತಿದೆ."

ಮತದಾರರ ಪಟ್ಟಿಯು ಖಂಡಿತವಾಗಿಯೂ ಪುನರ್ರಚಿತವಾಗಲೇಬೇಕು. ಇಲ್ಲದಿದ್ದರೆ ಚುನಾವಣೆ ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳಲಾರದು. ಮಿಕ್ಕ ರಾಷ್ಟ್ರಗಳಲ್ಲಿರುವಂತೆ ಬಹುಜನರಿಗೆ ಮತಾಧಿಕಾರವನ್ನೂ ಕೊಡಬೇಕು. ಇಂಗ್ಲೆಂಡಿನಲ್ಲಿರುವಂತೆ ವ್ಯತಿಯೊಬ್ಬನಿಗೂ ಮತದಾನದ ಹಕ್ಕಿರಬೇಕು. ಅಂತಹ ಹೊಸ ಪಟ್ಟಿಯನ್ನು ತಯಾರಿಸುವ ವರೆಗೆ ಚುನಾವಣೆಯನ್ನು ನಿಲ್ಲಿಸಲೇಬೇಕು. ಈ ನಿಚಾರವನ್ನು ಪ್ರತಿವಾದಿಸುತ್ತಾ ಕಾಂಗ್ರೆಸ್ ವರ್ಕಿಂಗ್ ಕಮೀಟಿ ಸದಸ್ಯರಲ್ಲಿ ಒಬ್ಬರಾದ, ದೆಹಲಿ ಕಾಂಗ್ರೆಸ್‌ಕಮೀಟಿಯ ಅಧ್ಯಕ್ಷರಾದ ಶ್ರೀ. ಆಸಫ್ ಅಲಿಯವರು ಕೊಟ್ಟ ಹೇಳಿಕೆಯನ್ನು ಎಲ್ಲರೂ ಗಮನಿಸಲೇ ಬೇಕು: ವಿಜಯಿಯಾದ ಪ್ರಜಾಸತ್ತಾತ್ಮಕ ನೂತನ ಜಗತ್ತಿನಲ್ಲಿ ಭಾರತದ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಓಬೀರಾಯನ ಕಾಲದ ೧೯೧೯ ಇಸ್ವಿಯ ಘಟನಾನುಸಾರ ಮತ್ತು ದೇಶದ ಹಿರಿಯ ಜನರ ನೇಕಡಾ ಒಬ್ಬರಿಗೆ ಮಾತ್ರ ಮತಾಧಿಕಾರದ ಅನುಸಾರ ಚುನಾವಣೆಗಳನ್ನೇರ್ಪಡಿಸುವುದು ವಿಧಿವಿಲಾಸವೇ ಸರಿ. ಪ್ರಜಾಸತ್ತಾತ್ಮಕತೆಯ ಅವಹೇಳನ ಇದಕ್ಕಿಂತ ಹಿರಿದಾಗಬಹುದೆ? ತಮ್ಮ ಮತ್ತು ತಮ್ಮ ದೇಶದ ಅದೃಷ್ಟವನ್ನು ನಿರ್ಣಯಿಸುವ ಇಂತಹ ಸಮಯದಲ್ಲಿ ಉನ್ನತ ಸಮಸ್ಯೆಗಳಿಗೆ ಜಾಣತನದಿಂದ ಮತದೀಯಲರ್ಹತೆಯುಳ್ಳ ಲಕ್ಷಾನುಲಕ್ಷ ಜನರನ್ನು ಮತದಾರರಿಂದ ಹೊರಗಿಟ್ಟು ಅವಮಾನಿಸು-

ವುದಕ್ಕಿಂತ ಹಿರಿದು ಇನ್ನೊಂದುಂಟೆ ? ಪ್ರಾಂತೀಯ ಮತದಾರರು ಹಿರಿಯ ಪ್ರಜೆಗಳಲ್ಲಿ ಸೇಕಡಾ ನಾಲ್ವರಷ್ಟಿದ್ದಾರೆ—ದೇಶದಲ್ಲಾದ ಅನ್ಯಾದೃಶ ಜನಜಾಗೃತಿಯನ್ನು ನೋಡಿಯೂ ಕೂಡ ಕೇಂದ್ರಶಾಸನ ಸಭೆಯ ಮತದಾರರು ಅರ್ಥವಿಲ್ಲದಷ್ಟು ಸೂಕ್ಷ್ಮ ದರ್ಶಕವಾಗಿರುವುದು ಸ್ಪಷ್ಟವಾಗಿದೆ. ಪ್ರಜಾಸತ್ತಾತ್ಮಕತೆಯ ಯಾವ ನಿಯಮವನ್ನು ನೆಸರಿಸಿದರೂ ಮತಾಧಿಕಾರವನ್ನು ಕೊಟ್ಟೇ ತೀರಬೇಕಾದ ಲಕ್ಷೋಪಲಕ್ಷ ವಿದ್ಯಾವಂತರು ಹೊರಗೇ ಉಳಿದಿದ್ದಾರೆ.” ನಮ್ಮ ದೇಶದ ಘಟನೆ ಎಂತಹುದಿರಬೇಕು, ನಾವು ಯಾವ ಸರ್ಕಾರವನ್ನು ಸ್ಥಾಪಿಸಿಕೊಂಡರೆ ಅನುಕೂಲವಾದೀತು— ಎಂಬ ವಿಚಾರವನ್ನು ನಿಜಕ್ಷಣೆಯಿಂದ ನಿರ್ಧರಿಸಲು ಅರ್ಹತೆಯುಳ್ಳ ನನ್ನ ನಿಮ್ಮಂತಹ ಸಹಸ್ರಾರು ಯುವಕರಿಗೆ ವಿದ್ಯಾವಂತರಿಗೆ ಮತಾಧಿಕಾರವಿಲ್ಲದಿರುವ ಚುನಾವಣೆ ರೂಪವ ಮುಖವಿಂದ ಪ್ರಜಾಸತ್ತಾತ್ಮಕ ಎಂದು ಕರೆಸಿಕೊಳ್ಳಬೇಕು? ರ್ಯಾಡಿಕಲ್ ಡೆಮಾಕ್ರಟಿಕ್ ಪಾರ್ಟಿಯ ನಾಯಕ ಎಂ. ಎನ್. ರಾಯ್ ಈ ಮತದಾರರ ಪಟ್ಟಿಗಳನ್ನು ಮತ್ತೊಂದು ದೃಷ್ಟಿಯಿಂದಲೂ ಖಂಡಿಸಿದ್ದಾರೆ: “ಪ್ರಾಂತೀಯ ಮತದಾರರ ಸಂಖ್ಯೆ ದೇಶದ ಪ್ರಜಾಸಂಖ್ಯೆಯ ಶೇಕಡ ೩ ರಷ್ಟುಮಾತ್ರ, ಕೇಂದ್ರಶಾಸನ ಸಭೆಗೆ ಮತಾಧಿಕಾರವುಳ್ಳವರು ಕೇವಲ ಶೇಕಡಾ ಮೂರರಷ್ಟು. ಮತಾಧಿಕಾರವು ಈ ಅಲ್ಪಸಂಖ್ಯಾಕರಿಗೆ ಮಾತ್ರ ಇರುವುದರಿಂದ ಅಧಿಕಾರವು ಬಂಡವಾಳಗಾರರ ಮತ್ತು ಪ್ರತಿಗಾಮಿಗಳ ಕೈಯಲ್ಲಿ ಸೇರುವುದರಲ್ಲಿ ಸಂಶಯವಿಲ್ಲ. ಆದಕಾರಣ ಮತಾಧಿಕಾರವನ್ನು ದೇಶದ ಹಿರಿಜನರಿಗೆಲ್ಲ ಕೊಡಬೇಕು” ಎಂಬ ಮಾತುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ವಿದ್ಯಾವಂತರಾಗಿ ಪದವೀಧರರಾದರೂ ಮತಾಧಿಕಾರವಿಲ್ಲ ನಮ್ಮ ಶಾಸನ ಸಭೆಗೆ! ‘ಮತ’ (Vote) ಎಂದರೇನು ಎಂಬುದರ ಅರಿವಿರದ ಮತ್ತು ಅನಕ್ಷರಸ್ಥ ನಾದರೂ ಕಂಡವರನ್ನೂ ಕೊಳ್ಳಿ ಹೊಡೆದು ಕೂಡಿಟ್ಟ ಆಸ್ತಿಯ ಹೊರೆ ಹೊಂದಿದ್ದರೆ, ತಲೆಯಲ್ಲಿ ಸೆಗಣಿಯ ಮುದ್ದೆಯಿದ್ದರೂ ಜನವು ಮತದಾರ. ಅಂತಹ ಮಾನಸಿಕ ಕುಳ್ಳರಿಂದ ನಮ್ಮ ದೇಶದ ಅಭಿವೃದ್ಧಿ ಮಾರ್ಪಾಟಾಗುವುದನ್ನು ನೋಡುತ್ತ ನಿಸಹಾಯರಾಗಿ ಕುಳಿತಿರುವುದು ನಮ್ಮ ಹೇಡಿತನ. ಅಂತಹ ಪ್ರತಿಗಾಮಿ ಕೆಳದರ್ಜೆಯ ನಾಗರಿಕರಿಂದ ಆಳಿಸಿಕೊಳ್ಳುವುದು ವಿದ್ಯಾವಂತರಿಗೆ ಲಾಂಛನಾಸ್ಪದ. ಅನಮಾನ. ಲಂಡನ್ನಿನ ಇಂಡಿಯಾಲೀಗ್ ಕಾರ್ಯದರ್ಶಿಗಳಾದ ಶ್ರೀ. ವಿ. ಕೆ. ಮೆನನ್ ರವರೂ ಮತದಾರರ ಪಟ್ಟಿಯನ್ನು ಹೊಸತಾಗಿ ತಯಾರಿಸುವ ಬಗ್ಗೆ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಮತದಾರರ ಪಟ್ಟಿಯನ್ನು ಹೊಸದಾಗಿ ತಯಾರಿಸದಿದ್ದರೆ, ಮತಾಧಿಕಾರವನ್ನು ಹೆಚ್ಚಿಸದಿನ್ನದೆ ಚುನಾವಣೆಯಲ್ಲಿ ಭಾಗವಹಿಸಕೂಡದೆಂಬ ಕಿಣ್ವಾಯಿಯವರ ಅಭಿಪ್ರಾಯವನ್ನಕ್ಕೆ ಸಮರ್ಥಿಸಬಾರದು?

ಸ್ಥಳೀಯ ಸಂಸ್ಥೆಗಳ ಚುನಾವಣೆ

ಹಾಗಾದರೆ ಮತದಾರರ ಪಟ್ಟಿಯನ್ನೇಕೆ ತಯಾರಿಸಬಾರದು ? ಸ್ಥಳೀಯ ಸಂಸ್ಥೆಗಳ ಚುನಾವಣೆ ಮತದಾರರ ಪಟ್ಟಿ ತಯಾರಾದುದು ೧೯೩೬ನೆಯ ಸಾಲಿನಲ್ಲಿ. ೧೯೩೭ರಲ್ಲಿಯಾವಾಗಲೋ ಒಮ್ಮೆ ತಿದ್ದಿದ್ದರಂತೆ. ಆದರೆ ಆ ಸಲ್ಲಿ ತಿದ್ದುಪಡಿ ಹೊಂದಬೇಕಾದರೆ ಆ ತಿದ್ದುಪಾಟು ಎಷ್ಟು ಅರ್ಥಕವಾಗಿರಬಹುದೆಂಬುದನ್ನು ಯಾರಾದರೂ ಊಹಿಸಬಹುದು. ಆಸಲ್ಲಿದ್ದ ರಾಜಕೀಯ ದಬ್ಬಾಳಿಕೆಯಲ್ಲಿ ಮತದಾರರ ಪಟ್ಟಿಯನ್ನು ಎಷ್ಟರಮಟ್ಟಿಗೆ ತಿದ್ದಿದರೋ, ಯಾರು ತಿದ್ದಿದರೋ ? ಅಂತಹ ಉದ್ವಿಗ್ನತೆಯ ಸನ್ನಿವೇಶದಲ್ಲಿ ಯಾವುದು ಸುಗಮವಾಗಿ ನಡೆದಿದ್ದೀತು? ಎಂದಮೇಲೆ ಮತದಾರರ ಪಟ್ಟಿಯನ್ನು ಮತ್ತೊಮ್ಮೆ ತಯಾರಿಸಲೇ ಬೇಕೆಂಬ ಮಾತ ಪ್ರತಿವಾದಕ್ಕೆ ಸಿಲುಕಲಾರದೆಂದು. ಆದರೂ ಸರ್ಕಾರ ಈ ಬಗ್ಗೆ ಯೋಚನೆಯನ್ನೇ ಮಾಡುತ್ತಿಲ್ಲ. ಬಹುಶಃ ಶಾಸನ ಸಭೆಗಳನ್ನು ವಿಸರ್ಜಿಸಿದ ಮೇಲೆ ಹೊಸ ಮತದಾರರ ಪಟ್ಟಿಯನ್ನು ತಯಾರಿಸುವಷ್ಟು ಕಾಲ ಗವರ್ನರ್ ಮೂರಿಗಳೇ ಪ್ರಭುತ್ವವನ್ನು ನಿರಂಕುಶವಾಗಿ ನಡೆಸಿಕೊಂಡು ಹೋಗಬೇಕಾಗುತ್ತದೆ ಎಂಬ ಭಯನಿರಬಹುದು ಆದರೆ ನಿರಂಕುಶ ಪ್ರಭುತ್ವವೇ ಬಾರಿ ಎನ್ನುವ ಹಾಗೆ ಇಲ್ಲ. ಪ್ರಯತ್ನ ಮಾಡಿದರೆ ಮಾರ್ಗವುಂಟು. ಶ್ರೀ. ಅಸಫ್ ಅಲಿಯವರು ದಾರಿಯನ್ನು ತೋರಿಸಿಕೊಟ್ಟಿದ್ದಾರೆ: “ಒಂದುನಿಶ್ಚಿತವಾದ ಮತ್ತು ನೇರವಾದ ದಾರಿ ಎಂದರೆ ಶಾಸನ ಸಭೆಯ ಕಲಮಿನ ಕೈವಾಡ ಕೊನೆಗಾಣಬೇಕು. ಈಗ ಇರುವ ಶಾಸನ ಸಭೆ ಮತ್ತು ಪ್ರಾಂತೀಯ ಸರ್ಕಾರಗಳನ್ನು ಘಟನಾ ನಿರ್ಮಾಣ ಸಮಿತಿಯ ಕರಡೊಂದನ್ನು ಸಿದ್ಧ ಪಡಿಸಲು ಅವ್ವಣೆ ಮಾಡಿ, ಹಿರಿಯ ರೆಲ್ಲರ ಮತದಾರರಿಂದ ಘಟನಾಸಮಿತಿ ಮತ್ತು ತಾತ್ಕಾಲಿಕ ಸರ್ಕಾರಗಳಿಗೆ ಚುನಾವಣೆಯನ್ನು ಏರ್ಪಡಿಸಬೇಕು. ಆ ಸರ್ಕಾರ, ಘಟನಾ ಸಮಿತಿಯ ಕಾರ್ಯ ಮುಂದುವರಿಯುತ್ತಿರುವಾಗ ಆಡಳಿತ ನಡೆಸುತ್ತಿರಲಿ; ಹೀಗೆ ಮಾಡುವುದರಿಂದ ದೇಶ ಜವಾಬ್ದಾರಿ ಸರ್ಕಾರದಿಂದಲೇ ಆಳಲ್ಪಡುತ್ತದೆ. ಜೊತೆಗೆ ಘಟನೆಯೂ ತಯಾರಾಗುತ್ತದೆ. ಇದೇ ವಿಚಾರವಾಗಿ ಸಂವಾದಕೀಯವನ್ನು “ಜಂಟಿ” ಪತ್ರಿಕಾ ಸಂವಾದಕರು ಬರೆದಿರುವುದನ್ನು ನೀವು ನೋಡಿಯೂ ಇರಬೇಕು. “ಮುಂಬರುವ ಚುನಾವಣೆ ಭಾವೀ ಘಟನೆಯನ್ನು ನಿರ್ಣಯಿಸುತ್ತದೆ ಎಂದಂತಾಯಿತು. ನೇಕಾಗಿ ಮತಾಧಿಕಾರವುಳ್ಳವರು ದೇಶದ ಘಟನಾ ಸಮಿತಿಯನ್ನು ಆರಿಸುವುದು. ಈ ರೀತಿಯ ಬಹುಸಂಖ್ಯಾಕರಿಗೆ ಅತ್ಯಂತ ಅನ್ಯಾಯವೆನಿಸದಿರದು ಅಲ್ಲವೆ ಈಗಿರುವ ತಿದ್ದುಪಾಟಾಗದ ಪಟ್ಟಿಯ ಆಧಾರದ ಮೇಲೆ—ಜನರಲ್ಲಿ ಕೆಲವರ ಮತಾಧಿಕಾರವನ್ನು ಕೆತ್ತುಕೊಂಡಿರುವುದನ್ನು ಗಮನಿಸಿದರೆ—ಚುನಾವಣೆ ನಡೆಸುವುದು ಇನ್ನೂ ಅನ್ಯಾಯವಾಗುತ್ತದೆ. ಈ ಅಲ್ಪಸಂಖ್ಯಾಕ ಮತದಾರರ ಅಭಿಪ್ರಾಯಕ್ಕೆ ಬಹುವಾಗಿರುವಷ್ಟು ಅಸಾಧ್ಯವಾದ್ದರಿಂದ, ಅಸಫ್ ಅಲಿಯವರು ಹೇಳಿದಂತೆ ಘಟನಾ ಸಮಿತಿಗಾಗಿ ಹೊಸ ಚುನಾವಣೆಗಳಾಗಬೇಕೆಂದು ಕೇಳುವುದು ತಪ್ಪಿಲ್ಲ. ಆದರೆ ಇದಕ್ಕಾಗುವ ಕಾಲ-ಹಣದ ಅಪವ್ಯಯವೂ ತಪ್ಪಿದ್ದಲ್ಲ. ಆಕಾರಣ ಘಟನೆಯ ಬಗ್ಗೆ ಪ್ರಜೆಗಳ ತಿಳಿವಳಿಕೆ ಬೆಳೆಯಬೇಕಾದರೆ ಶಾಸನದ ಕಲಮಿನ ಪಾರುಪತ್ಯ ಮಣ್ಣುಮುಕ್ಕಬೇಕು. ಅಷ್ಟೇ ಅಲ್ಲದೆ ಪ್ರಜಾಪ್ರತಿನಿಧಿಗಳಿಂದ ಅಧಿಕಾರವಲ್ಲಿದ್ದ ಕಾಂಗ್ರೆಸ್ ಮಂತ್ರಿಮಂಡಲವಾದರೂ ಈ ಅಲ್ಪಕಾಲದಲ್ಲಿ ಅಧಿಕಾರ ವಹಿಸಬೇಕು.

ಯಾರು ಯೋಚಿಸಬೇಕು

ಚುನಾವಣೆ ಎಷ್ಟು ತೊಡಕಾದುದು! ಇವತ್ತಿಗೇ ಮುಗಿಯಲಿಲ್ಲ. ಚುನಾಯಿತರಾದವರು ಎಂತಹ ಜವಾಬ್ದಾರಿ ಕೆಲಸವನ್ನು ನೆರವೇರಿಸಬೇಕು ಎಂಬುದನ್ನು ನೆನೆದಾಗ, ರಾಜಕೀಯ ಪಕ್ಷಗಳು ಬುದ್ಧಿವಂತರನ್ನು ನಿಲ್ಲಿಸುವಾಗ ನೈತಿಕ ಎಚ್ಚರಿಕೆಯಿಂದ, ವಿವೇಕದಿಂದ, ಚಾರಿತ್ರವನ್ನೂ ಕಾರ್ಯದಕ್ಷತೆಯುಳ್ಳವರನ್ನೂ ವಿವೇಕಶಾಲಿಗಳನ್ನೇ ನಿಲ್ಲಿಸ

ಹತ್ತಿವರ್ಷಗಳಿಂದ ಅನುಭವಪಟ್ಟ ಕರ್ಕ ಮತ್ತು ಕಂಪನಿಯ

ಜ್ವರದ ಗುಳಿಗೆಗಳು

ಬಾಟ್ಲಿಗೆ ೧-೪-೦

ಎಲ್ಲ ಪ್ರಕಾರದ ಜ್ವರಗಳಿಗೂ ದಿವ್ಯೌಷಧ

ವಿಳಾಸ:- **ಗಣೇಶ್ ರಾಮಚಂದ್ರ ಕರ್ಕ ಮತ್ತು ಕಂಪನಿ**

ಗಿರಗಾಂವ, ಮುಂಬಯಿ

ಬೇಕು. ಮುಂದೆ ನೆರವೇರಿಸಲಿರುವ ಕಾರ್ಯಜಾಮಗ್ರಿಯನ್ನು ಗಣನೆ ಮಾಡಿ, ಉಮೇದುವಾರರ ಯೋಗ್ಯಾಯೋಗ್ಯತೆಯನ್ನು ತುಲನೆಮಾಡಿ, ಶೋಕಮಾಡಿ, ನಿಷ್ಕರ್ಷೆಮಾಡಿ, ನಿರ್ದಾಕ್ಷಿಣ್ಯವಾಗಿ ನಿಲ್ಲಿಸಬೇಕು. ಅಯೋಗ್ಯರನ್ನು ಅಧಿಕಾರದಲ್ಲಿ ಕೂಡಿಸಿ ಸಂಸ್ಥೆಯ ಹೆಸರನ್ನು ಕೆಡಿಸಿಕೊಳ್ಳಬೇಕಾದೀತು. ಮುಂದೆ ನಮ್ಮ ಅಧಿಕಾರಿಗಳಿರುವ ಕಾಲ ಹೂವಿನ ಹಾಸುಗೆಯಲ್ಲ; ಮುಳ್ಳಿನ ಮನೆ! ಯುದ್ಧದ ಜೇಗೆಯಲ್ಲಿ ಜೆಂದ ಜನ ತಮ್ಮ ನಾಯಕರಿಂದ ಎದೆ ತಂಪಾಗುವುದನ್ನು ನಿರೀಕ್ಷಿಸುತ್ತಾರೆ. ಆಗ ನಾವೆಷ್ಟು ಯಶಸ್ವಿಯಾಗುತ್ತೇನೆಂಬುದನ್ನೇ ಅವಲಂಬಿಸಿದೆ ನಮ್ಮ ಏಳಿಗೆ. ಆದಕಾರಣ ಈ ಪರೀಕ್ಷಾ ಸಮಯದಲ್ಲಿ ಮೂರನೆಯ ದರ್ಜೆಯ ಅಧಿಕಾರ ಲಾಲಸೆಯ 'ಮೂರ್ಖ ಶಿಖಾಮಣಿಗಳನ್ನು ಎತ್ತಿ ಗಟ್ಟಿ ಕೂಡಿಸಿ, ಆ ಮೇಲೆ ಅವನಮಾನಿತರಾಗಬೇಕಾದೀತು. ಆಗಲೇ, ದೊಡ್ಡ ದೊಡ್ಡ ಜನ ಬಣ್ಣ ಬದಲಾಯಿಸಿಕೊಳ್ಳುತ್ತಿದ್ದಾರೆ. ಮಾನ್-ಬೆಸ್ಟರ್ ಬಟ್ಟೆಗೆ ಬದಲಾಗಿ ಒರಟು ಖದ್ದರು ಮೈಮೇಲೆ ಬರುತ್ತಿದೆ. ಇಂತಹ ಸಮಯಸಾಧಕರಿಂದ ಖಂಡಿತವಾಗಿಯೂ ನಮ್ಮ ಮಾನ ಕಾಸಿಗೆ ಪಂಥೇರು ಆಗಿ, ಅಗ್ಗವಾಗಿ ಬಿಡುತ್ತದೆ. ರಂಧ್ರಾನ್ವೇಷಣ ಕಾರರರಿಗೆ ಅನ್ನುವ ಅವಕಾಶವನ್ನು ನಾವಾಗಿಯೇ ಕಲ್ಪಿಸಿಕೊಟ್ಟಂತಾ ಗುತ್ತದೆ. ಆದ ಕಾರಣ ಸಮಯಸಾಧಕರನ್ನು, ಅಧಿಕಾರಪ್ರಿಯ ರನ್ನು ಸತ್ಯವಾಗಿ ಕಾಂಗ್ರೆಸಿನ ಹೆಸರಿನಿಂದ ನಿಲ್ಲಿಸಬೇಡಿ. ಕಾಂಗ್ರೆಸ್ ಚೀಟಿಯನ್ನು ಹಣೆಗೆ ಹಚ್ಚಿಕೊಂಡು ಕಾಂಗ್ರೆಸ್ಸಿಗೇ ದ್ರೋಹ ಬಗೆಯುವ ದ್ರೋಹಿಗಳನ್ನು " ಶಂಖ ಜಾಗಟೆಗಳಿಂ ಬಡಿದು ಕಡಲಡಿಗೆ ತಳ್ಳಿ " ಬಿಡಿ. ಅಂಥವರ ಕುಲ ನಿರ್ನಾಮವಾದರೆ ನಮ್ಮ ಕಾರ್ಯ ಸುಗಮವಾದೀತು. ಅಡ್ಡಿ-ಆತಂಕಗಳಿಲ್ಲದೆ ಮುಂದೆ ಮುಂದೆ ಓಡೀತು. ಅಧಿಕಾರ ಪ್ರಾಪ್ತಿಯಾಗಲಿಲ್ಲವೆಂದು ಕಾಂಗ್ರೆಸ್ಸಿನಿಂದ ಹೊರಗೆ ಹೋಗುವುದಾದರೆ ಅಗತ್ಯವಾಗಿ ಕಳಿಸಿ ಬಿಡುವ. ಬೇಕಾದರೆ ಸಂಭಾವನೆಯನ್ನೇನಾದರೂ ಕೊಟ್ಟು ಶರಣು ಹೊಡೆಯುವ. ಅಂತಹ ಅಳುಕು, ಹುಳುಕು ಕೊಂಡಿ ನಮ್ಮ ಸರಪಳಿಯಲ್ಲಿರುವುದು ಬೇಡ!

ಹಾಗೆಯೇ ಮತದಾರರಿಗೊಂದು ಎಚ್ಚರಿಕೆಯ ಮಾತು: ಮತದಾರರು ತಮ್ಮ ಮತವನ್ನು ಯೋಗ್ಯ ಉಮೇದುವಾರನಿಗೇ ಕೊಟ್ಟು ಸಾರ್ಥಕ ಮಾಡಬೇಕು. ವೈಯಕ್ತಿಕ ಹಿರಿಮೆ, ಕೂಗುವ ಘೋಷಣೆಗಳಿಗೆ ಕಿವಿಗೊಡದೆ, ಉಮೇದವಾರನ ನಿಜಸ್ವಾಪ ಕಿಮ್ಮತ್ತನ್ನು ಕಂಡುಹಿಡಿದು ತಮ್ಮ ಮತವನ್ನು ಹಾಕಬೇಕು. ಹಾಗಲ್ಲದೆ ಕೈಗಿತ್ತ ಕತ್ತಿಯಿಂದ-ಶತ್ರುಸಂಹಾರಕ್ಕೆ ಉಪಯೋಗಿಸದೆ-ಆತ್ಮಹತ್ಯೆಮಾಡಿಕೊಂಡಂತೆ. ಆದ ಕಾರಣ ಉಮೇದುವಾರನ ಕಿಮ್ಮತ್ತು ನೋಡಿ, ಹದಿನಾರಾಣೆ ಬಣ್ಣಕ್ಕೆ ಅಲ್ಲದಿದ್ದರೂ ಪ್ರತಿಪಕ್ಷವನಿಗಿಂತ ಮಿಗಿಲಾಗಿ ಇದ್ದರೇನೇ ಮತವನ್ನು ಕೊಡಬೇಕು. ಇಲ್ಲದಿದ್ದರೆ ಆತ್ಮದ್ರೋಹ, ದೇಶದ್ರೋಹಗಳೆರಡೂ ಆಗುತ್ತವೆ. ಎಚ್ಚರಿಕೆ. ಹುಷಾರಿ!

ಇದನ್ನು ಪತ್ರ ಎಂದು ಯಾರು ಕರೆದಾರು? ಆದರೂ ನಾನು ಪತ್ರ ಎಂಬಂತೆ ಬರೆದೆ. ಏನು ಮಾಡಲಿ, ಒಂದು ಸಂಕಲ್ಪಮಾಡಿಕೊಂಡಿದ್ದೇನೆ: ಇನ್ನೂ ಎಂಟುತಿಂಗಳು ಪತ್ರಿಕೆಗಳಿಗೆ ಬರೆಯಬಾರದೆಂದು. ಆದರೆ ಮನಸ್ಸಿನಲ್ಲಿ ಕಾದಾಟ ನಡೆಯುತ್ತಿದೆ. ನಿಲ್ಲಿಸಲಾಗುವುದಿಲ್ಲ. ಆದಕಾರಣ ಕಾಗದಕ್ಕೆ ಸುರಿದು ಎದೆಭಾರ ಇಳಿಸಿಕೊಳ್ಳಬೇಕು. ಹೀಗೆ ಮಾಡಿದರೆ ಸಂಕಲ್ಪಕ್ಕೆ ಭಂಗ ಬರುವುದಿಲ್ಲವೋ ಎನ್ನಬಹುದು ನೀವು. ಸಂಕಲ್ಪವನ್ನು ಆ ಶಬ್ದಗಳ ಅರ್ಥದಿಂದ ಮಾತ್ರ ನೋಡಿದಾಗ ಖಂಡಿತ ಭಂಗ ಬಂದೇ ತೀರುತ್ತದೆ. ಬಾಪುಜಿ ಹಾಲು ಕುಡಿಯುವುದಿಲ್ಲ ಎಂದು ಪ್ರತಿಜ್ಞೆಮಾಡಿದರು. ಹಾಲು ಕುಡಿಯುವುದಿಲ್ಲ ಎಂದಾಗ ಅವರ ಮನಸ್ಸಿನ ಮುಂದೆ ಇದ್ದದ್ದು ಆಕಳ ಹಾಲು. ಆದ ಕಾರಣ ಮೇಕೆಯ ಹಾಲು ಉಪಯೋಗಿಸುವುದರಲ್ಲಿ ಏನು ಕೊರತೆ ಎಂದು ಕಸ್ತೂರಿಬಾ ಉಪಾಯ ಹೂಡಿದರಂತೆ. ಇದರಿಂದ ಪ್ರತಿಜ್ಞೆ ಭಂಗವಾಗಲಿಲ್ಲವೋ ? ಆಗುತ್ತದೆ. ಇಲ್ಲ. ಆದರೂ ನಾವು ಆವೇಶವನ್ನೇ ನಿಗ್ರಹಿಸಬೇಕು.

ಬೇಸರ ಬಂದಿರಬಹುದಲ್ಲವೆ ? ನನಗೂ ಬರೆದು ಬೇಸರುಬಂತು ಸಾಕಲ್ಲವೆ ?

ನಮಸ್ತೆ

ಕೋ. ಚೆನ್ನಬಸಪ್ಪ

ತನೆಯ ಆವೃತ್ತಿ ಅಚ್ಚಾಗಿ ಹೊಕ್ಕೆ ಬಂದಿದೆ!

ಬಡತನದ ಬೆಳಕು

'ಆನಂದ ಕಂದ' ರ ಕತೆಗಳ ಸಂಕಲನ

೧. ಆ ಚಿತ್ರ ಈ ಚಿತ್ರ, ೨. ಬಹಿಷ್ಕಾರ, ೩. ಹೊಟ್ಟೆಯ ಹೋರಾಟ, ೪. ರಾಜನ ಧರ್ಮ ಸಂಶೋಧನೆ ಎಂಬ ನಾಲ್ಕು ಸಾಮಾಜಿಕ ಸುಂದ ಚಿತ್ರಗಳು ಇವಲ್ಲಿವೆ.

ಒಂದಕ್ಕಿಂತ ಒಂದು ಹೃದಯಾಕರ್ಷಕವಾದ ಕತೆಗಳು! ಲಲಿತವಾದ ಶೈಲಿ! ಹದವನ್ನರಿತ ಕತೆಗಾರಿಕೆ! ಓದಲು ಕೈಗೆ ತೆಗೆದುಕೊಂಡವರು ಮುಗಿಸ ವರೆಗೆ ಪುಸ್ತಕ ಕೆಳಗಿರಿಸರು.

ಬೆಲೆ: ೧—೪—೦; ಅಂ. ವೆ. ಬೇರೆ

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದುಕೊಳ್ಳಬೇಕು

ಎಲ್ಲ ಪುಸ್ತಕ ವ್ಯಾಪಾರಿಗಳೂ ಇವರ ಪ್ರಯೋಜನವನ್ನು ಪಡೆದುಕೊಳ್ಳಬೇಕು.

ಹೆಣ್ಣು-ಗಂಡಿನ ಸಮಸ್ಯೆ

(ಒಂದು ಪತ್ರವ್ಯವಹಾರ)

ಇದರಡಿಯಲ್ಲಿ ಕೊಟ್ಟಿರುವ ಪತ್ರವನ್ನೂ ಕವಿತೆಯನ್ನೂ ನಮ್ಮ ಜನರು ತೆರೆದ ಕಣ್ಮನಗಳಿಂದ ಓದಬೇಕು. ನವ್ಯಲ್ಲಿದು ಯುಕ್ತಾಹಾರ-ವಿಹಾರದ ಯೋಗಯುಕ್ತ ಜೀವನವು ನಷ್ಟವಾಗಿ ಹೋದುದರಿಂದ, ಜೀವನದಲ್ಲಿಯ ಆಸಕ್ತಿ-ವಿಕೃತಿಗಳಿಗಾಗಿ ಹೆಣ್ಣು ಗಂಡನ್ನೂ ಗಂಡು ಹೆಣ್ಣನ್ನೂ ದೂಷಿಸುತ್ತ ದ್ವೇಷಿಸುತ್ತ ನಡೆಯುವ ಸಂದರ್ಭ ಬಂದಿದೆ. ಎಲ್ಲಿ ತಪ್ಪಿದೆಯೆಂಬುದು ತಿಳಿಯದೆ, ತಪ್ಪಿನ ಪರಿಣಾಮವನ್ನು ಅನುಭವಿಸುವಾಗ, ಯಾರುಯಾರನ್ನೋ ತಪ್ಪುಗಾರರೆಂದು ಭಾವಿಸಿ ಬೈಯತೊಡಗುವೆವು. ಹಾಗೆ ಭಾವಿಸಿದ ತಪ್ಪುಗಾರರು ನಿಮಿತ್ತ-ಮಾತ್ರ ತಪ್ಪುಗಾರರೂ ಆಹುದು. ಆದುದರಿಂದಲೆ ಒಳಗಣ್ಣಿಲ್ಲದ ಲೋಕ ರಹಸ್ಯವನ್ನರಿಯದೆ ಕಂಡವರ ಮೇಲೆ ಹರಿಹಾಯುತ್ತ ಹೊರಡುವುದು. ಹೀಗಾಗದಿರಬೇಕಾದರೆ ಪ್ರತಿಯೊಬ್ಬನೂ ಜೀವನರಹಸ್ಯವನ್ನು ಅರಿತುಕೊಳ್ಳಲು ಹಗಲಿರುಳೂ ಹವಣಿಸಬೇಕು. ಮನುಷ್ಯತ್ವದ ನೆಲೆ-ಬೆಲೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಇಂತಹ ಹವಣಿಕೆ ಪ್ರಯತ್ನಗಳಿಗೆ ಇಲ್ಲಿ ಕೊಟ್ಟ ಪತ್ರ-ಕವನಗಳು ಸಹಾಯಕವಾದಾವು. ಕ್ಷಯರೋಗ ಚಿಕಿತ್ಸಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿರುವ ತರುಣ ಕನ್ನಡಿತಿಯ ಅನುಭವವೊಂದರ ವ್ಯಾವಹಾರಿಕ ಭಾವನೆಯ ಚಿತ್ರವಿದು. ನೋಡಿ ಎಲ್ಲರೂ ತಮ್ಮ ಜೀವನ ಚಿತ್ರದೊಂದಿಗೆ ಹೋಲಿಸಿ ನೋಡಿಕೊಂಡು, ತಮ್ಮಲ್ಲಿದ್ದ ತಪ್ಪುಗಳನ್ನು ತಿದ್ದಿಕೊಳ್ಳಬೇಕು. ಇತರರನ್ನೂ ಸರಿಯಾಗಿ ಅರಿತುಕೊಳ್ಳಬೇಕು.

—ಸಂ ಜ.

ನಮಗೆ ಬಂದ ಪತ್ರ

ಸಿವಿಲ್ ಹೊಸ್ಪಿಟ್ಲ್, ಟಿ. ಬಿ. ವಾರ್ಡ್
+ + ಗಾಂವ
೨೧ ಅಕ್ಟೋಬರ್ ೧೯೪೪

ಸಂಪಾದಕ 'ಜಯಂತಿ' ಧಾರವಾಡ

ಮಹಾಶಯರು—

ಕ್ಷಯರೋಗಿಯಾದ ನಾನು ಬದುಕು-ಸಾವಿನ ಸಮಸ್ಯೆಯಲ್ಲಿದ್ದೇನೆ. ಈ. ಟಿ. ಬಿ. ವಾರ್ಡಿನಲ್ಲಿ ಹೆಂಗಸರೇ ಹೆಚ್ಚು. ಇದರರ್ಥ 'ಸ್ತ್ರೀ ರೋಗವ ಸುನೆ' ಎಂದಲ್ಲ. ಇಂಥ ರೋಗ ಬರಲು ಪುರುಷ ಕಾರಣ. ಸಾಯಲು ಹೊರಟಿರುವ ನನಗೆ (ಬದುಕಿದರೆ ಸುಸ್ಥೈವ) ಯಾರ ಅಂಜಿಕೆಯೂ ಇಲ್ಲ. ಅಂದಮೇಲೆ ಸತ್ಯವೆಂದು ತಿಳಿದದ್ದನ್ನು ಹೇಳಲು ಅಂಜುವೆನೇನೆ? ನಮ್ಮ (ಇಲ್ಲಿದ್ದ ಹೆಂಗಸರ) ಈ ಮಹಾರೋಗಕ್ಕೆ ಪುರುಷನೇ ಕಾರಣ. ಇಷ್ಟಾದರೂ ಪುರುಷ ಸದನ್ನು ತಿಳಿದು "ನಾವು (ಹೆಂಗಸರು ಮಾನವರು!" ಎಂದು ತಿಳಿದರೆ 'ಬೆಳಗುವದು ಚಿರವಾಗಿ ವಿಶ್ವಬಾಳು!"

ವಿಶ್ವಾಸವುಳ್ಳ
..... ದೇವಿ.....ದಾರ
.. ಗಾಂವಿ

ನಂಬರ್ ೧೪೬

ಕಣ್ ತೆರೆದು ನೋಡು ಪುರುಷಾ!

(ಪತ್ರ ಬರೆದ ಮಹಿಳೆಯಿ ಕಳುಹಿದ ಕವಿತೆಯದು)

೧

ಹೆಣ್ಣೆಂದು ಬೈಯದಿರು, ಹಳಿಯದಿರು ಕೀಳೆಂದು,
ನೋಡಿತ್ತ ಒಮ್ಮೆ, ಒಮ್ಮೆ ನೋಡು!
ಅಡುಗೆಮನೆಯಲಿ ಕುಳಿತು ಸುರಿಸುತಿಹ ಕಣ್ಣೀರ
ಪುರುಷಾ, ಎದೆಯಿಂದ ಒಮ್ಮೆ ನೋಡು!

೨

ನಿನ್ನ ಬಲಕಾವಂಜಿ, ನಿನ್ನ ಧರ್ಮವ ನಂಬಿ,
ನಮ್ಮ ಗತಿಯೇನಾಯ್ತು; ತಿಳಿಯೆ ನೀನು,
ನಮಗೆ ಬಂದಿತು ದಾಸ್ಯ, ನಿನಗದುವೆ ಹಾಸ್ಯವೈ
ನಮ್ಮ ಸಾವನು ನೋಡಿ ನಗುವೆ ನೀನು!

೩

ಹೆಣ್ಣು ಮಾನವಿಯೆಂಬ ಮಾತನ್ನು ನೀ ಪುರುಷ!
ಮರೆತಂತೆ ತೋರುವುದು ಮೊದಲಿನಿಂದೆ!
'ಹೆಣ್ಣು, ಭೋಗದ ವಸ್ತು, ಹಾಸು-ಹೊದಿಕೆಯ ತೆರದಿ
ಹೆಣ್ಣು-ಧರ್ಮವೆ ದಾಸ್ಯ' ಎಂದು ಎಂದೆ!

೪

ನಿನ್ನ ಧರ್ಮಕೆ ಬಗ್ಗಿ, ನಿತ್ಯ ನರಕದ ವಾಸ;
ಹೆಣ್ಣುಕುಲ ನಿನ್ನನ್ನು ಶಪಿಸುತಿಹುದು!
ನಮ್ಮ ತುರುಬನು ಹಿಡಿದು, ಅಡುಗೆಮನೆಯಲಿ ನೂಕಿ
"ಬಾರದಿರು ಹೊರಗಿನ್ನು" ಎಂದು ನುಡಿದೆ!

೫

ನಿತ್ಯ ಸಾವಿರ ಹೆಣ್ಣು, "ವಿಧವೆ" ಪಟ್ಟಕೆ ಏರಿ
ಇಹಸುಖದ ಹೋಮವನು ಮಾಡುತಿಹರು;
ಹೋಮಧೂಮಕೆ ನಿನ್ನ ಕಣ್ಣು ಕುರುಡಾಗಿಹುದು,
ಕೇಳಿಸದೆ ನಿನ ಕಿವಿಗೆ ಅವರ ಚೀತ್ಕಾರ!!

೬

ಪುರುಷಕುಲವೇ ಕೇಳು, ಕಡೆಗಣಿಸದಿರು ಹೆಣ್ಣ,
ಹೆಣ್ಣು ದೇವತೆಯೆಂಬ ಪೂಜೆಯನ್ನೊಲ್ಲೆ!
ನಾವು ಮಾನವರೆಂಬ ಭಾವನೆಯನಿರಿಸಿಕೊಳ್ಳು,
ಬೆಳಗುವುದು ಚಿರವಾಗಿ ವಿಶ್ವಬಾಳು!

ಬದುಕಿನ ಬೆಲೆ

(ಸಣ್ಣ ಕತೆ)

ಶ್ರೀ. ವಿ. ಜಿ. ಶಾನಭಾಗ, ಕುಮಟಾ

ಪೈಗಳಿಗೆ ಲೋಕದೃಷ್ಟಿಯಿಂದ ಸದ್ಬುದ್ಧಿ ಸುವಿಚಾರ ಉದಯವಾದುವು. ಹೃದಯದ—ಅತ್ಮದ—ದೃಷ್ಟಿಯಿಂದ ಅವರದು ಸದ್ಬುದ್ಧಿಯೆ? ಸುವಿಚಾರವೆ?

ಪದ್ಮೆಗೆ ನೆಲೆಯಿಲ್ಲದ ಹಾಗೆ ಆಗಿದೆ. ದಿನವೆಲ್ಲ ತನ್ನ ಗುಡಿಸಿಲಿನ ಜಗುಲಿಯ ಒಂದು ಮೂಲೆಯಲ್ಲಿರುವ ತೆಣಸೆಯ ಮೇಲೆ ಕೂತಿರುತ್ತಾಳೆ. ಹಗಲೆಲ್ಲ ಯೋಚನೆಯೆ. ಜಳಗಾಲ-ಬೇಸಗೆಯ ಬೆಳಕು ದಿನಗಳು ಸಹ ಮಳೆಗಾಲದ ಮಸುಕುದಿನಗಳ ಸಮಾನವಾಗಿಯೆ ಕಳೆದು ಹೋಗುತ್ತವೆ. ದಿನ ಬಂದಿತೊ-ದಿನ ನಡೆಯಿತೊ-ಪದ್ಮೆಗೆ ಎರಡೂ ಸಮವಾಗಿಯೇ ತೋರುತ್ತವೆ. ನಾಲ್ಕುದಿನ ಜಾತ್ರೆ ಕಳ್ಕಿರಿದು ತುಂಬಿದ ಸ್ಥಳ ಅದು ನುಗಿದಾಗ ಹೇಗೆ ಬಯಲು ಬಯಲೊ ಪದ್ಮೆಯ ಮನಸ್ಸು ಹಾಗೆ ಬರಿಯ ಬಯಲಾಗಿ ಬಿಟ್ಟಿದೆ.

ಪದ್ಮೆ ಹಳ್ಳಿಯ ಸೂಳೆ. ಸೂಳೆಯ ಮಗಳಾಗಿ ಹುಟ್ಟಿ ಸೂಳೆಯಾದವಳಲ್ಲ; ಸೂಳೆಯ ಕಸಬನ್ನು ತಾನು ಮಾಡಬೇಕು ಎಂದ ಬಯಸಿ ಸೂಳೆಯಾದವಳಲ್ಲ. ಮನುಷ್ಯನಿಗೆ ಪೂರ್ವಜನ್ಮವೆಂದ ಖಂಡಿತವಾಗಿಯೂ ಇರುತ್ತಿದೆಯಾದರೆ—ಆ ಜನ್ಮದ ಕರ್ಮ ಈ ಇನ್ನೊಂದು ಜನ್ಮದಲ್ಲಿ ನಿಶ್ಚಯವಾಗಿ ಫಲಪಡುತ್ತಿದ್ದರೆ—ಆ ಕರ್ಮದ ದೆಸೆಯಿಂದ ಪದ್ಮೆಗೆ ಸೂಳೆಯಾಗಬೇಕಾಯಿತು ಎನ್ನಬಹುದು. ಲಗ್ನದ ತಾಯಿ-ತಂದೆಗೆ ಹುಟ್ಟಿದ ಮಗಳಲ್ಲ. ಆ ತಂದೆ-ತಾಯಿಗಳಿಗೆ ಮಗಳನ್ನು ಸೂಳೆ ಬಿಡಬೇಕೆಂಬ ಹೇಗೆ ಬುದ್ಧಿ ತೋರಿತೋ! ಅದೇ ಹತ್ತೊಂಬತ್ತು ವರ್ಷವಾದ-ಅದೇ ಊರ ಹೆಸರುವಾಸಿ ಪೈ ಮನೆತನದ ಉಡಾಳ ನಾರಾಯಣ ಪೈಗಳು, ತಮ್ಮ ಆಂಚಿನ ಆಸ್ತಿಯನ್ನು ಹುಟ್ಟಿಬದವರಿಗೆ ಖಂಡಿತ ಕ್ರಯಕ್ಕೆ ಕೊಟ್ಟು, ಕೋಟಿ ಐನೂರು ರೂಪಾಯಿಗಳನ್ನು ಪದ್ಮೆಯ ತಂದೆಗೆ ಕೊಟ್ಟು, ಅವಳ ಶೋಭನದ ಹೋಮ ಹಾಕಿಸಿಕೊಂಡರು. ಪದ್ಮೆ ಪೈಗಳ ಸೂಳೆಯಾದಳು.

ಮಗಳ ಸುಖವನ್ನು—ಗಳಕೆಯನ್ನು—ಕಣ್ಣಾರೆ ಕಾಣಬೇಕೆಂದು ತಾಯಿಗೆ ಬಲವಾದ ಆಸೆಯಿತ್ತು. ಆಗದೆ ಹೋಯಿತು. ಆದೆಲ್ಲ ಗಂಡನಿಗೆ ಬಿಟ್ಟು ಒಂದು ದಿನ ಅವಳು ಕಾಲಾಧೀನಳಾದಳು.

ಹೋಮವಾದ ಮೇಲೆ ಆರು ತಿಂಗಳುಗಳು ತೆರಳಿದುವೊ ಇಲ್ಲವೊ, ಪದ್ಮೆಯ ತಂದೆ ಬಹಳ ಉಪದ್ರವ ಆರಂಭ ಮಾಡಿದ: 'ಪೈಗಳು ಕೊಟ್ಟ ಐನೂರು ಅಲ್ಲೆಯವರೆಗಿನ ಭಿಕ್ಷಾ ಮಾತ್ರ ಆಯಿತು, ಎಂದು ಯಾವ ಲೆಕ್ಕ ಹಾಕಿದನೊ. ಇನ್ನು ಪೈಗಳು ಮಗಳಬಳಿ ಬರಬೇಕಾದರೆ ಅವರು ಕೊಡುವುದು ಇಂತಿಷ್ಟು ಎನ್ನುವದು ರೂಪಾಯಿ ಆಣೆ ಪೈಗಳಲ್ಲಿ ನಿರ್ದಿಷ್ಟವಾಗಬೇಕೆಂದು ಕಟಕಟಿ ಆರಂಭಮಾಡಿದ. ಪೈಗಳಿಗೆ ಇನ್ನು ಮನೆಯಲ್ಲಿಯಾಗಲಿ ಆಸ್ತಿಯಲ್ಲಾಗಲಿ ಇದ್ದ ಹಕ್ಕೆಂದರೆ, ಅವರು ಹೋದಾಗ ದಿನಕ್ಕೆರಡು ಊಟಗಳು ಮಾತ್ರ ಎಂಬುದನ್ನು ಆತನು ತಿಳಿದುಕೊಂಡುಬಿಟ್ಟಿದ್ದ. ಹೀಗಾಗಿ ಇನ್ನು ಪೈಗಳಿಂದ ದೊರಕುವುದು ಏನು ಮಣ್ಣು?—ಎಂದು ವಿಚಾರಿಸಿ, ಪೈಗಳನ್ನು ಹೊರದೂಡಿ, ಇನ್ನು ಬೇರೆಯವರಿಗೆ ಅವಕಾಶ ಮಾಡಿ ಕೊಡಲು ಹವಣಿಸುತ್ತಿದ್ದ. ಇತ್ತ ಮಗಳಿಗೂ 'ಪೈಗಳ ಹತ್ತರ ಆ ಆಭರಣ ಬೇಡು....ಈ ದಾಗೀನೆ ಬೇಕೆಂದು ಕಾಡು, ಎಂದು ಮೊದಲಾಗಿ ಹೇಳಿಕೊಡುತ್ತಿದ್ದ. ಆದರೆ ಪದ್ಮೆಗೆ ಹನಿ ತಲೆಯಿಲ್ಲದೆ ಹೋಯಿತು. ಮೇಲೆ ಪೈಗಳ ದೋಸ್ತಿಯಲ್ಲಿ ಬಿದ್ದು ಬಿಟ್ಟಿದ್ದಳು: "ನೋಡ್ರಿ, ಅಪ್ಪ ನಿಮ್ಮ ಹತ್ತಿರ ಒಂದು ಚಂದ್ರಹಾರ ಬೇಡು ಎಂದು ಹೇಳುತ್ತಾನೆ. ಆದರೆ ನಾನು ಇನ್ನೂ ಬೇಡಿದ್ದೇನೆ? ಅದೆಲ್ಲ ಬೇಡ್ಕೊಂಡು ಕಾಡ್ಕೊಂಡು ತಕ್ಕೊಂಡರೆ ಏನ್ ಸಾರ್ಥಕ! ನೀವಾಗಿ ಪ್ರೀತಿಯಿಂದ ತಂದುಕೊಟ್ಟರೆ ಒಂದು ವಿಧ. ನಾನು ಅನ್ನುವುದು ಸರಿಯಲ್ಲ.....? ಅವನಿಗೆ ಕೇಳಬೇಡಿ ಮತ್ತೆ" ಪದ್ಮೆ ಹೇಳಿದ್ದಳು. ಪೈಗಳು "ಹೀಂಗೆ ಹೇಳುತ್ತಿದ್ದ....ಹೀಂಗೆ ಹೇಳುತ್ತಿದ್ದ!" ಎಂದು ಕೊಂಡು ಹಾಗೆಯೆ ಸುಮ್ಮನಾಗಿದ್ದರು. ಬಹಳ ಹೊತ್ತು ಆಲೋಚನೆ ಮಾಡಿ ಆನಂತರ ಎಂದರು: "ಪದ್ಮೆ, ನನಗೇನು ಮಾನೆಮಾರು ಇಲ್ಲದ ಹಾಗೆಯೆ ಇದೆ. ಆತನು ಹೇಳುತ್ತಾನೆಂದು ಗಳಿಗೆ ಗಳಿಗೆ ನನಗೆ ಉಪದ್ರವ ಕೊಡಬೇಡ. ಕೈಗೆ ಬಂದುದನ್ನು ಅದು ಬೇಕಾದರೆ ಹತ್ತು ಸಾವಿರವೇ ಆಗಲಿ....ಬಂದಕೂಡಲೆ ನಿನಗೇನೆ ಕೊಡುತ್ತೇನೆ. ಇನ್ನು ನಿನ್ನ ಹೊಟ್ಟೆ—ಬಟ್ಟೆಯ ಖರ್ಚು! ನಾನು ಉಂಡು ನಿನ್ನನ್ನು ಉಪವಾಸ ಕೆಡಹುವುದಿಲ್ಲ ತಿಳಿಯಿತು?" ಪೈಗಳ ಈ ಮಾತುಗಳನ್ನು ಪದ್ಮೆ ದೃಢವಾಗಿ ನಂಬಿದ್ದಳು.

ತಮ್ಮ ಮಾತಿನಂತೆ ಪೈಗಳು ನಡೆದು ಬಂದಿದ್ದಾರೆ. ಕೇಳು ಜಾತಿಯವರಲ್ಲಿ ಕೋಳಿ ಅಂಕ ಮಾಡಿಸಿ, ಜೂಜಾಡುವವರಿಗೆ ರಕ್ಷಣೆಯನ್ನು ಕೊಟ್ಟು, ಊರಲ್ಲಿ ಎಲ್ಲಿಯಾದರೂ ಹೊಳೆ, ಕೋಡಿ, ಕೆರೆ ಹತ್ತರೆ ಅಲ್ಲಿ ಓಡಿ ಇಲ್ಲಿ ನುಗ್ಗಿ ಪ್ರಯತ್ನಪಟ್ಟು, ಅದರ ಗಳಕೆಯಿಂದ ಪದ್ಮೆಯ ಸಂಸಾರವನ್ನು ನೋಡಿಕೊಳ್ಳುತ್ತ ಬಂದಿದ್ದಾರೆ.

ಹೀಗೆ ಸುಮಾರು ಇಪ್ಪತ್ತು ವರ್ಷಗಳು ತೆರಳಿದುವು. ಪದ್ಮೆಯ ಕಂದೆ ನಡುವೆ ತೀರಿಹೋಗಿ ಬಿಟ್ಟ. ಆಮೇಲೆ ಸುಮಾರು ಎರಡು ವರ್ಷಗಳ ಮೇಲೆ ಪದ್ಮೆಗೆ ಹೆಣ್ಣುಕೂಸೊಂದು ಹುಟ್ಟಿತು. ಹೊಸ ಜೀವ ಬಂದದ್ದರಿಂದ ಪದ್ಮೆಯ ಮನಸ್ಸು, ತೆರವಾದ ಅವಳ ಮನೆ ಇವೆಲ್ಲ ಹೊಸ ಜೀವನ ತುಂಬಿದಂತೆ ತೋರಿ, ಪದ್ಮೆಗೆ ಅಷ್ಟಿಷ್ಟು ಸುಖವಾಗಿರಲಿಲ್ಲ. ಆರು ವರುಷಗಳ ವರೆಗೆ ಆ ಮಗಳು ಆರೋಗ್ಯದಿಂದ ಬೆಳೆದಿದ್ದಳು. ಆಮೇಲೆ ಹತ್ತು ದಿನ ಹೀಗೆಯೆ ಜ್ವರವಾಗಿ, ಎಷ್ಟು ಉಪಚಾರ ಮಾಡಿದರೂ ವ್ಯರ್ಥವಾಗಿ ತೀರಿಕೊಂಡಳು. ತಡುದುಕೊಂದು ದಿನದ ಪದ್ಮೆ ಕೆಲವು ತಿಂಗಳು ಬಹಳ ಕಷ್ಟಪಟ್ಟಳು. ಆಕೆ, ಭರವಸೆ ಧೈರ್ಯಕೊಡುವ ಪೈಗಳು ಮುಂದಿರದಿದ್ದರೆ ಪದ್ಮೆ ಖಂಡಿತವಾಗಿಯೂ ಮನುಷ್ಯರಲ್ಲಿ ಬರುತ್ತಿರಲಿಲ್ಲ.

ತಾಯಿ-ತಂದೆ ತೀರಿದ ಮೇಲೆ, ಮಗಳು ಜಾಗಾಗಿ ಹೋದ ಮೇಲೆ, ಪದ್ಮೆಗೆ ಇನ್ನು ಉಳಿದ ಪ್ರೀತಿಯವರೆಂದರೆ ಪೈಗಳು. ಊರಲ್ಲಿ ಇರುವಾಗ ಪೈಗಳು ಹಗಲು ಒಂದು ಹೊತ್ತು, ರಾತ್ರಿ ಒಂದು ಬಾರಿ ಹೀಗೆ ಎರಡು ಹೊತ್ತು ಊಟದ ಹೊತ್ತಿಗೆ ಮನೆಗೆ ನಡೆಯುತ್ತಾರೆ. ಬಾಕಿ ಎಲ್ಲ ಕಾರ್ಯಗಳು— ಕೂಡು ವುದು, ಏಳುವುದು, ಸ್ನಾನಗೀನ ಮಾಡುವುದು, ಚಹಗಿಹ ಕುಡಿಯುವುದು ಎಲ್ಲ ಪದ್ಮೆಯ ಮನೆಯಲ್ಲಿ ನಡೆಯುತ್ತವೆ. ಪೈಗಳ ಈ ಎಲ್ಲ ಸೇವೆಗಳನ್ನು ಪದ್ಮೆ ಪ್ರೀತಿಯಿಂದ ಮಾಡಿ ಆದರಲ್ಲಿಯೆ ಸುಖಪಡುತ್ತ ಬಂದಿದ್ದಾಳೆ. ಅವಳಿಗೆ ಕೈಲಾದ ಸುಖ ಕೊಡುತ್ತ ಬಂದಿದ್ದಾರೆ.

× × × ×

ಇತ್ತ ಒಂದು ವರ್ಷದಿಂದ ಪೈಗಳು ಬೂರು ಬಿಟ್ಟು ಪೇಟೆಯಲ್ಲಿ ಇದ್ದುಕೊಂಡು ಶಿರ್ಶಿಯ ವ್ಯಾಪಾರ ನಾಡುತ್ತಾರೆ. ವ್ಯಾಪಾರ ಆರಂಭ ಮಾಡುವ ಮೊದಲು ಕೆಲವು ದಿನ ಜನರಿಗೆ ಬಹಳ ವಿಚಾರಗಳು ಬಂದಿದ್ದುವು: ಊರ ಕನ್ನಡ ಶಾಲೆಯಲ್ಲಿ ಅವರ ಸಂಗಡ ಕಲಿತ ಸಂಗಡಿಗರು ಚೆನ್ನಾಗಿ ಸಂಪಾದನೆ ಮಾಡಿಕೊಂಡು ಮನೆ ಮುಮಪೆ ಮಾಡಿಕೊಂಡು ಗೃಹಸ್ಥರಾಗಿ ಬಾಳುವೆ ಮಾಡಿದ್ದು ಅವರಿಗೆ ಚೆನ್ನಾಗಿ ತೋರಿತು. ಆಗ ಅವರು ತಾನು ಹದಿನೆಂಟು ಇಪ್ಪತ್ತು ವರ್ಷಗಳಲ್ಲಿ ಏನು ಮಾಡಿದೆ?—ಎಂದು ಲೆಕ್ಕಾಚಾರ ಹಾಕಿಕೊಂಡು ವಿಚಾರಿಸಿದರು. ರಾಮಕಿಣಿಯ ಸೋವಿಂದ ಕಡೇರಿಯಲ್ಲಿ ಮಾಪ್ಸೈದಾರ ಕಾರಕೂನ ನಾಗಿದ್ದಾನೆ ಕೃಷ್ಣಭಟ್ಟರ ಮಗ ಶಿವಯ್ಯ ಪಡ್ ಶಾನುಭೋಗ-ನಾಗಿದ್ದಾನೆ. ಗಾಣಿಗರ ರುದ್ರ ಫಾರ್ಮಿನಲ್ಲಿ ನೊಕಾದುಮ್ಮನಾಗಿ ಊರಲ್ಲಿ ಹೊಸ ಮನೆಯನ್ನು ಕಟ್ಟಿಕೊಂಡು ಆರಾಮಾಗಿ ಇದ್ದಾನೆ.' ಆಲೋಚನೆ ಮಾಡುತ್ತ ಪೈಗಳಿಗೆ ಅವರೆಲ್ಲರ ಬಾಳೆ ಚೆನ್ನಾಗಿ ತೋರಿತು. ಅವರೆಲ್ಲರ ಮನೆಗಳಲ್ಲಿ ಶ್ರೀ-ಸಂಪತ್ತಿ-ಸುಖ ತಾಂಡವ ತುಂಬಿರುವಂತೆ ಅವರಿಗೆ ತೋರಿತು. ಅವರೆಲ್ಲರ ಬದುಕಿನಲ್ಲಿ ಒಂದರ್ಥ-ನಿಷ್ಠೆಯೆಂದು ವಿಚಾರವಾಯಿತು. ತಾನು ಮಾತ್ರ ಅದನ್ನೆಲ್ಲ ಮಾಡದೆ ಬರಿಯೆ ಬಸವನಾಗಿ ಉಳಿದು ಬಿಟ್ಟೆನಲ್ಲವೆಂಬ ತೋರಿ ಪೈಗಳಿಗೆ ಬಹಳ ಪಶ್ಚಾತ್ತಾಪವಾಯಿತು. ಆ ಪಶ್ಚಾತ್ತಾಪದ ಫಲವಾಗಿ ಅವರ ಬುದ್ಧಿ ತೊಳೆದು ಹೋಗಿ, ಅವರಿಗೆ ಸದ್ಬುದ್ಧಿ ತೋರಿಕೊಂಡಿತು. ಇನ್ನು ತಡವಬ್ದು ಆಯಿತು; ಮುಂದಾದರೂ ತಾನು ನಷ್ಟಿ ಸರಿಪಡಿಸಿ-ಕೊಂಡು, ವ್ಯಾವಾರ ಮಾಡಿ ನಾಲ್ಕು ಕಾಸು ಮಡಿದು, ಅದರಿಂದ ಒಂದು ಮನೆ ಮಾಡಿಕೊಂಡು, ಮಯರ್ಯಾದೆಯಿಂದ ಸಂಸಾರ ಮಾಡ-ಬೇಕೆಂದು ನಿರ್ಧಾರ ಮಾಡಿದರು.

ತಮ್ಮ ಸದ್ಬುದ್ಧಿಯ ಮಾತನ್ನು ಅವರು ಪದ್ಮೆಗೆ ತಿಳಿಸಲಿಲ್ಲ. ತಾನು ನಾಲ್ಕು ಕಾಸು ಮಡಿಯುವ ಮಾತನ್ನು ಮಾತ್ರ ಹೇಳದರ್ಲದೆ ಖಚಿತವಾಗಿ ಗಳಿಸುತ್ತೇನೆ ಎಂಬುದನ್ನು ತಿಳಿಸಲಿಲ್ಲ. ಒಂಭತ್ತಲಿಗೆ ಪದ್ಮೆಯ ಒಂದೆರಡು ತೆರುಕುಳ ಆಭರಣಗಳನ್ನು ತಕ್ಕೊಂಡರು. 'ಹೇಗೋ ಆಯವಾಚ ಮೇಲೆ ಒಂದು ದಿನ ಬಂದು ಆಭರಣಗಳನ್ನು ತಿರುಗಿ ಕೊಟ್ಟರಾಯಿತು' ಎಂದು ವಿಚಾರ ಮಾಡಿದರು. 'ಇನ್ನವಳ ಸುದ್ದಿಗೆ ಹೋಗಬಾರದು. ತಿಂಗಳಿಂಗಳಿಗೆ ಅವಳ ಖರ್ಚಿಗೆ ಕಳಿಸುತ್ತ ಬಂದರೆ ಅವಳಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲ' ಎಂದುಕೊಂಡಿದ್ದರು.

ಆದರೆ ಇಪ್ಪತ್ತೆರಡು ದಿನ ಪೇಟೆಯಲ್ಲಿ ಉಳಿದ ಮೇಲೆ ನಿರ್ಧಾರ ತಿರುಗಿಬಿದ್ದಿತು. ಮಾನಾವಳಿಯಲ್ಲಿ ಊಟ ಮುಗಿಸಿ ಬಾಡಿಗೆಯ ಕೋಣೆಯಲ್ಲಿ ಒಂದು ರಾತ್ರಿ ದುಲಗಿದ್ದರು. ನಿದ್ರೆ ಬಂದಿರಲಿಲ್ಲ. 'ಶಿರ್ಶಿಗೆ ಈ ಬಾರಿ ಎಷ್ಟು ಹೆಂಗಿನಕಾಯಿಗಳನ್ನು ಒಯ್ಯಬೇಕು; ಆದಾಯ ಹೇಗೆ ಬರಬಹುದು, ಬರುವಾಗ ಮೆಣಸು ತುಂಬಿದರೆ ಸರಿಯೋ....' ಎಂದು ಮೊದಲಾಗಿ ಆಲೋಚಿಸುತ್ತ ಬಿದ್ದ ಪೈಗಳಿಗೆ ನಡುವೆ ಪದ್ಮೆಯ ವಿಚಾರ ಹೇಗೆ ಬಂದಿತೋ—ಅಂತೂ ಬಂದುಬಿಟ್ಟಿತು. ಇಪ್ಪತ್ತು ವರ್ಷ ತಾನು ಬರಿಗಿದ್ದ ಶುಶ್ರೂಷೆ, ಚೆನ್ನಾಗಿ ಮಾಸಿದ ಪಣ್ಯಾವ ಪಾಸಿಗೆ, ಬೂಮು ಉದ್ದಕಲೆದಿಂಬು— ಇನ್ನೆರಡು ಗೋಲ ತಲೆ ದಿಂಬುಗಳ ನಮೋತ್ಕ ಅವರ ಕಣ್ಣಿದುರು 'ದಿಮಿ ದಿಮಿ' ಕುಣಿಯು ತೊಡಗಿತು. ಬೇವರದಿಂದ ಬಾಡಿಹೋಗಿರುವ ಪದ್ಮೆಯ ಮೋರೆಯ ದೊಷ್ಟ ಕಣ್ಣುಗಳು ಮಾತ್ಸಲವಾಗಿ ಇನ್ನನ್ನೇ ಇದಿರು ನೋಡುತ್ತಿರು-ವಂತೆ ಅವರಿಗೆ ತೋರಿತು. ಅದಳ ಮುಮ್ಮಾವ ವೈ ಕೈ, ಮಾತು ಪಕ್ಕನೆ ಅವರ ತಲೆಯಲ್ಲಿ ಎಚ್ಚೆತ್ತು ಬಿಟ್ಟಿತು. ಪೈಗಳು ಮಬಕ್ಕನೆ ಎದ್ದು ಕುಳಿತುಬಿಟ್ಟರು. ಗಾಬರಿಯಿಂದ ತಲೆದಿಂಬಿನ ಬಳಿ ಇಟ್ಟ ಬತ್ತಿಗಳಲ್ಲಿ ಒಂದನ್ನು ತೊತ್ತಿಸಿ, ನಾಲ್ಕಾರು ಬಾರಿ ಅದನ್ನು ನರನರನೆ ನೇದು, ಕುಡುಕನ್ನು ಉತ್ತ ಜೆಲ್ಲಿ. ಎದ್ದು ನಿಂತು ಗಳಿಯ ಗೂಟದ ಮೇಲಿದ್ದ ಮನುಕು ಟೊಪ್ಪಿಯನ್ನು ಕೈಗೆ ಬಂದಂತೆ ತಲೆಗೆ ನೆಕ್ಕಿ-ಕೊಂಡು, ದಾರಿಗೆ ಬಂದು ಕಾಲ್ಲು ಬೈಲು ದಾರಿಹಿಡಿದುಬಿಟ್ಟರು.

ಬಾಗಿಲಿಗೆ ಬರುವಾಗ ಸದ್ದು ಮಾಡದೆ ಪೈಗಳು ಕಾಲಿಡುತ್ತಿ-ದ್ದರು. 'ಒಳಗೆ ಇನ್ನಾ ರಾವರೂ ಇದ್ದಾರೊ ನೋಡುವ' ಎಂದವರಿಗೆ ನಿಕಾರ. ತನ್ನ ಸಂಬಯ ಬರಿಯ ಅಧಾರವಿಲ್ಲದ್ದು ಎಂದವರಿಗೆ ತೆಳ್ಳಾಂದು ' ಜಾರವೂ ಕೋವಿ ಅಕರದ ಸ್ವಧಾನ, ಸ್ವಧಾನ-ದಿಂದಲೂ ಅವ ಗಿಲ್ಲ ಎಂದು ಅವರು ಮನಗಂಡ ಮಾತು. ಅವರೇ ಏನೆ ಕಷ ಮ ಟ್ಟ ಪ್ರೀತಿಯ ಶೋಷಕ್ಕಾಗಿ ಒಬ್ಬ ಗೃಹಸ್ಥರನ್ನು ಅವಳ ಬಳಿ ಕಳಿಸಬೇಕಾದರೆ ಪೈಗಳಿಗೆ ನಾಕುಬೇಕಾಗಿತ್ತು. "ಪದ್ಮೆ, ನಾನೇ ಎಂದು ಕೀಳು; ಮಾಗಕಿಳಿ!" ಎಂದು ಮೊದಲಾಗಿ ಅವರು ಬಹಳ ಮಾನಿ ಪೇಳಿಕೊಳ್ಳಬೇಕಾಯಿತು. ಆ ಮೇಲೆ ಎಷ್ಟೋ ದಿನಗಳ ವರೆಗೆ ಪದ್ಮೆ ಕನ್ನವನ್ನು ಕನ್ನೆತ್ತಿ ನೋಡಲೂ ನಾಚುತ್ತಿದ್ದಳೆಂಬು-ದನ್ನು ಅವರು ಮರೆಯಲಿಲ್ಲ. ಅದೂ ಅವರು ಸಾಕಾರವಾಗಿಯೆ ಬಂದರು. "ಪದ್ಮೆ!" ಎನ್ನುತ್ತಲೇ ಜನರು ಎದ್ದು ಕಡ್ಡಿ ಕೊಟೆಮು ದೀಪ ಹಚ್ಚಿ, ಅದನ್ನು ಕೈಯಲ್ಲಿ ಹಿಡಕೊಂಡು ಬಾಲ ತೆರೆಯುತ್ತ "ಇನ್ನು ನೀವೆ ಬರುವುದಿಲ್ಲ ಎಂದುಕೊಂಡು ಮಾತ್ರ ಮಲಗಿದ್ದೆ" ಎಂದು ದೀಪ ಮೇಲೆತ್ತಿ ಪೈಗಳ ಮೋರೆ ನೋಡುತ್ತ ಎಂದಳು.

ನಿದ್ರೆಯಿಂದೆದ್ದ ಅವಳ ಅರ್ಧ ಮಚ್ಚಿದ ಕಣ್ಣುಗಳು, ತುಸು ಸಪ್ಪಗಾದ ಅವಳ ನೋಟ, ಅವನಿ ಇನ್ನನ್ನು ಚೆನ್ನಾಗಿ ಗಮನಿಸಿದ್ದರಿ ಪೈಗಳಿಗೆ ಅವಳ ಬಗ್ಗೆ ಕುಸು ಕುನಿಕರ ಕಾಣುತ್ತಿತ್ತು. ಅವರಿ ಅವರ ಗಮನ ಅತ್ತ ಹೋಗಲೇ ಇಲ್ಲ. ಒಳ ನಡೆಯಲು ಒಂದು ಕಾಲನ್ನು ಮುಂದೆ ಇಟ್ಟವರು, ಒಳಗೆ ನಡೆಯುವುದಿದೆ ಎಂಬುದನ್ನು ಮರೆತಂತೆ ನಿಂತುಬಿಟ್ಟಿದ್ದರು. ಒಂದು ಗಾಬರಿಯಿಂದ ತಲೆಗೆ ಟೊಪ್ಪಿಯನ್ನು ಸಿಕ್ಕಾಪಟ್ಟೆ ಸಿಕ್ಕಿಸಿಕೊಂಡು ದಾರಿ ಹಿಡಿದುಬಿಟ್ಟ ಮೇಲೆ, ಒಂದು ಗಳಿಗೆ ಕುಳಿತು ಹೋಗುವುದು ಏಕವೂ ಶ್ರೀಯಸ್ಕರವೇ—ಎಂದು ಪೇಟೆಯ ಕೋಣೆಯಲ್ಲಿ ಆಲೋಚಿಸುವ ಮಾತು ಅಲ್ಲಿ ತೋರಿ ಕೊಳ್ಳದೆ, ತಾನು ಸುಧಾರಿಸಿಕೊಳ್ಳಬೇಕೆಂದು ಅಕಾಲದಲ್ಲಿ ತೋರುವ

ಸದ್ಬುದ್ಧಿಯಂತೆ ಇಲ್ಲಿ ಬಾಗಿಲಿಗೆ ಬಂದಾಗ ತೋರಿಕೊಂಡಿತು. 'ಬುದು ಸರಿಮಾಡಲಿಲ್ಲ' ಎಂದು ಸುವಿಚಾರ ತೋರಿತು. 'ಇನು ನೌರ್ಬಲ್ಯ, ಇದು ತಾಳುವ ತನಕಸುಧಾರಣೆಯ ಮಾತು ಅಷಾಧ್ಯ' ಎಂದು ಸದ್ಬುದ್ಧಿ ಹೇಳುತ್ತಿತ್ತು. ಪೈಗಳು ಅದನ್ನು ಕೇಳುತ್ತ ತನ್ನ ಅಪವಾಧ, ಅವಿಚಾರ ಒಡಂಬಡುತ್ತ ನಿಂತಿದ್ದರು. ಮುಂದಾನಮೊ ಸಾವಧಾನವಿವಿತೇಕು ಎಂದು ನಿರ್ಧಾರಮಾಡಿ, ಪದ್ಮೆಗೆ ತನ್ನ ಅನುಮಾನ ತಿಳಿಯಿಸಿಕೂಡ-ದೆಂದು ಸರಕ್ಕನೆ ಒಳಕ್ಕೆ ಬಂದರು.

ಹಾಸಿದ ಹಾಸಿಗೆಯನ್ನು ಕಾಣದೆ ಪೈಗಳು ಕೇಳಿದರು: "ಇದೇನು ಹಾಸಿಗೆ ಹಾಸಲಿಲ್ಲ?"

"ಹಾಸಿಗೆ? ಯಾರಿಗಾಗಿ ಹಾಸಿಡಬೇಕಿತ್ತು? ಎಳಂಟುಮಿನ ಹಾಸಿಟ್ಟು ನಿಮ್ಮ ಬರವಿಗೆ ಕಾಯುತ್ತ ಅರ್ಧರಾತ್ರಿ ಕುಳಿತುಳಿದೆ. ಆದರೆ ನೀವು ಬರಲಿಲ್ಲ. ನಿಮ್ಮನ್ನು ನಮಸ್ಕಾರವಿಲ್ಲ. ಎಲ್ಲಿ ಹೋಗಿದಿ? ಏನಾಯಿತು? ಒಂದೂ ತಿಳಿಯದೆ ನನಗೆ ಎಷ್ಟು ತಾಪವಾಯಿತು! ಅಲ್ಲಾ, ಈ ಗುಡಿಸಿಲಲ್ಲಿ ಹುಗಿದು ಬಿದ್ದಂತೆ ಬಿದ್ದಿರುವೆ. ಈ ಎಲ್ಲ ದಿನ ಬೇಸರು, ಬೇಸರು, ಬೇಸರು! ತಡೆಯದೆ ನನಗೆ ಅಳುವ ಪಜ ಬಂದಿತು. ಆದರೂ ಒಂದು ದಿನವಾ ನಿಮಗೆ ನನ್ನ ಹೆಬಲಾಗಲಿಲ್ಲ ಅಲ್ಲಾ?' ಪದ್ಮೆ ಪೈಗಳ ಸೋರೆ ನೋಡುತ್ತ ನುಡಿದು, ಹಾಸಿಗೆ ಕರಲು ಆ ಕೋಣೆಯ ಮೂಲೆಗೆ ನಡೆದಳು.

ಆ ಮೂಲೆಯಲ್ಲಿ ಅವಳು ಹಾಸಿಗೆ ಎಳೆಯಲು ಬಾಗಿದಾಗ, ಪೈಗಳು ಈಚೆ ಕಾಣುವ ಕವಳ ಸೋರೆಯ ಅರ್ಧಭಾಗವನ್ನು—ಅದು ಅಸ್ಪಷ್ಟವಾಗಿ ಕಂಡರೂ ಅದನ್ನೇ—ನೋಡುತ್ತ ಒಕೆಯ ಮಾತನ್ನು ಯೋಚಿಸಿಕೊಳ್ಳುತ್ತಿದ್ದರು. ಆಕ್ಷಣ ಅವರಿಗೆ ಕಿಸಿ ಹೊವಲಾವವರು ಗಳಿಸಿದ್ದು ಮಾಡಿದ್ದರ ನೆನಪು ಅನ್ನು ಬಾಹುತ್ತದ್ದಾಗಿ ತೋರಲಿಲ್ಲ.

ಪದ್ಮೆಯ ವಯಸ್ಸು ಮೂವತ್ತೈದು ದಾಟಿ ಹೋಗಿದೆಯಾದರೂ ಸೌಂದರ್ಯ ಕಡಿಮೆಯಾಗಿಲ್ಲ; ವಯಸ್ಸಿನ ಜೊತೆಗೆ ದೇಹವೂ ತುಸು ಪ್ರೌಢವಾಗಿದೆ. ಅವಳ ಹೊತ್ತಾದ ಕಣ್ಣುಗಳ ಮೇಲೆ—ಸೋರೆಯ ಮೇಲೆ ತುಂಬಿರ ಮೈ-ಕೈಯಲ್ಲಿ ಪೈಗಳ ಕಣ್ಣುಗಳನ್ನು ಕುದುರುವ ಸೌಂದರ್ಯ ಇನ್ನೂ ಯಥೇಚ್ಛವಿದೆ. ಬಾಗಿ ಪ್ರಯಾಸ ಪಟ್ಟು ಹಾಸಿಗೆಯನ್ನು ಎಳೆಯುತ್ತಿರುವ ಅವಳನ್ನು ನೋಡು ನೋಡುತ್ತ ಪೈಗಳ ಹಿಂದಿನ ಉಡಾಳ ಬುದ್ಧಿ ಚುಚ್ಚಿಬಂದು, ಸದಾಚಾರ ಬೋಧಿಸುವ ಸದ್ಬುದ್ಧಿಯನ್ನು ಕ್ಷಣಾರ್ಧದಲ್ಲಿ ಹೊಡೆದಟ್ಟಿಬಿಟ್ಟಿತು. ಹಾಸಿಗೆ ಹಾಸುವ ತನಕ ಅವರಿಗೆ ಸೈರಣೆಯುಡದೆ ಹೋಯಿತು.

ತನ್ನ ಕೈಯನ್ನು ಹಿಡಿದೆಳೆಯುತ್ತಿರುವ ಪೈಗಳ ಭಾವವನ್ನು ಅರಿತು ಪದ್ಮೆಯೆಂದಳು: "ತುಸು ಕಾಳ ಸೊದಲು ಸುಖ-ದುಃಖದ ಸಾಲ್ಕು ಮಾತು ಆಡೋಣ!"

ಹದಿನೈದು ಇಪ್ಪತ್ತು ದಿನ ಯಾರ ಬಳಯೂ ಮಾತಾಡದೆ ಪದ್ಮೆಗೆ ಬಹು ಬೇಸರು ಬಂದಿದೆ. ಅವಳ ಹೃದಯ ಸುಖ-ದುಃಖದ ಎಷ್ಟೆಷ್ಟೋ ಮಾತುಗಳನ್ನು ಪೈಗಳಿಗೆ ತಿಳಿಸಬೇಕೆಂದು ತವಕಪಡುತ್ತದೆ. ಅವರಿಂದ ಸೇಟೆಯ ಎಷ್ಟೋ ಮಾತುಗಳನ್ನು ಕೇಳಬೇಕೆಂದು ಬಗೆದಿದ್ದಾಳೆ. ಎಲ್ಲಕ್ಕೂ ಹೆಚ್ಚು ಇಷ್ಟೆಲ್ಲ ದಿನ ಪೈಗಳನ್ನು ಕಾಣದೆ ತನ್ನ ಸ್ಥಿತಿ ಹೇಗಾಯಿತು ಎಂಬುದನ್ನು ಅವರಿಗೆ ತಿಳಿಸಬೇಕೆಂಬ ಬಲವಾದ ಆಸೆ ಅವಳಿಗೆ ತೋರಿದೆ.

ಆದರೆ ಪೈಗಳು ಅವಳ ಮಾತನ್ನು ಗಮನಿಸುವುದಿಲ್ಲ. ಅವಳ ದೇಹವನ್ನು ಅಲ್ಲಲ್ಲಿ ಎಳೆಯುತ್ತ ಮುಟ್ಟುತ್ತ ಇದ್ದಾರೆ! "ಪದ್ಮೆ, ಕಡೆಗೆ ಈ ತಾಪತ್ರಯ ಇರುವದಿಲ್ಲ. ಸಮಾಧಾನದಿಂದ ಕುಳಿತು ಕಡೆಗೆ ಮಾತಾಡೋಣ. ನಾಲ್ಕು ಮಾತು ಏಕೆ? ಬೇಕಾದರೆ ನೂರು ಮಾತು ಆಡಲಕ್ಕು!" ಎಂದರು ಪೈಗಳು.

"ಕಡೆಗೆ ನೀವು ನೂರು ಮಾತು ಆಡುವುದನ್ನು ನಾನರಿಯೆ! ಹಾಂ ಹೂಂ ಎನ್ನದೆ ನೀವು ಕಣ್ಮುಚ್ಚಿಕೊಂಡು ಮಲಗಿ ಬಿಡುತ್ತೀರಿ!" ಪದ್ಮೆ ತುಸು ನಕ್ಕು ನುಡಿದಳು.

ಪೈಗಳು ಒಡಂಬಡಲಿಲ್ಲ. ಪದ್ಮೆಗೆ ಉಪಾಯವಿಲ್ಲದೆ ಒಡಂಬಡ ಬೇಕಾಯಿತು. ಹೇಳುವ ಮಾತುಗಳು ಹೇಳದೆ ಉಳಿದುದರಿಂದ ಅವಳ ಎದೆಯ ಭಾರ ಹಾಗೆಯೆ ಉಳಿದುಕೊಂಡಿತು.

"ನಿದ್ರೆ ಬಿದ್ದಿತೊ ನೋಡ್ತೆ!" ಎಂದು ಆ ರಾತ್ರಿ ಪದ್ಮೆ ನಾಲ್ಕಾರು ಬಾರಿ ಕೇಳಿದಾಗ, ಪೈಗಳಿಗೆ ನಿಜವಾಗಿ ನಿದ್ರೆ ಬಿದ್ದಿರಲಿಲ್ಲ; ಸ್ವಲ್ಪ ಸ್ವಲ್ಪ ಜೊಂಪ್ಪು ಹಿಡಿದಿತ್ತು. ಆದರೆ ಸುಖದ ಜೊಂಪ್ಪಾಗಿರಲಿಲ್ಲ ಅದರಲ್ಲಿ ಬರಿಯ ಸದ್ವಿಚಾರಗಳೇ ನುಸುಳಿ ಬಂದು, ಜೊಂಪ್ಪನ್ನು ಕಲಕುತ್ತಿದ್ದುವು. ತನಗೆ ನಾಲ್ವತ್ತು ಪ್ರಾಯವಾದ ಮಾತು ಪೈಗಳಿಗೆ ಮತ್ತೆ ಮತ್ತೆ ತೋರಿಕೊಳ್ಳುತ್ತಿತ್ತು, ಸುಧಾರಿಸುವ ಮಾತಿದ್ದರೆ ಆದಷ್ಟು ಬೇಗನೆ ತಾನು ಸುಧಾರಿಸಿಕೊಂಡು ಸರಿದಾರಿಗೆ ಬರಬೇಕು. ಎಂದರೆ ಮದುವೆಯ ಚಾನ್ಸನ್ನು ಆದಷ್ಟು ಶೀಘ್ರವಾಗಿ ಹಿಡಿಯಲಿಕ್ಕೆ ಆಗುವುದು—ಎಂದು ಅವರಿಗೆ ತೋರಿತು. ತಾನು ಮತ್ತೆ ಆಲ್ಲಿ ಬಂದದ್ದು, ಪದ್ಮೆಯನ್ನ ಮುಟ್ಟಿದ್ದು ಅವರಿಗೆ ಮುಳ್ಳಿನಂತೆ ಚುಚ್ಚತೊಡಗಿತು ಆದಷ್ಟು ಮೈ ಮುದುಡಿಕೊಂಡು, ಪದ್ಮೆ ಕೇಳುವ ಮಾತಿಗೆ ಹಾಂ ಹೂಂ ಕೊಡುತ್ತ ನಿದ್ರೆಬಿದ್ದ ಸೋಗು ಮಾಡಿಕೊಂಡು ಮಲಗಿದವರು. ನಿದ್ರೆ ಯಾವಾಗ ಬಂದಿತೆಂಬುದನ್ನೂ ತಿಳಿಯದೆ ನಿದ್ರೆಹೋದರು.

\+ \+ \+

ಮುಂದಿನ ಎಂಟು ತಿಂಗಳಲ್ಲಿ ಪೈಗಳು ನಿರ್ಧಾರ ತಡೆಯವೆ ಮತ್ತೆ ಮೂರುಸಲ ಮಾತ್ರ ಬಂದಿದ್ದರು. ಕುದುರೆಹತ್ತಿ ಬಂದವರಂತೆ ಅರ್ಧರಾತ್ರಿಯಲ್ಲಿ ಬಂದು ನಸುಕಿನಲ್ಲಿ ತೆರಳಿದ್ದರು. ಪದ್ಮೆ ಮಾತಾಡಬೇಕು-ತನ್ನ ಸುಖದುಃಖ ತೋಡಿಕೊಳ್ಳಬೇಕೆಂದು ವಿಧವಿಧದಿಂದ ಪ್ರಯತ್ನ ಪಟ್ಟರೂ ಫಲವಾಗಲಿಲ್ಲ ಪ್ರತಿಸಲ 'ಕಡೆಗೆ ಈ ತಾಪತ್ರಯವಿರುವುದಿಲ್ಲ' ಎನ್ನುತ್ತಲೇ ಅದನ್ನು ಪೈಗಳು ಮುಂದೂಡಿದರು.

ಪೈಗಳ ಈಚೆಯ ವರ್ತನೆಯ ಬಗ್ಗೆ ಪದ್ಮೆಗೆ ನಿಸ್ಮಯವಾಗುತ್ತದೆ. ಮನಸ್ಸಿನಲ್ಲಿ ಉಲ್ಲವ ವಿಚಾರಗಳು ಬಂದು ಭಯವಾಗುತ್ತದೆ. ಪೈಗಳ ಸದ್ಬುದ್ಧಿಯ ಮಾತು ಅವಳಿಗೆ ತಪ್ಪಿಯೂ ಗೊತ್ತಾಗುವುದಿಲ್ಲ. ಪೈಗಳಿಗೆ ಧನಲೋಭ ಮತ್ತೆ ಬಡಿಯಲಿಲ್ಲವಲ್ಲ—ಎಂದು ಒಮ್ಮೊಮ್ಮೆ ಯೋಚಿಸುತ್ತಾಳೆ. 'ಅಲ್ಲ, ಅಷ್ಟೆಲ್ಲ ಧನ ತಮ್ಮಿಬ್ಬರಿಗೆ ಏಕೆ?' ಎಂದವಳಿಗೆ ತೋರುತ್ತದೆ 'ಹೇರಳ ಹಣ ಒಟ್ಟುಗೂಡಿ, ದೊಡ್ಡ ಉಪ್ಪರಿಗೆಯ ಮನೆಯಲ್ಲಿ ವಾಸಿಸಬೇಕು. ಮೋಟಾರು ಕಾರಿನಲ್ಲಿ ತಿರುಗಬೇಕು' ಎಂದು ಸೊದಲಾದ ಆಕಾಂಕ್ಷೆಗಳು ಒಂದು ದಿನವೂ ಅವಳಿಗಿಂಲಿಲ್ಲ. ಆ ಹುಡುಗಿ ಹುಟ್ಟಿದ ಮೇಲೆ, ನಾಲ್ಕಾರು ಅಭರಣಗಳನ್ನು ಅವಳಿಗೆ ತೊಡಿಸಿ ಕಣ್ತುಂಬ ನೋಡಬೇಕು ಎಂದು ಆ ಮಗಳು ಬದುಕಿದ್ದಾಗ ಪದ್ಮೆ ಬಯಸಿದ್ದಳು. ಮಗಳು ಹಾಗಾಗಿ ಹೋದ ಮೇಲೆ ಇನ್ನು ಯಾವ ಭಯಕೆಯೂ ಅವಳನ್ನು ಕಾಡಲಿಲ್ಲ

ಅವಳಿಗಿನ್ನಿರುವ ಬಯಕೆಯೆಂದರೆ, ಇರುವಷ್ಟು ದಿನ ಪೈಗಳ ಸೇವೆ ಮಾಡಿಕೊಂಡು ಇರಬೇಕೆನ್ನುವುದು.

ಆ ಊರು ಈ ಊರು ಓಡಾಡಿ ಹಣ ಗಳಿಸುವುದರಲ್ಲಿ ಪೈಗಳು ಪೆಣಗಾಡುವುದು ಪದ್ಮೆಗೆ ತರವಾಗಿ ತೋರುವುದಿಲ್ಲ. ತನ್ನ ಹೊಟ್ಟೆ-ಬಟ್ಟೆಗೆ ಏನು ಬೇಕು? ವರ್ಷಕ್ಕೆ ಆರು ಮಾನಗಿ ಅಕ್ಕಿ—ಹದಿನೆಂಟು ರೂಪಾಯಿಗಳು! ಅವಳ ಖರ್ಚಿಗೆ ಸಾಲುವಷ್ಟು ತೆಂಗಿನ ಕಾಯಿಗಳು ಅವಳ ಮನೆಯಿದ್ದ ಹಿತ್ತಿಲಿನ ನೆಡ್ಡಿಯ ಪಾಲಿನಿಂದ ಸಿಗುತ್ತವೆ ಇನ್ನು ವೇಲ್ವರ್ಚು ಬಟ್ಟೆ-ಒರೆಗಳಿಗಾಗಿ ಐವತ್ತು ರೂಪಾಯಿ ಹೆಚ್ಚಾದೀತು. ಈಗ ನಾಲ್ಕಾರು ತಿಂಗಳಿಂದ ಪದ್ಮೆ ಇದೇ ಮಾತುಗಳನ್ನು ಸಾವಿರ ಬಾರಿ ಯೋಚಿಸುತ್ತ ಬಂದಿದ್ದಾಳೆ.

ಇನ್ನೊಂದು ರಾತ್ರಿ ಪೈಗಳು ಬಂದಾಗ, ಏನೋ ಹರಕೆ ಒಪ್ಪಿಸುವಂತೆ ಅದನ್ನು ತೀರಿಸಲು ಪದ್ಮೆ ಬಿಡಲಿಲ್ಲ. "ಸ್ವಲ್ಪ ನಿದಾನಿಸಿ, ನಾನೇನು ಎಲ್ಲಿಗೂ ಓಡಿ ಹೋಗುವುದಿಲ್ಲ. ಅಲ್ಲಾ, ಸುಖ-ದುಃಖದ ಮಾತಾಡೋಣ ಅಂದರೆ ಬರೇ ಕಡೆಗೆ ನೋಡೋಣ? ಕಡೆಗೆ ನಾಳೆಗೆ ನಾನು ಗೋಡೆಯ ಬಳಿ ಮಾತಾಡಬೇಕು. ನಿಮಗೆ ಹೆಂಗಸರ ದುಃಖ ತಿಳಿಯುತ್ತದೆ? ಏನೋ ಹೆಂಗಸಿಗೆ ಬರೇ ಆ ನಿಮ್ಮ ತಾಪತ್ರಯದ ದುಃಖವೆನ್ನವಂತೆ ನೀವು ಹರಕೆ ತೀರಿಸುತ್ತೀರಲ್ಲ! ಈಗೊಂದು ವರ್ಷದಿಂದ ನಿವೂ ಕಷ್ಟಪಟ್ಟು ನನಗೂ ದುಃಖ ಕೊಟ್ಟು ಗಳಿಸಿದ್ದು ಎಷ್ಟು?" ಪದ್ಮೆ ಕೇಳಿಬಿಟ್ಟಳು.

ಪೈಗಳು ಆ ಕಾಲದಲ್ಲಿ ಗಳಿಸಿದ್ದು ವಿಶೇಷ ಇರದಿದ್ದರೆ ಪದ್ಮೆಯ ಇಷ್ಟೆಲ್ಲ ಮಾತುಗಳನ್ನು ನಡುವೆ ಬಿಟ್ಟಲ್ಲದೆ ಕೇಳಿಕೊಳ್ಳುತ್ತಿರಲಿಲ್ಲ. ಗಳಿಸಿದ್ದರು. ಆದರಿಂದ ಹೆಮ್ಮೆಯನ್ನೂ ಪಡೆದಿದ್ದರು. ಹೆಮ್ಮೆ ತೋರಿಸುವ ಅವಕಾಶ ಬಂದದ್ದರಿಂದ ಪದ್ಮೆಯ ಹರಕೆಯ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಉತ್ತರಕೊಟ್ಟರು: "ಪದ್ಮೆ, ಪೈಗಳು ಯಾವ ಲೆಕ್ಕಕ್ಕೂ ಬಾರದಿದ್ದವರೆಂದು ಎಲ್ಲ ಜನರು—ನೀನು ಸಹ—ತಿಳಿದಿರಬಹುದು. ಏನು ಮಾಡಲಿಕ್ಕೂ ಹದಿನೈದು ವರ್ಷ ಮೊದಲು ಈ ಸಮೃದ್ಧಿ ಬರಲಿಲ್ಲವಲ್ಲ! ಏನು ಮಾಡುವುದು? ಆಗ ನೋಡಬೇಕಿತ್ತು. ಇಪ್ಪೊತ್ತಿಗೆ ಹತ್ತು ಸಾವಿರ ಕೈಯಲ್ಲಿ ಮಾಡಿಕೊಂಡು, ಬಗಲಲ್ಲಿ ಮಡ್ಡಮ್ಮನನ್ನು (Madam) ಕೂಡಿಸಿಕೊಂಡು, ಓ ಆ ಇವರಂತೆ ಕಾರ್‌ನಲ್ಲಿ ಓಡಾಡುತ್ತಿದ್ದೆ. ಹಸಿರು ಕಾರಿನಲ್ಲಿ ಆ ಕಟ್ಟಿಗೆಯ ಕುಟ್ರಾಕ್ಟರರು ತಿರುಗಾಡುತ್ತಾರಲ್ಲ ಹಾಗೆ! ಕೃಷ್ಣನಾಯ್ಡನೂ ವ್ಯಾಪಾರ ಮಾಡ್ತಾನೆ; ಅವನಿಗೇನು ಸಿಕ್ಕಿತು? ಪೆಣಾಸಿನಲ್ಲಿ ಲಾಗ ಮಾಡಿದ. ನನಗೆ ಇಪ್ಪೊ, ಇಷ್ಟು ಸಿಕ್ಕಿತು ನೋಡು!" ಪೈಗಳು ಒಂದು ಬೆರಳನ್ನು ಪದ್ಮೆಯ ಮೋರೆಯ ಮುಂದೆ ಎತ್ತಿ ಹಿಡಿದರು.

ಅವಳ ಮೋರೆ ಹಿಗ್ಗಿ ಇಷ್ಟಾಯಿತು ಕಣ್ಣುಗಳು ಅರಳಿನಿಂತುವು ಮನಸ್ಸು ಪುಲಕಿತವಾಯಿತು. ಪೈಗಳ ಮೋರೆಯನ್ನು ಪ್ರಸನ್ನವಾಗಿ ನೋಡುತ್ತ ಉಳಿದು ಬಿಟ್ಟಳು ಒಂದು ಸಾವಿರದ ಮೇಲೆ ಅವಳಿಗೆ ಏಳ್ಗೆಯ ಆಶೆಯಿಲ್ಲ. ಲೋಭವಿಲ್ಲ. 'ಅವು ತನಗೆ ಬರುವವೋ, ಎಂದು ಬರುವವು' ಈ ವಿಚಾರ ಅವಳಿಗೆ ತಪ್ಪಿಯೂ ತೋರಲಿಲ್ಲ. 'ಇಡೀ ಊರೇ ಲೆಕ್ಕಕ್ಕೆ ಬಾರದವನೆಂದು ಹಿಡಿದ ತನ್ನ ಪೈಗಳು ಇಷ್ಟು ಸಂಪಾದನೆ ಮಾಡಿ ತೋರಿಸಿದರಲ್ಲ' ಎಂದು ಅಸಾಧ್ಯ ಅಭಿಮಾನ ತೋರಿ, ಅವಳಿಗೆ ಹಿಡಿಸದಷ್ಟು ಸಂಭ್ರಮವಾಯಿತು.

ಪದ್ಮೆ ಪೈಗಳ ಮೋರೆಯನ್ನು ಮತ್ತೆ ನೋಡಿದಳು. ಅವರ ತಲೆ ಹಣ್ಣಾಗತೊಡಗಿದೆ. ಹತ್ತು ಕೂದಲುಗಳಲ್ಲಿ ಆರು ಹಣ್ಣಾಗಿನೆ. ಹಣ್ಣಾಗುತ್ತಿರುವ ಅವರ ತಲೆ, ಒಳಒಳಕ್ಕೆ ಸೇರಹತ್ತಿದ ಕಣ್ಣುಗಳು ಬಿದ್ದ ಗಲ್ಲಗಳನ್ನು ಪದ್ಮೆ ನೋಡಿದಳು. ಸದ್ದಿಲ್ಲದ ಒಂದು ನಿಟ್ಟುಸಿರು ಬಿಟ್ಟು ಅಂದಳು: "ಈಚೆ ನೀವು ಬಹಳ ಸೊರಗಿದ ಹಾಗೆ ಕಾಣುತ್ತದೆ. ಅಷ್ಟು ಕಷ್ಟಪಡುವುದೇಕೆ? ಒಂದು ಹೊರೆ ಗಳಿಸಿ ನಾವೇನು ಮಾಡಬೇಕು?"

"ಪ್ಚಾರೇ ಪ್ಚಾ! ನೀನು ಜೆನ್ನಾಗಿ ಬೋಧನೆ ಮಾಡುತ್ತಿ. ಈ ಸಮೃದ್ಧಿ ನೋದಲೇ ಬರಬೇಕಿತ್ತು; ಅಂದರೆ ಇಪ್ಪೊತ್ತಿಗೆ ಜೆಲೋ ಗಳಿಸಿಕೊಳ್ಳುತ್ತಿದ್ದೆ ಎಂದು ನಾನು ಯೋಚಿಸುತ್ತೇನೆ. ನಿನ್ನ ಮಾತು ಕೇಳಿದರೆ ಬುದ್ಧಾರ ಆದಂತೆ!" ಪೈಗಳ ಎಲ್ಲ ಮಾತುಗಳಲ್ಲಿ ಉಸೇಪ್ಲೆಯಿದ್ದುದು ಅವರಿಗೆ ತಿಳಿಯಲಿ ಇಲ್ಲ.

ಸೊಟ್ಟ ನೋದಲು ಈ ಇಪ್ಪತ್ತು ವರ್ಷಗಳಲ್ಲಿ ಪೈಗಳ ಸ್ವರ ಪದ್ಮೆಗೆ ಅಪರಿಚಿತವಾಗಿ ತೋರಿತು. ಇಷ್ಟೆಲ್ಲ ವರ್ಷಗಳಲ್ಲಿ ಎಲ್ಲಿಯೂ ತೋರದ ಯಾವುದೋ ಒಂದು ಸೂಪರ್ಫಾಟ ಪೈಗಳಲ್ಲಿ ಈಚೆ ಬಂದಿದೆಯೆಂದು ಅವಳಿಗೆ ತಟ್ಟನೆ ಹೊಳೆಯಿತು. ಅವರ ಸ್ವರ ಕೇಳಿ ತಾನು ಅವರ ಹಿತ ನೆನೆಯುತ್ತೇನೆ ಎನ್ನುವುದರಲ್ಲಿ ಅವರಿಗೆ ನಂಬಿಕೆಯಿಲ್ಲದಂತೆ ಪದ್ಮೆಗೆ ತೋರಿತು. ಈ ಅಪನಂಬಿಕೆ ಬರಲು ಏನು ಕಾರಣ? ಆ ರಾತ್ರಿಯಿಂದ ಪದ್ಮೆಯ ಮನಸ್ಸು ಒಮ್ಮು ಅಜ್ಞಾತ ಭಯದಿಂದ ನಡುಗತೊಡಗಿತು.

ಎಡತು ತಿಂಗಳ ಮೇಲೆ ಪೈಗಳು ಅವಳ ಆಭರಣಗಳನ್ನು ತಂದುಕೊಟ್ಟರು. ಪದ್ಮೆಗೆ ಜೀವಂತ ನೆಲದೊಳಗೆ ಹುಗಿದಂತೆ ಕ್ಲೇಶವಾಗುತ್ತದೆ. ಪೈಗಳ ಆನಾನ್ಯೆಯ ನಡತೆಯಿಂದ ಬರುವ ಸಂದೇಹದ ವಿಚಾರಗಳು ಒಂದೆಡೆ; ಇನ್ನೊಂದೆಡೆ ಇಷ್ಟು ದಿನಗಳ ಮೇಲೆ ತನ್ನ ಬಗ್ಗೆ ಪೈಗಳಿಗೆ ತೋರಿದ ಯಾವುದೋ ತರದ ಅಪನಂಬಿಕೆಯ ವ್ಯಥೆಯಿಂದ ಬರುವ ದುಃಖದ ವಿಚಾರಗಳು ಅವಳ ಎದೆಯನ್ನು ಸದಾಕಾಲ ತಿವಿಯುತ್ತಿವೆ. ಏನು ಮಾಡಬೇಕಾಯಿತು ತಿಳಿಯುವುದಿಲ್ಲ. ಹೇಗೆ ಸಹಿಸಬೇಕು ತೋರುವುದಿಲ್ಲ. ಒಂದೊಂದು ರಾತ್ರಿ ನಿದ್ರೆ ಬರುವುದೂ ಇಲ್ಲ. ಒಂದೊಂದು ರಾತ್ರಿ ದುಸ್ವಪ್ನ ತೋರಿ ಬೆದರಿ ಎದ್ದು ಕುಳಿತರೂ ಭಯ ಬಿಡುವುದಿಲ್ಲ. 'ಪೈಗಳು ಇದ್ದರೆ' ಎಂದು ತೋರುತ್ತದೆ. ಈ ಎಲ್ಲ ದುಃಖ-ಸಂಕಟಗಳಿಗೆ ಅವರೇ ಮೂಲವಾಗಿದ್ದರೂ ಪದ್ಮೆ ಅವರನ್ನೆ ನಿರೀಕ್ಷಿಸಿ ಕೊರಗುತ್ತಾಳೆ.

× × × ×

ಇನ್ನೊಂದು ರಾತ್ರಿ ಪದ್ಮೆಯೆಂದಳು: "ಅಲ್ಲಾ, ಒಬ್ಬಳೇ ಉಳಿದುಕೊಂಡು ಇರುವುದು ನನ್ನಿಂದಾಗದು. ಹೀಗೆಯೆ ಇದ್ದರೆ ನನ್ನ ಚಿತ್ತ ಸರಿಯಿರದು. ನೀನೆ ಯೋಚಿಸಿ; ಒಂದುಗಳಿಗೆ ಸಮಬುದ್ಧಿಯಿಂದ ಯೋಚಿಸಿ! ಅಷ್ಟೆಲ್ಲ ಹಣ ನಮಗೇಕೆ?"

"ಪದ್ಮೆ, ನೀನು ಈಗಲೆ ಹೀಗೆ ಕೈಕಾಲು ಬಿಟ್ಟುಕೊಂಡರೆ ಮುಂದೇನು ಮಾಡುವಿ? ಹಿಂದೆಯೆ ಹೇಳಬೇಕೆಂದು ಮಾಡಿದ್ದೆ. ಆದರೆ ಈಗಲೆ ಏಕೆ ಎಂದಿನ್ನೆ. ಹಿಂದೆ ಆದದ್ದು ಆಗಿ ಹೋಯಿತು. ನನಗೆ ಸದ್ಬುದ್ಧಿ ಬರಲಿಲ್ಲ. ಒಮ್ಮು ನಮೂನೆಯಿಂದ ಅಲ್ಲವ ದಾರಿ ನಡೆದು ಬಂದೆ. ಈಗ ಬುದ್ಧಿ ತೋರಿದೆ. ಇನ್ನಾದರೂ ಸಂಘಾರಿಸಿಕೊಂಡು ಮಕ್ಕಳ ಮನಣ ತಪ್ಪಿಸಿಕೊಳ್ಳುವುದು ಜೇಡ. ಮದುವೆ ಮಾಡಿಕೊಂಡು ಗೃಹಸ್ಥನಾಗದಿದ್ದರೆ ನೀನೇ ಯೋಚಿಸು, ಜನರ ಮಾತು ಬಿಡು, ಬುದ್ಧಿ ಬಂದ ನನ್ನ ಮನಸ್ಸಾದರೂ ಹೇಗೆ ಒಪ್ಪು-

ಬೇಕು? ಏನು! ನೀನು ಹಾಗೆ ಏಕೆ ನನ್ನ ಮೋರೆ ನೋಡುತ್ತಿರುವೆ? ನಾನೇನು ಅಲ್ಲದ ಕಾರ್ಯ—ಕನ್ನ ಕೊರೆಯುವ ಕೆಲಸ ಮಾಡುತ್ತೇನೆಂದೆ? ನೀನು ಚಿಂತೆ ಮಾಡುವ ಕಾರಣವಿಲ್ಲ. ನಿನ್ನ ವ್ಯವಸ್ಥೆ ಮಾಡದ ವಿನಾ—ತಿಳಿಯಲಿಲ್ಲಾ— ನಾನು ಹಾಂಗೇನು ಮಾಡುವುದಿಲ್ಲ. ನೀನು ವಿಕಲ್ಪ ತಿಳಿದುಕೊಳ್ಳಬೇಡ." ಅದಮ್ಯ ಹೊಸ ಹೊಸ ಪ್ರಯತ್ನ ಮಾಡುತ್ತ ಪೈಗಳು ಹೇಳಿದರು

"ಹೀಗೆಯೊ!" ಎಂದು ಮಾತ್ರ ಪದ್ಮೆಯೆಂದಳು.

ಪೈಗಳು ದೀಪವನ್ನು ಆರಿಸಿ ಬಿಟ್ಟಾಗ ಪದ್ಮೆಯ ಮನಸ್ಸು ಗಾಬರಿಸಿ ಬಿಟ್ಟಿತು. ಪೈಗಳು ಅವಳನ್ನು ಎಳೆದುಕೊಂಡು ಮಗ್ಗುಲಲ್ಲಿ ಹಾಕಿಕೊಂಡರು. ಅದರೆ ಆ ದೇಹ ಜೀವನಿನ್ದೂ ಹೆಣವಾಗಿದೆಯೆಂಬ ಮಾತು ಅವರ ಗಮನಕ್ಕೆ ಬಾರದೆ ಹೋಯಿತು.

ಪೈಗಳು ಮರುದಿನ ಬೆಳಗ್ಗೆ ಎದ್ದು ನಡೆದರು ಸುಮಾರು ಮೂರು ತಿಂಗಳ ತನಕ ಅವರು ಪದ್ಮೆಯ ಒಳ ಬರಲಿಲ್ಲ. ಬ್ಯಾಡಗಿ, ಬಂಕಾಪುರ ಸುತ್ತಾಡುತ್ತ ಇದ್ದರು. ನಡುನಡುವೆ ಒಮ್ಮೆ ಹಳ್ಳಿಯಲ್ಲಿ ಒಬ್ಬ ಅನಾಥ ಹುಡುಗಿಯಿದ್ದಾಳೆಂಬ ವರ್ತಮಾನ ಬಂದದ್ದರಿಂದ, ಅಲ್ಲಿಯೂ ವ್ಯಾಪಾರಕ್ಕಾಗಿ ಹೋಗುತ್ತ ಬರುತ್ತ ಇದ್ದಾರೆ.

ಇತ್ತ ಪದ್ಮೆಯು ಅವಸ್ಥೆ ತೀರ ಕೆಟ್ಟಿದೆ. ದಿನವೆಲ್ಲ ತೆಣವೆಯ ಮೇಲೆ ಕುಳಿತಿರುತ್ತಾಳೆ. ಈ ಮೂರು ತಿಂಗಳಲ್ಲಿ ತನ್ನ ಸಖ್ತ ಹೋದ ನುಗಳನ್ನು ಎಷ್ಟು ಬಾರಿ ಪಂಬಲಿಸಿಕೊಂಡಳು ಹೇಳುವುದು ಸಾಧ್ಯವಿಲ್ಲ. ತನ್ನ ಆ ಮಗಳು ಈಗಿದ್ದಿದ್ದರೆ ಅವಳ ಮೋರೆ ನೋಡಿ ಜೀವನನ್ನು ಸ್ಥೀತಿಸುತ್ತ ತಾನಿರಬಹುದಿತ್ತಲ್ಲವೆನೆನು ಅನಳು ಎಷ್ಟು ಬಾರಿ ಯೋಚಿಸಲಿಲ್ಲ! ಮಗಳ ಹಂಬಲ ಅವಳಿಗೆಷ್ಟು ದುಃಖ ತಂದು ಮುಟ್ಟಿಸಿತು ಹೇಳುವಂತಿಲ್ಲ

ಪದ್ಮೆ ಪೈಗಳ ಸಮುದ್ದೇಶ-ಸದ್ಬುದ್ಧಿಯ ಮಾತನ್ನು ಮೇಲೆ ಮೇಲೆ ಹಂಬಲಿಸುತ್ತಾಳೆ. "ಏನು ವಿಚಿತ್ರ!" ಎಂದುಕೊಳ್ಳುತ್ತಾಳೆ. 'ಅವರಿಗೆ ಆ ಬುದ್ಧಿ ಬರಕೂಡದಿತ್ತು' ಎಂದವಳಿಗೆ ತೋರುವುದಿಲ್ಲ. 'ಈ ಇಳಿ ವಯಸ್ಸಿನಲ್ಲಿ ತೋರಿ ಏನು ಫಲ?' ಎಂದು ತೋರುತ್ತದೆ. 'ಹದಿನೈದು ವರ್ಷ ಮೊದಲು ತೋರಬಾರದಿತ್ತೆ?' ಎಂದವಳು ಮರುಗುತ್ತಾಳೆ. ಹದಿನೈದು ವರ್ಷ ಮೊದಲು ಆ ಬುದ್ಧಿ ಅವರಿಗೆ ಬಂದಿದ್ದರೆ ತನಗೆ ಈಗ ಈ ದುಃಖ ತಪ್ಪುತ್ತಿತ್ತು ಎಂದವಳ ವಿಚಾರವಲ್ಲ. ಅದು ತನಗೆ ತಪ್ಪುತ್ತಿರಲಿಲ್ಲವಾದರೂ ಅವರಿಂದ ಪೈಗಳ ಒಳಿತು ಆಗುವ ಸಂಭವ ಹೆಚ್ಚಿನದು. 'ಇನ್ನತ್ತು ವರ್ಷ ತನ್ನ ಸಂಗಡ ಬಾಳ್ವೆ ಮಾಡಿದ ಪೈಗಳ ಬಮಕಿನ ಬೆಲೆ ತನಗಿದ್ದಷ್ಟು ತನಗಿರಬಹುದು ತನಗೆ ಉಳಿಯಬಹುದಮ್ಮ, ಇನ್ನು ಬೇರೆ ಹೆಣ್ಣಾಸೆ ಹುಡುಗಿಗೆ ಇರಬಲ್ಲದೇ?' ಪದ್ಮೆ ಹೀಗೆಲ್ಲ ವಿಚಾರಿಸುತ್ತಾಳೆ.

ಸುಮಾರು ದಿನಗಳ ಮೇಲೆ ಒಂದು ಮಧ್ಯಾಹ್ನ ಪದ್ಮೆ ಎಂದಿನಂತೆ ತೆಣವೆಯಮೇಲೆ ಕುಳಿತಿದ್ದಳು ಇಕಸ್ಮಾತ್ತಾ ಪೈಗಳು ಆಗಮಿಸಿಬಿಟ್ಟರು. ಅವರು ಜಗುಲಿ ಏರಿದ ಕೂಡಲೆ ಪದ್ಮೆ ಎದ್ದು ಬಂದಳು. ಈಗ ಮತ್ತೇನು ಆಗುವದೋ ಎಂದವಳಿಗೆ ತುಸು ಭಯವಾಯಿತ.

ಪೈಗಳು ನೇರವಾಗಿ ಒಳಕೋಣೆಯಲ್ಲಿ ನಡೆದರು ಟೊಪ್ಪಿಗಿಯನ್ನು ತೆಗೆಯದೆ ಕೋಟಿನ ಒಳಕಿಸೆಯೊಳಗಿಂದ ಒಂದು ದಪ್ಪ ಕಾಗದದ ಪೊಟ್ಟಣೆಯನ್ನು ತೆಗೆದು. ಅದನ್ನು ಗೋದೆಯ ಕಿಬ್ಬಳದಲ್ಲಿ ಇಡುತ್ತ, ಹಿಂದೆ ಅವರನ್ನು ನೋಡುತ್ತ ನಿಂತ ಪದ್ಮೆಯ ನ್ನು ನೋಡದೆ, ಅವಳ ಬದಿ ತಿರುಗದೆ ನುಡಿದರು: "ಇದರಲ್ಲಿ ಒಟ್ಟು ಐನೂರು ರೂಪಾಯಿಗಳಿವೆ. ಅವು ನಿನ್ನವು. ನೀನು ಅವುಗಳನ್ನು ಸೊಸಾಯಿಟಿಯಲ್ಲಿ ಇಟ್ಟರೆ ಬಡ್ಡಿ ಸಿಗುವಹಾಗಿದೆ. ಅಥವಾ ನೀನು ಬೇಕಾದ ಹಾಗೆ ಉಪಯೋಗಿಸು! ಇನ್ನು....ನಾನು ತಿಳಿಯಲಿಲ್ಲಾ?" ಪೈಗಳು ಸುಮ್ಮನಾದರು.

ಅವರ ಮಾತುಗಳಿಂದೊಂದೂ ಕೇಳುತ್ತ ಅವರನ್ನು ನೋಡುತ್ತ ಪದ್ಮೆಯ ಕಣ್ಣುಗಳು ತುಸು ಮುಡಿಸಿಕೊಂಡು ಸಣ್ಣಗಾದವು. ಮೋರೆಗೆ ರಕ್ತ ಏರಿ ಬಂದು ಚಿದು ಕೆಂಪಾಯಿತು ಮೂಗಿನುಸಿರು ಬಿಸಿಬಿಸಿಯಾಗತೊಡಗಿತು. ಮನಸ್ಸು ಸೆಟೆದು ನಿಂತಿತು. ಒಂದು ಗಳಿಗೆ ಕಾಲ ಹೀಗೆ ನಿಂತಳು. ಮರುಕ್ಷಣ ಎಲ್ಲಿದ್ದ ಅಳವೂ ಗಳಗಳನೆ ಕೊಸರಹತ್ತಿತು. ಪಕ್ಕನೆ ತಾನಳುತ್ತಿರುವುದನ್ನು ತಿಳಿದು, ತಾನು ಹಿಂದೆ ಹೀಗೆಲ್ಲ ಆತ್ತಾಗ ಪೈಗಳಿಗೆ ಆದರ ಬೆಲೆ ಇತ್ತು....ಈಗ ಅದು ಉಳಿಯಲಿಲ್ಲವೆಂಬ ವಿಚಾರ ಬಂದು, ಅದನ್ನು ನುಂಗಿ ನುಡಿದಳು:

"ಕೂತುಕೊಳ್ಳಿ."

ಪೈಗಳು ಮಡಿಚಿಟ್ಟ ಹಾಸಿಗೆಯ ಮೇಲೆ ಕುಳಿತರು. ಪದ್ಮೆ ಮುಂದೆಬಂದು ಕಿಬ್ಬಳದೊಳಗಿನ ರೂಪಾಯಿಗಳ ಪೊಟ್ಟಣೆಯನ್ನು ಪೈಗಳ ಕಾಲ್ಬುಡದಲ್ಲಿ ಒಗೆಯುತ್ತ ಗೋಡೆಗೆ ಆತುನಿಂತು ಅಂದಳು:

"ಆ ರೂಪಾಯಿಗಳನ್ನು ಕಕ್ಕೊಂಡು ನಾನೇನು ಮಾಡುವುದು? ಅಲ್ಲಾ, ನಾನು ಊಟ ಮಾಡಿಕೊಂಡು ಬದುಕಿ ಉಳಿಯಲಿ ಎಂದು ನೀವು ಕೊಡುವುದು. ನೀವೆ ಯೋಚಿಸಿ; ನಾನು ಬದುಕಿ ಉಳಿಯುವು ಎತಕ್ಕಾಗಿ? ನೀವು ಕಷ್ಟಪಟ್ಟು ದುಡಿದ ಹಣವದು. ಆ ರೂಪಾಯಿಗಳಿಗಿಂತ ನನ್ನ ಬದುಕು ಮಹತ್ತ್ವದ್ದು ಎಂದು ಜೋರಿದರೆ ಅವನ್ನು ನಾನು ತಕ್ಕೊಳ್ಳಬಹುದಿತ್ತು; ಆದರೆ ನನಗೆ ಹಾಗ ತೋರುವುದಿಲ್ಲ. ಹಿಂದೆ? ನೀವು ಕೊಟ್ಟಿದ್ದೀರಿ. ನಾನು ನಿಮ್ಮ ಸೇವೆ ಮಾಡಿಕೊಂಡು ತಕ್ಕೊಂಡಿದ್ದೇನೆ. ಇನ್ನು ನಿಮ್ಮ ಸೇವೆ ನನಗಲ್ಲ. ನೀವೆ ಯೋಚಿಸಿ, ಏನೆಂದು ಆ ಹಣವನ್ನು ಕೂಳ್ಳಲಿ? ರೂಪಾಯಿಗಳನ್ನು ಇಲ್ಲಿ ಬಿಟ್ಟು ನಡೆದರೆ ನಾನು ಬಾವಿ ಹಾರಿಕೂಳ್ಳುವುದು ಖಂಡಿತ. ಮೊದಲೇ ಹೇಳುತ್ತೇನೆ. ಇನ್ನು ನಾನು ಉಣ್ಣಬೇಕೋ ಬೇಡವೋ; ಬದುಕಬೇಕೊ ಬೇಡವೊ? ಇವೆಲ್ಲ ನನ್ನ ಮಾತುಗಳು. ನಾನು ನೋ...." ಪದ್ಮೆ ಮಾತನ್ನು ತಡೆದುಬಿಟ್ಟಳು. ಅಷ್ಟು ಅಭಿಮಾನದ ಬಿರುಸುನುಡಿ ಅವರ ಮೋರೆಯ ಮುಂದೆ ತಾನಾಡಬಾರದೆಂದು ಪದ್ಮೆ ತಡೆದ.ಬಿಟ್ಟಳು.

ಪೈಗಳು ನೆಲ ನೋಡುತ್ತ ಕಲ್ಲಿನಂತೆ ಕುಳಿತಿದ್ದರು. ಪದ್ಮೆ ಪೈಗಳ ಮೋರೆ ನೋಡುತ್ತ ಮತ್ತ ಏನು ತೋರಿತೋ ನುಡಿದಳು:

"ಇದು ನೋಡಿ, ಈ ವಯಸ್ಸಿನಲ್ಲಿ ನನ್ನನ್ನು ಮದುವೆಯಾಗು ಒಳ್ಳೆಯ ಮಾನ-ಮರ್ಯಾದೆಯ ಗೃಹಸ್ಥರು ಬಂದಿದ್ದಾರೆ ಎಂದು ವಿಚಾರಮಾಡಿ. ನೋಡಿ, ಅವರ ಹೆಸರು, ಮಾನ ಮರ್ಯಾದೆ ಎಲ್ಲ ನನಗೆ ಸಿಗುತ್ತವೆ. ಆಗ ಅವರಿಗೆ ನಾನು ಮನವಾರೆ ಏನು ಅನ್ನಿಸಿಗೆತ್ತಿದೆ ನಿಮಗ?" ಪೈಗಳು ತಾನವಳ ಮೋರೆ ನೋಡುತ್ತಿದ್ದೇನೆ ಎ ಮುದರ ಅವನಿಲ್ಲದೆ ನೋದಿದರು: "ನಾನು ಅನ್ನುತ್ತಿದೆ—ಇಷ್ಟ ಪೈಸು ಸೇಗೆ ಬೇಕಾದರೆ ಇರಲಿ, ನಾನವರ ಸೂಳೆ. ಇಪ್ಪತ್ತು ವರ ಅವರ ಸೂಳೆಯಾಗಿ ಬಾಳುವೆ ಮಾಡಿದ್ದೇನೆ ಉಳಿದ ಆಯುಷ್ಯ ಅವರ ಸೂಳೆಯಾಗಿಯೇ ಇರುತ್ತೇನೆ. ನಿಮ್ಮ ಹೆಂಡತಿಯಾಗುವದಿಲ್ಲ! ನನ್ನ ಈ ಮಾತನ್ನು ಯಾವಾಗಲೂ ಮರೆಯಬೇಡಿ." ಪದ್ಮೆ ಸುಮ್ಮನಾಗಿ ಕಣ್ಣುಗಳನ್ನು ಒರಸಿಕೊಂಡಳು.

ಜಯಂ

ಶ್ರೀ ಕುಲಕರ್ಣಿಯವರ ನೃತ್ಯನಾಟಕಗಳು

ಒರ್ವ ಕಲೋಪಾಸಕ

ಆಧುನಿಕ ರಂಗಭೂಮಿಯಲ್ಲಿ ನೃತ್ಯನಾಟಕದ ಪ್ರಯೋಗಗಳು ವಿರಳ ಮೊನಸ ಮಾಸ್ಟರಿಯವು. ಅವರಲ್ಲಿಯೂ ಕರ್ನಾಟಕದಲ್ಲಿ ನರ್ತನ ಪ್ರಯೋಗಗಳಲ್ಲಿ ಹೆಚ್ಚು ನೈಪಿಧ್ಯವಿಲ್ಲ. ಸಾಕಷ್ಟು ಜೊಸ ಪ್ರಯೋಗಗಳನ್ನು ಮಾಡಿ ನರ್ತನ ಪ್ರದರ್ಶನಗಳನ್ನು ಏರ್ಪಡುವ ನರ್ತಕರು ಹೆಚ್ಚಾಗಿ ಇಲ್ಲ. ಅಮಿಲ ಕರ್ನಾಟಕದಲ್ಲಿ ಸ್ವತಂತ್ರ ನೃತ್ಯ ಪ್ರಯೋಗಗಳನ್ನು ಮಾಡಿ, ಜನರ ಮನ್ನಣೆಗೆ ಪಾತ್ರರಾದ ನರ್ತಕರು ಅತಿ ವಿರಳ. ಅವರು ಪ್ರದರ್ಶಿಸುವ ನೃತ್ಯಗಳು ಸಾಕಷ್ಟು ಪ್ರೌಢವಿದ್ಯ-ಗ ನ್ನು ಪಾಲಿಸಿದ್ದಾ ಸರಿಪೂರ್ಣತೆಗಳನ್ನು ಒಳಗೊಂಡಿರುವುದಿಲ್ಲ. ಇದಕ್ಕೆ ಕಾರಣವೆಂದರೆ ನರ್ತನ ವನ್ನೇ ತಮ್ಮ ಜೀವನದ ಗುರಿ-ಯಾಗಿಟ್ಟುಕೊಂಡು ನೃತ್ಯಕಲೆಯ ಆರಾಧನೆಯನ್ನು ಮಾಡುವ ಕಲಾವಿದರ ಕೊರತೆಯಿದೆ. ಸರ್ವ ಸಾಧಾರಣವಾಗಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಪ್ರದರ್ಶಿ-ಸುವ ಎಲ್ಲ ನೃತ್ಯಗಳನ್ನು ನೋಡಿ ನಮಗೂ ಅದರಲ್ಲಿ ಒಂದೇ ಬಗೆಯ ಏಕಮಾನ್ಯತೆ ಕಂಡು ಬರುವುದು. ಪರಂಪರೆಯಾಗಿ ಬಂದ ನೃತ್ಯಗಳ ಕೆಲವು ತಪ್ಪುಗಳನ್ನು ತಮಗೆ ತಿಳಿದ ಮೇರೆಗೆ ಪ್ರದರ್ಶಿಸು-ವುದೂ ಉಂಟು; ಇಲ್ಲಿಯೆ ಅಲ್ಪ ಸ್ವಲ್ಪ ಕಲಿತು ಕಂಡು ಕೇಳಿದ [illegible] ತಮ್ಮ ಶಿಷ್ಯರ ಯೋಗ್ಯ-ತಾನುಸಾರವಾಗಿ ಸ್ವತಂತ್ರವಾಗಿ [illegible]ಸಿ ಪ್ರದರ್ಶಿಸುವುದೂ ಉಂಟು. ಈ ರೀತಿಯ ಎಲ್ಲ ನೃತ್ಯ ಪ್ರದರ್ಶನಗಳಲ್ಲಿಯೂ ಪೂರ್ಣ ನೃತ್ಯ, ವಸಂತನೃತ್ಯ, ಪಾವಾ [illegible]ಗ, ಶಿವಪಾರ್ವತಿ, ಕಾಮದಹನ, ಭಸ್ಮಾಸುರ ಮೊದಲಾದ ನರ್ತನಗಳೇ ಬರುವುದನ್ನು ನಾವು ಮೇಲಿಂದ ಮೇಲೆ ನೋಡುತ್ತೇವೆ ಈ ವಿಷಯಗಳನ್ನು ಆಯ್ದುಕೊಂಡು ಭಾವಪ್ರಚೋದಕವಾಗುವ ರೀತಿಯಲ್ಲಿ ನೃತ್ಯಮೂಲಕ ಕಥಾನಿರೂಪಣೆ ಮಾಡುವುದೇ ನೃತ್ಯ-ನಾಟಕ ಈ ಸಾಹಸವನ್ನು ಮಾಡಿದ ಪ್ರಥಮ ಶ್ರೀಯುಸ್ಸು ಅಜ್ಜಿ ಸ್ನೇಹಿಗರಾದ ಶ್ರೀಮಾನ್ ಕುಲಕರ್ಣಿ ಶ್ರೀನಿವಾಸರಿಗೆ ಸಲ್ಲುತ್ತದೆ.

ನಾಟಕ ಹಾಗೂ ನೃತ್ಯ ಇವೆರಡರ ಸಮ್ಮಿಶ್ರಣವೇ ನೃತ್ಯ-ನಾಟಕ. ಅದು ನೃತ್ಯರೂಪದ ನಾಟಕವಿದ್ದರೂ ಸರಿ; ಅಥವಾ ನಾಟಕ ರೂಪವಾದ ನೃತ್ಯವಿದ್ದರೂ ಸರಿ. ನಾಟಕಕ್ಕೆ ಅಗತ್ಯವಾದ ಪಾತ್ರರಚನೆ, ಕಥಾರಚನೆ, ರಸನಿರ್ವಹಣೆ, ಭಾವಪ್ರಕಾಶನದಂತೆ ಮೊದಲಾದುವುಗಳೆಲ್ಲಿ ನೃತ್ಯನಾಟಕದಲ್ಲಿಯೂ ಇರಲೇ ಬೇಕು. ಅಲ್ಲದೆ ನೃತ್ಯನಾಟಕದಲ್ಲಿ ಭಾವವು ಹೆಚ್ಚು ರಸವತ್ತಾಗಿದ್ದರೆ ಪಾತ್ರ ಪರಿಣಾಮಕಾರಿಯಾಗು-ವುದು. ಅನಾವಶ್ಯಕ-ಪಾಪ ಸಂದರ್ಭ-ಸನ್ನಿವೇಶಗಳಿಗೆ ನೃತ್ಯ ನಾಟಕ ದಲ್ಲಿ ಎಡೆಯಿರುವುದಿಲ್ಲ. ಕಥೆಯು ಓಟವು ಅತ್ಯಂತ ಸುಗಮವಾಗಿ ಸಾಗುತ್ತಿರಬೇಕು. ಅಲ್ಲಲ್ಲಿ ತಡೆಗಳುಂಟಾಗಕೂಡದು. ನಡುನಡುವೆ ಬೇರೆ ಸಂದರ್ಭಗಳನ್ನೂ, ಬೇರೆ ಪಾತ್ರಗಳನ್ನೂ ಸೃಷ್ಟಿಸಿಕೊಳ್ಳ-ಬೇಕಾದರೂ, ಅವುಗಳಿಂದ ಕಥಾ ನಿರೂಪಣೆಗೆ ಪರಿಪುಷ್ಟತೆಯುಂಟಾ-ಗುತ್ತಿದ್ದರೆ ಏಕಪಾತ್ರ ನೃತ್ಯನಾಟಕ ದಲ್ಲಿ ಅವುಗಳನ್ನು ಪೋಣಿಸ-ಬಹುದು.

ಅಭಿನಯವೇ ನೃತ್ಯನಾಟಕದ ಜೀವಾಳ. ಅದೇ ಅದರ ಜೀವಾಳ; ಅದೇ ಅದರ ಸರ್ವಸ್ವ. ನಾಟಕ ದಲ್ಲಿರುವ ಅಭಿನಯಕ್ಕಿಂತಲೂ ನೃತ್ಯನಾಟಕದಲ್ಲಿ ತೋರಿಸುವ ಅಭಿನಯವು ಹೆಚ್ಚು ಪರಿಪಕ್ವ ವಾಗಿರಬೇಕು. ನಾಟಕದಲ್ಲಿರುವ ಸಮಾಜದ ಸಾಕಲ್ಯವು ನೃತ್ಯ ನಾಟಕದಲ್ಲಿರುವುದಿಲ್ಲ. ನೃತ್ಯ-ವನ್ನು ಅಭಿನಯವನ್ನು ಭಾಷೆಯ ಮೂಲವಾಗಿ ಉಪಯೋಗಿಸಿ ಕಥಾ-ನಿರೂಪಣೆಯನ್ನು ಮಾಡಬೇಕಾ-ಗುತ್ತದೆ. ಈ ಅಭಿನಯವು ಕಥಕ. ಳಿಯ ಆಟಗಳಲ್ಲಿ ಕಂಡುಬರುವ ರೀತಿಯಲ್ಲಿ ಪರಂಪರೆಗೆ ಒಳಪಟ್ಟ ಬಾರದು. ಅಭಿನಯ ಸ್ವಾಭಾವಿಕ ಅಭಿನಯಕ್ಕೆ ಮಾರ್ಪಡಿಸಿಕೊಂಡು ನೃತ್ಯನಾಟಕದಲ್ಲಿ ಸೇರಿಸಿಕೊಳ್ಳ-ಬಹುದು.

ನೃತ್ಯನಾಟಕದಲ್ಲಿರುವ ಅಭಿನಯವು ತಾಳ, ಲಯಗಳಿಂದ ನಿರ್ಬಂಧಿತವಾಗಿರಬೇಕು. ಸೌಂದರ್ಯ-ಪಾರ್ಶ್ವಗಳಿಂದ ಮೆರುಗು ಗೊಂಡಿರಬೇಕು. ಆಗ ಮಾತ್ರ ಅದು ಕಲಾತ್ಮಕ ಕೃತಿಯೆಂದು ಕರೆಯಲ್ಪಡುವುದು. ಪರಂಪರಾಗತವಾಗಿ ಬಂದ ಮುದ್ರೆ ಪಾಣಿ ಅಂಗ-ವಿನ್ಯಾಸಗಳ ಸಹಾಯದಿಂದ ಅನೇಕ ವಿಷಯಗಳನ್ನು ತಿಳಿಸಲು ಸಾಧ್ಯವಿರುವಷ್ಟಾದರೂ. ಜನಸಾಮಾನ್ಯರಿಗೆ ಅರ್ಥವಾಗಲಾರದು

ಅರ್ಥವಾಗದೆ ಭಾವಪ್ರಚೋದನೆಯಾಗಲು ಸಾಧ್ಯವಿಲ್ಲ. ನಮ್ಮ ಜನಜೀವನದ ಚಿತ್ರಗಳನ್ನು ಚಿತ್ರಿಸುವಾಗ ಸ್ವಾಭಾವಿಕ ಅಭಿನಯವು ಕಥೆಯನ್ನು ಕಳಿಗಟ್ಟಿಸುವ ರೀತಿಯಲ್ಲಿ, ಶಾಸ್ತ್ರೀಯ ಅಭಿನಯವು ಕಳೆಗಟ್ಟಿಸಲಾರದು. ಕೆಲವೆಡೆಗಳಲ್ಲಿ ಅದು ಕೃತ್ರಿಮವೆಂದೆನಿಸಿ ರಸಾಭಾಸವನ್ನು ಕೂಡಾ ಉಂಟು ಮಾಡುವುದು; ಆದರೆ ಸಮಯ ಸಂದರ್ಭಗಳನ್ನು ಅರಿತು ನುಡ್ರೆ ಹಾಗೂ ಅಂಗವಿನ್ಯಾಸಗಳನ್ನು ಉಪಯೋಗಿಸುವುದರಿಂದ ಕಥಾನಿರೂಪಣೆಗೆ ತುಂಬಾ ಸಹಾಯವುಂಟಾಗುತ್ತದೆ.

ಈ ಮಾತುಗಳ ಸತ್ಯತೆಯ ಬಗ್ಗೆ ಕುಲಕರ್ಣಿಯವರ ಹೊಸ ನೃತ್ಯನಾಟಕವಾದ 'ಅರುಣಗಿರಿ'ಯನ್ನು ಉದಾಹರಿಸಬಹುದು. ಇದೊಂದು ಕುಲಕರ್ಣಿಯವರ ಕಲಾಕೃತಿ. ಜನರಿಂದ ತುಂಬಾ ಮೆಚ್ಚುಗೆ ಪಡೆದಿದೆ. ಹಲವು ಕಲಾನಿಧಿರು, ಹಲವು ವಿಮರ್ಶಕರು, ಹಲವು ರಸಿಕರು ಇದನ್ನು ಅನೇಕ ರೀತಿಯಾಗಿ ಹೊಗಳಿದ್ದಾರೆ. ಈ ನೃತ್ಯನಾಟಕದ ಕಥಾವಸ್ತುವನ್ನು 'ತಿರುಪುಗಳ್' ಎಂಬ ಗೀತಗಳನ್ನು ಬರೆದು, ತಮಿಳು ವೇಕದಲ್ಲಿ ಭಕ್ತಾಗ್ರೇಸರನೆಂದು ಹೆಸರು ಪಡೆದ ಅರುಣಗಿರಿಯ ಜೀವನ. ಇದನ್ನು ವಿಶಿಷ್ಟ ದೃಶ್ಯಗಳಲ್ಲಿ ಚಿತ್ರಿಸಲಾಗಿದೆ. ಅವನ ಜೀವನ ಚರಿತ್ರೆಯು ತುಂಬಾ ವೈವಿಧ್ಯಗಳನ್ನೊಳಗೊಂಡಿದೆ. ಅವನ ವ್ಯಾವಹಾರಿಕ ಜೀವನವು ತುಂಬಾ ಸಾಮಾನ್ಯವಾದುದು. ಮನುಷ್ಯನಿಗೆ ಸಾಧಾರಣವಾಗಿರುವ ಎಲ್ಲ ಚಿಕ್ಕ ಚಿಕ್ಕ ಲಾಲಸೆಗಳನ್ನೂ, ಮನೋದೌರ್ಬಲ್ಯಗಳನ್ನೂ ಅವನು ಹೊಂದಿದವನಾಗಿದ್ದನು. ವೇಶ್ಯೆಯ ಮನೆಯೇ ಅವನಿಗೆ ಸ್ವರ್ಗವಾಗಿದ್ದಿತು. ದ್ರವ್ಯವೇ ಅವನ ಸುಖದ ಸಾಧನವಾಗಿದ್ದಿತು. ಹೆಣ್ಣು-ಹೊನ್ನಿನ ವಿನಾ ಪ್ರಪಂಚದಲ್ಲಿ ಅವನಿಗೆ ಬೇರೊಂದು ಬೇಕೆನಿಸಲಿಲ್ಲ. ಮುರುಘ ನಿಗ್ರಹದ ಮೇಲೆ ಹಾಕಿರುವ ಕಂಠೀ ಹಾರವನ್ನು ಕಿತ್ತುಕೊಂಡು, ಅದನ್ನು ತನ್ನ ವೇಶ್ಯೆಗೆ ಸಮರ್ಪಿಸುವನು. ಮೃತ್ಯುಶಯ್ಯೆಯಲ್ಲಿರುವ ತನ್ನ ತಾಯಿಯನ್ನು ಗಮನಿಸದೆ ವಿಷಯ ಲೋಲುಪತೆಯಲ್ಲಿ ಮುಳುಗಿರುವನು. ಅನಾಥಳಾದ ಸಹೋದರಿಯ ಮೈಮೇಲಿನ ವಸ್ತ್ರ-ಒಡವೆಗಳನ್ನೂ ಒಂದೇ ಆಗಿ ಉಳಿದಿರುವ ಪೀತಾಂಬರವನ್ನೂ ತನ್ನ ವೇಶ್ಯೆಗೆ ದಾನ ಮಾಡುವನು. ಈ ಕಾಮಲಾಲಸೆಯ ಫಲವಾಗಿ ನೂರಾರು ರೋಗಗಳಿಗೆ ಅವನು ತುತ್ತಾಗುವನು. ಕುರೂಪಿಯಾಗಿ ಎಲ್ಲರಿಂದ ತಿರಸ್ಕೃತನಾಗುವನು. ಆದರೂ ಅವನನ್ನು ಧನಪಿಶಾಚಿಯು ಬೆನ್ನು ಬಿಡುವುದಿಲ್ಲ. ಕೊನೆಗೂ ಸಹೋದರಿಯನ್ನು ಕೊಂದುಬಿಟ್ಟು ಮನೆಯಲ್ಲಿಯ ಎಲ್ಲ ಹಣವನ್ನು ತನ್ನ ಕೈವಶ ಮಾಡಿಕೊಳ್ಳಬೇಕೆಂದು ಯತ್ನಿಸುವನು; ಆದರೆ ತಂಗಿಯ ಧೈರ್ಯ-ಸ್ಥೈರ್ಯಗಳು ಅರುಣಗಿರಿಯನ್ನು ದಿಗ್ಭ್ರಮೆಗೊಳಿಸುವುವು. ಅವನಲ್ಲಿಯ ಕಾಮಜ್ವಾಲೆಯು ಇನ್ನೂ ಜಾಜ್ವಲ್ಯಮಾನವಾಗಿರುವುದರಿಂದ, ತಾನು ಅದರಲ್ಲಿಯೇ ಭಸ್ಮವಾಗುವೆನೆಂದು ಹೇಳಲು, ಅವನ ಸಹೋದರಿಯು ತಾನು ದೇವರಿಗೆ ಸಮಾನನೆಂದು ತಿಳಿದ ಅಣ್ಣನು ಈ ರೀತಿ ನಾಶ ಹೊಂದಕೂಡದೆಂದು ಅವನ ಕಾಮಲಾಲಸೆಯನ್ನು ಪೂರ್ತಿಗೊಳಿಸಲು, ವೇಶ್ಯೆಯ ಮನೆಗೆ ಕಳುಹಿಸಲು ತನ್ನಲ್ಲಿ ದ್ರವ್ಯವಿಲ್ಲದ್ದರಿಂದ ತನ್ನ ದೇಹವನ್ನೇ ಅವನಿಗೆ ಅರ್ಪಿಸಹೋಗುವಳು. ಸಹೋದರಿಯ ಈ ತ್ಯಾಗವು ಅರುಣಗಿರಿಯನ್ನು ಪುನೀತನನ್ನಾಗಿ ಮಾಡಿ ಜ್ಞಾನೋದಯವನ್ನುಂಟು ಮಾಡುವುದು ಇಷ್ಟು ಅವನು ಭೋಗಿಯಲ್ಲ, ಯೋಗಿ! ಮುರುಘನು ಅವನಿಗೆ ಪ್ರತ್ಯಕ್ಷವಾಗಿ 'ತಿರುಪುಗಳ್' ಪ್ರಥಮಪಾಠವನ್ನು ಹೇಳಿಕೊಡುವನು. ಅಂದಿನಿಂದ ಅವನು ೧೩೦೦ ಪದ್ಯಗಳನ್ನು ರಚಿಸಿದನು. ದೈವೀಶಕ್ತಿಯನ್ನು ಪಡೆದ ಅರುಣಗಿರಿಯು ತನ್ನ ಆ ಶಕ್ತಿಯಿಂದ ಅನೇಕ ಕಲ್ಯಾಣದ ಕೆಲಸಗಳನ್ನು ಮಾಡುವನು.

ಇದೇ 'ಅರುಣಗಿರಿ' ನೃತ್ಯನಾಟಕದ ಕಥಾವಸ್ತುವು. ಕುಲಕರ್ಣಿಯವರು ತುಂಬಾ ರಸವತ್ತಾದ ಕಥೆಯನ್ನು ತಮ್ಮ ನೃತ್ಯನಾಟಕಕ್ಕೆ ಆರಿಸಿದ್ದಾರೆ. ಇಲ್ಲಿ ನವರಸಗಳನ್ನೂ ನಿರೂಪಿಸಲು ಅವಕಾಶವಿದೆ. ಪ್ರಥಮ ದೃಶ್ಯದಲ್ಲಿ ಅರುಣಗಿರಿಯ ಧನದ ಲಾಲಸೆ, ಅವನ ತಾಯಿ ಹಾಗೂ ಸಹೋದರಿಯ ದೈವೀಭಕ್ತಿ. ಎರಡನೆಯ ದೃಶ್ಯದಲ್ಲಿ ವೇಶ್ಯೆಯ ಮನೆಯಲ್ಲಿ ವಿಟಪುರುಷರ ವಿಡಂಬನೆಯು ತುಂಬಾ ಆಕರ್ಷಕವಾಗಿದೆ. ಅರುಣಗಿರಿ ಹಾಗೂ ವೇಶ್ಯೆಯ ಪ್ರಣಯ ಲೀಲೆಗಳು ಕೊನೆಗೆ ಸಹೋದರಿಯ ಕರುಣಕಥೆ ಮನಕರಗಿಸುವಂತಿವೆ. ನೃತ್ಯನಾಟಕದಲ್ಲಿ ಹಾಸ್ಯವನ್ನು ಬೆರೆಸುವುದು ಅಸಾಧ್ಯವೆಂದು ಹೇಳುವವರು, ಈ ಅರುಣಗಿರಿ ನೃತ್ಯನಾಟಕವನ್ನು ನೋಡಬೇಕು. ವೇಶ್ಯೆಯ ಮನೆಯಲ್ಲಿ ವಿಟಪುರುಷರನ್ನು ಬರಮಾಡಿಕೊಳ್ಳುವುದು, ಅವರನ್ನು ಸತ್ಕರಿಸುವುದು ಯಥಾವತ್ತಾಗಿ ನಿರೂಪಿಸಲ್ಪಟ್ಟಿವೆ ಅದೇ ರೀತಿಯಾಗಿ ವಿವಿಧ ವಿಟಪುರುಷರ ಮನೋವೃತ್ತಿಯು ಚಿತ್ರಿಸಲ್ಪಟ್ಟಿದೆ. ವೇಶ್ಯೆಯ ಮನೆಯಲ್ಲಿಯ ಮಧ್ಯಸ್ಥನ ಪಾತ್ರವು ತುಂಬಾ ಪರಿಣಾಮಕಾರಿಯಾಗಿದೆ. ಮೂರನೆಯ ದೃಶ್ಯದಲ್ಲಿ, ತನ್ನ ತಾಯಿಯ ವಿಯೋಗದ ನಂತರ ಮನೆಗೆ ಬಂದ ಅರುಣಗಿರಿಯ ಮನಸ್ಸಿನ ತಾಕಲಾಟ-ಹೊಯ್ದಾಟಗಳು ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಲ್ಪಟ್ಟಿವೆ. ವೇಶ್ಯೆಯ ಮನೆಯಿಂದ ಹೊರಬಿದ್ದ ಅರುಣಗಿರಿಯು ಸುಖನಿದ್ರೆಯನ್ನೇ ನೆನಸುತ್ತಾನೆ. ಮನೆಗೆ ಹಿಂದಿರುಗಿ ದುಃಖದಲ್ಲಿರುವ ಸಹೋದರಿಯನ್ನು ನೋಡುವನು; ಅವನ ಮನಸ್ಸು ಕದಲುವುದು. ಅವಳಿಂದ ತಾಯಿಯ ಮರಣವಾರ್ತೆಯನ್ನು ತಿಳಿದು, ಆಕಾಶವೇ ಅವನ ಮೇಲೆ ಕಳಚಿ ಬಿದ್ದಂತಾಗುವುದು. ಅಂತಹ ದುಃಖದಲ್ಲಿಯೇ ತಂಗಿಗೆ ಸಮಾಧಾನ ವನ್ನು ಹೇಳುವನು. ಓಯೆಂದು ಗೋಳಿಡುವನು. ದುಃಖದ ಭಾರವನ್ನು ತಾಳಲಾರದೆ ಜಡವಾದ ಕಾಲುಗಳನ್ನು ಎತ್ತುತ್ತ ಮನೆಯನ್ನು ಸುತ್ತುವನು. ಕಳೆದ ರಾತ್ರಿ ತಾನು ವೇಶ್ಯೆಯ ಮನೆಯಿಂದ ಬಾರದಿದ್ದಕ್ಕಾಗಿ ತಾಯಿಯು ಮರಣ ಹೊಂದಿದಳೆಂಬ ಯೋಚನೆಯು ಅವನ ತಲೆಯಲ್ಲಿ ಸುತ್ತುವುದು. ತನ್ನ ಪಾಪಕರ್ಮಕ್ಕಾಗಿ ತಾನೇ ಭಯಗೊಳ್ಳುವನು. ಹತಾಶನಾಗಿ ದುಃಖಿಸುವನು. ಅದರಲ್ಲಿಯೇ ಒಂದ ಸನೂಧಾನ: ದೈವನಿಯಮಗಳಿಗೆ ಯಾರೂ ಏನೂ ಮಾಡಲಾರೆಂದು. ತಾಯಿಯ ಮೃತ್ಯುಶಯ್ಯೆಯ ಬಳಿಯಲ್ಲಿ ತಾನು ಇದ್ದರೂ ಕೂಡಾ ಅವಳು ಸಾಯುವವಳೇ; ಸಾವು ಯಾರಿಗೂ ಬಿಟ್ಟಿದ್ದಲ್ಲ. ಹಾಗಿದರಿ ತಾನು ತಾಯಿಯನ್ನು ಕೊಲ್ಲಿಲ್ಲವೆಂದು ತನಗೆ ತಾನೇ ಬುದ್ಧಿಯನ್ನು ಹೇಳಿಕೊಳ್ಳುತ್ತಾನೆ. ಅಷ್ಟರಲ್ಲಿ ತಾಯಿಯ ಬಳಿಯಲ್ಲಿದ್ದ ಗುಪ್ತಧನವು ಜ್ಞಾಪಕಕ್ಕೆ ಬರುವುದು. ಅವನ್ನು ಈಗಲೇ ಪಡೆಯಬೇಕೆಂದು ಸಹೋದರಿಯನ್ನು ಕೇಳುವನು. ಅವಳಿಂದ ಏನೊಂದೂ ಉತ್ತರ ಬಾರದಿರಲು, ತಾಯಿಯ ಶವದ ಕಡೆಗೆ, ಮುರುಘವಿಗ್ರಹದ ಬಳಿಯಲ್ಲಿ, ಮನೆಯ ಮಾಡು-ಗೂಡುಗಳಲ್ಲಿ, ಪೆಟ್ಟಿಗೆ ಕಪಾಟುಗಳ ಎಲ್ಲೆಡೆಯಲ್ಲಿಯೂ ಹುಡುಕುವನು. ಎಲ್ಲಿಯೂ ಏನೂ ದೊರೆಯದಿರಲು, ಕೊನೆಗೆ ಸಹೋದರಿಯ ಮೈಮೇಲಿನ ಒಡವೆಗಳು ಅವನ ಕಣ್ಣಿಗೆ ಬೀಳುವುವು. ಅವುಗಳನ್ನು ಒಂದೊಂದಾಗಿ ಬಲಾತ್

ದಿಂದ ಕಿತ್ತುಕೊಳ್ಳುವನು. ಆಗ ಅವಳು ಉಟ್ಟಿರುವ ಒಳ್ಳೆಯ ಸೀರೆಯು ಅವನ ಗಮನಕ್ಕೆ ಬರುವುದು. ಕಳೆದ ರಾತ್ರಿ ವೇಶ್ಯೆಯ ಮನೆಯಲ್ಲಿ ತನ್ನ ನೈಮೇಲಿನ ಬಟ್ಟೆಗಳನ್ನು ಕಸಿದುಕೊಂಡು ಬಟ್ಟಿದ್ದರು. ಈಗ ಅವನು ಹರಕು ಬಟ್ಟೆಗಳನ್ನು ಧರಿಸಿದ್ದಾನೆ. ತಾನು ಈ ರೀತಿ ಹರಕು ಬಟ್ಟೆಗಳನ್ನು ತೊಟ್ಟಿರುವಾಗ, ತನ್ನ ಸಹೋದರಿಯೇಕೆ ಒಳ್ಳೆಯ ಸೀರೆಯನ್ನು ಉಟ್ಟುಕೊಳ್ಳಬೇಕೆಂಬುದೇ ಅವನ ತರ್ಕ. ಅದನ್ನು ಕೂಡಾ ಕೊಡೆಂದು ಕೇಳುವನು. ಅವಳು ಬೇಡವೆಂದು ಅಂಗಲಾಚಿ ಬೇಡಿಕೊಳ್ಳುವಳು; ಆದರೆ ದುರಾಶೆಗಳಿಗೆ ತುತ್ತಾದ ಅರುಣಗಿರಿಯು ಮನುಷ್ಯತ್ವವನ್ನು ಕಳೆದುಕೊಂಡಿದ್ದಾನೆ. ಒಲಾತ್ಕಾರದಿಂದ ಸೀರೆಯನ್ನು ಸೆಳೆದುಕೊಳ್ಳುವನು. ಓರಣವಾಗಿ ಮಡಿಸಿ ಬಗಲಲ್ಲಿಟ್ಟುಕೊಳ್ಳುವನು. ಸಹೋದರಿಯ ದೈನ್ಯವೂ ತಾಯಿಯ ಶವವೂ ಅವನ ಹೃದಯವನ್ನು ಕದಲಿಸುವುದಿಲ್ಲ. ಅವನಿಗೆ ಒಂದೇ ಯೋಚನೆ–ಪುನಃ ವೇಶ್ಯೆಯ ಮನೆಗೆ ಹೋಗಬೇಕೆಂದು. ನೇರವಾಗಿ ಪುನಃ ವೇಶ್ಯೆಯ ಮನೆಗೆ ಹೊರಡುವನು. ಈ ಒಂದು ದೃಶ್ಯದಲ್ಲಿ ಈ ಬಗೆಯ ಭಾವಗಳ ತಾಕಲಾಟವು ಇದ್ದರೂ, ಅದನ್ನು ಸುರಸವಾಗಿ ಸುಂದರವಾಗಿ ನಿರೂಪಿಸುವ ಶಕ್ತಿಯು ಕುಲಕರ್ಣಿಯವರಲ್ಲಿರುವುದು.

ಅನಂತರದ ನಾಲ್ಕನೆಯ ದೃಶ್ಯದಲ್ಲಿ ಅರುಣಗಿರಿಯು ವೇಶ್ಯೆಯ ಮನೆಯಿಂದ ತಿರಸ್ಕೃತನಾಗಿ ತಳ್ಳಲ್ಪಡುವನು. ಆಗಿನ ಅವನ ದೈನ್ಯವು ಹೃದಯ ಕರಗುವಂತಿದೆ. ಐದನೆಯ ದೃಶ್ಯದಲ್ಲಿ ಸಹೋದರಿಯ ಪ್ರಾಣ ಹೀರುವ ಪಿಶಾಚಿಯಂತೆ ಮನೆಗೆ ಬರುವನು. ಸಹೋದರಿಯ ಶಾಂತಿ–ಸ್ಥಿರತೆಗಳು, ಅರುಣಗಿರಿಯ ಜ್ವಾನೋದಯ ಇವುಗಳೆಲ್ಲ ಮನ ಮುಟ್ಟುವಂತೆ, ಹೃದಯವನ್ನು ಕಲಕಿಸುವಂತೆ ಭಾವಾಭಿನಯಗಳಿಂದ ನಿರೂಪಿಸಲ್ಪಟ್ಟಿವೆ. ಏಳನೆಯ ದೃಶ್ಯದಲ್ಲಿ ದೈವೀಪದವನ್ನು ಹೊಂದಿದ ಅರುಣಗಿರಿಯನ್ನು ತನ್ನ ಕಾಮಜಾಲಕ್ಕೆಳೆದುಕೊಳ್ಳಲು ವೇಶ್ಯೆಯು ಮಾಡಿದ ಪ್ರಯತ್ನಗಳು ವಿಫಲವಾಗಿ, ಅವಳು ಕೂಡಾ ಅವನ ಶಿಷ್ಯಳಾಗುವಳು. ಕೊನೆಗೆ ಎಲ್ಲರೂ ಭಕ್ತಿಯಿಂದ ಅರುಣಗಿರಿಯು ರಚಿಸಿದ 'ತಿರುಪುಗಳ' ಪದ್ಯಗಳನ್ನು ಹೇಳುವರು.

ಈ ನೃತ್ಯನಾಟಕದಲ್ಲಿ ಕೆಲವು ಶಾಸ್ತ್ರೀಯ ನೃತ್ಯಮಾರ್ಗಗಳನ್ನು ಸ್ವಲ್ಪವೂ ವ್ಯತ್ಯಾಸ ಮಾಡದೆ ಹಾಗೆಯೆ ಉಪಯೋಗಿಸಿಕೊಂಡಿದ್ದಾರೆ. ಪ್ರಥಮ ದೃಶ್ಯದಲ್ಲಿ ತಾಯಿಯು ಪೂಜೆ ಮಾಡುತ್ತಿರುವಾಗ ಸಹೋದರಿಯು ಭರತ ನಾಟ್ಯದಲ್ಲಿಯ "ಅಲರಿಪ್ಪು" ಎಂಬ ನೃತ್ಯ ಮಾಡುತ್ತಾಳೆ. ಎರಡನೆಯ ದೃಶ್ಯದಲ್ಲಿ ವೇಶ್ಯೆಯು ರಂಗರಾಭರಣದಲ್ಲಿ ವರ್ಣವೊಂದನ್ನು ಪ್ರದರ್ಶಿಸುತ್ತಾಳೆ. ಅಲ್ಲಿಯೆ ಅರುಣಗಿರಿ ಹಾಗೂ ವೇಶ್ಯೆ ಸೇರಿ ಮಾಡುವ ನರ್ತನದಲ್ಲಿ ಕಥಕ್ಕಳಿಯ "ತೋಡಯಂ" ಎಂಬ ನೃತ್ಯದ ಭಾಗವನ್ನು ತೆಗೆದುಕೊಂಡಿದ್ದಾರೆ ಸಹೋದರಿ ಹಾಗೂ ವೇಶ್ಯೆ ಇವರುಗಳು ಈ ನೃತ್ಯನಾಟಕದಲ್ಲಿ ಬರುವ ಪದ್ಯಗಳಿಗೆ ಶುದ್ಧವಾದ ಭರತನಾಟ್ಯದ ರೀತಿಯಲ್ಲಿ ಅಭಿನಯವನ್ನು ಪ್ರದರ್ಶಿಸುತ್ತಾರೆ; ಹಾಗೂ ಅರುಣಗಿರಿಯು ಮುದ್ರೆಗಳ ಮೂಲಕ ಕಥಾವಸ್ತುವನ್ನು ನಿರೂಪಿಸಬೇಕಾದ ಸಂದರ್ಭದಲ್ಲಿ ಶುದ್ಧ ಕಥಕ್ಕಳಿಯ ಮುದ್ರೆಗಳನ್ನು ಉಪಯೋಗಿಸುತ್ತಾನೆ; ಆದರೆ ಅನಿವಾರ್ಯವೆಂದು ಕಂಡು ಬಂದಾಗ ಮಾತ್ರ ಮುದ್ರೆಗಳು ಉಪಯೋಗಿಸಲ್ಪಟ್ಟಿವೆ. ನವರಸಗಳನ್ನು ಕೇವಲ ಮುಖಭಾವದಿಂದಲೇ ತೋರಿಸಿ ಮನಪನ್ನು ಚಿದರಿಸಬಲ್ಲ ಅದ್ಭುತ ಸಾಮರ್ಥ್ಯವು ಕುಲಕರ್ಣಿಯವರಲ್ಲಿರುವುದರಿಂದ, ಅನೇಕ ಕಡೆಗಳಲ್ಲಿ ಮುದ್ರೆಗಳ ಆವಶ್ಯಕತೆಯೇ ಕಂಡು ಬರುವುದಿಲ್ಲ.

ಈ ನೃತ್ಯನಾಟಕದಲ್ಲಿ ಪದ್ಯಗಳು ಕೂಡಾ ಉಪಯೋಗಿಸಲ್ಪಟ್ಟಿವೆ; ಆದರೆ ಮುಖ್ಯವಾಗಿ ಈ ನೃತ್ಯನಾಟಕಕ್ಕೆ ಹಿನ್ನೆಲೆಯಾಗಿ ವಾದ್ಯಗಳ ಸಂಗೀತವನ್ನೇ ಏರ್ಪಡಿಸಿಕೊಂಡಿದ್ದಾರೆ. ಅದರಲ್ಲಿ ದಕ್ಷಿಣಾದಿ ಹಾಗೂ ಹಿಂದುಸ್ತಾನಿ ಇವೆರಡರ ಸಮ್ಮಿಶ್ರಣವು ಕಂಡು ಬರುತ್ತದೆ. ಅನೇಕ ವಾದ್ಯಗಳನ್ನು ಮೇಳಯಿಸಿಕೊಂಡಿರುವುದರಿಂದ, ಹಾಗೂ ಕಥಾ ಸಂದರ್ಭಗಳಿಗೆ ಸರಿಯಾಗಿ ರಾಗ–ತಾಳ–ಲಯಗಳನ್ನು ಏರ್ಪಡಿಸಿಕೊಂಡಿರುವುದರಿಂದ, ರಸೋತ್ಪಾದನೆಕ್ಕೆ ವಾದ್ಯಗೋಷ್ಠಿಯು ತುಂಬಾ ಸಹಾಯವನ್ನುಂಟುಮಾಡುತ್ತದೆ; ಆದರೂ ಕಥಾ ನಿರೂಪಣೆಯಿದ್ದಲ್ಲಿ ಮಾತ್ರ ಕೆಲವು ಪದ್ಯಗಳನ್ನಿಟ್ಟುಕೊಂಡಿದ್ದಾರೆ. ಪದ್ಯಗಳು ತಮಿಳನಲ್ಲಿದ್ದರೂ ಕೂಡ ಕನ್ನಡ ಪ್ರೇಕ್ಷಕರಿಗೆ ಕಥೆಯನ್ನು ಅರ್ಥ ಮಾಡಿಕೊಳ್ಳಲು ಯಾವ ರೀತಿಯು ತೊಂದರೆಯೂ ಉಂಟಾಗುವುದಿಲ್ಲ; ಏಕೆಂದರೆ ಆ ಪದ್ಯಗಳ ಭಾವಾಭಿನಯವು ಅಷ್ಟೊಂದು ರಸಪೂರ್ಣವಾಗಿದೆ. ಅಲ್ಲದೆ ತಮಿಳು ದೇಶದಲ್ಲಿ ತುಂಬಾ ಪ್ರಚಾರ ಹೊಂದಿರುವ 'ತಿರುಪುಗಳ' ಪದ್ಯಗಳನ್ನು ಭಾಷಾಂತರಿಸಿ ಕುಲಗೆಡಿಸುವ ಬದಲು ಮೂಲದಲ್ಲಿಯೆ ಇರುವ ರೀತಿಯಲ್ಲಿ ಅದೇ ತಾಳ ಹಾಗೂ ರಾಗದೊಡನೆ ಹಾಡುವುದರಿಂದ ತಮಿಳುಭಾಷೆಯ ಸೌಂದರ್ಯದ ಪರಿಚಯವು ಕನ್ನಡಿಗರಿಗೆ ಉಂಟಾಗುತ್ತದೆ.

ಕುಲಕರ್ಣಿಯವರ ನೃತ್ಯನಾಟಕಗಳು ಪಂಡಿತರ ಹಾಗೂ ಪಾಮರರ ಮನೋರಂಜನೆಗಾಗಿ ನಿರ್ಮಿಸಲ್ಪಟ್ಟಿವುಗಳು. ಆಧುನಿಕ ನೃತ್ಯಪ್ರದರ್ಶನಗಳನ್ನು ನೋಡಿ ಪಾಮರರು ಕೂಡಾ ತಲೆದೂಗಿ ಸಂತೋಷಪಟ್ಟುದು ಇದೇ ಮೊದಲನೆಯ ಸಲ. ಆಧುನಿಕ ನರ್ತನ ಪ್ರದರ್ಶನವೆಂದರೆ ಕೆಲವು ಶ್ರೀಮಂತರ, ಸುಶಿಕ್ಷಿತರ, ಪಂಡಿತರ ಸೊತ್ತಲ್ಲ. ನರ್ತನವು ಕೇವಲ ವಿನೋದಕಾಲವ ಸಾಧನವಲ್ಲ. ಮನೋರಂಜನೆಯೊಡನೆ ಉನಾತ್ತ ವಿಚಾರಗಳನ್ನೂ ಪ್ರಚಾರ ಪಡಿಸುವ ಅಗಾಧವಾದ ಸಾಮರ್ಥ್ಯವು ಅದರಲ್ಲಿದೆ. ನರ್ತನವು ಕೇವಲ ನೇತ್ರಾನಂದಕ್ಕಾಗಿಯಲ್ಲ, ಹೃದಯವನ್ನು ಕರಗಿಸಿ ತತ್ತ್ವಬೋಧನೆಯನ್ನು ಮಾಡುವುದಕ್ಕಾಗಿ. ನರ್ತನದಿಂದ ನಗಿಸಬಹುದು, ನರ್ತನದಿಂದ ಅಳಿಸಬಹುದು. ಅದು ಒಂದು ಪರಿಪೂರ್ಣವಾದ ಕಲೆ. ಕರ್ನಾಟಕ ಸಂಸ್ಕೃತಿಯ ಬೆಳೆವಣಿಗೆಯ ಕಾರ್ಯದಲ್ಲಿ ನರ್ತನಕ್ಕೂ ಒಂದು ವಿಶಿಷ್ಟವಾದ ಸ್ಥಾನವಿದೆಯೆಂಬ ಮಾತನ್ನು ಕುಲಕರ್ಣಿ ಶ್ರೀನಿವಾಸರು ತಮ್ಮ ಈ ನೃತ್ಯನಾಟಕದಿಂದ ಸಿದ್ಧಮಾಡಿ ತೋರಿಸಿದ್ದಾರೆ. ಕನ್ನಡ ವಿಭೂತಿಗಳ, ಕನ್ನಡ ಐತಿಹಾಸಿಕ ಪುರುಷರ ಜೀವನಚರಿತ್ರೆಗಳನ್ನು ಕನ್ನಡ ಪದ್ಯಗಳೊಡನೆ ನಿರೂಪಿಸಿದಲ್ಲಿ ಎಂತಹ ಅಗಾಧವಾದ ಪರಿಣಾಮವನ್ನು ಕುಲಕರ್ಣಿಯವರು ಮಾಡಬಲ್ಲರೆಂದು ನಮ್ಮೆಲ್ಲರಲ್ಲಿ ಮಹತ್ತರವಾದ ಆಶೆ ನೆಲಸಿದೆ. ಇದೇ ಮೇರೆಗೆ ಇನ್ನೂ ಹಲವು ನೃತ್ಯನಾಟಕಗಳನ್ನು ಸಿದ್ಧಪಡಿಸಿಕೊಂಡು ಹಿಮಸ್ತಾನದ ಬೇರೆ ಬೇರೆ ಭಾಗಗಳಲ್ಲಿಯೂ ಹಾಗೂ ಪರದೇಶಗಳಲ್ಲಿಯೂ ಸಂಚರಿಸಿ, ತಮ್ಮ ಕಲಾವೈಭವದಿಂದ ಕರ್ನಾಟಕದ ಕೀರ್ತಿ ಹಾಗೂ ಹೆಚ್ಚಳಗಳು ಸ್ಥಿರಸ್ಥಾಯಿಯಾಗುವಂತೆ ಮಾಡಲೆಂದು ನಾವು ಹಾರೈಸುತ್ತೇವೆ.

ಸಾಹಿತ್ಯ ವಿಹಾರ

"ವಿಹಾರಿ"

ಯಾವುದಾದರೊಂದು ಪುಸ್ತಕ ಪ್ರಸಿದ್ಧವಾದ ಕೂಡಲೆ, ಕೆಲವು ಪ್ರತಿಗಳನ್ನು ಕೆಲವಾರು ನಿಯತಕಾಲಿಕಗಳ ಸಂಪಾದಕರ ಕಡೆಗೆ "ವಿಮರ್ಶೆಯ ಕೃಪೆಗಾಗಿ" ಕಳುಹಿಸುವುದೊಂದು ವಾಡಿಕೆಯಾದಂತೆ ಆ ನಿಯತಕಾಲಿಕಗಳ ಸಂಪಾದಕರು "ವಿಮರ್ಶೆ ಯಥಾವಕಾಶವಾಗಿ" ಎಂಬ ಆಶ್ವಾಸನವನ್ನು ಕೊಡುವುದೂ ಒಂದು ವಾಡಿಕೆ. ನಿಜವಾಗಿಯೂ ಅವಕಾಶ ಸಿಕ್ಕದಕ್ಕಾಗಿಯೊ, ಅವಕಾಶ ಸಿಕ್ಕರೂ ಸ್ವಭಾವಕ್ಕಾಗಿಯೊ ಅವಕಾಶ ಸ್ಥಳಗಳೆರಡೂ ಇದ್ದರೂ ಇನ್ನಾವ ಕಾರಣಕ್ಕಾಗಿಯೊ, ನಮ್ಮ ನಿಯತಕಾಲಿಕಗಳಲ್ಲಿ ಪುಸ್ತಕ ವಿಮರ್ಶೆಯ ವಿಭಾಗವು ಜನಾದರವನ್ನು ಪಡೆಯಲೊಲ್ಲದು. ಎಲ್ಲಿಯಾದರೊಂದು ವಿಸ್ತೃತವಾದ ವಿಮರ್ಶೆಯು ಪ್ರಕಟವಾದಲ್ಲಿ ಅದರ ಬಗೆಯಲ್ಲಿ ಕೆಲವೆಡೆಯಲ್ಲಿ ದುರ್ಲಕ್ಷ್ಯವಾದರೆ, ಕೆಲವೆಡೆಯಲ್ಲಿ ಸಲ್ಲದ ಖಂಡನೆ. ಈ ಎಲ್ಲ ಕಾರಣಗಳೂ ಸೇರಿ ನಮ್ಮಲ್ಲಿ ಪುಸ್ತಕಾವಲೋಕನದ ಮಟ್ಟು ತೀರ ಕೆಳಗಿನದಾಗಿಯೇ ಉಳಿದಿದೆ. ಬೆರಳುಗಳ ಮೇಲೆ ಎಣಿಸಬಹುದಾದ ಒಂದೆರಡು ಪತ್ರಿಕೆಗಳನ್ನು ಬಿಟ್ಟರೆ ಉಳಿದ ಪತ್ರಿಕೆಗಳು ಪುಸ್ತಕಾವಲೋಕನಕ್ಕಾಗಿ ಕೆಲವು ಪುಟಗಳನ್ನು ಕಾಯ್ದಿರಿಸಿರುವುವೋ ಇಲ್ಲವೋ ಎಂಬುದು ಓದುಗರಿಗೆ ಸಂಶಯಾಸ್ಪದವೆ. ಹೊಸ ಪ್ರತಿಗಳ ಬಗೆಯಲ್ಲಿ ಸಾಮಾನ್ಯ ಓದುಗರ ಕುತೂಹಲವನ್ನು ಕೆಣಕುವುದರಲ್ಲಿ ಪುಸ್ತಕಾವಲೋಕನವು ಮಹತ್ತ್ವವ ಸಾಧನವಾಗಬಲ್ಲದು. ಮುಖ್ಯವಾಗಿ ಪುಸ್ತಕಾವಲೋಕನದ ಇತಿಮಿತಿಗಳನ್ನೂ, ಅದರಿಂದ ಸಾಹಿತ್ಯದ ಬೆಳೆವಣಿಗೆಗೆ ಆಗಬಹುದಾದ ಸಹಾಯವನ್ನೂ ನಾವು ಹೆಚ್ಚುಕಡಿಮೆ ಅಲ್ಲಗಳೆಯುತ್ತಿದ್ದೇವೆ.

ಓದುಗರು ಒಂದು ಮಾತನ್ನು ಕೇಳಬಹುದು 'ಒಂದೇ ಒಂದು ಪುಸ್ತಕದ ವಿಚಾರದಲ್ಲಿ ಎರಡು ಪತ್ರಿಕೆಗಳು ತೀರ ಭಿನ್ನಾಭಿಪ್ರಾಯವನ್ನು ವ್ಯಕ್ತಮಾಡುತ್ತಿದ್ದಾಗ (ಮಾಡುವುದು ಸಾಧ್ಯವಿದ್ದಾಗ) ಪುಸ್ತಕಾವಲೋಕನದಿಂದ ಯಾವ ರೀತಿಯಲ್ಲಿ ಓದುಗ ಸಲಹೆಯನ್ನು ಕೊಳ್ಳಬಹುದು?' ಎಂದು. ಪ್ರಶ್ನೆಯು ಯಥಾರ್ಥವಾಗಿದೆ. ಪುಸ್ತಕಾವಲೋಕನದಲ್ಲಿ ಮತಭೇದಕ್ಕೆ ಬೇಕಾದಷ್ಟು ಅವಕಾಶವಿರಬಹುದು ಎಂಬುದನ್ನು ಮೊದಲಿಗೇ ಒಪ್ಪಿಬಿಡುವ. ಈ ಮತಭೇದ ಕೆಲವು ವೇಳೆ ಸ್ಪಷ್ಟವಾಗಿ ಕಂಡುಬರುವುದು. ಇತ್ತೀಚೆಗೆ ಪ್ರಕಟವಾದ ಶ್ರೀ ಕಾರಂತರ "ಹೆತ್ತವಳಾತಾಯಿ" ಯನ್ನು ಕುರಿತು ಪ್ರಕಟವಾದ ಕೆಲವು ಅವಲೋಕನಗಳನ್ನು ನೋಡಬಹುದು. ಇಬ್ಬರು ಅವಲೋಕನಕಾರರು ತೀರ ವಿರುದ್ಧವಾದ ಅಭಿಪ್ರಾಯಗಳನ್ನು ಹೇಳಿದಾಗ, ಇಬ್ಬರಲ್ಲೊಬ್ಬರು ಮೂರ್ಖರಾಗಿರಲೇಬೇಕೆಂಬ ನಿಯಮವಿಲ್ಲವೆಂದು ಹೇಳುವುದೇ ಇಲ್ಲಿಯ ಮುಖ್ಯ ಉದ್ದೇಶ. ಇದರಿಂದ ಕೆಲವರು ಗಾಬರಿಯಾಗಬಹುದು ನಮ್ಮಲ್ಲಿ ವಿಮರ್ಶೆಯೇ ಆಗಲಿ, ಪುಸ್ತಕಾವಲೋಕನವೇ ಆಗಲಿ, ಬೆಳೆಯಬೇಕಾದ ರೀತಿಯಲ್ಲಿ ಬೆಳೆದಿರದಿದ್ದರೂ ಕೂಡ ಇವೆರಡನ್ನು ಕುರಿತು ಒಂದು ಮಾತನ್ನು ಹೇಳುವುದು ಅವಶ್ಯವೆಂದು ತೋರುತ್ತದೆ. ವಿಮರ್ಶೆ ಬೇರೆ, ಪುಸ್ತಕಾವಲೋಕನ ಬೇರೆ ಎಂಬ ಮಾತು, ನಮ್ಮಲ್ಲಿಯ ಕೆಲವು ಪತ್ರಿಕಾ ಸಂಪಾದಕರಿಗೂ ಕೂಡ ತಿಳಿಯದ ವಿಷಯವಾಗಿದೆ. ವಿಮರ್ಶೆ ಯಾವಾಗಲೂ ವಿಸ್ತೃತವಾದದ್ದು, ಪುಸ್ತಕಾವಲೋಕನ ಯಾವಾಗಲೂ ಲಘುವಾದದ್ದು. ಕೇವಲ ಗಾತ್ರದಲ್ಲಿಯಲ್ಲ. ವಿಷಯವನ್ನು ವಿವೇಚಿಸುವ ರೀತಿಯಲ್ಲಿ, ದೃಷ್ಟಿಯಲ್ಲಿ ವಿಮರ್ಶಕ ಒಂದು ಕೃತಿಯನ್ನು ಒಂದು ತತ್ತ್ವದ ಜ್ವಲತೆಗೋಲಿನಿಂದ ಪರೀಕ್ಷಿಸಿ ಹಲಕೆಲವು ದೃಷ್ಟಿಗಳಿಂದ ಆ ಕೃತಿಯಲ್ಲಿಯ ಹೆಚ್ಚುಕಡಿಮೆಗಳನ್ನು ನಿಶದಪಡಿಸುತ್ತಾನೆ. ಪುಸ್ತಕಾವಲೋಕನಕಾರ ಕಲೆಯನ್ನು ಕೇವಲ ಸ್ಥೂಲವಾಗಿ—ನೈಯಕ್ತಿಕ ದೃಷ್ಟಿಯಿಂದ ಎಂದರೂ ನಡೆಯಬಹುದು—"ಅಜವಾಸು" ಬೆಲೆ ಕಟ್ಟುತ್ತಾನೆ. ವಿಮರ್ಶಕನ ಸ್ಥಾನ ತನ್ನ ಪುಸ್ತಕಾಲಯದಲ್ಲಿ; ಅವಲೋಕನಕಾರನ ಸ್ಥಾನ ಪುಸ್ತಕದ ಪೇಟೆಯಲ್ಲಿ. ವಿಮರ್ಶಕ ತತ್ತ್ವಜ್ಞಾನಿ. ಅವಲೋಕನಕಾರ ಕೈಯಲ್ಲಿ ತಕ್ಕಡಿ ಹಿಡಿದು ಹೆಚ್ಚು ಕಡಿಮೆ ಬೆಲೆ ಕಟ್ಟುವ ಮಧ್ಯಸ್ಥ. ಇವರಿಬ್ಬರ ದೃಷ್ಟಿಗಳಲ್ಲಿಯ ವ್ಯತ್ಯಾಸವನ್ನು ನಾವು ಲಕ್ಷ್ಯದಲ್ಲಿರಿಸಿದರೆ ಮತಭೇದಕ್ಕೆ ಬೇಕಾದಷ್ಟು ಅಸ್ಪದವಿರುತ್ತದೆಂಬುದನ್ನು ನಾವು ತಿಳಿಯಬಹುದು. ಹಾಗಾದರೆ ಇಂತಹ ಮತಭೇದದ ಸಂದರ್ಭದಲ್ಲಿ ಅವಲೋಕನದ ಮೂಲಕ ದಾರಿ ಕಾಣಬೇಕೆಂದಿರುವ ಓದುಗನ ಗತಿಯೇನು?' ಎಂದು ಕೇಳಿದರೆ ಉತ್ತರ ತೀರ ಸುಲಭ. ಯಾವುದಾದರೊಂದು ಕೃತಿಯನ್ನು ಕುರಿತು ತೀರ ಭಿನ್ನಾಭಿಪ್ರಾಯಗಳು ವ್ಯಕ್ತವಾದಾಗ, ಆ ಕೃತಿಯು ಯಾವಾಗಲೂ ಓದಲೇಬೇಕಾದುದೆಂಬುದು ನಿರ್ವಿವಾದ ವಿಷಯ. ಇಂಗ್ಲೆಂಡಿನಲ್ಲಿ ಸುಪ್ರಸಿದ್ಧ ಕವಿಯಾದ ಟಿ ಎಸ್. ಇಲಿಯಟ್ಟನ ವಿಖ್ಯಾತ ಕಾವ್ಯಕೃತಿ "ವೇಸ್ಟ್‌ಲ್ಯಾಂಡ್" ಪ್ರಸಿದ್ಧವಾದಾಗ, ಕಾದಂಬರಿಕಾರನಾಗಿದ್ದ ಜೇಮ್ಸ್ ಜಾಯಿಸ್‌ನ್, "ಯುಲಿಸಿಸ್" ಪ್ರಕಟವಾದಾಗ ಅವಲೋಕನಕಾರರು ಒಬ್ಬರೊಬ್ಬರ ಕುತ್ತಿಗೆಗೆ ಹಾರಿದರು ಬೆಕ್ಕುಗಳಂತೆ ಬಡಿದಾಡಿದರು. ಈ ಎರಡು ಕೃತಿಗಳಿಗೆ ಕಸದ ಪುಟ್ಟಿಯಹೊರತು ಬೇರೆ ಯಾವ ಸ್ಥಾನವೂ ಯೋಗ್ಯವಲ್ಲವೆಂದು ಹೇಳಿದವರಿಗೆ ಸ್ಪಷ್ಟವಾಗಿ ಎರಡೂ ಕೃತಿಗಳು ಸಾಹಿತ್ಯದ ಇತಿಹಾಸದಲ್ಲಿ ಕ್ರಾಂತಿಯನ್ನೇ ಮಾಡಬಲ್ಲವುಗಳೆಂದು ಹೇಳುವವರೂ ನಮ್ಮಲ್ಲಿ ಬಂದರು. ಮೊದಲನೆಯ ಗುಂಪಿನ ದುರ್ದೈವದಿಂದ ಕೃತಿಗಳೆರಡೂ ಆಂಗ್ಲ ಸಾಹಿತ್ಯದ ಪ್ರವಾಹವನ್ನು ಹೊಸ ದಾರಿಯಲ್ಲಿ ಹರಿಯಿಸಿದುವು. ಆದುದರಿಂದ ಪುಸ್ತಕಾವಲೋಕನದ ಬೆಲೆ ಅದನ್ನು ಬರೆದವನ ಯೋಗ್ಯತೆಗೆ ಸರಿಯಾಗಿರುವುದು ಅನಿವಾರ್ಯ. ಎಲ್ಲ ಅವಲೋಕನಗಳೂ ಈಕ್ಷಣ ಓದಿ ಮರುಕ್ಷಣ ಮರೆಯಬೇಕಾದುವುಗಳೇ ಇರುವುದಿಲ್ಲ ಅವಲೋಕನ ವಿಮರ್ಶೆಗೆ ಸಮಾನವಾದಷ್ಟೂ ಅದರ ತೂಕ ಹೆಚ್ಚು. ಅದಕ್ಕೆ ಮಾನ್ಯತೆಯೂ ಹೆಚ್ಚು. ಪೂರ್ವಕ್ಕೆ ಪಶ್ಚಿಮವೆನ್ನುವವನ ಧೈರ್ಯವನ್ನು ನಾವು ಕೊಂಡಾಡುವುದಿಲ್ಲ. ಅವನ ಮೇಲಂತಸ್ತು ಸರಿಯಾಗಿದೆಯೆ ಇಲ್ಲವೆ ಎಂದು ಸಂಶಯಪಡುತ್ತೇವೆ ಆ ದೃಷ್ಟಿಯಿಂದ ಅವರನ್ನು ವಿಮರ್ಶಿಸುತ್ತೇವೆ.

× × × ×

ಬೆಂಗಳೂರಿನಲ್ಲಿಯ ಕನ್ನಡ ಸಾಹಿತಿಗಳ ಸಂಘದ ಆಶ್ರಯದಲ್ಲಿ ಕನ್ನಡ ಸಣ್ಣ ಕತೆಗಾರರ ಮೂರನೆಯ ಸಮ್ಮೇಳನ ನವೆಂಬರ ತಿಂಗಳ

೧೭–೧೮ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಪ್ರಸಿದ್ಧ ಕತೆಗಾರರಾದ ಶ್ರೀಮಾನ್ ಎ. ಸೀತಾರಾಂ (ಆನಂದ) ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯವಾದ ಅಂಶಗಳೆಂದರೆ, ಕೆಲವು ಕತೆಗಳನ್ನು ಓದುವುದು, ಮತ್ತು "ಸಣ್ಣ ಕತೆಗಳಲ್ಲಿ ವಾಸ್ತವಿಕತೆಯ ಸ್ಥಾನ" ಎಂಬ ವಿಷಯದಮೇಲೆ ವಿಚಾರ ಗೋಷ್ಠಿ ನಡೆಸುವುದು ಶ್ರೀಮಾನ್ ಆನಂದರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಯಶಸ್ವಿಯಾಗಿ ನಡೆದುದರಲ್ಲಿ ಆಶ್ಚರ್ಯವಿಲ್ಲ. ವಿಚಾರಗೋಷ್ಠಿಯಲ್ಲಿಯ ಚರ್ಚೆಯು ವಿಷಯವಾದರೂ, ಅವಶ್ಯವಾಗಿ, ವಿಶೇಷವಾಗಿ ಇಂದಿನ ಪರಿಸ್ಥಿತಿಯಲ್ಲಿ, ಚರ್ಚೆಗೆ ಯೋಗ್ಯವಾದದ್ದು. ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಹೊರಬಂದ ಕನ್ನಡ ಸಣ್ಣ ಕತೆಗಳಲ್ಲಿಯ ಸಸ್ತ ಕತೆಯನ್ನು ಪರಿಶೀಲಿಸಿ ನೋಡಿದರೆ ಅದರ ಬಗೆಯಲ್ಲಿ ಯಾವ ಅಸಂತೋಷವನ್ನಲ್ಲ ವ್ಯಕ್ತಮಾಡುವುದು ಸಾಧ್ಯವಿರದಿದ್ದರೂ ಕೂಡ ಇತ್ತೀಚೆಗೆ "ದಲಿತರ" ಸಾಹಿತ್ಯದ ಕಹಳೆಯನ್ನು ಎತ್ತಿದವರ ಕೆಲವು ಆಕ್ಷೇಪಣೆಗಳಿಗೆ ಸರಿಯಾಗಿ ಇಂದಿನ ನಮ್ಮ ಸಾಹಿತ್ಯದಲ್ಲಿಯ ವಾಸ್ತವಿಕತೆಯ ಇತಿಮಿತಿಗಳನ್ನು ಚರ್ಚಿಸುವುದು ಅಗತ್ಯವಾಗಿದೆ. "ನಗ್ನ ಸತ್ಯ" ವನ್ನು ಬೇಡವರು, ಆ "ಸತ್ಯ" ವನ್ನು ಎದುರಿಸಲು ನಮ್ಮ ಓದುಗರು ಯೋಗ್ಯರಾಗಿದ್ದಾರೆಯೆ, ಇಂಥ "ಸತ್ಯ" ದರ್ಶನದಿಂದ ಬರವಣಿಗೆಯು ಇಷ್ಟವಾದ ಪರಿಣಾಮವನ್ನು ಸಾಧಿಸಬಲ್ಲದೇ ಎಂಬ ಮುಂತಾದ ಪ್ರಶ್ನೆಗಳನ್ನು ಅತಿವಾಸ್ತವತೆಯನ್ನು ಬೇಡುವವರು, ಬಯಸುವವರು, ನಿರ್ಧರಿಸಿಕೊಳ್ಳಬೇಕಾಗಿದೆ ಇಲ್ಲಿ ಅತಿವಾಸ್ತವತೆ ಎಂಬ ಮಾತನ್ನು ಎತ್ತಿದ್ದೇನೆ. ಅದು ವಾಸ್ತವತೆಯ ಮಿತಿಯನ್ನು ಸೂಚಿಸಲಿಕ್ಕೆ ಮಾತ್ರ. ಮುಖ್ಯವಾಗಿ, ವಾಸ್ತವತೆ ಒಂದು ಸಾಧಾರಣವಾದ ಎಲ್ಲೆಯನ್ನು ಮೀರಿದಾಗ ಉದ್ದಿಶ್ಯದ ದೃಷ್ಟಿಯಿಂದ ನಿಷ್ಪ್ರಯೋಜಕವಾಗುವುದೆಂಬುದನ್ನು ನಾವು ಮರೆಯುತ್ತೇವೆ. ಇದೂ ಅಲ್ಲದೆ ಇದ್ದುದನ್ನು ಇದ್ದಂತೆ ಚಿತ್ರಿಸುವೆನೆಂಬ ಹಟ ಹುಚ್ಚು ಹೊಲ ಎಂಬುದನ್ನು ಕಾಣಲಿಕ್ಕೆ ತೀರ ಸ್ವಲ್ಪ ವಿಚಾರ ಸಾಕು. ಇದ್ದುದನ್ನೆಲ್ಲವನ್ನೂ ಚಿತ್ರಿಸುವುದು ಸಾಧ್ಯವೆ? ಬರೆಹಗಾರನ ಚೇತನ ನಿರ್ದಿಷ್ಟವಾದ ಒಂದು ಕ್ಷಣದಲ್ಲಿ ಎಷ್ಟು ಸಂಗತಿಗಳನ್ನು ಎಷ್ಟು ಪರಸ್ಪರ ಸಂಬಂಧಗಳನ್ನು ಎಷ್ಟು ದೃಷ್ಟಿಯ ನೆಲುವುಗಳನ್ನು ಗ್ರಹಿಸಿಕೊಂಡು ಶಬ್ದರೂಪವಾಗಿ ಅವನ್ನು ಹೇಳಲು ಸಾಧ್ಯ? ಈ ದೃಷ್ಟಿಯಿಂದ ಅತಿವಾಸ್ತವಿಕತೆ ಉದ್ದಿಷ್ಟದ ದೃಷ್ಟಿಯಿಂದ ನಿಷ್ಪ್ರಯೋಜಕ, ರೀತಿಯ ದೃಷ್ಟಿಯಿಂದ ಅಸಾಧ್ಯ. ಸಣ್ಣ ಕತೆಗಾರ ಓದುಗರ ಮನಸ್ಸಿನ ಮೇಲಿನ ಹಿಡಿತವನ್ನು ಕಸ್ಸಿಕೊಳ್ಳಬಾರದಾದರೆ ಅವನಿಗೆ ಬಾಳಿನಿಂದ ದೂರವಾಗಿ ಇರುವುದು ಸಾಧ್ಯವಿಲ್ಲ. ಎಂದರೆ ವಾಸ್ತವಿಕತೆಯನ್ನು ಅವನು ಮರೆಯುವುದು ಸಾಧ್ಯವಿಲ್ಲ. ಆದರೆ ಬಾಳಿನೆದುರು ಕನ್ನಡಿ ಹಿಡಿಯುವುದೆಂದು ಕಂಡದ್ದೆಲ್ಲದರೆದುರೂ ಕನ್ನಡಿ ಹಿಡಿದರೆ ಕನ್ನಡಿಯಲ್ಲಿಯ ಚಿತ್ರವನ್ನು ನೋಡುವವನಿಗೆ ಬೇಸರವಾಗುವುದೂ ಸಾಧ್ಯವಿದೆಯಲ್ಲದೆ ಎಲ್ಲವನ್ನೂ ಎತಕ್ಕೆ ನಾವು ನೋಡಬೇಕು, ನೋಡಿ ಏನು ಪ್ರಯೋಜನ ಎಂಬ ಮಾತನ್ನೂ ಆತ ಕೇಳಬಹುದು. ಆದುದರಿಂದ ವಾಸ್ತವಿಕತೆಗೆ ಇತಿಮಿತಿಗಳದ್ದಂತೆ ಪ್ರಯೋಜನದ ಸಾಮಾನ್ಯವಾದ ಕಟ್ಟಾಜ್ಞೆ ಬೇಡಿಕೆಯೂ ಉಂಟು. ಈ ಮಾತು ಸಣ್ಣ ಕತೆಗಳಿಗೆ ಮಾತ್ರ ಅನ್ವಯಿಸದೆ ಲಲಿತಸಾಹಿತ್ಯದ ಯಾವ ಬಗೆಗೂ ಅನ್ವಯಿಸುವುದು.

× × × ×

ಕನ್ನಡನಾಡಿನ ಸಮಗ್ರವಾದ ಇತಿಹಾಸ ಇದುವರೆಗೆ ಸಿದ್ಧವಾಗಿರದೆ ಇದ್ದುದು ಸಾಂಸ್ಕೃತಿಕ ದೃಷ್ಟಿಯಿಂದ ಒಂದು ದೊಡ್ಡ ಕೊರತೆ. ಈ ಕೊರತೆಯನ್ನು ದೂರ ಮಾಡುವುದಕ್ಕಾಗಿ ಧಾರವಾಡದ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಸಮಿತಿಯು ಕಾರ್ಯಮುಖವಾಗಿರುವುದು ಅಭಿನಂದನೀಯ. ಕರ್ನಾಟಕದ ಸಮಗ್ರವಾದ ಇತಿಹಾಸವನ್ನು ಎಂಟು ಸಂಪುಟಗಳಲ್ಲಿ ಪ್ರಕಟಿಸಬೇಕೆಂದು ನಿರ್ಧರಿಸಿದ್ದು ಮೊದಲ ಸಂಪುಟವು ಬಾದಾಮಿಯ ಚಾಲುಕ್ಯರ ಕಾಲಕ್ಕೆ ಸಂಬಂಧ ಪಟ್ಟುದಾಗಿರಬೇಕೆಂದು ನಿರ್ಣಯಿಸಲಾಗಿದೆ. ಈ ಸಂಪುಟಕ್ಕಾಗಿ ಈಗಾಗಲೆ ವಿದ್ವಾಂಸರ ಸಹಕಾರವನ್ನು ಕೇಳಿಕೊಂಡು ಕೆಲಸ ಮುಂದುವರಿಯುತ್ತಿದ್ದುದು ಶುಭಚಿಹ್ನ. ಈ ಸಂಪುಟಗಳ ಸಮಗ್ರ ಸ್ವರೂಪವನ್ನು ಆಯಾ ಭಾಗಗಳಲ್ಲಿ ಬರಬಹುದಾದ ವಿಷಯಗಳ ಮೇಲಿಂದಲೇ ತಿಳಿಯಬಹುದು. ಚಾಲುಕ್ಯರ ಇತಿಹಾಸದಲ್ಲಿ ಅವರ ಸುನೆತನ, ರಾಜ್ಯಭಾರ ಪದ್ಧತಿ, ಮತಧರ್ಮಗಳು, ಕಲೆ, ಶಾಸ್ತ್ರ, ಶಿಲ್ಪ, ಚಿತ್ರ, ಸಮಕಾಲೀನರು ಸಾಮಾಜಿಕ ಸ್ಥಿತಿಗತಿಗಳು, ಸಾಹಿತ್ಯ, ಇತ್ಯಾದಿ ವಿಷಯಗಳನ್ನು ಕುರಿತ ಕೂಲಂಕಷವಾಗಿ ಬರೆಹಗಳನ್ನು ಅಪೇಕ್ಷಿಸಲಾಗಿದೆ ಈ ಕೆಲಸ ಈ ಮೊದಲೇ ಎಂದಿಗೋ ನಡೆಯಬೇಕಿತ್ತೆಂದು ಹೇಳಿದರೆ ಈಗ ತೀರ ಅನಿವಾರ್ಯವಾದ ಈ ಕೆಲಸಕ್ಕೆ ಟೊಂಕಕಟ್ಟಿದ ಮಹನೀಯರ ಉತ್ಸಾಹಕ್ಕೆ ತಡೆಬರುವಂತಿಲ್ಲ. ಎಂದಿಗೋ ಆಗಬೇಕಾಗಿದ್ದ ಕೆಲಸದಲ್ಲಿ ಈಗಲಾದರೂ ನಾಡಿನ ವಿದ್ವಾಂಸರು ತಮ್ಮ ಸಹಕಾರ-ಸಹಾನುಭೂತಿಗಳನ್ನು ನೀಡಿ, ಪ್ರಯತ್ನವನ್ನು ಯಶಸ್ವಿಯಾಗಿ ಮಾಡುವುದು ನಮ್ಮ ಸಂಸ್ಕೃತಿಕ ಜೀವನದಲ್ಲಿಯೆ ಅಪೂರ್ವವುಗಳ ಒಂದು ದ್ಯೋತಕ ಮಾತ್ರ.

× × × ×

ಪಾಶ್ಚಿಮಾತ್ಯ ವಿಶ್ವವಿದ್ಯಾಲಯಗಳ ಸಮರ್ಥನೆಯೆಂದು ಎಷ್ಟೋ ಮಾತುಗಳನ್ನು ಹೇಳಲಾಗಿದೆ. ನಮ್ಮ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದಲಾದರೂ ಕನ್ನಡನಾಡಿಗೊಂದು ಪ್ರತ್ಯೇಕವಾದ ವಿದ್ಯಾನಿಲಯ ಬೇಕೆಂಬುದು ನಿರ್ವಿವಾದವಾದ ವಿಷಯವಾಗಿದ್ದರೂ (ಅಥವಾ ನಿರ್ವಿವಾದವೆಂದೇ) ಆ ವಿಷಯವನ್ನು ಸಾಕಷ್ಟು ಎತ್ತಿ ತೋರಿಸಿಲ್ಲ ವೆಂದು ತೋರುತ್ತದೆ. ವಿದ್ಯಾನಿಲಯದಲ್ಲಿಯ ಮಾಧ್ಯಮದ ವಿಚಾರವನ್ನು ಸದ್ಯಕ್ಕೆ ಬದಿಗಿರಿಸಿದರು ಕೂಡ ನಮ್ಮದೇ ಆದ ವಿಶ್ವವಿದ್ಯಾನಿಲಯವೊಂದು ನಮಗಾಗಿ ಇರದ ಹೊರತು ನಮ್ಮ ಕೈತಿಗಳಿಗೆ ಯಾವ ಉತ್ತೇಜನ ಸಿಕ್ಕೀತು? ನಮ್ಮ ವಿದ್ಯಾನಿಲಯ ನಮ್ಮ ಸಂಸ್ಕೃತಿಯ ಬೆಳವಣಿಗೆಗೊಂದು ಸಾಧನವೆಂಬುದನ್ನು ನಾವು ಒಪ್ಪಿದಾಗ ನಮ್ಮ ಸಾಹಿತ್ಯದ ಬೆಳವಣಿಗೆಗಾದರೂ ಅದರಿಂದ ಎಷ್ಟು ಪರಿಯಾಗಿ ಸಹಾಯವಾದೀತೆಂಬುದನ್ನು ಬೇರೆಯಾಗಿ ಹೇಳುವ ಅವಶ್ಯತೆ ತೋರುವುದಿಲ್ಲ. ಹೀಗಿದ್ದರೂ ಕೂಡ ನಮ್ಮಲ್ಲಿ ವಿಶ್ವವಿದ್ಯಾಲಯದ ಚಳುವಳಿಯಾವುದೋ ಒಂದು ಮಟ್ಟಿಕ್ಕೆ ಬಂದು ನಿಂತುಹೋಗಿದೆ ಎಂದು ಹೇಳಿದರೆ ತಪ್ಪಾಗದೀತೆಂದು ಅನಿಸುತ್ತದೆ. ಮಹಾರಾಷ್ಟ್ರ ವಿಶ್ವವಿದ್ಯಾನಿಲಯಕ್ಕೆ ಸರಕಾರದ ಮನ್ನಣೆದೊರಕಿದ ಸಮಾಚಾರವನ್ನು ಕೇಳಿದ ಮೇಲಾದರೂ ನಮ್ಮವರು ಹೆಚ್ಚಿನ ರಭಸದಿಂದ ಬೇಡಿಕೆಯನ್ನು ಮುಂದುವರಿಸುವುದವಶ್ಯವಾಗಿದೆ. ಸ್ವಾರ್ತಕದನಿಯಾದರೆ ಅನುಕರಣಬುದ್ಧಿಯಾದರೂ ಬೇಡವೆ?

———

ಹಕ್ಕಿಯ ನೋಟ

ಬರೆದವರು: ದತ್ತಾತ್ರೇಯ ಕುಲಕರ್ಣಿ

ಪ್ರಕಾಶಕರು: ಲಲಿತ ಸಾಹಿತ್ಯಮಾಲೆ, ಧಾರವಾಡ.
ಕ್ರಾ. ಡಿ ದ ೫೦ ಪುಟಗಳು ಬೆಲೆ ೧೨ ಆಣೆ.

'ನಾನು ಕಂಡ ಗೌರಮ್ಮ'ದ ಕುಲಕರ್ಣಿ ದತ್ತಾತ್ರೇಯರು ಕಾಣದ, ಕೆಣಕದ, ಮಹತ್ತ್ವದ ಕನ್ನಡ ವ್ಯಕ್ತಿಗಳೆ ಇಲ್ಲವೆನ್ನಬಹುದು. ಸಾಹಿತ್ಯ ವ್ಯಾಸಂಗವುಳ್ಳ ಇವರಿಗೆ ಸಾಹಿತ್ಯ ವ್ಯವಸಾಯವು ಒಂದು ಸ್ಫೂರ್ತಿರಂಗವಾಗಿದೆ. ಈ ಮೂಲಕ ಎಷ್ಟೊ ಸಾಹಿತಿಗಳ ನಿಕಟ ಪರಿಚಯವಾಗಿ ಅವರ ವ್ಯಕ್ತಿತ್ವ ಇವರ ಅಂತಃಕರಣದ ಮೇಲೆ ಅಚ್ಚೊತ್ತಿದೆ. (ಗಣ್ಯ ಸಾಹಿತಿಯಾಗಿ ಕಂಡವರು ಇವರ ಕಣ್ಣಿಗೆ ಚಿತ್ರಣಕ್ಕೆ ಗಣ್ಯವ್ಯಕ್ತಿಯಾಗಿ ಕಾಣದಿರಬಹುದು).

'ನಾನು ಕಂಡ ಗೌರಮ್ಮ' ದ. ಬಾ. ಕು. ಅವರ ಪ್ರಥಮ ವ್ಯಕ್ತಿ ಚಿತ್ರ. ಅದರಿಂದ ಅವರ ಹೆಸರು ಅನೇಕ ಜನ ಕನ್ನಡಿಗರ ನಾಲಗೆಯ ಮೇಲೆ ಆಡಿತ್ತು. ಅದನ್ನು ಓದಿದವರಲ್ಲಿ ಬಗೆದುಂಬಿ ಹೊಗಳದವರೆ ಇಲ್ಲ. ಕನ್ನಡ ಸಾಹಿತ್ಯದಲ್ಲಿ ಇನ್ನೂ ಬೆಳೆಯಬೇಕಾಗಿರುವ ಈ ಚರಿತ್ರ ಪ್ರಕಾರವು ದ. ಬಾ ಕು. ಅವರಿಗೆ ಇಷ್ಟು ಸಹಜವಾಗಿ ಕರಗತವಾದುದನ್ನು ಕಂಡು ಕನ್ನಡ ಸಾಹಿತ್ಯವು ಈ ಶಾಖೆಯಲ್ಲಿ ಪಳಗಿದ ಇವರ ಕೈಯಿಂದ—ಶ್ರೀ. ಸಿ. ಕೃಷ್ಣ ಶರ್ಮರಿಂದ ಜೀವಗೊಂಡ ವ್ಯಕ್ತಿಚಿತ್ರದ ಕಲೆ— ಬೆಳೆದೀತು ಎಂದು ಅನೇಕರು ಅಪೇಕ್ಷಿಸಿದರು. ಕೆಲಕಾಲ ಈ ಅಪೇಕ್ಷೆಗೆ ಪ್ರಕೃತ ಲೇಖಕರಿಂದ ಪ್ರತ್ಯುತ್ತರ ಬರದಿದ್ದರೂ ಇಂದು ಅದು ಸಲ್ಲಿಸಲ್ಪಡುವುದರಲ್ಲಿದೆ ಎಂಬುದು ಸಂತೋಷ.

'ಹಕ್ಕಿಯ ನೋಟ'ದಲ್ಲಿ ಲೇಖಕರು ತಮ್ಮ ಅನುಭವಕ್ಕೆ ಸಮೀಪವಾಗಿ ಬಂದ ಆರು ವ್ಯಕ್ತಿಗಳನ್ನು ಕುರಿತು ಚಿತ್ರಿಸಿದ್ದಾರೆ ಇವರು ವ್ಯಕ್ತಿಗಳನ್ನು ಆಯ್ದುಕೊಂಡುದು ಅವರವರ ಹಿರಿಮೆ-ದೊಡ್ಡಿತೆಗಳಿಂದ ಎನ್ನುವುದಕ್ಕಿಂತ ಅವರ ಸಂಪರ್ಕ, ಸಾಮೀಪ್ಯ, ಸಾಮರಸ್ಯಗಳ ಮೂಲಕ ಎಂದರೆ ಸರಿಹೋಗುವುದು. ವ್ಯಕ್ತಿಚಿತ್ರ-ದಲ್ಲಿ ಉದ್ದಿಷ್ಟ ವ್ಯಕ್ತಿಯ ಲೋಕಪ್ರಿಯತೆಯ ಮೇಲೂ ಲೇಖನದ ಸ್ವಾರಸ್ಯ ಅವಲಂಬಿಸಿರುತ್ತದೆ. ಲೇಖನ ಶೈಲಿ, ಚಿತ್ರಣಕಲೆ, ಪ್ರತಿಭೆ ಎಷ್ಟೆ ಉಚ್ಚ ತರಗತಿಯದಿರಲಿ, ಉದ್ದಿಷ್ಟ ವ್ಯಕ್ತಿ ವಿಶೇಷ ಮನ್ನಣೆ-ವೆತ್ತವರಾದಿದ್ದರೆ ಅದು ಇರಿಯ ಲೇಖಕನದೊಂದು ಅತೃಪ್ತಿಯ ಮಟ್ಟಿಗೆ ಉಳಿದೀತು. ಶ್ರೀ. ದ. ಬಾ. ಕು. ಅವರು ಇಲ್ಲಿ ಆರಿಸಿದ ವ್ಯಕ್ತಿಗಳೆಲ್ಲ ಸಾಮಾನ್ಯವಾಗಿ ಕನ್ನಡ ನಾಡಿಗೆ ಸುಪರಿಚಿತರು; ಕನ್ನಡಸಾಹಿತ್ಯ ಸೇವೆಯನ್ನು ಸಲ್ಲಿಸಿ ಕಣ್ಮರೆಯಾದ ಮೂವರು ವ್ಯಕ್ತಿಗಳನ್ನು ಕುರಿತು ಸಂದರ್ಭೋಚಿತವಾಗಿ ಅವರವರಿಗೆ ಸಲ್ಲಿಸಿದ ಕಾಣಿಕೆಗಳೆಂಬಂತೆ ಮೂರು ಚಿತ್ರಗಳು ಇಲ್ಲಿ ಬಂದಿವೆ. 'ನಾನು ಕಂಡ ಗೌರಮ್ಮ'ದ ಭಾವಾವೇಗ, ರಸಪುಷ್ಟಿ ಸೌ. ಶ್ಯಾಮಲಾದೇವಿ, ಶ್ರೀನಿವಾಸ ಪೋತದಾರರ ವ್ಯಕ್ತಿಚಿತ್ರಗಳಲ್ಲಿ ಬಂದಿಲ್ಲವೆಂದು ಹೇಳಬೇಕಾಗುತ್ತದೆ. ಗೌರಮ್ಮನವರ ಸೇವೆ ಅಂತಹ ಅಪೇಕ್ಷೆಯಾದುದಲ್ಲವೆನುವಂತಿದ್ದರೂ ಲೇಖಕರ ಆತ್ಮೀಯ ಶೈಲಿ ಗೌರಮ್ಮನವರ ಬಗ್ಗೆ ನಮ್ಮಲ್ಲಿ ಸಾಕಷ್ಟು ಸಹಾನುಭೂತಿಯನ್ನು ಹುಟ್ಟಿಸಿ, ಒಂದೆರಡು ಕಂಬನಿಗಳನ್ನು ಮಿಡಿಯಿಸುತ್ತದೆ. ಲೇಖಕನು ಎಷ್ಟೆಷ್ಟು ಗಣ್ಯವ್ಯಕ್ತಿಯಾಗಿರುತ್ತಾನೊ ಅಷ್ಟಷ್ಟು ವ್ಯಕ್ತಿಚಿತ್ರಣದೊಳಗಿನ ಲೇಖಕನ ಆತ್ಮೀಯತೆಗೆ ಕಳಿ ಬರುತ್ತದೆ, ಬೆಲೆ ಬರುತ್ತದೆ.

ಮುನ್ನುಡಿಕಾರರು ಹೇಳುವಂತೆ ದ ಬಾ. ಕು. ಅವರ ಈ ಲೇಖನ ಕಲೆಯ ಬಗ್ಗೆ ಉಜ್ವಲ ಭವಿಷ್ಯವನ್ನು ಏನೂ ಕಡಿಮೆಯಾಗಿಲ್ಲವೆಂದರೆ ಶ್ರೀ. ಶಿವರಾಮ ಕಾರಂತದ ಚಿತ್ರ. ಇದನ್ನು ಯಾವ ನಿಮಿತ್ತವಾಗಿಯೂ ಲೇಖಕರು ಬರೆಯದೆ ಸಹಜ ಸ್ಫೂರ್ತಿಯಿಂದ ಚಿತ್ರಿಸಿದುದರಿಂದ ರಸವತ್ತಾಗಿಸ್ತ್ರೀ ತುಂಬಿಕೊಂಡು ಬಂದಿದೆ! ಶೈಲಿ ಬೇಕಾದಷ್ಟು ಉದಾತ್ತ ಮಟ್ಟಕ್ಕೇರಿದೆ. 'ಗೌರಮ್ಮ' ದೊಳಗಿನ ಸರಸ ಸುಕುಮಾರ ಶೈಲಿ ಇಲ್ಲಿ ಗಂಭೀರವಾಗಿ ಇನ್ನಷ್ಟು ಪರಿಪಕ್ವವಾಗಿದೆ. ಶ್ರೀ. ಬೇಂದ್ರೆಯವರಿಗಾಗಿ ಸಲ್ಲಿಸಿದ ಭಕ್ತಿಯ ಕಾಣಿಕೆ ಯಾಕೊ ಬಹಳ ಶೀಘ್ರವಾಗಿ ಮುಗಿದುಬಿಟ್ಟಂತಾಗಿದೆ. ಮೊದಲಿನಿಂದ ಕೊನೆಯ ತನಕ 'ಗೌರಮ್ಮ' ಸಲೀಲವಾಗಿ ಹೂವಿನಂತೆ ಅರಳಿದ್ದರೆ, ಬೇಂದ್ರೆಯವರ ಪರಿಚಯ ಉತ್ಕಟ ಭಕ್ತಿಯಿಂದ ಆರಂಭವಾಗಿ ಹಠಾತ್ತಾಗಿ ಮುಗಿದು ಬಿಟ್ಟಂತಾಗಿದೆ. ಕುಲಕರ್ಣಿ ಶ್ರೀನಿವಾಸರ ಪರಿಚಯ ಎಲ್ಲ ದೃಷ್ಟಿಯಿಂದಲೂ ಸಮತೂಕದ್ದಾಗಿದೆ.

ಶ್ರೀ. ದ. ಬಾ. ಕು. ಅವರು ನಿಜವಾದ ಒಂದು ಕನ್ನಡ ಸಾಹಿತ್ಯದ ಕೊರತೆಯನ್ನು ನೀಗಲು ಕೆಲವರೆ ಕಲಾವಿದರೊಡನೆ ಲೇಖನಿ ಹಿಡಿದುದು ಒಂದು ಗಣ್ಯವಾದ ಸಂಗತಿ. ಅದರಲ್ಲಿ ವ್ಯಕ್ತಿಯ ಜೀವಗುಣದೊಡನೆ ಸಹಜ ಸ್ಫೂರ್ತಿಯನ್ನು ಮೆರೆದುದು ಸ್ತುತ್ಯವಾದ ವಿಷಯ. ಇನ್ನೂ ಎಲ್ಲ ಕನ್ನಡ ಮಹನೀಯರ—ಕವಿಗಳ, ನಾಟಕಕಾರರ, ಉಳಿದ ಸಾಹಿತಿಗಳ, ಕಲಾವಿದರ ವ್ಯಕ್ತಿ ಚಿತ್ರಗಳನ್ನು ಪೂರೈಸಿದರೆ ಅವರ ಈ ಬಗೆಯ ಬರವಣಿಗೆಗೆ ಒಂದು ಪರಿಪೂರ್ಣತೆ ಒದಗೀತೆಂದು ಆಶಿಸುತ್ತೇವೆ

—ಎನ್

ನಮ್ಮ ಸೊಲ್ಲಾಪುರದ ವಿಜಯಂಟರು

ಶ್ರೀ. ಎನ್. ಎಚ್. ಜೇಶಪಾಂಡೆ

ಭೂಮಾಬ್ರೀವಾಡಾ, ದಕ್ಷಿಣಕಸಬಾ ಖಳಟ

ಸಾದರ ಸ್ವೀಕಾರ

೬೫ **ಹೋಡಶಿ** (ಅನುವಾದಿತ ಕಾದಂಬರಿ) ಮೂಲ ಬಂಗಾಲಿ ಲೇಖಕರು ದಿವಂಗತ ಶರಚ್ಚಂದ್ರ ಚಟ್ಟೋಪಾಧ್ಯಾಯರು. ಅನುವಾದಕರು ಶ್ರೀಮಾನ್ ಗುರುನಾಥ ಜೋಶಿಯವರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೨ನೆಯ ವರ್ಷದ ೫ನೆಯ ಕಿರಣ. ಕ್ರೌ. ಅ. ೨೨೦ ಪುಟಗಳು. ಬೆಲೆ ೩–೦–೦.

೬೬ **ವಾಹಿನಿ** (ರಾಷ್ಟ್ರೀಯ ವಾರ ಪತ್ರಿಕೆ) ಸಂಪಾದಕರು ಎಂ. ಸಿ. ಚಿಂತಾಮಣಿ ಬಿ. ಎಸ್‌ಸಿ. ಈಸ್ಟರ್ನ್ ಪ್ರೆಸ್, 11A. ಜಯರಾಜಮರಾಜರೋಡ್, ಬೆಂಗಳೂರು ನಗರ. ಕ್ರೌನ್ ಫೋಲಿಯೊ ೧೨ ಪುಟಗಳು. ವಾ. ಚಂ. ೩–೦–೦, ಬಿಡಿ ಸಂಚಿಕೆಗೆ ೦–೧–೦.

ಆಂತರಂಗ ಗಾಂಭೀರ್ಯದಿಂದಲೂ ಬಹಿರಂಗ ಸೌಂದರ್ಯದಿಂದಲೂ ಬೆರೆತು ಈ ಪತ್ರಿಕೆಯು ಕಳೆದ ೧೪–೧೦–೪೫ ರಿಂದ ಬೆಂಗಳೂರಲ್ಲಿ ಹೊರಡುತ್ತಲಿದೆ. ರಾಜಕೀಯ ವಿಚಾರದಲ್ಲಿ ರಾಷ್ಟ್ರೀಯ ಮಹಾಸಭೆಯನ್ನು ಪುರಸ್ಕರಿಸುವಂತಹದು. ಸಾಹಿತ್ಯವಿಷಯಕ ಲೇಖನಗಳೂ ವಿಮರ್ಶೆ-ವಿಚಾರ ಚರ್ಚೆಗಳೂ ಇವೆ. ಪ್ರಗತಿಪರ ವಿಚಾರಗಳಿಂದ ಕೂಡಿರುವುದಾದರೂ 'ಪ್ರಗತಿಶೀಲ'ರ 'ಕ್ರಾಂತಿ'ಯನ್ನು ಗುರಿಯಾಗಿರಿಸಿಕೊಂಡಿಲ್ಲ. ಲೇಖಕವರ್ಗದಲ್ಲಿ ಶ್ರೀ. ತ. ರಾ. ಸು. ಮತ್ತು ದ್ವಿಪನ ಹಳ್ಳಿ ಕೃಷ್ಣಶರ್ಮರು ಸುವರಿಚಿತರಾಗಿರುವರು. 'ವಾಹಿನಿ' ಸಮ ಬಾಳಿ, ಕನ್ನಡವನ್ನು ಕಳೆಗೊಳಿಸಲಿ!

೬೭ **ಪ್ರಗತಿ** (ಪ್ರಗತಿಶೀಲ ಮಾಸಪತ್ರಿಕೆ) ಸಂಪಾದಕರು ಭೂ. ಚಿಕ್ಕೋಡಿ, ರಬಕವಿ. ಪ್ರಕಾಶಕರು ರಬಕವಿಯ ಗೆಳೆಯರ ಬಳಗದವರು. ಕ್ರೌ. ೧೧ ೪೦ ಪುಟಗಳು. ವಾ. ನ. ೩–೧೨–೦ ೪ ಸಂಚಿಕೆಗೆ ಐದು ಆಣೆ.

ಸಾಂಗಲಿ ಸಂಸ್ಥಾನಕ್ಕೆ ಸೇರಿದ ರಬಕವಿ ಇಂದು ಕನ್ನಡಕ್ಕೆ ಸಂಪಾದಕೋಟೆಯಾಗತೊಡಗಿದೆ. ಅಲ್ಲಿಯ ಗೆಳೆಯರು ಕನ್ನಡ ಪತ್ರಿಕೆ ಹೊರಡಿಸಿದುದು ತುಂಬ ಸಮಾಧಾನದ ಸಂಗತಿ. ಮೊದಲನೆಯ ಸಂಚಿಕೆಯ ಲೇಖನಗಳು ವಿವಿಧ ವಿಷಯ-ವಿಚಾರಗಳಿಂದ ಕೂಡಿದ್ದು, ಒಳ್ಳೆಯ ವರ್ಗದಲ್ಲಿ ಹಲವು ಹೆಸರು ವಾಸಿ ಲೇಖಕರ ಹೆಸರು ಕಾಣುವು. 'ಪ್ರಗತಿ' ನಿಜವಾದ ಪ್ರಗತಿಪಥವನ್ನು ಜನತೆಗೆ ತೋರಿಸಲಿ.

೬೮ **ಉಷಾ** (ಮಾಸಪತ್ರಿಕೆಯ ದಸರಾ ವಿಶೇಷ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಎಸ್. ನಂಜಪ್ಪ. ಗಾಂಧೀನಗರ–ಬೆಂಗಳೂರು ಸಿಟಿ. ಕ್ರೌ. ೧೧ ೧೪೦ ಪುಟಗಳು. ೦–೧೨–೦

ಕಥೆ, ಕವನ, ಪ್ರಬಂಧ, ಪ್ರವಾಸವೃತ್ತ, ವ್ಯಕ್ತಿಪರಿಚಯ, ಒಂದು ಸೊಗಸಾದ ಲಲಿತಸಾಹಿತ್ಯವನ್ನು ವಿವಿಧ ಮಾದರಿಗಳಿಂದ ಇನ್ನು ಸಂಪಾದಕೀಯ, ಸಿನೇಮಾ ವೃತ್ತಗಳಿಂದಲೂ ಬೇರೆ ಬೇರೆ ಸಾ ಚಿತ್ರಗಳಿಂದಲೂ ಸಂಚಿಕೆ ರಂಜಿತವಾಗಿದೆ. ಸಂಪಾದಕರ ಸಹಾದುದರಿಂದ 'ಉಷಾ' ಪತ್ರಿಕೆಯ ಹೆಸರಿನೊಂದಿಗೆ ಇದು ಅಂಟಿಕೊಂಡಿದ್ದ 'ಭಾರತನ'ವು ಈ ಸಂಚಿಕೆಯಲ್ಲಿ ಕಾಣು. ಆಸನ್ನು ಬಯಸುವ ಕೆಲವು ಜನ ನಾಚಕರಿಗೆ ಈ ಸಂಚಿಕೆ ಸೊರತೆಯಿಂದ ಕೂಡಿದುದಾಗಿ ಕಾಣಬಹುದು. ಲೇಖಕ ವರ್ಗದಲ್ಲಿ ಪೆಸರಾಂತ ಜನರು ಹಲವರಿರುವರು.

೬೯ **ಮಹಾತ್ಮಾಗಾಂಧಿ ಮತ್ತು ಪಿ. ಸಿ. ಜೋಶಿ ಅವರ ಪತ್ರ** (ಅನುವಾದಿತ ಪುಸ್ತಕ). ಅನುವಾದಕರು ಶ್ರೀ. ಎನ್. ಅನಂತ ನಾರಾಯಣರು. ಪ್ರಕಾಶಕರು ಜನತಾ ಸಾಹಿತ್ಯ, ೧೨೧ ಸುಲ್ತಾನ ಪೇಟೆ, ಬೆಂಗಳೂರು ನಗರ. ಕ್ರೌ. ಆ. ೬೦ ಪುಟಗಳು. ಬೆಲೆ ೦–೮–೦.

ಕಮ್ಯೂನಿಸ್ಟ್ ಮತ್ತು ಕಾಂಗ್ರೆಸ್ ಪಕ್ಷಗಳಲ್ಲಿರುವ ವಿಚಾರ ಭಿನ್ನತೆಯನ್ನು ಈ ಪತ್ರಗಳಿಂದ ಅರಿತುಕೊಳ್ಳಬಹುದು.

೭೦ **ವಿದ್ಯಾರ್ಥಿ ನೇಪದಲ್ಲಿ** (ಏಕಾಂಕ ನಾಟಕಗಳು) ಬರೆದವರು ಶ್ರೀ. ವೇದವ್ಯಾಸ. ಗಮಗ-ಬೆಟಗೇರಿಯ ವಾಣೀ ಗ್ರಂಥಮಾಲೆಯ ೩ನೆಯ ಪ್ರಕಟಣೆ. ಕ್ರೌ. ೮೪ ಪುಟಗಳು. ಬೆಲೆ ೧–೦–೦.

ಮಾಕೆಟ್ಟಿಗೆ ಬಂದಿದೆ!

ಶ್ರೀರಂಗರ

"ಸಂಸಾರಿಗಕಂಸ"

ಸಾಲ್ಗಂಕಿನ ಸಾಮಾಜಿಕ ನಾಟಕ

ಬೆಲೆ : ೧–೪–೦

ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಶೇಲಧಾ

ಎಂಟೀಮುಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರನ ಜ್ವರ, ಜ್ವರಗಡ್ಡೆ, ತಜ್ಜನ್ಯ ಆರಕ್ತತೆಯು ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ರಕ್ತ ಬೆಳೆಯಿಸುತ್ತದೆ. ಫೈಸ್ಟಾನ್ ಬದಲು ವೈದ್ಯ-ಡಾಕ್ಟರರು ಜವಾಬಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೪೦ಕ್ಕೆ ೧–೧೨–೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜೆಂಟರು ಬೇಕು.

ಶೇಲಧಾ ಕೆಮಿಕಲ್ ಕೆಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಶೇಧಾಳಪ್ಪಾ

ಬದನರ ಔಷಧಿ ಸರ್ವಿಸ್, ಸಿರಸಿ, ಉ. ಕನ್ನಡ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯು ಪಾಲಿಸಿಯನ್ನೇ ಪಡೆಯಬೇಕು!
- ಮೊದಲನೆಯ ಮೌಲ್ಯಮಾಪನದಕ್ಕೆ (Valuation) ಆಳವನ್ನು ಹಂಚುವುದಲ್ಲದೆ, ಹೊಸ ನಿಮಾಣಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸುದಾರರಿಗೆ ತಿಲಾಂಜಲಿಯಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ಸುಬಿಗೂ ಶಕ್ಯವಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರು ಕನ್ನಡಿಗರಿಗೆ ಏತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಏಜೆಂಟುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಫಾರಾಳವಾದ ಕಮಿಶನ್ ಕೊಡಲಾಗುವುದು.

ಎ. ಎಸ್. ಕೆಣಿ, ಮ್ಯಾನೇಜಿಂಗ್ ಡೈರೆಕ್ಟರ ಎಂ. ಗೋವರ್ಧನರಾವ, ಮ್ಯಾನೇಜರ್

ಶ್ವಾಸಕ್ಕೆ ಸಂಬಂಧಪಟ್ಟ ಅಂಗಗಳ ಆಂತರ್ಯ ದಲ್ಲಿನ ಕಶ್ಮಲದಿಂದ ಉಂಟಾಗುವ ಕೆಮ್ಮನ್ನು ಗುಣಪಡಿಸಲು ಆದರ ಮೂಲ ಕಾರಣವನ್ನು ತೆಗೆದುಹಿಡಬೇಕು. ಈ ಕೆಲಸವನ್ನು "ಕಾಸ್ಫೊ" ಪು ಮಾಡಿ, ಕೆಮ್ಮನ್ನು ಎಂದೆಂದಿಗೂ ಗುಣಮಾಡಿ, ಆದರಲ್ಲಿ ಉಂಟಾಗಬಹುದಾದ ರೋಗಗಳ ಭಯದಿಂದ ನಿಮ್ಮನ್ನು ಪಾರು ಮಾಡುವುದು.

"ಕಾಸ್ಫೊ" ಪಲವು ತರದ ಆತ್ಯುತ್ತಮ ಔಷಧಿಗಳಿಂದ ಕೂಡಿದ್ದು, ಪಾಸಕದಂತಿರುವ ಈ ಮದ್ದು ಕೆಮ್ಮಿನ ಮೂಲವನ್ನು ಕಿತ್ತೊಗೆದು, ಕಫವನ್ನು ಕಡಿಮೆ ಮಾಡಿ, ಶೀತರೋಗಕ್ಕೆ ಸಂಬಂಧಿಸಿದ ಎಲ್ಲಾ ಕಶ್ಮಲವನ್ನು ತೆಗೆದು, ಮುಂದಕ್ಕೆ ಅಂತಹ ರೋಗಗಳು ಬಾರದಂತೆ ಹೃದಯ ಮತ್ತು ಶ್ವಾಸಕೋಶಗಳನ್ನು ಕ್ರಮವಾಗಿ ಇಡುವುದು. ಅದು ಅತಿ ಶಕ್ತಿಯುಳ್ಳದ್ದಾಗಿ, ಬಿಲ್ಲೆಹು ರೂಪದಲ್ಲಿ ರುಚಿಕರವಾಗಿ ದೊರಕುತ್ತದೆ. ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ.

ಗುಣವಾಗುವತನಕ ಒಂದೆರಡು ಗಂಟೆಗಳ ಅಂತರದಲ್ಲಿ ಒಂದೊಂದು ಬಿಲ್ಲೆಯನ್ನು ಸೇವಿಸಬೇಕು.

ಎಲ್ಲಾ ಔಷಧಾಲಯಗಳಲ್ಲಿ ದೊರಕುವುದು.

ಕಾಸ್ಫೊ

ಆಶ್ಚರ್ಯಕರವಾದ ಕೆಮ್ಮು-ನಾಶಕದ ಬಿಲ್ಲೆಗಳು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಚಪನ್ಮಾನಗರ